ಡಾ. ಸಿದ್ಧಯ್ಯ ಪುರಾಣಿಕರ
(ಕಾವ್ಯಾನಂದ)

# ನನ್ನ ನಿನ್ನೆಗಳೊಡನೆ ಕಣ್ಣು ಮುಚ್ಚಾಲೆ

(ಆತ್ಮಕಥೆ)

ಸಂಪಾದಕರು
ಪ್ರಸನ್ನ ಕುಮಾರ ಪುರಾಣಿಕ

ಪ್ರಕಾಶಕರು
ಶ್ರೀಗಿರಿ ಪ್ರಕಾಶನ
'ಶ್ರೀಗಿರಿ' 4/5 ಎ (ಹೊಸ 8)
ಅಲಿ ಆಸ್ಕರ್ ರಸ್ತೆ
ಬೆಂಗಳೂರು–560 052

ಡಾ. ಸಿದ್ಧಯ್ಯ ಪುರಾಣಿಕರ (ಕಾವ್ಯಾನಂದ)

# ನನ್ನ ನಿನ್ನೆಗಳೊಡನೆ ಕಣ್ಣು ಮುಚ್ಚಾಲೆ (ಆತ್ಮಕಥೆ)


ಸಂಪಾದಕರು :
ಪ್ರಸನ್ನ ಕುಮಾರ ಪುರಾಣಿಕ

ಪ್ರಕಾಶಕರು
ಶ್ರೀಗಿರಿ ಪ್ರಕಾಶನ
'ಶ್ರೀಗಿರಿ' 4/5 ಎ (ಹೊಸ 8)
ಅಲಿ ಆಸ್ಕರ್ ರಸ್ತೆ
ಬೆಂಗಳೂರು–560 052
ದೂ : 080 22264361

ಪ್ರಥಮ ಮುದ್ರಣ : 1981
ದ್ವಿತೀಯ ಮುದ್ರಣ : 2021

ಪುಟ : i + 4 = 2

ಬೆಲೆ : ರೂ. 300/–



© ಪ್ರಕಾಶಕರು



ಕಾಗದ : 70 GSM Maplitho Paper

ರಕ್ಷಾಪತ್ರ ವಿನ್ಯಾಸ : ಎಚ್.ಎಸ್. ಮೋನಪ್ಪ

ಛಾಯಾಕ್ಷರ ಜೋಡಣೆ : ವರ್ಷಿಣಿ ಗ್ರಾಫಿಕ್ಸ್, ಬೆಂಗಳೂರು–40

ಮುದ್ರಕರು
ಸ್ನೇಹಾ ಪ್ರಿಂಟರ್ಸ್
ನಂ. 16, 1ನೇ ಬಿ ಮುಖ್ಯರಸ್ತೆ, ಶ್ರೀ ರಾಘವೇಂದ್ರ ಮಠದ ರಸ್ತೆ
ಪಾಪರೆಡ್ಡಿಪಾಳ್ಯ 11ನೇ ಬ್ಲಾಕ್, ನಾಗರಬಾವಿ 2ನೇ ಹಂತ, ಬೆಂಗಳೂರು–72
ದೂ : 080 23212814, ಮೊ : 9845062549


## ಸಂಪಾದಕರ ಮತ್ತು ಪ್ರಕಾಶಕರ ಮಾತು

ನಮ್ಮ ತಂದೆಯವರಾದ ಡಾ. ಸಿದ್ಧಯ್ಯ ಪುರಾಣಿಕರು (ಕಾವ್ಯಾನಂದ) ನಾಡಿನ ಪ್ರಮುಖ ಲೇಖಕರಲ್ಲಿ ಒಬ್ಬರು. ಅವರು ತಮ್ಮ ೫೫ ವರ್ಷಗಳ ಸಾಹಿತ್ಯ ಸೇವೆ ಮಾಡುತ್ತ ಕಾವ್ಯ, ವಚನ, ಗದ್ಯ, ನಾಟಕ, ಮಕ್ಕಳ ಸಾಹಿತ್ಯ ಮತ್ತು ಕಾದಂಬರಿ ಕೃತಿಗಳನ್ನು ಬರೆದಿರುವರು. ಅವರು ಒಬ್ಬ ಉನ್ನತ ಐ.ಎ.ಎಸ್ ಅಧಿಕಾರಿ ಆಗಿ, ಕನ್ನಡ ನಾಡಿಗೆ ಮತ್ತು ಜನತೆಗೆ ಅಪೂರ್ವ ಸೇವೆ ಮಾಡಿ ಎಲ್ಲರ ಪ್ರೀತಿ ಗಳಿಸಿದ್ದಾರೆ. ಇವರು ೫–೯–೧೯೯೪ರಲ್ಲಿ ಲಿಂಗೈಕ್ಯರಾದರು.

ಅವರ ಎಲ್ಲ ಕೃತಿಗಳನ್ನು ಮರು ಪ್ರಕಟಣೆ ಮಾಡಿ ಜನರಿಗೆ ಲಭಿಸುವ ಕಾರ್ಯವನ್ನು ನಮ್ಮದೇ ಆದ "ಶ್ರೀಗಿರಿ ಪ್ರಕಾಶನ" ದಿಂದ ಪ್ರಾರಂಭ ಮಾಡಿರುವೆವು. ಅವರ "ವಚನೋದ್ಯಾನ" ವಚನ ಸಂಕಲನ ಎರಡನೆಯ ಮುದ್ರಣ ೨೦೦೦ರಲ್ಲಿ ಮೂರನೆಯ ಮುದ್ರಣ ೨೦೧೧ರಲ್ಲಿ ನಾಲ್ಕನೆಯ ಮುದ್ರಣ ೨೦೧೮ರಲ್ಲಿ ಮತ್ತು ಅವರ "ವಚನ ನಂದನ" ವಚನ ಸಂಕಲನ ಎರಡನೆಯ ಮುದ್ರಣ ೨೦೦೦ರಲ್ಲಿ ಪ್ರಕಟಿಸಿರುವೆವು.

ಅವರ ೯೦ನೇ ಜನ್ಮ ವಾರ್ಷಿಕೋತ್ಸವ ೨೦೦೮ರಲ್ಲಿ ನಡೆಯಿತು. ಅಂದು ನಾವು ಪುರಾಣಿಕರ ಎಲ್ಲಾ ಕೃತಿಗಳನ್ನು ಸಮಗ್ರ ರೂಪದಲ್ಲಿ ತರಬೇಕೆಂದು ನಿರ್ಧರಿಸಿದೆವು. ೨೦೦೮ರಲ್ಲಿ "ಸಮಗ್ರ ಕಾವ್ಯ", ೨೦೦೯ರಲ್ಲಿ "ಸಮಗ್ರ ವಚನ" ಮತ್ತು ೨೦೧೦ರಲ್ಲಿ "ಸಮಗ್ರ ನಾಟಕ"ವನ್ನು ಪ್ರಕಟಿಸಿರುವೆವು.

ಮಕ್ಕಳ ಸಾಹಿತ್ಯ ಪುರಾಣಿಕರಿಗೆ ತುಂಬ ಪ್ರಿಯವಾದುದು. ಅವರ "ಸಮಗ್ರ ಮಕ್ಕಳ ಸಾಹಿತ್ಯ" ಕನ್ನಡ ಮತ್ತು ಹಿಂದಿ ಭಾಷೆಯಲ್ಲಿ ನಮ್ಮ ೫ ವರ್ಷದ ಶ್ರಮದಿಂದ ೨೦೧೬ರಲ್ಲಿ ಪ್ರಕಟಿಸಿರುವೆವು. ಹಿಂದಿ ಅನುವಾದ ಡಾ.ಟಿ.ಜಿ. ಪ್ರಭಾಶಂಕರ 'ಪ್ರೇಮಿ' ಮಾಡಿದ್ದಾರೆ. ಖ್ಯಾತ ಕಲಾವಿದ ಶ್ರೀ ಎಚ್.ಎಸ್. ಮೋನಪ್ಪನವರು ಈ ಪುಸ್ತಕಕ್ಕೆ ಸುಂದರವಾದ ಚಿತ್ರಗಳನ್ನು ಮತ್ತು ಮುಖಪುಟ ವಿನ್ಯಾಸ ಮಾಡಿದ್ದಾರೆ. ನಮ್ಮ ಎಲ್ಲ ಪ್ರಕಟಣೆಗಳಿಗೆ ಡಾ.ಎಸ್. ವಿದ್ಯಾಶಂಕರ ಅವರು ಮಾರ್ಗದರ್ಶನ ಮಾಡಿದ್ದಾರೆ.

ಮೇಲಿನ ನಾಲ್ಕು ಸಮಗ್ರ ಕೃತಿಗಳನ್ನು ಕೊಡುಗೆ ರೂಪದಲ್ಲಿ ಪರಿಚಿತ ಪ್ರಮುಖ ಮಠಗಳಿಗೆ, ಎಲ್ಲಾ ವಿಶ್ವವಿದ್ಯಾಲಯ ಗ್ರಂಥಾಲಯಗಳಿಗೆ ಮತ್ತು ೧೦೦ ಸರ್ಕಾರಿ ಪ್ರೌಢಶಾಲೆಗಳ ಗ್ರಂಥಾಲಯಗಳಿಗೆ ಪೋಸ್ಟ್ ಮೂಲಕ ಕಳಿಸಲಾಗಿದೆ.

೨೦೧೪ರಲ್ಲಿ ನಾನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಕಂಡು ಅವರ ಗಮನಕ್ಕೆ ೨೦೧೮ರಲ್ಲಿ ಬರುವ ಡಾ. ಸಿದ್ಧಯ್ಯ ಪುರಾಣಿಕರ ಜನ್ಮ ಶತಮಾನೋತ್ಸವದ ಬಗ್ಗೆ ಚರ್ಚಿಸಿದೆನು. ಪುರಾಣಿಕರ ಎಲ್ಲಾ ಕೃತಿಗಳನ್ನು ಸಮಗ್ರ ರೂಪದಲ್ಲಿ ಅವರ ಇಲಾಖೆ ವತಿಯಿಂದ ತರಬೇಕೆಂದು ಪತ್ರ ಮುಖೇನ ವಿನಂತಿಸಿದ್ದೆ. ನಾನು ಹಲವಾರು ಬಾರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಹೋಗಿ ನಿರ್ದೇಶಕರು ಮತ್ತು ಸಂಬಂಧಿಸಿದ ಅಧಿಕಾರಿಗಳ ಜೊತೆಗೆ ಈ ವಿಷಯವನ್ನು ಚರ್ಚಿಸಿದೆ. ೨೦೧೭ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಪುಸ್ತಕಗಳನ್ನು ಪ್ರಕಟಿಸಲು ಒಪ್ಪಿಗೆ ಕೊಟ್ಟರು. ನಾನು ಸಮಗ್ರ ಗದ್ಯಕ್ಕೆ ಸಂಬಂಧಿಸಿದ ೧೪ ಪುರಾಣಿಕರ ಕೃತಿಗಳನ್ನು ಸಂಗ್ರಹಿಸಿ ಅವರಿಗೆ ಕೊಟ್ಟೆನು. ಕೆಲವು ಕೃತಿಗಳು ಬಹಳ ಹುಡುಕಾಡಿದ ಮೇಲೆ ಸಿಕ್ಕವು. ಸಮಗ್ರ ಕಾವ್ಯ, ವಚನ, ನಾಟಕಗಳು ನಾನು ಮೊದಲು ಪ್ರಕಟಿಸಿದ್ದೆ. ಅದರ ಡಿಟಿಪಿ ಅವರಿಗೆ ಮರು ಮುದ್ರಣಕ್ಕಾಗಿ ಕೊಟ್ಟೆ, ಆಗಾಗ ಇಲಾಖೆಗೆ ನಾನು ಹೋಗಿ ಸಂಬಂಧಿಸಿದ ಅಧಿಕಾರಿಗಳನ್ನು ಭೇಟಿಯಾಗಿ ಪುಸ್ತಕದ ಪ್ರಕಟಣೆಯ ಪ್ರಗತಿಯ ಬಗ್ಗೆ ವಿಚಾರಿಸುತ್ತಿದ್ದೆ. ೨೦೨೦ರಲ್ಲಿ ನನ್ನ ಪ್ರಯತ್ನ ಸಫಲವಾಯಿತು. ಸಮಗ್ರ ಗದ್ಯ ಮೂರು ಭಾಗದಲ್ಲಿ ಮೊದಲನೆಯ ಬಾರಿ ಪ್ರಕಟವಾಯಿತು. ೨೦೨೧ರಲ್ಲಿ ಸಮಗ್ರ ಕಾವ್ಯ, ಸಮಗ್ರ ವಚನ, ಸಮಗ್ರ ನಾಟಕ ಮರು ಪ್ರಕಟವಾದವು. ಡಾ. ಸಿದ್ಧಯ್ಯ ಪುರಾಣಿಕರ ಎಲ್ಲಾ ಕೃತಿಗಳು ಮೊದಲ ಬಾರಿಗೆ ಲಭ್ಯವಾದವು ಮತ್ತು ಪುರಾಣಿಕರ ಸಾಹಿತ್ಯಕ್ಕೆ ಒಂದು ಹೊಸ ಜೀವ ಕೊಟ್ಟಂತೆಯಾಯಿತು. ನಾನು ಮತ್ತು ಪುರಾಣಿಕರ ಎಲ್ಲಾ ಕುಟುಂಬದವರು ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಎಲ್ಲಾ ಅಧಿಕಾರಿಗಳಿಗೆ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಸಲ್ಲಿಸುತ್ತೇವೆ.

ಡಾ. ಸಿದ್ಧಯ್ಯ ಪುರಾಣಿಕರ ಜನ್ಮಶತಮಾನೋತ್ಸವ ಅಂಗವಾಗಿ ಕೆಲವು ಪುಸ್ತಕಗಳು "ಅವರ ಬಗ್ಗೆ" ಪ್ರಕಟವಾದವು. ಜಿ.ಎಸ್. ಸಿದ್ಧಲಿಂಗಯ್ಯನವರು ಬರೆದ ಪುಸ್ತಕ "ಸಿದ್ಧಯ್ಯ ಪುರಾಣಿಕ" ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ ಗದಗರವರಿಂದ ಮರು ಪ್ರಕಟವಾಯಿತು. ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ವತಿಯಿಂದ ಶ್ರೀ ಪ್ರಕಾಶ ಗಿರಿಮಲ್ಲನವರು, ಬೆಳಗಾವಿಯವರು ಬರೆದ "ಕಾವ್ಯಾನಂದರ ಬದುಕು ಮತ್ತು ಕಾವ್ಯ" ಪುಸ್ತಕ ಪ್ರಕಟವಾಯಿತು. ಕೇಂದ್ರ



ಸಾಹಿತ್ಯ ಅಕಾಡೆಮಿ ವತಿಯಿಂದ ಡಾ. ನಾಗಾಬಾಯಿ ಬಿ. ಬುಳ್ಳಾರವರು ಬರೆದ "ಸಿದ್ಧಯ್ಯ ಪುರಾಣಿಕ" ಪುಸ್ತಕ ಪ್ರಕಟವಾಯಿತು.

ಡಾ. ಸಿದ್ಧಯ್ಯ ಪುರಾಣಿಕರ ಜನ್ಮಶತಮಾನೋತ್ಸವ (೧೯೧೮–೨೦೧೮)ದ ಅಂಗವಾಗಿ ಹಲವಾರು ಕಾರ್ಯಕ್ರಮಗಳು ನಡೆದವು. ಅದರ ವಿವರಣೆಯು ಈ ಪುಸ್ತಕದ ಕೊನೆಯಲ್ಲಿ ಲಭಿಸುವುದು. ಅದರಲ್ಲಿ ಪ್ರಮುಖವಾದುದು ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಏರ್ಪಡಿಸಿದ್ದ ಕಾರ್ಯಕ್ರಮಗಳು. ಪ್ರದಾನ ಅಂಚೆ ಕಚೇರಿ ವತಿಯಿಂದ ಡಾ. ಸಿದ್ಧಯ್ಯ ಪುರಾಣಿಕರ "ವಿಶೇಷ ಲಕೋಟೆ" ಬಿಡುಗಡೆಯಾಯಿತು. ಡಾ. ಸಿದ್ಧಯ್ಯ ಪುರಾಣಿಕರ ಕವನ ಮತ್ತು ವಚನ "ಸಂಗಮ" ಗೀತಗುಚ್ಛ ಸಾಂದ್ರಿಕೆ ಮತ್ತು ಮಕ್ಕಳ ಕವನ "ನನ್ನ ಕುದುರೆ" ಗೀತಗುಚ್ಛ ಸಾಂದ್ರಿಕೆ ಬಿಡುಗಡೆಯಾಯಿತು.

ಡಾ. ಸಿದ್ಧಯ್ಯ ಪುರಾಣಿಕರ ಆತ್ಮಕಥೆ "ನನ್ನ ನೆನ್ನೆಗಳೊಡನೆ ಕಣ್ಣು ಮುಚ್ಚಾಲೆ" ಆಗಿದೆ. ಇದು ೧೯೮೧ರಲ್ಲಿ ಅವರ ಅಭಿನಂದನ ಗ್ರಂಥ "ಕಾವ್ಯಾನಂದ"ದಲ್ಲಿ ಪ್ರಕಟವಾಗಿದೆ. ಈಗ ನಮ್ಮಲ್ಲಿ "ಕಾವ್ಯಾನಂದ" ಕೃತಿಯ ಕೆಲವೇ ಪ್ರತಿಗಳು ಇವೆ. ೨೦೨೧ರಲ್ಲಿ ನನ್ನ ಮತ್ತು ಲತಾ ಪುರಾಣಿಕರ ೫೦ನೆಯ ವಿವಾಹ ವಾರ್ಷಿಕೋತ್ಸವ ಸಂದರ್ಭದಲ್ಲಿ ನಾವು ಅವರ ಆತ್ಮ ಕಥೆ ಮರು ಪ್ರಕಟಿಸುತ್ತಿರುವೆವು. ಅವರ ಆತ್ಮಕಥೆಯಲ್ಲಿ ಅವರ ಜೀವನ ಮತ್ತು ಬದುಕು, ಅವರ ಕಾರ್ಯತತ್ಪರತೆ, ನಿಷ್ಠೆ ಮತ್ತು ಆತ್ಮವಿಶ್ವಾಸ ಕಾಣಬಹುದು, ಅವರಿಗಿದ್ದ ಕನ್ನಡದ ಮೇಲಿನ ಪ್ರೀತಿ, ಅಭಿಮಾನದಿಂದ ಅವರು ತಾವು ಹುಟ್ಟಿ ಬೆಳೆದ ಹೈದರಾಬಾದು ಕರ್ನಾಟಕದಲ್ಲಿ ಕನ್ನಡವನ್ನು ಉಳಿಸಿ ಬೆಳೆಸಿದರು. ಅವರು ತಮ್ಮ ಅಗಾಧವಾದ ನೆನಪಿನಿಂದ ಬರೆದಿರುವ ಈ ಕೃತಿಯಲ್ಲಿ ಅವರಿಗೆ ನೆರವಾದ ಅಸಂಖ್ಯಾತ ಜನರನ್ನು ಸ್ಮರಿಸಿರುವರು.

ಈ ಕೃತಿಯಲ್ಲಿ ಅವರ ಕೆಲವು ಆಯ್ದ ಕವನ, ವಚನ, ಮಕ್ಕಳ ಕವನಗಳನ್ನು, ಸಾಹಿತ್ಯ ಸೂಚಿ, ಜೀವನ ವಿವರ, ಪ್ರಮುಖ ಲೇಖಕರ ಅಭಿಪ್ರಾಯ, ಭಾವಚಿತ್ರಗಳನ್ನು "ಗೀತ ಗುಚ್ಛ" ಸಾಂದ್ರಿಕೆ ಮತ್ತು ಅವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಜರುಗಿದ್ದ ಕಾರ್ಯಕ್ರಮಗಳ ವಿವರ ಮತ್ತು ಭಾವಚಿತ್ರಗಳೊಂದಿಗೆ ಪ್ರಕಟಿಸಲಾಗಿದೆ.

ಈ ಪುಸ್ತಕದ ಕರಡು ಪ್ರತಿಯನ್ನು ತಿದ್ದಲು ನೆರವಾದ ವಿದ್ವಾಂಸರಾದ ಶ್ರೀ ಶಾ.ಮಂ. ಕೃಷ್ಣರಾಯ ಅವರಿಗೆ, ಛಾಯಾಕ್ಷರ ಜೋಡಣೆ ಮಾಡಿದ ವರ್ಷಿಣಿ ಗ್ರಾಫಿಕ್ಸ್ ಅವರಿಗೆ, ಮುದ್ರಣ ಮಾಡಿದ ಸ್ನೇಹಾ ಪ್ರಿಂಟರ್ಸ್‌ನ ಶ್ರೀ ವಿ. ಮಹೇಶ್‌ರವರಿಗೆ

ಮತ್ತು ಈ ಕೃತಿಗೆ ಸುಂದರವಾದ ರಕ್ಷಾಪತ್ರ ವಿನ್ಯಾಸ ಮಾಡಿದ ಶ್ರೀ ಎಚ್.ಎಸ್. ಮೋನಪ್ಪ ಅವರಿಗೆ ನಮ್ಮ ಕೃತಜ್ಞತೆಗಳು.

ನನ್ನ ಎಲ್ಲಾ ಕಾರ್ಯಗಳಿಗೆ ಪ್ರೋತ್ಸಾಹ ಕೊಟ್ಟ ನನ್ನ ಅಕ್ಕ ಶ್ರೀಮತಿ ವಿಜಯಾ ನಂದೀಶ್ವರ ಮತ್ತು ನನ್ನ ತಂಗಿ ಶ್ರೀಮತಿ ಭಾರತಿ ಮೃತ್ಯುಂಜಯ ರವರಿಗೆ ವಂದನೆ.

ನನ್ನ ಪುತ್ರರಾದ ಗಗನ ಪುರಾಣಿಕ ಮತ್ತು ಕವನ ಪುರಾಣಿಕ ಇವರೂ ಈ ಪುಸ್ತಕವನ್ನು ಪ್ರಕಟಿಸಲು ಉತ್ತೇಜಿಸಿರುವರು.

ನನ್ನ ಪತ್ನಿ ಶ್ರೀಮತಿ ಲತಾ ಪುರಾಣಿಕರು ನನ್ನ ಎಲ್ಲಾ ಕಾರ್ಯದಲ್ಲಿ ಸಮನಾಗಿ ದುಡಿದಿರುವರು.

ನಮ್ಮ ಪ್ರಾಮಾಣಿಕ ಪ್ರಯತ್ನದಿಂದ ಓದುಗರಿಗೆ ಒಂದು ಒಳ್ಳೆಯ ಕೃತಿ ದೊರೆಯಿತೆಂದು ನಾವು ಭಾವಿಸಿದ್ದೇವೆ.

**ಪ್ರಸನ್ನ ಕುಮಾರ ಪುರಾಣಿಕ**



## ಪರಿವಿಡಿ


ಸಂಪಾದಕರ ಮತ್ತು ಪ್ರಕಾಶಕರ ಮಾತು iii

೧. ನನ್ನ ನಿನ್ನೆಗಳೊಡನೆ ಕಣ್ಣು ಮುಚ್ಚಾಲೆ (ಆತ್ಮಕಥೆ) ೧

೨. ಡಾ. ಸಿದ್ಧಯ್ಯ ಪುರಾಣಿಕರ ಆಯ್ದ ಕವನ ೩೯೩

೩. ಡಾ. ಸಿದ್ಧಯ್ಯ ಪುರಾಣಿಕರ ಆಯ್ದ ವಚನ ೪೦೯

೪. ಡಾ. ಸಿದ್ಧಯ್ಯ ಪುರಾಣಿಕರ ಆಯ್ದ ಮಕ್ಕಳ ಕವನ ೪೧೫

೫. ಡಾ. ಸಿದ್ಧಯ್ಯ ಪುರಾಣಿಕರ ಜೀವನ ವಿವರ ೪೨೭

೬. ಡಾ. ಸಿದ್ಧಯ್ಯ ಪುರಾಣಿಕರ ಸಾಹಿತ್ಯ ಸೂಚಿ ೪೨೯

೭. ಡಾ. ಸಿದ್ಧಯ್ಯ ಪುರಾಣಿಕರ ಬಗ್ಗೆ ಪ್ರಕಟಿತ ಕೃತಿಗಳು ೪೩೫

೮. ಡಾ. ಸಿದ್ಧಯ್ಯ ಪುರಾಣಿಕರ ಬಗ್ಗೆ ಪ್ರಮುಖ ಲೇಖಕರ ಅಭಿಪ್ರಾಯ ೪೩೭

೯. ಡಾ. ಸಿದ್ಧಯ್ಯ ಪುರಾಣಿಕರ ಕವನ ಮತ್ತು ವಚನಗಳ ಗೀತ ಗುಚ್ಛಗಳು ೪೪೩

೧೦. ಡಾ. ಸಿದ್ಧಯ್ಯ ಪುರಾಣಿಕರ ಭಾವಚಿತ್ರಗಳು ೪೪೫

೧೧. ಡಾ. ಸಿದ್ಧಯ್ಯ ಪುರಾಣಿಕರ ಜನ್ಮಶತಮಾನೋತ್ಸವದ..... ಸಂದರ್ಭದಲ್ಲಿ ನಡೆದ ಕಾರ್ಯಕ್ರಮಗಳು ೪೬೧

# ಪುರಾಣಿಕರ ಬಾಲ್ಯದ ಒಂದು ಚಿತ್ರ

ಡಾ. ಸಿದ್ಧಯ್ಯ ಪುರಾಣಿಕರ ಬದುಕಿನ ವಿವರಗಳನ್ನು ಸಂಕ್ಷಿಪ್ತವಾಗಿ ಗುರುತಿಸಬೇಕೆನ್ನುವಾಗ ಥಟ್ಟನೆ ನಮ್ಮ ಗಮನ ಸೆಳೆಯುವುದು ಅವರ ಬಾಲ್ಯದ ಈ ಘಟನೆ : ಸ್ವಂತ ಸೋದರ ಮಾವನೆ ಮಾಸ್ತರನಾಗಿದ್ದ ಶಾಲೆಯಲ್ಲಿ ಅವರು ಒಂದು ದಿನ ವಿದ್ಯಾರ್ಥಿಗಳ ಅಭಿರುಚಿಗಳನ್ನು ತಿಳಿದುಕೊಳ್ಳಬೇಕೆಂದು ಕುತೂಹಲಗೊಂಡು ಹುಡುಗರನ್ನೆಲ್ಲಾ ಹತ್ತಿರಕ್ಕೆ ಕರೆದು 'ನಿಮಗೆ ಏನು ಬೇಕು? ಎಂಬುದನ್ನು ನಿಮ್ಮ ಸ್ಲೇಟುಗಳ ಮೇಲೆ ಬರೆದು ತಂದು ತೋರಿಸಿರಿ.' ಎಂದು ಅಪ್ಪಣೆ ಮಾಡಿದರು. ಒಬ್ಬ ಹುಡುಗ ನನಗೆ ತಿಂಡಿ ಬೇಕು ಎಂದು ಬರೆದಿದ್ದರೆ, ಮತ್ತೊಬ್ಬ ನನಗೆ ಹುಂಡಿ ಬೇಕೆಂದು, ಇನ್ನೊಬ್ಬ ಬಳಪ ಬೇಕೆಂದು, ಮತ್ತೊಬ್ಬ ಹೋಳಿಗೆ ಬೇಕು ಎಂದು ಹೀಗೆ ವಿಧವಿಧವಾಗಿ ತಮ್ಮ ಆಶಯಗಳನ್ನು ಸ್ಲೇಟ್ ಮೇಲೆ ಬರೆದು ತಂದಿದ್ದರು. ಈ ಸ್ಲೇಟುಗಳನ್ನು ನೋಡುತ್ತಿದ್ದಂತೆಯೇ ಅದರಲ್ಲಿ ಒಂದು ಸ್ಲೇಟು ಅವರ ಗಮನವನ್ನು ಸೆಳೆಯಿತು ಕಣ್ಣು ಅಲ್ಲೇ ನಾಟಿತು. ಹುಬ್ಬು ಮೇಲಕ್ಕೇರಿದವು. ಒಬ್ಬ ವಿದ್ಯಾರ್ಥಿ 'ವಿದ್ಯೆ ಬೇಕು' ಎಂದು ಬರೆದಿದ್ದ. ಆ ವಿದ್ಯಾರ್ಥಿಯೇ ಮುಂದೆ ಡಾ. ಸಿದ್ಧಯ್ಯ ಪುರಾಣಿಕ ಐ.ಎ.ಎಸ್. ಎಂದು ಖ್ಯಾತನಾಮರಾದವರು. ಈ ವಿದ್ಯೆ ಛಲದಿಂದ ಅವರು ಕನ್ನಡ, ಹಿಂದಿ, ಸಂಸ್ಕೃತ, ಇಂಗ್ಲೀಷ್ ಮತ್ತು ಉರ್ದು ಕಲಿತು ಪಾಂಡಿತ್ಯವನ್ನು ಗಳಿಸಿದರು. ಅವರ ಸಾಹಿತ್ಯದಲ್ಲಿ ಈ ಎಲ್ಲ ಭಾಷೆಯ ಸ್ವಾರಸ್ಯವು ಕಂಡು ಬರುತ್ತದೆ.

# ನನ್ನ ನಿನ್ನೆಗಳೊಡನೆ ಕಣ್ಣು ಮುಚ್ಚಾಲೆ

**–ಡಾ. ಸಿದ್ಧಯ್ಯ ಪುರಾಣಿಕ**

## ಅಗ್ನಿದಿವ್ಯ :

"There is only one fruitful form of memory-remembering what still has to be done". **-Ernst Bloch**

ಈ ಉಕ್ತಿ ನನ್ನ ಗಮನಕ್ಕೆ ಬರುವುದಕ್ಕಿಂತ ಬಹಳ ಹಿಂದಿನಿಂದಲೇ ನಾನಿದೇ ನಂಬಿಕೆಯೊಡನೆ ಬಾಳಿದವನು. ದಿನಚರಿಯನ್ನು ಬರೆಯಲಿಲ್ಲ. ಮರೆಯಲಾಗದ ಘಟನೆಗಳಿದ್ದರೆ ಬರೆದಿಡದಿದ್ದರೂ ನೆನಪಿನಲ್ಲಿ ಉಳಿದಿರುತ್ತವೆ; ಮರೆತು ಹೋಗ ಬಲ್ಲುದನ್ನು ಬರೆದಿಟ್ಟು ಪ್ರಯೋಜನವೇನು? ಮರೆತುದರಲ್ಲಿಯೂ ಮರೆಯಬಾರದ ಒಂದೆರಡು ಅಂಶಗಳಿರಬಹುದು. ಅಷ್ಟಕ್ಕಾಗಿ ದಿನ ದಿನ ದಿನಚರಿ ಬರೆವ ಕಷ್ಟವೇಕೆ? ಮೇಲಾಗಿ, ಸಣ್ಣ ಬಡಹಳ್ಳಿಯೊಂದರಲ್ಲಿ ಬಡಕುಟುಂಬದಲ್ಲಿ ಹುಟ್ಟಿದ ನಾನು ದಿನಚರಿ ಬರೆಯುವಷ್ಟು ಮಹತ್ವದ ವ್ಯಕ್ತಿಯಾಗುವೆನೆಂದು ಹೇಗೆ ನಂಬುವುದು? ಅಲ್ಲದೆ, ಆಯುಷ್ಯದ ಮೂವತ್ತು ಮೂರು ವರ್ಷಗಳನ್ನು ಸೇವಾಜೀವಿಯಾಗಿ ಕಳೆದ ನನಗೆ ನಾ ಮಾಡಿದ ಸರಕಾರೀ ಕೆಲಸಗಳ ವಿವರಗಳನ್ನು ಮೇಲಿನವರಿಗೆ ಒಪ್ಪಿಸಲು ಸರಕಾರೀ ದಿನಚರಿ ಬರೆಯುವುದು ಕಡ್ಡಾಯವಾದ ಕರ್ತವ್ಯವಾಗಿದ್ದಿತು. ಆ ದಿನಚರಿ ಬರೆವ ತಲೆನೋವಿನ ಜೊತೆಗೆ ಇನ್ನೊಂದು ವೈಯಕ್ತಿಕ ದಿನಚರಿಯನ್ನು ಬರೆವ ಶಿರೋವೇದನೆಯನ್ನು ಹೇಗೆ ಸ್ವಾಗತಿಸುವುದು? ಇಷ್ಟಾಗಿಯೂ, ಬರೆದು ನೋಡೋಣವೆಂದು ನಾಲ್ಕಾರು ಸಲ ಬರೆಯಲು ಮೊದಲು ಮಾಡಿದುದಾಯಿತು. ಒಂದು ದಿನ ಬರೆದರೆ ಒಂದು ವಾರ ಚಕ್ಕರ್! ಆಗಾಗ ಬರೆದ ಹತ್ತಾರು ಪುಟಗಳು ಹಲವು ವರ್ಷಗಳ ದಿನಚರಿಗಳಲ್ಲಿ ಹೇಗೋ ಉಳಿದುಕೊಂಡಿವೆ. ಅವುಗಳನ್ನು ಈಗ ಓದಿದಾಗ ದಿನಚರಿ ಬರೆಯದಿದ್ದುದೊಂದು ಘನಪ್ರಮಾದವೆಂದೇನೂ ಎನಿಸುತ್ತಿಲ್ಲ ನನಗೆ! ದಿನಚರಿ ಬರೆಯುವಲ್ಲಿ ಕಳೆಯಬೇಕಿದ್ದ ಸಮಯವನ್ನು ಅದಕ್ಕೂ ಹೆಚ್ಚು ಉಪಯುಕ್ತವಾದ ರೀತಿಯಲ್ಲಿ ಕಳೆದಿದ್ದೇನೆ–ಎಂಬ ಸಮಾಧಾನ ನನಗೆ!

ಸಮಯವೊಂದೇ ನನ್ನ ಪಾಲಿನ ಸಂಪತ್ತು ಎಂದು ಪ್ರಜ್ಞೋದಯದ ಪ್ರಾರಂಭದಿಂದಲೂ ನಂಬಿದ ನಾನು ವಿದ್ಯಾರ್ಥಿಯಾಗಿ, ಸೇವಾಜೀವಿಯಾಗಿ, ನಿವೃತ್ತ ಅಧಿಕಾರಿಯಾಗಿ ನಿಮಿಷ ನಿಮಿಷದ ಲೆಕ್ಕವಿಟ್ಟು ಸಮಯದ ಸದುಪಯೋಗ ಮಾಡಿಕೊಂಡೆನಾಗಲಿ ಬಂದ ಸಂಬಳದ ಲೆಕ್ಕವಿಡಲಿಲ್ಲ. ವೆಚ್ಚ ಮಾಡಿ ಉಳಿದುದೆಷ್ಟು–ಎಂಬುದು ತಿಳಿದರೆ ಸಾಲದೆ? ಕರಿಬೇವು, ಕೊತ್ತುಂಬರಿ, ಎಣ್ಣೆ, ಬೆಣ್ಣೆ, ಬಟ್ಟೆಬರೆ ಇತ್ಯಾದಿಗಳಿಗೆ ಎಷ್ಟು ವೆಚ್ಚವಾಯಿತೆಂದು ಬರೆದಿಡುವುದರಿಂದ ಯಾವ ಪ್ರಯೋಜನ? ಅಂತೆಯೇ, ಇನ್ನೂ ಮಾಡಬೇಕಾಗಿರುವುದನ್ನು ನೆನಪಿಟ್ಟರೆ ಸಾಲದೆ, ಹಿಂದೆ ಮಾಡಿದುದನ್ನು ನೆನಪಿಟ್ಟು ಯಾವ ಉಪ್ಪಿನಕಾಯಿ ಹಾಕುವುದಿದೆ? ಹೀಗೆ ಸಾಗಿಬಂದಿದೆ ನನ್ನ ಬಾಳಿನ ಬಗ್ಗೆ ನನ್ನ ನೋಟ.

ಹೀಗೆಂದುಕೊಂಡು ತೆರೆಮರೆಯ ಹಿಂದದ್ದೇ ಕೈಲಾದಷ್ಟು ನಾಡುನುಡಿಗಳ ಸೇವೆ ಮಾಡುತ್ತ ಬಂದಿದ್ದ ನನಗೆ ಈಗ ಒಮ್ಮೆಗೇ ಅಗ್ನಿದಿವ್ಯವನ್ನು ಎದುರಿಸಬೇಕಾಗಿ ಬಂದಿದೆ–ಅನಿಮಿತ್ತ ಬಂಧುಗಳಾದ ಶ್ರೀ ಜಿ. ನಾರಾಯಣರು ನನಗೊಂದು ಅಭಿನಂದನ ಗ್ರಂಥ ಕೊಡಲೇಬೇಕು, ಸನ್ಮಾನ ಸಮಾರಂಭ ಮಾಡಲೇಬೇಕು–ಎಂದು ಹಟಹಿಡಿದ ಕಾರಣ. ಅಭಿನಂದನ ಗ್ರಂಥದಲ್ಲಿ ನನ್ನ ಆತ್ಮಕಥನವಿರಲೇಬೇಕೆಂಬ ಹಟ ಬೇರೆ! "ಇದೊಂದು ಅಪ್ರಯೋಜಕ ಪ್ರಯಾಸವನ್ನೇಕೆ ನನ್ನ ಮೇಲೆ ಹೇರುತ್ತಿರುವಿರಿ"? ಎಂದು ನಾನು ವಾದಿಸಿದರೆ, "ಇಂದಿನವರಿಗಲ್ಲದಿದ್ದರೂ ಮುಂದಿನವರಿಗೆ ಪ್ರಯೋಜನವುಂಟು; ನೀವು ಬರೆಯಲೇಬೇಕು" ಎಂಬುದವರ ಉತ್ತರ! ಮುಂದಿನವರು ಗಾಂಧೀಜಿಯ "ಸತ್ಯಶೋಧನ" ಪಂಡಿತಜಿಯ ಆತ್ಮಚರಿತೆ, ರಾಷ್ಟ್ರಕವಿ ಕುವೆಂಪು ಅವರ "ನೆನಪಿನ ದೋಣಿಯಲ್ಲಿ", ಮಾನ್ಯ ಮಾಸ್ತಿಯವರ "ಭಾವ", ಡಾ. ಶಿವರಾಮ ಕಾರಂತರ "ಸ್ಮೃತಿಪಟಲದಿಂದ" ಇತ್ಯಾದಿಗಳನ್ನು ಓದಿದರೂ ಸಾಕು. ನನ್ನಂಥವನ ಆತ್ಮಕಥನ ಅದಾವ ಗಿಡದ ತೊಪ್ಪಲು?

ಈ ತುಮುಲಕ್ಕೆ ಸಿಕ್ಕಿ ಕಳೆದ ಮೂರು ತಿಂಗಳುಗಳಿಂದಲೂ ಶ್ರೀ ಜಿ. ನಾರಾಣಯರ, ಡಾ. ಸಾ. ಶಿ. ಮರುಳಯ್ಯನವರ ನೆನಪೋಲೆಗಳ, ದೂರವಾಣಿ ಕರೆಗಳ ಒತ್ತಡಕ್ಕೆ ಒಳಗಾಗಿಯೂ ನೆನಪುಗಳ ಮಥನ, ಆತ್ಮಕಥನಕ್ಕೆ ಕೈಯಿಕ್ಕಲೇ ಇಲ್ಲ ನಾನು, ಮನದ ತಿಮ್ಮ ಹಲವು ಸಲ 'ಅಂತರ್ಲಾಗ, ಜಂತರ್ಲಾಗ, ತಿಪ್ಪರ್ಲಾಗ' ಹಾಕಿದ ಮೇಲೆ ಎಂಥದೋ ಒಂದು ಸಮರ್ಥನೆಯನ್ನು ಶೋಧಿಸಿಕೊಂಡು ಬರೆಯಲು 'ಷುರು' ಮಾಡಿದ್ದೇನೆ. ನಾನು ಹುಟ್ಟಿ ಬೆಳೆದ ಹೈದರಾಬಾದು ಕರ್ನಾಟಕದಲ್ಲಿ ನಡೆದ ಕನ್ನಡದ ಚಳುವಳಿಯ ಬಗ್ಗೆ, ಕನ್ನಡ ಬರಹಗಾರರ ಬಗ್ಗೆ, ಕನ್ನಡ ಹೋರಾಟಗಾರರ ಬಗ್ಗೆ, ನನಗೆ ನೆರವಾದವರ ಬಗ್ಗೆ, ಸದ್ದಿಲ್ಲದೆ ಕನ್ನಡ



ಸೇವೆ ಮಾಡಿದವರ ಬಗ್ಗೆ ತಕ್ಕಷ್ಟು ತಿಳಿವಳಿಕೆ ನೀಡಿ ಕರ್ನಾಟಕದ ಉಳಿದ ಭಾಗಗಳವರಿಗೂ ಅವರ ವಿಷಯ ಗೊತ್ತಾಗುವಂತೆ ಮಾಡಬಹುದಲ್ಲ; ಅವರ ಬಗೆಗೂ ಎಲ್ಲ ಕನ್ನಡಿಗರಲ್ಲಿ ಆತ್ಮೀಯತೆ ಉದಿಸುವಂತೆ ಮಾಡಬಹುದಲ್ಲ–ಎಂಬುದೇ ಆ ಸಮರ್ಥನೆ

## ನನ್ನ ತಾಯಿಯ ಮಡಿಲು :

ಹುಟ್ಟಿದ ಹಳ್ಳಿಯ ದೃಷ್ಟಿಯಿಂದ ನಾನು ಅದೃಷ್ಟಶಾಲಿ. ನಾನು ಹುಟ್ಟಿದ ಹಳ್ಳಿ ರಾಯಚೂರು ಜಿಲ್ಲೆಯ ಯಲಬುರಗಿ ತಾಲ್ಲೂಕಿಗೆ ಸೇರಿದ ದ್ಯಾಂಪುರವೆಂಬ ಹಳ್ಳಿ, ಬಹಳ ಚಿಕ್ಕ ಹಳ್ಳಿ. ಸುಮಾರು ಒಂದು ನೂರು ಕುಟುಂಬಗಳು ಊರಲ್ಲಿಯೂ, ಅದರ ಅರ್ಧದಷ್ಟು ಕುಟುಂಬಗಳು ಕೇರಿಯಲ್ಲಿಯೂ ವಾಸ ಮಾಡುತ್ತಿರುವ ಹಳ್ಳಿ. ಸುತ್ತಣ ಹತ್ತು ಹಳ್ಳಿಗಳಲ್ಲಿ ನಮ್ಮೂರವರೇ ಶಾಲಾಗುರುಗಳು. ಸಾಲದುದಕ್ಕೆ ನನ್ನ ಅಜ್ಜಂದಿರಾದ ಕವಿರತ್ನ ಚೆನ್ನಕವಿಗಳು, ನನ್ನ ತಂದೆಯವರಾದ ಪಂಡಿತ ಕಲ್ಲಿನಾಥ ಶಾಸ್ತ್ರಿಗಳು, ಸೋದರಮಾವಂದಿರಾದ ಶ್ರೀ ಕಾಲಕಾಲೇಶ್ವರ ಶಾಸ್ತ್ರಿಗಳು, ಶಿವಯೋಗ ಮಂದಿರದಲ್ಲಿ ನೆಲೆಸಿ ಹೆಸರಾಗಿದ್ದ ಹಿರೇಮಠದ ಶ್ರೀ ಮಹಾಲಿಂಗಯ್ಯನವರು, ಜೀವದಯಾ ಸಂಘದ ಜೀವನಾಡಿಯಾಗಿದ್ದ ಶ್ರೀ ಕಲ್ಲಿನಾಥ ಹಿರೇಮಠರು, ಸಾತ್ವಿಕ ಶಿರೋಮಣಿಗಳಾಗಿದ್ದ ಮಠದ ಚೆನ್ನಯ್ಯನವರ, ಮಠದ ರುದ್ರಯ್ಯನವರು, ಜಂಗ್ಲಿ ಸಾಹೇಬು ದ್ಯಾಂಪುರದ ಹೆಸರು ದೂರ ದೂರದವರೆಗೆ ಹರಡುವಂತೆ ಮಾಡಿದ್ದರು. ನೋಟಗಾರ ಸಣ್ಣ ಬಸಪ್ಪನವರು ಶಾಲಾಗುರುಗಳಾಗಿ ಎಲ್ಲಿಯೂ ಕೆಲಸ ಮಾಡದಿದ್ದರೂ ಬಹುಶ್ರುತರಾಗಿ ನನ್ನ ತಂದೆಯವರ ಜೀವದ ಗೆಳೆಯರಲ್ಲೊಬ್ಬರಾಗಿ ಊರಲ್ಲೆಲ್ಲ ಹಾಸ್ಯದ ಹೊನಲು ಹರಿಸುತ್ತಿದ್ದರು. ದಾದಾಸಾಹೇಬರು ನಮ್ಮೂರ ಧನ್ವಂತರಿ. ಯಾರಿಗೆ ಏನೇ ಕಾಯಿಲೆ ಬರಲಿ, ತಾವೇ ಕಾಡಿಗೆ ಹೋಗಿ ತಾಜಾ ವನಸ್ಪತಿಗಳನ್ನು ತಂದು, ಅವು ಯಾವ ವನಸ್ಪತಿಗಳೆಂಬುದು ಜನರಿಗೆ ಗೊತ್ತಾಗದಿರಲೆಂದು ಕುಟ್ಟಿ ಗುಳಿಗೆ ಮಾಡಿಯೋ, ಹಿಂಡಿ ರಸ ಮಾಡಿಯೋ ಕೊಡುತ್ತಿದ್ದರು. ಅಂತ್ಯಕಾಲಕ್ಕೆ ಮೊದಲು ನನ್ನ ತಂದೆಯವರಿಗೆ ಮಾತ್ರ ಆ ವನಸ್ಪತಿಗಳ ವಿವರಗಳನ್ನೂ, ಅವುಗಳಿದ್ದ ಸ್ಥಳಗಳನ್ನೂ, ಅವುಗಳ ಗುಣಧರ್ಮಗಳನ್ನೂ, ಅವುಗಳು ಯಾವ ರೋಗಗಳಿಗೆ ಔಷಧಗಳಾಗಬಹುದು ಎಂಬುದನ್ನೂ ತಿಳಿಸಿ ಪೈಗಂಬರ ವಾಸಿಗಳಾದರು. ನನ್ನ ತಂದೆಯವರು ಹೀಗೆ ಮುಚ್ಚಿಟ್ಟು ಬಚ್ಚಿಟ್ಟು ಈ ದೇಶದ ಆಯುರ್ವೇದ ವಿಜ್ಞಾನವೊಂದೇ ಅಲ್ಲ, ಇತರ ಅನೇಕ ಶಾಸ್ತ್ರಗಳೂ ಕ್ಷೀಣಿಸಿ ಹೋದುವೆಂಬ ಅಭಿಪ್ರಾಯದವರಾಗಿದ್ದರು. ದಾದಾಸಾಹೇಬರ ಮರಣಾ ನಂತರ ಅವರ ಬಳಿಗೆ ಬಂದ ಮೊದಲನೆಯ ರೋಗಿಗೇ ಅವನು ಸೇವಿಸಬೇಕಾದ

ವನಸ್ಪತಿಯಿದ್ದ ಸ್ಥಳವನ್ನು ತೋರಿಸಿ, ದಿನಕ್ಕೊಂದು ಹಿಡಿಯಂತೆ ಅದರ ಎಲೆಗಳನು ತಿನ್ನಲು ಹೇಳಿದರು. ಅವನ ಕಾಯಿಲೆಯೇನೋ ವಾಸಿಯಾಯಿತು; ಆದರೆ ಅದೇ ರೋಗದಿಂದ ನರಳುತ್ತಿದ್ದ ಇನ್ನೊಬ್ಬ ಬಂದಾಗ ಆ ಸ್ಥಳಕ್ಕೆ ಹೋಗಿ ನೋಡುತ್ತಾರೆ– ಅಲ್ಲಿ ಆ ವನಸ್ಪತಿಯಿದ್ದ ಗುರುತು ಸಹ ಇರಲಿಲ್ಲ! ಮೊದಲನೆಯ ರೋಗಿ ಅದನ್ನು ಬೇರು ಸಹಿತ ಕಿತ್ತು ತಿಂದುಬಿಟ್ಟಿದ್ದ! ಆಗ ತಂದೆಯವರು ಉದ್ಗರಿಸಿದರು: "ಎಂಥ ಅಜ್ಞ ಜನ ಈ ದೇಶದಲ್ಲಿ! ಸುತ್ತು ಹತ್ತು ಮೈಲಿಗಳಿಗೆಲ್ಲ ಇದೊಂದೇ ಬಳ್ಳಿ ಔಷಧವನ್ನು ಒದಗಿಸುತ್ತಿತ್ತು. ಹಾಲು ಕರೆದುಕೋ ಎಂದರೆ ಕೆಚ್ಚಲನ್ನೇ ಕೊಯ್ದುಕೊಳ್ಳುವ ಇಂಥ ತಿಳಿಗೇಡಿಗಳಿಂದ ಈ ದೇಶ ತುಂಬಿ ತುಳುಕಾಡುತ್ತಿರು–ವುದರಿಂದಲೇ ವನಸ್ಪತಿ ನಾಶವನ್ನು ತಪ್ಪಿಸಲು ದಾದಾಸಾಹೇಬರೂ, ಅವರ ತಲೆಮಾರಿನ ಹಳ್ಳಿಯ ವೈದ್ಯರೂ ಅವುಗಳನ್ನು ಬಚ್ಚಿಡುತ್ತಿದ್ದರೇನೋ! ತಮಗೆ ಬೇಕಾದುದು ಅನ್ಯರಿಗೂ ಬೇಕಾಗಬಹುದೆಂಬ ಅರಿವು, ಎಚ್ಚರ ಎಂದು ಮೂಡುವುವೋ ನಮ್ಮ ನಾಡವರಲ್ಲಿ"! ಹೀಗೆಂದು ಅವರು ಬಿಟ್ಟ ನಿಟ್ಟುಸಿರಿನ ಬಿಸಿಯನ್ನು ಈಗಲೂ ಅನುಭವಿಸುತ್ತಿದ್ದೇನೆ ನಾನು–ಈ ದೇಶದಲ್ಲಿ ಪಿಡುಗಿನಂತೆ ಹಬ್ಬಿರುವ ಕಲಾವಸ್ತು ವಿಧ್ವಂಸಕ, ರಾಷ್ಟ್ರ ಸಂಪತ್ತಿ ವಿನಾಶಕ ಕರಾಳ ಕೃತ್ಯಗಳನ್ನು ನೋಡಿದಾಗಲೆಲ್ಲ!

ನಮ್ಮೂರ 'ಗಾಂವಠಿ' ಶಾಲೆಗೆ ಮಾಸ್ತರರು ದೊರೆಯುವುದೇ ದುರ್ಲಭವಾಗಿದ್ದಿತು. ಸಣ್ಣಹಳ್ಳಿ; ಬಡವರಿಂದ ತುಂಬಿದ ಹಳ್ಳಿ; ಶಾಲೆ ಸೇರುವ ಬಾಲಕರ ಸಂಖ್ಯೆ ಸಣ್ಣದು; ಅವರು ಕೊಡುವ ಶೂಲ್ಕ ಅಗಣ್ಯವಾದುದು. ಇಲ್ಲಿಗೆ ಮಾಸ್ತರರಾಗಿ ಬಂದು ಬದುಕುವುದು ಹೇಗೆ? ಸುತ್ತಲಿನ ಹಳ್ಳಿಗಳಿಗೆಲ್ಲ ಶಾಲಾಗುರುಗಳನ್ನಿತ್ತ ನಮ್ಮ ಹಳ್ಳಿಗೇ ಶಾಲಾಗುರು ಸಿಕ್ಕುವುದು ಕಷ್ಟವಾದುದು ಸೋಜಿಗವೆನಿಸಿದರೂ ಸತ್ಯ ಸಂಗತಿ. ಕಂದಗಲ್ ವೀರಯ್ಯನವರೊಬ್ಬರೇ ನಾಲ್ಕು ಕಾಲ ನಿಂತ ಮಾಸ್ತರರು. ಅಣ್ಣನ ಮನೆಯಲ್ಲಿದ್ದು, ಬರುತ್ತಿದ್ದ ಅಲ್ಪಸ್ವಲ್ಪ ಆದಾಯದಲ್ಲಿ ಹೇಗೋ ಕಾಲ ತಳ್ಳಿದರು. ಅವರೂ ಬೇಸತ್ತು ನೆರೆಹಳ್ಳಿಯೂ, ಪೇಟೆಯ ಸ್ಥಳವೂ ಆದ ಕುಕ್ಕನೂರಿನಲ್ಲಿ ನಮ್ಮೂರವರೇ ಆಗಿದ್ದು ಸಾಹಸದಿಂದ ಕುಕ್ಕನೂರಿಗೇ ದೊಡ್ಡ ಕಿರಾಣಿ ಅಂಗಡಿಯ ಒಡೆಯರಾಗಿದ್ದ ಜಾಧವ ವೆಂಕಪ್ಪನವರಲ್ಲಿ ಕಾರಕೂನರಾಗಿ ಕೆಲಸಕ್ಕೆ ಸೇರಿದರು!

ಶಾಲೆ ಈ ಅಸ್ತವ್ಯಸ್ತತೆಗೆ ಈಡಾಗಿದ್ದರೂ ನನ್ನ ವಿದ್ಯಾರ್ಜನೆ ಅವ್ಯಾಹತವಾಗಿ ಸಾಗಿದ್ದಿತು. ನನ್ನ ತಂದೆಯವರೇ ಮನೆಯಲ್ಲಿ ನನ್ನ ಗುರುಗಳಾಗಿ ಅವರು ಊರಲ್ಲಿದ್ದಾಗಲೆಲ್ಲ ನನಗೆ ಪ್ರೀತಿಯಿಂದ ಪಾಠ ಹೇಳುತ್ತಿದ್ದರು. ಪಠ್ಯೇತರ ವಿಷಯಗಳನ್ನು ನನ್ನ ತಲೆಗೆ ಭಾರವೆನಿಸದ ರೀತಿಯಲ್ಲಿ ಲೀಲಾಜಾಲವಾಗಿ



ಹೇಳಿಕೊಡುತ್ತಿದ್ದರು. ಸಾಹಿತ್ಯ, ವ್ಯಾಕರಣ, ಛಂದಸ್ಸು, ಇತ್ಯಾದಿಗಳನ್ನು ಕಲಿಸುವುದರ ಜೊತೆಗೆ ಜೈಮಿನಿ ಭಾರತ, ಶಬರಶಂಕರವಿಳಾಸ, ಪ್ರಭುಲಿಂಗಲೀಲೆಗಳನ್ನು ಓದಿ ಅರ್ಥ ಮಾಡಿ ಹೇಳುತ್ತಿದ್ದರು. ಅವರು ಪುರಾಣ ಪ್ರವಚನವನ್ನೇ ವೃತ್ತಿಯನ್ನಾಗಿ ಸ್ವೀಕರಿಸಿದ್ದ ಕಾರಣ ಯಾವಾಗಲೂ ಸ್ವಾಧ್ಯಾಯ ನಿರತರಾಗಿರುತ್ತಿದ್ದರು. 'ಈ ಕಾಯಕಕ್ಕೆ ಎಷ್ಟು ವಿಷಯ ಸಂಗ್ರಹ ಮಾಡಿದರೂ ಸಾಲದು' ಎಂದು ಆಗಾಗ ಹೇಳುತ್ತಿದ್ದರು. ಆಗ ಆ ಭಾಗಕ್ಕೆ ಅಪ್ರತಿಮ ಪುರಾಣ ವಚನ ಪಟುಗಳೆಂದು ಪ್ರಸಿದ್ಧರಾಗಿದ್ದ ಅವರಿಗೆ ಹಳ್ಳಿಗಳಿಂದಂತೂ ಸರಿಯೆ, ದೂರ ದೂರದ ಪಟ್ಟಣಗಳಿಂದಲೂ ಪುರಾಣ ಪ್ರವಚನಕ್ಕಾಗಿ ಕರೆಗಳು ಬರುತ್ತಿದ್ದುವು. ಆದುದರಿಂದ ಪುರಾಣ ಕಾವ್ಯಗಳನ್ನು ಓದಿ ಅರಗಿಸಿಕೊಳ್ಳುವ, ಪ್ರವಚನಕ್ಕೆ ಬೇಕಾಗುವ ಸಂಸ್ಕೃತ ಸುಭಾಷಿತಗಳನ್ನೂ, ಕನ್ನಡ ಶತಕಗಳನ್ನೂ, ಹಾಡುಗಬ್ಬಗಳನ್ನೂ, ವಚನಗಳನ್ನೂ, ಹಾಸ್ಯ ಕಥೆಗಳನ್ನೂ ಸಂಗ್ರಹಿಸಿ ಬರೆದಿಟ್ಟುಕೊಳ್ಳುವ ಅವರ ಕಾಯಕ ನಿರಂತರವಾಗಿ ನಡೆದಿರುತ್ತಿತ್ತು. ಅದರ ಗಾಳಿ ನನ್ನ ಮೇಲೆ ಬೀಸುತ್ತಲೇ ಇತ್ತು. ಇದಕ್ಕೆ ಪೂರಕವಾಗಿ ನನ್ನ ತಂದೆಯವರ ಕಕ್ಕಂದಿರಾದ ಕವಿರತ್ನ ಚೆನ್ನಕವಿಗಳವರ ಮನೆಯಲ್ಲಿ ನಡೆಯುತ್ತಿದ್ದ ಶಾಸ್ತ್ರಾರ್ಥಗೋಷ್ಠಿಗಳಲ್ಲಿ ಕುಳಿತು–ತಿಳಿಯಲಿ ತಿಳಿಯದಿರಲಿ–ಕೇಳುವ ಭಾಗ್ಯ ನನ್ನದಾಗಿರುತ್ತಿತ್ತು. ಅಲ್ಲಿ ಅನೇಕ ವಿಷಯಗಳ ಬಗ್ಗೆ ಚರ್ಚೆ ನಡೆಯುತ್ತಿದ್ದಿತಾದರೂ ಮುಖ್ಯವಾಗಿ ನಡೆಯುತ್ತಿದ್ದುದು ನಿಜಗುಣ ಶಿವಯೋಗಿಗಳವರ 'ಆರು ಶಾಸ್ತ್ರ'ಗಳ ಅಧ್ಯಯನ, ಮನನ, ಮಂಥನ, ಅದನ್ನು ಬೆರಗು ಮುಸುಕಿದ ಕಿವಿಗಳಿಂದ ಕೇಳುತ್ತ, ಅದನ್ನು ಅರಿತುಕೊಳ್ಳುವ ಶಕ್ತಿ ಎಂದಾದರೂ ನನಗೆ ಬಂದೀತೆ ಎಂದು ಅನುಮಾನಿಸುತ್ತ ನಾನು ಕಳೆದ ಘಂಟೆಗಳೆಷ್ಟೆಂಬುದನ್ನೀಗ ಹೇಗೆ ಹೇಳುವುದು? ಇನ್ನೇನೂ ತಿಳಿಯದಿದ್ದರೂ ಪದೇ ಪದೇ ಕೇಳಿಬರುತ್ತಿದ್ದ ಕೆಲವು ಪದಗಳು ಮಾತ್ರ ನನ್ನ ನೆನಪಿನಲ್ಲಿ ನೆಲೆಯೂರಿ ನಿಂತವು; 'ಕೈವಲ್ಯ ಪದ್ಧತಿ'ಯ ಮೊದಲ ಹಾಡು– 'ಶ್ರೀ ಗುರು ವಚನೋಪದೇಶವನಾಲಿಸಿದಾಗಳಹುದು ನರರಿಗೆ ಮುಕುತಿ' ಮತ್ತು 'ಮಾಡಲಾಗದೆ ತಪವ' 'ನೋಡಲಾಗದೆ ದೇವ' ಕೋಗಿಲೆ ಚೆಲ್ವ ಕೋಗಿಲೆ' ಇತ್ಯಾದಿ ಹಾಡುಗಳು ಮುಖೋದ್ಗತವಾಗಿದ್ದುವು; ಒಂದು ವಾರ ಬಿಟ್ಟೂ ಬಿಡದೆ ಚರ್ಚೆಗೊಳಗಾಗಿದ್ದ "ಸ್ವಗತಾದಿ ಭೇದವಾತ್ಮನೊಳಿಲ್ಲವೆಂತೆನೆ! ಗಗನದಂತಿರೆ ನಿರವಯನಾಗಿ" ಎಂಬ ಸೂತ್ರವೂ ಸ್ಮರಣೆಯಲ್ಲುಳಿಯಿತು. ಇವೆಲ್ಲ ಆಗ ಅರ್ಥವಾಗದ 'ಮಂಡಿಗೆ' ಗಳೆನಿಸಿದ್ದರೂ ವಯಸ್ಸಾದಂತೆ ಅರ್ಥವಾಗುತ್ತ ಆನಂದ ನಿರ್ಝರಗಳಾದುವು ನನಗೆ.

ಚರ್ಚೆಗೆ ಕಾವೇರಿದಾಗ ಉಪನಿಷನ್ಮಂತ್ರಗಳೂ, ಸಿದ್ಧಾಂತ ಶಿಖಾಮಣಿಯ ಶ್ಲೋಕಗಳೂ, ಬಸವಾದಿ ಪ್ರಮಥರ ವಚನಗಳೂ, ಸರ್ಪಭೂಷಣ ಶಿವಯೋಗಿ,

ಮುಪ್ಪಿನ ಷಡಕ್ಷರಿ, ಶಿಶುನಾಳ ಷರೀಫ್ ಸಾಹೇಬರು, ಬಾಲಲೀಲಾ ಮಹಾಂತ ಶಿವಯೋಗಿಗಳು ಮುಂತಾದವರ ಹಾಡುಗಬ್ಬಗಳೂ ವಾದಸಮರ್ಥನೆಗಾಗಿಯೋ, ಅರ್ಥವಿವರಣೆಗಾಗಿಯೋ, ನಿಜಗುಣರ ಅಭಿಮತದ ಪುಷ್ಟೀಕರಣಕ್ಕಾಗಿಯೋ ಉದ್ಧೃತವಾಗುತ್ತಿದ್ದುವು. ಚರ್ಚೆಗಳು ನಡೆದಾಗ ಭಾಗವಹಿಸುತ್ತಿದ್ದ ಎಲ್ಲರೂ 'ಕಾಲಾತೀತ'ರಾಗಿ ಬಿಡುತ್ತಿದ್ದರು. ಯಾರಿಗೂ ಹಸಿವೆ, ನೀರಡಿಕೆ, ನಿದ್ದೆಗಿದ್ದೆಗಳ ಪರಿವೆಯೇ ಇರುತ್ತಿರಲಿಲ್ಲ. ಈ ಶಾಸ್ತ್ರಾರ್ಥಗೋಷ್ಠಿಗಳು ಆ ಭಾಗದಲ್ಲಿ ಅದೆಷ್ಟು ಅಪೂರ್ವವಾಗಿದ್ದುವೆಂದರೆ ಇವುಗಳಲ್ಲಿ ಭಾಗವಹಿಸಲು ಒಮ್ಮೊಮ್ಮೆ ಕುಕ್ಕನೂರು, ಆಡೂರು, ರಾಜೂರು, ಗುದ್ನೆಪ್ಪನ ಮಠ, ಚಿಕ್ಕೇನಕೊಪ್ಪ, ಸಂಗನಹಾಳು ಇತ್ಯಾದಿ ಗ್ರಾಮಗಳಿಂದ ಜಿಜ್ಞಾಸುಗಳು ಬರುತ್ತಿದ್ದರು. ಆಗ ನಮ್ಮ ಮನೆ ದಾಸೋಹದ ಮನೆಯಾಗುತ್ತಿತ್ತು. ನಾನು ಹುಟ್ಟುವ ಮೊದಲೇ ಶಿವೈಕ್ಯರಾಗಿದ್ದ ನನ್ನ ಅಜ್ಜ ಸಿದ್ಧಯ್ಯನವರ ಕಾಲದಿಂದಲೂ ನಮ್ಮ ಮನೆ ಹೆಚ್ಚು ಕಡಮೆ ದಾಸೋಹದ ಮನೆಯಾಗಿಯೇ ಬಾಳಿ ಬೆಳಗಿದುದಂತೆ. ಆ ಅಜ್ಜ ಬದುಕಿದ್ದಾಗ ಆ ನಿಟ್ಟಿಗೆಲ್ಲ ಹೆಸರಾದ ತೋಟಗಾರನಾಗಿದ್ದನಂತೆ. ಆತನಿದ್ದಾಗ ನಮ್ಮ ತೋಟ ಯಾರೇ ಆಗಲಿ, ನಿಂತು ನೋಡಿ ಹೋಗುವಂಥ ತೋಟವಾಗಿದ್ದಿತಂತೆ. ವೀಳ್ಯದ ಎಲೆಯ ಒಂದು ಪಾತೆಯಲ್ಲಿ ಒಬ್ಬ ನಿಂತರೆ ಪಕ್ಕದ ಪಾತೆಯಲ್ಲಿದ್ದವನಿಗೆ ಕಾಣದಷ್ಟು ಸಾಂದ್ರವಾಗಿ ಎಲೆ ಬಿಡುವ ಬಳ್ಳಿಗಳಿರುತ್ತಿದ್ದುವಂತೆ. ಆ ಅಜ್ಜ ಬದುಕಿರುವವರೆಗೆ ನಮ್ಮ ಊರವರಾರೂ ವೀಳ್ಯದ ಎಲೆಗಳನ್ನಾಗಲಿ, ತರಕಾರಿಗಳನ್ನಾಗಲಿ ಕೊಂಡು ತಿನ್ನುತ್ತಿರಲಿಲ್ಲವಂತೆ; ಎಲ್ಲರೂ ಸಿದ್ಧಜ್ಜನ ತೋಟದಿಂದಲೇ ಯಥೇಚ್ಛವಾಗಿ ಉಚಿತವಾಗಿ ಪಡೆಯುತ್ತಿದ್ದರಂತೆ. ಆಗ ದಾಸೋಹದ ಮನೆಯಾದ ಆ ಮನೆ ಮುಂದೆ ಚಿಕ್ಕಜ್ಜ ಸಿದ್ಧಲಿಂಗಯ್ಯನ ಕಾಲದಲ್ಲಿಯೂ ಮುಂದುವರಿದು ನನ್ನ ತಂದೆಯವರ, ತಾಯಿ ದಾನಮ್ಮನವರ ಕಾಲದಲ್ಲಿ ಇನ್ನೂ ಹೆಚ್ಚಳವನ್ನು ಪಡೆಯಿತೆಂದು ಹೇಳಬಹುದು. ಪರಸ್ಥಳದಿಂದ ಯಾರೇ ಬರಲಿ, ಪ್ರಸಾದಕ್ಕೆ ಈ ಮನೆ ಸಿದ್ಧವಿರುತ್ತಿತ್ತು. ತಂದೆಯವರಂತೂ ಸರಿಯೆ, ಅವ್ವನೂ ಹೆಸರಿಗೆ ತಕ್ಕಂತೆ ದಾನಮ್ಮನೇ. ತಂದೆಯವರು ಎಲ್ಲಿಗಾದರೂ ಪುರಾಣ ಪ್ರವಚನಕ್ಕೆ ಹೋಗಿ ಬಂದರೆ ನಗದು ಹಣವಷ್ಟೇ ಮನೆಯ ವೆಚ್ಚಕ್ಕೆ ಮೀಸಲು; ಪುರಾಣ ಪ್ರವಚನ ಕಾಲದಲ್ಲಿ ಪುರಾಣ ನಾಯಕನ ನಾಮಕರಣೋತ್ಸವದ ಸಂದರ್ಭದಲ್ಲಿಯೋ, ವಿವಾಹೋತ್ಸವದ ಸಂದರ್ಭದಲ್ಲಿಯೋ ಬರುತ್ತಿದ್ದ ನೂರಾರು ಅಂಗಿ ಟೊಪ್ಪಿಗೆಗಳು, ಕುಪ್ಪಸ ಖಣಗಳು ಅವ್ವನ ಆಸ್ತಿ. ಅವುಗಳನ್ನಾಕೆ ಇನ್ನೊಂದು ಪುರಾಣ ಪ್ರವಚನದ ಅಂಗಿ ಖಣಗಳು ಬರುವವರೆಗೂ ಊರ ಬಡವಿಯರಿಗೆ, ಕೇರಿಯ ಕಂಗಾಲರಿಗೆ ದಾನ ಮಾಡುತ್ತಿದ್ದಳು. 'ಮನೆ ನೋಡಾ ಬಡವರು, ಮನ ನೋಡಾ ಸಿರಿವಂತರು' ಎಂಬ ಸೂಳ್ನುಡಿಗೆ ಸಾಕ್ಷಿಯಾಗಿದ್ದಳಾಕೆ.



## ಊರೊಟ್ಟಿನ ಕೆಲಸ : ಸಹಕಾರ ಮನೋಭಾವ

ಕಾರಣಿಕರೆನಿಸಿದ್ದ ಹಾನಗಲ್ಲ ಶ್ರೀ ಕುಮಾರಸ್ವಾಮಿಗಳವರೂ, ಪರಮ ತಪಸ್ವಿಗಳೆನಿಸಿದ್ದ ಹಾಲಕೆರೆಯ ಅನ್ನದಾನ ಮಹಾಸ್ವಾಮಿಗಳೂ, ಜ್ಞಾನಜ್ಯೋತಿಗಳೆನಿಸಿದ್ದ ಕೊಪ್ಪಳದ ಗವಿಸ್ವಾಮಿಗಳವರೂ, ಮಹಿಮರಾಗಿದ್ದ ಮುಂಡರಗಿಯ ಅನ್ನದಾನಸ್ವಾಮಿಗಳವರೂ, ಗಾನಯೋಗಿ ಪಂಚಾಕ್ಷರಿ ಗವಾಯಿಗಳೂ, ಇನ್ನೂ ಅನೇಕ ಹರ–ಗುರು–ಚರಮೂರ್ತಿಗಳೂ ನಮ್ಮೂರಿಗೆ ಆಗಮಿಸಲು ಅಜ್ಜ ಚೆನ್ನ ಕವಿಗಳು, ತಂದೆ ಕಲ್ಲಿನಾಥಶಾಸ್ತ್ರಿಗಳು, ಮಠದ ಮಹಾಲಿಂಗಯ್ಯನವರು ಕಾರಣರಾಗಿದ್ದಂತೆ ನಮ್ಮೂರಿನ ನಿಜವಾದ ಜಾತ್ಯತೀತ ಸದ್ಭಕ್ತರೂ ಕಾರಣರಾಗಿದ್ದರೆಂದು ಧಾರಾಳವಾಗಿ ಹೇಳಬಹುದು, ಜಾತೀಯತೆಯೆಂಬುದೇ ಗೊತ್ತಿರಲಿಲ್ಲ ನನ್ನ ಗ್ರಾಮದ ಎಲ್ಲ ಮತದವರಿಗೆ ಊರಲ್ಲಿ ಏನೇ ನಡೆಯಲಿ–ಹಬ್ಬವಿರಲಿ, ಪುರಾಣ ಪ್ರವಚನವಿರಲಿ, ಸ್ವಾಮಿಗಳ ಉತ್ಸವವಿರಲಿ– ಎಲ್ಲರೂ ಕೂಡಿಯೇ ಮಾಡುತ್ತಿದ್ದರು; ಯಾರ ಮನೆಯಲ್ಲಿಯೇ ಮಗು ಹುಟ್ಟಲಿ, ಎಲ್ಲರೂ ಹಿಗ್ಗುತ್ತಿದ್ದರು; ಯಾರ ಮನೆಯಲ್ಲಿಯೇ ಮದುವೆಯಿರಲಿ, ಎಲ್ಲರೂ ನಿಂತು ಮಾಡುತ್ತಿದ್ದರು; ಯಾರ ಮನೆಯಲ್ಲಿಯೇ ಮರಣ ಸಂಭವಿಸಲಿ, ಎಲ್ಲರೂ ಸೇರಿ ಅಂತ್ಯಸಂಸ್ಕಾರ ಮಾಡುತ್ತಿದ್ದರು. ತಾನೇ ಬಿತ್ತಿಕೊಳ್ಳಲಾಗದ ಬಡವನಿದ್ದರೆ ನೆರೆಹೊರೆಯವರು ಸೇರಿ ಅವನ ಹೊಲ ಬಿತ್ತಿಕೊಡುತ್ತಿದ್ದರು; ಒಬ್ಬನಲ್ಲಿ ಒಂದೇ ಎತ್ತು ಇದ್ದರೆ ಯಾರದೋ ಇನ್ನೊಂದು ಎತ್ತು ಎರವಲಾಗಿ ಅವನಿಗೆ ದೊರೆತು ಅವನ ಒಕ್ಕಲುತನ ಅಡೆತಡೆಯಿಲ್ಲದೆ ಸಾಗುತ್ತಿತ್ತು. ಮೊಹರಮ್ಮಿನಲ್ಲಿ ಹಿಂದುಗಳ ಹುಲಿ ವೇಷ ಧರಿಸಿ ಕುಣಿದರೆ, ದಸರೆಯಲ್ಲಿ ಮುಸಲ್ಮಾನರು ಹಿಂದುಗಳ ಮನೆ ಮನೆಗೆ ಹೋಗಿ ಬನ್ನಿ ಕೊಟ್ಟು ಬರುತ್ತಿದ್ದರು. ನಮ್ಮೂರಲ್ಲಿ ಯಾರನ್ನೂ ಯಾರೂ ಹೆಸರುಗೊಂಡು ಕರೆದುದನ್ನು ನಾನಾಗ ಕೇಳಿರಲಿಲ್ಲ. ಅವರವರ ವಯಸ್ಸಿಗನುಗುಣವಾಗಿ ಅಪ್ಪಾ, ಕಾಕಾ, ಅವ್ವಾ, ಅಕ್ಕಾ, ಅಣ್ಣಾ, ತಮ್ಮ ಎಂದೇ ಕರೆಯುತ್ತಿದ್ದರು. ನಾನೂ ಕೂಡ ಜಂಗ್ಲಿ ಸಾಹೇಬರನ್ನು 'ಅಜ್ಜಾ' ಎಂದೂ, ದಾದಾ ಸಾಹೇಬರನ್ನು 'ಕಾಕಾ' ಎಂದೂ ಕರೆಯುತ್ತಿದ್ದೆ. ನಮ್ಮ ಕೇರಿಯ ಹರಿಜನ ಬಂಧುಗಳೂ ಹೀಗೆಯೇ ಕರೆಯುತ್ತಿದ್ದರು. ಒಮ್ಮೆ ನಮ್ಮ 'ಮನೆಯ ಮಗ' ಮಾದರ ದುರಗಪ್ಪ ಬಂದು ನಮ್ಮ ಚಿಕ್ಕ ಅಜ್ಜನಿಗೆ, 'ಎಪ್ಪಾ, ನಿನ್ನ ಮಗಳ ಗಂಡ ಬಂದಿದ್ದಾನೆ; ಒಂದು ಸೇರು ಗೋದಿ ಕೊಡು' ಎಂದು ಕೇಳಿದುದೂ, ಸಿದ್ಧಲಿಂಗಜ್ಜ ಗೋದಿ ಕೊಟ್ಟುದುದಲ್ಲದೆ, 'ನಿನ್ನ ಮಗಳೂ ಅಳಿಯಾ ನಮ್ಮನ್ಯಾಗೂ ಒಂದು ಊಟಾ ಮಾಡಿ ಹೋಗ್ಲಿ' ಎಂದು ಹೇಳಿದುದೂ ಇಂದಿಗೂ ನನಗೆ ನೆನಪಿದೆ. ಒಟ್ಟಿನಲ್ಲಿ

ನಮ್ಮ ಊರೊಂದು ಜಾತ್ಯತೀತ ಗ್ರಾಮರಾಜ್ಯ ಘಟಕವಾಗಿದ್ದಿತು; ನಿಜವಾದ ಸಹಕಾರ ಸಂಘವಾಗಿದ್ದಿತು. ಒಂದೇ ಕುಟುಂಬದಂತಿದ್ದಿತು. ಮೊದಲು ಅವಿಭಕ್ತ ಕುಟುಂಬವೊಂದಕ್ಕೆ ಸೇರಿದ್ದು ಆಮೇಲೆ ಬೇರೆಯಾಗಿ ಬೇರೆ ಬೇರೆ ಮನೆಗಳನ್ನು ಕಟ್ಟಿಕೊಂಡ ಅಣ್ಣ ತಮ್ಮಂದಿರಂತಿದ್ದರು ಎಲ್ಲ ಮನೆಗಳವರೂ, ಎಲ್ಲ ಜಾತಿಗಳವರೂ. ಈ ಹೋಲಿಕೆಯೂ ಸರಿಯಲ್ಲವೇನೋ–ಒಂದೇ ಕುಟುಂಬದಿಂದ ಸಿಡಿದು ಹೋದ ಸಹೋದರರಲ್ಲಿ ಇಷ್ಟೊಂದು ಸಾಮರಸ್ಯ ಸಾಧ್ಯವೆ?

ಸಂಜೆ ಎಲ್ಲರೂ ಸೇರಿ ಭಜನೆ ಮಾಡುತ್ತಿದ್ದರು. ಊರ ಮಧ್ಯದಲ್ಲಿ ಕಲ್ಲು ಕಂಬದ ಕಟ್ಟೆಯ ಸುತ್ತಲೂ ಮೂರು ಗುಡಿಗಳು. ಈಶ್ವರ ಹನುಮಪ್ಪರ ಗುಡಿಗಳು ಅಕ್ಕಪಕ್ಕದಲ್ಲಿ; ಅವುಗಳಿಗೆದುರಾಗಿ ಮಹಾಮಾಯೆಯ ಗುಡಿ. ನಮ್ಮ ಮನೆಯ ಮುಂದೊಂದು ಬೇವಿನ ಮರ; ಅದರ ಸುತ್ತಲೂ ಕಟ್ಟೆ; ಅದಕ್ಕೆ ಎಡಭಾಗದಲ್ಲಿ ಮಸೀದೆ; ಊರ ಸೆರಗಿನಲ್ಲಿ ಹಿರೇಮಠ ಕೇರಿಯಲ್ಲೊಂದು ದುರಗವ್ವನ ಗುಡಿ; ಊರಿನ ಇನ್ನೊಂದು ಓಣಿಯಲ್ಲಿ ದೇವಿಯ (ದ್ಯಾಮವ್ವನ) ಗುಡಿ–ಇವಿಷ್ಟು ನಮ್ಮೂರಿನ ಸಾರ್ವಜನಿಕ ಕೇಂದ್ರಗಳು. ಇವುಗಳಲ್ಲೆಲ್ಲ ಬಿಡುವಿದ್ದಾಗ, ಹಬ್ಬ ಹುಣ್ಣಿಮೆಗಳಲ್ಲಿ ಜನರು ಸೇರಿ ಪೂಜೆ ಪ್ರಾರ್ಥನೆಗಳನ್ನೋ, ಭಜನೆಗಳನ್ನೋ ಮಾಡುತ್ತಿದ್ದರು. ಭಜನೆಗಳಲ್ಲಿಯೂ ನಿಜಗುಣ ಶಿವಯೋಗಿಗಳ, ಸರ್ಪಭೂಷಣ ಶಿವಯೋಗಿಗಳ, ಶಿಶುನಾಳ ಷರೀಫ್ ಸಾಹೇಬರ ಹಾಡುಗಳನ್ನೇ ಹೆಚ್ಚಾಗಿ ಹಾಡುತ್ತಿದ್ದರು. ಆಗಾಗ ನನ್ನ ಅಜ್ಜನವರೂ, ತಂದೆಯವರೂ ಬರೆದುಕೊಟ್ಟ 'ಭಜನೆಯ ಪದ'ಗಳನೂ ಅಭಿಮಾನದಿಂದ ಹಾಡುತ್ತಿದ್ದರು. ಸುತ್ತು ಹತ್ತು ಗಾವುದಗಳವರೆಗೆ ಇವರು ಬರೆದ ಭಜನೆ ಪದಗಳೂ, ಡೊಳ್ಳಿನ ಪದಗಳೂ, ಮಂಗಳಾರತಿ ಪದಗಳೂ ಜನಪ್ರಿಯವಾಗಿದ್ದುವು, ಇವುಗಳಲ್ಲದೆ ತನ್ನ ತಂದೆಯವರಿಂದ ಹೊಸ ಹೊಸ ನಾಟಕಗಳನ್ನು ಬರೆಸಿಕೊಂಡು ಅತ್ಯುತ್ಸಾಹದಿಂದ ಅಭಿನಯಿಸಿ ತೋರಿಸುತ್ತಿದ್ದರು ಅಲ್ಲಿಯವರು. ಇವಗಳಲ್ಲಿ 'ಹರಿಶ್ಚಂದ್ರ ನಾಟಕ'ವನ್ನು ಆಡುವಲ್ಲಿ ನಮ್ಮೂರಿನವರೂ, 'ಅನ್ನದಾನ ಮಹತ್ವ' ನಾಟಕ ಹಾಗೂ 'ವೈರಾಗ್ಯ ವಿಜಯ' ನಾಟಕವನ್ನು ಅಭಿನಯಿಸುವಲ್ಲಿ ಸಂಗನಹಳ್ಳಿಯವರೂ 'ಎತ್ತಿದ ಕೈ' ಎನಿಸಿದ್ದರು.

ನಮ್ಮೂರಿನಲ್ಲಿ 'ಹರಿಶ್ಚಂದ್ರ ನಾಟಕ'ದ ಕಲಿಕೆಯ ಕಾಲ. ನಿತ್ಯ ನಡೆಯುತ್ತಲಿದ್ದ 'ರಂಗತಾಲೀಮಿ'ನಲ್ಲಿ ನಾನೂ ಭಾಗವಹಿಸುತ್ತಿದ್ದೆ. ಯಾವುದೇ ಪಾತ್ರವಹಿಸಿರಲಿಲ್ಲ–ವಾದರೂ ಸಂಪೂರ್ಣ ನಾಟಕವನ್ನೇ 'ಬಾಯಿಪಾಠ' ಮಾಡಿದ್ದ ನಾನು ಅನುಪಸ್ಥಿತಿ ಪಾತ್ರಧಾರಿಗಳ ಪಾತ್ರವನ್ನು ಅಭಿನಯಿಸುವ 'ಡಮ್ಮಿ ನಟ'ನಾಗಿದ್ದೆ. ಸೋದರ ಮಾವಂದಿರಾದ ಕಾಲಕಾಲೇಶ್ವರ ಶಾಸ್ತ್ರಿಗಳು (ಕಳಕಯ್ಯನವರು) ನಾಟಕ



ಕಲಿಸುವವರು; ತಂದೆಯವರಾದ ಕಲ್ಲಿನಾಥ ಶಾಸ್ತ್ರಿಗಳು (ಕಲ್ಲಯ್ಯನವರು) ನಾಟಕ ಬರೆದವರು. ಇವೆರಡೂ ಅಂಶಗಳನ್ನು ನೆನೆನೆನೆದು ನನಗೆ ಎರಡು ಕೋಡು ಮೂಡಿದ್ದ ಕಾಲವದು. ವಯಸ್ಸಿನಿಂದ ಕಿರಿಯನಾದರೂ ಈ ಕಾರಣದಿಂದ ಹಿರಿಯನಾಗಿಬಿಟ್ಟಿದ್ದೆ ನಾನು. ಬಾರದಿದ್ದವರ ಪಾತ್ರ ಅಭಿನಯಿಸುತ್ತ, ಬಂದವರ 'ದೋಷ'ಗಳನ್ನೂ ತಿದ್ದುತ್ತ 'ಹಿರೇಮಣಿ'ಯಾಗಿ ವಿರಾಜಿಸಿದೆ. ಸೋದರ ಮಾವನವರು ಕವಿಗಳಾಗಿದ್ದಂತೆ ಸಂಗೀತಜ್ಞರೂ ಆಗಿದ್ದರು. ಪ್ರಾಯಶಃ ಆ ಭಾಗದಲ್ಲಿ ಹಾರ್ಮೋನಿಯಂ ನುಡಿಸುತ್ತಿದ್ದವರು ಅವರೊಬ್ಬರೇ, ನನಗೂ ಅಷ್ಟಿಷ್ಟು ಹಾಡಲು ಕಲಿಸಿದರು; ಹಾಡು ಕಟ್ಟಲೂ ಕಲಿಸಿದರು. ನಾಟಕ ಯಶಸ್ವಿಯಾಗಲೇಬೇಕೆಂದು ಬಹಳ ಶ್ರಮಿಸಿದರು. ನಾನು ಉದ್ದಕ್ಕೂ ಅವರಿಗೆ ನೆರವಾಗಿ ನಿಂತೆ. ಕೊನೆಗೊಮ್ಮೆ ಗುದ್ನೆಪ್ಪನ ಜಾತ್ರೆಯ ಸಮಯಕ್ಕೆ ನಾಟಕವನ್ನಾಡಿದರು ನಮ್ಮೂರಿನವರು. ಅದ್ಭುತ ಯಶಸ್ಸು ದೊರೆಯಿತವರಿಗೆ. ಊರಲ್ಲಿ ಹಿಗ್ಗಿನ ಹೊನಲು ಹರಿಯಿತು; ನನ್ನ ತಂದೆ ಮಾವಂದಿರ ಮುಖಗಳರಳಿದುವು, ಅವ್ವ ಹಿಗ್ಗಿ ಹೀರೇಕಾಯಿಯಾಗಿದ್ದಳು; ನನಗಂತೂ ಮುಗಿಲು ಮೂರೇ ಗೇಣು ಉಳಿದಿತ್ತು! ಸುತ್ತುಮುತ್ತಲಿನ ಹಳ್ಳಿಗಳಿಗೆಲ್ಲ ಈ ಸುದ್ದಿ ಹಬ್ಬಿ ಆ ನಾಟಕದ ಪ್ರತಿಗಳನ್ನು ಬರೆದುಕೊಂಡದ್ದೇ ಬರೆದುಕೊಂಡದ್ದು. ಮರುದಿನ ಗುದ್ನೆಪ್ಪನ ಜಾತ್ರೆಯಲ್ಲಿ ನಾಟಕದಲ್ಲಿ ಪಾತ್ರವಹಿಸಿದ್ದ ನಮ್ಮೂರಿನವರು ಬುದ್ಧಿ ಪೂರ್ವಕವಾಗಿಯೇ ಅರ್ಧಬಣ್ಣ ಅಳಿಸಿ ಅರ್ಧ ಬಣ್ಣ ಉಳಿಸಿಕೊಂಡು ಆಢ್ಯತೆಯಿಂದ ಅಡ್ಡಾಡಿದಾಗ ಎಲ್ಲರೂ ಬೆರಗುಗಣ್ಣುಗಳಿಂದ ಅವರತ್ತ ನೋಡುವವರೇ; 'ಹರಿಶ್ಚಂದ್ರ ಬಂದ ನೋಡು, ಚಂದ್ರಮತಿ ಬಂದಳು ನೋಡು, ವೀರಬಾಹುಕ ಬಂದ ನೋಡು, ವಿಶ್ವಾಮಿತ್ರ ಬಂದ ನೋಡು' ಎಂದು ಕೈ ಮಾಡಿ ತೋರಿಸುವವರೇ! ಮೊದಲೇ 'ಕವಿಗಳ, ಶಾಲಾ ಗುರುಗಳ ಊರಿನವರು ನಾವು' ಎಂಬ ಬಿಂಕದಿಂದಿದ್ದ ನಮ್ಮೂರಿನವರಿಗೆ ಇನ್ನೊಂದು ಹೆಮ್ಮೆಯ ಕೋಡು ಮೂಡಿತು ಆಗ.

ನನ್ನೂರಿಗೆ ಸಂಬಂಧಿಸಿದಂತೆ ಇನ್ನೊಂದು ಅದ್ಭುತ ಅನುಭವ ಇಂದಿಗೂ ಹಸಿರಾಗಿ ಉಳಿದಿದೆ ನನ್ನ ನೆನಪಿನಲ್ಲಿ. ಅದು ಬಸವ ಪುರಾಣದ ಮಂಗಲ (ಮುಕ್ತಾಯ) ಸಮಾರಂಭ. ಮೂರು ತಿಂಗಳುಗಳಿಂದ ನಡೆದ ಬಸವ ಪುರಾಣ ಪ್ರವಚನ ಸರ್ವಜನಾಹ್ಲಾದಕರವಾಗಿ ಸಾಗಿ ಅದಕ್ಕೆ ಮಂಗಲ ಹಾಡಬೇಕಿತ್ತು. ದೊಡ್ಡ ಪ್ರಸ್ಥ (ಸಮೂಹ ಭೋಜನ) ಮಾಡಿಯೇ ಮಂಗಲ ಹಾಡಬೇಕೆಂದು ಊರಿನ 'ದೈವದವರು' ನಿರ್ಧರಿಸಿದರು. ಊರವರೆಲ್ಲ ಸ್ವಯಂಪ್ರೇರಿತರಾಗಿ ಧನಧಾನ್ಯಗಳ ರೂಪದಲ್ಲಿ 'ಧರ್ಮ' ನೀಡಿದರು. ಎಲ್ಲೆಲ್ಲಿಂದಲೋ ದೈತ್ಯಾಕಾರದ ಪಾತ್ರೆಗಳು ಬಂದುವು. ಊರೊರಳಿಗೆ (ಊರವರೆಲ್ಲರ ಉಪಯೋಗಕ್ಕೆಂದು ದೊಡ್ಡ ಕಲ್ಲಿನಲ್ಲಿ

ಕಂಡರಿಸಿದ ಒರಳು) ಮೊತ್ತ ಮೊದಲ ಸಲ 'ಭರ್ತಿ' ಕೆಲಸ ಹತ್ತಿತ್ತು; ನೂರಾರು 'ರುಬ್ಬುಗುಂಡು'ಗಳು ಗೋದಿಯ ರೊಟ್ಟಿಗಳನ್ನು ಪುಡಿ ಮಾಡಿ 'ಮಾದಲಿ' (ಮಲೀದಾ) ಸಿದ್ಧಗೊಳಿಸತೊಡಗಿದವು; ನೂರಾರು ಹಂಚು (ತವೆ)ಗಳು ಗೋದಿಯ ರೊಟ್ಟಿಗಳನ್ನು ಬೇಯಿಸತೊಡಗಿದವು; ಅನೇಕ ಅಗಲ ಒಲೆಗಳ ಮೇಲೆ ಬೃಹತ್ಪಾತ್ರೆಗಳಲ್ಲಿ ಅನ್ನ ಸಾರುಗಳು ಸಿದ್ಧವಾಗತೊಡಗಿದುವು; ತರಕಾರಿಗಳ ಬೆಟ್ಟವನ್ನು ಕರಕರ ಹೆಚ್ಚಿದುವು ಅನೇಕ ಈಳಿಗೆಗಳು; ಪಲ್ಯ ಮಾಡಿದುವು ನೂರಾರು ಕೈಗಳು. ಮೇಲೆ ಈಶ್ವರ ಗುಡಿಯಲ್ಲಿ, ಹನುಮಪ್ಪನ ಗುಡಿಯಲ್ಲಿ ಗೋದಿ ರೊಟ್ಟಿಗಳ ಪುಡಿಗೆ ಬೆಲ್ಲ, ಕೊಬ್ಬರಿತುರಿ ಸೇರಿಸಿ ಮಾದಲಿಯನ್ನಾಗಿ ಮಾರ್ಪಡಿಸುತ್ತಿದ್ದ ಅದ್ಭುತ ದೃಶ್ಯವನ್ನು ನೋಡಿದವರೇ ನಂಬಬೇಕು! ರಾಶಿರಾಶಿ ಮಾದಲಿ; ಹಂಡೆ ಹಂಡೆ ಅನ್ನ; ಕೊಳಗ ಕೊಳಗ ಸಾರು; ಪಾತ್ರೆ ಪಾತ್ರೆ ಪಲ್ಯಗಳನ್ನಿರಿಸಿಕೊಂಡು ಪ್ರಸ್ಥ ಪ್ರಾರಂಭವಾಯಿತು–ಕೊಪ್ಪಳ ಗವಿಮಠಾಧೀಶ್ವರರ ಆಶೀರ್ವಚನದೊಡನೆ. ಅವರಿಗಾಗಿ ರಚಿಸಿದ್ದ ಬಿಲ್ವ ಪತ್ರಿಯ ಮಂಟಪ ಇಂದಿಗೂ ನನ್ನ ಕಣ್ಣೆದುರು ನಿಂತಂತಿದೆ. ಪ್ರಸ್ಥ ಒಂದು ಹಗಲು, ಒಂದು ಇರುಳು ಎಡೆಬಿಡಿದೆ ನಡೆಯಿತು. ಎಷ್ಟು ಸಾವಿರ ಜನರು ಪ್ರಸಾದ ಸಂತೃಪ್ತರಾದರೆಂಬುದು ಅಂದಿನ ನನ್ನ ಎಳೆಯ ಮತಿಗೆ ಎಟುಕದ ವಿಷಯ! ಇದರಲ್ಲಿ ದುಡಿದವರೆಷ್ಟು ಜನ? ನನ್ನೂರಿನಲ್ಲಿ ಎಷ್ಟು ಜನ ಗಂಡಸರಿದ್ದೋ, ಎಷ್ಟು ಜನ ಹೆಂಗಸರಿದ್ದರೋ, ಎಷ್ಟು ಜನ ಹುಡುಗ ಹುಡುಗಿಯರಿದ್ದರೋ ಅಷ್ಟೂ ಜನ! ಊರೆಲ್ಲ ಒಬ್ಬ ವ್ಯಕ್ತಿಯಂತೆ ದುಡಿದುದು ಊರವರಲ್ಲಿದ್ದ ಬಂಧುರ ಬಾಂಧವ್ಯಕ್ಕೆ ಸುಂದರ ನಿದರ್ಶನ.

ನನ್ನೂರಿವರ ಬಗ್ಗೆ ನನ್ನ ಗೌರವಬುದ್ಧಿ ಬೆಟ್ಟವಾಗಿ ಬೆಳೆಯಿತು. ನಮ್ಮೂರವರು ಮನಸ್ಸು ಮಾಡಿದರೆ ಅವರಿಗೆ ಅಸಾಧ್ಯವಾದುದೆಂಬುದೇ ಇಲ್ಲವೆಂಬ ಭಾವನೆ ಬಲಿಯಿತು. ಗೆಳೆಯರೊಡನೆ ಕಲ್ಲು ಕಂಬವನ್ನು ಸುತ್ತುತ್ತ, ಕೋಟೆಯ ಗೋಡೆಗಳ ಮೇಲೆ ಅಲೆಯುತ್ತ, ಹುಡೆಗಳಲ್ಲಿ ಕಣ್ಣುಮುಚ್ಚಾಲೆ ಆಡುತ್ತ, ಗುಂಡು, ಗಜಗ, ಚೆಂಡು, ಚಿಣಿಫಣಿ, ತಿಳ್ಳಿ, ತುತೂತೂಗಳನ್ನು ಆಡುತ್ತ, ನಿಯಮಿತವಾಗಿ ಅನಿಯಮತತೆಯಿಂದ ನಡೆಯುತಿದ್ದ ಶಾಲೆಗೆ ಹೋಗುತ್ತ, 'ಸಖನೆ–ಮಿತ್ರನೆ, ಸೋಜಿಗ–ಕೌತುಕ' ಇತ್ಯಾದಿ ಶಬ್ದಾರ್ಥಗಳನ್ನು ಎರಡೂ ಶಬ್ದಗಳ ಅರ್ಥವನ್ನರಿಯದೆ 'ಗೋಖು' ಹೊಡೆಯುತ್ತ, 'ಸುಳ್ಳನಾಡಲು ಬೇಡ ಜನರಲಿ! ಕಳ್ಳನೆನಿಸಲು ಬೇಡ ನೀ ಮೈಗಳ್ಳನಾಗಲು ಬೇಡ!' 'ತಾಯೇ ನಿನ್ನುಪಕಾರ ಮರೆಯೆ ನಾನೆಂದೂ', 'ಹಸಿರು ಬಣ್ಣದಿಂದೆಸೆಯುವ ಪಕ್ಕವ ಪಸರಿಸಿ ಗಿಳಿ ಹಾರಾಡುವುದು', 'ಎದ್ದು ಬೇಗನೆ ಮೋರೆ ತೊಳೆಯಿರಿ' ಇತ್ಯಾದಿ ಪದ್ಯಗಳನ್ನು ಕಂಡವರೆದುರು ಕಿರಿಚಿ



ಕಲಿತವನೆಂಬ ಜಂಬವನ್ನು ಮೆರೆಯುತ್ತ ದಿನಗಳೆದೆ. ಮನೆಯಲ್ಲಿ ಅಜ್ಜಿ ಹಂಪಮ್ಮ ಹೇಳುತ್ತಿದ್ದ ಹಾಡುಗಳು, ಕತೆಗಳು ನನ್ನ ಮೈಮರೆಸುತ್ತಿದ್ದವು. ಅಜ್ಜ ಸಿದ್ಧಲಿಂಗಯ್ಯ ಸಂತೆಗೆ ಹೋದರೆ ಹೊರಲಾರದಷ್ಟು ಹಣ್ಣುಗಳನ್ನು ಹೊತ್ತು ತರುತ್ತಿದ್ದ, ತೋಟದಲ್ಲಿ ಬೆಳೆಯುತ್ತಿದ್ದ ಬಾಳೆಯ ಹಣ್ಣುಗಳ ಜೊತೆಗೆ ಮಾವು, ಪೇರಲ, ಪಪಾಯಿ, ಬೋರೆ, ನೇರಳೆ ಇತ್ಯಾದಿ ಹಣ್ಣುಗಳು ಯಾವಾಗಲೂ ಮನೆಯಲ್ಲಿರುತ್ತಿದ್ದುವಾಗಿ ದಿನಕ್ಕೊಮ್ಮೆಯಾದರೂ ಒಂದಿಲ್ಲೊಂದು ಹಣ್ಣು ಸವಿಯಲು ಸಿಕ್ಕುತ್ತಿದ್ದಿತು. ಮನೆಯಲ್ಲಿ ಒಂದು ಎಮ್ಮೆ, ಎರಡು ಆಕಳುಗಳು ಇದ್ದುದರಿಂದ ಹಾಲು, ಮೊಸರು, ಬೆಣ್ಣೆಗಳಿಗೆ ಬರವಿರಲಿಲ್ಲ. ಹಾಲಿನಲ್ಲಿಯೇ ಕೈತೊಳೆಯುತ್ತಿದ್ದೆವೆಂದರೂ ಸಲ್ಲುತ್ತದೆ. ಸಾಲದುದಕ್ಕೆ ಉಂಡಿಯ ಹರವಿ ಸದಾ ತುಂಬಿರುತ್ತಿದ್ದಿತು. ಅಜ್ಜನ ಊಟಕ್ಕೆ ಒಂದಿಲ್ಲೊಂದು ಉಂಡಿ ಇರಲೇಬೇಕು. ಎಂದಾದರೂ ತಪ್ಪಿದರೆ ಅನ್ನ ಹಾಲು ಬೆಲ್ಲ ಸೇರಿಸಿಕೊಂಡು ಉಣ್ಣುತ್ತಿದ್ದ. ನಾನಿಲ್ಲದೆ ಊಟ ಮಾಡುತ್ತಿರಲಿಲ್ಲ, ಹುಣಸೇಕಾಯಿ, ಮಾವಿನಕಾಯಿ, ಹಣ್ಣು ಬದನೇಕಾಯಿ, ಬುಡಮೆಕಾಯಿಗಳ ಉಪ್ಪಿನ ಕಾಯಿಗಳು, ಒಂದು ಕಾಳಿನ ಪಲ್ಯ, ಒಂದು ತರಕಾರಿ, 'ಖಾರಬೇಳೆ', ಜೋಳದ ಇಲ್ಲವೆ ಸೆಜ್ಜೆಯರೊಟ್ಟಿ. ಅಕ್ಕಿಯ ಇಲ್ಲವೆ ನವಣೆಯ ಅನ್ನ. ಸಂಗಟಿ, ನುಚ್ಚು ಇತ್ಯಾದಿಗಳು ಊಟಕ್ಕೆ ಒದಗುತ್ತಿದ್ದವು. ಸಿರಿವಂತಿಕೆಯ ಮನೆತನವಾಗಿರದಿದ್ದರೂ ಆಹಾರ ಸಮೃದ್ಧಿಯ ಮನೆತನ ಅದಾಗಿದ್ದಿತು. 'ಸ್ಥಿತಿವಂತ' ಮನೆತನವೆಂದೇ ತಿಳಿದುಕೊಂಡಿದ್ದರು ಜನರು.

ನನ್ನ ಮೂರು ಜನ ಸೋದರ ಮಾವಂದಿರಲ್ಲಿ ಕೊನೆಯವರಾದ ಕಲ್ಲಯ್ಯನವರು ಕೊನೆಯವರೆಗೂ ಮದುವೆಯಾಗಲೇ ಇಲ್ಲ. ಆದುದರಿಂದ ಅವರು ಊರಿನಲ್ಲಿರುತ್ತಿದ್ದುದೇ ಅಪರೂಪ. ಊರಿನಿಂದ ಒಂದು ಮೈಲಿನಾಚೆ ಇದ್ದ 'ಗರಬಿನ ಹೊಲ'ದಲ್ಲಿ ಗುಡಿಸಲು ಕಟ್ಟಿಕೊಂಡು ಅಲ್ಲಿಯೇ ಇರುತ್ತಿದ್ದರು. ಅದರಲ್ಲಿ ಹತ್ತಿ ಬಿತ್ತಿ, ಅಲ್ಲಲ್ಲಿ ಬಿಳಿಜೋಳದ ಬೀಜಾರೋಪಣ ಮಾಡುತ್ತಿದ್ದರು. ಬಿಳಿ ಜೋಳದ ಬೆಳಸಿ ತಿನ್ನಲು ನನ್ನನ್ನು ಕರೆಸಿಕೊಳ್ಳುತ್ತಿದ್ದರು. ನಾನು ಜಿಗಿಯುತ್ತ ಹೋಗುತ್ತಿದ್ದೆ. ಅಣ್ಣಂದಿರ ಮಕ್ಕಳಿಗಿಂತ ನನ್ನ ಮೇಲೆ ಅವರ ಮಮತೆ ಹೆಚ್ಚು. ಅಲ್ಲಿ ಬಿಳಿ ಜೋಳದ ತೆನೆ ಸುಟ್ಟು ಬೆಳೆಸಿ ಮಾಡಿ ತಿನ್ನುಲು ಕೊಡುತ್ತಿದ್ದರು. ಅವುಗಳ ರುಚಿಯನ್ನು ಬಲ್ಲವನೇ ಬಲ್ಲ. ಮೇಲೆ ಬಲಿತ ಬಿಳಿ ಜೋಳದ ದಂಟಿನ ಸಿಗುರು ತೆಗೆದು ಕಬ್ಬಾಗಿಸಿ ಕೊಡುತ್ತಿದ್ದ. ಅದೆಷ್ಟು ಸಿಹಿಯಾಗಿರುತ್ತಿತ್ತೆಂಬುದನ್ನು ಹೇಗೆ ವರ್ಣಿಸಲಿ? ಕೊನೆಯದಾಗಿ, ಬಿಳಿ ಜೋಳದ ರವದೆಗಳಿಂದ ಬಿಡಿಸಿ ತಂದಿಟ್ಟ ಸಕ್ಕರೆಯನ್ನು ತಿನ್ನಲು ಕೊಡುತ್ತಿದ್ದ. ಅದು ದೇವತೆಗಳೆನ್ನುವವರಿದ್ದರೆ ಅವರೂ ಕರುಬ ಬಹುದಾಂಥ ಸಕ್ಕರೆ! ಇವೆಲ್ಲ ಮುಗಿದ ಮೇಲೆ ಗುಡಿಸಲಿನಲ್ಲಿ ಮಲಗಿ ನಿದ್ದೆ ಬರುವವರೆಗೆ

ರಾಜರಾಣಿಯರ, ರಾಜಕುಮಾರ–ರಾಜಕುಮಾರಿಯರ ಕತೆ ಹೇಳುತ್ತಿದ್ದ. ಅವುಗಳನ್ನು ಕೇಳುತ್ತ ಕೇಳುತ್ತ 'ನಾನೂ, ಒಬ್ಬ ರಾಜಕುಮಾರನೇನೋ!' ಎಂಬ ಭಾವನೆ ಬರುತ್ತಿತ್ತು ನನಗೆ! ಹೀಗೆ ಎಷ್ಟು ಕತೆಗಳನ್ನಾತ ನನಗೆ ಹೇಳಿದನೋ! ಅವುಗಳಲ್ಲೀಗ ಕೆಲವೇ ನೆನಪಿವೆ. ಅವುಗಳನ್ನು ಆಗಾಗ ಮೆಲುಕು ಹಾಕುತ್ತೇನೆ. ಆ ಹಳ್ಳದ ದಂಡೆಯ ಹೊಲ, ಅದರಲ್ಲಿದ್ದ ಗುಡಿಸಲು, ಅಲ್ಲಿ ಬಿಳಿ ಬಟ್ಟೆಯ ಬೈರಾಗಿಯಂತಿದ್ದ ನೇಗಿಲಯೋಗಿ ಸೋದರಮಾವ, ಅಲ್ಲಿ ತೊಳೆ ತಳೆದ ಹತ್ತಿಯ ಸಾಲುಗಳು, ನಡುನಡುವೆ ತೆನೆಹೊತ್ತ ಬಿಳಿ ಜೋಳದ ದಂಟುಗಳು, ಅವುಗಳಿಗೆರುಗುತ್ತಿದ್ದ ಹಕ್ಕಿಯ ಬಳಗ, ಅವುಗಳಿಗೆ ಸೋದರಮಾವನ ಕವಣೆಗಲ್ಲುಗಳ ಕಾಣಿಕೆ, ಮಂಚಿಗೆಯ ಮೇಲೆ ಮಾವನೊಡನೆ ನಿಂತು ಕಣ್ಣಳವಿಗೆ ಬರುವಷ್ಟು ದೂರವೂ ಹರವಿದ ಹಸಿರು ಪಯಿರುಗಳ ಸೊಬಗನಾಸ್ವಾದಿಸಿದ ಅಮೃತಗಳಿಗೆಗಳು, ಬುತ್ತಿ ತರುತ್ತಿದ್ದ 'ಸೋದರ ಸೊಸೆ'ಯರೊಡನೆ ಮುಟ್ಟಿ ಓಡುವಾಟ, ಅಡಗಿ ಹುಡುಕುವಾಟ–ಯಾವುದನ್ನು ಸ್ಮರಿಸುವುದು, ಯಾವುದನ್ನು ಬಿಡುವುದು?

## ನಿಸರ್ಗದುಡಿಯಲ್ಲಿ :

ನಮ್ಮ ತೋಟಕ್ಕೆ ಹೋದರೆ ಅಲ್ಲಿ ಬಾವಿಗೆ ಮುಂದೆ ಕಪ್ಪಲಿ ಎಳೆವ ಎತ್ತುಗಳು ಬಳಸುತ್ತಿದ್ದ 'ಬಾರಿಕುಣಿ'; ಅದರ ಒಂದು ಪಕ್ಕಕ್ಕೆ 'ಪತ್ರಿಯಕಟ್ಟೆ'ಯ ಮೇಲೆ ಮೂರು ಪತ್ರಿಯ ಮರಗಳ ನಡುವೆ ಬಸವಣ್ಣನ ಮೂರ್ತಿ, ಅದಕ್ಕೆ ತಾವಾಗಿಯೇ ಉದುರುವ ಪತ್ರಿಗಳ ನಿತ್ಯಪೂಜೆ; ಅದರಾಚೆ ಬಾಳೆಯ ಬನ; ಈಚೆ ತೆಂಗಿನ ಸಾಲು, 'ಎಲೆಯ ತೋಟ'; ಇನ್ನೂ ಆಚೆ ಗೆಣಸು, ಗಜ್ಜರಿ, ಈರುಳ್ಳಿ, ಬೆಳ್ಳುಳ್ಳಿ, ಬದನೆ ಮೆಣಸಿನ ಕಾಯಿಗಳ ಮೂಲಂಗಿಯ, ಮೆಂತ್ಯ, ಸಬ್ಬಸಗಿ, ಕೊತ್ತಂಬರಿ ಮೊದಲಾದ ಸೊಪ್ಪುಗಳ 'ಪಟ್ಟೆ' ತೋಟದ ಸುತ್ತಲೂ ಬಿಗಿಯಾದ ಬೇಲಿ; ಅದರಲ್ಲಿ ಅಲ್ಲಲ್ಲಿ ನೀಳವಾಗಿ, ನೀಟಾಗಿ ಬೆಳೆದ ಸೆಂಬಿಯ, ಅರೆಬೇವಿನ, ನುಗ್ಗೆ–ಚೊಗಚಿಯ, 'ಜುಟ್ಟದ ಹೂವಿನ' ಮರಗಳು. ಹೋದರೆ ಮನೆಗೆ ಹಿಂದಿರುಗಲು ಮನಸ್ಸಾಗುತ್ತಿರಲಿಲ್ಲ. ಕಕ್ಕ ವೀರಯ್ಯನವರೋ, 'ಅಳುಮಗ'ನೋ ಕಪ್ಪಲಿ ಹೊಡೆವಾಗ ಎತ್ತುಗಳ ಹಿಂದೆ ಮಿಣಿಯ ಮೇಲೆ ಕುಳ್ಳಿರುತ್ತಿದ್ದ ಅವರ ಹೆಗಲು ಹಿಡಿದು ಅವರ ಬಳಿ ಕುಳಿತುಕೊಂಡು, ಅವರು 'ಹುರ್‍ರ್ಯೋ' ಎಂದಾಗ ಎತ್ತುಗಳು ಕಪ್ಪಲಿ ಎಳೆಯಲಾರಂಭಿಸಲು ಮಿಣಿಯ ಮಟಿಗೆ, ಎತ್ತುಗಳ ಕೊರಳ ಗೆಜ್ಜೆಗಳು, ಗಂಟೆಗಳ ಇಂಚರಗಳನ್ನು ಅನುಭವಿಸುತ್ತ ಗಾಳಿಯಲ್ಲಿ ತೇಲಿ ಹೋದ. ಹಾಗೆ ಹೋಗುತ್ತಿದ್ದುದು ಅದೆಷ್ಟು ಆನಂದಕರ! ಒಮ್ಮೊಮ್ಮೆ 'ಮಡಿ ಕಟ್ಟುವ', ಎಂದರೆ ಕಾಲುವೆಯಲ್ಲಿ ನೀರು ಹರಿವಾಗ ಪಾತೆಗಳಿಗೆ ನೀರು ಬಿಡುವ ಕಾಯಕ ನನ್ನ ಪಾಲಿಗೆ ಬರುತ್ತಿತ್ತು. ಆಗ ಎಂದಿಲ್ಲದ ಹಿಗ್ಗು ನನಗೆ.



ಬೆಳೆಗಳಿಗೆ, ಬಳ್ಳಿಗಳಿಗೆ, ಕಂದ ಮೂಲಗಳಿಗೆ, ಕಾಯಿಪಲ್ಯಗಳ ಸಸಿಗಳಿಗೆ ನೀರು ಬಿಡುವಾಗ ಅವುಗಳಿಗೆ ಉಣಿಸಿ ಬೆಳಸುತ್ತಿದ್ದೇನೆಂಬ ಅನುಭವವಾಗುತ್ತಿತ್ತು ನನಗೆ. ಗಿಡ ಬಳ್ಳಿಗಳೊಡನೆ, ಸಸ್ಯಕುಲದೊಡನೆ ಮಾತಾಡುತ್ತಿದ್ದೇನೆ, ಅವೂ ನನ್ನೊಡನೆ ಮೌನವಾಗಿಯೇ ಮಾತನಾಡುತ್ತಿವೆ–ಎಂದೆನ್ನಿಸುತ್ತಿತ್ತು ನನಗೆ. ಈ ತೋಟಗಾರಿಕೆಯ ನೆಚ್ಚೇ ಮುಂದೆ ಹೆಚ್ಚುತ್ತ ಹೋಗಿ ಡಾ॥ ಮರಿಗೌಡರ ಸ್ನೇಹದಲ್ಲಿ ಪರಿಣಮಿಸಿ ನಾನು ಸೇವೆಗೈದ ಸ್ಥಳಗಳಲ್ಲೆಲ್ಲ ತೋಟಗಾರಿಕೆಗೆ ಪ್ರಬಲ ಪ್ರಚೋದನೆ ನೀಡುವಂತೆ ಮಾಡಿತು.

ತೋಟದ ಒಂದು ಅಂಚಿಗೆ–ದಾರಿಯ ಪಕ್ಕದ ಅಂಚಿಗೆ–ಮೂರು ದೊಡ್ಡ ಹುಣಸೇ ಮರಗಳೂ, ಒಂದು ವಿರಳ ತಳಿಯ ಬಹಳ ಹಳೆಯ ಮಾವಿನ ಮರವೂ ಇದ್ದುವು. ಆ ಮಾವಿನ ಮರಕ್ಕೆ ವಿಭೂತಿ ಮಾವು ಎಂದು ಹೆಸರು. ಅದರ ಬೊಡ್ಡೆ ಒಳಗಿನಿಂದ ಸಿಡಿದೊಡೆದು ಒಳಗೆ ಒಂದು ಪೊಟರೆ ಉಂಟಾಗಿದ್ದಿತು. ಅದರಲ್ಲಿ ಅಡಗಿ ಕುಳಿತು ದಾರಿಯಲ್ಲಿ ಹೋಗುವ ಹುಡುಗ ಹುಡುಗಿಯರು ಅಂಜುವಂತೆ ವಿಕಾರಪೂರ್ಣ ಸ್ವರಗಳನ್ನು ಹೊರಡಿಸುವುದು ಆಗಿನ ನನ್ನ ಪ್ರಿಯ ಹವ್ಯಾಸಗಳಲ್ಲಿ ಒಂದಾಗಿತ್ತು. ಅದರಲ್ಲಿ ಆಗಾಗ ಜೇನಿಟ್ಟುದೂ ಉಂಟು. ಅದನ್ನು ಬಿಡಿಸ ಹೋಗಿ ಜೇನುಹುಳುಗಳಿಂದ ಕಚ್ಚಿಸಿಕೊಂಡು ಬಾತ ಮೋರೆ, ಗಾದರಿಯೆದ್ದ ಕೈಗಳೊಡನೆ ಮನೆಗೆ ಹೋಗಿ ಅವ್ವನಿಂದ ಬೈಯ್ಸಿಕೊಂಡುದೂ ಉಂಟು. ಇದುವರೆಗೆ ಅನೇಕ ಜಾತಿಯ ಮಾವಿನ ಹಣ್ಣುಗಳನ್ನು ಸವಿದಿರುವೆನಾದರೂ ಆ ಮರದ ಹಣ್ಣಿನಂತಹ ಮಾವಿನ ಹಣ್ಣನ್ನು ಮತ್ತೆ ತಿಂದಿಲ್ಲ ನಾನು! ಅದರ ಮಾಧುರ್ಯ ಮಾತಿಗೆ ನಿಲುಕದ, ಹೋಲಿಕೆಗೆ ಸಿಲುಕದ ಮಾಧುರ್ಯ, ಆ ಹುಣಿಸೆಯ ಮರಗಳೋ, ಊರಿನ ಹುಡುಗರಿಗೆಲ್ಲ ಎಳೆಗಾಯಿ, ದೋರೆಗಾಯಿಗಳನ್ನೂ, ಉಪ್ಪು ಖಾರದೊಡನೆ ಕುಟ್ಟಿ, ಗಣಕೆಯ ತುದಿಗೆ ಸುತ್ತಲೂ ಮೆತ್ತಿ, ಬಾಯಲ್ಲಿರಿಸಿ ಗಣಕೆಯನ್ನು ಎರಡೂ ಕೈಗಳಿಂದ ತಿರುಗಿಸುತ್ತ 'ಲುಲೂಲೂಲೂ' ಎಂದು ರಸ ಸುರಿಸುತ್ತ ಬಾಯಿ ಚಪ್ಪರಿಸಲು ಹುಣಿಸೇಹಣ್ಣನ್ನೂ ಒದಗಿಸುತ್ತಿದ್ದ ಕಲ್ಪವೃಕ್ಷಗಳು. ನಮ್ಮ ತೋಟಕ್ಕೆ ಬಟ್ಟೆ ಒಗೆದುಕೊಂಡು ಹೋಗಲು ಬರುತ್ತಿದ್ದ ನನ್ನೂರಿನ ತಾಯಂದಿರು ಮನೆಗೆ ಮರಳುವಾಗ ಈ ಮರಗಳಿಂದ ಒಂದಿಷ್ಟು ಹುಣಿಸೆ ಹಣ್ಣುಗಳನ್ನೋ, ಹೂವುಗಳನ್ನೋ ಚಿಗುರುಗಳನ್ನೋ ತಪ್ಪದೆ ಒಯ್ಯುತ್ತಿದ್ದರು–ಖಾರಬೇಳೆಗೆ ಬೆರೆಸಲೆಂದು. ಈ ನಾಲ್ಕು ಮರಗಳ ಬಗ್ಗೆ ನನ್ನ ಮೋಹ ಎಷ್ಟು ಹೆಚ್ಚಿತ್ತೆಂದರೆ ಮುಂದೆ ನಾನು ಕವಿಯೆನಿಸಿಕೊಂಡ ಮೇಲೂ ಇವುಗಳ ನೆರಳಲ್ಲಿ ಮಲಗಿ ಇವುಗಳ ಹೂವು ಹೀಚುಗಳನ್ನೋ, ಕಾಯಿ ಹಣ್ಣುಗಳನ್ನೋ, ರೆಂಬೆ ರೆಂಬೆಯಲ್ಲಿ ಕೂಜಿಸುತ್ತಿದ್ದ ಪಕ್ಷಿಗಳನ್ನೋ, ಅತ್ತಿತ್ತ ಅಲೆವ

ಅಳಿಲುಗಳನ್ನೋ, ಹಲ್ಲು ಕಿರಿವ ಕೋತಿಗಳನ್ನೋ ನೋಡುತ್ತ ಮೈಮರೆಯುತ್ತಿದ್ದೆ. ಒಮ್ಮೆ ಮೂರೂ ಹುಣಿಸೆ ಮರಗಳು ಮೈತುಂಬ ಹೊರಲಾರದಷ್ಟು ಹೂಬಿಟ್ಟು ಹೂವಿನ ತೇರಾಗಿ ತೋರಿದಾಗ ಆ ಹೂತ ಹುಣಸೆಯ ಮರಗಳನ್ನೇ ಕುರಿತು ಕವಿತೆಯೊಂದನ್ನು ಬರೆದೆ. ಆದರೆ ಅಂದೇ ಮನೆಗೆ ಮರಳಿದಾಗ ಜಯಕರ್ನಾಟಕದಲ್ಲಿ ಪ್ರಕಟವಾಗಿದ್ದ ವರಕವಿ 'ಅಂಬಿಕಾತನಯದತ್ತ'ರ 'ಹೂತಽದ ಹುಣಸಿ' ಎಂಬ ಕವಿತೆಯನ್ನೋದಿ ಮುಗ್ಧನಾಗಿ 'ಇದರ ಮುಂದೆ ನನ್ನ ಕವಿತೆ ಬಾಲಿಶವಾದುದು' ಎಂದೆಣಿಸಿ ಹರಿದು ಹಾಕಿಬಿಟ್ಟೆ.

ನಮ್ಮ ತೋಟಕ್ಕೆ ಹೊಂದಿ 'ಪೋಲೀಸ್' ಗೌಡರ ಹೊಲ. ಅವರು ಮಹಮ್ಮದೀಯರು. ಆದರೂ ಗ್ರಾಮಜೀವನ ಗಂಗೆಯಲ್ಲಿ ಅಡ್ಡಗಲ್ಲಾಗದೆ ನಲಿವ ಅಲೆಯಾಗಿ ಬೆರೆತುಕೊಂಡವರು. ನೆರೆಯ ಹೊಲದವರೆಂಬ ಕಾರಣದಿಂದಲೂ, ನನ್ನ ತಂದೆಯವರ ಬಗ್ಗೆ ಅವರಿಗಿದ್ದ ಆದರ ಕಾರಣವಾಗಿಯೂ ನಾನವರಿಗೆ ಬಹಳ ಹತ್ತಿರದವನಾಗಿದ್ದೆ. ನಾನವರ ಮನೆಯೊಳಗೆ ನಿಶ್ಶಂಕೆಯಿಂದ ಪ್ರವೇಶಿಸುತ್ತಿದ್ದೆ. ನನಗೆ ಪ್ರತಿಬಂಧ, ಪರದೆ ಇರಲಿಲ್ಲ. ಅಲ್ಲಿ ನಾನು 'ಸಿದ್ಧಲಿಂಗಕಾಕಾ'ನ ಮೊಮ್ಮಗ, 'ಶಾಸ್ತ್ರಿಗಳವರ ಮಗ. ಅತ್ಯಂತ ಆತ್ಮೀಯತೆಯ ಸ್ವಾಗತ ನನಗಾಗಿ ಅಲ್ಲಿ ಕಾದಿರುತ್ತಿತ್ತು. ಅಲ್ಲಿಯ ಮಹಿಳೆಯರು ನನ್ನ ಮೈದಡವಿ ಮುಂಡಾಡಿದರೆ ಅಲ್ಲಿಯ ಎಳೆಯರೆಲ್ಲ ನನ್ನ ಗೆಳೆಯರಾಗಿ ನನ್ನೊಡನೆ ಆಟಕ್ಕೆ ಸೇರುತ್ತಿದ್ದರು. ನಾನು ತೋಟಕ್ಕೆ ಹೋಗುವೆನೆಂದರೆ ನಾವೂ ಹೊಲಕ್ಕೆ ಹೋಗುವೆವೆಂದು ನನ್ನೊಡನೆ ನಡೆದು ಮರಮಂಗನಾಟದಲ್ಲಿ ಭಾಗಿಯಾಗುತ್ತಿದ್ದರು. ಅವರಲ್ಲಿಬ್ಬರು ನನಗೆ ತಂಗಿಯರಾಗಿದ್ದರು. ನನಗೆ ಆಗ ಒಬ್ಬಳೇ ತಂಗಿ–ಸ್ಫುರದ್ರೂಪಿ ಸುಗುಣಶ್ರೀ ವೀರಾಂಬೆ. ಆಕೆ ಆಗ ಬಹಳ ಚಿಕ್ಕವಳು. ಅಂತೆಯೇ ಈ ತಂಗಿಯರೊಡನೆ ಆಡಿ ನಲಿಯುತ್ತಿದ್ದೆ.

ನಮ್ಮೂರಿನ ಇನ್ನೊಂದು ಹೆಮ್ಮೆ ನಯನ ಮನೋಹರವಾಗಿದ್ದ ದೊಡ್ಡ ಮಾವಿನ ತೋಪು. ವಾರಕ್ಕೆ ಒಂದೆರಡು ಸಲವಾದರೂ ಊರ ಬಾಲಕ ಬಾಲಕಿಯರೆಲ್ಲ ಅಲ್ಲಿ ಸೇರಿ ಕಣ್ಣುಮುಚ್ಚಾಲೆ, ಮುಟ್ಟಾಟ, ಮರಮಂಗನಾಟ ಆಡುತ್ತಿದ್ದರು. ಮನೆಯಿಂದ ತಂದ 'ಅರಳು'ಗಳನ್ನೋ, 'ಮಂಡಕ್ಕಿ'ಗಳನ್ನೋ ತಿಂದು ನಲಿಯುತ್ತಿದ್ದರು. ಹಣ್ಣಿಗೆ ಬಂದ ಮಾವಿನ ಕಾಯಿಗಳನ್ನು 'ಇಳುಹುವ' ಸಮಯ ಬಂದಿತೆಂದರೆ ಊರೆಲ್ಲೆಲ್ಲ ಹಬ್ಬದ ವಾತಾವರಣ. ಶಾಲೆಗೆ ರಜೆ. ಊರ ನರನಾರಿಯರೆಲ್ಲ, ಬಾಲಕ ಬಾಲಕಿಯರೆಲ್ಲ ಮಾವಿನ ತೋಪಿನಲ್ಲಿ 'ಹಾಜರ್'. ಏಕೆಂದರೆ ಮಾವಿನ ತೋಪು ಯಾರೊಬ್ಬರಿಗೂ ಸೇರಿದುದಲ್ಲ–ಊರವರೆಲ್ಲರ ಸಾಮೂಹಿಕ ಸೊತ್ತು. ಇಳಿಸಿದ ಕಾಯಿಗಳನ್ನು ಉಪ್ಪಿನಕಾಯಿಯ ಕಾಯಿಗಳೆಂದೂ, ಹಣ್ಣಾಗಲು ಅಡೆಗೆ ಹಾಕುವ ಕಾಯಿಗಳೆಂದೂ ಬೇರೆ ಬೇರಾಗಿ ರಾಶಿ ಮಾಡಿ



ಅವುಗಳನ್ನು ಸರ್ವರಿಗೂ ಸಮಾನವಾಗಿ ಹಂಚುತ್ತಿದ್ದರು ಊರಿನ ಹಿರಿಯರು. ಕಾಯಿ ಇಳಿಸುವ 'ದೋಟಿ'ಯಲ್ಲಿ ಮರದಲ್ಲಿಯೇ ಮಾಗಿದ ಒಂದೊಂದು ಹಣ್ಣು ಬರುತ್ತಿತ್ತು. ಅಂಥ ಹಣ್ಣುಗಳೆಲ್ಲ ನಮ್ಮ ಪಾಲಿಗೆ. ಸಂಜೆಯಾಗುವುದರೊಳಗಾಗಿ ಎಲ್ಲ ಬಾಲಕ ಬಾಲಕಿಯರೂ ಹೊಟ್ಟೆ ಬಿರಿವವರೆಗೆ ಹಣ್ಣು ತಿಂದು ತಾವು ಹೊರುವಷ್ಟು ಹಣ್ಣುಗಳನ್ನು ಮನೆಗೆ ಒಯ್ಯುತ್ತಿದ್ದರು. ಬಾನವರೆನ್ನುವವರು ಇದ್ದುದೇ ಆದರೆ ಅವರೂ ಆಕಾಶದಲ್ಲಿ ನಿಂತು ನೋಡಬೇಕಾದ ನೋಟವದು!*

ಮರುದಿನ ಊರ ತುಂಬ ಉಪ್ಪಿನಕಾಯಿ ಹಾಕುವ, ಮಾಗಲಿದ್ದ ಮಾವಿನ ಕಾಯಿಗಳನ್ನು ಅಡೆಗೆ ಹಾಕುವ ಸಂಭ್ರಮ. ಹೀಗೆಯೇ, ಊರ ಹೆಂಗಳೆಯರು ಅಘೋಷಿತ ಸಹಕಾರ ಪದ್ಧತಿಯಂತೆ ಕಟ್ಟೆಗೆ ಜೋಡಿಸುವ ಸಾಲು ಮಣೆಗಳ ಮೇಲೆ ಕುಳಿತು ಸೇವಿಗೆ ಹೊಸೆದುಕೊಳ್ಳುತ್ತಿದ್ದ ನೋಟ, ಊರ ಗಂಡಸರು ಕಲ್ಲಾರಿನಿಂದ ಬೇಸಾಯಕ್ಕೆ ಬೇಕಾಗುವ ಹಗ್ಗ, ಕಣ್ಣಿ ಇತ್ಯಾದಿಗಳನ್ನು ಹೊಸೆದುಕೊಳ್ಳುತ್ತಿದ್ದ ನೋಟ, ಕಮ್ಮಾರಶಾಲೆಯಲ್ಲಿ ಬಂಡಿಯಗಾಲಿಗೆ 'ಹಳಿ'ಯನ್ನು ಜೋಡಿಸಿಕೊಳ್ಳುವ ನೋಟ, ಗುದ್ದಲಿ, ಕೊಡಲಿ, ಕುಡಗಳ ಬಾಯಿಗಳನ್ನು ಹರಿತಗೊಳಿಸಿಕೊಳ್ಳುತ್ತಿದ್ದ ನೋಟ, ಬಡಿಗಶಾಲೆಯಲ್ಲಿ ಕೂರಿಗೆ, ಕುಂಟೆ, ನೇಗಿಲು, ಬಂಡಿ ಮೊದಲಾದುವನ್ನು ಸರಿಪಡಿಸಿಕೊಳ್ಳುತ್ತಿದ್ದ ನೋಟ, ನಾಗರ ಪಂಚಮಿಯ ಜೋಕಾಲಿಗಳ, 'ಬೋಲ ಬಗರಿ'ಗಳ ನೋಟ, ಊರಿಗೆ ವಿನೋದವನ್ನು ಒದಗಿಸುತ್ತಿದ್ದ ವೇಷಗಾರರ, ಹಾವಾಡಿಗರ, ದೊಂಬರಾಟದವರ, ಕರಡಿ ಕುಣಿತದವರ, ದುರುಗಮರಗಿಯವರ, ಕೌಲೆತ್ತಿನವರ, ಸಾರುವ ಬಸವರ ನೋಟ, ಬಲಪ್ರದರ್ಶನಕ್ಕಾಗಿ ನಡೆಯುತ್ತಿದ್ದ ಗರಡಿ ಮನೆಯ ಮಲ್ಲರ ಕುಸ್ತಿ, ಗುಂಡೆತ್ತುವುದು, ಹಲ್ಲಿನಿಂದ ಕೊಡ ಎತ್ತುವುದು, ಒಂದೇ ಕೈಯಿಂದ ತುಂಬಿದ ದೊಡ್ಡ ಕೊಡ ಸೇದುವುದು–ಇತ್ಯಾದಿಗಳ ನೋಟ, ಪೇರಲ, ನೇರಿಳೆ, ಕವಳಿ, ಕಾರಿಯ ಹಣ್ಣುಗಳನ್ನೋ, 'ಉಪ್ಪುಗಡಲೆ', 'ಒಡೆ' ಇತ್ಯಾದಿ ತಿನಿಸುಗಳನ್ನೋ ಮಾರಲು ಬರುತ್ತಿದ್ದ 'ಅಜ್ಜಿ'ಯರ ನೋಟ, ಬಗೆಬಗೆಯ ಭಿಕ್ಷುಕರ ನೋಟ,–ಒಂದೇ, ಎರಡೇ–ನೂರಾರು ನೋಟಗಳ ಸುರುಳಿ

---

* ಕಾಲು ಶತಮಾನದ ತರುವಾಯ ನನ್ನೂರನ್ನು ನೋಡಲು ಆಸೆಪಟ್ಟು ಹೋದೆ; ಮಾವಿನತೋಪು ಮಾಯವಾಗಿದೆ! ಅದು ಇದ್ದ ಸ್ಥಳದಲ್ಲಿ ಅದರ ಗುರುತು ಕೂಡ ಉಳಿಯದ ಹಾಗೆ ಒಂದೂ ಮರ ಉಳಿದಿಲ್ಲ! ನನ್ನೂರವರ ಬಡತನ ಬೃಹದಾಕಾರವಾಗಿ ಬೆಳೆದಿರುವುದನ್ನು ಕಂಡು ಕಸಿವಿಸಿಯಾಯಿತು. ಆ ಕಿತ್ತು ತಿನ್ನುವ ಬಡತನವನ್ನು ನೋಡಲಾಗದೆ ಇನ್ನಷ್ಟು ಹೊತ್ತು ಅಲ್ಲಿರಬೇಕೆಂದು–ಕೊಂಡಿದ್ದವನು ಬೇಗ ಹೊರಟು ಬಂದೆ! ನನ್ನೂರಿನ ಬನ್ನವನ್ನು ದೇವರೇ ಕಳೆದು ಕಾಪಾಡಬೇಕು ನನ್ನೂರಿನವರನ್ನು.

ಬಿಚ್ಚುತ್ತಿತ್ತು ಹಳ್ಳಿಯ ಬಾಳಿನ ರಜತ ಪರದೆಯ ಮೇಲೆ! ಯಾರಿಗೂ ಇಲ್ಲೆನ್ನದ, ಯಾರನ್ನೂ ಬರಿಗೈಯಿಂದ, ಬರಿಹೊಟ್ಟೆಯಿಂದ ಕಳಿಸದ ಧರ್ಮಾತ್ಮರು ಆಗಿನ ಹಳ್ಳಿಯವರು.

## ಹಾಲಿನಲ್ಲಿ ನಂಜು :

ಇಂಥ ಹಳ್ಳಿಯ ಬಾಳಿನ ಹಾಲಿನ ಹೊಳೆ ನಂಜಿನ ಹೊನಲಾಗುವ ದುರ್ದಿನವೂ ಬಂದಿತು. ನಮ್ಮೂರಿನ ಪರಸ್ಪರ ಪ್ರೀತಿ ಸಹಕಾರಗಳ ವಿಜೃಂಭಣೆಗೆ ಯಾರ ಕೆಟ್ಟ ದೃಷ್ಟಿ ತಾಕಿತೋ ಏನೋ–ಇದ್ದಕ್ಕಿದ್ದಂತೆ ಅಲ್ಪ ಕಾರಣಕ್ಕಾಗಿ 'ಖೂನಿ'ಯ ಪ್ರಕರಣವೊಂದು ನಡೆದುಹೋಯಿತು. ಊರು ಬಿಟ್ಟು ಓಡಿ ಹೋದವರಾರೋ, ಪೋಲೀಸರು ಬಂಧಿಸಿ ಕೊಂಡೊಯ್ದವರಾರೋ–ಊರಿಗೆ ಊರೆಲ್ಲ ಬೆಗಡು ಮುಸುಕಿ, ಭೀತಿಯಿಂದ ತಲ್ಲಣಿಸಿತು. ಅದುವರೆಗೆ ನಮ್ಮೂರಿನತ್ತ ಹಣಿಕಿ ಸಹ ನೋಡಿದಿದ್ದ ಪೋಲೀಸರು ದಿನಕ್ಕೊಮ್ಮೆಯಾದರೂ ಬಂದು ಅವರಿವರ ಮನೆಯ ತಪಾಸಣೆ ನಡೆಸಿ ಹೋಗತೊಡಗಿದರು. ನಮ್ಮ ತಂದೆತಾಯಿವರಂತೂ ತುಂಬ ಗಾಬರಿಗೊಂಡರು. 'ನಮ್ಮ ಮನೆಗೂ ಪೋಲೀಸರು ಬರದಂತೆ ಮಾಡಪ್ಪಾ' ಎಂದು 'ಮನೆಯ ದೇವ'ರಾದ ಆಡೂರ ವೀರಭದ್ರನನ್ನು ಪ್ರಾರ್ಥಿಸಿಕೊಂಡರು. 'ಮೊದಲೇ ಉಲ್ಲಾಸ, ಮೇಲೆ ಫಾಲ್ಗುಣ ಮಾಸ' ಎಂಬಂತೆ ಮೊದಲೇ ಕುಂಟುತ್ತ ನಡೆದಿದ್ದ ನಮ್ಮೂರ ಶಾಲೆ ಹಾಸಿಗೆ ಹಾಸಿಕೊಂಡು ಮಲಗಿ ಬಿಟ್ಟಿತು! ಭಯಗ್ರಸ್ತ ಊರಿಗೆ ಬರಬೇಕಾರು ಶಾಲಾಗುರುಗಳಾಗಿ? ಉಳಿದವರಿಗೇನೋ ಶಾಲೆ ಮುಚ್ಚಿದ ಸಂಗತಿ ಅಷ್ಟೊಂದು ದುಃಖಕರವೆನಿಸಲಿಲ್ಲ; ಆದರೆ ನನ್ನನ್ನು ವಿದ್ಯಾವಂತನನ್ನಾಗಿ ಮಾಡಿಯೇ ತೀರಬೇಕೆಂದು ಪಣ ತೊಟ್ಟಿದ್ದ, ನನ್ನೂರಿನ ಬಾಲಕರೂ ವಿದ್ಯಾವಂತರಾಗಬೇಕೆಂದು ಹಾರೈಸಿದ ನಮ್ಮ ತಂದೆಯವರಿಗೆ ಕರುಳು ಕತ್ತರಿಸಿದಂತಾಯಿತು ಶಾಲೆ ಮುಚ್ಚಿದ್ದನ್ನು ನೋಡಿ! ನನ್ನ ಮುಂದಿನ ಓದು ನಿಲ್ಲ ಕೂಡದೆಂದು ಯೋಚಿಸಿ ಆಗ ಸಮೀಪದ ಹಳ್ಳಿಯಾದ ಚಿಕ್ಕೇನಕೊಪ್ಪದಲ್ಲಿ ಶಾಲಾಗುರುಗಳಾಗಿದ್ದ ಸೋದರಮಾವ ಕಳಕಯ್ಯನವರ ಶಾಲೆಗೇ ನನ್ನನ್ನು ಸೇರಿಸಿ ಬಿಡಬೇಕೆಂದು ತೀರ್ಮಾನಿಸಿದರು. ಆ ಅನಿವಾರ್ಯ ತೀರ್ಮಾನ ನನಗೆ ತಿಳಿದಾಗ ನಾನರಿವ ಮೊದಲೇ ನೀರು ತುಂಬಿದ್ದಿತು ನನ್ನ ಕಣ್ಣುಗಳಲ್ಲಿ! ಹುಟ್ಟೂರನ್ನು ಬಿಟ್ಟು, ವಾತ್ಸಲ್ಯಮೂರ್ತಿಯಾಗಿದ್ದ ತಾಯಿಯನ್ನೂ, ಮೈವೆತ್ತ ಮಮತೆಯಂತಿದ್ದ ತಂದೆಯನ್ನೂ, ನಾನಿಲ್ಲದೆ ಊಟವನ್ನೇ ಮಾಡದ ಅಜ್ಜನನ್ನೂ, ಹಾಡಿ, ಕತೆ ಹೇಳಿ ನನ್ನ ಬಿಡುವಿನ ಸುಮಯ ಮಧುಸಂಚಯದ ಸಮಯವಾಗುವಂತೆ ಮಾಡುತ್ತಿದ್ದ ಅಜ್ಜಿಯನ್ನೂ, ಹೆಣ್ಣಜ್ಜ ಹೆಣ್ಣಜ್ಜಿ ಬಸವಯ್ಯ–ರುದ್ರಮ್ಮರನ್ನೂ, ಕಕ್ಕುಲತೆಯ ಕಕ್ಕ



ವೀರಯ್ಯ ಕತೆ ಹೇಳುವ ಸೋದರಮಾವ ಕಲ್ಲಯ್ಯರನ್ನೂ, ಹೆಗಲ ಮೇಲೆ ಹೊತ್ತುಕೊಂಡೇ ಕುಕ್ಕನೂರಿನ ಸಂತೆಗೂ, ಗುದ್ನೆಪ್ಪನ ಜಾತ್ರೆಯ ಕರೆದೊಯ್ಯುತ್ತಿದ್ದ ಸೋದರಮಾವ ಚೆನ್ನಯ್ಯನನ್ನೂ, ಓರಗೆಯ ಗೆಳೆಯರನ್ನೂ, ತೋಟದ ಮರಗಳು ಹಾಗೂ ಆ ಅಂದದ ಮಾವಿನ ತೋಪನ್ನೂ ಬಿಟ್ಟು, ಆ ಪ್ರೀತಿಯೇ ಪರಿಸರವಾಗಿದ್ದ ಹಳ್ಳಿಯ ಒಳ್ಳೆಯ ಜನರನ್ನೂ ಬಿಟ್ಟು ಅರಿಯದ ಹಳ್ಳಿಗೆ ಹೋಗಿ, ಅರಿಯದ ಜನರೊಡನೆ ಹೇಗೆ ಬದುಕುವುದು? ಸೋದರಮಾವನೇ ಶಾಲಾಗುರು. ನಿಜ. ಆದರೆ ಅವರೊಬ್ಬರೇ ನನಗೆ ತಂದೆ, ತಾಯಿ, ಬಂಧು, ಬಳಗ, ಗೆಳೆಯ ಆಗಿ ಈ ತುಂಬಲಾಗದ ತೆರಹನ್ನೂ ತುಂಬಬಲ್ಲರೆ? ಅಲ್ಲಿ ನನಗೆ ಹಾಡು ಹೇಳುವವರಾರು? ಕತೆ ಹೇಳುವವರಾರು? ಬಲವಂತ ಮಾಡಿ ಉಣ್ಣಿಸುವವರಾರು? ಹಣ್ಣು ತಂದು ಕೊಡುವವರಾರು? ಆಟಕ್ಕೆ ಒದಗುವವರಾರು? ಅಲ್ಲಿ ಕುಡಿಯುವ ನೀರಿಗೇ ಕೊರತೆಯಂತೆ; ತೋಟ ತೋಪುಗಳೆಲ್ಲಿಂದ ಬಂದಾವು? ಇಲ್ಲಿ ಈಜಲು ಮೂರು ಬಾವಿಗಳಿವೆ ನನಗೆ; ಅಲ್ಲಿ ಎಲ್ಲಿ ಈಸುವುದು? ಗುದ್ನೆಪ್ಪನ ಜಾತ್ರೆ, ಕಳಕಪ್ಪನ ಜಾತ್ರೆ, ಹಾಲಕೆರೆಯ ಜಾತ್ರೆ, ಕೋಡೀಕೊಪ್ಪ ಹುಚ್ಚವೀರಪ್ಪಜ್ಜನ ಜಾತ್ರೆ, ಕುಕ್ಕನೂರಿನ ಮಹಾಮಾಯೆಯ ಜಾತ್ರೆ ಹಾಗೂ ವಾರ ವಾರದ ಸಂತೆ ಇವೆಲ್ಲ ನನ್ನ ಪಾಲಿಗಿನ್ನು ಗಗನ ಕುಸುಮಗಳೆ?

ನಾನು ಚಿಕ್ಕೇನಕೊಪ್ಪಕ್ಕೆ ಹೊರಡುವ ದಿನ ಸಮೀಪಿಸಿದಂತೆ ನನ್ನ ವ್ಯಾಕುಲ ಹೆಚ್ಚುತ್ತ ಹೋಯಿತು. ಬಾಯಿ ಸುಟ್ಟ ಬೆಕ್ಕಿನಂತೆ ಮನೆ ಮನೆಗೆ ಹೋಗಿ ಎಲ್ಲರನ್ನೂ ಮಾತನಾಡಿಸಿ ಬರದೆ; ಕೇರಿಯ ಹಿತ ಬಂಧುಗಳಂತಿದ್ದ ದುರಗಪ್ಪ, ಫಕೀರಪ್ಪ ಮುಂತಾದವರನ್ನು ಮಾತನಾಡಿಸಿ ಬಂದೆ; ಗೆಳೆಯರೊಡನೆ ಮಾವಿನ ತೋಪಿಗೆ ಹೋಗಿ ಮನದಣಿಯೆ ಮರಮಂಗನಾಟವಾಡಿ ಬಂದೆ; ತೋಟಕ್ಕೆ ಹೋಗಿ ಹುಣಸೆ ಮರ, ಮಾವಿನ ಮರಗಳೊಡನೆ, ಎಲೆ ಬಳ್ಳಿಗಳೊಡನೆ, ಬಾಳಿಯ ಬನದೊಡನೆ ಲಲ್ಲೆಗೈದು ಬಂದೆ; ಚಿಣಿಫಣಿ, ಚೆಂಡು, ಗುಂಡು, ಗಜುಗ, ತಿಳ್ಳಿ, ತುತೂತೂ (ಕಬಡ್ಡಿ) ಇತ್ಯಾದಿಗಳನ್ನು ಸಾಕಾಗುವರೆಗೆ ಆಡಿದೆ; ಮನೆಯ ಅಂಗಳದಿಂದ ಊರ ಅಗಸೆಯವರೆಗೆ ಉನ್ಮತ್ತನಂತೆ ಓಡಾಡಿದೆ; ಕೋಟೆಯ ಗೋಡೆಯ ಮೇಲೊಮ್ಮೆ ಓಡಾಡಿ, ಹುಡೆಗಳಲ್ಲಿ ಅಲೆದಾಡಿ ಬಂದೆ. ಇವೆಲ್ಲವನ್ನು ಮಾಡಿಯೂ ಊರು ಬಿಟ್ಟು ಹೋಗುವೆನೆಂಬ ದುಃಖ ಹೆಚ್ಚುತ್ತಲೇ ಹೋಯಿತಾಗಲಿ ಸಾಂತ್ವನ ಸಿಕ್ಕಲೇ ಇಲ್ಲ. ಈ ಸುದ್ದಿ ಕೇಳಿದವರೆಲ್ಲ 'ಪಾಪ, ಹಸುಗೂಸು ಬೇರೂರಿಗೆ ಹೋಗಬೇಕೇ?' ಎಂದು ಕನಿಕರಿಸಿದಾಗ ನನ್ನ ಅಳಲಿನ ಕಟ್ಟೆ ಒಡೆಯುತ್ತಿತ್ತು!

ಕೊನೆಗೂ ಹೊರಡುವ ದಿನ ಬಂದಿತು. ಮಾಸ್ತರ–ಮಾವ ಕಳಕಯ್ಯನವರೇ ನನ್ನನ್ನು ಕರೆದೊಯ್ಯಲು ಬಂದಿದ್ದರು. ಹೊರಡುವ ದಿನ ಹೋಳಿಗೆ ಊಟ

ಮನೆಯಲ್ಲಿ. ಹೊಟ್ಟೆ ತುಂಬ ಹೋಳಿಗೆ ತುಂಬಿದುದು ಸಾಲದೆ ಎರಡು ಬಿಸಿ ಬಿಸಿ ಹೋಳಿಗೆಗಳನ್ನು ಕಟ್ಟಿಕೊಟ್ಟರು ದಾರಿಯ ಬುತ್ತಿಯೆಂದು. ನನ್ನ ಪುಸ್ತಕಗಳ, ಬಟ್ಟೆ ಬರೆಗಳ ಗಂಟನ್ನೂ, ಮಾಸ್ತರ–ಮಾವಂದಿರ ಗಂಟನ್ನೂ ಹೊರಲು ಮನೆಯ 'ಆಳುಮಗ' ಹೊರಟ. ಪದ್ಧತಿಯಂತೆ ಹಿರಿಯರಿಗೆಲ್ಲ ಪಾದಮುಟ್ಟಿ ನಮಸ್ಕರಿಸಿದೆ. ಎಲ್ಲರೂ 'ದೊಡ್ಡವನಾಗಪ್ಪಾ, ಜಾಣನಾಗಿ ಬಾರಪ್ಪಾ' ಎಂದು ಹರಸಿದರು. ತಂದೆ ತಾಯಿಗಳಂತೂ ಸರಿಯೆ, ಅಜ್ಜ ಅಜ್ಜಿಯರು, ಕಕ್ಕ ಕಕ್ಕಿಯರು, ಅತ್ತೆ ಮಾವರು ನೆರೆ ಹೊರೆಯವರು ಕಂಬನಿದುಂಬಿದರು. ನನ್ನ ಕಣ್ಣುಗಳಂತೂ ಗಂಗೆ ಯಮುನೆ–ಗಳಾಗಿದ್ದವು. ಕೇರಿಯ ಪಕ್ಕದಿಂದ ಹೋಗುವಾಗ ಅಲ್ಲಿಯೂ ತೇವಗೊಂಡ ಕಣ್ಣುಗಳನ್ನು ಕಂಡೆ. 'ನನ್ನ ಸಲುವಾಗಿ ಮಿಡುಕುವವರು ಎಷ್ಟು ಜನ!' ಎಂಬುದರ ಅರಿವಾಗಿ 'ಅಳು ನುಂಗಿ ನಗು ಒಮ್ಮೆ!' ಎನ್ನುವಂತಹ ಅನುಭವವಾಯಿತು.

ಊರು ದಾಟಿ ಕೂಗಳತೆ ಹೋದ ಮೇಲೆ ಹಿಂದಿರುಗಿ ನೋಡಿದೆ. ಹುಟ್ಟೂರು, ಅದರ ಸುತ್ತಲಿನ ತೋಟ ಪಟ್ಟಿಗಳು, ಮರಗಳ ಗುಂಪುಗಳು ಮಸಕು ಮಸಕಾಗಿ ತೋರಿದುವು. ಎಲ್ಲ ಹಿಂದುಳಿದಿದ್ದರೂ ನಮ್ಮೂರ ಸೂರ್ಯ ನಮ್ಮೊಡನಿದ್ದುದನ್ನು ಕಂಡು ಅಚ್ಚರಿಗೊಂಡೆ. ಎಲ್ಲೆಡೆಯಲ್ಲಿರುವವನೂ ಒಬ್ಬನೇ ಸೂರ್ಯ ಎಂದು ಮಾಸ್ತರ–ಮಾವ ಹೇಳಿದರು. ಅವರೆದುರು ಒಪ್ಪಿದಂತೆ ತಲೆದೂಗಿದರೂ ಒಬ್ಬನೇ ಸೂರ್ಯ ಎಲ್ಲೆಲ್ಲಿಯೂ ಇರುವುದು ಹೇಗೆ? ನಾವು ನಡೆದರೆ ನಮ್ಮೊಡನೆಯೇ ನಡೆಯುತ್ತಿರುವ ಈ ಸೂರ್ಯ ನಮ್ಮೂರಿನ ಸೂರ್ಯನಲ್ಲವೆ? ಹಿಂದೆ ಜಾತ್ರೆಗಳಿಗೆ, ಸಂತೆಗಳಿಗೆ ಹೋಗಿ ಬಂದಾಗ ಹೋಗುವ ಮರಳುವ ಸಂಭ್ರಮದಲ್ಲಿ ಸೂರ್ಯ ನಮ್ಮೊಡನೆ ಹೊರಟು, ನಮ್ಮೊಡನೆ ಹಿಂದಿರುಗುವ ಘಟನೆಯನ್ನು ಗಮನಿಸಿರಲಿಲ್ಲ. ಈಗ ಇಬ್ಬರೇ ಬೇರೂರಿಗೆ ಹೊರಟಿದ್ದಾಗ ಮೂರನೆಯವನಾಗಿ ಸೂರ್ಯ ನಮ್ಮೊಡನೆ ನಡೆದಿದ್ದುದನ್ನು ನೋಡಿ ನೆಮ್ಮದಿಯೆನಿಸಿತು ನನಗೆ. 'ಚಂದ್ರನೂ ಒಬ್ಬನೇ, ಮಾಮಾ?' ಎಂದು ಕೇಳಿದೆ. 'ಸೂರ್ಯ, ಚಂದ್ರ, ಚಿಕ್ಕೆಗಳೆಲ್ಲ ಲೋಕಕ್ಕೆಲ್ಲ ಸಮಾನರು. ನಮಗೆ ಕಾಣುವುದಕ್ಕಿಂತ ಅವರೆಲ್ಲ ಸಾವಿರ ಸಾವಿರ ಮಡಿ ದೊಡ್ಡ ಗಾತ್ರದವರು. ಬಹಳ ದೂರದಲ್ಲಿರುವುದರಿಂದ ನಮಗೆ ಸಣ್ಣ ಆಕಾರದಲ್ಲಿ ಕಾಣುತ್ತಾರೆ. ಇದೇ ಕಾರಣದಿಂದಲೇ ಎಲ್ಲ ಊರುಗಳವರಿಗೂ, ಎಲ್ಲ ಕಡೆಗಳಲ್ಲಿಯೂ ಕಾಣುತ್ತಾರೆ' ಎಂದು ಅವರು ಹೇಳಿದರು. ಖಗೋಲವಿಜ್ಞಾನದ ಪ್ರಥಮ ಪಾಠ ನನಗೆ ಸಿಕ್ಕಿತು. ಇದರಿಂದ ತತ್‌ಕ್ಷಣ ನನಗಾದ ಲಾಭವೆಂದರೆ ಊರನ್ನು ಮರೆತು ಆಕಾಶವನ್ನು ನೋಡುತ್ತ ನಡೆದೆ. 'ಚಂದ್ರ ಯಾವಾಗ ಮೂಡುವನೋ, ಚಿಕ್ಕೆಗಳು ಯಾವಾಗ ಮೂಡುವುವೋ, ಅವೆಲ್ಲ ನಮ್ಮೂರಿನಲ್ಲಿ ಕಾಣುತ್ತಿದ್ದುವೇ ಎಂಬುದನ್ನು ಯಾವಾಗ



ಮನಗಾಣುವೆನೋ' ಎಂಬ ತವಕದಲ್ಲಿ ನಡೆದೆ. ಅದುವರೆಗೆ ಉಮ್ಮಳ ತುಂಬಿ ಬಿಗಿಯುತ್ತಿದ್ದ ಎದೆ ಹಗುರಾದಂತೆನಿಸಿತು. ದಾರಿಯುದ್ದಕ್ಕೂ ಹೊಸ ಹಳ್ಳಿಗಳನ್ನೂ, ಹೊಸ ಹೊಸ ಹೊಲಗಳನ್ನೂ, ಅವುಗಳ ಕತ್ತಾಳೆ, ಲೆಕ್ಕಿ, ಜಾಲಿಗಳ ಬೇಲಿಗಳನ್ನೂ, ತೋಟಪಟ್ಟಿಗಳನ್ನೂ, ಹೊಸ ಮನುಜ–ಮುಖಗಳನ್ನೂ, ಹೊಸ ಪಶು ಪಕ್ಷಿಗಳನ್ನೂ ನೋಡುತ್ತಾ ನಡೆದಾಗ ಮುದುಡಿದ್ದ ಮುಖ ತಂತಾನೆ ಅರಳಿದ್ದಿತು.

## ಹೊಸ ಪರಿಸರ

ಚಿಕ್ಕೇನಕೊಪ್ಪವನ್ನು ತಲುಪಿದಾಗ ಸಂಜೆಯ ಹೊಂಬಿಸಿಲಿನ ಕಡಲಿನಲ್ಲಿ ಹೊಳೆಯುವ ನಡುಗಡ್ಡೆಯಂತೆ ಕಾಣಿಸಿತು ಆ ಎರೆಗಾಡಿನ ಕಿರಿಯ ಹಳ್ಳಿ. ಹುಟ್ಟೂರಿನ ಸುತ್ತಲೂ ಕೋಟೆಯ ಗೋಡೆಯಿದ್ದಿತಾಗಿ ಸಂಜೆಯ ಬಿಸಿಲಿನಲ್ಲಿ ಅದು ಈ ರೀತಿ ರಂಜಿಸಿದುದನ್ನು ನಾನು ಕಂಡಿರಲಿಲ್ಲ. ಚಿಕ್ಕೇನಕೊಪ್ಪದ ಮುಂದಿನ ಹಳ್ಳ, ಅದಕ್ಕೆ ಹೊಂದಿ ಇದ್ದ 'ಚೌಕಿ'ಯನ್ನು ದಾಟಿದಾಗ ಊರಿಗೆ ಊರೇ ಹೊನ್ನೂರಾಗಿ ಹೊಳೆಯುತ್ತಿರುವುದನ್ನು ಕಂಡು ಪುಲಕಿತನಾದೆ. ಊರಿನ ಅಂಚಿನಲ್ಲಿಯೇ ಇದ್ದ ಮಠಕ್ಕೆ ಹೋದೆವು. ಅಲ್ಲಿಯ ಹಿರಿಯ ಮಠದ ಹುಚ್ಚಮ್ಮ ತುಂಬಿದ ತಂಬಿಗೆಯೊಡನೆ ಕಾದಿದ್ದಳು. ಕಾಲು ತೊಳೆದುಕೊಂಡು ಒಳಗೆ ಹೋಗುತ್ತಲೇ ನನ್ನ ಹಂಪಜ್ಜಿಯಷ್ಟೇ ಸಲುಗೆಯಿಂದ ನನ್ನನ್ನು ತಬ್ಬಿ, 'ದೂರದ ದಾರಿ; ಕಾಲು ನೋಯುತ್ತಿವೆಯೆ?" ಎಂದು ಕೇಳಿದರು ಹುಚ್ಚಮ್ಮ. ನನ್ನ ಉತ್ತರಕ್ಕಾಗಿ ದಾರಿ ಕಾಯದೆ ತಾವೇ ನನ್ನ ಕಾಲಿನ ಬಿಸಿ ಬಿಸಿ ಕೊಬ್ಬರಿ ಎಣ್ಣೆ ಹಚ್ಚಿ ನೀವಿ ಸುಡುನೀರಿನ ಸ್ನಾನ ಮಾಡಿಸಿದರು; ಮೈ ಒರೆಸಿ ಉಗಿ ಹಾಯುತ್ತಿದ್ದ ಸೇವಿಗೆ, ಹಾಲು, ಸಕ್ಕರೆ ಉಣಿಸಿದರು. ನೋಡ ನೋಡುವಷ್ಟರಲ್ಲಿ ನಾನಲ್ಲಿಯೇ ಹುಟ್ಟಿ ಬೆಳೆದಿದ್ದೆನೇನೋ ಎನ್ನುವಷ್ಟು ಆ ಮನೆ ನನ್ನ ಮನೆಯಾಗಿ ಬಿಟ್ಟಿತು. ಆ ಹುಚ್ಚಮ್ಮ ಹಾಗೂ ನನ್ನ ತಾಯಿ ದಾನಮ್ಮರಲ್ಲಿದ್ದ ದಾಸೋಹ ಬುದ್ಧಿಯ ಏಕರೂಪತೆಯನ್ನು ಕಂಡು ಬೆರಗಾದೆ. ಮಠಕ್ಕೆ ಪ್ರಸಾದಾರ್ಥಿಗಳು ಬಂದಷ್ಟೂ ಹುಚ್ಚಮ್ಮನಿಗೆ ಹಿಗ್ಗು ಎಂಬುದು ಆಮೇಲೆ ನನಗೆ ತಿಳಿಯಿತು. ಅಂದು ರಾತ್ರಿ ಗಡದ್ದಾಗಿ ನಿದ್ದೆ ಮಾಡಿದೆ, ನಕ್ಷತ್ರಗಳನ್ನು ನೋಡಬೇಕೆಂದುದು ಮರತೇ ಹೋಗಿತ್ತು!

ಮಠದ ಒಂದು ಕೋಣೆಯಲ್ಲಿಯೇ ಮಾಸ್ತರ್–ಮಾವನವರು ವಾಸಿಸುತ್ತಿದ್ದರು. ನಾನೂ ಆ ಕೋಣೆಯ 'ಭಾಗೀದಾರ'ನಾದೆ. ಅದೇ ಮಠ ಹಗಲು ಪಾಠ ಶಾಲೆಯಾಗುತ್ತಿತ್ತು; ಸಂಜೆ ಭಜನೆ, ಕೀರ್ತನೆ, ಪುರಾಣ ಪ್ರವಚನ, ನ್ಯಾಯಪಂಚಾಯತಿ ಇತ್ಯಾದಿಗಳ ಕೇಂದ್ರವಾಗುತ್ತಿತ್ತು. ಬಂದವರೆಲ್ಲ ಒಂದಿಲ್ಲೊಂದು ವಿಧದಲ್ಲಿ ಹುಚ್ಚಮ್ಮನ

ಉಪಚಾರ ಪಡೆದೇ ಹೋಗುತ್ತಿದ್ದರು. ನನ್ನ ಸೋದರಮಾವ ಆ ಊರಿನಲ್ಲಿ ಗಳಿಸಿದ್ದ ಘನತೆ ಗೌರವಗಳನ್ನು ನೋಡಿ ಬೆರಗಾದೆ ನಾನು. ಶಾಲೆಯಲ್ಲಿದ್ದಾಗ ಸಮರ್ಥ ಶಾಲಾಗುರುಗಳು; ಆ ಮೇಲೆ ಊರವರ ಹಲವು ಹನ್ನೆರಡು ಸಮಸ್ಯೆಗಳಿಗೆ ಪರಿಹಾರ ಸೂಚಿಸುವ ಮಾರ್ಗ ದರ್ಶಕರು; ನೆಂಟಸ್ತಿಕೆ, ಬಾಂಧವ್ಯಗಳ ಮಾತುಕತೆಗಳು ನಡೆದಾಗ ಮಧ್ಯಸ್ಥಿಕೆ ವಹಿಸಿ ಕೊಡಕೊಳ್ಳುವ ವಿವರಗಳನ್ನು ಸರಾಗವಾಗಿ ನಿರ್ಣಯಿಸಿ, ವಧೂವರರ ಸಾಲಾವಳಿಯಿಂದ ಮದುವೆಯ ಮುಹೂರ್ತದವರೆಗೆ ಎಲ್ಲವನ್ನೂ ತಾವೇ ಗುಣಿಸಿ ನಿಷ್ಕರ್ಷಿಸಿ, ಮದುವೆಯ ಪೌರೋಹಿತ್ಯವನ್ನೂ ತಾವೇ ವಹಿಸುತ್ತಿದ್ದ ಜ್ಯೋತಿಷಿ–ಪುರೋಹಿತರು; ಊರಲ್ಲಿ ಜನರಿಗಾಗಲಿ, ದನಗಳಿಗಾಗಲಿ ಏನೇ ಕಾಯಿಲೆ ಕಸಾಲೆಗಳು ಬಂದರೂ ಔಷಧ ಕೊಡುವ ವೈದ್ಯರು; ಭಜನಾ ಸಂಘದವರಿಗೆ, ಬಯಲಾಟದವರಿಗೆ, ಗರತಿಯರಿಗೆ ಬಗೆ ಬಗೆಯ ಹಾಡುಗಳನ್ನು ಬರೆದುಕೊಡುವ ಕವಿಗಳು; ಪುರಾಣ ಕೀರ್ತನೆಗಳ ಪ್ರಸಂಗಗಳು ಬಂದರೆ ಪುರಾಣಕಾರರು, ಕೀರ್ತನಕಾರರು; ಸಂಗೀತದ ಆಸಕ್ತಿ ಇದ್ದವರ ಪಾಲಿಗೆ ಸಂಗೀತಗಾರರು! ಇಂಥವರ ಅಳಿಯನೆಂದು ನನಗೂ ಮಿತಿಮೀರಿದ ಪ್ರೀತಿ ವಾತ್ಸಲ್ಯಗಳ ಅಭಿಷೇಕವಾಗುತ್ತಿತ್ತು ಹೋದಲ್ಲೆಲ್ಲ, ಸೋಮವಾರಕ್ಕೊಮ್ಮೆ, ಹಬ್ಬ ಹುಣ್ಣಿಮೆಗಳಲ್ಲಿ ನನ್ನ ಅಯ್ಯತನದ ಪರೀಕ್ಷೆಯಾಗುತ್ತಿತ್ತು. ನಾಲ್ಕಾರು ಮನೆಗಳಲ್ಲಾದರೂ ಸವಿಯೂಟ ಸ್ವೀಕರಿಸಬೇಕಾಗುತ್ತಿತ್ತು–ಅದೂ ಬಗೆಬಗೆಯ ಸಿಹಿಯೂಟ. ಗೋದಿ ಬೆಳೆವ ಸೀಮೆಯಾದುದರಿಂದ ಗೋದಿಯಿಂದ ಸಿದ್ಧವಾಗುವ ತರತರದ ಮೃಷ್ಟಾನ್ನಗಳಂತೂ ಸರಿಯೇ; ಹಾಲ, ಖವಾ, ಕೆನೆಯ ಮೊಸುರುಗಳಿಂದಾಗುವ ಕೀರು, ಬಾಸುಂದಿ, ಶ್ರೀಖಂಡ ಇತ್ಯಾದಿ ಸಿಹಿತಿಂಡಿಗಳೂ ಹೇರಳ, ಧಾರಾಳ. ಅಲ್ಲಿ ತಿಂದ ಎಳ್ಳುಹಚ್ಚಿದ ಸಜ್ಜೆರೊಟ್ಟಿ, ಎಣ್ಣೆಬದನೆಕಾಯಿಪಲ್ಯ, ಕೆನೆಮೊಸರು, ಅಗಸಿ–ಗುರೆಳ್ಳು–ಎಳ್ಳುಗಳ ಪುಡಿಚಟ್ನಿ, ಹಕ್ಕರಕ್ಕಿಸೊಪ್ಪು, ಮೆಕ್ಕೆಹಿಂಡಿ, ಮೊಳಕೆಯೊಡೆದ ಮಡಕೆಕಾಳಿನ ಪಲ್ಯ, ಚವಳಿಕಾಯೀ (ಗೋರೇಕಾಯಿ) ಪಲ್ಯಗಳ ನೆನಪಾದರೆ ಇಂದಿಗೂ ನಾಲಿಗೆ ನೀರೂರುತ್ತದೆ.

ಶ್ರಾವಣ ಮಾಸ ಬಂದಿತೆಂದರೆ ಹಕಾರಿ ಸಿದ್ಧಪ್ಪನವರು ಪುರಾಣ ಓದುವವರು; ಕಳಕಯ್ಯನವರು ಪುರಾಣ ಹೇಳುವವರು. ಇಬ್ಬರದೂ ಬಹಳ ಒಳ್ಳೆಯ ಜೋಡು. ಇಂದು ಕವಿಗಳಾಗಿ, ಕತೆಗಾರರಾಗಿ, ವಿಮರ್ಶಕರಾಗಿ, ವಾಗ್ಮಿಗಳಾಗಿ ಪ್ರಸಿದ್ಧರಾಗಿರುವ ಡಾ. ದೇವೇಂದ್ರಕುಮಾರ ಹಕಾರಿಯವರ ತಂದೆಯರಾದ ಹಕಾರಿ ಸಿದ್ದಪ್ಪನವರು ಆ ನಿಟ್ಟಿಗೇ ಹೆಸರಾದ ಸಂಗೀತಗಾರರು; ಹಾರ್ಮೋನಿಯಮ್ ವಾದಕರು; ಸಾಹಿತ್ಯಜ್ಞರು; ರಸಿಕರು. ಅವರು ಪುರಾಣ ಓದಿದಾಗ ಸಭೆ ಮಂತ್ರಮುಗ್ಧವಾದಂತೆ



ತೋರುತ್ತಿತ್ತು; ಕಳಕಯ್ಯನವರು ಪುರಾಣ ಹೇಳಿದಾಗ ಯಾವುದೋ ಒಂದು ವಿಸ್ಮಯ ಪ್ರಪಂಚಕ್ಕೆ ಹೋದಂತೆ ಭಾಸವಾಗುತ್ತಿತ್ತು. ಸಾಹುಕಾರ ದೊಡ್ಡ ಮನೆಯ ಹುಚ್ಚಪ್ಪನವರು. ಒಕ್ಕಳ ಚನ್ನಪ್ಪನವರು ಮೊದಲ್ಗೊಂಡು ಕೇರಿಯ ಬಂಧು ಭಗನಿಯರವರೆಗೆ ಎಲ್ಲರೂ, ವಿಶೇಷವಾಗಿ ಕೌಲೆತ್ತಿನಂತೆ ತಲೆದೂಗುತ್ತಲೇ ಕೇಳುತ್ತಿದ್ದ ನಾಗರೆಡ್ಡಿ ಚೆನ್ನಪ್ಪನವರಂಥವರು ಕುಳಿತು ತನ್ಮಯರಾಗಿ ಪುರಾಣ ಪ್ರವಚನ ಆಲಿಸುತ್ತಿದ್ದ ಆ ದೃಶ್ಯಗಳು ಅವಿಸ್ಮರಣೀಯ. ಪ್ರಿಯ ದೇವೇಂದ್ರಕುಮಾರ ಹಕಾರಿಯವರು ಆಗ ತಾನೆ ಶಾಲೆಗೆ ಸೇರಿದ್ದರು. ನನಗೆ ತಮ್ಮನಂತಿದ್ದರು; ಇನ್ನೊಬ್ಬ ಸಂಗಾತಿ ಮುಟಗಿ ಮಹಾದೇವಪ್ಪನವರ ಮಕ್ಕಳಾದ ಮುಟಗಿ ಸಂಗಪ್ಪನವರು. ಮುಂದೆ ನಾವಿಬ್ಬರೂ ಕಲಬುರಗಿಯಲ್ಲಿ ಒಂದೇ ಕಡೆಗಿದ್ದು ಓದಿದೆವು. ನಾನೇ ಬರೆದು ನಾನೇ ನಿರ್ದೇಶಿಸಿ ಆಡಿದ ಬೆಳವಡಿ ಮಲ್ಲಮ್ಮನ ನಾಟಕದಲ್ಲಿ ನಾನು ಶಿವಾಜಿ, ಅವರು ತಾನಾಜಿ. ಆಗ ನನಗಿಂತ ಸ್ವಲ್ಪ ಮೇಲಿನ ತರಗತಿಯಲ್ಲಿದ್ದ ಈಗ ಯಲಬುರಗಿಯಲ್ಲಿ ವಕೀಲರಾಗಿರುವ ಮಲ್ಲಪ್ಪನವರು ನನ್ನ ಹಿರಿಯ ಸಮಕಾಲೀನರು. ಆ ಭಾಗಕ್ಕೇ ಆಗರ್ಭ ಶ್ರೀಮಂತರೆನಿಸಿದ್ದ ದೊಡ್ಡಮನಿ ಹುಚ್ಚಪ್ಪನವರ ಸುಪುತ್ರರಾದ ಬಸಪ್ಪ ಅಳಿಯಂದಿರಾದ ಈರಪ್ಪರೂ ನನ್ನ ಸಹಪಾಠಿಗಳಾಗಿದ್ದರು. ಮುಂದೆ ಅವರ ಸಂಪರ್ಕ ತಪ್ಪಿ ಹೋದರೂ ನನ್ನ ನೆನಪಿನಲ್ಲವರು ಹಸಿರಾಗಿ ಉಳಿದಿದ್ದಾರೆ. ದೊಡ್ಡ ಮನೆಯಲ್ಲಿ ಹಗಲೆಲ್ಲ ಹೋಳಿಗೆ ಊಟ ನಮಗೆ. ತುಪ್ಪದ ಗಿಂಡಿಗೆ ಸೌಟನ್ನು ಹಾಕುತ್ತಲೇ ಇರಲಿಲ್ಲ. ಗಿಂಡಯನ್ನೇ ಎತ್ತಿ ಹೋಳಿಗೆ ತೊಯ್ಯುವವರೆಗೆ ಹೊಯ್ಯುತ್ತಿದ್ದರು ಮಗಮಗಿಸುವ ತುಪ್ಪವನ್ನು. ಆ ದೊಡ್ಡ ಮನೆಯ ಮಹಡಿಯಲ್ಲಿ ಸರ್ಪ ಕಾವಲಿಗೋ, ಇನ್ನಾವ ಕಾವಲಿಗೋ ಒಳಗಾಗಿದ್ದಿತೆಂದು ಹೇಳಲಾಗುತ್ತಿದ್ದ, ಬಾಗಿಲ ಮುಚ್ಚಿ ಬೀಗಮುದ್ರೆ ಜಡಿದ ಉಗ್ರಾಣವೊಂದಿತ್ತು. ಅದರೊಳಗೆ ಎಷ್ಟು ಹಂಡೆಗಳ ತುಂಬ ಹೊನ್ನಿದ್ದಿತೆಂಬುದು ಯಾರಿಗೂ ಗೊತ್ತಿರಲಿಲ್ಲ. ತೆರೆದು ನೋಡುವ ಧೈರ್ಯ ಯಾರಿಗೂ ಇರಲಿಲ್ಲ. ಆಗಾಗ ಈ ಸಂಗಡಿಗರೊಡನೆ ಅದರ ಬಾಗಿಲೆದುರು ನಿಂತು 'ತೆರೆದು ನೋಡಬಾರದೇಕೆ? ತೆರೆದರೆ ಏನಾಗುವುದೋ ನೋಡಿಯೇ ಬಿಡೋಣ!" ಎಂದು ಎದೆಗಾರಿಕೆಯ ನುಡಿಗಳನ್ನಾಡಿ, ಮರುಕ್ಷಣದಲ್ಲಿಯೇ 'ನಮಗೇಕೆ ಈ ಪೀಕ ಲಾಟ?' ಎಂದು ಮೆತ್ತಗೆ ಜಾರಿಕೊಂಡುದುಂಟು. ಚೌಕಿಗೆ ಹೋಗಿ ಅದನ್ನು ಮೈಯೆಲ್ಲ ಕಣ್ಣಾಗಿ ಕಾಯುತ್ತಿದ್ದ ದೊಡ್ಡವಾಳದ ಗೊಗ್ಗರುಸ್ವರದ ನಿಷ್ಠುರ ಸ್ವಭಾವದ ನಿರ್ಮಲ ಚಾರಿತ್ರ್ಯದ ಶಂಭುಲಿಂಗಪ್ಪನವರ ಕಣ್ಣು ತಪ್ಪಿಸಿ ಹೂ ಕಾಯಿಗಳನ್ನು ಹರಿದು ತರುತ್ತಿದ್ದುದುಂಟು. ಮಳೆಯಾಗಿ ಊರ ಮುಂದಿನ ಹಳ್ಳ ತುಂಬಿ ಹರಿವಾಗ ಅದರ ಸೆಳೆವು ಹೆಚ್ಚೋ ನಮ್ಮ ಬಲವು ಹೆಚ್ಚೋ ಎಂಬುದನ್ನು ಒರೆಗೆ ಹಚ್ಚಲು ಅದರ ಪ್ರವಾಹದ ವಿರುದ್ಧ ದಿಕ್ಕಿಗೆ ನಡೆದೋ, ಇಲ್ಲವೆ ಒಂದು ದಂಡೆಯಿಂದ

ಇನ್ನೊಂದು ದಂಡೆಯವರೆಗೆ ಹೋಗಿಯೋ ಬಲಪ್ರದರ್ಶನ ಮಾಡುತ್ತಿದ್ದುದುಂಟು. ಹರಿವ ಹಳ್ಳದಲ್ಲಿ ನಿಂತಾಗ ಕಾಲ ಕೆಳಗಿನ ಮರಳು ಸದ್ದಿಲ್ಲದೆ ಸರಿಯುತ್ತಿದ್ದುದನ್ನು ಅನುಭವಿಸುವುದು ನನಗೆ ಪ್ರಿಯವಾದ ಹವ್ಯಾಸವಾಗಿತ್ತು. ಊರಿಗೆ ಕುಡಿಯುವ ನೀರು ಕೊಡುತ್ತಿದ್ದ ಕೆರೆಯ ಒಡ್ಡನ್ನೇರಿ ತುದಿಯಿಂದ ಕೆಳಗೆ ಜಾರಿ ಜಾರುಬಂಡೆಯಾಟವಾಡುತ್ತಿದ್ದುದು ಇನ್ನೊಂದು ಸೊಗಸಿನ ಸೆಲೆಯಾಗಿದ್ದಿತೆಮಗೆ. ಚಿಣಿ, ಚೆಂಡು, ಬುಗುರಿ, ಗುಂಡು, ಗಜಗ, ಚೆಕ್ಕ, ಸರಮನಿ, ಕಬಡ್ಡಿ–ಕಾಸು ಸಹ ಖರ್ಚಿಲ್ಲದ ಹಳ್ಳಿಯ ಆಟಗಳಿಗಾವ ಕೊರತೆ? ಅವಾಗಿದ್ದವು ನಮ್ಮ ಹಿಗ್ಗಿಗೆ ಒರತೆ, ಹುಚ್ಚಮ್ಮನವರ ಮಗ ಮುಪ್ಪಿನಯ್ಯನವರು ಅಣ್ಣನಾಗಿಯೂ, ಅವರ ತಂಗಿ ಅಕ್ಕನಾಗಿಯೂ ಸಿಕ್ಕಿದ ನನಗೆ ಮುಂದೆ ಸೋದರಳಿಯ ಜೋಡಬಸವಯ್ಯನೂ ಒಡನಾಡಿಯಾಗಿ ದೊರೆತು ಹೆಜ್ಜೆಹಜ್ಜೆಗೂ ಹಿಗ್ಗು ಹೊಮ್ಮುವಂತಾಯಿತು. ಕವಿಗಳೂ, ಶಾಸ್ತ್ರಕೋವಿದರೂ, ಲಿಂಗೈಕ್ಯ ಜಯದೇವ ಜಗದ್ಗುರುಗಳವರ ಪೂರ್ವಾಶ್ರಮದ ಬಳಗಕ್ಕೆ ಸೇರಿದವರೂ ಆಗಿದ್ದ ಗುರುಮಠದ ಕಾನಯ್ಯನವರೂ ನನ್ನನ್ನು ಬಹುವಾಗಿ ಪ್ರೀತಿಸುತ್ತಿದ್ದರು. ನನ್ನ ಏಳ್ಗೆಗೆ ಅವರ ಆಶೀರ್ವಾದವೂ ಕಾರಣವಾಗಿದೆಯೆಂದು ನಂಬಿದ್ದೇನೆ. ಈಗ ಚಿಕ್ಕೇನಕೊಪ್ಪದ ಶರಣವೆಂದು ಹೆಸರಾಗಿರುವ ಪೂಜ್ಯಶ್ರೀ ಚೆನ್ನವೀರಸ್ವಾಮಿಗಳವರ ತೀರ್ಥರೂಪರಾದ ಇವರು ಒಂದು ಪುರಾಣ ಕಾವ್ಯವನ್ನೂ ಕನ್ನಡಿಗರಿಗೆ ನೀಡಿರುವರು. ಹಕಾರಿ ಅಪ್ಪಣ್ಣನವರಂತೂ ನನ್ನನ್ನು ಸದಾ ಮೆಚ್ಚಿಅಚ್ಚುಗ ತೋರುತ್ತಿದ್ದವರು.

ಗೋದಿಯ ಹೊಲಗಳಲ್ಲಿ ಜಂಘೆಗಳವರೆಗೆ ಬೆಳೆದು ನಿಲ್ಲತ್ತಿದ್ದ ಜಂಗೀ ಬೆಳೆ ಕಣ್ಣಿಗೊಂದು ಹಬ್ಬ, ಸುತ್ತಲೂ ಕುಸಬಿಯ ಕೇಶರವರ್ಣದ ಹೂಗಳ ಅಂಚು; ಸುಳಿಗಾಳಿ ಬೀಸಿದರೂ ತೆನೆಗಳ ಭಾರದಿಂದ ಮೊದಲೇ ಬಾಗಿದ್ದ ಗೋದಿಯ ಬೆಳೆ ಬಳುಕುತ್ತಿದ್ದ ಬೆಡಗಿನ ನೋಟ; ಗೋದಿಯ ತೆನೆ ಸುಟ್ಟು ಕಂಬಳಿಯಲ್ಲಿ ಹಾಕಿ ಎರಡೂ ಬದಿಗೆ ಇಬ್ಬರು ಚುಂಗು ಕೂಡಿಸಿ ಹಿಡಿದು ಬ್ಯಾಕೋಲಿನಿಂದ ಬಡಿದು ಬಿಸಿ ಬಿಸಿ ಉಮ್ಮಿಗೆ ಕೊಡುತ್ತಿದ್ದ ನೇಗಿಲಯೋಗಿಗಳು; ತುದಿಯ ಹೂವೂ ಉದುರದಿದ್ದ ಎಳೆಯ ಸವತೇ ಕಾಯಿಗಳನ್ನು ಎಣಿಸದೆ ತಿನ್ನುತ್ತಿದ್ದ ಮೋಜು; ಹಸಿಕಡಲೇ ಗಿಡಗಳನ್ನು ಕಿತ್ತು ಸುಲಿದು ಹಸಿರು ಮುರಿವ ಕಾಳುಗಳನ್ನೂ ಬೊಗಸೆ ಬೊಗಸೆ ಮುಕ್ಕುತ್ತಿದ್ದ ಉಲ್ಲಾಸ; ಸಂಜೆಗೆ ದೊಡ್ಡ ದೊಡ್ಡ ಹತ್ತಿಯ ಗಂಟುಗಳನ್ನು ಹೊತ್ತು ಸಾಲಾಗಿ ಮನೆಯತ್ತ ಹೊರಟಿರುತ್ತಿದ್ದ ಹೆಂಗಳೆಯರು; ಎರಡು ಮೂರು ಹಿಡಿ ಹತ್ತಿ ಪಡೆದುಕೊಂಡೋ ಕಸಿದುಕೊಂಡೋ ಮಿಠಾಯಿ ಅಂಗಡಿಗೆ ಹೋಗಿ ಹತ್ತಿಯ ತೂಕದ ತಿನಿಸುಗಳನ್ನು ಕೊಂಡುಕೊಳ್ಳುತ್ತಿದ್ದ ಬಾಲಕ ಬಾಲಕಿಯರು;



ಗೆಜ್ಜೆಯ ಸರಗಳ ಇಂಚರವನ್ನು ಹಾದಿಯುದ್ದಕ್ಕೂ ಹರಡುತ್ತ ಮನೆಗೆ ಮರಳುವ ಸೀಮೆ ಹೋರಿಗಳು, ಹಸುಗಳು, ಎತ್ತರದ ಎತ್ತುಗಳು–ಇವೆಲ್ಲ ನೆನೆಪಾದಾಗ ನಮ್ಮ ಹಳ್ಳಿಗಳ ಹಿಂದಿನ ಸಿರಿ ಸೊಬಗು ಸಂತಸಗಳು ಎಲ್ಲಿಗೆ ಹೊರಟು ಹೋದುವೆಂಬುದೇ ತಿಳಿಯದಾಗುತ್ತದೆ.

ತಿಂಗಳಿಗೊಮ್ಮೆ ಮಾಸ್ತರ–ಮಾವನವರೊಡನೆ ಹುಟ್ಟೂರಿಗೆ ಪಯಣ. ಎತ್ತಿನಬಂಡಿ, ಅದರಲ್ಲಿ ಬಿಳಿಜೋಳ ಇಲ್ಲವೆ ಗೋದಿ ತುಂಬಿದ ಚೀಲ, ಉಂಡಿಗಳ, ಗಿಟಕಗಳ, ಬೆಲ್ಲದ, ಕಲಡೆಯ, ಕಾಯಿಪಲ್ಯಗಳ ಸಣ್ಣಸಣ್ಣ ಮೂಟೆಗಳು ಗುರು ದಕ್ಷಿಣೆಯಾಗಿ ಸಂಗಡ ಬರುತ್ತಿದ್ದವು. ಎಂದೂ ಬರಿಯ ಬಂಡಿ ಬಂದುದಿಲ್ಲ ಮಾವನ ಮನೆಗೆ. ಮಾವನವರು ಊರಿಗೆ ಬರುವ ದಿನ ಬಂದಿತೆಂದರೆ ನಮ್ಮೆರಡು ಮನೆಯ ಮಕ್ಕಳಿಗಷ್ಟೇ ಅಲ್ಲ, ಓಣಿಯ ಮಕ್ಕಳಿಗೆಲ್ಲ ಸುಗ್ಗಿ. ತಂದುದರಲ್ಲಿ ಅರ್ಧದಷ್ಟು ಉಂಡಿ ಮೊದಲಾದುವನ್ನು ಮಕ್ಕಳಿಗೆ ಹಂಚದಿದ್ದರೆ ಮಾವನವರಿಗೆ ತೃಪ್ತಿ ಇರಲಿಲ್ಲ. ನಮ್ಮ ತಾಯಿಯವರಿಗಷ್ಟೇ ಅಲ್ಲ, ಅವರ ತಂಗಿ ಕಲ್ಲವ್ವನಿಗೂ ತವರೂರು ಗಂಡನೂರು ಒಂದೇ ಆಗಿದ್ದಿತು. ದಿನಕ್ಕೊಮ್ಮೆಯಾದರೂ ತವರು ಮನೆಗೆ ಹೋಗಿ ಬರುತ್ತಿದ್ದ ಭಾಗ್ಯ ಅವರದು. ಹೊರಗಿನ ಬೀಗರು ಬಂದಾಗಲೇ ಈ ಏಕರೂಪತೆಗೆ, ಏಕತಾನತೆಗೆ ಸ್ವಲ್ಪ ಭಿನ್ನವಾದ ಬಾಳು. ನಾವು ಹುಟ್ಟೂರಿನಲ್ಲಿ ಕಳೆಯುತ್ತಿದ್ದುದು ಎರಡೇ ಎರಡು ದಿನ. ಮೂರನೆಯ ದಿನ ಮತ್ತೆ ಚಿಕ್ಕೇನಕೊಪ್ಪದ ಶಾಲೆಯಲ್ಲಿ. ಆ ಎರಡು ದಿನಗಳೂ ನಮ್ಮಿಬ್ಬರಿಗೂ ಬಹಳ ಉಸಿರು ಕಟ್ಟಿಸುವ ದಿನಗಳು. ಎಲ್ಲರೂ ಬಂದು ಮಾತನಾಡಿಸಿ ಹೋಗುವವರೇ; ನನ್ನ ಗಲ್ಲ ತುಂಬಿದ್ದುವು ತುಂಬಿದಂತಿವೆಯೆ, ಇಲ್ಲವೆ ಎಂದು ನೋಡಿ ಹೋಗುವವರೇ! ನನಗೋ, ಹಳೆಯ ಗೆಳೆಯರೊಡನೆ ಆಟವಾಡಲು, ಹರಟೆ ಹೊಡೆಯಲು, ಚಿಕ್ಕೇನಕೊಪ್ಪದ ಶಾಲೆಯ ಶ್ರೇಷ್ಠತೆಯನ್ನು ಕೊಚ್ಚಿಕೊಳ್ಳಲು ಸಮಯವೇ ಸಾಲುತ್ತಿರಲಿಲ್ಲ. ಪಂಚಮಿಯ ಸಮಯಕ್ಕೆ ಬಂದಾಗಲಂತೂ ಊರಿಗೆ ಉಂಡೆಗಳ ಜಾತ್ರೆಯೇ ಬಂದ ಹಾಗಾಗುತ್ತಿತ್ತು! ಎಷ್ಟು ಬಗೆಯ ಉಂಡಿಗಳನ್ನು ಕಳಿಸುತ್ತಿದ್ದರು ಚಿಕ್ಕೇನಕೊಪ್ಪದ ಉದಾರಿಗಳು! ಅಂದು ನಮ್ಮ ಊರಿಗೆ ಊರೇ ಅವುಗಳ ರುಚಿ ನೋಡುತ್ತಿತ್ತು!

## ಯಂತ್ರ ದರ್ಶನ

ದೊಡ್ಡ ಜಮೀನುದಾರರಾಗಿದ್ದ ದೊಡ್ಡಮನಿ ಹುಚ್ಚಪ್ಪನವರು ಹೊಲಗಳಿಗೆ ಟ್ರ್ಯಾಕ್ಟರ್ ಹೊಡೆಸಿದರು. ಆ ಭಾಗಕ್ಕೆ ಅಂತಹ ಬೃಹತ್ ಗಾತ್ರದ ಯಂತ್ರ ಬಂದದ್ದು ಅದೇ ಮೊದಲು. ಆದುದರಿಂದ ಹೊಲದಲ್ಲಿ ಟ್ರ್ಯಾಕ್ಟರು ಹೊಡೆಯಲು ಪ್ರಾರಂಭಿಸುತ್ತಲೆ ನಾವೆಲ್ಲ ಓಡಿ ಹೋಗಿ ಅದರ ರಕ್ಕಸ ಹಲ್ಲು ಮಣ ತೂಕದ ಹೆಂಟೆಗಳನ್ನು

ಎಬ್ಬಿಸುತ್ತ, ಕರಿಕೆಯನ್ನು ಬೇರು ಸಹಿತ ಕಿತ್ತೊಗೆಯುತ್ತ, ಸಣ್ಣಪುಟ್ಟ ಗಿಡಗಂಟಿಗಳನ್ನು ಉರುಳಿಸುತ್ತ, ಕರ್ಕಶ ಶಬ್ದದೊಡನೆ ಮುಂದುವರಿಯುವುದನ್ನು ನೋಡುತ್ತ ನೋಡುತ್ತ ಬೆಕ್ಕಸಬೆರಗಾಗಿ ಬಿಡುತ್ತಿದ್ದೆವು. ಆಗ ವಿಜ್ಞಾನ ಎಂಬ ಪದವಿನ್ನೂ ನಮ್ಮ ಕಿವಿಗಳನ್ನು ತಾಕಿರಲಿಲ್ಲ; ಕಾರು ಲಾರಿಗಳನ್ನು ನಾನಲ್ಲಿಯವರೆಗೆ ನೋಡಿರಲಿಲ್ಲ; ಗಿರಣಿ ಗಣಿಗಳ ಮಾತಂತಿರಲಿ, ಹೊಗೆ ಬಂಡಿಯನ್ನೂ ಕಂಡಿರದಿದ್ದ ಕಾಲವದು. ಆವಾಗ ಈ ದೈತ್ಯಾಕಾರದ ಯಂತ್ರವನ್ನು ನೋಡಿ ವಿಸ್ಮಿತನಾದೆ ನಾನು. ಅದನ್ನು ನಡೆಸುತ್ತಿದ್ದ ಯಂತ್ರವಾಹಕನೇ ನನಗಾಗ ಜಗತ್ತಿನ ಅತ್ಯದ್ಭುತ ವ್ಯಕ್ತಿಯಾಗಿ ತೋರಿದ್ದ. ಹೇಗೆ ಅಂಜಿಕೆಯಿಲ್ಲದೆ ನಿಂತು ಈ ಯಂತ್ರವನ್ನು ನಡೆಸುತ್ತಲಿದ್ದಾನೆ! ಏನಾದರೂ ಕೆಟ್ಟು ಯಂತ್ರ ನಿಂತಾಗ ಎಷ್ಟು ಬೇಗನೆ ಅದನ್ನು ಸರಿಪಡಿಸಿಕೊಳ್ಳುತ್ತಾನೆ! ಎಷ್ಟು ನೇರವಾಗಿ ನಡೆಸಿಕೊಂಡು ಹೋಗುತ್ತಾನೆ! ಅದುವರೆಗೆ ಮುಂದೆ ನಾನೇನಾಬೇಕೆಂದು ಯೋಚಿಸದಿದ್ದ ನಾನು ಅಂದು ಆದರೆ ಆ ಯಂತ್ರವಾಹಕನೇ ಆಗಬೇಕೆಂಬ ಬಯಕೆಯುಳ್ಳವನಾದೆ.

ಇದಾದ ಒಂದೆರಡು ದಿನಗಳಲ್ಲಿ ಮಾವನವರು ಶಾಲೆಯ ವಿದ್ಯಾರ್ಥಿಗಳಿಗೆಲ್ಲ ಒಂದು ಸವಾಲು ಹಾಕಿದರು: "ನಿಮಗೆ ಏನು ಬೇಕು ಎಂಬುದನ್ನು ಪಾಟಿಯ ಮೇಲೆ ಬರೆದು ತಂದು ತೋರಿಸಿರಿ!" ಎಲ್ಲ ವಿದ್ಯಾರ್ಥಿಗಳೂ ಲಗುಬಗೆಯಿಂದ ತಮಗೆ ತೋಚಿದುದನ್ನು ಗೀಚಿ ತಂದು ತೋರಿಸಿದರು. ನನಗೆ ಅಂಗಿ ಬೇಕು, ಟೊಪ್ಪಿಗೆ ಬೇಕು, ಪಾಟಿ ಬೇಕು, ಪುಸ್ತಕ ಬೇಕು, ಪೆನ್ಸಿಲ್ ಬೇಕು, ಚೆಂಡು ಬೇಕು, ಗುಂಡು ಬೇಕು–ಇತ್ಯಾದಿಯಾಗಿ ಉಳಿದವರು ಬರೆದಿದ್ದರೆ ನಾನು 'ವಿದ್ಯೆ ಬೇಕು' ಎಂದು ಬರೆದಿದ್ದೆ. ಮಾಸ್ತರ್ ಮಾವನವರು ಹಿಗ್ಗಿ ಹೀರೇಕಾಯಿಯಾದರು. ಅದನ್ನು ಊರವರಿಗೆಲ್ಲ ತೋರಿಸಿ ತಮ್ಮ 'ಅಸಾಮಾನ್ಯ ಅಳಿಯ'ನ ತಲೆಗೆ ಕೋಡು ಮೂಡುವಂತೆ ಮಾಡಿದರು. ಊರವರಲ್ಲಿ ನನ್ನ ಬಗ್ಗೆ ಪ್ರೀತಿಯ ಜೊತೆಗೆ ಆದರವೂ ಹೆಚ್ಚಿತು. ಕರೆ ಕರೆದು ಕರಜಿಕಾಯಿ ತುಪ್ಪ ತಿನ್ನಿಸ ತೊಡಗಿದರು. ತಿಂದು ತಿಂದು ಗೂಳಿಯಾದೆ. ಮತ್ತೊಮ್ಮೆ ದ್ಯಾಂಪುರಕ್ಕೆ ಹೋದಾಗ ನನ್ನ 'ದೇಹದ ಪ್ರಗತಿ'ಯನ್ನು ನೋಡಿ ನನ್ನ ತಾಯಿಗೂ ದಿಗ್ಭ್ರಮೆಯಾಯಿತು. ಯಾರಾದರೂ 'ಕಣ್ಣುಬಿಟ್ಟಾರೆಂದು' ನನಗೆ 'ದೃಷ್ಟಿ'ತೆಗೆದಳು.

ಹೀಗೆ ಸಾಗಿತು ನನ್ನ ಚಿಕ್ಕೇನಕೊಪ್ಪದ ಜೀವನ–ಹೇಗೆ ದಿನಗಳು ಕಳೆದುವೆಂಬುದೇ ತಿಳಿಯದ ಹಾಗೆ! ಆದರೆ ಅಲ್ಲಿಗೂ ಓಡಿ ಬಂದಿತು ವಿಧಿ! ಆ ಊರಿನ ಸಿರಿ ಸುಖ ಶಾಂತಿಗಳನ್ನು ಕಂಡು ಕರುಬಿತೇನೋ! ಇದ್ದಕ್ಕಿದ್ದಂತೆ ಆ ಊರಿನಲ್ಲಿಯೂ ಒಂದು 'ಖೂನಿ' ಪ್ರಕರಣ ನಡೆದು ಹೋಯಿತು! 'ಖೂನಿ' ಮಾಡಿಸಿದವರೂ ದಿಕ್ಕೆಟ್ಟು ಓಡಿ ಹೋದರು; ಮಾಡಿಸದವರಲ್ಲಿಯೂ ಕೆಲವರು



ಮರ್ಯಾದೆ ಉಳಿಸಿಕೊಳ್ಳಲು ಬೇರೂರಿಗೆ ಪಲಾಯನ ಮಾಡಿದರು. ಊರನ್ನೆಲ್ಲ ಭೀತಿಯ ಕರಾಳಛಾಯೆ ಆವರಿಸಿತು! ಪಾಪಭೀರುಗಳಾಗಿದ್ದ, ಇಂದಿಗೂ ಮಾದರಿ ಮೊಹರಮ್ ಆಚರಿಸುವುದರ ಮೂಲಕ ಮತೀಯ ಸಾಮರಸ್ಯಕ್ಕೆ ಸಾಕ್ಷಿಯಾಗಿರುವ ಊರವರು ತಲೆ ತಗ್ಗಿಸಿಕೊಂಡೇ ಮನಸ್ಸಿಲ್ಲದ ಮನಸ್ಸಿನಿಂದ ಹೊಲ–ಮನೆ–ಕೆಲಸ ಮುಂದುವರಿಸಿದರು. ಶಾಲೆ ಹಾಳು ಬಿದ್ದಿತು. ಮಾವನವರೊಡನೆ ನಾನೂ ದ್ಯಾಂಪುರಕ್ಕೆ ಧಾವಿಸಿದೆ. ದಾರಿಯಲ್ಲಿ ಮಾವನವರು ಭಯದಿಂದ ಕಂಪಿಸುತ್ತಿದ್ದರು. ಮುಖ ಬಿಳಿಚಿ, ತುಟಿಯೊಣಗಿ, ಕಣ್ಣುಗಳು ಕಾಂತಿಹೀನವಾಗಿದ್ದುವು! ಹತ್ತು ಮಾರುಗಳಿಗೊಮ್ಮೆ ಹಿಂದಿರುಗಿ ನೋಡುತ್ತಿದ್ದರು. ದಾರಿಯಲ್ಲಿ ಪೋಲೀಸರು ಎದುರಾದರು. ಆಗಂತೂ ಅವರ ಮುಖ ನೋಡುವಂತಿರಲಿಲ್ಲ. ಪುಣ್ಯಕ್ಕೆ ಪೋಲೀಸರು ನಮ್ಮ ಉಸಾಬರಿಗೆ ಬರಲಿಲ್ಲ. ಹೇಗೋ ದ್ಯಾಂಪುರ ತಲುಪಿ ಉಸ್ಸೆಂದು ತಳ ಊರಿದೆವು!

## ಬುತ್ತಿ ಒಯ್ದು ಮುಟ್ಟಿಸುವ ಕೆಲಸ :

ಈ ಪ್ರಕರಣದಲ್ಲಿ ಸಾಕ್ಷೀದಾರರಾಗಿಯಾಗಲಿ, ಬೇರೆ ರೀತಿಯಿಂದಾಗಲಿ ಸಿಕ್ಕಿ ಹಾಕಿಕೊಳ್ಳದಂತೆ ಪಾರಾಗುವುದು ಹೇಗೆಂಬುದೇ ಪೂಜ್ಯ ತಂದೆಯವರ. ಮಾವನವರ ಪ್ರಬಲ ಚಿಂತೆಯಾಗಿ ಬಿಟ್ಟಿತು. ಮಾವನವರಿಗೆ ಚಿಕ್ಕೇನಕೊಪ್ಪ ಎರಡನೆಯ ಹುಟ್ಟೂರಾಗಿದ್ದಂತೆ ತಂದೆಯವರಿಗೆ ಸಂಗನಹಾಳು ದ್ವಿತೀಯ ಜನ್ಮಸ್ಥಳದಂತಿದ್ದಿತು. ಆ ಊರಿನ ಮಠದ ಗುರಯ್ಯನವರೂ ನನ್ನ ತಂದೆಯವರೂ ಅಣ್ಣತಮ್ಮಂದಿರಂತೆ ನಡೆದುಕೊಳ್ಳುತ್ತಿದ್ದರು. ತಂದೆಯವರು ಕೆಲಕಾಲ ಅಲ್ಲಿ ಶಾಲಾಗುರುಗಳಾಗಿಯೂ ಸೇವೆ ಸಲ್ಲಿಸಿದ್ದರಿಂದ ಊರವರಿಗೆಲ್ಲ ಬೆಲ್ಲವಾಗಿದ್ದರು. ಆಗ ಆ ಊರಿನ ಗೌಡರು ತುಂಬ ಪ್ರಭಾವಶಾಲಿಗಳಾಗಿದ್ದರು. ಮುಂದೆ ಶಾಸಕರಾದ ಶ್ರೀ ಅಯ್ಯನಗೌಡರ ತಂದೆಯವರಾದ ಅವರು ನಮ್ಮ ತಂದೆಯವರಲ್ಲಿ ತುಂಬ ಆದರಭಾವ ಇರಿಸಿಕೊಂಡಿದ್ದರು. ತಂದೆಯವರು ಅವರಲ್ಲಿಗೆ ಹೋಗಿ ಮಾವನವರ ಉಸಾಬರಿಗೆ ಪೋಲೀಸರು ಬರದಂತೆ ವ್ಯವಸ್ಥೆ ಮಾಡಿಸಿ ಬಂದರು. ಆದರೆ ಆರೋಪಿಗಳ ಕಡೆಯವರು ಬಿಡಬೇಕಲ್ಲ. ಮಾವನವರ ಸಚ್ಚಾರಿತ್ರ್ಯದ, ಸತ್ಕೀರ್ತಿಯ ಲಾಭ ಪಡೆದು ಆರೋಪಿಯನ್ನು ಉಳಿಸಬೇಕೆಂಬ ದುರಾಲೋಚನೆ ಅವರಲ್ಲಿ ತಲೆದೋರಿತು. ಮಾನವರು ತಮ್ಮ ಪರವಾಗಿ ಸಾಕ್ಷಿ ಹೇಳಬೇಕೆಂಬುದವರ ಹೆಬ್ಬಯಕೆಯಾಯಿತು. ಅವರ ಊರಿನಲ್ಲಿಯೇ ಬಹು ಸಂಖ್ಯಾತರು ಇದಕ್ಕೆ ವಿರೋಧಿಗಳಾಗಿದ್ದರು. ಮಾವನವರಿಗೆ ಈ ಸುದ್ದಿ ತಿಳಿಯುತ್ತಲೇ ತಲೆಮರೆಸಿಕೊಂಡುಬಿಟ್ಟರು. ನಮ್ಮ ತೋಟದ ಬಾಳೆಯ ಬನದಲ್ಲಿ ಒಂದು ದೊಡ್ಡ ಲವಂಗ ಮೆಣಸಿನಕಾಯಿ ಗಿಡವಿದ್ದಿತು.

ಅವರ ಕೆಳಗೆ ಕುಳಿತರೆ ಹತ್ತಿರ ಹೋಗುವವರೆಗೂ ಕುಳಿತವರು ಕಾಣಿಸುತ್ತಿರಲಿಲ್ಲ. ಅಲ್ಲಿ ಹಾಸಿಗೆ ಹಾಸಿದರು ಮಾವನವರು. ಅಲ್ಲಿಂದಾಚೆ ಗಾಳಿಯಿಂದ ಬಾಳೆಗೆ ಧಕ್ಕೆಯಾಗದಿರಲೆಂದು ಎತ್ತರವಾಗಿ ಬೆಳೆಸಿದ್ದ ದಟ್ಟವಾದ ಬೇಲಿ; ಈಚೆ ಬಾಳೆಯ ಬನ! ಅವರು ಅಲ್ಲಿ ಇದ್ದುದು ಮನೆಯವರೆನ್ನಿಸಿಕೊಂಡವರಲ್ಲಿಯೂ ಕೆಲವರಿಗೆ ತಿಳಿದಿರಲಿಲ್ಲ. ನನ್ನ ತಂದೆ ತಾಯಿಯವರಿಗೆ, ಬುತ್ತಿ ಒಯ್ಯುತ್ತಿದ್ದ ನನಗೆ, ಮಾವನವರ ತಂದೆತಾಯಿಯರಿಗೆ ಮಾತ್ರ ಗೊತ್ತಿತ್ತು. ಸೋದರಮಾವರಾಗಿ, ವಿದ್ಯಾಗುರುಗಳಾಗಿ ನನಗೆ ವಿಪುಲವಾಗಿ ವಾತ್ಸಲ್ಯವನ್ನು ಉಣಿಸಿ ಬೆಳೆಸಿದ್ದ ಅವರಿಗೆ ಬುತ್ತಿ ಒಯ್ದು ಮುಟ್ಟಿಸುವ ಕೆಲಸ ನನ್ನ ಪಾಲಿಗೆ ಬಂದುದಕ್ಕಾಗಿ ನನಗೆ ಪರಮಾನಂದವಾಗಿದ್ದಿತು. ನಿತ್ಯ ಜನರ ಕಣ್ಣು ತಪ್ಪಿಸಿ ಬುತ್ತಿ ಒಯ್ದು ಸಂಜೆಯಾಗುವವರೆಗೆ ತೋಟದಲ್ಲಿಯೇ ಸುತ್ತಾಡಿ, ಬರಹೋಗುವವರ ಮೇಲೆ ಕಣ್ಣಿಟ್ಟು, ಸಂಜೆಯಾದ ಮೇಲೆ ಅವರ ರಾತ್ರಿ ಊಟ ಮಾಡಿಸಿ ಮನೆಗೆ ಮರಳುತ್ತಿದ್ದೆ.

ಆರೋಪಿಯ ಕಡೆಯವರು ಸುಮ್ಮನೆ ಕುಳಿತಿರಲಿಲ್ಲ. ಅವರು ಅಡಬಡಿಸಿ ಹುಡುಕದ ಸ್ಥಳವೇ ಉಳಿಯಲಿಲ್ಲ. ನಮ್ಮ ತೋಟಕ್ಕೂ ಹಲವು ಸಲ ಬಂದು ಅಡರಾಸಿ ಹುಡುಕಿ ಹೋದುದನ್ನು ಗಮನಿಸಿದೆ. ಅವರು ಬಂದಾಗ ಬಾಳೆಯ ಬನದ ಬಾಗಿಲಲ್ಲಿದ್ದ ಅತ್ತಿಯ ಹಣ್ಣಿನ ಮರ ಏರಿ ಹಣ್ಣು ಹುಡುಕುವವನ ಹಾಗೆ ನಟಿಸುತ್ತಿದ್ದೆ. ಆದರೆ ನಿಜವಾದ ಉದ್ದೇಶ ಬಂದವರ ಚಲನವಲನಗಳನ್ನು ನಿರೀಕ್ಷಿಸುವುದೇ ಆಗಿರುತ್ತಿತ್ತು. ಆಗ ಆ ಅತ್ತಿಯ ಮರ ನನ್ನ ಪಾಲಿಗೆ ಕಾವಲುಗೋಪುರ! ಬಂದವರು ಬೇಲಿಯಲ್ಲಿ ಇಣಿಕಿ ಇಣಿಕಿ, ಬಾಳೆ, ಬಳ್ಳಿ, ಬಾವಿ, ಬಾರಕುಣಿಗಳಲ್ಲಿ ಹಣಿಕಿ ಹಣಿಕಿ ಹೋದಮೇಲೆ ನಾನು ಕೆಳಗಿಳಿದು ಮತ್ತೊಂದು ಕುತ್ತದಿಂದ ಪಾರಾದ ಸಂಗತಿಯನ್ನು ಮಾವನವರಿಗೆ ತಿಳಿಸುತ್ತಿದ್ದೆ. ಆ ಕ್ಷಣ ಅರಳುತ್ತಿತ್ತು ಅವರ ಮುಖ; ಮರುಕ್ಷಣದಲ್ಲಿಯೇ ಮ್ಲಾನವಾಗುತ್ತಿತ್ತು, ಮೌನ ಆವರಿಸುತ್ತಿತ್ತು. ಅವರನ್ನು ದಿನದಿನಕ್ಕೆ ಕೊರಗಿ ಸೊರಗುತ್ತಲಿದ್ದ ಅವರನ್ನು ಕಂಡಾಗಲೆಲ್ಲ ನನಗೆ ಕರುಳು ಕಿವಿಚಿದ ಅನುಭವ! ಯಾರೂ ಬರುವಂತಿಲ್ಲ; ಯಾರೊಡನೆಯೂ ಮಾತನಾಡುವಂತಿಲ್ಲ! ಜನರ ಗುಂಪಿನೊಳಗೇ ಬಾಳಿ ಬೆಳಗಿದ ಅವರಿಗಾಗ ಏಕಾಂತ ಕಾರಾಗೃಹ ಶಿಕ್ಷೆ! ಎಂಥ ಪುಣ್ಯಜೀವಿಗೆ ಎಂಥ ಯಾತನೆಯಿದೆಂದುಕೊಂಡು ಪರಿತಪಿಸುವುದೊಂದನ್ನುಳಿದು ಇನ್ನೇನ ಮಾಡಬಹುದಾಗಿತ್ತು ನಾನು?

## ಅಗ್ನಿಪರೀಕ್ಷೆ :

ಒಂದೆರಡು ದಿನಗಳಲ್ಲಿಯೇ ಅಗ್ನಿಪರೀಕ್ಷೆ ಒದಗಿಬಂದಿತು. ಮಾವನವರನ್ನು ಹುಡುಕಲು ಅವರಿಗೆ ಅತ್ಯಂತ ಬೇಕಾಗಿದ್ದವರೂ ನನಗೆ ಚಿಕ್ಕೇನಕೊಪ್ಪದಲ್ಲಿದ್ದಾಗ



ಅತಿಶಯವಾದ ವಾತ್ಸಲ್ಯ ತೋರಿದವರೂ ಆಗಿದ್ದ ಒಬ್ಬ ಹಿರಿಯರೇ ಬಂದುಬಿಟ್ಟರು! ಅವರನ್ನು ನೋಡಿ ಅವಾಕ್ಕಾದೆ ನಾನು. ಆದರೆ ಮರುಕ್ಷಣದಲ್ಲಿಯೇ ಚೇತರಿಸಿಕೊಂಡು. ನಾನು ಗಾಬರಿಗೊಂಡರೆ ಮಾವನವರು ಇಲ್ಲಿಯೇ ಎಲ್ಲಿಯೋ ಇರಬೇಕೆಂದು ಅವರು ತರ್ಕಿಸಬಹುದೆಂದು ತಿಳಿದು ನಗುತ್ತಲೇ ಹೋಗಿ ಅವರನ್ನು ತಬ್ಬಿಕೊಂಡೆ. ಅವರೂ ಉಪಚಾರದ ಮಾತುಗಳನ್ನಾಡಿ 'ಮಾವನವರೆಲ್ಲಿ?' ಎಂದು ಕೇಳಿದರು. 'ನನಗೆ ಗೊತ್ತಿಲ್ಲ' ಎಂದೆ; 'ಸುಳ್ಳು ಹೇಳಬೇಡ' ಎಂದು ಗದ್ದರಿಸಿದರು. ನಾನೂ ವಿಚಲಿತನಾಗದೆ 'ನಾನು ಸುಳ್ಳು ಹೇಳುವವನ ಹಾಗೆ ಕಂಡೆನೆ ನಿಮಗೆ?' ಎಂದು ಜೋರಾಗಿಯೇ ಕೇಳಿದೆ. ತೆಪ್ಪಗಾದರು ಅವರು. ಆದರೂ ಅಲ್ಲಿಗೇ ಬಿಡಲಿಲ್ಲ. "ನಾವು ಈ ತೋಟದ ತಪಾಸಣೆ ನಡೆಸುತ್ತೇವೆ; ನೀನೂ ನಮ್ಮ ಜೊತೆಗಿರಬೇಕು" ಎಂದರು. ಒಳಗೆ ಎದೆ ಡವಡವ ಹೊಡೆದುಕೊಳ್ಳುತ್ತಿದ್ದರೂ ಹೊರಗೆ ಹುಸಿ ನಗುತ್ತ, "ಆಗಲಿ" ಎಂದೆ. ಎಲ್ಲೆಡೆ ಸುತ್ತಿ ನಿರಾಶರಾಗಿ ಬಾಳೆಯ ಪಟ್ಟಿಯನ್ನು ಪ್ರವೇಶಿಸಿದರು. ನನ್ನ ಕಾಲುಗಳು ಥರಥರ ನಡುಗುತ್ತಿದ್ದರೂ ತೋರಗೊಡದೆ ಹಿಂಬಾಲಿಸಿದೆ. "ಲವಂಗ ಮೆಣಸಿನಕಾಯಿ ಗಿಡ ಎತ್ತಿ ನೋಡಿಬಿಟ್ಟರೆ ಗತಿಯೇನು?" ಎಂದು ಚಿತ್ತ ತತ್ತರಿಸಿತು. ಸುದೈವದಿಂದ ಪೋಲಿಸಗೌಡರ ಮನೆಯ ನನ್ನ ಮುಸಲ್ಮಾನ ತಂಗಿಯರು ಬಂದರು. ಅವರ ಕಿವಿಯಲ್ಲಿ "ಲವಂಗ ಮೆಣಸಿನಕಾಯಿ ಮರದ ಆಚೆ ಈಚೆ ನಿಂತು ಕಾಯಿ ಹರಿಯುತ್ತಿರಿ" ಎಂದು ಪಿಸುಗಟ್ಟಿದೆ. ಅವರು ಹೋಗಿ ಹಾಗೆಯೇ ಮಾಡಿದರು. ಅವರು ತಮ್ಮ ತಮ್ಮ ದಾವಣಿಯನ್ನು ಗಿಡದ ಮೇಲೆ ಗಾಳಿಗೆ ಹಾರಿಬಿಟ್ಟು ಗಿಡ ಮುಚ್ಚುವ ರೀತಿಯಲ್ಲಿ ನಿಂತುಬಿಟ್ಟರು. ನಾವು ಅಲ್ಲಲ್ಲಿ ಹುಡುಕಿ ಅಲ್ಲಿಗೆ ಬಂದಾಗ ಅವರಿಗೆ ಕಂಡವರು ಈ ಹುಡುಗಿಯರು ಮಾತ್ರ. ಅವರಿಬ್ಬರನ್ನೂ ಸರಿಸಿ ಕೆಳಗೆ ನೋಡುವ ಗೊಡವೆಗೆ ಅವರು ಹೋಗಲಿಲ್ಲ. ಅವರನ್ನು ಹೊರಗೆ ಕಳಿಸಿ, ಅತ್ತಿಯ ಮರವನ್ನೇರಿ, ಅವರು ದೂರ ಹೋಗುವವರೆಗೆ ಹುಬ್ಬುಗೈಯಾಗಿ ನಿಂತು, ಕಾಣದಾದ ಮೇಲೆ ಕೆಳಗಿಳಿದು ಹೋಗಿ ಆ ತಂಗಿಯರಿಬ್ಬರನ್ನೂ ತಬ್ಬಿಕೊಂಡೆ. ಮಾವನವರೂ ಅವರ ಬೆನ್ನು ತಟ್ಟಿದರು. ಅಂತೂ ಮಾರಿಯಾಗಿ ಬಂದುದು ಮಂಜಾಗಿ ಕರಗಿಹೋಯಿತು!

ಇದಾದ ಕೆಲವು ದಿನಗಳಲ್ಲಿಯೇ ಆರೋಪಿಗಳ ಪರವಾಗಿ ಸಾಕ್ಷಿದಾರರ ಯಾದಿಯನ್ನು ಕೋರ್ಟಿಗೆ ಸಲ್ಲಿಸಲಾಯಿತೆಂದೂ, ಅದರಲ್ಲಿ ಮಾವನವರ ಹೆಸರಿಲ್ಲವೆಂದೂ ತಿಳಿದುಬಂತು. ಅವರ ಎದೆಯ ಮೇಲಿನಿಂದ ಬೆಟ್ಟ ಕೆಳಗಿಳಿದಂತಾಯಿತು. ನಮಗೂ ತಲೆ ಭಾರ ಹಗುರವಾದಂತೆನಿಸಿತು. ಇಷ್ಟಾದರೂ ಮಾನವರು ಇನ್ನೂ ಕೆಲವು ದಿನಗಳನ್ನು ಅಲ್ಲಿಯೇ ಕಳೆದರು. ಅಂತರವಿಷ್ಟೆ;

ತೋಟದಲ್ಲಿಯೇ ಸುತ್ತಾಡುತ್ತಿದ್ದರು; ಬಂದವರೊಡನೆ ಮಾತನಾಡುತ್ತಿದ್ದರು; ಮೆಣಸಿನಕಾಯಿ ಗಿಡ ಬಿಟ್ಟು ಪತ್ರಿಯ ಕಟ್ಟೆಯ ಮೇಲೆ ಬಿಡಾರ ಬಿಟ್ಟರು. ಒಟ್ಟು ಒಂದು ತಿಂಗಳು ತೋಟದಲ್ಲಿದ್ದರೆಂದು ತೋರುತ್ತದೆ. ಆ ಒಂದು ತಿಂಗಳು ಅವರಿಗೆ ಅಭಯಾರಣ್ಯವಾದ ಭಾಗ್ಯ ನಮ್ಮ ತೋಟಕ್ಕೆ ಸಿಕ್ಕಿತು.

**ಆಸ್ತಿಪಾಲು :**

ಮನೆಗೆ ಮರಳಿದ ಅವರಿಗೆ 'ಮುಂದೇನು'? ಎಂಬ ಪ್ರಶ್ನೆ ಕಾಡಲಿಲ್ಲ. ಶಾಲಾ ಗುರುವಿನ ಜೀವನಕ್ಕೆ ಶರಣು ಹೊಡೆದುಬಿಟ್ಟರವರು. ಬೇರೂರವರು ಬಂದು ಕರೆದರೂ ಹೋಗಲಿಲ್ಲ. ದ್ಯಾಂಪುರದಲ್ಲಿಯೇ ಇದ್ದು ಅದು ನೀಡುವುದನ್ನು ಅನುಭವಿಸಲು ಸನ್ನದ್ಧರಾದವರು. ಆದರೆ ನನ್ನ ಮುಂದಿನ ವಿದ್ಯಾಭ್ಯಾಸದ ಗತಿಯೇನೆಂದು ತಂದೆಯವರು ಚಿಂತೆಗೊಳಗಾದರು. ಹುಟ್ಟೂರಿನ ಶಾಲೆಯಲ್ಲಿ ಐದನೆಯ ತರಗತಿ ಇರಲಿಲ್ಲ. ಇದ್ದಷ್ಟೂ ಅಷ್ಟಕ್ಕಷ್ಟೇ ಎಂಬಂತೆ ನಡೆದಿದ್ದಿತು. ನನಗೇನೋ ನಿತ್ಯ ತೋಟಕ್ಕೆ ಹೋಗುವ ಹಿಗ್ಗು; ಆದರೆ ತಂದೆಯವರಿಗೆ ಒಳಗೊಳಗೇ ಕುಗ್ಗು! ಇದೂ ಸಾಲದೆಂಬಂತೆ ಇನ್ನೊಂದು ವಿಪತ್ತು ಅಪ್ಪಳಿಸಿತು ಅವರ ಎದೆಗೆ. ಒಂದು 'ಹೊಸಲು ದಾಟಿದ ಹೆಣ್ಣು' ನಮ್ಮ ಕಕ್ಕನ ಬಾಳನ್ನು ಹೊಕ್ಕಿತು; ಅವರಲ್ಲಿ ಬೇರೆಯಾಗುವ ಬಯಕೆಯ ಬೀಜವನ್ನು ಬಿತ್ತಿತು. ಇದ್ದುದೊಂದು ತೋಟ, ಒಂದು ಹೊಲ. ಕಕ್ಕ ರಟ್ಟೆ ಮುರಿದು ದುಡಿಯುತ್ತಿದ್ದ; ತೋಟ ಹೊಲಗಳಿಂದ ತಕ್ಕಷ್ಟು ಆದಾಯ ಬರುತ್ತಿತ್ತು. ತಂದೆಯವರ ಕೀರ್ತನ, ಪುರಾಣ ಪ್ರವಚನಾದಿಗಳಿಂದಲೂ ತಕ್ಕಷ್ಟು ಆದಾಯ ಬರುತ್ತಿತ್ತು. ಎರಡೂ ಸೇರಿ ಎಲ್ಲರೂ ಸುಖವಾಗಿ ಬಾಳುವಂತಾಗಿತ್ತು. ಇದೂ ವಿಧಿಗೆ ಸಹನವಾಗಲಿಲ್ಲವೇನೋ! ಕಕ್ಕನ ಬೇರೆಯಾಗಬೇಕೆಂಬ ಬಯಕೆಯ ಕಿಚ್ಚಿಗೆ ಅಜ್ಯವನ್ನೆರೆದರು ಆಗದವರು. ತಂದೆಯವರೆಷ್ಟು ಪರಿಯಾಗಿ ತಿಳಿಸಿ ಹೇಳಿದರೂ ಪ್ರಯೋಜನವಾಗಲಿಲ್ಲ. ಸರಿ, ಪಂಚರು ಆಸ್ತಿಯನ್ನು ಹಂಚಿಕೊಟ್ಟರು. ದೈವದವರು ದುರ್ಬಲ ಪಕ್ಷಪಾತಿಗಳಷ್ಟೆ? ನಮ್ಮ ತಂದೆಯವರೇ ಅವರ ಕಣ್ಣಲ್ಲಿ ಸಬಲರಾಗಿ ತೋರಿದರು. ಮೂಲ ಮನೆಯನ್ನು ಕಕ್ಕನಿಗೆ ಕೊಟ್ಟು, ಅವರ ಮುಂದಿನ ಎರಡು ಕೋಣೆಗಳನ್ನೂ, ಒಂದು ಸಣ್ಣ ಕೊಟ್ಟಿಗೆಯನ್ನೂ ನಮ್ಮ ಪಾಲಿಗೆ ಕೊಟ್ಟರು. ಮನೆ ಎರಡಾದವು; ತೋಟ ಎರಡು ತುಂಡಾಯಿತು; ಹೊಲ ಎರಡು ತುಂಡಾಯಿತು; ನಾಲ್ಕು ಎತ್ತುಗಳಲ್ಲಿ ಎರಡು ಎತ್ತು, ಎಮ್ಮೆ ಹಸುಗಳಲ್ಲಿ ಹಸು ನಮ್ಮ ಪಾಲಿಗೆ ಬಂದುವು. ಸರಿ, ಮಧ್ಯದಲ್ಲಿ ಅಡ್ಡಗೋಡೆ ಕಟ್ಟಿ ಬೇರೆ ಒಲೆ ಹೂಡಿಯಾಯಿತು; ಮೂಲ ಮನೆಯ ಅಡಿಗೆ ಮನೆಯಲ್ಲಿ ಉಣ್ಣುತ್ತಿದ್ದ ನಾವು ಈ ತುಂಡು ಮನೆಯಲ್ಲಿ ಮೊದಲ ಊಟ ಉಂಡಾಗ ತುತ್ತು ಕತ್ತಿನಲ್ಲಿಯೇ ಸಿಕ್ಕಂತಹ ಅನುಭವ! 'ಕಣ್ಣೀರು



ಕೂಳು' ಏಕವಾದ ಕಾಲವದು. ಉಪಾಯವಿಲ್ಲ, ಅನಿವಾರ್ಯವಾದುದನ್ನು ಅನುಭವಿಸಲೇ ಬೇಕಲ್ಲವೆ? ಊರಲ್ಲಿ ಕೆಲವರಿಗೆ ಮೋಜೆನಿಸಿತಾದರೂ ನಮಗೆ ಕರಕಷ್ಟದ ಕಾಲವಾಯಿತದು!

ಬೀರಪ್ಪನೆಂಬ ಅಳುಮಗನನ್ನಿರಿಸಿಕೊಂಡು ನಮ್ಮ ಪಾಲಿನ ತೋಟದಲ್ಲಿ ತೋಟಗಾರಿಕೆ ಹಾಗೂ ಹೊಲದಲ್ಲಿ ಬೇಸಾಯ ಪ್ರಾರಂಭವಾಯಿತು. ತಂದೆಯವರಂತೂ ಇವುಗಳಲ್ಲಿ 'ಕೆಲಸಕ್ಕೆ ಬಾರದವರು', ಬೀರಪ್ಪ ಕಪ್ಪಲಿ ಹೊಡೆಯುವವ, ನಾನು ಮಡಿ ಕಟ್ಟುವವ. ಇಬ್ಬರೂ ಸೇರಿ ಮುಂಜಾವಿನಿಂದ ಸಂಜೆಯವರೆಗೆ ಹೊಲ ತೋಟಗಳ ಕೆಲಸ ಮಾಡಿ ಮನೆಗೆ ಬರುವಾಗ ಬೀರಪ್ಪ ಮೇವಿನ ಹೊರೆ ಹೊತ್ತುಕೊಂಡು ಬಂದರೆ ನಾನು ಉರುವಲ ಹೊರೆ ಹೊತ್ತು ತರುತ್ತಿದ್ದೆನು. ಅವ್ವ ಬುತ್ತಿ ಕೊಡಲು ಬಂದಾಗ ಮೇಲ್ವಿಚಾರಣೆ ಮಾಡುತ್ತಿದ್ದಳು. ಬಹಳ ಭರಭರಾಟಿಯಿಂದ ಸಾಗಿತು ನಮ್ಮ ಒಕ್ಕಲುತನ. ಅವ್ವ ಹಸುವಿನ ಹಾಲಿನಲ್ಲಿ ಅರ್ಧ ಮಾರಿ ಅರ್ಧ ನನಗಾಗಿ, ತಂಗಿ ವೀರಾಂಬೆ, ತಮ್ಮ ಅನ್ನದಾನಿಗಾಗಿ, ಮೊಸರು ಮಜ್ಜಿಗೆಗಳಿಗಾಗಿ ಉಳಿಸಿಕೊಳ್ಳುತ್ತಿದ್ದಳು. ಸೋದರ ಮಾವಂದಿರು ಆಗಾಗ ಬಂದು 'ದೇಖ ರೇಖಿ' ಮಾಡುತ್ತಿದ್ದರು. ಆದರೆ ತೋಟದಿಂದ ನನ್ನ ಕಣ್ಣೆದುರಿಗೆ ಊರವರು ಏನನ್ನೇ ಕಿತ್ತುಕೊಂಡು ಹೋದರೂ ಸುಮ್ಮನಿರುತ್ತಿದ್ದೆ ನಾನು, ನನ್ನ 'ಸಡಿಲುತನ'ವನ್ನು ಕಂಡು ಬರಬರುತ್ತ ಸೋಮಾರಿಯಾದ ಆಳುಮಗ, ಸರಿಯಾಗಿ ಸಂತೆಯ ವ್ಯಾಪಾರ ಗೊತ್ತಿಲ್ಲದ ನಾವೆಲ್ಲರೂ ಬಹುಬೇಗ ಬೇಸಾಯ ನಷ್ಟದಲ್ಲಿ ನಡೆದುದನ್ನು ಮನಗಂಡೆವು.

ಊರವರೆಲ್ಲ ನನ್ನ ತಾಯಿಯವರಿಗೆ, 'ಭಾಳ ಬಾಳ್ವೆಂತ ಮಗನ್ನ ಪಡದೀಯವ್ವಾ; ನಿನ್ನ ನಸೀಬಾನೇ ನಸೀಬ' ಎನ್ನುತ್ತಿದ್ದರೂ ಅವ್ವನಿಗೆ ಬೇಸಾಯದಲ್ಲಿ ನಷ್ಟ ಬರುತ್ತಿದ್ದುದು ಒಳಗೊಳಗೇ ಗಾಬರಿಯನ್ನು ಹುಟ್ಟಿಸಿದ್ದಿತು. ತಂದೆಯವರಾದರೋ ಪುರಾಣ ಪ್ರವಚನಕ್ಕೆ ಹೋದರೆ ತಿಂಗಳುಗಟ್ಟಳೆ ಹೋಗಿ ಬಿಡುತ್ತಿದ್ದರು. ಅವರು ದುಡಿದು ತಂದುದು ಆಳುಮಗನ ಸಂಬಳಕ್ಕೆ, ಬೇಸಾಯದ ಖೋತಾ ತುಂಬಲಿಕ್ಕೆ ವೆಚ್ಚವಾಗುತ್ತಿದೆಯಲ್ಲ–ಎಂಬ ತಳಮಳ, ಕಳವಳ ಅವ್ವನಿಗೆ. ತಂದೆಯರಿಗಾದರೋ ಮುಂದೆ ನನ್ನನ್ನು ಯಾವ ಶಾಲೆಗೆ ಸೇರಿಸಬೇಕು, ಹೇಗೆ ನನ್ನನ್ನು ಪದವೀಧರನನ್ನಾಗಿ ಮಾಡಬೇಕು–ಎಂಬ ಒಳ ಕೊರೆತ, ಚಿಂತೆಯ ಇರಿತ! ಅಜ್ಜಂದಿರಾದ ಚೆನ್ನಕವಿಗಳು ತಮ್ಮ ತೃತೀಯ ಪುತ್ರ ಶ್ರೀ ಎನ್.ಸಿ. ಮಠ (ಮುಂದೆ ಡಾಕ್ಟರರಾದರಿವರು) ಅವರನ್ನು ಗದಗಿನಲ್ಲಿ ಓದಲಿರಿಸಿದ್ದರು. ಅಲ್ಲಿಗೇ ನನ್ನನ್ನು ಕಳಿಸಬೇಕೆಂಬ ವಿಚಾರವೂ ಸುಳಿದು ಹೋಯಿತವರ ತಲೆಯಲ್ಲಿ. ಆದರೆ ನಿಜಾಮ ರಾಜ್ಯದಲ್ಲಿದ್ದು ಹೊರಗಿನ ಪದವಿ ತಂದರೆ ಇಲ್ಲಿ ಕೆಲಸ ಸಿಕ್ಕಲಿಕ್ಕಿಲ್ಲವೆಂದು ಬಗೆದು ದೂರದರ್ಶಿಗಳಾದ ನನ್ನ

ತಂದೆಯವರು ಆ ವಿಚಾರದ ಕೈಬಿಟ್ಟರು. ನಿಜಾಮ ರಾಜ್ಯದ ಶಾಲೆ ಕಾಲೇಜುಗಳಲ್ಲಿಯೇ ಓದಿಸಬೇಕೆಂದು ತೀರ್ಮಾನಿಸಿ ಮನೆಯಲ್ಲಿಯೇ ನನಗೆ ಉರ್ದು ಭಾಷೆ ಕಲಿಸ ತೊಡಗಿದರು.

ತಾಯಿಯ ತವರು ಮನೆಯಲ್ಲಿ 'ಮನೆಯೊಳಗಣ ಮಹಾಸಭೆ' ನಡೆದು ಒಕ್ಕಲುತನವನ್ನು ನಿಲ್ಲಿಸಿ ಬಿಡುವುದೆಂಬ ಖೇದಕರ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು. ಎರಡು ಎತ್ತುಗಳನ್ನು ಮಾವನ ಮನೆಯವರೇ ಕೊಂಡುಕೊಂಡರು; ಅವರೇ ನಮ್ಮ ಪಾಲಿನ ತೋಟ ಹೊಲವನ್ನು ಲಾವಣಿಯ ಮೇಲೆ ಮಾಡಿ ವರ್ಷಕ್ಕೆ ಇಂತಿಷ್ಟು ಕೊಡುವುದೆಂದು ಗೊತ್ತಾಯಿತು. ಅವ್ವ ಹಸುವನ್ನು 'ನಾನು ಸಾಕುವೆ'ನೆಂದು ಹಟ ಹಿಡಿದು ಉಳಿಸಿಕೊಂಡಳು. ಒಂದು ಬಿಳಿ ಎತ್ತು, ಒಂದು ಕೆಂದೆತ್ತು ನಮ್ಮ ಮನೆ ಬಿಟ್ಟು ಮಾವನ ಮನೆ ಸೇರುತ್ತಿರುವಂತೆ ನಮ್ಮೆಲ್ಲರ ಕಣ್ಣುಗಳಿಂದ ಕಂಬನಿಯ ಕೋಡಿ ಹರಿಯಿತು! ಹಿಂದೆ ಮೂಲ ಮನೆ ಬಿಟ್ಟು ಅದರ ಮುಂಭಾಗಕ್ಕೆ ಬಂದಾಗ, ಬೇರೆ ಒಲೆ ಹೂಡಿ ಬೇರೆ ಅಡುಗೆ ಮಾಡಿಕೊಂಡು ಉಂಡಾಗ ಉಕ್ಕಿದ್ದ ಕಂಬನಿಗಳಿಗಿಂತಲೂ ಈ ಸಲದ ಕಂಬನಿಗಳು ಹೆಚ್ಚು ಬಿಸಿಯಾಗಿದ್ದವು; ಹೆಚ್ಚು ಧಾರಾಕಾರವಾಗಿದ್ದವು. ಅಂತಿಂಥ ಎತ್ತುಗಳಲ್ಲ, ಹೋದ ವರ್ಷ ತಾನೆ ಊರ 'ಕರಿ' ಹರಿದು ಊರ ತುಂಬ ಮೆರವಣಿಗೆ ಮಾಡಿಸಿಕೊಂಡಿದ್ದ ಎತ್ತುಗಳು! ಬೀರಪ್ಪ 'ಕರಾರು' ಹಿಡಿದು ಮೈ ಕರೆಯುತ್ತಿದ್ದಾಗ ನನ್ನ ಕೈಯಿಂದ ನುಗ್ಗೆಯ, ಚೊಗಚಿಯ ಕಾಯಿಗಳನ್ನೋ, ಕೆಂಜೋಳದ ತೆನೆಗಳನ್ನೋ ತಿನ್ನುತ್ತ ತೃಪ್ತಿ ತುಂಬಿದ ನೋಟದಿಂದ ನನ್ನ ಕಡೆಗೆ ನೋಡುತ್ತಿದ್ದವು ಆ ಅಂದದ ಚೆಂದದ ಎತ್ತುಗಳು. ಅವುಗಳ ಆ ನೋಟದಲ್ಲಿ ಎಂಥ ಉಪಕಾರ ಸ್ಮರಣೆಯ ಭಾವ ಚಿಮ್ಮುತ್ತಿತ್ತು! ಕಪ್ಪಲಿಗೇ ಹೂಡಲಿ, ನೇಗಿಲಕ್ಕೇ ಹೂಡಲಿ, ಬಂಡಿಗೇ ಹೂಡಲಿ ಸಗ್ಗದ ಸತ್ವ, ಕುಗ್ಗದ ಹುರುಪು ಅವುಗಳದು. ಅವುಗಳೊಡನಿದ್ದಾಗ ನಾನು ಜಗತ್ತನ್ನೆ ಮರೆಯುತ್ತಿದ್ದೆ. ಅವು ಮನೆ ಬಿಟ್ಟು ಹೊರಟಾಗ ಗಟ್ಟಿಯಾಗಿ ಅತ್ತುಬಿಟ್ಟೆ. ಹೆಣ್ಣಜ್ಜ ಸಂತೈಸಿದರು. 'ಬಹಳ ದೂರ ಹೊರಟಿಲ್ಲವಪ್ಪ ನಿನ್ನ ಎತ್ತುಗಳು; ಎಣಿಸಿದರೆ ಇಲ್ಲಿಗೆ ನಾಲ್ಕನೆಯ ಮನೆಯಲ್ಲಿಯೇ ಇರುವುವಿನ್ನು, ಬೇಕಾದರೆ ನೀನೂ ಅಲ್ಲಿಗೇ ಬಂದು ಬಿಡು; ಅವುಗಳಿಗೆ ಸಮೀಪದಲ್ಲಿಯೇ ಮಲಗುವಿಯಂತೆ; ಅವುಗಳಿಗೆ ನೀನೆ ಮೇವು ಹಾಕಿ ನೀರು ಕುಡಿಸುವಿಯಂತೆ"!

ನಾನೇನೂ ಅವರ ಮನೆಗೆ ಹೋಗಲಿಲ್ಲ. ಇಷ್ಟೇ ಅಲ್ಲ. ಅವರ ಮನೆಯ ಮುಂದೆ ಹಾಯ್ದು ಹೋಗುವಾಗ ಮುಖ ಆ ಕಡೆ ತಿರುಗಿಸಿಕೊಳ್ಳುತ್ತಿದ್ದೆ–ನಮ್ಮ ಎತ್ತುಗಳು ನನ್ನ ಕಣ್ಣಿಗೆ ಬಿದ್ದಾವೆಂದು. ತೋಟಕ್ಕೆ ಹೋಗುವುದನ್ನೂ ಬಿಟ್ಟು ಕೊಟ್ಟೆ. ಬೇಸಾಯ ನಿಲ್ಲಿಸಿದ ಬೆಳವಣಿಗೆಯನ್ನು ತಿಳಿದ ಸಂಗನಹಾಳಿನ ಮಠದ



ಗುರಯ್ಯನವರು ನನ್ನ ತಂದೆಯವರನ್ನು ಸಂಗನಹಾಳಿಗೆ ಕರೆಸಿಕೊಂಡರು. ನಾನೂ ಸಂಗಡ ಹೋದೆ. ಚಿಕ್ಕೇನಕೊಪ್ಪದ ಹುಚ್ಚಮ್ಮಜ್ಜಿಯವರ ಮಗಳು ಆ ಮಠಕ್ಕೆ ಗುರಯ್ಯನವರ ತಮ್ಮ ಸಂಗಯ್ಯನವರ ಮಡದಿಯಾಗಿ ಬಂದಿದ್ದರು. ನನಗದು 'ಅಕ್ಕನ ಮನೆ'ಯಾಗಿ ಬಿಟ್ಟಿತು. ಅಕ್ಕ ತುಂಬ ಕಕ್ಕುಲತೆಯಿಂದ ನೋಡಿಕೊಂಡಳು ನನ್ನನ್ನು, ಭಾವ ಸಂಗೀತಗಾರ. ಯಾವಾಗಲೂ ಅವರ ಸಂಗೀತ ಸಾಧನೆ ನಡೆದೇ ಇರುತ್ತಿತ್ತು. ಸಂಗನಹಾಳು ನಾಟಕಪ್ರಿಯರ ಊರು. ಒಳ್ಳೆಯ ನಟರೂ ಅಲ್ಲಿದ್ದರು; ನಾಟಕ ಕಲಿಸಲು 'ಭಾವ'ನವರಿದ್ದರು. ನಾಟಕ ಬರೆಯಬಲ್ಲ ತಂದೆಯವರೂ ಅಲ್ಲಿಗೆ ಬಂದಿದ್ದರು. ಕೇಳುವುದೇನಿದೆ? ನಮ್ಮ ತಂದೆಯವರು ನಾಟಕ ಬರೆದು ಕೊಡಬೇಕು, ಭಾವನವರು ಕಲಿಸಬೇಕು, ಊರ ನಟರು ಅಭಿನಯಿಸಬೇಕು ಎಂದು 'ಮಠದೊಳಗಣ ಮಹಾಸಭೆ'ಯೊಂದರಲ್ಲಿ ತೀರ್ಮಾನವಾಯಿತು. ತಂದೆಯವರು ಒಪ್ಪಿದರು. ಎಂಟು ದಿನಗಳಲ್ಲಿ ಒಂದು ಸ್ವತಂತ್ರವಾದ ಸ್ವಂತ ಕಲ್ಪನೆಯ ನಾಟಕವನ್ನು ಬರೆದುಕೊಟ್ಟರು. ಅದನ್ನು "ಅನ್ನದಾನ ಮಹತ್ವ"ವೆಂದು ಕರೆದರು. ಅದೊಂದು ಅದ್ಭುತ ಕಲ್ಪನೆಯ ಕೂಸು. ಅದುವರೆಗೆ ರಾಮಾಯಣ ಮಹಾಭಾರತಗಳನ್ನು ಆಧರಿಸಿ ರಚಿತವಾದ, ಇಲ್ಲವೆ ಪುರಾಣಗಳಿಂದ ಪ್ರೇರಿತವಾದ ನಾಟಕಗಳನ್ನೇ ನೋಡಿದ್ದ ಅಲ್ಲಿಯವರಿಗೆ ಇದೊಂದು ವಿನೂತನ ನಾಟಕವಾಗಿ ತೋರಿತು. ಬಹಳ ಹುರುಪು ಹುಮ್ಮಸುಗಳೊಡನೆ ನಾಟಕ ಕಲಿತರವರು. ಒಂದು ತಿಂಗಳ ಅಲ್ಪಾವಧಿಯಲ್ಲಿಯೇ ಕಲಿತು ಆಡಿಯೂ ಬಿಟ್ಟರದನ್ನು. ಆ ಪ್ರಯೋಗಕ್ಕೆ ಅಪೂರ್ವ ಯಶಸ್ಸು ದೊರೆಯಿತು. ಸುತ್ತಮುತ್ತಲಿನ ಹತ್ತು ಹಳ್ಳಿಗಳ ಜನರೂ ಬಂದಿದ್ದರು ಆ ನಾಟಕ ನೋಡಲಿಕ್ಕೆ. ಅವರೆಲ್ಲ ತಮ್ಮ ತಮ್ಮ ಹಳ್ಳಿಗಳಲ್ಲಿ ಆ ನಾಟಕ ಆಡಿದರಂತೆ ಆಮೇಲೆ. ಅಂತೂ ತಂದೆಯವರ ಯಶೋದುಂದುಭಿ ಮೊಳಗಿತು ಈ ನಾಟಕದಿಂದ. ಇದೇ ಅವಧಿಯಲ್ಲಿ ಅವರು ಭಜನಾಪ್ರಿಯರಿಗೆ ಭಜನೆಪದಗಳನ್ನೂ, ಕುರುಬ ಬಾಂಧವರಿಗೆ ಡೊಳ್ಳಿನ ಪದಗಳನ್ನೂ, ಹೆಂಗಳೆಯರಿಗೆ 'ಒಗಟೆ'ಗಳನ್ನೂ ಜೋಗುಳ ಪದಗಳನ್ನೂ, ಮಂಗಳಾರತಿ ಪದಗಳನ್ನೂ ಬರೆದು ಕೊಟ್ಟಿದ್ದರು. ನನ್ನಂತೆ ನಾಲ್ಕನೆಯ ಇರುತ್ತೆಯವರೆಗೆ ಮಾತ್ರ ಕಲಿತಿದ್ದ ತಂದೆಯವರು ನೀರು ಕುಡಿಯುವಂತೆ ಲೀಲಾಜಾಲವಾಗಿ ಕವಿತೆ ಬರೆಯಬಲ್ಲ, ನಾಟಕ ರಚಿಸಬಲ್ಲ, ಪುರಾಣ ಪ್ರವಚನ ಮಾಡಬಲ್ಲ, ವ್ಯಾಖ್ಯಾನ ನೀಡಬಲ್ಲ ಬಹುಮುಖ ಪ್ರತಿಭೆ–ಪಾಂಡಿತ್ಯಗಳನ್ನು ಪಡೆದುಕೊಂಡುದು ಹೇಗೆಂಬುದು ಆಗ ನನ್ನ ಕುತೂಹಲವನ್ನು ಕೆರಳಿಸಿದ, ಬೆರಗು ಮಲ್ಲಿಗೆಯನ್ನು ಅರಳಿಸಿದ ಪ್ರಶ್ನೆಯಾಯಿತು. "ನಾನೂ ಇವರಿಗೆ ತಕ್ಕ ಮಗನಾದೇನೆ? ಇವರಂತೆ ಕವಿತೆ–ನಾಟಕ ಬರೆದೇನೆ? ಪ್ರವಚನಪಟುವೆನಿಸೇನೆ?" ಎಂದು

ಮನದಲ್ಲಿಯೇ ಮಂಡಿಗೆಗಳನ್ನು ಮೆಲ್ಲುತ್ತಲಿದ್ದೆ. ಅವುಗಳ ಗೋದಿಯ ಲೆಕ್ಕ ಯಾರೂ ಕೊಡಬೇಕಿರಲಿಲ್ಲವಲ್ಲ!

## ನೂತನ ಪಾಠಶಾಲೆ

ಇವೆಲ್ಲ ಸಂಗನಹಾಳಿನ ಸಾಧನೆಗಳು ಸ್ಮರಣೀಯವೇ ಸರಿ. ಆದರೆ ನನ್ನ ದೃಷ್ಟಿಯಿಂದ ಅತ್ಯಂತ ಸ್ಮರಣೀಯವಾದ ಘಟನೆಯೆಂದರೆ ನನ್ನನ್ನು ಕುಕ್ಕನೂರಿನ 'ವಿದ್ಯಾನಂದ ಗುರುಕುಲ'ಕ್ಕೆ ಸೇರಿಸಬೇಕೆಂಬ ನಿರ್ಣಯವನ್ನು ಗುರಯ್ಯನವರೂ ತಂದೆಯವರೂ ಸಾರಾಸಾರ ವಿಚಾರ ಮಾಡಿ ಕೈಕೊಂಡುದೇ ಆಗಿದೆ. ದೇಶಾಭಿಮಾನಿಗಳಾಗಿದ್ದ ದೇಸಾಯಿ ಬಂಧುಗಳು (ಮಾನ್ಯರಾದ ರಾ. ಭೀ. ಹಾಗೂ ಪಾ. ಭೀ. ದೇಸಾಯಿಯವರು) ಗಾಂಧೀಜಿಯವರ ರಾಷ್ಟ್ರೀಯ ಶಿಕ್ಷಣದ ಆಂದೋಲನದಿಂದ ಪ್ರಭಾವಿತರಾಗಿ, ಪ್ರೇರಿತರಾಗಿ ಕುಕ್ಕನೂರಿನಲ್ಲಿ 'ನಿಜಾಮ ಕರ್ನಾಟಕ ನೂತನ ಪಾಠ ಶಾಲೆ'ಯೆಂಬ ಶಾಲೆಯೊಂದನ್ನು ಸ್ಥಾಪಿಸಿದ್ದರು. ಮುಂದೆ ಅದು 'ವಿದ್ಯಾನಂದ ಗುರುಕುಲ'ವೆಂಬ ಅಭಿಧಾನದೊಡನೆ ಮಾಧ್ಯಮಿಕ ಶಾಲೆಯಾಗಿ ಬೆಳೆಯಿತು. ಅಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯದ ಪಾಠಕ್ರಮವನ್ನೇ ಅನುಸರಿಸಿ ವಿದ್ಯಾಭ್ಯಾಸ ನಡೆಯುತ್ತಿತ್ತು; ಶೀಲ ನಿರ್ಮಾಣಕ್ಕೆ ಪ್ರಥಮ ಪ್ರಾಶಸ್ತ್ಯವಿದ್ದಿತು; ರಾಷ್ಟ್ರೀಯ ಭಾವನೆಯ ಬೆಳವಣಿಗೆ ಮುಖ್ಯ ಉದ್ದೇಶವಾಗಿತ್ತು; ಶಾರೀರಿಕ ಶಿಕ್ಷಣಕ್ಕೂ ವಿಶೇಷ ಗಮನ ನೀಡಲಾಗಿದ್ದಿತು. ಶಿಕ್ಷಕರೂ ವಿದ್ಯಾರ್ಥಿಗಳೂ ಖಾದಿ ಧರಿಸಲೇಬೇಕೆಂಬ ಕಟ್ಟಳೆಯಿತ್ತು; ಯಾವ ದುಶ್ಚಟಗಳೂ ಇವರಲ್ಲಿ ಇರಕೂಡದೆಂಬ ಕಟ್ಟು ಇದ್ದಿತು.

ಈ ಶಾಲೆಗೆ ನನ್ನನ್ನು ಸೇರಿಸಬೇಕೆಂಬ ನಿರ್ಣಯ ಮಾಡಿದುದೇನೋ ಸರಿ. ಆದರೆ ಹೇಗೆ ಸೇರಿಸಬೇಕೆಂಬುದು ತೋಚದೆ ಪುನಃ ಪುನಃ ಚರ್ಚೆಗೊಳಗಾಯಿತು ಈ ಪ್ರಶ್ನೆ. ಚಿಕ್ಕೇನಕೊಪ್ಪದ ಶಾಲೆಯಲ್ಲಿ ನಾನು ನಾಲ್ಕನೆಯ ಇಯತ್ತೆ ಮುಗಿಸಿದುದನ್ನು ವಿದ್ಯಾನಂದ ಗುರುಕುಲದ ನಿಯಮಾವಳಿ ಪ್ರಕಾರ ಒಪ್ಪಬಹುದೆ? ಒಪ್ಪಿ ನನ್ನನ್ನು ಐದನೆಯ ಇಯತ್ತೆಗೆ ಸೇರಿಸಿಕೊಂಡಾರೆ? ಅಲ್ಲದೆ, ಅದು ಬ್ರಾಹ್ಮಣ ಶಾಲೆಯೆಂದು ಪ್ರಸಿದ್ಧ ಪಡೆದಿದೆ; ಅಂದಿನ ಬ್ರಾಹ್ಮಣರ ದೃಷ್ಟಿಯಲ್ಲಿ ಶೂದ್ರರೆಂದೇ ಪರಿಗಣಿತರಾಗಿದ್ದ ನನ್ನಂಥವರನ್ನು ಅಲ್ಲಿ ಒಳಗೆ ಕರೆದುಕೊಳ್ಳಬಹುದೆ? ಇದಲ್ಲದೆ, ಪ್ರತಿನಿತ್ಯ ದ್ಯಾಂಪುರದಿಂದ ಕುಕ್ಕನೂರಿಗೆ ಇವನೊಬ್ಬನೇ ಎರಡು ಸಲ ನಡೆದು ಹೋಗಿ ಎರಡು ಸಲ ನಡೆದು ಬರುವುದು ಹೇಗೆ?

## ದ್ಯಾಂಪುರಕ್ಕೆ ಪಯಣ:

ಕೊನೆಯ ಸಂದೇಹಕ್ಕೆ ನಾನೇ ಸಮಾಧಾನ ಹೇಳಿದೆ–ಒಬ್ಬನೇ ನಡೆದೇಹೋಗಿ ನಡೆದೇ ಬರಬಲ್ಲೆನೆಂದು. ಇನ್ನುಳಿದ ಎರಡು ಸಂಶಯಗಳ ಬಗ್ಗೆ ನಮ್ಮ ತಂದೆಯವರು



ವಿದ್ಯಾನಂದ ಗುರುಕುಲದ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ದೇಸಾಯಿ ರಾಘವೇಂದ್ರರಾಯರನ್ನು ಕಂಡು ವಿಚಾರಿಸಬೇಕೆಂದು ತೀರ್ಮಾನಿಸಲಾಯಿತು. ಸಂಗನಹಾಳಿನ ಋಣ ಅಲ್ಲಿಗೆ ಮುಗಿದು ಮಾರನೆಯ ದಿನವೇ ದ್ಯಾಂಪುರಕ್ಕೆ ಹೊರಟೆವು. ಊರ ಜನರೆಲ್ಲ ಊರು ದಾಟಿ ದೂರದವರೆಗೆ ತಂದೆಯವರನ್ನು ಬೀಳ್ಕೊಡಲು ಬಂದಿದ್ದರು. ಅವರೆಲ್ಲರ ಕಣ್ಣುಗಳಲ್ಲಿ ಅಶ್ರುಗಳು! ಬಿಸಿಲಿನಲ್ಲಿ ಹೊಳೆದ ಆ ಅಶ್ರುಗಳಲ್ಲಿ ಪ್ರೀತಿಯ ಪಾರಿಜಾತವಿತ್ತು; ನಲ್ಮೆಯ ಮಲ್ಲಿಗೆಯಿತ್ತು; ಆತ್ಮೀಯತೆಯ ಮಂದಾರವಿತ್ತು; ಕೃತಜ್ಞತೆಯ ಬಿಲ್ವ ತುಳಸಿಗಳಿದ್ದುವು!

ಎರಡನೆಯ ಸಂಶಯವನ್ನೇ ಮೊದಲು ಪ್ರಸ್ತಾಪಿಸಿದರು ತಂದೆಯವರು ಮುಖ್ಯೋಪಾಧ್ಯಾಯರೆದುರು–"ತಮ್ಮ ಶಾಲೆಯಲ್ಲಿ ಬ್ರಾಹ್ಮಣೇತರರಿಗೂ ಪ್ರವೇಶ ಸಿಕ್ಕುವುದೇ?" ಎಂದು ನೇರವಾಗಿ ಕೇಳಿಯೇಬಿಟ್ಟರು. ಮುಗುಳ್ನೆಗೆಯೊಡನೆ ಮುಖ್ಯೋಪಾಧ್ಯಾಯರು ಉತ್ತರವಿತ್ತರು; "ತಮ್ಮ ಈ ಸಂದೇಹಕ್ಕೆ ಕಾರಣವಿಲ್ಲದಿಲ್ಲ ಶಾಸ್ತ್ರಿಗಳೆ; ಇದು ರಾಷ್ಟ್ರೀಯ ಶಾಲೆಯಾದರೂ ಬ್ರಾಹ್ಮಣರ ಓಣಿಯಲ್ಲಿರುವುದರಿಂದ ಸಹಜವಾಗಿಯೇ ಬ್ರಾಹ್ಮಣರ ಮಕ್ಕಳು ಮೊದಲು ಸೇರಿದ್ದಾರೆ. ಬೇರೆಯವರೂ ಬರಲಿ, ಇದು ನಿಜವಾದ ಅರ್ಥದಲ್ಲಿ ರಾಷ್ಟ್ರೀಯ ಶಾಲೆಯಾಗಲಿ–ಎಂಬುದೇ ನಮ್ಮ ಹಂಬಲ. ಆದರೆ ಅದೇಕೋ ಬೇರೆಯವರು ನಮ್ಮ ಶಾಲೆಗೆ ತಮ್ಮ ಮಕ್ಕಳನ್ನೇ ಕಳಿಸುತ್ತಿಲ್ಲ. ನೀವು ಈ ಭಾಗದಲ್ಲೆಲ್ಲ ಪ್ರಸಿದ್ಧರಾಗಿರುವ ಪಂಡಿತರು, ಕವಿಗಳು, ನಿಮ್ಮ ಮಗ ನಮ್ಮ ಶಾಲೆಯನ್ನು ಸೇರಿದರೆ ಇನ್ನುಳಿದವರೂ ಇದನ್ನು ಅನುಸರಿಸಿ ತಮ್ಮ ಮಕ್ಕಳನ್ನು ನಮ್ಮ ಶಾಲೆಗೆ ಕಳಿಸಬಹುದು. ಆಗ ಇದಕ್ಕೆ ನಿಷ್ಕಾರಣವಾಗಿ ಅಂಟಿರುವ ಬ್ರಾಹ್ಮಣರ ಶಾಲೆಯೆಂಬ ಕಲಂಕ ತೊಳೆದು ಹೋಗಬಹುದು. ನೀವು ಖಂಡಿತವಾಗಿ ನಿಮ್ಮ ಮಗನನ್ನು ನಮ್ಮ ಶಾಲೆಗೆ ಸೇರಿಸಲೇಬೇಕು"!

ನಿರಾಶೆಯ ನಿಶೆಯಲ್ಲಿ ಆಶೆಯ ಶಶಿ ಉದಿಸಿಬಂದಂತೆನಿಸಿತು ತಂದೆಯವರಿಗೆ, ಎರಡನೆಯ ಸಂದೇಹವನ್ನು ಮುಂದಿರಿಸಿದರು. "ಐದನೆಯ ತರಗತಿಗೆ ಸೇರಿಸಿಕೊಳ್ಳಲು ಯಾವ ಅಭ್ಯಂತರವೂ ಇಲ್ಲ; ಆದರೆ ನಿಮ್ಮ ಮಗ ಈಗ ಉರ್ದೂ ಲಿಪಿ ಕಲಿತು ಉಳಿದವರೊಡನೆ ಆ ಭಾಷೆಯಲ್ಲಿ ಸರಿಕನಾಗುವುದು ಹೇಗೆ"? ಎಂಬ ಆತಂಕವನ್ನು ವ್ಯಕ್ತಪಡಿಸಿದರು ಮುಖ್ಯೋಪಾಧ್ಯಾಯರು. "ನಾನಿದಾಗಲೇ ಮನೆಯಲ್ಲಿಯೇ ನನಗೆ ಬಂದಷ್ಟು ಉರ್ದೂ ಭಾಷೆಯನ್ನು ನನ್ನ ಮಗನಿಗೆ ಕಲಿಸಿದ್ದೇನೆ. ಬೇಕಾದರೆ ಪರೀಕ್ಷಿಸಿ ನೋಡಬಹುದು" ಎಂದರು ತಂದೆಯವರು. ಮುಖ್ಯೋಪಾಧ್ಯಾಯರಿದಕ್ಕೆ ಒಪ್ಪಿ ಶಾಲೆಯ ಉಪಮುಖ್ಯೋಪಾಧ್ಯಾಯರಂತಿದ್ದ ತಮ್ಮ ತಮ್ಮಂದಿರಾದ ದೇಸಾಯಿ ಪಾಂಡುರಂಗರಾಯರ ಬಳಿಗೆ ನನ್ನ ಪರೀಕ್ಷೆಗಾಗಿ ನಮ್ಮನ್ನು ಕಳಿಸಿಕೊಟ್ಟರು.

ಶಾಲೆಯ ವಾಚನಾಲಯದಲ್ಲಿದ್ದ  ಅವರ ಬಳಿಗೆ ಅಂಜುತ್ತ, ಅಳುಕುತ್ತ, ಹೋದೆವು. ಅವರ ಶಾಂತ ಮುಖಮುದ್ರೆ ನಮ್ಮ ಕುಸಿಯುತ್ತಿದ್ದ ಧೈರ್ಯಕ್ಕೆ ಆಸರಗೋಲಾಯಿತು. ಪ್ರೀತಿಯಿಂದ ಬರಮಾಡಿಕೊಂಡರು. ಮುಂದೆ ಹಾಸಿದ್ದ ಹುಲ್ಲಿನ ಚಾಪೆಯ ಮೇಲೆ (ಆ ಶಾಲೆಯಲ್ಲಿ ಪೀಠೋಪಕರಣಗಳಿರಲಿಲ್ಲ–ಕಲಿಸುವವರಿಗೂ ಚಾಪೆ, ಕಲಿಯುವವರಿಗೂ ಚಾಪೆ) ಕುಳ್ಳಿರಿಸಿ ನನಗೆ ಮಕ್ಕಳಿಗಾಗಿಯೇ ಮೀಸಲಾಗಿದ್ದ "ಘೂಲ್" ಎಂಬ ಪತ್ರಿಕೆಯ ಸಂಚಿಕೆಯೊಂದನ್ನು ಕೊಟ್ಟು ಅದರೊಳಗಿನ ಒಂದು ಕತೆಯನ್ನು ಓದಲು ಹೇಳಿದರು. ಓದಿ ತೋರಿಸಿದೆ. ಪತ್ರಿಕೆ ಮುಚ್ಚಿ ಅದೇ ಕತೆಯನ್ನು ನನ್ನ ಶಬ್ದಗಳಲ್ಲಿ ಹೇಳಲು ಅಣತಿಯಿತ್ತರು. ಆಗ ನನ್ನ ಸ್ಮರಣಶಕ್ತಿ ಆಶ್ಚರ್ಯಕರವಾದುದಾಗಿದ್ದಿತು. ಅದನ್ನೀಗ ನೆನೆದರೆ ಇಂದು ನನ್ನಲ್ಲಿ ಸ್ಮರಣಶಕ್ತಿಯೇ ಉಳಿದಿಲ್ಲವೇನೋ ಎಂದೆನ್ನಿಸುತ್ತಿದೆ! ಆ ಸ್ಮರಣಶಕ್ತಿಯ ಬಲದಿಂದ ನಾನು ಪತ್ರಿಕೆಯಲ್ಲಿ ಪ್ರಕಟವಾಗಿದ್ದಂತೆಯೇ ಆ ಕತೆಯನ್ನು ಹೇಳಿಬಿಟ್ಟೆ. ಗುರುಗಳಿಗೆ ಅಚ್ಚರಿಯಾಯಿತು. ಬೆನ್ನು ತಟ್ಟಿ ಯಾವ ಸಂಕೋಚವೂ ಇಲ್ಲದೆ ಐದನೆಯ ತರಗತಿಗೆ ಸೇರಿಸಿಕೊಳ್ಳಬಹುದೆಂದು ಬರೆದರು; ಮುಖ್ಯೋಪಾಧ್ಯಾಯರು ಒಪ್ಪಿದರು; ತಂದೆಯವರು ಪ್ರವೇಶ ಶುಲ್ಕ ತುಂಬಿಯೇಬಿಟ್ಟರು. ನಾನು ವಿದ್ಯಾನಂದ ಗುರುಕುಲದ ಐದನೆಯ ತರಗತಿಯ ವಿದ್ಯಾರ್ಥಿಯಾದೆನೆಂದು ಉಬ್ಬಿಹೋದೆ! ತಂದೆಯವರು ನನಗಾಗಿ ಎರಡು ಖಾದಿಯ ಜುಬ್ಬಗಳನ್ನು ಕೊಂಡರು; ಖಾದಿ ಪಂಚೆಗಳನ್ನು ಕೊಡಿಸಲು ಮೂರು ತಿಂಗಳುಗಳ ಅವಧಿಯನ್ನು ಪಡೆದುಕೊಂಡರು. ನಾವು ಮನೆಗೆ ಮರಳುವಾಗ ಮುಖ್ಯೋಪಾಧ್ಯಾಯರು ತಂದೆಯವರಿಗೆ ಹೇಳಿದರು: "ಶಾಸ್ತ್ರಿಗಳೇ, ನಿಮ್ಮೂರಿನಿಂದ ಇನ್ನೂ ಒಬ್ಬಿಬ್ಬರು ಬ್ರಾಹ್ಮಣೇತರ ಮಕ್ಕಳನ್ನು ನಮ್ಮ ಶಾಲೆಗೆ ಸೇರಿಸಲು ಪ್ರಯತ್ನಿಸಿರಿ. ಆದಷ್ಟು ಬೇಗ ಈ ಶಾಲೆ ನಿಜವಾದ ಅರ್ಥದಲ್ಲಿ ರಾಷ್ಟ್ರೀಯ ಶಾಲೆಯಾದುದನ್ನು ನಾನು ನೋಡಬೇಕಾಗಿದೆ!" ಪ್ರಯತ್ನಿಸುವುದಾಗಿ ತಂದೆಯವರು ವಚನ ಕೊಟ್ಟರು.

ದ್ಯಾಂಪುರಕ್ಕೆ ಹಿಂದಿರುಗಿ ನಡೆದುದನ್ನು ಹೇಳಿದಾಗ ಎಲ್ಲರೂ ಬೆರಗಾಗಿ ಬೆರಳು ಕಚ್ಚಿದರು. ತಂದೆಯವರು ತಾವಿತ್ತ ವಚನದಂತೆ ಶಾಲೆಗೆ ಹೋಗುವ ಮನಸ್ಸಿನ ಮಕ್ಕಳಿದ್ದವರನ್ನು ಕರೆಸಿ 'ವಿದ್ಯಾನಂದ ಗುರುಕುಲ'ಕ್ಕೆ ತಮ್ಮ ಮಕ್ಕಳನ್ನು ಸೇರಿಸಲು ಮನವಿ ಮಾಡಿಕೊಂಡರು. ಆ ಮನವಿಗೆ ಮೂರು ಕಾರಣಗಳಿಂದಾಗಿ ಹೆಚ್ಚಿನ ಯಶಸ್ಸು ಸಿಕ್ಕಲಿಲ್ಲ: (೧) ಅದು ಬ್ರಾಹ್ಮಣರ ಶಾಲೆ; ಶೂದ್ರರನ್ನು ಸೇರದವರ ಶಾಲೆ. (೨) ಅದು ಚಳವಳಿಗಾರರ ಶಾಲೆ;  ಒಮ್ಮೆಲ್ಲೊಮ್ಮೆ ಸರಕಾರದವರು ಅಲ್ಲಿರುವವರನ್ನು ಹಿಡಿದುಕೊಂಡು ಹೋಗಬಹುದು. (೩) ನಮ್ಮೂರಿನ ಕಿತ್ತು ತಿನ್ನುವ ಬಡತನ. ಆ ಶಾಲೆಯ ಶುಲ್ಕ ಕೊಡುವಷ್ಟು, ಖಾದಿ ಬಟ್ಟೆ ಕೊಳ್ಳುವಷ್ಟು ಎಷ್ಟು ಜನರಿಗೆ ಶಕ್ತಿಯಿದೆ?



## ಹೊಸಶಕ್ತಿ ಸಂಚಾರ :

ಆದರೂ ಮೊಳಗಾಯಿ ಸಕ್ರಪ್ಪ, ಆರೇರ ರಾಜಪ್ಪ ವಿದ್ಯಾನಂದ ಗುರುಕುಲ ಸೇರಿದರು, 'ನಾವು ಮೂರು ದಾರಿಕಾರರು' ನಿತ್ಯ ಬೆಳಗಿನ ಏಳು ಗಂಟೆಗೆ ದ್ಯಾಂಪುರದಿಂದ ಹೊರಟು ಗುರುಕುಲದಲ್ಲಿ ೭॥ ಗಂಟೆಗೆ ನಡೆಯುತ್ತಿದ್ದ 'ಶರಣು ದೇವಿಯೇ ನಿನಗೆ ಶರಣು' ಎಂಬ ಸಾಮೂಹಿಕ ಪ್ರಾರ್ಥನೆಗೆ ಹಾಜರಾಗತೊಡಗಿದೆವು. ಶಾಲೆ ಮಹಾಮಾಯಾ ಮಂದಿರದಲ್ಲಿ ನಡೆಯುತ್ತಿದ್ದ ಕಾರಣ ಮೊದಲು ದೇವಿಯ ಸ್ತೋತ್ರ, ಆಮೇಲೆ 'ರಕ್ಷಿಸು ಕರ್ನಾಟಕ ದೇವಿ–ಸಂ–ರಕ್ಷಿಸು ಕರ್ನಾಟಕದೇವಿ' ಎಂಬ ಕರ್ನಾಟಕ ಮಾತೆಯ ಸ್ತುತಿ, ಆಮೇಲೆ 'ವಂದೇ ಮಾತರಂ' ರಾಷ್ಟ್ರಗೀತೆ–ಹೀಗಿತ್ತು ಆ ಸಾಮೂಹಿಕ ಪ್ರಾರ್ಥನೆಯ ಸ್ವರೂಪ. ಅವ್ವ ಬೆಳಗಿನ ಐದು ಗಂಟೆಗೇ ಎದ್ದು ನೀರು ಕಾಯಿಸುತ್ತಿದ್ದಳು; ನಾನು ಸ್ನಾನ ಮಾಡುವುದರೊಳಗಾಗಿ ಬಿಸಿ ಬಿಸಿ ಬಿಳಿ ಜೋಳದ ರೊಟ್ಟಿ ಬೇಯಿಸುತ್ತಿದ್ದಳು; ಎರಡು ಬಿಸಿ ಬಿಸಿ ರೊಟ್ಟಿಗಳಲ್ಲಿ ಬೆಣ್ಣೆ ಮುದ್ದಿ ಇರಿಸಿ, ನಡುವೆ ಉಪ್ಪುಕಾರಪುಡಿಗಳನ್ನು ಉದುರಿಸಿ, ಬೆಣ್ಣೆ ಕರಗಿ ರೊಟ್ಟಿಗಳನ್ನೆಲ್ಲ ತೋಯ್ದಿಸಿದಾಗ ಅವುಗಳನ್ನು ಸುರುಳಿ ಸುತ್ತಿ ಕೊಡುತ್ತಿದ್ದಳು. ಅವುಗಳನ್ನು ಕಡಿದುಕೊಂಡು ತಿಂದು, ಒಂದು ಲೋಟ ಹಾಲು ಕುಡಿದು ಬೆಳಗಿನ ಶಾಲೆಗೆ ಹೊರಡುತ್ತಿದ್ದೆ. ಹನ್ನೆರಡು ಗಂಟೆಗೆ ಬೆಳಗಿನ ಶಾಲೆ ಮುಗಿಯುತ್ತಿತ್ತು. ಮೂವರೂ  ದ್ಯಾಂಪುರಕ್ಕೆ 'ಲೆಫ್ಟ್ ರೈಟ್ ಲೆಫ್ಟ್" ಮಾಡುತ್ತಿದ್ದೆವು; ಲಗುಬಗೆಯಿಂದ ಮಧ್ಯಾಹ್ನದ ಊಟ ಮುಗಿಸುತ್ತಿದ್ದೆವು; ಮತ್ತೆ ಕುಕ್ಕನೂರಿಗೆ ಮರುಪಯಣ! ಮಧ್ಯಾಹ್ನ ೧ ರಿಂದ ೫ರವರೆಗೆ ಪಾಠಗಳು; ೩ ಗಂಟೆಗೆ ಸಾಮೂಹಿಕ ಕವಾಯಿತು; ೫ ಗಂಟೆಗೆ ಆಟಗಳು, ಲೇಝಿಮ್, ಮಲ್ಲಕಂಬ, ಸಿಂಗಲ್‌ಬಾರ್, ಡಬಲ್‌ಬಾರ್, ಸರಮನಿ, ಕಬಡ್ಡಿ ಇನ್ನೂ ಏನೇನೋ! ಇವೆಲ್ಲ ನಮಗೆ ಹೊಸವು. ಒಂದೊಂದೂ ಹಿಗ್ಗಿನ ಬುಗ್ಗೆಯಾದುವು ನಮಗೆ. ನಮ್ಮ ಶರೀರಗಳಲ್ಲಿ ನಮಗೇ ಗೊತ್ತಿಲ್ಲದೆ ಉಳಿದಿದ್ದ ಹೊಸ ಹೊಸ ಶಕ್ತಿಗಳ ಸಂಚಾರ ಪ್ರಾರಂಭವಾದಂತೆ ನಾವು ಅನುಭವಿಸಿದೆವು ಆಗ; ಅನುಭವಿಸಿ ಕುಣಿದೆವು, ಕೇಕೆ ಹಾಕಿದೆವು, ನಕ್ಕೆವು, ನಲಿದೆವು.

ಆದರೆ ಈ ಉತ್ಕಂದ ಬಹಳ ದಿನ ಉಳಿಯಲಿಲ್ಲ. ಬಹು ಬೇಗನೆ ನಗೆ ಹೋಗಿ ಹೊಗೆಯಾಯಿತು. ಮುಖ್ಯೋಪಾಧ್ಯಾಯರಲ್ಲಿ, ಪ್ರಾತಃಸ್ಮರಣೀಯ ಪಾ.ಭೀ. ದೇಸಾಯಿಯವರಲ್ಲಿ ಇದ್ದ ದೊಡ್ಡ ಮನಸ್ಸು ಉಳಿದವರಲ್ಲಿ ಇರಲಿಲ್ಲ. 'ಶೂದ್ರ ಮುಂಡೇದು, ಉರುಳೇಗಡ್ಡೆ ತಿಂಬೋದು', ಇತ್ಯಾದಿ 'ಪುಷ್ಪಾಂಜಲಿಗಳು ಪ್ರಾರಂಭವಾದುವು ನಮ್ಮನ್ನು ಕುರಿತು. ರವಿವಾರ ರಜೆಯಿದ್ದರೂ ನಾವು ಸಗಣಿ

ಸಂಗ್ರಹಿಸಿಕೊಂಡು ಹೋಗಿ ತರಗತಿಗಳ ನೆಲಗಟ್ಟು ಸಾರಿಸಬೇಕು: ಕೆಮ್ಮಣ್ಣು ಪಟ್ಟಿ ತೆಗೆಯಬೇಕು; 'ಮಾಸ್ತರರ' ಮನೆಗಳಲ್ಲಿ ಮದುವೆ ಬಂದರೆ ನಮ್ಮ ತೋಟದಿಂದ ತೆಂಗಿನ ಗರಿ ಬಾಳೆಕಂಬ ಹೊತ್ತುಕೊಂಡು ಹೋಗಿ ಕೊಡಬೇಕು: ಅವರ ಪತ್ರಾವಳಿಗಳಿಗಾಗಿ ಎಲೆಗಳ ಮೂಟೆ ಒಯ್ದು ಮುಟ್ಟಿಸಬೇಕು. ಒಮ್ಮೆ ಗೋಡೆ ಕಟ್ಟಿ ಗುಡಿಯ ಎರಡು ಅಂಕಣಗಳನ್ನು ಕೋಣೆಗಳನ್ನಾಗಿ ಪರಿವರ್ತಿಸಬೇಕಾಗಿ ಬಂದಾಗ ನಾವೇ ಮಣ್ಣು ತಂದು ಇಟ್ಟಿಗೆ ಮಾಡಿ, ನಾವೇ ನಿಂತು ಗೋಡೆ ಕಟ್ಟಿದೆವು. ಇಷ್ಟೆಲ್ಲ ಮಾಡಿಯೂ ನಮ್ಮನ್ನು ನಿಕೃಷ್ಟರನ್ನಾಗಿ ಕಾಣುವುದು ತಪ್ಪಲಿಲ್ಲ. ತರಗತಿಗಳಲ್ಲಿ ಬ್ರಾಹ್ಮಣ ಹುಡುಗರು ನಮ್ಮಿಂದ ದೂರ ಸರಿದು ಕೂಡ್ರುತ್ತಿದ್ದರು; ಒಬ್ಬಿಬ್ಬರು 'ಮೇಸ್ಟ್ರು'ಗಳು ಮಾತುಮಾತಿಗೆ 'ನಿಮ್ಮ ದಪ್ಪನ್ನ ತಲೆ ಬುರುಡೆಯೊಳಗೆ ಹೊಕ್ಕಿತೋ ಇಲ್ಲವೋ ನಾ ಹೇಳಿದುದು'? ಎಂದು ಕೇಳುತ್ತಿದ್ದರು. ಇವುಗಳಿಂದ ನಮ್ಮ ಕ್ರೋಧ ಕೆರಳುತ್ತಿತ್ತು. 'ಬಡವನ ಸಿಟ್ಟು ದವಡೆಗೆ ಮೂಲ' ಎಂಬ ನಾಣ್ಣುಡಿಯು ನೆನಪಿಗೆ ಬರುತ್ತಲೇ ಸಿಟ್ಟಿನ ಬೆಂಕಿ ನಿಟ್ಟುಸಿರಿನಿಂದ ಆರಿ ಬೂದಿಯಾಗುತ್ತಿತ್ತು. ಶಾಲೆಯ ವೆಚ್ಚ ಭರಿಸಲು ಪದೇ ಪದೇ ಧನ ಸಂಗ್ರಹಕ್ಕಾಗಿ 'ನಿಧಿಯಾತ್ರೆ' ಕೈ ಕೊಳ್ಳುತ್ತಿದ್ದ ಮುಖ್ಯೋಪಾಧ್ಯಾಯರಿಗೆ, ಓದಲು ಅಲ್ಲಿದ್ದ ಪುಸ್ತಕಗಳು ಸಾಲದಾಗಿ ಕಿಟ್ಟೆಲ್ ಕೋಶವನ್ನೇ ಓದುತ್ತಿದ್ದ ಉಪಮುಖ್ಯೋಪಾಧ್ಯಾಯರಿಗೆ ಇವೆಲ್ಲ ತಿಳಿಯುತ್ತಲೇ ಇರಲಿಲ್ಲ. ಅವರಿಗೆ ಇವುಗಳನ್ನು ತಿಳಿಸುವ ಧೈರ್ಯ ನಮ್ಮಲ್ಲಿರಲಿಲ್ಲ!

### ನಂಜಿನ ಗುಟುಕು :

ಈ ನಂಜಿನ ಗುಟುಕುಗಳನ್ನು ಉಗುಳಲೂ ಆಗದೆ, ನುಂಗಲೂ ಆಗದೆ ಗುಟುಕರಿಸುತ್ತ ಕೆಲದಿನ ಕಳೆದವು. ಒಮ್ಮೆ 'ಮೇಲಿನವರ' ತೀರ ಅಸಹ್ಯವಾದ ವರ್ತನೆಗೆ ಈಡಾದಾಗ ನಾವು ಮೂವರೂ ಒಂದು ನಿರ್ಧಾರಕ್ಕೆ ಬಂದೆವು. ಮಾರನೆಯ ದಿನದಿಂದಲೇ ಆ ನಿರ್ಧಾರವನ್ನು ಕಾರ್ಯರೂಪಕ್ಕೆ ತಂದೆವು. ಎಂದಿನಂತೆ ಮನೆಯಿಂದ ಶಾಲೆಗೆ ಹೋಗುವೆವೆಂದು ಹೊರಡುವುದು; ಆಮೇಲೆ ಶಾಲೆಗೆ ಹೋಗದೆ ಕಳ್ಳೇ ಒಡೆಯರ ಇಲ್ಲವೆ ಕಾಡಿಗೇರರ ಭಾವಿಗೆ ಹೋಗಿ ಈಜಾಡುವುದು, ಕಾರೆ ಬೋರೆ ಹಣ್ಣುಗಳ ಬೇಟೆಗೆ ಹೊರಡುವುದು; ಜೇನಿನ ತಾಣಗಳನ್ನು ಹುಡುಕುತ್ತ ಸಿಕ್ಕ ಮರಗಳನ್ನೆಲ್ಲ ಏರುವುದು: ಪೊದೆಗಳನ್ನು ಹೊಕ್ಕು ಹುಡುಕುವುದು; ಮುಂಗಾರಿನ ಬೆಳೆ ಎದ್ದು ನಿಂತಾಗ ಹೆಸರುಕಾಯಿ, ಮಡಕೆಕಾಯಿ ಕಿತ್ತು ತಿನ್ನುವುದು; ಸೆಜ್ಜೆಯ ಬೆಳಸಿ ಬಕ್ಕರಿಸುವುದು; ದ್ಯಾಂಪುರ–ಕುಕ್ಕನೂರುಗಳ ನಡುವಣ ಕೆಮ್ಮಣ್ಣು ಬಯಲಿನಲ್ಲಿ ಹುತ್ತಗಳನ್ನು ಅಗಿದಗಿದು ಹಾವುಗಳು ಶೋಧ ನಡೆಸುವುದು; ಕೆಂಪು ಸೀರೆಯ 'ಅಮ್ಮ'ಗಳನ್ನು "ನಡುವೆ ಮಾಡುವುದು;" ಏನಾದರೂ ಆಟ ಆಡುವುದು; ಊಟದ



ಹೊತ್ತಿಗೆ ಸರಿಯಾಗಿ ಮನೆ ಸೇರುವುದು; ಊಟವಾಗುತ್ತಲೇ ಮತ್ತೆ* ಶಾಲೆಗೆ ಹೋಗುವೆವೆಂದು ಸುಳ್ಳು ಹೇಳಿ ಮತ್ತೆ ಎತ್ತೆತ್ತಲೋ ಸುತ್ತಿ, ಏನೇನೋ ಕಿತಾಪತಿ ನಡೆಸುವುದು; ಮತ್ತೆ ಸಂಜೆಗೆ ಮನೆಗೆ ಬಂದು ಏನನ್ನಾದರೂ ಓದಿದ ಶಾಸ್ತ್ರ ಮಾಡಿ, ಚೆನ್ನಾಗಿ ಉಂಡು ಗಡದ್ದಾಗಿ ಮಲಗಿ ಬಿಡುವುದು!

ಒಮ್ಮೆ ನಮ್ಮ ಕಿಡಿಗೇಡಿ ಬುದ್ಧಿಗೆ ಒಂದು ಯೋಜನೆ ಸ್ಫುರಿಸಿತು. ಕೆಮ್ಮಣ್ಣ ಬಯಲಿನಲ್ಲಿ ಎರಡು ದಾರಿಗಳು ಕೊಡಿದೆಡೆಯಲ್ಲಿ ಮೂರು ಕಲ್ಲುಗಳನ್ನು ನಿಲ್ಲಿಸಿ, ಅವುಗಳ ಮೇಲೆ ಒಂದು ಹಲಗೆ ಕಲ್ಲನ್ನು ಕೂಡ್ರಿಸಿ ಚಿಕ್ಕದೊಂದು ಗುಡಿಯನ್ನು ಕಟ್ಟಿ ನಿಲ್ಲಿಸಿದೆವು; ಒಂದು ಗುಂಡುಕಲ್ಲಿಗೆ, ಅಲ್ಲಿಯೇ ಸಿಕ್ಕ ಜಾದುಗಲ್ಲು ತೆಯ್ದು ಅದರ ಬಣ್ಣ ಬಳಿದು ದೇವರು ಮಾಡಿ ಆ ಗುಡಿಯಲ್ಲಿ ಪ್ರತಿಷ್ಠಾಪಿಸಿ' ಅಲ್ಲಿ ಹೇರಳವಾಗಿ ಸಿಕ್ಕುತ್ತಿದ್ದ ಹೊನ್ನವರೆ ಹೂಗಳನ್ನು ಏರಿಸಿ, ಮರೆಗೆ ನಿಂತು ನೋಡ ತೊಡಗಿದೆವು. ಒಬ್ಬ ಹೆಣ್ಣು ಮಗಳು ತಾನಷ್ಟು ಹೊನ್ನವರೆ ಹೂಗಳನ್ನೇರಿಸಿ ಗುಂಡುಕಲ್ಲಿಗೆ ನಮಸ್ಕರಿಸಿ ಹೋದಳು. ಆಮೇಲೆ ಒಬ್ಬರು, ಇನ್ನೊಬ್ಬರು, ಮಗುದೊಬ್ಬರು ಹೀಗೆಯೇ ಮಾಡಿ ಹೋದರು. ನಮ್ಮ ಯೋಜನೆ ಯಶಸ್ವಿಯಾಯಿತೆಂದು ಕೈತಟ್ಟಿ ಕುಣಿದೆವು. ಮಾರನೆಯದಿನ ನೋಡಿದಾಗ ಗುಂಡುಕಲ್ಲಿನ ಹಣೆಗೆ ಅರಿಶಿನ ಕುಂಕುಮಗಳ ಬೊಟ್ಟಿಟ್ಟಿದ್ದರು; ಹಂಗನೂಲು ಹಾಕಿದ್ದರು; ಹೊನ್ನವರೆ ಹೂಗಳ ಜೊತೆಗೆ ಬಿಲ್ವಪತ್ರೆ ತುಳಸೀದಳಗಳೂ ಸೇರಿಕೊಂಡಿದ್ದುವು. ಮುಂದೆ ಅದೊಂದು 'ಜಾಗೃತ ಸ್ಥಾನ'ವಾಗಿಯೇ ಮೆರೆಯಿತು ಸ್ವಲ್ಪ ಕಾಲ! ಈಗ ಅದರ ಅವಸ್ಥೆ ಏನಾಗಿದೆಯೆಂಬುದು ನನಗೆ ಗೊತ್ತಿಲ್ಲ! ಇಷ್ಟು ಮಾತ್ರ ನಿಜ: ಆಮೇಲೆ 'ಅಂಬಿಕಾತನಯದತ್ತ'ರ ಮೂರ್ತಿ' ಎಂಬ ನೀಳ್ಗವಿತೆಯನ್ನು ಓದಿದಾಗ ಹುಡುಗಾಟಕ್ಕಾಗಿ ನಡೆಸಿದ ಈ ನಕಲಿ ಗುಡಿಯ ಅಸಲಿ ಅರ್ಥ ಹೊಳೆದ ಹಾಗೆನಿಸಿತು.

---

* ಎದುರಾದ 'ಅಮ್ಮ'ಗಳನ್ನು ನಡುವೆ ಮಾಡಿ ಹೋದರೆ ಅಶುಭ ಪರಿಹಾರವೆಂಬ ನಂಬಿಕೆಯಿಂದ 'ಅಮ್ಮ' ಯಾರೇ ಎದುರಾಗಲಿ, ನಾವು ಮೂವರಲ್ಲಿ ಇಬ್ಬರ ಆಚೆ, ಒಬ್ಬರು ಈಚೆ ಹೋಗಿ 'ನಡುವೆ ಮಾಡಿ'ಯೇ ತೀರುತ್ತಿದ್ದೆವು. ಅವರೂ ಇದನ್ನು ತಪ್ಪಿಸಿಕೊಳ್ಳಲು ಆದಷ್ಟು ಯತ್ನಿಸುತ್ತಿದ್ದರು. ಚಿಗರೆಯ ಚಪಲದ ವೇಗದ ನಾವೆಲ್ಲಿ, ಅವರೆಲ್ಲ? ಒಮ್ಮೆ ಒಬ್ಬ ಅಮ್ಮ ಇದನ್ನು ತಪ್ಪಿಸಿಕೊಳ್ಳಲು ಎರಡು ಫರ್ಲಾಂಗಾದರೂ ಓಡಿರಬೇಕು, ಕೊನೆಗೂ ಸೋತು 'ಹೋಗ್ರಪ್ಪೋ ಹೋಗ್ರಿ, ನಿಮಗೆ ಜಯಾ ಆಗ್ತತೆ ಹೋಗ್ರಿ' ಎಂದುದುಂಟು,

### ತಪ್ಪಿದ ಹೊನ್ನವರೆ ಚಡಿಯೇಟು :

ಮೂರು ತಿಂಗಳುಗಳವರೆಗೆ 'ನಿರ್ವಿಘ್ನವಾಗಿ' ನಡೆಯಿತು ನಮ್ಮ ಈ ಉಡಾಳತನ, ಉಚ್ಛೃಂಖಲ ವೃತ್ತಿ, 'ಸ್ವರಾಜ್ಯ!' ಶುಲ್ಕ ತೆರದ ಅಪರಾಧಕ್ಕಾಗಿ ಶಾಲೆಯಲ್ಲಿ ನಮ್ಮ 'ಹೆಸರು ತೆಗೆದು ಹಾಕಿದ' ವಿಷಯವೂ ಸಹ ಗೊತ್ತಾಗಿರಲಿಲ್ಲ–ಈ ಗೂಳಿಗಳಿಗೆ! ಇನ್ನೂ ಎಷ್ಟು ದಿನ ಈ ಪೋಲಿತನ ಹೀಗೆಯೇ ಸಾಗುತ್ತಿತ್ತೋ, ಕೊನೆಗೆ ಎಲ್ಲಿಗೆ ಹೋಗಿ ಮುಟ್ಟುತ್ತಿತ್ತೋ ಯಾರು ಬಲ್ಲರು? ಒಮ್ಮೆ ತಂದೆಯವರು ನಮ್ಮ 'ಪ್ರಗತಿ'ಯನ್ನು ತಿಳಿದುಕೊಳ್ಳಲೆಂದು 'ವಿದ್ಯಾನಂದ ಗುರುಕುಲ'ಕ್ಕೆ ಹೋಗಿ ನಮ್ಮ ಬಗ್ಗೆ ವಿಚಾರಿಸಿದರು. ತರಗತಿಯ ಮೇಷ್ಟ್ರು ಹಾಜರಿ ವಹಿ ತೋರಿಸಿ ನಮ್ಮ ಹೆಸರು ಹೊಡೆದು ಹಾಕಿದ್ದುದನ್ನು ಅವರ ಗಮನಕ್ಕೆ ತಂದರು. ಅದನ್ನು ನೋಡಿ ಅವರಿಗೆ ಏನೆನ್ನಿಸಿರಬೇಕು? ಯಾರಾದರೂ ಊಹಿಸಬಹುದಾಗಿದೆ ಅದನ್ನು! ಸಿಟ್ಟಿನಿಂದ ಕುದಿಯುತ್ತ ಮನೆಯತ್ತ ಹೊರಟರು. ಅವರು ದ್ಯಾಂಪುರ ಸಮೀಪಿಸುತ್ತಿದ್ದಂತೆ ನಾವು ಅಂದಿನ ಮಧ್ಯಾಹ್ನದ 'ಮಹತ್ಕಾರ್ಯ' ಮುಗಿಸಿ ಅದೇ ದಾರಿಗೆ ಬಂದು ಸೇರಿದೆವು.

ನಮ್ಮನ್ನು ನೋಡುತ್ತಲೇ ಒಂದು ಹೊನ್ನವರೆಯ ಚಡಿಯನ್ನು ಸೆಳೆದುಕೊಂಡಿತು ಅವರ ಬಲಗೈ. ಕಣ್ಣುಗಳು ಕಿಡಿಕಾರುತ್ತಿದ್ದುವು. ನನ್ನನ್ನು ನೋಡಿ ಸಿಟ್ಟಿನ ಸ್ವರದಲ್ಲಿ 'ಹತ್ತಿರ ಬಾ' ಎಂದು ಕರೆದರು. ನಾನು ಹತ್ತಿರ ಹೋದುದಲ್ಲದೆ ಅವರ ಮುಂದೆ ನನ್ನ ಅಂಗೈ ಚಾಚಿ 'ಹೊಡಯಿರಿ!' ಎಂದೆ. ಅವರು ಕೊಂಚ ಹೊತ್ತು ಅವಾಕ್ಕಾದರು. 'ನಾವು ಶಾಲೆ ತಪ್ಪಿಸುತ್ತಿರುವುದೇತಕ್ಕೆಂಬುದನ್ನು ತಾವು ತಿಳಿದುಕೊಂಡರೆ ನಮ್ಮ ಮೇಲಿನ ಕೋಪ ಕರಗಿ ಹೋಗುವುದು,' ಎಂದು ಮೆತ್ತಗೆ ಹೇಳಿದೆ. ಮೂಲತಃ ಪ್ರೇಮಲ ಸ್ವಭಾವದವರಾದ ಅವರು ಪ್ರಶಮನಿತರಾಗಿ ಕೇಳಿದರು: 'ಯಾತಕ್ಕಾಗಿ?' ಧೈರ್ಯ ಬಂದಂತಾಗಿ ನಡೆದುದೆಲ್ಲವನ್ನೂ ವಿವರಿಸಿದೆ. ಅವರ ಸ್ವಾಭಿಮಾನವೂ ಸಿಡಿದೆದ್ದಿತು. 'ನಡೆಯಿರಿ ಮುಖ್ಯೋಪಾಧ್ಯಾಯರ ಬಳಿಗೆ,' ಎಂದರು. 'ರೈಟ್ ಅಬೌಟ್ ಟರ್ನ್' ಎಂದಂತಾಗಿ ಮತ್ತೆ ಕುಕ್ಕನೂರಿಗೆ ತೆರಳಿದೆವು. ಸುದೈವದಿಂದ ಸಿಟ್ಟಿನ ಸ್ವಭಾವದವರಾದ ಮುಖ್ಯೋಪಾಧ್ಯಾಯರು ಇರಲಿಲ್ಲ; 'ಸಮುದ್ರ ಗುಣ'ದ ಉಪ–ಮುಖ್ಯೋಪಾಧ್ಯಾಯರು ಇದ್ದರು. ಅವರಿಗೆ ತಂದೆಯವರು ನಡೆದುದೆಲ್ಲವನ್ನೂ ವಿವರಿಸಿದರು. ಅವರಿಗೆ ತುಂಬ ಕೆಡುಕೆನಿಸಿತು. 'ಇನ್ನು ಮುಂದೆ ಇಂಥ ಅವಹೇಳನೆ ಇಲ್ಲಿ ನಡೆಯದಂತೆ ನೋಡಿಕೊಳ್ಳುವೆ; ಈ ಮಕ್ಕಳು ನಾಳೆಯಿಂದ ಮತ್ತೆ ಶಾಲೆಗೆ ಬರಲಿ,' ಎಂದು ಹೇಳಿ, ತೆಗೆದು ಹಾಕಿದ್ದ ನಮ್ಮ ಹೆಸರುಗಳನ್ನು ಮತ್ತೆ ಹಚ್ಚಿಸಿದರು. ಮಧ್ಯಾವಧಿಯ ಶುಲ್ಕ ಕೊಡಹೋದರೂ ಬೇಡವೆಂದು ಬಿಟ್ಟರು. "ಅನಾವಶ್ಯಕವಾಗಿ ಮೂರು ತಿಂಗಳ ಕಾಲ ಇವರ ಓದು ಹಾಳಾಗಿದೆ. ಮತ್ತೆ ಈ ಶುಲ್ಕದ ದಂಡ



ವಿಧಿಸುವುದು ಬೇಡ. ಇನ್ನು ಇವರ ವಿದ್ಯಾಭ್ಯಾಸದ ಮೇಲ್ವಿಚಾರಣೆಯನ್ನು ಸ್ವತಃ ನಾನೇ ಮಾಡುವೆನು," ಎಂದು ಹೇಳಿ, ನನ್ನತ್ತ ತಿರುಗಿ–'ಸಿದ್ದಣ್ಣ, ನೀನು ಬಹಳ ಜಾಣ ಹುಡುಗ. ನೀನು ಬಹಳ ಎತ್ತರಕ್ಕೆ ಬೆಳೆಯುವಿಯೆಂದು ನಾನು ನಿರೀಕ್ಷಿಸಿದ್ದೇನೆ. ನನ್ನ ನಿರೀಕ್ಷೆಯನ್ನು ಹುಸಿಗೊಳಿಸಬೇಡ. ಇನ್ನು ನಿನಗೆ ನಾನೇ ಈ ವಾಚಾನಾಲಯದ ಪುಸ್ತಕಗಳನ್ನು ಒಂದೊಂದಾಗಿ ಕೊಡುತ್ತ ಹೋಗುತ್ತೇನೆ. ನೀನು ಓದಿ ತಂದು ಸಾರಂಶ ನನಗೆ ತಿಳಿಸುತ್ತ ಹೋಗು. ಈಗ ಈ ಪುಸ್ತಕ ತೆಗೆದುಕೊಂಡು ಹೋಗು. ಇದನ್ನು ಓದಿ ಮುಗಿಸಿ ನನ್ನ ಬಳಿಗೆ ಬಾ; ಅದರಲ್ಲಿ ಏನಿದೆಯೆಂಬುದನ್ನು ನನಗೆ ಹೇಳಿ ಇನ್ನೊಂದು ಪುಸ್ತಕ ಪಡೆದುಕೊಂಡು ಹೋಗು!' ಹೀಗೆಂದು ಹೇಳಿ ನನ್ನ ಕೈಗಳಲ್ಲೊಂದು ಪುಸ್ತಕವಿರಿಸಿದರು. ಅವರ ಹೆಸರು 'ಶಿವಭಕ್ತ ಭದ್ರಾಯು' ಎಂದಿದ್ದಿತು. ಬರೆದವರ ಹೆಸರು ನೆನಪಿಲ್ಲ. ಅದುವರೆಗೆ ಪಠ್ಯಪುಸ್ತಕವನ್ನುಳಿದು ಬೇರಾವ ಪುಸ್ತಕವನ್ನೂ ಓದದಿದ್ದ ನನಗೆ ಅಂದು ಮೈಜುಮ್ಮೆನಿಸುವ ಅನುಭವ ಆ ಪುಸ್ತಕ ಕೈಗೆ ಬಂದಾಗ.

ದ್ಯಾಂಪುರದ ದಾರಿ ಹಿಡಿಯುತ್ತಲೆ ಪುಸ್ತಕ ತೆರೆದೆ. ಓದುತ್ತಲೇ ಮನೆ ಮುಟ್ಟಿದೆ. ಮನೆಯ ಮೂಲೆ ಸೇರಿ ಓದುತ್ತ ಕುಳಿತುಬಿಟ್ಟೆ. ರಾತ್ರಿ ಊಟವಾದ ಮೇಲೂ ಓದುತ್ತಲೇ ಇದ್ದೆ. ಪುಸ್ತಕವನ್ನು ಪೂರ್ಣ ಮುಗಿಸಿಯೇ ಮಲಗಿದೆ. ಕನಸಿನಲ್ಲೆಲ್ಲ ಮುನ್ನಿನ ಸಂಜೆ ನಡೆದ ಘಟನೆಗಳೇ! ಗುರುಗಳು ಆ ಪುಸ್ತಕವನ್ನು ನನ್ನ ಕೈಗಿತ್ತ ಘಟನೆ ಮಾತ್ರ ಮತ್ತೆ ಮತ್ತೆ ಸ್ವಪ್ನಪಟಲದ ಮೇಲೆ ಚಿತ್ರಿತವಾಯಿತು, ಅಂದು ಗುರುಗಳು ನನ್ನ ಕೈಗೆ ಪುಸ್ತಕ ಮಾತ್ರವನ್ನು ಇತ್ತಿರಲಿಲ್ಲ, ನನ್ನ ಭವಿತವ್ಯವನ್ನೇ ನನಗೆ ನೀಡಿದ್ದರು! ಅದು ನನ್ನ ಜೀವನದ ಮಹಾಪರಿವರ್ತನೆಯ ದಿನ.

ಮರುದಿನ ಸಂಜೆ ಬರುವುದನ್ನೇ ಕಾತರತೆಯೊಡನೆ ಕಾದಿದ್ದೆ. ಸಂಜೆಯಾಗುತ್ತಲೇ ಗುರುಗಳ ಬಳಿಗೆ ಹೋಗಿ ಕೊಟ್ಟ ಪುಸ್ತಕವನ್ನು ಮುಟ್ಟಿಸಿ ಬೇರೊಂದು ಪುಸ್ತಕ ಬೇಡಿದೆ. ಓದಿದ ಪುಸ್ತಕದ ಸಾರಾಂಶ ಹೇಳಲು ಮರೆಯಲಿಲ್ಲ. ಸಮಗ್ರ ಪುಸ್ತಕದ ಸಾರಾಂಶವನ್ನು ನಿರರ್ಗಳವಾಗಿ ಹೇಳಿದ್ದೆ. ಗುರುಗಳ ಸಂತೋಷಕ್ಕೆ ಎಲ್ಲೆಯೇ ಇಲ್ಲವಾಯಿತು. ಮತ್ತೊಂದು ಪುಸ್ತಕ ಕೊಟ್ಟರು. ಅದನ್ನು ಅಂದೇ ರಾತ್ರಿ ಮುಗಿಸಿದೆ. ಮರುದಿನ ಮತ್ತೊಂದು ಹೊತ್ತಗೆ ಕೊಟ್ಟರು. ಅದೂ ಒಂದೇ ರಾತ್ರಿಯ ಆಹಾರವಾಯಿತು. ನನ್ನ ಜ್ಞಾನಲಾಲಸೆಯ ಕುಂಭಕರ್ಣ ಎಚ್ಚತ್ತಿದ್ದ; ಅವನಿಗೆ ಆಹಾರ ಹಾಕಿದಷ್ಟೂ ಅವನ ಹಸಿವೆ ಹೆಚ್ಚಾಗತೊಡಗಿತು! ಗುರುಗಳು ಕೊಡುತ್ತಿದ್ದ ಪುಸ್ತಕಗಳು, ತಂದೆಯವರು ತರುತ್ತಿದ್ದ ಪುಸ್ತಕಗಳು, ನಮ್ಮೂರಿನ ಸಾರ್ವಜನಿಕ ವಾಚನಾಲಯದಲ್ಲಿದ್ದ ಪುಸ್ತಕಗಳು ಸಾಲದಾದುವು ನನಗೆ.

ಸಕ್ರಪ್ಪ ರಾಜಣ್ಣರು ಕೈಬಿಡುವಷ್ಟರಲ್ಲಿ ಗೆದ್ಗೇರಿಯ ರಾಘಣ್ಣ, ದೇಸಾಯಿ ಪ್ರಹ್ಲಾದರಾವ್ ಕೂಡಿಕೊಂಡರು ನನ್ನನ್ನು. ನಾವು ಮೂವರು ಹೊಸ ದಾರಿಕಾರರಾದೆವು. ಚೆಂಡೂರು ರಾಘಣ್ಣ, ಮುರಡಿ ಭೀಮಣ್ಣ (ಮುಂದೆ ಇವರು ಆಧ್ಯಾತ್ಮಕ್ಕೆ ಒಲಿದು ಭೀಮಜ್ಜರೆಂದು ಹೆಸರಾದರು) ಇವರಿಬ್ಬರು ವಿದ್ಯಾನಂದ ಗುರುಕುಲ ಸೇರಿದ ಕಾರಣ ನಾವು 'ಪಂಚಪಾಂಡವ'ರಾದೆವು ಊರವರ ದೃಷ್ಟಿಯಲ್ಲಿ. ಇವರಲ್ಲಿ ಗೆದ್ಗೇರಿ ರಾಘಣ್ಣನನ್ನು ಮರೆಯುವುದು ಸಾಧ್ಯವಿಲ್ಲ. ನಮ್ಮೂರ ದೇಸಾಯಿ ರಾಘವೇಂದ್ರರಾಯರ ಮನೆಯಲ್ಲಿದ್ದು ಇವರು ವಿದ್ಯಾಭ್ಯಾಸ ಮಾಡುತ್ತಿದ್ದುದರಿಂದ ನಾನು ನನ್ನ ಮನೆಯಿಂದ ಹೊರಟು ಹೊಸದಾಗಿ ನನಗೆ ಬಾಗಿಲ ತೆರೆದ ದೇಸಾಯಿಯರ ಮನೆಗೆ ಹೋಗುತ್ತಿದ್ದೆ; ಅಲ್ಲಿಂದ ರಾಘಣ್ಣನನ್ನು ಕೂಡಿಕೊಂಡು ಶಾಲೆಗೆ ಹೋಗಿ ಬರುತ್ತಿದ್ದೆ. ದೇಸಾಯಿಯರ ಮಗಳು ಸೀತಮ್ಮ ನಮ್ಮಿಬ್ಬರಿಗೂ ತಂಗಿ, ಅವರ ಮಗ ಸೀನಣ್ಣ ನಮ್ಮಿಬ್ಬರಿಗೂ ತಮ್ಮ ಆದರು. ನನ್ನ ರಾಘಣ್ಣರ ಮೈತ್ರಿ ಕುಕ್ಕನೂರಿನ ಬ್ರಾಹ್ಮಣ ವಲಯಗಳಲ್ಲಿ ಕೆಲವರ ಹುಬ್ಬುಗಳು ಏರುವುದಕ್ಕೆ ಕಾರಣವಾಯಿತು. ಇದನ್ನರಿತು ಇನ್ನೂ ಹತ್ತಿರವಾದ ನನಗೆ ರಾಘಣ್ಣ. ಬೇಕೆಂತಲೇ ಅವರೆದುರು ನನ್ನ ಹೆಗಲ ಮೇಲೆ ತನ್ನ ತೋಳಿರಿಸಿ ಅಡ್ಡಾಡ ತೊಡಗಿದ. ತನ್ನ ಮನೆಯಲ್ಲಿ ನನ್ನೂಟಕ್ಕೆ ಕಾರಣವಾಗುವುದಲ್ಲದೆ ನಮ್ಮ ಮನೆಯಲ್ಲಿ ತಾನೂ ಊಟ ಮಾಡಿ ನಮ್ಮಿಬ್ಬರ ಮೈತ್ರಿ ವರ್ಣಾತೀತವಾದುದೆಂಬುದನ್ನು ದೃಢ ಪಡಿಸಿದ.

## ಬಸವಣ್ಣನವರ ವಚನ ಪ್ರಭಾವ : ಅಸ್ಪೃಶ್ಯತೆಯ ನಿರಾಕರಣೆ

ನಮ್ಮ ರಾಷ್ಟ್ರೀಯ ಶಾಲೆಯಲ್ಲಿ ಗಾಂಧೀಜಿಯವರ ಎಲ್ಲ ಆದರ್ಶಗಳೂ ಆಚರಣೆಯಲ್ಲಿದ್ದವು. ಆದರೆ ಅಸ್ಪೃಶ್ಯತಾ ನಿವಾರಣೆಯ ಸುದ್ದಿಯನ್ನು ಮಾತ್ರ ಎತ್ತುತ್ತಿರಲಿಲ್ಲ-ಗುರು ಪಾ. ಭೀ. ದೇಸಾಯಿಯವರೊಬ್ಬರನ್ನುಳಿದು. ಮುಖ್ಯೋಪಾಧ್ಯಾಯರು ಮೊದಲ್ಗೊಂಡು ಹಿರಿಯ ವಿದ್ಯಾರ್ಥಿಗಳವರೆಗೆ ಎಲ್ಲರೂ ಬೆಳಗಿನ ಜಾವದಲ್ಲಿ ಬಾವಿಯೊಂದರಲ್ಲಿ ಸ್ನಾನ ಮಾಡಿ ದಾರಿಯುದ್ದಕ್ಕೂ 'ಮುಟ್ಟೀ, ಮುಟ್ಟೀ' ಎಂದು ಮನೆಗೆ ಬರುವವರೇ! ನನಗೇಕೋ ಈ ಸನಾತನಕ್ಕೆ ರಾಷ್ಟ್ರೀಯತೆಗಳ ವಿರಸ ದಾಂಪತ್ಯ ವಿಕಾರವಾಗಿ ತೋರುತ್ತಿತ್ತು. ಇದೇ ಸಮಯಕ್ಕೆ ಬಸವಣ್ಣನವರ ವಚನಗಳನ್ನು ಓದುವ ಭಾಗ್ಯ ಲಭಿಸಿತು. ನನ್ನ ಸಂದೇಹಕ್ಕೆ ಸಮಾಧಾನ ಸಿಕ್ಕಿತು. 'ಕರ್ಣದಲಿ ಜನಿಸಿದವರುಂಟೆ ಜಗದೊಳಗೆ'? ಎಂಬ ಬಸವಣ್ಣನ ಪ್ರಶ್ನೆ ಜಾತಿಗೀತಿಗಳ ಎಲ್ಲ ಪ್ರಶ್ನೆಗಳಿಗೆ ಉತ್ತರವಾಗಿ ತೋರಿತು. ಅದುವರೆಗೆ ಬ್ರಾಹ್ಮಣರ ಮನೆಯಲ್ಲಿ ಊಟ ಮಾಡಿದ್ದೆ; ಕುರುಬರ, ಆರೇರರ, ಮುಸಲ್ಮಾನರ ಮನೆಗಳಲ್ಲಿ ಉಂಡಿದ್ದೆ: ಇದನ್ನು ವಿಸ್ತರಿಸಿ ಅಸ್ಪೃಶ್ಯತೆಯ ಭಾವನೆಯೂ ಬಯಲಾಗುವಂತೆ ಹರಿಜನರ



ಕೈಯ ನೀರನ್ನೂ ಕುಡಿದು ಬಿಡಲು ನಿರ್ಧರಿಸಿದೆ. ಆ ನಿರ್ಧಾರವನ್ನು ಕಾರ್ಯಗತಗೊಳಿಸಿಯೂ ಬಿಟ್ಟೆ! ನಮ್ಮ ತಂದೆಯವರು ಪುರಾಣಿಕರಾದರೂ ಪ್ರಗತಿ ಪರ ವಿಚಾರಧಾರೆ ಅವರದು. ಸಂಗನಹಾಳಿನಲ್ಲಿ ಪ್ರಪ್ರಥಮವಾಗಿ ಬಸವ ಜಯಂತಿಯನ್ನು ಪ್ರಾರಂಭಿಸಿದ ಬಸವ ಭಕ್ತರವರು. ತಾತ್ವಿಕವಾಗಿ ಸ್ಪೃಶ್ಯಾಸ್ಪೃಶ್ಯತೆಯ ಭಾವನೆ ಅಧಾರ್ಮಿಕವಾದುದೆಂಬ ನಂಬಿಕೆಯವರವರು. ಆದರೂ ಮಗನ ಈ 'ದುಸ್ಸಾಹಸ' ಅವರನ್ನೂ ಕ್ಷಣ ಕಾಲ ವಿಚಲಿತಗೊಳಿಸಿತು. ಆದರೆ ಬಹುಬೇಗನೆ ಬೆನ್ನು ತಟ್ಟಿ' ಸರಿಯಾದುದನ್ನೇ ಮಾಡಿದೆ'ಯೆಂದು ಧೈರ್ಯ ನೀಡಿದರು.

ಇದೇ ಸುಮಾರಿಗೆ ಅಡೂರಿನ 'ವಿಶ್ವನಾಥ ವಾಚನಾಲಯ' ಅಸ್ತಿತ್ವಕ್ಕೆ ಬಂದಿದ್ದಿತು ಶ್ರೀ ಶಿರೂರು ವೀರಭದ್ರಪ್ಪನವರು ಹಾಗೂ ಅವರ ಸಂಗಡಿಗರ ಪ್ರಯತ್ನದಿಂದ. ಅದರ ವಾರ್ಷಿಕೋತ್ಸವಕ್ಕೆಂದು 'ಕರ್ನಾಟಕ ಗಾಂಧಿ'ಯೆಂದು ಖ್ಯಾತರಾಗಿದ್ದ ಹರ್ಡೇಕರ್ ಮಂಜಪ್ಪನವರು ಆಗಮಿಸಿದರು. ಅವರನ್ನು ಕಂಡಾ ಕ್ಷಣವೇ ಅವರ ಉಜ್ವಲ ವ್ಯಕ್ತಿತ್ವ ನನ್ನ ಮೇಲೆ ಎಂದಿಗೂ ಮಾಸದ ಪ್ರಭಾವ ಮುದ್ರೆಯನ್ನೊತ್ತಿತು. ಅವರ ವಿಶಾಲ ಹೃದಯದಲ್ಲಿ ನನಗೂ ಸ್ಥಳ ಸಿಕ್ಕಿತು. ಮೂರು ದಿನಗಳವರೆಗೆ ಅವರು ಹೋದಲ್ಲೆಲ್ಲ ಅವರನ್ನು ಹಿಂಬಾಲಿಸಿದೆ. 'ತಮ್ಮಾ' ಎಂದೇ ನನ್ನನ್ನವರು ಕರೆಯುತ್ತಿದ್ದರು; 'ಅಣ್ಣನವರು' ಎಂದೇ ಎಲ್ಲರೂ ಅವರನ್ನು ಸಂಬೋಧಿಸುತ್ತಿದ್ದರು. ಹಾಲುಗಲ್ಲಿನ ವಿಗ್ರಹದಂತಿದ್ದ ಅವರ ಧವಳೋಜ್ವಲದೇಹ, ಅದಕ್ಕೊಪ್ಪುವಂತೆ ಒಂದು ಖಾದಿ ಪಂಚೆ, ಒಂದು ಖಾದಿ ಉತ್ತರೀಯ, ಕೈಯಲ್ಲಿ ತಕಲಿ, ನಡುವಿನಲ್ಲಿ ಸಿಕ್ಕಿಸುತ್ತಿದ್ದ ಪೆನ್ನು, ಕೊರಳಿನಲ್ಲಿ ಧರಿಸಿದ ಶ್ರೀಗಂಧದ ಕರಡಿಗೆ, ಹೊಳೆಹೊಳೆವ ಕಣ್ಣುಗಳು, ಸದಾಸಿಸ್ಮಿತವದನ-ಗಾಂಧೀಜಿಯವರನ್ನು ಅದುವರೆಗೂ ಕಂಡಿರದಿದ್ದ ನಮಗೆ ಅವರೇ ಗಾಂಧೀಜಿಯವರ ಪ್ರತಿರೂಪವಾಗಿ ಕಂಡಿದ್ದರೆ ಅಚ್ಚರಿಯೇನಿದೆ ಅದರಲ್ಲಿ?

ಆಗ ನೂರಕ್ಕೆ ನೂರರಷ್ಟು ಖಾದೀ ಧಾರಿಯಾಗಿದ್ದ, ಬಸವ-ಬಾಪೂಜಿಯವರ ಭಕ್ತನಾಗಿದ್ದ ನನ್ನಲ್ಲಿ ಅಣ್ಣನವರಿಗೆ ಅತೀವವಾದ ವಾತ್ಸಲ್ಯ ಮೂಡಿತು. ನಾನು ಧರಿಸಿದ ಖಾದಿ ಪಂಚೆ, ಖಾದಿ ಅಂಗಿಗಳು ನನ್ನ ಅಜ್ಜಿ, ತಾಯಿಯರು ನೂತ ನೂಲಿನಿಂದಲೇ ಕುಕ್ಕನೂರಿನ ನೇಕಾರರು ನೆಯ್ದುವುಗಳೆಂಬುದು ತಿಳಿದಾಗ, ನಾನು ನಿಜವಾದ ಬಸವ ಭಕ್ತನೋಪಾದಿಯಲ್ಲಿ ಹರಿಜನರ ಕೈಯ ನೀರನ್ನು ಕುಡಿದವನೆಂಬುದು ತಿಳಿದಾಗ, ನನ್ನ ಬಗ್ಗೆ ಇನ್ನಷ್ಟು ಅಕ್ಕರೆ ಉಕ್ಕಿತು ಅವರೆದೆಯಲ್ಲಿ. 'ನಿಮ್ಮೂರಿನಲ್ಲಿ ಎಷ್ಟು ರಾಟೆಗಳಿವೆ? ಎಷ್ಟು ಮಹಿಳೆಯರು ನೂಲುತ್ತಾರೆ? ಎಷ್ಟು ಹೊತ್ತು ನೂಲುತ್ತಾರೆ? ಎಷ್ಟು ಸಂಪಾದಿಸುತ್ತಾರೆ?' ಎಂದು ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸಿ ವಿವರಗಳನ್ನು ಸಂಗ್ರಹಿಸಿದರವರು. ಮುಂದೆ ಖಾದಿಯ ಬಗ್ಗೆ ಏಕಮೇವ

ಅಧಿಕೃತ ಗ್ರಂಥವೆನಿಸಿದ 'ಖಾದೀಶಾಸ್ತ್ರ'ವನ್ನೇ ಬರೆದ ಅವರು ಈ ಪ್ರಶ್ನೆಗಳನ್ನು ಕೇಳಿದುದು ಸಹಜವೇ. ಆಗ ಅಂಕುರಿಸಿದ ಅವರ ನನ್ನ ಅನ್ಯೋನ್ಯತೆ ಅವರು ಲಿಂಗೈಕ್ಯರಾಗುವವರೆಗೂ ಮುಂದುವರಿದು ಬಸವಾದಿಪ್ರಮಥರ ಹೃದಯವನ್ನು ಅರಿತುಕೊಳ್ಳುವಲ್ಲಿ, ದೇಶವಿದೇಶಗಳ ವಿವಿಧ ವಿಚಾರಧಾರೆಗಳನ್ನು ತಿಳಿದುಕೊಳ್ಳುವಲ್ಲಿ ಬಹಳ ಸಹಾಯಕವಾಯಿತು.

ತಂದೆಯವರೂ ಮಾವನವರೂ ಚೆನ್ನಕವಿಗಳೂ ಮಹಾಲಿಂಗಯ್ಯನವರೂ ಖಾದೀಧಾರಿಗಳಾದರು ಅಣ್ಣನವರ ಪ್ರಭಾವದಿಂದ. ಆಗ ನಮ್ಮೂರಿನ ಜನರ ಮನಗಳ ಮೇಲೆ ಅತ್ಯಂತ ಪ್ರಭಾವಬೀರಿದ್ದ ಹಾಲಕೆರೆಯ ಅನ್ನದಾನ ಮಹಾಸ್ವಾಮಿಗಳವರೂ, ಕೊಪ್ಪಳ ಗವಿಮಠದ ಮಹಾಸ್ವಾಮಿಗಳವರೂ, ಮುಂಡರಗಿಯ ಅನ್ನದಾನ ಮಹಾಸ್ವಾಮಿಗಳವರೂ ಶುದ್ಧ ಖಾದಿಯ ಕಾಷಾಯಾಂಬರಗಳನ್ನೇ ಧರಿಸುತ್ತಿದ್ದುದರಿಂದ, ವಿದ್ಯಾನಂದ ಗುರುಕುಲ ಖಾದೀ ಸಂದೇಶದ ಕೇಂದ್ರವಾಗಿಯೇ ಕಾರ್ಯ ಮಾಡುತ್ತಿದ್ದುದರಿಂದ ಖಾದೀ ಪ್ರಸಾರ ಸಾಕಷ್ಟು ಆಯಿತು. ಆಗ ಆ ಭಾಗದಲ್ಲಿ. ನಾನೂ ಶಾಲೆಗೆ ಹೋಗುವಾಗ ಬರುವಾಗ ತಕಲಿ ಹಿಡಿದು ನೂಲುತ್ತಿದ್ದೆ. ಪುಸ್ತಕದ ಬದಲಾಗಿ ತಕಲಿ ಬಂದಿತ್ತು ಕೈಗೆ. ಗಳಗನಾಥರ, ಭಿ.ಪ. ಕಾಳೆ ಅವರ, ಬಿ. ವೆಂಕಟಾಚಾರ್ಯರ ಕಾದಂಬರಿಗಳಿಗೆ ಬದಲಾಗಿ 'ಸತ್ಯ ಶೋಧನೆ' 'ಬಸವ ವಚನ' ಕರ್ನಾಟಕ ಗತವೈಭವ' 'ಭಾರತೀಯರ ದೇಶಭಕ್ತಿ' 'ಧರ್ಮ ಸಂಭವ' 'ಕೊಳಲು' 'ಗರಿ' 'ಭರತ ಖಂಡದ ಜೀವಜ್ಯೋತಿಗಳು' ಇತ್ಯಾದಿ ದೇಶಭಕ್ತಿ ಪ್ರೇರಕ, ಕನ್ನಡ ಅಭಿಮಾನೋತ್ತೇಜಕ, ಸಮಾನತಾ ಬೋಧಕ ಗ್ರಂಥಗಳು ಮನಸ್ಸನ್ನಾಳತೊಡಗಿದ್ದುವು.

ತಂದೆಯವರು ಎಷ್ಟೊಂದು ಬಸವಣ್ಣನ ಪ್ರಭಾವಕ್ಕೆ ಒಳಪಟ್ಟಿದ್ದರೆಂದರೆ ಆಗ ನಮ್ಮೂರಲ್ಲಿ ಅವರೇ ಹೇಳಿದ ಪುರಾಣ ಮಂಗಲದ ಸಮಾರಂಭದಲ್ಲಿ ಬಸವಾನುಯಾಯಿಗಳಾಗ ಬಯಸಿ ಲಿಂಗವಂತರಾಗಲಿಚ್ಛಿಸಿದ ನಮ್ಮೂರಿನ ನೂರಾರು ಲಿಂಗಾಯತೇತರಿಗೆ ಲಿಂಗ ಧಾರಣೆ ಮಾಡಿಸಿಬಿಟ್ಟರು. ಇದು ದೊಡ್ಡದೊಂದು ಕೋಲಾಹಲವನ್ನೇ ಎಬ್ಬಿಸಿತು, ಸುತ್ತಲಿನ ಸಂಪ್ರದಾಯನಿಷ್ಠ ಲಿಂಗಾಯತ ಸಮಾಜದಲ್ಲಿ. ತಂದೆಯವರಿಗೆ ಬಹಳ ಬೇಕಾದವರಾಗಿದ್ದ ಕೆಲವರು ಅವರಿಂದ ದೂರ ಸರಿದರು. ನಮ್ಮೂರಿನಲ್ಲೇನೋ ಎಲ್ಲ ಹಳೆಯ ಲಿಂಗಾಯತರೂ ಈ ಹೊಸ ಲಿಂಗವಂತರೊಡನೆ ಭೋಜನ ಮಾಡುತ್ತಿದ್ದರು–ಆದರೆ ಶರೀರ ಸಂಬಂಧ ಬೆಳೆಸಲು ಯಾರೂ ಒಪ್ಪಲಿಲ್ಲ. 'ಉಂಬಲ್ಲಿ ಉಡುವಲ್ಲಿ ಕುಲವಳಿಯಿತ್ತೆಂಬ, ಕೊಂಬಲ್ಲಿ ಕೊಡುವಲ್ಲಿ, ಕುಲವನರಸುವ' ಪ್ರವೃತ್ತಿ ಬಸವಯುಗದಲ್ಲಿದ್ದಂತೆ ಆಗಲೂ ಇದ್ದಿತು, ಈಗಲೂ ಇದೆ, ಇನ್ನಷ್ಟು



ಬಲವಾಗುತ್ತ ನಡೆದಿದೆಯೇ ಹೊರತು ಅದರ ಒಂಟೆ ಹಿಡಿತ, ಕಪಿಮುಷ್ಟಿ ಸಡಿಲುವ ಸೂಚನೆಗಳಾವುವೂ ಕಾಣುತ್ತಿಲ್ಲ.

ತಂದೆಯವರು ಯೋಚನೆಗೊಳಗಾದರು. ಇವರು ಹೊಸದಾಗಿ ಲಿಂಗವಂತರಾಗಿ ತಮ್ಮ ಹಳೆಯ ಜಾತಿಗಳಲ್ಲಿಯೇ ಹೆಣ್ಣು ಗಂಡು ಹುಡುಕಿಕೊಳ್ಳುವುದಾದರೆ ಇವರು ಬಸವ ಭಕ್ತರಾಗಿ ಪ್ರಯೋಜನವೇನು? ಮುಂದಿನ ಮಾರ್ಗವಾವುದೆಂದು ಒಬ್ಬರೇ ಬಹಳ ಯೋಚಿಸಿದರು ತಂದೆಯವರು. ತತ್ತ್ವವನ್ನು ಮಾತಿನಲ್ಲಿ ಒಪ್ಪುವುದು ಎಲೆ ತುಂಬು ಮುರಿಯುವಷ್ಟು ಸುಲಭ; ಆದರೆ ಅದನ್ನು ಕೃತಿಗಿಳಿಸುವುದು ಬೆಟ್ಟ ಕೀಳುವಷ್ಟು ಕಷ್ಟವೆಂಬುದು ಅವರಿಗೆ ಮನವರಿಕೆಯಾಗಿದ್ದಿತು. ತಮ್ಮನ್ನು ನಂಬಿ ಲಿಂಗವಂತರಾದ ಈ ಹೊಸ ಲಿಂಗಾಯತರ ಭವಿತವ್ಯವೇನು? ಹಳ್ಳಿ ಹಳ್ಳಿಗೆ ಇಂಥ ಹೊಸ ಲಿಂಗವಂತರನ್ನು ಹುಟ್ಟಿಸಿ ಅವರವರಲ್ಲಾದರೂ ಅನ್ನೋದಕಗಳಷ್ಟೇ ಅಲ್ಲ, ಶರೀರ ಸಂಬಂಧಗಳೂ ನಡೆಯುವಂತೆ ಮಾಡಬಹುದು. ಆದರೆ ಇದರಿಂದ ಇದ್ದ ಒಳ ಪಂಗಡಗಳ ಪಟ್ಟಿಗೆ ಇನ್ನೊಂದು ಸೇರಿಸಿದಂತಾಗವುದಾಗಲಿ ಬಸವಣ್ಣನ ಕಲ್ಪನೆಯ, ಕನಸಿನ ಸಮಾಜದ ನಿರ್ಮಾಣ ಸಾಧ್ಯವಿಲ್ಲ. ನೂರಾರು ವರ್ಷಗಳಿಂದಲೂ ಲಿಂಗಧಾರಿಗಳಾಗಿದ್ದುಕೊಂಡು, ಬಸವ ಬೋಧಿಸಿದ ಕಾಯಕ ತತ್ತ್ವಕ್ಕೆ ಜೀವಂತ ನಿದರ್ಶನಗಳಾಗಿ, ನಿಂತಿದ್ದ ಲಿಂಗಾಯತ ಅಗಸರು, ಕ್ಷೌರಿಕರು, ಕುಂಬಾರರು, ಅಂಬಿಗರು ಮೊದಲಾದವರನ್ನೇ ತಮಗೆ ಸಮಾನಸ್ಕಂಧರೆಂದು ಸ್ವೀಕರಿಸಿದ ಈ ಜನ ಹೊಸದಾಗಿ ಲಿಂಗಾಯತರಾದವರನ್ನು ಆದರದಿಂದ ಆಲಿಂಗಿಸುವರೆಂದು ನಂಬುವುದು ಹುಚ್ಚುತನ. ಆದುದರಿಂದ ಈ ಕಾರ್ಯಕ್ಕೆ ಇತಿಶ್ರೀ ಹಾಕುವುದೇ ಮೇಲು–ಹೀಗೆ ಹರಿಯಿತವರ ವಿಚಾರಧಾರೆ. ತತ್ಫಲವಾಗಿ ಅವರು ಬಯಸಿದವರಿಗೆಲ್ಲ ಬಸವ ಧರ್ಮವನ್ನು ಧಾರೆಯೆರವ ಹಂಬಲ, ಹಾರೈಕೆಗಳಿಗೆ ಎಳ್ಳುನೀರು ಬಿಟ್ಟರು.

## ಆರ್ಥಿಕ ತೊಂದರೆ

ಏತನ್ಮಧ್ಯೆ ಆರ್ಥಿಕವಾಗಿಯೂ ಸಮಸ್ಯೆಗಳ ಸುಳಿಗೆ ಸಿಕ್ಕಿದ್ದರವರು. ಕೀರ್ತನ, ಪುರಾಣ ಪ್ರವಚನಗಳಿಂದ ಬರುತ್ತಿದ್ದ ಆದಾಯವೇ ಆದಾಯ. ನಾಟಕಗಳು, ಗ್ರಾಮೋಫೋನುಗಳು, ಚಹಾದ ಅಂಗಡಿಗಳು, ಗೋವಾ ಲಾಟರಿ, ಇತ್ಯಾದಿಗಳ ಅಧಿಕಪ್ರಸಾರ ಕಾರಣವಾಗಿ ಜನಗಳಲ್ಲಿ ಪುರಾಣ ಪುಣ್ಯ ಕಥೆಗಳನ್ನು ಕೇಳುವ ಆಸಕ್ತಿ ಕಡಿಮೆಯಾಗುತ್ತ ನಡೆದಿದ್ದಿತು. ಆದ್ದರಿಂದ ತಂದೆಯವರಿಗೆ ಪುರಾಣ ಪ್ರವಚನಕ್ಕಾಗಿ ಕರೆಗಳು ಬರುವುದೇ ಕಡಿಮೆಯಾಯಿತು. ವರ್ಷಕ್ಕೆ ನಾಲ್ಕೈದು ಕರೆಗಳು ಬರುತ್ತಿದ್ದುದು ಎರಡು ಮೂರಕ್ಕಿಳಿಯಿತು. ಆಗ ಅನ್ನದಾನಿಯೂ ಶಾಲೆಗೆ

ಸೇರಿದ್ದ; ಶರಣವ್ವ ಬಸವರಾಜರು ಹುಟ್ಟಿದ್ದರು. ಮೂವರು ಗಂಡು ಮಕ್ಕಳು. ಇಬ್ಬರು ಹೆಣ್ಣು ಮಕ್ಕಳು ಸೇರಿ ಏಳು ಜನ ಆ ಗೇಣು ಮನೆಯಲ್ಲಿ ಕಾಲ ತಳ್ಳುತ್ತಿದ್ದೆವು. ಈ ಏಳು ಜನರ ಹೊಟ್ಟೆ ಬಟ್ಟೆಗಳ ಜೊತೆಗೆ ಬರಹೋಗುವವರ ಆತಿಥ್ಯ, ನಿರ್ಗತಿಕರ ಆರಭಾರ, ನಮ್ಮ ವಿದ್ಯಾಭ್ಯಾಸದ ವೆಚ್ಚ ಇತ್ಯಾದಿಗಳ ವ್ಯವಸ್ಥೆ ಮಾಡಬೇಕಿತ್ತು ಅವರು. ಅತ್ತ ಮಾವನವರಿಗೂ ಕುಳಿತು ಕುಳಿತು ಸಾಕಾಗಿದ್ದಿತು. ಇಬ್ಬರೂ ಕೂಡಿ, "ಶಿವಪುರಾಣ ಸದ್ಬೋಧ ಮಂಡಳಿ"ಯೆಂಬ ಯೋಜನೆಯನ್ನು ಹಮ್ಮಿದರು. ಮಾವನವರು ಪುರಾಣವನ್ನು ಸಂಗೀತಾತ್ಮಕವಾಗಿ ಓದುವವರು; ತಂದೆಯವರು ಪುರಾಣವನ್ನು ರಸಭರಿತವಾಗಿ ಹೇಳುವವರು. ಇಬ್ಬರೂ ಕರೆದಲ್ಲಿಗೆ ಹೋಗಿ ತಿಂಗಳುಗಟ್ಟಳೆ ನಡೆಯುತ್ತಿದ್ದ ಪುರಾಣ ಪ್ರವಚನವನ್ನು ಸಂಕ್ಷಿಪ್ತಗೊಳಿಸಿ ಒಂದು ವಾರದ 'ಪುರಾಣ ಪ್ರವಚನ ಸಪ್ತಾಹ'ವನ್ನು ನಡೆಸುವುದು; ಊರವರು ಕೊಟ್ಟ ಒಟ್ಟು ಹಣವನ್ನು ಇವರಿಬ್ಬರೂ ಇವರಿಬ್ಬರಿಗೆ ಮಾತ್ರ ಗೊತ್ತಿದ್ದ ಪ್ರಮಾಣದಲ್ಲಿ ಹಂಚಿಕೊಂಡು ಹಿಂದಿರುಗುವುದು.

ಬಹಳ ಜನಪ್ರಿಯವಾಯಿತು ಈ ಯೋಜನೆ. ಮೊದಲು ಪುರಾಣ ಪ್ರವಚನ ಏರ್ಪಡಿಸುವುದೆಂದರೆ ಬಹಳ ದುಬಾರಿ ವಿಷಯವಾಗಿದ್ದಿತು. ಒಂದು ಊರವರು ಒಮ್ಮೆ ಆ ಸಾಹಸ ಕೈಕೊಂಡರೆ ಮತ್ತೆ ನಾಲ್ಕೈದು ವರ್ಷ ಪುರಾಣ ಪ್ರವಚನದ ಪ್ರಸ್ತಾಪವನ್ನೇ ಎತ್ತದಷ್ಟು ವೆಚ್ಚಕ್ಕೀಡಾಗಿ ಬಿಡುತ್ತಿದ್ದರು. ಈ ಏಳು ದಿನಗಳ "ಸಂಕ್ಷಿಪ್ತ ಶಿವಪೂಜಾವಿಧಿ"ಯಂಥ ಸಂಕ್ಷಿಪ್ತ ಶಿವಪುರಾಣ ಸಪ್ತಾಹ ಯೋಜನೆಯು ಪುರಾಣ ಪ್ರವಚನವೆಂಬುದು ನುಂಗಲಾರದ ತುತ್ತೆನಿಸಿದ್ದವರಿಗೂ ಸುಲಭ ಸಾಧ್ಯವಾದ ಸಾಹಸ ಕಾರ್ಯವಾಗಿ ಪರಿಣಮಿಸಿತು. ಇವರಿಬ್ಬರ ಜೋಡಿಯೂ ಅಪೂರ್ವ ಜೋಡಿಯೇ ಆಗ. ಪುರಾಣಕ್ಕೆಂದು ಹೋದವರು ಅದೊಂದನ್ನೇ ಮಾಡಿ ಬರುತ್ತಿರಲಿಲ್ಲ. ಪದಗಳನ್ನು ಬರೆದು ಕೊಡುವುದು, ದಾದೇಸಾಹೇಬರ ಗುಳಿಗೆಗಳನ್ನು ಕೊಟ್ಟು ಕಟ್ಟು ಕಾಯಿಲೆ ಕಸಾಲೆಗಳನ್ನು ವಾಸಿಗೊಳಿಸುವುದು, ಅಣ್ಣ ತಮ್ಮಂದಿರ ವ್ಯಾಜ್ಯಗಳನ್ನು, ಗಂಡ ಹೆಂಡಿರ ಜಗಳಗಳನ್ನು ಬಗೆಹರಿಸುವುದು. ಊರ ಶಾಲಾ ಬಾಲಕರಿಗೆ ಬಿಡುವಿನ ಸಮಯದಲ್ಲಿ ಕನ್ನಡ ನಾಡಿನ ಕತೆಗಳನ್ನು ಹೇಳುವುದು–ಹೀಗೆ 'ಮಲ್ಟಿ ಪರ್ಪಸ್' ಸೇವಾ ಸಂಸ್ಥೆಯಾಗಿ ಬಿಟ್ಟಿದ್ದಿತು ಅದು. ಇದು ಆ ಭಾಗದಲ್ಲಿ ಕನ್ನಡವನ್ನು ಉಳಿಸಿ ಬೆಳೆಸುವಲ್ಲಿ ಮಾಡಿದ ಮಹತ್ಕಾರ್ಯ ಉಲ್ಲೇಖನೀಯ.

ಇತ್ತ 'ವಿದ್ಯಾನಂದ ಗುರುಕುಲ'ದ ಖ್ಯಾತಿ ಪಸರಿಸುತ್ತಲೇ ಇದ್ದಿತು. ಅಲ್ಲಿ ನಾನೊಬ್ಬ 'ಎದ್ದು ಕಾಣುವ' ವಿದ್ಯಾರ್ಥಿಯಾಗಿ ಬಿಟ್ಟಿದ್ದೆ–ಗುರು ಪಾ.ಭೀ. ದೇಸಾಯಿಯವರ ಆಶೀರ್ವಾದದಿಂದ. 'ಏಕಾದಶಿ ಸಭೆ'ಗಳಿರಲಿ,



ವಾರ್ಷಿಕೋತ್ಸವಗಳಿರಲಿ, ಪ್ರಬಂಧ ಸ್ಪರ್ಧೆ ವಾಕ್ಪಟುತ್ವ ಸ್ಪರ್ಧೆಗಳಿರಲಿ, ಅಂಗ ಸಾಧನೆಯಿರಲಿ ಎಲ್ಲೆಲ್ಲೂ 'ಎದ್ದು ಕಾಣುವ' ಹಾಗೂ ಮೊದಲ ಸ್ಥಾನ ಬಿಡದ ವಿದ್ಯಾರ್ಥಿ. 'ಲಾಠಿ' ತಿರುಗಿಸುವಲ್ಲಿ ಸಾಟಿ ಇಲ್ಲದದವನಾಗಿದ್ದೆ. ನಾನು ಲಾಠಿ ತಿರುಗಿಸುವಾಗ ಸ್ವಲ್ಪ ದೂರದಿಂದ ಗೆಳೆಯರು ಕಲ್ಲೆಸೆದರೆ ಅದು ನನಗೆ ತಾಕದೆ ಲಾಠಿಗೆ ಬಡಿದು ಸಿಡಿದು ಹೋಗುತ್ತಿತ್ತು. ಒಮ್ಮೆ ಜಿದ್ದಿಗೆ ಬಿದ್ದು ಈ ಸಾಹಸ ಪ್ರಯೋಗ ಮಾಡಿದಾಗ 'ಆಗದವರೊಬ್ಬರು' ತನ್ನ ಶಕ್ತಿಯನ್ನೆಲ್ಲ ಉಪಯೋಗಿಸಿ ಎಸೆದ ಕಲ್ಲು ನನ್ನ ಮೂಗಿನ ಮೂಲಕ್ಕೆ ಬಲವಾಗಿ ಬಡಿದು ಗಾಯವಾಗಿ ಅದು ಮಾಯುವವರೆಗೆ ಮನೆಯಲ್ಲಿರಬೇಕಾಯಿತು. ಗಾಯ ಮಾಯ್ದರೂ ಭ್ರೂಮಧ್ಯದ ಕೆಳಗೆ ಮೂಗಿನ ಮೇಲೆ ಕಚ್ಚು ಕಲೆ ಕಾಯಂ ಆಗಿ ಉಳಿಯಿತು. ಎಲ್ಲಿಯಾದರೂ ನಾನೇ ಸಿದ್ಧಯ್ಯ ಪುರಾಣಿಕನೆಂದು ಗುರುತಿಸಲು 'ಶಾರೀರಿಕಸಾಕ್ಷ್ಯ'ವಾಗಿ ಕಲೆಯೊಂದನ್ನು ತೋರಿಸಬೇಕಾಗಿ ಬಂದಾಗ ನಾನಿದೇ ಕಲೆಯನ್ನು ತೋರಿಸುತ್ತ ಬಂದಿದ್ದೇನೆ. ನನ್ನ ಪಾಲಿಗೆ ಈ ಕಾರ್ಯವನ್ನು ಇಷ್ಟು ಸುಲಭವಾಗಿ ಮಾಡಿಕೊಟ್ಟ ಆ 'ಮಿತ್ರ'ರಿಗೆ ನನ್ನ ವಂದನೆಗಳು ಸಲ್ಲಲೇಬೇಕು.

## ನಾಟಕದ ಗೀಳು

ತಂದೆಯವರಿಂದ ಬಂದಿದ್ದ ನಾಟಕದ ಗೀಳು "ವಿದ್ಯಾನಂದ ಗುರುಕುಲದಲ್ಲಿ" ಇನ್ನೂ ಹೆಚ್ಚಾಯಿತು. ಅಲ್ಲಿ ಯಾವುದೇ ವಿಶೇಷ ಪ್ರಸಂಗ ಬಂದರೂ ಒಂದು ನಾಟಕ ಪ್ರಯೋಗವಿದ್ದೇ ತೀರುತ್ತಿತ್ತು. ಅದು ಸ್ತ್ರೀ ಪಾತ್ರವಿಲ್ಲದ ನಾಟಕವಾಗಿರಬೇಕು–ಅಷ್ಟೇ. ಅದರಲ್ಲಿ ನನಗೊಂದು ಪಾತ್ರವಿದ್ದೇ ಇರುತ್ತಿದ್ದಿತು. ಉದಾ ಹರಣೆಗೆ ವರಕವಿ ಬೇಂದ್ರೆಯವರ "ಉದ್ಧಾರ" ನಾಟಕದಲ್ಲಿ ನಾನು ರುದ್ರಯ್ಯನ ಪಾತ್ರ ವಹಿಸಿದ್ದೆ. ಗುರುಕುಲದ ಸಹಾಯಾರ್ಥವಾಗಿ ಕೊಪ್ಪಳದಲ್ಲಿ ಪಡೆದಿದ್ದ ವಾಮನರಾವ್ ಮಾಸ್ತರ ನಾಟಕ ಕಂಪೆನಿಯ ಉಚಿತ ನಾಟಕ ನೋಡಲು ಗೆಳೆಯರೆಲ್ಲ ಕೊಪ್ಪಳಕ್ಕೆ ಹೋಗಿ ಆ ನಾಟಕ ನೋಡಿ ಬಂದೆವು. ಕೊಪ್ಪಳ ನೋಡಿದ್ದೂ ಮೊದಲನೆಯ ಸಲ; ಅಂಥ "ಭಾರಿ" ನಾಟಕ ನೋಡಿದ್ದೂ ಮೊದಲನೆಯ ಸಲ. ಎರಡೂ ಬೆರಗುಗೊಳಿಸಿದ್ದುವು ನನ್ನನ್ನು. ಕೊಪ್ಪಳದಲ್ಲಿರುವವರು, ವಾಮನ ರಾಯರ ಕಂಪನಿಯ ನಾಟಕಗಳಲ್ಲಿ ಪಾತ್ರವಹಿಸುವವರು ಎಂಥ ಪುಣ್ಯವಂತರು–ಎಂದೆನಿಸಿತ್ತು ಆಗ. ಯಾವ ಊರಲ್ಲಿ ಬಯಲಾಟ ಆಡಿದರೂ ತಪ್ಪದೆ ಹೋಗಿ ನೋಡುತ್ತಿದ್ದ ನಾನು, ತಂದೆಯವರು ಬರೆದ ನಾಟಕಗಳನ್ನು ನೋಡಿ ಅವೇ ಆ ಕಲೆಯ ಕಳಸವೆಂದು ಭಾವಿಸಿದ್ದ ಕಾಲ ಹೋಗಿ, ಶಾಲೆಯ ಉತ್ಸವಗಳಲ್ಲಿ ನಟನಾಗಿ, ಕಂಪೆನಿಯ ನಾಟಕಗಳ ಸೆಳೆತಕ್ಕೆ ಸಿಕ್ಕಿದ ಕಾಲವಾಗ ಬಂದಿತ್ತು. ಗದಗಿಗೆ ಹೋಗಿ "ಗರುಡ' ಕಂಪೆನಿಯ ನಾಟಕಗಳನ್ನು

ನೋಡಿ ಬಂದೆ; "ವಾಣೀವಿಲಾಸ" ಕಂಪೆನಿಯ ನಾಟಕಗಳನ್ನು ನೋಡಿ ಬಂದೆ. ಗದಗಿಗೆ ಹೋಗುವುದು ಸುಲಭವಾಗಿತ್ತು. ನಮ್ಮೂರಿನ ಹತ್ತಿಗೆ ಅದೇ ಮಾರಾಟ ಸ್ಥಳವಾಗಿದ್ದುದರಿಂದ ಸಂಜೆಯ ಊಟ ಮುಗಿಸಿ ಹತ್ತಿ ಅಂಡಿಗೆಗಳನ್ನು ಹೇರಿದ ಬಂಡಿಯಲ್ಲಿ ಅಂಡಿಗೆಗಳ ಮಧ್ಯದ ಇಳುವಿನಲ್ಲಿ ಹಾಸಿಕೊಂಡು ಮಲಗಿ ಬಿಡುತ್ತಿದ್ದೆ. ಬೆಳಗಾಗುವುದರೊಳಗಾಗಿ ಗದಗಿನಲ್ಲಿರುತ್ತಿದ್ದೆ. ಗದಗ ಇನ್ನೂ ನಾಲ್ಕಾರು ಮೈಲಿಗಳಿರುವಾಗಲೇ ಬಂಡಿ ಹೊಡೆಯುವವರು ಕೂಗುತ್ತಿದ್ದರು. "ಅಕೊ, ಗದಗಿನ ಕಲೆಕಟರ್ ದೀಪಗಳು" ಎಂದು. ನಾನು ಎದ್ದು ಅಂಡಿಗೆಗಳ ಮೇಲೆ ನಿಂತು ಅನಿಮಿಷನೇತ್ರನಾಗಿ ಆ ಎಲೆಕ್ಟ್ರಿಕ್–ಕಲೆಕಟರ್–ದೀಪಗಳನ್ನು ನೋಡುತ್ತಿದ್ದೆ. ನೋಡಿ ಮೈಮರೆಯುತ್ತಿದ್ದೆ. ಗದಗ ನೋಡಿದ ಮೇಲೆ ಕೊಪ್ಪಳವೂ, ಗರುಡ–ವಾಣೀವಿಲಾಸ ಕಂಪೆನಿಯ ನಾಟಕಗಳನ್ನು ನೋಡಿದ ಮೇಲೆ ವಾಮನರಾವ್ ಕಂಪೆನಿಯ ನಾಟಕಗಳೂ ಸಪ್ಪೆಯಾಗಿ ತೋರಿದ್ದುವು.

ಆಗ ನನ್ನ ಮೇಲೆ ಎಲ್ಲಕ್ಕಿಂತ ಹೆಚ್ಚಿನ ಪ್ರಭಾವ ಬೀರಿದ ನಾಟಕವೆಂದರೆ 'ಕಿತ್ತೂರ ಕೇಸರಿ" ಇಲ್ಲವೆ "ವೀರರಾಣಿ ಕಿತ್ತೂರ ಚೆನ್ನಮ್ಮ" ಎಂಬ ನಾಟಕ. ದೇಶಾಭಿಮಾನಕ್ಕೇ ಅಗ್ರಪೀಠ ಮೀಸಲಾಗಿದ್ದ ಆ ನಾಟಕದ ಪ್ರಭಾವ ನನ್ನೊಬ್ಬರ ಮೇಲೆಯೇ ಆಗಿದ್ದಿತೆಂದಿಲ್ಲ–ಹಳ್ಳಿಗ ಪಟ್ಟಣಿಗರೆನ್ನದೆ, ಸ್ತ್ರೀ ಪುರುಷರೆನ್ನದೆ ಎಲ್ಲ ಅಬಾಲವೃದ್ಧರ ಮೇಲೆಯೂ ಆಗಿದ್ದಿತು. ಅದು ಆಗ 'ಹುಚ್ಚೆಬ್ಬಿಸಿ ಬಿಟ್ಟಿದ್ದ' ನಾಟಕ. ರಂಗದ ಮೇಲೆ ಕಿತ್ತೂರ ಚೆನ್ನಮ್ಮ ಪ್ರವೇಶಿಸಿದಾಗಲೆಲ್ಲ ಪ್ರಚಂಡ ಕರತಾಡನ; ಥ್ಯಾಕರೆ ಮೊದಲಾದವರು ಪ್ರವೇಶಿಸಿದಾಗ "ಬೂ" ಎನ್ನುವುದು, ಗಹಗಹಿಸಿ ನಗುವುದು ಕುಚೇಷ್ಟೆ ಮಾಡುವುದು, "ಕೆಂಪುಕೋತಿಗಳೇ, ನಿಮ್ಮ ದೇಶಕ್ಕೆ ಹಿಂದಿರುಗಿರಿ" ಎಂದು ಕೂಗುವುದು, "ಭಾರತ ಮಾತಾಕೀ ಜೈ" ಎಂದು ಜಯ ಜಯಕಾರ ಮಾಡುವುದು. ಶತಮಾನಗಳಿಂದ ನಿದ್ರೆ ಹೋಗಿದ್ದ ದೇಶಾಭಿಮಾನ ಒಮ್ಮೆಗೇ ಮೈಕೊಡಹಿ ಮೇಲೆದ್ದು ಗರ್ಜಿಸುವಂತೆ ಮಾಡಿತ್ತು ಆ ನಾಟಕ. ನಾನು ಆಗಾಗ ನಗೆಯಾಡುವುದುಂಟು–ಆಗಸ್ಟ್ 15, 1947ರ ವರೆಗೆ ಈ ದೇಶದಲ್ಲಿ ಎಲ್ಲರೂ ಗುಲಾಮರಾಗಿದ್ದರೆ ನಾನು ಗುಲಾಮನ ಗುಲಾಮನ ಗುಲಾಮನಾಗಿದ್ದೆ–ಎಂದು. ನಿಜಾಮ ಬ್ರಿಟಿಷರ ಗುಲಾಮ, ನಾನು ಸಾಲಾರಜಂಗನ ಗುಲಾಮ; ಆದುದರಿಂದ ನಾನು ಗುಲಾಮನ ಗುಲಾಮನ ಗುಲಾಮ! ಗುಲಾಮಗಿರಿ ಇಷ್ಟು ಘನೀಭೂತವಾಗಿದ್ದ ಭಾಗದಲ್ಲಿಯೂ ದೇಶಾಭಿಮಾನ ಒಮ್ಮೆಗೆ ಜಾಗೃತವಾಗಿ ಹೂಂಕರಿಸುವಂತೆ ಮಾಡಿದ್ದ ಈ ನಾಟಕದ ಬಗ್ಗೆ, ಅದರ ಶ್ರೇಷ್ಠ ನಟನಟಿಯರ ಬಗ್ಗೆ ನನ್ನಲ್ಲಿ ಅಪಾರವಾದ ಅಭಿಮಾನ ಉಕ್ಕಿ ಹರಿದಿದ್ದಿತು. ನನಗೂ ಈ ನಾಟಕದಲ್ಲಿ ಎಂಥದೋ ಒಂದು



ಪಾತ್ರವನ್ನು ಪುಣ್ಯಾತ್ಮರಾರಾದರೂ ಕೊಡಿಸಿದರೆ ಶಾಲೆಗೆ ಶರಣು ಹೊಡೆದು ಈ ನಾಟಕದವರು ಎಲ್ಲೆಲ್ಲಿಗೆ ಹೋಗುವರೋ ಅಲ್ಲಲ್ಲಿಗೆ ಹೋಗಿ ಬಿಡಬೇಕೆನಿಸಿತು ನನಗಾಗ! ಆ ಪುಣ್ಯಾತ್ಮರಾರೂ ದೊರೆಯಲಿಲ್ಲ; ನನ್ನ ಧೈರ್ಯವೂ ನಾನಾಗಿಯೇ ಹೋಗಿ ಅದಕ್ಕಾಗಿ ಪ್ರಯತ್ನಿಸುವಷ್ಟು ನನಗೆ ಬೆಂಬಲವಾಗಿ ನಿಲ್ಲಲಿಲ್ಲ!

ನಾಟಕ ಕಂಪೆನಿಯೇನೋ ಬೇರೆ ದೂರದ ಊರಿಗೆ ಹೊರಟು ಹೋಯಿತು; ಆದರೆ ಬಿಚ್ಚುಗತ್ತಿ ಹಿಡಿದ ಕಿತ್ತೂರ ಚೆನ್ನಮ್ಮ, ರುದ್ರಪ್ಪನಾಯಕರ ಚಿತ್ರಗಳು ಕಣ್ಮರೆಯಾಗಲಿಲ್ಲ. ಇದೇ ತಳಮಳದಲ್ಲಿದ್ದಾಗಲೇ ಇನ್ನೊಂದು ಸುದ್ದಿ ಬಂದಿತು. ಆ ಕಂಪೆನಿಯಲ್ಲಿ ಪ್ರಧಾನ ಪಾತ್ರವೊಂದನ್ನು ವಹಿಸುತ್ತಿದ್ದ ವರನಟ ವೀರಭದ್ರಯ್ಯನವರು ಜಗಳಾಡಿ ಕಂಪೆನಿ ತೊರೆದು ಕುಕ್ಕನೂರಿಗೆ ಬಂದಿದ್ದಾರೆಂಬುದೇ ಆ ಸುದ್ದಿ. ಅವರು ಕೆಲವು ಸ್ಥಳೀಯರನ್ನು ಸೇರಿಸಿಕೊಂಡು ಕಿತ್ತೂರ ಚೆನ್ನಮ್ಮನ ನಾಟಕವನ್ನೇ ಸಜ್ಜುಗೊಳಿಸಿದರು. ಕುಕ್ಕನೂರಿನ ಬಸವಣ್ಣನ ಗುಡಿಯಲ್ಲೊಂದು ಖಾಸಗಿ ಶಾಲೆ–ಏಕ ಶಿಕ್ಷಕ ಶಾಲೆ. ಆ ಶಿಕ್ಷಕರಿಗೆ ಮೀಸೆ ಗಡ್ಡ ಬಂದಿರಲಿಲ್ಲ, ಇಷ್ಟೇ ಅಲ್ಲ, ಸ್ತ್ರೀಯರಂತೆ ಸ್ತನಗಳು ಮೂಡಿದ್ದುವು. ಅವರ ಬಗ್ಗೆ ಏನೇನೋ ಗುಸುಗುಸು ಮಾತುಗಳು! ಅವರ ಪುರುಷ ಜನನೇಂದ್ರಿಯ ಸರಿಯಾಗಿ ರೂಪಿತವಾಗಿರಲಿಲ್ಲ, ಅವರಿಗೆ ಸ್ತ್ರೀ ಪುರುಷ ಜನನೇಂದ್ರಿಯಗಳೆರಡೂ ಇದ್ದುವು–ಇನ್ನೂ ಏನೇನೋ. ಈಗವರು ಇದ್ದಿದ್ದರೆ ಬಹಳ ಸುಲಭವಾಗಿ ಶಸ್ತ್ರಚಿಕಿತ್ಸೆಯಿಂದ ಅವರನ್ನು ಸ್ತ್ರೀಯನ್ನಾಗಿ ಮಾರ್ಪಡಿಸಬಹುದಿತ್ತೇನೋ. ಪುರುಷನನ್ನಾಗಿಯೂ ಪರಿವರ್ತಿಸಬಹುದಿತ್ತು. ಆದರೆ ಅವರಲ್ಲಿ ಪುರುಷಾಂಶಕ್ಕಿಂತ ವನಿತಾಂಶ ಹೆಚ್ಚಿಗಿದ್ದಿತೆಂಬುದಕ್ಕೆ ಅವರ ಸ್ತ್ರೀ ಸಹಜ ಸ್ವರ, ಹಾವ ಭಾವಗಳು ಸಾಕ್ಷಿಯಾಗಿದ್ದುವು. ಅವರನ್ನು ಕಿತ್ತೂರ ಚೆನ್ನಮ್ಮನ ಪಾತ್ರ ವಹಿಸಲು ಆರಿಸಿದುದೇ ವೀರಭದ್ರಯ್ಯನವರು ಮಾಡಿದ ತಪ್ಪು. ರಂಗದ ಮೇಲೆ ಸ್ತ್ರೀ ವೇಷ ಧರಿಸಿ ಬಂದಾಗ ಕಿತ್ತೂರ ಕೇಸರಿಯಲ್ಲಿ ಅಪ್ಸರೆಯಾಗಿ ಕಾಣಿಸಿದರು. ರಂಭೆ, ಶಚಿ, ಊರ್ವಶಿಯರ ಪಾತ್ರಕ್ಕೆ ಹೇಳಿ ಮಾಡಿಸಿದಂತಿದ್ದ ಅವರನ್ನು ಸ್ವಾತಂತ್ರ್ಯ ಸಮರದ ಸೇನಾನಿಯನ್ನಾಗಿ ನಿಲ್ಲಿಸಿದುದು ನಿಜವಾಗಿಯೂ ಆ ಪಾತ್ರಕ್ಕೆ ಮಾಡಿದ ಅಪಚಾರವೆಂದು ನನಗೆನಿಸಿತು. ಆ ನಾಟಕ ಪ್ರಯೋಗವೂ ಯಶಸ್ವಿಯಾಗಲಿಲ್ಲ, ಆ 'ಅರೆವೆಣ್ಣು' ಆಮೇಲೆ ಬಹಳ ದಿನ ಬದುಕಲಿಲ್ಲ, ನಾಟಕ ಕಂಪೆನಿಯೂ ನಿಲ್ಲಲಿಲ್ಲ.

## ಚಿತ್ರಕಲೆ

ಇದೇ ಸುಮಾರಿಗೆ ಕುಕ್ಕನೂರಿನ ಶ್ರೀಮಂತರಲ್ಲೊಬ್ಬರಾದ ಬನ್ನಿಕಟ್ಟೆ ಇಮಾಮ ಸಾಹೇಬರಿಗೆ ನಾಟಕದ ಹುಚ್ಚು ಹಿಡಿಯಿತು. ಅವರ ಮೊದಲನೆಯ ಪ್ರಯೋಗ

‘ಕಬೀರದಾಸ’. ಅವರೇ ಕಬೀರದಾಸರ ಪಾತ್ರವಹಿಸಿ ಉತ್ತಮ ಅಭಿನಯ ನೀಡಿದರು. ಅವರ ತಮ್ಮ ಖಳನಾಯಕನ ಪಾತ್ರವನ್ನು ಚೆನ್ನಾಗಿ ನಿರ್ವಹಿಸಿದರು. ಈ ಪ್ರಯೋಗಕ್ಕೆ ದೊರೆತ ಮನ್ನಣೆಯಿಂದ ಉತ್ತೇಜಿತರಾಗಿ ಅವರು ನಾಟಕ ಕಂಪೆನಿಯೊಂದನ್ನು ಕಾಯಂ ಆಗಿ ನಡೆಸಲು ನಿರ್ಧರಿಸಿದರು. ಅದಕ್ಕೆ ಬೇಕಾಗುವ ಪರದೆಗಳನ್ನು ಬರೆಯಲು ಒಬ್ಬ ನುರಿತ ಚಿತ್ರಕಾರನನ್ನು ಕರೆಸಿದರು. ಕುಕ್ಕನೂರ ಹೊರಗೆ ಎರಡು ಗಿರಿಣಿಗಳು. ಒಂದು ಬೆಳ್ಳುಳ್ಳಿ ಮುದಿ ಬಸಪ್ಪನವರದು, ಇನ್ನೊಂದು ಮಾಗುಂಡಪ್ಪನವರದು. ಬೆಳ್ಳುಳ್ಳಿಯವರ ಗಿರಣಿಯಲ್ಲಿ ಬಯಲು ಬಹಳ. ಅಲ್ಲಿ ಒಂದು ಕಡೆಯಲ್ಲಿ ಪರದೆಗಳ ಚಿತ್ರಣ ಪ್ರಾರಂಭವಾಯಿತು. ನಮ್ಮೆಲ್ಲರಿಗೂ ನಾಟಕದ ನೆನಪು ಹಾರಿ ಪರದೆ ಬರೆವಲ್ಲಿ ನಿಂತು ಬೆರಗುಗಣ್ಣುಗಳಿಂದ ಬರೆವುದನ್ನು ನೋಡುವ ಚಪಲ ಹೆಚ್ಚಿತು. ದಿನಕ್ಕೊಮ್ಮೆಯಾದರೂ ಅಲ್ಲಿ ಹೋಗಿ ನೋಡುತ್ತ ನಿಂತರೇ ಸಮಾಧಾನ. ಆಗಲೇ ಈಗಿನಂತೆ ಕರ್ಜನ್ ಕಟ್ ಮಾಡಿಸುತ್ತಿದ್ದ ಮಹಮ್ಮದೀಯ ಚಿತ್ರಕಾರ ಬಣ್ಣಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದುದನ್ನು, ಅವುಗಳಲ್ಲಿ ವಿವಿಧ ಗಾತ್ರಗಳ ಕುಂಚ ಎದ್ದಿ ಬಿಳಿಯ ಪರದೆಯ ಮೇಲೆ ಎಳೆದ ಸೀಸದ ಗೆರೆಗಳಿಗೆ ಅನುಗುಣವಾಗಿ ಬಣ್ಣ ಬಳಿಯುತ್ತಿದ್ದುದನ್ನು ನೋಡುತ್ತ ನೋಡುತ್ತ ನಾನೂ ಚಿತ್ರಕಾರನಾಗ–ಬೇಕೆಂದೆನಿಸಿತು. ಪಠ್ಯ ಪುಸ್ತಕಗಳಲ್ಲಿದ್ದ ಚಿತ್ರಗಳ ಪ್ರತಿ ಕೃತಿಗಳನ್ನು ಕಾಗದದ ಮೇಲೆ ಇಳಿಸುವ ‘ಸೃಷ್ಟಿಕ್ರಿಯೆ’ ಪ್ರಾರಂಭವಾಯಿತು. ಕಣ್ಣಿಗೆ ಕಂಡದ್ದನ್ನೆಲ್ಲ ಮರ, ಪಕ್ಷಿ, ಪ್ರಾಣಿ, ಮನುಷ್ಯ ಎಲ್ಲವನ್ನೂ ಕಾಗದದ ಮೇಲೆ ಇಳಿಸುವ ಕೆಲಸ ಹಗಲಿರುಳೆನ್ನದೆ ಸಾಗಿತು. ಪರೀಕ್ಷೆಯಲ್ಲಿ ಪ್ರಶ್ನೆಗಳಿಗೆ ಉತ್ತರ ಬರೆವಾಗ ಸಹ ಪ್ರಶ್ನೆ ಸಂಖ್ಯೆಯ ಸುತ್ತಲೂ ಏನಾದರೂ ಚಿತ್ರ ಬರೆದರೇ ಸಮಾಧಾನ. ಆ ಚಿತ್ರಗಾರ ಅಲ್ಲಿ ಆರು ತಿಂಗಳುಗಳನ್ನಾದರೂ ಕಳೆದಿರಬೇಕು. ಒಮ್ಮೆಯೂ ಅವರ ಬಳಿ ಹೋಗಿ ನಾನು ಬರೆದುದನ್ನು ಅವರಿಗೆ ತೋರಿಸುವ, ಇಲ್ಲವೆ ಅವರಿಂದ ಚಿತ್ರಕಲೆಯ ಬಗ್ಗೆ ಏನನ್ನಾದರೂ ಕಲಿತುಕೊಳ್ಳುವ ಎದೆಗಾರಿಕೆ ನನ್ನಲ್ಲಿ ಉದಿಸಲಿಲ್ಲ. ಅವರು ತಮ್ಮ ಕಾರ್ಯ ಮುಗಿಸಿ ಕುಕ್ಕನೂರಿಂದ ಹೊರಟಾಗ ಮಾತ್ರ ತೇವಗೊಂಡಿದ್ದುವು ನನ್ನ ಕಣ್ಣುಗಳು.

ಚಿತ್ರಕಾರ ಹೋದರೂ ಚಿತ್ರಕಲೆಯ ಹುಚ್ಚು ಮಾತ್ರ ಚಿತ್ತಭೂಮಿಯಲ್ಲಿ ಚಿಗುರುತ್ತಲೇ ಇತ್ತು. ನನ್ನ ಮನದ ವ್ಯಾಕುಲವನ್ನು ಅದೆಂತೋ ಅರಿತುಕೊಂಡಿದ್ದ ಗುರು ಪಾ.ಭೀ. ದೇಸಾಯಿಯವರು ನನ್ನ ಮುಂದೆ ಸುಂದರ ನಿಸರ್ಗ ಚಿತ್ರವನ್ನಿರಿಸಿ ‘ಇದನ್ನು ನೋಡಿ ಇದರ ವರ್ಣನೆಯನ್ನು ಬರೆ’ ಎಂದು ಆದೇಶವಿತ್ತರು. ಚಿತ್ರಪ್ರೇಮಿಯ ಕಣ್ಣುಗಳಿಂದ ಅದನ್ನು ನೋಡಿ ಕಾವ್ಯಪ್ರೇಮಿಯ ಕೈಯಿಂದ ಅದರ ವರ್ಣನೆ ಬರೆದೆ. ಗುರುಗಳನ್ನು ಓದಿ ಸಂತುಷ್ಟರಾಗಿ “ಬಣ್ಣಗಳಿಂದ ಬರೆದುದು ಮಾತ್ರ



ಚಿತ್ರವಲ್ಲ, ಹೀಗೆ ಶಬ್ದಗಳಿಂದ ಬರೆದುದೂ ಚಿತ್ರವೇ–ಶಬ್ದಚಿತ್ರ” ಎಂದು ವಿವರಿಸಿದರು. ಆಶ್ಚರ್ಯ! ಒಮ್ಮೆಗೆ ನನ್ನ ಚಿತ್ತಪಕ್ಷಿ ರೇಖಾಚಿತ್ರ ವರ್ಣಚಿತ್ರಗಳಿಂದ ಶಬ್ದಚಿತ್ರ ಪ್ರಪಂಚಕ್ಕೆ ಹಾರಿದ್ದಿತು. ಆಮೇಲೆ ನೋಡಿದುದೆಲ್ಲದರ ಬಗ್ಗೆ ಶಬ್ದಚಿತ್ರ ಸೃಷ್ಟಿಸುವ ಹುಚ್ಚು ಹಿಡಿಯಿತು ಆ ಸಮಯಕ್ಕೆ ಸರಿಯಾಗಿ ನಮ್ಮ ಶಾಲೆಯ ವಾಚನಾಲಯಕ್ಕೆ ಹೊಸಗನ್ನಡ ಸಾಹಿತ್ಯದ ಒಳ್ಳೆಯ ಕೃತಿಗಳೆಲ್ಲ ಬಂದು ಸೇರಿದುವು. ಓದುವ ಹವ್ಯಾಸಕ್ಕೆ ಮತ್ತೆ ರೆಕ್ಕೆ ಮೂಡಿದುವು. ಗರಿಗೆದರಿ ಹೊಸಗನ್ನಡ ಸಾಹಿತ್ಯಾಕಾಶದಲ್ಲಿ ವಿಹರಿಸಿ ಹಿಗ್ಗಿತು ಹವ್ಯಾಸ ಪಕ್ಷಿ! ಶಬ್ದಭಂಡಾರ ಬೆಳೆದಂತೆ ಶಬ್ದ ಚಿತ್ರಗಳ ಸೃಷ್ಟಿಗೂ ಸುಗ್ಗಿ ಬಂದಿತು.

## ಶಾಸನಗಳತ್ತ

ಇನ್ನೊಂದು ಘಟನೆ ಇಲ್ಲಿ ಉಲ್ಲೇಖನೀಯ. ನನಗೆ ನೆನಪಿರುವಂತೆ ಕರ್ನಾಟಕದ ಮೊದಲನೆಯ ಇತಿಹಾಸವನ್ನು ಬರೆದ ದಿವಂಗತ ನಾ.ಶ್ರೀ. ರಾಜಪುರೋಹಿತರು ಶಿಲಾಶಾಸನಗಳ ಶೋಧನೆಗಾಗಿ ಕುಕ್ಕನೂರಿಗೆ ಬಂದು ನಮ್ಮ ಮುಖ್ಯೋಪಾಧ್ಯಾಯರ ಅತಿಥಿಗಳಾಗಿ ಉಳಿದುಕೊಂಡರು. ಅವರ ಸಹಾಯಕ್ಕಾಗಿ ನಡುಕಟ್ಟಿ ನಿಂತರು ಪಾ.ಭೀ. ದೇಸಾಯಿಯವರು. ಕುಕ್ಕನೂರಿನಲ್ಲಿದ್ದ ಎಲ್ಲ ಶಾಸನಗಳ ಪಡಿಯಚ್ಚುಗಳನ್ನು ಪಡೆದುಕೊಂಡರು. ಮಹಾಮಾಯಾ ಮಂದಿರದ ಮಹಾದ್ವಾರದ ಶಿಲೆಯ ಅಡ್ಡ ತೊಲೆಯ ಮೇಲೊಂದು ಶಾಸನವಿರಲೇಬೇಕೆಂದು ತರ್ಕಿಸಿದ ಅವರು ಅದನ್ನೂ ಶೋಧಿಸುವ ಸಂಕಲ್ಪ ಮಾಡಿದರು. ಅಷ್ಟು ಎತ್ತರದ ಏಣಿ ಸಿಕ್ಕಬೇಕೆಲ್ಲಿ? ಅರ್ಧ ಅಂತರದಲ್ಲಿ ಬಿದಿರಿನ ಅಟ್ಟವೊಂದನ್ನು ಕಟ್ಟಿ ಅದರ ಮೇಲೆ ಏಣಿ ಇಟ್ಟು ಏರಿದರು ಇಬ್ಬರೂ. ಮೇಲೆ ಕಾಲಕ್ರಮದಲ್ಲಿ ಹುಟ್ಟಿಕೊಂಡಿದ್ದ ಸುಣ್ಣದ ಸ್ತರವನ್ನು ಕೆದರಿ ತೆಗೆದು ನೋಡಿದಾಗ ನಿಜವಾಯೂ ಶಾಸನವೊಂದು ಅಲ್ಲಿದ್ದುದು ಖಚಿತವಾಯಿತು. ಆನಂದದಲ್ಲಿ ಆರ್ಕಿಮಿಡಿಸನಂತೆ ‘ಯುರೇಕಾ, ಯುರೇಕಾ’ ಎಂದು ಕೂಗಿ ಇಬ್ಬರೂ ಎಲ್ಲಿ ಬಿದ್ದು ಬಿಡುವರೋ ಎಂದು ನಿಂತು ನೋಡುತ್ತಿದ್ದ ನಮಗೆ ಭಯವಾಯಿತು. ಅಷ್ಟು ಆನಂದವಾಗಿದ್ದಿತು ಅವರಿಬ್ಬರಿಗೂ. ಅಲ್ಲಿಗೇ ನಿಲ್ಲಿಸಲಿಲ್ಲ ಈ ಶಾಸನಗಳ ಶೋಧನೆಯನ್ನು, ಸುತ್ತಲಿನ ಹಳ್ಳಿಗಳಿಗೂ ಹೋಗಿ ಬಂದರು.

ಇದರ ಪರಿಣಾಮವಾಗಿ ಪಾ.ಭೀ. ದೇಸಾಯಿಯವರು ಶಾಸನಗಳ ಲಿಪಿಯನ್ನು ಕಲಿತು ಪಡಿಯಚ್ಚುಗಳನ್ನು ತೆಗೆದುಕೊಳ್ಳುವ ತಂತ್ರವನ್ನು ಕರತಲಾಮಲಕ ಮಾಡಿಕೊಂಡು, ಶಾಸನಗಳ ಸಂಪಾದನಾ ವಿಧಾನವನ್ನೂ ತಿಳಿದುಕೊಂಡು, ಸೌಂದರ್ಯ ಶೋಧಕ ಸಾಹಿತ್ಯದಿಂದ ನಾಡಿನ ಇತಿಹಾಸದ ಅನ್ವೇಷಣೆಯ ಕ್ಷೇತ್ರಕ್ಕೆ ಜಿಗಿದಿದ್ದರು. ಅವರ ಕಾವ್ಯಾವಲೋಕನ ಕಡಿಮೆಯಾಗಿ ಶಾಸನಾವಲೋಕನ ಹೆಚ್ಚಿತು.

ಶಾಸನಗಳ ಭಾಷೆ, ವ್ಯಾಕರಣ ಇತ್ಯಾದಿಗಳ ಬಗ್ಗೆ ಆಳವಾದ ಅಧ್ಯಯನ ಪ್ರಾರಂಭವಾಯಿತು. ನನ್ನನ್ನೂ ಆ ಕ್ಷೇತ್ರಕ್ಕೆ ಎಳೆಯಬೇಕೆಂದು ಬಯಸಿದರು. ಆದರೆ ನನ್ನ ದೊಡ್ಡ ದೌರ್ಬಲ್ಯವೆಂದರೆ ತಾರೀಖು, ಇಸ್ವಿ ಇತ್ಯಾದಿಗಳನ್ನು ನೆನಪಿಡುವುದು ನನಗೆ ಸಾಧ್ಯವೇ ಇರಲಿಲ್ಲ. ಇತಿಹಾಸ ಓದಿ ಅದನ್ನು ಯಾವ ಅಡತಡೆಯಿಲ್ಲದೆ ಪುನರುಚ್ಚರಿಸುತ್ತಿದ್ದೆ, ಆದರೆ ದಿನಾಂಕ ಇಸ್ವಿ ಇತ್ಯಾದಿಗಳನ್ನು ಕೇಳಿದರೆ ಮಂಕಾಗಿ ಬಿಡುತ್ತಿದ್ದೆ. ಇತಿಹಾಸದಲ್ಲಿ ಕಡಿಮೆ ಅಂಕಗಳು ಬಂದರೆ ಭೂಗೋಲದಲ್ಲಿ ದೊರೆಯುತ್ತಿದ್ದ ಹೆಚ್ಚಿನ ಅಂಕಗಳಿಂದ ಭರ್ತಿ ಮಾಡಿಕೊಳ್ಳುತ್ತಿದ್ದೆ. ಇದೇ ದೌರ್ಬಲ್ಯ ನಾನು ಒಂದು ಸಲ ಎಲ್‌ಎಲ್.ಬಿ. ಪರೀಕ್ಷೆಯಲ್ಲಿ ಫೇಲಾಗಲು ಕಾರಣವಾಯಿತು. ಇದೇ ದೌರ್ಬಲ್ಯ ನಾನು ಅಧಿಕಾರಿಯಾದ ಮೇಲೂ ಕಾಡಿತು. ಕಾನೂನುಗಳ, ನಿಯಮಾವಳಿಗಳ, ಸುತ್ತೋಲೆಗಳ ಸಾರಾಂಶವೆಲ್ಲ ನಾಲಗೆಯ ತುದಿಯ ಮೇಲೆ ಆದರೆ ಕಾನೂನಿನ ಪರಿಚ್ಛೇದ ನಂಬರು, ಪ್ರಸ್ತುತ ನಿಯಮದ ನಂಬರು, ಸುತ್ತೋಲೆಯ ನಂಬರುಗಳನ್ನು ನೆನಪಿಡಲಿಕ್ಕೆ ಸಾಧ್ಯವೇ ಆಗಲಿಲ್ಲ. ನೆನಪಿಡುವವರು ಕಾರು ನಂಬರು, ದೂರವಾಣಿ ನಂಬರು, ಮನೆ ನಂಬರು–ಇನ್ನೂ ಯಾವ ಯಾವುವೋ ನಂಬರುಗಳನ್ನು ನೆನಪಿಡುತ್ತಾರೆ. ಆದರೆ ನಾನು ಮಾತ್ರ circular No. so and so, dated so and so ಎಂದು ಒಮ್ಮೆಯೂ ಧೈರ್ಯವಾಗಿ ಹೇಳಿದುದಿಲ್ಲ. ಈ ಕ್ಷಣ ನನ್ನ ಕಾರು ನಂಬರನ್ನು ಯಾರಾದರೂ ಕೇಳಿದರೆ ಹೇಳಬಲ್ಲೆನೆಂಬ ಆತ್ಮ ವಿಶ್ವಾಸ ನನಗಿಲ್ಲ. ಇಂಥವನು ಇತಿಹಾಸ ಸಂಶೋಧಕನಾಗುವುದು ಹೇಗೆ?

ನನ್ನ ಗುರುಗಳು ಇತಿಹಾಸ ಸಂಶೋಧಕರಾದುದರಿಂದ ನನಗಾದ ಒಂದು ಪರಮ ಪ್ರಯೋಜನವನ್ನು ಇಲ್ಲಿ ನೆನೆಯಲೇಬೇಕು. ಅದುವರೆಗೆ ಪ್ರಾಚೀನ ಕಾವ್ಯಗಳಿಂದ, ವಚನ ದೇವರನಾಮಗಳಿಂದ, ಜಾನಪದ ಸಾಹಿತ್ಯದಿಂದ ತಾವೇ ಮೆಚ್ಚಿ ಆರಿಸಿದ ಭಾಗಗಳನ್ನು ನಮಗೆ ಅವರು ಹೇಳಿಕೊಡುತ್ತಿದ್ದರು–ಪಠ್ಯೇತರ ವ್ಯಾಸಂಗದ ಅಂಗವಾಗಿ. ಶಾಸನ ಶೋಧನೆ, ಇತಿಹಾಸ ಸಂಶೋಧನೆಗಳು ಅವರ ಮನಸ್ಸನ್ನು ಸೆರೆಹಿಡಿದ ಮೇಲೆ ಶಾಸನಗಳಿಂದ ಆಯ್ದ ಕಾವ್ಯಮಯ ಭಾಗಗಳನ್ನೂ ನಮಗೆ ಕಲಿಸತೊಡಗಿದರು. ಅವುಗಳ ರಮಣೀಯತೆಗೆ ಮನಸೋತೆ ನಾನು. ಉದಾಹರಣೆಗಾಗಿ ಕುಕ್ಕನೂರಿನ ವರ್ಣನೆಯನ್ನೇ ತೆಗೆದುಕೊಳ್ಳಬಹುದು. 'ಸಾರ ನಾಲ್ವತ್ತೆಂಟುಂ ಕೇರಿಗಳಿಂ ಬಳಸಿ ಬೆಳೆದ ಬಾಳೆಯ ಬನದಿಂ । ನಾರಂಗದ ತನಿ ವಣ್ಣಗಳಿಂ । ತೋರಂತಿರೆ ಕುಕ್ಕನೂರ್' ಚೆಲುವಾಗಿ ಎಸೆದಿದ್ದತಂತೆ ಆ ನಾಲ್ವತ್ತೆಂಟು ಕೇರಿಗಳೆಲ್ಲಿ? ಅಲ್ಲಲ್ಲಿ ಬಾಳೆ ಉಳಿದಿದೆಯಾದರೂ ಆ ನಾರಂಗದ ತನಿವಣ್ಣಗಳೆಲ್ಲಿ? ಎಂದು ಅರಸಿ ಬಳಲಿದುದುಂಟು ನಾನು.



ಹೀಗೆ ಏಳನೆಯ ತರಗತಿ ಮುಗಿವಹೊತ್ತಿಗೆ ಈ ಗುರುಪುಂಗವರ ಪ್ರಭಾವದಿಂದ ಚಂಪೂ ಕಾವ್ಯಗಳಿಂದ ಜಾನಪದ ಸಾಹಿತ್ಯದವರೆಗೆ, ವಚನ, ರಗಳೆ ದೇವರನಾಮ ತ್ರಿಪದಿಗಳಿಂದ ಶಿಲಾಶಾಸನಗಳವರೆಗೆ, ಕನ್ನಡ ಸಾಹಿತ್ಯದ ಅನೇಕ ಸಾರವತ್ತಾದ ಭಾಗಗಳನ್ನು ನನ್ನವನ್ನಾಗಿ ಮಾಡಿಕೊಂಡಿದ್ದೆ. ಮನೆಯಲ್ಲಿ ತಂದೆಯವರು ಬಾಯಿ ಪಾಠ ಮಾಡಿಸಿದ್ದ ಕರ್ನಾಟಕ ಶಬ್ದಮಂಜರಿ, ಅಮರಕೋಶ ಇತ್ಯಾದಿಗಳಿಂದ ಶಬ್ದ ಸಮೃದ್ಧಿ ನನ್ನದಾಗಿತ್ತು; ಚೆನ್ನಕವಿಗಳವರ ಮನೆಯಲ್ಲಿ ಮುಂದುವರಿದಿದ್ದ ಚರ್ಚಾ ಕೂಟಗಳಲ್ಲಿ ಭಾಗವಹಿಸಿ ಗಹನ ವಿಷಯಗಳನ್ನು ತಿಳಿದುಕೊಳ್ಳುವ ಶಕ್ತಿ ಬಂದಿರದಿದ್ದರೂ ಅವುಗಳಲ್ಲಿ ಆಸಕ್ತಿ ಅಂಕುರಿಸಿತ್ತು. ಇಷ್ಟೊಂದು ವಯಸ್ಸಿಗೆ ಮೀರಿದ ಭಾರವನ್ನು ಮಿದುಳು ಮನಗಳ ಮೇಲೆ ಹೇರಿದ್ದರೂ ಮೈ ಗಟ್ಟಿಯಾಗಿಯೇ ಇತ್ತು. ಯಾಕೆಂದರೆ ಬೆಣ್ಣೆ ರೊಟ್ಟಿಗಳನ್ನು ತಿಂದು. ಹಾಲು ಕುಡಿದು ಬೆಳೆದಿದ್ದ ಮೈ; ಮಲ್ಲಕಂಬ, ಲಾಠಿ, ಲೇಝಿಮ್, ಸಿಂಗಲ್ ಬಾರ್, ಡಬಲ್ ಬಾರ್, ಡ್ರಿಲ್, ಸೂರ್ಯನಮಸ್ಕಾರ, ಯೋಗಾಸನಗಳಿಂದ ಶಕ್ತವಾಗಿದ್ದ ಮೈ, ನನ್ನೂರಿನ ಬೇಸಾಯ ಮಾಡುತ್ತಿದ್ದ ನನ್ನೋರಗೆಯವರೂ ನನ್ನ ಹುರಿಕಟ್ಟಾದ ಮೈಯನ್ನು ನೋಡಿ ನನ್ನ ತಂಟೆಗೆ ಬರುತ್ತಿರಲಿಲ್ಲ. ಊರಲ್ಲೆಲ್ಲ ನಾನು ಹಲ್ಲಿನಿಂದ ತುಂಬಿದ ಕೊಡ ಎತ್ತಿದ, ಒಂದೇ ಕೈಯಿಂದ ತುಂಬಿದ ಕೊಡ ಜಗ್ಗಿದ, ಗರಡಿಯ ಮನೆಯಲ್ಲಿಯೂ ಗಟ್ಟಿತನ ತೋರಿದ ಸುದ್ದಿಗಳು ಹಬ್ಬಿದ್ದವು. ನನ್ನ ದೇಹ ಬಲದ ಬಗ್ಗೆ ನನಗೇ ಹಮ್ಮು!

ಹಮ್ಮು ಯಾವುದರ ಬಗ್ಗೆ ಇದ್ದರೂ ಒಳ್ಳೆಯದಲ್ಲವೆಂಬುದನ್ನು ತೋರಲೋ ಎಂಬಂತೆ ಒಂದು ವ್ಯಥೆಯ ಘಟನೆ ಘಟಿಸಿತು ಈ ಹಂತದಲ್ಲಿ. ಏಳನೆಯ ತರಗತಿಯದು ಸಾರ್ವಜನಿಕ ಪರೀಕ್ಷೆ ಆಗ 'ಮಿಡಲ್' ಪರೀಕ್ಷೆಯೆಂದು ಕರೆಸಿಕೊಳ್ಳುತ್ತಿದ್ದ ಅದನ್ನು ಪಾಸಾದರೆ ಚಿಕ್ಕ ಪುಟ್ಟ ಚಾಕರಿಗಳು ಸಿಕ್ಕುತ್ತಿದ್ದ ಕಾಲವದು. ಆದುದರಿಂದ ಅದಕ್ಕಾಗಿ ಸಾರ್ವಜನಿಕ ಪರೀಕ್ಷೆ ನಡೆಯುತ್ತಿದ್ದಿತು. ಕೊಪ್ಪಳವೇ ಅತೀ ಸಮೀಪದ ಪರೀಕ್ಷಾ ಕೇಂದ್ರವದಕ್ಕೆ. ಅಲ್ಲಿಗೆ ತಮ್ಮ ವಿದ್ಯಾರ್ಥಿಗಳನ್ನು ಪರೀಕ್ಷೆಗಾಗಿ ಕಳಿಸುವ ಮೊದಲು ತಮ್ಮ ವಿದ್ಯಾಲಯದಲ್ಲಿಯೇ 'ಟೆಸ್ಟ್' ಒಂದನ್ನು ನಡೆಸುತ್ತಿದ್ದರು ನಮ್ಮ ಮುಖ್ಯೋಪಾಧ್ಯಾಯರು, ಕೊಪ್ಪಳಕ್ಕೆ ಕಳಿಸಿದರೆ ಪಾಸಾಗಬಲ್ಲವರಾರು, ಫೇಲಾಗಬಹುದಾದವರಾರು–ಎಂಬುದನ್ನು ತಿಳಿದುಕೊಳ್ಳುವುದೇ ಈ ಟೆಸ್ಟಿನ ಉದ್ದೇಶವಾಗಿರುತ್ತಿತ್ತು. 'ಟೆಸ್ಟ್' ಎಂದು ಕರೆದರೂ ಇದು ಪೂರ್ಣ ಸ್ವರೂಪದ ಪರೀಕ್ಷೆಯೇ ಆಗಿರುತ್ತಿದ್ದಿತು. ಈ ಪರೀಕ್ಷೆಗಾಗಿ ಬಹಳ ಸಿದ್ಧತೆ ಮಾಡಿದೆ ನಾನು. ಪರೀಕ್ಷೆಯನ್ನೂ ಕೊಟ್ಟೆ, ಕೊನೆಯ ಪತ್ರಿಕೆಯನ್ನು ಕೊಟ್ಟು ಬಂದು ಹಾಸಿಗೆ ಹಿಡಿದೆ! ಪರೀಕ್ಷೆಯ ಫಲಿತಾಂಶ ಹೊರಬಿದ್ದಿತು. ಎಲ್ಲ ವಿಷಯಗಳಲ್ಲಿಯೂ ನಾನೇ ಪ್ರಥಮ

ಸ್ಥಾನ ಪಡೆದಿದ್ದೆ. ನನ್ನ ಕಾಯಿಲೆಯ ಸುದ್ದಿ ಕೇಳಿ ಮಮ್ಮಲ ಮರುಗಿದರು, ಮುಖ್ಯೋಪಾಧ್ಯಾಯರು, ಉಪಮುಖ್ಯಾಪಾಧ್ಯಾಯರು. ಇಬ್ಬರೂ ಉಳಿದ ಶಿಕ್ಷಕರನ್ನೊಡಗೊಂಡ ದ್ಯಾಂಪುರಕ್ಕೆ ಧಾವಿಸಿದರು. ನಮ್ಮ ಮನೆಗೇ ಬಂದು ನನ್ನ ಮೈದಡವಿ ಬೇಗ ಗುಣವಾಗಲೆಂದು ಹರಸಿದರು. ಆ ಅಸೀಮ ಶಿಷ್ಯವಾತ್ಸಲ್ಯವನ್ನು ಕಂಡು ನಾನು ಗದ್ಗದಿತನಾದೆ. ಬಾಯಿಂದ ಮಾತುಗಳೇ ಹೊರಡಲಿಲ್ಲ. ಎದ್ದು ನಮಸ್ಕರಿಸಲು ಯತ್ನಿಸಿದ ನನ್ನನ್ನು ಏಳಗೊಡದೆ ಮತ್ತೆ ಮತ್ತೆ ಹರಸಿ, ನನ್ನ ತಂದೆ ತಾಯಿಗಳಿಗೆ ಧೈರ್ಯ ಹೇಳಿ ಹೊರಟು ಹೋದರು. ಕೊಪ್ಪಳಕ್ಕೆ ಹೋಗಬೇಕಾದ ದಿನ ಬರುವಷ್ಟರಲ್ಲಿ ನಾನು ನೆಟ್ಟಗಾಗುವೆನೆಂಬ ನಂಬಿಕೆಯೊಡನೆಯೇ ಹೋದರಂತೆ.

ಆದರೆ ಕೊಪ್ಪಳಕ್ಕೆ ಹೋಗುವ ದಿನ ಬಂದರೂ ನನಗೆ ಗುಣವಾಗಲಿಲ್ಲ. ಮುಖ್ಯೋಪಾಧ್ಯಾಯರ ಧೈರ್ಯವೇ ಧೈರ್ಯ: ಕೊಪ್ಪಳಕ್ಕೆ ಯಾರನ್ನೂ ಕಳಿಸುವುದು ಬೇಡ–ಟೆಸ್ಟ್ ಫಲಿತಾಂಶವನ್ನೇ ಮೇಲಿನವರು ಒಪ್ಪಿ ಪ್ರಮಾಣ ಪತ್ರ ಕೊಡುವಂತೆ ಮಾಡುತ್ತೇನೆ, ಎಂದು ಸಾರಿ ಬಿಟ್ಟರು! ನನ್ನೊಬ್ಬನಿಗಾಗಿ ಇಂಥದೊಂದು ಅಸಾಮಾನ್ಯವಾದ ನಿರ್ಧಾರ ಕೈಕೊಂಡ ಅವರ ಬಗ್ಗೆ ನನ್ನ ಗೌರವ ಬಾನೆತ್ತರಕ್ಕೆ ಬೆಳೆಯಿತು. ತಮ್ಮ ಪ್ರತಿಜ್ಞೆಯ ಪ್ರಕಾರ ಅವರು ಟೆಸ್ಟ್ ಫಲಿತಾಂಶಕ್ಕೆ ಮೇಲಿನವರ ಅಂಗೀಕೃತಿಯ ಮುದ್ರೆಯನ್ನು ತಂದೇ ಬಿಟ್ಟರು! ಆಗ ಗುರುಕುಲಕ್ಕೆ ಗುರುಕುಲವೇ ಗುರುಗಳ ಜಯಕಾರ ಮಾಡಿತು. ಅಷ್ಟರಲ್ಲಿ ನನಗೆ ಜಾಡ್ಯ ವಿಮುಕ್ತಿಯೂ ದೊರೆತಿದ್ದಿತು.

## ದೇಶದ ಎರಡು ಪುಪ್ಫುಸಗಳು: ದೇಶಾಭಿಮಾನ ಮತ್ತು ಧರ್ಮ

ನಿರ್ಗಮನ ಪತ್ರಿಕೆ ದೊರೆತಾಗ ಎಲ್ಲ ವಿಷಯಗಳಲ್ಲಿಯೂ ನನಗೆ ದೊರೆದ್ದ ಅಂಕಗಳನ್ನು ನೋಡಿ ನನ್ನ ಕಣ್ಣುಗಳನ್ನು ನಾನೇ ನಂಬದಾದೆ! 'ಗುರುಕುಲ'ಕ್ಕೆ ಹೋಗಿ ಮೊದಲು ಎಲ್ಲ ಶಿಕ್ಷಕರಿಗೆ ನನ್ನ ಕೃತಜ್ಞತೆಯ ಕಾಣಿಕೆಯನ್ನು ಸಲ್ಲಿಸಿ, ಗುರು ಪಾ.ಭೀ. ದೇಸಾಯಿಯವರ ಬಳಿಗೆ ಹೋದೆ. ಅವರಿಗೆ ಅಂದು ಹೆಮ್ಮೆಯ ದಿನ. ನನ್ನ ತಂದೆಯವರಿಗೆ ಮಾತುಕೊಟ್ಟಂತೆ ನನ್ನನ್ನು ಕಟೆದು ಮೂರ್ತಿಯನ್ನಾಗಿ ಮಾಡುವಲ್ಲಿ ಅವರಿಗೆ ಸಂಪೂರ್ಣ ಯಶಸ್ಸು ದೊರೆತುದನ್ನು ನೆನೆದು ಅವರು ಹಿರಿ ಹಿರಿ ಹಿಗ್ಗಿದ್ದ ಹೆಮ್ಮೆಯ ದಿನ. ಬಹಳ ಹೊತ್ತು ಮಾತನಾಡಿ ಬಹಳ ಹೊಸ ವಿಷಯಗಳನ್ನು ಹೇಳಿಕೊಟ್ಟು 'ಮುಂದೆ ಓದು; ಇಲ್ಲಿಗೇ ನಿಲ್ಲಿಸಬೇಡ!" ಎಂದು ಹುರುದುಂಬಿಸಿ ಕಳಿಸಿದರು. ಕೊನೆಗೆ ಮುಖ್ಯೋಪಾಧ್ಯಾಯರ ಬಳಿಗೆ ಹೋದೆ. ನನಗಾಗಿ ಅವರು ಪಟ್ಟ ಕಷ್ಟವನ್ನು ನೆನೆದು ನನ್ನ ಕಣ್ಣು ಕಂಬನಿದುಂಬಿದವು; ಕಂಠಬಿಗಿದು ಬಂದಿದ್ದಿತು. ಅಂಜುತ್ತ ಅಂಜುತ್ತ ಹೇಳಿದೆ: "ಒಂದು ವಿಷಯವನ್ನು ಇನ್ನು ನಾನು ಬಚ್ಚಿಟ್ಟುಕೊಳ್ಳಲಾರೆ ಸರ್, ಇಂದು ತಮ್ಮೆದುರು ಬಿಚ್ಚಿಟ್ಟು ಹೋಗುತ್ತೇನೆ"



ಎಂದೆ. "ಏನದು? ನಿರ್ಭಯವಾಗಿ ಹೇಳು!" ಎಂದರು. "ತಮ್ಮ ತೀವ್ರ ಸ್ವರೂಪದ ಮತ ಶ್ರದ್ಧೆಯನ್ನು ನೋಡಿ ತಮ್ಮ ರಾಷ್ಟ್ರೀಯತೆಯನ್ನು ಆಗಾಗ ಶಂಕಿಸಿದ್ದೆ ಸರ್! ಈಗ ನನ್ನ ತಪ್ಪು ನನಗೆ ತಿಳಿದಿದೆ. ದಯವಿಟ್ಟು ಕ್ಷಮಿಸಿರಿ!" ಎಂದು ಬಾಗಿ ಬೇಡಿಕೊಂಡೆ. ಮೇಲೆತ್ತಿ ಸಂತೈಸುವ ಸ್ವರದಲ್ಲಿ ನುಡಿದರವರು: "ನೀನೊಬ್ಬನಲ್ಲ, ಅನೇಕರು ಈ ಬಗ್ಗೆ ತಪ್ಪು ಕಲ್ಪನೆಯುಳ್ಳವರಾಗಿದ್ದಾರೆ ಸಿದ್ದಣ್ಣ. ಕಿವಿಗೊಟ್ಟು ಕೇಳು ನಮ್ಮ ಈ ದೇಹದಲ್ಲಿ ಎರಡು ಪುಪ್ಫುಸಗಳಿವೆಯಷ್ಟೆ? ಅವೆರಡೂ ಸರಿಯಿದ್ದಾಗ ಮಾತ್ರ ಶರೀರ ಸ್ವಾಸ್ಥ್ಯ ಸಂಪೂರ್ಣ, ಅವೆರಡರಲ್ಲಿ ಒಂದು ಕೆಟ್ಟರೂ ಸಂಪೂರ್ಣ ದೇಹಕ್ಕೆ ಬಾಧೆ, ಅಂತೆಯೇ ರಾಷ್ಟ್ರಪುರುಷನಿಗೂ ಎರಡು ಪುಪ್ಫುಸಗಳಿವೆ; ಒಂದು ದೇಶಾಭಿಮಾನ. ಇನ್ನೊಂದು ಧರ್ಮ. ದೇಶವೇ ಇಲ್ಲದಿದ್ದರೆ ಧರ್ಮವೆಲ್ಲಿ? ಧರ್ಮವೇ ಇಲ್ಲವಾದರೆ ದೇಶವಿದ್ದೂ ಏನು ಪ್ರಯೋಜನ? ಇಲ್ಲಿ ಧರ್ಮವೆಂಬ ಶಬ್ದವನ್ನು ಬಹಳ ವಿಶಾಲವಾದ ಅರ್ಥದಲ್ಲಿ ಬಳಸುತ್ತಿದ್ದೇನೆ. 'ಧಾರಣಾತ್ ಧರ್ಮ'ವೆಂದು ಹೇಳಿದೆ. ಯಾವುದು ನಮ್ಮನ್ನು ವೈಯಕ್ತಿಕವಾಗಿ, ಸಾಮೂಹಿಕವಾಗಿ ಎತ್ತಿ ಹಿಡಿಯುವುದೋ ಅದೇ ಧರ್ಮ, ಧರ್ಮ ಪರಾಙ್ಮುಖನಾದವನಿಗೆ ನೀತಿಯ ನೆಲೆಗಟ್ಟು ಭದ್ರವಾಗಿರಲಾರದು, ಧರ್ಮಬೇಡ, ನೀತಿ ಸಾಕು–ಎನ್ನುವವರಿದ್ದಾರೆ. ಆದರೆ ಯಾವುದು ನೀತಿ ಯಾವುದು ಅನೀತಿ–ಎಂಬುದನ್ನು ನಿರ್ಣಯಿಸುವ ಧರ್ಮವೇ ಇಲ್ಲವಾದರೆ ನೀತಿ ಎಷ್ಟು ದಿನ ನಿಂತೀತು? ಆದುದರಿಂದ ನೀನು ದೇಶ–ಧರ್ಮಇವುಗಳಲ್ಲಿ ಯಾವುದನ್ನೂ ಬಿಡಬೇಡ. ಮತಾಚಾರಗಳು ಬೇರೆ ಬೇರೆ ಇದ್ದರೂ ಧರ್ಮ ಒಂದೇ, ಎಲ್ಲರೂ ತಂತಮ್ಮ ಮತಗಳಂತೆ ನಡೆಯಲಿ; ಆದರೆ ಮತಕ್ಕಿಂತ ಧರ್ಮ ದೊಡ್ಡದೆಂಬುದನ್ನು ಮರೆಯದಿರಲಿ. ನನ್ನ ಮಟ್ಟಿಗೆ ಹೇಳುವುದಾದರೆ ನಾನು ನನ್ನ ಹಣೆಗೆ ನಾಮವನ್ನಿಟ್ಟುಕೊಂಡಾಗ ಎಷ್ಟು ಸಂತೋಷವಾಗುವುದೋ ಅಷ್ಟೇ ನಿನ್ನ ಹಣೆಯ ಮೇಲೆ ಶ್ರೀವಿಭೂತಿಯನ್ನು ಕಂಡಾಗ ಆಗುತ್ತದೆ. ಯಾಕೆ? ಇಬ್ಬರೂ ನಮ್ಮ ನಮ್ಮ ಮತಾಚಾರಗಳಲ್ಲಿ ನಿರತರಾಗಿ ಧರ್ಮವೊಂದರ ಪಾಲನೆಗೆ ಸಜ್ಜಾಗುತ್ತಿದ್ದೇವೆ ಹೋಗು. ನಮ್ಮ ಶಾಲೆಗೆ ಕೀರ್ತಿ ತಂದಿರುವ ನೀನು ಇನ್ನೂ ಮುಂದೆ ಓದಿ ಇನ್ನೂ ಹೆಚ್ಚಿನ ಕೀರ್ತಿ ಸಂಪಾದಿಸು. ಎಲ್ಲಿದ್ದರೂ ನಿನ್ನ ಈ ಗುರುಕುಲವನ್ನು ಮರೆಯಬೇಡ; ಗುರುಕುಲವೂ ನಿನ್ನನ್ನು ಮರೆಯುವುದಿಲ್ಲ!"

ದ್ಯಾಂಪುರಕ್ಕೆ ಹಿಂದಿರುಗುತ್ತಲಿದ್ದಾಗ ಗುರುಗಳ ಬೋಧೆ ಅನುರಣಿಸುತ್ತುಲಿತ್ತು ಕಿವಿಗಳಲ್ಲಿ, ಜೊತೆಗೆ ಇನ್ನು ಈ ಗುರುಕುಲದ ಋಣ ಮುಗಿಯಿತಲ್ಲ, ಇನ್ನು ಕೆಮ್ಮಣ್ಣು ಬಯಲನ್ನು ತುಳಿಯುತ್ತ ಗುರುಕುಲಕ್ಕೆ ಹೋಗುವುದು ತಪ್ಪಿತಲ್ಲ, ಗೆಳೆಯರ

ಗುಂಪನ್ನು ಬಿಟ್ಟು ಮುಂದೆಲ್ಲಿಗೆ ಹೋಗುವುದಿದೆಯೋ, ಅಲ್ಲಿ ನನಗಾಗಿ ಏನು ಕಾದಿದೆಯೋ–ಇತ್ಯಾದಿ ವಿಚಾರ ಲಹರಿಗಳೂ ಏಳುತ್ತಲಿದ್ದುವು ಪ್ರಜ್ಞಾಪ್ರವಾಹದಲ್ಲಿ ಇಲ್ಲಿಗೆ ಮುಗಿಯಿತು ನನ್ನ ಬಾಳಿನ ಇನ್ನೊಂದು ಅಧ್ಯಾಯ!

## ಬೇರೊಂದು ಅಧ್ಯಾಯ :

ನಾನು ಮಿಡಲ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದುದು ನನ್ನ ತಂದೆ ತಾಯಿಯರಿಗೆ, ಬಂಧು ಬಳಗದವರಿಗೆ ಸಂತಸಕರವೆನಿಸಿದಷ್ಟೇ ಊರವರಿಗೆ ಉತ್ಸಾಹವರ್ಧಕವಾಗಿ ಪರಿಣಮಿಸಿದ್ದಿತು. ನಮ್ಮೂರಿನ ಹಳೆಯ ಹಿರಿಮೆ ಮರುಕಳಿಸುತ್ತಿರುವಂತೆ ಅವರಿಗೆ ಭಾಸವಾಯಿತು. ಅನೇಕರು ತಂತಮ್ಮ ಮಕ್ಕಳನ್ನು ವಿದ್ಯಾನಂದ ಗುರುಕುಲಕ್ಕೆ ಕಳಿಸಲು ಮುಂದಾದರು. 'ನನ್ನ ಮುಂದಿನ ಓದು ಎಲ್ಲಿ?' ಎಂಬುದೇ 'ತಲೆ ತಿನ್ನುವ' ಪ್ರಶ್ನೆಯಾಯಿತು ತಂದೆತಾಯಿಯರಿಗೆ. ಆಗ ನಿಜಾಮ ರಾಜ್ಯದಲ್ಲಿ ಜಿಲ್ಲೆಗೊಂದು ಹೈಸ್ಕೂಲು, ವಿಭಾಗಕ್ಕೊಂದು ಇಂಟರ್ ಮೀಡಿಯೇಟ್ ಕಾಲೇಜು ಇದ್ದ ಕಾಲ. ಈಗ ಕಾಲೇಜುಗಳಿರುವಷ್ಟು ಆಗ ಪ್ರಾಥಮಿಕ ಶಾಲೆಗಳಿರಲಿಲ್ಲವೇನೋ! ನಮಗೆ ಅತಿ ಸಮೀಪದ ಹೈಸ್ಕೂಲೆಂದರೆ ರಾಯಚೂರಿನಲ್ಲಿದ್ದುದು. ಆದರೆ ಎಂದಿನಂತೆ ತಂದೆಯವರು ದೂರಾಲೋಚನೆ ಮಾಡಿದರು. ರಾಯ್ಚೂರಿನ ಹೈಸ್ಕೂಲಿನಲ್ಲಿ ನನ್ನನ್ನು ಸೇರಿಸಿದರೆ ಕಾಲೇಜು ಶಿಕ್ಷಣಕ್ಕಾಗಿ ಮತ್ತೆ ಕಲಬುರಗಿಗೆ ಹೋಗಬೇಕು; ಅಲ್ಲಿ ಬೇರೆ ವ್ಯವಸ್ಥೆ ಮಾಡಬೇಕು. ಇದಕ್ಕೆ ಬದಲಾಗಿ ಕಲಬುರಗಿಯ ಹೈಸ್ಕೂಲಿಗೆ ನೇರವಾಗಿ ಸೇರಿಸಿಬಿಟ್ಟರೆ ಒಂದೇ ಸಲ ಮಾಡಿದ ವ್ಯವಸ್ಥೆ ಕಾಲೇಜು ಶಿಕ್ಷಣ ಮುಗಿವವರೆಗೆ ನಡೆಯುವುದು. ಮೇಲಾಗಿ, ಕಲಬುರಗಿ ಅವರ ಮೆಚ್ಚಿನ ಮಹಾತ್ಮ ಶ್ರೀ ಶರಣ ಬಸವೇಶ್ವರರ ಸ್ಥಾನ. ಆತನ ಕೃಪಾಶ್ರಯದಲ್ಲಿಯೇ ಬಿಟ್ಟು ಬಂದರಾಯಿತು. ಆತನು ಹಾಲಲ್ಲಾದರೂ ಅದ್ದಲಿ, ನೀರಲ್ಲಾದರೂ ಅದ್ದಲಿ!

ಕೊನೆಯ ನಿರ್ಧಾರ ಕೈಕೊಳ್ಳುವ ಮುನ್ನ ನನ್ನನ್ನು ಅಂದಿನ ಪ್ರಸಿದ್ಧ ವೇತಾಳಿ ವೆಂಕಟಾಪುರ ಸಂಗಯ್ಯನವರ ಬಳಿಗೆ ಕರೆದೊಯ್ದರು. ಅವರು ಹೇಳುತ್ತಿದ್ದ ಭವಿಷ್ಯಗಳು ಎಷ್ಟು ನಿಜವಾಗುತ್ತಿದ್ದುವೆಂದರೆ ವಕೀಲರೂ ಜಿದ್ದಿನ ಪ್ರಕರಣಗಳಲ್ಲಿ ಅವರನ್ನು ವಿಚಾರಿಸುತ್ತಿದ್ದರಂತೆ. ನಾವು ಹೋದಾಗ ಅವರು ತೋಟದಲ್ಲಿದ್ದರು. ವಯಸ್ಸು ತೊಂಬತ್ತಾರು; ಹಲ್ಲುಗಳೆಲ್ಲ ಗಟ್ಟಿಯಾಗಿದ್ದುವು; ಕಣ್ಣುಗಳಿಗೆ ಕನ್ನಡಕ ಬೇಕಿರಲಿಲ್ಲ; ತಾವೇ ಬಾವಿಯಿಂದ ನೀರು ಸೇದಿ ತಣ್ಣೀರ ಸ್ನಾನ ಮಾಡುತ್ತಿದ್ದರು ನಾವು ಹೋದಾಗ. ತಂದೆಯವರ ಗುರುತು ಹಿಡಿದು ಮಾತಾಡಿಸಿದರು. "ನನ್ನನ್ನು ಉಚ್ಚ ಶಿಕ್ಷಣಕ್ಕಾಗಿ ಕಲಬುರಗಿಗೆ ಕಳಿಸಬೇಕೆಂದಿದ್ದೇನೆ; ಹೇಗಾದೀತು?" ಎಂದು



ತಂದೆಯವರು ಕೇಳಿದರು. ನನ್ನ ಮುಖ ದಿಟ್ಟಿಸಿ ನೋಡಿ ಒಳ್ಳೆಯದಾಗುತ್ತದೆ, ಕಳಿಸಿರಿ ಎಂದು ಹೇಳಿದರು. ಇಷ್ಟೇ ಅಲ್ಲ, ನಾನು ಹೈದರಾಬಾದಿಗೂ ಹೋಗುವೆನು, ಪದವೀಧರನಾಗುವೆನು, ಅಧಿಕಾರಿಯೂ ಆಗುವೆನು, ಇಷ್ಟನೆಯ ವಯಸ್ಸಿನಲ್ಲಿ ದೀರ್ಘಕಾಲ ರೋಗದಿಂದ ಬಳಲುವೆನು; ಅದರಿಂದ ಚೇತರಿಸಿಕೊಂಡು ಉಚ್ಚ ಶಿಕ್ಷಣವನ್ನು ಯಶಸ್ವಿಯಾಗಿ ಮುಗಿಸುವೆನು; ಇಷ್ಟನೆಯ ವಯಸ್ಸಿನಲ್ಲಿ ಮದುವೆಯಾಗುವೆನು; ಇಂತಿಷ್ಟು ಮಕ್ಕಳಾಗುವರು; ಅವರೂ ವಿದ್ಯಾವಂತರಾಗಿ ಒಳ್ಳೆಯ ಸ್ಥಾನ ಸೇರುವರು–ಇತ್ಯಾದಿ ಅನೇಕ ಸಂಗತಿಗಳನ್ನು ಅರಳು ಹುರಿದಂತೆ ಹೇಳಿ ಮುಗಿಸಿದರು. ನಾನು ದಂಗುಬಡಿದು ನಿಂತಿದ್ದೆ. ತಂದೆಯವರಿಗೆ ಪರಮ ಸಂತೋಷವಾಗಿದ್ದಿತು. ಅವರು ಹೇಳಿದ್ದ ಭವಿಷ್ಯದಲ್ಲಿ ಒಂದು, ಒಂದೇ ಒಂದು ಸುಳ್ಳಾಗಬೇಕೆಂದು ಬಯಸಿದೆನಾಗ ನಾನು. ಅದೆಂದರೆ ಅಧಿಕಾರಿಯಾಗುವುದು. ನನ್ನನ್ನು ಅಕ್ಷರಾಭ್ಯಾಸಕ್ಕೆ ಸೇರಿಸಿದಾಗಲೇ ನಾನು ವಕೀಲನಾಗಬೇಕೆಂದು ತಂದೆಯವರು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದ್ದರು. ಕೊಪ್ಪಳಕ್ಕೆ ಹೋದಾಗಲೆಲ್ಲ ಅಲ್ಲಿಯ ವಕೀಲರ ವೈಭವವನ್ನು ನೋಡಿ ಹಾಗೆ ಆಶಿಸಿದ್ದರೋ, 'ಬಡವರ ಮಕ್ಕಳಿಗೆಲ್ಲಿ ಅಧಿಕಾರಿಯಾಗುವ ಭಾಗ್ಯ?'ವೆಂದು ಭಾವಿಸಿ ಕನಿಷ್ಠ ವಕೀಲನಾದರೂ ಆಗಲೆಂದು ಹಾರೈಸಿದ್ದರೋ ತಿಳಿಯದು. ಅಂತೂ ಹಾಗೆ ಹಾರೈಸಿದ್ದರು. ನಾನು ಅಧಿಕಾರಿಯಾಗುವೆನೆಂದು ಸಂಗಯ್ಯನವರು ಹೇಳಿದಾಗ ಅವರಿಗೆ ನಿರಾಶೆಯೇನೂ ಆದಂತೆ ಕಾಣಲಿಲ್ಲ; 'ಯಾಕೆ ಒಲ್ಲ? ಇಲ್ಲದುದಕೆ ಒಲ್ಲ!' ಎಂಬಂತೆ ಅಧಿಕಾರ ನಮ್ಮ ಅಳುವಿಗೆ, ಎಟುಕಿಗೆ ನಿಲುಕದುದೆಂದೇ ವಕೀಲಿಗೆ ಮತ ನೀಡಿರಬೇಕು ಅವರು. ಆದರೆ ನನ್ನಲ್ಲಿ ಮಾತ್ರ ವಕೀಲನಾಗಿ ಈ ಭವಿಷ್ಯವನ್ನು ಸುಳ್ಳಾಗಿಸಲೇಬೇಕೆಂಬ ಹಠ ಮೂಡಿತು. ಆದರೆ ಸಂಗಯ್ಯನವರು ಹೇಳಿದುದರಲ್ಲಿ ಯಾವುದೂ ಸುಳ್ಳಾಗಲಿಲ್ಲ. ಎಲ್ಲವೂ ಅವರು ಹೇಳಿದಂತೆಯೇ ನನ್ನ ಜೀವನದಲ್ಲಿ ನಡೆದಿರುವುದೊಂದು ಕೌತುಕದ ಸಂಗತಿ! ಆಧುನಿಕ ಪ್ರಜ್ಞೆ ನಂಬದಂತಹ ಸಂಗತಿ. ನಾನೇ 'ಇದು ಕಾಕತಾಳೀಯವೇಕಾಗಿರ–ಬಾರದು?' ಎಂದು ಹಲವು ಸಲ ನನ್ನನ್ನು ನಾನೇ ಪ್ರಶ್ನಿಸಿಕೊಂಡು, ಇದನ್ನು ನಂಬಬಾರದೆಂದು ಹೆಣಗಿ ಸೋತಿದ್ದೇನೆ. ಇಂದಿಗೂ ಜ್ಯೋತಿಷ್ಯದಲ್ಲಿ ಎಳ್ಳಷ್ಟೂ ನಂಬಿಕೆಯಿಲ್ಲದ ಮನೆಯ ಹೆಂಗಸರ ತೃಪ್ತಿಗಾಗಿ ಮಕ್ಕಳ ಮದುವೆಗಳ ಮುಹೂರ್ತಗಳನ್ನು ಮಾತ್ರ ಪಂಚಾಂಗದಂತೆ ನಿರ್ಧರಿಸಿ. ಉಳಿದೆಲ್ಲ ಸರಕಾರೀ ಕಾರ್ಯಗಳನ್ನೂ, ಸಾರ್ವಜನಿಕ ಕಾರ್ಯಗಳನ್ನೂ 'ಇಂದಿನ ದಿನವೇ ಶುಭದಿನ, ಈ ಕ್ಷಣವೇ ಶುಭ ಕ್ಷಣ' ಎಂದು ನಂಬಿ ಮಾಡುತ್ತ ಬಂದಿರುವ ನಾನು ಸಂಗಯ್ಯನವರ ಈ ನಿಜವಾಗಿ ಪರಿಣಮಿಸಿದ ಭವಿಷ್ಯವನ್ನು ನಂಬಲಾರೆ, ನಂಬದಿರಲಾರೆ!

## ಕಲಬುರಿಗಿಗೆ ಪಯಣ :

ಕಲಬುರಗಿಗೆ ಹೊರಡುವ ಸಿದ್ಧತೆ ನಡೆಯಿತು. ಹಾಸಿಗೆ ಹೊದಿಕೆಯಿಂದ ಆರಂಭಿಸಿ ನನ್ನದಾದ ಪೆಟ್ಟಿಗೆಯವರೆಗೆ ಅಗತ್ಯ ವಸ್ತುಗಳನ್ನೆಲ್ಲ ಒಂದೊಂದಾಗಿ ಸಂಗ್ರಹಿಸಲಾಯಿತು. ಬಟ್ಟೆಗಳೆಲ್ಲ ಅಗಸರ ಮನೆ ಕಂಡುಬಂದುವು. ಹೊಸಬಟ್ಟೆ ಹೊಲಿಸುವುದನ್ನು ನಾನೇ ವಿರೋಧಿಸಿದೆ. ದೂರದ ಕಲಬುರಗಿಗೆ ರೇಲ್ವೆ ಪ್ರಯಾಣದ ವೆಚ್ಚವೆಷ್ಟೋ, ಹೈಸ್ಕೂಲು ಸೇರಲು ಪ್ರವೇಶ ಶುಲ್ಕವೆಷ್ಟೋ, ಪುಸ್ತಕಗಳ ವೆಚ್ಚವೆಷ್ಟು ಬರುವುದೋ, ನನ್ನ ಊಟ ವಸತಿಗಳ ವ್ಯವಸ್ಥೆಗಳಿಗಾಗಿ ತಿಂಗಳಿಗೆಷ್ಟನ್ನು ತೆರಬೇಕಾಗುವುದೋ, ಇವೆಲ್ಲವನ್ನೂ ತಂದೆಯವರು ಹೇಗೆ ಒದಗಿಸುವರೋ, ಯಾವುದೂ ತಿಳಿಯದ ನಾನು ತಂದೆಯವರೆದುರಿಸಲಿದ್ದ ತೊಂದರೆಗಳನ್ನು ನೆನೆದು ಮನದಲ್ಲಿಯೇ ಮರುಗಿದೆ. ಇನ್ನೂ ಎಷ್ಟು ವರ್ಷಗಳವರೆಗೆ ನಾನವರ ಸಂಕಷ್ಟಗಳಿಗೆ ಕಾರಣನಾಗುವೆನೋ ಎಂಬುದು ನನ್ನನ್ನು ಒಳಗೊಳಗೇ ಕೊರೆಯುತ್ತಿದ್ದ ಕೊರಗಾಗಿದ್ದಿತು. ತಂದೆಯವರೂ ಮುಂದುಗಾಣದಿದ್ದಾಗ ಅವ್ವ ಆಗಾಗ ಆಣೆ ಪೈಸೆಗಳನ್ನುಳಿಸಿ ಕೂಡಿಟ್ಟಿದ್ದ ಹಣದ ಹಮ್ಮಿಣಿಯನ್ನು ತಂದುಕೊಟ್ಟಳು. ಅಪ್ಪನ ಮುಖ ಅರಳಿತು. ಹಣದ ಚಿಂತೆ ದೂರಾಯಿತು.

ಕಲಬುರಗಿಗೆ ಹೊರಟು ನಿಂತ ದಿನದ ದೃಶ್ಯ ಮರೆಯಲಾಗದುದು. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಇಷ್ಟು ದೂರದ 'ಶಹರ'ಕ್ಕೆ ನಮ್ಮೂರಿನಿಂದ ಹೊರಟವರಲ್ಲಿ ನಾನೇ ಮೊದಲಿಗ. ಅಂತೆಯೇ ಅಂದು ಎಲ್ಲರ ಕಣ್ಣುಗಳಿಗೆ ಸೈನೊಸ್ಯೂರ್–ಜ್ಯೋತಿ ಪಥವಾಗಿದ್ದೆ. ಎಲ್ಲರ ಮನೆಗಳಿಗೆ ಹೋಗಿ ಹಿರಿಯರಿಗೆ ನಮಸ್ಕರಿಸಿ ಆಶೀರ್ವಾದ ಪಡೆದುಕೊಂಡು ಬಂದೆ. ಅಜ್ಜ ಚೆನ್ನಕವಿಗಳನ್ನು ನಮಸ್ಕರಿಸಲು ಹೋದಾಗ ಊಟಕ್ಕೆ ಕುಳಿತಿದ್ದರು. ಎದ್ದು ಬಾಗಿಲವರೆಗೆ ಬಂದು 'ಶುಭಮಸ್ತು' ಎಂದು ಹರಸಿ ಕಳಿಸಿದರು. ಚೆನ್ನಪ್ಪಮಾವ ಮೊದಲು ನಮ್ಮ ಮನೆಯಲ್ಲಿದ್ದ ಬಿಳಿ–ಕೆಂದು ಎತ್ತುಗಳಿಗೇ ಬಣ್ಣದ ಜೂಲು ಹೊದಿಸಿ ಸಿಂಗರಿಸಿದ ಕೊಲ್ಲಾರಿ ಬಂಡಿಗೆ ಹೂಡಿದ್ದ. ಅದರಲ್ಲಿ ಕುಳಿತು ತಂದೆಯವರೂ ನಾನೂ ಬನ್ನಿಕೊಪ್ಪ ರೈಲು ನಿಲ್ದಾಣಕ್ಕೆ ಹೊರಟೆವು. ಊರು ದಾಟುವವರೆಗೆ ಊರವರು ಹಿಂದೆ ಹಿಂದೆ ಬಂದೇ ಬಂದರು. ಅವ್ವನಿಗೆ ಅಳು ತಡೆಯಲಾಗಲಿಲ್ಲ. ನನಗೆ ಕಾಣದಂತೆ ಕಣ್ಣೊರೆಯಸಿಕೊಳ್ಳಲು ಆಕೆ ಪ್ರಯತ್ನಿಸಿದರೂ ನನ್ನ ಕಣ್ಣಿಗೆ ಬಿದ್ದಿತದು. ನನ್ನ ಕಣ್ಣುಗಳಲ್ಲಿಯೂ ನೀರೂರಿತು. ಎತ್ತುಗಳು ಎಂದಿನಂತೆ ಭರಭರಾಟೆಯೊಡನೆ ಹೊರಟುವು. ಅವುಗಳು ಎಬ್ಬಿಸಿದ ಕೆಂಧೂಳಿಯಲ್ಲಿ ಅವ್ವನ ಮುಖ ಮಸಕುಮಸಕಾಗುತ್ತ ಕೊನೆಗೆ ಕಾಣದಾಯಿತು. ಎಷ್ಟು ದಿನಗಳ ಮೇಲೆ ಮತ್ತೆ ಅವ್ವನ ಮುಖ ನೋಡುವೆನೋ ಎಂದು ಉಮ್ಮಳಿಸಿದೆ.



ಅಷ್ಟರಲ್ಲಿ ಕುಕ್ಕನೂರು ಸಮೀಪಿಸಿತ್ತು. ಗುರುಕುಲವಿದ್ದ ದಿಕ್ಕಿಗೆ ಕೈಮುಗಿದೆ. ಬನ್ನಿಕೊಪ್ಪದಲ್ಲಿ ಉಗಿಬಂಡಿ ಏರಿ. ಗದಗಿನಲ್ಲಿ ಬೇರೆ ಹೊಗೆಬಂಡಿ ಹತ್ತಿ, ಹೊಟಗಿಯಲ್ಲಿ ಇನ್ನೊಂದು ರೈಲು ಹಿಡಿದು ಮಾರನೆಯ ದಿನ ಮುಂಜಾನೆ ಕಲಬುರಗಿ ಸೇರಿದೆವು. ಇಷ್ಟೊಂದು ದೀರ್ಘವಾದ ರೈಲು ಪ್ರಯಾಣವನ್ನು ತಂದೆಯವರೂ ಆ ಹಿಂದೆ ಮಾಡಿರಲಿಲ್ಲ. ಕೊನೆಗೊಮ್ಮೆ ಕಲಬುರಗಿ ಬಂದಾಗ ನಮ್ಮಿಬ್ಬರ ತಲೆಯ ಮೇಲಿದ್ದ ಹೆಬ್ಬಂಡೆ ಕೆಳಗಿಳಿದಂತೆನಿಸಿತು.

ಜಟಕಾ ಏರಿ ನೆಟ್ಟಗೆ ಗದ್ದುಗೆ ಮಠಕ್ಕೆ ಹೋದೆವು. ಅಲ್ಲಿಯ ಶ್ರೀಗಳು (ಅವರ ಹೆಸರು ಶ್ರೀ ಶಿವಮೂರ್ತಿ ಸ್ವಾಮಿಗಳೆಂದಿರಬೇಕು) ಬಹಳ ಸಂತೋಷದಿಂದ ಬರ ಮಾಡಿಕೊಂಡರು ನಮ್ಮನ್ನು. ಅದೇ ವರ್ಷ ಬ್ರಹ್ಮಪುರಿಯ ಚೌದಾಪುರೀ ಹಿರೇಮಠದಲ್ಲಿ ಉಚಿತ ವಿದ್ಯಾರ್ಥಿನಿಲಯವೊಂದು ಪ್ರಾರಂಭವಾಗಲಿದ್ದ ವಿಷಯವನ್ನು ಅವರೇ ತಿಳಿಸಿ ಅದರ ಸಂಚಾಲಕರಾದ ಶ್ರೀ ಶಾಂತವೀರಸ್ವಾಮಿಗಳವರನ್ನು ಕಾಣಲು ಹೇಳಿದರು. ಸಾಧ್ಯವಾದರೆ ಶ್ರೀ ಶರಣ ಬಸವೇಶ್ವರ ಸಂಸ್ಥಾನದ ಅಧಿಪತಿಗಳಾದ ಮಾನ್ಯ ಶ್ರೀ ದೊಡ್ಡಪ್ಪ ಅಪ್ಪ ಅವರ ದರ್ಶನವನ್ನೂ ಪಡೆಯಲು ಸಲಹೆ ನೀಡಿದರು. ಮಠದಲ್ಲಿ ಸ್ನಾನ–ಪೂಜೆ–ಪ್ರಸಾದಗಳನ್ನು ಮುಗಿಸಿ ಮಧ್ಯಾಹ್ನ ಶ್ರೀ ಶರಣ ಬಸವೇಶ್ವರ ದೇವಾಲಯಕ್ಕೆ ಹೋಗಿ. ಕರುಣಾಕರ ಶರಣ ಬಸವೇಶ್ವರರ ದರ್ಶನ ಪಡೆದು ಮಾನ್ಯ ಶ್ರೀ ದೊಡ್ಡಪ್ಪ ಅಪ್ಪ ಅವರ ದರ್ಶನಕ್ಕೆ ಹೋದೆವು. ತ್ರಿಕಾಲ ಪೂಜಾ ನಿಷ್ಠರೂ, ಸದಾಚಾರ ಗರಿಷ್ಠರೂ, ಧಾರ್ಮಿಕ ವರಿಷ್ಠರೂ ಆಗಿದ್ದ ಅವರ ಬಗ್ಗೆ ಅಲ್ಲಿಯ ಜನರಿಗೆ ಅಪಾರವಾದ ಆದರ, ಅಭಿಮಾನ, ಭಕ್ತಿ! ಎಲ್ಲರೂ ಅವರನ್ನು 'ಯಜಮಾನ'ರೆಂದೆ ಕರೆಯುತ್ತಿದ್ದರು. ಅವರ ಮುಖದ ಸಾತ್ವಿಕ ತೇಜಸ್ಸು ಇಂದಿಗೂ ಅವರ ಮುಖದ ಮೇಲೆ ಅಚ್ಚಳಿಯದೆ ಉಳಿದಿದೆ. ಅಲ್ಲಿಯ ಪದ್ಧತಿಯಂತೆ ಯಾವಾಗಲೂ ಅವರ ಪಕ್ಕದಲ್ಲಿ ಮುಗುಳನಾಗಾಯಿಯ ಪೂಜ್ಯ ಪಟ್ಟದ ದೇವರು ವಿರಾಜಮಾನರಾಗಿರುತ್ತಿದ್ದರು. ತಪಃಪ್ರಭಾಪುಂಜರಂಜಿತವಾಗಿದ್ದ ಅವರ ವಚನ ಮಂಡಲ ನೋಡಿದವರಲ್ಲೆಲ್ಲ ಅವರ ಬಗ್ಗೆ ಭಕ್ತಿ ಉಕ್ಕುವಂತೆ ಮಾಡುತ್ತಿತ್ತು. ಮಾತು ಬಹಳ ಕಡಿಮೆ: ಮೌನವೇ ವ್ಯಾಖ್ಯಾನ: ಪ್ರಫುಲ್ಲ ಮುಖಮುದ್ರೆಯೇ ಪ್ರವಚನ.

ಪರಿಚಯ ಗಿರಿಚಯ ಮುಗಿದ ಮೇಲೆ ಬಂದ ಉದ್ದೇಶವನ್ನು ವಿವರಿಸಿದರು ತಂದೆಯವರು. ಸುದೈವದಿಂದ ಶ್ರೀ ಶಾಂತವೀರಸ್ವಾಮಿಗಳವರೂ ಅಲ್ಲಿಯೇ ಇದ್ದರು. ಪಂಡಿತರ, ವಿವಿಧ ಕಲಾಮಂಡಿತರ ಪೋಷಕರಾಗಿದ್ದ ಯಜಮಾನರು ಯಾವ ಮುಜುಗರವೂ ಇಲ್ಲದೆ ನನ್ನ ತಂದೆಯವರ ಸದುದ್ದೇಶಕ್ಕೆ ನೆರವಾಗಲು ಮುಂದಾದರು. ನನ್ನ ಮುಖವನ್ನೂ ತೀಕ್ಷ್ಣ ದೃಷ್ಟಿಯಿಂದ ಪರೀಕ್ಷಿಸಿ ತೃಪ್ತಿಯ ಭಾವವನ್ನು ಮುಖದ

ಮೇಲೆ ಮೆರೆದರು. ಉದ್ದೇಶಿತ ಉಚಿತ ಪ್ರಸಾದ ನಿಲಯದಲ್ಲಿ ನನ್ನನ್ನು ಸೇರಿಕೊಳ್ಳುವುದೆಂದು ತೀರ್ಮಾನವಾಯಿತು. 'ಎಂಟನೆಯ ತರಗತಿಗೆ ಹೆಸರು ಹಚ್ಚಿಸಿದ ದಿನವೇ ಪ್ರಸಾದ ನಿಲಯಕ್ಕೆ ಬಂದು ಬಿಡಲಿ ನಿಮ್ಮ ಮಗ' ಎಂದು ಹೇಳಿ ಬೀಳ್ಕೊಟ್ಟರು.

ಮುಖ್ಯ ಸಮಸ್ಯೆಯೇ ಇಷ್ಟೊಂದು ಶೀಘ್ರವಾಗಿ, ಸುಲಭವಾಗಿ ಪರಿಹಾರ ಪಡೆಯುವುದೆಂದು ತಂದೆಯವರು ನಿರೀಕ್ಷಿಸಿರಲಿಲ್ಲ. ಹಿಂದಿರುಗುವಾಗ ಮತ್ತೊಮ್ಮೆ ಶರಣ ಮಂದಿರವನ್ನು ಪ್ರವೇಶಿಸಿ, 'ಎಲ್ಲ ನಿನ್ನ ದಯೆ' ಎಂದು ಪ್ರಣಿತರಾಗಿ ಶರಣ ಬಸವೇಶ್ವರರಿಗೆ ಭಕ್ತಿ ಸಲ್ಲಿಸಿದರು. ಗದ್ದುಗೆಮಠ ತಲುಪಿ ನಡೆದ ವಿಷಯ ಶ್ರೀಗಳವರಿಗೆ ತಿಳಿಸಿದರು. ಶ್ರೀಗಳವರೂ, ಮರಿದೇವರೂ, ಕಾರ್ತಿಕೇಯ ಶಾಸ್ತ್ರಿಗಳೂ, ಆಗ ಅಲ್ಲೊಂದು ಎಂಥದೋ ಬೇಂಕು ನಡೆಸುತ್ತಿದ್ದ ಶ್ರೀ ಸಿದ್ಧೇಶ್ವರ ಭಾನಾಪುರೆ ಅವರೂ ತುಂಬ ಸಂತೋಷ ಪಟ್ಟರು. ರಾತ್ರಿ ಬಹಳ ಹೊತ್ತಿನವರೆಗೆ ತಂದೆಯವರೊಡನೆ ಸಾಹಿತ್ಯ, ಶಿವಾನುಭವ, ಷಡಕ್ಷರದೇವ, ನಿಜಗುಣರ ಬಗ್ಗೆ ವಿಚಾರ ವಿನಿಮಯ ನಡೆಯಿತು.

ಮರುದಿನ ಎಂಟನೆಯ ತರಗತಿಗೆ 'ಹೆಸರು ಹಚ್ಚಿಸಲು' ಸರ್ಕಾರೀ ಹೈಸ್ಕೂಲಿಗೆ ಹೋದೆವು. ಕೆಳಗೆ ಹೈಸ್ಕೂಲು, ಮೇಲೆ ಇಂಟರ್‌ಮೀಡಿಯೆಟ್ ಕಾಲೇಜು. ಎರಡಕ್ಕೂ ಸೇರಿಯೇ ಒಬ್ಬರು ಪ್ರಿನ್ಸಿಪಾಲರು–ಮೌಲ್ವಿಜುಲ್ಫಕಾರ್ ಆಲಿ ಹಕ್ಕಾನಿ ಸಾಹೇಬರು, ಒಬ್ಬ ವೈಸ್ ಪ್ರಿನ್ಸಿಪಾಲರು–ರಾಮಚಂದ್ರ ಐಯರ್ ಅವರು. ಹೈಸ್ಕೂಲಿಗಾಗಿ ಪ್ರತ್ಯೇಕ ಹೆಡ್‌ಮಾಸ್ತರರಾಗಲಿ, ಕಾರ್ಯಾಲಯವಾಗಲಿ ಇರಲಿಲ್ಲ. ಪ್ರವೇಶ ಪಡೆಯಲು ಪ್ರಿನ್ಸಿಪಾಲರ ಬಳಿಗೇ ಹೋಗಬೇಕಿತ್ತು. ಅವರನ್ನು ಕಾಣಲು ಮೆಟ್ಟಲು ಏರಿ ಮೇಲೆ ಹೋಗುತ್ತಿದ್ದಾಗ ನಮ್ಮಿಬ್ಬರ ಕಾಲುಗಳೂ ನಡುಗಿದುವು. ಆ ಕಾಲದಲ್ಲಿಯೇ ತಿಂಗಳಿಗೆ ಸಾವಿರ ರೂಪಾಯಿ ಸಂಬಳ ಪಡೆಯುತ್ತಿದ್ದ ಅವರು ಎಷ್ಟು ಎದ್ದು ಕಾಣುವ ವ್ಯಕ್ತಿತ್ವವುಳ್ಳವರಿರಬಹುದು. ಎಷ್ಟು ಶ್ರೀಮದ್ಗಂಭೀರರಾಗಿರಬಹುದು, ಎಷ್ಟು ಬಿಗುಮಾನದವರಿರಬಹುದು. ಎಷ್ಟು ಸಿಟ್ಟಿನವರಿರಬಹುದು–ಎಂದು ಏನೇನೋ ಯೋಚಿಸುತ್ತ ನಿಧಾನವಾಗಿ ಮೆಟ್ಟಲೇರಿ ಪ್ರಿನ್ಸಿಪಾಲರ ಸಮ್ಮುಖದಲ್ಲಿ ಹೋಗಿ ನಿಂತ ನಮಗೆ ನಮ್ಮ ಜೀವಮಾನದ ಆಶ್ಚರ್ಯ ಕಾದಿತ್ತು. ಬಹಳ ತೆಳ್ಳನೆಯ ಕುಳ್ಳ ವ್ಯಕ್ತಿ ಪ್ರಿನ್ಸಿಪಾಲರು ಸಿಲ್ಕಿನ ಷೇರವಾನಿ, ಚಿನ್ನದ ಚೌಕಟ್ಟಿನ ಕನ್ನಡಿಗಳಿಂದಲೇ ಅವರೊಬ್ಬ ದೊಡ್ಡ ಮನುಷ್ಯರೆಂದು ಪ್ರತೀತವಾಗುತ್ತಿತ್ತು. ನಡುವೆ ಬೈತಲೆ ತೆಗೆದು ಆಚೆ ಈಚೆ ಬಾಚಿದ್ದ ಅವರ ಮಿರುಗುವ ಕರಿ ಕೂದಲುಗಳು ಅವರ ವಾರ್ಧಕ್ಯದ ವಯಸ್ಸನ್ನು ಹುಸಿಗೊಳಿಸುವಂತಿದ್ದುವು.



**ಸಂದೇಹ ವಿಶ್ವಾಸಕ್ಕೆ ತಿರುಗಿತು :**

ಮುಜರೆ ಮಾಡಿ ಎಂಟನೆಯ ತರಗತಿಯ ಪ್ರವೇಶದ ಅಪೇಕ್ಷಾ ಪತ್ರವನ್ನು ಸಲ್ಲಿಸಿದೆ. ನಿರ್ಗಮನ ಪತ್ರಿಕೆಯನ್ನು ಅದಕ್ಕೆ ಲಗತ್ತಿಸಿದ್ದೆ. ಪ್ರಿನ್ಸಿಪಾಲರು ಕನ್ನಡಾಂಗ್ಲ ಭಾಷೆಗಳಲ್ಲಿದ್ದ ನಿರ್ಗಮನ ಪತ್ರಿಕೆಯನ್ನು ನೋಡಿ, ಖಾದೀಧಾರಿಗಳಾಗಿದ್ದ ನಮ್ಮಿಬ್ಬರನ್ನೂ ಸಾಶಂಕ ದೃಷ್ಟಿಯಿಂದ ನೋಡಿ, 'ಕುಕ್ಕನೂರಿನಲ್ಲಿ ಅದೆಂಥ ಮಿಡಲ್ ಸ್ಕೂಲ್ ಇದೆ?' ಎಂದು ಸ್ವಲ್ಪ ಖಾರವಾಗಿಯೇ ಕೇಳಿದರು. ಉತ್ತರಕ್ಕಾಗಿ ನಾನು ತಡವರಿಸುತ್ತಿದ್ದಾಗಲೇ ನಮ್ಮ ಸುದೈವದಿಂದ ಆಗ ಅಲ್ಲಿ ಕುಳಿತಿದ್ದ ಸಂಸ್ಕೃತ ಬೋಧಕರಾಗಿದ್ದ ಶ್ರೀ ಧಾರವಾಡಕರ್ ಮಾಸ್ತರರು "ಕುಕ್ಕನೂರಲ್ಲಿರುವುದು ನಮ್ಮ ಸರ್ಕಾರ ಮನ್ನಿಸಿರುವ ಮಿಡಲ್‌ಸ್ಕೂಲೇ" ಎಂದು ಸಮಾಧಾನ ಹೇಳಿದರು. ಪ್ರಿನ್ಸಿಪಾಲರಿಗೆ ವೈದೃಶ್ಯ ಒದಗಿಸಿದಂತಿತ್ತು ಧಾರವಾಡಕರ್ ಮಾಸ್ತರರ ವ್ಯಕ್ತಿತ್ವ. ದೊಡ್ಡ ಮುಖ, ಉದ್ದ ಬಿಳಿ ಮೀಸೆ, ಎದ್ದು ಕಾಣುವ ನಾಮವಿದ್ದ ಹರವಾದ ಹಣೆ, ನುಣ್ಣಗೆ ಬೋಳಿಸಿದ ತಲೆ, ಶುಭ್ರ ಖಾದಿ ಪಂಚೆ, ನೆಹ್ರೂ ಶರ್ಟ್, ಅಚ್ಚಿಸಿದ ಅಂಚಿನ ಉತ್ತರೀಯುಗಳು ಸೇವಾ ವೃತ್ತಿಯುಲ್ಲಿದ್ದರೂ ಸ್ವತಂತ್ರ ಮನೋವೃತ್ತಿಯವರೆಂಬುದಕ್ಕೆ ಸಾಕ್ಷಿ ನುಡಿಯುತ್ತಿದ್ದುವು. ಪಂಜರದ ಸಿಂಹವಾಗಿ ತೋರಿದರು ನನಗವರು. ಪ್ರಿನ್ಸಿಪಾಲರು ಅವರತ್ತ ತಿರುಗಿ, ನಿರ್ಗಮನ ಪತ್ರಿಕೆಯನ್ನು ಅವರತ್ತ ಎಸೆದು, "ಅಂಕಗಳನ್ನು ಕೊಡುವುದಕ್ಕೂ ಮಿತಿ ಬೇಡವೆ? ಈ ವಿದ್ಯಾರ್ಥಿ ನಿಜವಾಗಿಯೂ ಇಷ್ಟೊಂದು ಅಂಕಗಳನ್ನು ಪಡೆವ ಯೋಗ್ಯತೆಯುಳ್ಳವನೆಂದು ಹೇಗೆ ನಂಬುವುದು?" ಎಂದು ನುಡಿದರು. ನಾವಿಬ್ಬರೂ ತಬ್ಬಿಬ್ಬಾದೆವು. ನಾನಂತೂ ಮುಂದೆ ಇವರ ಕೈಕೆಳಗೆ ಹೇಗೆ ವಿದ್ಯಾಭ್ಯಾಸವನ್ನು ಮುಗಿಸುವುದೆಂದು ಮನದಲ್ಲಿಯೇ ಮಿಡುಕಿದೆ. ಮತ್ತೆ ಧಾರವಾಡಕರ ಮಾಸ್ತರರೇ ನಮ್ಮ ನೆರವಿಗೆ ಬಂದರು. 'ತಾವು ಕೆಲವು ಮುಖ್ಯ ವಿಷಯಗಳಲ್ಲಿ ಈ ಹುಡುಗನ 'ಟೆಸ್ಟ್' ತೆಗೆದುಕೊಂಡು ಆಮೇಲೆ ಪ್ರವೇಶ ನೀಡಬಹುದು' ಎಂದು ಹೇಳಿದರು. ನಾನು 'ವಿದ್ಯಾನಂದ ಗುರುಕುಲ'ದಿಂದ ಬಂದವನೆಂದೂ, ಖಾದೀಧಾರಿಯೆಂದೂ ಅವರಿಗೆ ನನ್ನ ಬಗ್ಗೆ ಆತ್ಮೀಯತೆ ಉಂಟಾಯಿತೆಂದು ತೋರಿತು ನನಗಾಗ. ಪ್ರಿನ್ಸಿಪಾಲರು ಒಪ್ಪಿ ಇಂಗ್ಲೀಷ್ ಹಾಗೂ ಗಣಿತಶಾಸ್ತ್ರಗಳಲ್ಲಿ ನನ್ನನ್ನು ಒರೆದು ನೋಡಲು ಆಯಾ ಶಿಕ್ಷಕರ ಬಳಿಗೆ ಕಳಿಸಿದರು. ತರಗತಿಗಳಲ್ಲಿದ್ದ ಅವರು ಹೊರಗೆ ಬರುವವರೆಗೆ ಕಾದಿದ್ದು ಹೊರಗೆ ಬರುತ್ತಲೆ ಪ್ರಿನ್ಸಿಪಾಲರ ಆದೇಶವನ್ನು ಅವರಿಗೆ ತೋರಿಸಿದೆ. ಒಬ್ಬೊಬ್ಬರೂ ಮೂರು ಮೂರು ಪ್ರಶ್ನೆಗಳನ್ನು ಕೇಳಿದರು. ಎಲ್ಲ ಪ್ರಶ್ನೆಗಳಿಗೂ ಸರಿಯಾದ ಉತ್ತರ ಹೇಳಲು ಇಬ್ಬರೂ ನೂರಕ್ಕೆ ನೂರರಷ್ಟು ಅಂಕಗಳನ್ನು ಕೊಟ್ಟು ಕಳಿಸಿದರು. ಪ್ರಿನ್ಸಿಪಾಲರಿಗೆ ಇನ್ನೂ

ಆಶ್ಚರ್ಯವಾಯಿತು. ಕುತೂಹಲಿಗಳಾಗಿ ತಾವೂ ಇಂಗ್ಲೀಷ್ ವ್ಯಾಕರಣಕ್ಕೆ ಸಂಬಂಧಿಸಿದಂತೆ ಒಂದು ಪ್ರಶ್ನೆ ಕೇಳಿದರು. ಅಂಕಲಿಯವರ "ಭಾಷಾಂತರ ಪಾಠಮಾಲೆಯ" ಮೂರು ಭಾಗಗಳನ್ನೂ ಅರೆದು ಕುಡಿದಿದ್ದ ನಾನು ನಿರಾಯಾಸವಾಗಿ ಉತ್ತರಿಸಿದೆನು. ಪ್ರಿನ್ಸಿಪಾಲರ ಸಂದೇಹ ವಿಶ್ವಾಸವಾಗುತ್ತ ನಡೆದಿದ್ದಿತು. ಪ್ರವೇಶಕ್ಕೆ ಪರವಾನಗಿಯಿತ್ತು ನನ್ನ ಹೆಸರು, ನನ್ನ ತಂದೆಯವರ ಹೆಸರುಗಳನ್ನು ಎರಡೆರಡು ಸಲ ಕೇಳಿ ತಿಳಿದುಕೊಂಡರು. ನನ್ನ ತಂದೆಯವರ ಗಂಭೀರ ವ್ಯಕ್ತಿತ್ವದಿಂದ ಆಕರ್ಷಿತರಾದ ಅವರು ತಂದೆಯವರು ಕನ್ನಡ ಸಂಸ್ಕೃತ ಪಂಡಿತರೆಂದೂ, ಕವಿಗಳೆಂದೂ ತಿಳಿಯಲು ಅವರ ಬಗ್ಗೆ ತುಂಬ ಪ್ರೀತಿ ತೋರಿಸಿದರು. "ಶಾಸ್ತ್ರಿಜಿ, ನಿಮ್ಮ ಮಗನ ಬಗ್ಗೆ ಯೋಚಿಸಬೇಡಿರಿ; ಅವನ ಇಲ್ಲಿಯ ಶಿಕ್ಷಣ ಮುಗಿವವರೆಗೆ ಅವನು ನನ್ನ ಮಗ" ಎಂದು ಧೈರ್ಯ ಹೇಳಿ ಕೈಕುಲುಕಿ ಕಳಿಸಿಕೊಟ್ಟರು.

**ಮಾತು ನಡೆಸಿಕೊಡು :**

ತಂದೆಯವರಿಗೆ ನಡೆದುದೆಲ್ಲ ಒಂದು ಪವಾಡವೆಂಬಂತೆ ಭಾಸವಾಯಿತು. ಎಷ್ಟು ಅನುಮಾನದೊಡನೆ ಅಂಜುತ್ತ, ಅಳುಕುತ್ತ ಬಂದಿದ್ದರೋ ಅಷ್ಟು ಸಲೀಸಾಗಿ ಕಾರ್ಯಗಳೆಲ್ಲ ಕೈಗೂಡಿದ್ದುವು. ಇದಕ್ಕೆ ಶ್ರೀ ಶರಣಬಸವೇಶ್ವರರ ಕರುಣೆಯೇ ಕಾರಣವೆಂದು ದೃಢವಾಗಿ ನಂಬಿ, ಅವರ ಪುರಾಣ ಬರೆದೇ ಅವರಿಗೆ ಅಲ್ಪ ಸೇವೆ ಸಲ್ಲಿಸಬೇಕೆಂದು ನಿರ್ಧರಿಸಿದರು. ಅದಾಗಲೇ ಅವರ ಬಗ್ಗೆ ಪ್ರಕಟವಾಗಿದ್ದ ಎರಡು ಪುರಾಣಗಳನ್ನೂ, ಒಂದು ಗದ್ಯ ಕೃತಿಯನ್ನೂ ಸಂಪಾದಿಸಿಕೊಂಡರು. ಕಲಬುರಗಿ ಬಿಡುವ ಮುನ್ನ ಮಾನ್ಯ ಅಪ್ಪಾ ಅವರೊಡನೆ, ಪೂಜ್ಯ ಮುಗಳನಾಗಾಯಿಪಟ್ಟದ–ದೇವರೊಡನೆ ಸಮಾಲೋಚಿಸಿ ವಿಷಯ ಸಂಗ್ರಹಿಸಿದರು. ಚೌದಾಪುರಿ ಮಠಕ್ಕೆ ನನ್ನ ಸ್ಥಾನಾಂತರವಾಯಿತು. ಅಲ್ಲಿ ಅದಾಗಲೇ ಐವರು ಸೇರಿದ್ದರು. ಅವರ ಪರಿಚಯ ಮಾಡಿಕೊಂಡು ನಗರ ಜೀವನಕ್ಕೆ ಹೊಸಬನಾದ ನನ್ನನ್ನು ಸರಿಯಾಗಿ ನೋಡಿಕೊಳ್ಳಲು ಕೇಳಿಕೊಂಡು ಶ್ರೀ ಶಾಂತವೀರಸ್ವಾಮಿಗಳವರಿಗೆ ನಮಸ್ಕರಿಸಿ ದ್ಯಾಂಪುರಕ್ಕೆ ಹೊರಡಲು ಅಣಿಯಾದರು. ಹೊರಡುವ ಮುನ್ನ ನನ್ನನ್ನು ಏಕಾಂತದಲ್ಲಿ ಕಂಡು, 'ಸಿದ್ದಪ್ಪ, ನಾನು ಇದುವರೆಗೂ ನಿನ್ನನ್ನು ಯಾವುದಕ್ಕೂ ಕೇಳಿಲ್ಲ; ಈಗ ನಿನ್ನಿಂದ ಒಂದು ಆಶ್ವಾಸನೆ ಕೇಳುತ್ತೇನೆ. ನಡೆಸಿಕೊಡುವಿಯಾ?" ಎಂದರು. ನನಗೆ ಮಾತೇ ಹೊರಡದಂತಾಯಿತು. "ತಾವು ನನ್ನ ಪಾಲಿನ ದೇವರು, ತಾವು ಹೇಳಿದರೆ ಹುಲಿಯ ಬಾಯಿಗೆ ತಲೆ ಕೊಡಲೂ ನಾನು ಸಿದ್ಧ" ಎಂದು ಉದ್ವೇಗದೊಡನೆ ಉತ್ತರವಿತ್ತೆ. "ಅಂಥದೇನೂ ಇಲ್ಲಪ್ಪ; ನೀನು ನನಗೆ ಮದ್ಯ–ಮಾಂಸಗಳನ್ನು ಮುಟ್ಟುವುದಿಲ್ಲವೆಂದು, ವ್ಯಭಿಚಾರದ ಬಲೆಗೆ ಬೀಳುವುದಿಲ್ಲವೆಂದು ವಚನವಿತ್ತರೆ



ಸಾಕು!" ಎಂದರು. ನಾನು ತತ್‌ಕ್ಷಣ ಅವರ ಪಾದಹಿಡಿದು ಪ್ರತಿಜ್ಞೆ ಮಾಡಿದೆ. ಅವರ ಮನದಲ್ಲಿದ್ದ ಕೊನೆಯ ತಳ್ಳಂಕ, ಕೊನೆಯ ಅಳುಕು ಇದರಿಂದ ಮಾಯವಾಗಲು ಅವರು ಪ್ರಸನ್ನವದನರಾದರು. ಆ ಬಡ ಹಳ್ಳಿಯ ಸಣ್ಣ ಮಣ್ಣಿನ ಮನೆಯಲ್ಲಿ ತನ್ನ ತಂದೆಯವರಂಥ ಅಸಾಧಾರಣ ವ್ಯಕ್ತಿತ್ವವುಳ್ಳ ವ್ಯಕ್ತಿ ಹೇಗೆ ಹುಟ್ಟಿದರೆಂಬುದೇ ಆಗಲೂ ನನಗೆ ಪ್ರಶ್ನೆಯಾಗಿ ತೋರಿತು, ಈಗಲೂ ಪ್ರಶ್ನೆಯಾಗಿ ಉಳಿದಿದೆ. ನನ್ನ ಕಕ್ಕನೊಡನೆ ಹೋಲಿಸಿದಾಗ, ನನ್ನೂರಿನ ಉಳಿದವರೊಡನೆ ಹೋಲಿಸಿದಾಗ ಅವರದು ಬಹು ಭವ್ಯ ವ್ಯಕ್ತಿತ್ವ.

ಅಂದು ಸಂಜೆ ನಾವು ನಾಲ್ವರು ನಿಲ್ದಾಣದವರೆಗೆ ಹೋಗಿ ತಂದೆಯವರನ್ನು ಉಗಿ ಬಂಡಿಯಲ್ಲಿ ಕೂಡ್ರಿಸಿ ಬಂದೆವು. ಅತ್ತ ಉಗಿ ಬಂಡೆ ನಡೆಯಿತು; ಇತ್ತ ನನ್ನ ಜಂಘಾಬಲ ಉಡುಗಿತು. ಹುಟ್ಟೂರಿನಲ್ಲಿರುವಾಗಲೂ, ಹುಟ್ಟೂರಿನ ಹೊರಗಿದ್ದಾಗಲೂ ಜನ ಮಧ್ಯದಲ್ಲಿದ್ದೇ ಬೆಳೆದಿದ್ದ ನನಗೆ ಒಮ್ಮೆಗೇ ಪರಿಚಿತ ಪರಿಸರ, ಪ್ರೀತಿಸುವ ಜನರು, ಜೀವದ ಗೆಳೆಯರು ನೂರಾರು ಮೈಲಿ ದೂರವಾಗಿ, ಅಪರಿಚಿತ ಪರಿಸರ. ಅಪರಿಚಿತ ಜನ, ಅಪರೀಕ್ಷಿತ ಸಂಗಡಿಗರೊಡನೆ ಕಾಲ ಕಳೆಯಬೇಕಾದ ಸಂದರ್ಭ ಒದಗಿ ಬಂದಿದ್ದಿತು. ಅಪ್ಪ, ಅವ್ವ, ತಮ್ಮ–ತಂಗಿಯರು, ಅತ್ತೆ–ಮಾವರು, ಸೋದರಳಿಯ–ಸೊಸೆಯರು–ಮುಸ್ಲಿಂ ತಂಗಿಯರು–ಗೆದ್ಗೇರಿ ರಾಘಣ್ಣ–ಎಲ್ಲರೂ ನನ್ನಿಂದ ಎಷ್ಟು ದೂರವಾಗಿ ಬಿಟ್ಟರಲ್ಲ–ಎಂದು ಎದೆಯೊಡೆಯಿತು. ಜೊತೆಗಿದ್ದ ಮೂವರು ಮಿತ್ರರು ಸಮಾಧಾನಪಡಿಸಿ ಪ್ರಸಾದ ನಿಲಯಕ್ಕೆ ಕರೆದೊಯ್ದರು. ಅವರು ಮುಂದೆ ನನಗೆ ಬಹಳ ಹತ್ತಿರದ ಗೆಳೆಯರಾದರು. ಹೆಸರು ಮಡಿವಾಳಯ್ಯ, ಮಂಡಲಗಿರಿ ಹನುಮಂತರೆಡ್ಡಿ, ಚಿಂಚೋಳಿ ವೀರಭದ್ರಪ್ಪ ಎಂದು. ಮೊದಲಿನ ಇಬ್ಬರು ನನಗಿಂತ ಮೇಲಿನ ತರಗತಿಯವರು; ಕೊನೆಯವರು ನನ್ನ ಸಹಪಾಠಿ.

ಯಾವುದೊಂದು ತೊಂದರೆ ತಲೆದೋರದೆ ಪ್ರಾರಂಭವಾಗಿದ್ದ ನನ್ನ ಹೈಸ್ಕೂಲ್ ವಿದ್ಯಾರ್ಥಿ ಜೀವನ ಬಹು ಬೇಗನೆ ಒಂದು ಅನೀರಿಕ್ಷಿತವಾದ, ಆದರೆ ನನ್ನ ಭಾವೀ ಜೀವನದ ದೃಷ್ಟಿಯಿಂದ ಅತ್ಯಂತ ದೂರಗಾಮಿ ಪರಿಣಾಮವನ್ನು ಬೀರಿದ ತಿರುವನ್ನು ಪಡೆಯಿತು. ಚಿಕ್ಕೇನಕೊಪ್ಪದಲ್ಲಿ ಚಿಗುರಿದ್ದ ಬಯಕೆಯಂತೆ ನಾನು ಯಂತ್ರಜ್ಞನಾಗ ಬಯಸಿ ಮೇಲ್ತರಗತಿಯ ಗಣಿತ ಶಾಸ್ತ್ರವನ್ನು (Higher Mathematics) ನನ್ನ ಐಚ್ಛಿಕ ವಿಷಯವನ್ನಾಗಿ ಆರಿಸಿಕೊಂಡಿದ್ದೆ. ಗೆಳೆಯ ವೀರಭದ್ರಪ್ಪನವರೂ ಅದನ್ನೇ ಆರಿಸಿಕೊಂಡಿದ್ದರು. ನಮ್ಮ ಆ ವಿಷಯದ ಅಧ್ಯಾಪಕರು ಮೌ. ರಹಮತುಲ್ಲಾಖಾನ್ ಸಾಹೇಬರೆಂಬವರಿದ್ದರು. ಅವರು ಪ್ರತಿನಿತ್ಯ ಮನೆಗೆಲಸ (Home Work) ಕೊಡುತ್ತಿದ್ದರು, ಆಕಾಶವೇ ಕಳಚಿ ಬೀಳಲಿ, ಪ್ರತಿನಿತ್ಯ ಮನೆಗೆಲಸ ಮಾಡಿ ತರಲೇಬೇಕು

ಪ್ರತಿಯೊಬ್ಬರೂ. ನಾನೂ ಪ್ರತಿನಿತ್ಯ ಹೋಮ್‌ವರ್ಕ್ ಮಾಡಿಕೊಂಡೇ ತರಗತಿಗೆ ಹೋಗುತ್ತಿದ್ದೆ. ನನ್ನ ಗಣಿತಜ್ಞಾನ ಉಳಿದವರಿಗಿಂತ ಮೇಲಾದುದಿದ್ದಿತೆಂಬುದನ್ನು ಉಪಾಧ್ಯಾಯರೇ ಹಲವು ಸಲ ವ್ಯಕ್ತಗೊಳಿಸಿದ್ದರು. ಒಂದು ದಿನ ಬರಬೇಕಾಗಿದ್ದ ತಂದೆಯವರ ಪತ್ರ ಬರಲಿಲ್ಲವೆಂದು ಬಹಳ ಕಳವಳಿಸಿದೆ. ಭಾವನಾ ಪ್ರಧಾನನಾಗಿದ್ದ ನನಗೆ ಆ ದಿನದ ಊಟ ಸೇರಲಿಲ್ಲ; ಹೋಮ್‌ವರ್ಕ್ ಮಾಡಲು ಮನಸ್ಸಾಗಲಿಲ್ಲ. ಹೊದ್ದುಕೊಂಡು ಮಲಗಿಬಿಟ್ಟೆ.

**ಬಿರುಗಾಳಿ :**

ಮರುದಿನ ಹೋಮ್‌ವರ್ಕ್ ಇಲ್ಲದೆ ಹೋದಾಗ ಅದು ಮೊದಲ ತಪ್ಪಾಗಿದ್ದುದರಿಂದ ಉಪಾಧ್ಯಾಯರು ಕ್ಷಮಿಸಿಬಿಡುವರೆಂದೆಣಿಸಿದ್ದೆ. ನನ್ನ ಎಣಿಕೆ ತಪ್ಪಾಯಿತು. ಅವರ ಮುಖ ಸಿಟ್ಟಿನಿಂದ ಉರಿಯತೊಡಗಿತು, ಹಿಂದೆ ಮುಂದೆ ನೋಡದೆ, 'ನೀನು ನನ್ನ ವಿದ್ಯಾರ್ಥಿಯಾಗಿರಲು ತಕ್ಕವನಲ್ಲ; ಬೇರೆ ವಿಷಯವನ್ನು, ಬೇರೆ ಉಪಾಧ್ಯಾಯರನ್ನು ಆರಿಸಿಕೋ!' ಎಂದು ಖಡಾಖಂಡಿತವಾಗಿ ಹೇಳಿಬಿಟ್ಟರು! ತರಗತಿಯಲ್ಲಿದ್ದ ಸಹಪಾಠಿಗಳೆಲ್ಲಗೊಳ್ಳೆಂದು ನಕ್ಕುಬಿಟ್ಟರು. ನನಗೂ ನಖಶಿಖಾಂತ ಸಿಟ್ಟು ಬಂದಿತು. ನನ್ನ ವಿದ್ಯಾರ್ಥಿ ಜೀವನದಲ್ಲಿಯೇ ಯಾರಿಂದಲೂ ಏನ್ನನ್ನೂ ಅನ್ನಿಸಿಕೊಳ್ಳದಿದ್ದ ನಾನು ಇಷ್ಟು ಸಣ್ಣ ಕಾರಣಕ್ಕಾಗಿ ಎಲ್ಲರೆದುರು ಅಪಮಾನಿತನಾದುದು ನನ್ನ ಸಹನೆಯ ಕಟ್ಟೆಯನ್ನೊಡೆದಿತ್ತು. ಏನೇ ಅನಾಹುತ ಉದ್ಭವಿಸಲಿ, ಸೇರಿಗೆ ಸವ್ವಾಸೇರು ಕೊಟ್ಟೇತೀರಬೇಕೆಂದು, "ನನಗೂ ತಮ್ಮ ವಿದ್ಯಾರ್ಥಿಯಾಗಿ ಮುಂದುವರಿಯುವ ಇಚ್ಛೆಯಿಲ್ಲ–ಅಲ್ವಿದಾ!" ಎಂದುಬಿಟ್ಟೆ. ತರಗತಿಯಲ್ಲಿದ್ದವರು ಮತ್ತೊಮ್ಮೆ ನಕ್ಕರು. ಮುಯ್ಯಕ್ಕೆ ಮುಯ್ಯಿ ಸರಿಯಾಯಿತೆಂದು ಹೊರಬಿದ್ದು ಮುಂದಿನ ತರಗತಿಯ ಕೋಣೆಯತ್ತ ಕಾಲೆಳೆಯುತ್ತ ನಡೆದೆ.

ಮನದಲ್ಲಿ ಬಿರುಗಾಳಿ ಎದ್ದಿತ್ತು. ಮಾಡಬಾರದುದ್ದನ್ನು ಮಾಡಿಬಿಟ್ಟೆ! ಆ ಉಪಾಧ್ಯಾಯರು ಇದನ್ನು ಇಷ್ಟಕ್ಕೇ ಬಿಡಲಾರರು; ಪ್ರಿನ್ಸಿಪಾಲರವರೆಗೂ ನನ್ನ ಉದ್ಧಟ ವರ್ತನೆಯ ವಾರ್ತೆಯನ್ನು ತಲುಪಿಸಿ ನನ್ನನ್ನು ತರಗತಿಯಿಂದ ತೆಗೆಸಿಬಿಡಬಹುದು. ಪದವೀಧರನಾಗುವುದು ದೂರವೇ ಉಳಿಯಿತು; ಮ್ಯಾಟ್ರಿಕ್ ಪಾಸಾಗುವುದೂ ನನ್ನ ಅದೃಷ್ಟದಲ್ಲಿದ್ದಂತೆ ತೋರುವುದಿಲ್ಲ; ತಂದೆಯವರು ಇಷ್ಟೊಂದು ಕಷ್ಟಪಟ್ಟುದೆಲ್ಲ ನಷ್ಟವಾಯಿತು; ಮುಂದೇನು ಮಾಡುವುದು? ಇನ್ನೇನು, ಊರಿಗೆ ಹಿಂದಿರುಗುವುದು; ಮುಂದಿನ ವರ್ಷ ಸಾಧ್ಯವಾದರೆ ಬೇರೆ ಹೈಸ್ಕೂಲ್ ಸೇರುವುದು–ಹೀಗೆ ಹರಿಯಿತು ನನ್ನ ಉದ್ವಿಗ್ನ ಮನದ ಚಿಂತನ ಪ್ರವಾಹ! ಆ ಪ್ರವಾಹದ ವೇಗ, ರಭಸ, ಆರ್ಭಟಗಳಿಗೆ ತತ್ತರಿಸಿ ಹೋದೆ!



ಮಿತ್ರರೊಬ್ಬರು ಹೇಳಿದರು: "ವಿಷಯ ಪರಿವರ್ತನೆಗೆ ಇನ್ನೂ ಸಮಯವಿದೆ; ಶ್ರೀ ತವಗ ಭೀಮಸೇನರಾಯರ ಹತ್ತಿರ ಹೋಗು; ಅವರೇ ಕನ್ನಡ ತೆಗೆದುಕೊಳ್ಳಲು ಮೇಲಿನವರ ಅನುಮತಿ ದೊರಕಿಸಿಕೊಂಡು ನಿನ್ನನ್ನು ಕನ್ನಡ ವರ್ಗಕ್ಕೆ ಸೇರಿಸಿಕೊಳ್ಳುವರು."

**ಕಟ್ಟೆಯಕಲ್ಲು ಕಟ್ಟೆ ಸೇರಿತು :**

'ಕನ್ನಡವೆನೆ ಕುಣಿದಾಡುವುದೆನ್ನೆದೆ, ಕನ್ನಡವೆನೆ ಕಿವಿ ನಿಮಿರುವುದು!' ಎಂಬ ಕವಿವರ ಕುವೆಂಪು ಅವರ ಕವನವನ್ನು ಅದಾಗಲೇ ಓದಿದ್ದೆ. ಈಗ 'ಕನ್ನಡ' ಎಂಬ ಶಬ್ದ ಕೇಳಿದಾಗ ಅದನ್ನು ಸಾಕ್ಷಾತ್ತಾಗಿ ಅನುಭವಿಸಿದೆ. ನಾನು ಕನ್ನಡಕ್ಕೆ ದ್ರೋಹ ಬಗೆಯಲು ಯತ್ನಿಸಿದುದೇ ನನ್ನ ಅಪಮಾನಕ್ಕೆ ಕಾರಣವಾಯಿತೆಂದು ಬಗೆದು ಭೀಮಸೇನ ರಾಯರಲ್ಲಿಗೆ ಧಾವಿಸಿದೆ. ಅವರು ಅತ್ಯಂತ ಪ್ರೀತಿಯಿಂದ ಒಪ್ಪಿ ನನ್ನನ್ನು ಕನ್ನಡ ವರ್ಗಕ್ಕೆ ಸೇರಿಸಿಕೊಂಡರು. ಮೇಲಿನವರ ಅನುಮತಿಯನ್ನು ಲೀಲಾಜಾಲವಾಗಿ ತಾವೇ ದೊರಕಿಸಿಕೊಂಡರು. ಕಟ್ಟೆಯ ಕಲ್ಲು ಕಟ್ಟೆಯನ್ನು ಸೇರಿಕೊಂಡಿತು! ಮರುದಿನ ನಾನು ಗಣಿತ ವಿಷಯದ ವರ್ಗಕ್ಕೆ ಹೋಗದಿದ್ದಾಗ ಮರೆವಿನ ಸ್ವಭಾವದ ರಹಮತುಲ್ಲಾ ಸಾಹೇಬರು 'ಸಿದ್ಧಯ್ಯನೇಕೆ ಬಂದಿಲ್ಲ' ಎಂದು ಕೇಳಿದರಂತೆ. ತರಗತಿಯಲ್ಲಿದ್ದವರು ಮುನ್ನಿನ ದಿನ ನಡೆದ ರಾದ್ಧಾಂತವನ್ನು ಅವರ ಸ್ಮರಣೆಗೆ ತಂದು, 'ಅವನೀಗ ಕನ್ನಡ ವರ್ಗಕ್ಕೆ ಸೇರಿದ್ದಾನೆ' ಎಂದು ಹೇಳಿದಾಗ 'ವಿನಾಕಾರಣ ಒಬ್ಬ ಒಳ್ಳೆಯ ವಿದ್ಯಾರ್ಥಿಯನ್ನು ಕಳೆದುಕೊಂಡೆ' ಎಂದು ಮರುಗಿದರಂತೆ. ನನಗಿದು ಗೊತ್ತಾಗುತ್ತಲೇ ಅವರ ಬಳಿಗೆ ಹೋಗಿ ಕ್ಷಮೆ ಕೇಳಿಕೊಂಡು, 'ತಾವು ದೊಡ್ಡವರು; ಇನ್ನರಾದರೂ ಆಗಿದ್ದರೆ ನನ್ನ ಭವಿಷ್ಯವನ್ನೇ ಭಸ್ಮಗೊಳಿಸುತ್ತಿದ್ದರು!' ಎಂದೆ. ಅದಕ್ಕವರು, 'ಅಂಥ ನೀಚರೂ ಇರುವರೆ ಉಪಾಧ್ಯಾಯ ಕುಲದಲ್ಲಿ? ವಿದ್ಯಾರ್ಥಿಗಳು ನಮ್ಮ ಮಕ್ಕಳಪ್ಪಾ, ನನ್ನ ಮಗನೇ ಕದಾಚಿತ್ ನನಗೆ ಏನಾದರೂ ಅಂದರೆ ಅವನ ಭವಿತವ್ಯ ಹಾಳು ಮಾಡುವೆನೆ ನಾನು? ನೀನು ಮತ್ತೆ ನನ್ನ ವರ್ಗಕ್ಕೆ ಬರಲಿಚ್ಛಿಸಿದರೆ ನಿನಗೆ ನನ್ನ ತೆರೆದ ತೋಳಿನ ಸ್ವಾಗತ!' ಎಂದು ಹೇಳಿದರು. "ಮತ್ತೆ ಮತ್ತೆ ವಿಷಯ ಪರಿವರ್ತನೆ ಬೇಡ ಸಾರ್! ನನಗೇಕೋ ಕನ್ನಡವನ್ನೇ ಕಲಿಯಬೇಕೆನ್ನಿಸಿದೆ!" ಎಂದೆ. 'ಹಾಗೆಯೇ ಆಗಲಿ' ಎಂದರು. ಅವರಿಗೆ ಮತ್ತೊಮ್ಮೆ ಕೈಮುಗಿದು ಕನ್ನಡ ವರ್ಗದತ್ತ ಹೋದೆ. ಆಮೇಲೆ ಕನ್ನಡವನ್ನುಳಿದು ಬೇರೆ ವಿಷಯವನ್ನು ಕನಸಿನಲ್ಲಿಯೂ ನೆನೆಯಲಿಲ್ಲ!

ನನ್ನ ಕನ್ನಡ ಗುರುಗಳಾದ ತವಗ ಭೀಮಸೇನರಾಯರಾಗ ಕಲಬುರಗಿಯಲ್ಲಿ ಕನ್ನಡದ ಪುನರುತ್ಥಾನ ಪ್ರಯತ್ನಗಳ ಕರ್ಣಧಾರರಾಗಿದ್ದರು. ವಕೀಲರಲ್ಲಿ ಅಶ್ವತ್ಥ

ರಾಯರು, ಅಣ್ಣಾರಾವ್ ಗಣಮುಖಿ ಅವರು, ಕಪಟ್ರಾಳ್ ಕೃಷ್ಣರಾಯರು ಕನ್ನಡದ ಚಳವಳಿಗೆ ಚಾಲನೆ ನೀಡಿದವರಾಗಿದ್ದರು. ತವಗ ಭೀಮಸೇನರಾಯರು, ವಾಜೇಂದ್ರರಾವ್ ಮಾಸ್ತರರು. ಷಡಕ್ಷರಯ್ಯ ಪಲ್ಲಾಪುರಮಠ ಅವರು ಶಿಕ್ಷಕರಲ್ಲಿಯೂ, ಮಹಾಂತಪ್ಪ ಅಲ್ಲದೆ ಹಾಗೂ ಅಣ್ಣಪ್ಪ ನಮೋಶಿ ಅವರು ವ್ಯಾಪಾರಸ್ಥರಲ್ಲಿಯೂ, ಪೂಜ್ಯ ದೊಡ್ಡಪ್ಪಾ ಅಪ್ಪಾ ಅವರು ಪೀಠಾಧಿಪತಿಗಳಲ್ಲಿಯೂ, ಚೌದಾಪುರಿ ಹಿರೇಮಠದ ಶ್ರೀ ಶಾಂತವೀರಸ್ವಾಮಿಗಳೂ, ಗದ್ದುಗೆ ಮಠದ ಶ್ರೀ ಶಿವಮೂರ್ತಿ ಸ್ವಾಮಿಗಳೂ ಮಠಾಧಿಪತಿಗಳಲ್ಲಿಯೂ ಕನ್ನಡದ ಪುನರುಜ್ಜೀವನಕ್ಕೆ ಪ್ರೇರಕಶಕ್ತಿಗಳಾಗಿದ್ದರು. ನಾನು ಸಹಜವಾಗಿಯೇ ಈ ಕನ್ನಡ ಚಳುವಳಿಯ ಪ್ರವರ್ಧಿಸುತ್ತಿದ್ದ ಪ್ರವಾಹದ ಸೆಳೆತಕ್ಕೆ ಒಳಗಾದೆ. ತನ್ನ ಕನ್ನಡ ಅಧ್ಯಯನಕ್ಕೆ ಉಕ್ಕು ಬಂದಿತು. ಕುಕ್ಕನೂರಿನಲ್ಲಿ ಅನುಭವಿಸಿದ ಪುಸ್ತಕಗಳ ಕೊರತೆಯನ್ನು ಕಲಬುರಗಿಯಲ್ಲಿ ಕಾಣಲಿಲ್ಲ. ಪ್ರೌಢ ಶಾಲೆಯ ಹಾಗೂ ಕಾಲೇಜಿನ ವಾಚನಾಲಯ ಒಂದೇ ಆಗಿದ್ದುದರಿಂದ ಸಾಕಷ್ಟು ಒಳ್ಳೆಯ ಕನ್ನಡ ಪುಸ್ತಕಗಳು ಉಪಲಬ್ಧವಿದ್ದುವಲ್ಲಿ. ತವಗ ಭೀಮಸೇನರಾಯರ ಸ್ವಂತ ಸಂಗ್ರಹವೂ ಸಾಕಷ್ಟು ದೊಡ್ಡದಿತ್ತು. ಅವರೂ ಓದಲು ಒಳ್ಳೊಳ್ಳೆಯ ಕನ್ನಡ ಪುಸ್ತಕಗಳನ್ನು ಕೊಡುತ್ತಿದ್ದರು. ಇಷ್ಟಾದರೂ ಕವಿತೆ ಬರೆಯುವ ಸಾಹಸಕ್ಕೆ ಕೈಹಾಕಿರಲಿಲ್ಲ. ಆ ಯೋಗವೂ ಅನಿರೀಕ್ಷಿಕವಾಗಿ ಒದಗಿ ಬಂದಿತು. ಕನ್ನಡ ಕವನ ಸ್ಪರ್ಧೆಯೊಂದು ಏರ್ಪಟ್ಟಿತು. ಅದಕ್ಕೆ ಒಂದೇ ಕವಿತೆ ಬಂದಿತ್ತು. ಸ್ಪರ್ಧೆಯಿಂದ ಮೇಲೆ ಕನಿಷ್ಠ ಎರಡು ಕವಿತೆಗಳಾದರೂ ಇರಬೇಕಲ್ಲವೆ? ಸ್ಪರ್ಧೆಯ ಆಯೋಜಕರು ಕನ್ನಡ ಸಭೆಯೊಂದರಲ್ಲಿ ಈ ವಿಷಯದ ಸಖೇದ ಪ್ರಸ್ತಾಪ ಮಾಡಿ ಇಲ್ಲಿ ನೆರೆದವರಲ್ಲಿ, ಯಾರಾದರೂ ಇನ್ನೊಂದು ಕವಿತೆ ಕಳಿಸಿ ಸ್ಪರ್ದೆ ವಿಫಲವಾಗದಂತೆಸಗಬೇಕೆಂದು ಕಳಕಳಿಯಿಂದ ಕೇಳಿಕೊಂಡರು. ಅಂದು ರಾತ್ರಿಯೆಲ್ಲ ಅದೇ ಯೋಚನೆ ನನಗೆ. ಯಾವಾಗ ನಿದ್ರೆ ಹತ್ತಿತೋ ಗೊತ್ತಿಲ್ಲ. ಸ್ಪರ್ಧೆಗೆ ಕಳಿಸಬೇಕಾಗಿದ್ದ ಕವಿತೆ ಬೆಳಗನ್ನು ಕುರಿತುದಾಗಿರಬೇಕಿತ್ತು. ಬೆಳಗಾಗುತ್ತಲೇ ಬರೆಯಲು ಕುಳಿತೆ. ಕವಿತೆಯೊಂದು ಕೊನರಿತು ಕಾಗದದ ಮೇಲೆ. ಸ್ಪರ್ಧೆಗೆ ಕಳಿಸಿದೆ. ಅದಕ್ಕೇ ಪ್ರಥಮ ಪಾರಿತೋಷಕ ಬಂದಿತು. ಕಲಬುರಗಿಯಲ್ಲೆಲ್ಲ ನಾನು ಕವಿಯೆಂಬ ಖ್ಯಾತಿ ಹರಿಡಿತು. ಅಂತೂ ಅಂದು ಕವಿಯಾಗಿಬಿಟ್ಟೆ!

## ಕವನ ಅರಳಿತು :

ನನ್ನ ಕನ್ನಡ ಗುರುಗಳೂ ಹಿಗ್ಗಿದರು. ಕವಿತೆಯನ್ನು ಓದಿಸಿ ಕೇಳಿ ಅಲ್ಲಲ್ಲಿ ಸರಿಪಡಿಸಿದರು. ಪೂಜ್ಯ ತಂದೆಯವರೂ ಕವಿತೆಯ ಪ್ರತಿ ತರಿಸಿಕೊಂಡು ನೋಡಿ ತಮ್ಮ ಆನಂದವನ್ನು ತಿಳಿಸಿದ್ದರು. ನಾನು ಬರೆದ ಕವಿತೆ ಷಟ್ಪದಿಯಲ್ಲಿದ್ದುದು



ಅವರ ಸಂತೋಷ ಇಮ್ಮಡಿಸುವುದಕ್ಕೆ ಕಾರಣವಾಗಿದ್ದಿತು. ನನ್ನ ಪ್ರಾರಂಭದ ಕವಿತೆಗಳೆಲ್ಲ ಷಟ್ಪದೀ ರೂಪ ತಳೆದೇ ಮೈದೋರಿದ್ದುವು. ಇಕಬಾಲರ ಒಂದೆರಡು ಗೀತೆಗಳನ್ನೂ ನಾನು ಷಟ್ಪದಿಯಲ್ಲಿಯೇ ಭಾಷಾಂತರಿಸಿದ್ದೆ. ಅವುಗಳಲ್ಲೊಂದು ಮುಂದೆ 'ಜಯ ಕರ್ನಾಟಕ'ದಲ್ಲಿ ಅಚ್ಚಾದಾಗ ನನ್ನ ಹೆಮ್ಮೆ ಗರಿಗೆದರಿದ ಗರುಡನಂತಾಗಿದ್ದಿತು. ಊರಲ್ಲೆಲ್ಲ ಅಲೆದು ಬಂದಿದ್ದ–ಯಾರಾದರೂ ಅದರ ಬಗ್ಗೆ ಪ್ರಸ್ತಾಪಿಸಿ 'ಭಲೆ' ಎನ್ನುವರೇನೋ ಎಂದು. ಮೊದಲೇ ಕನ್ನಡ ಬಾರದವರೇ ಹೆಚ್ಚಿಗಿದ್ದ ಕಲಬುರಗಿ, ಸಾಲುದುದಕ್ಕೆ ಪ್ರಕಟವಾದುದು ಕತೆಯಲ್ಲ, ಕವಿತೆ. ಯಾರು ಓದಬೇಕು? ಯಾರೂ ಓದದೆ ನನ್ನನ್ನು ಮುನ್ನಿನಂತೆಯೇ ಉಪೇಕ್ಷಿಸಿದುದು ಒಂದು ರೀತಿಯಿಂದ ಒಳ್ಳೆಯದೇ ಆಯಿತು. ನನ್ನ ಅಂಕುರಿಸಲಿದ್ದ ಅಹಂಕಾರ ಮೊಳಕೆಯಾಗುವ ಮುನ್ನವೇ ಅಳಿದು ಹೋಯಿತು. ಮತ್ತೆ ಕೊನರದಂತೆ ಮುರುಟಿ ಹೋಯಿತು.

ತವಗ ಭೀಮಸೇನರಾಯರು ಕನ್ನಡ ತರಗತಿಗಳಿಗೆ ವಿದ್ಯಾರ್ಥಿಗಳನ್ನು ಆಕರ್ಷಿಸಲು ಅವರ ಹಾಸ್ಯ ಪ್ರವೃತ್ತಿ ಹಾಗೂ ಗಮಕ ಕಲೆಗಳು ಕಾರಣವಾಗಿದ್ದುವು. ಪಾಠಗಳ ಮಧ್ಯೆ ಮಧ್ಯೆ ಹಾಸ್ಯಚಟಾಕಿಗಳನ್ನು ಹಾರಿಸುತ್ತಿದ್ದರು. ಆಧುನಿಕ ಕನ್ನಡ ಕವಿತೆಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಕನ್ನಡ ವಿದ್ಯಾರ್ಥಿಗಳಿಗೆ ಅವರ ಮನೆ ಮುಕ್ತದ್ವಾರ; ಕನ್ನಡ ಸಮಾರಂಭಗಳಿಗಾಗಿ ಹೊರಗಿನಿಂದ ಯಾರೇ ಬಂದರೂ ಅವರಿಗದು ಅತಿಥಿಭವನ. ಅವರೇ ಪ್ರಾರಂಭಿಸಿದ ಕಲಬುರಗಿಯ ಕನ್ನಡ ಸಾಹಿತ್ಯ ಸಂಘವಿಂದು ಒಂದು ಹಿರಿಯ ಕನ್ನಡ ಸಂಸ್ಥೆ. ಅವರ ಪ್ರೇರಣೆಯ ಫಲವಾಗಿ 'ಮಿಂಚು' ಎಂಬ ಕೈಬರಹದ ಕನ್ನಡ ಮಾಸ ಪತ್ರಿಕೆ ಪ್ರಕಟವಾಗತೊಡಗಿತು. ಅದಕ್ಕೆ ನನ್ನನ್ನೇ ಸಂಪಾದಕನನ್ನಾಗಿ ಆರಿಸಿದರವರು. 'ವಿದ್ಯಾನಂದ ಗುರುಕುಲ'ದಲ್ಲಿ ಗುರುವರ್ಯ ಪಾ.ಭೀ. ದೇಸಾಯಿಯವರ ನೇತೃತ್ವದಲ್ಲಿ ನಾನು ಪಡೆದಿದ್ದ ಕನ್ನಡ ಜ್ಞಾನ ಕಲಬುರಗಿಯಲ್ಲಿ ಕುಸುಮಿತವಾಗತೊಡಗಿದ್ದಿತು. ಕಲಬುರಗಿಯಲ್ಲಿ ಯಾವುದೇ ಕನ್ನಡ ಕಾರ್ಯಕ್ರಮ ಎಲ್ಲಿಯೇ ಜರುಗಲಿ, ಅಲ್ಲಿ ನಾನಿರುತ್ತಿದ್ದೆ. ಬರಬರುತ್ತ ಪರಿಚಯದ, ವಂದನಾರ್ಪಣೆಯ ಕಾರ್ಯಗಳನ್ನು ನಿರ್ವಹಿಸತೊಡಗಿದೆ. ನಾನೇ ಮುಖ್ಯಭಾಷಣಕಾರನಾಗುವ ದಿನಗಳೂ ಮುಂದೆ ಬಂದುವು.

## ನುಂಗಲಾರದ ತುತ್ತು

ಮತ್ತೊಂದು ಬಿರುಗಾಳಿ ಬೀಸಿತು ನನ್ನ ಬಾಳಿನಲ್ಲಿ. ನಾನಿದ್ದ ಉಚಿತ ಪ್ರಸಾದ ನಿಲಯ ಅನುಚಿತ ರೀತಿಯಲ್ಲಿ ನಡೆದಿದ್ದಿತು. ಶ್ರೀಗಳವರೇನೋ ಹೆಸರಿಗೆ ತಕ್ಕಂತೆ ಶಾಂತರು; ಆದರೆ ವೀರರಲ್ಲ! ಅವರು ನಂಬಿ ನೇಮಕ ಮಾಡಿಕೊಂಡಿದ್ದ ವ್ಯವಸ್ಥಾಪಕ ಅವ್ಯವಸ್ಥಾಪಕ. ಅವನೊಬ್ಬನಿಗೇ ನಮ್ಮಂಥ ನಾಲ್ವರ ಆಹಾರ ಬೇಕಾಗುತ್ತಿತ್ತು. ಅಟ್ಟ

ಅಡಿಗೆಯ ಬಹುಪಾಲು ಈ ಬಕಾಸುರ ಹಾಗೂ ಹೊಲಸುತನಕ್ಕೆ ಹೆಸರಾಗಿದ್ದ ಅಡುಗೆಯವನ ಪಾಲಿಗೆ. ಹೆಸರು ನಮ್ಮದು; ಕೊಸರು ಅವರದು. ಏನೋ ಸದುದ್ದೇಶದಿಂದ ಸ್ಥಾಪಿತವಾದ ಕಲಬುರಗಿಯ ಪ್ರಪ್ರಥಮ ಉಚಿತ ವಿದ್ಯಾರ್ಥಿನಿಲಯ ನಮ್ಮ ದುಡುಕಿನಿಂದ ಕೆಡಬಾರದೆಂದು ನಾವು ಏಳೆಂಟು ವಿದ್ಯಾರ್ಥಿಗಳು ಬಹಳ ಬಿಗಿ ಹಿಡಿದೆವು. ನಮ್ಮ ದುಗುಡವನ್ನು ಶ್ರೀಗಳವರಿಗೂ ಸೌಮ್ಯವಾಗಿ ಅರಿಕೆ ಮಾಡಿಕೊಂಡಾಯಿತು. ಆದರೆ ಆಡಳಿತದ ಅನುಭವವಿಲ್ಲದುದರಿಂದಲೋ, ಅಥವಾ ಘಟಿಸುತ್ತಿದ್ದ ಅವ್ಯವಹಾರಗಳ ಅವಮೂಲ್ಯನದಿಂದಲೋ ಅವರ ಸೇವೆಯನ್ನು ಮಾತ್ರ ಸರಿಯಾಗಿ ಮಾಡುತ್ತಲಿದ್ದ ಆ ಬಕಾಸುರನ ಮೇಲಿನ ಮಮತೆಯಿಂದಲೋ ಅವರು ನಮ್ಮ ಅರಿಕೆಗೆ ದರಕಾರ ತೋರಲಿಲ್ಲ. ಇಷ್ಟೇ ಅಲ್ಲ, 'ನೀವು ಬಡವರ ಮಕ್ಕಳೆಂದುಕೊಂಡು ಬಂದಿರುವಿರಿಲ್ಲಿ. ನೀಡಿದುದನ್ನುಂಡು ವಿದ್ಯಾಭ್ಯಾಸ ಮಾಡಬೇಕು ನೀವು. ನೀವೇನು ವಿದ್ಯಾಭ್ಯಾಸ ಮಾಡಲು ಬಂದಿರುವಿರೋ ರುಚಿ ರುಚಿ ಊಟ ಬಯಸಿ ಬಂದಿರುವಿರೋ?' ಎಂದು ಗದ್ದರಿಸಿದರು. ನನಗೆ ತಡೆಯದಾಯಿತು: "ಬುದ್ಧೀ, ಪ್ರಸಾದನಿಲಯಕ್ಕೆ ಆರ್ಥಿಕ ಅಡಚಣೆಗಳೇನಾದರೂ ಒದಗಿದರೆ ಒಂದೇ ಹೊತ್ತು ಊಟ ಮಾಡಿ ಓದಲೂ ಸಿದ್ಧರು ನಾವು; ಆದರೆ ನಮ್ಮಲ್ಲಿ ಒಬ್ಬೊಬ್ಬರಿಗೂ ಖಾನಾವಳಿಯವರಿಗಿಂತಲೂ ಹೆಚ್ಚು ವೆಚ್ಚ ತೋರಿಸಿ, ನುಚ್ಚನ್ನೂ ಸಹ ಸರಿಯಾಗಿ ನಮಗೆ ನೀಡದಿರುವುದು ಅದಾವ ನ್ಯಾಯ? ಸಮಾಜದ ದಾನಿಗಳು ಈ ಸಂಸ್ಥೆಗೆ ದಾನ ನೀಡುತ್ತಿರುವುದು ನಮಗಾಗಿಯೆಂದು, ಈ ಖೂಳರಿಗಾಗಿ ಅಲ್ಲ!" ಎಂದು ಖಾರವಾಗಿಯೇ ಉತ್ತರಿಸಿದೆ. ಶ್ರೀಗಳವರಿಗಿದು ನುಂಗಲಾರದ ತುತ್ತೆನಿಸಿತು. ಮುಂದೆ ನನ್ನ ಜೀವದ ಗೆಳೆಯರಲ್ಲೊಬ್ಬರಾದ ಹನುಮಂತ ರೆಡ್ಡಿಯವರೂ, ಮಡಿವಾಳಯ್ಯನವರೂ ನನ್ನ ವಾದವನ್ನು ಸಮರ್ಥಿಸಿದ ಮೇಲಂತೂ ಕೆರಳಿ ಕಿಡಿಕಿಡಿಯಾದರು ಶ್ರೀಗಳವರು. ಅಂದೇ ಯಜಮಾನರಿಗೆ ನನ್ನ ಮೇಲೆ ಚಾರ್ಜ್‌ಷೀಟ್ ಒಪ್ಪಿಸಿದರು. ಯಜಮಾನರ ಸಮ್ಮುಖದಲ್ಲಿ ವಿಚಾರಣೆ ನಡೆಯಿತು. ಯಜಮಾನರು ನನ್ನ ಬಗ್ಗೆ ಮೊದಲಿನಂತೆಯೇ ವಾತ್ಸಲ್ಯಭರಿತರಾಗಿದ್ದರು. "ನಿಮ್ಮ ಸಮಸ್ಯೆಯೇನಿದ್ದರೂ ನೀವು ಶ್ರೀಗಳವರೊಡನೆ ಸಮಾಲೋಚಿಸಿ ಬಗೆಹರಿಸಿಕೊಳ್ಳಬೇಕೆಂದು" ನಮಗೆ ತಿಳಿಹೇಳಿದರು. "ಅದನ್ನಿದಾಗಲೇ ಮಾಡಿ ಮುಗಿಸಿದ್ದೇವೆ ಪೂಜ್ಯರೆ; ಏನೂ ಪ್ರಯೋಜನವಾಗಲಿಲ್ಲ. ಗದ್ದರಿಕೆಯೊಂದೇ ನಮಗೆ ದೊರೆತ ಫಲ. ಈಗವರು ಆರೋಪಕ್ಕೆ ಒಳಗಾದವರು. ಅವರೇ ಮತ್ತೆ ನ್ಯಾಯಾಧೀಶರಾಗಲಾರರು. ತಾವೇ ನ್ಯಾಯನಿರ್ಣಯ ಮಾಡಬೇಕು."

ಬಹುಶಃ ನಾನು ಮರ್ಯಾದೆ ಮೀರಿ ಮಾತನಾಡಿದೆನೆಂದು ತೋರುತ್ತದೆ. ಯಜಮಾನರ ಸದಾ ಶಾಂತ ಸೌಮ್ಯವದನವೂ ಕಿಂಚಿದುಗ್ರವಾದಂತೆ ತೋರಿತು.



ಮುಂದೆ ಆ ಉಚಿತ ಪ್ರಸಾದ ನಿಲಯದಲ್ಲಿರುವುದೇ ಬೇಡವೆನ್ನಿಸಿತು ನನಗೆ. ಬಡವರಾದವರು ಆತ್ಮಗೌರವಕ್ಕೆ ಅರ್ಹರಲ್ಲ; ಏನೆಂದರೂ ಅನ್ನಿಸಿಕೊಂಡು, ಏನನ್ನು ನೀಡಿದರೂ ಪಿಟ್ಟೆನ್ನದೆ 'ಮಹಾಪ್ರಸಾದ' ವೆಂದು ಸ್ವೀಕರಿಸಿ, ಎಂತಿರಿಸಿದರೂ ಸಹಿಸಿಕೊಂಡು ಬದುಕಬೇಕೆನ್ನುವವರು ನಡೆಸುತ್ತಿದ್ದ ಆ ಉಚಿತ ಪ್ರಸಾದನಿಲಯಕ್ಕೆ ಅಂದೇ ಶರಣು ಹೊಡೆದು ಪಕ್ಕದ ಊರಿನವರೂ ನಿಜವಾದ ಸ್ನೇಹಿತರೂ ಆಗಿದ್ದ ಕಲ್ಲೂರಿನ ಹಿರೇಮಠದ ಗುರುಶಾಂತಯ್ಯನವರು ವಾಸಿಸುತ್ತಿದ್ದ ಗುರುಬಸವ ಮಠಕ್ಕೆ ಹೋದೆ. ಅಲ್ಲಿಯ ಗುರುಬಸವ ಮಹಾಸ್ವಾಮಿಗಳವರು ತಮ್ಮ ಮಠದ ಮಹಡಿಯನ್ನು ವಿದ್ಯಾರ್ಥಿಗಳ ವಾಸಕ್ಕಾಗಿ ಬಿಟ್ಟುಕೊಟ್ಟಿದ್ದರು. ಕೆಳಗೆ ಬಾವಿಯ ನೀರು ಸೇದಿಕೊಂಡು ಸ್ನಾನ ಮಾಡುವುದು; ಖಾನಾವಳಿಗೆ ಹೋಗುವವರು ಖಾನಾವಳಿಗೆ, ವಾರದ ಮನೆಗಳಿಗೆ ಹೋಗುವವರು ವಾರದ ಮನೆಗಳಿಗೆ, ಸ್ವಯಂಪಾಕ ಮಾಡಿಕೊಳ್ಳುವವರು ಅಡುಗೆ ಮನೆಗೆ ಹೋಗುವುದು; ಊಟ ತೀರಿಸಿಕೊಂಡು ಪ್ರೌಢಶಾಲೆಗೋ ಕಾಲೇಜಿಗೋ ಹೋಗಿ ಬರುವುದು; ಉಳಿದ ಸಮಯದಲ್ಲಿ ವ್ಯಾಸಂಗ. ನನಗೆ ಈ ಸ್ವಾಧೀನತೆಯ ಪರಿಸರ ತುಂಬ ಮೆಚ್ಚಿಗೆಯಾಯಿತು. ಅಲ್ಲಿ ನನಗೆ ನಿಜವಾದ ಗೆಳೆಯರು ಸಿಕ್ಕರು. ಗುರುಶಾಂತಯ್ಯನವರು, ಕೊಪ್ಪಳದ ಸಿದ್ಧರಾಮಪ್ಪ ಸಂಕ್ಲಾಪುರ ಹಾಗೂ ವೀರಭದ್ರಪ್ಪನವರು, ಕನಕಗಿರಿಯ ಹಿರೇಮಠದ ಮಹಾಂತಯ್ಯನವರು, ಗಂಗಾವತಿಯ ಕೆ.ಆರ್. ಹಿರೇಮಠರು, ಕಲ್ಲಯ್ಯನವರು, ತೊಂಡಿಹಾಳಿನ ಪಟ್ಟದಯ್ಯನವರು–ಎಲ್ಲರೂ ತೆರೆದ ತೋಳುಗಳೊಡನೆ ಸ್ವಾಗತಿಸಿದರು ನನ್ನನ್ನು. ನನಗೂ ಅವರ ಸಹವಾಸ ಬಹಳ ಹಿತಕರವೆನಿಸಿತು. ಆಗ ತಾನೆ ಕಿತ್ತೂರ ಚನ್ನಮ್ಮನ ನಾಟಕವನ್ನು ಅತ್ಯಂತ ಯಶಸ್ವಿಯಾಗಿ ಅಭಿನಯಿಸಿ ಆ ಭಾಗದ ಎಲ್ಲರ ಮನೆಮಾತಾಗಿದ್ದರವರು. ನಾನೂ ಬ್ರಹ್ಮಪುರದಿಂದ ಬಂದು ನೋಡಿದ್ದೆ ಆ ನಾಟಕ ಪ್ರಯೋಗವನ್ನು. ಹಿಂದೆ ನೋಡಿದ್ದ ಕಂಪೆನಿಯ ನಾಟಕಕ್ಕಿಂತಲೂ ಯಶಸ್ವೀ ಪ್ರಯೋಗವದೆಂದು ನನಗೆನಿಸಿದ್ದಿತು. ಸಂಕ್ಲಾಪುರ ಸಿದ್ಧರಾಮಪ್ಪನವರು ಕಿತ್ತೂರ ಚೆನ್ನಮ್ಮನ ಪಾತ್ರದಲ್ಲಿ, ಗುರುಶಾಂತಯ್ಯನವರು ಮಲ್ಲಪ್ಪಸೆಟ್ಟಿಯ ಪಾತ್ರದಲ್ಲಿ, ಮಹಾಂತಯ್ಯನವರು ರುದ್ರಪ್ಪ ನಾಯಕನ ಪಾತ್ರದಲ್ಲಿ, ಕಲ್ಲಯ್ಯನವರು ಥ್ಯಾಕರೇ ಪಾತ್ರದಲ್ಲಿ ನೀಡಿದ್ದ ಅಭಿನಯ ಅತ್ಯುನ್ನತ ಮಟ್ಟದ್ದಾಗಿತ್ತು. ಆ ನಾಟಕ ನೋಡಿದಾಗಿನಿಂದ ನಾನು ಅಲ್ಲಿಯೇ ಇದ್ದಿದ್ದರೆ ನನಗೂ ಈ ನಾಟಕದಲ್ಲೊಂದು ಪಾತ್ರ ಸಿಕ್ಕುತ್ತಿದ್ದಿತಲ್ಲ, ಆ ನಾಟಕದಲ್ಲಿ ಎಂಥದಾದರೂ ಒಂದು ಪಾತ್ರ ವಹಿಸಬೇಕೆಂಬ ನನ್ನ ಬಹುದಿನಗಳ ಆಸೆ ಈಡೇರುತ್ತಿದ್ದಿತಲ್ಲ–ಎಂದು ಒಳಗೊಳಗೇ ತಳಮಳಿಸಿದ್ದೆ; ಇವರೊಡನೆ ಕೂಡಿ ಇರುವ ಸುಯೋಗ ಸಿಕ್ಕೀತೇ–ಎಂದು ಹಾತೊರೆದಿದ್ದೆ. ಈಗ

ತಾನಾಗಿ ಆ ಸುವರ್ಣ ಸಂದರ್ಭ ಒದಗಿ ಬರಲು ಬಹಳ ಹಿಗ್ಗಿದ್ದೆ. ಬೇಕಾದಷ್ಟು ಬೇಡಿಕೆ ಜಂಗಮರಿಗೆ ಆ ಓಣಿಯಲ್ಲಿ. ನಾನೂ ಜಂಗಮನೆಂದು ನನ್ನನ್ನೂ ಪ್ರೀತಿಯಿಂದ ಕರೆಯತೊಡಗಿದರು ಆ ಓಣಿಯ ಸದ್ಭಕ್ತ ಬಾಂಧವರು. ಕರೆದಾಗ ಕರೆದವರ ಮನೆಯಲ್ಲಿ ಊಟ, ಅದಿಲ್ಲದಾಗ ಸ್ವಯಂಪಾಕ, ಶ್ರೀಮಠದಿಂದ ಧಾರಾಳವಾಗಿ ದೊರೆಯುತ್ತಿದ್ದ ಪ್ರಸಾದ–ಹೀಗೆ ಬಹಳ ಸೊಗಸಾಗಿ ಸಾಗಿತು ಹೊಸ ಜೀವನ.

ತಂದೆಯವರಿಗಿದನ್ನು ತಿಳಿಸಲೋ ಬೇಡವೋ ಎಂದು ಬಹಳ ಆಲೋಚಿಸಿದೆ. ತಿಳಿಸಿದರೆ ಅವರೆಷ್ಟು ನೊಂದುಕೊಳ್ಳುವರೋ, ಅವ್ವನೆಷ್ಟು ಗಾಬರಿಯಾಗುವಳೋ ಎಂಬ ಅಳುಕು. ಕೊನೆಗೆ ತಕ್ಕ ತೀರ್ಮಾನವನ್ನೇ ಕೈಕೊಂಡೆ. "ನಾನು ತಿಳಿಸದಿದ್ದರೂ ಒಮ್ಮಿಲ್ಲೊಮ್ಮೆ ಈ ಸಂಗತಿ ತಿಳಿದೇ ತಿಳಿಯುವುದು; ಈಗ ತಿಳಿಸಿದರೆ ಆಗುವ ನೋವಿಗಿಂತ ಹೆಚ್ಚಿನ ಸಂತಾಪ ಈ ಸುದ್ದಿ ತಾನಾಗಿ ತಿಳಿದಾಗ ಆಗಬಹುದು. ಮಗನೇ ಏಕೆ ತಿಳಿಸಲಿಲ್ಲ, ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ–ಎಂದವರು ವ್ಯಥೆ ಪಡಬಹುದು. ಆದುದರಿಂದ ತಿಳಿಸಿಬಿಡುವುದೇ ಮೇಲು" ಎಂಬುದೇ ಆ ತೀರ್ಮಾನ ತಿಳಿಸಿಬಿಟ್ಟೆ.

ತಂದೆಯವರ ಉತ್ತರ ನನ್ನಲ್ಲಿ ಹೊಸ ನೆತ್ತರ ಹರಿಯುವಂತೆ ಮಾಡಿತು. "ನಿನಗೆ ಇಷ್ಟಬಂದಲ್ಲಿ ಇರು, ಇಷ್ಟವೆನಿಸಿದವರೊಡನೆ ಇರು; ನನ್ನಿಷ್ಟದಂತೆ ಪ್ರಥಮ ತರಗತಿಯ ಪದವೀಧರನಾಗು! ಮದ್ಯ, ಮಾಂಸ, ವ್ಯಭಿಚಾರಗಳಿಂದ ದೂರವಿರು" ಕೂಡಲೇ ಉತ್ತರವಿತ್ತೆ. "ತಮ್ಮ ಇಷ್ಟ ಪೂರ್ತಿಗಾಗಿ ಪ್ರಾಣವನ್ನೇ ಪಣಕ್ಕೊಡ್ಡಿ ಓದುವೆ. ತಾವು ತಿಂಗಳು ತಿಂಗಳೂ ಈಗ ಕಳಿಸುವುದಕ್ಕಿಂತ ಹೆಚ್ಚಿನ ಹಣ ಕಳಿಸಬೇಕಿಲ್ಲ. ಮೊದಲು ಕಳಿಸುತ್ತಿದ್ದುದಕ್ಕಿಂತಲೂ ಕಡಿಮೆ ಕಳಿಸಿರಿ. ನನಗೀಗ ಪಠ್ಯ ಪುಸ್ತಕಗಳು ಸಹ ಬೇಕಿಲ್ಲ. ಸಹಪಾಠಿಗಳ ಪುಸ್ತಕಗಳನ್ನೇ ಉಪಯೋಗಿಸುತ್ತಿದ್ದೇನೆ. ಅವರಿಗೆ ತಿಳಿಸಿ ಹೇಳುವ ನೆಪದಲ್ಲಿ ನನ್ನ ಅಭ್ಯಾಸ ಕೂಡ ಅನಾಯಾಸವಾಗಿ ನಡೆಯುತ್ತಿದೆ" ಇತ್ಯಾದಿ, ಗುರುಶಾಂತಯ್ಯನವರೊಡನೆ ಇರುವೆನೆಂದು ತಿಳಿದ ಕೂಡಲೆ ತಂದೆಯವರು ಆನಂದಭರಿತರಾಗಿದ್ದರು. ಕಲ್ಲೂರಿನ ಕಲ್ಲಿನಾಥನ ಹೆಸರನ್ನೇ ಅವರಿಗೆ ಇಟ್ಟಿದ್ದರು. ಕಲ್ಲೂರಿನ ಹಿರಯಮಠ ನಮಗೆ ಬಹಳ ಬೇಕಾಗಿದ್ದವರ ಮಠವಾಗಿದ್ದಿತು.

ಗುರುಬಸವ ಮಠದ ಮಹಡಿಯಲ್ಲಿ ಒಂದು ಉಪ್ಪರಿಗೆಯ ಮೊಗಸಾಲೆ. ಅದನ್ನು ನನಗೆ ಮತ್ತು ಗುರುಶಾಂತಯ್ಯನವರಿಗೆ ಬಿಟ್ಟುಕೊಟ್ಟಿದ್ದರು ನಮ್ಮ ಗೆಳೆಯರು. ಅವರ ಈ ಔದಾರ್ಯ ನನ್ನ ಪಾಲಿಗೊಂದು ವರದಾನವಾಗಿ ಪರಿಣಮಿಸಿತು. ಪ್ರಾತಃಕಾಲದಲ್ಲಿ ಗವಾಕ್ಷಗಳಿಂದ ಅರುಣ ಕಿರಣಗಳ ಪ್ರವೇಶ; ಮಠದ ಮುಂದಿನ



ಮರಗಳಲ್ಲಿ ಪಕ್ಷಿಗಳ ಕಲಕಲ ಕೂಜನ; ಮುತ್ತೈದೆಯರು ನೀರು ತರುವ, ಹೂವು ಬಿಡಿಸುವ, ರಂಗವಲ್ಲಿ ರಚಿಸುವ ದೃಶ್ಯಗಳು; ಮನೆಮನೆಗಳಿಂದ ಜೋಗುಳಗಳ, ಪ್ರಾರ್ಥನೆಗಳ, ನಾಮಸಂಕೀರ್ತನೆಗಳ ಮಂಗಳ ಸ್ವರಗಳ; ಇವುಗಳನ್ನು ಆಲಿಸುತ್ತ ನನ್ನೆದೆಯಲ್ಲಿ ನರ್ತಿಸುತ್ತಿದ್ದುವು ಸದ್ಭಾವನೆಗಳು, ಕವಿಹೃದಯ ಕುದುರುತ್ತ ನಡೆಯಿತು; ಪದ್ಯ ಬರೆಯುವುದು ಸಲಿಲವನ್ನೀಂಟುವಷ್ಟು ಸುಲಭವೆನ್ನಿಸತೊಡಗಿತು.

## ಆನಂದಕಂದ

ಈ ಕಾಲದಲ್ಲಿ ನನಗೆ ಅಮಲ ಅಂತಃಕರಣದಿಂದ ನೆರವಾದ ಅಲಿಬಿನ್‌ಗಾಲಿಬ್ ಸಾಹೇಬರನ್ನು ನಾನು ನೆನೆಯಲೇ ಬೇಕು. ಅವರೇ ಓಡಾಡಿ ನನಗೆ ಆ ವಿದ್ಯಾ ಸಂಸ್ಥೆಯ 'ಬಡವರ ನಿಧಿ'ಯಿಂದ ಸಹಾಯಧನ ಕೊಡಿಸಿದರು; ನಗರದ ಪ್ರಮುಖರಿಗೆ ನನ್ನ ಪರಿಚಯ ಮಾಡಿಕೊಟ್ಟರು: ನನ್ನ ಪ್ರಗತಿಯಲ್ಲಿ ವೈಯಕ್ತಿಕವಾದ ಆಸಕ್ತಿಯನ್ನು ತೋರಿದರು. ಅಲ್ಲಿ 'ವೀರಶೈವ ಬಂಧು ಸಮಾಜ'ವೆಂಬ ಸಂಸ್ಥೆಯಿದ್ದಿತು. ನನ್ನಂಥ ಎಲ್ಲರೊಡನೆ ನಾನು ಅದಕ್ಕೆ ಅರ್ಜಿ ಹಾಕಿದೆ. ಆಗ ಅದರ ಕಾರ್ಯದರ್ಶಿಗಳಾಗಿದ್ದ ಅಲ್ಲದ ಮಹಾಂತಪ್ಪನವರು ಹತ್ತು ರೂಪಾಯಿ ನನಗೆ ಆ ಸಂಸ್ಥೆಯ ಸಹಾಯ ಧನವೆಂದು ನೀಡಿದರು. ಈ ಸಹಾಯ ಧನವನ್ನು ಸ್ವೀಕರಿಸಿ ಉದ್ದಕ್ಕೂ ಪಶ್ಚಾತ್ತಾಪ ಪಟ್ಟಿದ್ದೇನೆ! ನಾನು ಎಲ್ಲಿಯೇ ಕಾಣಲಿ, ಎಷ್ಟು ಜನರ ಮಧ್ಯದಲ್ಲಿಯೇ ಕಾಣಲಿ, ಅಲ್ಲದ ಮಹಾಂತಪ್ಪನವರು ಈ ಸಹಾಯಧನವಿತ್ತುದನ್ನು ನನ್ನ ನೆನಪಿಗೆ ತರದೇ ಬಿಡುತ್ತಿರಲಿಲ್ಲ. ಮುಂದೆ ಅವರಿಗೆ ಸಾವಿರಾರು ರೂಪಾಯಿಗಳ ಲಾಭ ಮಾಡಿಕೊಟ್ಟ ಮೇಲೂ 'ಈ ಪುಣ್ಯಕಾರ್ಯ'ವನ್ನವರು ನಿಲ್ಲಿಸಲಿಲ್ಲ! ಸಂಸ್ಥೆಯ ಹತ್ತು ರೂಪಾಯಿಗಳನ್ನು ಕೊಟ್ಟೇ ಇಷ್ಟು ಹಂಗಿಸಿದರು, ಸ್ವಂತದ ಹತ್ತು ರೂಪಾಯಿಗಳನ್ನು ಕೊಟ್ಟಿದ್ದರೆ ಇನ್ನೆಷ್ಟು ಹಂಗಿಸುತ್ತಿದ್ದರೋ–ಎಂದು ನನ್ನಲ್ಲಿಯೇ ನಾನು ಲೆಕ್ಕ ಹಾಕುದುದುಂಟು. ಅವರಿಗಿದರಿಂದ ಆನಂದವಾಗುತ್ತಿದ್ದಿತಾಗಿ ನಾನೂ ಅದಕ್ಕೇಕೆ ಅಡ್ಡ ಬರಬೇಕೆಂದು ಇದನ್ನೆಲ್ಲ ಮೌನವಾಗಿ ಸಹಿಸಿಕೊಂಡೆ. ಆಗ ಅಲ್ಲಿಯ ಕನ್ನಡ ಚಳವಳಿಯ ಪ್ರತಿಷ್ಠೆಯ ಕಾರ್ಯಕ್ರಮವೆಂದರೆ ನಾಡಹಬ್ಬದ ಆಚರಣೆ. ಬ್ರಹ್ಮಪುರದಲ್ಲಿ ನಡೆದ ನಾಡಹಬ್ಬಕ್ಕೆ ನ್ಯಾಯಮೂರ್ತಿ ಟಿ.ಕೆ. ತುಕೋಳರು ಬಂದು 'ವಚನ ಸಾಹಿತ್ಯ'ದ ಬಗ್ಗೆ ವಿದ್ವತ್ಪೂರ್ಣ ಉಪನ್ಯಾಸವನ್ನಿತ್ತರು. ಅಂದಿನಿಂದ ಆ ಸಾಹಿತ್ಯದ ಬಗ್ಗೆ ನನ್ನ ಆಸಕ್ತಿ ಕೆರಳಿ, ಬಸವಣ್ಣನವರ ವಚನಗಳನ್ನು ಮಾತ್ರ ಓದಿದ್ದ ನಾನು ಎಲ್ಲ ವಚನಕಾರರ ವಚನಗಳನ್ನು ಓದಲು ಆರಂಭಿಸಿದೆ. ಆಗ ಪ್ರಾರಂಭವಾದ ಅಧ್ಯಯನ ಇಂದಿಗೂ ಮುಗಿದಿಲ್ಲ. ನನ್ನ ಪಾಲಿಗೆ ಓದಿದ ಸಲಕೊಮ್ಮೆ ಹೊಸ ಹಿಗ್ಗನ್ನು ಹೊಮ್ಮಿಸುವ ಅರ್ಥದ ಅಕ್ಷಯಪಾತ್ರೆಯಾಗಿ ಪರಿಣಮಿಸಿದೆ ಅದು. ಡಾ. ಬೆಟಗೇರಿ ಕೃಷ್ಣಶರ್ಮರು

ಆಧುನಿಕ ಕನ್ನಡ ಕವಿತೆಯ ಬಗ್ಗೆ ಸೋದಾಹರಣ ಉಪನ್ಯಾಸವನ್ನಿತ್ತು ನನಗೆ ಹೊಸಗನ್ನಡ ಕವಿತೆಯ ಹೃದಯ ತಿಳಿಯುವ ಹಾಗೆ ಮಾಡಿದರು. ಅವರ ಕಂಠದ ಮಾರ್ದವ, ವಿಷಯ ನಿರೂಪಣ ಶೈಲಿ, ಪ್ರಗಾಢ ಪಾಂಡಿತ್ಯಗಳು ನನ್ನನ್ನು ಮುಗ್ಧನನ್ನಾಗಿ ಮಾಡಿದುವು. ಆಗ ಅಂಕುರಿಸಿದ ನಮ್ಮಿಬ್ಬರ ಬಾಂಧವ್ಯ 'ಜಯಂತಿ'ಯಲ್ಲಿ ನನ್ನ ಕವಿತೆಗಳು ಪ್ರಕಟವಾಗುವುದಕ್ಕೂ, ಅವುಗಳ ಬಗ್ಗೆ 'ಆನಂದ ಕಂದ'ರ ಸದಭಿಪ್ರಾಯಗಳು ದೊರೆತು ನನ್ನ ಆತ್ಮವಿಶ್ವಾಸ ವರ್ಧಿಸುವುದಕ್ಕೂ ಕಾರಣವಾಯಿತು.

## ಬೆಲ್ಲದ ಹೇರು

ಗುರುಬಸವ ಮಠದ ಗೆಳೆಯರು ಇನ್ನೊಂದು ಕನ್ನಡ ನಾಟಕ ಆಡಲು ಕಂಕಣ ಕಟ್ಟಿದರು. 'ಸ್ತ್ರೀ' ಎಂಬ ನಾಟಕದಲ್ಲಿ ವಿವೇಕಾನಂದನ ಪಾತ್ರವಹಿಸಿದೆ ನಾನು. ನಾಟಕವನ್ನು ಎರಡೇ ವಾರಗಳಲ್ಲಿ ಕಲಿತು ಮಠದಲ್ಲಿಯೇ ರಂಗ ರಚಿಸಿ ಅಭಿನಯಿಸಿದೆವು. ಬಹಳ ಜನ ಮೆಚ್ಚುಗೆಯನ್ನು ಪಡೆಯಿತು ಆ ಪ್ರಯೋಗ. ಚಂಚಲೆಯ ಪಾತ್ರದಲ್ಲಿ ಸಂಗಪ್ಪನವರೂ, ಚಂದ್ರಕಾಂತನ ಪಾತ್ರದಲ್ಲಿ ಕಲ್ಲಯ್ಯನವರೂ, ಹಾಸ್ಯ ಪಾತ್ರದಲ್ಲಿ ಗುರುಶಾಂತಯ್ಯನವರೂ ಅತ್ಯುತ್ತಮವಾದ ಅಭಿನಯವನ್ನು ನೀಡಿದ್ದರು. ನನ್ನ ಅಭಿನಯವೂ ತಕ್ಕಮಟ್ಟಿಗೆ ಯಶಸ್ವಿಯೆನಿಸಿದ್ದಿತು. ಮಂದಿಯ ಮನೋರಂಜನೆಯ ಜೊತೆಗೆ ಕನ್ನಡದ ಬಗ್ಗೆ ಅಭಿಮಾನ ಚಿಮ್ಮಿಸುವುದಕ್ಕೂ ಸಹಾಯಕವಾಗಿದ್ದುವು ಈ ನಾಟಕಗಳು. ವೈಯಕ್ತಿಕವಾಗಿ ನಮಗಾದ ಪ್ರಯೋಜನವೆಂದರೆ, ಯಾರ ಮನೆಯಲ್ಲಿಯೇ ಹಬ್ಬ ಹುಣ್ಣಿಮೆಗಳ, ಮದುವೆ ಮೋಜುಗಳ ಮೃಷ್ಟಾನ್ನ ಭೋಜನ ನಡೆಯಲಿ, ನಮ್ಮನ್ನು ಕರೆಯಲು ಮರೆಯುತ್ತಿರಲಿಲ್ಲ. ಹೀಗೆ, ನನ್ನ ತಂದೆಯವರ ಮಾತಿನಲ್ಲಿ ಹೇಳುವುದಾದರೆ,– 'ಎಲ್ಲರಿಗೂ ಬೆಲ್ಲದ ಹೇರಾಗಿ' ನಮ್ಮ ವಿದ್ಯಾಭ್ಯಾಸ ಮುಂದುವರಿಯಿತು. ನಮ್ಮಲ್ಲಿ ರುಚಿ ವೈಚಿತ್ರ್ಯಗಳೂ, ಸ್ವಭಾವ ವೈಲಕ್ಷಣ್ಯಗಳೂ, ವರ್ತನ ವೈಪರೀತ್ಯಗಳೂ ಇರಲಿಲ್ಲವೆನ್ನಲಾಗದು. ನಾಲ್ಕು ಜನ ಸೇರಿ ಇರುವಲ್ಲಿ ಸಹಜವಾಗಿಯೇ ತಲೆದೋರುವ ಇವೆಲ್ಲ ಇದ್ದವು. ಆದರೆ ಅವುಗಳನ್ನೆಲ್ಲ ಮೀರಿ ಮೇಲೇರಬಲ್ಲ ಸಹಜ–ಸ್ನಿಗ್ಧ–ಶುದ್ಧ ಸ್ನೇಹ ನಮ್ಮೆಲ್ಲರನ್ನೂ ಏಕ ಹೃದಯ ಬಂಧಕ್ಕೆ ಒಳಗಾಗಿಸಿದ್ದಿತು.

ವಾರ್ಷಿಕ ಪರೀಕ್ಷೆ ಮುಗಿಯಿತು. ನಿರೀಕ್ಷಿಸಿದ್ದಂತೆ ಎಲ್ಲರ ಪರೀಕ್ಷೆಗಳ ಫಲಿತಾಂಶ ತೇಗಾಡೆಯಾದವರ ಯಾದಿಯಲ್ಲಿಯೇ ಪ್ರಕಟವಾಗಿದ್ದಿತು. 'ವಿದ್ಯಾನಂದ ಗುರುಕುಲದಲ್ಲಿ' ನನಗೆ ಸಿಕ್ಕಿದ್ದ ಪ್ರಥಮ ಸ್ಥಾನ ಇಲ್ಲಿಯೂ ದಕ್ಕಿದ್ದಿತು ಎಲ್ಲರೂ ಸಂತೋಷದಿಂದ ರಾತ್ರಿಯೆಲ್ಲ ಕುಣಿದೆವು, ಹಾಡಿದೆವು. ಹಾಸ್ಯ ಚಟಾಕಿಗಳನ್ನು ಹಾರಿಸಿದೆವು, ಒಬ್ಬರೊಬ್ಬರನ್ನು ಅಣಿಕಿಸಿದೆವು. ಮರುದಿನ ಸ್ವಗ್ರಾಮಗಳಿಗೆ ಹೊರಡುವ



ಸಿದ್ಧತೆಗಳನ್ನು ನಡೆಸಿದೆವು. ತಂದೆಯವರು ಕಳಿಸಿದ್ದ ಹಣದಲ್ಲಿ, ನನಗಲ್ಲಿ ದೊರೆತಿದ್ದ ನೆರವಿನ ಹಣದಲ್ಲಿ ಅಷ್ಟಿಷ್ಟನ್ನು ಉಳಿಸಿಕೊಂಡಿದ್ದ ನಾನು ತಮ್ಮಂದಿರಿಗೆ, ತಂಗಿಯರಿಗೆ ಹೊಸ ಬಟ್ಟೆಗಳನ್ನು ಕೊಂಡು, ಶ್ರೀ ಶರಣ ಬಸವೇಶ್ವರರಿಗೆ ಕಾಯಿ ಒಡೆಸಿ ಪ್ರಸಾದ ಪಡೆದುಕೊಂಡು, ಸಣ್ಣ ಬೆಲೆಯ ಆಟಿಗೆಗಳನ್ನು ಕಟ್ಟಿಕೊಂಡು ಊರಿಗೆ ಹೊರಟೆ. ಗೆಳೆಯ ಗುರು ಶಾಂತಯ್ಯನವರೂ ಜೊತೆಗಿದ್ದುದರಿಂದ ಪ್ರಯಾಣ ಬೇಸರ ಬರದಂತೆ ಕೊನೆಗೊಂಡಿತು.

ಊರು ತಲುಪಿದಾಗ ತಂದೆ ತಾಯಿ ಬಂಧುಬಳಗ ಸುತ್ತುಗಟ್ಟಿದರು ನನ್ನನ್ನು. "ಕಲಬುರಗೆಂಬುದು ಕೈಲಾಸಪುರ! ಶರಣ ಬಸವೇಶ್ವರ ಶಿವನವತಾರ" ಎಂದು ಭಜನೆ ಮಾಡುತ್ತಿದ್ದ. "ಪಾಹಿಮಾಂ ಶರಣ ಬಸವ, ಪಾಹಿಮಾಂ ಶರಣ ಬಸವ, ಪಾಹಿಮಾಂ ಶರಣ ಬಸವ ಬಸವ ಪಾಹಿಮಾಂ" ಎಂದು ಹಾಡುತ್ತಿದ್ದ ನಮ್ಮೂರಿನವರಿಗೆ ಕಲಬುರಿಗಿಯಲ್ಲಿ ಹತ್ತು ತಿಂಗಳು ಇದ್ದು ಬಂದಿದ್ದ ನನ್ನನ್ನು ನೋಡುವುದೇ ಒಂದು ಭಾಗ್ಯವೆಂದೆನಿಸಿದ್ದಿತು. ಎಲ್ಲರಿಗೂ ಶರಣ ಬಸವೇಶ್ವರರ ಪ್ರಸಾದ ಹಂಚಿದೆ. ಭಕ್ತಿಯಿಂದ ಸ್ವೀಕರಿಸಿ ಹರಸುತ್ತ ಹೋದರು ನನ್ನನ್ನು. ನಾನು ತಂದಿದ್ದ ಹೊಸ ಬಟ್ಟೆಗಳನ್ನು ನೋಡಿ ತಂದೆ ತಾಯಿಗಳಿಗೆ ಆಶ್ಚರ್ಯ, ತಮ್ಮ–ತಂಗಿಯರಿಗೆ ಖುಷಿ, ನೆರೆಹೊರೆಯವರಿಗೆ ಬೆರಗು. ಇನ್ನೂ ಓದುತ್ತಿರುವಾಗಲೇ ಆದಾಯ ತೋರಿದ ವಿದ್ಯಾರ್ಥಿಯೆಂದು ನನ್ನ ಪ್ರತಿಷ್ಠೆ ಬೆಳೆಯಿತು.

## ಹಳೆಯ ಸ್ನೇಹಿತರು–ಅಡ್ಡಗೋಡೆ :

ನನಗೆ ನನ್ನ ಗೆಳಯರನ್ನು ಯಾವಾಗ ನೋಡುವೆನೋ ಎಂಬ ಲವಲವಿಕೆ, ತವಕ. ಎಲ್ಲರ ಮನೆಗಳಿಗೆ ಎಡತಾಕಿ ಬಂದೆ ಮುದುಡಿದ ಮುಖದೊಡನೆ. ಯಾರೊಬ್ಬರೂ ಮನೆಯಲ್ಲಿರಲಿಲ್ಲ. ಅವರದಾಗಲೇ 'ಛೋಟಾ ಕಿಸಾನ್' ಆಗಿ ಹೊಲಗಳಿಗೆ ಹೋಗಿದ್ದರು. ಸಂಜೆಗೆ ಅವರು ಮನೆಗೆ ಮರಳುವವರಿಗೆ ಏಕಾಕಿಯಾಗಿರಬೇಕಲ್ಲ–ಎಂದು ಕಳವಳಿಸಿದೆ. ನಾನು ಹುಟ್ಟಿದ ಊರಿನಲ್ಲಿಯೇ ನನಗೆ ಒಂಟಿತನದ ಅನುಭವ ಬರುವಂತಾದುದು ನಾನು ಪ್ರೌಢವಿದ್ಯಾಭ್ಯಾಸಕ್ಕಾಗಿ ಕಲಬರುಗಿಗೆ ಹೋದುದರ ಪರಿಣಾಮವೆಂಬುದು ಆಗ ನನಗೆ ಹೊಳೆಯದಿದ್ದರೂ ಮುಂದಿನ ವರ್ಷಗಳಲ್ಲಿ ಮನದಟ್ಟಾಯಿತದು. ಸ್ವಗ್ರಾಮದಲ್ಲಿಯೇ ಪರಕೀಯನಾಗುತ್ತ ಆಗುತ್ತ ಕೊನೆಗೊಮ್ಮೆ ಅದಕ್ಕೆ ಸಂಪೂರ್ಣವಾಗಿ ಎರವಾದೆ ನಾನು! ಈಗಂತೂ ಹುಟ್ಟೂರು ನನ್ನ ಪಾಲಿಗೊಂದು ಕನಸಿನ ಊರು, ಕಲ್ಪನೆಯ ಹಳ್ಳಿ. ಗೆಳೆಯರು ಹೊಲಗಳಿಂದ ಹಿಂದಿರುಗಿದ ಮೇಲೆ ಅವರನ್ನು ಕಂಡೆನಾಗಲಿ ಮೊದಲಿನ ಸಲಿಗೆಯ ಸವಿಯನ್ನು ಉಂಡೆನೆಂದು ಹೇಳಲಾರೆ. ಅದಾಗಲೇ ಅವರ ನನ್ನ ನಡುವೆ ಅದಾವುದೋ

ಅಂತರವನ್ನು ಸೂಚಿಸುವ ಅಡ್ಡಗೋಡೆ ಎದ್ದು ನಿಂತಿದ್ದಿತು. ಕಲಬುರಗಿಯ ಸುದ್ದಿಗಳನ್ನು ಮೈತುಂಬ ಕಿವಿಯಾಗಿ ಕೇಳಿದರಾಗಲಿ ತಮ್ಮ ಪ್ರತಿಕ್ರಿಯೆಗಳನ್ನು ಪ್ರಕಟಿಸಲಿಲ್ಲ ಅವರು. ಕೀಳರಿಮೆಯ ಒಳಗೊಳಗಿನ ಕೊರಗೋ, ಪ್ರಚ್ಛನ್ನ ಈರ್ಷೆಯೋ ನಾನರಿಯೆ. ಅಂತೂ ಒನ್ ವೇ ಸಂವಹನಕ್ಕೆ ಉದಾಹರಣೆಯಾಗಿ ಮುಕ್ತಾಯಗೊಂಡಿತು ನಮ್ಮ ಸ್ನೇಹ ಸಮ್ಮೇಳನ.

ನಿರುಪಾಯನಾಗಿ ತಂಗಿ ವೀರಾವತಿಯೊಡನೆಯೇ ಹೆಚ್ಚು ಹೊತ್ತು ಕಳೆಯ ತೊಡಗಿದೆ. ಆ ಊರಿಗೇ ರೂಪವತಿ ಗುಣವತಿ ಸಾಕಾರ ಸಂಸ್ಕೃತಿಯೆಂದೆನಿಸಿದ್ದ ಅಂಥ ತಂಗಿ ನನಗೆ ದೊರೆತುದು ನನ್ನ ಭಾಗ್ಯವೆಂದೇ ಭಾವಿಸಿದ್ದೆ. ಹಿಂದೆ ತಾಯಿ ಸಿಟ್ಟಿಗೆದ್ದಾಗಲೆಲ್ಲ ನಾನು ಅಡಗಿ ಕುಳ್ಳಿರುತ್ತಿದ್ದ ತಾಣಕ್ಕೆ ತಾಯಿಯ ಕಣ್ಣು ತಪ್ಪಿಸಿ ರೊಟ್ಟಿ ಬೆಣ್ಣೆ ತಂದುಕೊಡುತ್ತಿದ್ದ ತಂಗಿಯಾಕೆ. ನಮ್ಮೂರ ಶಾಲೆ ಹೆಸರಿಗೆ ಮಾತ್ರ ಶಾಲೆಯಾಗಿದ್ದುದರಿಂದ ಮನೆಯಲ್ಲಿಯೇ ಓದು–ಬರಹಗಳನ್ನು ಕಲಿತು ಕಾವ್ಯಗಳನ್ನೂ ಓದಿ ಅರ್ಥಮಾಡಿಕೊಳ್ಳುವಷ್ಟು ಪರಿಣತಳಾಗಿದ್ದಳಾಕೆ. ಮಾವನ ಮನೆಗೆ ಹೆಚ್ಚು ಹೋಗುವಂತಿರಲಿಲ್ಲ. ಸಣ್ಣ ಮಾವನ ಹಿರಿಯ ಮಗಳು ಹುಟ್ಟುತ್ತಲೇ ನನಗೆ ಕೊಡುವುದೆಂದು ಹೆಸರಿಟ್ಟಿದ್ದರಾಗಿ ಅಲ್ಲಿಗೆ ಹೆಚ್ಚಿಗೆ ಹೋದರೆ ಮುಂದೆ ಮದುವೆಯಾಗಲಿರುವ ಸೋದರ ಸೊಸೆಯನ್ನು ನೋಡಲು ಹೋದನೆಂದು ಜನರು 'ಅಡಿಸ್ಯಾಡು'ತ್ತಿದ್ದರು ಗೇಲಿ ಮಾಡುತ್ತಿದ್ದರು. ಸೀತಕ್ಕನನ್ನು ನೋಡಿ ಮಾತನಾಡಿಸಿ ಬರೋಣವೆಂದು ಹೋದರೆ ಬಾಗಿಲ ಮರೆಯಿಂದಲೇ 'ಯಾವಾಗ ಬಂದೆ ಅಣ್ಣಾ! ಎಂದು ಕೇಳಿದ್ದಳು. ಹೆಣ್ಣು ಹುಡಿಗೆಯರು ಎಷ್ಟು ಬೇಗ ಬೆಳೆದು ಬಿಡುತ್ತಾರೆ! ಸೀತಕ್ಕನಾಗ ಸಣ್ಣ ಹುಡುಗಿಯಲ್ಲ! ದೂರದಿಂದಲೇ ನಾಲ್ಕು ಮಾತು ಆಡಿ ಮನೆಗೆ ಬಂದೆ. ಪೋಲೀಸ್ ಗೌಡರ ಮನೆಗೂ ಹೋಗಲಿಲ್ಲ. ಆ ಮುಸ್ಲಿಂ ತಂಗಿಯರೂ ಈಗ ಪ್ರಬುದ್ಧರಾಗಿರಬಹುದು. ಅಲ್ಲಿಗೆ ಹೋಗದಿರುವುದೇ ಮೇಲೆಂದೆನಿಸಿತು. ತಮ್ಮಂದಿರನ್ನೂ ಚಿಕ್ಕವರು; ಇನ್ನೊಬ್ಬ ತಂಗಿಯಿನ್ನೂ ಹಸುಳೆ; ಆದುದರಿಂದ ತಂಗಿ ವೀರಾವತಿಯೊಬ್ಬಳೇ ನನಗೆ ಪ್ರೀತಿ ಉಣಿಸುವ, ಒಂಟಿತನ ಕಳೆಯುವ ಆಧಾರವಾದಳು.

ಕುಕ್ಕನೂರಿಗೆ ಹೋಗಿ ಗುರುಕುಲವನ್ನೊಮ್ಮೆ ಕಣ್ತುಂಬ ನೋಡಿ ಬಂದೆ. ಮುಖ್ಯೋಪಾಧ್ಯಾಯರಿಗೆ, ಉಪಮುಖ್ಯೋಪಾಧ್ಯಾಯರಿಗೆ, ಸಮದೃಷ್ಟಿಯ ಸರಮುಕದ್ದಮ್ ಪ್ರಹ್ಲಾದರಾಯರಿಗೆ, 'ದತ್ತಪ್ಪ'ನವರಿಗೆ ಗೌರವ ಸಲ್ಲಿಸಿ ಪೇಟೆಯತ್ತ ಪಯಣಿಸಿದೆ. ತಂದೆಯವರ ಹಿತೈಷಿಗಳಾಗಿದ್ದ ಕಷ್ಟತ್ತಪ್ಪನವರು, ಜಾಧವ ವೆಂಕಪ್ಪನವರು, ಸಂಗನ ಬಸಪ್ಪನವರು, ಗುಡಿಹಿಂದಲ ರಾಜಾಸಾಹೇಬರು, ಬನ್ನಿಕಟ್ಟೆ ಇಮಾಮ



ಸಾಹೇಬರು, ಲಂಗಟಿ ಸಿದ್ಧಲಿಂಗಪ್ಪನವರು, ತಟ್ಟೆ ಗುರುಲಿಂಗಪ್ಪನವರು, ತಡಕಲ್ ಮರ್ದಾಸ ಸಾಹೇಬರು–ಎಲ್ಲರೂ ನನ್ನ ಬೆನ್ನು ಚಪ್ಪರಿಸಿದರು. ಅಲ್ಲಿಂದ ಕಲ್ಮಠಕ್ಕೆ ಹೋದೆ. ಸಹಪಾಠಿಯಾಗಿದ್ದ ಗೆಳೆಯ ವಿರೂಪಾಕ್ಷಯ್ಯನವರೊಡನೆ, ಅವರ ಅನುಜ ಸಂಗನಬಸವಶಿವಾಚಾರ್ಯರೊಡನೆ, ತಂಗಿ ರುದ್ರಾಂಬೆಯೊಡನೆ ಸಂಜೆಯಾಗುವವರೆಗೆ ಸಲ್ಲಾಪ ನಡೆಸಿ ಊರಿಗೆ ಮರಳಿದೆ. ಉಳಿದ ರಜೆಯ ದಿನಗಳನ್ನು ಹೇಗೆ ಕಳೆಯುವುದು–ಎಂಬ ಪ್ರಶ್ನೆ ಎದುರಾಯಿತು. ತಂದೆಯವರಲ್ಲಿಯೇ ಹೆಚ್ಚು ಹೊತ್ತು ಕಳೆದು ನನ್ನ ವಿಷಯ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದೆಂದು ನಿರ್ಧರಿಸಿದೆ; ಮಾಸ್ತರ–ಮಾವನವರೊಡನೆ ಹೊಲ, ತೋಟಗಳಿಗೆ ಹೋಗಿ ಹೊಸ ಹೊಸ ವಿಷಯಗಳನ್ನು ತಿಳಿದುಕೊಳ್ಳುವುದೆಂದು ತೀರ್ಮಾನಿಸಿದೆ. ಇವರಿಬ್ಬರಲ್ಲಿ ಸಾಗಿತು ನನ್ನ ಅನೌಪಚಾರಿಕ ವಿದ್ಯಾಭ್ಯಾಸ. ಒಮ್ಮೆ ಕಲ್ಲೂರಿಗೆ ಹೋಗಿ ಗುರುಶಾಂತಯ್ಯನವರೊಡನೆ ಎರಡು ದಿನ ಕಳೆದು ಬಂದೆ. ಉಳಿದ ಸಮಯವನ್ನೆಲ್ಲ ಸಾಹಿತ್ಯಕ್ಕೆ ಮೀಸಲಾಗಿರಿಸಿದೆ. ಲಕ್ಷ್ಮೀಶ ಷಡಕ್ಷರದೇವರ ಕೃತಿಗಳನ್ನು ಇನ್ನೊಮ್ಮೆ ಓದಿ ಅಚ್ಚಗನ್ನಡದ ಹುಚ್ಚು ಹಿಡಿಸಿದ್ದ ಅಂಡಯ್ಯನ "ಕಬ್ಬಿಗರ ಕಾವ"ವನ್ನು ಅರೆದು ಕುಡಿದೆ. ಇಕಬಾಲರ ಉರ್ದೂ ಕವನ ಸಂಗ್ರಹಗಳನ್ನು ಸಂಗಡ ತಂದಿದ್ದೆ. ಅವುಗಳನ್ನೂ ಓದಿದೆ. 'ಗೀತಾಂಜಲಿ'ಯ ಪಾರಾಯಣ ಮಾಡಿದೆ; 'ಕೊಳಲು,' 'ಗರಿ'ಗಳನ್ನು ಮತ್ತೆ ಮತ್ತೆ ಓದಿದೆ; 'ಚೆನ್ನಕವಿ'ಗಳವರ ಮನೆಯಲ್ಲಿ ನಡೆಯುತ್ತಿದ್ದ ಚರ್ಚೆಗಳಲ್ಲಿ ಈ ಸಲ ಸಕ್ರಿಯವಾಗಿ ಭಾಗವಹಿಸಿದೆ; ಹುಚ್ಚು ಹುಚ್ಚು ಹಾಡುಗಳನ್ನು ಬರೆದು, ನಾನೊಬ್ಬನೇ ಓದಿ ನಕ್ಕು ಹರಿದು ಹಾಕಿದೆ; ಗೆಳೆಯರಿಗೆಲ್ಲ ಉದ್ದುದ್ದ ಪದ್ಯಮಯ ಪತ್ರಗಳನ್ನು ಬರೆದೆ; ಅಂತೂ ಇಂತೂ ಮೂವತ್ತು ಹಗಲು ಮೂವತ್ತು ರಾತ್ರಿಗಳನ್ನು ಕಳೆದೆ! ಮತ್ತೆ ಕಲಬುರಗಿಗೆ ಹೊರಡುವ ದಿನ ಬರಲು ಹಿಗ್ಗಿದೆ!

## ಪ್ರಭಾವಗಳ ಮುಪ್ಪುರಿ :

ಕಲಬುರಗಿಯಲ್ಲಿ ಕಳೆದ ನನ್ನ ಎರಡನೆಯ ವರ್ಷ ವೈವಿಧ್ಯಮಯ ವರ್ಷವಾಗಿ ಪರಿಣಮಿಸಿತು. ವರ್ಷದ ಪ್ರಾರಂಭಕ್ಕೇ 'ಗುರುಬಸವ ಮಠದ ಗೆಳೆಯರು' ನಾನೇ ಹೊಸ ನಾಟಕವೊಂದನ್ನು ಬರೆಯಬೇಕೆಂದೂ, ಅದರಲ್ಲಿ ನಾನೂ ಪಾತ್ರವಹಿಸಬೇಕೆಂದೂ ಹಟ ಹಿಡಿದರು. 'ಬೆಳವಡಿ ಮಲ್ಲಮ್ಮ'ನ ನಾಟಕ ಬರೆದೆ. ಶಿವಾಜಿಯ ಪಾತ್ರವನ್ನು ನಾನೇ ವಹಿಸಬೇಕಾಯಿತು. ಉಳಿದವರೆಲ್ಲ ತಮತಮಗೆ ಇಷ್ಟವಾದ ಪಾತ್ರ ವಹಿಸಿದರು. ಒಂದು ತಿಂಗಳಿನ ಶ್ರದ್ಧಾನ್ವಿತ ಸಾಧನೆಯ ಫಲವಾಗಿ ನಾಟಕ ಪ್ರಯೋಗ ಅಪೂರ್ವವಾದ ಯಶಸ್ಸನ್ನು ಗಳಿಸಿತು. ಕಲಬುರಗಿಯಲ್ಲೆಲ್ಲ 'ಗುರುಬಸವ ಮಠದ ಗೆಳೆಯರ' ಹೆಸರುಗಳು ಹರಡಿದುವು. ನಮ್ಮನ್ನು ನಮ್ಮ

ಹೆಸರುಗೊಂಡು ಕರೆಯುವುದೇ ಕಡಿಮೆಯಾಗಿ ನಾವು ವಹಿಸಿದ್ದ ಪಾತ್ರಗಳ ಹೆಸರಿನಿಂದಲೇ ಕರೆಯ ತೊಡಗಿದರು ಓಣಿಯವರು. ಸ್ತ್ರೀ ಪಾತ್ರ ವಹಿಸಿದ್ದವರಂತೂ ಮುಖ ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಬಂದೊದಗಿತು. ಮರುಳುಗಾಡಿನಲ್ಲಿ ಎಕ್ಕೆಯ ಗಿಡವೇ ಹೆಮ್ಮರವಾಗಿ ತೋರುವಂತೆ ಕನ್ನಡ ಕ್ಷೀಣ ದೆಶೆಯಲ್ಲಿದ್ದ ಆಗಿನ ಕಲಬುರ್ಗಿಯಲ್ಲಿ ನಾನೇ ಕವಿ, ನಾಟಕಕಾರವಾಗ್ಗಿಯೆನಿಸಿಕೊಂಡೆ. ಎಷ್ಟು ಸುಲಭವಾಗಿ ಈ ಮೇಲ್ಮೆ ನನಗೆ ದೊರೆಯಿತಲ್ಲ–ಎಂದು ಅಚ್ಚರಿಯೆನಿಸುತ್ತಿತ್ತು–ಆಗಾಗ! ನನ್ನ ಪೇಟೆ ಬೆಲೆ (Market Value) ಯೂ ಹೆಚ್ಚಿತು; ಪಠ್ಯೇತರ ಚಟುವಟಿಕೆಗಳೂ ಹೆಚ್ಚಿದುವು. ಪಕ್ಕದ ಗದ್ದುಗೆ ಮಠದಲ್ಲಿದ್ದ 'ವೀರಶೈವ ತರುಣ ಸಂಘ'ದ ಕಾರ್ಯದರ್ಶಿಯನ್ನಾಗಿ ಮಾಡಿದರು ನನ್ನನ್ನು; ತರಗತಿಯ ಚರ್ಚಾಕೂಟದ ಕಾರ್ಯದರ್ಶಿಯಾಗಿ ಆಯ್ಕೆಗೊಂಡೆ; ಕಾಲೇಜಿನ ಕನ್ನಡ ಸಂಘದ ಕಾರ್ಯಕಲಾಪಗಳು ಹೆಚ್ಚಿದುವು. ಗಾರುಡಿಗ ಬೇಂದ್ರೆಯವರು ಬಂದು ಕನ್ನಡದ ಹಾಗೂ ತಮ್ಮ ಕವಿತೆಗಳ ಹುಚ್ಚು ಹಿಡಿಸಿ ಹೋದರು; ಮಧುರ ಮುಗುಳಿಯವರು ಬಂದು ತಮ್ಮ 'ಹೊಸ ಕಾಲದ ನವಿಲು' ಹಾಡಿ ಹಿಗ್ಗು ಹರಿಸಿ ಹೋದರು; ತೂಕದ ಗೋಕಾಕರು ಆಂಗ್ಲ ಭಾಷೆಯಲ್ಲಿ ಅಪೂರ್ವವಾದ ಉಪನ್ಯಾಸವನ್ನಿತ್ತು ನಮಗೆಲ್ಲ ಕೋಡು ಮೂಡಿಸಿ ಹೋದರು. ತವಗ ಭೀಮಸೇನರಾಯರ ಮನೆಯಲ್ಲಿ ಅವರೊಡನೆ ಎದೆದೆರೆದು ಮಾತನಾಡುವ, ಅವರಿಂದ ಪ್ರೇರಣೆ ಪಡೆವ, ಅವರಿಂದಲೇ ಅವರ ರಚನೆಗಳ ರಹಸ್ಯಾರ್ಥ ಕೇಳುವ ಸುಯೋಗ ಪ್ರಾಪ್ತವಾದುದು ನನ್ನ ಸೌಭಾಗ್ಯವೆಂದೇ ಹೇಳಬೇಕು. 'ಅಂಬಿಕಾತನಯದತ್ತ'ರು ಅಂಬಿಕಾತನಯದತ್ತ'ರೇ. ಅವರ ಮಾತು, ಕವಿತೆ, ಕವಿತೆ ಹೇಳುವ ಪಾಂಗು, ನಿಲ್ಲುವ ಭಂಗಿ, ಅಂಗ ಚೇಷ್ಟೆ, ಹಾಸ್ಯಲಾಸ್ಯ–ಎಲ್ಲ ಅವರವೇ. ಅಷ್ಟು ಅನನುಕರಣೀಯರು ಅಂಬಿಕಾತನಯದತ್ತರು. ಮುಗುಳಿಯವರು ಹೇಳಿ ಕೇಳಿ 'ರಸಿಕರಂಗ'ರು. ರಸವಂತಿಕೆ ಅವರ ವೈಶಿಷ್ಟ್ಯ. ಗೋಕಾಕರು ನಿಜವಾಗಿಯೂ 'ತ್ರಿವಿಕ್ರಮ'ರು. ಅವರ ಪಾಂಡಿತ್ಯ, ಪ್ರತಿಭೆ, ಪರಿಶ್ರಮ–ಇವುಗಳಲ್ಲಿ ಯಾವುದು ದೊಡ್ಡದೆಂಬುದನ್ನು ನಿರ್ಣಯಿಸ ಹೋಗುವುದು ದಡ್ಡತನವೇ ಸರಿ, ಈ ಮೂವರ ಪ್ರಭಾವ ಮುಪ್ಪುರಿಯಾಗಿ ಕೊನೆಯವರೆಗೂ ಕನ್ನಡದ ಕಲ್ಪವೃಕ್ಷಕ್ಕೆ ಕಟ್ಟಿ ಬಿಟ್ಟಿತು ನಮ್ಮನ್ನು.

## ಗುರುಸ್ಮರಣೆ

ತರಗತಿಯಲ್ಲಿಯೂ ಹೊಸ ಚುರುಕು ಹುಟ್ಟಿಕೊಂಡಿದ್ದಿತು. ಅಲಿಬಿನ್ ಗಾಲಿಬ್ ಸಾಹೇಬರ ಸ್ಥಳದಲ್ಲಿ ಮೀನಾಯಿ ಸಾಹೇಬರು ಇಂಗ್ಲೀಷ್ ಉಪಾಧ್ಯಾಯರಾಗಿ ನಮಗೆ ದೊರೆತಿದ್ದರು. ಪ್ರಸಿದ್ಧ ಉರ್ದೂ ಕವಿ ಅಮೀರ್ ಮೀನಾಯಿಯವರ



ವಂಶಜರಾದ ಅವರ ರೋಮ ರೋಮವೂ ಕವಿತೆ, ಕವಿ ಎಂದೆನ್ನುತ್ತಿತ್ತು. ತರಗತಿಯಲ್ಲಿ ಇಂಗ್ಲೀಷ್ ಕವಿತೆಗಳನ್ನು ಹೇಳಿಕೊಡುವಾಗ ಅವರ ವಿಪುಲ ಸ್ಥೂಲಕಾಯವೂ ಕುಣಿಯುತ್ತಿತ್ತು. ಕವಿತೆಗಳ ಪಾಠ ಹೇಳಲು ಕರಿಹಲಗೆ ಖಡು ಬಳಸಿದವರು ಪ್ರಾಯಶಃ ಅವರೊಬ್ಬರೇ ನಾನು ಕಂಡಂತೆ! ಅವರ ಉಚ್ಚಾರವೂ ತುಂಬು ಗಾಂಭೀರ್ಯದ ಉಚ್ಚಾರ. ಅವರು ನಮ್ಮ ತರಗತಿಯಲ್ಲಿ ಪಾಠ ಹೇಳುತ್ತಿದ್ದರೆ ಪಕ್ಕದ ತರಗತಿಯಲ್ಲಿ ಅವರ ಧ್ವನಿ ಪ್ರತಿಧ್ವನಿಸಿ ಅಲ್ಲಿಯ ಪಾಠಕ್ಕೆ ಅಭ್ಯಂತರ! ಅದೇ ಪ್ರೌಢ ಶಾಲೆಯಲ್ಲಿ ಮದ್ರಾಸ್ ವಿಶ್ವವಿದ್ಯಾಲಯದ ಪಾಠ ಕ್ರಮವನ್ನನುಸರಿಸಿ ನಡೆಯುತ್ತಿದ್ದ ಆಂಗ್ಲ ಮಾಧ್ಯಮದ ತರಗತಿಗಳೂ ಇದ್ದುವು. ಅವುಗಳಲ್ಲಿ ಭಾನುಮೂರ್ತಿಯೆಂಬ ಪ್ರಸಿದ್ಧ ಇಂಗ್ಲೀಷ್ ಅಧ್ಯಾಪಕರಿದ್ದರು. ಅವರು ಸಮರ್ಥ ಇಂಗ್ಲೀಷ್ ಬೋಧಕರೋ, ಮೀನಾಯಿ ಸಾಹೇಬರೋ ಎಂಬುದು ನಮ್ಮ ವಿರಾಮ ಕಾಲದ ಚರ್ಚೆಯ ವಿಷಯವಾಗುತ್ತಿತ್ತು. ಅವರ ಶಿಷ್ಯರು ಮೂರ್ತಿಯವರೇ ಹೆಚ್ಚಿನವರೆಂದು ವಾದಿಸಿದರೆ ನಾವು ಮೀನಾಯಿ ಸಾಹೇಬರೇ ಹೆಚ್ಚಿನವರೆಂದು ಹಾರಾಡುತ್ತಿದ್ದೆವು. ಒಮ್ಮೊಮ್ಮೆ ಇದು ಕೈಕೈವರೆಗೂ ವಿಕೋಪಿಸುತ್ತಿತ್ತು. ಮೂರ್ತಿಯವರ ಮೆಚ್ಚಿನ ಶಿಷ್ಯ ಪ್ರಕಾಶಚಂದ್ರ ಕೋಠಾರಿ, ಮೀನಾಯಿ ಸಾಹೇಬರ ಮೆಚ್ಚಿನ ಶಿಷ್ಯ ಸಿದ್ಧಯ್ಯ ಪುರಾಣಿಕ ಸ್ನೇಹಿತರಾಗಿ ಪರಿವರ್ತಿತರಾದುದು ಈ ಜಗಳಗಳಲ್ಲಿಯೇ. ಇದೇ ಸಮಯಕ್ಕೆ ಪ್ರಸಿದ್ಧ ಉರ್ದೂ ಹಾಸ್ಯ ಲೇಖಕರಾಗಿದ್ದ ಫರಹತ್–ಉಲ್ಲಾ ಬೇಗರ ನಗೆ ಬರಹಗಳು ನಮಗೆಲ್ಲ ಇಷ್ಟವಾಗಿದ್ದುವು. ಅವುಗಳಲ್ಲೊಂದು–ಬಡಾ ಮಜಾ ಉಸ್ಮೇ ಹೈ ಜಬ್ ಸುಲಹ್ ಹೋ ಜಾಯೆ ಜಂಗ್ ಹೋಕರ್ (ಯುದ್ಧವಾಗಿ ಸಂಧಾನವಾದಾಗಲೇ ಬಹಳ ಮಜಾ) ಎಂಬುದು. ಜಗಳಾಡಿ ರಾಜಿಯಾದಾಗಲೆಲ್ಲ ಈ ಶೀರ್ಷಿಕೆ ನಮ್ಮ ಘೋಷಣೆಯಾಗಿ ಬಿಡುತ್ತಿದ್ದಿತು.

ಉರ್ದೂ ಭಾಷೆಯ ಬೆಳವಣಿಗೆಗಾಗಿಯೂ ಚಟುವಟಿಕೆಗಳು ನಡೆಯುತ್ತಿದ್ದುವು, ಅವುಗಳಲ್ಲಿ ಮುಖ್ಯವಾದುದು ಮುಷಾಯಿರಾ–ಕವಿ ಮೇಳ. ಕವಿತೆಯ ಕೊನೆಯ ಸಾಲೊಂದನ್ನು ಕೊಟ್ಟು ಅದರೊಡನೆ ಮುಕ್ತಾಯವಾಗುವ 'ಗಜಲ'ನ್ನು ಬರೆದು ತರಬೇಕಾಗುತ್ತದೆ ಈ 'ಮುಷಾಯಿರಾ'ಗಳಿಗೆ! 'ದನವಂ ಕಡಿಕಡಿದು ಬಸದಿಯೊಳ್ ಎಸೆಯುತ್ತಿರ್ದರ್' ಇತ್ಯಾದಿ ಕಂತಿಹಂಪರ ಸಮಸ್ಯೆಗಳನ್ನು ಜ್ಞಾಪಿಸುವ ಈ ಪದ್ಧತಿ ಅಂಥಿಂಥವರು ಮುಷಾಯಿರಾಗಳಲ್ಲಿ ಭಾಗವಹಿಸುವ ಸಾಹಸಕ್ಕೆ ಕೈಯಿಕ್ಕದಂತೆ ತಡೆಯುತ್ತದೆ. ಶ್ರೋತೃಗಳಿಗೂ ಆಯಾ ಕವಿ ಹೇಗೆ ಗಜಲನ್ನು ಮುಕ್ತಾಯಗೊಳಿಸುತ್ತಾನೆಂಬುದನ್ನು ತಿಳಿವ ತವಕವಿರುವುದರಿಂದ, ಕೊನೆಯ ಎರಡು ಸಾಲು ಕೇಳಲು ಉಳಿದೆಲ್ಲ ಸಾಲುಗಳನ್ನೂ ಕೇಳುವ ತಾಳ್ಮೆಯನ್ನು ಅವರು ತೋರಬೇಕಾಗುತ್ತದೆ. ಯಾವನಾದರೊಬ್ಬ ಕವಿ ಅನಿರೀಕ್ಷಿತ ರೀತಿಯಲ್ಲಿ, ಚಮತ್ಕಾರ

ಪೂರ್ಣವಾಗಿ, ಹೊಸತನ ಹೊಮ್ಮಿಸುವ ಬಗೆಯಲ್ಲಿ ಮುಕ್ತಾಯ ಮಾಡಿದರೆ ಸಭಾಂಗಣ ನಡುಗುವಂತೆ ಕೇಕೆ, ಕರತಾಡನ, ವಾಹವ್ವಾ, ಸುಬಹಾನಲ್ಲಾ, ದುಬಾರಾ ಇರಷಾದ ಹೋ' ಮೊದಲಾದ ಕೂಗುಗಳು! ಕವಿಗೆ ಇದಕ್ಕಿಂತ ಇನ್ನೇನು ಬೇಕು? ಕೇಳುವವರಿಗೂ ಇದಕ್ಕಿಂತ ಇನ್ನೇನುಬೇಕು?

ನಾನು ಅತ್ಯಾಸಕ್ತಿಯಿಂದ ಈ ಮುಷಾಯಿರಾಗಳಲ್ಲಿ ಶ್ರೋತೃವಾಗಿ ಭಾಗವಹಿಸುತ್ತಿದ್ದೆ. ಉರ್ದೂ ಭಾಷೆಯಲ್ಲಿ ಕವಿತೆಗಳನ್ನು ಬರೆದು ರದ್ದಿ ಬುಟ್ಟಿಗೆ ಅರ್ಪಿಸಿದೆನಾಗಲಿ ಮುಷಾಯಿರಾಗಳಲ್ಲಿ ಒಮ್ಮೆಯೂ ಓದಲಿಲ್ಲ. ಸ್ಥಳೀಯ ಮುಷಾಯಿರಾಗಳಲ್ಲಿ ಹೆಚ್ಚು ಪ್ರಭಾವಶಾಲಿಗಳಾಗಿದ್ದವರು ಫರಹತ್ ಉಲ್ಲಾ ಬೇಗ್ ಸಾಹೇಬರು, 'ಯಗಾನಾ' ಸಾಹೇಬರು, ಮೀನಾಯಿ ಸಾಹೇಬರು, ಇನ್ನೂ ಒಬ್ಬಿಬ್ಬರು. ವಿದ್ಯಾರ್ಥಿಗಳಲ್ಲಿಯೂ ಕೆಲವರು ಗಜಲು, ನಗ್ಮಾ, ನಜಮ್, ಕಸೀದಾ, ರುಬಾಯಿ, ಮರಸಿಯಾ ಮೊದಲಾದುವನ್ನು ಬರೆಯುತ್ತಿದ್ದರು. ಇವರಲ್ಲಿ ನಮ್ಮ ಪ್ರಿನ್ಸಿಪಾಲರ ಮಗನಾಗಿದ್ದ ಹಫೀಜ್ ಹಕ್ಕಾನಿಯವರೂ ಒಬ್ಬರು. ನಮ್ಮಿಬ್ಬರಲ್ಲಿ ತುಂಬ ಗೆಳೆತನ ಬೆಳೆಯಿತು. ಹಫೀಜರು ತಮ್ಮ ತಂದೆಯವರ ಮುಂದೆ ನನ್ನ ಬಗ್ಗೆ ಬಹಳ ಹೇಳುತ್ತಿದ್ದರೆಂದು ತೋರುತ್ತಿದೆ. ಮೊದಲೇ ನನ್ನ ಬಗ್ಗೆ ವಾತ್ಸಲ್ಯವನ್ನು ತೋರಿದ್ದ ಅವರಲ್ಲಿ ನನಗಾಗಿ ಇನ್ನಷ್ಟು ಆಸಕ್ತಿ ಉದಿಸಿತು. ಒಮ್ಮೆ ನಮ್ಮ ತರಗತಿಯಲ್ಲಿ ಇಂಗ್ಲೀಷ್ ಡಿಬೇಟ್ ಇದ್ದಾಗ ಪೂರ್ವ ಸೂಚನೆ ನೀಡದೇ ಪ್ರಿನ್ಸಿಪಾಲರು ನಮ್ಮ ತರಗತಿಗೆ ಬಂದು ನಮ್ಮೊಡನೆ ಬೆಂಚಿನ ಮೇಲೆ ಕುಳಿತುಬಿಟ್ಟರು. ನನ್ನ ಸರದಿ ಬರುವವರೆಗೆ ಕಾದು ನಾನು ಮಾತನಾಡಿದುದನ್ನು ಮೆಚ್ಚಿ, ಬೆನ್ನುತಟ್ಟಿ ಹೋದರು. ಅವರೊಡನೆ ಬಂದಿದ್ದ ಉಪಪ್ರಾಚಾರ್ಯ ರಾಮಚಂದ್ರ ಐಯರ್ ಅವರೂ ಕಪ್ಪೆ ಕುಪ್ಪಳಿಸುವಂತೆ ಪುಟು ಪುಟು ಪುಟಿಯುತ್ತ ಹೋದರು. ಗಿಡ್ಡ ವ್ಯಕ್ತಿ ಅವರು. ಸಾಲದುದಕ್ಕೆ ಯಾವಾಗಲೂ ತಾಂಬೂಲ–ತಂಬಾಕು ಅಗಿವ ಬಾಯಿ, ಬಾಯಿಂದ ಉಗುವ ಲಾಲಿಮೆಯಿಂದ ಕೂಡಿದ ಲಾಲಾರಸ, ಗೋಪುರ ಟೋಪಿ, ಘಂಟೆಗೊಮ್ಮೆ ಹಲ್ಲುಜ್ಜಿಕೊಳ್ಳಲು ಕಿಸೆಯಲ್ಲಿ ಸದಾಸಿದ್ಧವಾಗಿರುತ್ತಿದ್ದ ಕೆಂಪು ಮುಸುಗಿದ ಬ್ರಷ್, ನಡೆವಾಗ ಎರಡೂ ಬದಿಯ ಭುಜಗಳ ಹಾರಿಕೆ, ತಂಬುಲ ತುಂಬಿದ ಬಾಯಿಂದಲೇ ವಿದ್ಯಾರ್ಥಿಗಳೊಡನೆ ಮಾತನಾಡುವಾಗ ಹೊರುಡುತ್ತಿದ್ದ ಅವರಿಗೇ ಮೀಸಲಾಗಿದ್ದ ವಿಚಿತ್ರ ಉಚ್ಚಾರಗಳು–ಅವರನ್ನು ತಮಾಷೆಯ ಮೂರ್ತಿಯನ್ನಾಗಿ ಮಾಡಿದ್ದುವು. ವಿವಿಧ ವಿನೋದಾವಳಿಗಳಲ್ಲಿ ಅವರ ಅಣಕಿವೊಂದು ಇದ್ದೇ ತೀರುತ್ತಿದ್ದಿತು.

ನನ್ನ ಹಾಗೂ ಹಫೀಜರ ಸ್ನೇಹವೇನೋ ನಿಕಟವಾಗುತ್ತ ಹೋಯಿತಾದರೂ ಅವರು ಕನ್ನಡ ಕಲಿಯಲಿಲ್ಲ, ನಾನು ಉರ್ದೂ ಕವಿಯಾಗಲಿಲ್ಲ. ಆಗ ಉರ್ದೂ



ಕವಿಯಾಗುವುದು, ಅದರಲ್ಲೂ ಉರ್ದೂ ಮಾತೃ ಭಾಷೆಯಾಗಿಲ್ಲದವರು ಉರ್ದೂ ಕವಿಯಾಗುವುದು ಪ್ರಗತಿಗೆ ಪರವಾನಗಿ ಪತ್ರಿಕೆಯಂತಿದ್ದಿತು. ಹೀಗಿದ್ದೂ ಅದೇಕೋ ನಾನು ಉರ್ದೂ ಕವಿಯಾಗಿದೆಯೇ ಉಳಿದೆ. ನನ್ನ ಹಲವು ಹಿಂದೂ ಗೆಳೆಯರೂ ಹುರಿದುಂಬಿಸಿದರು ನನ್ನನ್ನು–ನೀನೂ ಉರ್ದೂ ಕವಿಯಾಗೆಂದು. ಆದರೆ ಕನ್ನಡಕ್ಕೇ ಸಂಪೂರ್ಣವಾಗಿ ಶರಣಾಗತನಾಗಿದ್ದೆನಾಗಿ ಬೇರೆ ಭಾಷೆಗಳಲ್ಲಿ ಕವಿಯಾಗುವ ಆಸೆ ಕೊನರಲೇ ಇಲ್ಲ ನನ್ನಲ್ಲಿ. ಇಂಗ್ಲೀಷಿನಲ್ಲಿಯೂ ಕವಿತೆಗಳನ್ನು ಬರೆಯಬಹುದಾಗಿದ್ದಿತೇನೋ. ಆದರೆ ಲೌಕಿಕವಾಗಿ ಪ್ರಯೋಜನ ಪ್ರಸಾದವಾಗಿದ್ದ ಉರ್ದೂ ಕವನ ರಚನೆಗೇ ಮನಸ್ಸು ಮಾಡದಿದ್ದ ನಾನು ಇಂಗ್ಲೀಷ್ ಕವಿತೆಗಳಿಗೆ ಕೈಯಿಕ್ಕುವುದು ದೂರದಲ್ಲಿಯೇ ಉಳಿಯಿತು.

ಉರ್ದೂ ಭಾಷೆಯ ಬೆಳವಣಿಗೆಗಾಗಿ ನಡೆಸುತ್ತಿದ್ದ ಇನ್ನೊಂದು ಕಾರ್ಯಕ್ರಮವೆಂದರೆ ಒಬ್ಬರು ಒಂದು ಉರ್ದೂ ಪದ್ಯದಿಂದ ಸ್ಪರ್ಧೆಯನ್ನು ಪ್ರಾರಂಭಿಸುವುದು; ಅದರ ಕೊನೆಯ ಅಕ್ಷರದಿಂದ ಪ್ರಾರಂಭವಾಗುವ ಪದ್ಯವನ್ನು ಇನ್ನೊಬ್ಬರು ಹೇಳುವುದು; ಅದರ ಕೊನೆಯ ಅಕ್ಷರದಿಂದ ಪ್ರಾರಂಭವಾಗುವ ಪದ್ಯವನ್ನು ಮಗುದೊಬ್ಬರು ಹೇಳುವುದು. ಹೀಗೆ ಹೇಳುತ್ತಲೇ ಹೋಗುವುದು. ಯಾರು ಹೇಳುವರೋ ಅವರಿಗೆ ಅಂಕಗಳು; ಹೇಳದಿದ್ದವರಿಗೆ ಸೊನ್ನೆ. ಹೀಗೆ ಘಂಟೆಗಟ್ಟಳೆ ಸ್ಪರ್ಧೆ ನಡೆದ ಮೇಲೆ ಜಯಶಾಲಿಗಳಾರೆಂಬುದರ ನಿರ್ಣಯವಾಗಿ ಅವರಿಗೆ ಬಹುಮಾನ ದೊರೆಯುತ್ತಿತ್ತು. ಇವುಗಳಲ್ಲಿ ನಾನೂ ಭಾಗವಹಿಸುತ್ತಿದ್ದೆ; ಒಮ್ಮೆ ಬಹುಮಾನವೂ ಬಂದಿತು. ಆದರೂ ಉರ್ದೂ ಕವಿಯಾಗಲಿಲ್ಲ ನಾನು. ಕನ್ನಡವೇ ನನ್ನ ಕಾಮಧೇನು!

ಉರ್ದೂ ಕವಿಯಾಗದಿದ್ದರೂ ಉರ್ದೂ ಭಾಷೆಗಳ ಒಂದು ವೈಶಿಷ್ಟ್ಯ ನನ್ನ ಮನದ ಮೇಲೆ ತನ್ನ ಮುದ್ರೆಯೊತ್ತಿತು. ಉರ್ದೂ ಕವಿತೆ ಅವರ ಬಾಳ ಮಗ್ಗದ ಹಾಸು ಹೊಕ್ಕು. ಲೇಖನ ಭಾಷಣಗಳಿರಲಿ, ಸಾಮಾನ್ಯವಾದ ಮಾತುಕತೆಗಳಲ್ಲಿಯೂ ಅವರು ಉರ್ದೂ ಕವನಗಳನ್ನು ಉಪಯೋಗಿಸದೆ ಬಿಡರು. ಸಂದರ್ಭೋಚಿತವಾಗಿ ಅವರು ತಮ್ಮ ಶ್ರೇಷ್ಠ ಕವಿಗಳ ಸಾಲುಗಳನ್ನು ಬಳಸುವುದನ್ನು ಬೆರಗಾಗಿ ನೋಡುತ್ತಿದ್ದೆ ನಾನು. "ನಮ್ಮವರೇಕೆ ಹೀಗೆ ಬಳಸುವುದಿಲ್ಲ?" ಎಂಬ ಪ್ರಶ್ನೆಗೆ ಇಂದಿಗೂ ಉತ್ತರ ದೊರಕಿಲ್ಲ ನನಗೆ. ಹೀಗೆ ಬಳಸಿಕೊಳ್ಳಬಲ್ಲ ಅರ್ಥಗರ್ಭಿತ, ಸೂತ್ರಾತ್ಮಕ, ಲೋಕಾನುಭವ ಪೂರಿತ, ಸಾರಭರಿತ ಸೂಕ್ತಿಗಳು ಕನ್ನಡದಲಿಲ್ಲವೆಂತಲ್ಲ. ರಾಶಿ ರಾಶಿಯಾಗಿವೆ; ಸಾವಿರ ವರ್ಷಗಳ ಸಮೃದ್ಧ ಸಾಹಿತ್ಯದಲ್ಲಿ ಸೂರೆಗೊಂಡಿವೆ. ಆದರೂ ನೂರಕ್ಕೊಬ್ಬರೂ ತಮ್ಮ ನಿತ್ಯವ್ಯವಹಾರದ ಮಾತುಗಳಲ್ಲಿ ಇವುಗಳನ್ನು

ಉದಾಹರಿಸಿ ತಮ್ಮ ಮಾತುಗಳಿಗೆ ಮೆರುಗು ಕೊಟ್ಟುದನ್ನು ಕಾಣೆ! ಉರ್ದೂ ಮಾತನಾಡುವವರಲ್ಲಾದರೋ ಹೀಗೆ ಮಾಡದವರೇ ವಿರಳ; ಮಾಡುವವರು ಹೇರಳ! ಒಬ್ಬ ಸಾಮಾನ್ಯ ಶಿಕ್ಷಕ, ವರ್ತಕ, ಗುಮಾಸ್ತ, ಕೊನೆಗೆ ಜಟಕಾಸಾಬಿ– ಎಲ್ಲರೂ ನೂರಾರು ಸಾಲುಗಳನ್ನಾದರೂ ನೆನಪಿಟ್ಟು, ಪ್ರಸಂಗ ಬಂದಾಗ ಅವುಗಳನ್ನು ಬಳಸಿ ಹಿಗ್ಗುತ್ತಾರೆ. ಕನ್ನಡ ಕೃಷಿಕ ಕಾರ್ಮಿಕ ಬಾಂಧವರಿಗೆ ಕೆಲವು ಜಾನಪದ ಗೀತೆಗಳಾದರೂ ನೆನಪಿರಬಹುದು; ಆದರೆ ಕನ್ನಡ ವರ್ತಕರಿಗೆ, ಸರಕಾರೀ ಕರ್ಮಚಾರಿಗಳಿಗೆ, ಅಧಿಕಾರಿಗಳಿಗೆ, ಕೊನೆಗೆ ಕನ್ನಡ ಪ್ರಾಧ್ಯಾಪಕರಿಗೆ ಎಷ್ಟು ಕನ್ನಡ ಸಾರೋಕ್ತಿಗಳು, ಸೂಳ್ನುಡಿಗಳು, ಸರಸ ಸೂಕ್ತಿಗಳು ನೆನಪಿಸಿರುವುವೆಂಬುದು ಸಂಶೋಧನೆಗೆ ತಕ್ಕುದಾದ ವಿಷಯ! ನನಗೇನೋ ಉರ್ದೂಭಾಷಿಗಳ ಒಡನಾಟ ಒಳ್ಳೆಯದನ್ನೇ ಮಾಡಿತು, ನನ್ನ ಕನ್ನಡ ಕವಿತೆಗಳಿಗೂ ಒಂದು ಹೊಸ ತಿರುವನ್ನು ಕೊಟ್ಟಿತು.

ಪ್ರಿನ್ಸಿಪಾಲ ಹಕ್ಕಾನಿ ಸಾಹೇಬರಿಗೆ ಕ್ರೀಡಾರಂಗ ವ್ಯಾಸಂಗರಂಗಕ್ಕಿಂತಲೂ ಪ್ರಿಯವಾಗಿದ್ದುದರಿಂದ ಆ ರಂಗದಲ್ಲಿ ಮುನ್ನಡೆ ಪಡೆದವರೂ ಅವರ ಪ್ರೀತಿಗೆ ಪಾತ್ರರಾಗುತ್ತಿದ್ದರು. ನನಗೂ ಕ್ರೀಡೆಗಳೆಂದರೆ ಮೈಯುಬ್ಬುತ್ತಿತ್ತು; ನವಿರೇಳುತ್ತಿತ್ತು; ಆದರೆ ನನ್ನ ತಂದೆಯವರು ಪದೇ ಪದೇ ಹೇಳುತ್ತಿದ್ದ ಈ ಶ್ಲೋಕ ಪದಪದಕ್ಕೂ ನೆನಪಾಗುತ್ತಿದ್ದಿತು ನನಗೆ: "ಸುಖಾರ್ಥಿನಃ ಕುತೋ ವಿದ್ಯಾ ನಾಸ್ತಿ ವಿದ್ಯಾರ್ಥಿನಃ ಸುಖಂ। ಸುಖಾರ್ಥೀ ವಾ ತ್ಯಜೇದ್ವಿದ್ಯಾಂ ವಿದ್ಯಾರ್ಥೀ ವಾ ತ್ಯಜೇತ್ ಸುಖಮ್॥" (ಮಹಾಭಾರತ: ಉದ್ಯೋಗ ಪರ್ವ) ಅಲ್ಲದೆ, ಕ್ರಿಕೆಟ್, ಹಾಕಿ ಆಡಲು ಕಾಸಿರಲಿಲ್ಲ ಕೈಯಲ್ಲಿ; ನಾನು ಆಡುತ್ತಿದ್ದ ಹಳ್ಳಿಯ ಆಟಗಳಿಗೆ ಅಲ್ಲಿ ಅವಕಾಶವಿರಲಿಲ್ಲ! ಕಾಲ್ಚೆಂಡಿನ ಕ್ರೀಡೆಗೇನೋ ಸೇರಿದೆ. ಅದರಲ್ಲಿಯೂ ಹೆಸರು ಗಳಿಸಲಿಲ್ಲ. ಪಠ್ಯ ಪುಸ್ತಕಗಳನ್ನೂ ಕೊಳ್ಳದೆ ಮಿತ್ರರ ಪುಸ್ತಕಗಳನ್ನೇ ಓದಿ ಉತ್ತೀರ್ಣನಾಗಿ ತಂದೆಯವರ ಮೇಲಿನ ಭಾರವನ್ನು ತಗ್ಗಿಸಬೇಕೆಂದು ಸಂಕಲ್ಪ ಮಾಡಿದ್ದ ನಾನು ಉಳಿದವರು ಆಟಗಳಿಗೋ, ನೋಟಗಳಿಗೋ ಹೋದ ಸಮಯದಲ್ಲಿಯೇ ಅವರ ಪುಸ್ತಕಗಳನ್ನು ಓದಿ ನನ್ನ ಸಿದ್ಧತೆ ಮಾಡಿಕೊಳ್ಳುತ್ತಿದ್ದೆನು. ಸ್ಕೌಟ್ ದಳ ಸೇರಿ ಅದರಲ್ಲಿ ಟ್ರೂಪ್ ಲೀಡರ್ ಆಗುವವರೆಗೂ ಪ್ರಗತಿ ಪಡೆದೆ. ಜಿಮ್ನೇಸಿಯಮ್ ನನ್ನ ಪ್ರೀತಿಯ ಸ್ಥಳವಾಗಿದ್ದಿತು. ಅಲ್ಲಿಗೆ ಆಗಾಗ ಹೋಗಿ ಅಂಗ ಸಾಧನೆ ಮಾಡುತ್ತಿದ್ದೆ. ಮನೆಯಲ್ಲಿ ಯೋಗಾಸನ, ಸೂರ್ಯ ನಮಸ್ಕಾರಗಳನ್ನು ತಪ್ಪಿಸಿರಲಿಲ್ಲ. ಇಷ್ಟಾಗಿಯೂ ವಾರ್ಷಿಕೋತ್ಸವದಲ್ಲಿ ನನಗೆ ಬಂದ ಬಹುಮಾನಗಳೆಲ್ಲ ನಿಬಂಧ ಸ್ಪರ್ಧೆ, ವಾಕ್ ಸ್ಪರ್ಧೆ, ಸ್ಮರಣಶಕ್ತಿಯ ಸ್ಪರ್ಧೆ ಇತ್ಯಾದಿಗಳಿಗಾಗಿ ಬಂದ ಬಹುಮಾನಗಳೇ; ಕ್ರೀಡೆಗಳಿಗಾಗಿ ಬಂದುದು



ಒಂದು ಇರಲಿಲ್ಲ! ಸ್ಕೌಟಿನ ಶಿಬಿರಾಗ್ನಿ ಸಮಾರಂಭಗಳಲ್ಲಿ ಹಾಸ್ಯ ಪಾತ್ರವಹಿಸಿ ಒಂದೆರಡು ಬೆಳ್ಳಿ ಪದಕಗಳನ್ನು ಪಡೆದುದುಂಟು. ಆದರೆ ಇವಾವೂ ಮುಖ್ಯವಲ್ಲ.

## ಸೊನ್ನಲಾಪುರಕ್ಕೆ

ಗುರುಬಸವ ಮಠದ ಗೆಳೆಯರ ಗುಂಪಿನಲ್ಲಿಯೂ ವೈವಿಧ್ಯ ತಲೆದೋರಿದ್ದಿತು. ಶ್ರೀ ವ್ಹಿ. ಎಸ್. ಸಾಲಿಮಠರು ನಮ್ಮ ಸಂಗೀತ ಪಟುಗಳಾಗಿ ಬಿಟ್ಟಿದ್ದರು. ಪೂರ್ಣ ಹೆಸರು ವೃಷಭೇಂದ್ರಸ್ವಾಮಿ ಸಾಲಿಮಠ ಎಂದು. ಅವರು ಈ ಸಂಕ್ಷೇಪಿಸಿದ ಹೆಸರು ಬಳಸಲು ಕಾರಣವೊಂದಿದ್ದಿತು. ಅವರ ಅಣ್ಣಂದಿರಾದ ಷಡಕ್ಷರಸ್ವಾಮಿ ಸಾಲಿಮಠರು ಮ್ಯಾಟ್ರಿಕ್ ಪರೀಕ್ಷೆ ಪಾಸಾಗಿದ್ದರು. ಸುದೈವದಿಂದ ಅವರಿಗೆ ನೌಕರಿಯೂ ಸಿಕ್ಕಿದ್ದಿತು. ನೇಮಕಾತಿಯ ಆಜ್ಞೆ ಕೈಯಲ್ಲಿ ಹಿಡಿದು ಅವರು ಶಾಲಾ ಇಲಾಖೆಯ ಚೀಫ್ ಇನ್‌ಸ್ಪೆಕ್ಟರರ ಕಾರ್ಯಾಲಯದಿಂದ ಹೊರಬಿದ್ದಾಗ ದುರ್ದೈವದಿಂದ ಚೀಫ್ ಇನ್‌ಸ್ಪೆಕ್ಟರರು ಎದುರಾದರು. ಇವರು ಸಲಾಮು ಹೊಡೆದು ನೌಕರಿ ನೀಡಿದುದಕ್ಕಾಗಿ ಅವರ ಉಪಕಾರ ಸ್ಮರಿಸಿದರು. ಸಾಹೇಬರು ಸಂತುಷ್ಟರಾಗಿ, 'ಅಚ್ಛಾ, ಜಾವ್, ಕಾಮ್ ಅಚ್ಛಾ ಕರೋ' ಎಂದು ಆಜ್ಞಾಪಿಸಿದರು. ಇವರೂ ದೊಡ್ಡ ಕುತ್ತಿನಿಂದ ಪಾರಾದವರಂತೆ 'ಅಚ್ಛಾ ಸಾಬ್' ಎಂದು ಮುಂದುವರಿದರು. ಸಾಹೇಬರ ಮಸ್ತಿಷ್ಕದಲ್ಲಿ ಮತ್ತೆ ಯಾವ ತರಂಗ (Brain Wave) ಉದಿಸಿತೋ, ಷಡಕ್ಷರ ಸ್ವಾಮಿಗಳವರನ್ನು ಹಿಂದಕ್ಕೆ ಕರೆಸಿಕೊಂಡರು. 'ಅಜಿ, ಆಪಕಾ ನಾಮ್ ತೊ ಬತಾಕೆ ಜಾವ್' ಎಂದು ಆದೇಶವಿತ್ತರು. ಇವರು ಮತ್ತೇಕೆ ಈ ಪೀಡೆ ಒದಗಿತೆಂದು ಗದಗದ ನಡುಗುತ್ತ 'ಷ.ಷ. ಷಡಕ್ಷರಸ್ವಾಮಿ' ಎಂದು ಹೇಳಿದರು. ಅವರು 'ಕ್ಯಾ, ಕ್ಯಾ' ಎಂದು ಎರಡು ಸಲ ಮತ್ತೆ ಕೇಳಿದರೂ ಇವರು ಇನ್ನಷ್ಟು ಭೀತರಾಗಿ 'ಷ. ಷ. ಷ. ಷಡಕ್ಷರ ಸ್ವಾಮಿ' ಎಂದು ಉತ್ತರವಿತ್ತರು. ಸಾಹೇಬರು ಅವರ ಕೈಯಲ್ಲಿದ್ದ ನೇಮಕಾತಿ ಆಜ್ಞೆಯನ್ನು ಕಸಿದುಕೊಂಡು, 'ಅಜಿ, ಯ ಕ್ಯಾ ಕಡಕಡಕಡ ಲಗಾಯೆ; ತುಮ್‌ಸೆ ಆಸಾನ್ ನಾಮ ವಾಲೆ ಬಹುತ ಸೆ ಪಡೇ ಹೈಂ–ಜಾವ್' (ಇದೇನು ಕಡಕಡಕಡ ಹಚ್ಚಿರುವಿರಿ; ನಿಮಗಿಂತ ಸುಲಭ ಹೆಸರಿನವರು ಬೇಕಾದಷ್ಟು ಜನ ಬಿದ್ದಿದ್ದಾರೆ; ಹೋಗಿ!) ಎಂದು ಕಳಿಸಿಬಿಟ್ಟರು! ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆಂದು ಮೋರೆ ಒಣಗಿಸಿಕೊಂಡು ಹೋದರು ಷಡಕ್ಷರಸ್ವಾಮಿಗಳವರು. 'ವೃಷಭೇಂದ್ರಸ್ವಾಮಿ, ಅದಕ್ಕೂ ಕಠಿಣವಾದ ಹೆಸರು. ಇದನ್ನು ಹೇಳಿಕೊಂಡು ಹೋದರಂತೂ ಕೆಲಸ ಸಿಗುವುದಿರಲಿ, ಒಳಗೇ ಪ್ರವೇಶ ಸಿಕ್ಕಲಿಕ್ಕಿಲ್ಲವೆಂದು ಜಾಣರಾದ ಅವರು ಹೆಸರು ಬದಲಾಯಿಸಿ ವ್ಹಿ.ಎಸ್. ಸಾಲಿಮಠ ಆಗಿದ್ದರು. ಎಲ್ಲರೂ ಸಾಲಿಮಠರೆಂದೇ, ಸಂಗೀತದ ಸಾಲಿಮಠರೆಂದೇ ಅವರನ್ನು ಕರೆಯುತ್ತಿದ್ದರು. ಯಾವಾಗಲೂ ಹಾಡುತ್ತಲೇ

ಇರುತ್ತಿದ್ದರವರು. ಸ್ನಾನ ಮಾಡುವಾಗ, ಶಾಲೆಗೆ ಹೋಗುವಾಗ, ಬರುವಾಗ ಬಾಳಗಂಧರ್ವರ ಹಾಡುಗಳನ್ನು ಗುನುಗಿದ್ದೇ ಗುನುಗಿದ್ದು.

ನಮ್ಮ ಕಿತಾಪತಿ ಕಲ್ಲಯ್ಯನವರಿಗೆ ಒಂದು ಕುಚೋದ್ಯ ಹೊಳೆಯಿತು. ಓದು ಬರಹದಲ್ಲಿ ಅಷ್ಟಕ್ಕಷ್ಟೇ ಆಗಿದ್ದ ಅವರು ಕಿಡಿಗೇಡಿತನದಲ್ಲಿ ಎತ್ತಿದ ಕೈ. ಒಂದು ರಾತ್ರಿ ಮರುದಿನ ಮುಂಜಾನೆ ನಡೆಯಲಿದ್ದ ತಮ್ಮ ಕುಚೇಷ್ಟೆಯ ಬಗ್ಗೆ ನಮಗೆಲ್ಲರಿಗೆ ಮಾಹಿತಿ ನೀಡಿದರು. ಮರುದಿನ ಮುಂಜಾನೆ ಸಂಗೀತದ ಸಾಲಿಮಠರು ಸ್ನಾನ ಮಾಡುವವರೆಗೆ ಯಾರೂ ಸ್ನಾನ ಮಾಡಲಿಲ್ಲ. ಆಮೇಲೆ ಒಬ್ಬೊಬ್ಬರೂ ಸ್ನಾನ ಮಾಡಿ ಬಾಯಿಗೆ ಬಂದಂತೆ ಬೇಸೂರು ಸಂಗೀತ ಷುರು ಮಾಡಿದರು. ಮಠಕ್ಕೆ ಮಠವೇ ಮಾರ್ದನಿ ಕೊಟ್ಟಿತು. ಗುರುಬಸವ ಸ್ವಾಮಿಗಳವರು ಬಂದು ಎಂದಿಲ್ಲದಿದ್ದ ದೊಂದಡಿ ಧಾಂದಲೆ ಇದೇನೆಂದು ಗದ್ದರಿಸಿದರು. ಎಲ್ಲರೂ ಶಿರಬಾಗಿ ಬಿನ್ನವಿಸಿದೆವು; "ಪೂಜ್ಯರೆ, ಇದರಲ್ಲಿ ನಮ್ಮ ತಪ್ಪಿಲ್ಲ; ಸಂಗೀತದ ಸಾಲಿಮಠರು ಸಂಗೀತ ಸುರಿಸುತ್ತಲೇ ಸ್ನಾನ ಮಾಡಿದ ಕಾರಣ ಬಾವಿಯ, ನಲ್ಲಿಯ ನೀರಿನಲ್ಲೆಲ್ಲ ಸಂಗೀತ ಸೇರಿ ಹೋಗಿದೆ. ಆ ಆ ನೀರಿನಿಂದ ಜಳಕ ಮಾಡಿದ ನಮಗೂ ಸಂಗೀತದ ಸ್ನಾನ ಮಾಡಿದಂತಾಗಿ ನಾವೂ ಸಂಗೀತ ಸುರಿಸುತ್ತಿದ್ದೇವೆ!" ಶ್ರೀಗಳವರೂ ನಕ್ಕರು; ನಾವೂ ನಕ್ಕೆವು; ಸಾಲೀಮಠರು ನಗಲಿಲ್ಲ!

ಅಂದಿನಿಂದ ಸಾಲೀಮಠರ ಸಂಗೀತ ಸ್ವಲ್ಪ ಕಡಿಮೆಯಾಯಿತು. ನಾವು ಅಭ್ಯಾಸ ಮಾಡುತ್ತಿರುವಾಗ ಅವರು ಹಾಡುವುದು ನಿಂತು ಹೋಯಿತು. ಸ್ವಭಾವತಃ ಸಾತ್ವಿಕರಾದ ಅವರೂ ಬೇಗ ನಮ್ಮ ಕುಚೇಷ್ಟೆಯನ್ನು ಮರೆತು ನಮ್ಮೊಡನೆ ಸಮರಸರಾದರು. ಆ ಸಂತೋಷದಲ್ಲಿ ಕನಕಗಿರಿ ಮಹಾಂತಯ್ಯನವರಿಂದ ಪದರು ಚಪಾತಿ. ಆಲೂ–ಗೋಬಿ ಪಲ್ಯ ಮಾಡಿಸಿ ಎಲ್ಲರೂ ಹೊಟ್ಟೆ ಬಿರಿಯುವವರೆಗೆ ಹೊಡೆದೆವು, ಬಿ.ಆರ್. ಪಟೇಲರು ಹನ್ನೊಂದು ಚಪಾತಿ ಹೊಡೆದು ಪ್ರಥಮ ಸ್ಥಾನ ಪಡೆದರು. ಇನ್ನೂ ಪರೀಕ್ಷಿಸಲೆಂದು ಅವರ ಮುಂದೆ ಒಂದು ಬಾಳೆಹಣ್ಣಿನ ಚಿಪ್ಪು ಹಿಡಿದೆವು. ಅದರಲ್ಲಿದ್ದ ಹನ್ನೆರಡು ಹಣ್ಣುಗಳನ್ನೂ ಬಕ್ಕರಿಸಿ ಬಿಟ್ಟರವರು. ಅಂದಿನಿಂದ ಬಿ.ಆರ್. ಪಟೇಲರೆನ್ನುವುದು ಹೋಗಿ ಬ್ರಹ್ಮರಾಕ್ಷಸ ಪಟೇಲರೆಂದು ಅವರ ಹೆಸರಾಯಿತು. ಅವರಿಗೂ ಹೀಗೆ ಕರೆಸಿಕೊಳ್ಳಲು ಹಿಗ್ಗು! ಪಟ್ಟದಯ್ಯನವರೂ, ವೀರಭದ್ರಪ್ಪ ಭಾವಿಕಟ್ಟಿಯವರೂ ಪಾಠಕ್ಕಿಂತ ಮಠದ ಕೆಲಸಗಳಿಗೆ ಮಹತ್ವ ನೀಡಿದ್ದರು. ಪಟ್ಟದಾರ್ಯರ ಪ್ರಯತ್ನದಿಂದ ಮಠದಲ್ಲಿ ಪುರಾಣ ಪ್ರವಚನ ಪ್ರಾರಂಭವಾಯಿತು, ನಾವು ಮೇಲೆ ಓದುತ್ತಲಿರುವಾಗ ಕೆಳಗೆ "ಅಪಾ ಯಾವಾಗ ಈ ಪ್ರಕಾರವಾಗಿ..." ಎಂಬ ಪುರಾಣಿಕರ ಪಲ್ಲವಿ! ಇದನ್ನು ಎಷ್ಟು ಸಲ ಪುನರುಚ್ಚರಿಸಿದರೂ ತೃಪ್ತಿಯಿಲ್ಲ



ಅವರಿಗೆ! ಪುರಾಣ ಪ್ರವಚನಕಾರರು ಎಂದೆನ್ನುವುದು ಹೋಗಿ 'ಅಪಾ ಯಾವಾಗ ಈ ಪ್ರಕಾರವಾಗಿ' ಎಂಬುದೇ ಅವರ ಹೆಸರಾಗಿ ಬಿಟ್ಟಿತು.

ಹೇಗೂ ಈ ಪುರಾಣ ಮುಗಿದವರೆಗೆ ನಮ್ಮ ಅಭ್ಯಾಸ ಸರಿಯಾಗಿ ಸಾಗುವುದಿಲ್ಲ; ಆದುದರಿಂದ ಸೊನ್ನಲಾಪುರಕ್ಕಾದರೂ ಹೋಗಿ ಸಿದ್ಧರಾಮನ ದರ್ಶನ ಪಡೆದು ಬರುವುದೆಂದು ತೀರ್ಮಾನಿಸಿದೆವು. ಹನ್ನೆರಡು ಜನ ಹೋಗಿ ವಾರದ ಸಂಸ್ಕೃತ ಪಾಠ ಶಾಲೆಯಲ್ಲಿ ಬಿಡಾರ ಬಿಟ್ಟೆವು. ಅಲ್ಲಿದ್ದವರು, 'ನಿಮ್ಮಲ್ಲಿ ಜಂಗಮರು ಎಷ್ಟು ಜನ ?' ಎಂದೇ ಮೊದಲ ಪ್ರಶ್ನೆ ಕೇಳಬೇಕೆ? ಯಾಕೆ ಕೇಳಿದರೆಂಬುದು ಆ ಕ್ಷಣ ಗೊತ್ತಾಯಿತು. ಅದು ಶ್ರಾವಣಮಾಸ; ಜಂಗಮರಿಗೆ ವಿಪರೀತ ಬೇಡಿಕೆ ಆಗ– 'ಮನೆ ತೀರಿಸಲು!' ಅಲ್ಲಿದ್ದ ಒಬ್ಬೊಬ್ಬರೂ ಹತ್ತಪ್ಪತ್ತು ಮನೆ 'ತೀರಿಸಿ ತೀರಿಸಿ' ಸುಸ್ತಾಗಿ ಹೋಗಿದ್ದರು. ನಮ್ಮಲ್ಲಿದ್ದ ಜಂಗಮರನ್ನೂ ಕೆಲವು ಮನೆಗಳಿಗೆ ಕಳಿಸಿ ತಮ್ಮ ತಲೆನೋವು ಕಡಿಮೆ ಮಾಡಿಕೊಳ್ಳಬೇಕೆಂದಿದ್ದರವರು. ನಮ್ಮಲ್ಲಿ ಆರು ಜನ ಜಂಗಮರಿದ್ದೆವು. ನಮ್ಮೆಲ್ಲರನ್ನೂ ಬಿಟ್ಟಿಹಿಡಿದರವರು. ಲಗುಬಗೆಯಿಂದ ಸ್ನಾನ ಮಾಡಿಸಿ, 'ಮಡಿ' ಹೊದಿಸಿ ನಾಲ್ಕು ನಾಲ್ಕು ಮನೆ 'ಮುಗಿಸಿ' ಬರಲು ಕಳಿಸಿದರು. ಉಳಿದವರಿಗೆ ಅಲ್ಲಿಯೇ ಊಟದ ಏರ್ಪಾಟು ಮಾಡಿದರು.

ನನಗೆ ದಿಗ್ಭ್ರಮೆ. 'ಮನೆ ತೀರಿಸಲು' ಹೋದಾಗ ಏನೇನು ನಡೆಯುತ್ತದೆ, ನಾವೇನು ಮಾಡಬೇಕು, ಏನು ಮಂತ್ರ ಹೇಳಬೇಕೆಂಬುದೇ ಗೊತ್ತಿರಲಿಲ್ಲ ನನಗೆ. ಮಂತ್ರಗಳೇನೋ ಮುಖೋದ್ಗತವಾಗಿದ್ದುವು. ಆದರೆ ಪಾದಪೂಜಾದಿಗಳ ಪ್ರಕ್ರಿಯೆ ಗೊತ್ತಿರಲಿಲ್ಲ. ಜಾತಿ ಪದ್ಧತಿಯನ್ನೇ ಬುಡಮೇಲು ಮಾಡಿದ್ದ ಬಸವಣ್ಣ ಕಟ್ಟಿದ ಸಮಾಜದಲ್ಲಿ ಈ ಜನ್ಮದಿಂದ ಜಂಗಮತ್ವ ಯಾವಾಗ, ಏಕೆ ಪ್ರಾರಂಭವಾಯಿತೆಂಬುದೇ ಇಂದಿಗೂ ಅರ್ಥವಾಗಿಲ್ಲ ನನಗೆ. ಈಚೆಗೆ ಇದು ಸಡಿಲುಗೊಂಡಿದ್ದರೂ ಇನ್ನೂ ಪೂರ್ಣ ಹೋಗಿಲ್ಲ. ಬರಬರುತ್ತ ಹೋಗಬಹುದು. ಆದರೆ ನಾವು ಸೊಲ್ಲಾಪುರಕ್ಕೆ ಹೋದಾಗ ಜಂಗಮನಿಗಿದ್ದ ಸ್ಥಾನ ಜಂಗಮನದೇ. ಬ್ರಾಹ್ಮಣರು ಭೂಸುರರೆಂದು ಮೆರೆಯುತ್ತಿದ್ದಂತೆ ಜಂಗಮರು ಜಕಾರದಿಂದ ಜನನವಿಲ್ಲದಿರುವಿಕೆ, ಗಕಾರದಿಂದ ಗಮನವಿಲ್ಲದಿರುವಿಕೆ, ಮಕಾರದಿಂದ ಮರಣವಿಲ್ಲದಿರುವಿಕೆಗೆ ಸಂಕೇತವಾಗಿ ಮೆರೆಯುತ್ತಿದ್ದರು. ಗುರುಶಾಂತಯ್ಯನವರು ಐದು ನಿಮಿಷಗಳಲ್ಲಿ ಉಳಿದ ಐಯ್ಯರಿಗೆ– ಐದು ಜನ ಅಯ್ಯಗಳಿಗೆ–ಸಂಕ್ಷಿಪ್ತ ಪಾದಪೂಜಾವಿಧಿಯನ್ನು ಬೋಧಿಸಿದರು. ಒಂದು ಎಚ್ಚರಿಕೆಯನ್ನೂ ನೀಡಿದರು: "ಜೋಕೆ, ಸೊಲ್ಲಾಪುರದ ಹೆಣ್ಣುಗಳು ಹೆಸರಾದ ಹೆಣ್ಣುಗಳು! ಉಪಾಯದಿಂದ ಪಾರಾಗಿ ಬನ್ನಿರಿ! ತಗ್ಗಿಗೆ ಬಿದ್ದೀರಿ!"

ನಾನು ಹೋದ ಮೊದಲನೆಯ ಮನೆಯಲ್ಲಿ ನನಗಾವ ತೊಂದರೆಯೂ ಆಗಲಿಲ್ಲ. ಪಾದ ಪೂಜೆ ಮಾಡಿದ ತಾಯಿ ಪರಮಸಾಧ್ವಿ. ನನಗೆ ಮಾತೃಸ್ವರೂಪೆಯರಾಗಿ ಗೋಚರಿಸಿದರವರು. ನನ್ನ ಅನನುಭವಿಕತೆಯನ್ನು ಸೂಕ್ಷ್ಮವಾಗಿ ಗ್ರಹಿಸಿ ತಾವೇ ಪದ್ಧತಿಯಂತೆ ಪಾದ ಪೂಜೆ ಮಾಡಿ ಹೋಳಿಗೆ ತುಪ್ಪ ನೀಡಿದರು. ಇನ್ನೂ ಮೂರು ಮನೆಗಳಿಗೆ ಜಾಗ ಉಳಿಸಿಕೊಂಡು ಊಟ ಮಾಡಿ ಹೊರಟೆ ದಕ್ಷಿಣೆ ದೊರೆಯಿತು. ಅವರಿಗೆ 'ಶುಭಮಸ್ತು' ಎಂದು ಹೇಳುವಷ್ಟರಲ್ಲಿ ಮುಂದಿನ ಮನೆಯವರು ಬಂದು ಬಿಟ್ಟರು. ಅಲ್ಲಿ ಪಾದ ಪೂಜೆ ಮಾಡಿದವರು ಮೊದಲಿನ ಮನೆಗಿಂತ ಕಿರಿಯ ವಯಸ್ಸಿನ ಮಹಿಳೆ. ಯಾಕೆ ಎಲ್ಲ ಮನೆಗಳಲ್ಲಿಯೂ ಮಹಿಳೆಯರೇ ಪಾದ ಪೂಜೆ ಮಾಡುತ್ತಾರೆಂಬ ಪ್ರಶ್ನೆ ಮಸ್ತಿಷ್ಕದಲ್ಲಿ ಸುಳಿದು ಹೋಗದಿರಲಿಲ್ಲ. ಎರಡನೆಯ ಮನೆಯ ಮಹಿಳೆ ತಾಯಿಯಾಗಿ ತೋರಲಿಲ್ಲ. ಅವರ ದೃಷ್ಟಿಯಲ್ಲಿ ತಾಯಿತನ ತುಂಬಿರಲಿಲ್ಲ; ಇನ್ನೇನೋ ಇಣುಕುತ್ತಿದ್ದಿತು. ನಾನು ಗಾಬರಿಯಾದೆ. ತಲೆ ತಗ್ಗಿಸಿ ಕುಳಿತವನು ಅಲ್ಪ ಭೋಜನ ಮುಗಿಸಿಯೇ ತಲೆಯೆತ್ತಿದೆ. ಮುಂದಿನ ಎರಡು ಮನೆಗಳ ಅನುಭವ ಇದಕ್ಕೂ ಕಂಪನಕಾರಿಯಾಗಿದ್ದಿತು. ನನ್ನ ಪಾದಗಳಿಗೆ ಹರೆಯದ ಹೆಣ್ಣುಗಳ ಹಸ್ತ ಸ್ಪರ್ಶವಾದುದೇ ಮೊದಲ ಸಲ; ಅದರಲ್ಲೂ ಪಾದ ತೊಳೆವ ನೆಪದಿಂದ ಪಾದ ಗೀರುವುದು ಮೊದಲಾದ ಚೇಷ್ಟೆಗಳು ನಡೆದಾಗ ನಡುಗಿಬಿಟ್ಟೆ. ಕೊನೆಯ ಮನೆಯ ಕನ್ನೆಯಂತೂ ನಾನು ಯಾವ ಒನಪು ಸನ್ನೆಗಳಿಗೂ ಸೋಲದಿರಲು ನನ್ನ ಕಾಲು ತೊಳೆದ ನೀರನ್ನು ಸಿಟ್ಟಿನಿಂದ ನನ್ನ ಮೇಲೆಯೇ ಎರಚಿ ಹೋಗಿದ್ದಳು! ಈ ಅಗ್ನಿ ಪರೀಕ್ಷೆಗಳಿಂದ ಪಾರಾಗಿ ವಾರದ ಸಂಸ್ಕೃತ ಪಾಠಶಾಲೆಗೆ ವಾಪಸ್ಸಾದಾಗ ಥರಥರ ನಡುಗುತ್ತಿದ್ದೆ. ನನ್ನ ಅಂತಃಸಾಕ್ಷಿಯಂತಿದ್ದ ಗುರುಶಾಂತಯ್ಯನವರಿಗೆ ನಡೆದುದನ್ನು ವಿವರಿಸಿದೆ. ಅವರಿಗೂ ಅಂತಹ ಅನುಭವಗಳೇ ಆಗಿದ್ದುವು. ಇಬ್ಬರೂ ಆಪ್ತಾಲೋಚನೆ ಮಾಡಿ ಒಂದು ಯುಕ್ತಿಯನ್ನು ಕಂಡು ಹಿಡಿದೆವು: ಈಗ ತಂಗಿರುವ ವಾರದ ಪಾಠಶಾಲೆಯನ್ನು ಬಿಟ್ಟು ಬೇರೆಡೆಗೆ ಹೋಗುವುದೂ ಬೇಡ, ಈ 'ಮನೆ ಮುಗಿಸುವ' ಜಂಜಾಟದಲ್ಲಿ ಸಿಲುಕಿಕೊಳ್ಳುವುದೂ ಬೇಡ; ಬೆಳಗಿನ ಜಾವದಲ್ಲಿ ಏಳಬೇಕು; ಎಲ್ಲರಿಗೂ ಮೊದಲೇ ಸ್ನಾನ ಮಾಡಬೇಕು; ಪಾಠಶಾಲೆ ಬಿಟ್ಟು ಹೊರಡಬೇಕು; ಎಲ್ಲಿ ಹಸಿವೆಯಾಗುವುದೋ ಅಲ್ಲಿ ಊಟ ಮಾಡಿ ಅಡ್ಡಾಡಿ ನೋಡುವುದೆಲ್ಲವನ್ನೂ ನೋಡಬೇಕು; ಒಮ್ಮೆಗೆ ರಾತ್ರಿಯಾದ ಮೇಲೆ ಮಲಗಲು ಪಾಠಶಾಲೆಗೆ ಹಿಂದಿರುಗಬೇಕು. ಮರು ದಿನದಿಂದಲೇ ಆಚರಣೆಗೆ ಬಂದುಬಿಟ್ಟಿತು ಈ ಯುಕ್ತಿ. ಶೃಂಗಸಮಯ (peak hour)ದಲ್ಲಿ 'ನಾವೆಲ್ಲಿ, ನೀವೆಲ್ಲಿ?' ಎಂದು ನಮ್ಮನ್ನು ಹುಡುಕಿಸಿಯೇ ಹುಡುಕಿಸಿದರಂತೆ ಪಾಠಶಾಲೆಯ ವಟುಗಳು.



ನಾವು ಸಿಕ್ಕದಿರಲು ಒಟಗುಟ್ಟುತ್ತ ತಾವೇ ಮನೆಗಳಿಗೆ ಹೋಗಿ ಬಂದರಂತೆ ಆ ವಟುಗಳು! ನನ್ನ ಮಟ್ಟಿಗಂತೂ ಆ ಉಪಾಧಿ ಅದೇ ಮೊದಲು, ಅದೇ ಕೊನೆ!

ಒಂದು ದಿನ ಸಿದ್ಧರಾಮೇಶ್ವರ ದೇವಾಲಯದ ಮುಂದಿನ ಕೆರೆಯಲ್ಲಿ ಮೈದಣಿವವರೆಗೆ ಈಸಿದೆವು. ಮೈದಣಿದರು ಮನ ದಣಿಯಲಿಲ್ಲ. ನಾನು ಈಸಿ ಈಸಿ ಸುಸ್ತಾಗಿ ದಂಡೆಯತ್ತ ಹೊರಟಿದ್ದೆ. ದಂಡೆಯ ಮೇಲೆ ಸಂಕ್ಲಾಪುರ ಸಿದ್ಧರಾಮಪ್ಪನವರ ಸೋದರ ಗುರುಸಿದ್ದಪ್ಪ ನೀರಲ್ಲಿಳಿಯಲು ಅಂಜಿ ಹಿಂಜರಿಯುತ್ತ ನಿಂತಿರುವುದು ಕಾಣಿಸಿತು. ತಣ್ಣೀರಿಗೆ ಅಂಜಿ ನಿಂತಿರಬೇಕೆಂದು ಕೆರೆಯಲ್ಲಿದ್ದೇ ಕೈಹಿಡಿದೆಳೆದೆ. ಅವರಿಗೆ ಈಸಲು ಬರುವುದಿಲ್ಲವೆಂಬುದು ನನಗೆ ಮೊದಲೇ ಗೊತ್ತಿದ್ದರೆ ಈ ತಪ್ಪು ನನ್ನಿಂದ ಆಗುತ್ತಿರಲಿಲ್ಲ. ಅವರು ಚಟ್ಟನೇ ಚೀರಿ ನನ್ನ ಕೊರಳಿಗೆ ತಮ್ಮ ಎರಡೂ ಕೈಗಳನ್ನು ಸುತ್ತಿಕೊಂಡೇ ಕೆರೆಯೊಳಗೆ ಬಿದ್ದುಬಿಟ್ಟರು. ನನ್ನ ಕೈಗಳೋ ಸಂಪೂರ್ಣ ಸೋತು ಹೋಗಿದ್ದುವು. ದಂಡೆಗೆ ಅನತಿ ದೂರದಲ್ಲಿಯೇ ಇಬ್ಬರೂ ಮುಳುಮುಳುಗಿ ಏಳ ತೊಡಗಿದೆವು. ಇನ್ನೊಂದೆರಡು ಸಲ ಮುಳುಗಿದ್ದರೆ ಇಬ್ಬರ ಇತಿಶ್ರೀ ಆಗಿ ಹೋಗುತ್ತಿತ್ತೇನೊ! ಕೊಪ್ಪಳ ವೀರಭದ್ರಪ್ಪನವರು ಓಡಿ ಬಂದವರೇ ನಮ್ಮಿಬ್ಬರನ್ನೂ ಒಟ್ಟಿಗೆ ದಂಡೆಗೆ ಎಳೆದರು! ಇಬ್ಬರ ಹೊಟ್ಟೆಗಳೂ ನೀರು ತುಂಬಿ ಕಾಲ್ಚೆಂಡಿನಂತಾಗಿದ್ದುವು. ಗುರುಶಾಂತಯ್ಯನವರೂ ಮಹಾಂತಯ್ಯನವರೂ ನಮ್ಮಿಬ್ಬರ ಹೊಟ್ಟೆಗಳನ್ನು ನೀವಿ ನೀವಿ ನೀರು ತೆಗೆದರು. ಸಿದ್ಧರಾಮನ ಸನ್ನಿಧಿಗೆ ನಮ್ಮನ್ನು ಎಳೆದೊಯ್ದು 'ನೀನೆ ರಕ್ಷಿಸಿದೆ ಇವರನ್ನು' ಎಂದು ಕೈಮುಗಿದು ಕಾಯಿ ಒಡೆಸಿದರು. ಅಂತೂ ಸಾವಿನ ದವಡೆಯಿಂದ ಪಾರಾದೆವು.'

ಅಲ್ಲಿಂದ ನೇರವಾಗಿ ಪೂಜ್ಯ ಶರಣಮ್ಮನವರ ಆಶ್ರಮಕ್ಕೆ ಹೋದೆವು. ಮಹಾಶರಣ ನಾಲ್ವತ್ವಾಡದ ವೀರೇಶ್ವರರ ಪಾವನ ಪುತ್ರಿಯರಾಗಿದ್ದ ಆ ಶರಣಮ್ಮನವರು ಶರಣ ಧರ್ಮದ ದೀಪವಾಗಿ ಬೆಳಗುತ್ತಲಿದ್ದರು. ಅವರ ಪ್ರಭಾಪುಂಜರಂಜಿತ ಪ್ರಸನ್ನ ವದನವನ್ನು ನೋಡುತ್ತಲೇ ನಮ್ಮೆದೆಗಲ್ಲಿ ಧನ್ಯತೆಯ ವನಜ ವಿಕಸಿಸುತ್ತಿರುವಂತೆ ನಮಗೆ ಭಾಸವಾಯಿತು. ಎಲ್ಲರೂ ಅಡಿಗೆರಗಿದೆವು. ಅವರು ಅದನ್ನು ತಡೆದು 'ಬಸವಾದಿ ಪ್ರಪಮಥರು ನಿಮಗೆ ಒಳ್ಳೆಯದು ಮಾಡಲಿ' ಎಂದು ಹರಸಿದರು. ಆಶ್ರಮದಲ್ಲಿ ವೈಶಿಷ್ಟ್ಯ ಪೂರ್ಣ ಲಿಂಗ ಪೂಜೆ, ಪ್ರಸಾದ ಸೇವೆಗಳು ನಡೆದುವು. ಆ ಪ್ರಸಾದ ಅಮೃತವಾಗಿ ತೋರಿತು ನಮಗೆ. ಸಿದ್ಧರಾಮ ಸರಸಿಯಲ್ಲಿ ಸ್ನಾನ, ಶರಣಮ್ಮನವರ ದರ್ಶನಾಶೀರ್ವಾದ, ದಾಸೋಹ ಮಂದಿರದ ಪ್ರಸಾದಗಳಿಂದ ನಮ್ಮ ಅಂಗಾಂಗಗಳೆಲ್ಲ ಪರಿಶುದ್ಧವಾದಂತೆ ನಮಗೆನ್ನಿಸಿತು. ಇನ್ನು ಈ ಪ್ರಸಾದಕಾಯವನ್ನು ಕೆಡಿಸಲಾಗದು–ಎಂಬ ಎಚ್ಚರವೂ ಉದಿಸಿತು. ಹೊರಡಲು

ಅಣಿಯಾದ ನಮ್ಮನ್ನು ಕಂಡು ಶರಣೆ ರುದ್ರಮ್ಮ ತಾಯಿಯವರು, 'ಬಸವ ಜಯಂತಿಗೆ ಬರಬೇಕ್ರಪಾ' ಎಂದರು. ತಮ್ಮ ಅನುಗ್ರಹವಿದ್ದರೆ ಬರುವೆವೆಂದು ಹೇಳಿ ಕಲಬುರಗಿಗೆ ಹಿಂದಿರುಗಿದೆವು. ಆದರೆ ಆ ವರ್ಷದ ಬಸವ ಜಯಂತಿಗಿರಲಿ, ಯಾವ ವರ್ಷದ ಬಸವ ಜಯಂತಿಗೂ ಅಲ್ಲಿಗೆ ಮತ್ತೆ ಹೋಗಲಾಗಲಿಲ್ಲ. ಈಗ ಶರಣಮ್ಮನವರೂ ಲಿಂಗೈಕ್ಯರಾಗಿದ್ದಾರೆ; ಸಿದ್ಧರಾಮನ ಸೊನ್ನಲಿಗೆಯೂ ಕರ್ನಾಟಕದಿಂದ ಹೊರಗುಳಿದಿದೆ; ಕೊನೆಯವರೆಗೂ ಹೊರಗೇ ಉಳಿಯುವ ಲಕ್ಷಣಗಳೂ ಕಾಣುತ್ತಿವೆ. ಕಾಸರಗೋಡು ಮಡಕಶಿರಾ ಅಕ್ಕಲಕೋಟೆ ಮುಂತಾದ ಅಚ್ಚಕನ್ನಡ ಭಾಗಗಳೇ ಇನ್ನೂ ಕನ್ನಡ ನಾಡಿನ ಹೊರಗೇ ಉಳಿದಿರುವಾಗ ಸೊನ್ನಲಾಪುರ ಒಮ್ಮಿಲ್ಲೊಮ್ಮೆ ಕರ್ನಾಟಕಕ್ಕೆ ಬಂದೀತೆಂದು ಆಶಿಸುವುದಾದರೂ ಹೇಗೆ?

ಗುರುಬಸವ ಮಠದಲ್ಲಿ 'ಅಪಾ ಯಾವಾಗ ಈ ಪ್ರಕಾರವಾಗಿ' ಇನ್ನೂ ಮುಗಿದಿರಲೇ ಇಲ್ಲ. ಇನ್ನು ಕಾಲಹರಣ ಕೂಡದೆಂದು ಮೇಲಿನ ಕಿಟಿಕಿಗಳನ್ನೆಲ್ಲ ಮುಚ್ಚಿ, ಸಂದುಸಂದಿಗೆ ಬಟ್ಟೆ ತುರುಕಿ ಬಿಟ್ಟು ಓದಲು ಆರಂಭಿಸಿದೆವು. ಪಟ್ಟದಯ್ಯನವರೂ ಭಾವಿಕಟ್ಟೆಯವರೂ ಪುರಾಣದ ಸಂಭ್ರಮದಲ್ಲಿಯೇ ಇದ್ದರು. ಪುರಾಣ ಮುಗಿದಾಗ ಪಟ್ಟದಾರ್ಯರ ಮಂಗಳಾರತಿ ಪದ, ಪುಷ್ಪಾಂಜಲಿ ಮಂತ್ರಗಳು ನಮ್ಮ ಮುಚ್ಚಿದ ಕಿಟಿಕಿಗಳನ್ನೂ ಭೇದಿಸಿ ಒಳ ನುಗ್ಗುತ್ತಿದ್ದುವು. ಭಾವಿಕಟ್ಟೆ ಬಹಳ ಸರಳ ಹೃದಯದ ವ್ಯಕ್ತಿ; ಪಟ್ಟದಾರ್ಯರೂ ಅಷ್ಟೇ. ಅವರು ಅಭ್ಯಾಸವನ್ನು ಸಂಪೂರ್ಣ ಕಡೆಗಣಿಸಿದುದು ನನ್ನ ಮನಸ್ಸಿಗೆ ಬರಲಿಲ್ಲ. ಪಟ್ಟದಾರ್ಯರು ಕೈಗೆ ಸಿಕ್ಕುವುದೇ ಕಷ್ಟವಾಗಿದ್ದಿತು. ಯಾವಾಗಲೂ ಮನೆಮನೆಗೆ ಎಡತಾಕಿ ಪುರಾಣ ಪ್ರವಚನಕ್ಕೆ ಹೆಚ್ಚು ಹೆಚ್ಚು ಜನರನ್ನು ಕರೆತರುವ ಹವ್ಯಾಸ ಅವರಿಗೆ. ಭಾವಿಕಟ್ಟೆಯವರು ಕೈಗೆ ಸಿಕ್ಕರು. "ಇನ್ನೂ ಪರೀಕ್ಷೆ ದೂರವಿಲ್ಲ; ಇನ್ನಾದರೂ ನೀವು ಅಭ್ಯಾಸಕ್ಕೆ ಗಮನ ಕೊಡಬೇಕು" ಎಂದು ವಿನಯ ಪೂರ್ವಕವಾಗಿಯೇ ವಿನಂತಿ ಮಾಡಿಕೊಂಡೆ. ತಟ್ಟನೆ ಉತ್ತರವಿತ್ತರವರು; ಅಭ್ಯಾಸ ಮಾಡುವುದೇನೂ ಬಹಳ ಉಳಿದಿಲ್ಲ ಅಣ್ಣಯ್ಯ– ಇಂಗ್ಲೀಷ್ ಓದಿಕೊಳ್ಳಬೇಕು, ಉರ್ದೂ ನೋಡಿಕೊಳ್ಳಬೇಕು; ಲೆಖ್ಖ ಮಾಡಿಕೊಳ್ಳಬೇಕು; ವಿಜ್ಞಾನ ತಿಳಿದುಕೊಳ್ಳಬೇಕು; ಇತಿಹಾಸ ಭೂಗೋಲ ನೆನಪಿನಲ್ಲಿ ನಿಲ್ಲಿಸಿಕೊಳ್ಳಬೇಕು. ಅಷ್ಟೇ!' ಬೆಪ್ಪಾದ ಈ ಉತ್ತರ ಕೇಳಿ. ಆಗಾಗ ಎಚ್ಚರಿಸುತ್ತಲೇ ಇದ್ದೆ; ಹೆಚ್ಚು ಕಡಿಮೆ ಇದೇ ಉತ್ತರವನ್ನವರು ಕೊಡುತ್ತಲೇ ಇದ್ದರು. ಪರೀಕ್ಷೆ ಕೇವಲ ಹದಿನೈದು ದಿನಗಳು ಉಳಿದಾಗ ಮತ್ತೆ ಎಚ್ಚರಿಸಿದೆ; ಎಂದೆಂದೂ ಮರೆಯಲಾಗದ ಉತ್ತರವಿತ್ತರವರು; "ಹೇಗೂ ಫೇಲಾಗುತ್ತೇನೆ. ಇದು ಖಾತ್ರಿ, ಮತ್ತೇಕೆ ಓದಲಿ?" ನನ್ನನ್ನು ನಿರುತ್ತರನನ್ನಾಗಿ ಮಾಡಿತು ಈ ಉತ್ತರ! ಊರಲ್ಲಿ ತಂದೆತಾಯಿಗಳು ನೂರು ಸಂಕಷ್ಟಗಳನ್ನು ನುಂಗಿ ಪರಸ್ಥಳಗಳಲ್ಲಿರುವ ತಮ್ಮ



ಮಕ್ಕಳಿಗೆ ತೊಂದರೆಯಾಗದಿರಲಿ, ಅವರ ವಿದ್ಯಾಭ್ಯಾಸ ನಿರಾತಂಕವಾಗಿ ಸಾಗಲಿ– ಎಂದು ಸಾಲವನ್ನಾದರೂ ಮಾಡಿ, ಇದ್ದ ಬಿದ್ದ ಒಡವೆಗಳನ್ನಾದರೂ ಮಾರಿ ಹಣ ಕಳಿಸುತ್ತಾರೆ. ಮಕ್ಕಳಾದರೋ ವ್ಯಾಕರಣ ಪುಸ್ತಕ ಕೊಳ್ಳಬೇಕೆಂದು ಒಮ್ಮೆ, ಗ್ರಾಮರ್ ಕೊಳ್ಳಬೇಕೆಂದು ಒಮ್ಮೆ, 'ಕವಾಯಿದ್' ಕೊಳ್ಳಬೇಕೆಂದು ಒಮ್ಮೆ, ಗಣಿತ ಕೊಳ್ಳಬೇಕೆಂದು ಒಮ್ಮೆ, ಅರಿಥ್‌ಮೆಟಿಕ್ಸ್ ಕೊಳ್ಳಬೇಕೆಂದು ಒಮ್ಮೆ, ಇಲ್ಮ್–ಉಲ್–ಹಿಸಾಬ್ ಕೊಳ್ಳಬೇಕೆಂದು ಒಮ್ಮೆ ಹಣ ತರಿಸಿಕೊಂಡು ಹರಟೆ ಹೊಡೆಯುತ್ತ, ಮೋಜು ಮಾಡುತ್ತ ವಿಲಾಸಿಗಳಾಗಿ ಕಾಲ ಕಳೆಯುತ್ತಾರೆ! ಆ ಕಾಲದಲ್ಲಿ ಅಲ್ಪ ಪ್ರಮಾಣದಲ್ಲಿದ್ದ ಕರಾಳ ಕಾಯಿಲೆ ಈಗ ಬೃಹದಾಕಾರವಾಗಿ ಬೆಳೆದಿದೆಯಂತೆ. ದೇವರೇ ಕಾಪಾಡಬೇಕು ಈ ದೇಶವನ್ನು! ಜಾನಪದ ಸಾಹಿತ್ಯ ರತ್ನ ಕೆ.ಆರ್. ಲಿಂಗಪ್ಪನವರ ವಿಶ್ಲೇಷಣೆಯಿದು; "ತಾಯಿಯ ಹಾಲನ್ನು ಕುಡಿಸದೆ ಬಾಟ್ಲಿಯ ಹಾಲನ್ನು ಕುಡಿಸಿ ಹಸು ಮಕ್ಕಳನ್ನು ಬೆಳೆಸಿದೆವು; ಅವರು ದೊಡ್ಡವರಾದ ಮೇಲೆ ತಮ್ಮನ್ನು ಬೆಳೆಸಿದ ಬಾಟ್ಲಿಗಳಿಗೆ ದ್ರೋಹ ಬಗೆಯದೆ ಬಾಟ್ಲಿ ಹಿಡಿದುಕೊಂಡೇ ಶಾಲೆ ಕಾಲೇಜುಗಳಿಗೆ ಹೋಗಲು ಪ್ರಾರಂಭಿಸಿದರು! ಅವರ ಕೃತಜ್ಞತಾ ಭಾವನೆ ಬಾಟ್ಲಿಗಳಿಗೆ ಮಾತ್ರ ಸೀಮಿತವಾದುದು!" ಈ ವಿಶ್ಲೇಷಣೆ ವೈಜ್ಞಾನಿಕವೋ ಅಲ್ಲವೋ ನಾನರಿಯೆ; ಆದರೆ ಸಕಾಲಿಕವೆಂದು ಎನ್ನದಿರಲಾರೆ!

## ಉರ್ದುಕವಿ ಹಫೀಜ್

ವಾರ್ಷಿಕ ಪರೀಕ್ಷೆಗೆ ಮೊದಲು ನಡೆದ ಇನ್ನೊಂದು ಮಹತ್ವದ ಘಟನೆಯೆಂದರೆ ಪ್ರಸಿದ್ಧ ಉರ್ದೂ ಕವಿ ಹಫೀಜ್ ಜಾಲಂಧರಿಯವರ ಸ್ವವಿರಚಿತ ಕವಿತೆಗಳ ವಾಚನ. ಬಹಳ ಜನರು ಸೇರಿದ್ದರು ಅದನ್ನು ಆಲಿಸಲು. ಬದನೆಹೊಲದ ಬೆದರಿನಂಥ ತೆಳ್ಳನೆಯ ಬೆಳ್ಳನೆಯ ವ್ಯಕ್ತಿ, ಉದ್ದ ಷೇರವಾನಿ, ಗೋಪುರ ಟೋಪಿಗಳಿಂದ ಬರಿಯ ಎತ್ತರವೇ ಕಾಣುತ್ತಿದ್ದಿತಾಗಲಿ ಅಗಲ ಕಾಣಿಸುತ್ತಲೇ ಇರಲಿಲ್ಲವೆಂದರೂ ಸಲ್ಲುತ್ತದೆ. ಇವರ ಬಗ್ಗೆ ಹಾಸ್ಯಲೇಖಕ ಷೌಕತ್ ಥಾನವಿ ಬರೆದುದು ನೆನಪಾಗುತ್ತದೆ; "ಎಲ್ಲರೂ ಆಂಗ್ಲ ಭೂಮಿಗೆ ಹೋಗಿ ಎಂಥದೋ ಒಂದು ಪದವಿ ತರುತ್ತಾರೆ; ನೀವೇನನ್ನೂ ತರದೆ ಹೋದ ಹಾಗೆಯೇ ಹಿಂದಿರುಗಿರುವಿರಲ್ಲಾ?" ಎಂದು ಕೇಳಿದೆ; ಅದಕ್ಕವರು, 'ಕಾಣುವುದಿಲ್ಲವೆ, ಆಂಗ್ಲ ಭಾರ್ಯೆಯನ್ನು ತಂದಿರುವೆ!' ಎಂದು ಉತ್ತರವಿತ್ತರು. ಕವಿಯೆಂದು ಆ ಬಿಳಿಯಳು ಮೋಸ ಹೋಗಿರಬೇಕು. ನಿಮಗವಳು ಸೋಡಚೀಟಿ ಕೊಡುವ ದಿನ ಬಹಳ ದೂರಿಲ್ಲ–ಎಂದೆ ನಾನು. ನಡೆಯುತ್ತಿದ್ದವರು ಒಮ್ಮೆಗೆ ಸೆಟೆದು ನಿಂತರು. ದಿಟ್ಟಿಸಿ ನೋಡಿದಾಗ ನಗುತ್ತಿರುವರೆಂಬುದು ಗೊತ್ತಾಯಿತು."

ಆದರೆ ಈ ಬರಲು ಬಡಕಲು ಮನುಷ್ಯ ಅಂದು ತರನ್ನುಮ್ (ಸುಸ್ವರ) ದೊಡನೆ ವಾಚಿಸಿದ ಕವಿತೆಗಳ ಪರಿಣಾಮ ರಮಣೀಯತೆ ಅವರ್ಣನೀಯ. ಮಾನವ ಸ್ವರಕ್ಕೂ ಅವನ ಮೈಕಟ್ಟಿಗೂ ಅನುರೂಪತೆ ಇರಲೇಬೇಕೆಂಬ ನಿಸರ್ಗ ನಿಯಮವೇನೂ ಇಲ್ಲವಲ್ಲ. ಭೀಮಕಾಯನಿಗೆ ಕೀರಲು ಸ್ವರ, ಕಡ್ಡಿ ಪಹಿಲ್ವಾನನಿಗೆ ಘೋರ ಸ್ವರವಿರುವುದು ವಿರಳವೇನಲ್ಲ. ಈ ಕವಿಯ ವಿಷಯದಲ್ಲಿ ಹೇಳುವುದಾದರೆ ಅದು ಕೀರಲು ಸ್ವರವೂ ಅಲ್ಲ. ಘೋರ ಸ್ವರವೂ ಅಲ್ಲ–ಕಂಚಿನ ಸ್ವರ. ಕಾಶ್ಮೀರದ ಬಗ್ಗೆ ಅವರು ಬರೆದಿದ್ದ ಕವಿತೆ ತುಂಬ ಚೆನ್ನಾಗಿದ್ದಿತು. ಅವರು ಹಾಡಿದಾಗ ಅದರಿಂದ ಮೋಡಿ ಚಿಮ್ಮಿತು. ಅದನ್ನು ಕೇಳುತ್ತ ಕೇಳುತ್ತ 'ನಾನೂ ಎಂದಾದರೂ ಕಾಶ್ಮೀರ ನೋಡಬಹುದೆ? ನಾನೂ ಕಾಶ್ಮೀರದ ಬಗ್ಗೆ ಕವಿತೆ ಬರೆಯಬಹುದೇ?' ಎಂಬ ಪ್ರಶ್ನೆ ನನ್ನ ಮನದ ವನದಲ್ಲಿ ನರ್ತಿಸತೊಡಗಿತು. ಪ್ರಶ್ನೆಗೆ ಉತ್ತರ 1954ರಲ್ಲಿ ದೊರೆಯಬಹುದೆಂದು ಆಗ ಅದೆಂತು ಊಹಿಸಬಹುದಾಗಿದ್ದಿತು? ಇದೊಂದು ಬಂಜೆ ಬಯಕೆಯಾಗಿ ತೋರಿದ್ದಿತು ನನಗೆ ಆಗ. ಮುಂದೆ ಡಾ. ಎಮ್. ಚನ್ನಾರೆಡ್ಡಿಯವರ ಆಪ್ತ ಕಾರ್ಯದರ್ಶಿಯಾಗಿ ಸಪತ್ನೀಕನಾಗಿ ಕಾಶ್ಮೀರದಲ್ಲಿ ಎರಡು ವಾರ ಕಳೆದಾಗ ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ. ಆ ಸೌಂದರ್ಯಾನುಭವ ಹರಳುಗಟ್ಟಿ 'ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ ಶ್ರೀಗಂಧ ಸ್ನಾನವಾಗಿ' ಎಂಬ ಕವಿತೆಯಾಗಿ ಹೊರಬಿದ್ದಾಗ ವಿದ್ಯಾಗುರುಗಳಾಗಿದ್ದ ಪ್ರೊ. ಡಿ.ಕೆ. ಭೀಮಸೇನರಾಯರೂ, ವಿದ್ವಾನ್ ಮಾನ್ವಿ ನರಸಿಂಗರಾಯರೂ ಹಿರಿ ಹಿರಿ ಹಿಗ್ಗಿದ್ದರು; ಗೆಳೆಯರ ಹೆಮ್ಮೆ ಗರಿಗೆದರಿ ಹಾರಿದ್ದಿತು!

### ಕವಿಗೆ ಕರ್ನಾಟಕದ ಮುದ್ರೆ :

ಸುಮಾರು ಇದೇ ಸಮಯಕ್ಕೆ ನನ್ನದೊಂದು ಕವಿತೆ 'ಜಯಕರ್ನಾಟಕ'ದಲ್ಲಿ ಪ್ರಕಟವಾಯಿತು; ಕಲಬುರಗಿಯ ಕವಿಗೆ ಕರ್ನಾಟಕದ ಮುದ್ರೆ ಬಿದ್ದಿತು. ನನ್ನ ಬಗ್ಗೆ ನನಗೇ ಎಂಥ ಭ್ರಾಂತಿ ಕವಿಯಿತೆಂದರೆ 'ಜಯ ಕರ್ನಾಟಕ'ದ ಆ ಪ್ರತಿಯನ್ನು ಕಂಕುಳದ ಕೂಸನ್ನು ಮಾಡಿಕೊಂಡು ಊರೆಲ್ಲ ಅಲೆದು ಬಂದೆ; ಕನ್ನಡದ ಅಭಿಮಾನಿ ಗಳೆನಿಸಿಕೊಂಡಿದ್ದವರ ಮುಂದೆ ನಿಂತು ಬಂದೆ; ಎಲ್ಲೆಲ್ಲಿಗೆಳೆಯರೆನ್ನುವವರು ಇದ್ದರೋ ಅಲ್ಲಲ್ಲಿ ಹೋಗಿ ಅವರೆದುರು ಸುಳಿದು ಬಂದೆ. ಯಾರೊಬ್ಬರೂ 'ಜಯ ಕರ್ನಾಟಕ'ದಲ್ಲಿ ನಿನ್ನ ಕವಿತೆ ನೋಡಿದೆವು. ಅಭಿನಂದನೆಗಳು ಎಂದು ಹೇಳಲಿಲ್ಲ. ಒಂದು ಕವಿತೆ ಬರೆದುಬಿಟ್ಟರೆ ಕೀರ್ತಿಗೆ ವಿಮೆ ಮಾಡಿಸಿದಂತೆ–ಎಂದು ಭ್ರಮೆಯಲ್ಲಿದ್ದ ನನಗೆ ಭ್ರಮನಿರಸನವಾಯಿತು. ಒಳ್ಳೆಯದೇ ಆಯಿತು. ಆದರೂ ಒಬ್ಬರೂ 'ಸೈ' ಎನ್ನಲಿಲ್ಲವಲ್ಲ–ಎಂಬ ಕೊರಗು ಒಳಗೊಳಗೇ ಉಳಿಯಿತು. ತಂದೆಯವರು ಹೇಳಿದ್ದ



ಕತೆಯೊಂದು ನೆನಪಾಯಿತು. ಒಬ್ಬ ಬಡವಿ ಕಷ್ಟಪಟ್ಟು ತನ್ನ ಕರ್ಮಣಿ ಸರಕ್ಕೆ ಚಿನ್ನದ ದಾರ ಮಾಡಿಸಿಕೊಂಡಿದ್ದಳು. ಕರ್ಮಣಿಗಳ ಮಧ್ಯೆ ಮಧ್ಯೆ ಚಿನ್ನದ ಮಿಂಚು ಮೂಡಿ ಮಾಯವಾಗುತ್ತಿತ್ತು ಅವಳದನ್ನು ಕೊರಳಿಗೆ ಹಾಕಿಕೊಂಡಾಗ. ಎಲ್ಲರೂ ನೋಡಿ 'ಎಂದು ಮಾಡಿಸಿದೆ ಇದನ್ನು? ಎಲ್ಲಿ ಮಾಡಿಸಿದೆ ಇದನ್ನು?' ಎಂದು ಕೇಳಿಯೇ ಕೇಳುವರೆಂದು ಊರೆಲ್ಲ ಅಲೆದು ಬಂದಳು; ಗೆಳತಿಯರ ಮುಂದೆ ಸುಳಿದು ಬಂದಳು. ದುರ್ದೈವದಿಂದ ಅವಳ ಚಿನ್ನದೆಳೆಯ ಕರ್ಮಣಿಸರ ಯಾರ ಕಣ್ಣಿಗೂ ಬೀಳಲಿಲ್ಲ. ಅದನ್ನು ಒಬ್ಬಿಬ್ಬರ ಕಣ್ಣುಗಳಿಗಾದರೂ ಕಾಣಿಸಲೇಬೇಕೆಂದು ಅವಳಿಗೆ ಹಟ ಬಂದಿತು. ಮನೆಯ ಮುಂದಿನ ಚಪ್ಪರಕ್ಕೆ ತಾನೇ ಕೊಳ್ಳಿಕೊಟ್ಟು, "ಅಯ್ಯೋ, ನನ್ನ ಚಪ್ಪರಕ್ಕೆ ಬೆಂಕಿ ಬಿದ್ದಿದೆ; ಯಾರಾದರೂ ಆರಿಸಿರಿ" ಎಂದು ಬೊಬ್ಬೆಯಿಟ್ಟಳು. ಓಣಿಯ ಹೆಂಗೆಳೆಯರೆಲ್ಲ ಓಡಿ ಬಂದರು. ಬೆಂಕಿ ಆರಿಸುವವರು ಕೆಲವರಾದರೆ ಸುಮ್ಮನೇ ಅತ್ತಿಂದ ಇತ್ತ ಓಡಾಡುವವರು ಹಲವರು. ಆ ಓಡಾಡಿದ ಹಲವರಲ್ಲಿ ಒಬ್ಬಳು ಆ ಬಡವಿಯ ಕೊರಳ ಕರ್ಮಣಿಸರ ನೋಡಿ, "ಏನೇ, ಇದಕ್ಕೆ ಚಿನ್ನದ ದಾರ ಎಂದು ಮಾಡಿಸಿದೆ?" ಎಂದು ಕೇಳಿದಳು. ಬಡವಿಗೆ ಕಡು ಸಂತಸವಾಯಿತು. "ಅಯ್ಯ ನನ್ನ ಶಿವನ, ನೀನು ಮೊದಲೇ ಇಷ್ಟ ಕೇಳಿದ್ರೆ ನನ್ನ ಚಪ್ರಾ ಎಲ್ಲಿ ಸುಟ್ಕೋತ್ತಿದ್ದೆ?" ಎಂದು ಉದ್ಗರಿಸಿದಳು! ಪುಣ್ಯಕ್ಕೆ ಸುಟ್ಟುಕೊಳ್ಳುವಂಥ ಚಪ್ಪರ ನನಗಿರಲಿಲ್ಲ ಆಗ. ನಾನಾವ ಚಪ್ಪರಕ್ಕೂ ಬೆಂಕಿಯಿಕ್ಕಲಿಲ್ಲ! ನನ್ನ ಕವಿಯೆಂಬ ಹಮ್ಮು ಮಾತ್ರ ಸರ್‍ರನೆ ಇಳಿದು ತಿರುಗಿ ತಲೆಯೆತ್ತದಂತೆ ಕರಗಿ ಹೋಯಿತು.

### ತಂದೆ ಜೊತೆ

ಪರೀಕ್ಷೆ ಮುಗಿಸಿ ಮಿತ್ರರೊಡನೆ ಉಗಿಬಂಡಿ ಏರಿದೆ. ಯಥಾ ಪ್ರಕಾರ ಹೊಟಗಿಯಲ್ಲಿ ಬಿಸಿ ಬಿಸಿ ಪೂರಿಪಲ್ಯ ತಿಂದು, ಗದಗಿನ ಖಾನಾವಳಿಯಲ್ಲಿ ಒಂದು 'ಮುಂಬೈ ಮಾದರಿ ಊಟ' ಉಂಡು ಊರು ತಲುಪಿದೆ. ತಂದೆಯವರು ಒಂದು ಶ್ರೀಮಂತರ ಊರಿಗೆ ಪುರಾಣ ಪ್ರವಚನಕ್ಕೆಂದು ಹೊರಟು ನಿಂತಿದ್ದರು. ಅವರಿಲ್ಲದ ಊರಿನಲ್ಲಿ ಇರುವುದು ತುಂಬ ಬೇಸಾರ ಬರಿಸುವ ಸಂಗತಿಯಾಗಿ ತೋರಿತು ನನಗೆ. 'ನಾನೂ ನಿನ್ನೊಡನೆ ಬರುವೆನೆಂದು' ತಂದೆಯವರಿಗೆ ಹೇಳಲು ಸಂಕೋಚ–ತಾಯಿಯವರೆಲ್ಲಿ ತಪ್ಪಾಗಿ ತಿಳಿದುಕೊಳ್ಳುವರೋ ಎಂಬ ಅನುಮಾನದಿಂದ. ತಂದೆಯವರನ್ನು ಕೊಲ್ಲಾರಿ ಚಕ್ಕಡಿಯಲ್ಲಿ ಕರೆದೊಯ್ಯಲು ಬಂದಿದ್ದವರು ನನ್ನನ್ನು ನೋಡಿ 'ಇವರೂ ನಮ್ಮೂರಿಗೆ ಬರಲಿ,' ಎಂದು ಆಗ್ರಹಪಡಿಸಿದರು. ತಂದೆಯವರಿಗೂ ಒಳಗೊಳಗೆ ಆನಂದವಾಯಿತೆಂಬುದು ಅವರ ಅರಳಿದ ಮುಖದಿಂದ ತಿಳಿಯುತ್ತಿದ್ದಿತು. 'ಬರಲಿ' ಎಂದರು. ಹೊರಟೆ ನಾನು,

ಆ ಊರಿಗೇ ಶ್ರೀಮಂತರಾಗಿದ್ದವರ ಮನೆಯ ಮಹಡಿಯಲ್ಲಿ ನಮ್ಮ ಬಿಡಾರ, ತಂದೆಯವರೂ, ಮಾವನವರೂ ಮೇಲೆ ಇರುತ್ತಿದ್ದುದು ಕಡಿಮೆ. ಕೆಳಗೆ ಬಂಕದಲ್ಲಿ ಊರಹಿರಿಯರೊಡನೆ ಯಾವುದಾದರೂ ವಿಷಯವೊಂದನ್ನು ಚರ್ಚಿಸುತ್ತಲೇ ಇರುತ್ತಿದ್ದರು. ನಾನು ಆಸನ, ಸೂರ್ಯ ನಮಸ್ಕಾರಗಳನ್ನು ಹಾಕಿ ಏನಾದರೂ ಓದುತ್ತ ಕೂರುತ್ತಿದ್ದೆ. ಸಾಹುಕಾರರಿಗೆ ಇಬ್ಬರು ಹೆಣ್ಣು ಮಕ್ಕಳು. ಇಬ್ಬರೂ ಆಗಲೇ ಪ್ರಬುದ್ಧರಾಗಿದ್ದರೆಂದು ತೋರುತ್ತದೆ. ಅವರು ಮೊದಲು ನಾನು ಆಸನ–ಸೂರ್ಯ ನಮಸ್ಕಾರ ಹಾಕುವುದನ್ನು ನೋಡಲೆಂದು ಮೇಲೆ ಬರತೊಡಗಿದರು. ಎರಡು ಮೂರು ದಿನಗಳ ಕಳೆದ ಮೇಲೆ ತಮಗೂ ಪದ್ಮಾಸನ ಕಲಿಸಬೇಕೆಂದು ಕೇಳಿಕೊಂಡರು. ನನಗದರಲ್ಲಿ ಯಾವ ದೋಷ ದುರುದ್ದೇಶಗಳೂ ತೋರಲಿಲ್ಲ. ನಾನು ಕುಳಿತು ಪದ್ಮಾಸನ ಹಾಕುತ್ತ ಅದರಂತೆ ಅಭ್ಯಾಸ ಮಾಡಲು ಅವರಿಬ್ಬರಿಗೂ ಹೇಳಿಕೊಟ್ಟೆ. ಸ್ವಲ್ಪ ಸಮಯದವರೆಗೆ ಅವರಿಬ್ಬರೂ ಸಾಧನೆ ಮಾಡಿ ಹೊರಟು ಹೋದರು. ನಾನು ಓದುವುದರಲ್ಲಿ ಮಗ್ನನಾದೆ. ತುಸು ಹೊತ್ತಿನ ಮೇಲೆ ಅಕ್ಕ ಬಂದಳು. ಪದ್ಮಾಸನ ಹಾಕುವುದನ್ನು ಇನ್ನೊಮ್ಮೆ ತೋರಿಸಿರಿ ಎಂದಳು, ಕುಳಿತಲ್ಲಿಯೇ ತೋರಿಸಿದೆ. ಅವಳು ತನ್ನ ಬಲಪಾದ ಎಡತೊಡೆಯ ಮೇಲಿರಿಸಿ, ಎಡಪಾದ ಬಲತೊಡೆಯ ಮೇಲಿರಿಸಲಿಕ್ಕಾಗದೆ ನನ್ನ ಸಹಾಯ ಕೋರಿದಳು. ಯಾವ ಕೆಟ್ಟ ವಿಚಾರವೂ ಕಾಣಿಸಲಿಲ್ಲ ಆ ಕೋರಿಕೆಯಲ್ಲಿ. ಆದರೂ ಸೊನ್ನಲಾಪುರದ ಘಟನೆಯನ್ನು ಇನ್ನೂ ಮರೆತಿರದಿದ್ದ ನಾನು ಅಂಜುತ್ತ, ಅಳುಕುತ್ತ ಅವಳ ಎಡಪಾದವನ್ನೆತ್ತಿ ಬಲತೊಡೆಯ ಮೇಲೆ ಇರಿಸಿದೆ. ಅವಳು ಅಪ್ಪಿಬಿಟ್ಟಳು. ಗದಗದ ನಡುಗಿದೆ; ಮೈಯೆಲ್ಲ ಬೆವರಿದೆ. ಹೇಗೋ ಅಪ್ಪುಗೆಯಿಂದ ತಪ್ಪಿಸಿಕೊಂಡು ಕೆಳಗೆ ಓಡಿ ಹೋದೆ. ಅವ್ವನ ನೆನಪಾಗಿದೆಯೆಂದು ತಂದೆಯವರಿಗೆ ಹೇಳಿ ಅಂದೇ ಊರಿಗೆ ಹಿಂದಿರುಗಿದೆ. ತಂದೆಯವರೊಡನೆ ಪುರಾಣ ಪ್ರವಚನಕ್ಕೆ ಹೋದುದು ಅದೇ ಮೊದಲು, ಅದೇ ಕಡೆ!

ಊರಿನ ಹಳೆಯ ಗೆಳೆಯರೆಲ್ಲ ದೂರವಾಗಿ ಬಿಟ್ಟಿದ್ದರು. ಹತ್ತಿರ ಇದ್ದರೂ ದೂರ! ತಂದೆಯವರಿಗೆ ಅತಿಪ್ರಿಯ ಪುಸ್ತಕಗಳಲ್ಲೊಂದಾಗಿದ್ದ 'ಸುಭಾಷಿತ ರತ್ನ ಭಾಂಡಾಗಾರ' ಹೇಳುವಂತೆ, "ದೂರಸ್ಥೋऽಪಿ ಸಮೀಪಸ್ಥೋ ಯೋ ಯಸ್ಯ ಹೃದಿ ವರ್ತತೇ। ಯೋಯಸ್ಯ ಹೃದಯೇ ನಾಸ್ತಿ ಸಮೀಪಸ್ಥೋऽಪಿ ದೂರಗಃ॥ (ಮನಸ್ಸಿನಲ್ಲಿದ್ದವರು ದೂರದಲ್ಲಿದ್ದರೂ ಹತ್ತಿರ, ಮನಸ್ಸಿನಲ್ಲಿಲ್ಲದವರು ಹತ್ತಿರದಲ್ಲಿದ್ದರೂ ದೂರ!). ಗುರುಬಸವ ಮಠದ ಗೆಳೆಯರು, ಕಲಬುರಗಿಯ ಕಳೆಯರು, 'ದೂರ ಸ್ಥೋऽಪಿಸಮೀಪಸ್ಥ'ರಾಗಿ ಬಿಟ್ಟಿದ್ದರು; ದ್ಯಾಂಪುರದ ಬಾಲ್ಯ ಸ್ನೇಹಿತರು ಸಮೀಪಸ್ಥರಿದ್ದೂ ದೂರಸ್ಥರಾಗಿ ಬಿಟ್ಟಿದ್ದರು–'ಸಮಾನಶೀಲ ವ್ಯಸನ'ಗಳ ಕೊಂಡಿ



ಕಳಚಿ! ಕವಿತೆ, ಕಥೆ, ಕಾದಂಬರಿ, ನಾಟಕ, ಪ್ರಬಂಧಾದಿಗಳನ್ನು ಓದುವುದು, ಗೆಳೆಯರಿಗೆ ಭಾವಾತಿ ರೇಕದ ಉದ್ದುದ್ದ ಪದ್ಯಗಂಧಿ ಪತ್ರ ಬರೆಯುವುದು ಇವೇ ನನ್ನ ಪಾಲಿನ ಕಾಲಹರಣ ಸಾಧನಗಳಾಗಿ ಬಿಟ್ಟಿದ್ದುವು. ತಮ್ಮ ಅನ್ನದಾನಿ ಅದೇ ಶಾಲೆಯ ಶಿಸ್ತನ್ನು ಮೈಗೂಡಿಸಿಕೊಳ್ಳತೊಡಗಿದ್ದ. ತಂಗಿ ವೀರಾಂಬೆಯ ವಾತ್ಸಲ್ಯರಸವೊಂದೇ ನಿತ್ಯದ ರುಕ್ಷತೆಯನ್ನು ಆರ್ದ್ರಗೊಳಿಸಿಕೊಳ್ಳಲು ಆಧಾರವಾಗಿದ್ದಿತು ಆಗ. ಮನೆಯಲ್ಲಿಯೇ ಕಲಿಯುತ್ತಿದ್ದ ಆಕೆಗೆ ಉಪಾಧ್ಯಾಯ–ಅಣ್ಣನಾದೆ. ತೋಪು, ತೋಟಗಳಿಗೆ ಹೋಗಿ ಬರುವುದೊಂದು ಬತ್ತದ ಹಿಗ್ಗಿನ ಬುಗ್ಗಿಯಾಗಿಯೇ ಉಳಿದಿದ್ದಿತು.

ಈ ರಜೆಯಲ್ಲಿ ನಡೆದ ಒಂದು ಘಟನೆ ಅವಿಸ್ಮರಣೀಯ. ರಾಜೂರಿನ ವಜೀರ ಗೌಡರು ಮಹಮ್ಮದೀಯರಾದರೂ ವೀರಶೈವರೊಡನೆ ನಿಕಟ ಸಂಪರ್ಕವುಳ್ಳವರಾಗಿದ್ದರು. ಅವರ ಹೆಂಡತಿ ವೀರಶೈವ ಕುಟುಂಬದಲ್ಲಿ ಹುಟ್ಟಿದಾಕೆ. ಹೀಗಾಗಿ ವೀರಶೈವ ಸ್ವಾಮಿಗಳನ್ನು, ವಿಶೇಷವಾಗಿ ಅಂದಿನ ವೈರಾಗ್ಯ ವೀರರೆನಿಸಿದ್ದ ಹಾಲಕೆರೆಯ ಅನ್ನದಾನ ಸ್ವಾಮಿಗಳವರನ್ನು ರಾಜೂರಿಗೆ ಅಮಂತ್ರಿಸಿ ಆರಾಧನೆಗಳನ್ನು ಮಾಡಿಸುತ್ತಿದ್ದರು ಆಗಾಗ. ನನ್ನ ರಜೆ ಮುಗಿವ ಮೊದಲೇ ರಾಜೂರಿನಲ್ಲಿ ಪೂಜ್ಯ ಅನ್ನದಾನ ಸ್ವಾಮಿಗಳವರ ಆರಾಧನೆಯನ್ನು ಇರಿಸಿಕೊಂಡರವರು. ಸಹಜವಾಗಿಯೇ ತಂದೆಯುವರೂ ಆಮಂತ್ರಿತರಾಗಿದ್ದರು ಆ ಆರಾಧನೆಗೆ. ಶ್ರೀಗಳವರ ದರ್ಶನಾಶೀರ್ವಾದ ದೊರೆಯಲೆಂದು ನನ್ನನ್ನೂ ಜೊತೆಗೆ ಕರೆದೊಯ್ದರು. ರಾತ್ರಿ ಪೂಜಾ ನಂತರ ಪ್ರಸಾದ ಸೇವನೆ ಮುಗಿವ ಹೊತ್ತಿಗೆ ರಾತ್ರಿ ಹತ್ತು ಘಂಟೆಯಾಗಿ ಬಿಟ್ಟಿದ್ದಿತು. ತಂದೆಯುವರು ಅಂದು ರಾತ್ರಿ ಅಲ್ಲಿಯೇ ಇರಬೇಕೆಂದು ಅಪ್ಪಣೆಕೊಡಿಸಿದರು ಶ್ರೀಗಳವರು. ನಾನೊಬ್ಬನೇ ಹಿಂದಿರುಗಿ ಹೊರಟೆ–ತಂದೆಯವರು ತಡೆದರೂ ಲೆಕ್ಕಿಸದೆ. ಅಂದು ಅಮಾವಾಸ್ಯೆ. ಕಾಳ ಕರಾಳ ರಾತ್ರಿ. ಮಧ್ಯದಲ್ಲಿ ದಾರಿ ತಪ್ಪಿಸಿಕೊಂಡೆ. ಕತ್ತಲೆಯಲ್ಲಿ ತಡವರಿಸುತ್ತ, ಎಡವುತ್ತ, ತಡುವುತ್ತ ನಡೆದೇ ನಡೆದೆ. ದ್ಯಾಂಪುರದ ಸುಳಿವೇ ಸಿಕ್ಕಲಿಲ್ಲ. ದೂರದಿಂದ ಕಾಣುವ ಅದರ ಬಣವೆಗಳು, ಕೋಟೆಯ ಹುಡೆಗಳು ಗೋಚರಿಸಲೇ ಇಲ್ಲ. ನಡು ನಡುವೆ ನಿಂತು ನಿಂತು ಕತ್ತಲೆಯ ಬಸಿರನ್ನು ಭೇದಿಸುವಂತೆ ಸುತ್ತಲೂ ದಿಟ್ಟಿ ಓಡಿಸಿ ಮತ್ತೆ ಮುಂದೆ ಸಾಗುತ್ತಿದ್ದೆ. ದ್ಯಾಂಪುರ ಬರಲಿಲ್ಲ, ಬರಲಿಲ್ಲ...ಬರಲಿಲ್ಲ! ಹೋಗ ಹೋಗುತ್ತಿದ್ದಂತೆ ತಂದೆಯವರು ಕೂಗಿದಂತೆನಿಸಿತು. "ಸಿದ್ದಪ್ಪಾ, ನಿಲ್ಲು ಸಿದ್ದಪ್ಪಾ ನಿಲ್ಲು!" ಹಿಂದಿರುಗಿ ನೋಡಿದೆ ತಂದೆಯವರಿರಲಿಲ್ಲ. ಮುಂದೆ ನೋಡಿದೆ, ಗರಗಸವಳ್ಳಿಗಳ ಗುಂಪು! ಇನ್ನು ಎರಡೇ ಅಡಿ ಇಟ್ಟಿದ್ದರೆ ಅದರಲ್ಲಿ ಬಿದ್ದು ಏನಾಗುತ್ತಿದ್ದೆನೋ ನಾನು! ತಂದೆಯವರಿಗಿದು ಹೇಗೆ ತಿಳಿದಿರಬೇಕು? ಹೇಗೆ ಅವರ ಕರುಳು ಅಲ್ಲಿಂದಲೇ ಕೂಗಿ ಇಷ್ಟು ದೂರದಲ್ಲಿ ನನ್ನ ಕಿವಿಗಳಿಗೆ ಕೇಳಿಸುವಂತೆ ಮಾಡಿರಬೇಕು!

"ಕಣ್ಣರಿಯದಿದ್ದರೂ ಕರುಳರಿಯದೆ?" ಅರಿಯುವುದು ನಿಜ. ಆದರೆ ದೂರವನ್ನೂ ಮೆಟ್ಟಿ ಕರೆಯುವುದೆ? ಕರೆದು ಮುಂದಾಗಲಿದ್ದ ಅನಾಹುತವನ್ನು ತಡೆಯುವುದೆ? ನನ್ನ ಮಟ್ಟಿಗೆ ತಂದೆಯವರ ಕರುಳು ಕರೆದಿದೆ. ದೂರದಲ್ಲಿದ್ದ ನನಗೆ ಕೇಳಿಸುವಂತೆ ಕರೆದಿದೆ, ವಿಪತ್ತಿನಿಂದ ಪೊರೆದಿದೆ. ಇದೊಂದು ಆಕಸ್ಮಿಕ ಘಟನೆಯೆನ್ನುವವರು ಅಂದುಕೊಳ್ಳಲಿ; ಆದರೆ ನನ್ನ ತಂದೆಯರ ಅಮಿತ ಅಮಲ ವಾತ್ಸಲ್ಯವನ್ನು ಬಲ್ಲ ನಾನು ಇದು ಅವರ ವಾತ್ಸಲ್ಯದ ವಿಜಯವೆಂದೇ ನಂಬಿದ್ದೇನೆ.

**ಮತ್ತೆ ಕಲಬುರಗಿಗೆ :**

ಮತ್ತೆ ಕಲಬುರಗಿ ಮುಟ್ಟಿದಾಗಿ ಸಂತಸದ ಸುದ್ದಿಗಳ ಸುರಿ ಮಳೆಯೇ ಸುರಿಯಿತು. ನನಗೆ ಪ್ರಥಮ ಸ್ಥಾನ ಸಿಕ್ಕುವುದರ ಜೊತೆಗೆ ನನ್ನ ಜೊತೆಗಾರರೆಲ್ಲ ಪಾಸಾಗಿದ್ದರು. ಕೆ. ಬಸವಣ್ಣನವರು ವಿಜ್ಞಾನ ಹಾಗೂ ಗಣಿತಗಳಲ್ಲಿ, ವಿಶ್ವವಿದ್ಯಾಲಯಕ್ಕೇ ಮೊದಲಿಗರಾಗಿ ಮ್ಯಾಟ್ರಿಕ್ಯೂಲೇಶನ್ ಪರೀಕ್ಷೆ ಪಾಸಾಗಿದ್ದರು. ಅದುವರೆಗೆ ಆ ಗೌರವನ್ನು ಕಲಬುರಗಿ ಕಾಲೇಜಿನ ಯಾವ ವಿದ್ಯಾರ್ಥಿಯೂ ಪಡೆದಿರಲಿಲ್ಲ. ಪ್ರಿನ್ಸಿಪಾಲರಿಗೆ ಮುಗಿಲು ಮೂರೇ ಬೆರಳು ಉಳಿದಿದ್ದಿತು. ಕೆ. ಬಸವಣ್ಣನವರ ಹೆಸರೇ ಎಲ್ಲರ ಬಾಯಲ್ಲೂ. ನಾವೂ ಮನ್ಸಬ್‌ದಾರರ ಮನೆಯ ಹತ್ತಿರವಿದ್ದ ಸರಕಾರೀ ಹಾಸ್ಟೆಲಿಗೆ ಹೋಗಿ ಅವರನ್ನು ಅಭಿನಂದಿಸಿ ಬಂದೆವು. ಅವರೂ ಆತ್ಮಿಯತೆಯೊಡನೆ ನಮ್ಮನ್ನು ಸ್ವಾಗತಿಸಿದರು. ಅವರ ತಂದೆಯವರಾದ ಪಂಡಿತ ಪ್ರಭುರಾಯರು ಆ ಕಾಲದ ಪ್ರಸಿದ್ಧ ಉರ್ದು, ಅರಬ್ಬಿ, ಫಾರಸೀ ಪಂಡಿತರು. ಅವರನ್ನೂ ಕಾಣುವ ಸುಯೋಗ ದೊರೆಯಿತು. ಅವರಿಬ್ಬರೇ ಮಕ್ಕಳು–ಬಸವಣ್ಣ ಮತ್ತು ಮುದ್ದಣ್ಣ. ಇವರಿಬ್ಬರ ಸ್ನೇಹವೂ ಅಂದು ಅಂಕುರಿಸಿದುದು ಮುಂದೆ ಮಾಮರವಾಗಿ ಬೆಳೆಯಿತು. ಇವರ ತಾಯಿ ಸೂಗಮ್ಮನವರು ಪರಮ ಸಾಧ್ವಿ. ನನಗೂ 'ಮಗಾ' ಎಂದೇ ಸಂಬೋಧಿಸಿದರು; ಇಂದಿಗೂ ಮಗನಂತೆಯೇ ಮಮತೆ ತೋರುತ್ತಿದ್ದಾರೆ.

ಹಕ್ಕಾನಿ ಸಾಹೇಬರ ಮನಸ್ಸಿನಲ್ಲಿ ಅದುವರೆಗೆ ಆಂಗ್ಲ ಭಾಷೆಯಲ್ಲಿ ತಮ್ಮ ಕಾಲೇಜಿನ ಯಾವ ವಿದ್ಯಾರ್ಥಿಯೂ ಸಂಸ್ಥಾನದಲ್ಲಿಯೇ ಪ್ರಥಮ ಸ್ಥಾನವನ್ನು ಪಡೆಯಲಿಲ್ಲವೆಂಬ ಕೊರಗು ಕೊರೆಯುತ್ತಿದ್ದಿತಂತೆ. ನನ್ನನ್ನು ವರ್ಷಾದಿಯಿಂದಲೇ ಸಿದ್ಧಗೊಳಿಸಿದರೆ ನನ್ನಿಂದ ಆ ಕೊರತೆ ತುಂಬಹುದೆಂಬ ನಂಬಿಕೆ ಅವರಿಗೆ ಬಂದಿರಬೇಕು. ಕೂಡಲೇ ನನ್ನನ್ನು ಕರೆಸಿದರು. 'ನೀನಿರುವುದೆಲ್ಲಿ?' ಎಂದು ಕೇಳಿದರು. 'ಮಠದಲ್ಲಿ' ಎಂದು ಉತ್ತರಿಸಿದೆ. 'ಬೇಡ, ನಿನ್ನನ್ನು ಸರಕಾರೀ ಹಾಸ್ಟೆಲಿಗೆ ಸೇರಿಸಿಕೊಳ್ಳುತ್ತೇನೆ. ನೀನು ಒಂದು ಪೈಸೆ ಸಹ ಕೊಡಬೇಕಿಲ್ಲ. ನಿನ್ನ ಇಂಗ್ಲೀಷ್



ಉಪಾಧ್ಯಾಯರಾದ ಅಜೀಜ್‌ಖಾನ್ ಸಾಹೇಬರು ನಿನಗೆ ನಿತ್ಯವೂ ತಮ್ಮ ಮನೆಯಲ್ಲಿ ಇನ್ನಷ್ಟು ಇಂಗ್ಲೀಷ್ ಕಲಿಸಿ ಕೊಡುವರು. ನೀನು ಮಾತ್ರ ಈ ಸಲದ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯಕ್ಕೇ ಇಂಗ್ಲೀಷ್ ಭಾಷೆಯಲ್ಲಿ ಪ್ರಥಮನಾಗಿ ಪಾಸಾಗಬೇಕು' ಎಂದು ಒಂದೇ ಉಸಿರಿನಲ್ಲಿ ಹೇಳಿದರು. ನಾನು ನನ್ನ ಕಿವಿಗಳನ್ನೇ ನಂಬದಾದೆ. ಏನುತ್ತರ ಕೊಡಬೇಕೆಂಬುದೂ ಬೇಗ ಹೊಳೆಯಲಿಲ್ಲ. ಅಷ್ಟು ಮಂಕಾಗಿದ್ದೆ, ಅತ್ಯಂತ ಪ್ರಯಾಸದಿಂದ, 'ತಮ್ಮ ಈ ಉಪಕಾರವನ್ನು ನಾನೆಂದೂ ಮರೆಯಲಾರೆ; ತಮ್ಮಿಷ್ಟವನ್ನು ಪೂರ್ಣಗೊಳಿಸಲು ಶಕ್ತಿಮೀರಿ ಪ್ರಯತ್ನಿಸುವೆ' ಎಂದು ಹೇಳಿ ಅವರ ಉದರದಲ್ಲಿ ಮಸ್ತಕವನ್ನಿರಿಸಿದೆ. 'ಪೇಟ ಮೇ ಮೂಂಡಿ' ಉಪಕಾರ ಸ್ಮರಣೆಯ ಶ್ರೇಷ್ಠ ವಿಧಾನವಾಗಿದ್ದಿತಾಗ. ಅವರು ನನ್ನ ತಲೆಯ ಮೇಲೆ ಕೈಯಿರಿಸಿ, 'ಇಂದಿನಿಂದ ನೀನೂ ನನ್ನ ಮಗ!' ಎಂದರು. ಕೃತಜ್ಞತೆ ಕಂಬನಿಯ ಕೋಡಿಯಾಗಿ ಹರಿದಿತ್ತು ನನ್ನ ಕಣ್ಣುಗಳಿಂದ! ಎಂಥ ಕಾಲವದು! ಹಿಂದೂ ಮುಸ್ಲಿಂ ಎಂಬ ಭೇದ ಭಾವವಿಲ್ಲದಿದ್ದ ಕಾಲ. ಎಂಥ ಪ್ರಿನ್ಸಿಪಾಲರವರು! ನನ್ನಂಥ ದಿಕ್ಕಿಲ್ಲದವನನ್ನೂ ಮಗನೆಂದು ಒಪ್ಪಿಕೊಂಡ ಪ್ರಿನ್ಸಿಪಾಲರು. ಇಂಥ ಕಾಲದಲ್ಲಿ, ಇಂಥ ಪ್ರಿನ್ಸಿಪಾಲರ ಪೋಷಣೆಯಲ್ಲಿ ವಿದ್ಯಾರ್ಥಿಯಾಗಿದ್ದುದು ನನ್ನ ಸುದೈವವೆಂದೇ ಹೇಳಬೇಕು.

ಸರಕಾರೀ ಹಾಸ್ಟೆಲಿಗೆ ಹೋಗುವ ಉಬ್ಬು ಗುರುಬಸವ ಮಠದ ಗೆಳೆಯರನ್ನು ಬಿಟ್ಟು ಹೊರಡುವಾಗ ಕಸಿವಿಸಿಯಾಗಿ ಮುಟಿದಿದ್ದಿತು. ಅವರಿಗೂ ತಮ್ಮವನೊಬ್ಬನು ಅಲ್ಲಿಗೆ ಹೋಗುತ್ತಿರುವನೆಂಬ ಹೆಮ್ಮೆ. ಹಿಗ್ಗು ಇದ್ದರೂ ನನ್ನನ್ನು ಕಳಿಸುವಾಗ ದುಸ್ಸಹ ವ್ಯಥೆಯುಂಟಾಗಿದ್ದಿತು. ಅದೇ ಪಟ್ಟಣದಲ್ಲಿ ಒಂದು ಓಣಿಯಿಂದ ಇನ್ನೊಂದು ಓಣಿಗೆ ಹೊರಟಿದ್ದೆನಾದರೂ ದೂರದ ಊರಿಗೆ ಹೋಗುತ್ತಿರುವೆನೇನೋ ಎಂಬಂತೆ ಕಂಬನಿ ಮಿಡಿದು ಕಳಿಸಿಕೊಟ್ಟರವರು. ಸರಕಾರೀ ಹಾಸ್ಟೇಲಿನಲ್ಲಿ ಎರಡು ಭಾಗಗಳು: ಒಂದು ಬ್ರಾಹ್ಮಣರದು, ಇನ್ನೊಂದು ಲಿಂಗಾಯತರದು. ಎರಡೂ ಒಂದೇ ಕಡೆಗೆ. ಆದರೆ ಅಡುಗೆ ಮನೆ ಬೇರೆ ಬೇರೆ, ಬ್ರಾಹ್ಮಣ ವಿಭಾಗದಲ್ಲಿ ಬ್ರಾಹ್ಮಣರು ಮಾತ್ರ ಸೇರಬಹುದಿತ್ತು; ಲಿಂಗಾಯತ ವಿಭಾಗದಲ್ಲಿ ಲಿಂಗಾಯತರಲ್ಲದೆ ಬೇರೆ ಜಾತಿಯದರೂ ಸೇರಬಹುದಿತ್ತು. ನಾನು ಲಿಂಗಾಯತ ವಿಭಾಗಕ್ಕೆ ಸೇರಿದೆ. ಅಲ್ಲಿ ಎಲ್ಲರೂ ನನ್ನನು ತೆರೆದ ತೋಳುಗಳೊಡನೆ ಸ್ವಾಗತಿಸಿದರು. ಲಿಂಗಾಯತರಲ್ಲದ ಎಸ್. ಚೆನ್ನಾರೆಡ್ಡಿ, ಆಶಾರೆಡ್ಡಿ ಮೊದಲಾದವರೂ ಅತ್ಯಂತ ಆತ್ಮೀಯತೆಯೊಡನೆ ಬರಮಾಡಿಕೊಂಡರು. ಎಸ್. ಚೆನ್ನಾರೆಡ್ಡಿಯವರಂತೂ ಆಗ ಅಷ್ಟೇ ಅಲ್ಲ, ಇಂದಿಗೂ ನನ್ನ ಪ್ರಿಯಮಿತ್ರರು. ಎರಡೂ ವಿಭಾಗಗಳಲ್ಲಿ ಎದ್ದು ಕಾಣುವ ವ್ಯಕ್ತಿಯಾಗಿದ್ದರು ಬೆಂಬಳಿಗಿ ಬಸವರಾಜಪ್ಪನವರು. ವ್ಯಾಸಂಗ ರಂಗಕ್ಕಿಂತ ಕ್ರೀಡಾ ರಂಗದಲ್ಲಿ, ಬಹುಮಾನ

ಗಿಟ್ಟಿಸುವುದಕ್ಕಿಂತ ಗುಂಪು ಕಟ್ಟುವುದರಲ್ಲಿ ಬಲಾಢ್ಯರೆನಿಸಿದ್ದ ಅವರು ಪ್ರಿನ್ಸಿಪಾಲರಿಗೂ, ಅಧ್ಯಾಪಕರಿಗೂ ವಿದ್ಯಾರ್ಥಿಗಳಿಗೂ ಬಹಳ ಬೇಕಾದವರೆನಿಸಿದ್ದರು. ಕೆ. ಬಸವಣ್ಣನವರು ಎಲ್ಲರ ಕಣ್ಮಣಿಗಳಾಗಿದ್ದರು. ಶಾಂತಗಿರಿ ಇಟಗಿಯ ದೇಸಾಯಿ ಬಂಧುಗಳೂ, ಮಲ್ಲಪ್ಪನವರೂ, ರಾಯ್ಚೂರು ಕಡೆಯ ರಾಮೇಶ್ವರ ಸ್ವಾಮಿಗಳೂ ಹಾಸ್ಟೆಲ್ ಜೀವನದ ವೈವಿಧ್ಯ ಹೆಚ್ಚಿಸಿದ್ದರು. ಆಗ ನನ್ನೊಡನಿದ್ದ ಎಲ್ಲರ ಹೆಸರುಗಳನ್ನೂ ಇಲ್ಲಿ ಸೇರಿಸುವುದು ಸಾಧುವಲ್ಲ. ಬ್ರಾಹ್ಮಣ ವಿಭಾಗದ ವಿನಾಯಕ ರಾವ್ ಹಾಗೂ ಹನುಮಂತ ರಾವ್ ಕುಲಕರ್ಣಿ ಇವರು ನನ್ನ ಅಂತರಂಗದ ಗೆಳೆಯರ ಬಳಗಕ್ಕೆ ಸೇರಿದರು. ಇರುವ ಕೋಣೆಗಳ ವರ್ಗೀಕರಣವೇನೂ ಆಗಿರಲಿಲ್ಲ. ಯಾರು ಯಾವ ಕೋಣೆಯಲ್ಲಿ ಬೇಕಾದರೂ ಇರಬಹುದಾಗಿದ್ದಿತು.

ಹಾಸ್ಟೆಲಿನ ಕಟ್ಟಡದ ಬಾಡಿಗೆ, ನೀರು ಬೆಳಕುಗಳ ಬಿಲ್ಲು, ಅಡಿಗೆಯವರ, ನೌಕರ ಚಾಕರರ ವೆಚ್ಚವನ್ನು ಸರಕಾರ ಕೊಡುತ್ತಿತ್ತು. ಊಟದ ವೆಚ್ಚವನ್ನು ಮಾತ್ರ ಹಾಸ್ಟೆಲ್ ವಾಸಿಗಳು ಕೊಡಬೇಕಿತ್ತು. ತಿಂಗಳಿಗೊಬ್ಬರಂತೆ ಆಹಾರಾಧಿಕಾರಿಯ ಆಯ್ಕೆಯಾಗುತ್ತಿತ್ತು. ಆ ತಿಂಗಳು ಅವರೇ ಆಹಾರ ಧಾನ್ಯ ಇತ್ಯಾದಿಗಳನ್ನು ತರಿಸಿ, ಲೆಕ್ಕವಿಟ್ಟು, ಮಾಸಾಂತ್ಯದಲ್ಲಿ ಒಟ್ಟು ವೆಚ್ಚವನ್ನು ಹಾಸ್ಟೆಲ್ ವಾಸಿಗಳಲ್ಲಿ ಸರಿಯಾಗಿ ಹಂಚುತ್ತಿದ್ದರು. ಊಟದ ವೈಭವವೇ ವೈಭವ. ಯಾರು ಏನು ಬೇಡಿದರೂ ಅದು ಮರುದಿನವೇ ಸಿದ್ಧವಾಗುತ್ತಿತ್ತು. ನಮ್ಮ ಮಿತ್ರರು ಬಸಿರ ಹೆಂಗಸನ್ನೂ ಮೀರಿಸಿದ್ದರು ಬಯಕೆಗಳಲ್ಲಿ! ತರ ತರದ ತರಕಾರಿ, ಚಪಾತಿ, ಜೋಳದ ರೊಟ್ಟಿ, ಸಜ್ಜೆಯ ರೊಟ್ಟಿ, ಪೂರಿ, ಕೀರು, ಬಾಸುಂದಿ, ಬೋಂಡಾ–ತರ ತರದ ಭಕ್ಷ್ಯಗಳು. ಶುಕ್ರವಾರಕ್ಕೊಮ್ಮೆ ಸಾರ್ವಜನಿಕ ರಜೆ, ಅಂದು ಮೇಜುವಾನಿಯಾಗಲೇಬೇಕು. ಭೋಜನಪ್ರಿಯರು ಸಾಮು ಹೊಡೆದು ಹೊಡೆದು ಮೃಷ್ಟಾನ್ನಗಳನ್ನು ಭಕ್ಷಿಸುತ್ತಿದ್ದರು ಆ ದಿನ. ಕೀರು ಬಾಸುಂದಿಗಳ ಸಿಹಿ ಸಾಲದೆ ಮತ್ತೆ ಸಕ್ಕರೆ ಹಾಕಿಸಿಕೊಳ್ಳುತ್ತಿದ್ದರು ಒಬ್ಬಿಬ್ಬರು. "ಮೊದಲೇ ಸಕ್ಕರೆ ಸಪ್ಪಗೆ, ಅದರಲ್ಲಿ ಹಾಲು ಕೂಡಿಸಿದ ಮೇಲೆ ಇನ್ನೂ ಸಪ್ಪಗೆ" ಎಂಬುದು ಈ ಮಹನೀಯರ ವಾದವಾಗಿದ್ದಿತು. ಇನ್ನ ಕೆಲವರು ತರಕಾರಿಗಳಿಗೆ ಹಾಕಿದ ಖಾರ, ಅಲ್ಲಿಯ ಕೆಂಪು ಚಟ್ನಿಯ ಖಾರ ಸಾಲದೇ ತುತ್ತಿಗೊಂದು ಹಸಿ ಮೆಣಸಿನ ಕಾಯಿಯನ್ನು ಕಡಿದುಕೊಳ್ಳುತ್ತಿದ್ದರು. "ಮೊದಲೇ ಮೆಣಸಿನ ಕಾಯಿ ಸಪ್ಪಗೆ, ಅದರಲ್ಲಿ ತರಕಾರಿಗಳನ್ನು ಸೇರಿಸಿ ಬಿಟ್ಟರೆ?" ಎಂಬುದು ಈ ಮಹಾನುಭಾವರವಾದವಾಗಿದ್ದಿತು. 'ಕತಲೆ ಆಮ್' ತುಪ್ಪ ಎಂಬ ಶಬ್ದದ ಬಳಕೆ ಬಹಳ. ತುಪ್ಪದ ಗಿಂಡಿಯನ್ನೇ ಬಾಗಿಸಿ ಬಿಡುವ ಈ ಪದ್ಧತಿಗೆ ಕರ್ಬಲಾದಲ್ಲಿ ಜರುಗಿ, ಮೋಹರಮ್ಮಿನಲ್ಲಿ ನೆನೆವ ಕತಲೆ ಆಮ್ (ಸರ್ವ ಸಂಹಾರ) ಎಂಬ



ಹೆಸರಿಟ್ಟಿದ್ದರು ಅಲ್ಲಿಯ ರಸಿಕ ಶಿಖಾಮಣಿಗಳು. ಎಷ್ಟು ಧಾರಾಳವಾಗಿ ವೆಚ್ಚ ಮಾಡಿದರೂ, ಎಷ್ಟು ದುಂದುಗಾರಿಕೆ ತೋರಿದರೂ ಒಬ್ಬರ ತಿಂಗಳ ವೆಚ್ಚ ಐದು, ಐದೂಕಾಲು ರೂಪಾಯಿಗಳಿಗೆ ಮೀರುತ್ತಿರಲಿಲ್ಲ. ಇಂದು ಅದಕ್ಕೇ ಇನ್ನೂರು ರೂಪಾಯಿ ವೆಚ್ಚ ಬರಬಹುದೇನೋ!

ಹಕ್ಕಾನಿ ಸಾಹೇಬರಂತೆ ಅಜೀಜಖಾನ ಸಾಹೇಬರೂ ಅವಿಸ್ಮರಣೀಯರು ನನ್ನ ಜೀವನದಲ್ಲಿ. ನಿತ್ಯ ಬೆಳಗಿನ ಎಂಟೂವರೆ ಘಂಟೆಗೆ ಅವರ ಮನೆಗೆ ಹೋಗುತ್ತಿದ್ದೆ. ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಪಾಠ ಹೇಳುತ್ತಿದ್ದರವರು. ತರಗತಿಯಲ್ಲಿ ಬಹಳ ಬಿಗುಮಾನ ಅವರದು. ಅದೇ ಮನೆಯಲ್ಲಿ ವಾತ್ಸಲ್ಯದ ಮೂರ್ತಿ, ಬಹಳ ಸರಳ ಜೀವನ ಅವರದು. ಬಟ್ಟೆ ಬರೆಗಳು ತೀರ ಸಾದಾ. ಅವರ ಒಂದೇ ಒಂದು ವಿಲಾಸ ಸಾಮಗ್ರಿಯೆಂದರೆ ತಾಂಬೂಲ. ದಿನಕ್ಕೆಷ್ಟು ಬೀಡಾಗಳು ಬೇಕಾಗುತ್ತಿದ್ದುವೋ ಅವರಿಗೇ ಗೊತ್ತು. ಷೇರವಾನಿಯ ಬೊಕ್ಕಣದಲ್ಲಿ ಬೀಡಾದ ಡಬ್ಬಿ ಇರಲೇಬೇಕು. ಅವರಿಗಿದ್ದ ಇಂಗ್ಲೀಷ್ ಭಾಷೆಯ ಮೇಲಿನ ಪ್ರಭುತ್ವ ವಿಸ್ಮಯಕರವಾದುದು. ಕಲಿಸುವ ಕ್ರಮವೂ ನಾವೀನ್ಯಪೂರ್ಣ. ಅವರ ಮನೆ ಹೋಗುವುದೆಂದರೆ ಹಬ್ಬವೆನಿಸುತ್ತಿತ್ತು ನನಗೆ. ಉಚಿತ ವಿಶೇಷ ಪಾಠದೊಡನೆ ಅವರೊಡನೆ ಚಹಾಪಾನದ ಸೌಭಾಗ್ಯವೂ ಸಿಕ್ಕುತ್ತಿತ್ತು ನನಗೆ. ಎಷ್ಟು ಜನ ಸಿಕ್ಕಾರು ಇಂಥ ಆದರ್ಶ ಅಧ್ಯಾಪಕರು?

ಕೆ. ಬಸವಣ್ಣನವರಿರುತ್ತಿದ್ದ ಮನ್ಸಬ್‌ದಾರ್ ಓಣಿಯಲ್ಲಿ ಒಂದು ರಂಗೀತ ಪ್ರಯೋಗವಿದ್ದಿತು. ನಾವೆಲ್ಲರು ನೋಡಲು ಹೋದೆವು. ಬಯಲಾಟದ ಚೌಕಟ್ಟು; ನಾಟಕದ ಅನುಚರಣೆಯ ನಾಟಕ ಅದರಲ್ಲಿ. ನೋಡಲು ತಮಾಷೆಯಾಗಿಯೇ ಇದ್ದಿತು. ಅದನ್ನು ಮರೆಯದಂತೆ ಮಾಡಿದವನು ಕೃಷ್ಣನ ಪಾತ್ರ ವಹಿಸಿದ್ದ 'ನಟವರ' ಅಟ್ಟದ ಮೇಲೆ ಅಟ್ಟಹಾಸದೊಡನೆ ಬಂದ. ಮುಖಕ್ಕೆ ನೀಲಿ ಬಣ್ಣ, ಮೈತುಂಬ ಕೈತುಂಬ ನೀಲಿ ಬನೀನು, ತಲೆಯಲ್ಲಿ ನವಿಲುಗರಿಯ ಕಿರೀಟ, ತೋಳುಗಳಲ್ಲಿ ಹೊಳೆ ಹೊಳೆವ ಭುಜಬಂಧಗಳು, ಕಟಿಯಿಂದ ಕೆಳಗೆ ಜರತಾರಿ ಅಂಚಿನ ನೀಲಿ ಪೀತಾಂಬರ, ಕೃಷ್ಣನಂತೆ ಕಾಣಲು ಏನೇನೋ ಬೇಕೋ ಅದೆಲ್ಲ ಇದ್ದಿತು ಇನ್ನೂ ತರುಣ. ಕೃಷ್ಣನ ಪಾತ್ರ ಚೆನ್ನಾಗಿ ಒಪ್ಪಿದ್ದಿತು ಅವನಿಗೆ. ನಾವೆಲ್ಲ ಆಸನದ ತುದಿಗೆ ಸರಿದು ಕುತೂಹಲದಿಂದ ಅವನ ಮಾತುಗಳಿಗಾಗಿ ಕಾದೆವು. ಆದರೆ ಆ ಭೂಪ ಮಾತು ಪ್ರಾರಂಭಿಸುವ ಬದಲು ಕುಳಿತವರ ಮೇಲೆ ಕಣ್ಣಾಡಿಸ ತೊಡಗಿದ–ಅದೂ ಹೆಂಗಳೆಯರ ಮೇಲೆ. ಕುಳಿತವರಲ್ಲಿ ಕೆಲವರ ಕಣ್ಣು ಕೆಂಪಾಗುವುದರಲ್ಲಿದ್ದುವು–ಇವನೆಂಥ ಘಟಿಂಗನೆಂದು. ಅಷ್ಟರಲ್ಲಿ ಅಟ್ಟದಿಂದಿಳಿದ ಕೃಷ್ಣ. ಎಲ್ಲರೂ ಕಕ್ಕಾವಿಕ್ಕಿ. ಕೆಳಗಿಳಿದವನೇ ಮನೆಯತ್ತ ಓಡಿದ. ಮನೆಯಲ್ಲಿದ್ದ ಹೆಂಡತಿಯನ್ನು ದರದರ

ಎಳೆದು ತಂದ. "ಇಷ್ಟೆಲ್ಲ ಯಾರ ಸಲುವಾಗಿ ಸಿಂಗಾರಾಗಿದ್ದೇನೆಯೆ? ನೀನೇ ಮುಂದಿಲ್ಲದಿದ್ದರೆ ನಾ ಹೇಗೆ ನಾಟಕವಾಡಲಿ?" ಎಂದು ಗದ್ದರಿಸಿ ಅಟ್ಟವೇರಿದ. ಕುಣಿಯುತ್ತ ಕುಣಿಯುತ್ತ ಮಾತು ಹೇಳ ತೊಡಗಿದ. ಕುಳಿತವರೆಲ್ಲ ಖೊಳ್ಳೆಂದು ನಕ್ಕರು. ಪಾಪ ಆ ಹರೆಯದ ಹೆಣ್ಣು ಮುಖ ಮುಚ್ಚಿಕೊಳ್ಳಬೇಕಾಯಿತು. ಕೊನೆಗೂ ಅವಳ ಗಂಡನ ಆಸೆ ಈಡೇರಲಿಲ್ಲ!

ಆ ವರುಷದ ಅಸಾಧಾರಣ ಘಟನೆಯೆಂದರೆ ಆಚಾರ್ಯ ಬಿ.ಎಂ.ಶ್ರೀ ಅವರ ಆಗಮನ, ನಾಡಹಬ್ಬದಲ್ಲಿ 'ಪಂಪ'ನ ಬಗ್ಗೆ ಅಮೋಘವಾದ ಉಪನ್ಯಾಸವನ್ನಿತ್ತರು. ನೂತನ ವಿದ್ಯಾಲಯ ಪ್ರೌಢಶಾಲೆಯಲ್ಲಿ ಷೇಕ್ಸ್‌ಪಿಯರನ್ನು ಕುರಿತು ಆಂಗ್ಲ ಭಾಷೆಯಲ್ಲಿ ಅನುಪಮವಾಗಿ ಮಾತನಾಡಿದರು; ಕಲಬುರಗಿಯ ಕನ್ನಡಗರಲ್ಲಿ ನವಚೈತನ್ಯವನ್ನು ತುಂಬಿದರು. ನಾನಂತೂ ಪಂಪನ ಬಗ್ಗೆ ಅಂಥ ಉಪನ್ಯಾಸವನ್ನು ಮತ್ತೆ ಕೇಳಿಲ್ಲ. ಷೇಕ್ಸ್‌ಪಿಯರ್ ಬಗ್ಗೆ ಮುಂದೆ ನನ್ನ ಗುರುಗಳಾದ ಪ್ರೊ.ಟಿ. ವೀರಭದ್ರಡು ಆವರಿಂದ ಅಂಥವೇ ಉಪನ್ಯಾಸಗಳನ್ನು ಕೇಳಿದೆನಾಗಲಿ ಪಂಪನ ಬಗ್ಗೆ ಮಾತ್ರ ಅಂಥ ಮೈನವಿರೆಬ್ಬಿಸುವ ಉಪನ್ಯಾಸವನ್ನು ಇದುವರೆಗೂ ಕೇಳಿಲ್ಲ, ಆಚಾರ್ಯ ಶ್ರೀ ಅವರಂಥ ಭವ್ಯ ಪುರುಷರನ್ನು ಅದುವರೆಗೆ ಕಂಡಿರಲಿಲ್ಲ. ಅಸಾಮಾನ್ಯ ವ್ಯಕ್ತಿತ್ವ ಅವರದು. ಅದರ ಸೆಳೆತಕ್ಕೆ ಸಿಕ್ಕದೆ ಉಳಿಯುವುದು ಯಾರಿಗೂ ಅಸಾಧ್ಯ ವಿಷಯವೆನಿಸುತ್ತಿತ್ತು. ನೂರನ ವಿದ್ಯಾಲಯದ ಮರಾಠೀ ಪದಾಧಿಕಾರಿಗಳೂ, ಅಧ್ಯಾಪಕರೂ ಅವರಿಗೆ ತಲೆ ಬಾಗಿದರೆಂದು ಮೇಲೆ ಉಳಿದವರ ಬಗ್ಗೆ ಬರೆಯುವುದೇ ಬೇಡ. ಅಚ್ಚಳಿಯದ ಮುದ್ರೆಯೊತ್ತಿ ಹೋದರವರು ಕಲಬುರಗಿಯ ಸಾಂಸ್ಕೃತಿಕ ಜೀವನದ ಮೇಲೆ. ಅವರು ಹೋದ ಮೇಲೂ ಅನೇಕ ದಿನಗಳವರೆಗೆ ಅವರದೇ ಚರ್ಚೆ ಎಲ್ಲೆಲ್ಲಿಯೂ. ಆಗ ಕನ್ನಡಕ್ಕೆ ಇಂಥ ನಾಯಕರತ್ನ ದೊರೆತುದು ಕನ್ನಡದ ಭಾಗ್ಯವೆಂದೇ ಎಲ್ಲರೂ ಎಣಿಸಿದರು.

**ಆರ್ಯ ಸಮಾಜ :**

ಇನ್ನೊಂದು ಮರೆಯಲಾಗದ ಘಟನೆಯೆಂದರೆ ಆರ್ಯ ಸಮಾಜದ ಪ್ರಚಾರಕರಾಗಿದ್ದ ಬನ್ಸೀಲಾಲ್‌ಜಿಯವರು ಒಂದು ವರ್ಷದೊಳಗಾಗಿ ಒಂದು ಸಾವಿರ ಲಿಂಗಗಳನ್ನು ತೆಗೆಸಿ ಅವರಿಗೆ ಯಜ್ಞೋಪವೀತ ತೊಡಿಸುವೆನೆಂದು ಮಾಡಿದ ಪ್ರತಿಜ್ಞೆ. ಈ ಪ್ರತಿಜ್ಞೆಗಿಂತ ಇದಕ್ಕೆ ಕಾರಣವಾದ ವಿಷಯ ಮುಖ್ಯ. ಹಿಂದೂ ಧರ್ಮದಿಂದ ಪರಧರ್ಮಗಳಿಗೆ ತಿಳಿದೋ ತಿಳಿಯದೆಯೋ ಮತಾಂತರ ಹೊಂದಿದ್ದ ಹಿಂದುಗಳಿಗೆ ಮತ್ತೆ ಹಿಂದೂ ಧರ್ಮ ದೀಕ್ಷೆಯಿತ್ತು. ಆರ್ಯ ಸಮಾಜಿಗಳನ್ನಾಗಿ ಮಾಡ ಹೊರಟ ಆಂದೋಲನವಿದೆಂದು ಹಿಂದೂ ಧರ್ಮಕ್ಕೆ



ವಿಪತ್ತೊದಗಿದ್ದ ಆ ಕಾಲದಲ್ಲಿ ಹಿಂದುಗಳೆಲ್ಲರೂ ಹಾರ್ದಿಕವಾದ ಬೆಂಬಲವನ್ನು ನೀಡಿದ್ದರು ಆ ಆಂದೋಲನಕ್ಕೆ. ಅನೇಕ ಗಣ್ಯ ವೀರಶೈವರೂ ಆರ್ಯ ಸಮಾಜದ ವೇದಿಕೆಯಿಂದಲೇ ಹಿಂದೂ ಪುನರುಜ್ಜೀವನ ಪ್ರಯತ್ನಗಳನ್ನು ನಡೆಸಿದ್ದರು. ಅವರಲ್ಲಿ ಉದ್ಗೀರದ ಪ್ರಸಿದ್ಧ ನ್ಯಾಯವಾದಿಗಳಾಗಿದ್ದ ಶಿವೈಕ್ಯರಾದ ಸಂಗ್ರಾಮಪ್ಪನವರು ಪ್ರಮುಖರು. ಉದ್ಗೀರದ ಆರ್ಯ ಸಮಾಜ ಹೈದರಾಬಾದು ಸಂಸ್ಥಾನದಲ್ಲಿಯೆ ಅತ್ಯಂತ ಸಕ್ರಿಯ ಸಮಾಜವೆಂದು ಪ್ರಸಿದ್ಧಿಯನ್ನು ಪಡೆದಿದ್ದಿತು. ಇದಕ್ಕೆಲ್ಲ ವೀರಶೈವರಾದ ಸರ್ವಶ್ರೀ ಸಂಗ್ರಾಮಪ್ಪ, ಶಂಕರ ರಾವ್, ಪ್ರಭು ರಾವ್, ಮೊದಲಾದ ವೀರಶೈವ ಮುಖಂಡರೇ ಕಾರಣರಾಗಿದ್ದರು. ವಸ್ತು ಸ್ಥಿತಿ ಹೀಗಿದ್ದಾಗ ಬನ್ಸೀಲಾಲಜೀಯರು. ಕೆಲವು ಅಜ್ಞ ವೀರಶೈವರನ್ನೇ ಆರ್ಯ ಸಮಾಜಿಗಳನ್ನಾಗಿ ಮಾಡಿಬಿಟ್ಟರು. ಇದನ್ನು ಆರ್ಯ ಸಮಾಜದ ಮೂಲೋದ್ದೇಶಕ್ಕೆ ವಿರುದ್ಧವಾದ ಕಾರ್ಯವೆಂದು ಸಂಗ್ರಾಮಪ್ಪನವರು ಖಂಡಿಸಿದರು, ಆರ್ಯ ಸಮಾಜವಿರುವುದು ಪರಧರ್ಮಗಳಿಗೆ ಹೋದ ಹಿಂದುಗಳನ್ನು ಆರ್ಯ ಸಮಾಜಕ್ಕೆ ಹಿಂದಿರುಗಿಸುವುದಕ್ಕಾಗಿಯೇ ಹೊರತು ಹಿಂದುಗಳಲ್ಲಿಯೇ ಹಲವರಿಗೆ ಆರ್ಯ ಸಮಾಜದ ಹಣೆಪಟ್ಟಿ ಹಚ್ಚುವುದಕ್ಕಲ್ಲ. ಆರ್ಯ ಸಮಾಜವೊಂದು ಶುದ್ಧ ಸಂಘಟನೆಯ ಆಂದೋಲನವಾಗಿ ಮುಂದುವರಿಯಬೇಕೇ ಹೊರತು ಅದೊಂದು ಜಾತಿಯಾಗಿ ಜಡವಾಗಬಾರದು– ಎಂಬುದವರ ವಾದವಾಗಿದ್ದಿತು. ಇದರಿಂದ ಕುಪಿತರಾದ ಬನ್ಸೀಲಾಲಜಿಯವರು ಮೇಲ್ಕಾಣಿಸಿದ ಪ್ರತಿಜ್ಞೆ ಮಾಡಿದ್ದರು. ಇದಕ್ಕೆ ಪ್ರತಿಭಟನೆ ಪುಟಿದುಕ್ಕಿತು ಎಲ್ಲ ಕಡೆಗಳಲ್ಲಿ. ಆಲಮಟ್ಟಿಯಿಂದ ಹರ್ಡೇಕರ್ ಮಂಜಪ್ಪನವರೂ ಈ ಪ್ರತಿಭಟನೆಗೆ ಪುರಸ್ಕಾರವಿತ್ತರು. ಅದೇ ಉದ್ದೇಶಕ್ಕಾಗಿ ಕಲಬುರಗಿಗೆ ಆಗಮಿಸಿದರು. ಅಣ್ಣನವರನ್ನು ಮತ್ತೆ ನೋಡುವ ಅವಕಾಶ ದೊರೆಯಿತೆಂದು ಹಿರಿ ಹಿರಿ ಹಿಗ್ಗಿದೆ ನಾನು. ಅವರೂ ನನ್ನನ್ನು ಗುರುತಿಸಿ, ಮಾತನಾಡಿಸಿ, ನನ್ನ ವಿದ್ಯಾಭ್ಯಾಸದ ಪ್ರಗತಿ ತಿಳಿದುಕೊಂಡು ಸಂತೋಷಪಟ್ಟರು. ಕಲಬುರಗಿಯಲ್ಲಿಯೂ ಆ ಜಿಲ್ಲೆಯ ಇತರ ಭಾಗಗಳಲ್ಲಿಯೂ ಅಣ್ಣನವರ ವಿಚಾರ ಸರಣಿಗೆ ಅಭೂತಪೂರ್ವವಾದ ಸಮರ್ಥನೆ ದೊರೆಯಿತು. ಸಾಹಿತ್ಯಿಕ ವೇದಿಕೆಗೆ ಆಚಾರ್ಯಶ್ರೀ ಹೇಗೋ ಸಾರ್ವಜನಿಕ ವೇದಿಕೆಗೆ ಮಂಜಪ್ಪಣ್ಣನವರು. ಅವರೂ ಅದ್ಭುತ ವಾಗ್ಮಿಗಳು, ಅವರ ಅಸ್ಖಲಿನ ವಾಣಿ ಬಡಿದೆಬ್ಬಿಸಿತು ಆ ಭಾಗದ ಜನರನ್ನು. ಸಾವಿರ ಹೋಗಲಿ, ಒಂದೂ ಲಿಂಗ ತೆಗೆಸಲಾಗಲಿಲ್ಲ ಆ ವರುಷದಲ್ಲಿ. ಉದಗೀರದಲ್ಲಿ ಏಪ್ರಿಲ್ ತಿಂಗಳಲ್ಲಿ ಇದಕ್ಕಾಗಿಯೇ ಒಂದು ವೀರಶೈವ ಸಮ್ಮೇಳನವನ್ನು ಕರೆಯಬೇಕೆಂದು ತೀರ್ಮಾನವಾಯಿತು.

ಅಣ್ಣನವರ ಹೋದ ಮೇಲೆ ಪರೀಕ್ಷೆಯತ್ತ ಪೂರ್ಣ ಗಮನ ಹರಿಸಿದೆ. ಆ ವರ್ಷ ನಾಟಕ ಆಡಲಿಲ್ಲ. ಕನ್ನಡದ ಚಟುವಟಿಕೆಗಳನ್ನೂ ಕಡಿಮೆ ಮಾಡಿಕೊಂಡು

ಅಭ್ಯಾಸಮಗ್ನನಾದೆ. ನನ್ನ ಸ್ಮರಣಶಕ್ತಿ ನನ್ನ ಸಹಾಯಕ್ಕೆ ಬಂದಿತು. ಓದಿದುದೆಲ್ಲ ನೆನಪಿನಲ್ಲಿ ಮನೆ ಮಾಡಿತು. ಪರೀಕ್ಷೆ ಬಂದಿತು. ಎಂದಿನಂತೆ ಶ್ರೀ ಶರಣಬಸವೇಶ್ವರರ ದರ್ಶನ ಪಡೆದು ಪರೀಕ್ಷೆಗೆ ಹೋದೆ. ಮೊದಲನೆಯ ದಿನದ ಮೊದಲ ವಿಷಯವೇ ಇಂಗ್ಲೀಷ್, ಪ್ರಶ್ನೆಪತ್ರಿಕೆ ಕೈಗೆ ಬರುತ್ತಲೇ ಓದಿ ನೋಡಿದೆ. ಹಕ್ಕಾನಿ ಸಾಹೇಬರಿಗಿತ್ತ ವಚನವನ್ನು ಪಾಲಿಸುವೆನೆಂಬ, ಅಜೀಜ್‌ಖಾನ್ ಸಾಹೇಬರ ಶ್ರಮವನ್ನು ಸಾರ್ಥಕಗೊಳಿಸುವೆನೆಂಬ ಧೈರ್ಯ ಬಂದಿತು. ತಲೆ ತಗ್ಗಿಸಿ ಬರೆದೇ ಬರೆದೆ. ಕೊನೆಯ ಪ್ರಶ್ನೆಗೆ ಉತ್ತರ ಮುಗಿಯುವುದಕ್ಕೂ ಸಮಯ ಮುಗಿಯಿತೆಂದು ಸೂಚಿಸುವ ಘಂಟೆ ಬಾರಿಸುವುದಕ್ಕೂ ಸರಿ ಹೋಯಿತು. ಅತ್ತ ಉತ್ತರಪತ್ರಿಕೆಗಳನ್ನು ಶೇಖರಿಸಿ ಕಟ್ಟಿ ಅರಗಿನ ಮುದ್ರೆಯೊತ್ತುತ್ತಿದ್ದಂತೆ ಇತ್ತ ಪ್ರಿನ್ಸಿಪಾಲರಿಂದ ಕರೆ ಬಂದಿತು. ಅಲ್ಲಿ ಅಜೀಜ್‌ಖಾನ್ ಸಾಹೇಬರೂ, ಕಾಲೇಜಿನಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾಗಿದ್ದ ಪ್ರೊ. ಮಲ್ಲಿಕಾರ್ಜುನಯ್ಯನವರೂ ಉಪಸ್ಥಿತರಿದ್ದರು. ಪ್ರಶ್ನೆಪತ್ರಿಕೆ ಹಿಡಿದೇ ಕುಳಿತಿದ್ದರು ಪ್ರಿನ್ಸಿಪಾಲರು. ಯಾವ ಯಾವ ಪ್ರಶ್ನೆಗೆ ಏನೇನು ಉತ್ತರ ಬರೆದೆನೆಂಬುದನ್ನು ಅವರಿಗೆ ಒಪ್ಪಿಸಬೇಕಾಯಿತು. ಒಪ್ಪಿಸಿದೆ. ಪ್ರಿನ್ಸಿಪಾಲರು ಅಜೀಜಖಾನ ಸಾಹೇಬರ ಮಲ್ಲಿಕಾರ್ಜುನಯ್ಯನವರ ಮುಖ ನೋಡಿದರು. ಅವರು 'ಎಲ್ಲ ಸರಿ'ಯಾಗಿದೆ ಎಂದರು. ಪ್ರಿನ್ಸಿಪಾಲರ ವದನ ವಿಕಸಿಸಿತು. ಬೆನ್ನು ಚಪ್ಪರಿಸಿ ಬೀಳ್ಕೊಟ್ಟರು. ನಾನು ಮೂವರಿಗೂ ವಂದಿಸಿ ಮುಂದಿನ ಪರೀಕ್ಷೆಗಳಿಗೆ ಅಣಿಯಾದೆ.

**ಉದಗೀರ ಸಮ್ಮೇಳನ :**

ಕೊನೆಯ ದಿನದ ಕೊನೆಯ ಉತ್ತರಪತ್ರಿಕೆ ಬರೆದು ಮುಗಿಸಿದವನೇ ಕೋಣೆಗೆ ಹೋಗಿ ಮಲಗಿಬಿಟ್ಟೆ. ಎಷ್ಟು ದಿನಗಳ ಅರೆನಿದ್ದೆಯಿಂದ ಕಣ್ಣು ಭಾರವಾಗಿದ್ದುವೋ– ರಾತ್ರಿ ಹತ್ತರವರೆಗೆ ಪೊಗದಸ್ತಾಗಿ ನಿದ್ದೆಹೊಡೆದೆ. ಸಂಗಡಿಗರು ಎಬ್ಬಿಸಿ ಊಟ ಮಾಡಿಸಿದರು. ಕೈ ತೊಳೆಯುತ್ತ ತೊಳೆಯುತ್ತಲೇ ಮತ್ತು ಮಲಗಿದೆ. ಮರುದಿನ ಕಿಟಿಕಿಯಿಂದ ತೂರಿ ಬಂದ ಸೂರ್ಯನ ಕಿರಣಗಳು ಎಬ್ಬಿಸಿದುವು ನನ್ನನ್ನು. ಅಂದೇ ಉದಗೀರ ಸಮ್ಮೇಳನ ಆಹ್ವಾನಪತ್ರಿಕೆಗಳು ತಲುಪಿದವು. ಬಸವರಾಜಪ್ಪ ಬೆಂಡೆ ಬೆಂಬಳೆಯವರ ನೇತೃತ್ವದಲ್ಲಿ ಒಟ್ಟು ಹನ್ನೆರಡು ಜನರು ಸಮ್ಮೇಳನಕ್ಕೆ ಹೊರಟೆವು. ಶರಣಕವಿ ಮಹಾಗಾಂವ್ , ಕೆ. ಬಸವಣ್ಣ, ಸಿದ್ಧಲಿಂಗಪ್ಪ ಬೆಂಡೆ ಬೆಂಬಳಿ, ನಾನು, ಹೊರಟವರಲ್ಲಿ ಆದಾಗಲೇ ಕಲಬುರಗಿಯ ಹೊರಗೂ ಪರಿಚಿತರಾಗಿದ್ದವರು. ಉದಿಗಿರಯ ಸಮ್ಮೇಳನ ಬಹಳ ಯಶಸ್ವಿಯಾಗಿ ನಡೆಯಿತು. ಸಂಗ್ರಾಮಪ್ಪನವರು ಬಹಳ ಭವ್ಯ ಪುರುಷರಾಗಿದ್ದರು. ಮುಖದ ಮೇಲಿನ ವರ್ಚಸ್ಸು ವಿಶೇಷವಾದುದು. ಅವರಂತೆ ಹಿಂದಿನಲ್ಲಿ ಉದ್ಬೋಧಕವಾಗಿ, ಪ್ರಭಾವ ಪೂರ್ಣವಾಗಿ



ಮಾತನಾಡುವವರನ್ನು ನಾನು ಮತ್ತೆ ನೋಡಿಲ್ಲ. ಭಾಲ್ಕಿಯ ದೇಶಮುಖರಾಗಿದ್ದ ರಾಯ್ ಕಾಶೀನಾಥರಾಯರು, ಅಧ್ಯಕ್ಷರು, ಹರ್ಡೇಕರ್ ಮಂಜಪ್ಪನವರು ಸಮ್ಮೇಳನದ ಜೀವನಾಡಿ, ಅಮರಾವತಿಯ ಬಾಮಣಗಾಂವ್‌ಕರ್ ಮುಖ್ಯ ಅತಿಥಿ. ಖೇಣಿ ಮಡಿವಾಳಪ್ಪನವರೂ, ದುಬಲ್ಗುಂಡಿ ಶರಣಪ್ಪನವರೂ ವೇದಿಕೆಯ ಮೇಲೆ ವಿರಾಜಮಾನರಾಗಿದ್ದವರಲ್ಲಿ ಪ್ರಮುಖರು; ಅಲ್ಲಿ ನಾವು ವಹಿಸಿದ ಪಾತ್ರವೂ ಗಣನೀಯ. ಬಸವರಾಜಪ್ಪನವರು ಜೋಳಿಗೆ ಹಿಡಿದು ಹೊರಟು ಒಂದೂವರೆ ಸಾವಿರ ರೂಪಾಯಿ ಕೂಡಿಸಿಕೊಟ್ಟರು–ಉದಗಿರಿಯ ವೀರಶೈವ ಸಮಾಜಕ್ಕಾಗಿ ನಿವೇಶನ ಕೊಳ್ಳಲು. ನನ್ನಿಂದ ಇಂಗ್ಲೀಷಿನಲ್ಲಿ ಉಪನ್ಯಾಸ ಮಾಡಿಸಿ ಸಂತೋಷಪಟ್ಟರು ಸಂಗ್ರಾಮಪ್ಪನವರು.

ಸಮ್ಮೇಳನದ ಮುಗಿದ ಮೇಲೆ ಕಲಬುರಗಿಯಿಂದ ಹೋಗಿದ್ದ ನಾವು ಉದಗಿರಿಯಿಂದ ಕಲ್ಯಾಣದವರೆಗೆ ವಿಜಯಯಾತ್ರೆ ನಡೆಸಬೇಕೆಂದು ನಿರ್ಣಯವಾಯಿತು. ಸಂಗ್ರಾಮಪ್ಪನವರು ಏನಾದರೂ ಹೇಳಿದರೆ ಅದಕ್ಕೆ 'ಇಲ್ಲ, ಒಲ್ಲೆ' ಎನ್ನುವ ಮನಸ್ಸು ಯಾರಿಗೂ ಆಗುತ್ತಿರಲಿಲ್ಲ. ನಾವೂ ಅವರ ಅಪೇಕ್ಷೆಯನ್ನು ಶಿರಸಾವಹಿಸಿ ಹೊರಟೆವು. ಮೊದಲ ಕಾರ್ಯಕ್ರಮ ನಿಲಂಗಾದಲ್ಲಿ. ಅಲ್ಲಿಯೂ ರಾಚಪ್ಪಾ ಹರ್ತೆ ಮೊದಲಾದ ವೀರಶೈವರು ಆರ್ಯ ಸಮಾಜದ ಆಧಾರಸ್ತಂಭವಾಗಿದ್ದರು. ಅವರು ಆರ್ಯ ಸಮಾಜದ ಕಾರ್ಯದರ್ಶಿಗಳಾದ ಶೇಷರಾವ್ ಅವರೊಡನೆ ವಿಚಾರ ವಿನಿಮಯ ಏರ್ಪಡಿಸಿದರು. ಉದಗಿರಿಯ ಸಮ್ಮೇಳನದ ಪ್ರಭಾವದಿಂದಲೇ ಏನೋ ಶೇಷ ರಾವ್ 'ಹರ್ಡೇಕರ್ ಮಂಜಪ್ಪನವರ ನಿಲುವು ಸರಿಯಾದುದು. ಹಿಂದುಗಳು ತಮ್ಮ ತಮ್ಮಲ್ಲಿ ಮತಾಂತರಕ್ಕೆ ಪ್ರಯತ್ನಿಸಬಾರದು. ಹಿಂದುಗಳು ಮತಾಂತರಗೊಳ್ಳದಂತೆ ಅವರಲ್ಲಿ ಜಾಗೃತಿ ಮಾಡುವುದು, ಮತಾಂತರಗೊಂಡವರನ್ನು ಶುದ್ಧೀಕರಣದ ಮೂಲಕ ಮತ್ತೆ ಹಿಂದುಗಳನ್ನಾಗಿ ಮಾಡುವುದು–ಇವೇ ನಮ್ಮ ನಿಮ್ಮ ಆಂದೋಲನವಾಗಬೇಕು. ನಾವು ನಿಮ್ಮನ್ನು, ನೀವು ನಮ್ಮನ್ನು ಖಂಡಿಸುವುದು ಇನ್ನು ನಿಲ್ಲಬೇಕು" ಎಂದು ಪ್ರಾಂಜಲ ಮನಸ್ಸಿನಿಂದ ಹೇಳಿದರು. ನಾವೂ ಇದನ್ನು ಸಂತೋಷದಿಂದ ಸ್ವಾಗತಿಸಿದೆವು. ಅಂದಿನ ಸಭೆ ಆರ್ಯ ಸಮಾಜದ ಸಭಾಂಗಣದಲ್ಲಿಯೇ ನಡೆಯಿತು. ಕ್ರಾಂತಿಕವಿಗಳೆಂದು ಹೆಸರಾಗಿದ್ದ ಶರಣ ಕವಿಗಳು ಕನ್ನಡದಲ್ಲಿ, ನಾನು ಉರ್ದೂ ಭಾಷೆಯಲ್ಲಿ ಬಸವಣ್ಣನವರ ಬಗ್ಗೆ ಮಾತನಾಡಿದೆವು. ಸಭೆಗೆ ಬಂದಿದ್ದ ಆರ್ಯ ಸಮಾಜಿಗಳೂ ಬಸವ–ದಯಾನಂದರ ಬೋಧೆ ಒಂದೇ ಆಗಿದೆಯೆಂದೂ, ಇವರಿಬ್ಬರ ಸಂದೇಶವನ್ನೇ ಎಲ್ಲರೂ ಬಿತ್ತರಿಸಬೇಕೆಂದೂ ಒಪ್ಪಿಕೊಂಡರು.

ಅಲ್ಲಿಂದ ಇನ್ನೂ ಕೆಲವು ಸ್ಥಳಗಳಿಗೆ ಹೋಗಿ ಸಾವಿರಾರು ಜನರಿಗೆ ಬಸವ ಬೋಧಾಮೃತದ ಪಾನ ಮಾಡಿಸಿ ಕಲ್ಯಾಣ ತಲುಪಿದೆವು. ದಾರಿಯಲ್ಲಿ ನಾವು ಅನುಭವಿಸಿದ ಸಂಕಷ್ಟಗಳ ಲಿಸ್ಟು ದೊಡ್ಡದು. ಬಸ್ಸುಗಳೇ ವಿಮಾನಕ್ಕಿಂತ ದುರ್ಲಭವಾಗಿದ್ದ ಆ ಕಾಲದಲ್ಲಿ ಎತ್ತಿನಬಂಡಿ, ಕುದುರೆ, ಕತ್ತೆಗಳು ಮೇಲೆ ಪ್ರವಾಸ. ಒಮ್ಮೊಮ್ಮೆ ಗಂಟು ಮೂಟೆ ಹೊತ್ತುಕೊಂಡು ಕಾಲ್ನಡಿಗೆಯಿಂದಲೂ ಹೋದುದುಂಟು. ಒಮ್ಮೊಮ್ಮೆ ಎಂಥದೋ ಊಟ, ಒಮ್ಮೊಮ್ಮೆ ಉಪವಾಸ; ಒಮ್ಮೊಮ್ಮೆ ಭೂಮಿಯೇ ಹಾಸಿಗೆ, ಆಕಾಶವೇ ಹೊದಿಕೆ. ಕಲ್ಯಾಣ ಕಾಣುತ್ತಲೆ ನಮ್ಮ ಮಾರ್ಗಾಯಾಸ ಮಾಯವಾಗಿ ಬಿಟ್ಟಿತು. ಹಸಿವೆ ನೀರಡಿಕೆಯೆನ್ನದೆ ಶರಣರ ಸ್ಥಳಗಳನ್ನು ಓಡಾಡಿ ನೋಡಿದೆವು. ಅವರ ಅಗೋಚರ ಆತ್ಮಗಳು ನಮ್ಮ ಮೈಗಳಲ್ಲಿ ಮಿಂಚು ಸಂಚರಿಸುವಂತೆ ಮಾಡಿದುವೆಂದು ನಮಗನ್ನಿಸಿತು. ಮಡಿವಾಳ ಮಾಚಯ್ಯನ ಗುಂಡದಲ್ಲಿ ಸ್ನಾನ ಮಾಡಿ, ಬಟ್ಟೆ ತೊಳೆದುಕೊಂಡು, ಪ್ರಭುದೇವರ ಗದ್ದುಗೆಗೆ ಪ್ರಣಾಮಗಳನ್ನು ಸಲ್ಲಿಸಿ, ಬಸವೇಶ್ವರ ದೇವಸ್ಥಾನಕ್ಕೆ ಹೋಗಿ ವಚನ–ಪಠನ–ಸೇವೆ ಸಲ್ಲಿಸಿದೆವು. ನಮ್ಮಲ್ಲಿ ಬಿ. ಸಿದ್ಧಲಿಂಗಪ್ಪನವರು ವಚನ ಪ್ರಚಾರಕೇಸರಿಗಳೆಂದೇ ಹೆಸರಾಗಿದ್ದರು. ಅವರ ವಚನ–ವಾಚನ ಶೈಲಿ ಮನೋಹರವಾದುದಾಗಿದ್ದಿತು.

**ಭೀಷಣ ಸನ್ನಿವೇಶ :**

ಅಂದು ರಾತ್ರಿ ನಾವು ಎದುರಿಸಿದುದು ಭೀಷಣ ಸನ್ನಿವೇಶ. ದೇವಸ್ಥಾನದಲ್ಲಿ ದೊಡ್ಡ ಸಭೆ. ನೂರಾರು ವರ್ಷ ದಮನ–ದಬ್ಬಾಳಿಕೆಗಳಿಗೆ ಒಳಪಟ್ಟಿದ್ದ ಅಲ್ಲಿಯ ಹಿಂದುಗಳೆಲ್ಲರೂ, ಅವರಿವರೆನ್ನದೆ ಎಲ್ಲರೂ, ಸಭೆಗೆ ಬಂದಿದ್ದರು. ನಿಲಂಗಾ ಒಪ್ಪಂದದಂತೆ ಆರ್ಯ ಸಮಾಜೀಯರೂ ಉತ್ಸಾಹದೊಡನೆ ಭಾಗವಹಿಸಿದ್ದರು. ಶರಣ ಕವಿಗಳು ತಮ್ಮ 'ಅಂದಿನ ಕಲ್ಯಾಣ', 'ಇಂದಿನ ಕಲ್ಯಾಣ' ಎಂಬ ಕವನಗಳನ್ನು ಹಾಡಿದರು. ಸಭಿಕರು ಮಂತ್ರಮುಗ್ಧರಾದರು. 'ಇಂದಿನ ಕಲ್ಯಾಣ'ವಂತೂ ಕೆಚ್ಚು ಕೆರಳಿಸುವ ಕವಿತೆ. ಅದರಲ್ಲಿ 'ಷರುಷಗಟ್ಟೆಯ ಮೇಲೆ ಪಶುಗಳ ಕತ್ತು ಕಡಿಯುವ ನೋಟವು!' ಎಂಬ ಸಾಲನ್ನು ಹಾಡಿದಾಗ ಸ್ಥಳೀಯ ಮುಸ್ಲಿಮರು ಗಲಾಟೆ ಪ್ರಾರಂಭಿಸಿದರು. ಹಿಂದುಗಳೂ ಧೈರ್ಯದಿಂದ, 'ಮಹಾತ್ಮ ಬಸವೇಶ್ವರಕೀ ಜೈ, ಹಿಂದೂ ಧರ್ಮಕೀ ಜೈ!' ಎಂದು ಕೂಗಿದರು. ರಕ್ತಪಾತ ಅನಿವಾರ್ಯವೇನೋ ಎನ್ನುವಂತಹ ಭೀಕರ ಪರಿಸ್ಥಿತಿ! ಕನಿಷ್ಠ ಸಭೆಯನ್ನು ನಿಲ್ಲಿಸಿಬಿಡಬೇಕೆಂದು ಸ್ಥಳೀಯ ಅಧಿಕಾರಿಗಳಿಂದ ಆಜ್ಞೆಯಂತೂ ಖಂಡಿತ ಬರುವುದೆಂದು ಭಾವಿಸಿದೆವು. ಆದರೆ ಇಂಥ ಅನೇಕ ಪ್ರಸಂಗಗಳನ್ನು ಆ ಮೊದಲು ಎದುರಿಸಿದ್ದ ಆರ್ಯ ಸಮಾಜದ ಬಂಧುಗಳು, 'ಹೆದರಬೇಡಿರಿ, ನಾವಿದ್ದೇವೆ', ಎಂದು ಧೈರ್ಯ ಹೇಳಿ, "ಜೋ



ಬೋಲೇ ಸೋ ವಿಜಯ್–ವೈದಿಕ ಧರ್ಮಕೀ ಜೈ!" ಎಂದು ಗರ್ಜಿಸಿದರು. ಗಲಾಟೆ ನಿಂತಿತು. ನಾನು ಬಸವಣ್ಣನವರ ಬಗ್ಗೆ ಭಾಷಣ ಪ್ರಾರಂಭಿಸಿದೆ. ಕೇಳುತ್ತ, ಕೇಳುತ್ತ ಮುಸ್ಲಿಂ ಸೋದರರೂ ಶಾಂತರಾದರು. 'ಅರೆ, ಯಹ ತೋ ಇಸ್ಲಾಮೀ ನಜರಿಯಾ ಹೈ!– ಅರೆ ಇದು ಇಸ್ಲಾಮೀಯ ಸಿದ್ಧಾಂತ' ಎಂದು ಉದ್ಗರಿಸಿದರು. ಅಂತೂ ಸಂಗ್ರಾಮಪ್ಪನವರ ಸದಿಚ್ಛೆಯಂತೆ ನಮ್ಮ 'ವಿಜಯ ಯಾತ್ರೆ' ಕಲ್ಯಾಣದಲ್ಲಿ ಕಲ್ಯಾಣಕರವಾಗಿ ಮುಗಿಯಿತು.

ಮತ್ತೆ ದ್ಯಾಂಪುರದಲ್ಲಿ, ತಂದೆಯವರಲ್ಲಿ ಎರಡು ಸೂಕ್ಷ್ಮ ಪರಿವರ್ತನೆಗಳನ್ನು ಕಂಡೆನು. ಮೊದಲನೆಯದು, ಅವರು ಸಾಹಿತ್ಯ ಶಾಸ್ತ್ರಗಳಿಗಿಂತ ಆಯುರ್ವೇದದ ಅಧ್ಯಯನಕ್ಕೆ ಹೆಚ್ಚು ಗಮನ ನೀಡಿದ್ದುದು; ಎರಡನೆಯದು, ಎಂದೂ ಶುಭ್ರ ಪಂಜೆಯನ್ನಲ್ಲದೆ ಮಾಸಿದ ಪಂಜೆಯನ್ನು ಉಡದಿದ್ದ ಅವರು ಹಳೆಯ ಪಂಜೆಯನ್ನುಟ್ಟುದು. ಒಂದು ಜೊತೆ ಹೊಸ ಪಂಜೆ ಇದ್ದಿತಾದರೂ ಅದು 'ಪುರಾಣ ಪ್ರವಚನ'ಕ್ಕೆ ಹೋದಾಗ ಉಡಲು ಇರಲೆಂದು ಪೆಟ್ಟಿಗೆ ಸೇರಿಬಿಟ್ಟಿದ್ದಿತು. ತಂದೆಯವರ ಆದಾಯ ಕಡಿಮೆಯಾಗಿರುವುದೇ ಕಾರಣವಿದಕ್ಕೆಂದು ತಿಳಿದುಕೊಳ್ಳಲು ತಡವಾಗಲಿಲ್ಲ ನನಗೆ. ನಿಜ, ಪುರಾಣ ಪ್ರವಚನಗಳಿಗೆ ಬೇಡಿಕೆಯೇ ಕಡಿಮೆಯಾಗಿ ಬಿಟ್ಟಿದ್ದಿತು: ಅಕಸ್ಮಾತ್ತಾಗಿ ಕರೆದರೂ ಕಾಣಿಕೆಯ ಮೊತ್ತ ಕರಗಿರದಿದ್ದರೂ ಸೊರಗಿದ್ದಿತು. ತಂದೆಯವರಿದನ್ನು ಗಮನಿಸಿ ಪ್ರಕಾಂಡ ಪಂಡಿತರೂ, ಆಯುರ್ವೇದ ವಿಶಾರದರೂ ಆಗಿದ್ದ ಕೊಪ್ಪಳ ಗವಿ ಮಠಾಧ್ಯಕ್ಷ ಪೂಜ್ಯ ಶ್ರೀ ಮರಿಶಾಂತವೀರ ಮಹಾ ಸ್ವಾಮಿಗಳವರಿಂದ ಶಾಸ್ತ್ರೋಕ್ತ ಆಯುರ್ವೇದ ಕಲಿಯಲು ಪ್ರಾರಂಭಿಸಿದ್ದರು. ನಿಜಗುಣರ 'ಆರುಶಾಸ್ತ್ರ' 'ಸುಭಾಷಿತ ರತ್ನ ಭಾಂಡಾಗಾರ' 'ವಚನ ಶಾಸ್ತ್ರ ಸಾರ' 'ಸಿದ್ಧಾಂತ ಶಿಖಾಮಣಿ' 'ಶೈವ ಸುಧಾರ್ಣವ' 'ಗಿರಿಜಾ ಕಲ್ಯಾಣ' 'ಶಬರಶಂಕರ, ರಾಜಶೇಖರ ವಿಳಾಸಗಳು ಹಿಂದೆ ಬಿದ್ದು ಅವುಗಳ ಸ್ಥಳವನ್ನು ಚರಕ ಸಂಹಿತೆ, ವಾಗ್ಭಟ, ಮಾಧವ ನಿದಾನ ಮೊದಲಾದುವು ಆಕ್ರಮಿಸಿದ್ದುವು. ಯಾವಾಗಲೂ ವನಸ್ಪತಿಗಳ ಸಂಗದಲ್ಲಿ. ಒಂದೊಂದು ವನಸ್ಪತಿಗೆ ಒಂದೊಂದು ಲಕೋಟೆ. ಅದರಲ್ಲಿ ಅದರ ಮಾದರಿ, ಅವರ ಗುಣಧರ್ಮಗಳ ಬಗ್ಗೆ ಟಿಪ್ಪಣಿ, ಅದು ದೊರೆಯುವ ಸ್ಥಳಗಳ ವಿವರ. ತಂದೆಯವರು ಏನನ್ನೇ ಮಾಡಲಿ, ತುಂಬ ಶ್ರದ್ಧೆಯಿಂದ, ಶುದ್ಧಿಯಿಂದ ಮಾಡುತ್ತಿದ್ದರು. ಅಂತೆಯೇ ಸಿದ್ಧಿ ಪಡೆಯುತ್ತಿದ್ದರು.

ಎಂದೂ ಮಾಸಿದ ಪಂಜೆಯನ್ನುಟ್ಟಿರದಿದ್ದ ತಂದೆಯವರು ಹಳೆಯ ಹರಕು ಪಂಜೆಯನ್ನುಟ್ಟುದುದನ್ನು ನೋಡಿದ ನನಗೆ ಎಂದಿಲ್ಲದೆ ಕಸಿವಿಸಿಯಾಯಿತು. ಪುರಾಣ ಪ್ರವಚನದಿಂದ ಇನ್ನು ಉದರ ನಿರ್ವಹಣೆ ಸುಸಾಧ್ಯವಲ್ಲವೆಂಬುದನ್ನು ಸಕಾಲದಲ್ಲಿಯೇ

ತಿಳಿದುಕೊಂಡು, ಮುಂದಿನ ಮಾರ್ಗವೆಂದು ಆಯುರ್ವೇದವನ್ನು ಆ ವಯಸ್ಸಿನಲಿಯೂ ವಿದ್ಯಾರ್ಥಿಗಳಿಂದ ಹೆಚ್ಚು ಶ್ರದ್ಧೆಯಿಂದ ಅಭ್ಯಸಿಸುತ್ತಿದ್ದುದು ಅವರ ಬಗ್ಗೆ ನನಗಿದ್ದ ಗೌರವವನ್ನು ಹೆಚ್ಚಿಸಿದ ಪ್ರಮಾಣದಲ್ಲಿಯೇ ಅವರ ಬಗ್ಗೆ ಮರುಕವನ್ನೂ ವರ್ಧಿಸಿತು. 'ಎಲ್ಲಿಯವರೆಗೆ ಅಪ್ಪಾಜಿಯವರು ಈ ಬಡತನದೊಡನೆ ಹೋರಾಡಬೇಕು? ಮೂವರು ಗಂಡು ಮಕ್ಕಳ, ಇಬ್ಬರು ಹೆಣ್ಣು ಮಕ್ಕಳ ಭವಿತವ್ಯದ ಚಿಂತೆಯಲ್ಲಿ ಕೊರಗಿ ಸೊರಗಬೇಕು?' ಎಂದು ನೊಂದು ಬೆಂದೆ. ಏನು ಮಾಡಿದರೂ ಮನಸ್ಸಿಗೆ ಸಮಾಧಾನವಾಗಲಿಲ್ಲ. ತೋಟಕ್ಕೆ ಹೋಗಿ ಪತ್ರಿತರುತ್ರಯದ ಮಧ್ಯದ ಬಸವಣ್ಣನ ಮುಂದೆ ಕುಳಿತು ಭೂತದಂತೆ ಬೆಂಬತ್ತಿದ್ದ ಬಡತನದ ಬಗ್ಗೆ ಯೋಚಿಸಿಯೇ ಯೋಚಿಸಿದೆ. ಬಡತನವೆಂಬುದು ಕೈಗೆ ಸಿಕ್ಕುವ ಪ್ರಾಣಿಯೇನಾದರೂ ಆಗಿದ್ದರೆ ಅದನ್ನು ಹಿಡಿದು ಅದರ ಕತ್ತು ಹಿಚುಕಿ ಬಿಡುತ್ತಿದ್ದೆನೇನೊ! ಆದರೆ ಅದು ಅದೃಶ್ಯತಾಪ. ಈ ತಾಪದಿಂದ ವಿಮೋಚನೆ ಕೋಪದಿಂದ ಸಾಧ್ಯವಿಲ್ಲ; ದೃಢ ನಿರ್ಧಾರ, ನಿರ್ಧಾರಕ್ಕೆ ತಕ್ಕ ಪ್ರಯತ್ನಗಳಿಂದಲೇ ಸಾಧ್ಯವೆಂಬುದು ಖಚಿತವಾಗಿ ನನ್ನ ಜೀವಮಾನದಲ್ಲಿ ನನ್ನ ಮನೆಯ ಬಡತನವನ್ನು ಮೆಟ್ಟಿ ಮೇಲೇರಿ, ಸ್ವಲ್ಪವಾದರೂ ಸ್ಥಿತಿವಂತಿಕೆಯನ್ನು ಅದಕ್ಕೆ ತಂದುಕೊಡಲೇ ಬೇಕೆಂದು ಶಪಥ ಮಾಡಿದೆ. ಮನಸ್ಸಿನ ಮೇಲಿದ್ದ ಬೆಟ್ಟದಷ್ಟು ಭಾರ ಹಗುರವಾದಂತೆನಿಸಿತು. ಕಣ್ಣಿಗೆ ಬಿದ್ದ ಸೋನಾಮುಖಿ, ಕಾಡುಕವಡೆ ಕಾಯಿ, ಅಮೃತವಲ್ಲಿ, ಮದುಗುಣಿಕೆ, ಅಡುಸೋಗೆ ಇತ್ಯಾದಿ ವನಸ್ಪತಿಗಳನ್ನು ಸಂಗ್ರಹಿಸಿಕೊಂಡು ಮನೆಗೆ ಹಿಂದಿರುಗಿ ತಂದೆಯವರ ಮುಂದಿರಿಸಿದೆ. ಅವರಿಗೆ ಆನಂದವಾಯಿತು. 'ನೀನೂ ಆಯುರ್ವೇದ ಕಲಿಯುವಿಯಾ?' ಎಂದು ಕೇಳಿದರು. ಆಗ 'ಹೂಂ' ಎನ್ನದಿದ್ದುದಕ್ಕಾಗಿ ಈಗ ಪರಿತಪಿಸುತ್ತಲಿದ್ದೇನೆ. ಆದರೂ ವನಸ್ಪತಿಗಳನ್ನು ಅರೆದು ಪುಡಿ ಮಾಡುವಲ್ಲಿ, ಅವುಗಳಿಂದ ಗುಳಿಗೆ ಕಟ್ಟುವಲ್ಲಿ, ಕಾಷಾಯವಾದಿಗಳನ್ನು ಕಾಸಿ ಸೋಸಿ ಕೊಡುವಲ್ಲಿ ಅವರಿಗೆ ನೆರವಾಗಿ ನಿಂತೆ. ಅವರು ಅತ್ಯಂತ ಪ್ರೀತರಾಗಿ, "ಈ ಮನೆ ನಿನ್ನಿಂದಲೇ ಉದ್ಧಾರವಾಗಬೇಕಪ್ಪ; ಅನ್ನದಾನಿಯ ಆಸೆ ಬಿಟ್ಟುಬಿಟ್ಟಿದ್ದೇನೆ!" ಎಂದರು. ನಾನು ಬೆಚ್ಚಿಬಿದ್ದೆ. ಅವರೇ ಮುಂದುವರಿಸಿದರು. "ಅವನಿಗೆ ಬುದ್ಧಿ ಹೇಳಿ ಹೇಳಿ ಬೇಸತ್ತು ಈಗ ಹೇಳುವುದನ್ನೇ ಬಿಟ್ಟುಬಿಟ್ಟಿದ್ದೇನೆ. ಊರಿನ ಉಡಾಳರನ್ನೆಲ್ಲ ಕಟ್ಟಿಕೊಂಡು ಈ ವಯಸ್ಸಿನಲ್ಲಿಯೇ ದ್ಯಾಂಪುರದಲ್ಲಿ ಧರ್ಮ ರಾಜ್ಯ ಸ್ಥಾಪನೆ ಮಾಡಲು ಹೊರಟಿದ್ದಾನೆ! ಪಕ್ಕ ಬಲಿಯದ ಮುನ್ನ ಹಕ್ಕಿ ಹಾರ ಬಯಸಿದರೆ ಏನಾಗುತ್ತದೆಂಬುದೇ ತಿಳಿಯದು ಅವನಿಗೆ!" ಎಂದರು. ಆಗ ನನಗೆ ಅರಿವಾಯಿತು: ಅಣ್ಣನಾಗಿ ತಮ್ಮನ ಬಗ್ಗೆ ನನ್ನ ಕರ್ತವ್ಯವನ್ನು ನಾನು ನಿರ್ವಹಿಸಿರಲಿಲ್ಲವೆಂಬುದು. ನನ್ನ ಪ್ರೀತಿ ತಂಗಿ ವೀರಾಂಬೆಯನ್ನು ದಾಟಿ ಮುಂದೆ ಹೋಗಿರಲೇ ಇಲ್ಲ.



'ನಾನೂ ಪ್ರಯತ್ನಿಸಿ ನೋಡಲೆ?' ಎಂದು ಮೆತ್ತಗೆ ಕೇಳಿದೆ. 'ನೋಡು', ಎಂದರು. ಅಂದು ರಾತ್ರಿ ಸರಿಯಾಗಿ ನಿದ್ದೆ ಬರಲಿಲ್ಲ. ತಂದೆಯವರನ್ನು ಎದುರಿಸಿದ್ದ ಆರ್ಥಿಕ ಅನಿಶ್ಚತತೆ, ವೈಕಲ್ಪಿತ ಉದ್ಯೋಗಕ್ಕಾಗಿ ಅವರು ನಡೆಸಿದ್ದ ಭಗೀರಥ ಪ್ರಯತ್ನ, ಇದಾವುದನ್ನು ಗಮನಿಸದೆ ಅನ್ನದಾನಿ ನಡೆಸಿದ್ದ ತೌಡು ಕುಟ್ಟುವ ಕೆಲಸ– ಒಂದೊಂದಾಗಿ ತಲೆದೋರಿ ನನ್ನ ನಿದ್ರಾಭಂಗ ಮಾಡಿದುವು. ಬೆಳಗಿನ ಜಾವದಲ್ಲಿ ಆ ದಿನದ ಪತ್ರಿಕೆಯಲ್ಲಿ ಮ್ಯಾಟ್ರಿಕ್ ಪರೀಕ್ಷೆಯ ಪರಿಣಾಮ ಪ್ರಕಟವಾಗಲಿರುವ ಸಂಗತಿ ನೆನಪಾಯಿತು. ಧಿಗ್ಗನೆ ಎದ್ದು ಕುಳಿತೆ. ಹಾಸಿಗೆಯಲ್ಲಿಯೆ ಕೈಜೋಡಿಸಿ ಪರಮಾತ್ಮನಲ್ಲಿ ಪ್ರಾರ್ಥಿಸಿಕೊಂಡೆ: "ತಂದೆ, ತಂದೆಯವರ ಭಾರ ಹಗುರಾಗುವ ರೀತಿಯಲ್ಲಿ ನನ್ನನ್ನು ಉತ್ತೀರ್ಣನನ್ನಾಗಿ ಮಾಡು!"

ಕುಕ್ಕನೂರಿನ ಇಮಾಮ ಸಾಹೇಬರ ಮನೆಗೆ 'ರಹಬರ್–ಎ–ದಕ್ಕನ್' ದಿನಪತ್ರಿಕೆ ಬರುತ್ತಿತ್ತು. ಅದು ಬರುತ್ತಿದ್ದುದು ಮಧ್ಯಾಹ್ನದಲ್ಲಾದರೂ ಪೂರ್ವಾಹ್ನದಲ್ಲಿಯೇ ಹೋಗಿ ಅವರ ಮನೆಯಲ್ಲಿ ಕುಳಿತೆ. ಅವರೂ ಅಂದಿನ ಪತ್ರಿಕೆಗಾಗಿ ಆತುರರಾಗಿದ್ದರು. ಪತ್ರಿಕೆ ಬರುತ್ತಲೇ ತೆರೆದು ನೋಡಿ, 'ಭಲೆ, ಭಲೆ ಸಿದ್ಧಣ್ಣ!' ಎಂದರು. ಏನೆಂದು ಕೇಳಿದೆ. 'ನೀನು ವಿಶ್ವವಿದ್ಯಾಲಯಕ್ಕೇ ಮೂರನೆಯವನಾಗಿ ಪಾಸಾಗಿದ್ದೀ; ಇಂಗ್ಲೀಷಿನಲ್ಲಿ ಕನ್ನಡದಲ್ಲಿ ಮೊದಲನೆಯ ಸ್ಥಾನ ನಿನ್ನದು!' ಎಂದು ಹೇಳಿ ಪತ್ರಿಕೆಯನ್ನು ನನ್ನ ಕೈಗಿತ್ತು, 'ತೆಗೆದುಕೊಂಡು ಹೋಗು; ಪುಣ್ಯವಂತರಾದ ನಿಮ್ಮ ತಂದೆಯವರಿಗೆ ತೋರಿಸು', ಎಂದು ಹೇಳಿದುದಲ್ಲದೆ ಒಂದು ಸೇರು ಮಿಠಾಯಿ ತರಿಸಿ ಸಂತೋಷ ಸೂಚಕವಾಗಿ ಕುಳಿತವರಿಗೆ ಹಂಚಿ, ಉಳಿದುದನ್ನು ನನ್ನ ಕೈಗಿತ್ತರು. 'ನಾ, ನೀ' ಎನ್ನುವುದರೊಳಗಾಗಿ ಈ ಸುದ್ದಿ ಪೇಟೆಯಲ್ಲೆಲ್ಲ ಹರಡಿ ಸಂಗನಬಸಪ್ಪ, ಕಪ್ಪತ್ತಪ್ಪ, ಜಾಧವ ವೆಂಕಪ್ಪ, ತಟ್ಟಿ ಗುರುಲಿಂಗಪ್ಪ ಮೊದಲಾದವರು ಧಾವಿಸಿ ನನ್ನ ಬೆನ್ನು ಚಪ್ಪರಿಸಿದರು. ಅಷ್ಟರಲ್ಲಿ ತಂದೆಯವರೂ, ಮಾವನವರೂ ಬಂದಿದ್ದರು. ಅವರಿಬ್ಬರ ಮುಖದ ಮೇಲೆ ಅನಿರ್ವಚನೀಯ ಆನಂದದ ಅಲೆಗಳು.

ಮರಿದಿನದಿಂದ ಪ್ರಾರಂಭವಾಯಿತು ಅಭಿನಂದನ ಪತ್ರಗಳ ಸುರಿಮಳೆ. ನೆರೆಹೊರೆಯ ಊರುಗಳ ಹಿತೈಷಿಗಳು ಬಂದು ತಂದೆಯವರಿಗೆ ಮುಖತಃ ಅಭಿನಂದನೆಗಳನ್ನು ಸಲ್ಲಿಸಿ ಹೋದರು. ಇಂಗ್ಲೀಷ್ ಭಾಷೆಯಲ್ಲಿ ಪ್ರಥಮ ಸ್ಥಾನ ಪಡೆದುದರ ಫಲವಾಗಿ ಎರಡು ವರ್ಷ ತಿಂಗಳಿಗೆ ಹದಿನೈದು ರೂಪಾಯಿಗಳ ವಿದ್ಯಾರ್ಥಿವೇತನ ದೊರೆಯಲಿದ್ದುದಾಗಿ ನನ್ನ ಎರಡು ವರ್ಷಗಳ ಕಾಲೇಜು ಶಿಕ್ಷಣದ ಬಗ್ಗೆ ಎಲ್ಲರಿಗೂ ನಿಶ್ಚಿಂತೆಯಾಗಿದ್ದಿತು. ಆ ಗೌರವ ಕಲಬುರಗಿ ಕಾಲೇಜಿನ ಇತಿಹಾಸದಲ್ಲಿಯೇ ಮೊದಲ ಸಲ ನನಗೆ ದೊರೆತುದರಿಂದ ಎಲ್ಲರ ಆನಂದ

ಉಕ್ಕೇರಿದ್ದಿತು. ಪ್ರಿನ್ಸಿಪಾಲರೇ ಮೊದಲಾಗಿ ಎಲ್ಲ ಅಧ್ಯಾಪಕರೂ, ಅಜೀಜ್‌ಖಾನ್ ಸಾಹೇಬರೂ ಅಭಿನಂದನ ಪತ್ರ ಬರೆದಿದ್ದರು ನನಗೆ. ಇದನ್ನೆಲ್ಲ ಆಸಕ್ತಿಯಿಂದ ವೀಕ್ಷಿಸಿದ ಅನ್ನಧಾನಿಗೆ ತಾನು ಹಿಡಿದ ದಾರಿ ಸರಿಯಲ್ಲ, ಅಣ್ಣನ ದಾರಿಯನ್ನೇ ಹಿಡಿಯಬೇಕೆಂದೆನಿಸಿತು. ಅಂದು ರಾತ್ರಿ ಒಂದು ಸುದೀರ್ಘ ಪತ್ರ ಬರೆದು ನನ್ನ ಅಂಗಿಯ ಜೇಬಿನಲ್ಲಿಟ್ಟು ಮಲಗಿದನಾತ, ಮರುದಿನ ಅದನ್ನೋದಿ ನಾನು ಪ್ರಥಮ ತರಗತಿಯಲ್ಲಿ ಪಾಸಾದಷ್ಟೇ ಸಂತೋಷವಾಯಿತು. ಓಡಿ ಹೋಗಿ, 'ನಿಜವಾಗಿಯೂ ನೀನಿನ್ನು ಒಳ್ಳೆಯ ವಿದ್ಯಾರ್ಥಿಯಾಗುವಿಯಾ?' ಎಂದು ಕೇಳಿದೆ. ಕೌಲೆತ್ತಿನಂತೆ ತಲೆದೂಗಿದನವನು. ತಂದೆಯವರಿಗಿದನ್ನು ತಿಳಿಸಿದಾಗ ಅವರಿಗಾದ ಆನಂದ ಅವರ್ಣನೀಯ. ಅನ್ನದಾನಿಯ ಇಚ್ಛೆಯಂತೆ ಆತನನ್ನು ಕೊಪ್ಪಳ ಪ್ರೌಢಶಾಲೆಗೆ ಕಳಿಸುವುದೆಂದು ಅಂದು ರಾತ್ರಿ ಚರ್ಚೆಯ ನಂತರ ತೀರ್ಮಾನವಾಯಿತು.

### ಸ್ವಾಮಿಯಾಗಲು ಆಹ್ವಾನ :

ಒಳ್ಳೇಯದಾಗಲಿ, ಕೆಟ್ಟದ್ದಾಗಲಿ ಒಂಟಿಯಾಗಿ ಬರುವುದಿಲ್ಲವೆಂದು ಹೇಳುತ್ತಾರಲ್ಲವೆ? ಆ ದಿನಗಳಲ್ಲಿ ನಮ್ಮ ಮಟ್ಟಿಗೆ ಇದು ನಿಜವಾಯಿತು. ತಂದೆಯವರು ಕೊಪ್ಪಳದ ಗವಿಮಠದ ಶ್ರೀಗಳವರ ಸಲಹೆಯಂತೆ ಅಲೀಗಢದ ಆಯುರ್ವೇದ ಪರೀಕ್ಷೆಯೊಂದನ್ನು ಕೊಟ್ಟಿದ್ದರು. ಅದರ ಫಲಿತಾಂಶವೂ ಒಂದು ವಾರದೊಳಗಾಗಿ ಬಂದು ತಂದೆಯವರು 'ವೈದ್ಯಭೂಷಣ' ಪರೀಕ್ಷೆಯಲ್ಲಿ ಪಾಸಾಗಿದ್ದರು. ಬೇಗ ಸನದು ತರಿಸಿಕೊಂಡು ಸಂಬಂಧಿಸಿದವರಿಗೆ ಬರೆದುಕೊಂಡು 'Registered Medical Practitioners' ಸರ್ಟಿಫಿಕೇಟನ್ನು ತರಿಸಿಕೊಂಡರು. ಇನ್ನು ನಿರ್ಭಯವಾಗಿ ವೈದ್ಯ ವೃತ್ತಿಯನ್ನು ಕೈಕೊಳ್ಳಬಹುದೆಂದು ನೆಮ್ಮದಿಯ ಉಸಿರ್ಗರೆದರು. ಆದರೆ ಆ ನೆಮ್ಮದಿಯನ್ನು ಕಲಕುವ ಪತ್ರವೂ ಮಾರನೆಯ ದಿನವೇ ಬಂದಿತು. ಅದು ಸಂಗ್ರಾಮಪ್ಪನವರಿಂದ ಬಂದಿದ್ದ ಸುದೀರ್ಘ ಪತ್ರವಾಗಿದ್ದಿತು. ಅವರ ಸುಂದರ ಹಸ್ತಾಕ್ಷರಗಳ ಹಿಂದೀ ಪತ್ರ, "ಶಾಸ್ತ್ರೀಜಿ, ಇಂದು ನಾನು ತಮ್ಮಿಂದ ಕೇಳುತ್ತಿರುವ ಕಾಣಿಕೆ ದೇವತೆಗಳು ದಧೀಚಿ ಋಷಿಯಿಂದ ಕೇಳಿದ ಬಲಿದಾನಕ್ಕೆ ಸಮಾನವಾದುದ್ದು" ಎಂದೇ ಪ್ರಾರಂಭವಾಗಿದ್ದಿತು ಆ ಪತ್ರ. ಉದಗಿರಿಯ ಹಾವಗಿಸ್ವಾಮಿ ಮಠ ಆ ಭಾಗದ ಪ್ರಸಿದ್ಧ ಮಠವೆಂದೂ, ಅದಕ್ಕೆ ಅನೇಕ ಶಾಖಾ ಮಠಗಳೂ ಸಹಸ್ರಾವಧಿ ಶಿಷ್ಯ ಸಂಪತ್ತೂ ಇದ್ದು ಕೆಲವು ವರ್ಷಗಳಿಂದ ಅದಕ್ಕೇ ಸ್ವಾಮಿಗಳೊಬ್ಬರಿಲ್ಲದೆ ಅಲ್ಲಿ ಅರಾಜಕತೆ ಉದಿಸಿದೆಯೆಂದೂ, ನಿಮ್ಮ ಸುಪುತ್ರ ಸಿದ್ಧಯ್ಯನನ್ನು ಈ ಮಠಕ್ಕೆ ಸ್ವಾಮಿ ಮಾಡಲು ಸಮ್ಮತಿಸಿ ಸಮಾಜಕ್ಕೆ ದೊಡ್ಡ ಉಪಕಾರ ಮಾಡಬೇಕೆಂದೂ ಕೇಳಿಕೊಂಡಿದ್ದರು. ನಿಮ್ಮ ಮಗ ಸ್ವಾಮಿಯಾದರೆ ನಿಮಗೆ ವೈಯಕ್ತಿಕವಾಗಿ



ಹಾನಿಯಾಗುವುದಾದರೂ ಅಸಂಖ್ಯ ಭಕ್ತರಿಗೆ, ಸಮಾಜಕ್ಕೆ ದೊಡ್ಡ ಲಾಭವಾಗುವುದೆಂದು ಬರೆದಿದ್ದರು.

ಪತ್ರ ಓದಿ ಮಂಕಾದರು ತಂದೆಯವರು. 'ನೀನೀಗ ಸಣ್ಣವನೆಲ್ಲ. ನಿನ್ನಿಚ್ಛೆಯೇನಿದೆಯೋ ಅದರಂತೆಯೇ ಉತ್ತರ ಕೊಡೋಣ. ನೀನೇ ನಿನ್ನ ನಿರ್ಣಯಕ್ಕೆ ಬಾ. ನನ್ನ ಅಭಿಪ್ರಾಯ ಕೇಳಿ ತೀರ್ಮಾನ ಮಾಡಬೇಡ. ನಿನ್ನ ಜೀವನದ ಶಿಲ್ಪಿ ನೀನೇ. ನೀನು ಏನೇ ನಿರ್ಣಯ ತೆಗೆದುಕೊಂಡರೂ ಸಂತೋಷ ನನಗೆ' ಎಂದು ನನಗೆ ಹೇಳಿ ಆ ಪತ್ರವನ್ನೇ ನನ್ನ ಕೈಗಿತ್ತರು. ನಾನು ಸಂಯಮಿಯೆಂದು ಹೆಸರಾಗಿದ್ದೆ, ನಿಜ. ಆದರೆ ಎಂಥ ಸಂಯಮಿ? ಬಡತನ ಜಡಿದು ರೂಪಿಸಿದ್ದ ಸಂಯಮಿ. ನಾನು ಕಡು ಬಡವನಾಗಿರದಿದ್ದಿದ್ದರೆ, ತಂದೆಯವರು ನಡೆಸಿದ್ದ ಬದುಕಿನ ಹೋರಾಟ ಸದಾ ನನ್ನ ಕಣ್ಣೆದುರಿಗಿರದಿದ್ದರೆ, ಅವ್ವ ಐಯ್ವರು ಮಕ್ಕಳ ಆರೈಕೆಯನ್ನು ಮಾಡುತ್ತ ಮುಂಜಾವಿನಿಂದ ರಾತ್ರಿ ಹತ್ತರವರೆಗೆ ದಣಿವರಿಯದೆ ದುಡಿಯುತ್ತಿದ್ದುದು ನನ್ನ ನೆನಪಿನಲ್ಲಿ ಕೊರೆಯುತ್ತಿರದಿದ್ದರೆ, ನನ್ನ ಒಡಹುಟ್ಟಿದ್ದ ನಾಲ್ವರು ಸೋದರ ಸೋದರಿಯರ ಭವಿತವ್ಯದ ಪ್ರಶ್ನೆ ನನ್ನ ಕಿವಿಗಳಲ್ಲಿಯೂ ನಿನದಿಸುತ್ತಿರದಿದ್ದರೆ ಸೊನ್ನಾಲಾಪುರದಲ್ಲಿ, ಪುರಾಣ ಪ್ರವಚನಕ್ಕೆಂದು ಹೋದ ಹಳ್ಳಿಯಲ್ಲಿ ನಾನು ಸಂಯಮದಿಂದ ನಡೆದುಕೊಳ್ಳುತ್ತಿದ್ದೆನೆಂಬುದು ಸಂದೇಹಾಸ್ಪದವಾದುದೇ ಸರಿ. ಇಂದಿಗೂ ಹೆಂಗಳೆಯರೊಡನೆ ಮಾತನಾಡುವಲ್ಲಿ ಸಂಕೋಚ ಸ್ವಭಾವವನ್ನು ನಾನು ತೊರೆದಿಲ್ಲವಾದರೂ, ಆಗಂತೂ ಹೆಣ್ಣನ್ನೇ ಕಣ್ಣೆತ್ತಿ ನೋಡದಷ್ಟು ಬಿಗಿಯಾಗಿದ್ದೆನಾದರೂ ಅಜೀವಸಂನ್ಯಾಸಿಯಾಗಿ ಇರಬಲ್ಲೆನೆಂದು ಎದೆ ತಟ್ಟಿ ಹೇಳುವಂತಿರಲಿಲ್ಲ ನಾನು. ಸೊನ್ನಲಾಪುರದ ಆ ಕಾಮಿನೀ ಕೋಮಲ ಕರಸ್ಪರ್ಶ, ಆ ಹಳ್ಳಿಯ ಹುಡುಗಿಯ ಆಲಿಂಗನ ಆಗಾಗ ನೆನಪಾಗಿ ಮೈ ಜುಮ್ಮೆನಿಸುತ್ತಲೇ ಇದ್ದುವು. ಬಡತನದ ಉಡದ ಹಿಡಿತದಿಂದ ಪಾರಾಗುವವರೆಗೆ ಮದುವೆ ಮಾಡಿಕೊಳ್ಳಕೂಡದೆಂದು ಪ್ರತಿಜ್ಞೆ ಮಾಡಿದ್ದೆನಾದರೂ ಮದುವೆಯೇ ಕೂಡದೆಂದು ಕನಸಿನಲ್ಲಿಯೂ ಯೋಚಿಸಿರಲಿಲ್ಲ. 'ಸಂನ್ಯಾಸವೇ? ಸಂಸಾರವೆ?' ಎಂಬ ಪ್ರಶ್ನೆ ಧುತ್ತೆಂದು ನಿಂತಿದ್ದಿತು ಎದುರಿಗೆ. ಈ ಪ್ರಶ್ನೆಗೆ ಏನುತ್ತರ ಕೊಡುವುದೆಂಬುದು ತಿಳಿಯದೆ ಕಿಂಕರ್ತವ್ಯವಿಮೂಢನಾದಾಗ ಒಂದು ಸಂಗತಿ ಸ್ಮರಣೆಗೆ ಬಂದಿತು. ದ್ಯಾಂಪುರ–ಕುಕ್ಕನೂರುಗಳ ನಡುವಣ ಕೆಮ್ಮಣ್ಣ ಬಯಲಿನಲ್ಲಿ, ನಾನಿನ್ನೂ ವಿದ್ಯಾನಂದ ಗುರುಕುಲದ ವಿದ್ಯಾರ್ಥಿಯಾಗಿದ್ದಾಗಲೇ, ಒಂದು ಗುಹೆಯನ್ನು ತೋಡಿ ಒಬ್ಬ ಯೋಗಿ ಅಲ್ಲಿ ಯೋಗ ಸಾಧನೆ ನಡೆಸಿದ್ದ. ಆಗ ನಾನೂ ಆಗಾಗ ಅಲ್ಲಿಗೆ ಹೋಗಿ ಬಂದಿದ್ದೆ. ಯೋಗಿಯೇನೋ ಗಟ್ಟಿಗನಾಗಿಯೇ ತೋರಿದ್ದ ನನಗೆ. "ಈಗ ಆ ಯೋಗಿಯನ್ನೇ

ಏಕೆ ವಿಚಾರಿಸಬಾರದು ಈ ಪ್ರಶ್ನೆಯ ಬಗ್ಗೆ?" ಎಂದೆನಿಸಿತೆನಗೆ. ಸೂರ್ಯಸ್ತವಾಗಲು ಇನ್ನೂ ಒಂದು ಘಂಟೆ ಸಮಯವಿತ್ತು. ಹೋಗಿಯೇ ಬರೋಣವೆಂದು ಹೊರಟೆ. ದೂರದಲ್ಲಿ ಆ ಗುಹೆಯಿದ್ದ ತಾಣ ಕಾಣಿಸಿತು. ಬರಹೋಗುವರಾರೂ ಕಾಣಿಸಲಿಲ್ಲ. ನಿರ್ಜನ, ನೀರವ ಸ್ಥಳವಾಗಿ ಗೋಚರಿಸಿತು. ಆದರೂ ಹೋದೆ. ಎರಡೇ ಮೆಟ್ಟಿಲು ಕೆಳಗಿಳಿದೆ. ಬೆಚ್ಚಿ ಬಿದ್ದೆ. ಒಳಗೆ ಕೇರಿಯ ಚೆಲುವೆಯೊಬ್ಬಳೊಡನೆ ಊರಿನ ಮಡಿವಂತನೊಬ್ಬ ರತಿ ಕ್ರೀಡೆಯಲ್ಲಿ ಲೀನನಾಗಿದ್ದ! ಅಲ್ಲಿಂದ ಕಾಲುಕಿತ್ತೆ; ಮನೆಯತ್ತ ಹೊರಟೆ. ಕಣ್ಮುಚ್ಚಿದರೂ ಮನದ ಕಣ್ಣಿನ ಮುಂದೆ ಅದೇ ನಗ್ನಚಿತ್ರ! ಮನೆಗೆ ಮರಳಿದ ಮೇಲೆ, ಆ ಯೋಗಿಯೂ ಪ್ರಚ್ಛನ್ನ ಭೋಗಿಯೇ ಆಗಿದ್ದನೆಂಬೂದೂ, ಅದೇ ಕಾರಣವಾಗಿ ಅಲ್ಲಿಂದ ಓಡಿ ಹೋಗಬೇಕಾಗಿ ಬಂದಿತೆಂಬೂದೂ, ಅವನು ಹೋದಮೇಲೆ ಆ ಯೋಗ ಸಾಧನೆಯ ಗುಹೆ ವ್ಯಭಿಚಾರ ಸಾಧನೆಯ ಗುಹೆಯಾಗಿದ್ದಿತೆಂಬುದೂ ಗೊತ್ತಾಯಿತು! ಮುಂದೆ ಯೋಚಿಸುವ ಅಗತ್ಯವಿಲ್ಲವೆಂದೆನಿಸಿತು. ಸಂನ್ಯಾಸಕ್ಕಾಗಿಯೇ ಹುಟ್ಟಿದಂಥ ಶಂಕರಾ ಚಾರ್ಯರಂಥವರು ಅಲ್ಲೊಬ್ಬರು, ಇಲ್ಲೊಬ್ಬರು. ನನ್ನಂಥವರು ವಿವಾಹವಾಗಿಯೇ ಸಾಧ್ಯವಿರುವಷ್ಟು ಧರ್ಮಾರ್ಥಕಾಮ ಮೋಕ್ಷಗಳನ್ನು ಸಾಧಿಸಬೇಕು. 'ನಾನ್ಯಃಪಂಥಾಃ ಅಯನಾಯ ವಿದ್ಯತೇ.' ಅಂದೇ ತಂದೆಯವರಿಗೆ ತಿಳಿಸಿಬಿಟ್ಟೆ–ನನ್ನಿಂದ ಸಂನ್ಯಾಸ ಸಾಧ್ಯವಿಲ್ಲವೆಂದು. ಅಂದು ರಾತ್ರಿ ಕುಳಿತು ಅವರು ಸಂಗ್ರಾಮಪ್ಪನವರಿಗೆ ಉದ್ದವಾದ ಉತ್ತರವನ್ನು ಬರೆದರು. ಏನು ಬರೆದರೆಂಬುದನ್ನೂ ನೋಡದೆ ಲಕೋಟೆ ಅಂಟಿಸಿ, ಮರುದಿನ ನಾನೇ ಕುಕ್ಕನೂರಿಗೆ ಹೋಗಿ ಅಂಚೆಪೆಟ್ಟಿಗೆಗೆ ಹಾಕಿ ಬಂದೆ. "ವೈರಾಗ್ಯ ವಿಜಯ"ವೆಂಬ ನಾಟಕವನ್ನು ತಂದೆಯವರು ಬರೆದಿದ್ದರು. ಅದರಲ್ಲಿ ಅರಸನೊಬ್ಬ ಅರಸೊತ್ತಿಗೆಯ ತ್ಯಾಗ ಮಾಡಿ ವಿರಾಗಿಯಾದ ವಸ್ತುವಿದ್ದಿತು. ಸಂಗನಾಳವರು ಆ ನಾಟಕ ಆಡಿದಾಗ ಅದನ್ನು ನೋಡಿದ್ದೆ ನಾನು. ಆದರೂ ನನ್ನ ಮೈಮೇಲೇ ಬಂದಿದ್ದ ಈ ಪ್ರಸಂಗದಲ್ಲಿ ವೈರಾಗ್ಯದ ವಿಜಯವೇನೂ ಆಗಲಿಲ್ಲ, ಸಂಸಾರದ ವಿಜಯವೇ ಆಯಿತು. "ಮುಂದೆ ನಾನು 'ಸಂಸಾರ ವಿಜಯ' ನಾಟಕವನ್ನು ಬರೆಯುವೆನೆ?" ಎಂದು ನನಗೆ ನಾನೇ ಕೇಳಿಕೊಂಡು ಮನದಲ್ಲಿಯೇ ಮುಗುಳ್ನಕ್ಕೆ.

**ಓದುವ ಹುಚ್ಚು :**

ಕಲಬುರಗಿಗೆ ಮರಳಿದ ಮೇಲೆ ಮೊದಲ ಒಂದು ವಾರ 'ಗಲೇ ಮಿಲನಾ'ಕ್ಕೆ ಮೀಸಲಾಯಿತು. ಹಕ್ಕಾನಿ ಸಾಹೇಬರ ಔದಾರ್ಯವೇ ಔದಾರ್ಯ! ನನಗೆ ವಿದ್ಯಾರ್ಥಿವೇತನ ಸಿಕ್ಕಿದೆ ಮೇಲೂ ಉಚಿತ ವಿದ್ಯಾರ್ಥಿಯೆಂದೇ ನನ್ನನ್ನು ಸರಕಾರೀ ವಿದ್ಯಾರ್ಥಿ ನಿಲಯದಲ್ಲಿ ಮುಂದುವರಿಸಿದರು; ವಿಶ್ವವಿದ್ಯಾಲಯಕ್ಕೆ



ಮೂರನೇಯವನಾಗಿ ಪಾಸಾದರೇನು, ನನ್ನ ಕಾಲೇಜಿಗೆ ಪ್ರಥಮನಾಗಿ ಪಾಸಾಗಿದ್ದನೆಂದು ತಿಂಗಳಿಗೆ ಎಂಟು ರೂಪಾಯಿ 'ಬರ್ಸರಿ' ಮಂಜೂರು ಮಾಡಿದರು; ಕನ್ನಡದಲ್ಲಿ ಪ್ರಥಮ ಸ್ಥಾನ ಪಡೆದೆನೆಂದು 'ಫೀ ಮಾಫಿ' ಕೊಟ್ಟರು! ಅಲಿಬಿನ್ ಗಾಲಿಬ್ ಸಾಹೇಬರು, ಮೀನಾಯಿ ಸಾಹೇಬರು, ಅಜೀಜಖಾನ ಸಾಹೇಬರು, ತವಗ ಭೀಮಸೇನರಾಯರುಗಳ ಮನೆಗೆ ಹೋಗಿ ಕೃತಜ್ಞತೆಯ ಕಾಣಿಕೆಯನ್ನು ಸಲ್ಲಿಸಿ ಪ್ರಿನ್ಸಿಪಾಲ ಸಾಹೇಬರ ಮನೆಗೆ ಹೋದೆ. ನನ್ನನ್ನು ಕಾಣುತ್ತಲೇ ಹಫೀಜ್ ಓಡಿ ಬಂದು ತಬ್ಬಿಕೊಂಡರು; ಹಕ್ಕಾನಿ ಸಾಹೇಬರು ಮಿಠಾಯಿ ತಿನಿಸಿ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿಯೂ ಪ್ರಥಮ ಸ್ಥಾನ ಬಿಡಕೂಡದೆಂದರು. ಮರುದಿನವೇ ಮಲ್ಲಿಕಾರ್ಜುನಯ್ಯನವರು ನನ್ನನ್ನು ಕರೆದು ಹೇಳಿದರು–'ನೀನು ನನಗೂ ಕೀರ್ತಿ ತರಬೇಕು" ಎಂದು. 'ಶಕ್ತಿಮೀರಿ ಪ್ರಯತ್ನಿಸುವೆ ಸಾರ್' ಎಂದು ಹೇಳಿದೆ. ಕೂಡಲೇ 'ವಾಚನಾಲಯದಲ್ಲಿ English Men of Letters ಶೃಂಖಲೆಯ ಎಲ್ಲ ಪುಸ್ತಕಗಳಿವೆ; ಎಲ್ಲವನ್ನೂ ಓದು" ಎಂದರು. ಅಂದೇ ಒಂದು ಪುಸ್ತಕ ಪಡೆದುಕೊಂಡೇ ವಿದ್ಯಾರ್ಥಿ ನಿಲಯಕ್ಕೆ ಮರಳಿದೆ. ಓದುವ ಹುಚ್ಚು ಹೆಚ್ಚುತ್ತಲೇ ನಡೆಯಿತು; ಇಂದಿಗೂ ಬಿಟ್ಟಿಲ್ಲ ಆ ಹುಚ್ಚು.

ಕಾಲೇಜಿಗೆ ಹೆಸರು ಹಚ್ಚಿಸಿದವರಲ್ಲಿ ಒಬ್ಬಿಬ್ಬರು ಅಜೀವ ಮಿತ್ರರಾಗಿ ಉಳಿದರು. ಅವರಲ್ಲಿ ಅಳವಂಡಿಯ ಕಟ್ಟೀಮನಿ ಹಿರೇಮಠದ ಚೆನ್ನವೀರಸ್ವಾಮಿ ಇನಾಮದಾರರು ಒಬ್ಬರು. ಇವರು ಕುಕ್ಕನೂರಿನ ಕಲ್ಮಠದ ಗೆಳೆಯ ವಿರೂಪಾಕ್ಷಯ್ಯನವರಿಗೆ ಸಂಬಂಧಿಕರಾದುದರಿಂದ ಬಹುಬೇಗ ನನಗೆ ಹತ್ತಿರದವರಾದರು. ಇವರ ತಮ್ಮಂದಿರಾದ ಶಿವಮೂರ್ತಿಸ್ವಾಮಿಗಳವರು ಇಂದಿಗೂ ನಾಡಿನ ಗಣ್ಯನಾಯಕರಲ್ಲೊಬ್ಬರು. ಚೌಡಯ್ಯ ದಾನಾಪುರದ ಪ್ರಸಿದ್ಧ ಒಡೆಯರ್ ಕುಟುಂಬದವರೇ ಇವರ ತಾಯಿಯಾಗಿದ್ದುದರಿಂದ ಇವರ ಮೂಲಕ ಹಾಗೂ ಮುಂದೆ ಶ್ರೀ ಸದಾಶಿವ ಒಡೆಯುವರವರ ಸೋದರಿಗೆ ಪತಿಯಾದ ಗುರುಶಾಂತಯ್ಯನವರ ಮುಳಕ ಅ ದೊಡ್ಡ ಕುಟುಂಬಕ್ಕೂ ನಾನು ಹತ್ತಿರದವನಾದೆ. ಸಂಗ್ರಾಮಪ್ಪನವರ ಮಗ ಉಮಾಕಾಂತ, ಅವರ ಅಣ್ಣನ ಮಗ ವಿಶ್ವನಾಥ ರಾವ್ ನನಗೆ ಸಮೀಪದವರಾದರು. 'ಹುಟ್ಟುವವರಿಗೆ ಅಣ್ಣ, ಬೆಳೆಯುವವರಿಗೆ ತಮ್ಮ'– ಎನ್ನುವಂತಿದ್ದ ಕೆಲವರು ಎರಡೆರಡು ವರ್ಷ 'ಪಲ್ಟಿ' ಹೊಡೆದು ಮೂರನೆಯ ವರ್ಷವೂ ಅದೇ ತರಗತಿಯಲ್ಲಿದ್ದರು. ಕೆಲವರು ಮ್ಯಾಟ್ರಿಕ್ ಪರೀಕ್ಷೆಗೆ ಇಂಗ್ಲೀಷು ಕಡ್ಡಾಯವಾಗಿರಿದಿದ್ದ ಕಾಲದಲ್ಲಿ ಮ್ಯಾಟ್ರಿಕ್ ಪಾಸಾಗಿ, ಇಂಗ್ಲೀಷ್ ಸಹಿತ ಇಂಟರ್ ಪಾಸಾಗಲಾಗದ ನಾಲ್ಕೈದು ವರ್ಷಗಳಿಂದಲೂ ಅಲ್ಲಿ ನಮ್ಮ ಸ್ಥಾನವನ್ನು

ಭದ್ರಗೊಳಿಸಿಕೊಂಡಿದ್ದರು. ಅಂತೂ ಮಹಡಿಯಲ್ಲಿದ್ದ ಕಾಲೇಜು ತರಗತಿಗಳಿಗೆ ಮೆಟ್ಟಿಲುಗಳನ್ನೇರಿ ಹೋಗುವ ಹೆಮ್ಮೆ, ಹಿರಿಮೆ ನಮ್ಮದಾಯಿತು!

ಪ್ರೊ. ಮಲ್ಲಿಕಾರ್ಜುನಯ್ಯನವರು ನಡೆಸುತ್ತಿದ್ದ ಇಂಗ್ಲೀಷ್ ತರಗತಿಗಳ ಬಗ್ಗೆ ಹೇಳುವುದೇ ಬೇಡ, 'ಏ ಒನ್'–ಎನ್ನುವರಲ್ಲ ಹಾಗೆ. ತವಗ ಭೀಮಸೇನರಾಯರೂ ಬಹಳ ಸಿದ್ಧತೆಯೊಡನೆ ತರಗತಿಗೆ ಬರುತ್ತಿದ್ದರು. ಕನ್ನಡದ ಜೊತೆಗೆ ಸಂಸ್ಕೃತವೂ ಸೇರಿದುದರಿಂದ ಪ್ರೊ. ಧಾರವಾಡಕರರ ಶಿಷ್ಯತ್ವ ಲಭಿಸಿತು. ಅವರು ನಮಗೆ ಸಂಸ್ಕೃತ ಕಲಿಸಿದ ರೀತಿ ಅನನ್ಯವಾದುದು. ಭಗವದ್ಗೀತೆಯ ಎರಡನೆಯ ಅಧ್ಯಾಯ ಮಾತ್ರ ನಮ್ಮ ಪರೀಕ್ಷೆಗೆ ಪಠ್ಯ ವಿಷಯವಾಗಿದ್ದರೂ ಎಲ್ಲ ಅಧ್ಯಾಯಗಳ ಪರಿಚಯವನ್ನೂ ನಮಗೆ ಮಾಡಿಸಿದರು. ನಾನು ಬಾಲ್ಯದಲ್ಲಿಯೇ ಸ್ವಲ್ಪ ಸಂಸ್ಕೃತ ಹಾಗೂ ಹಿಂದೀ ಕಲಿತಿದ್ದರಿಂದ ನನಗೆ ಸಂಸ್ಕೃತ ಅಷ್ಟು ಕಠಿಣವೆನಿಸಲಿಲ್ಲ. ಆದರೆ ನನ್ನ ಇತರ ಸಹಪಾಠಿಗಳಿಗೆ ಸಂಸ್ಕೃತ ತರಗತಿ ಬಂದಿತೆಂದರೆ ಮೈಗೆ ಮುಳ್ಳು ಚುಚ್ಚಿದಂತೆನಿಸುತ್ತಿತ್ತು. ಇದಲ್ಲದೆ ಅರ್ಥಶಾಸ್ತ್ರವನ್ನೂ ಕಲಿಯಬೇಕಿತ್ತು ನಾವು. ಅದರ ಪ್ರಾಧ್ಯಾಕರಾದ ಅಬೂತಾಲಿಬ್ ಸಾಹೇಬರು ಆ ನೀರಸ ವಿಷಯವನ್ನೂ ರಸವತ್ತಾಗಿ ಮಾಡುತ್ತಿದ್ದರು.

'ಕಾಲೇಜು ಯೂನಿಯನ್ನಿ'ನ ಆಯ್ಕೆಗಳು ಬಂದುವು. ಅಧ್ಯಕ್ಷತೆಗೆ ಇಬ್ಬರು ಸ್ಪರ್ಧಿಸಿದರು. ಇಬ್ಬರೂ ಕಾರ್ಯದರ್ಶಿಯ ಸ್ಥಾನಕ್ಕೆ ನನ್ನ ಹೆಸರನ್ನೇ ಸೂಚಿಸಿದ್ದರು. ನಾನು ಅವಿರೋಧವಾಗಿ ಆಯ್ಕೆಯಾದೆ. ಎಲ್ಲರಿಗೂ ಅಚ್ಚರಿ. ಹಿಂದೆ ಯಾವ ಹಿಂದೂ ವಿದ್ಯಾರ್ಥಿಯೂ ಆಯ್ಕೆಗೊಂಡಿರದಿದ್ದ ಆ ಸ್ಥಾನಕ್ಕೆ ಇವನೊಬ್ಬ ಅವಿರೋಧವಾಗಿ ಆಯ್ಕೆ ಹೊಂದಿದನಲ್ಲ–ಎಂಬುದೇ ಆ ಅಚ್ಚರಿಗೆ ಕಾರಣ. ಪ್ರಿನ್ಸಿಪಾಲ ಸಾಹೇಬರಿಗೂ ತುಂಬ ಖುಷಿಯಾಯಿತು. ಉದ್ಘಾಟನಾ ಸಮಾರಂಭದಂದು ಗೌನ್ ಹಾಕಿಕೊಂಡು ಕಾರ್ಯದರ್ಶಿಯಾಗಿ ಕುಳಿತೆ–ಪ್ರಿನ್ಸಿಪಾಲ ಸಾಹೇಬರ ಪಕ್ಕದಲ್ಲಿ. ಅಭಿಮಾನಿಗಳು ಮೇಲಿನಿಂದ ಹೂಮಳೆಗರೆದರು. ಧಾರವಾಡಕರ ಮಾಸ್ತರರಂತೂ ತರಗತಿಯಲ್ಲಿ ನನ್ನನ್ನು 'ವಜೀರ'ನೆಂದೇ ಕರೆಯತೊಡಗಿದರು. ಮಿತ್ರರೆಲ್ಲ ಒಂದು ಮಾತಿಗೆ ಬಗ್ಗೆ ಒಮ್ಮತಕ್ಕೆ ಬಂದಿದ್ದರು: 'It is his finest hour' ಎಂಬುದೇ ಅದು. ಈ ಸುದ್ದಿ ಕುಕ್ಕನೂರು ದ್ಯಾಂಪುರಗಳನ್ನು ತಲುಪಿದಾಗ ಹಾಲು ಸಕ್ಕರೆ ಕುಡಿದರು ಹಿತೈಷಿಗಳು. ಶ್ರೀ ಶರಣ ಬಸವೇಶ್ವರ ಸಂಸ್ಥಾನದ ಅಧಿಪತಿಗಳಾದ ಪೂಜ್ಯ ದೊಡ್ಡಪ್ಪ ಶರಣಬಸವಪ್ಪ ಅಪ್ಪಾ ಅವರು ಕರೆಸಿ ಹರಿಸಿದರು. ಕಲಬುರಗಿಯ ಕನ್ನಡ ಕಾರ್ಯಕರ್ತರಿಗೆ ಹೊಸ ಹುರುಪು ಹುಟ್ಟಿತು; ಕನ್ನಡದ ಕಾರ್ಯಗಳು ಬಿರುಸಿನೊಡನೆ ಮುಂದುವರಿದುವು.



## ಮತ್ತೊಮ್ಮೆ ಜೀವದಾನ :

ಹರವಾಳ ಎಂಬ ಗ್ರಾಮಕ್ಕೆ ಮಿತ್ರರೊಬ್ಬರ ಮದುವೆಗೆ ಹೋದೆ. ನನ್ನೊಡನೆ ಆ ಭಾಗದ ಮಿತ್ರರೆಲ್ಲ ಇದ್ದರು. ಎಲ್ಲರೂ ಸೇರಿ ಭೀಮಾ ನದಿಯಲ್ಲಿ ಈಜಾಡಿ ಬರೋಣವೆಂದು ಹೋದೆವು. ನವಯೌವನ ಉಬ್ಬುಕೊಬ್ಬುಗಳು ಎಲ್ಲರಿಗೂ. ಭೀಮಾ ನದಿಯ ಸೆಳೆವನ್ನು ಸವಾಲೆಂದು ಸ್ವೀಕರಿಸಿ ಸಿಕ್ಕಾಪಟ್ಟೆ ಈಸಿದರು ಎಲ್ಲರೂ. ನನ್ನನ್ನಂತೂ ಹಿಡಿದು ತಡೆಯುವವರೇ ಇಲ್ಲವಾಗಿದ್ದಿತು. ಹಿಂದೆ ಮುಂದೆ ನೋಡದೆ ಮುಂದುವರಿದೆ. ಒಮ್ಮೆಗೆ ನಡುನೀರಿನ ಸೆಳೆವಿಗೆ ಸಿಕ್ಕುಬಿಟ್ಟೆ. ಅದರಿಂದ ತಪ್ಪಿಸಿಕೊಳ್ಳಲು ಮಾಡಿದ ಪ್ರಯತ್ನಗಳೆಲ್ಲ ವ್ಯರ್ಥವಾದುವು. ಅತ್ತ ಹೋಗುವಂತಿಲ್ಲ, ಇತ್ತ ಹೋಗುವಂತಿಲ್ಲ–ಸೆಳೆವು ಎಳೆದತ್ತ ಹೋಗಬೇಕು. ಹಿಂದಿರುಗಿ ನೋಡಿದೆ, ಸಂಗಡಿಗರೊಬ್ಬರೂ ಕಾಣಿಸಲಿಲ್ಲ. ಎಲ್ಲರೂ ಮದುವೆ ಮನೆಗೆ ಹೋಗಿಬಿಟ್ಟಿದ್ದರು–ಹಸಿದ ಹೊಟ್ಟೆಗಳಿಗೆ ಹೋಳಿಗೆ ತುಂಬಲು. ನನ್ನ ಕೈ ಸೋತಿವೆ; ಹಸಿವೆ ಹೆಚ್ಚುತ್ತಿದೆ; ಧೈರ್ಯ ಕುಸಿಯುತ್ತಿದೆ; ಮುಂದೆ, ಹಿಂದೆ, ಎಡಕ್ಕೆ, ಬಲಕ್ಕೆ–ಎತ್ತ ನೋಡಿದರೂ ನೀರು! ಅಂದಿಗೆ ನನ್ನ ಇಹಲೋಕದ ಯಾತ್ರೆ ಮುಗಿಯಿತೆಂದು ಬಗೆದೆ. ತಂದೆ ತಾಯಿಯರ, ಸೋದರ ಸೋದರಿಯರ, ಅತ್ತೆ ಮಾವಂದಿರು ಚಿತ್ರಗಳು ಒಂದೊಂದಾಗಿ ಬಂದು ಹೋದುವು ಕಣ್ಣಮುಂದೆ. ಎಚ್ಚರಗೇಡಿಯಾಗಿ ಒಬ್ಬನೇ ನಡುಹೊಳೆಗೆ ಹೋಗಿ ಅವರೆಲ್ಲರ ಆಸೆಗಳನ್ನು ಭಗ್ನಗೊಳಿಸಿ ಹೊರಟಿರುವೆನೆಂಬ ಪಶ್ಚಾತ್ತಾಪ ನನ್ನನ್ನು ಆವರಿಸಿತು. ಬೇರೆ ದಾರಿಯೇ ಇಲ್ಲವೆಂದರಿದು ದೇವರ ಧ್ಯಾನ ಮಾಡಿ ಸೆಳೆವಿಗೆ ಶರಣಾಗತನಾಗಿಬಿಟ್ಟೆ. ಕಾಲನ್ನೂ ಬಡಿಯದೆ, ಕೈಯನ್ನೂ ಬಡಿಯದೆ–ಬಡಿಯಲು ಶಕ್ತಿಯಿದ್ದರಲ್ಲವೆ?– ತೇಗಿನ ಮುಂಡಿಗೆಯಂತೆ ಶರೀರವನ್ನು ತೇಲಿಬಿಟ್ಟೆ. ಕಣ್ಣು ಮುಚ್ಚಿದ್ದುವು. ತೇಲುತ್ತ ಹೊರಟೆ–ಹೊರಟೆ–ಹೊ–ರ–ಟೆ! ಎಷ್ಟೋ ಹೊತ್ತಿನ ಮೇಲೆ ನನ್ನ ಶಿವದಾರ ಕಂಟಿಯೊಂದಕ್ಕೆ ಸಿಕ್ಕಿ ಬಡಿದೆಬ್ಬಿಸಿದ ಅನುಭವ! ಕಣ್ಣು ತೆರೆದು ನೋಡಿದೆ–ಬಲದಂಡೆ ಒಳನುಗ್ಗಿ ಬಂದ ಭಾಗದಲ್ಲಿ ಬೆಳೆದ ಕಂಟಿಯೊಂದಕ್ಕೆ ನನ್ನ ಶಿವದಾರ ಸಿಕ್ಕಿ ನನ್ನನ್ನು ಉಳಿಸಿದೆ! ಆ ಕಂಟಿಯನ್ನು ಹಿಡಿದು ದಂಡೆಗೆ ಬಂದು ಬಿದ್ದೆ. ಇನ್ನೊಮ್ಮೆ ಜೀವದಾನವನ್ನಿತ್ತಿದ್ದಿತು ದೈವ!

ಮದುವೆ ಮನೆಗೆ ಮರಳಿದಾಗ ಎಲ್ಲರೂ ಹೋಳಿಗೆ ಬಿಗಿದು ತಾಂಬೂಲ ಅಗಿಯುತ್ತ ಬೇವಿನ ಮರದ ಕಟ್ಟೆಗೆ ಕುಳಿತಿದ್ದರು. ಅವರ ಗುಂಪಿನಲ್ಲಿ ನಾನೊಬ್ಬನಿಲ್ಲವೆಂಬುದೇ ಅವರ ಗಮನಕ್ಕೆ ಬಂದಿರಲಿಲ್ಲ. "ಯಾಕೆ, ತಡಮಾಡಿದೆ?" ಎಂದು ಕೇಳಿದವರಿಗೆ "ಸೆಳೆವಿಗೆ ಸಿಕ್ಕಿದೆ. ಪಾರಾಗಿ ಬರಲು ತಡವಾಯಿತು" ಎಂದು ಮಾತ್ರ ಉತ್ತರವಿತ್ತೆ. ಸತ್ತು ಸತ್ತು ಉಳಿದೆನೆಂದು ಹೇಳಿ ಮದುವೆಯ ಹಿಗ್ಗಿನ

ವಾತಾವರಣವನ್ನು ಕೆಡಿಸಬಾರದೆಂದನಿಸಿತು. ಇದಾದ ಮೇಲೆ ಮತ್ತೆ ನದಿಯಲ್ಲಿ ಈಸಿದುದಿಲ್ಲ! ಕಲಬುರಿಗಿಗೆ ಮರಳಿದ ಮೇಲೂ ಇರುಳು ಕನಸಿನಲ್ಲಿ ಭೀಮಾ ನದಿಯಲ್ಲಿ ನಾನು ತೇಲುತ್ತ, ಸಾವಿನ ದಾರಿಯನ್ನು ಕಾಯುತ್ತ ಹೊರಟ ಚಿತ್ರ ಮರುಕಳಿಸುತ್ತಿತ್ತು! ಭಯ ಬರಿಸುತ್ತಿತ್ತು.

ವಿಜಾಪುರಕ್ಕೆ ವ್ಯಾಸಂಗ ಪ್ರವಾಸವೊಂದು ಏರ್ಪಟ್ಟಿತು. ಇಪ್ಪತ್ತು ಜನರಿರಬೇಕು ಹೊರಟವರು. ದಾರಿಯುದ್ದಕ್ಕೂ ಉಗಿಬಂಡಿಯಲ್ಲಿ ನಮ್ಮದೇ ಗದ್ದಲ, ಗಲಾಟೆ, ಬಿಜಾಪುರದಲ್ಲಿ ಸಿದ್ಧೇಶ್ವರ ಹಾಸ್ಟೆಲಿನಲ್ಲಿ ನಮ್ಮ ವಸತಿ ಊಟಗಳ ವ್ಯವಸ್ಥೆಯಾಗಿದ್ದಿತು. ಆಗ ಅದಕ್ಕೆ ವಿದ್ಯಾರ್ಥಿಕಾರ್ಯದರ್ಶಿಯಾಗಿದ್ದ ಪೂಜಾರಿ ಎಂಬ ಯುವಕರು ನಮ್ಮನ್ನು ಬಹಳ ಚೆನ್ನಾಗಿ ನೋಡಿಕೊಂಡರು. ಗೋಲಗುಮ್ಮಟ, ಇಬ್ರಾಹಿಮ್ ರೋಜಾ, ಉಪಲಿ ಬುರುಜ್, ಮಲಿಕ್ ಮೈದಾನ, ತೋಪು ಇತ್ಯಾದಿ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ನಲಿದಾಡಿದೆವು. ನನಗೆ ವಚನ ಸಾಹಿತ್ಯೋದ್ಧಾರಕ ಪೂಜ್ಯ ಫ.ಗು. ಹಳಕಟ್ಟಿಯವರನ್ನು ಯಾವಾಗ ನೋಡುವೆನೋ–ಎಂದೆನ್ನಿಸಿತ್ತು. ಅವರ ಮನೆಗೆ ಹೋದೆವು. ಸಣ್ಣದೊಂದು ಬಾಡಿಗೆ ಮನೆಯಲ್ಲಿ ಶರಣರಂತೆ ತೋರಿದ ಅವರನ್ನು ಕಂಡು ಧನ್ಯರಾದೆವು. ಅವರೂ ಅತ್ಯಂತ ಮಮತೆಯೊಡನೆ ನಮ್ಮೊಡನೆ ಕೆಲವು ಕಾಲ ಕಳೆದರು. ಮಾತು ಸಹಜವಾಗಿಯೇ ಕಲಬುರಗಿ ಜಿಲ್ಲೆಯ ಶರಣರ ಸ್ಥಳಗಳತ್ತ ಹೊರಳಿತು. ಆ ಬಗ್ಗೆ ನಮಗಿದ್ದ ಅಜ್ಞಾನವನ್ನು ಕಂಡು ನಮಗೇ ನಾಚಿಕೆಯಾಯಿತು. ಅವರೇ ಪರೀಕ್ಷೆಯಲ್ಲಿ ಪಾಠ ಒಪ್ಪಿಸುವ ವಿದ್ಯಾರ್ಥಿಯಂತೆ ಶರಣರ ಸ್ಥಳಗಳ ಹೆಸರುಗಳನ್ನು ಹೇಳಿದರು; ಸಾಧ್ಯವಾದರೆ ಅಲ್ಲಿಗೆ ಹೋಗಿ ಅವರ ಅವಶೇಷಗಳ ಬಗ್ಗೆ, ಅವರ ಬಗ್ಗೆ, ಜನಜನಿತ ಐತಿಹ್ಯಗಳ ಬಗ್ಗೆ, ಅವರ ಕೃತಿಗಳ ಉಪಲಬ್ಧತೆಯ ಬಗ್ಗೆ ಶೋಧನೆ ನಡೆಸಲು ತಿಳಿಸಿದರು; ಶಿಲಾಶಾಸನಗಳಿದ್ದರೆ ಪಡಿಯಚ್ಚು ತೆಗೆದುಕೊಳ್ಳುವ ವ್ಯವಸ್ಥೆ ಮಾಡಲು ಉಪದೇಶಿಸಿದರು; ಸಿಕ್ಕ ಸಂಗತಿಗಳನ್ನೆಲ್ಲ ಸಂಗ್ರಹಿಸಿ 'ಶಿವಾನುಭವ'ಕ್ಕೆ ಕಳಿಸಿಕೊಡಲು ಕೇಳಿಕೊಂಡರು. ಅಮೇಲೆ ಮಾತು ಉಸ್ಮಾನಿಯಾ ವಿಶ್ವವಿದ್ಯಾಲಯದ ಬೋಧನ ಭಾಷೆಯತ್ತ ಹೊರಳಿತು. ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಉರ್ದೂ ಭಾಷೆಯನ್ನೇ ಶಿಕ್ಷಣ ಮಾಧ್ಯಮವನ್ನಾಗಿ ಮಾಡಿದ್ದುದು ಅವರ ಆಸಕ್ತಿಯನ್ನು ಕೆರಳಿಸಿದ ವಿಷಯವಾಗಿದ್ದಿತು. ಆ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಿ ನಮ್ಮಿಂದ ಉತ್ತರ ಪಡೆದರು. ಮುಖ್ಯವಾಗಿ ಪಠ್ಯಪುಸ್ತಕಗಳ ಬಗ್ಗೆ ಕೇಳಿದರು. ಎಲ್ಲ ವಿಷಯಗಳನ್ನು ಕುರಿತು ಸಮರ್ಪಕವಾದ ಪಠ್ಯಪುಸ್ತಕಗಳನ್ನು ಹೇಗೆ ಸಿದ್ಧಗೊಳಿಸಿದರು? ಇವುಗಳು ಇಂಗ್ಲೀಷ್ ಪಠ್ಯಪುಸ್ತಕಗಳಷ್ಟೇ ಚೆನ್ನಾಗಿವೆಯೆ? ವೈಜ್ಞಾನಿಕ ಸೂತ್ರಗಳನ್ನು ಉರ್ದೂ ಭಾಷೆಗೆ ಅನುವಾದಿಸಿದ್ದಾರೆಯೆ



ಇಲ್ಲವೆ ಇದ್ದಕ್ಕಿದ್ದಂತೆ ಇರಿಸಿಕೊಂಡಿದ್ದಾರೆಯೆ? ಉದಾಹರಣೆಗೆ H2SO4 ಇದನ್ನು ಏನೆಂದು ಅನುವಾದಿಸಿಕೊಂಡಿದ್ದಾರೆ?– ಇತ್ಯಾದಿ ಪ್ರಶ್ನೆಗಳನ್ನು ಕೇಳಿ ದಂಗಾಗಿಸಿದರು ನಮ್ಮನ್ನು. H2SO4- ಅನ್ನು ಅನುವಾದಿಸುವ ಗೊಡವೆಗೆ ಹೋಗಿಲ್ಲ; ನಾವೂ H2SO4 ಎಂದೇ ಬರೆಯುತ್ತೇವೆ–ಎಂದು ಹೇಳಿದೆ. ತತ್‌ಕ್ಷಣವೇ ಅವರು ಉದ್ಗರಿಸಿದರು: "ಬಹಳ ಚೆನ್ನಾಗಿದೆ ಈ ಪದ್ಧತಿ. ನಾಳೆ ನಮ್ಮ ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಯಾದರೆ ಕನ್ನಡವನ್ನೇ ಶಿಕ್ಷಣ ಮಾಧ್ಯಮವನ್ನಾಗಿ ಮಾಡುವುದು ಸೂಕ್ತ. ಕನ್ನಡದಲ್ಲಿ ವಿಜ್ಞಾನ ವಿಷಯ ಪಠ್ಯಪುಸ್ತಕಗಳನ್ನು ರಚಿಸುವಾಗ ಈ ಪದ್ಧತಿ ನಮಗೆ ಸಹಾಯಕವಾಗುತ್ತದೆ. ಅಲ್ಪಸಂಖ್ಯಾತರ ಉರ್ದೂ ಭಾಷೆಯನ್ನು ಬಹುಸಂಖ್ಯಾತರಾದ ಹಿಂದೂಗಳ ಮೇಲೆ ಹೇರಿರುವ ಅನೌಚಿತ್ಯವೊಂದನ್ನುಳಿದರೆ ಉಸ್ಮಾನಿಯಾ ವಿಶ್ವವಿದ್ಯಾಲಯವು ಮಾಡಿದ ಈ ಪ್ರಯೋಗ ದಿಟ್ಟ ಪ್ರಯೋಗ. ಕರ್ನಾಟಕ ಏಕೀಕರಣವಾದ ಮೇಲೆ ಕನ್ನಡ ಮಾಧ್ಯಮದ ವಿಶ್ವವಿದ್ಯಾಲಯ ಶಿಕ್ಷಣ ಸಾಧ್ಯವಾಗಿಯೇ ಆಗುತ್ತದೆ."

ನಾನು ನಡುವೇ ಬಾಯಿ ಹಾಕಿ, "ಕರ್ನಾಟಕದ ಏಕೀಕರಣ ಒಂದಿಲ್ಲೊಂದು ದಿನ ಆಗಿಯೇ ತೀರುವುದೆಂದು ತಾವು ನಂಬಿರುವಿರಾ?" ಎಂದು ಕೇಳಿದೆ. "ಬಾಪೂಜಿಯವರ ಜೀವಿತಾವಧಿಯಲ್ಲಿ ಭಾರತ ಸ್ವತಂತ್ರವಾಗಿಯೇ ತೀರುತ್ತದೆ; ಆಮೇಲೆ ಅವರದೇ ತತ್ತ್ವವಾದ ಭಾಷಾನುಗುಣ ಪ್ರಾಂತ್ಯ ರಚನೆ ಆಗಲೇಬೇಕು" ಎಂದು ನಿಶ್ಚಯದ ಸ್ವರದಲ್ಲಿ ಉತ್ತರವಿತ್ತರು. ಈ ಶರಣರು ಆಡಿದ ಮಾತು ಹುಸಿಯಾಗಲಿಕ್ಕಿಲ್ಲವೆಂದು ನಮಗೆಲ್ಲರಿಗೂ ಎನಿಸಿತು. ನಮನಗಳನ್ನು ಸಲ್ಲಿಸಿ ಹಿಂದಿರುಗಿದೆವು. ದಾರಿಯಲ್ಲಿ ಅಂದುಕೊಂಡೆವು: "ಗೋಲಗುಮ್ಮಟವನ್ನು ನೋಡಿದುದು ಎಷ್ಟು ಘನ ವಿಷಯವೋ, ಅದಕ್ಕೂ ಘನವಾದ ವಿಷಯ ನಾವು ಈ ಮಹಾನುಭಾವರನ್ನು ನೋಡಿದುದು" ಎಂದು.

ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ನಡೆದ ಅಂತರ್ ಕಾಲೇಜು ವಕ್ತೃತ್ವ ಸ್ಪರ್ಧೆಗೆ ಕಲಬುರಗಿ ಕಾಲೇಜಿನ ಪ್ರತಿನಿಧಿಯಾಗಿ ಹೈದರಾಬಾದಿಗೆ ಹೋಗಿ ಬಂದೆ. ಪಾರಿತೋಷಕವನ್ನೇನೂ ತರಲಿಲ್ಲ. ಆ ಆರ್ಟ್ಸ್ ಕಾಲೇಜಿನ ಭವ್ಯ ಕಟ್ಟಡ, ಆ ಹಾಸ್ಟೆಲುಗಳ ಭವ್ಯ ಭವನಗಳು. ಆ ಸಾವಿರ ಸಾವಿರ ವಿದ್ಯಾರ್ಥಿಗಳು, ನವಾಬನಂದನರು, ಆ ಅಖಿಲ ಭಾರತ ಖ್ಯಾತಿಯ ಪ್ರಾಧ್ಯಾಪಕರು–ಇತ್ಯಾದಿಗಳನ್ನು ನೋಡಿ ಮೈನಡುಕ ಹುಟ್ಟಿದ್ದಿತು ನನಗೆ. ಸ್ಪರ್ಧೆ ಗೆಲ್ಲುವುದಿರಲಿ, ನಿಂತು ಮಾತಾಡಿದುದೇ ಮಹತ್ಸಾಧನೆಯೆನಿಸಿದ್ದಿತು ನನಗೆ. ಅಲ್ಲಿ ನೆರೆದ ವಿದ್ಯಾರ್ಥಿಗಳ ಭರ್ಜರಿ ಬಟ್ಟೆಗಳ ಮುಂದೆ ನನ್ನ ಬಡತನದ ಉಡುಪು ತೀರ ಸಾಮಾನ್ಯವಾಗಿ ತೋರಿ ನನ್ನ

ಕೀಳರಿಮೆಯನ್ನು ಮತ್ತೆ ಕೊನರಿಸಿತು. ಅಂತೂ ಮುಂದೆ ವಿಶ್ವವಿದ್ಯಾಲಯ ಸೇರಲು ಬಂದಾಗ ಗಾಬರಿಯಾಗದಿರಲೆಂದು ಪೂರ್ವಪರಿಚಯವೊಂದನ್ನು ಒದಗಿಸಲು ನೆರವಾಯಿತು ನನಗೆ ಈ ಸ್ಪರ್ಧೆ. ಕೈ ಬಿಗಿಹಿಡಿದೇ ಹೈದರಾಬಾದು ಸಿಕಂದ್ರಾಬಾದುಗಳನ್ನು ನೋಡಿಕೊಂಡು ಕಲಬುರಗಿಗೆ ಹಿಂದಿರುಗಿದೆ. ವ್ಯಾಸಂಗ, ಕವನ ರಚನೆ, ಕನ್ನಡ ಸೇವೆಗಳಲ್ಲಿ ಮಗ್ನನಾದೆ.

ವಾರ್ಷಿಕ ಪರೀಕ್ಷೆ ಕೊಟ್ಟು ಹತ್ತು ತಿಂಗಳುಗಳ ವಿದ್ಯಾರ್ಥಿವೇತನ ಹಾಗೂ ಬರ್ಸರಿ ೨೫೦ ರೂಪಾಯಿಗಳನ್ನು ಒಮ್ಮೆಗೇ ಪಡೆದುಕೊಂಡೆ. ಯಾರು 'ಮಾಮೂಲು' ಬೇಡಲಿಲ್ಲ. ಇದು ಇಂದಿನ ಆಶ್ಚರ್ಯ ಬರಿಸುವ ಮಾತೇ ಸರಿ. ಇಷ್ಟು ಹಣವನ್ನು ಆ ಮೊದಲು ನೋಡಿರದಿದ್ದ ನನಗೆ ಆ ಹಣವನ್ನು ಹೇಗೆ ಉಪಯೋಗಿಸಬೇಕೆಂಬುದೇ ತೋಚಲಿಲ್ಲ. ಮಿತ್ರರು ಒತ್ತಾಯ ತಂದರು! 'ಒಂದು ಉಣ್ಣೆಯ ಕೋಟು ಹೊಲಿಸಿಕೋ, ಎರಡು ಸಿಲ್ಕ್ ಶರ್ಟ್ ಹೊಲಿಸಿಕೋ, ಒಂದು ಜತೆ ಮ್ಯಾಂಚೆಸ್ಟರ್ ಪಂಜೆ ಕೊಂಡುಕೋ, ಒಂದು ಪಟ್ಟಣಕರ್ ಫರ್ ಕ್ಯಾಪ್ ಮಾಡಿಸಿಕೋ, ಒಂದು ಜೊತೆ ಪೇಟೆಂಟ್ ಲೆದರ್ ಬೂಟುಗಳನ್ನು ಖರೀದಿಸು, ಒಂದು...' ಮಧ್ಯದಲ್ಲಿಯೇ ಅವರನ್ನು ತಡೆದ ಹೇಳಿದೆ! "ನನ್ನ ಖಾದೀ ವ್ರತವನ್ನು ಬಿಟ್ಟು ಕೂಡಲೆ? ಇದು ನನಿಂದಾಗದು." "ಖಾದಿ ಬಿಡು ಎಂದು ಯಾರು ಹೇಳಿದರಯ್ಯಾ? ನೀನೀಗ ನಮ್ಮ ಕಾಲೇಜು ಯೂನಿಯನ್ನಿನ ಸೆಕ್ರೆಟರಿ. ಪ್ರಸಂಗವಶಾತ್ ದೊಡ್ಡವರ ಪಕ್ಕದಲ್ಲಿ ಕುಳ್ಳಿರಬೇಕು ನೀನು. ಆ ಪ್ರಸಂಗಗಳಿಗಾಗಿ ಒಂದು ಸೆಟ್ ಈ ತೆರ ಇರಲಿ. ದೇವರು ಪದವಿ, ದುಡ್ಡು, ಎರಡನ್ನೂ ಕೊಟ್ಟಿರುವಾಗ ಸ್ಥಾನಕ್ಕೆ ತಕ್ಕಂತೆ ಇರಬೇಡವೆ?".

ನಾನೆಷ್ಟೇ ಪ್ರತಿಭಟಿಸಿದರೂ ಬಿಡಲಿಲ್ಲ ಅವರು. ಐದು ರೂಪಾಯಿಗಳಲ್ಲಿ ಒಂದು ಭರ್ಜರಿ ಉಣ್ಣೆಯ ಕೋಟು ಸಿದ್ಧವಾಯಿತು; ಎರಡೂವರೆ ರೂಪಾಯಿಗಳಿಗೆ ಎರಡು ಸಿಲ್ಕ್ ಶರ್ಟುಗಳು ತಯಾರಾದುವು; ಒಂದೂಕಾಲು ರೂಪಾಯಿಗೆ ಒಂದು ಫರ್‌ಕ್ಯಾಪ್, ನಾಲ್ಕು ರೂಪಾಯಿಗಳಿಗೆ ಬೆರಳಗಲ ರೇಷ್ಮೆ ಅಂಚಿನ ಮ್ಯಾಂಚೆಸ್ಟರ್ ಪಂಜೆ ಜೊತೆ, ನಾಲ್ಕು ರೂಪಾಯಿಗಳ ಒಂದು ಜೊತೆ ಪೇಟೆಂಟ್ ಲೆದರ್ ಬೂಟ್ಸ್ ದೊರೆತುವು. ನನಗೆ ಈ ವೇಷ ತೊಡಿಸಿ–'ಗ್ರ್ಯಾಂಡ್, ಗ್ರ್ಯಾಂಡ್' ಎಂದು ಕೈ ತಟ್ಟಿದರು ಗೆಳೆಯರು. ನನ್ನ ಖಾದಿ ವ್ರತ ಮುರಿದು ಬಿದ್ದಿತು. ಮತ್ತೆ ತಲೆಯೆತ್ತಲಿಲ್ಲ. ಮತ್ತೆ ಸ್ವಾತಂತ್ರ್ಯೋತ್ತರ ಯುಗದಲ್ಲಿ ಅದನ್ನು ಪುನರಾಂಭಿಸಬಹುದಾಗಿದ್ದಿತು. ಆದರೆ ಅದು ಕಪಟಾಚರಣೆಯೆನಿಸೀತೆಂದು ಹಾಗೆ ಮಾಡಲಿಲ್ಲ. ಈ ಒಂದು ಅಂಶದಲ್ಲಿ ನನ್ನ ಸಂಯಮ ಸಬಲವಾಗಿ ಉಳಿಯದಿದ್ದುದು ವ್ಯಥೆಯನ್ನಂತೂ ಉಂಟು ಮಾಡಿದೆ ನನಗೆ. ಮಿಂಚಿ ಹೋದ ಮಾತಿಗೆ ಚಿಂತಿಸಿ ಫಲವಿಲ್ಲ.



ನನ್ನೊಬ್ಬನ ಸಲುವಾಗಿ ಇಷ್ಟೆಲ್ಲ ಕೊಂಡಿದ್ದೇನೆ. ತಂದೆ ತಾಯಿ ಸೋದರ ಸೋದರಿಯರ ಸಲುವಾಗಿ ಏನಾದರೂ ಕೊಳ್ಳಬೇಕೆಂದು ಮತ್ತೆ ಪೇಟೆಗೆ ಹೋದ. ಅವ್ವನಿಗೊಂದು ನೂಲಿನ ಸೀರೆ, ತಂಗಿಯರಿಗೆ ರೇಷ್ಮೆ ಸೀರೆ, ತಂದೆಯವರಿಗೆ ನಿಲುವಂಗಿ, ಪಂಜೆ, ಮಾವನವರಿಗೆ ಸೆಲ್ಲೆ, ಇಬ್ಬರು ತಮ್ಮದಿರಿಗೆ ಸಿಲ್ಕ್ ಅಂಗಿಗಳು–ಇಷ್ಟೆಲ್ಲವನ್ನೂ ಕೊಂಡು, ಪ್ರಯಾಣ ವೆಚ್ಚ ಭರಿಸಿ ಮನೆ ಮುಟ್ಟಿದಾಗ ಇನ್ನೂ ನೂರೈವತ್ತು ರೂಪಾಯಿಗಳು ಉಳಿದಿದ್ದುವು! ತಂದೆಯವರಿಗೆ ಒಪ್ಪಿಸಿ ಪಾದ ಮುಟ್ಟಿ ನಮಸ್ಕರಿಸಿದೆ. ತಲೆಯೆತ್ತುತ್ತಿರುವಾಗ ಅವರ ಆನಂದಾಶ್ರುಗಳು ನನ್ನ ತಲೆಯ ಮೇಲೆ ಬಿದ್ದುವು! ಪುನೀತನಾದೆ, ಧನ್ಯನಾದೆ! ಅವ್ವನಂತೂ ನಾನು ಒಯ್ದಿದ್ದ ಬಟ್ಟೆಗಳನ್ನು ಊರವರಿಗೆಲ್ಲ ತೋರಿಸಿಕೊಂಡು ಬಂದಳು. ಊರವರೆಲ್ಲ 'ನೀನೇ ಪುಣ್ಯವಂತಿ; ಇನ್ನೂ ಓದುತ್ತಿರುವಾಗಲೇ ಹಣ ತರುವ ಮಗನನ್ನು ಪಡೆದೆ!' ಎಂದರಂತೆ. ಚಿ. ಅನ್ನದಾನಿ ಈಗ ಸಂಪೂರ್ಣ ಬದಲಾದ ವ್ಯಕ್ತಿಯಾಗಿದ್ದ. ಒಳ್ಳೆಯ ವಿದ್ಯಾರ್ಥಿಯೆಂದೆನಿಸಿದ್ದ. ನನ್ನಂತೆ ಯಾವ ಉಸಾಬರಿಗೂ ಹೋಗದೆ 'ನಾನಾಯಿತು ಓದಾಯಿತು' ಎಂಬ ಪ್ರವೃತ್ತಿ ಅವನದಲ್ಲ. ಗೆಳೆಯರ ಗುಂಪು ಕಟ್ಟಿಕೊಂಡು ಊರಲ್ಲಿ ಮಲೆತದರ ಮೇಲೆ ಎರಗುತ್ತಿದ್ದ. ಈ ನ್ಯಾಯನಿಷ್ಠುರ ನೀತಿ ಇಂದಿಗೂ ಅವನಲ್ಲಿ ಉಳಿದಿದೆ. ಮಾತಿನಲ್ಲಿ ಒರಟುತನವಿದ್ದರೂ ಮನದಲ್ಲಿ ಉರುಟುತನವಿಲ್ಲ. ಸತ್ಯವಾದಿ, ಸ್ನೇಹಪರ, ಸಜ್ಜನ, ಸಾಹಸಿ ನನ್ನ ತಮ್ಮ. ತಂಗಿ ವೀರಾಂಬೆಯ ಮದುವೆ ಕೊಪ್ಪಳದ ಸಿದ್ನೇಕೊಪ್ಪ ಬಸವಯ್ಯನವರ ಪುತ್ರ ಕಲ್ಯಾಣಯ್ಯನವರೊಡನೆ ಆಗಿದ್ದಿತು. ಅವರು ವ್ಯಾಪಾರಿಗಳು, ಸ್ಥಿತಿವಂತರು, ಸಜ್ಜನರು, ಸದಾಚಾರಿಗಳು.

ಒಂದು ಹಳ್ಳಿಯ ಮದುವೆಗೆ ಹೋಗಿದ್ದೆ. ಅಲ್ಲಿ ಎಲ್ಲರೂ ನನ್ನ ಭರ್ಜರಿ ಪೋಷಾಕನ್ನು ನೋಡಿ ನಾನೇ ವರನೆಂದು ಭ್ರಮಿಸಿದರು. ಪಾಪ, ನಿಜವಾದ ವರನಿಗೆ ಹೇಗೆ ಹೇಗೊ ಎನಿಸಿತು. ನಾನು ಕೂಡಲೇ ಆ ಭಾರೀ ಬಟ್ಟೆಗಳನ್ನು ಬಿಟ್ಟು ಸಾದಾವೇಷ ತೊಟ್ಟೆ. ಶ್ರೀ ಚೆನ್ನವೀರಸ್ವಾಮಿ ಇನಾಮದಾರರು ಶ್ರೀ ಸದಾಶಿವಣ್ಣ ಒಡೆಯರರೊಡನೆ ಕುಕ್ಕನೂರಿಗೆ ಬಂದು ಹೋದುದೊಂದು ಸ್ಮರಣೀಯ ಘಟನೆ. ಆಗ ಅಂಕುರಿಸಿದ ನನ್ನ ಸದಾಶಿವಣ್ಣನವರ ಸ್ನೇಹ ಮಧುರದಿಂದ ಮಧುರತರವಾಗುತ್ತಲೇ ಬೆಳೆದು ಬಂದಿದೆ.

ಕಲಬುರಗಿಯ ಕಾಲೇಜಿನಲ್ಲಿ ಎರಡನೆಯ ವರ್ಷದ ವೈಶಿಷ್ಟ್ಯವೆಂದರೆ ಇಂಟರ್ ಪರೀಕ್ಷೆಯಲ್ಲಿಯೂ ಇಂಗ್ಲೀಷಿನಲ್ಲಿ ನಾನು ಮತ್ತೆ ಪ್ರಥಮ ಸ್ಥಾನ ಪಡೆವೆನೆಂಬ ಸಾರ್ವತ್ರಿಕ ನಿರೀಕ್ಷೆ. ನಾನೂ ಎಲ್ಲರ ನಿರೀಕ್ಷೆಗೆ ಅನುಗುಣವಾಗಿ ದೇಹದ ದಣಿವನ್ನು ಲೆಕ್ಕಿಸದೆ ವ್ಯಾಸಂಗ ನಡೆಸಿದೆ. ತನ್ನನ್ನು ಇಷ್ಟೊಂದು ನಿರ್ಲಕ್ಷಿಸಿದನಿವ–ಎಂದು

ದೇಹಕ್ಕೆ ರೊಚ್ಚು ಬಂದಿತೋ ಏನೋ-ಐನ್ ಸಮಯಕ್ಕೆ ಕೈಕೊಟ್ಟಿತು ಕಾಯ! ವಾರ್ಷಿಕ ಪರೀಕ್ಷೆಗೆ ಪ್ರವೇಶ ಶುಲ್ಕ ತುಂಬಿ ಮನವಿ ಪತ್ರ ಕಳಿಸಿದ ಮೇಲೂ ಒಂದೆರಡು ವಾರ ಚೆನ್ನಾಗಿಯೇ ಇದ್ದೆ. ತದನಂತರ ಇದ್ದಕ್ಕಿದ್ದಂತೆ ಜ್ವರ ಬಂದು ಮಲಗಿದೆ. ಪ್ರಿನ್ಸಿಪಾಲ ಸಾಹೇಬರು ಹೌಹಾರಿ ಹಾಸ್ಟೆಲಿಗೇ ಬಂದು ಬಿಟ್ಟರು! ಹೊಟ್ಟೆಯ ಮಗ ಹಫೀಜರಿಗೆ ಜ್ವರ ಬಂದಿದ್ದರೂ ಅವರಿಷ್ಟು ಗಾಬರಿಯಾಗುತ್ತಿದ್ದರೋ ಇಲ್ಲವೋ ಹೇಳಲಾರೆ. ಸಂಗಡ ಇಬ್ಬರು ಡಾಕ್ಟರರನ್ನು ಕರೆದುಕೊಂಡೇ ಬಂದಿದ್ದರು. ಅವರಿಗೆ ಕಟ್ಟಪ್ಪಣೆ ವಿಧಿಸಿದರು: "ಏನಾದರೂ ಮಾಡಿ ಒಂದು ವಾರದೊಳಗಾಗಿ ಇವನ ಕಾಯಿಲೆ ಕಳೆಯಲೇ ಬೇಕು. ಇವನು ಇನ್ನೊಂದು ತುರಾಯಿ ತರುವವನಿದ್ದಾನೆ ನನಗೆ, ನನ್ನ ಕಾಲೇಜಿಗೆ." ಡಾಕ್ಟರರಿಬ್ಬರೂ ಸರ್ವಪ್ರಯತ್ನ ಮಾಡುವುದಾಗಿ ಆಶ್ವಾಸನವಿತ್ತರು. ಪ್ರಿನ್ಸಿಪಾಲರು ನನ್ನ ತಲೆಯ ಬದಿಗೆ ಹಣ್ಣಿನ ಬುಟ್ಟಿಯಿರಿಸಿ ಹೋದರು. ಅವರು ಹೋದ ಹಾದಿಯನ್ನೇ ನೋಡುತ್ತ ಉದ್ಗರಿಸಿದೆ; 'ಯಾವ ಜನ್ಮದಲ್ಲಿ ಏನು ಪುಣ್ಯ ಮಾಡಿದ್ದೇನೋ-ಇವರ ದಯಾದೃಷ್ಟಿಗೆ ಬೀಳಲು!'

ಜ್ವರ ಎಂಥ ಗಳಿಗೆಯಲ್ಲಿ ಬಂದಿತ್ತೋ, ಇಳಿಯಲೇ ಇಲ್ಲ; ಇಬ್ಬರು ಡಾಕ್ಟರರು ಸಾಲರೆಂಬಂತೆ ಮೂರನೆಯ ಡಾಕ್ಟರರೊಬ್ಬರನ್ನು ಕರೆದು ತಂದರು ಪ್ರಿನ್ಸಿಪಾಲ ಸಾಹೇಬರು. ಮೂವರು ನನ್ನ ಪರೀಕ್ಷೆ ಮಾಡಿದ್ದೇ ಮಾಡಿದ್ದು; ಔಷಧ ಬದಲಿಸಿದ್ದೇ ಬದಲಿಸಿದ್ದು; ಚುಚ್ಚುಮದ್ದು ಕೊಟ್ಟದ್ದೇ ಕೊಟ್ಟದ್ದು! ಅಧಿಕ ಚಿಕಿತ್ಸೆಯ ಅನಾಹುತಕ್ಕೆ ಉದಾಹರಣೆಯಾದೆ ನಾನು! ದಿನದಿನಕ್ಕೆ ನಿಶ್ಶಕ್ತನಾದೆ, ನಿರಾಶನಾದೆ ನಾನು. ನನ್ನ ನಿರಾಶೆಗಿಂತ ನನ್ನ ಪ್ರಿನ್ಸಿಪಾಲರ, ಪ್ರಾಧ್ಯಾಪಕರ ನಿರಾಶೆ ದೊಡ್ಡದು. ಅವರು ದಿನಕ್ಕೊಮ್ಮೆಯಾದರೂ ಬಂದು ನೋಡಿಕೊಂಡು ಹೋಗುತ್ತಿದ್ದರು. ಇಂಥ ವಿಷಮ ಸನ್ನಿವೇಶದಲ್ಲಿಯೂ ನನಗೆ ಹೆಣ್ಣು ಕೊಡಲು ಬಂದಿದ್ದರು ಇಬ್ಬರು! 'ಮಾನವ ಜೀವನ ಎಷ್ಟು ವಿಚಿತ್ರವಾದುದು' ಎಂದು ಗೇನಿಸಿ ಒಳಗೊಳಗೇ ನಕ್ಕಿದ್ದೆ. ನನ್ನ ಭವಿತವ್ಯ ಅನಿಶ್ಚಿತತೆಯ ತಿರುಗುಯ್ಯಾಲೆಯಲ್ಲಿ ತಿರ್ರನೆ ತಿರುಗುತ್ತಿದ್ದರೇನು, ಅವರ ಪಾಲಿನ ಕರ್ತವ್ಯವನ್ನವರು ಮಾಡಲು ಬಂದಿದ್ದಾರೆ-ಎಂದು ಭಾವಿಸಿ ಹಾಸಿಗೆಯೆಂದೆದ್ದು ಉಪಚರಿಸಿ ಕಳಿಸಿಕೊಟ್ಟೆ. ಅವರು, 'ಬೇಗ ನಿಮಗೆ ಗುಣವಾಗಲಿ; ನಿಮಗೆ ನೆಟ್ಟಗಾದ ಮೇಲೆ ಬಂದು ಮಾತುಕತೆಗಳನ್ನು ಮುಂದುವರಿಸುವೆವು' ಎಂದು ಹೇಳಿ ಹೋದರು. ಅವರ ಹುಡುಗಿಗಾಗಿ ನಾನು ಬೇಗ ಗುಣವಾಗಬೇಕು, ಅವರ ದೃಷ್ಟಿಯಲ್ಲಿ; ಕಾಲೇಜಿಗೆ ಇನ್ನೊಂದು ತುರಾಯಿ ತರಲು ನಾನು ಬೇಗ ಗುಣ ಹೊಂದಬೇಕು-ಪ್ರಿನ್ಸಿಪಾಲರ ದೃಷ್ಟಿಯಲ್ಲಿ; ಬೇಗ ಪದವೀಧರನಾಗಿ ಮನೆಯ ಭಾರ ಹೊರಲು ಗುಣವಾಗಿರಬೇಕು ತಂದೆತಾಯಿಯರ ದೃಷ್ಟಿಯಲ್ಲಿ-ಎಲ್ಲರ



ಪ್ರೀತಿಯಲ್ಲಿಯೂ ಸ್ವಹಿತಾಸಕ್ತಿಯ ಅಂಶವೊಂದು ಇದ್ದೇ ಇರುತ್ತದೆ. ಯಜ್ಞವಲ್ಕ್ಯರಂತೂ ತಂದೆ, ತಾಯಿ, ಬಂಧು, ಬಳಗ, ಸತಿ, ಸುತ, ಹಿತರೆಲ್ಲ ಸ್ವಂತದ ಸಲುವಾಗಿ ಪ್ರಿಯರಾಗುವರೇ ಹೊರತು ಅವರು ಅವರ ಸಲುವಾಗಿ ಯಾರೂ ಪ್ರಿಯರಾಗುವುದಿಲ್ಲವೆಂದು ಸಾರಿದರು. ಇದರಿಂದ ರೇಗಿ, 'ಹೆಂಡರು ಮಕ್ಕಳು ಹೆರವರು ಪ್ರಾಣಿ!' ಎಂದು ತತ್ತ್ವಪದ ಹಾಡುತ್ತ ತಂಬೂರಿ ಹಿಡಿಯಬೇಕಿಲ್ಲ, ಮನುಜಪ್ರೀತಿ ಸ್ವಹಿತಾ ಸಕ್ತಿ ಮಿಶ್ರಿತವಾದರೂ ಅದು ನನ್ನ ಹಿತವನ್ನೂ ಸಾಧಿಸಲು ಸಹಾಯಕವಾಗುವುದರಿಂದ ಅದು ಪವಿತ್ರವಾದುವೇ. ಸಂಪೂರ್ಣ ದೋಷರಹಿತವಾದುದು ಯಾವುದಿದೆ ಈ ವಿಶ್ವದಲ್ಲಿ? 'ಏಕೋ ಹಿ ದೋಷೋ ಗುಣ ಸನ್ನಿಪಾತೇ ನಿಯಜ್ಜತೀಂದೋರಿವ,' ಎಂಬ ಸೂತ್ರವನ್ನನುಸರಿಸಿ, 'ಸದೋಷಮಪಿ ನ ತ್ಯಜೀತ್' ಎಂಬ ಗೀತೋಕ್ತಿಯನ್ನು ಗಮನಿಸಿ ಅಲ್ಪದೋಷ-ಸಂಯುಕ್ತ ಮಾನವ ಪ್ರೀತಿಯನ್ನು ಗೌರವಿಸಿ ಸ್ವೀಕರಿಸುವುದೇ ಸೂಕ್ತ.

## ಹಗಲಲ್ಲೇ ಕತ್ತಲೆ :

ಪರೀಕ್ಷೆಗಾಗಿ ಹೈದರಾಬಾದಿಗೆ ಹೊರಡುವ ದಿನ ಬಂದರೂ ನನಗೆ ಆರೋಗ್ಯ ಭಾಗ್ಯ ಲಭಿಸಲಿಲ್ಲ. ಪ್ರಿನ್ಸಿಪಾಲ ಸಾಹೇಬರು ನನಗೆ ಸಲ್ಲಬೇಕಾಗಿದ್ದ ವಿದ್ಯಾರ್ಥಿ ವೇತನ-ಶೇಷವನ್ನು ತಾವೇ ತರಿಸಿ ನನ್ನ ಕಿಸೆಯಲ್ಲಿರಿಸಿ, "ಮುಂದಿನ ವರ್ಷ ಕಾಲೇಜು ತೆರೆಯುತ್ತಲೇ ಬಂದು ಸೇರು; ವೆಚ್ಚಕ್ಕಾಗಿ ಯೋಚಿಸಬೇಡ; ನಾನಿದ್ದೇನೆ" ಎಂದು ಧೈರ್ಯ ಹೇಳಿ ಕಳಿಸಿದರು. ನನಗೇನೋ ಅನುಮಾನ-ಇನ್ನು ಈ ಕಾಲೇಜಿನ ಮೆಟ್ಟಲು ಹತ್ತುವ ಭಾಗ್ಯ ನನಗಿದೆಯೆಂಬ ಬಗ್ಗೆ. ಆಗ ಕೈಗೆ ಬಂದ ವಿದ್ಯಾರ್ಥಿ ವೇತನವೇ ಕೊನೆಯದು; ಮತ್ತೆ ಅದಕ್ಕೆ ಆಸೆ ಮಾಡುವಂತಿಲ್ಲ. ಒಂದು ವೇಳೆ ನಾನು ಮತ್ತೆ ನಿರೋಗಿಯಾದರೂ ಮುಂದೆ ಓದುವೆನೆಂದು ಹೇಗೆ ಹೇಳಬೇಕು? ಇಲ್ಲಿಗೇ ನನ್ನ ಓದು ಮುಗಿದರೂ ಮುಗಿಯಬಹುದು. ಹೀಗೆ ಏನೇನೋ ಸಂಕಲ್ಪ ವಿಕಲ್ಪಗಳ ಚಕ್ರತೀರ್ಥದಲ್ಲಿ ತಿರುಗುತ್ತಲೇ ದ್ಯಾಂಪುರ ಸೇರಿದೆ. ತಂದೆ-ತಾಯಿಗಳು ಅದಾಗಲೇ ಹಿಂಡಿ ಹಿಪ್ಪೆಯಾಗಿದ್ದರು. ಅವರ ಮುಖಗಳನ್ನು, ತಂಗಿ ತಮ್ಮಂದಿರ ಮುಖಗಳನ್ನು ನೋಡಿ ಅಳು ಬಂದಿತು ನನಗೆ. ಎಂದೂ ಅಳದಿದ್ದ ನನ್ನ ಅಳು ಕಂಡು ಅವರೂ ಅತ್ತರು! ಹಗಲಿನಲ್ಲಿಯೇ ಕತ್ತಲೆ ಕವಿದ ಅನುಭವ ನಮಗೆಲ್ಲ!

ಅವರಿವರ ಚಿಕಿತ್ಸೆ ಆರಂಭವಾಯಿತು. ಕುಕ್ಕನೂರಿನ ಆಗಿನ ಧನ್ವಂತರಿ ಡಾ. ರಾಮರಾಯರ ಚಿಕಿತ್ಸೆ, ಅಪ್ಪನಗೌಡರ ಚಿಕಿತ್ಸೆ, ಇನ್ನೂ ಬೇರೆ ಬೇರೆ ಅಳಲೆಕಾಯಿ ಪಂಡಿತರ ಚಿಕಿತ್ಸೆ. ಏನೂ ಪ್ರಯೋಜನವಾಗಲಿಲ್ಲ. ಗದಗಿಗೆ ಕರೆದೊಯ್ದರು. ಡಾ. ಕಲ್ಲೋಳಗಿಯವರ ಔಷಧೋಪಚಾರ ಪ್ರಾರಂಭವಾಯಿತು. ಸ್ವಲ್ಪ

ಗುಣವಾದಂತೆನಿಸಿದರೂ ಜ್ವರ ನಿಲ್ಲಲಿಲ್ಲ. ಗದಗಿಗೆ ಹೋಗುವುದು; ಅವರಿಗೆ ನನ್ನನ್ನು ತೋರಿಸುವುದು; ಅವರು ಹೇಳಿದ ಔಷಧ ಕೊಳ್ಳುವುದು; ಮನೆಗೆ ಬಂದು ಹೊತ್ತಿಗೆ ಸರಿಯಾಗಿ ಔಷಧ ತೆಗೆದುಕೊಳ್ಳುತ್ತ, ಮೂರು ಘಂಟೆಗಳಿಗೊಮ್ಮೆ ಜ್ವರಮಾಪಕ ಯಂತ್ರವನ್ನು ಬಾಯಲ್ಲಿರಿಸಿ ತೆಗೆದು ಜ್ವರ ನೋಡಿಕೊಳ್ಳುತ್ತ, ಜ್ವರದ ಚಾರ್ಟ್ ಬರೆಯುತ್ತಾ ಕಾಲ ತಳ್ಳುವುದು, ಒಂದು ತಿಂಗಳು ಹೀಗೆ ಕಳೆದರೂ ಜ್ವರ ನಿಲ್ಲದಿರಲು ಡಾಕ್ಟರರಲ್ಲಿ ನನಗೆ ಕ್ಷಯ ರೋಗ ಬಂದಿದೆಯೇನೋ ಎಂಬ ಅನುಮಾನ ಉದಿಸಿತು. ಆಗ ಬೆಳಗಾವಿಯಲ್ಲಿ ಮಾತ್ರ ಕ್ಷ-ಕಿರಣದ ಯಂತ್ರವಿದ್ದಿತು. ಅದರ ಒಡೆಯ ಡಾ. ಗಿಂಡೆಯವರಿಗೆ ಕಾಗದ ಬರೆದುಕೊಟ್ಟು ಎಕ್ಸ್-ರೇ ತೆಗೆಸಿಕೊಂಡು ಬರಲು ಬೆಳಗಾವಿಗೆ ಕಳಿಸಿದರು ನನ್ನನ್ನು. ಹೋಗಿ ತೆಗೆಸಿಕೊಂಡು ಬಂದೆ. ಅದು ಯಾವ ನಿರ್ಣಯಕ್ಕೆ ಬರಲೂ ಸಹಾಯ ಮಾಡಲಿಲ್ಲ. ಮತ್ತೆ ಎರಡು ವಾರ ಅವರಲ್ಲಿಯೇ ಅದೇ ವಿಧವಾದ ಚಿಕಿತ್ಸೆ ನಡೆಯಿತು. ಶರೀರ ಶಾಖ $99^0$ ಗೇರುವುದು ನಿಲ್ಲಲಿಲ್ಲ, ನನ್ನ ಸ್ಥೈರಣೆ ಸಮತೆಗಳು ನಷ್ಟವಾಗಿದ್ದುವು. ಹೀಗೆಯೇ ಇದ್ದು ತಂದೆತಾಯಿಗಳನ್ನು ಸಂಪೂರ್ಣ ನಿರ್ಧನಿಕರನ್ನಾಗಿ ಮಾಡುವುದಕ್ಕಿಂತ ಕೊನೆಯ ದೈವ ಪರೀಕ್ಷೆಗೆ ಸಿದ್ಧನಾಗಬೇಕೆಂದೆನಿಸಿತು. ಎರಡು ದಿನ ಆಳವಾದ ವಿಚಾರ ಮಾಡಿ ನನ್ನಲ್ಲಿ ಉಳಿದಿದ್ದ ಕೊನೆಯ ಐವತ್ತು ರೂಪಾಯಿಗಳೊಡನೆ ಮನೆ ಬಿಟ್ಟೆ!

ಯಾರಿಗೂ ಹೇಳದೆ ಊರನ್ನು ತೊರೆದು, ಉಗಿ ಬಂಡಿಯೇರಿ ಮದನಪಲ್ಲಿ ತಲುಪಿದೆ. ಈ ರೋಗ ಅಲ್ಲಿ ಗುಣವಾದರೆ ಆಗಬೇಕು, ಇಲ್ಲದಿದ್ದರೆ ಅಲ್ಲಿಯೇ ಜೀವ ಬಿಡಬೇಕು-ಎಂಬ ತೀರ್ಮಾನಕ್ಕೆ ಬಂದಿದ್ದೆ. ಐವತ್ತು ರೂಪಾಯಿಗಳಲ್ಲಿ ನಾಲ್ವತ್ತು ಉಳಿದಿದ್ದವು. ಇಷ್ಟು ಸ್ವಲ್ಪ ಹಣದಲ್ಲಿ ಇಂಥ ರಾಜರೋಗ ವಾಸಿಯಾಗುವುದು ಸಾಧ್ಯವೆ? ಇಲ್ಲ! ಆದರೆ ಇನ್ನೇನು ಮಾಡುವುದು ಸಾಧ್ಯ? 'ಕೊಲ್ಲು, ಕಾಯಿ-ನಿಮ್ಮ ಧರ್ಮ' ಎಂದು ದೇವರಲ್ಲಿ ಮೊರೆ ಹೊಕ್ಕಿದ್ದೆ. ಶರಣ ಬಸವೇಶ್ವರರನ್ನು ಸ್ಮರಿಸಿ ಅಲ್ಲಿಯ ಮುಖ್ಯ ಡಾಕ್ಟರ್ ಬೆಂಜಾಮಿನ್ ಮುಲ್ಲರ್ ಸಾಹೇಬರೆದುರು ನಿಂತು ಗದಗಿನ ಡಾಕ್ಟರರ ನಿದಾನ-ಅನುಪಾನ ಪತ್ರಿಕೆಯನ್ನೂ, ಬೆಳಗಾವಿಯ ಕ್ಷ-ಕಿರಣ ವರದಿಯನ್ನೂ ಅವರ ಕೈಗಿತ್ತೆ. ಪರಮ ದಯಾಳುಗಳು ಅವರು. ಎಲ್ಲ ತರದ ಪರೀಕ್ಷೆಗಳಿಗಾಗಿ ಅಜ್ಞೆಯಿತ್ತರು. ಪ್ರಾರಂಭವಾದುವು ಪರೀಕ್ಷೆಗಳು-ಮಲ, ಮೂತ್ರ, ರಕ್ತ, ಕಫ ಪರೀಕ್ಷೆಗಳು, ಎಕ್ಸ್-ರೇ-ಎಲ್ಲ ಪರೀಕ್ಷೆಗಳು ಮುಗಿದುವು. ಅವುಗಳ ವರದಿಗಳನ್ನು ಹಿಡಿದುಕೊಂಡು ಮಧ್ಯಾಹ್ನ ಮತ್ತೆ ಮಲ್ಲರ್ ಸಾಹೇಬರನ್ನು ಕಂಡೆ. ಅವರು ವರದಿಗಳನ್ನೆಲ್ಲ ಪರೀಕ್ಷಿಸಿ, ನನ್ನನ್ನು ಮಲಗಿಸಿ ನನ್ನ ಸಮಗ್ರ ದೇಹದ ಪರೀಕ್ಷೆ ನಡೆಸಿದರು. ನಾನಂತೂ ಜೀವದಾಶೆಯನ್ನೇ ಬಿಟ್ಟು ಏನಾಗುವುದೋ ಆಗಲಿ, ಆಗುವುದೆಲ್ಲ ಆಗಿ ಹೋಗಲಿ-ಎಂಬ ಸಂಪೂರ್ಣ ಶರಣಾಗತಿಗೆ ಸಂದಿದ್ದೆ!



ಎಲ್ಲ ಮುಗಿದ ಮೇಲೆ ಮುಲ್ಲರ್ ಸಾಹೇಬರ ಮುಖ ಅರಳಿತು. ನನಗೆ ವಿಸ್ಮಯ. ಕರೆದು ಹೇಳಿದರು; 'There is nothing wrong with you my young boy! Go home and be happy. Don't show your hand to any doctor now!" ನನಗೆ ಪುನರ್ಜನ್ಮ ಪಡೆದ ಅನುಭವ! "But, Sir, what about my persistent fever?" ಎಂದು ಕೇಳಿಯೇಬಿಟ್ಟೆ. "Where is fever? you are free from everything. You are perfectly healthy" ಎಂದು ಹೇಳಿಬಿಟ್ಟರು! ಅವರಿಗೆ ತಲೆಬಾಗಿ ವಂದಿಸಿ, ಪರೀಕ್ಷೆಗಳ ಬಿಲ್ಲು ಕೊಟ್ಟು ಹೊರಟೆ. ಹತ್ತಿರ ಹದಿನೈದು ರೂಪಾಯಿಗಳು ಉಳಿದಿದ್ದುವು. ಊರು ಬಿಟ್ಟ ಮೇಲೆ ಊಟವನ್ನೇ ಮಾಡಿರಲಿಲ್ಲ. ಹೇಗೂ ಬಿದ್ದ ಹೋಗಲಿದೆ ಈ ದೇಹ, ಇದಕ್ಕೆ ಬೀಳುವ ಮುನ್ನ ಶುದ್ಧಿ ದೊರೆಯಲಿ ಎಂದು ಊಟ ತೊರೆದಿದ್ದೆ. ಅಲ್ಲಿಯವರೆಗೆ ಹಸಿವೆಯು ಕಾಡಿರಲಿಲ್ಲ. ಮತ್ತೆ ಬದುಕಿದೆನೆಂಬ ಭರವಸೆ ಹುಟ್ಟುತ್ತಲೇ ಹಸಿವೆ ಜಾಗೃತವಾಯಿತು. ನೀರಡಿಕೆ ಜಾಗೃತವಾಯಿತು. ಎದುರಿಗೆ ಕಂಡ ಒಂದು ನಾಯರ್ ಹೋಟಲು ಹೊಕ್ಕೆ. ಅಲ್ಲಿ ಅನ್ನ ಸಾರು ನೀಡಿದರು. ಸಾರಿನಲ್ಲಿ ಮೀನು ತೇಲುತ್ತಿತ್ತು! ಮೀನು ನೋಡಿ ಊಟ ಮಾಡಬಾರದೆನಿಸಿತು. ಅಷ್ಟರಲ್ಲಿ ಹಣ ಕೊಟ್ಟಾಗಿತ್ತು. ಮತ್ತೊಂದೆಡೆ ಊಟ ಮಾಡಿ ಬಿಲ್ಲು ತೆತ್ತರೆ ಊರು ಸೇರಲು ಹಣದ ಕೊರತೆ ತಲೆದೋರುತ್ತಿತ್ತು. ಅಪದ್ಧರ್ಮವನ್ನನುಸರಿಸಿ ಮೀನು ತೆಗೆದೊಗೆದು ಅದೇ ಅನ್ನ ಸಾರು ಹೊಟ್ಟೆಯಲ್ಲಿ ತುಂಬಿಕೊಂಡೆ. ಅದೇ ಸಮಯಕ್ಕೆ ಒಂದು ಉಗಿಬಂಡಿ ಬರುವುದಿತ್ತು. ನಿಲ್ದಾಣಕ್ಕೆ ನಾಗಾಲೋಟದಿಂದ ಓಡಿ ಹೋಗಿ ಟಿಕೇಟುಕೊಂಡು ಉಗಿಬಂಡಿ ಏರಿದೆ.

### ಬಡವನಿಗೆ ನೆರವಾಗುವವ ದೇವನೊಬ್ಬನೇ :

ಉಗಿಬಂಡಿಯಲ್ಲಿ ಶಿವಮೊಗ್ಗದ ಅಡಿಕೆ ಏಜೆಂಟರ, ವಾರಣಾಸಿಯ ಬನಾರಸಿ ಸೀರೆಗಳ ಏಜೆಂಟರ ಪರಿಚಯವಾಯಿತು. ಹಗುರಾಗಿ ಹೊತ್ತುಗಳೆಯಲು ಅನುಕೂಲವಾಯಿತು. ಬನಾರಸೀ ಸೀರೆಯ ಏಜೆಂಟ್ "ನಿಮ್ಮ ಪ್ರಿಯತಮೆಗಾಗಿ ಒಂದು ಒಳ್ಳೆಯ ಬನಾರಸೀ ಸೀರೆ ಕೊಳ್ಳುವುದಿಲ್ಲವೆ?" ಎಂದು ಕೇಳಿದ. ಮನಸ್ಸಿನಲ್ಲಿಯೇ ನಕ್ಕೆ; ಜೇಬಿನಲ್ಲಿದ್ದ ಬಿಡುಕಾಸುಗಳೂ ನಕ್ಕುವು. ಪುಣ್ಯಕ್ಕೆ ಅಡಿಕೆಯ ಏಜೆಂಟ್, 'ನಿಮ್ಮ ನಲ್ಲೆಗೆ ಒಂದು ಮಣ ಹಾಲಡಿಕೆ ಒಯ್ಯಿರಿ' ಎನ್ನಲಿಲ್ಲ! ಇಲ್ಲದ ನಲ್ಲೆಗೆ ಕೊಳ್ಳದ ಸೀರೆ, ಅದೂ ಝುಗಝುಗಿಸುವ ಬನಾರಸೀ ಸೀರೆ! ಬಹುತ ಅಚ್ಛಾ! ದಾರಿಯಲ್ಲಿ ನನ್ನ ಊಟದ ವೆಚ್ಚವನ್ನೂ ಅವರೇ ವಹಿಸಿದರು! ಸಮಯಕ್ಕೆ ಸರಿಯಾಗಿ ಸಹಾಯಕರನ್ನು ಒದಗಿಸುತ್ತಾನೆ ಶಿವ ಎಂದುಕೊಂಡೆ. ಅವರು ಊಟ ಮಾಡಿಸದಿದ್ದರೆ ಉಪವಾಸ ಮಾಡಿಯೇ ಊರು ಮುಟ್ಟಬೇಕಿತ್ತು. ಬನ್ನಿಕೊಪ್ಪ

ನಿಲ್ದಾಣ ಬಂದಿತು. ಉಗಿಬಂಡಿಯಿಂದಿಳಿದು ಬನ್ನಿಕಟ್ಟಿ ಬಸ್ ಹುಡುಕಿಕೊಂಡು ಹೋದೆ. ಬಸ್ಸು ಮುಷ್ಕರ ಹೂಡಿತ್ತು. ಚಾಲಕ ಅದರ ಸೆಡವು ಸರಿಪಡಿಸಲು ಚಾಲಾಕಿ ನಡೆಸಿದ್ದ. ಇನ್ನೇನು ಮಾಡುವುದು? ಉಳಿದ ಪ್ರವಾಸಿಗರೊಡನೆ ಚಹಾ ಬಿಗಿದು ಬಂದೆ; ಅತ್ತಿತ್ತ ಸುತ್ತಿದೆ. ಮನಸ್ಸೆಲ್ಲ ದ್ಯಾಂಪುರದಲ್ಲಿ. ಯಾವಾಗ ಮನೆ ಮುಟ್ಟುವೆನೋ, ನನ್ನ ಬಗ್ಗೆ ಚಿಂತಾಕ್ರಾಂತರಾಗಿರಬಹುದಾದ ತಂದೆ ತಾಯಿಗಳೆದೆಗೆ ಯಾವಾಗ ತಂಪನ್ನು ತಳೆವೆನೋ–ಎಂದು ಆತುರನಾಗಿದ್ದ, ಕಾತರನಾಗಿದ್ದ ನನಗೆ ಆ ಬಸ್ಸಿನ ಅಸಹಕಾರ ಚಳವಳಿ ಅಸಹನೀಯವಾಗಿದ್ದಿತು! ಅದರದೇನು ತಪ್ಪು ಇದರಲ್ಲಿ. ಉಪಯೋಗಿಸುವವರು ನಿಷ್ಕರುಣೆಯಿಂದ ಉಪಯೋಗಿಸಿದರೆ ಮನುಷ್ಯನೇನು ಯಂತ್ರವೇನು–ಮುಗ್ಗರಿಸಲೇ ಬೇಕಲ್ಲವೆ–ಎಂದೆನಿಸಿತು ಮರುಚಣದಲ್ಲಿ, ಬಸ್ ರಿಪೇರಿಯಾಗುವವರೆಗೆ ಒಬ್ಬನೇ ಆಲೋಚಿಸಿದೆ–"ಎಂಥ ಹುಚ್ಚು ಸಾಹಸ ನನ್ನದು! ನನಗೆ ಆ ರೋಗವಿದ್ದುದೇ ನಿಜವಾಗಿದ್ದರೆ ಮುಂದಾವ ಗತಿಯೊದಗುತ್ತಿತ್ತು ನನಗೆ? ತಂದೆ ತಾಯಿಗಳ ಗತಿಯೇನಾಗುತ್ತಿತ್ತು? ಇಬ್ಬರು ತಮ್ಮದಿರ, ಒಬ್ಬ ತಂಗಿಯ ಗತಿಯೇನಾಗುತ್ತಿತ್ತು? ಎಂಥ ತಿಳಿಗೇಡಿತನದ, ದುಡುಕಿನ, ದುಸ್ಸಾಹದ ತೀರ್ಮಾನ ಕೈಕೊಂಡಿದ್ದೆ? ದೇವರು ಪಾರು ಮಾಡಿದ, ಎಲ್ಲ ಸರಿಯಾಯಿತು. ಇಲ್ಲದಿದ್ದರೆ?...ತುಸು ಹೊತ್ತು ಎದೆ ನಡುಗಿತು! ಆಮೇಲೆ ಅಂದುಕೊಂಡೆ, 'ಉಳ್ಳವರಿಗೆ ನೆರವಾಗುವವರಿಗೆ ಬರವಿಲ್ಲ. ನನ್ನಂಥ ಬಡವನಿಗೆ ನೆರವಾಗುವವ ದೇವನೊಬ್ಬನೇ!"

ಬಸ್ ಹೊರಟಿತು; ಊರು ಬಂದಿತು; ಮನೆಗೆ ಧಾವಿಸಿದೆ. ಎಂಥ ಸಂತಸ ಎಲ್ಲರಿಗೆ! ಎಲ್ಲವನ್ನೂ ಹೇಳಿದಾಗ ನನ್ನ ಧೈರ್ಯವನ್ನು ಹೊಗಳಿದರು ಕೆಲವರು; ಬುದ್ಧಿಗೇಡಿಯೆಂದು ಬೈದರು ಕೆಲವರು. ನಿರೋಗಿಯೆಂಬ ನಿರ್ಣಯ ತಂದುದಕ್ಕಾಗಿ ಹಿಗ್ಗಿದರು ಎಲ್ಲರೂ.

**ಹಂಪೆ ಪ್ರವಾಸ :**

ನನ್ನ ಉತ್ಸಾಹ ಹಿಂದಿರುಗಿದ್ದಿತು. ಆದರೆ ಮುಂದೇನು ಮಾಡುವುದೆಂಬುದು ಹೊಳೆಯಲಿಲ್ಲ. ಆಗ ಕಾಲೇಜಿನ ಬೇಸಿಗೆಯ ರಜೆ ಮುಗಿದು ಕಾಲೇಜಿನ ಹೊಸ ವರ್ಷ ಪ್ರಾರಂಭವಾಗಿ ಹೋಗಿದ್ದಿತು. ಕಾಲೇಜಿಗೆ ಸೇರುವ ಕಾಲ ಮೀರಿದ್ದಿತು. ಪರೀಕ್ಷೆಯ ಶುಲ್ಕ ಕಟ್ಟಿ ಫಾರ್ಮು ತುಂಬಿ ಕಳಿಸಿದ್ದೆನಾಗಿ ಮನೆಯಲ್ಲಿಯೇ ಅಭ್ಯಾಸ ಮಾಡಿ ಖಾಸಗಿಯಾಗಿ ಪರೀಕ್ಷೆ ಕಟ್ಟುವ ಅವಕಾಶ ನನಗಿತ್ತು. ಅಂತೆಯೇ ಮಾಡುವುದೆಂದು ಮನೆಯಲ್ಲಿಯೇ ಓದ ತೊಡಗಿದೆ. ಆದರೆ ಅಲ್ಲಿಗೂ ಕಾಡಾಟ ಮುಗಿದಿರಲಿಲ್ಲ. ಗಂಗಾವತಿಯ ಗೆಳೆಯರು ಕಾಗದ ಬರೆದರು–'ಹಂಪೆಗೆ



ಹೊರಟದ್ದೇವೆ. ಬಂದು ಬಿಡು' ಎಂದು. ತಂದೆಯವರಿಗೆ ಕಳಿಸುವ ಮನಸ್ಸಿರಲಿಲ್ಲ. ಆದರೂ ನನ್ನ ಉಲ್ಲಾಸಕ್ಕೆ ಅಡ್ಡ ಬರಬಾರದೆಂದು ಸುಮ್ಮನಿದ್ದರು. ಗಂಗಾವತಿ ತಲುಪಿದಾಗ ಗೆಳೆಯರಾದ ಕೆ.ಆರ್. ಹಿರೇಮಠ, ಮಹಾಂತಯ್ಯ ಹಿರೇಮಠ, ಕಲ್ಲಯ್ಯ, ಮಲ್ಲೇಶ ಗೌಡರು ಸಿದ್ಧರಾಗಿಯೇ ಇದ್ದರು. ಹಂಪೆಯನ್ನು ಹದಿನೇಳು ಸಲ ನೋಡಿದ್ದ ಸಂಗಪ್ಪನೆಂಬವರು ನಮ್ಮೊಡನೆ ಮಾರ್ಗದರ್ಶಿಯಾಗಿ ಹೊರಟ್ಟಿದ್ದರು. ಗಂಗಾವತಿಯಿಂದ ಹಂಪೆಯವರೆಗಿನ ಪ್ರವಾಸ ಹಾಸ್ಯಪ್ರವಾಹವೆನಿಸಿದ್ದಿತು. ಎಲ್ಲರೂ ನಗೆಗಾರರೇ. ಅದರಲ್ಲೂ ಸಂಗಪ್ಪನ ಹಳ್ಳಿಯ ಸೊಗಡಿನ ಹಾಸ್ಯ ಚಟಾಕಿಗಳು ನಗೆಯನ್ನಲ್ಲ, ನಗೆಯ ಬುಗ್ಗೆಯನ್ನೇ ಹೊಮ್ಮಿಸುತ್ತಿದ್ದುವು.

ಹಂಪೆ ಹುಚ್ಚು ಹಿಡಿಸಿತು ನಮಗೆ. ಅಲ್ಲಿಯ ವಾನರರೊಡನೆ ವಾನರರಾಗಿ ದೇಗುಲದಿಂದ ದೇಗುಲಕ್ಕೆ, ಬೆಟ್ಟದಿಂದ ಬೆಟ್ಟಕ್ಕೆ ಜಿಗಿದಾಡಿದೆವು. ತುಂಗಭದ್ರೆಯಲ್ಲಿ ಮೈದಣಿವವರೆಗೆ ಈಸುವುದು, ಮಹಾಂತಯ್ಯನವರು ಮಾಡುತ್ತಿದ್ದ ಅಡುಗೆಯ ರುಚಿ ನೋಡುವುದು, ಒಂದು ಸಣ್ಣ ಗುಡಿಯನ್ನೂ ಬಿಡದಂತೆ ಎಲ್ಲವನ್ನೂ ಸುತ್ತಿ ಸುತ್ತಿ ನೋಡುವುದು. ವಿರೂಪಾಕ್ಷನ ಗಗನಚುಂಬಿ ಗೋಪುರವೆ, ವಿಠ್ಠಲರಾಯನ ಗುಡಿಯ ಬಹು ಪ್ರಕಾರಗಳ ಬಹು ಘಟಕಗಳ ಬಹುರೂಪೀ ಸ್ತಂಭಗಳೆ, ಮಹಾನವಮಿ ದಿಬ್ಬವೆ, ಕಮಲ ಮಹಲೆ, ಹಜಾರಿ ರಾಮನ ಗುಡಿಯ ಶಿಲ್ಪ ವೈಭವವೆ, ಉದ್ದಾನಿ ವೀರಭದ್ರನೆ, ಉಗ್ರನರಸಿಂಹನೆ, ಬಡವಿಲಿಂಗವೇ, ವಾಲಿ ಭಾಂಡಾರವೆ, ಪಂಪಾಸರೋವರವೆ, ಕಲ್ಲಿನ ರಥವೆ,–ಏನೇನ ನೋಡಿದೆವು, ಏನೇನ ನೋಡಲಿಲ್ಲ ನಾವು? ಒಂದೊಂದು ನನ್ನಲ್ಲಿ ಬೆರಗು, ನಿಬ್ಬೆರಗುಗಳನ್ನು ಪುಟಿಸಿದುವು; ಸುಪ್ತ ಕವಿ ಹೃದಯವನ್ನು ಜಾಗೃತಗೊಳಿಸಿದುವು. ನಿತ್ಯರಾತ್ರಿ ಒಂದು ಕವಿತೆ ಬರೆದು ಗೆಳೆಯರಿಗೆ ಓದಿ ತೋರಿಸುತ್ತಿದ್ದೆ: ಮರುದಿನ ಮುಂಜಾನೆ ತಾಯಿ ತುಂಗಭದ್ರೆಯ ಮಡಿಲಲ್ಲಿ ಈಸಲು ಹೋದಾಗ ಚಕ್ರತೀರ್ಥದಲ್ಲಿ ತೇಲ ಬಿಡುತ್ತಿದ್ದೆ. ಅದು ಗಿರ್ರನೆ ಸುತ್ತಿ ತಳಕ್ಕಿಳಿದಾಗ ಕೈತಟ್ಟಿ ಕುಣಿಯುತ್ತಿದ್ದೆ. ಏಳು ದಿನಗಳ ಅಲ್ಲಿಯ ವಾಸ್ತವ್ಯದಲ್ಲಿ ನಾನೆಷ್ಟು ಸಲ ರೋಮಾಂಚಿತನಾದೆ, ಎಷ್ಟು ಸಲ ವಿಸ್ಮಿತನಾದೆ, ಎಷ್ಟು ಸಲ ಹಿಗ್ಗಿ ಹೊರೆಯೇರಿದೆನೆಂಬುದನ್ನು ಹೇಗೆ ಲೆಕ್ಕ ಮಾಡುವುದು!

ಹಂಪೆಯಿಂದ ಚಳಿ ಜ್ವರ ಕಟ್ಟಿಕೊಂಡೇ ಊರಿಗೆ ಹಿಂದಿರುಗಿದೆ. ಬೆಂಕಿಯಂಥ ಜ್ವರ, ನಾಲ್ಕು ಕಂಬಳಿ ಹೊದಿಸಿದರೂ ನಿಲ್ಲದ ನಡುಗು! ತಂದೆಯವರು ಭೂಮಿಯಲ್ಲಿಳಿದು ಹೋದರು; ತಾಯಿಯವರ ಸ್ಥಿತಿಯಂತೂ ವರ್ಣನಾತೀತ! ಚಿ. ಅನ್ನದಾನಿಯು ಕೊಪ್ಪಳದಲ್ಲಿ. ಪುಣ್ಯಕ್ಕೆ ಅವನ ಅಭ್ಯಾಸ ಆತಂಕವಿಲ್ಲದೆ ಸಾಗಿದ್ದಿತು. ಚಿ. ಶರಣಪ್ಪನದು ಮನೆಯಲ್ಲಿಯೇ ಓದು; ಚಿ. ಬಸವರಾಜನಿನ್ನೂ ಸಣ್ಣವ. ತಂದೆಯವರಿಗೆ ಏನು ತೋಚಿತೋ, ಏನು ತೋರಿತೋ–ಕ್ಷಿಪ್ರ ನಿರ್ಣಯವೊಂದನ್ನು

ಕೈಕೊಂಡು ಬಿಟ್ಟರು. ಎಲ್ಲರೂ ಗದಗಿಗೆ ಹೋಗುವುದು; ಅಲ್ಲಿ ಚಿಕ್ಕದೊಂದು ಬಾಡಿಗೆ ಮನೆಯಲ್ಲಿದ್ದು 'ಸಿದ್ದಪ್ಪ'ನಿಗೆ ಸಂಪೂರ್ಣ ಗುಣವಾದ ಮೇಲೆಯೇ ಹಿಂದಿರುಗುವುದು! ಸತ್ತು ಬದುಕಿ ಮತ್ತೆ ಮರುಹುಟ್ಟನ್ನು ಮದನಪಲ್ಲಿಯಲ್ಲಿ ಪಡೆದ ಮೇಲೂ ಇನ್ನೊಮ್ಮೆ ದುಡುಕಿ ಹೊಸದೊಂದು ವಿಪತ್ತನ್ನು ಕೊಂಡುತಂದೆನೆಂಬ ಅಪರಾಧೀಭಾವ ನನ್ನ ಕರುಳುಗಳಿಗೆ ಚೇಳಿನ ಕೊಂಡಿಯಂತೆ ಕುಟುಕುತ್ತಿದ್ದಿತಾಗಿ ನನ್ನಲ್ಲಿ ಯೋಚಿಸುವ ಶಕ್ತಿಯಾಗಲಿ, ಪ್ರತಿಭಟಿಸುವ ಚೈತನ್ಯವಾಗಲಿ ಉಳಿದಿರಲಿಲ್ಲ. ಮತಿಗೆ ಮಂಕು, ಮನಕ್ಕೆ ಲಕ್ವ, ಮೈಗೆ ಉರಿ–ಜಡವಾಗಿ ಹೋಗಿದ್ದೆ, ಜರ್ಜರಿತನಾಗಿ ಬಿಟ್ಟಿದ್ದೆ, 'ನಡೆವೆಣ–ನುಡಿವೆಣ'ನಾಗಿ ನಿಂತಿದ್ದೆ!

**ಗದಗು :**

ಗದಗಿನ ಒಂದು ಚಾಳಿನಲ್ಲಿ ಒಂದು ಕಿರಿಯ ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ಅದರಲ್ಲಿರತೊಡಗಿದೆವು. ಒಂದೇ ಉದ್ದವಾದ ಕೋಣೆ; ಅದರಲ್ಲಿ ಒಂದು ಅಡ್ಡಗೋಡೆ ಕಟ್ಟಿ ಆಚೆ ಅಡುಗೆ ಮನೆ. ಬಚ್ಚಲ ಮನೆ ಮಾಡಿದ್ದರು–ಈಚೆ ಕೂಡ್ರಲು, ಮಲಗಲು ಕೋಣೆ ಮಾಡಿದ್ದರು. ಊರಿಂದ ಹಿಟ್ಟು ಬೇಳೆ ಮೊದಲಾದ ಎಲ್ಲ 'ಸಾಹಿತ್ಯ' ತಂದಿದ್ದೆವಾಗಿ ಅಡುಗೆ ಮಾಡಲು ತಡವಾಗಲಿಲ್ಲ ಅವ್ವನಿಗೆ. ಅಂದೇ ಡಾ. ರಾಯಬಾಗಕರ್ ಎಂಬ ಆಯುರ್ವೇದ ವೈದ್ಯರ ಹತ್ತಿರ ಹೋದೆವು. ಕಲಬುರಗಿಯಲ್ಲಿ ಜ್ವರ ಬಂದಾಗಿನಿಂದ ಅಂದಿನವರೆಗಿನ ಜಡ್ಡಿನ ಇತಿಹಾಸವನ್ನು ಹೇಳಿದೆವು. ಜ್ವರ ಮತ್ತೆ ಮತ್ತೆ ಬರುತ್ತಿದ್ದ ಬಗ್ಗೆ ಆತಂಕ ವ್ಯಕ್ತಪಡಿಸಿದರು. ತಂದೆಯವರು. ಹೊಟ್ಟೆ ತುಂಬ ಜಂತು ತುಂಬಿರುವಾಗ ಜ್ವರ ಹೇಗೆ ನಿಲ್ಲುತ್ತದೆ?" ಎಂದರು ವೈದ್ಯರು. ಜುಲಾಬಿನ ಪುಡಿ ಕೊಟ್ಟರು. ಅಂದು ರಾತ್ರಿ ಅದನ್ನು ತೆಗೆದುಕೊಂಡು ಮಲಗಿದೆ. ಮರುದಿನ ಮುಂಜಾನೆ ಗಾಬರಿಗೊಳಿಸುವಷ್ಟು ಜಂತುಗಳು ಬಿದ್ದುವು. ಅಂದೇ ಜ್ವರ ಇಳಿಯಿತು. ಆದರೆ ಅಷ್ಟರಲ್ಲಿ ಪಾಂಡುರೋಗ ಪ್ರಾರಂಭವಾಗಿ ಬಿಟ್ಟಿದ್ದಿತು. ವೈದ್ಯರು ಒಂದು ತಿಂಗಳ ಇದ್ದು ವಾಸಿಯಾದ ಮೇಲೆಯೇ ಹೋಗಿರೆಂದು ಹೇಳಿದರು. ಲೋಹಭಸ್ಮ, ಜೇನುತುಪ್ಪ ಮೊದಲಾದವುಗಳ ಸೇವನೆ ಪ್ರಾರಂಭವಾಯಿತು. ನಿಧಾನವಾಗಿ ಗುಣಮುಖನಾಗುತ್ತ ನಡೆದೆ. ಬೆಳಗ್ಗೆ ಒಂದು ಮೈಲು, ಸಂಜೆ ಒಂದು ಮೈಲು ವಾಯು ವಿಹಾರಕ್ಕೆ ಹೋಗಲಾರಂಭಿಸಿದೆ. ಕೆಲವರ ಪರಿಚಯವಾಯಿತು. ತಂದೆಯವರಿಗೆ ಹಡಗಲಿ ಮಠದಲ್ಲಿದ್ದ ಹಳೆಯ ಗೆಳೆಯ ಪಂ. ನಾಗಭೂಷಣ ಶಾಸ್ತ್ರಿಗಳಿದ್ದರು; ಶಿವಾನಂದ ಪ್ರೆಸ್ಸಿನ ವೀಣೇಕರ ಮಡಿವಾಳಪ್ಪನವರಿದ್ದರು. ಆದರೆ ಆರ್ಥಿಕವಾಗಿ ಎಂದಿಲ್ಲದ ಮುಗ್ಗಟ್ಟನ್ನು ಎದುರಿಸಬೇಕಾಯಿತು ನಾವು. ನಮ್ಮೆಲ್ಲರಲ್ಲಿದ್ದ ಅಲ್ಪಸ್ವಲ್ಪ ಉಳಿತಾಯದ ಹಣ ಕರಗಿಹೋಗಿದ್ದಿತು. ಮನೆ ಬಾಡಿಗೆ, ವೈದ್ಯರ ಫೀ,



ಔಷಧಗಳ ವೆಚ್ಚ, ಊಟೋಪಚಾರಗಳ ಖರ್ಚು–ಎಲ್ಲ ಸೇರಿ ಹೊರಲಾಗದ ಹೊರೆಯಾಗಿ ಬಿಟ್ಟಿದ್ದಿತು. ತಂದೆಯವರು ಅಲ್ಲಲ್ಲಿ ಕೈಗಡ ಬಾಯ್ಗಡ ಮಾಡಿ ನೋಡಿದರು; ಹಳೆಯ ಸ್ನೇಹಿತರ ಹತ್ತಿರ ಹೋಗಿ ಬಂದರು. ಆದರೂ ಲೆಕ್ಕ ಬಾಯಿಗೂಡಲಿಲ್ಲ. ಕೊನೆಗೆ ಅವ್ವನಿಗೆ ಕೊಡಿಸಿದ್ದ ಆರು ತೊಲೆ ಬಂಗಾರ ಮಾರಿಬಿಟ್ಟರು; ಅಂದು ಅವ್ವನಿಗೆ ಏನೇನೋ ಒಮ್ಮೆಗೆ ನೆನಪಾದಂತಾಗಿ ಅತ್ತು ಬಿಟ್ಟಳು. ನನಗಂತೂ ನನ್ನ ಮೇಲೆಯೇ ಹಗೆತನ ಹುಟ್ಟಿದ ಹಾಗೆನಿಸಿತು, "ತಂದೆ ತಾಯಿಗಳಿಗೆ ಇಷ್ಟು ಕಷ್ಟ ಕೊಡಲು ನೀನು ಹುಟ್ಟಿದೆಯಾದರೂ ಏಕೆ?" ಎಂದು ನನ್ನನ್ನೇ ನಾನು ಕೇಳಿದೆ! ಈ ಬೆಂಬತ್ತಿರುವ ಬಡತನವನ್ನು ಒಮ್ಮಿಲ್ಲೊಮ್ಮೆ ಬಗ್ಗು ಬಡಿದು, ನುಗ್ಗುನುಸಿ ಮಾಡಿ, ಸ್ವಪೂರ್ಣತೆಯ ಮೆಟ್ಟಿಲನ್ನೇರಿ ತೂರಿ ಬಿಡಬೇಕೆಂದು ಪಣತೊಟ್ಟೆ. ಬಡವನ ಸಿಟ್ಟು ದವಡೆಗೆ ಮೂಲವೆಂಬಂತೆ ನನ್ನ ಸಿಟ್ಟು ನಾನು ವಾಸಿಯಾಗುವ ದಿನವನ್ನು ಇನ್ನಷ್ಟು ಮುಂದೂಡುತ್ತಿತ್ತು, ಅಷ್ಟೆ!

ನನಗೆ ಇನ್ನೊಂದು ತೊಂದರೆ ನಮ್ಮೂರಿನಿಂದ ತಮ್ಮ ರೋಗ ತೋರಿಸಿಕೊಳ್ಳಲು ಬರುವವರದು. "ಹೇಗೂ ಶಾಸ್ತ್ರಿಗಳವರು ಮಾಡಿದ್ದಾರೆ; ನಾವೂ ನಿರೋಗಿಗಳಾಗಲು ಇದೇ ಸುಸಮಯ," ಎಂದು ಯೋಚಿಸಿ ನಮ್ಮೂರಿನ ಕೆಲವು ಹಳೆಯ ರೋಗಿಗಳು ನಮ್ಮ ಮನೆ ಹುಡುಕಿಕೊಂಡು ಬರತೊಡಗಿದರು. ಬಂದವರಿಗೆ ಊಟವಿತ್ತು, ಮಲಗಲು ಸ್ಥಳ ಬಿಡುವುದಲ್ಲದೆ ಅವರನ್ನು ವೈದ್ಯರ ಹತ್ತಿರ ಕರೆದೊಯ್ದು ತೋರಿಸಬೇಕಾಗುತ್ತಿತ್ತು! ಒಬ್ಬಿಬ್ಬರಂತೂ ಎಲ್ಲ ಮಾಡಿಸಿಕೊಂಡು ತೃಪ್ತರಾಗದೆ, ಔಷಧದ ಬಿಲ್ಲನ್ನೂ ತಂದೆಯವರಿಂದ ಕೊಡಿಸಿ. ಊರಿಗೆ ಹೋಗುತ್ತಲೇ ಹಣ ಕಳಿಸುವೆವೆಂದು ಹೇಳಿ ಹೋದರು. ಹಣ ಕಳಿಸುವುದಿರಲಿ, ನಾವು ಊರಿಗೆ ಹೋದ ಮೇಲೂ ಅದರ ನೆನಪು ಸಹ ತೆಗೆಯಲಿಲ್ಲ–ತಂದೆಯವರು ಕೊಟ್ಟುದನ್ನು ತಿರುಗಿ ಕೇಳಿದವರೇ ಅಲ್ಲ! ಎಷ್ಟು ಸಲ ತಾವು ನಂಬಿದ್ದ, ತಾವು ನೆರವು ನೀಡಿದ್ದ ಮನುಷ್ಯರಿಂದಲೇ ಮೋಸ ಹೋಗಿದ್ದರೂ ಮನುಷ್ಯ ಕುಲದಲ್ಲಿ ಅವರ ವಿಶ್ವಾಸ ಕಡಿಮೆಯಾಗಿರಲಿಲ್ಲ!

ನಾವಿದ್ದ ಮನೆಯ ಪಕ್ಕದ ಮನೆಯಲ್ಲಿ ಒಂದು ಬ್ರಾಹ್ಮಣ ಕುಟುಂಬ. ಗಂಡ, ಹೆಂಡತಿ, ಇಬ್ಬರೂ ಮಕ್ಕಳು. ಗಂಡ ಎಲ್ಲಿ ಯಾವ ಕೆಲಸ ಮಾಡುತ್ತಿದ್ದನೋ ತಿಳಿಯಲಿಲ್ಲ ನಮಗೆ. ತಿಳಿದುಕೊಳ್ಳುವ ಗೋಜಿಗೂ ನಾವು ಹೋಗಲಿಲ್ಲ. ಏಕೆನೆ, ಒಮ್ಮೆಗೆ ಸಂಜೆಗೆ ಬರುತ್ತಿದ್ದ ಆ ಮಹಾನುಭಾವ ಬರುತ್ತಲೆ ಹೆಂಡತಿಗೆ ಹೂವೇರಿಸಲು ಪ್ರಾರಂಭಿಸುತ್ತಿದ್ದ. ಕಡಿದಾಡುತ್ತಲೇ ರಾತ್ರಿ ಊಟ ಮುಗಿಯುತ್ತಿತ್ತು. ಆಮೇಲೆ ಅತ್ತ ಹುಡುಗರು ಮಲಗುತ್ತಲೆ ಇತ್ತ ಗಂಡ ಹೆಂಡಿರ ಗುದುಮುರಿಗೆ ಪ್ರಾರಂಭವಾಗುತ್ತಿತ್ತು.

ಮೊದಮೊದಲು ಮಾತಿನ ಯುದ್ಧ, ಆಮೇಲೆ ಗಂಡನ ಬೈಗಳು–ಹೆಂಡತಿಯ ಎದುರುತ್ತರ, ಅನಂತರ 'ಧಪ್ ಧುಪ್' ಸದ್ದು, ರೋದನ ಶಬ್ದ, 'ಕೊಂದು ಹಾಕಿರಿ ನನ್ನನ್ನು–ನನ್ನನ್ನು ಕೊಂದ ಮೇಲಾದರೂ ನಿಮ್ಮ ಸಿಟ್ಟು ಶಾಂತವಾಗಲಿ!" ಎಂಬ ಚೀತ್ಕಾರ! ರಾತ್ರಿಯೆಲ್ಲ ಇದೇ ಗದ್ದಲ. ಮುಂಜಾನೆ ಗಂಡನಿಗೆ ಯಥಾಪ್ರಕಾರ ತಿಂಡಿ ತಿನಿಸಿ ಕಳಿಸಿ, ಮಕ್ಕಳನ್ನು ಶಾಲೆಗೆ ದಬ್ಬಿ, ಹೆಂಡತಿಯ ಹಾಡು: "ಮನೆಯ ಶರೀರವಿದೇನು ಸುಖ?" ಎಂದು ನಿತ್ಯರಾತ್ರಿ ಅದೇ ನಾಟಕ, ನಿತ್ಯ ಪ್ರಾತಃಕಾಲ ಅದೇ ಉದಯರಾಗ! "ಮದುವೆಯೆಂದರೆ ಬಾಯಿ ಬಾಯಿ ಬಿಡುವ ಯುವಕ ಯುವತಿಯರಿಗೆ ವಿವಾಹವೀಯುವುದು ಇದೇ ಸುಖವನ್ನೇ?" ಎಂದು ಮನದಲ್ಲಿಯೇ ಜಾನಿಸುತ್ತಿದ್ದೆ. ಸುಸಂಸ್ಕೃತ ಬ್ರಾಹ್ಮಣ ಸಮಾಜದಲ್ಲಿಯೂ ಇಂಥ ಉದಾಹರಣೆಗಳು ಉಪಲಬ್ಧವಿರುವಾಗ ನಿರಕ್ಷರಿಗಳ, ದಾರಿದ್ರ್ಯ ಪೀಡಿತರ, ಮೂಢ ರೂಢಿಬಂಧಿತರ ವರ್ಗಗಳಲ್ಲಿ ಇನ್ನೆಂಥ ಉದಾಹರಣೆಗಳು ದೊರೆಯಬಹುದೋ ಎಂದು ದಿಗ್ಭ್ರಮೆಯಾಯಿತು ನನಗೆ. ಮದುವೆಯೆನ್ನುವುದು ಮುತ್ತಿಗೆಗೊಳಗಾಗಿರುವ ಕೋಟೆಯಂತೆ; ಹೊರಗಿರುವವರು ಒಳಗೆ ಹೋಗಲು ಹಾತೊರೆಯುತ್ತಾರೆ; ಒಳಗಿರುವವರು ಹೊರೆಗೆ ಬರಲು ಹಂಬಲಿಸುತ್ತಾರೆ–ಎಂದು ಯಾರೋ ಅಂದಿರುವುದು ನಿಜವೇನೋ!

### ಪರಮತಪಸ್ವಿಗಳ ಆಶೀರ್ವಾದ :

ವೈದ್ಯರು "ವಾಸಿಯಾಗಿದೆ ರೋಗ; ಹೋಗಬಹುದೆಂ"ದು ಹೇಳಿದರು. ಊರಿಗೆ ಮರಳಿದೆವು. ಬಾಯಿ ಸುಟ್ಟು ಬೆಕ್ಕು ಮಜ್ಜಿಗೆಯನ್ನೂ ಊದಿಕೊಂಡು ಕುಡಿಯುವಂತೆ ಔಷಧವಿಲ್ಲದೆ ಇರಲು, ಪಥ್ಯದ ಆಹಾರ ಬಿಡಲು ಸುಲಭವಾಗಿ ಸಾಧ್ಯವಾಗಲಿಲ್ಲ ನನಗೆ. ನಾನು ನಿರೋಗಿಯೆಂಬ ಭಾವನೆಯೇ ಬರಲಿಲ್ಲ. ಎದೆಯಲ್ಲಿ ಯಾವುದೋ ಅಳುಕು, ಉಳುಕು, ಅಂಜಿಕೆ! ಜಪ್ಪಿಸಿ ನಡೆಯುವುದು, ಸುಮ್ಮ ಸುಮ್ಮನೆ ಜ್ವರ ನೋಡಿಕೊಳ್ಳುವುದು, ತುತ್ತುಗಳ ಲೆಕ್ಕ ಮಾಡಿ ಊಟ ಮಾಡುವುದು, ನಿದ್ರೆಯಲ್ಲಿ 'ಔಷಧ' 'ಔಷಧ' ಎಂದು ಬಡಬಡಿಸುವುದು ಮುಂದುವರಿಯಿತು. ತಂದೆಯವರು ಮತ್ತೆ ಮುಂದುಗಾಣದಾದರು. ದೇವರೇ ಕಳಿಸಿಕೊಟ್ಟಂತೆ ಕುಕ್ಕನೂರಿಗೆ ಪರಮತಪಸ್ವಿಗಳಾಗಿದ್ದ ಮುಂಡರಗಿಯ ಶ್ರೀ ಅನ್ನದಾನ ಮಹಾಸ್ವಾಮಿಗಳವರು ಆಗಮಿಸಿದರು. ಅವರು ಮಹಿಮಾಶಾಲಿಗಳೆಂದೂ, ಶಾಪಾನುಗ್ರಹ ಸಮರ್ಥರೆಂದು ಭಾಗದ ಬಹುಜನರು ನಂಬಿದ್ದರು. ಕುಕ್ಕನೂರಿನ ಲಂಗಟೆ ಸಿದ್ಧಲಿಂಗಪ್ಪ, ತಟ್ಟಿ ಗುರುಲಿಂಗಪ್ಪ, ಸಂಗನ ಬಸವಪ್ಪ, ಕಪ್ಪತ್ತಪ್ಪ ಮೊದಲಾದವರಿಗಂತೂ ಅವರು ಧರೆಗಿಳಿದ ದೇವರು. ತಂದೆಯವರ ಮೇಲೆ ಬಹಳ ಪ್ರೀತಿ ಶ್ರೀಗಳವರದು.



ತಂದೆಯವರು ಪರಮಪೂಜ್ಯರನ್ನು ಮನೆಗೆ ಕರೆದು ತಂದು ರುದ್ರಾಭಿಷೇಕ ಮಾಡಿಸಿದರು. ಪೂಜ್ಯರ ಪಾದ ಪೂಜೆ ಮಾಡಿದೆ ನಾನು. ಅವರು ಆಶೀರ್ವದಿಸಿ ನನ್ನ ಕೊರಳಿಗೆ ರುದ್ರಾಕ್ಷಿಯೊಂದನ್ನು ಕಟ್ಟಿದರು. ಅಂದೇ ನಾನು ನಿರೋಗಿಯೆಂಬ ಧೈರ್ಯ ನನಗೆ ಬಂದಿತು. ಅವರು ಕುಕ್ಕನೂರಿನಲ್ಲಿರುವವರೆಗೂ ನಿತ್ಯ ಅವರ ದರ್ಶನ ಪಡೆದೆ. ಅವರು ವಾಯು ವಿಹಾರಕ್ಕೆ ಹೊರಟರೆ ಅವರು ಬರೀ ನಡೆಯುತ್ತಿದ್ದರೂ ನಾವು ಅವರ ಹಿಂದೆ ಓಡಬೇಕಾಗುತ್ತಿತ್ತು. ಜಿತೇಂದ್ರಿಯತ್ವದ ದಿವ್ಯತೇಜಸ್ಸು, ಅವರ ಮುಖಮಂಡಲದ ಮೇಲೆ ಸದಾ ಬೆಳಗುತ್ತಿತ್ತು. ಹಿಂದುಗಳಷ್ಟೇ ಅಲ್ಲ, ಪರಮತೀಯರೂ ಅವರ ದರ್ಶನಾಶೀರ್ವಾದಗಳಿಗಾಗಿ ಹಿಂಡುಹಿಂಡಾಗಿ ಬರುತ್ತಿದ್ದರು.

ಇನ್ನೇನು, ಎಲ್ಲ ಪೀಡೆಗಳೂ ತೊಲಗಿದುವು ಎಂದು ಅಭ್ಯಾಸ ಆರಂಭಿಸಿದೆ. ಪರೀಕ್ಷೆಗೆ ಇನ್ನೂ ಏಳು ತಿಂಗಳುಗಳ ಅವಧಿಯಿತ್ತು. ಮನೆಯಲ್ಲಿಯೇ ಚೆನ್ನಾಗಿ ಅಭ್ಯಾಸ ಮಾಡಿದರೆ ಇಂಗ್ಲೀಷಿನಲ್ಲಲ್ಲದಿದ್ದರೂ ಕನ್ನಡದಲ್ಲಿ ಪ್ರಥಮ ಸ್ಥಾನ ಪಡೆದು ಮತ್ತೆ ವಿದ್ಯಾರ್ಥಿವೇತನ ಪಡೆದು ಪದವೀಧರನಾಗಬಲ್ಲೆನೆಂಬ ವಿಶ್ವಾಸ ಉದಿಸಿತ್ತು. ಪದವಿ ಹಂತದಲ್ಲಿ ಎಲ್ಲ ಭಾಷೆಗಳಲ್ಲಿ ಪ್ರಥಮ ಸ್ಥಾನ ಪಡೆದವರಿಗೂ ತಿಂಗಳಿಗೆ ಹದಿನೆಂಟು ರೂಪಾಯಿಗಳ ವಿದ್ಯಾರ್ಥಿ ವೇತನದ ವ್ಯವಸ್ಥೆಯಿದ್ದಿತು. ಇದನ್ನು ಬಲ್ಲ ನಾನು ಕನ್ನಡದ ಸಿದ್ಧತೆಯನ್ನು ಮನಮುಟ್ಟಿ ಮಾಡತೊಡಗಿದೆ. ವ್ಯಾಸಂಗವೇನೋ ಸಾವಧಾನವಾಗಿ ಸಾಗಿತು. ಆದರೆ ಅಲ್ಲಿಗೂ ಮುಗಿದಿರಲಿಲ್ಲ ವಿಘ್ನ ಪರಂಪರೆ. "ಶುಭಕ್ಕೆ ವಿಘ್ನವಲ್ಲದೆ ಅಶುಭಕ್ಕೆ ವಿಘ್ನವುಂಟೆ, ಅಯ್ಯಾ?" ಎಂದು ಸಿದ್ಧರಾಮೇಶ್ವರ ಹೇಳಿಯೇ ಇದ್ದಾನೆ. ಈ ಸಲದ ವಿಘ್ನ ಲಗ್ನ ಪ್ರಸ್ತಾಪದ ರೂಪ ತಾಳಿ ಬಂದಿತು– ರೋಗದ ರೂಪದಲ್ಲಲ್ಲ. ಕಲಬುರಗಿಯಲ್ಲಿ ಜ್ವರ ಷುರು ಆದಾಗ ಒಮ್ಮೆ ಬಂದಿತ್ತು ಲಗ್ನದ ಪ್ರಸ್ತಾಪ; ಈಗ ರೋಗ ಪರ್ವ ಮುಗಿದಾಗ ಮತ್ತೊಮ್ಮೆ ಮುಂದೆ ನಿಂತಿತು ಅದಕ್ಕೂ ಜಟಿಲವಾದ ವಿಘ್ನರೂಪ ತಾಳಿ ಲಗ್ನ ಪ್ರಸ್ತಾಪ. ನನ್ನ ಹೆಸರಿನಲ್ಲಿಯೇ ಹುಟ್ಟಿ, ನನ್ನ ಹೆಸರಿಟ್ಟುಕೊಂಡೇ ಬೆಳೆದಿದ್ದ ಸೋದರಮಾವನ ಮಗಳಿಗಾಗ ಮದುವೆಯ ವಯಸ್ಸು, ಮದುವೆ ಮಾಡಿಬಿಡಬೇಕೆಂದು ನನ್ನ ತಾಯಿಯ ಮನಸ್ಸಿನಲ್ಲಿ ಬಂದು ಬಿಟ್ಟಿತು. ತವರು ಮನೆಯ ನೆಚ್ಚು ನನ್ನ ಭವಿತವ್ಯಕ್ಕೆ ಕಿಚ್ಚಾಗ ಬಯಸಿತು. ಸೋದರಮಾವ ಸೋದರತ್ತೆಯರು ಯಾವುದೋ ದುರ್ಬಲ ನಿಮಿಷದಲ್ಲಿ, ಹುಟ್ಟಿದ ಮಗಳನ್ನು ನನಗೇ ಕೊಡುವೆವೆಂದು ಹೇಳಿಬಿಟ್ಟು ತಾವೂ ಜನರ ಗುಸು ಗುಸು ನುಡಿಗಳಿಗೆ ಗುರಿಯಾಗಿದ್ದರೂ, ನನ್ನ ತಾಯನ್ನೂ ಧರ್ಮ ಸಂಕಟಕ್ಕೆ ಗುರಿ ಮಾಡಿದ್ದರು. ಹರಿಬ್ರಹ್ಮರೇ ಬಂದು ಹೇಳಿದರೂ ಕೊಂಡಿಯನ್ನು

ಕಡಿದುಕೊಳ್ಳೆನೆಂಬುದು ತಾಯಿಯ ನಿಲುವು. ನನಗಿದ್ದುದು ತಂದೆಯವರ ಬಲವೊಂದೇ. ಉಳಿದವರೆಲ್ಲ "ಮದುವೆಯಾಗಿ ಎಷ್ಟು ಜನ ಪದವೀಧರರಾಗಿಲ್ಲ? ಶ್ರೀರಾಮಚಂದ್ರ ರಾವ್ ಪಟವಾರಿಯವರ ಉದಾಹರಣೆಯಿಲ್ಲವೆ? ಅವರು ಮ್ಯಾಟ್ರಿಕ್ ಪಾಸಾಗಿ ವಿದ್ಯಾನಂದ ಗುರುಕುಲದಲ್ಲಿ ಅಧ್ಯಾಪಕರಾಗಿ ಸೇರಿ ನಾಲ್ಕು ಮಕ್ಕಳಾದ ಮೇಲೆ ಎಂ.ಎ. ಪಾಸಾಗಿ ಪ್ರಾಧ್ಯಾಪಕರಾಗಿಲ್ಲವೆ? ಸಿದ್ದಣ್ಣನೂ ಹಾಗೆಯೇ ಮಾಡಲಿ" ಎಂದು ಎನ್ನುವವರೇ. ನಾನದೇ ಪ್ರಾಣಾಪಾಯಕಾರಿ ರೋಗದಿಂದ ಮುಕ್ತನಾದುದರ ಕಡೆಗೆ ಅವರ ಗಮನ ಹರಿಯಲಿಲ್ಲ; ನನ್ನ ಆರೋಗ್ಯವಿನ್ನೂ ಸಾಕಷ್ಟು ಸದೃಢವಿಲ್ಲವೆಂಬುದರತ್ತ ಅವರ ಲಕ್ಷ್ಯ ಹೋಗಲಿಲ್ಲ. ಚೊಚ್ಚಲು ಮಗನಾದ ನಾನು ಬೇಗ ಓದು ಮುಗಿಸಿ ಗಳಿಸಲು ಆರಂಭಿಸದೇ ತಂದೆಯವರ ಭಾರ ಇಳಿಯದು, ತಮ್ಮಂದಿರ ವ್ಯಾಸಂಗ ಮುಂದುವರಿಯದು, ತಂಗಿಯ ಮದುವೆಯಾಗದು–ಎಂಬುದರ ಪರಿವೆ ಅವರಿಗಿದ್ದಂತೆ ತೋರಲಿಲ್ಲ. ಹುಡುಗಿ ಪ್ರಾಪ್ತವಯಸ್ಕಳಾಗಿದ್ದಾಳೆ; ಇವನಿಗೆ ಕಟ್ಟಿ ಕೈತೊಳೆದುಕೊಂಡುಬಿಡಬೇಕೆಂಬುದೇ ಅವರ ಏಕಮಾತ್ರ ಅಬ್ಸೇಷನ್ ಆಗಿರುವಂತಿತ್ತು. ಆದರೂ ತಂದೆಯವರ ವಿಚಲಿತವಾಗದ ವಿರೋಧದೆದುರು ಅವರ ಆಟ ನಡೆಯಲಿಲ್ಲ.

## ಮದುವೆಯ ಪ್ರಸ್ತಾಪ :

ಈ ಕೊನೆಯ ಕೋಟೆಯನ್ನೂ ಭೇದಿಸಿದರು ವಿವಾಹೋತ್ಸುಕರು. ಎಲ್ಲರಿಗೂ ಹಿರಿಯರಂತಿದ್ದ ಚೆನ್ನಕವಿಗಳಿಂದಲೂ ತಂದೆಯವರಿಗೆ ಹೇಳಿಸಿಬಿಟ್ಟರು. ತಂದೆಯವರ ಸ್ಥಿತಿ ಅಡಕೊತ್ತಿನಲ್ಲಿ ಸಿಕ್ಕ ಅಡಿಕೆಯಂತಾಗಿದ್ದಿತು. ಈ ಹಗ್ಗ ಜಗ್ಗಾಟದಲ್ಲಿ ಅವರೊಬ್ಬರೇ ಒಂದು ಕಡೆಗೆ, ಉಳಿದೆಲ್ಲರೂ ಒಂದು ಕಡೆಗೆ, ಸಹಜವಾಗಿಯೇ ತಂದೆಯವರು ಸೋತರು. ನನ್ನ ಪರವಾಗಿ ಚಿ. ಅನ್ನದಾನಿ ಅಲ್ಲಿದ್ದು ನನಗೆ ಆಗಾಗ ವರದಿ ಕಳಿಸುತ್ತಿದ್ದ. ಈ ಅವಸರದ ವಿವಾಹವನ್ನು ಅವನೂ ಏಕಾಂತದಲ್ಲಿ ವಿರೋಧಿಸಿದ್ದನಾದರೂ ಎಲ್ಲರೆದುರು ಬಹಿರಂಗವಾಗಿ ವಿರೋಧಿಸುವಂತಿರಲಿಲ್ಲ. ತಂದೆಯವರು ನಿರುಪಾಯರಾಗಿ ಒಪ್ಪಿಗೆಯನ್ನೀಯುತ್ತಲೆ ಓಡಿ ಬಂದು ನನಗೆ ಆ ಸಂಗತಿ ತಿಳಿಸಿದ. ನನ್ನ ಮೈಮೇಲೆ ಆಕಾಶ ಕಳಚಿ ಬಿದ್ದಂತೆನಿಸಿದರೂ ಪ್ರಸಂಗಾವಧಾನ ಕೈಕೊಡಲಿಲ್ಲ. ತಂದೆಯವರು ಸಪ್ಪೆಮುಖದೊಡನೆ ಬಂದು ತಾವು ಒಪ್ಪಿಗೆಯಿತ್ತ ವಿಷಯವನ್ನು ತಿಳಿಸಿದರು. 'ಕೊಪ್ಪಳದ ಮಾಮಾರ ಒಪ್ಪಿಗೆಯನ್ನು ಪಡೆದಿರುವಿರಾ?" ಎಂದು ಕೇಳಿದೆ. ಅವರು ಕ್ಷಣಕಾಲ ಬೆಚ್ಚಿಬಿದ್ದರು. ಯಾರೂ ಅವರನ್ನು ಗಮನಿಸಿಯೇ ಇರಲಿಲ್ಲ. ಹೊಸ ಬೀಗರು, ಸ್ಥಿತಿವಂತರು, ಪಟ್ಟಣ ವಾಸಿಗಳು–ಅವರನ್ನೂ ಒಂದು ಮಾತು ಕೇಳದೆ ಕೊನೆಯ ನಿರ್ಣಯ ಕೈಗೊಳ್ಳಲಾದೀತೆ? ತಂದೆಯವರು



"ಸಿದ್ನೇಕೊಪ್ಪದ ಬಸವಯ್ಯನವರನ್ನೂ ಕೇಳಿದೆ ಮೇಲೆಯೇ ಕೊನೆಯ ನಿರ್ಣಯ," ಎಂದು ಸಾರಿಬಿಟ್ಟರು. ಎಲ್ಲರೂ, ಸಿದ್ದಣ್ಣ ಸಣ್ಣವನಾದರೂ ದೊಡ್ಡವರಿಗಿಂತಲೂ ಹೆಚ್ಚು ಪ್ರಬುದ್ಧತೆಯನ್ನು ತೋರಿದ್ದಾನೆ! ಎಷ್ಟೆಂದರೂ ಕಾಲೇಜಿನ ಕಟ್ಟೆಯೇರಿ ಬಂದಾತ. ಆತ ಹೇಳಿದುದೇ ಸರಿ. ನಾಳೆಗೇ ಬಸವಯ್ಯನವರನ್ನು ಬರಮಾಡಿಕೊಳ್ಳೋಣ, ಅವರನ್ನು ಒಪ್ಪಿಸಿಯೇ ಮದುವೆ ಪತ್ರ ಬರೆಸೋಣ" ಎಂದು ನುಡಿದರು. ತಂದೆಯವರಿಗೆ ಮತ್ತೆ ಒಂದೆರಡು ದಿನಗಳ ವಿಚ್ಛಿತ್ತಿ ದೊರೆಯಿತೆಂದು ಇದ್ದುದರಲ್ಲಿಯೇ ಆನಂದವೆನಿಸಿತು. ಉಳಿದವರಿಗೆ, 'ಇನ್ನೇನು, ಹುಡುಗ ಒಪ್ಪಿದಂತೆಯೇ! ಬಸವಯ್ಯನವರನ್ನಷ್ಟು ಕೇಳಿರಿ ಎಂದಿದ್ದಾನೆ; ಸ್ಪಷ್ಟವಾಗಿ ಬೇಡ ಎಂದಿಲ್ಲ. ಎಷ್ಟೆಂದರೂ ಹರೆಯದ ಹುಡುಗ. ಚೆಲುವೆಯಾದ ಸೋದರ ಸೊಸೆಯನ್ನು ಒಲ್ಲೆನೆಂದು ಯಾವ ಬಾಯಿಂದ ಅಂದಾನು?" ಎಂದೆನಿಸಿತು. ಕೆಲವರು ರಾತ್ರಿ ಗಾಡಿ ಹಿಡಿದು ಕೊಪ್ಪಳಕ್ಕೆ ಹೋಗಿಯೇ ಬಿಡುವೆವೆಂದು ಹೊರಟುಬಿಟ್ಟರು. ಸೋದರ ಮಾವನ ಮನೆಯಲ್ಲಿ ಓಣಿಯ ಓರಗಿತ್ತಿಯರೆಲ್ಲಾ ಸೇರಿ ಆ ಸೋದರ ಸೊಸೆಯನ್ನು ಪೀಡಿಸಿದ್ದೇ ಪೀಡಿಸಿದ್ದು–'ಹೆಸರು ಹೇಳು, ಒಗಟಿಟ್ಟು ಹೇಳು' ಎಂದು.

ಎಲ್ಲರೂ ಮನಸ್ಸಿನಲ್ಲಿ ಮಂಡಿಗೆ ತಿನ್ನುತ್ತ, ಮದುವೆಯ ಹಂದರದ, ಹೋಳಿಗೆಯ, ಓಲಗದ ಕನಸು ಕಾಣುತ್ತ ಹಾಸಿಗೆ ಹುಡುಕುತ್ತಲಿದ್ದಾಗ ಅನ್ನದಾನಿಯ ನನ್ನ ಗಂಭೀರ ಸಮಾಲೋಚನೆ ನಡೆದಿದ್ದಿತು ಯಾರಿಗೂ ಕಾಣದಂತೆ. "ನಾಳೆ ಬಸವಯ್ಯನವರು ಬಂದುಬಿಟ್ಟರೆ ಮದುವೆ ನಿಶ್ಚಿತವಾಗಿ ಬಿಡುತ್ತದೆ. ಅದಕ್ಕೆ ಮೊದಲೇ ಇದು ನಡೆಯದಂತೆ ಏನಾದರೂ ಉಪಾಯ ಮಾಡಲೇಬೇಕು!" ಎಂದು ಇಬ್ಬರೂ ಒಮ್ಮತದ ತೀರ್ಮಾನಕ್ಕೆ ಬಂದೆವು. ಆದರೆ ಏನು ಉಪಾಯ ಮಾಡುವುದು? ಇಬ್ಬರಿಗೂ ತೋಚಲಿಲ್ಲ ಸರಿಯಾದ ಉಪಾಯ. ಒಮ್ಮೆಗೇ ಹರ್ಡೇಕರ್ ಮಂಜಪ್ಪನವರ ನೆನಪಾಯಿತು. ಉದಗಿರಿಯ ಸಮ್ಮೇಳನ ಕಾರಣವಾಗಿ ನಾನವರಿಗೆ ತುಂಬ ಹತ್ತಿರದವನಾಗಿದ್ದೆ. ಆಗ ಅವರು 'ಒಮ್ಮೆ ಆಲಮಟ್ಟಿಗೆ ಬಾ' ಎಂದು ಕರೆದಿದ್ದರು. ಈಗ 'ಅಲಮಟ್ಟಿಗೆ ಬಾ' ಎಂಬ ಅವರ ಸ್ವರ ಕಿವಿಯಲ್ಲಿ ಅನುಸರಣಿಸತೊಡಗಿತು... "ಅಲಮಟ್ಟಿಗೆ ಬಾ, ಅಲಮಟ್ಟಿಗೆ ಬಾ...ಅಲಮಟ್ಟಿಗೆ ಬಾ!" ಅಹುದು, ಇದು ಅವರದೇ ಸ್ವರ, ಅದೇ ಅಭಯಸ್ವರ. ಬೇರಾವ ವಿಚಾರವೂ ಬೇಡ ಅವರಲ್ಲಿಗೇ ಹೋಗಬೇಕು, ಅವರ ಆಶ್ರಯವನ್ನೇ ಕೋರಬೇಕು!

ಅನ್ನದಾನಿಗೆ ಈ ವಿಚಾರ ತಿಳಿಸಲು ಅವನೂ 'ಇದೇ ಸರಿಯಾದ ದಾರಿ' ಎಂದು ಅನುಮೋದಿಸಿದ. ಇದನ್ನು ಕಾರ್ಯಾನ್ವಿತಗೊಳಿಸಲು ಇದೇ ರಾತ್ರಿಯೇ ಕೊನೆಯ ಅವಕಾಶವೆಂದು ಹೇಳಿದೆ. "ಮಂಡಲಗಿರಿಯಲ್ಲಿ ಗೆಳೆಯ ಹನುಮಂತ ರೆಡ್ಡಿ ಇದ್ದಾರೆ, ಅಲ್ಲಿಯವರೆಗೆ ಜೊತೆಗೆ ಬರುವಿಯಾ? ಪುಸ್ತಕ ಬಟ್ಟೆಗಳ ಪೆಟ್ಟಿಗೆ

ನಾನು ಹೊರುತ್ತೇನೆ. ಹಾಸಿಗೆಯ ಗಂಟು ನೀನು ಹೊರಬೇಕು" ಎಂದೆ. ಕೂಡಲೇ ಒಪ್ಪಿದ ಅನ್ನದಾನಿ, ಆಗ ಅವನ ವಯಸ್ಸು ಹನ್ನೆರಡು ಮಾತ್ರ. ನನಗೆ ಆಶ್ಚರ್ಯವಾಯಿತು, ಅಭಿಮಾನವೂ ಎನಿಸಿತು ತಮ್ಮನ ಬಗ್ಗೆ. "ಇಂದೇ, ಈ ರಾತ್ರಿಯಲ್ಲಿಯೇ ಹಿಂದಿರುಗಿ ಬರಬೇಕು,–ಒಬ್ಬನೇ! ಇನ್ನೊಮ್ಮೆ ವಿಚಾರಿಸಿ ಹೇಳು" ಎಂದೆ. "ಎಲ್ಲ ಯೋಚಿಸಿಯೇ ಒಪ್ಪಿದ್ದೇನೆ. ತಡ ಮಾಡಿದರೆ ನೂತದ್ದೆಲ್ಲ ಹಂಜಿಯಾದೀತು; ಹೊರಟುಬಿಡೋಣ" ಎಂದ. ಹೊರಟೆವು, ಎಲ್ಲರ ಕಣ್ಣು ತಪ್ಪಿಸಿ ಹೊರಟೆವು, ದೇವರ ಮೇಲೆ ಭಾರ ಹಾಕಿ ಹೊರಟೆವು, ಹುಚ್ಚು ಧೈರ್ಯವನ್ನು ನಂಬಿ ಹೊರಟೆವು.

ಮಂಡಲಗಿರಿ ಮುಟ್ಟಿದಾಗ ರಾತ್ರಿ ಒಂಬತ್ತು ಘಂಟೆ. ಹನುಮಂತ ರೆಡ್ಡಿಯವರಿನ್ನೂ ಮಲಗಿರಲಿಲ್ಲ. ಆ ಸಮಯದಲ್ಲಿ ನಮ್ಮನ್ನು ನೋಡಿ ಅವಾಕ್ಕಾದರು. ಸ್ವಲ್ಪದಲ್ಲಿಯೇ ಎಲ್ಲವನ್ನು ವಿವರಿಸಿದೆ. ಅವರೂ 'ಮದುವೆಯ ವಿಚಾರ ಅವಿಚಾರ ಪರ' ವೆಂದು ಒಪ್ಪಿದರು. 'ಚಿ॥ ಅನ್ನದಾನಿ ಹಿಂದಿರುಗಲೇ ಬೇಕಿತ್ತು ಅದೇ ರಾತ್ರಿ. ಅವನು ಹೊರಡಲನುವಾಗಲು ನನ್ನ ಕಣ್ಣೀರಿನ ಕಟ್ಟೆಯೊಡೆಯಿತು; ಅವನ ಕಣ್ಣುಗಳೂ ಕಂಬನಿಯ ಕಾಲುವೆಗಳಾಗಿದ್ದುವು. ಇಂಥ ರಾತ್ರಿಯಲ್ಲಿ ಒಬ್ಬನೇ ಹೇಗೆ ಹೋಗುವನೋ ಎಂದು, ಮತ್ತೆ ಎಂದು ಇವನನ್ನು ಕಾಣುವೆನೋ ಎಂದು, ಇವನ ಮುಂದಿನ ಓದು ಹೇಗೆ ಸಾಗುವುದೋ ಎಂದು, ಈ ಕೆಲಸ ಮಾಡಿದುದಕ್ಕಾಗಿ ಎಲ್ಲರೂ ಎಲ್ಲಿ ಇವನ ನೆತ್ತಿ ಕುಕ್ಕುವರೋ ಎಂದು ನನ್ನ ದುಃಖ ಉಕ್ಕಿ ಬಂದಿದ್ದರೆ ಅಣ್ಣನ ಮುಂದಿನ ಗತಿಯೇನೋ ಎಂದು ಮರಳಿ ಮನೆಗೆ ಬರುವನೋ ಇಲ್ಲವೋ ಎಂದು, ಮತ್ತೆ ಕಾಯಿಲೆ ಬಿದ್ದರೆ ಹೇಗೆ ಎಂದು ಅವನ ಉಮ್ಮಳ ಉಕ್ಕಿ ಬಂದಿದ್ದಿತು. "ನನ್ನ ಯೋಚನೆ ಬಿಡಣ್ಣ; ನೀನು ಸುಖವಾಗಿ ಹೋಗಿ ಬಾ' ಎಂದು ಅನ್ನದಾನಿ ಅಂದಾಗ ರಾಮಾಯಣದ ಈ ಶ್ಲೋಕ ನೆನಪಾಯಿತು ನನಗೆ: "ದೇಶೆ ದೇಶೇ ಕಲತ್ರಾಣಿ ದೇಶೋದೇಶೇ ಚ ಬಾಂಧವಾಃ। ತಂತು ದೇಶಂ ನ ಪಶ್ಯಾಯಿ ಯತ್ರ ಭ್ರಾತಾ ಸಹೋದರಃ॥" ಶ್ರೀರಾಮನ ನುಡಿಯಿದು–ಲಕ್ಷ್ಮಣನ ಭಾತೃವಾತ್ಸಲ್ಯದಿಂದ ಗದ್ಗದಿತನಾಗಿದ್ದ ಶ್ರೀರಾಮನ ನುಡಿಯಿದು: "ಯಾವ ದೇಶದಲ್ಲಾದರೂ ಮಡದಿಯರು ದೊರಕಬಹುದು; ಬಂಧುಗಳು ಸಿಕ್ಕಬಹುದು. ಆದರೆ ಒಡಹುಟ್ಟಿದ ತಮ್ಮನು ಲಭಿಸುವ ಯಾವ ದೇಶವನ್ನೂ ನಾನು ಕಾಣೆ!" ತಮ್ಮನು ಹಿಂದಿರುಗುವಾಗ ಹಾದಿ ತಪ್ಪಿ ಸ್ಮಶಾನವೊಂದರ ರುದ್ರ ದೃಶ್ಯವನ್ನು ನೋಡಬೇಕಾಯಿತೆಂದೂ, ಆಲಮಟ್ಟಿಯಿಂದ ತಂದೆಯವರಿಗೆ ನನ್ನ ಪತ್ರ ಬರುವವರೆಗೆ ಈ ಗುಟ್ಟು ರಟ್ಟಾಗದಂತೆ ನೋಡಿಕೊಳ್ಳುವಲ್ಲಿ ಬಹಳ ಕಿರುಕುಳ ಅನುಭವಿಸಬೇಕಾಯಿತೆಂದೂ ಆಮೇಲೆ ತಿಳಿಯಿತು ನನಗೆ.



ಬನ್ನಿಕೊಪ್ಪ ನಿಲ್ದಾಣಕ್ಕೆ ಹೋದರೆ ಸಿಕ್ಕಿಬೀಳುವ ಸಂಭವವಿದೆಯೆಂದು ಯೋಚಿಸಿ ರಾತ್ರೋರಾತ್ರಿ ಹರ್ಲಾಪುರ ನಿಲ್ದಾಣಕ್ಕೆ ಹೋದೆವು ನಾವು. ಆಗ ಹನುಮಂತ ರೆಡ್ಡಿಯವರು ನನ್ನ ಹಾಸಿಗೆ ಗಂಟು ಹೊತ್ತರು! ಅಂಥ ಗೆಳೆಯರೊಬ್ಬರನ್ನು ಪಡೆದದು ನನ್ನ ಸುದೈವ. ನನ್ನನ್ನು ಗದಗಿನ ಗಾಡಿ ಹತ್ತಿಸಿ ಕತ್ತಲೆಯಲ್ಲಿ ಅದೃಶ್ಯರಾದರು ಅವರು. ಉಗಿಬಂಡಿ ಹೊರಟಿತು ಎರಡನೆಯ ಸಲ ಮನೆ ಬಿಟ್ಟು ಹೊರಟ ನನ್ನನ್ನು ಹೊತ್ತು ಗದಗಿನಲ್ಲಿಳಿದು ವಿಜಾಪುರ–ಸೊಲ್ಲಾಪುರ ಗಾಡಿ ಹತ್ತಿದೆ. ಉದ್ದಕ್ಕೋ ಒಂದೇ ಯೋಚನೆ. "ಮಂಜಪ್ಪಣ್ಣನವರು ಏನೆನ್ನುವರೋ? ನನ್ನ ನಿರ್ಣಯ ಸರಿಯೆಂದು ಆಶ್ರಯ ನೀಡುವರೋ, ತಂದೆತಾಯಿಗಳ ಮಾತು ಮೀರಿ ಬಂದವನೆಂದು ತಿರಸ್ಕರಿಸುವರೊ? ಅವರೂ ನಿರಾಕರಿಸಿಬಿಟ್ಟರೆ ಮುಂದಾವ ಗತಿ? ಹೋದಸಲ ಐಯ್ವತ್ತು ರೂಪಾಯಿಗಳಾದರೂ ಇದ್ದುವು ಹತ್ತಿರ; ಈ ಸಲ ಹನುಮಂತ ರೆಡ್ಡಿಯರಿತ್ತ ಹತ್ತೇ ರೂಪಾಯಿಗಳು! ಯೋಚಿಸಿ ಯೋಚಿಸಿ ಸುಸ್ತಾಗಿ ಕೊನೆಗೆ ಆದದ್ದಾಗಲಿ, ಎಂದು ಮನಸ್ಸು ಕಲ್ಲು ಮಾಡಿಕೊಂಡು ಕುಳಿತು ಬಿಟ್ಟೆ. ಇನ್ನೇನ ಮಾಡಬಹುದಿತ್ತು?

ಮಂಜಪ್ಪಣ್ಣನವರಿಗೆ ಮಣಿದು ಮುಂದೆ ನಿಂತಾಗ ಸಹಜವಾಗಿ ಅವರು ಕೇಳಿದರು: 'ಇದೇನು, ಕಾಗದ ಕೂಡ ಬರೆಯದೆ ಬಂದು ಬಿಟ್ಟೆ?" ಅವರು ಸಹಜವಾಗಿ ಕೇಳಿದರೂ ಅಂಜುತ್ತ ಅಳುಕುತ್ತಲೇ ಹೋಗಿದ್ದ ನನಗದು ಅಪ್ರಸನ್ನತೆಯ ಪ್ರತೀಕವಾಗಿ ತೋರಿ ಅಧೀರನಾದೆ; ಉತ್ತರವೀಯಲು ಪ್ರಯತ್ನಿಸಿ ವಿಫಲನಾದೆ; ಮುಖ ಕಪ್ಪಿಟ್ಟಿತು. ಕುಶಾಗ್ರಮತಿಗಳಾಗಿದ್ದ ಅವರು ಆ ಕ್ಷಣ ಅದನ್ನು ಗಮನಿಸಿ ಮಾತು ಮುಂದುವರಿಸಿದರು: "ಮೊದಲೇ ಕಾಗದ ಬರೆದಿದ್ದರೆ ನಿಲ್ದಾಣಕ್ಕೆ ಯಾರನ್ನಾದರೂ ಕಳಿಸುತ್ತಿದ್ದೆ; ಪೆಟ್ಟಿಗೆ, ಹಾಸಿಗೆ ಎರಡನ್ನೂ ನೀನೇ ಹೊತ್ತುಕೊಂಡು ಬರುವ ತ್ರಾಸು ತಪ್ಪುತ್ತಿತ್ತು. ಸಾಮಾನು ಆ ಕೋಣೆಯಲ್ಲಿರಿಸಿ ಸ್ನಾನ ಮಾಡಿ ಬಿಡು. ಮೊದಲು ಪ್ರಸಾದ ಸೇವನೆ ಮುಗಿಯಲಿ; ಆಮೇಲೆ ಮತ್ತೆ ಮಾತನಾಡೋಣ". ನನಗೊಂದು ಕೋಣೆ ದೊರೆಯಿತು. ಅಲ್ಲಿ ಸಾಮಾನು ಇರಿಸಿ ಸ್ನಾನ ಮಾಡಿ ಊಟ ಮಾಡಿದೆ. ಅಣ್ಣನವರ ಕೋಣೆಗೆ ಹೋದಾಗ ಅವರು ನನ್ನ ನಿರೀಕ್ಷೆಯಲ್ಲಿಯೇ ಇದ್ದಂತೆ ತೋರಿತು, ನಡೆದುದೆಲ್ಲವನ್ನೂ ವಿವರಿಸಿದೆ. ಆ ಜನ್ಮ ಬ್ರಹ್ಮಚಾರಿಗಳಾಗಿದ್ದ ಅವರಿಗೆ ನಾನು ಮದುವೆ ನಿರಾಕರಿಸಿದುದನ್ನು ಕೇಳಿ ಸಂತೋಷವೇ ಆಯಿತು. "ನಿನ್ನಿಂದ ನಾನು ನಿರೀಕ್ಷಿಸಿರುವುದು ಬಹಳವಿದೆ; ಮದುವೆಯಾಗಿದ್ದರೆ ನಿನ್ನ ಭವಿತವ್ಯವೇ ಹಾಳಾಗುತ್ತಿದ್ದಿತು; ನನ್ನ ನಿರೀಕ್ಷೆಗಳೂ ಹುಸಿಯಾಗುತ್ತಿದ್ದವು. ಮದುವೆಯನ್ನು ನಿರಾಕರಿಸಿ ಸರಿಯಾದುದನ್ನೇ ಮಾಡಿದೆ. ಇಲ್ಲಿ ಎಷ್ಟು ದಿನ ಬೇಕಾದರೂ ಇರು. ನಿನ್ನಂಥವರಿಗಾಗಿಯೇ ಇದೆ ಈ ಆಶ್ರಮ. ಇಲ್ಲಿಯೇ ಇದ್ದು

ಓದಿ ಖಾಸಗಿಯಾಗಿ ಪರೀಕ್ಷೆಗೆ ಹೋಗಿ ಬಾ. ನಿನ್ನ ತಂದೆಯವರಿಗೆ ನೀನಿಲ್ಲಿ ಇರುವ ವಿಷಯ ತಿಳಿಸಿ ನೀನೇ ಕಾಗದ ಬರೆಯುವೆಯಾ, ನಾನು ಬರೆಯಲೆ?"

ನನ್ನ ಕುಸಿದಿದ್ದ ಚೇತನ ಪುಟಿದೆದ್ದಿತು. ನಾನೇ ಕಾಗದ ಬರೆಯುವೆನೆಂದು ಹೇಳಿದೆ. ಅವರೇ ಕಾಗದ, ಲಕೋಟೆ ಕಳಿಸಿಕೊಟ್ಟರು. ನಾನು ಅಂದೇ ತಂದೆಯವರಿಗೆ ಕಾಗದ ಬರೆದು ನಾನು ಆಲಮಟ್ಟಿಗೆ ಬಂದಿರುವುದನ್ನು ತಿಳಿಸಿದೆ. ಅವರಿಗೆ ಇಬ್ಬಗೆಯ ಆನಂದ; ಒಂದು, ನಾನು ಕರ್ನಾಟಕ ಗಾಂಧಿಯೆಂದು ಖ್ಯಾತರಾಗಿದ್ದ ಮಂಜಪ್ಪನವರ ಆಶ್ರಯದಲ್ಲಿ ಸುಕ್ಷೇಮವಾಗಿರುವುದನ್ನು ತಿಳಿದು. ಇನ್ನೊಂದು, ಹೀಗೆ ಅನಿರೀಕ್ಷಿತವಾಗಿ ಅವರ ಒಳ ಆಸೆ–ನನ್ನ ಮದುವೆಯ ಮುರುಗಡೆಯಾಗಬೇಕೆಂಬ ಆಸೆ– ಈಡೇರಿದುದು. "ನಿಷ್ಠುರವಾಗಿ ಮದುವೆ ಬೇಡವೆಂದು ಹೇಳಿಬಿಟ್ಟಿದ್ದರೆ ಸಾಕಿತ್ತು; ಇಷ್ಟು ಕಷ್ಟ ಪಡಬೇಕಾಗುತ್ತಿರಲಿಲ್ಲ" ಎಂದವರು ಉತ್ತರವಿತ್ತರು. "ತಾವು ಮಾತು ಕೊಟ್ಟು ಬಿಟ್ಟಿದ್ದಿರಿ; ತಿರುಗಿಬಿದ್ದು ತಮ್ಮ ಮಾತಿಗೆ ನಾನು ಬೆಲೆ ಕೊಡಲಿಲ್ಲವೆಂದು ಎನ್ನಿಸಿಕೊಳ್ಳುವುದಕ್ಕಿಂತ ತಮ್ಮ ಮಾತಿನಂತೆ ತಾವು ನಡೆದುಕೊಂಡರೂ ಈ ಮುಠ್ಠಾಳ ಎಲ್ಲ ಕೆಡಸಿ ಬಿಟ್ಟ ಎಂದು ನನ್ನ ಮೇಲೆಯೇ ಎಲ್ಲರೂ ಎಲ್ಲ ದೋಷವನ್ನೂ ಹೊರಿಸಲಿ ಎಂದು ಹೀಗೆ ಮಾಡಿದೆ"ನೆಂದು ಮಾರುತ್ತರವಿತ್ತೆ. ಅವರು ಪ್ರೀತರಾದರು.

**ಆಲಮಟ್ಟಿ ಆಶ್ರಮ :**

ಆಲಮಟ್ಟಿಯ ಆಶ್ರಮದಲ್ಲಿ ನಾನು ಕಳೆದ ಆರು ತಿಂಗಳುಗಳು ನನ್ನ ಜೀವಮಾನದ ಅತ್ಯಂತ ಮಹತ್ವದ ಅವಧಿಯೆಂದು ಧಾರಾಳವಾಗಿ ಹೇಳಬಲ್ಲೆ. ನಾನೇ ಬರೆದ "ಹಾರ್ಡೇಕರ ಮಂಜಪ್ಪನವರು" ಎಂಬ ಪುಸ್ತಕದಲ್ಲಿ ಈ ಬಗ್ಗೆ ಇಂತು ಉಲ್ಲೇಖಿಸಿದ್ದೇನೆ: "ಪ್ರತಿನಿತ್ಯ ಸಮೀಪದ ಕೃಷ್ಣಾ ನದಿಯಲ್ಲಷ್ಟೇ ಅಲ್ಲ, ಅಣ್ಣನವರ ಅರಿವಿನ ತೊರೆಯಲ್ಲಿಯೂ ಮಿಂದು ಮಡಿಯಾಗತೊಡಗಿದೆ. ನಿತ್ಯ ಕೋಳಿ ಕೂಗುವ ಮುನ್ನ ಏಳುವುದು, ಅವರೊಡನೆ ಕನ್ನಡ ನಾಡಿನ ಪರ್ದೊರೆ ಕೃಷ್ಣಾ ನದಿಯ ತೀರಕ್ಕೆ ಹೋಗುವುದು, ಉತ್ತರಾಣಿಯ ಬೇರಿನಿಂದ ಹಲ್ಲುಜ್ಜಿ ತೊರೆಯ ತಿಳಿ ನೀರಿನಲ್ಲಿ ಈಸುವುದು, ಬಟ್ಟೆಗಳನ್ನು ಮಡಿ ಮಾಡಿಕೊಂಡು ಆಶ್ರಮಕ್ಕೆ ಮರಳಿ, ಲಿಂಗ ಪೂಜೆ ಮುಗಿಸಿ, ಒಂದು ಬಟ್ಟಲು ಹಾಲು ಸೇವಿಸುವುದು– ನಿಯಮಿತ ತನದಿಂದ ನಡೆಯಿತು, ನದಿಗೆ ಹೋಗುವಾಗ, ಅಲ್ಲಿಂದ ಹಿಂದಿರುಗುವಾಗ ಹಾದಿಯುದ್ದಕ್ಕೂ ಕೋಕಿಲ ಕೂಜನ, ಹಕ್ಕಿಗಳ ಹಾಡು, ಅಲ್ಲಿಷ್ಟು ಇಲ್ಲಿಷ್ಟು ಬಿರಿಮುಗುಳುಗಳ ನರುಗಂಪು, ತಂಗಾಳಿಯ ಸುಖ ಸ್ಪರ್ಶ, ಉಷೆಯ ಸೊಬಗಿನ ಸೂರೆ, ಎಲ್ಲಕ್ಕೂ ಮಿಗಿಲಾಗಿ ಅಣ್ಣನವರಿಂದ ಒಂದಿಲ್ಲೊಂದು ವಿಷಯದ ಬಗ್ಗೆ ವಿವೇಚನೆ. ಒಮ್ಮೆ ವೇದಾಗಮೋಪ ನಿಷತ್ತುಗಳ ಬಗ್ಗೆ, ಒಮ್ಮೆ ಭಗವದ್ಗೀತೆಯ



ಬಗ್ಗೆ, ಒಮ್ಮೆ ಬಸವಾದಿ ಪ್ರಮಥರ ಉಜ್ವಲ ವಿಚಾರಗಳ ಬಗ್ಗೆ, ಒಮ್ಮೆ ಲೋಕಮಾನ್ಯ ತಿಲಕರ, ಗೋಖಲೆಯವರ, ಮಹಾತ್ಮಗಾಂಧೀಜಿಯವರ ಬಗ್ಗೆ, ಒಮ್ಮೆ ರಾಮತೀರ್ಥ, ರಾಮಕೃಷ್ಣ, ವಿವೇಕಾನಂದರ ಬಗ್ಗೆ, ಒಮ್ಮೆ ಡಾರ್ವಿನ್, ಹರ್ಬರ್ಟ್ ಸ್ಪೆನ್ಸರ್, ನ್ಯೂಟನ್, ಐನ್‌ಸ್ಟಾಯಿನ್ನರ ಬಗ್ಗೆ–ಇನ್ನೂ ಯಾರಾರ ಬಗ್ಗೆ ಹೇಳಿದರೆಂಬುದನ್ನು ಹೇಳುತ್ತ ಹೋದರೆ ಈ ಪುಸ್ತಿಕೆಯ ಪುಟಮಿತಿಯನ್ನು ಮೀರಬೇಕಾದೀತು. ಬೆರಗುಗೊಳಿಸುವ ಬಹುವಿಷಯ ಪರಿಣತಿ ಅವರದು. ಅವರ ವಿಷಯ ವಿವೇಚನೆಯ ವೈಖರಿ ಅವರದೇ. ವಿಷಯ ಎಂಥ ಗಹನವಾದುದೇ ಇರಲಿ, ಜಟಿಲವಾದುದೇ ಇರಲಿ, ಅದನ್ನು ಪಾಮರರಿಗೂ ತಿಳಿಯುವಂತೆ ಹೇಳುವ ಕಲೆ ಅವರಿಗೆ ಕರತಲಾಮಲಕವಾಗಿದ್ದಿತು. ಅವರ ಫೌಂಟನ್‌ಪೆನ್ನು ಅಸಂಸ್ಕೃತರನ್ನು ಸುಸಂಸ್ಕೃತರನ್ನಾಗಿಯೂ, ನಿರಕ್ಷರರನ್ನು ಸಾಕ್ಷರರನ್ನಾಗಿಯೂ, ಬೆಳ್ಳಕ್ಕರಿಗರನ್ನು ಅಕ್ಕರಿಗರನ್ನಾಗಿಯೂ ಮಾಡಲು ಕರ್ಮ ಯೋಗಿಯಂತೆ ತೊಡಗಿದೆ" ಎಂದು ಬರೆದಿದ್ದಾರೆ ನಾಡ ಕವಿ ಬೇಂದ್ರೆಯವರು. ಇದು ಸರಿಯೆ. ಆದರೆ ಅವರ ಫೌಂಟನ್‌ಪೆನ್ ಮಾಡಿದ ಮಹತ್ಕಾರ್ಯವನ್ನೇ ಅವರ ಜಿಹ್ವೆಯೂ ಮಾಡಿದೆಯೆಂಬುದನ್ನು ಮರೆಯುವ ಹಾಗಿಲ್ಲ.

**ಕರ್ನಾಟಕ ಗಾಂಧಿಯ ವ್ಯಕ್ತಿತ್ವ :**

ದಿನಗಳೆದಂತೆ ಅವರ ಋಷಿಸದೃಶ ಜೀವನ, ಸತತ ಕಾಯಕತತ್ಪರತೆ, ಸ್ವಾಧ್ಯಾಯರತಿ, ವಿಶಾಲ ಹೃದಯ, ದೂರ ದೃಷ್ಟಿ, ಪ್ರಗತಿಪರ ವಿಚಾರಸರಣಿ, ಬಹುಮತಗಳ ಬಹುಪಥಗಳ ಬಹುಜನರೊಡನೆ ಸುಮಧುರ ಸಂಬಂಧ, ಸಕಲಧರ್ಮ, ಸಮಭಾವ–ಸಮನ್ವಿತ–ಸ್ವಧರ್ಮಶ್ರದ್ಧೆ, ತಮ್ಮ ತಪ್ಪನ್ನು ಯಾರು ತೋರಿದರೂ ಒಪ್ಪಿಕೊಳ್ಳುವ ಉದಾರತೆ, ತಪ್ಪು ಯಾರಿಂದಲೇ ಆಗಿರಲಿ– ರಾಷ್ಟ್ರನಾಯಕರಿಂದಲೇ ಆಗಿರಲಿ, ಪರಮಪ್ರಿಯರಿಂದಲೇ ಆಗಿರಲಿ–ಅದನ್ನು ನಿರ್ದಾಕ್ಷಿಣ್ಯವಾಗಿ ಎತ್ತಿ ತೋರುವ ನ್ಯಾಯನಿಷ್ಠುರತೆ, ಒಪ್ಪು ವೈರಿಗಳಿಂದಲೇ ಆಗಿದ್ದರೂ ಅದನ್ನು ಎತ್ತಿ ಹಿಡಿವ ಹಿರಿಯತನ, ಯಾವುದನ್ನೂ ವಿವೇಕದ ಒರೆಗಲ್ಲಿಗೆ ತಿಕ್ಕಿ ನೋಡಿಯೇ ಪರಿಗ್ರಹಿಸುವ ವೀರವ್ರತ, ತಾವು ಪ್ರಮಾಣಿಕವಾಗಿ ನಂಬಿದುದನ್ನು ಮಂಡಿಸುವಲ್ಲಿ, ತಮಗೆ ಸರಿದೋರದುದನ್ನು ಖಂಡಿಸುವಲ್ಲಿ ವಿಚಕ್ಷಣತೆ, ವಿಷಯವಾವುದಿದ್ದರೂ ಅದನ್ನು ತಲಸ್ಪರ್ಶಿಯಾಗಿ ಶೋಧಿಸುತ್ತಿದ್ದ ನಿಶಿತಮತಿ, ಹೊಗಳಿಕೆಗೆ ಹಿಗ್ಗದ ತೆಗಳಿಕೆಗೆ ಕುಗ್ಗದ ಸ್ಥಿತಪ್ರಜ್ಞತೆ, ಭಾರತದ ಸ್ವಾತಂತ್ರ್ಯ ಸಂಪಾದನೆ, ಕರ್ನಾಟಕದ ಏಕೀಕರಣ, ಗ್ರಾಮೋದ್ಯೋಗಗಳ ಪುನರುಜ್ಜೀವನದ ಮೂಲಕ ಗ್ರಾಮಾಭಿಮುಖಿಯಾದ ಅರ್ಥನೀತಿಯ ಮುಖಾಂತರ ಗ್ರಾಮೋದಯ ಸಾಧನೆ,

ಆದಿಜನರ ಪುನರುತ್ಥಾನ, ಹೆಂಗಳೆಯರ ಹೊಸ ಹುಟ್ಟು, ಶಿಕ್ಷಣ ಪದ್ಧತಿಯ ಸುಧಾರಣೆ, ನೈತಿಕತೆಯ ನವೋದಯ, ಹಿಂದೂ ಸಂಘಟನೆ, ಬಸವಾದಿ ಪ್ರಮಥರ ಪಥ ದರ್ಶನ, ಮಕ್ಕಳ ಸಾಹಿತ್ಯ ಹಾಗೂ ವಿಚಾರ ಸಾಹಿತ್ಯಗಳ ಸೃಷ್ಟಿ–ಇತ್ಯಾದಿಗಳಲ್ಲಿ ಅವರಿಗಿದ್ದ ನಿಶ್ಚಲ ನಿಷ್ಠೆ, ದೇಶದ ಸಮಸ್ಯೆಗಳ ಬಗ್ಗೆ, ಅವುಗಳ ನಿವಾರಣೋಪಾಯಗಳ ಬಗ್ಗೆ ಅವರಿಗಿದ್ದ ಅಗಾಧವಾದ ತಿಳಿವು, ಇವೆಲ್ಲವುಗಳಿಗಾಗಿ ಏಕಾಂಗವೀರರಾಗಿ ಅವರು ನಡೆಸಿದ್ದ ಹೋರಾಟ–ಮೊದಲಾದುವನ್ನು ಪ್ರತ್ಯಕ್ಷದರ್ಶಿಯಾಗಿ ನೋಡಿದ ನನಗೆ ಅವರೊಬ್ಬ ಮಹಾಮಾನವರಾಗಿ ತೋರಿದರು. ದಿ. ಮುದವೀಡು ಕೃಷ್ಣರಾಯರು ಅವರನ್ನು 'ತಪಸ್ವಿ ಮಂಜಪ್ಪನವರು' ಎಂದೂ, 'ಶ್ರೇಷ್ಠ ಮಹಾಪುರುಷ'ರೆಂದೂ, ದಿ. ದೇಶಪಾಂಡೆ ಗಂಗಾಧರ ರಾಯರು ಅವರನ್ನು 'ಕರ್ನಾಟಕದ ಗಾಂಧಿ'ಯೆಂದೂ ಕರೆದುದು ಸಮುಚಿತವಾದುದೇ ಆಗಿದೆ.

ಲಗ್ನದ ರಾದ್ಧಾಂತದಿಂದ ನನ್ನದೊಂದು ವಿದ್ಯಾಭ್ಯಾಸ ವರ್ಷ ನಷ್ಟವಾಯಿತೆಂದು ನಾನೇನೋ ಆರಂಭದಲ್ಲಿ ಮಿಡುಕಿದ್ದೆ. ಆದರೆ ಆರು ತಿಂಗಳುಗಳಲ್ಲಿ ನಾನು ಅಣ್ಣನವರಿಂದ ಪಡೆದ ಪಲಮೊಗದ ಪರಿಜ್ಞಾನವನ್ನು ನೆನೆದಾಗ ನಾನು ಶಾಪವೆಂದು ತಿಳಿದುದು ವರವಾಗಿ ಪರಿಣಮಿಸಿತೆಂದೇ ನನಗೆ ಮನವರಿಕೆಯಾಯಿತು. ವಚನ ಸಾಹಿತ್ಯದ ವ್ಯಾಸಂಗವೆ, ಆಂಗ್ಲ ಸಾಹಿತ್ಯದ ಅಧ್ಯಯನವೆ, ಪತ್ರಿಕೋದ್ಯಮದ ಪರಿಜ್ಞಾನವೆ, ಅನುವಾದ ಕಾರ್ಯವೆ, ಬರಹಗಾರಿಕೆಯೆ, ಅಲ್ಲಿಯ ಶಿಕ್ಷಣ ಪದ್ಧತಿಯೆ, ಗ್ರಾಮೋದ್ಯೋಗ ಪ್ರಯೋಗಗಳ ಪರಿಚಯವೆ, ಆರೋಗ್ಯ ವಿಜ್ಞಾನ ಆಹಾರ ವಿಜ್ಞಾನಗಳೆ, ಸತ್ಯಾಗ್ರಹ ಸಮಾಜದ ಪರಿಕಲ್ಪನೆಯೆ, ದೇಶದ ಸಮಸ್ಯೆಗಳ ತಿಳುವಳಿಕೆಯೆ–'ಅಲ್ಲಿ ಏನನ್ನು ಪಡೆದೆ?' ಎಂಬ ಪ್ರಶ್ನೆಗೆ, 'ಏನನ್ನು ಪಡೆಯಲಿಲ್ಲ?' ಎಂಬ, ಮರುಪ್ರಶ್ನೆಯೆ ಉತ್ತರ!

ಅವರ ಆತ್ಮವೃತ್ತದಂತಿರುವ ಅವರ ಹೊತ್ತಗೆ, "ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ"ಯನ್ನವರು ಹೀಗೆ ಮುಕ್ತಾಯಗೊಳಿಸಿದ್ದಾರೆ: "ನಾನು ಈ ದಾರಿಯನ್ನು ಹಿಡಿಯದೆ ವಿವಾಹಿತನಾಗಿದ್ದರೆ ಜನಸಂಖ್ಯೆಯಲ್ಲಿ ೪–೫ ಹೆಚ್ಚಿಸಿ, ನಾಲ್ಕೈದು ಸಾವಿರ ಕಾದಿಟ್ಟು, ಈಗ ತಿಂಗಳಿಗೆ ೧೫–೨೦ರೂಪಾಯಿ ವಿಶ್ರಾಂತಿವೇತನ (ಪೆನ್‌ಶನ್) ಹೊಂದುವ 'ಮಾಸ್ತರ'ನಾಗಿರುತ್ತಿದ್ದೆನು. ಅದಕ್ಕಿಂತ ನಾನು ಈಗ ಎಷ್ಟೋ ಹೆಚ್ಚು ಜನಸೇವೆಯನ್ನು ಮಾಡಿದ್ದೇನೆಂದು ನನಗೆ ಬಹು ಸಮಾಧಾನ."

"೧೯೩೭ರಲ್ಲಿ ಮಹಾನುಭಾವ ಮಂಜಪ್ಪನವರು ತಮ್ಮ ಆಶ್ರಯದಲ್ಲಿ ನನಗೆ ಆಶ್ರಯ ನೀಡದೆ ಹೋಗಿದ್ದರೆ ನಾನೂ ಆಗಲೇ ವಿವಾಹಿತನಾಗಿ, ಜನಸಂಖ್ಯೆಯಲ್ಲಿ ೪–೫ ಹೆಚ್ಚಿಸಿ, ನಾಲ್ಕೈದು ಸಾವಿರ ಕಾದಿಟ್ಟು, ಈಗ ತಿಂಗಳಿಗೆ ೧೫–೨೦ (ಈಗಿನ



ಮಾನದಿಂದ ಇದಕ್ಕೂ ಹೆಚ್ಚು) ವಿಶ್ರಾಂತಿವೇತನ ಹೊಂದುವ 'ಮಾಸ್ತರ'ನೋ, 'ಗುಮಾಸ್ತ'ನೋ ಆಗಿರುತ್ತಿದ್ದೆ. ಅವರು ಆಗ ಆಶ್ರಯವಿತ್ತರೆಂದು ಈಗ ಅಷ್ಟಿಷ್ಟು ನಾಡು–ನುಡಿಗಳ ಸೇವೆ ಮಾಡಿದೆನೆಂಬ ಸಮಾಧಾನವನ್ನು ಹೊಂದಿದ್ದೇನೆ. 'ನಿನ್ನಿಂದ ನಾನು ಬಹಳಷ್ಟು ನಿರೀಕ್ಷಿಸಿದ್ದೇನೆ' ಎಂದು ಅಂದವರು ಉದ್ಗರಿಸಿದ್ದರು. ಅವರ ನಿರೀಕ್ಷೆಯಷ್ಟು ನಾನು ಸಾಧಿಸಿಲ್ಲ, ನಿಜ. ಅವರಂತೆ ನಾನು ನೈಷ್ಠಿಕ ಬ್ರಹ್ಮಚಾರಿಯಾಗಿ ಉಳಿಯಲಿಲ್ಲ: ತಪಸ್ವಿಯಾಗಿ ಬೆಳೆಯಲಿಲ್ಲ. ಅದು ನನ್ನಂಥ ಸಾಮಾನ್ಯರಿಗೆ ನಿಲುಕುವ ಸಿದ್ಧಿಯಲ್ಲ. ಆದರೆ ಅವರು ಅಂದಿತ್ತ ಆಶ್ರಮವನ್ನು ವ್ಯರ್ಥಗೊಳಿಸಿದ್ದೇನೆಂದು ನನಗೆನ್ನಿಸುತ್ತಿಲ್ಲ. ಅವರ ಗರಡಿಯಲ್ಲಿ ಸಿದ್ಧನಾಗಿಯೂ ಜೀವನ ವ್ಯರ್ಥತೆಯ ಪ್ರಲಾಪ ಮಾಡಬೇಕಿಲ್ಲ." (ಶ್ರೀ ಹರ್ಡೇಕರ ಮಂಜಪ್ಪನವರ: ಪ್ರಕಾಶಕರು: ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಮಠ, ಗದಗ).

ಆಶ್ರಮದ ಗ್ರಂಥ ಭಂಡಾರ ದೊಡ್ಡದಾಗಿಯೇ ಇದ್ದಿತು. ಅಲ್ಲಿಯೇ ನನ್ನ ಹೆಚ್ಚು ಕಾಲ ಕಳೆಯುತ್ತಿತ್ತು. "ಸ್ಪೆಕ್ಟೇಟರ್" ಪತ್ರಿಕೆಯ ಸಂಪುಟಗಳನ್ನೆಲ್ಲ ತಿರುವಿ ಹಾಕಿದೆ; ಮಿಲ್, ಬೆಂಥಮ್, ಎಮರ್ಸನ್, ರಸ್ಕಿನ್, ಟಾಲಸ್ಟಾಯ್, ಕಾರ್ಲಾಯಿಲ್ ಮೊದಲಾದವರ ಕೃತಿಗಳನ್ನು ಓದಿದೆ; ಎಲ್ಲ ವಚನ ಸಂಗ್ರಹಗಳನ್ನೂ ಆಸಕ್ತಿಯಿಂದ ನೋಡಿ ಬಹಳ ಮೆಚ್ಚುಗೆಯಾದ ವಚನಗಳನ್ನು ಬರೆದುಕೊಂಡೆ; 'ಶರಣ ಸಂದೇಶ'ಕ್ಕೆ ಪ್ರತಿವಾರವೂ ಕಥೆಯನ್ನೋ, ಕವಿತೆಯನ್ನೋ, ನಗೆಬರಹವನ್ನೋ, ಅನುವಾದಿತ ಲೇಖನವನ್ನೋ ಒದಗಿಸುತ್ತಿದ್ದೆ; ಅಣ್ಣನವರು ದೂರದ ಪ್ರವಾಸಕ್ಕೆ ಹೋದಾಗ ಪತ್ರಿಕೆಯ ಹೊಣೆಯನ್ನೆಲ್ಲ ಹೊರುತ್ತಿದ್ದೆ. ಒಂದೆರಡು ಸಲ ಪತ್ರಿಕೆಯ ಗುಣಮಟ್ಟವನ್ನು ಹೆಚ್ಚಿಸಿದೆನೆಂದು ಅವರಿಂದ 'ಶಹಭಾಸು' ಪಡೆದೆ; ಅಲ್ಲಿಗೆ ಬರುತ್ತಿದ್ದ ಪತ್ರಗಳನ್ನು ಓದುವುದೇ ವಿನೋದಪೂರ್ಣವಾಗಿರುತ್ತಿದ್ದಿತು. ನಾನಾ ಬಗೆಯ ಕೈಬರಹಗಳು, 'ವೈವಿಧ್ಯಮಯ' ವಿಚಾರಧಾರೆಗಳು, ಚಿತ್ರ ವಿಚಿತ್ರ ವಿಷಯಗಳು! ಒಮ್ಮೆ ಒಬ್ಬ 'ಲೇಖಕ' ಮಹಾಶಯರು ಬರೆದಿದ್ದರು: "ಅಣ್ಣನವರೆ, ನೀವು ಸಿದ್ಧೇಶ್ವರ ಟ್ರೆಜರಿಯವರ ಲೇಖನ ವಾರ ವಾರವೂ ಪ್ರಕಟಿಸುತ್ತೀರಿ; ನನ್ನ ಲೇಖನವನ್ನು ಒಮ್ಮೆಯೂ ಪ್ರಕಟಿಸಲಿಲ್ಲ! ಇದು ನ್ಯಾಯವೆ?" ಸಿದ್ಧೇಶ್ವರ ಟ್ರೆಜರಿಯ ಜಾಹೀತರಾತನ್ನೇ ಲೇಖನವೆಂದು ಭ್ರಮಿಸಿದ ಬರಹಗಾರರಿವರ ಬರಹಗಳು ಹೇಗಿರಬೇಡ?

## 'ಕಾವ್ಯಾನಂದ' :

ಆಲಮಟ್ಟಿಯಲ್ಲಿದ್ದಾಗಲೇ ನನ್ನ ಕಾವ್ಯನಾಮ 'ಕಾವ್ಯಾನಂದ' ನನಗೆ ಆಕಸ್ಮಿಕವಾಗಿ ಲಭ್ಯವಾಯಿತು. 'ಕಾವ್ಯದೇವಿ' ಎಂಬ ನೀಳ್ಗವಿತೆ ಬರೆದೆ. ಅದು 'ಶರಣ ಸಂದೇಶ'ದ ಸಂಚಿಕೆಯೊಂದರಲ್ಲಿ ಪ್ರಕಟವಾಗಿ ಈಗ ಮರಹಿನ ಉದರದಲ್ಲಿ ಕರಗಿ ಹೋಗಿದೆ!

ಆದರೆ ಅದರ ಕೊನೆಯ ಎರಡು ಸಾಲು ನನ್ನ ಮಟ್ಟಿಗೆ ಎಂದೂ ಮರೆಯಲಾಗದ ಸಾಲುಗಳು: "ನಿನ್ನಾತ್ಮವಾನಂದ ನನ್ನಾತ್ಮ ಕಾವ್ಯ! ಇಂತು 'ಕಾವ್ಯನಂದ' ನಾಮ ಸುಶ್ರಾವ್ಯ." ಅಂದಿನಿಂದ ಸಿದ್ಧಯ್ಯ ಪುರಾಣಿಕ 'ಕಾವ್ಯನಂದ'ನಾದ; 'ಕಾವ್ಯನಂದ' ಯಾರು–ಎಂಬುದು ಎಲ್ಲರಿಗೂ ಗೊತ್ತಾದ ಮೇಲೆ 'ಕಾವ್ಯಾನಂದ+ಪುರಾಣಿಕ' ಸಿದ್ಧಯ್ಯ ಪುರಾಣಿಕ (ಕಾವ್ಯಾನಂದ) ಎಂದು ಏನೇನೋ ಆಗಿ ಈಗ ಬಚ್ಚಬರಿಯ ಸಿದ್ಧಯ್ಯ ಪುರಾಣಿಕ. 'ಕಾವ್ಯಾನಂದ' ಪ್ರತಿವಾರ 'ಶರಣ ಸಂದೇಶ'ದಲ್ಲಿ ಕಾಣತೊಡಗಿದ ಮೇಲೆ ಅನೇಕರು ಅಣ್ಣನವರನ್ನು ಕೇಳಿದರಂತೆ: 'ಇವನ ಬರವಣಿಗೆ ನಮಗೆ ಹಿಡಿಸಿದೆ; ಇವನು ಯಾರು?' ಎಂದು. ಅವರು, "ಪ್ರಸಂಗ ವಶಾತ್ ನಿಮಗೇ ತಿಳಿಯುವುದು; ಈಗ ರಹಸ್ಯ ರಹಸ್ಯವಾಗಿಯೇ ಇರಲಿ" ಎಂದು ಹೇಳಿದ್ದರಂತೆ. ಮಾನವ ಜೀವನದ ಕೇಂದ್ರ ವಲಯ ಕೊನೆಯವರೆಗೂ ರಹಸ್ಯವೇ; ಅದರ ಬಹಿರ್ವಲಯ ಮಾತ್ರ 'ಓಪೆನ್ ಸಿಕ್ರೆಟ್'!

ಅಣ್ಣನವರಿಗೆ ಮುಪ್ಪಿನ ಷಡಕ್ಷರಿಯ ಹಾಡುಗಳೆಂದರೆ ಬಹಳ ಪ್ರೀತಿ. 'ಸಕಲಕೆಲ್ಲಕೆ ನೀನೇ ಅಕಲಂಕ ಗುರು' ಎಂಬ ಹಾಡಂತೂ ಅತಿ ಪ್ರೀತಿಯದು. ಅವರ ಲಿಂಗ ಪೂಜೆಯೆಲ್ಲ ಕನ್ನಡದಲ್ಲಿ. ವಚನಗಳು, ಶರಣರ ಹಾಡುಗಬ್ಬಗಳು ಅವರ ಮಂತ್ರಗಳು. ಮುಪ್ಪಿನ ಷಡಕ್ಷರಿಯ 'ಕಾಡಲೇಕೆ ನರರುಗಳನು?' ಎಂಬ ಹಾಡೂ, ಅದರ 'ಬುದ್ಧಿಯನ್ನು ಹೇಳಲಿಕ್ಕೆ ಅದ್ಯರುಗಳ ವಚನವುಂಟು, ಉದ್ಧರಿಸುವೊಡೆ ಶಿವನ ಮಂತ್ರವೈ' ಎಂಬ ಭಾಗ ದಿನಕ್ಕೊಮ್ಮೆಯಾದರೂ ಅವರ ಬಾಯಿಂದ ಹೊರಹೊಮ್ಮುತ್ತಿತ್ತು. 'ಏಕಥಾರೆ'ಯನ್ನು ನುಡಿಸುತ್ತ ಅವರು ಶರಣರ ಹಾಡುಗಳನ್ನು ಹಾಡಲು ಪ್ರಾರಂಭಿಸಿದರೆ ಇರುಳಿನ ಮೌನವೀಣೆಯನ್ನು ಮಿಡಿದು ವನದ ಕೊರಳು ಹಾಡಿದಂತೆನಿಸುತ್ತಿತ್ತು. 'ಮುಪ್ಪಿನ ಷಡಕ್ಷರಿ'ಯ ವಚನ (ಹಾಡು)ಗಳನ್ನು ಒಂದು ಹೊತ್ತಿಗೆಯ ರೂಪದಲ್ಲಿ ಪ್ರಕಟಿಸಬೇಕೆಂಬ ಅವರ ಆಸೆ ಈಡೇರಿಸಿದ ದಿನಗಳವು. ಆಗ ಚಂದ್ರಶೇಖರ ದೇವರು ಆಡ್ನೂರು ಎಂದು ಹೆಸರಾಗಿದ್ದು ಈಗ ಡಾ॥ ಜ. ಚ. ನಿ. ಯೆಂದು ವಿಖ್ಯಾತರಾಗಿರುವ ಮಹಾಚೇತನ, ಅವರ ಹಾಡುಗಳನ್ನೆಲ್ಲ ಮುತ್ತಿನಂತಹ ಅಕ್ಷರಗಳಲ್ಲಿ ಬರೆದು ಕಳಿಸಿದ್ದಿತು. ಅಣ್ಣನವರಲ್ಲಿದ್ದ ಹಸ್ತಪ್ರತಿಗಳನ್ನು ಪರಿಶೀಲಿಸಿ, ಚಂದ್ರಶೇಖರ ದೇವರು ಅಡ್ನೂರು ಕಳಿಸಿದುವುಗಳೊಡನೆ ಸರಿ ನೋಡಿ ಒಂದು ಸಮಗ್ರ ವಚನಗಳ ಪ್ರತಿಯನ್ನು ಸಿದ್ಧಪಡಿಸಿದೆ. ಹಳೆಯ ಹಸ್ತಪ್ರತಿಯೊಂದರಲ್ಲಿ, 'ಇಂತಿದು ಮುಪ್ಪಿನ ಷಡಕ್ಷಾರಾರ್ಯರ ಸುಬೋಧಸಾರ' ಎಂದಿದ್ದಿತು. ಅಣ್ಣನವರಿಗೆ 'ಸುಬೋಧ ಸಾರ' ಎಂಬ ಹೆಸರು ತುಂಬ ರುಚಿಸಿತು. ಅದೇ ಹೆಸರನ್ನು ಹೊತ್ತ ಸಂಗ್ರಹ ಅಚ್ಚಾಯಿತು. ಕರಡು ತಿದ್ದುವ ಕೆಲಸ ನಾನೇ ಮಾಡಿದ್ದೆ, ಅಷ್ಟೇ ನನ್ನ



ಯೋಗ್ಯತೆಯೆಂದೂ ತಿಳಿದಿದ್ದೆ. ಆದರೆ ಅಣ್ಣನವರು 'ಮುನ್ನುಡಿಯನ್ನು ನೀನೇ ಬರೆ' ಎಂದು ಹೇಳಿ ಮಂಕುಹಿಡಿಸಿಬಿಟ್ಟರು ನನಗೆ. ಹಗಲಿರುಳು ವಚನಗಳ, ಹರಿಹರನ ರಗಳೆಗಳ, ಪ್ರಬುದ್ಧ ಕರ್ನಾಟಕದ ಹಳೆಯ ಸಂಚಿಕೆಗಳ ಅವಲೋಕನ ಮಾಡಿ ಸಾಕಷ್ಟು ದೀರ್ಘವೇ ಆದ ಮುನ್ನುಡಿಯೊಂದನ್ನು ಬರೆದು ಒಪ್ಪಿಸಿದೆ. ಅದನ್ನು ಓದಿ ಆನಂದಭರಿತರಾದರು ಅಣ್ಣನವರು. 'ನನ್ನ ನಿರೀಕ್ಷೆ ಹುಸಿಯಾಗುವುದಿಲ್ಲವೆಂಬ ಭರವಸೆ ಹುಟ್ಟಿತು' ಎಂದರು. 'ಸುಬೋಧಸಾರ' ಪ್ರಕಟವಾಯಿತು. ನಾಲ್ಕೈದು ಪ್ರತಿಗಳೊಡನೆ ಊರಿಗೆ ಹೊರಟೆ–ಅಣ್ಣನವರ ಅನುಮತಿ, ಆಶೀರ್ವಾದ ಪಡೆದು.

ಊರಿನಲ್ಲಿ ಎರಡು ವಾರ ಕಳೆದು, ಇನ್ನೊಮ್ಮೆ ಎಲ್ಲ ಓದಿಕೊಂಡು ಹೈದರಾಬಾದಿಗೆ ಹೋದೆ. ಅಲ್ಲಿ ವೀರಶೈವ ವಿದ್ಯಾರ್ಥಿಗಳ ತಂದೆ ತಾಯಿಗಳಂತಿದ್ದ ಅನ್ನಪೂರ್ಣ ಸ್ವಾಮಿಗಳವರ ಸಹಾಯದಿಂದ ಹಳೆಯ ದಾಖಲೆಗಳ ಆಧಾರದ ಮೇಲೆ ಪರೀಕ್ಷೆಯ ಫೀ ತುಂಬಿ 'ಹಾಲ್‌ಟಿಕೆಟ್' ಪಡೆದುಕೊಂಡೆ. ಅನ್ನಪೂರ್ಣ ಸ್ವಾಮಿಗಳವರ ಬಗ್ಗೆ ಮುಂದೆ ವಿಶದವಾಗಿ ಬರೆಯಲಿರುವನಾಗಿ ಇಲ್ಲಿ ಇಷ್ಟು ಹೇಳಿದರೆ ಸಾಕೆನ್ನಿಸುತ್ತದೆ: ಅಷ್ಟು ಸಣ್ಣ ಸರಕಾರೀ ಹುದ್ದೆಯಲ್ಲಿದ್ದು ಅವರಷ್ಟು ಜನರಿಗೆ ಉಪಕಾರ ಮಾಡಿದವರು ನನಗೆ ತಿಳಿದ ಮಟ್ಟಿಗೆ ಅವರೊಬ್ಬರೇ. "ಮುಂಬರುವ ಪರೀಕ್ಷೆಯಲ್ಲಿ ಕನಿಷ್ಠ ಕನ್ನಡದಲ್ಲಾದರೂ ನನಗೆ ಪ್ರಥಮ ಸ್ಥಾನ ದೊರೆಯದಿದ್ದರೆ ವಿದ್ಯಾರ್ಥಿವೇತನ ದೊರೆಯದು; ವಿದ್ಯಾರ್ಥಿವೇತನವಿಲ್ಲದೆ ಹೈದರಾಬಾದಿನಲ್ಲಿದ್ದು ವಿದ್ಯಾಭ್ಯಾಸ ಮುಂದುವರಿಸುವುದು ನನ್ನಂಥವನಿಂದ ನೀಗದ ಮಾತು" ಎಂದು ನನ್ನ ಮನದ ಅಳುಕನ್ನು ಅವರೆದುರಿಗೆ ತೋಡಿಕೊಂಡೆ. 'ಅಂಜದಿರಿ, ನಾನಿದ್ದೇನೆ' ಎಂದು ಹೇಳಿ ಲಿಂಗಂಪಲ್ಲಿಯ ಲಿಂಗಾಯಿತ ಬೋರ್ಡಿಂಗಿಗೆ ಕರೆದುಕೊಂಡು ಹೋದರು. ಅದು ಸಾಂಬಯ್ಯನ ಮಠವೆಂದು ಮೊದಲು ಮಠವಾಗಿದ್ದು ಉತ್ತರಾಧಿಕಾರಿಯಿಲ್ಲದೆ ಸಮಾಜದ ಸೊತ್ತಾಗಿದ್ದ ಒಂದು ಹಾಳು ಮನೆ. ಅದರಲ್ಲೊಂದು ಗದ್ದುಗೆ; ಒಂದು ಕೋಣೆಯ ಅಡುಗೆ ಮನೆ; ಇನ್ನೂ ನಾಲ್ಕಾರು ಹೆಂಚಿನ ಸೋರುವ ಕೋಣೆಗಳು. ಇದನ್ನು ಸ್ವಾಹ ಮಾಡಲು ಬಂದಿದ್ದ ನೆರೆಯ ತುರುಕರಿಂದ ಪ್ರಾಣವನ್ನೇ ಪಣವಾಗಿಟ್ಟು ಉಳಿಸಿಕೊಂಡಿದ್ದರು ಅಂದಿನ ವಿದ್ಯಾರ್ಥಿಗಳು. ಮುಂದೆ ಓದಲು ಹೈದರಾಬಾದಿಗೆ ಬಂದರೆ ಇದೇ ನಿನಗೆ ಆಶ್ರಯವೆಂಬುದನ್ನು ಸೂಕ್ಷ್ಮವಾಗಿ ಸೂಚಿಸಿದಂತಿತ್ತು ನನಗೆ ಸ್ವಾಮಿಜಿಯವರು. ಆಗಲೇ ಒಂದೊಂದು ಕೋಣೆಯಲ್ಲಿ ನಾಲ್ಕು ನಾಲ್ಕು ಜನರು! ಹೇಗೆ ಓದುತ್ತಿದ್ದರೋ, ರಾತ್ರಿ ಹೇಗೆ ಮಲಗುತ್ತಿದ್ದರೋ ಅವರಿಗೇ ಗೊತ್ತು. ನನಗೆ ಸಂಕೋಚವೇನೋ

ಎನ್ನಿಸಲಿಲ್ಲ. ಮಾರುಕಟ್ಟೆಗಳಲ್ಲಿಯೂ ಕುಳಿತು ಓದಬಹುದಾದಷ್ಟು ಏಕಾಗ್ರತೆಯಿದ್ದಿತು ಆಗ ನನ್ನಲ್ಲಿ. ಪರೀಕ್ಷೆ ಕೊಟ್ಟು ಹಿಂದಿರುಗಿದೆ. ಎಲ್ಲ ಉತ್ತರಪತ್ರಿಕೆಗಳನ್ನೂ ಚೆನ್ನಾಗಿಯೇ ಬರೆದಿದ್ದೆ. ಕಲಬುರಗಿಯಲ್ಲಿ ಕಾಯಿಲೆ ಬೀಳುವ ಮೊದಲಿನ ವಜ್ರಕಾಯ ಉಳಿದಿರಲಿಲ್ಲವಾದರೂ ಪರೀಕ್ಷೆ ಕೊಟ್ಟ ಮೇಲೂ ಆಯಾಸವೆನಿಸದಷ್ಟು ಆರೋಗ್ಯ ಸುಧಾರಿಸಿದ್ದಿತು.

ಹಳೆಯ ಗೆಳೆಯ ಸಿದ್ಧರಾಮಪ್ಪ ಸಂಕ್ಲಾಪುರ ಅವರು ಕೊಪ್ಪಳದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಸೂತ್ರಧಾರರಾಗಿದ್ದರು. ಅವರ ಸಂಘದ ವಾರ್ಷಿಕೋತ್ಸವದ ರೂಪರೇಷೆಗಳನ್ನು ರೂಪಿಸಲು ಕೊಪ್ಪಳಕ್ಕೆ ನನ್ನನ್ನು ಕರೆಸಿಕೊಂಡರು. ಕಾರ್ಯಕ್ರಮದ ವಿವರಗಳನ್ನು ನಾನೂ ಶ್ರೀ ವ್ಹಿ. ಎಸ್. ಸಾಲಿಮಠರೂ ಸೇರಿ ಅಂತಿಮಗೊಳಿಸಿದೆವು. ಸಾಲಿಮಠರೂ ಆಗ ಕೊಪ್ಪಳದಲ್ಲಿದ್ದು ತುಂಬ ಕೆಲಸ ಮಾಡಿದ್ದರು. "ಚೇಳಿಗೇರಿಯ ಅಯ್ಯ ಬಂದು ಚಳುವಳಿ ಎಬ್ಬಿಸಿದ್ದಾನೆ" ಎಂದು ಜನ ಹೇಳುವಷ್ಟು ಪ್ರಸಿದ್ಧರಾಗಿದ್ದರು. ನಾವು ಬೆಟಗೇರಿ ಕೃಷ್ಣ ಶರ್ಮರನ್ನು ಕರೆಸುವುದೆಂದು ತೀರ್ಮಾನಿಸಿ ಅನುಮತಿಗಾಗಿ ಅವ್ವಲ್ ತಾಲೂಕದಾರರ ಬಳಿಗೆ ಹೋದೆವು. ಅವರು ನಮ್ಮ ಮನವಿಯನ್ನು ಓದಿ, ಕಣ್ಣು ಕೆಂಪಗೆ ಮಾಡಿ, "ಕೃಷ್ಣ ಶರ್ಮರನ್ನು ಹೈದರಾಬಾದು ಸರಕಾರ ಗಡೀಪಾರು ಮಾಡಿದೆ; ಅವರನ್ನು ಕರೆಸುವಿರಾ?" ಎಂದು ಕೇಳಿದರು. ನಾವು ವಿವರಿಸಿ ಹೇಳಿದೆವು; "ಗಡೀಪಾರು ಮಾಡಿರುವುದು ಸಿದ್ದವ್ವನ ಹಳ್ಳಿ ಕೃಷ್ಣ ಶರ್ಮರನ್ನು; ನಾವು ಕರೆಯಬೇಕೆಂದಿರುವುದು ಬೆಟಗೇರಿ ಕೃಷ್ಣ ಶರ್ಮರನ್ನು; ಅವರು ರಾಜಕಾರಣಿ, ಇವರು ಸಾಹಿತಿ; ಆದುದರಿಂದ ಅಪ್ಪಣೆ ಕೊಡಲು ಅಭ್ಯಂತರವೇನೂ ಇರಲಾರದು." ಇನ್ನಷ್ಟು ರೇಗಿ ಹೇಳಿದರವರು; "ಯಾವ ಕೃಷ್ಣ ಶರ್ಮರೇ ಆಗಲಿ; ಕೃಷ್ಣ ಶರ್ಮಾಚ್ ನಕೋ!"

ಇಂಥ ಕತೆಗಳನ್ನಷ್ಟೇ ಕೇಳಿದ್ದೆವು ನಾವು, ಪ್ರತ್ಯಕ್ಷ ನೋಡಿರಲಿಲ್ಲ. ಉದಾಹರಣೆಗೆ–'ಗುರುರಾವ್' ಎನ್ನುವವನನ್ನು ಹಿಡಿದು ತರಬೇಕಾಗಿತ್ತು; 'ಗುರುರಾವ್' ಸಿಕ್ಕಲಿಲ್ಲ; 'ಗಿರಿರಾವ್' ಸಿಕ್ಕಿದರು; ಅವನನ್ನೇ ಹಿಡಿದು ತಂದರು; ಮೇಲಧಿಕಾರಿಗೆ ಇದ್ದ ವಿಷಯ ತಿಳಿಸಿದರು; ಮೇಲಧಿಕಾರಿಯೆಂದ; 'ಗುರುರಾವ್' ಆದರೇನು, 'ಗಿರಿರಾವ್' ಆದರೇನು? 'ಗು' 'ಗಿ'ಗಳಲ್ಲಿ ಎಷ್ಟು ಭೇದವಿದೆ? ಇವನನ್ನೇ ಜೇಲಿಗೆ ಹಾಕಿರಿ!" ಇಂಥ ಕತೆಗಳು ಹಲವಾರು–ಅಂದಿನ ಸರಕಾರದ ಕಾರ್ಯವಿಧಾನದ ಬಗ್ಗೆ. ಆದರೆ ಅಂದು ನಮ್ಮ ಕಣ್ಮುಂದೆಯೇ ಇಂಥದೊಂದು ಪ್ರಕರಣ ನಡೆದು ಹೋಯಿತು! ಬೆಟಗೇರಿ ಕೃಷ್ಣ ಶರ್ಮರನ್ನು ಬಿಟ್ಟು ಶುದ್ಧ ಶಿಕ್ಷಣವೇತ್ತರಾದಹು. ಫ. ಕಟ್ಟೀಮನಿಯವರನ್ನು ಕರೆಸಲು ಅನುಮತಿ ಕೇಳಿದೆವು. ಅನುಮತಿ ಸಿಕ್ಕಿತು.



ಕರೆಹೋಯಿತು; ಕಟ್ಟೀಮನಿಯವರು ಒಪ್ಪಿ ಬಂದರು; ನಿಲ್ದಾಣಕ್ಕೆ ಹೋಗಿ ಹಾರ ಹಾಕಿ ಕರೆದೊತಂದೆವು. ಸಭೆಯ ಕಾರ್ಯಕ್ರಮ ಪ್ರಾರಂಭವಾಗಲು ಮೂರು ಗಂಟೆಗಳ ಕಾಲ ಉಳಿದಿದ್ದಿತು. ಆಗ ಮತ್ತೊಂದು ಆಜ್ಞೆ ಬಂದುಬಿಟ್ಟಿತು: "ಕಟ್ಟೀಮನಿಯವರು ಬಹಿರಂಗ ಸಭೆಯಲ್ಲಿ ಮಾತನಾಡಕೂಡದು; ಬೇಕಾದರೆ ನಾಲ್ಕು ಗೋಡೆಗಳ ನಡುವೆ ಕುಳಿತು ತರುಣರಿಗೆ, ವಿದ್ಯಾರ್ಥಿಗಳಿಗೆ ಶಿಕ್ಷಣದ ವಿಷಯಕ್ಕೆ ಮಾತ್ರ ಏನಾದರೂ ಹೇಳಲಿ!" ಓಡಿ ಹೋಗಿ ಗವಿ ಮಠದ ಮಹಾಸ್ವಾಮಿಗಳವರ ದರ್ಶನ ಪಡೆದು ನಡೆದುದನ್ನು ನಿವೇದಿಸಿಕೊಂಡೆವು. ಅವರು ಶ್ರೀ ಮಠದಲ್ಲಿಯೇ ಕಟ್ಟೀಮನಿಯವರು ಕುಳಿತು ಮಾತನಾಡಲು ಒಪ್ಪಿಗೆಯಿತ್ತರು. ಊರಲೆಲ್ಲ ಡಂಗುರ ಹೊಡೆಸಿದೆವು. ಮಠದ ಖಾಸಗಿ ಸಭೆಗೆ ಸಾಕಷ್ಟು ಜನ ಬಂದು ಕಟ್ಟೀಮನಿಯವರ ಮಾರ್ಮಿಕ ಮಾತುಗಳನ್ನು ಕೇಳಿ ಹೋದರು. ಅಂದೇ ರಾತ್ರಿ ಕಟ್ಟೀಮನಿಯವರನ್ನು ರೈಲಿಗೆ ಹತ್ತಿಸಿ ಕೈತೊಳೆದಕೊಂಡೆವು.

ಆಮೇಲೆ ಗೊತ್ತಾಯಿತು ಪರೀಕ್ಷೆಯ ಫಲಿತಾಂಶ. ಕನ್ನಡ ಸಂಸ್ಕೃತಗಳಲ್ಲಿ ಪ್ರಥಮನಾಗಿಯೂ, ಒಟ್ಟು ಅಂಕಗಳ ದೃಷ್ಟಿಯಿಂದ ವಿಶ್ವವಿದ್ಯಾಲಯಕ್ಕೆ ಮೂರನೆಯವನಾಗಿಯೂ ಪಾಸಾಗಿದ್ದೆ. ಎಲ್ಲರೂ ದಂಗಾದರೂ, ಪಾಸಾಗುವುದೇ ಅನುಮಾನವೆಂದುಕೊಂಡಿದ್ದವರಿಗಂತೂ ವಿದ್ಯುತ್ ಶಾಖ ತಗುಲಿದಷ್ಟು ಕುಲುಕು. ತಂದೆ ತಾಯಿಯವರಿಗೆ ಕಳೆದ ಹೋದ ನಿಧಿ ಕೈಗೆ ಬಂದಂತೆನಿಸಿತು. ಚಿ. ಅನ್ನದಾನಿಗೆ ಎಲ್ಲರಿಗಿಂತ ಹಿಗ್ಗು. ಅವನ ಸಾಹಸಕ್ಕೆ ಫಲ ದೊರೆತಿದ್ದಿತು. ಮದುವೆಯ ವಿಚಾರ ಮರೆತು ಹೋಗಿತ್ತು. ಎಲ್ಲರಿಗೂ. ನಾನು ಪದವೀಧರನಂತೂ ಆಗುವೆನೆಂಬ ವಿಶ್ವಾಸ ಎಲ್ಲರಲ್ಲಿಯೂ ಮೂಡಿತು. ಹೈದರಾಬಾದಿಗೆ ಹೊರಡುವ ಸಿದ್ಧತೆ ನಡೆಯಿತು. ಬಟ್ಟೆಗಳೆಲ್ಲ ಅಗಸರ ಮನೆ ಕಂಡುಬಂದವು. ಒಂದೆರಡು ಹೊಸ ಬಟ್ಟೆಗಳನ್ನು ಹೊಲಿಸಿದುದಾಯಿತು. ವಿಶ್ವವಿದ್ಯಾಲಯದ ಸಮವಸ್ತ್ರ ಕರಿಯ ಷೇರವಾನಿಯನ್ನು ಹೈದರಾಬಾದಿನಲ್ಲಿಯೇ ಹೊಲಿಸುವುದೆಂದು ತೀರ್ಮಾನವಾಯಿತು.

## ಹಕ್ಕನಿ ಸಾಹೇಬರ ಸಹಾಯ :

ಕಲಬುರಗಿಗೆ ಹೋಗಿ ಹಕ್ಕನಿ ಸಾಹೇಬರನ್ನು ಕಂಡೆ. ನನ್ನ ಬಗ್ಗೆ ಅವರ ವಾತ್ಸಲ್ಯ ಇನ್ನಷ್ಟು ಹೆಚ್ಚಾಗಿತ್ತು. "ಇಷ್ಟು ಕಾಯಿಲೆ ಸಹಿಸಿಯೂ, ಖಾಸಗಿಯಾಗಿ ಪರೀಕ್ಷೆ ಕಟ್ಟಿಯೂ ನೀನು ವಿಶ್ವವಿದ್ಯಾಲಯಕ್ಕೆ ಮೂರನೆಯ ಸ್ಥಾನ ಪಡೆದೆ. ಎಲ್ಲರಂತೆ ಕ್ರಮಬದ್ಧವಾಗಿ ಓದಿ ಪರೀಕ್ಷೆಗೆ ಕುಳಿತಿದ್ದರೆ ಖಂಡಿತವಾಗಿ ಮೊಲದನೆಯ ಸ್ಥಾನ ಪಡೆಯುತ್ತಿದ್ದೆ. ಆ ಸುದೈವ ನಿನಗೂ ಇಲ್ಲವಾಯಿತು; ನನ್ನ ಕಾಲೇಜಿಗೂ ಇಲ್ಲವಾಯಿತು. ಚಿಂತೆಯಿಲ್ಲ. ಪದವೀ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದರೆ ಕಡೆತನಕ ಹೆಸರು

ಉಳಿಯುತ್ತದೆ. ಅದಕ್ಕಾಗಿ ಪೂರ್ಣ ಪ್ರಯತ್ನ ಮಾಡು. ಹೇಗೂ ಹದಿನೆಂಟು ರೂಪಾಯಿಗಳ ವಿದ್ಯಾರ್ಥಿವೇತನ ದೊರೆಯುವುದು. ಆದುದರಿಂದ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಲಯವನ್ನೇ ಸೇರಿಬಿಡು. ಎಲ್ಲಿಯಾದರೂ ಇದ್ದು ನಿನ್ನ ಭವಿತ್ಯವನ್ನು ಹಾಳು ಮಾಡಿಕೊಳ್ಳಬೇಡ. ವಿದ್ಯಾರ್ಥಿನಿಲಯಕ್ಕೆ ಹದಿನಾಲ್ಕು ರೂಪಾಯಿ ಕೊಟ್ಟರೆ ಕಾಲೇಜು ಶುಲ್ಕಕ್ಕೆ ನಾಲ್ಕು ರೂಪಾಯಿಗಳು ಉಳಿದೇ ಉಳಿಯುತ್ತವೆ. ಮೇಲಿನ ವೆಚ್ಚ ಹೆಚ್ಚಲಾರದು. ವಿದ್ಯಾರ್ಥಿನಿಲಯಕ್ಕೆ ಕೊಡುವ ಹಣದಲ್ಲಿ ಬೆಳಗಿನ ಉಪಹಾರ, ಮಧ್ಯಾಹ್ನದ ಊಟ, ಸಂಜೆಯ ಹಾಲು, ರಾತ್ರಿ ಊಟಗಳ ವ್ಯವಸ್ಥೆ ಮಾಡುವುದಲ್ಲದೆ ಅಗಸ ಕ್ಷೌರಿಕರ ವೆಚ್ಚವನ್ನು ಅವರೇ ವಹಿಸುತ್ತಾರೆ. ಆದುದರಿಂದ ಅಲ್ಲಿಯೇ ಇರು. ಕದಾಚಿತ್ ಹಣದ ಕೊರತೆಬಿದ್ದರೆ ನನಗೆ ಕಾಗದ ಬರೆ!"

ಅವರ ಒಂದೊಂದು ಮಾತೂ ಅವರ ಬಗ್ಗೆ ನನ್ನ ಗೌರವವನ್ನು ಹೆಚ್ಚಿಸಿತು. ಈ ಜನ್ಮದಲ್ಲಿಯಂತೂ ಇವರ ಉಪಕಾರ ತೀರಿಸಲಾರೆ; ಇವರ, ಇವರ ಕುಟುಂಬ ವರ್ಗದ ಶ್ರೇಯಸ್ಸಿಗಾಗಿ ನಿತ್ಯ ಪ್ರಾರ್ಥನೆ ಸಲ್ಲಿಸುವುದೊಂದೇ ನಾನು ಮಾಡಬಹುದಾದ ಸೇವೆಯೆಂದು ನಿರ್ಧರಿಸಿದೆ. ಇಂದಿಗೂ ಅವರ ಹೆಸರು ನನ್ನ ಹೃದಯದಲ್ಲಿ, ನನ್ನ ಪ್ರಾರ್ಥನೆಗಳಲ್ಲಿ! ನಿರ್ಗಮನ ಪತ್ರಿಕೆಯನ್ನು ತಾವೇ ತರಿಸಿಕೊಟ್ಟರು ವಿಶ್ವವಿದ್ಯಾಲಯದ ಆರ್ಟ್ಸ್ ಕಾಲೇಜಿನ ಪ್ರೊ ವೋಸ್ಟರಾಗಿದ್ದ ಪ್ರೊ. ಹುಸೇನ ಅಲಿಖಾನ ಸಾಹೇಬರಿಗೆ ಪತ್ರವೊಂದನ್ನು ಬರೆದು ನನ್ನ ಕೈಗಿತ್ತರು. 'ಓದು, ಇನ್ನು ಏನಾದರೂ ಅದರಲ್ಲಿ ಸೇರಿಸುವುದಿದ್ದರೆ ಹೇಳು, ಸೇರಿಸುವೆ' ಎಂದು ಹೇಳಿದರು. ಪತ್ರ ಓದಿ ಸ್ತಂಭೀಭೂತನಾದೆ. ಈ ವಿದ್ಯಾರ್ಥಿ ನನ್ನ ಕಾಲೇಜಿನ ಹೆಮ್ಮೆಯ ಕೊಡುಗೆ– ಉಸ್ಮಾನಿಯಾ ವಿಶ್ವವಿದ್ಯಾಲಯಕ್ಕೆ. ಮುಂದೆ ಇವನು ವಿಶ್ವವಿದ್ಯಾಲಯಕ್ಕೆ ಕೀರ್ತಿ ತರುವನು. ಇವನಿಗೆ ತಾವೇನು ಸಹಾಯ ಮಾಡಿದರೂ ಸಾರ್ಥಕವಾಗುವುದು" ಎಂದು ಬರೆದಿದ್ದರು. ಇದೇ ಹೆಚ್ಚಾಯಿತು; ಇನ್ನೇನೂ ಬೇಡವೆಂದು ಬಿನ್ನವಿಸಿಕೊಂಡೆ. ಮತ್ತೆ ಮತ್ತೆ 'ಷುಕರಯಾ' ಹೇಳಿ ಹೊರಬಿದ್ದೆ.

ಹುಸೇನ ಅಲಿಖಾನ ಸಾಹೇಬರ ಮುಂದೆ ನಿಂತಾಗ ನಿಜವಾಗಿಯೂ ದೊಡ್ಡ ಮನುಷ್ಯರೊಬ್ಬರ ಮುಂದೆ ನಿಂತಂತೆನಿಸಿತು. ಬಹಳ ಭವ್ಯ ವ್ಯಕ್ತಿತ್ವ ಅವರದು. ಅಜಾನುಬಾಹು; ದೊಡ್ಡಮುಖ, ಹರವಾದ ಹಣೆ, ಹೊಳೆಯುವ ಕಣ್ಣುಗಳು, ನೀಳವಾದ ಮೂಗು, ಹಿಟ್ಲರ್ ಮೀಸೆ, ಗಂಭೀರ ನಡೆನುಡಿಗಳು. ಗ್ರೀಕ್ ವೀರ ಪುರುಷರನ್ನೋ, ರೋಮನ್ ಸೆನಟರರನ್ನೋ ನೆನಪಿಗೆ ತರುವ ಮೂರ್ತಿಸ್ವರೂಪ. ಅವರಿಗೆ ಹಕ್ಕಾನಿ ಸಾಹೇಬರು ಕೊಟ್ಟ ಪತ್ರವನ್ನಿತು ಅವರದನ್ನು ಓದುತ್ತಿದ್ದಾಗ ಅವರ ಮುಖ ಚರ್ಯೆಯನ್ನೇ ನೋಡುತ್ತ ನಿಂತೆ. ಅಲ್ಲಿ ಮೂಡಿದುದು



ಪ್ರಸನ್ನತೆಯೆಂಬುದನ್ನರಿಯಲು ತಡವಾಗಲಿಲ್ಲ ನನಗೆ. ಅವರು ನಗುವುದೇ ಕಡಿಮೆಯೆಂದು ಗೆಳೆಯರು ಹೇಳಿದ್ದರು. ಅವರು ಆ ಪತ್ರ ಓದಿ ಮುಗಿಸಿ ಹಸನ್ಮುಖಿಗಳಾಗಿ ಹೇಳಿದರು; "ಹಕ್ಕಾನಿ ಸಾಹೇಬರು ಬರೆದುದರಲ್ಲಿ ನನಗೆ ವಿಶ್ವಾಸ ಬಹಳ. ಅವರು ಸುಮ್ಮನೆ ಬರೆಯುವವರಲ್ಲ. ನಿನ್ನಲ್ಲಿ ಅಷ್ಟು ಯೋಗ್ಯತೆ ಇರಲೇಬೇಕು. ನಿನಗೆ ನನ್ನ ಸಂಪೂರ್ಣ ಸಹಾಯ ನೀಡುತ್ತೇನೆ. ಈಗ ಕೂಡಲೇ ಏನು ಬೇಕು ಹೇಳು!"

## ಮಿತ್ರಬಳಗ

ಹೇಳಲೋ ಬೇಡವೋ ಎಂದು ಅನುಮಾನಿಸುತ್ತಲೇ ಹೇಳಿದೆ. "ವಿದ್ಯಾರ್ಥಿ ವೇತನದಲ್ಲಿ ಹದಿನಾಲ್ಕು ರೂಪಾಯಿಗಳು ಹಾಸ್ಟೆಲಿಗೆ ಹೋಗಿಬಿಡುತ್ತವೆ. ಇನ್ನುಳಿದ ನಾಲ್ಕು ರೂಪಾಯಿಗಳಲ್ಲಿ ಕಾಲೇಜು ಶುಲ್ಕ ಇತ್ಯಾದಿ ಎಲ್ಲ ನೋಡಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಕಾಲೇಜಿನ ಶುಲ್ಕ ಮಾಫ್ ಮಾಡಿದರೆ ನಿರಾಂತಕವಾಗಿ ಓದಿ ಹಕ್ಕಾನಿ ಸಾಹೇಬರ, ತಮ್ಮ ಸಹಾಯ ಸಹಾನುಭೂತಿಗಳನ್ನು ಸಾರ್ಥಕಗೊಳಿಸುವೆ." "ಮಂಜೂರ್" ಎಂದರು ಅವರು. ಹಾಸ್ಟೆಲ್ ಸೇರುವುದಕ್ಕೆ ಇದ್ದ ಒಂದೆ ಅಡಚಣೆ ದೂರಾಯಿತು. ಅಂದೇ ಹಾಸ್ಟೆಲು ಸೇರಿದೆ. ಎ.ಬಿ.ಸಿ. ವಿಭಾಗಗಳಲ್ಲಿ ಸಿ ಹಾಸ್ಟೆಲಿನಲ್ಲಿ ಸ್ಥಳ ಸಿಕ್ಕಿತು. ಅಲ್ಲಿ ಸಹವಾಸಿಗಳಾಗಿ ಕೆ, ಮುದ್ದಣ್ಣ, ಬಲವಂತ ರಾವ್, ಸಿ.ಎಸ್. ಇನಾಮದಾರ, ಮಹಬೂಬ್ ಹುಸೇನ್ ಜಿಗರ್, ಅಬಿದ್ ಅಲಿಖಾನ್ ಮೊದಲಾದವರು ದೊರೆತರು. ಮುದ್ದಣ್ಣನವರಂತೂ ಕಲಬುರಗಿಯಲ್ಲಿಯೇ ಕವಿಮಿತ್ರರಾಗಿಬಿಟ್ಟಿದ್ದರು. ಕೆ. ಬಸವಣ್ಣನವರದು ವಿಜ್ಞಾನಪ್ರಿಯ ಪ್ರವೃತ್ತಿಯಾದರೆ ಇವರಿಗೆ ಗಣಿತದಲ್ಲಿ ಬಹಳ ಆಸಕ್ತಿ. ಬಸವಣ್ಣವರಂತೂ ಇಂಜಿನಿಯರಾಗಲು ಹೊರಟ್ಟಿದ್ದರು; ಮುದ್ದಣ್ಣ ಡಾಕ್ಟರನಾಗಬೇಕೆಂದು ಅವರ, ಅವರ ತಂದೆ ತಾಯಿಗಳ ಅಪೇಕ್ಷೆಯಾಗಿದ್ದಿತು. ಅವರು ನನ್ನ ಬಳಿಗೆ ಬಂದು ಕಂಬನಿದುಂಬಿ ಹೇಳಿದರು; 'ನಾನು ಓದಿದರೆ ಗಣಿತ ಶಾಸ್ತ್ರವನ್ನೇ ಓದುವೆನು. ಇಲ್ಲಿ ಇವರದನ್ನು ಓದಗೊಡುವುದಿಲ್ಲ. ನೀವು ಬೆಳಗಾವಿಗೆ ಹೋಗಿ ಲಿಂಗರಾಜ ಕಾಲೇಜಿನಲ್ಲಿ ನನಗೆ ಗಣಿತ ಶಾಸ್ತ್ರ ಓದಲು ಪ್ರವೇಶ ದೊರಕಿಸಿಕೊಟ್ಟರೆ ಕೊನೆಯವರೆಗೆ ಕೃತಜ್ಞನಾಗುವೆನು ನಿಮಗೆ." "ನೀವು ಕೆ. ಬಸಣ್ಣನವರೊಬ್ಬರಿಗೇ ತಮ್ಮನಲ್ಲ, ನನಗೂ ತಮ್ಮ, ಅಗತ್ಯವಾಗಿ ಪ್ರಯತ್ನಿಸಿಕೊಡುವೆನು" ಎಂದು ಬೆಳಗಾವಿಗೆ ಹೋದೆ.

ಪ್ರಿನ್ಸಿಪಾಲರ ಕೋಣೆಯಲ್ಲಿ ಪ್ರಿನ್ಸಿಪಾಲ ಡಾ. ಎಸ್.ಸಿ. ನಂದೀ ಮಠರಿರಲಿಲ್ಲ. ವಾಚನಾಲಯದಲ್ಲಿರುವರೆಂದು ಹೇಳಿದರು. ಅಲ್ಲಿಗೇ ಹೋದೆ. ಬರಿ ತಲೆ, ಒಂದು ಕಾಲಲ್ಲಿ ಚಪ್ಪಲಿ, ಇನ್ನೊಂದರಲ್ಲಿ ಇಲ್ಲ, ಉದ್ದಕೋಟು ಕುರ್ಚಿಗೆ ನೇತಾಡುತ್ತಿದೆ.

ರೂಮಾಲು ಮೇಜಿನ ಮೇಲೆ ಮೆರೆಯುತ್ತಿದೆ. ಕೈಯಲ್ಲಿ ಒಂದು ಎತ್ತಲಾಗದ ಹೊತ್ತಗೆಯನ್ನು ಹಿಡಿದು ಓದುತ್ತ ಕುಳಿತಿದ್ದರು. ದಿಟ್ಟಿಸಿ ನೋಡಿದಾಗ ಅದು Encyclopaedia of Religion and Ethies ಸಂಪುಟವೆಂಬುದು ಗೊತ್ತಾಯಿತು. ನಾನು ಬಂದು ನಿಂತುದೇ ಅವರ ಗಮನಕ್ಕೆ ಬಂದಿರಲಿಲ್ಲ. ಅವರಾಗಿ ತಲೆಯೆತ್ತಿ ನೋಡಿದಾಗ ಮುದ್ದಣ್ಣನವರ ಮನವಿ ಕೈಗಿತ್ತೆ. ಓದಿ "Sorry ಮುಂಬೈ ವಿಶ್ವವಿದ್ಯಾಲಯ ನಮ್ಮ ವಿಶ್ವವಿದ್ಯಾಲಯಕ್ಕೆ ಮನ್ನಣೆಯನ್ನೇ ನೀಡಿಲ್ಲ" ಎಂದು ಮನವಿಯನ್ನು ನನಗೆ ಹಿಂದಿರುಗಿಸಿ ಮತ್ತೆ ಪುಸ್ತಕಾವಲೋಕನದಲ್ಲಿ ಮಗ್ನರಾಗಿಬಿಟ್ಟರು!

ಕೆ. ಮುದ್ದಣ್ಣನವರಿಗೆ ಬಹಳ ನಿರಾಶೆಯಾಯಿತು. ಅನಿವಾರ್ಯವಾಗಿ ಡಾಕ್ಟರರಾದರು; ಅದರಲ್ಲಿಯೂ ಉನ್ನತ ಸ್ಥಾನ ಗಳಿಸಿ ನಿವೃತ್ತರಾಗಿದ್ದಾರೆ. ಆದರೆ ಅಂದು ಗಣಿತಶಾಸ್ತ್ರದ ವಿದ್ಯಾರ್ಥಿಯಾಗಲು ಅವರಿಗೆ ಅವಕಾಶ ದೊರೆತಿದ್ದರೆ ಅವರೊಬ್ಬ ಪ್ರಸಿದ್ಧ ಗಣಿತಜ್ಞರಾಗುತ್ತಿದ್ದರೆಂದು ನನಗೆ ಈಗಲೂ ಎನ್ನಿಸುತ್ತಿದೆ. ಆಗ ಆದ ನಿರಾಶೆಯನ್ನವರು ಕವಿಯಾಗಿ ಕಳೆದುಕೊಂಡರೆಂಬುದು ಸ್ಮರಣೀಯ ಸಂಗತಿ. ಚತುರ್ಭಾಷಾ ಕವಿಗಳೆಂದು ಹೆಸರಾಗಿ ತಂದೆಯವರಿಗೆ ತಕ್ಕ ಮಗನೆನಿಸಿದ್ದಾರೆ. ನನ್ನ ವಿದ್ಯಾರ್ಥಿಜೀವನದಲ್ಲಿಯೂ, ಆಮೇಲೂ ನನ್ನ ಸಮೀಪದ ಸಂಗಡಿಗರೊಬ್ಬರಾಗಿ ಉಳಿದಿರುವ ಇವರು ಈಗ ಮನ್ನಣೆವೆತ್ತ ಉರ್ದೂ ಕವಿಗಳು, ಉರ್ದೂ ಆಕಾಡೆಮಿಯ ಸದಸ್ಯರು.

**ನಾಟಕ : ಆತ್ಮಾರ್ಪಣ :**

ವರ್ಷಕ್ಕೊಂದು ನಾಟಕವಾಡುವ ನಮ್ಮ ನಿಯಮವನ್ನು ಕಲಬುರಗಿಯಲ್ಲಿದ್ದಾಗ ಕೊನೆಯವರೆಗೂ ಪಾಲಿಸಲು ಸಾಧ್ಯವಾಗಲಿಲ್ಲ. ಈಗ ಗುರುಬಸವ ಮಠದ ಗೆಳೆಯರಲ್ಲಿ ಹೆಚ್ಚಿನವರು ಹೈದರಾಬಾದಿಗೆ ಬಂದಿದ್ದರಾಗಿ ಒಂದು ಹೊಸ ನಾಟಕ ಆಡಲೇಬೇಕೆಂದು ತೀರ್ಮಾನಿಸಿದರು. ಬಸವಣ್ಣನವರ ಬಗ್ಗೆ ನಾಟಕ ಬರೆಯಲು–ಅದೂ ಒಂದು ವಾರದಲ್ಲಿಯೇ ಬರೆಯಲು 'ಹುಕುಮ್' ನೀಡಿದರು ನನಗೆ. ಮುಂದೆ 'ಜೋ ಹುಕುಮ್,' 'ಜೀ ಹುಜೂರ್' ಕೆಲಸಕ್ಕೆ ಅಣಿಯಾಗಲೆಂದೋ ಏನೋ, ಈ ಪ್ರೀತಿಯ ಹುಕುಮಿಗೆ ತಲೆಬಾಗಿದೆ. 'ಆತ್ಮಾರ್ಪಣ'ವೆಂಬ ನಾಟಕ ಬರೆದೆ. ಬಸವಣ್ಣನವರ ಬಗ್ಗೆ ನಾಟಕ ಬರೆಯುವುದು ಸಾಧ್ಯವೇ ಇಲ್ಲ–ಎಂದು ವಾದಿಸಿದವರಿದ್ದರು ಒಬ್ಬಿಬ್ಬರು. ಅವರು ನಾಟಕ ನೋಡಿ ತಬ್ಬಿಬ್ಬಾದರು. ನಾಟಕ ಎಲ್ಲರಿಗೂ ಮೆಚ್ಚಿಗೆಯಾಯಿತು. ಒಂದು ತಿಂಗಳ ಕಲಿಕೆ ಮುಗಿದು ರೆಡ್ಡಿ ಹಾಸ್ಟೆಲಿನಲ್ಲಿ ಆಡಿದೆವು ಅದನ್ನು. ಅಧ್ಯಕ್ಷರಾಗಿ ಆಗ ಕರ್ನೂಲಿನಲ್ಲಿ ಜಿಲ್ಲಾ ಮುನ್ಸಿಫರಾಗಿದ್ದ ಶ್ರೀ ಟಿ. ಹೆಚ್.ಎಮ್. ಸದಾಶಿವಯ್ಯನವರು ಆಗಮಿಸಿದ್ದರು. ಅವರು ಚತುರ್ಭಾಷಾ



ಪಂಡಿತರು; ವೀರಶೈವ ಸಿದ್ಧಾಂತ ಕೋವಿದರು; ಶರಣಸಾಹಿತ್ಯ ವಿಶಾರದರು; ಸರಸ ವಾಗ್ಮಿಗಳು. ಅವರು ನಾಟಕವನ್ನು ನೋಡಿ ತುಂಬ ಮೆಚ್ಚಿ ಮಾತನಾಡಿದರು. ಕನ್ನಡ ಪ್ರೇಕ್ಷಕರ ಮಾತದಂತಿರಲಿ, ಕನ್ನಡ ಬಾರದ ರೆಡ್ಡಿ ವಿದ್ಯಾರ್ಥಿಗಳೂ ಮುಕ್ತ ಕಂಠದಿಂದ ಪ್ರಶಂಸಿಸಿದರು ನಾಟಕ ಪ್ರಯೋಗವನ್ನು. ನಾನು ಬಸವೇಶ್ವರರ ಪಾತ್ರ ವಹಿಸಿದ್ದೆ; ಶ್ರೀ ಸಿ.ಎಸ್. ಇನಾಮದಾರರು ಬಿಜ್ಜಳ, ಶ್ರೀ ಗುರುಶಾಂತಯ್ಯನವರು ಕೊಂಡಿಯ ಮಂಚಣ್ಣ, ಶ್ರೀ ಕೆ. ಬಸವಣ್ಣನವರು ಪ್ರಭುದೇವ, ಶ್ರೀ ಕೆ. ಮುದ್ದಣ್ಣ ಶೀಲವಂತ, ಶ್ರೀ ನೀಲಕಂಠರಾವ್ ಪಾಟೀಲ ಚೆನ್ನಬಸವಣ್ಣ, ಶ್ರೀ ಕೆ.ಆರ್. ಹಿರೇಮಠ ಬಲದೇವ, ಶ್ರೀ ಎನ್.ಎಸ್. ಪಾಟೀಲ್ ಗೂಗಲ್ (ಕಲಾನಂದ) ಮಧುವರಸ, ಶ್ರೀ ಜಿ.ಎಸ್. ಹಿರೇಮಠ ಹರಳಯ್ಯ, ಶ್ರೀ ಸಿದ್ಧರಾಮಪ್ಪಹೇರೂರು ನೀಲಾಂಬಿಕೆ, ಶ್ರೀ ಪರ್ವತ ರೆಡ್ಡಿ ಎಲೇರಿ ಅಕ್ಕಮಹಾದೇವಿ. ಎಲ್ಲರೂ ತಂತಮ್ಮ ಪಾತ್ರವನ್ನು ತುಂಬ ತನ್ಮಯತೆಯೊಡನೆ ಅಭಿನಯಿಸಿದ್ದರು. ಇದರಿಂದ ಸಂಪ್ರೀತರಾಗಿ ಆಗ ನಮ್ಮೆಲ್ಲರಿಗೆ ಮಾತೆಯಂತಿದ್ದ ವೈನಾತಾಯಿ ಖೇಣಿಯವರು ನನಗೆ ಸುವರ್ಣಪದಕವನ್ನಿತ್ತು ಗೌರವಿಸಿದರು; ಅಂದಿನ ತಮ್ಮ ಅಧ್ಯಕ್ಷರಾಗಿದ್ದ ಶ್ರೀ ಎಲ್.ಜಿ. ಹೊಂಬಳ ಅವರು ಪ್ರತಿಯೊಬ್ಬ ಪಾತ್ರಧಾರಿಗೂ ಕಾಪ್ಯಪದಕವನ್ನಿತ್ತು ಸನ್ಮಾನಿದರು. ಗೆಳೆಯ ಅಂಚೆ ಸುಗೂರ ಶರಣಪ್ಪನವರು ತಮ್ಮ ತಂದೆಯವರಾದ ಶ್ರೀ ಹನುಮಂತರಾಯರ ಸ್ಮರಣಾರ್ಥವಾಗಿ 'ಆತ್ಮಾರ್ಪಣ'ವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ಸ್ವಸಂತೋಷದೊಡನೆ ಮುಂದೆ ಬಂದರು. ಶ್ರೀ ಟಿ.ಎಚ್.ಎಂ. ಸದಾಶಿವಯ್ಯನವರ ಮುನ್ನುಡಿಯೊಡನೆ 'ಆತ್ಮಾರ್ಪಣ' ಪ್ರಕಟವಾಯಿತು; ನಟನಾಗಿದ್ದ ನನ್ನನ್ನು ನಾಟಕಕಾರನನ್ನಾಗಿ ಮಾಡಿತು,

**ರಾಜರತ್ನಂ :**

ಆ ವರ್ಷ ಅಲ್ಲಿಗೆ ಆಗಮಿಸಿದವರಲ್ಲಿ ಮೂವರ ನೆನಪು ಹಸಿರಾಗಿ ಉಳಿದಿದೆ: ಇಷ್ಟೇ ಅಲ್ಲ, ಮೂವರೂ ನನ್ನ ಬಾಳಿನ ಮೇಲೆ ಮೂದೆರನಾದ ಪ್ರಭಾವವನ್ನು ಬೀರಿದ ಮಹನೀಯರು. ಮಕ್ಕಳ ಸಾಹಿತ್ಯದ, ರತ್ನನ ಪದಗಳ, ಬೌದ್ಧ ಸಾಹಿತ್ಯದ ತ್ರಿವಿಕ್ರಮ ಡಾ॥ ಜಿ.ಪಿ. ರಾಜರತ್ನಂ, ಬಹುಭಾಷಾ ಪರಿಣತಿಯ, ಅಸೀಮ ಪಾಂಡಿತ್ಯದ, ಸರಸಸಜ್ಜನಿಕೆಯ ತೀಂ.ನಂ.ಶ್ರೀ, ಹೊಸಗನ್ನಡ ಸಾಹಿತ್ಯದ ಆಚಾರ್ಯ ಪುರುಷ ಬಿ.ಎಂ. ಶ್ರೀ–ಇವರೇ ಆ ಮೂವರು. ಜಿ.ಪಿ. ರಾಜರತ್ನಂ ಅವರು ಸಹಜವಾಗಿಯೇ ಬುದ್ಧನ ಬಗ್ಗೆ ಮಾತನಾಡಿದರು, ಉದ್ಬೋಧಕವಾಗಿ ಮಾತನಾಡಿದರು. ಲಿಂಗಂಪಲ್ಲಿ ವಿದ್ಯಾರ್ಥಿನಿಲಯಕ್ಕೂ ಅವರನ್ನು ಕರೆದುತಂದೆ. ಬಸವಣ್ಣನವರ ಬಗ್ಗೆ ಅಮೋಘವಾದ ಉಪನ್ಯಾಸವನ್ನಿತ್ತರು. ಆದರೆ ಒಂದು ನ್ಯೂನತೆಯನ್ನು ಎತ್ತಿ ತೋರಿದರು:

"ಬಸವಣ್ಣನವರ ವಚನಗಳಲ್ಲಿ ಅಲ್ಲಲ್ಲಿ ಪರದೈವ ಪರಮತಗಳ ದೂಷಣೆ ನುಸುಳಿದೆ. ಅದೊಂದು ಇಲ್ಲದಿದ್ದರೆ ಇನ್ನೂ ಲೇಸಿತ್ತು" ಎಂದು ಅಭಿಪ್ರಾಯಪಟ್ಟರು. ನಾನು ವಂದನಾರ್ಪಣೆ ಸಲ್ಲಿಸುತ್ತ, "ಬಸವಣ್ಣನವರ ವಚನಗಳಲ್ಲಿ ಅವರ ಬೆಳೆವಣಿಗೆಯ ಚಿತ್ರ ಸ್ಪಷ್ಟವಾಗಿ ಮೂಡಿ ನಿಂತಿರುವುದೇ ಆ ವಚನಗಳ ವೈಶಿಷ್ಟ್ಯ. ಸಿದ್ಧಾರ್ಥನಂತೆ ಬುದ್ಧನಾದ ಮೇಲೆಯೇ ಅವರು ತಮ್ಮ ಬೋಧೆಯನ್ನು ಬೀರಲಿಲ್ಲ; ತಮ್ಮ ಅರಕೆಗಳೊಡನೆ, ದೌರ್ಬಲ್ಯಗಳೊಡನೆ ಹೋರಾಡುತ್ತಲೇ ವಚನಗಳನ್ನು ಉಸಿರಿದರು. ಅಲ್ಲಿ ತಾರುಣ್ಯದ ಉದ್ರೇಕವೂ ಇದೆ, ಸಾಧಕನ ಹೋರಾಟ–ಹೊಯ್ದಾಟಗಳೂ ಇವೆ; ಸಿದ್ಧನ ವಿಶ್ವಕುಟುಂಬಿತ್ವವೂ ಇದೆ. ಅವರು ತಮ್ಮ ದೌರ್ಬಲ್ಯಗಳನ್ನು, ಕುಂದುಕೊರತೆಗಳನ್ನು ಮುಚ್ಚಿಡಬಹುದಾಗಿದ್ದಿತು; ಆದರೆ ಹಾಗೆ ಏನನ್ನೂ ಬಚ್ಚಿಡದೆ ಎಲ್ಲವನ್ನೂ ಬಿಚ್ಚಿಟ್ಟುದೇ ಬಸವಣ್ಣನವರ ಹಿರಿಮೆ, ಗರಿಮೆ" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಜಿ.ಪಿ. ರಾಜರತ್ನಂ ರೋಮಾಂಚಿತರಾದರು. ಕುರ್ಚಿಯಿಂದಿಳಿದು ಬಂದು ಕೆಳಗೆ ಕುಳಿತಿದ್ದ ನನ್ನ ಕೈ ಹಿಡಿದೆಳೆದು ತಮ್ಮ ಪಕ್ಕದ ಕುರ್ಚಿಯ ಮೇಲೆ ಕುಳ್ಳಿರಿಸಿ, ಮತ್ತೆ ಎದ್ದು ನಿಂತು ಹೇಳಿದರು: "ಇಂದು ನನಗೆ ಈ ಕಿರಿಯ ಬಂಧು ಬಸವಣ್ಣನವರನ್ನು ನೋಡಬೇಕಾದ ನೈಜನೋಟವೊಂದನ್ನು ನೀಡಿದ್ದಾರೆ. 'ಹೈದರಾಬಾದಿನಲ್ಲಿ ನನ್ನ ಕೈ ಹಿಡಿಯುವರಾರು?' ಎಂಬ ಬಿಮ್ಮಿನಿಂದ ಬಂದಿದ್ದೆ. ಈ ಬಂಧು ಅದನ್ನು ಕರಗಿಸಿ ಎಂಥವನಿಗೂ ಇನ್ನೂ ಕಲಿಯಬೇಕಾದುದು ಇದ್ದೇ ಇರುತ್ತದೆ–ಎಂಬ ಸತ್ಯದ ಅರಿವನ್ನು ಮಾಡಿಕೊಟ್ಟಿದ್ದಾರೆ. ಅದನ್ನು ಹಿರಿಯರಿಂದಲೂ ಕಲಿಯಬಹುದು, ಕಿರಿಯರಿಂದಲೂ ಕಲಿಯಬಹುದು. 'ಅರುಹಿಂಗೆ ಹಿರಿದು ಕಿರಿದುಂಟೆ?' ಎಂಬ ಶರಣರ ವಾಣಿ ಸತ್ಯವಾದುದು. ಈ ಬಂಧು ಇನ್ನೂ ಬೆಳೆಯಲೆಂದು ಹರಸುತ್ತೇನೆ, ಹಾರೈಸುತ್ತೇನೆ" ಎಂದು ಹೇಳಿ ನನ್ನನ್ನು ತಬ್ಬಿಕೊಂಡರು. ಆ ಅಪ್ಪುಗೆಯ ನೆನಪಾದರೆ ಇಂದಿಗೂ ಪುಲಕಿತನಾಗುತ್ತೇನೆ ನಾನು!

**ತೀ.ನಂ.ಶ್ರೀ :**

ಸದಾ ಸ್ಮರಣೀಯ ತೀ.ನಂ.ಶ್ರೀ ಅವರು ಮುದ್ದಣನ ಬಗ್ಗೆ ಮಾತನಾಡಿದರು. ಒಂದೂವರೆ ಘಂಟೆಗಳವರೆಗೆ ನಾವು ರಸಲೋಕದಲ್ಲಿ ವಿಹರಿಸಿದ ಅನಿರ್ವಚನೀಯ ಅನುಭವವನ್ನು ಪಡೆದೆವು. ಮರುದಿನ ಪ್ರೊ. ಡಿ.ಕೆ. ಭೀಮಸೇನರಾಯರೊಡನೆ ಅವರು ಉಸ್ಮಾನಿಯಾ ವಿಶ್ವವಿದ್ಯಾಲಯದ ಬಸ್ಸು ಹತ್ತಿದರು. ನಾನೂ ಹಿಂದಿನ ಸೀಟಿನಲ್ಲಿ ಕುಳಿತೆ. ಅಲ್ಲಿ ಕನ್ನಡದ ಪ್ರಾದೇಶಿಕ ವೈಲಕ್ಷಣ್ಯಗಳ ಪ್ರಸ್ತಾಪ ಬಂದಿತು. ತೀ.ನಂ.ಶ್ರೀ: "There is a richness in it; I am not for dull uniformity" ಎಂದರು. ಆದರೂ ವ್ಯಾಕರಣಪ್ರಿಯರಾದ ಡಿ.ಕೆ.ಭೀ. ಸುಮ್ಮನಾಗಲಿಲ್ಲ. "ಕನಿಷ್ಠ



ಗ್ರಂಥಸ್ಥ ಭಾಷೆಯಾದರೂ ಏಕರೂಪ ಪಡೆಯಬೇಡವೆ?" ಎಂಬ ಪ್ರಶ್ನೆ ಎತ್ತಿದರು. ಉತ್ತರವಿತ್ತರು ತೀ.ನಂ.ಶ್ರೀ: "ಗ್ರಂಥಸ್ಥ ಕನ್ನಡ ಏಕರೂಪ ಪಡೆಯಬೇಕು; ಆದರೆ ಕರ್ನಾಟಕದ ಏಕೀಕರಣವಾದಾಗಲೇ ಇದು ಸುಲಭ ಸಾಧ್ಯವಾಗುವುದು." ನನಗೆ ಪ್ರಿಯವಾಗಿದ್ದ ವಿಷಯ ಬರುತ್ತಲೆ ನಡುವೆ ಧುಮುಕಿದೆ ನಾನು: "ಕರ್ನಾಟಕದ ಏಕೀಕರಣ ನಮ್ಮ ಜೀವಮಾನದಲ್ಲಿಯೇ ಆಗಬಹುದೆ, ಸರ್? ನಮ್ಮ ಕಣ್ಣುಗಳಿಗೆ ಅದನ್ನು ನೋಡುವ ಪುಣ್ಯವಿದೆಯೆ?" ಎಂದು ಕೇಳಿದೆ. ಯಾವ ಅನುಮಾನವೂ ಇಲ್ಲದೆ ಉತ್ತರವಿತ್ತರವರು: "ಏಕಿಲ್ಲ? "ಮಂಗಳೂರಿನ ಮಣ್ಣ ಹಣತೆಯನು ಹದಗೊಳಿಸಿ, ಮೈಸೂರ ಸಿರಿಗಂಧದೆಣ್ಣೆಯೆರೆದು, ರಾಯಚೂರಿನ ಹತ್ತಿಯಲಿ ಬತ್ತಿಯಣಿಗೊಳಿಸಿ, ಧಾರವಾಡದ ಕೆಚ್ಚುಕಡ್ಡಿ ಕೊರೆದು. ಕನ್ನಡದ ಹೊಂದೀವಿಗೆಯ ಹಚ್ಚಲಿನ್ನೊಮ್ಮೆ ಬಸವ ವಿದ್ಯಾರಣ್ಯ ಹುಟ್ಟಿ ಬರಲಿ!" ಎಂದು ಹಾಡಿದ ಕವಿ ಹುಟ್ಟಿದ ಮೇಲೆ ಕನ್ನಡದ ದೀಪ ಹೊತ್ತದಿರುತ್ತದೆಯೇ? ನಾನು ಅವಾಕ್ಕಾದೆ–ನನ್ನ "ಕನ್ನಡದ ದೀಪ" ಎಂಬ ಕವಿತೆ 'ಜಯಂತಿ'ಯಲ್ಲಿ ಪ್ರಕಟವಾಗಿ 'ಮಿಂಚಿನ ಬಳ್ಳಿ'ಯ 'ನಾಡ ಹಾಡುಗಳು' ಎಂಬ ಸಂಕಲನದಲ್ಲಿ ಸೇರ್ಪಡೆಯಾಗಿ ಬಹಳ ದಿನಗಳಾಗಿರಲಿಲ್ಲ. ಆಗಲೇ ಅದನ್ನು ಓದಿದುದಲ್ಲದೆ ಅದರ ಒಂದು ಚರಣವನ್ನೂ ನೆನಪಿಟ್ಟುಕೊಂಡಿರುವರಲ್ಲ ಈ ಹಿರಿಯ ಸಾಹಿತಿಗಳು! ದೊಡ್ಡವರದೆಲ್ಲವೂ ದೊಡ್ಡದೆಂಬುವ ಮಾತು ಸುಳ್ಳಲ್ಲ!

**ಬಿ.ಎಂ.ಶ್ರೀ :**

ಆಚಾರ್ಯ ಶ್ರೀ ಅವರು ಉಸ್ಮಾನಿಯಾ ವಿಶ್ವವಿದ್ಯಾಲಯದ ಕರ್ನಾಟಕ ಸಂಘದ ಉದ್ಘಾಟನೆ ಮಾಡಿದುದು ಇನ್ನೊಂದು ಅವಿಸ್ಮರಣೀಯ ಘಟನೆ. ಪ್ರೊ. ಡಿ.ಕೆ. ಭೀಮಸೇನರಾಯರು ಸಂಘದ ಅಧ್ಯಕ್ಷರಾಗಿದ್ದರೂ ಶಿಷ್ಯವಾತ್ಸಲ್ಯದ ಪ್ರತೀಕವಾಗಿ ಉಪಾಧ್ಯಕ್ಷನಾಗಿದ್ದ ನನ್ನನ್ನೇ ಸ್ವಾಗತ ಭಾಷಣ ಮಾಡಲು ಎಬ್ಬಿಸಿದರು. ಮೊದಲ ಸಲ ನಡುಕ ನನಗೆ. ಆಚಾರ್ಯ ಶ್ರೀ ಅವರ ಭವ್ಯ ವ್ಯಕ್ತಿತ್ವ ಅಪಾರ ವಿದ್ವತ್ತು ಅನುಪಮ ವಕ್ತೃತ್ವಗಳ ನೆನಪಾದರೆ ಯಾರಿಗೆ ತಾನೆ ನಡುಕ ಹುಟ್ಟದು? ಸಾಲದುದಕ್ಕೆ ಅವರಷ್ಟೇ ಪ್ರಖ್ಯಾತ ಪಂಡಿತರಾಗಿದ್ದ ಪ್ರೊ. ಟಿ. ವೀರಭದ್ರಡು ಆಚಾರ್ಯ ಶ್ರೀ ಅವರ ಪಕ್ಕದಲ್ಲಿಯೇ ವಿರಾಜಮಾನರಾಗಿದ್ದರು. ಪ್ರೊ. ಎಂ.ಎಸ್. ದೊರೆಸ್ವಾಮಿಯಂಥವರು ಇವರಿಬ್ಬರೆದುರು ನತಮಸ್ತಕರಾಗಿ ನಿಂತಿದ್ದಾಗ ನನ್ನ ಪಾಡೇನು? ಆದರೂ ಧೈರ್ಯ ಮಾಡಿ, "ಹೊಸಗನ್ನಡದ ಇನ್ನೊಬ್ಬ ಸಾಹಿತ್ಯಾಚಾರ್ಯರಾದ ಮಾನ್ಯ ಮಾಸ್ತಿಯವರು ಈ ಸಾಹಿತ್ಯಾಚಾರ್ಯರನ್ನು ಕ್ನನಡದ ಕಣ್ವ ಮುನಿಯೆಂದು ಕರೆದಿದ್ದಾರೆ. ಇದು ಅತ್ಯಂತ ಸಾರ್ಥಕವಾದ ಉಪಮೆ.

ಪರಿತ್ಯಕ್ತ ಶಕುಂತಲೆಯನ್ನು ಆ ಕಣ್ವ ಋಷಿ ಸಾಕಿ ಬೆಳೆಸಿದಂತೆ ಅಲಕ್ಷಿತ ಕನ್ನಡ ಶಕುಂತಲೆಯನ್ನು ಈ ಕಣ್ವಋಷಿಗಳು ಸಾಕಿ ಬೆಳೆಸುತ್ತಿದ್ದಾರೆ" ಎಂದು ಸ್ವಾಗತ ಭಾಷಣದಲ್ಲಿ ಹೇಳಿದೆ, ಕಿವಿ ಗಡಚಿಕ್ಕುವಂತೆ ಕರತಾಡನ ತುಂಬಿದ ಸಭೆಯಲ್ಲಿ ಆಚಾರ್ಯ ಶ್ರೀ ಉದ್ಘಾಟನ ಭಾಷಣದಲ್ಲಿ ವಿನೋದವಾಗಿ ಹೇಳಿದರು: "ಮಾಸ್ತಿಯವರ ಮಾತನ್ನು ನಂಬಬೇಡಿ; ಯಾಕೆಂದರೆ, "We are lovers; although both of us are males, we are nevertheless lovers!" ಸಭೆಯ ತುಂಬೆಲ್ಲ ನಗೆಯ ಹೊನಲು. ಅವರ ಅಂದಿನ ಭಾಷಣ ಸಾವಿರ ವರ್ಷಗಳ ಕನ್ನಡ ಸಾಹಿತ್ಯದ ಸಾರವನ್ನೆಲ್ಲ ಸೂರೆ ಮಾಡಿದ ಭಾಷಣವಾಗಿದ್ದಿತು. ಮಧ್ಯೆ ಮಧ್ಯೆ ಕನ್ನಡ ಬಾರದ ಶ್ರೋತೃಗಳಿಗಾಗಿ ಇಂಗ್ಲೀಷಿನಲ್ಲಿ ಹೇಳುತ್ತಿದ್ದರು. ನಮಗೆ ಅವರ ಕಸ್ತೂರಿ ಕನ್ನಡವನ್ನು ಮೆಚ್ಚಬೇಕೋ, ಅಪರಂಜಿ ಇಂಗ್ಲೀಷನ್ನು ಮೆಚ್ಚಬೇಕೋ ತಿಳಿಯದಾಗುತ್ತಿತ್ತು. ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಅಂದು ಕನ್ನಡದ ಜಯಭೇರಿ ಮೊಳಗಿತು.

ಅವರನ್ನು ಲಿಂಗಂಪಲ್ಲಿ ವಿದ್ಯಾರ್ಥಿನಿಲಯಕ್ಕೆ ಕರೆದೊಯ್ಯುವಲ್ಲಿ ಯಶಸ್ವಿಯಾದೆ. ಅಷ್ಟರಲ್ಲಿ ಅವರಿಗೆ ಹತ್ತಿರದವನಾಗಿದ್ದೆ. ಪ್ರೊ. ಡಿ.ಕೆ. ಭೀಮಸೇನರಾಯರೂ, ಅವರ ಇನ್ನೊಬ್ಬ ಅಚ್ಚುಮೆಚ್ಚಿನ ಶಿಷ್ಯರಾಗಿದ್ದ ವಿದ್ವಾನ್ ಮಾನ್ವಿನರಸಿಂಗರಾಯರೂ ನನ್ನನ್ನು ಅವರ ಸಮೀಪಸ್ಥನನ್ನಾಗಿ ಮಾಡಿದ್ದರು. 'ಅಲ್ಲಿ ಯಾವ ವಿಷಯದ ಬಗ್ಗೆ ಮಾತನಾಡಲಿ?' ಎಂದು ಕೇಳಿದರು ಆಚಾರ್ಯರು ದಾರಿಯಲ್ಲಿ. "ಕನ್ನಡ ಚಳವಳಿಯ ಭವಿತವ್ಯ" ಎಂಬ ವಿಷಯ ಸೂಚಿಸಿದೆ. "ಭವಿತವ್ಯ-ಎಂಬ ಶಬ್ದಬೇಡ; ಕನ್ನಡ ಚಳವಳಿ ಎಂದಿಷ್ಟೇ ಸಾಕು" ಎಂದರು. ನಾನು ಅದೇ ವಿಷಯವನ್ನು ಪ್ರಕಟಿಸಿದೆ. ಅವರು ಆ ವಿಷಯವನ್ನು ಮರೆತರೋ ಇಲ್ಲವೆ ಬಸವಣ್ಣನ ವಿಷಯ ಹೆಚ್ಚು ಪ್ರಸ್ತುತವೆಂದು ಬಗೆದರೋ-ತಿಳಿಯದು. ಬಸವಣ್ಣನವರ ಬಗ್ಗೆ ಮಾತನಾಡಿದರು. ಅದ್ಭುತವಾಗಿ ಮಾತನಾಡಿದರು. ಕೊನೆಗೆ "ಬಸವಣ್ಣ ಇದೆಲ್ಲವನ್ನೂ ಮಾಡಿದುದರಲ್ಲಿ ಆಶ್ಚರ್ಯವೇನಿಲ್ಲ-ಅವರ ರಕ್ತ ಯಾರದು?" ಎಂದು ಮುಗಿಸಿದರು. ವಂದನಾರ್ಪಣೆಯಲ್ಲಿ ಮೆತ್ತಗೆ ಹೇಳಿದೆ-"ಬಸವಣ್ಣನ ರಕ್ತದ ಬಗ್ಗೆ ಹೆಮ್ಮೆಪಟ್ಟುಕೊಳ್ಳುವವರು ಬಸವ ತತ್ತ್ವಗಳನ್ನು ಅಂಗೀಕರಿಸಿ ಬಿಡಲಿ; ಆಗ ಭಾರತದೆಲ್ಲೆಲ್ಲ ನಾವು ಕಾಣಬಯಸಿರುವ ಕ್ರಾಂತಿ ಮೂಡುವುದು!" ಅವರಿದನ್ನು ಒಪ್ಪಿದರು; "ಇದು ಈಗ ಸ್ವಲ್ಪಮಟ್ಟಿಗೆ ನಡೆದಿದೆ; ಎಂ.ಆರ್. ಶ್ರೀ. ಅಂಥವರು ಸಾವಿರ ಸಾವಿರ ಸಂಖ್ಯೆಯಲ್ಲಿ ಹುಟ್ಟಿ ಬಸವಣ್ಣನ ತತ್ತ್ವಗಳು ಸಾರ್ವತ್ರಿಕವಾಗಿ ಅಂಗೀಕೃತವಾಗುವಂತೆ ಮಾಡಬೇಕು" ಎಂದು ಆಶಿಸಿದರು. ಅವರ ಆಶೆ ಈಡೇರಿಲ್ಲ ಇನ್ನೂ.



## ಧಾರವಾಡ ಸಾಹಿತ್ಯ ಸಮ್ಮೇಳನ

ಧಾರವಾಡದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಅದು ಬೆಳ್ಳಿ ಹಬ್ಬದ ಸಮ್ಮೇಳನ. ಮಹಾಪಂಡಿತ ಪ್ರೊ. ಎಸ್.ಎನ್. ಬಸವನಾಳರೇ ಸ್ವಾಗತಾಧ್ಯಕ್ಷರು; ವ್ಯಾಕರಣ ತೀರ್ಥ ಚಂದ್ರಶೇಖರ ಶಾಸ್ತ್ರಿಗಳು ಸಮ್ಮೇಳನಾಧ್ಯಕ್ಷರು. ನಾವು ಕೆಲವರು ಸಮ್ಮೇಳನ ನೋಡ ಬಯಸಿದೆವು. ಆಗ ತಾನೆ ಮಹಾಗಾಂವಿಗೆ ಬಂದು ಹೋಗಿ ಹೈದರಾಬಾದು ಕರ್ನಾಟಕದಲ್ಲಿ ತಮ್ಮ ಬೆಳಕು ಬೀರಿದ್ದ ಶ್ರೀ ಶ್ರೀ ಕುಮಾರಸ್ವಾಮಿಗಳವರು ನವ ಕಲ್ಯಾಣ ಮಠ ಅವರ ಕರೆಯೂ ಬಂದಿತು ಹೋದೆವು. ನಮಗೆಲ್ಲಾ ನವಕಲ್ಯಾಣ ಮಠದಲ್ಲಿಯೇ ಆಶ್ರಯ ದೊರೆಯಿತು. ಬಹಳ ಚೆನ್ನಾಗಿ ನೋಡಿಕೊಂಡರು ನಮ್ಮನ್ನು. ಬಿಡುವು ದೊರೆತಾಗಲೆಲ್ಲ ಶ್ರೀ ಶ್ರೀ ಕುಮಾರಸ್ವಾಮಿಗಳರ ಪ್ರವಚನ ಕೇಳುವ ಸುಯೋಗ ಸಿಕ್ಕುತ್ತಿದ್ದಿತು. ಆದರೆ ಅಲ್ಲಿಯ ಅನುಯಾಯಿಗಳು, ಸಂಚಾಲಕರು ಅನಾವಶ್ಯಕವಾಗಿ ಮಾಡುತ್ತಿದ್ದ ಇತರ ಸ್ವಾಮಿಗಳ ಅವಹೇಳನ, ತಮ್ಮ ಸ್ವಾಮಿಗಳ ವೈಭವೀಕರಣ ನನಗೆ ರುಚಿಸಲಿಲ್ಲ.

ಸಮ್ಮೇಳನ ಬಹಳ ವೈಭವದೊಡನೆ ನಡೆಯಿತು. ಸ್ವಾಗತಾಧ್ಯಕ್ಷರ ಭಾಷಣ ಬಹಳ ಬೋಧಪ್ರದವಾದುದಾಗಿತ್ತು. ಕವಿ ಸಮ್ಮೇಳನವಂತೂ ಅಸದೃಶ. ಇನ್ನೊಮ್ಮೆ ಅಂಥ ಕವಿ ಸಮ್ಮೇಳನವನ್ನು ನಾನು ನೋಡಿಲ್ಲ. ಆಚಾರ್ಯ ಶ್ರೀಯವರೇ ಆರಂಭಿಸಿದರು ಕವಿ ಸಮ್ಮೇಳನವನ್ನು ತಮ್ಮದೊಂದು ನೀಳ್ಗವನದ ಭಾಗ ಓದಿ. ಕವಿತೆ, 'ಅಲ್ಲೊಬ್ಬ ನಮಗಿಹನು ನಾಯಕನು' ಎಂದು ಮೊದಲಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಶ್ಲಾಘಿಸಿದುದಾದರೂ ಯಾರಿಗೂ ಅಪಥ್ಯವೆನಿಸಲಿಲ್ಲ. ಶ್ರೀ ಅವರು ಓದಿದ ರೀತಿ, ಅವರ ಕಂಠಶ್ರೀ, ಅವರ ಓಜಸ್ವೀ ವ್ಯಕ್ತಿತ್ವ ಎಲ್ಲವೂ ಸೇರಿ ಆ ಕವಿತೆಗೆ ಕಳೆಕಟ್ಟಿದ್ದುವು. ಆಮೇಲೆ ಕವಿತೆ ಓದಿದವರು ಕನ್ನಡದ ಆಸ್ತಿಯೆಂದೇ ಹೆಸರಾಗಿರುವ ಮಾಸ್ತಿ ಅವರು. ಅವರ ವ್ಯಕ್ತಿತ್ವದ ಮೋಡಿ ಇನ್ನೊಂದು ಬಗೆಯದು. ಬಳಿಗೆ ಬಂದವರನ್ನೆಲ್ಲ ತಮ್ಮ ಬಳಗದವರನ್ನಾಗಿ ಮಾಡಿಕೊಳ್ಳುವ ಅವರಲ್ಲಿ ಅಧಿಕಾರದ ಠೀವಿಯಾಗಲಿ, ಸ್ಥಾನೌನ್ನತ್ಯದ ಬಿಗುಮಾನವಾಗಲಿ, ಪಡೆದ ಪ್ರಸಿದ್ಧಿಯ ಬಿಂಕವಾಗಲಿ ಆಗಲೂ ಇರಲಿಲ್ಲ, ಈಗಲೂ ಇಲ್ಲ. ಅವರ ಹೃದಯ ಹಿಂದೂಸಾಗರದಷ್ಟು ವಿಶಾಲ, ಅವರ ವಿಚಾರಗಳು ಹಿಮಾಲಯದಷ್ಟು ಉನ್ನತ. ಅವರ ಕವಿತೆ ಭಕ್ತಿ ಪ್ರಧಾನವಾಗಿದ್ದಿತು. ಅಂತೆಯೇ ಕೇಳಿದವರ ಮನದಲ್ಲಿ ತಂಬೂರಿ ಮೀಟಿದಂಥ ಅನುಭವವುಂಟಾಯಿತು. ಆಮೇಲೆ ಎದ್ದರು ಕೆ.ವಿ. ಪುಟ್ಟಪ್ಪನವರು. ಎದ್ದರು, ಗೆದ್ದರು ಎಲ್ಲರ ಎದೆಗಳನ್ನು. ಅವರನ್ನು ಅಂದೇ ಮೊದಲ ಸಲ ನೋಡಿದ ನನಗೆ ಹಿಡಿಸಲಾರದಷ್ಟು ಹಿಗ್ಗು! ಅದಾಗಲೇ ಅವರ 'ಕೊಳಲ'ನ್ನು ಎಷ್ಟು ಸಲ ಓದಿದ್ದೆನ್ನೋ!

ಅಂದು ಅವರ ಆಜಾನುಬಾಹು ಭವ್ಯ ವ್ಯಕ್ತಿತ್ವವನ್ನು ಕಣ್ಣು ಪಿಳುಕಿಸದೆ ನೋಡಿದೆ–ನೋಡಿಯೇ ನೋಡಿದೆ. ಕೊರಳು ಮುಚ್ಚಿದ ಉದ್ದ ಕೋಟು, ಎರಡೂ ಬದಿಗೆ ಇಳಿದ ಉತ್ತರೀಯ, ಮಿರಮಿರನೆ ಮಿಂಚುತ್ತಿದ್ದ ಕರಿಯ ಉಂಗುರುಗೂದಲು, ತೇಜಸ್ವಿ ನೇತ್ರಗಳು–ಸಭಿಕರಲ್ಲಿ 'ಮಿಂಚಿನ ಹೊಳೆ ತುಳುಕಾಡಿತು!'. ಸುತ್ತಲೂ ಸಭಿಕರ ಮೇಲೆ ಕಣ್ಣಾಡಿಸಿ ಎರಡು ಕವಿತೆಗಳನ್ನು ಓದಿದರು ಅವರು: "ಆನಂದಮಯ ಈ ಜಗ ಹೃದಯ ಏತಕೆ ಭಯ ಮಾಣೊ–ಸೂರ್ಯೋದಯ ಚಂದ್ರೋದಯ ದೇವರ ದಯ ಕಾಣೊ!" ಎಂಬುದು ಒಂದು, 'ತೇನೆಹಕ್ಕಿ' ಇನ್ನೊಂದು. ಮೊದಲನೆಯದನ್ನು ಹಾಡಿದರು, ಎರಡನೆಯದನ್ನು ಓದಿದರು. ಸಭಿಕರ ಮೇಲಾದ ಪರಿಣಾಮ ಅನಿರ್ವಚನೀಯ. ಸಮ್ಮೇಳನ ಮುಗಿವವರೆಗೂ ಎಲ್ಲರ ಬಾಯಲ್ಲೂ–'ಆನಂದಮಯ ಈ ಜಗ ಹೃದಯ ಏತಕೆ ಭಯ' ಎನ್ನುವ ಪಲ್ಲವಿಯೇ ಪಲ್ಲವಿ! ಎಲ್ಲರ ಬಾಯಲ್ಲೂ ಅವರದೇ ಮಾತು! ಅವರಾದ ಮೇಲೆ ಗಾರುಡಿಗ ಬೇಂದ್ರೆಯವರ ಕವನವಾಚನ. ಅವರು ಓದಿದುದು ಅನುಭಾವ ಗೀತೆಯೊಂದು. ಸಭಿಕರಿಗೆ ಪೂರ್ತಿ ಅರ್ಥವಾಗದಿದ್ದರೂ ಅದರ ಪದಲಾಲಿತ್ಯ, ನಾದ ಮಾಧುರ್ಯಗಳಿಗೆ ಮರುಳಾದರೆಲ್ಲರೂ, 'ವಿನಾಯಕ'ರು ಅದೇ ಪ್ರಕಟವಾಗಿದ್ದ ತಮ್ಮ 'ಸಮುದ್ರ ಗೀತಗಳು' ಎಂಬ ಕವನ ಸಂಕಲನದಿಂದ ಎರಡು ಗೀತೆಗಳನ್ನು ತಮ್ಮ ಸಹಜ ಗಂಭೀರ ಸ್ವರದಲ್ಲಿ ಓದಿದರು. ಆಗ ತಾನೆ ಆಂಗ್ಲರ ನಾಡಿನಲ್ಲಿ ಜಯಭೇರಿ ಬಾರಿಸಿ ಬಂದಿದ್ದ ಅವರು ಕಣ್ಮನಗಳನ್ನು ಸೆಳೆದರು. ಅವರ ಗೀತೆಗಳಲ್ಲಿಯೂ ಹೊಸ ತಿರುವು ಒಂದನ್ನು ಗಮನಿಸಿದರು ಎಲ್ಲರೂ. ಮುಂದವರು 'ನವ್ಯಕವಿತೆ'ಗಳನ್ನು ಬರೆದು ಹೊಸ ಮಾರ್ಗವೊಂದನ್ನು ತೆರೆಯಲಿದ್ದುದರ ಮುನ್ಸೂಚನೆ ಆ ಕವಿತೆಗಳಲ್ಲಿದ್ದಿತು. ಮುಗಳಿಯವರ 'ಮಂದಾರ ಹೂವು', ಇನ್ನುಳಿದ ಕವಿಗಳ ಹೊಸ ಹೊಗರಿನ ಚಿಗುರುಗವಿತೆಗಳು ಅಂದಿನ ಕವಿ ಸಮ್ಮೇಳನವನ್ನು ಅವಿಸ್ಮರಣೀಯ ಸಮ್ಮೇಳನವನ್ನಾಗಿ ಮಾಡಿದುವು.

**ಕುವೆಂಪು**

ಅಂದೇ ಸಂಜೆ ಹಾವೇರಿ ಪೇಟೆಯ ಮುರುಘಾ ಮಠದಲ್ಲಿ, ತ್ರಿವಿಧದಾಸೋಹ ಮೂರ್ತಿ ಶ್ರೀ ಮೃತ್ಯುಂಜಯ ಮಹಾಶಿವಯೋಗಿಗಳವರ ಸಾನ್ನಿಧ್ಯದಲ್ಲಿ ಕೆ.ವಿ. ಪುಟ್ಟಪ್ಪನವರು ತಮ್ಮ ಕವಿತೆಗಳನ್ನು ಓದಿ ಸಾವಿರಾರು ಸಭಿಕರ ಹೃದಯಗಳನ್ನು ಸೂರೆಗೊಂಡರು. ಇದನ್ನು ಆಯೋಜಿಸಿದವರು ಕನ್ನಡದ ಶಿವಯೋಗಿಗಳೆಂದು ಖ್ಯಾತರಾಗಿದ್ದ ನವಿಲುಗುಂದದ ಶ್ರೀ ಶ್ರೀ ಬಸವಲಿಂಗ ಮಹಾಸ್ವಾಮಿಗಳವರು. ನನ್ನ ಅಜ್ಜಂದಿರಾದ ಚೆನ್ನಕವಿಗಳ ಪರಿಚಯವನ್ನು ಪುಟ್ಟಪ್ಪನವರಿಗೆ ಮಾಡಿಕೊಟ್ಟವರು



ಮೊದಲಿನಿಂದೂ ನಮ್ಮ ಮನೆತನದ ಹಿತೈಷಿಗಳಾಗಿರುವ ಪಂಡಿತ ನಾಗಭೂಷಣ ಶಾಸ್ತ್ರಿಗಳವರು. ಹಳ್ಳಿಯಲ್ಲಿ ಹುಟ್ಟಿ, ಖಾಸಗಿ ಪ್ರಾಥಮಿಕ ಶಾಲೆಯಲ್ಲಿ ಮಾತ್ರ ಓದಿ ಅನೇಕ ಶ್ರೇಷ್ಠ ಪುರಾಣ ಕಾವ್ಯಗಳನ್ನು ರಚಿಸಿದ್ದ ಚೆನ್ನಕವಿಗಳನ್ನು ನೋಡಿ ಪುಟ್ಟಪ್ಪನವರು ಬಹಳ ಹರ್ಷಿಸಿದರು. ತಮ್ಮ ಪಕ್ಕದಲ್ಲಿಯೇ ಕುಳ್ಳಿರಿಸಿಕೊಂಡರು. 'ಲತಾನಟಿ' 'ನಾನೆ ವೀಣೆ ನೀನೇ ತಂತಿ ಅವನೇ ವೈಣಿಕ' ಮೊದಲಾದ ತಮ್ಮ ಶ್ರೇಷ್ಠ ಕವನಗಳನ್ನು ಹೃದಯಸ್ಪರ್ಶಿಯಾಗಿ ಹಾಡಿದರು, ಓದಿದರು ಅವರು. ಕವಿ, ಕಾವ್ಯಗಳು ಬಗ್ಗೆ ಅವರು ನೀಡಿದ ವ್ಯಾಖ್ಯಾನವಂತೂ ಅತ್ಯಂತ ಮನೋಜ್ಞವಾಗಿದ್ದಿತು, ಮಾರ್ಮಿಕವಾಗಿದ್ದಿತು, ಮಾನನೀಯವಾಗಿದ್ದಿತು. ನಾನಂತೂ ನನ್ನನ್ನೇ ಮರೆತು ಮೈಕೂದಲೆಲ್ಲ ಕಿವಿಯಾಗಿ ಕೇಳಿದೆ. ಅಂದು ಕೆ.ವಿ. ಪುಟ್ಟಪ್ಪನವರು, ಮುಂದೆ 'ಕುವೆಂಪು' ಆಗಿ ಬಾನೆತ್ತರಕ್ಕೆ ಬೆಳೆದವರು ನನ್ನ ಮನವನ್ನು ಮಾರುಗೊಂಡ ಕವಿಯಾದರು. ಇಂದಿಗೂ ನನ್ನ ಮೇಲೆ ಅವರ ಪ್ರಭಾವ ಬೆಳೆಯುತ್ತಲೇ ಇದೆ; ಕಡಿಮೆಯಾಗುವ ಮಾತೇ ಇಲ್ಲ.

ಪ್ರೋ. ಡಿ.ಕೆ. ಭೀಮಸೇನರಾಯರು ಅಧ್ಯಕ್ಷ ಪದಕ್ಕೆ ಪಂಡಿತ ಚಂದ್ರಶೇಖರ ಶಾಸ್ತ್ರಿಗಳವರ ಹೆಸರನ್ನು ಅನುಮೋದಿಸುತ್ತ 'ನಾವು ಹೈದರಾಬಾದು ಕರ್ನಾಟಕದವರಿಂದು ವರನ ಕಡೆಯವರು' ಎಂದಿದ್ದರು. ಅದರಿಂದ ಉತ್ತೇಜಿತರಾಗಿ ಧಾರವಾಡದಲ್ಲೆಲ್ಲ ವರನ ಕಡೆಯವರಂತೆಯೇ ಎದೆಯುಬ್ಬಿಸಿ ಓಡಾಡಿದೆವು. ಮಹಿಳಾ ಗೋಷ್ಠಿಯ ಸ್ವಾಗತಾಧ್ಯಕ್ಷಿಣಿಯವರಾಗಿದ್ದ ಶಾಂತಕ್ಕ ಮಳೀಮಠರು ತಮ್ಮ ಕಾರ್ಯಕುಶಲತೆ ಹಾಗೂ ವಾಕ್ ಪ್ರೌಢಿಮೆಗಳಿಂದ ನಮ್ಮ ಗಮನ ಸೆಳೆದರು. ಪ್ರೊ. ಬಸವನಾಳರಂತೂ ವಿದ್ವತ್ತಿನ ವಿಂಧ್ಯಾದ್ರಿಯಾಗಿ ತೋರಿದರು ನಮಗೆ. ಹಸ್ತಾಕ್ಷರಗಳನ್ನು ಸಂಗ್ರಹಿಸಲೆಂದಲ್ಲ, ಮಾತನಾಡಿಸುವ ಚಪಲದಿಂದ ಎಲ್ಲ ಖ್ಯಾತ ಸಾಹಿತಿಗಳ ಹತ್ತಿರ ಹೋಗಿ ಬಂದೆವು. ಪ್ರೊ. ಎಸ್.ವಿ. ರಂಗಣ್ಣನವರು ತುಂಬ ಆತ್ಮೀಯತೆಯಿಂದ ಮಾತನಾಡಿದರು. ಕಿಲಾಡಿತನವನ್ನೂ ತೋರದಿರಲಿಲ್ಲ ಆಗಾಗ. ಮುದವೀಡು ಕೃಷ್ಣರಾಯರಂತೂ ಕನ್ನಡದ ಕಲಿಭೀಮರಾಗಿ ತೋರಿದರು. ನಾವಿಳಿದ ಮಠಕ್ಕೆ ಆಧಾರಸ್ತಂಭಗಳಂತಿದ್ದ ಹರ್ತಿಸಾಹೇಬರ, ವೀರಭದ್ರಪ್ಪ ಕೊಪ್ಪಳ ಅವರ, ಮೂರುಸಾವಿರಪ್ಪ ಸಾದರಹಳ್ಳಿ ಅವರ, ಇನ್ನೂ ಅನೇಕರ ಪರಿಚಯವಾಯಿತು.

ಹೈದರಾಬಾದಿಗೆ ಹಿಂದಿರುಗಿದಾಗ ಸಮ್ಮೇಳನಕ್ಕೆ ಹೋಗಿ ಬಂದವರೆಂಬ ತುರಾಯಿ ನಮ್ಮ ತಲೆಗಳ ಮೇಲೆ! ಅಂದಿನ ಕನ್ನಡ ಧುರೀಣರಾಗಿದ್ದ ಜಿ. ರಾಮಾಚಾರ್ಯರಿಗೂ, ಜನಾರ್ಧನರಾವ್ ದೇಸಾಯಿ ಅವರಿಗೂ, ಕೃಷ್ಣಾಚಾರ್ಯ ಜೋಶಿ ಅವರಿಗೂ, ಅನ್ವರಿ ಮಧ್ವರಾಯರಿಗೂ ಪರಿಚಿತರಾದೆವು. ಕನ್ನಡದ

ಕಾರ್ಯಗಳಿಗೆ ಮಹಾಪೂರ ಬಂದಿತು. ಮೈನಾತಾಯಿ ಖೇಣಿಯವರು ಆಗಾಗ ನನ್ನನ್ನು ಮನೆಗೆ ಕರೆಸಿಕೊಂಡು 'ನಿನ್ನ ಹೊಸ ಕವಿತೆ ಹೇಳು' ಎನ್ನುತ್ತಿದ್ದರು. ಅವರಿಗಾಗಿ ಹೊಸ ಹೊಸ ಕವಿತೆಗಳನ್ನು ಹೊಸೆಯಲೇ ಬೇಕಾಗುತ್ತಿತ್ತು. ಅಲ್ಲಿಯ ಕಾಲೇಜುಗಳ ಕರ್ನಾಟಕ ಸಂಘಗಳ ಕಾರ್ಯಕ್ರಮಗಳಿಗೆ ಮುಖ್ಯ ಅತಿಥಿಯಾಗಿಯೋ, ಮುಖ್ಯ ಭಾಷಣಕಾರನಾಗಿಯೋ ಹೋಗಬೇಕಾಗುತ್ತಿತ್ತು. ಮಾನ್ವಿ ನರಸಿಂಗರಾಯರ, ಜಿ.ವಿ. ಸೂಳಿಭಾವಿಯವರ, ಗಣೇಶ ಜೋಶಿಯವರ, ರಾಮಚಂದ್ರರಾಯರ ಒತ್ತಾಯಕ್ಕೆ ಒಳಗಾಗಿ ಕರ್ನಾಟಕ ಸಾಹಿತ್ಯ ಮಂದಿರದ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸ ತೊಡಗಿದೆ. ಪ್ರೊ. ವೀರಭದ್ರುಡು ಅವರ ಪ್ರಭಾವದಿಂದ ಷೇಕ್ಸ್‌ಪಿಯರನ, ಸ್ವಪ್ರೇರಣೆಯಿಂದ ರವೀಂದ್ರ ಇಕಬಾಲ ಗಾಲಿಬರ, ಡಾ. ಆರ್ಯೇಂದ್ರ ಶರ್ಮರ ಪ್ರಚೋದನೆಯಿಂದ ಕಾಳಿದಾಸನ ವಿಶೇಷ ಅಧ್ಯಯನ ನಡೆಸಿದೆ. ವಚನಸಾಹತ್ಯವಂತೂ ಸರಿಯೆ. ರನ್ನ, ರುದ್ರಭಟ್ಟ, ಮುದ್ದಣ, ಜನ್ನ, ಹರಿಹರ, ರಾಘವಾಂಕರ ಕಾವ್ಯಗಳ ಪರಿಚಯವೂ ಆಯಿತು. ಕುಕ್ಕನೂರಿನಲ್ಲಿದ್ದಾಗಲೇ ಕುಮಾರವ್ಯಾಸನ ಮೋಡಿಗೆ ಒಳಗಾಗಿದ್ದೆ. ಹೀಗೆ ತರಗತಿಗಳಲ್ಲಿ ಒಕ್ಕಾಲು, ಹೊರಗೆ ಮುಕ್ಕಾಲು ಸಾಹಿತ್ಯ ವ್ಯಾಸಂಗ ಮುಂದುವರಿಯಿತು. ವಿಶ್ವವಿದ್ಯಾಲಯದ ಪತ್ರಿಕೆಯ ಇಂಗ್ಲೀಷ್ ವಿಭಾಗಕ್ಕೆ ಬಸವಣ್ಣ ಹಾಗೂ ರವೀಂದ್ರರ ಬಗ್ಗೆ ಎರಡು ಲೇಖನಗಳನ್ನು ಕಳಿಸಿದೆ. ಎರಡೂ ಸ್ವೀಕೃತವಾಗಿ ಪ್ರಕಟವಾದವು. ಇನ್ನಷ್ಟು ಧೈರ್ಯ ಬಂದಿತು.

ಮಾರನೆಯ ವರ್ಷ ಹೈದರಾಬಾದು ಪ್ರದೇಶ ವೀರಶೈವ ಸಮ್ಮೇಳನದ ಕಾರ್ಯದಲ್ಲಿ ಸಿಲುಕಿಕೊಂಡೆ. ಮುಂದೆ ಉಪಮಂತ್ರಿಗಳಾಗಿ ಸಜ್ಜನ ರಾಜಕಾರಣಿಯೆಂದು ಹೆಸರಾದ ವೈ. ವಿರೂಪಾಕ್ಷಪ್ಪನವರು ಸ್ವಾಗತಾಧ್ಯಕ್ಷರು, ನಾನು ಕಾರ್ಯದರ್ಶಿ, ಸಮ್ಮೇಳನದ ಯಶಸ್ಸಿಗಾಗಿ ಬಹಳ ದುಡಿದೆವು. ಈ ನೆಪದಿಂದ ಲಿಂಗಂಪಲ್ಲಿಯ ಸಾಂಬಯ್ಯ ಮಠ ಒಂದು ಭವ್ಯ ವಿದ್ಯಾರ್ಥಿಭವನವಾಗಿ ನಿರ್ಮಾಣಗೊಳ್ಳುವುದೆಂಬ ಆಶೆಯಿಂದ ದುಡಿದೆವು. ಆಶೆ ನಿರಾಶೆಯಾಯಿತು. ಬಂದವರೆಲ್ಲ 'ಭಯಂಕರ' ಭಾಷಣಗಳನ್ನು ಬಿಗಿದು ಹೋದರು. ಮತ್ತೆ ಇತ್ತ ಹೊರಳಿ ನೋಡಲೇ ಇಲ್ಲ. ಅನ್ನಪೂರ್ಣ ಸ್ವಾಮಿಗಳವರೊಬ್ಬರೇ ಆಧಾರವಾಗಿ ನಿಂತರು. ಸಮ್ಮೇಳನಕ್ಕೆಂದು ನಾನು ಮಕ್ಕಳಿಗಾಗಿಯೇ ಅಕ್ಕಮಹಾದೇವಿಯ ನಾಟಕ ಬರೆದು ಮಕ್ಕಳಿಂದ ಆಡಿಸಿದ್ದೆ. ಅದು ಯಶಸ್ವಿಯಾಗಿದ್ದಿತು. ಅದರ ಹಸ್ತಪ್ರತಿಯೇ ಮಾಯವಾಗಿ ಅದರ ಪ್ರಕಟನೆ ನಿಂತು ಹೋಯಿತು. ಮತ್ತೆ ಬರೆಯಲು ಮನಸ್ಸಾಗಲಿಲ್ಲ. ಸಮ್ಮೇಳನ ನನಗೆ ನೀಡಿದ ವರವೆಂದರೆ ರಕ್ತಾತಿಸಾರ. ಡಾ. ಜಿ.ಎಸ್. ಮೇಲ್ಕೋಟೆಯವರು ಗುಣಪಡಿಸಿದರು. ಅನ್ನಪೂರ್ಣ ಸ್ವಾಮಿಗಳು, ಸಂಗಡಿಗರು ಶುಶ್ರೂಷೆ ಮಾಡಿದರು. ಉಳಿದವರು? ಹೇಳುವುದೇ ಬೇಡ!



## ಮತ್ತೊಂದು ಸಾಹಿತ್ಯ ಸಮ್ಮೇಳನ

ವ್ಯಾಧಿ ಮುಕ್ತನಾದ ಮೇಲೆ ಅಭ್ಯಾಸಕ್ಕೆ ಪ್ರಥಮ ಪ್ರಾಶಸ್ತ್ಯ ನೀಡಿದೆ. ಹೈದರಾಬಾದಿನಲ್ಲಿ ೨೬ನೆಯ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳವರು ಅಧ್ಯಕ್ಷರು, ಪಂ. ಜಿ. ರಾಮಾಚಾರ್ಯರು ಸ್ವಾಗತಾಧ್ಯಕ್ಷರು. 'ಮಾನ್ವಿ' ಅವರು ಸಮ್ಮೇಳನ ನಾಟಕ ಸೂತ್ರಧಾರಿ. 'ಮಾನ್ವಿ' ಎಲ್ಲಿಯೊ ಸಿದ್ದಯ್ಯ ಪುರಾಣಿಕ ಅಲ್ಲಿಯೆ. ಸಮ್ಮೇಳನ ವಿಜೃಂಭಣೆಯೊಂದಿಗೆ ನಡೆಯಿತು. ವಿದ್ಯಾಮಂತ್ರಿಗಳಾಗಿದ್ದ ನವಾಬ್ ಮೆಹದಿ ಮಾರಜಂಗರು ಉದ್ಘಾಟಿಸಿದರು. 'ಮಾನ್ವಿ'ಯವರು ಬರೆದುಕೊಟ್ಟ ಸ್ವಾಗತ ಭಾಷಣವನ್ನು ಸ್ವಾಗತಾಧ್ಯಕ್ಷರು ತಪ್ಪು ತಪ್ಪಾಗಿ ಓದಿದರು. ಪಾಪ, ಅವರ ಕನ್ನಡ ಜ್ಞಾನಕ್ಕೆ ಮೀರಿದ್ದ ಭಾಷಣವಾಗಿದ್ದಿತದು. ಪ್ರಾರಂಭವೇ 'ನನ್ನ ನಾಡಿನ ಒಡನಾಡಿಗಳೇ' ಎಂದಿದ್ದಿತು. ಇದನ್ನು ಸ್ವಾಗತಾಧ್ಯಕ್ಷರು ಏನೆಂದು ಓದಿದರೆಂಬುದು ಓದುಗರ ಊಹೆಗೆ ಬಿಟ್ಟ ವಿಷಯ! ಸಮ್ಮೇಳನಾಧ್ಯಕ್ಷರ ಭಾಷಣವಂತೂ ಲೋಕೋತ್ತರವಾದುದಾಗಿದ್ದಿತು. ವಿಷಯ ವೈಪುಲ್ಯ, ವಿಚಾರ ಪರಿಪ್ಲುತತೆ, ಭಾಷೆಯ ಬೆಡಗು, ವೈಶಿಷ್ಟ್ಯಪೂರ್ಣ ವಾಚನಗಳಿಂದ ಸಭಿಕರನ್ನು ಮಂತ್ರಮುಗ್ಧರನ್ನಾಗಿ ಮಾಡಿತು ಎ.ಆರ್.ಕೃ. ಅವರ ಅಧ್ಯಕ್ಷ ಭಾಷಣ. ಅವರ ವ್ಯಕ್ತಿತ್ವವೂ ಅಷ್ಟೇ ಆಕರ್ಷಕವಾಗಿದ್ದಿತು. ನಡೆ–ನುಡಿಗಳಲ್ಲಿ ಗಾಂಭೀರ್ಯ, ನೋಡಲು ಏಕಾಂತಪ್ರಿಯರೂ ಮಿತಭಾಷಿಗಳೂ ಆಗಿ ತೋರಿದರೂ ಹತ್ತಿರ ಹೋದವರೊಡನೆ ಹೃದಯ ಬಿಚ್ಚಿ ಮಾತು, ತಿಳಿಯಾದ ಹಾಸ್ಯ ಇವುಗಳಿಂದ ಎಲ್ಲರಿಗೂ ಆದರಣೀಯರಾದರವರು.

ಸಮ್ಮೇಳನದ ಚಿರಸ್ಮರಣೀಯ ಭಾಗ ನನ್ನ ಪಾಲಿಗೆ ಕವಿ ಸಮ್ಮೇಳನವೇ ಸರಿ ಆಗ ಕವಿಯಾಗಬೇಕು, ಕೇವಲ ಕವಿಯಾಗಬೇಕು ಎಂಬ ಗುಂಗಿನಲ್ಲಿದ್ದ ನನಗೆ ಕವಿ ಸಮ್ಮೇಳನವೇ ಸಮಗ್ರ ಸಮ್ಮೇಳನದ ಸಾರಸರ್ವಸ್ವವಾಗಿ ತೋರಿದ್ದರೆ ಆಶ್ಚರ್ಯವಿಲ್ಲ. ಧಾರವಾಡದ ಕವಿ ಸಮ್ಮೇಳನದ ಮಾನದಂಡದಿಂದ ಹೈದರಾಬಾದಿನ ಕವಿ ಸಮ್ಮೇಳನ ಸ್ವಲ್ಪ ಸಪ್ಪೆಯಾಗಿ ತೋರಿದರೂ ಬೇಂದ್ರೆಯವರ 'ಶ್ರಾವಣಾ ಬಂತು' ಎಂಬ, 'ಲೀಲಾಲಿಲೇಸೋ ಲೀಲಾಲಿಯೋ' ಎಂಬ ಜನಪ್ರಿಯ ಕವನಗಳು ಸಭೆಯ ಮೇಲೆ ಸಮ್ಮೋಹನಾಸ್ತ್ರ ಪ್ರಯೋಗಿಸಿದಂಥ ಪರಿಣಾಮ ಮಾಡಿದುವು. ಕವಿಭೂಷಣ ಬೆಟಗೇರಿ ಕೃಷ್ಣ ಶರ್ಮರ 'ಬಾಳಿದು ಕನಸಲ್ಲ', 'ಕರೆಯಂತಿದೆ ಕಹಳೆಯು' ಕವನಗಳೂ ಸಭಿಕರ ಹೆಚ್ಚಿನ ಮೆಚ್ಚಿಗೆಯನ್ನು ಪಡೆದುವು. 'ವಿನಾಯಕ'ರ ಕವಿತೆಗಳ ವಿಚಾರ ವೈಭವಕವಕ್ಕೆ ತಲೆದೂಗಿದರು ಶ್ರೋತೃಗಳು. ನನ್ನ ಸರದಿ ಬಂದಿತು. ಅಂಥ ಅಖಿಲ ಕರ್ನಾಟಕ 'ಸಮ್ಮೇಳನದಲ್ಲಿ ನಾನು ಕವನ ವಾಚಿಸಿದುದು ಅದೇ

ಮೊದಲು. ಕಂಪಿಸುತ್ತಿದ್ದ ಕಾಲುಗಳು, ತೊದಲುತ್ತಿದ್ದ ಜಿಹ್ವೆ, ಉಡುಗುತ್ತಲಿದ್ದ ದೇಹ–ಅಂತೂ 'ಎರಡು ಚಿತ್ರಗಳು', 'ಮನ್ನಿಸೆನ್ನನು ಚೆನ್ನೆ' ಎಂಬ ಎರಡು ಕವಿತೆಗಳನ್ನು ಎಂತೋ ಓದಿ ಮುಗಿಸಿದೆ. ಸಭಿಕರ ಕರತಾಡನ ದಂಗುಗೊಳಿಸಿತು ನನ್ನನ್ನು, ಸಮ್ಮೇಳನಾಧ್ಯಕ್ಷರು ಬೆನ್ನು ಚಪ್ಪರಿಸಿದರು; ಬೇಂದ್ರೆ ಗೋಕಾಕರು ಕೈಹಿಡಿದೆಳೆದು ತಬ್ಬಿಕೊಂಡರು; ಮಾಸ್ತಿಯವರಂತೂ ದೂರ ಕರೆದೊಯ್ದು ಮತ್ತೆ ಮತ್ತೆ ಅವುಗಳನ್ನು ಓದಿಸಿ ಒಂದೆರಡು ಕಡೆ ತಿದ್ದಿ ಸರಿಪಡಿಸಿದರು. "ಬಹಳ ಚೆನ್ನಾಗಿ ಬರೆಯುತ್ತೀಯಪ್ಪ; ಬರೆಯುವುದನ್ನು ಬಿಡಬೇಡ; ಮುಂದುವರಿಸು; ನೀನು ಒಳ್ಳೆಯ ಕವಿಯಾಗುವಿ" ಎಂದು ಪ್ರೋತ್ಸಾಹಿಸಿದರು. ಈ ಪ್ರೋತ್ಸಾಹ ನನಗೆ ವರವಾಗಿ ಪರಿಣಮಿಸಿತು. ಆಮೇಲೆ ಹೊಸ ಹುರುಪು ಹುಮ್ಮಸುಗಳೊಡನೆ ಬರೆಯತೊಡಗಿದೆ.

ಆಗ ನನ್ನ ಒಡನಾಡಿಗಳಾಗಿದ್ದ 'ಕಲಾನಂದ' (ಎಸ್.ಎಸ್. ಪಾಟೀಲ, ಗೂಗಲ್ ಅವರ 'ತಪ್ಪೇನು?' ಎಂಬ ಕವಿತೆಯು ಬಹಳ ಮೆಚ್ಚುಗೆಯನ್ನು ಪಡೆಯಿತು. ಗೆಳೆಯ 'ಅಮರಾನಂದ' (ಚೆನ್ನಬಸವಪ್ಪ ಬೆಟ್ಟದೂರ) ಅದನ್ನು ಬಹಳ ಸುಶ್ರಾವ್ಯವಾಗಿ ವಾಚಿಸಿದರು. 'ಅಮರಾನಂದ'ರು ಇನ್ನೂ ಬರಹಗಾರಿಕೆಯನ್ನು ಉಳಿಸಿಕೊಂಡಿದ್ದಾರೆ; ಆಗಾಗ ಮನನೀಯವಾದ ಲೇಖನಗಳನ್ನು ಬರೆಯುತ್ತಾರೆ; ಆದರೆ 'ಕಲಾನಂದ'ರು ಬರೆಯುವುದು ನಿಲ್ಲಿಸಿದುದು ನನಗೆ ವಿಷಾದವನ್ನುಂಟು ಮಾಡಿದೆ. ರಾಯಚೂರಿನ ವೀರಶೈವ ಫ್ರೀ ಬೋರ್ಡಿಂಗಿನ ಶಿಲ್ಪ ಸೂಗವೀರಶರ್ಮರ 'ಕಿರಣ' ಎಂಬ ಕವನ ಸಂಗ್ರಹ ಪ್ರಕಟವಾಗಲೇ ಇಲ್ಲ. ಹಸ್ತಪ್ರತಿಯೂ ಉಳಿದಿದೆಯೋ ಇಲ್ಲವೋ ಗೊತ್ತಿಲ್ಲ. ಜ.ಶ್ರೀ. ದೇಸಾಯಿಯವರೂ ಬಹಳ ಆಸೆ ಹುಟ್ಟಿಸಿ ಸ್ತಬ್ಧರಾಗಿಬಿಟ್ಟರು. ಆ ಭಾಗದಲ್ಲಿ ಆಗ ತಾನೆ ತಲೆಯೆತ್ತಿದ್ದ ಹೊಸಗನ್ನಡ ಕವಿತೆ ಹುಲುಸಾಗಿ ಬೆಳೆಯುವುದೆಂಬ ನಿರೀಕ್ಷೆ ಹುಸಿಯಾಗುವುದೋ ಎಂಬ ಸಂದೇಹ ತಲೆದೋರಿದಾಗ 'ಹುಸಿಯಾಗಗೊಡೆವು'–ಎಂದು ಮುಂದೆ ಬಂದವರು ಶಾಂತರಸರು, ರಾಘವೇಂದ್ರ ಇಟಗಿ ಅವರು, ದೇವೇಂದ್ರಕುಮಾರ ಹಕಾರಿ ಅವರು, ಪಂಚಾಕ್ಷರಿ ಹಿರೇಮಠರು, ಶರಣಬಸವ ಜಾವಳಿ ಅವರು, ಇನ್ನಿತರರು. ಪಂಡಿತ ತಾರಾನಾಥ ರಾಯರು, ಕೊಪ್ಪಳದ ನಾ.ಭಾ., ಶಿ.ಭಾ., ಗ. ಭಾರು (ಶಾಸ್ತ್ರಿ ಸಹೋದರರು) ಡಾ. ದೇಸಾಯಿ ಪಾಂಡುರಂಗರಾಯರು, ಕಪಟರಾಳ ಕೃಷ್ಣರಾಯರು, ಪ್ರೊ. ಡಿ.ಕೆ. ಭೀಮಸೇನರಾಯರು, ವಿದ್ವಾನ್ ಮಾನ್ವಿ ನರಸಿಂಗರಾಯರು, ಪ್ರೊ. ರಾಮಚಂದ್ರ ರಾವ್ ಪಟವಾರಿ ಅವರು, ಪ್ರೊ. ತವಗ ಭೀಮಸೇನರಾಯರು, ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿಗಳು, ಗುರುಮಠಕಲ್ ಶ್ರೀಶಾಂತವೀರಸ್ವಾಮಿಗಳವರು, ನನ್ನ ತಂದೆಯವರು, ಅಜ್ಜಂದಿರು, ಮಸ್ಕಿ ಬಸವಪ್ಪ ಶಾಸ್ತ್ರಿಗಳು, ಯಾದಗಿರಿಯ ಪಂ.



ಬಸವರಾಜ ಶಾಸ್ತ್ರಿಗಳು, ಜಿ. ಎಮ್. ಗುರುಸಿದ್ಧ ಶಾಸ್ತ್ರಿಗಳು, ವಿದ್ವಾನ್ ವೀರೇಶ್ವರ ಶಾಸ್ತ್ರಿಗಳು, ಚೌದಾಪುರ ಹಿರೇಮಠದ ಶ್ರೀಶಾಂತವೀರಸ್ವಾಮಿಗಳು ಇನ್ನೂ ಅನೇಕರು ಆರಂಭಿಸಿದ್ದ ಕನ್ನಡ ಚಳವಳಿ ಚೌಳುಭೂಮಿಯಲ್ಲಿ ಹೊಳ್ಳು ಬಿತ್ತಿದಂತೆ ಹುಸಿಯಾಗುವುದು ಸಾಧ್ಯವೆ?

**ಮಾಸ್ತಿ :**

ಬಹುಬೇಗ ಮಾಸ್ತಿಯವರಿಗೆ ಮತ್ತಷ್ಟು ಹತ್ತಿರವಾಗುವ ಸುಯೋಗ ಒದಗಿ ಬಂದಿತು. ಉಸ್ಮಾನಿಯಾ ವಿಶ್ವವಿದ್ಯಾಲಯದ ಕರ್ನಾಟಕ ಸಂಘದಲ್ಲಿ ಅವರ ಉಪನ್ಯಾಸವೇರ್ಪಟ್ಟಿತು. ಅವರ ಪರಿಚಯ ಮಾಡಿಕೊಡುವ ಭಾರ ನನ್ನ ಮೇಲೆ ಬಿದ್ದಿತು, ಅಂದೇ ಬಂದಿದ್ದ 'ಜೀವನ' ಪತ್ರಿಕೆಯಲ್ಲಿ ಅವರದೊಂದು ಕವಿತೆ ಪ್ರಕಟವಾಗಿದ್ದಿತು. ಅದನ್ನು ಓದಿದ್ದೆ. ನನ್ನ ಹೃದಯವನ್ನು ಮುಟ್ಟಿದುದೆಲ್ಲ ಒಂದೇ ಓದಿಗೆ ಗಟ್ಟಿಯಾಗಿ ನೆನಪಿನಲ್ಲಿ ಉಳಿಯುತ್ತಿದ್ದ ವಯಸ್ಸದು. ಅವರ ಕವಿತೆಯನ್ನೇ ಉಪಯೋಗಿಸಿಕೊಂಡು ಅವರ ಪರಿಚಯ ಮಾಡಿ ಮುಗಿಸಿದೆ. ಮಾಸ್ತಿಯವರಿಗೆ ಏಕಕಾಲಕ್ಕೆ ಆನಂದ–ಆಶ್ಚರ್ಯ! ಅಂದೂ ನನ್ನ ಬಗ್ಗೆ ಮೆಚ್ಚಿ ಮಾತನಾಡಿದ್ದರು; ಇಂದಿಗೂ ಭೇಟಿಯಾದಾಗಲೆಲ್ಲ ಅದನ್ನು ನೆನಪಿಸುತ್ತಾರೆ. ಅವರ ಅಸೀಮ ವಾತ್ಸಲ್ಯ ಉದ್ದಕ್ಕೂ ನನ್ನ ಬೆಳವಣಿಗೆಗೆ ಬಲವಾದ ಪ್ರೇರಣೆ, ಪ್ರಚೋದನೆಗಳನ್ನು ನೀಡಿದೆ.

ವಾರ್ಷಿಕ ಪರೀಕ್ಷೆ ಸಮೀಪಿಸಲು ಅಭ್ಯಾಸದತ್ತ ಸಹಜವಾಗಿಯೇ ಸೆಳೆಯಲ್ಪಟ್ಟಿತು ನನ್ನ ಲಕ್ಷ್ಯ. ಚೆನ್ನಾಗಿಯೇ ಸಿದ್ಧತೆ ಮಾಡಿಕೊಂಡೆ. ಮೊದಲ ದಿನದ ಮೊದಲ ಉತ್ತರಪತ್ರಿಕೆಯನ್ನು ಬರೆಯುತ್ತಿದ್ದೆ. ವಿಷಯ ಇಂಗ್ಲೀಷ್ ಸಾಹಿತ್ಯ. ಪ್ರೊ. ಟಿ. ವೀರಭದ್ರಡು ಅವರೇ ಪರಿವೀಕ್ಷಕರು. ಇನ್ನೂ ಒಂದು ಪ್ರಶ್ನೆಗೆ ಉತ್ತರ ಬರೆಯುವುದಿದ್ದಾಗ "ಸಮಯವೆಷ್ಟು ಉಳಿದಿದೆ ಸರ್?" ಎಂದು ಕೇಳಿದೆ. ಇನ್ನೂ ಅರ್ಧ ಘಂಟೆ ಉಳಿದಿದೆಯೆಂದರು. ನಾನು ಹರ್ಷಿತನಾಗಿ ಬರೆಯುತ್ತಿದ್ದ ಉತ್ತರವನ್ನು ನಿಧಾನವಾಗಿ ಮುಗಿಸಿ ಕೊನೆಯ ಪ್ರಶ್ನೆಗೆ ಉತ್ತರ ಪ್ರಾರಂಭಿಸಿದೆ, ಆಗ ಅವರು ಬಂದವರೇ, 'ನಾನು ತಪ್ಪು ಹೇಳಿದೆ ಪುರಾಣಿಕ, ಸಮಯ ಮುಗಿದು ಹೋಗಿದೆ!' ಎಂದು ಹೇಳಿ ಉತ್ತರಪತ್ರಿಕೆಯನ್ನು ಕುಸಿದುಕೊಂಡೇ ಬಿಟ್ಟರು! ಇದರ ಪರಿಣಾಮವಾಗಿ ಒಂದು ಪ್ರಶ್ನೆಗೆ ಉತ್ತರ ಬರೆಯಲು ಆಗಲೇ ಇಲ್ಲ. ಪರೀಕ್ಷೆಯ ಫಲಿತಾಂಶ ಪ್ರಕಟವಾದಾಗ ನಾನು ಇಂಗ್ಲೀಷಿನಲ್ಲಿಯೂ ಪ್ರಥಮ, ಸಂಸ್ಕೃತದಲ್ಲಿಯೂ ಪ್ರಥಮ, ಕನ್ನಡದಲ್ಲಿಯೂ ಪ್ರಥಮ, ಒಟ್ಟಿನಲ್ಲಿಯೂ ವಿಶ್ವವಿದ್ಯಾಲಯಕ್ಕೆ ಪ್ರಥಮ. ಆದರೂ ಅತ್ಯಂತ ಪ್ರತಿಷ್ಠೆಯ ಪಾರಿತೋಷಕವೆನ್ನಿಸಿದ್ದ ಸರ್ ಅಕಬರ ಹೈದರಿ ಸುವರ್ಣಪದಕದಿಂದ ವಂಚಿತನಾದೆ! ಕಾರಣ? ಪ್ರಥಮ ಸ್ಥಾನ ಪಡೆವುದಲ್ಲದೆ

ಒಟ್ಟಿನಲ್ಲಿ ನೂರಕ್ಕೆ ಅರುವತ್ತು ಅಂಕಗಳನ್ನು ಪಡೆದಿರಬೇಕೆಂಬ ನಿರ್ಬಂಧವಿದ್ದಿತು ನಿಯಮಗಳಲ್ಲಿ. ವಿಶ್ವವಿದ್ಯಾಲಯಕ್ಕೆ ಪ್ರಥಮ ಸ್ಥಾನವನ್ನೇನೋ ಪಡೆದೆ; ಆದರೆ ಸರಾಸರಿ ಅರುವತ್ತು ಪ್ರತಿಶತ ಅಂಕಗಳನ್ನು ಪಡೆಯದೆ ಹೋದೆ. ಯಾವುದೇ ವಿಷಯದಲ್ಲಿ ಎರಡೇ ಎರಡು ಅಂಕಗಳನ್ನು ಹೆಚ್ಚಿಗೆ ಪಡೆದಿದ್ದರೆ ಅದುವರೆಗೆ ಯಾವ ಭಾಷಾ ವಿದ್ಯಾರ್ಥಿಯೂ ಪಡೆಯದಿದ್ದ ಆ ಸುವರ್ಣಪದಕ ನನ್ನದಾಗುತ್ತಿತ್ತು. ಸಂಸ್ಕೃತದಲ್ಲಿ ನೂರಕ್ಕೆ ಅರುವತ್ತೊಂದು ಅಂಕಗಳು ದೊರೆತಿದ್ದುವು: ಆದರೆ ಕನ್ನಡದಲ್ಲಿ ನೂರಕ್ಕೆ ಅರುವತ್ತು ಮಾತ್ರ! ಇಂದಿಗೂ ಕನ್ನಡ ಮಕ್ಕಳು ಸಂಸ್ಕೃತ ತೆಗೆದುಕೊಳ್ಳುವುದಕ್ಕೆ ಹೆಚ್ಚು ಮಾರ್ಕ್ಸ್ ಅನ್ನು ಪಡೆವ ಹಂಬಲವೇ ಕಾರಣವಾಗಿರುವುದನ್ನು ನೆನೆದಾಗ ಕನ್ನಡ ಪರೀಕ್ಷಕರು ಕನ್ನಡ ವಿದ್ಯಾರ್ಥಿಗಳಿಗೆ ಕಡಿಮೆ ಅಂಕಗಳನ್ನೇ ಅಂದಿನಿಂದ ಇಂದಿನವರೆಗೆ ಕೊಡುತ್ತ ಬಂದು ಕನ್ನಡಕ್ಕೆ ಅದೆಂಥ ದ್ರೋಹಗೈದಿದ್ದಾರೆಂಬುದು ಸುಸ್ಪಷ್ಟವಾಗುತ್ತದೆ. ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಕನ್ನಡದಲ್ಲಿ ನೂರಕ್ಕೆ ಎಂಬತ್ತು ಅಂಕಗಳನ್ನು, ಇಂಟರ್ ಪರೀಕ್ಷೆಯಲ್ಲಿ ನೂರಕ್ಕೆ ಎಪ್ಪತ್ತೇಳು ಅಂಕಗಳನ್ನು ಪಡೆದಿದ್ದ ನಾನು ಬಿ.ಎ. ಪರೀಕ್ಷೆಯಲ್ಲಿ ಅರುವತ್ತು ಅಂಕಗಳನ್ನು ಮಾತ್ರ ಪಡೆದುದು ಹೇಗೆ–ಎಂಬುದು ಇಂದಿಗೂ ಅರ್ಥವಾಗದ ಒಗಟಾಗಿ ಉಳಿದಿದೆ ನನಗೆ! ಇಂಗ್ಲೀಷ್ ಪತ್ರಿಕೆಯಲ್ಲಿ ಉಳಿದ ಆ ಒಂದು ಪ್ರಶ್ನೆಗೂ ಉತ್ತರ ಬರೆದಿದ್ದರೆ? ಸಂಸ್ಕೃತದಲ್ಲಿಯೇ ಇನ್ನೆರಡು ಅಂಕಗಳು ಹೆಚ್ಚಿಗೆ ದೊರೆತಿದ್ದರೆ? ಕನ್ನಡ ಪರೀಕ್ಷಕರು ನನ್ನ ಬೆನ್ನಲ್ಲಿ ಚೂರಿ ಇರಿಯದಿದ್ದರೆ? ಇವೆಲ್ಲ 'ರೆ' ಕಾರಗಳು ಅರ್ಥಹೀನ ಈಗ! ಆಗ ನಿಜವಾಗಿ ಹಳಹಳಿಸಿದವರು ಹುಸೇನ ಅಲಿಖಾನ್ ಸಾಹೇಬರು. ಕೇವಲ ಭಾಷೆಗಳನ್ನೇ ತೆಗೆದುಕೊಂಡಿದ್ದ ಯಾವ ವಿದ್ಯಾರ್ಥಿಯೂ ವಿಶ್ವಿವಿದ್ಯಾಲಯ ಹುಟ್ಟಿದಾಗಿನಿಂದ ಇಲ್ಲಿಯವರೆಗೆ ಇಷ್ಟು ಅಂಕಗಳನ್ನು ಪಡೆದಿರಲಿಲ್ಲ: ಕೇವಲ ಎರಡು ಅಂಕಗಳು ಕಡಿಮೆ ಇವೆಯೆಂದು ಸರ್ ಅಕಬರ ಹೈದರಿ ಸುವರ್ಣ ಪದಕವನ್ನಿವನಿಗೆ ಕೊಡದಿರುವುದು ಸರಿಯಲ್ಲ–ಎಂದು ವಾದಿಸಿದರವರು. ಆದರೆ ಮೇಲಧಿಕಾರಿಗಳು ಅವರ ವಾದವನ್ನು ಒಪ್ಪಲಿಲ್ಲ.

ಇಂಗ್ಲೀಷ್ ಎಂ.ಎ. ತರಗತಿಗೆ ಬಾ, ಸಂಸ್ಕೃತ ಎಂ.ಎ. ಮಾಡಿಕೋ, ಕನ್ನಡ ಎಂ.ಎ. ಓದು ಎಮದು ಮೂರು ಕಡೆಗಳಿಂದ ಒತ್ತಾಯ ಬಂದಿತು ನನ್ನ ಮೇಲೆ. ನನಗೇನೋ ಹುಸೇನ ಆಲಿಖಾನ ಸಾಹೇಬರ ಅಪೇಕ್ಷೆಯಂತೆ ನಡೆವಾಸೆ. ಆದರೆ ನನ್ನ ತಂದೆಯವರಾದರೋ ಆದರೆ ಅಧಿಕಾರಿಯಾಗು. ಇಲ್ಲದಿದ್ದರೆ ವಕೀಲನಾಗು– ಎಂದು ಆರಂಭದಲ್ಲಿಯೇ ಆದೇಶವಿತ್ತಿದ್ದರು. ಆಗಿನ ದಿನಗಳಲ್ಲಿ ಅಧಿಕಾರಿಯಾಗುವುದು ಈ ಮಂತ್ರಿಯಾಗುವುದಕ್ಕಿಂತ ಕಠಿಣವಾದುದಾಗಿದ್ದಿತು. ಆ ಆಸೆಯನ್ನು ತ್ಯಜಿಸಿ



ಎಲ್‌ಎಲ್.ಬಿ. ತರಗತಿ ಸೇರಿದೆ. ಅದೊಂದು ಅಪರಾಧವನ್ನೇ ಮಾಡಿದೆ. ನಾನೇನೂ ವಕೀಲಿ ವೃತ್ತಿಗಾಗಿ ಹೇಳಿ ಮಾಡಿಸಿದವನಾಗಿರಲಿಲ್ಲ. ಅದುವರೆಗೆ ನಾನೋದಿದ ಕಾವ್ಯಗಳಾಗಲಿ, ಕಾದಂಬರಿಗಳಾಗಲಿ, ಇತರ ವಾಙ್ಮಯವಾಗಲಿ ಅಲ್ಲಿ ಪ್ರಯೋಜನಕ್ಕೆ ಬರುವ ಹಾಗಿರಲಿಲ್ಲ. ರುಕ್ಷದಿಂದ ರಸದತ್ತ ನಡೆದಿದ್ದ ಪಯಣ ರಸದಿಂದ ರುಕ್ಷದತ್ತ ನಡೆಯತೊಡಗಿತು. ಎಲ್ಲ ಕಾನೂನುಗಳ ಮೂಲೋದ್ದೇಶಗಳು, ಮೂಲ ಸೂತ್ರಗಳು ಸುಲಭವಾಗಿಯೆ ಸ್ಮರಣೆಯಲ್ಲಿ ಉಳಿಯುತ್ತಿದ್ದುವು ನನಗೆ; ಆದರೆ ಅವುಗಳ ಅನುಚ್ಛೇದಗಳು, ಅವುಗಳ ಸಂಖ್ಯೆ, ಖಚಿತ ಭಾಷೆ, ಪದಪದಕ್ಕೂ ಬೇಕಾಗುತ್ತಿದ್ದ ಕೂದಲು ಸೀಳಿಕೆಯ ಕೌಶಲ್ಯ–ಇವೆಲ್ಲ ತಲೆನೋವಾಗಿ ಬಿಟ್ಟಿದ್ದುವು ನನಗೆ. ಕ್ರಮೇಣ ಈ ಶುಷ್ಕ ಅಧ್ಯಯನವನ್ನು ಒಲಿಯಲು ಕಲಿತೆ. ಏತನ್ಮಧ್ಯೆ ಒಂದು ಪಾಠವನ್ನು ಕಲಿತಿದ್ದೆ. ಶ್ರೀ ಅನ್ನಪೂರ್ಣಸ್ವಾಮಿಗಳವರ ಅಪೇಕ್ಷೆಯಂತೆ ಕೆ.ಎಲ್.ಈ ಸೊಸೈಟಿಯನ್ನು ಮಾದರಿಯನ್ನಾಗಿರಿಸಿಕೊಂಡು ಎಚ್.ಎಲ್.ಈ. ಸೊಸೈಟಿಯೊಂದನ್ನು ಸ್ಥಾಪಿಸಬೇಕೆಂದೂ, ಆ ಸೊಸೈಟಿಯನ್ನು ಪ್ರೊ. ಬಸವನಾಳರು, ಡಾ॥ ನಂದೀಮಠರು, ಪ್ರೊ. ಸಾಖರೆಯವರು, ಪ್ರೊ. ಬಾಗಿಯವರು, ಹು.ಫ. ಕಟ್ಟೀಮನಿಯವರು, ಇನ್ನಿತರರು ತಮ್ಮ ತ್ಯಾಗ ಸೇವೆಗಳಿಂದ ಕಟ್ಟಿ ಬೆಳೆಸಿದಂತೆ ನಾವೂ ಬೆಳೆಸಬೇಕೆಂದೂ ಕೆಲವರು ಸಂಕಲ್ಪ ಮಾಡಿದೆವು. ಆರಂಭದಲ್ಲಿ ಒಂದು ಹೈಸ್ಕೂಲ್ ಸ್ಥಾಪಿಸಬೇಕೆಂದೂ, ಅದಕ್ಕೆ ನಾನು ಮುಖ್ಯೋಪಾಧ್ಯಾಯನಾಗಬೇಕೆಂದೂ, ಬಸಪ್ಪ ಮಂಡಗೆಯವರು ಗಣಿತಶಾಸ್ತ್ರದ ಅಧ್ಯಾಪಕರಾಗಬೇಕೆಂದೂ, ಗುರುಶಾಂತಯ್ಯನವರು ವಿಜ್ಞಾನ ವಿಷಯದ ಅಧ್ಯಾಪಕರಾಗಬೇಕೆಂದೂ, ಇನ್ನೂ ಕೆಲವರು ಬೇರೆ ಬೇರೆ ವಿಷಯಗಳ ಉಪಾಧ್ಯಾಯರಾಗಬೇಕೆಂದು ತೀರ್ಮಾನಿಸಿದೆವು. ಅನ್ನಪೂರ್ಣಸ್ವಾಮಿಗಳವರ ಅಗ್ರಹದಂತೆ ಸಿದ್ಧವಾದ ಈ ಯೋಜನೆಯನ್ನು ಸಮಾಜದ ಕೆಲವು ಶ್ರೀಮಂತರ ಮುಂದೆ ಇರಿಸಿದಾಗ ಮಾತುಗಳು ಮರ್ಮಭೇದಕವಾಗಿದ್ದುವು: "ಈ ದಿನಗಳಲ್ಲಿ ಸರಕಾರೀ ನೌಕರಿಗಳು ಸಿಕ್ಕುವುದಿಲ್ಲವೆಂಬುದನ್ನು ಮನಗಂಡು ಈ ತಂತ್ರ ಹೂಡಿರುವಿರೇನು? ತ್ಯಾಗ ಮಾಡುವರಂತೆ ತ್ಯಾಗ–ಏನಾದರೂ ಇದ್ದರೆ ತಾನೆ ತ್ಯಾಗ ಮಾಡುವುದು?"

## ಕಣ್ಣು ತೆರೆಸುವ ಘಟನೆ :

ನಿಜ, ಬಡವರ ತ್ಯಾಗಕ್ಕೆ ಬೆಲೆಯಲ್ಲಿ? ಲಕ್ಷಾಧೀಶರು ತಮ್ಮ ಆದಾಯದ ಶೇಕಡಾ ಒಂದರಷ್ಟು, ಅಲ್ಲ, ಅರ್ಧದಷ್ಟು ಕೊಟ್ಟರೂ ಅದು ತ್ಯಾಗ: ಹತ್ತು ರುಪಾಯಿ ಬಿಸಾಡಿದರೂ ಅದು ತ್ಯಾಗ; ಅದೇ ಬಡವರು ಕಷ್ಟನಷ್ಟಗಳನ್ನು ಸಹಿಸಿ, ಹಗಲಿರುಳು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಓದಿ ಗಳಿಸಿದ ವಿದ್ಯೆಯನ್ನೇ ಬಿಡಿಕಾಸುಗಳಿಗೆ ಬಿಕರಿ

ಮಾಡಿಕೊಳ್ಳಲು ಸಿದ್ಧರಾದರೂ ಅದು ತ್ಯಾಗವಲ್ಲ! ಎಂಥ ವಿಪರ್ಯಾಸ ವಿಚಾರ ಸರಣಿ, ಎಂಥ ಮೈಸೊಕ್ಕು ಉಳ್ಳವರಿಗೆ! ಎಂಥ ಅವಹೇಳನ ಇಲ್ಲದವರಿಗೆ! ದಿನಕ್ಕೊಂದೇ ರೂಪಾಯಿ ದುಡಿವ ಬಡವ ಕೊಡುವ ಒಂದು ಪೈಸೆ ಹೆಚ್ಚೋ, ಬಡವರ ರಕ್ತ ಕುಡಿವ ಸಿರಿವಂತರು ಕೊಡುವ ಕೋಟಿ ರೂಪಾಯಿ ಹೆಚ್ಚೋ?

ಈ ಕಣ್ಣು ತೆರೆಸುವ ಘಟನೆ ನಡೆದ ಮೇಲೆ ನಾನು ಸಂಪೂರ್ಣವಾಗಿ ಹೊಸ ಮನುಷ್ಯನಾದೆ. ತ್ಯಾಗ, ಸೇವೆ, ಸುಧಾರಣೆ, ಕ್ರಾಂತಿ ಇತ್ಯಾದಿ ದೊಡ್ಡ ದೊಡ್ಡ ಮಾತುಗಳನ್ನಾಡುವುದನ್ನು ನಿಲ್ಲಿಸಿಬಿಟ್ಟೆ. ನಾನು ಬಡವನಾಗಿರುವವರೆಗೆ ಈ ಮಾತುಗಳನ್ನಾಡಿದರೆ ಅವುಗಳಿಗೆ ಬೆಲೆಯೇ ಇಲ್ಲವೆಂಬುದನ್ನು ಮರೆಯಲಾಗದ ರೀತಿಯಲ್ಲಿ ಅರಿತ ನಾನು, ನಾನು ಹುಟ್ಟಿದ ಮನೆಯ ಬಡತನವನ್ನಡಗಿಸುವುದೇ ನನ್ನ ಮೊದಲ ಕರ್ತವ್ಯ, ಪರಮಧರ್ಮ ಎಂದು ನಿರ್ಧರಿಸಿಬಿಟ್ಟೆ. ಮತ್ತೆ ಮತ್ತೆ ತಂದೆಯವರ ಚಿತ್ರ ಕಣ್ಮುಂದೆ ಸುಳಿಯುತ್ತಿತ್ತು. ವಿದ್ವತ್ತೆ? ಸದ್ಗುಣಸಂಪತ್ತೆ? ಪವಿತ್ರ ಜೀವನವೆ? ಅವರಲ್ಲಿ ಏನಿಲ್ಲ? ಆದರೂ ಅವರಿಗೆ ಬೆಲೆ ಇಲ್ಲ ಈ ಸಮಾಜದಲ್ಲಿ! ಯಾಕೆ! ಅವರಲ್ಲಿ ದುಡ್ಡಿನ ದೊಡ್ಡ ಹಮ್ಮಿಣಿಯಿಲ್ಲ, ಹೊನ್ನಿಲ್ಲ, ಹೊಲಗದ್ದೆಗಳಿಲ್ಲ, ವಾಹನ ವೈಭವವಿಲ್ಲ! ಅಂತೆಯೇ, ಅಂತೆಯೇ ಬಡತನದೊಡನೆ ಕುಸ್ತಿಯನ್ನಾಡಿ ಅದರ ಮೇಲೆ ವಿಜಯ ಪಡೆಯುವುದೇ ಗುರಿಗಳಲ್ಲಿ ಗುರಿ! ಇಲ್ಲಿ ಮನ್ನಣೆಗೆ ಇದೊಂದೇ ದಾರಿ!

'ಛಲವಿಲ್ಲದವರ ಮೆಚ್ಚ, ಕೂಡಲಸಂಗಮದೇವ' ಎಂಬ ಬಸವೋಕ್ತಿಯನ್ನು ನೆನಪಿನಲ್ಲಿರಿಸಿಕೊಂಡಿದ್ದ ನಾನು ಛಲದಿಂದಲೇ ಮುಂದುವರಿದೆ. ಯಾವುದಾದರೊಂದು ಎಂ.ಎ. ತರಗತಿಗೆ ಸೇರಿದರೆ ನನ್ನದಾಗುತ್ತಿದ್ದ ತಿಂಗಳಿಗೆ ಮೂವತ್ತು ರೂಪಾಯಿಗಳ ವಿದ್ಯಾರ್ಥಿವೇತನವನ್ನು ನಿರಾಕರಿಸಿ, ಅದುವರೆಗೆ ಆರಾಧಿಸುತ್ತಿದ್ದ ಸಾಹಿತ್ಯ ದೇವಿಯನ್ನು ಕಡೆಗಣಿಸಿ ವಕೀಲನಾಗುವ ನಿರ್ಧಾರದೊಡನೆ ಮುಂದುವರಿದಿದ್ದೆ–ಆದುವರೆಗೆ ಅನುಭವಿಸದಂಥ ಆರ್ಥಿಕ ಅಡಚಣೆಗಳನ್ನು ಅನುಭವಿಸುತ್ತಲೇ, ಅದುವರೆಗೆ ಎದುರಾಗದಿದ್ದ ಒಳಗಿನ ಒಲವು ಹೊರಗಿನ ವ್ಯಾಸಂಗಗಳ ನಡುವಣ ವಿರಸದಾಂಪತ್ಯವನ್ನು ಎದುರಿಸುತ್ತಲೇ ಮುಂದುವರಿದಿದ್ದೆ, ಅಷ್ಟರಲ್ಲಿ 'ಸಲಾಮ್ ಸಾಬ್' 'ಬೆಟ್ಟದಾರಿ' 'ಕನ್ನಡದ ದೀಪವದು ಕಾಣದಿಹುದು' ಮುಂತಾದ ಕವಿತೆಗಳ ಮೂಲಕ ಪಡೆದಿದ್ದ ಕವಿಯೆಂಬ ಖ್ಯಾತಿಯನ್ನು ಮರೆತು ಭಾವೀವಕೀಲನೆಂಬ ಬಿರುದು ಪಡೆದಾಗ ಹೇಗೆ ಹೇಗೋ ಎನ್ನಿಸುತ್ತಿತ್ತು ನನಗೆ.

ಈ ಅಂತರಂಗದ ತುಮುಲ ತುಯ್ತಗಳನ್ನು ಮರೆಯಲು ಏನಾದರೂ ಕಿತಬಿ ಕಿತಾಪತಿಗಳನ್ನು ಮಾಡುತ್ತಿದ್ದೆ. ತಾನು ಸಿರಿವಂತರ ಮನೆಯಲ್ಲಿ ಹುಟ್ಟಿರುವ



ಕಾರಣ ತನ್ನ ಮಧ್ಯಮ ವರ್ಗದ ಬೀಗರೊಬ್ಬರ ಮಗಳನ್ನು ಮದುವೆಯಾಗುವುದು ತನಗೆ ಅಗೌರವವೆಂದು ತಿಳಿದಿದ್ದ ನನ್ನ ಗೆಳೆಯನೊಬ್ಬನಿಗೆ ಅದೆ ಹುಡುಗೆಯ ಹುಚ್ಚು ಹಿಡಿಸಿ ಅವಳನ್ನೇ ಮದುವೆಯಾಗುವಂತೆ ಮಾಡಿದುದು ಇಂಥದೊಂದು ಕಿತಬಿ. ಅವರೀರ್ವರಲ್ಲಿ ಪತ್ರ ವ್ಯವಹಾರ ಪ್ರಾರಂಭವಾಗುವಂತೆ ಮಾಡಿದೆ. ಎರಡೂ ಕಡೆಯ ಪತ್ರಗಳ ಭಾಷೆ ನನ್ನದೇ! ಇತ್ತ ಗೆಳೆಯನಿಗೆ 'ಪ್ರಿಯತಮೆ, ನಿನ್ನನುಳಿದೆನ್ನ ಬಾಳು ಬೀಳು' ಮುಂತಾಗಿ ಬರೆದು ಕೊಟ್ಟು ಇದಕ್ಕೆ 'ಪ್ರಿಯತಮ, ನನ್ನ ಮನಸ್ಸಿನಲ್ಲಿ ನೀವೇ, ನನಸಿನಲ್ಲಿ ನೀವೇ, ಕನಸಿನಲ್ಲಿ ನೀವೇ!' ಇತ್ಯಾದಿ ಉತ್ತರ ಬರೆದು ಲಕೋಟೆಯಲ್ಲಿಟ್ಟು ಆ ತಂಗಿಗೆ ಕಳಿಸುತ್ತಿದ್ದೆ. ಆ ತಂಗಿ ಅದೇ ರೀತಿ ಉತ್ತರ ಬರೆದು ಕಳಿಸಿದಾಗ ಅದನ್ನೋದಿ ಕೋತಿಯಂತೆ ಕುಣಿಯುತ್ತಿದ್ದ ನನ್ನ ಗೆಳೆಯ! ಹೀಗೆ ನಾಲ್ಕಾರು ತಿಂಗಳುಗಳವರೆಗೆ ಈ ನಕಲಿ ಪ್ರೇಮಪತ್ರಗಳ ವ್ಯವಹಾರ ನಡೆದ ಮೇಲೆ ಇಬ್ಬರೂ, ಒಬ್ಬರೊಬ್ಬರ ಇಲ್ಲದ ಕಾವ್ಯಮಯ ಭಾಷೆಗೆ ಮಾರುಹೋಗಿ ಒಬ್ಬರೊಬ್ಬರ ಕೈ ಹಿಡಿದರು!

ಇನ್ನೊಂದು ವಿನೋದದ ಘಟನೆ. ಮದುವೆಯಾಗಲು ಮನಸ್ಸು ಹಾತೊರೆಯುತ್ತಿದ್ದರೂ ಕೆಲಸ ಸಿಕ್ಕದೆ ಮದುವೆಯಾಗಲು ಧೈರ್ಯವಿಲ್ಲದ ನನ್ನ ಗೆಳೆಯರೊಬ್ಬರು ಹಗಲಿರುಳು ಹೆಣ್ಣಿನ ಹಳವಂಡದಲ್ಲಿಯೇ ಇರುತ್ತಿದ್ದರು. ಕಾಮಶಾಸ್ತ್ರದ ಪುಸ್ತಕಗಳನ್ನು ಕದ್ದು ಓದುತ್ತಿದ್ದರು; ಅವರ ಪರ್ಸ್ ಜಾಡಿಸಿದರೆ ಪೈಸಾಗಳಲ್ಲ, ಅರೆನಗ್ನ ಸುಂದರಿಯರ ಚಿತ್ರಗಳು ಸುರಿಯುತ್ತಿದ್ದುವು! ಒಮ್ಮೆ ಕೋಣೆಯಲ್ಲಿ ನಾವಿಬ್ಬರೇ ಮಲಗಿದ್ದೆವು. ಮಾತಿಗೆ ಮೊದಲು ಮಾಡಿದರವರು:

"ನೋಡ್ರಿ, ನಿಮಗೊಂದು ಗುಟ್ಟಿನ ಮಾತು ಕೇಳುತ್ತೇನೆ, ಯಾರ ಮುಂದೂ ಹೇಳಬಾರದು ನೀವು!"

"ಹೇಳುವುದಿಲ್ಲ. ಏನದು ಹೇಳಿರಿ."

"ಯಾರ ಮುಂದೂ ಹೇಳುವುದಿಲ್ಲವೆಂದು ಆಣೆ ಮಾಡಿರಿ!"

"ನನ್ನಾಣೆ ಹೇಳುವುದಿಲ್ಲ; ಏನದು ಹೇಳಿ ಬಿಡಿರಿ!" (ಮಾತು ಕೊಟ್ಟಂತೆ ಇಂದಿನವರೆಗೂ ಯಾರಿಗೂ ಹೇಳಿಲ್ಲ ಇದನ್ನು ನಾನು!)

"ನೋಡ್ರಿ, ನನಗೊಂದು ಒಳ್ಳೆಯ ಕನ್ನೆ ಹುಡುಕಿರಿ. ನಾನಿನ್ನು ಮದುವೆಯಾಗದೆ ಇರಲಾರೆ!"

"ಆಗಲಿ, ಹುಡುಕುವೆನು."

"ನೋಡ್ರಿ, ಹುಡುಗಿ ಹದಿಹರೆಯದವಳಾಗಿರಬೇಕು."

"ಹೂಂ."

"ಬಹಳ ಸುಂದರಿಯಾಗಿರಬೇಕು."

'ಹೂಂ."

"ಆಗರ್ಭ ಶ್ರೀಮಂತ ಮನೆತನದವಳಿರಬೇಕು."

"ಹೂಂ."

"ಆ ಮನೆಗೆ ಅವಳೊಬ್ಬಳೇ ವಾರಸುದಾರಳಾಗಿರಬೇಕು; ಅಣ್ಣತಮ್ಮಂದಿರಾಗಲಿ, ಅಕ್ಕತಂಗಿಯರಾಗಲಿ ಇರಕೂಡದು."

"ಹೂಂ."

"ಮ್ಯಾಟ್ರಿಕ್ ಪಾಸಾಗಿರಬೇಕು."

"ಹೂಂ."

"ತಂದೆಯಿರಬಾರದು; ತಾಯಿಯೊಬ್ಬಳೇ ಇರಬೇಕು."

"ಹೂಂ."

"ಹೇಳಿದ್ದಕ್ಕೆಲ್ಲ ಹೂಂಗುಟ್ಟುತ್ತಿರುವಿರಿ. ನಿಮ್ಮ ಗುಂಭ ಗೊತ್ತಾಗದೆ ನನಗೆ? ಇಂಥ ಅಪರೂಪ ಕನ್ಯೆ ಸಿಕ್ಕರೆ ನೀವೇ ಮದುವೆಯಾಗಿ ಬಿಡುವಿರಿ, ನನಗೆಲ್ಲಿ ಬಿಡುವಿರಿ?"

ನನಗೆ ನಗೆ ತಡೆಯಲಾಗಲಿಲ್ಲ. ಸಾಕಾಗುವ ತನಕ ನಕ್ಕು ಹೇಳಿದೆ: "ನೋಡ್ರಿ, ನೀವು ಹೇಳುವಂಥ ಹುಡುಗಿ ಈ ಬಡ ದೇಶದಲ್ಲಿ, ನಮ್ಮ ಬಡ ಸಮಾಜದಲ್ಲಿ ಸಿಕ್ಕಲಾರಳು; ಅಮೇರಿಕಾ, ಫ್ರಾನ್ಸ್, ಇಂಗ್ಲಂಡುಗಳಲ್ಲಿ ಅರಸಿ ನೋಡಿರಿ! ನಿಮ್ಮ ಹಳ್ಳಿಯ ಮನೆ ನೋಡಲು ಹಾರಿ ಬಂದಾಳು ವಿಮಾನದಲ್ಲಿ!"

ಕನ್ನಡವನ್ನು ನಾನು ಕೈಬಿಡಬೇಕೆಂದರೂ ಕನ್ನಡ ನನ್ನ ಕೈಬಿಡಲಿಲ್ಲ, ಇಂದಿಗೂ ಕೈಬಿಟ್ಟಿಲ್ಲ. ಕನ್ನಡ ಕಂದ ಕಾವ್ಯನಂದನೆಂದೇ ಕವಿತೆ ಬರೆಯುತ್ತಿದ್ದೆ; ಇಂದಿಗೂ ಕನ್ನಡದ ಕಂದನಾಗಿಯೇ ಉಳಿದಿದ್ದೇನೆ. ಕನ್ನಡತಾಯಿಯ ಕೃಪೆಯಿಂದಲೇ ನನಗಿಂದು ನನ್ನ ನೆನಪುಗಳನ್ನು ಬರೆಯುವ ಸೌಭಾಗ್ಯ ಸಂಪ್ರಾಪ್ತವಾಗಿದೆ. "ವಕೀಲನಾಗಿಯೂ ಕನ್ನಡದ ಸೇವೆ ಮಾಡುವುದು ಏಕೆ ಸಾಧ್ಯವಿಲ್ಲ? ಆಲೂರ ವೆಂಕಟರಾಯರು,



ಫ.ಗು. ಹಳಕಟ್ಟಿಯವರು, ಕೆರೂರು ವಾಸುದೇವಾಚಾರ್ಯರು ವಕೀಲರಲ್ಲವೆ?" ಎಂದು ನನಗೆ ನಾನೇ ಸಮಾಧಾನ ಹೇಳಿಕೊಳ್ಳುತ್ತಿದ್ದೆ; ಕನ್ನಡದ ಕರೆ ಎಲ್ಲಿಂದಲೇ ಬರಲಿ, ಅಲ್ಲಿಗೆ ಧಾವಿಸುತ್ತಿದ್ದೆ. ಕನ್ನಡದ ಕವಿ ಮಾತ್ರವಿಲ್ಲ, ಉಜ್ವಲ ವಾಗ್ಮಿಯೆಂಬ ಖ್ಯಾತಿಯನ್ನು ಪಡೆದುಬಿಟ್ಟಿದ್ದೆ. ಯಾವ ಕಾಲೇಜಿನಲ್ಲಿ ಕನ್ನಡದ ಉತ್ಸವ ನಡೆದರೂ ನಾನಲ್ಲಿರುತ್ತಿದ್ದೆ; ಯಾವ ಸಂಘದಲ್ಲಿ ಕನ್ನಡದ ಬಗ್ಗೆ ಚರ್ಚೆ ನಡೆದರೂ ನಾನದರಲ್ಲಿ ಭಾಗವಹಿಸುತ್ತಿದ್ದೆ. ಜಿ. ರಾಮಾಚಾರ್ಯರೂ, ದೇಸಾಯಿ ಜನಾರ್ಧನರಾಯರು ವಕೀಲನಾಗುತ್ತಲೇ ನನ್ನನ್ನು ರಾಜಕೀಯ ಸಂಸ್ಥೆಯಾಗಿದ್ದ ಕರ್ನಾಟಕ ಪರಿಷತ್ತಿಗೆ ಎಳೆಯುವ ಯೋಚನೆಯಲ್ಲಿದ್ದರು; ಶ್ರೀ ಅನ್ನಪೂರ್ಣಸ್ವಾಮಿಗಳು, ಮೈನಾತಾಯಿ ಖೇಣಿಯವರು, ಎಲ್.ಜೆ. ಹೊಂಬಳರೇ ಮೊದಲಾದವರು ನನ್ನನ್ನು ವೀರಶೈವ ಪರಿಷತ್ತಿಗೆ ಎಳೆವ ಹವಣಿಕೆಯಲ್ಲಿದ್ದರು. ಆದರೆ ದೈವ ನಿರ್ಧರಿಸಿದ್ದುದೇ ಬೇರೆಯಾಗಿದ್ದಿತು.

**ತಂಗಿ :**

ನನ್ನ ತಂಗಿ ವೀರಾಂಬೆಗೆ ತುಂಬಾ ಕಾಯಿಲೆಯೆಂಬ ಸುದ್ದಿ ಬಂದಿತು. ನನ್ನಲ್ಲಿ ಕಳವಳದ ಕಾರಂಜಿ ಪುಟಿಯತೊಡಗಿತು. ಹೋಗಿ ನೋಡಿಕೊಂಡು ಬರಬೇಕೆಂದರೆ ಮೊದಲಿನಂತೆ ವಿದ್ಯಾರ್ಥಿವೇತನದ ಬಲವಿರಲಿಲ್ಲ; ಪರೀಕ್ಷೆಯೂ ಧುತ್ತೆಂದು ಮುಂದೆ ನಿಂತಿದ್ದಿತು. ನನ್ನ ನಿಸ್ಸಹಾಯಕತೆ ನನ್ನ ಅಳಲನ್ನು ಇನ್ನಷ್ಟು ಹೆಚ್ಚಿಸಿತು. ಊರಿಗೆ ಪತ್ರ ಬರೆಯುವುದು, ಉತ್ತರಕ್ಕಾಗಿ ಕಾಯುವುದು. ಉತ್ತರ ಬರಲು ಒಂದು ವಾರವಾದರೂ ಬೇಕಿತ್ತು. ಆ ಅವಧಿಯಲ್ಲಿ ತಂಗಿಯ ಚಿಂತೆಯೇ ಚಿಂತೆ. ಅಂಥ ತಂಗಿಯನ್ನು ಪಡೆಯಲು ಪುಣ್ಯ ಮಾಡಿರಬೇಕು ಅಣ್ಣನಾದವನು. ಹುಟ್ಟಿದಾಗಿನಿಂದಲೂ ಆಕೆಗೆ ಕಾಯಿಲೆಯೆಂಬುದಿರಲಿಲ್ಲ. ಈಗ ಒಮ್ಮೆಗೆ ಇಷ್ಟು ತೀವ್ರವಾದ ಕಾಯಿಲೆ ಏಕೆ ಬಂದಿರಬೇಕು? ನಾನು ಪರೀಕ್ಷೆ ಮುಗಿಸಿ ಹೋಗುವವರೆಗೆ ಉಳಿದಾಳೆ? ನಾನು ಇನ್ನೊಮ್ಮೆ ತಂಗಿಯನ್ನು ನೋಡೇನೆ? ಇತ್ಯಾದಿ ಚಿಂತೆಗಳಲ್ಲಿಯೇ ಪರೀಕ್ಷೆ ಕೊಟ್ಟು ಊರಿಗೆ ಹೋದೆ. ತಂಗಿಯ ಸ್ಥಿತಿಯನ್ನು ಕಂಡಾಗ ಕಂಬನಿಗಳುಕ್ಕಿದುವು. ಕೊಪ್ಪಳದಲ್ಲಿ ಗುಣವಾಗಲಿಕ್ಕಿಲ್ಲವೆಂದು ಗದಗಿಗೆ ಕರೆದೊಯ್ದೆವು. ಅಲ್ಲಿ ಕೆಲವು ದಿನ ಡಾ. ಶೇಷಗಿರಿಯವರ ಚಿಕಿತ್ಸೆ ನಡೆದ ಮೇಲೆ ಸ್ವಲ್ಪ ಗುಣವಾಗಲು ಮತ್ತೆ ಕೊಪ್ಪಳಕ್ಕೆ ಕರೆದೊಯ್ದೆವು. ಆಕೆಯ ಮಕ್ಕಳು ನೀಲಾಂಬಿಕೆ, ಸಂಗಮನಾಥರ ಮುಖ ನೋಡಿದಾಗ ಎಂದಿಲ್ಲದ ದುಃಖ ಉಕ್ಕಿಹರಿಯಿತು.

ಅದೇ ಕೊನೆಯ ದುಃಖವೇನೂ ಆಗಿರಲಿಲ್ಲ. ಇನ್ನೊಂದು ಆಘಾತ ಕಾದಿದ್ದಿತು ನನಗಾಗಿ. ಪರೀಕ್ಷೆಯಲ್ಲಿ ಫೇಲಾಗಿದ್ದೆ. ಶಾಲೆ ಸೇರಿದಂದಿನಿಂದ ಒಮ್ಮೆಯೂ

ಫೇಲಾಗದಿದ್ದ ನನಗೆ ಬರಸಿಡಲು ಬಡಿದಂತಾಯಿತು. ಇತ್ತ ತಂಗಿಯ ಅನಾರೋಗ್ಯ ಅತ್ತ ಮನೆಯ ಆರ್ಥಿಕ ದುಃಸ್ಥಿತಿ, ಇವೆರಡೂ ಸಾಲವೆಂಬಂತೆ ಈ ಪರೀಕ್ಷೆಯ ಫಲಿತಾಂಶ! ತಂದೆ ತಾಯಿಯರು ದಿಕ್ಕು ತೋರದ ದಾರುಣ ಸ್ಥಿತಿಯಲ್ಲಿದ್ದರು. ನಾನು ಯಾವುದಾದರೊಂದು ಎಂ.ಎ. ತರಗತಿಗೆ ಸೇರದಿದ್ದುದು ತಪ್ಪಾಯಿತೆಂದೆನಿಸಿತು ನನಗೆ. ಇಂಗ್ಲೀಷ್ ಎಂ.ಎ. ತರಗತಿಗೆ ಸೇರಬೇಕು. ಖಾಸಗಿಯಾಗಿ ಎಲ್‌ಎಲ್.ಬಿ. ಪರೀಕ್ಷೆ ಕೊಡಬೇಕು–ಎಂದು ನಿರ್ಧರಿಸಿದೆ. ಇಂಥ ದುರ್ಧರ ಪ್ರಸಂಗದಲ್ಲಿಯೂ ಇಂಥ ನಿರ್ಧಾರ ತೆಗೆದುಕೊಳ್ಳುವಷ್ಟು ಸ್ತಿಮಿತತೆಯೆನ್ನಿತ್ತ ವಿಶ್ವಾತ್ಮನಿಗೆ ಮನದಲ್ಲಿಯೇ ವಂದಿಸಿದೆ.

ತಂದೆಯವರನ್ನು ಕೇಳಿ ಅವರ ದುಃಖವನ್ನು ಇನ್ನಷ್ಟು ಹೆಚ್ಚಿಸುವುದು ತರವಲ್ಲವೆಂದು ಭಾವಿಸಿ ನಾನೇ ನಮ್ಮ ಹಿತೈಷಿಗಳಾಗಿದ್ದ ಕೆಲವರಿಂದ ಆರ್ಥಿಕ ಸಹಾಯ ಪಡೆದು ಹೈದರಾಬಾದಿಗೆ ಹೋದೆ. ಇಂಗ್ಲೀಷ್ ಎಂ.ಎ. ತರಗತಿಗೆ ಹೆಸರು ಹಚ್ಚಿಸಿದೆ. ಪ್ರೊ. ಹುಸೇನ ಅಲಿಖಾನ ಸಾಹೇಬರು, ಪ್ರೊ. ಟಿ. ವೀರಭದ್ರಡು ಅವರು, ಪ್ರೊ. ಎಂ.ಎಸ್. ದೊರೆಸ್ವಾಮಿ ಅವರು, ಪ್ರೊ. ಕೃಷ್ಣನ್ ಅವರು ಆನಂದಪಟ್ಟರು. ತರಗತಿಗಳಲ್ಲಿ ಪಾಠ ಮಧ್ಯಾಹ್ನಕ್ಕೆ ಮೊದಲೇ ಮುಗಿದು ಹೋಗುತ್ತಿತ್ತು. ಮಧ್ಯಾಹ್ನ ಸುಮ್ಮನೆ ಕಾಲ ಕಳೆವುದಕ್ಕಿಂತ ಯಾವುದಾದರೊಂದು ಕ್ಲುಪ್ತ ಕಾಲದ ಕೆಲಸ ಕೈಕೊಳ್ಳುವುದೆಂದು ನಿರ್ಧರಿಸಿದೆ. ಬರುವ ಸಂಬಳದಲ್ಲಿ ನನ್ನ ವಿದ್ಯಾಭ್ಯಾಸದ ವೆಚ್ಚ ಭರಿಸಿ, ಉಳಿದುದನ್ನು ಮನೆಗೆ ಕಳುಹಿಸಬೇಕೆಂದು ಮನಸ್ಸು ಮಾಡಿದೆ.

## ಪಾರ್ಟ್‌ಟೈಂ ಕೆಲಸಕ್ಕೆ ಯತ್ನ

ಹೈದರಾಬಾದಿನಲ್ಲಿ ಕೇಶವ ಮೆಮೋರಿಯಲ್ ಹೈಸ್ಕೂಲ್ ಎಂಬ ಪ್ರೌಢಶಾಲೆಯಿದ್ದಿತು. ಅದು ಆರ್ಯ ಸಮಾಜದ ಶಿಕ್ಷಣ ಸಂಸ್ಥೆಯಾಗಿದ್ದಿತು. ಅಲ್ಲಿ ತಿಂಗಳಿಗೆ ನಾಲ್ವತ್ತು ರೂಪಾಯಿಗಳ ಸಂಬಳ ನೀಡುವ ಸಂಧ್ಯಾಕಾಲೀನ ಇಂಗ್ಲೀಷ್ ಶಿಕ್ಷಕನ ಕೆಲಸವೊಂದು ಖಾಲಿ ಇದ್ದಿತು. ಅದರ ಅಧ್ಯಕ್ಷರಾದ ಬ್ಯಾ. ವಿನಾಯಕರಾಯರು ನನ್ನನ್ನು ಬಲ್ಲವರಾಗಿದ್ದರು. ನಾನು ಹೋಗಿ ಮನವಿಪತ್ರ ಸಲ್ಲಿಸಿದೆ. ಬಿ.ಎ. ಪರೀಕ್ಷೆಯಲ್ಲಿ ಇಂಗ್ಲೀಷಿನಲ್ಲಿ ವಿಶ್ವವಿದ್ಯಾಲಯಕ್ಕೇ ಮೊದಲಿಗನಾಗಿ ಪಾಸಾದುದರ ಪ್ರಮಾಣ ಪತ್ರವನ್ನು ಅಂಟಿಸಿದುದಲ್ಲದೆ ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ಶ್ರೀ ಯಜದಾನಿಯರ ಅಧ್ಯಕ್ಷತೆಯಲ್ಲಿ ಜರುಗಿದ್ದ ಅಖಿಲ ಭಾರತ ಪ್ರಾಚ್ಯ ವಿದ್ಯಾ ಪರಿಷತ್ತಿನ ಸಮ್ಮೇಳನದಲ್ಲಿ ನಾನು ಓದಿದ್ದ ಪ್ರಬಂಧದ ಒಂದು ಪ್ರತಿಯನ್ನು ತಗುಲಿಸಿದ್ದೆ. ಪಂ. ವಿನಾಯಕರಾಯರು ಪ್ರಸನ್ನರಾದಂತೆ ತೋರಿತು. "ನಾಳೆ ಇದೇ ಹೊತ್ತಿಗೆ ಬಾ; ಆರ್ಡರ್ ಪಡೆದುಕೊಂಡು ಹೋಗು" ಎಂದು ಹೇಳಿದರು. ಕೆಲಸ ಸಿಕ್ಕಿತೆಂದೇ ಹಿಗ್ಗಿ ಹಿಂದಿರುಗಿದೆ. ರಾತ್ರೆಯೆಲ್ಲಾ



ಆ ನಾಲ್ವತ್ತು ರೂಪಾಯಿಗಳನ್ನು ಹೇಗೆ ಬಳಸುವುದೆಂಬ ಬಗ್ಗೆ ಲೆಕ್ಕ ಹಾಕಿದೆ. ಕನಿಷ್ಠ ಅರ್ಧ ಸಂಬಳವನ್ನಾದರೂ ಮನೆಗೆ ಕಳಿಸಬೇಕು, ತಂಗಿಯನ್ನು ಇನ್ನೊಮ್ಮೆ ಗದಗಿಗೆ ಕರೆದೊಯ್ದು ಪೂರ್ಣ ಗುಣವಾಗುವವರೆಗೆ ಚಿಕಿತ್ಸೆ ಕೊಡಿಸಿರೆಂದು ಕೇಳಿಕೊಳ್ಳಬೇಕು, ಇನ್ನಳಿದ ಅರ್ಧದಲ್ಲಿ ನಿತ್ಯದ ವೆಚ್ಚ ಹೋಗಲಾಗಿ ಎರಡು ಪರೀಕ್ಷೆಗಳ ಫೀ ಉಳಿಸಬೇಕು–ಇತ್ಯಾದಿ ಏನೇನೋ ಲೆಕ್ಕ ಹಾಕುತ್ತ ರಾತ್ರಿ ಕಳೆದೆ.

ಮರುದಿನ ಲಗುಬಗೆಯಿಂದ ಪ್ರಾತರ್ವಿಧಿಗಳನ್ನು ಮುಗಿಸಿ, ತರಗತಿಗೆ ಹೋಗಿ ಬಂದು, ಮಧ್ಯಾಹ್ನ ಪಂ. ವಿನಾಯಕರಾಯರನ್ನು ಕಂಡೆ. ಅವರ ಮುಖಚರ್ಯೆ ಅಧೀರನನ್ನಾಗಿ ಮಾಡಿತು ನನ್ನನ್ನು. ನನ್ನ ಮನವಿ ಪತ್ರವನ್ನು ಹಿಂದಿರುಗಿಸುತ್ತ ಹೇಳಿದರವರು: "ನಿನಗಿಂತ ಯೋಗ್ಯನನ್ನು ಈ ಕೆಲಸಕ್ಕೆ ಪಡೆಯಲಾರೆವು, ನಿಜ, ಪುರಾಣಿಕ. ಆದರೆ ನೀನು ಈ ಹಿಂದೆ ಬನ್ಸೀಲಾಲರ ಪ್ರಕರಣದಲ್ಲಿ ಆರ್ಯ ಸಮಾಜಕ್ಕೆ ವಿರುದ್ಧವಾಗಿ ಹೋರಾಡಿದ ಬಗ್ಗೆ ನಮ್ಮಲ್ಲಿ ದಾಖಲೆಗಳು ದೊರೆತಿವೆ. ಆದುದರಿಂದ ನನ್ನ ಮನಸ್ಸಿದ್ದರೂ ನನ್ನ ಸಮಾಜ ಬಾಂಧವರ ವಿರೋಧವನ್ನು ನೆನೆದು ನಿನ್ನನ್ನು ನಿಯಮಿಸಿಕೊಳ್ಳಲಾರದವನಾಗಿದ್ದೇನೆ!" ನನಗೆ ಈ ಉತ್ತರದಿಂದ ಅಸಹನೀಯವಾದ ಆಘಾತವಾದರೂ ಆರು ವರ್ಷಗಳ ಹಿಂದೆ ತಾತ್ವಿಕ ತಳಹದಿಯ ಮೇಲೆ ಹರ್ಡೇಕರ್ ಮಂಜಪ್ಪನವರಂಥ ಅಖಿಲ ಭಾರತ ಖ್ಯಾತಿಯ ರಾಷ್ಟ್ರೀಯ ಧುರೀಣರ ನೇತೃತ್ವದಲ್ಲಿ ನಡೆದ ಈ ಆಂದೋಲನದಲ್ಲಿ ನಾನು ಭಾಗವಹಿಸಿದುದು ಇವರಿಗೆ ಎಷ್ಟು ಕೆಟ್ಟ ವಿಷಯವಾಗಿ ಕಂಡಿತಲ್ಲ–ಎಂಬುದನ್ನು ನೆನೆದು, ಇಂಥವರ ಅಧೀನತೆಯಲ್ಲಿ ಕೆಲಸ ಮಾಡುವುದು ತಪ್ಪಿತಲ್ಲ ಎಂದು ಹಿಗ್ಗಿದೆ. ಆರ್ಯ ಸಮಾಜವು ಹಿಂದೂ ಸಂಘಟನೆಗಾಗಿ ಹುಟ್ಟಿತಾದರೂ ಅದಕ್ಕಾಗಿ ಅದೊಂದು ವಿಶಾಲ ಮನೋಭೂಮಿಕೆಯ ಆಂದೋಲನವಾಗಿ ಉಳಿಯದೆ ಅದೇ ಒಂದು ಜಾತಿಯಾಗಿ ಮಾರ್ಪಟ್ಟುದರ ಕುರುಹು ನನಗೆ ಕೆಲಸ ನಿರಾಕರಿಸಿದುದು–ಎಂದುಕೊಂಡು ಹಿಂದೂ ಸಮಾಜದ ಜಾತಿ ವ್ಯವಸ್ಥೆಯ ಬಗ್ಗೆ ಜಿಗುಪ್ಸೆಗೊಂಡೆ. ಜಾತಿ ನಿರ್ಮೂಲನಕ್ಕಾಗಿಯೇ ಹುಟ್ಟಿದ ಆಂದೋಲನಗಳೂ ಈ ಸಮಾಜದಲ್ಲಿ ಜಾತಿಗಳಾಗಿ ಗಟ್ಟಿಗೊಳ್ಳುತ್ತ ಬಂದಿರುವುದು ಈ ದೇಶದ ದೌರ್ಭಾಗ್ಯವೆಂದೇ ಹೇಳಬೇಕು. ಬುದ್ಧ–ಬಸವರ ಆಂದೋಲನಗಳಂತೆಯೇ ದಯಾನಂದ ಸರಸ್ವತಿಯವರ ಆಂದೋಲನವೂ ಮೊದಲಿದ್ದ ಜಾತಿಗಳ ಯಾದಿಗೆ ಇನ್ನೊಂದನ್ನು ಸೇರಿಸಿದುದು ಆಶ್ಚರ್ಯಜನಕ ಸಂಗತಿಯೇನೂ ಅಲ್ಲವಲ್ಲ! ವರ್ಣಾಶ್ರಮವನ್ನು ತಿದ್ದುವ ಪ್ರಯತ್ನಗಳಿಗೆ ಫಲ ಸಿಕ್ಕಿಲ್ಲ ಇದುವರೆಗೆ. ಈ ದೇಶ ನಿಜವಾದ ಅರ್ಥದಲ್ಲಿ ಜಾತ್ಯತೀತ ರಾಷ್ಟ್ರವಾಗಬೇಕಾದರೆ ಈ ಜಾತಿ ವ್ಯವಸ್ಥೆಯನ್ನೇ ಬುಡಸಹಿತ, ಬೇರು ಸಹಿತ ಕಿತ್ತುಗೆಯಬೇಕು. ನಮ್ಮ

ಸಂವಿಧಾನಕ್ಕೆ ಇದಾಗಲೇ ಬೇಕಾದಷ್ಟು ತಿದ್ದುಪಡಿಗಳಾಗಿವೆ; ಇನ್ನೊಂದು ತಿದ್ದುಪಡಿಯನ್ನು ತಂದು ಇದನ್ನು ಸಾಧಿಸಲೇಬೇಕು. ಇದಾಗದಿದ್ದರೆ ಈ ದೇಶ ದುರ್ಬಲದೇಶವಾಗಿಯೇ ಉಳಿಯುವುದು; ಜಾತೀಯತೆಯ ಜ್ವಾಲೆಗಳು ಸದಾ ಧಗಧಗಿಸಿ ಉರಿಯುತ್ತ, ಸರ್ವರ ಸತ್ವವನ್ನೇ ಹುರಿದು ತಿನ್ನುತ್ತಲಿರುವ ದೇಶವಾಗಿ ಉಳಿಯುವುದು!

ನನ್ನ ಮೈಯಲ್ಲಿ ಮುನ್ನಿಲ್ಲದ ಕೆಚ್ಚು ಮೂಡಿದಂತೆನಿಸಿತು. ತರಗತಿಯ ಪಾಠಗಳಿಗೆ ಹೆಚ್ಚಿನ ಗಮನ ನೀಡಿದೆ. ಏಕಾಗ್ರಚಿತ್ತದಿಂದ ಆಂಗ್ಲ ಸಾಹಿತ್ಯದ ಅಧ್ಯಯನ ನಡೆಸಿದೆ; ಕಾನೂನುಗಳ ಮೇಲೆ ಹಿಡಿತವನ್ನು ಬಿಗಿಗೊಳಿಸಿದೆ; ಇಕಬಾಲರನ್ನು ಅರಗಿಸಿಕೊಳ್ಳಲು ಪ್ರಯತ್ನಿಸಿದೆ; ಹೊಸಗನ್ನಡ ಸಾಹಿತ್ಯದ ಸರಸಿಯಲ್ಲಿ ಈಜಾಡಿದೆ; ಹಿಂದಿಯ ನಿರಾಲಾ, ಮಹಾದೇವಿ ವರ್ಮಾ, ಸುಮಿತ್ರಾನಂದನ ಪಂತ, ಬಚ್ಚನರ ಕೃತಗಳನ್ನು ಅವಲೋಕಿಸಿದೆ; ಸಂಸ್ಕೃತದ ಭಾಸ, ಕಾಳಿದಾಸರ ವಿದ್ಯಾರ್ಥಿಯಾದೆ; ರವೀಂದ್ರರಂತೂ ಸರಿಯೆ–ಒಟ್ಟಿನಲ್ಲಿ ನಾನು ಇಂಗ್ಲೀಷ್ ಉಪಾಧ್ಯಾಯನಾಗಲು ಹೊರಟಿರುವೆನೆಂಬ ನಂಬಿಕೆಯೊಡನೆ ಅದಕ್ಕಾಗಿ ಸಿದ್ಧನಾಗತೊಡಗಿದೆ.

ಊರಿನಿಂದ ಘೋರ ವಾರ್ತೆ ಬಂದಿತು. ತಂಗಿ ವೀರಾವತಿಯ ಆರೋಗ್ಯ ಮತ್ತೆ ಕೆಟ್ಟಿತ್ತು. ಮತ್ತೆ ಗದಗಿಗೆ ಹೋಗಿ ತೋರಿಸಿಕೊಂಡು ಬಂದಿದ್ದರು. “ಶಿವ ಶಿವಾ, ಏನನ್ನು ಮಾಡಲೂ ಬಿಡದಂತೆ ನನ್ನ ಬೆನ್ನು ಹತ್ತಿದೆಯಲ್ಲ ಪ್ರತಿಕೂಲ ಕಾಲ!” ಎಂದು ಮಿಡಮಿಡನೆ ಮಿಡುಕಿದೆ. ಮತ್ತೆ ತಂದೆಯವರು ಎದುರಿಸಿರಬಹುದಾದ ಆರ್ಥಿಕ ಮುಗ್ಗಟ್ಟಿನ ಯೋಚನೆ ಬಂದು ಇನ್ನಷ್ಟು ವ್ಯಾಕುಲಕ್ಕೆ ಒಳಗಾದೆ. ಇದೇ ಸಮಯಕ್ಕೆ ಹೈದರಾಬಾದು ಸರಕಾರ ಹದಿನಾರು ತಹಸೀಲ್ದಾರರ ಸ್ಥಳಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಿತು. ‘ನಾನೂ ಅರ್ಜಿ ಹಾಕಲೆ?’ ಎಂದು ನನ್ನನ್ನು ನಾನೇ ಕೇಳಿಕೊಂಡೆ: ಉತ್ತರ ರೂಪವಾಗಿ ವ್ಯಂಗ್ಯವಾಗಿ ನಕ್ಕೆ. “ನೀನೆಲ್ಲಿ, ಆ ದೊಡ್ಡ ಸ್ಥಾನವೆಲ್ಲಿ? ನಿನ್ನಂಥವರು ಇದಕ್ಕೆ ಆಸೆ ಪಡವುದೂ ಅವಿವೇಕತನ! ಅಂಗೈ ತೋರಿಸಿ ಅವಲಕ್ಷಣವೆಂದು ಯಾಕೆ ಅನ್ನಿಸಿಕೊಳ್ಳುವಿ?’ ಎಂದು ಒಳದನಿ ನುಡಿಯಿತು. ಆದರೆ ಅನ್ನಪೂರ್ಣಸ್ವಾಮಿಗಳೂ, ಸುಪ್ರಸಿದ್ಧ ದಂತ ವೈದ್ಯ ಡಾ॥ ಬಿ.ಆರ್. ನಾಯಕರೂ, ಮೈನಾತಾಯಿ ಖೇಣಿ ಅವರೂ ‘ಆ ಸ್ಥಳ ದೊರೆಯಲಿ ಬಿಡಲಿ, ಅರ್ಜಿ ಹಾಕುವುದು ನಿನ್ನ ಕರ್ತವ್ಯ’ವೆಂದು ಹುರಿದುಂಬಿಸಿದರು. ಕೊನೆಗೆ ಇಂಥ ಸಂದರ್ಶನಗಳಲ್ಲಿ ನಡೆಯುವುದಾದರೂ ಏನು–ಎಂಬುದನ್ನು ನೋಡಲಿಕ್ಕಾದರೂ ಅರ್ಜಿ ಸಲ್ಲಿಸುವುದೆಂದು ನಿರ್ಧರಿಸಿದೆ.



**ತಹಸೀಲ್ದಾರ ಹುದ್ದೆಗೆ ಅರ್ಜಿ :**

ಪ್ರೊ. ಹುಸೇನ ಅಲಿಖಾನ ಸಾಹೇಬರೂ, ಪಿ.ಪ್ಪಿ.ಸಿ. ಯವರಾಗಿದ್ದ ಕಾಜಿ ಸಾಹೇಬರೂ ಒಳ್ಳೆಯ ಸಿಫಾರಸು ಪತ್ರಗಳನ್ನು ಕೊಟ್ಟರು. ಹುಸೇನ ಅಲಿಖಾನ ಸಾಹೇಬರ ಪತ್ರವಂತೂ ಕಟ್ಟುಕನ್ನಡಿ ಹಾಕಿಸಿ ಇರಿಸಿಕೊಳ್ಳಬೇಕಾದಂಥ ಉತ್ಕೃಷ್ಟ ಪತ್ರವಾಗಿದ್ದಿತು. ಅದರ ಪ್ರತಿಯೊಂದನ್ನು ಉಳಿಸಿಕೊಳ್ಳದ ಕೊರಗು ನನಗೆ ಇಂದಿಗೂ. ಶ್ರೀ ದಿವಾನ ಸಂಗಯ್ಯನವರು ಅಂದಿನ ವರಿಷ್ಠ ಅಧಿಕಾರಿಗಳಲ್ಲಿ ಒಬ್ಬರಾಗಿದ್ದ ಕುರೇಷಿ ಸಾಹೇಬರಿಂದ (ಮುಂದೆ ನವಾಬ್ ಮಹಮೂದ ಯಾರಜಂಗ್ ಎಂದು ಹೆಸರಾದವರು) ನಾನು ಸತ್ಕುಟುಂಬ ಸಂಜಾತನೆಂಬ ಸರ್ಟಿಫಿಕೇಟ್ ಕೊಡಿಸಿದರು; ರಾಯಚೂರಿನ ‘ದಕ್ಕನ್ ಪ್ರಭಾತ’ ವಾರಪತ್ರಿಕೆಯ ಸಂಪಾದಕರಾಗಿದ್ದ ಪಿ. ರಾಚೋಟಯ್ಯನವರು ಕಂದಾಯ ಬೋರ್ಡಿನ ಕಾರ್ಯದರ್ಶಿಗಳಾಗಿದ್ದ ಜಹೀರ ಹುಸೇನ ಸಾಹೇಬರಿಗೆ ನನ್ನ ಬಗ್ಗೆ ಹೇಳಿದರು. ಇವೆಲ್ಲ ಉಳಿದವರು ಮಾಡಿದ ಮಹಾ ಪ್ರಯತ್ನಗಳ ಮುಂದೆ ದರಿದ್ರ ಪ್ರಯತ್ನಗಳೇ ಸರಿ! ನನಗೇನೋ ಇದೊಂದು ಮೋಜಿನ ಪ್ರಸಂಗವಾಗಿದ್ದಿತು; ಆದರೆ ಅನೇಕರಿಗೆ ಇದು ಜೀವನ–ಮರಣದ ಪ್ರಶ್ನೆಯೆಂದೆನಿಸಿದ್ದಿತು. ಅವರು ಹೊಲಿಸಿದ ಹೊಸ ಬಟ್ಟೆಗಳೇನು, ಅವರು ತಿರುಗುತ್ತಿದ್ದ ಕಾರುಗಳೇನು, ಅವರು ಚೆಲ್ಲುತ್ತಿದ್ದ ನೋಟುಗಳೇನು! ಇವರ ಮುಂದೆ ಈ ಹಳ್ಳಿಯ ಗುಗ್ಗು, ಯಾವ ಮರದ ತೊಪ್ಪಲು?

ಯಾರೋ ಹೇಳಿದರು–‘ನಿನ್ನ ತಾಲೂಕಿನ ಜಾಗೀರದಾರ್ ನವಾಬ್ ಸಾಲಾರಜಂಗ ಬಹಾದ್ದುರರಿಗೂ ಕಂದಾಯ ಮಂತ್ರಿ ಗ್ರಿಗ್ಸನ್ ಹಾಗೂ ಕಂದಾಯ ಇಲಾಖೆಯ ಡೈರೆಕ್ಟರ್ ಜನರಲ್ ಲಿಲ್ಲಿಯವರಿಗೂ ನಿಕಟಸ್ನೇಹ; ಅವರಿಂದ ಸಿಫಾರಸು ಪತ್ರಗಳನ್ನು ಪಡೆ’ ಎಂದು. ಅಂಜುತ್ತ ಅಳುಕುತ್ತ ಅವರ ಬಳಿಗೆ ಹೋದೆ. ಸಂತೋಷದಿಂದಲೇ ಸಿಫಾರಸು ಪತ್ರಗಳನ್ನಿತ್ತರು. ಅವುಗಳ ಮೇಲೆ "My trust is in my God" ಎಂಬ ಅವರ ಆದರ್ಶಸೂತ್ರ ಅಚ್ಚಾಗಿದ್ದಿತು. “ನನಗೂ ಇದೇ ಆದರ್ಶ ಸೂತ್ರವೇಕಾಗಬಾರದು?” ಎಂದುಕೊಂಡು ಅವುಗಳನ್ನು ಅಂಚೆಪೆಟ್ಟಿಗೆಗೆ ಹಾಕದೆ ಮನೆಗೆ ತಂದುಬಿಟ್ಟೆ. ಉಳಿದವರು ಹೈದರಾಬಾದಿನಲ್ಲಿ ದೊರೆಯಬಹುದಾಗಿದ್ದ ಅತಿ ಹೆಚ್ಚಿನ ಬೆಲೆಯ ಉಣ್ಣೆಯ ಸೂಟು ಹೊಲಿಸಿದರೆ ನಾನು ಅರಳೆಯ ಬಟ್ಟೆಯಲ್ಲಿಯೇ ಹೊಲಿಸಿದ್ದೆ. ಅದಕ್ಕೂ ಹೆಚ್ಚಿಗೆ ವೆಚ್ಚ ಮಾಡಲು ಹಣವಿರಲಿಲ್ಲ. ಮೊದಲ ಸಲ ಟೈ ಕೊಂಡೆ. ಕಟ್ಟಲು ಗೊತ್ತಿರಲಿಲ್ಲ. ಗೆಳೆಯರಿಂದ ಕಲಿತುಕೊಂಡೆ. ಅರ್ಜಿಗೆ ಲಗತ್ತಿಸಬೇಕಾದ ಎಲ್ಲ ಫಾರ್ಮುಗಳು ಸಿದ್ಧವಾದುವು. ಆದರೆ ಅತ್ಯಗತ್ಯವಾಗಿ ಅಂಟಿಸಬೇಕಿದ್ದ ಮುಲ್ಕಿ ಸರ್ಟಿಫಿಕೇಟ್ ಇನ್ನೂ ಸಿಕ್ಕಿರಲಿಲ್ಲ. ಅದು ಸಿಕ್ಕಿದುದೇ ಆಶ್ಚರ್ಯಕರವಾದ ರೀತಿಯಲ್ಲಿ ನನಗೆ.

ಹೈದರಾಬಾದು ನಗರ ಜಿಲ್ಲೆ (ಅತರಾಫ್–ಎ–ಬಲ್ದಾ)ಯ ಅವ್ವಲ್ ತಾಲೂಕದಾರರ ಸಹಿ ಬೇಕು ಅದಕ್ಕೆ. ಅಂತೆಯೇ ಸುಲಭವಾಗಿ ಸಿಕ್ಕುವ ಸರ್ಟಿಫಿಕೇಟಾಗಿರಲಿಲ್ಲ ಅದು. ಕಾರುಗಳಲ್ಲಿ ಓಡಾಡಿದವರೇನೋ ಬೇಗ ಪಡೆದುಕೊಂಡಿದ್ದರು ಅದನ್ನು; ಆದರೆ ಬಸ್ಸುಗಳಲ್ಲಿ ಓಡಾಡಿದ ನನಗೆ ಅರ್ಜಿ ಸಲ್ಲಿಸುವ ಕೊನೆಯ ದಿನದವರೆಗೂ ಸಿಕ್ಕಲಿಲ್ಲ ಅದು. ಕೊನೆಯ ದಿನ ಕಛೇರಿಗೆ ಹೋದೆ. ಸೇಗಾದಾರರು (ಗುಮಾಸ್ತರು) ಹೇಳಿದರು; 'ನೀವು ದುರ್ದೈವಿಗಳು; ಎಲ್ಲ ಮುಗಿದಿದೆ; ಆದರೆ ಸಾಹೇಬರ ಸಹಿ ಆಗಿಲ್ಲ; ಸಾಹೇಬರಿಂದು ನಿಜಾಮಾಬಾದಿಗೆ ಹೊರಟಿದ್ದಾರೆ; ಆಫೀಸಿಗೆ ಬರುವುದಿಲ್ಲ!'

ಇದನ್ನು ಕೇಳಿ ತಣ್ಣಗಾದೆ ನಾನು. ಕೈಯಲ್ಲಿ ಉಳಿದ ಫಾರ್ಮುಗಳನ್ನು ಅಂಟಿಸಿದ್ದ ಮನವಿ ಪತ್ರವಿದ್ದಿತು. ಅದನ್ನು ತೋರಿಸಿ ಅವರಿಗೆ ಹೇಳಿದೆ: "ನಾನು ನಿಜವಾಗಿಯೂ ದುರ್ದೈವಿ; ನನ್ನಂಥ ದುರ್ದೈವಿಗೇಕೆ ಇಂಥ ದೊಡ್ಡ ಅಧಿಕಾರ ಸ್ಥಾನ? ಈ ಅರ್ಜಿಯನ್ನು ನೀವೇ ನಿಮ್ಮ ಕೈಯಿಂದ ಹರಿದು ಹಾಕಿಬಿಡಿರಿ!"

ಅವರ ಮನಸ್ಸು ಕರಗಿತೆಂದು ತೋರುತ್ತದೆ. "ಯಾರಿಗೆ ಸ್ಥಾನ ಸಿಕ್ಕಬೇಕೆಂಬುದನ್ನು ಮನುಷ್ಯನಲ್ಲ, ಅಲ್ಲಾಹನು ನಿರ್ಧರಿಸುತ್ತಾನೆ ಮಹಾರಾಜ. ನೀವಿಷ್ಟು ನಿರಾಶರಾಗಬೇಡಿರಿ. ನಾನಾಗ ಕಾಚೀಗೂಡಾ ಸ್ಟೇಶನ್ನಿನ ಹೊರಟಿದ್ದೇನೆ. ನೀವೂ ನನ್ನೊಡನೆ ನಡೆಯಿರಿ. ನಿಮ್ಮ ಕಡತವನ್ನೂ ಸಂಗಡ ತರುವೆನು. ನಿಲ್ದಾಣದಲ್ಲಿಯೇ ರುಜು ಮಾಡಿದರೂ ಮಾಡಬಹುದು ನಮ್ಮ ದಯಾಳುಗಳಾದ ಸಾಹೇಬರು. ಅವರನ್ನು ನಾನು ನಿಮಗೆ ದೂರದಿಂದ ತೋರಿಸುವೆನು. ನೀವು ಹೆದರದೆ ಹತ್ತಿರ ಹೋಗಿ ಸಲಾಮು ಹೊಡೆಯಿರಿ. ಮುಂದಿನದನ್ನು ನಾನು ನೋಡಿಕೊಳ್ಳುವೆ" ಎಂದು ಉತ್ತೇಜನವನ್ನಿತ್ತರವರು. "ಲಾಖ್ ಲಾಖ್ ಷುಕರಿಯಾ" ಎಂದು ಹೇಳಿ ಅವರನ್ನು ಹಿಂಬಾಲಿಸಿದೆ. ನಿಲ್ದಾಣ ಬಂದಿತು; ನಿಜಾಮಾಬಾದಿನ ಹೊಗೆಬಂಡಿಯೂ ಬಂದಿತು; ಸಾಹೇಬರ ಸುಳಿವಿಲ್ಲ. ಪ್ರಯಾಣವನ್ನು ನಿಲ್ಲಿಸಿದ್ದಾರೆ? ಇಲ್ಲಿಯೂ ನನಗೆ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆಂಬ ಗತಿಯೊದಗುತ್ತದೆಯೆ? ಒದಗಿದರೆ ಒದಗಲಿ, ದೇವರಿಚ್ಛೆಯಿದ್ದಂತಾಗಲಿ–ಎಂದು ನಾನು ಗೇನಿಸುತ್ತಿರುವಾಗಲೇ ಸೀಟಿಯಾಯಿತು. ಆಗ ಪತ್ನಿ ಪುತ್ರಿಯರೊಡನೆ ಓಡಿ ಬರತೊಡಗಿದರು ಸಾಹೇಬರು. ಅವರು ಪ್ರಥಮ ದರ್ಜೆಯ ಅಂಕಣ ತಲುಪಿದಾಗ ಹೊಗೆಬಂಡಿ ನಿಧಾನವಾಗಿ ಚಲಿಸತೊಡಗಿತು. ಮೊದಲು ಪತ್ನಿ ಪುತ್ರಿಯರನ್ನು ಒಳಗೆ ನೂಕಿ ತಾವು ಗಡಿಬಿಡಿಯಲ್ಲಿ ಬಂಡಿ ಏರುತ್ತಿದ್ದಾಗ ಹುಚ್ಚು ಧೈರ್ಯದೊಡನೆ ಸಲಾಮು ಹೊಡೆದೆ. "ಕ್ಯಾ ಹೈ, ಕ್ಯಾ ಹೈ?" ಎಂದು ಕೇಳಿದರವರು;



ನಾನು ತೊದಲುತ್ತ 'ಮುಲ್ಕಿ ಸರ್ಟಿಫಿಕೇಟ್–ಆಜ್ ಆಖರಿದಿನ್…" ಎಂದೇನೇನೋ ಗಳಹಿದೆ. ಸೇಗಾದಾರರೂ ಓಡಿ ಬಂದು ಕಡತ ಕೈಗಿತ್ತರು. ರುಜು ಮಾಡುವಷ್ಟು ಹೊತ್ತೂ ಇಲ್ಲದಿರಲು ನನ್ನನ್ನೇ ಅಂಕಣದೊಳಕ್ಕೆ ಎಳೆದುಕೊಂಡುಬಿಟ್ಟರು–ತಮ್ಮೊಡನೆ ತಮ್ಮ ಪತ್ನಿ ಹಾಗೂ ಹರೆಯದ ಪುತ್ರಿಯರಿದ್ದುದನ್ನೂ ಗಮನಿಸದೆ! 'ಘಬರಾವ್ ನಹಿಂ' ಎಂದು ಧೈರ್ಯ ಹೇಳಿ ಸರ್ಟಿಫಿಕೇಟಿಗೆ ರುಜು ಹಾಕಿ ಕಡತ ನನ್ನ ಕೈಗಿತ್ತರು. ಫಲಕ್‌ನುಮಾ ಸ್ಟೇಶನ್ ಬರಲು ನನ್ನನ್ನು ಇಳಿಸಿ, ಸ್ಟೇಷನ್ ಮಾಸ್ತರರಿಗೆ ತಾವು ನನ್ನನ್ನು ಕರೆದು ತಂದುದಾಗಿ ತಿಳಿಸಿ ನನ್ನಿಂದ ಏನನ್ನೂ ವಸೂಲ್ಮಾಡಕೂಡದೆಂದು ಹೇಳಿದರು: "Wish you success!" ಎಂದು ಹೇಳಿ ಕೈ ಬೀಸಿದರು. ಗಾಡಿ ಚಲಿಸಿತು. ಅದು ದೂರ ಹೋಗುವವರೆಗೆ ಹುಬ್ಬುಗೈಯಾಗಿ ನೋಡಿದೆ–ಮೂಕವಿಸ್ಮಿತನಾಗಿ, ಸ್ತಂಭೀಭೂತನಾಗಿ ನೋಡಿದೆ. ಎಂಥ ದೇವತಾ ಸ್ವರೂಪಿ ಈ ಸಾಹೇಬರು–ಎಂದೆನಿಸಿತು ನನಗೆ. ಅವರ ಹೆಸರು ಅಬ್ದುಲ್ ಸತ್ತಾರ್ ಸಾಹೇಬರೆಂದು. ಇಂದಿಗೂ ಆಗಾಗ ನಾನು ಅವರ ಉಪಕಾರವನ್ನು ಸ್ಮರಿಸಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಇಂದು ಆಡಳಿತ ರಂಗವನ್ನೆಲ್ಲ ದೀಪ ಹಚ್ಚಿ ಹುಡುಕಿದರೂ ಅಂಥವರೊಬ್ಬರು ಸಿಕ್ಕಾರೆ? ಅದು ಪ್ರಜಾಪ್ರಭುತ್ವ ಯುಗವಲ್ಲ, ನಿಜಾಮರ ನಿರಂಕುಶ ಪ್ರಭುತ್ವದ ಕಾಲ; ಆಗ ಕಲೆಕ್ಟರರ ಮಾತದಂತಿರಲಿ, ಒಬ್ಬ ಚಪರಾಸಿಯೂ ಎಂಥೆಂಥವರನ್ನೂ ಅಂಜಿಸಿಕೊಳ್ಳುತ್ತಿದ್ದ ಕಾಲ; ಅಡಂಬರದ ಕಾಲ, ದರ್ಪದ ಕಾಲ, ದಿಮಾಕಿನ ಕಾಲ. ಅಂಥ ಕಾಲದಲ್ಲಿಯೂ ಇಂಥ ಪುಣ್ಯಪುರುಷರಿದ್ದರು! ಈಗ ಪ್ರಜಾರಾಜ್ಯ–ನಾಮಕೇವಾಸ್ತೆ! ಆದರೆ ಈಗಿನಷ್ಟು ಅಹಂಕಾರಿ ಅಧಿಕಾರಿಗಳನ್ನು ಹಿಂದೆಂದು ನೋಡಿದ್ದೆವು? ನೂರು ಸಲ ಅವರ ಕಾರ್ಯಾಲಯಗಳಿಗೆ ಎಡತಾಕಿದರೂ ಅವರ ರುಜು ದೊರೆವುದಿಲ್ಲ; ಇನ್ನು ಚಲಿಸುವ ಗಾಡಿಯಲ್ಲಿ ನನ್ನಂಥ ಅಪರಿಚಿತ ಶ್ರೀಸಾಮಾನ್ಯನೊಬ್ಬನನ್ನು ಕರೆದುಕೊಂಡು–ಪತ್ನಿ ಪುತ್ರಿಯರ ಪರಿವೆಯಿಲ್ಲದೆಯೇ ಒಳಗೆಳೆದುಕೊಂಡು–ರುಜು ಮಾಡಿ ಕಡತವನ್ನೇ ಕೈಗಿಡುವರೆ? ಇಂಥ ಇನ್ನೊಂದು ಘಟನೆಯನ್ನು ನೋಡಲು ಮುವ್ವತ್ತು ಮೂರು ವರ್ಷ ವ್ಯರ್ಥ ಕಾದೆ! ಈ ಘಟನೆಯ ಪರಿಣಾಮವಾಗಿಯೋ ಏನೋ–ನಾನೂ ಎಲ್ಲಿ ಅಂದರೆ ಅಲ್ಲಿ ಕಡತಗಳ ವಿಲೇವಾರಿ ಮಾಡುವುದನ್ನು ಕಲಿತೆ.

ನಾನು ಕಾಚೀಗೂಡಾಕ್ಕೆ ಹಿಂದಿರುಗಿದಾಗ ಸೇಗೇದಾರರು. ಅಲ್ಲಿಯೇ ಕಾದಿದ್ದರು. ಅವರ ಕೈಗೆ ಕಡತವಿತ್ತು ಸರ್ಟಿಫಿಕೇಟ್ ಪಡೆದುಕೊಂಡೆ. 'ನಿಮ್ಮ ಉಪಕಾರಕ್ಕೆ ಪ್ರತಿಯಾಗಿ ನಾನೇನ ಮಾಡಿದರೂ ಕಡಿಮೆಯೇ ಸಾಹೇಬರೆ. ಆದರೆ ನಾನೀಗ ಬಡವ. ತಮಗೆ ಕೊಡಲು ನನ್ನ ಬಳಿ ಏನೂ ಇಲ್ಲ. ಕ್ಷಮಿಸಿರಿ" ಎಂದೆ. ಅವರು

ಬೆನ್ನು ತಟ್ಟಿ, “ಬಡವರಿಗೆ ಬಡವರೇ ಆಧಾರ ಮಹಾರಾಜ, ನೀವು ಆರಿಸಿ ಬಂದರೆ ನನ್ನನ್ನು ಮರೆಯಬೇಡಿರಿ. ಇಷ್ಟೇ ಪ್ರತ್ಯುಪಕಾರ ಸಾಕು!” ಎಂದರು. ‘ನಾನು ಆರಿಸಿ ಬರಲಿ, ಬರದಿರಲಿ–ನಿಮ್ಮನ್ನೆಂದಿಗೂ ಮರೆಯೆ; ನಿಮ್ಮನ್ನು ನಾನು ಮರೆತರೆ ನನ್ನನ್ನೇ ನಾನು ಮರೆತಂತೆ” ಎಂದೆ ನಾನು. ಅವರೂ ಭಾವನಾವಶರಾದರು. ‘ಇಂದು ಅರ್ಜಿ ಸಲ್ಲಿಸುವ ಕೊನೆಯ ದಿನ. ಹೊತ್ತು ಮುಗಿಯುತ್ತ ಬಂದಿದೆ. ಬೇಗ ಹೋಗಿ ಅರ್ಜಿ ಸಲ್ಲಿಸಿರಿ. ಅಲ್ಲಾಹನು ನಿಮಗೆ ನೆರವಾಗಲಿ!’ ಎಂದು ಹಾರೈಸಿದರು. ನಾನು ‘ಪೇಟ್ ಮೇಂ ಮೂಂಡಿ’ ಮಾಡಿ ಹೊರಟೆ. ನಾನು ಮಾಲಗುಜಾರಿಯಲ್ಲಿ ಅರ್ಜಿ ಸ್ವೀಕರಿಸುವ ಸೇಗೇದಾರರು ಕೂಡ್ರುವ ಸ್ಥಳದ ಪತ್ತೆ ಹಚ್ಚಿ ಅಲ್ಲಿಗೆ ಹೋಗುವುದಕ್ಕೂ ಅರ್ಜಿ ಸ್ವೀಕರಿಸುವ ಹೊತ್ತು ಮುಗಿವುದಕ್ಕೂ ಸರಿ ಹೋಯಿತು.

“ಈಗ ಹೊತ್ತು ಮುಗಿದಿದೆ; ನಿಮ್ಮ ಅರ್ಜಿ ಸ್ವೀಕರಿಸಲಾರೆ”ನೆಂದು ಖಂಡಿತವಾಗಿಯೂ ಹೇಳಿಬಿಟ್ಟರವರು. ನೂತದ್ದೆಲ್ಲ ಹಂಜಿಯಾದುದನ್ನು ನೋಡಿ ನಾನು ಇನ್ನಷ್ಟು ಡೆಸ್ಪರೆಟ್ ಆದೆ. “ಮೌಲ್ವಿ ಸಾಹೇಬ್, ಈ ಅರ್ಜಿಯ ಫಾರ್ಮುಗಳ ಸಂಗ್ರಹಕ್ಕೆ ಮುವ್ವತ್ತು ದಿನ ಹುಚ್ಚು ನಾಯಿಯಂತೆ ತಿರುಗಿದ್ದೇನೆ–ಬಸ್ಸುಗಳಲ್ಲಿ, ಕಾಲ್ನಡಿಗೆಯಲ್ಲಿ. ಇದನ್ನು ಬೇಕಾದರೆ ಸ್ವೀಕರಿಸಿರಿ, ಬೇಡವಾದರೆ ನನ್ನೆದುರಿಗೇ ಹರಿದು ಚೆಲ್ಲಿರಿ. ನಾನು ಪಿಟ್ಟೆನ್ನುವುದಿಲ್ಲ. ನಿಮ್ಮಾಣೆ!” ಎಂದು ನುಡಿದೆ. ಅವರ ಕಲ್ಲೆದೆಯೂ ಕರಗಿತು. ‘ಅಚ್ಛಾ, ಲೇತಾಹೂಂ ಮಹಾರಾಜ್, ತುಮ್‌ಭೀಕ್ಯಾಯಾದ ಕರೋಗೆ ಜಾವ್” ಎಂದರು. ಕೊನೆಗೂ ಅರ್ಜಿ ಬದುಕಿತೆಂದು ಉಬ್ಬಿ ‘ಷುಕರಿಯಾ’ಗಳ ಮಳೆ ಸುರಿಸಿ ಮನೆಗೆ ಹಿಂದಿರುಗಿದೆ.

ತಂಗಿಯ ಸ್ಥಿತಿ ಕೆಡುತ್ತಲೇ ನಡೆದಿತ್ತು. ತರಗತಿಗಳಿಗೆ ಹೋಗುವುದು, ಮನದ ವ್ಯಾಕುಳವನ್ನು ಮರೆಯಲು ಷಾ ಷೇಕ್ಸ್‌ಪಿಯರರ ನಾಟಕಗಳನ್ನೋ, ವಚನ ಸಾಹಿತ್ಯವನ್ನೋ ಓದುವುದು. ಮಹಾಯುದ್ಧದ ಸುದ್ದಿಗಳನ್ನೋ, ‘ಭಾರತ ಬಿಟ್ಟು ತೊಲಗಿರಿ’ ಆಂದೋಲನ ರೋಮಾಂಚಕ ಘಟನೆಗಳನ್ನೋ ಅವಲೋಕಿಸುವುದು, ಗೆಳೆಯರೊಡನೆ ಹರಟೆ ಕೊಚ್ಚುವುದು ನಡೆಯಿತು, ಹೋಟೆಲುಗಳಲ್ಲಿ, ಬಸ್ಸುಗಳಲ್ಲಿ, ಸಿನಿಮಾಗಳಲ್ಲಿ ಇವೆರಡರ ಬಗ್ಗೆ ಗುಸುಗುಸು ಮಾತುಗಳು. ಪದವೀಧರ ವಲಯಗಳಲ್ಲಿ ಮಾತ್ರ ತಹಸೀಲ್ದಾರಿಯ ಆಯ್ಕೆಯಲ್ಲಿ ಯಾರಿಗೆ ಚಾನ್ಸು ಹೆಚ್ಚಿದೆ, ಯಾರಿಗೆ ಕಡಿಮೆಯಿದೆ ಎಂಬ ಬಗ್ಗೆ ಕಾವೇರಿದ ಚರ್ಚೆಗಳು. ಅದುವರೆಗೆ ನವಾಬರ ಮಕ್ಕಳ, ಅಳಿಯಂದಿರ ಏಕಸ್ವಾಮ್ಯವೆನಿಸಿದ್ದ ಎಚ್.ಸಿ.ಎಸ್. ಹಾಗೂ ತಹಸೀಲ್ದಾರಿ ಆಯ್ಕೆಗಳು ಉಳಿದವರಿಗೂ ಸ್ವಲ್ಪ ಸ್ವಲ್ಪ ಲಭ್ಯವಾಗತೊಡಗಿದ್ದುವು. ಇದಕ್ಕೆ ಕಂದಾಯ ಸಚಿವ ಗ್ರಿಗ್ಸನ್ ಹಾಗೂ ಮಹಾನಿರ್ದೇಶಕ ಲಿಲ್ಲಿ ಅವರ ಅರ್ಹತಾ ಮಾನದಂಡವೇ



ಮೂಲಕಾರಣವೆಂದು ಬಲ್ಲವರು ಹೇಳುತ್ತಿದ್ದರು. ಆದರೂ ‘ಸತ್ಕುಟುಂಬ ಸಂಜಾತ’ರೆಂಬ ಬಗ್ಗೆ ಸರ್ಟಿಫಿಕೇಟ್ ಆಗಲೂ ಅತ್ಯಗತ್ಯವಾದುದಾಗಿದ್ದುದರಿಂದ ಅವರವರ ಕುಟುಂಬದ ಪ್ರಭಾವವೆಷ್ಟೆಂಬುದರ ಬಗ್ಗೆ ಸಂಶೋಧನೆ ನಡೆಸಿ ಆ ಬಗ್ಗೆ ಎಂದೂ ಮುಗಿಯದ ಮಾತುಗಳನ್ನಾಡುತ್ತಲೇ ಇರುತ್ತಿದ್ದರವರು. ‘ಇವರ ತಾಯಿಯ ಅಣ್ಣನಿಗೆ ಇಂತಿಂಥ ನವಾಬರ ಮಗಳ ಮೈದುನನ ಮಾವನ ತಮ್ಮನ ಮಗಳನ್ನು ಕೊಟ್ಟಿದೆ; ಆದುದರಿಂದ ಇವರು ಆಯ್ಕೆಯಾಗಲೇ ಬೇಕು’ ಎಂದು ಒಬ್ಬರು ವಾದಿಸಿದರೆ ಇನ್ನೊಬ್ಬರು, “ಅವನ ಅಕ್ಕನನ್ನು ಇಂತಿಂಥ ನವಾಬನ ಅಳಿಯನ ಅಕ್ಕನ ಮಗಳ ಗಂಡನ ತಮ್ಮನ ಮಗನಿಗೆ ಕೊಟ್ಟಿದೆ; ಆದುದರಿಂದ ಅವನಿಗೆ ಚಾನ್ಸು ಹೆಚ್ಚು’ ಎಂದು ಇನ್ನೊಬ್ಬರು ವಾದಿಸುತ್ತಿದ್ದರು. ನನಗೆ ಇವುಗಳನ್ನು ಕೇಳುತ್ತ ಮೋಜೆನಿಸಿ ತಂಗಿಯ ಕಾಯಿಲೆ, ತಂದೆತಾಯಿಯರ ದುಃಖ, ಅನ್ನದಾನಿ, ಬಸವರಾಜ, ಶರಣಮ್ಮರ ಭವಿತವ್ಯ, ನನ್ನ ಮುಂದಿನ ಮಾರ್ಗ ಇತ್ಯಾದಿಗಳ ಒತ್ತಡಗಳನ್ನು ಕೆಲ ಹೊತ್ತು ಮರೆಯುವಂತಾಗುತ್ತಿತ್ತು.

ಇವೆಲ್ಲ ವಿಪತ್ತುಗಳು, ಹೊಣೆಗಳು ನನ್ನನ್ನು ಬಳಸಿ ಬಂಧಿಸಿಟ್ಟಿರದಿದ್ದರೆ ನಾನೂ ‘ಭಾರತ ಬಿಟ್ಟು ತೊಲಗಿರಿ’ ಆಂದೋಲನಕ್ಕೆ ಧುಮುಕಬಹುದಾಗಿತ್ತಲ್ಲ–ಎಂದು ಆಗಾಗ ಕೊರಗುತ್ತಿದ್ದೆ. ನೇತಾಜಿ ಸುಭಾಷ್‌ಚಂದ್ರ ಬೋಸರ ಬಾನುಲಿ ಸಂದೇಶ ಕದ್ದು ಕೇಳಿದಾಗಲೆಲ್ಲ, ಗಾಂಧೀಜಿಯವರ ‘ಮಾಡು ಇಲ್ಲವೆ ಮಡಿ’ ಎಂಬ ಮಂತ್ರವನ್ನು ಕೇಳಿದಾಗಲೆಲ್ಲ ಎಲ್ಲವನ್ನೂ ತೊರೆದು ಬಿಡುಗಡೆಯ ಆ ಕೊನೆಯ ಹೋರಾಟಕ್ಕಾದರೂ ಧುಮುಕಬೇಕೆಂಬ ಧಮನಿಗಳಲ್ಲಿ ರಕ್ತ ಹಾಡುತ್ತಿತ್ತು. ಆದರೆ ಚೊಚ್ಚಲು ಮಗನಾಗಿ ಹುಟ್ಟಿದ ನಾನು ತಂದೆತಾಯಿಗಳನ್ನು ಹೃದಯವಿದ್ರಾವಕ ಸ್ಥಿತಿಯಲ್ಲಿ ಬಿಟ್ಟು ಹೋಗಲು ಸಿದ್ಧನಾಗಲಿಲ್ಲ. ಹೈದರಾಬಾದಿನಲ್ಲಿಯೂ ರಾಜಕೀಯ ಸುಧಾರಣೆಗಳ ಮಾತು ಕೇಳಬರತೊಡಗಿದ್ದಿತು. ಸ್ವಾಮಿ ರಮಾನಂದ ತೀರ್ಥರ ಸಂಸ್ಥಾನ ಕಾಂಗ್ರೆಸ್ ನಿಷೇಧಿಸಲ್ಪಟ್ಟಿದ್ದ ಕಾರಣ ಮರಾಠಾವಾಡಾ, ತೆಲಂಗಾಣಾ, ಕರ್ನಾಟಕ ಪರಿಷತ್ತುಗಳ ಮೇಲೆ ಹೋರಾಟದ ಭಾರಬಿದ್ದಿತು. ಅವರೆಲ್ಲ ಈ ಸುಧಾರಣೆಗಳ ಮಂಕು ಬೂದಿಗೆ ಮರುಳಾಗದವರೇ. ಅವುಗಳನ್ನು ಇದ್ದಂತೆಯೇ ಒಪ್ಪದಿದ್ದರೂ ಸಂಧಾನ ಮೂಲಕ ಇನ್ನಷ್ಟು ಉದಾರಗೊಳಿಸಿ ಒಪ್ಪಿಕೊಳ್ಳಲೆಂದೇ ‘ಹಿಂದೂ ಪ್ರಜಾಮಂಡಲ’ವೆಂಬ ರಾಜಕೀಯ ಪಕ್ಷ ಅಸ್ತಿತ್ವಕ್ಕೆ ಬಂದಿದ್ದಿತು. ಪ್ರಮುಖ ನ್ಯಾಯವಾದಿ ಅಂಬಾದಾಸರಾಯರ ಅಧ್ಯಕ್ಷತೆಯಲ್ಲಿ ನಡೆದ ಇದರ ಸಮ್ಮೇಳನವನ್ನು ಡಾ॥ ಬಿ.ಎಸ್. ಮುಂಜೆ ಅವರು ಉದ್ಘಾಟಿಸಿದರು. 'Hinduise all politics, militarise all Hindus' ಎಂಬುದವರ ಘೋಷಣೆಯಾಗಿದ್ದಿತು. ಸಮ್ಮೇಳನದಲ್ಲಿ ಅವರ ಭಾಷಣವೊಂದೇ ಸ್ಫೂರ್ತಿದಾಯಕವಾದುದಾಗಿದ್ದಿತು. ಆಮೇಲೆ ನಡೆದುದು

ಸುಧಾರಣೆಗಳನ್ನು ಒಪ್ಪಕೂಡದೆಂದು ಪಂ. ನರೇಂದ್ರಜಿ ಹಾಗೂ ಅವರ ಅನುಯಾಯಿಗಳ ಮತ್ತು ಒಪ್ಪಬೇಕೆಂಬ ಅಂಬಾದಾಸರಾಯರ ಹಾಗೂ ಅವರ ಹಿಂಬಾಲಕರ ನಡುವೆ ವಾಗ್ಯುದ್ಧ. ನನಗೆ ನೆನಪಿರುವ ಒಂದು ಮಾತನ್ನು ಇಲ್ಲಿ ಉಲ್ಲೇಖಿಸಬೇಕು. ನಾವು ಕೆಲವರು ಡಾ॥ ಮುಂಜೆಯವರನ್ನು ಭೇಟಿಯಾಗಿ 'ಹಿಂದೂಗಳು ಮಾಂಸ ತಿನ್ನಬಹುದೆ? ಎಂದು ಕೇಳಿದೆವು. ಅದಕ್ಕವರು, "ಸಬ್ ಕುಚ್ಛ್ ಖಾವ್; ಮುರಗಿ ಖಾವ್, ಅಂಡೆ ಖಾವ್, ಬಕರಿ ಖಾವ್–ಏಕ ಮತ್ ಖಾವ್, ಜೂತೆ ಮತ್ ಖಾವ್' ಎಂದು ಹೇಳಿದರು. ಹುಟ್ಟಿನಿಂದ ಬ್ರಾಹ್ಮಣರಾಗಿದ್ದರೂ ಸ್ವೇಚ್ಛೆಯಿಂದ ಕ್ಷತ್ರಿಯರಾಗಿದ್ದ ಅವರು ಹೀಗೆ ಹೇಳಿದುದು ಅಚ್ಚರಿಯಲ್ಲವೆನಿಸಿತು.

ಇತ್ತ ಕವಿಮಿತ್ರರಾಗಿದ್ದ ಮಖದೂಮ್ ಮೊಹಿಯುದ್ದೀನರು ತಮ್ಮ ಕಮ್ಯುನಿಸ್ಟ್ ಪಕ್ಷದ ಪ್ರಣಾಲಿಗೆ ತಕ್ಕಂತೆ ಈ ಯುದ್ಧದಲ್ಲಿ ಭಾರತ ಮಿತ್ರ ರಾಷ್ಟ್ರಗಳಿಗೆ ಬೆಂಬಲ ನೀಡಬೇಕೆಂಬ ಪ್ರಚಾರದಲ್ಲಿ ನಿರತರಾಗಿದ್ದರು. 'ಜಾಪಾನಾ ಹಮಾರಾ ದುಷ್ಮನ್ ಹೈ' ಎಂಬ ಘೋಷಿತ ಉದ್ದೇಶದ ಸಾರ್ವಜನಿಕ ಸಭೆಯಲ್ಲಿ ಅವರು ತಮ್ಮ 'ಯಹ ಜಂಗ್ ಹೈ ಜಂಗೆ ಅಜಾದಿ ಅಜಾದಿಕೆ ಪರಚಮ್ ಕೆ ತಲೆ' ಎಂಬ ಪ್ರಸಿದ್ಧ ಕವಿತೆಯನ್ನು ಹಾಡಿದ್ದರು. ಅದರಿಂದ ಪ್ರೇರಿತನಾಗಿ ನಾನು ಹೈದರಾಬಾದು ಆಕಾಶವಾಣಿಯಲ್ಲಿ 'The logey of Japan's Asiatic now order' ಎಂಬ ಭಾಷಣ ಬಿತ್ತರಿಸಿದ್ದೆ. ಅಂದು ಆಕಾಶವಾಣಿಯ ಪ್ರಥಮ ಸಂಪರ್ಕ ನನಗಾಯಿತು. ಅಂದಿನಿಂದ ಇಂದಿನವರೆಗೆ ಅವರ ಎಷ್ಟು ಸಂಪರ್ಕಗಳು ನನಗೊದಗಿವೆಯೋ ಲೆಕ್ಕವಿಲ್ಲ. ಆದರೆ ಆ ಮೊದಲ ಸಂಪರ್ಕ ಮೈಜುಮ್ಮೆನ್ನಿಸಿದ್ದಿತು ತನಗೆ.

ಎರಡನೆಯ ಮಹಾಯುದ್ಧದ ಫಲಿತಾಂಶ ಸಂಶಯದ ತೂಗುಯ್ಯಾಲೆಯಲ್ಲಿ; ಭಾರತದ ಸ್ವಾತಂತ್ರ್ಯ ಸಂಗ್ರಾಮದ ಪರಿಣಾಮ ಸಂದಿಗ್ಧತೆಯ ಸುಳಿಯಲ್ಲಿ; ಕರ್ನಾಟಕದ ಏಕೀಕರಣ ಕನಸಿನ ಲೋಕದಲ್ಲಿ; 'ಮಿಂಚಿನ ಬಳ್ಳಿ' ಪ್ರಕಟಿಸಿದ್ದ 'ನಾಡ ಹಾಡುಗಳು' ಎಂಬ ಸಂಗ್ರಹದಲ್ಲಿ ನನ್ನ 'ಕನ್ನಡದ ದೀಪವದು ಕಾಣದಿಹುದು' ಎಂಬ ಕವಿತೆ ಸೇರಿದ್ದಿತಾದರೂ ಆ ದೀಪ ಹೊತ್ತಿದುದನ್ನು ನನ್ನ ಜೀವಮಾನದಲ್ಲಿಯೇ ನೋಡುವೆನೆಂದು ನನಗೆನಿಸಿರಲಿಲ್ಲ. ಈ ಹಲವು ಅನಿಶ್ಚತತೆಗಳ ಜೊತೆಗೆ ನನ್ನ ಭಾವೀ ಜೀವನದ ಅನಿಶ್ಚತತೆಯೂ ಸೇರಿ ಡೋಲಾಯಮಾನ ಸ್ಥಿತಿಯಲ್ಲಿದ್ದೆ. ಆದರೂ ಹೊಯ್ದಾಡುತ್ತಲೇ ಹಡಗು ಮುಂದೆ ಮುಂದೆ ಸಾಗಿತ್ತು. ತರಗತಿಗಳಲ್ಲಿ ಕುಳಿತು ಪ್ರೊ. ವೀರಭದ್ರಡು ಅವರ ಪಾಠ ಪ್ರವಚನ ಕೇಳಿದಾಗ ಎಲ್ಲ ಮರೆತು ಹೋಗುತ್ತಿತ್ತು. ಮನಸ್ಸು ಎಲ್ಲ ವ್ಯಾಕುಲಗಳನ್ನೂ ಮೆಟ್ಟಿ ಮೇಲೇರಿ ನಿರ್ಮಲಿನ ವಾಯುಮಂಡಲದಲ್ಲಿ ವಿಹರಿಸುತ್ತಿತ್ತು.



**ಸಂದರ್ಶನ :**

ತಹಸೀಲ್ದಾರಿಯ ಸಂದರ್ಶನಗಳಿಗೆ ಕರೆ ಬಂದೇ ಬಿಟ್ಟಿತು. ಬಹುಶಃ ಮೊದಲನೆಯ ಸುತ್ತಿನಲ್ಲಿಯೇ ನಾನು ಹಾರಿ ಹೋಗುವೆನೆಂದು ನಿರೀಕ್ಷಿಸಿದೆ. ನನ್ನ ಗೆಳೆಯರ ಬಳಗದಲ್ಲಿ ಅರ್ಜಿ ಹಾಕಿದ್ದ ಇನ್ನಿಬ್ಬರೆಂದರೆ ಶ್ರೀ ಸಿ.ಎಸ್. ಇನಾಮದಾರರು ಹಾಗೂ ಶ್ರೀ ಗುಂಡೇರಾವ್ ಪಾಟೀಲರು. ಅವರಿಬ್ಬರೂ ನನಗಿಂತ ಸ್ಥಿತಿವಂತರು. ಶ್ರೀ ಇನಾಮದಾರರಂತೂ ಪ್ರಸಿದ್ಧ ಒಡೆಯರ್ ಕುಟುಂಬದ ಸಂಬಂಧಿಕರು. ನೋಡಲೂ ನನಗಿಂತ ಚೆನ್ನಾಗಿದ್ದರು. ನಾವು ಮೂವರಲ್ಲಿ ಆರಿಸಿ ಬಂದರೆ ಅವರೇ ಬರಬೇಕೆಂದು ನಮ್ಮೆಲ್ಲರ ನಿರೀಕ್ಷೆಯಾಗಿದ್ದಿತು. ಅವರೂ ನಾನೂ ಅದೇ ವಕೀಲಿ ಪ್ರಾರಂಭಿಸಿದ್ದ ಶ್ರೀ ಜಿ.ಎಸ್. ಹಿರೇಮಠರ ಮನೆಯಲ್ಲಿಯೇ ಇದ್ದು ಎಲ್ಲಿಗೆ ಹೋದರೂ ಇಬ್ಬರೂ ಕೂಡಿಯೇ ಹೋಗುತ್ತಿದ್ದೆವು. ಶ್ರೀ ಹಿರೇಮಠರ (ಗುರುಲಿಂಗಣ್ಣನವರ) ತಾಯಿ ಬಸಮ್ಮನವರು ತುಂಬ ವಾತ್ಸಲ್ಯಮಯಿಯಾಗಿದ್ದರು. ನಾವು ಮೂವರೂ ತಮ್ಮ ಮಕ್ಕಳೆಂದೇ ಭಾವಿಸಿ ಮೂವರನ್ನೂ ಸಮಾನ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಅವರು ಮಾಡುತ್ತಿದ್ದ ಅಡುಗೆ, ನೀಡುತ್ತಿದ್ದ ಊಟ ಅವರ ವಾತ್ಸಲ್ಯರಸ ಬೆರೆತು ತುಂಬ ರುಚಿಯಾಗಿರುತ್ತಿದ್ದುವು. ಆ ತಾಯಿಯ ಆತ್ಮಶಾಂತಿಗಾಗಿ ಈಗಲೂ ಆಗಾಗ ಪ್ರಾರ್ಥಿಸುತ್ತಿರುತ್ತೇನೆ.

ಇಂಟರ್‌ವ್ಯೂ ದಿನಾಂಕ ಸಮೀಪಿಸಿತೆಂದು ನಾವಿಬ್ಬರೂ ಹೊಸ ಬೂಟ್ಸು ಕೊಳ್ಳಲು ಹೋದೆವು. ಶ್ರೀ ಇನಾಮದಾರರು ತಮ್ಮ ಶ್ರೀಮಂತಿಕೆಗೆ ತಕ್ಕಂತೆ ಹೆಚ್ಚು ಬೆಲೆಯ ಬೂಟ್ಸುಗಳನ್ನು ಕೊಂಡರು; ನಾನು ಕಡಿಮೆ ಬೆಲೆಯವನ್ನು ಕೊಂಡೆ. ಮನೆಗೆ ಬಂದು ಪೊಟ್ಟಣ ಬಿಚ್ಚಿ ನೋಡುತ್ತೇವೆ–ನನ್ನ ಬೂಟ್ಸ್‌ಗಳ ರಟ್ಟಿನ ಡಬ್ಬದ ಮೇಲೆ 'ತಹಸೀಲ್ದಾರ' ಎಂದು ದೊಡ್ಡ ಅಕ್ಷರಗಳಲ್ಲಿ ಅಚ್ಚಾಗಿದೆ; ಶ್ರೀ ಇನಾಮದಾರರ ರಟ್ಟಿನ ಕಟ್ಟಿನ ಮೇಲೆ 'ಸ್ಟ್ಯೂಡೆಂಟ್' (ವಿದ್ಯಾರ್ಥಿ) ಎಂದು ಅಚ್ಚಾಗಿದೆ. 'ಸಿದ್ದಣ್ಣ, ನೀನೇ ಆರಿಸಿ ಬರುವಿ'ಯೆಂದು ಇನಾಮದಾರರು, 'ಪ್ರತಿಫಲ ಯಾವಾಗಲೂ ಕಂಡುದಕ್ಕೆ ವ್ಯತಿರಿಕ್ತವಾಗಿ ದೊರೆಯುತ್ತದೆ. ಆದುದರಿಂದ ನೀನೇ ಆರಿಸಿ ಬರುವಿ ಚೆನ್ನಣ್ಣ' ಎಂದು ನಾನು ವಾದಿಸಿದೆವು. 'ಯಾರೂ ಬಂದರೂ ಸಂತೋಷ ಬನ್ನಿರಪ್ಪ, ಅಡುಗೆ ಆರಿ ಹೋಗುತ್ತಿದೆ, ಮೊದಲು ಊಟ ಮಾಡರಿ ಎಂದರು ಬಸಮ್ಮನವರು. ಮೂವರು ನಗುತ್ತ ಊಟಕ್ಕೆ ಕುಳಿತೆವು.

ಇಂಟರ್‌ವ್ಯೂದ ಮೊದಲನೆಯ ದಿನ. ಮಾಲಗುಜಾರಿಯ ಮೈದಾನಿನಲ್ಲಿ ಫ್ಯಾಷನ್ ಪರೇಡ್! ಅರ್ಜಿ ಹಾಕಿದ್ದ ಮುನ್ನೂರು ಹುರಿಯಾಳುಗಳು ತರತರದ ಬಣ್ಣಗಳ ಬೆಲೆಯುಳ್ಳ ಪೋಷಾಕುಗಳಲ್ಲಿ ಉಪಸ್ಥಿತರಿದ್ದು ಒಬ್ಬರೊಬ್ಬರ

ವೇಷಭೂಷಣಗಳ ಸಾದೃಶ್ಯ ವೈದೃಶ್ಯಗಳ, ಸಾಮಾನ್ಯತೆ ಆಧುನಿಕತೆಗಳ ತುಲನೆ ತೋಲನೆಗಳಲ್ಲಿ ಮಗ್ನರಾಗಿದ್ದಾರೆ, ಎಲ್ಲರೂ ಎಲ್ಲರಿಗೆ ಪ್ರತಿಸ್ಪರ್ಧಿಗಳಾಗಿ ತೋರುತ್ತಿದ್ದಾರೆ. ಒಬ್ಬರೊಬ್ಬರನ್ನು ರಹಸ್ಯ ಭೇದಕ ದೃಷ್ಟಿಯಿಂದ ನೋಡಿ ಏನೇನೋ ಲೆಕ್ಕಾಚಾರ ಹಾಕುತ್ತಲಿದ್ದಾರೆ. ಇಷ್ಟನ್ನು ನೋಡಿಯೇ ನಾನು ಅರ್ಜಿ ಕೊಟ್ಟದು ಸಾರ್ಥಕವಾಯಿತೆನ್ನಿಸಿತು ನನಗೆ. ಇಷ್ಟೊಂದು ಬಗೆಬಗೆಯ ಬಟ್ಟೆಗಳನ್ನು, ಟೈಗಳನ್ನು, ಟೊಪ್ಪಿಗೆಗಳನ್ನು ಒಟ್ಟಿಗೆ ಬೇರೆಲ್ಲಿ ನೋಡಲಾಗುತ್ತಿತ್ತು? ಇನ್ನೆಲ್ಲಿ ಇಷ್ಟೊಂದು ಮಾನವ ಮಾದರಿಗಳು ದೊರೆಯುತ್ತಿದ್ದುವು?

ಆಯ್ಕೆಯ ಸಮಿತಿಗೆ ಗ್ರಿಗ್ಸನ್ ಅಧ್ಯಕ್ಷರು, ವಿದ್ಯಾಮಂತ್ರಿಗಳಾಗಿದ್ದ ನವಾಬ್ ಮೆಹದಿಯಾರ್‌ಜಂಗ್ ಹಾಗೂ ಲಿಲ್ಲಿಯವರು ಸದಸ್ಯರು ಹಾಗೂ ಜಹೀರ ಅಹಮ್ಮದ್ ಸಾಹೇಬರು ಕಾರ್ಯದರ್ಶಿಗಳೆಂದು ಗೊತ್ತಾಯಿತು. ಯಾರಾರು ಏನೇನು ಪ್ರಶ್ನೆಗಳನ್ನು ಕೇಳಬಹುದೆಂಬುದರ ಬಗ್ಗೆ ಊಹಾಪೋಹ ನಡೆಯಿತು. ಸರದಿಯ ಪ್ರಕಾರ ಒಬ್ಬೊಬ್ಬರೇ ಒಳಗೆ ಹೋಗಿ ಬರತೊಡಗಿದರು, ಒಬ್ಬರು ಒಳಗೆ ಹೋಗಿ ಬರುತ್ತಲೂ ಉಳಿದವರು ಸಕ್ಕರೆಗೆ ಇರುವೆ ಮುಕುರುವಂತೆ ಅವರನ್ನು ಮುಕುರಿ ಮುತ್ತಿ, 'ಏನು ಪ್ರಶ್ನೆ ಕೇಳಿದರು? ಏನುತ್ತರ ಹೇಳಿದೆ?' ಎಂದು ಕೇಳುತ್ತಿದ್ದರು. ನನಗೆ ಇದಾವುದರಲ್ಲಿಯೂ ಆಸಕ್ತಿ ಇರಲಿಲ್ಲ. ಎರಡನೆಯ ಸುತ್ತಿನ ಆಸೆಯಿದ್ದರೆ ತಾನೆ ಇಷ್ಟೆಲ್ಲ ತಲೆ ಕೆಡಿಸಿಕೊಳ್ಳುವುದು? ಅಂದು ಸಂಜೆಯವರೆಗೆ ನಡೆಯಿತು ನಸೀಬ ಪರೀಕ್ಷೆ ನಾನೇ ಕೊನೆಯ ಅರ್ಜಿದಾರನಾದ ಕಾರಣ ನಾನು ಕೊನೆಗೆ ಹೋಗಿ ಬಂದೆ. ಎಲ್ಲರೂ ಮರುದಿನದ ಸಂದರ್ಶನಕ್ಕೆ ಯಾರು ಯಾರು ಬರಬೇಕೆಂಬುದರ ಪ್ರಕಟನೆಗಾಗಿ ಕಾದರು. ತೊಂಬತ್ತಾರು ಜನರ ಯಾದಿ ಪ್ರಕಟವಾಯಿತು. ಒಂದೊಂದು ಸ್ಥಳಕ್ಕೆ ಆರಾರು ಉಮೇದುವಾರರನ್ನು ಉಳಿಸಿದ್ದರು. ಉಳಿದವರ ಮುಖ ಕಪ್ಪಿಟ್ಟುವು. ನಾವು ಮೂವರೂ ಮೊಲದನೆಯ ಸುತ್ತು ಗೆದ್ದಿದ್ದೆವು. ನನಗೆ ಆಶ್ಚರ್ಯ!

ಮರುದಿನ ಹೆಚ್ಚು ವಿವರವಾದ ಇಂಟರ್‌ವ್ಯೂ ನಡೆಯಿತು. ಹೆಚ್ಚು ಜಟಿಲವಾದ ಪ್ರಶ್ನೆಗಳನ್ನು ಕೇಳಿದರು. ನನ್ನ ಸರದಿ ಬಂದಾಗ ಹುಸೇನ ಅಲಿಖಾನ ಸಾಹೇಬರು ಕೊಟ್ಟಿದ್ದ ಶಿಫಾರಸು ಪತ್ರಿಕೆ ಗ್ರಿಗ್ಸನ್‌ರ ಕೈಯಲ್ಲಿದ್ದುದನ್ನು ಕಂಡೆ. ಅವರ ಅಭಿಪ್ರಾಯಗಳಿಗೆ ಮೇಲಿನವರಲ್ಲಿ ತುಂಬ ಗೌರವವಿರುವುದೆಂದು ಕೇಳಿದ್ದೆ. ಬಹುಶಃ ಇದೇ ಕಾರಣವಾಗಿ ಬಡವನಾದ ನಾನು ಮೊದಲನೆಯ ಸುತ್ತನ್ನು ಗೆದ್ದಿರಬಹುದೆಂದು ಭಾವಿಸಿದೆ. ನನಗೆ ಕೇಳಿದ ಪ್ರಶ್ನೆಗಳಿಗೆಲ್ಲ ನಾನು ನಿರಾತಂಕವಾಗಿ ಉತ್ತರವಿತ್ತೆ. ನನ್ನ ಉತ್ತರಗಳಿಗೆ ಆಯ್ಕೆ ಸಮಿತಿಯ ಸದಸ್ಯರು ತಲೆದೂಗಿದುದನ್ನು ಕಂಡು ನನ್ನ ನೂಲಿನ ಸೂಟೇ ನನ್ನ ಪಾಲಿಗೆ ಸಿಲ್ಕಿನ ಸೂಟಾಗಿ ತೋರಿತು. ಸ್ವಲ್ಪ ಗೆಲುಮುಖಮುದ್ರೆಯೊಡನೆಯೇ



ಹೊರಗೆ ಬಂದೆ. ನೆರೆದವರೆಲ್ಲ ನನ್ನ ಮುಖ ಪರೀಕ್ಷಿಸಿ ತರ್ಕವಿತರ್ಕಗಳನ್ನು ಮಾಡಿದರು. ನಾಲ್ವತ್ತೆಂಟು ಜನರ ಯಾದಿ ಪ್ರಕಟವಾಯಿತು. ಒಂದೊಂದು ಸ್ಥಾನಕ್ಕೆ ಮೂವರನ್ನು ಉಳಿಸಿ ಉಳಿದವರಿಗೆ ಗೇಟು ತೋರಿಸಿದ್ದರು. ನಾವು ಮೂವರಲ್ಲಿ ನಾನೊಬ್ಬನೇ ಉಳಿದಿದ್ದೆ. ಇನ್ನಷ್ಟು ಆಶ್ಚರ್ಯ ನನಗೆ!

ಮರುದಿನ ಇನ್ನಷ್ಟು ಬಿಗಿಯಾದ ಇಂಟರ್‌ವ್ಯೂ. ಇನ್ನಷ್ಟು ಗಹನವಾದ ಪ್ರಶ್ನೆಗಳನ್ನು ಕೇಳಿದರು ನನಗೆ. ಮೂವ್ವತ್ತೆರಡು ಜನ ಲಿಷ್ಟು ಪ್ರಕಟವಾಯಿತು. ಒಂದೊಂದು ಸ್ಥಾನಕ್ಕೆ ಇಬ್ಬಿಬ್ಬರು ಉಳಿದಿದ್ದರೂ. ಅದರಲ್ಲಿಯೂ ನಾನಿದ್ದೆ! ಈ ಸಲ ಬೆರಗಾದೆ!

ಮರುದಿನ ಸುದೀರ್ಘ ಸಂದರ್ಶಗಳು, ತರತರದ ಪ್ರಶ್ನೆಗಳು, ಪ್ರಸಂಗಾವಧಾನದ ಪರೀಕ್ಷೆಗಳು. ಅಲ್ಲಿಗೆ ಎಲ್ಲರ ಫಜೀತಿ ಮುಗಿಯಿತು. ಐದನೆಯ ಬಾರಿಗೆ ನನನೊಬ್ಬನನ್ನೇ ಕರೆದರು! ಎಲ್ಲರಿಗೂ ಕೌತುಕ, ನನಗೆ ನಡುಕ! ಈ ಕೊನೆಯ ಸತ್ವಪರೀಕ್ಷೆಯಲ್ಲಿ ನನ್ನನ್ನು ಕೇಳಿದ ಪ್ರಶ್ನೆ ಒಂದೇ ಒಂದು: "ನಿನ್ನ ವಯಸ್ಸೆಷ್ಟು–ಇಂದಿಗೆ" ಎಂಬುದೇ ಆ ಪ್ರಶ್ನೆ. 'ಇಪ್ಪತ್ತನಾಲ್ಕು' ಎಂದೆ. 'ಓ, ಇದು ಇವನ ಕೊನೆಯ ಚಾನ್ಸ್!' ಎಂದು ಉದ್ಗರಿಸಿದರು ಅಧ್ಯಕ್ಷರು. ಈ ಉದ್ಗಾರದ ಅರ್ಥ ಆಗ ನನಗೆ ತಿಳಿಯಲಿಲ್ಲ. ಆಮೇಲೆ ನನಗೆ ತಿಳಿಯಿತು ಅದರ ಅರ್ಥ, ಆಗ ಮಾಲಗು ಜಾರಿಯಲ್ಲಿ ಉನ್ನತಾಧಿಕಾರಿಯಾಗಿದ್ದ ರಾಮಲಾಲರ ಇಬ್ಬರು ಸಮೀಪದ ಸಂಬಂಧಿಕರು ಈ ಮೂವ್ವತ್ತೆರಡು ಜನರಲ್ಲಿ ಇದ್ದರು. ಗುರುದಾಸ ಎಂಬ ಒಬ್ಬರನ್ನಂತೂ ಈ ಸಲ ಆರಿಸುವುದೆಂಬುದು ಖಚಿತವಾಗಿದ್ದಿತು; ಇನ್ನೊಬ್ಬರಾದ ನರಸಿಂಗರಾಜರಿಗೆ ಇನ್ನು ಇಪ್ಪತ್ತೆರಡು ತುಂಬಿರಲಿಲ್ಲ. ಅವರನ್ನು ವೇಟಿಂಗ್ ಲಿಸ್ಟಿನಲ್ಲಿಟ್ಟು ವಯಸ್ಸು ಮೀರುತ್ತಲಿರುವ ಸಿದ್ಧಯ್ಯನನ್ನೇಕೆ ತೆಗೆದುಕೊಳ್ಳಬಾರದು? ಯೋಗ್ಯತೆಯಲ್ಲಿ ಅವನೇ ಎಲ್ಲರಿಗಿಂತ ಶ್ರೇಷ್ಠ–ಎಂದು ಅಧ್ಯಕ್ಷ ಗ್ರಿಗ್ಸನ್ ವಾದಿಸಿದರಂತೆ. ಅವರ ವಾದ ಒಪ್ಪಿತವಾಗಿ ನನ್ನನ್ನೇ ಆರಿಸಿದರಂತೆ! ಕಾಯಿಲೆ ಕಾರಣವಾಗಿ ನನ್ನ ಎರಡು ವಿದ್ಯಾಭ್ಯಾಸದ ವರ್ಷಗಳು ಹಾಳಾದುದಕ್ಕಾಗಿ ಹಗಲೆಲ್ಲ ಹಳಹಳಿಸುತ್ತಿದ್ದೆ. ಈಗ ಹೆಚ್ಚಾದ ವಯಸ್ಸೇ ನನ್ನ ಕೈ ಹಿಡಿಯಿತು. ಈಶ್ವರೀ ಸೂತ್ರ ಅತಿ ವಿಚಿತ್ರ!

## ಆನಂದ–ವ್ಯಥೆ

ಮರುದಿನ ಮಾಲಗುಜಾರಿಯ ಚಪರಾಸಿ ನಾನಿದ್ದ ಮನೆ ಹುಡುಕಿಕೊಂಡು ಬಂದ. ತಹಸೀಲ್ದಾರನನ್ನಾಗಿ ನನ್ನನ್ನು ನಿಮಿಸಲಾಗಿದೆಯೆಂಬ ಆಜ್ಞೆಯನ್ನು ಕೈಗಿತ್ತು ಸಲಾಮು ಹೊಡೆದ. ಇನಾಮು ಕೊಟ್ಟು ಕಳಿಸಿದೆ. ಓಡಿ ಹೋಗಿ ಅಬ್ದುಲ್ ಸತ್ತಾರ ಸಾಹೇಬರಿಗೂ, ಸೇಗಾದಾರರಿಗೂ ಸಂತೋಷದ ಸುದ್ದಿ ತಿಳಿಸಿ 'ಷುಕರಿಯಾ'

ಹೇಳಿ ಬಂದೆ. ಅವರಿಬ್ಬರೂ ತುಂಬ ಸಂತೋಷಿಸಿದರು. ಸೇಗಾದಾರರಂತೂ, 'ರಾಜಾ, ನೀವು ನಿಜವಾಗಿಯೂ ನನ್ನನ್ನು ಮರೆಯಲಿಲ್ಲ' ಎಂದರು. 'ಎಂದಿಗೂ ಮರೆಯೆ ನಾನು ಮೌಲ್ವಿ ಸಾಹೇಬ್, ನಾನೆಲ್ಲಿದ್ದರೂ ನೀವು ನನ್ನ ನೆನಪಿನಲ್ಲಿ ಉಳಿಯುವಿರಿ ಎಂದೆ. 'ಗಲೆ ಮಿಲೋ' ಎಂದರು. ಅವರ ಕೊರಳಪ್ಪಿ ಮನೆಗೆ ಬಂದೆ. ತಂತಿಯೊದನ್ನು ತಂದು ಕೊಟ್ಟ ತಂತಿ ಇಲಾಖೆಯ ಜವಾನ. ಒಡೆದು ಓದಿದೆ. ಮಂಕಾದೆ, ಮೂಕನಾದೆ, ಮೂರ್ಛಿತನಾದೆ. ತಂಗಿ ವಿರಾಂಬೆ ತೀರಿ ಹೋಗಿದ್ದಳು! ತಾನಾಜಿಯನ್ನು ಕಳೆದುಕೊಂಡು ಸಿಂಹಗಢವನ್ನು ಪಡೆದು, 'ಗಢ್ ಆಲಾ, ಸಿಂಹ ಗೇಲಾ!' ಎಂದು ಛತ್ರಪತಿ ಶಿವಾಜಿ ಉದ್ಗರಿಸಿದರಂತೆ. 'ತಹಸಿಲ್ದಾರಿ ಬಂದಿತು, ತಂಗಿ ಹೋದಳು!' ಎಂದು ವಿಲಾಪಿಸಿದೆ ನಾನು! ಕೆಲವೇ ನಿಮಿಷಗಳ ಹಿಂದೆ ಆನಂದದ ಅಲಾಪ, ಈಗ ವ್ಯಥೆಯ ವಿಲಾಪ! ಎಂಥ ರಹಸ್ಯಮಯವೀ ಜೀವನ!

ಆಜ್ಞೆಯಲ್ಲಿ ಒಂದು ವಾರದೊಳಗಾಗಿ ತರಬೇತಿಗೆ ಹೊರಡಲು ಸಿದ್ಧರಾಗಿರಬೇಕೆಂದು ತಾಕೀದು ಮಾಡಲಾಗಿದ್ದಿತು. ಈ ಒಂದು ವಾರದ ಅವಧಿಯಲ್ಲಿ ಊರಿಗೆ ಹೋಗಿ ತಂಗಿಯ ಸಮಾಧಿಗೆ ಆಶ್ರುತರ್ಪಣ ನೀಡಿ ಬರಬೇಕೆಂಬ ಬಯಕೆ ಬಲವಾಯಿತು. ಅದಕ್ಕೆ ಮೊದಲು ಸಂತಸ್ತ ಹೃದಯದೊಡನೆಯೇ ಸಹಾಯ ಮಾಡಿದವರಿಗೆಲ್ಲ ನಮಸ್ಕಾರ ಸಲ್ಲಿಸಬೇಕಿತ್ತು. ಮೊದಲು ಹುಸೇನ ಅಲಿಖಾನ ಸಾಹೇಬರ ಮನೆಗೆ ಹೋದೆ. ಎಂದಿನಂತೆ ವಾತ್ಸಲ್ಯಪೂರ್ಣ ಸವಿಸ್ವಾಗತ ಸಿಕ್ಕಿತಲ್ಲಿ. ಅವರ ಆನಂದ ಮುಖದಲ್ಲೆಲ್ಲ ಹರಡಿದ್ದಿತು. ಅವರ ಮಗನಿಗೇ ಅವರಿದನ್ನು ಕೊಡಿಸಬಹುದಾಗಿತ್ತು. ಆದರೆ ಹಾಗೆ ಮಾಡದೆ ನನಗಾಗಿ ತಮ್ಮ ಪ್ರಭಾವವನ್ನು ಮೀಸಲಾಗಿರಿಸಿದ್ದರವರು. ಒಮ್ಮೆ ತರಗತಿಗೆ ತಡವಾಗಿ ಹೊರಟು ಬಸ್ಸು ತಪ್ಪಿಸಿಕೊಂಡು ಕಾಲ್ನಡಿಗೆಯಿಂದ ದಾರಿ ತುಳಿಯುತ್ತಿದ್ದೆ ನಾನು. ಕಾರಿನಲ್ಲಿ ಹೊರಟಿದ್ದ ಹುಸೇನ ಅಲಿಖಾನ ಸಾಹೇಬರದನ್ನು ನೋಡಿ ಕಾರು ನಿಲ್ಲಿಸಿ ನನ್ನನ್ನು ಕರೆದುಕೊಂಡು ಹೊರಟಿದ್ದರು. ಹಾದಿಯಲ್ಲಿ ಅವರ ಮಗ ಯೂಸಫ್ ಅಲಿಖಾನ್ ತನ್ನ ಕೆಟ್ಟ ಮೋಟಾರ್ ಬೈಕ್ ದುರಸ್ತಿ ಮಾಡುತ್ತ ಕುಳಿತಿದ್ದ. ಅದನ್ನು ನೋಡಿಯೂ ನೋಡದಂತೆ ಮುಂದೆ ನಡೆದಿದ್ದರು ಅವರು. ನಾನು ಕೇಳಿದ್ದೆ–ನನಗಾಗಿ ಕಾರು ನಿಲ್ಲಿಸಿದ ತಾವು ಯೂಸಫ್ ಭಯ್ಯಾರಿಗಾಗಿ ಏಕೆ ನಿಲ್ಲಿಸಲಿಲ್ಲವೆಂದು. ಅದಕ್ಕವರು, "ನನ್ನ ಮಗ ತನ್ನ ಸಾಹಸದಿಂದಲೇ ಬೆಳೆಯಬೇಕೆಂಬುದು ನನ್ನ ಬಯಕೆ. ಎಲ್ಲಿಯೂ ನನ್ನ ಹೆಸರು ಬಳಸಿಕೊಳ್ಳಕೂಡದೆಂದವನಿಗೆ ಹೇಳಿ ಬಿಟ್ಟಿದ್ದೇನೆ. ಮೇಲಾಗಿ, ಯಾವಾಗಲೂ ಕಷ್ಟ ಸೋಸುತ್ತಲೇ ಬೆಳೆದಿರುವ ನಿನಗೆ ನಾನು ಕಾರಿನಲ್ಲಿ ಒಮ್ಮೆ ಕುಳ್ಳಿರಿಸಿಕೊಂಡುದು



ಸೂಕ್ತವೇ; ನಿತ್ಯ ಸುಖದಲ್ಲಿಯೇ ಬೆಳೆದಿರುವ ನನ್ನ ಮಗ ಇಂದು ಒಂದು ದಿನವಾದರೂ ಕಷ್ಟ ಅನುಭವಿಸಲಿ! ಕಷ್ಟವಿಲ್ಲದೆ ಅಭ್ಯುದಯ ಸಂಪಾದನೆ ಕಷ್ಟ!" ಮುಂದೆ ಯೂಸುಫ್‌ಭಯ್ಯಾ ಸ್ವಪ್ರಯತ್ನದಿಂದಲೇ ರೇಲ್ವೆ ಸರ್ವಿಸು ಸೇರಿದರು. ಅವರ ತಂದೆ ಕೊನೆಗೂ ಅವರಿಗಾಗಿ ಒಬ್ಬರಿಗೂ ಒಂದು ಮಾತು ಹೇಳಲಿಲ್ಲ! ಈ ಶೀಲಸಂಪತ್ತು ಇನ್ನೆಲ್ಲಿ?

ಜಹೀರ್ ಅಹಮದ್ ಕುರೇಷಿ ಸಾಹೇಬರುಗಳ ಮನೆಗೆ ಹೋಗಿ 'ಷುಕರಿಯಾ' ಸಲ್ಲಿಸಿ, ಸಾಲಾರಜಂಗ್ ಸಾಹೇಬರ ದೇವಢಿಗೆ ಹೋದೆ, ಅವರಿರಲಿಲ್ಲ. ಅವರ ಸೆಕ್ರೆಟರಿ ಕದೀರ ಸಾಹೇಬರನ್ನು ಕಂಡು ನವಾಬ ಸಾಹೇಬರಿಗೆ ನನ್ನ ಧನ್ಯವಾದಗಳನ್ನು ಸಲ್ಲಿಸಬೇಕೆಂದು ಕೋರಿದೆ. ನವಾಬ ಸಾಹೇಬರ ಸಿಫಾರಸಿನಿಂದಲೇ ನಿನಗೆ ಖಾಲ್ಸಾದಲ್ಲಿ (ನಿಜಾಮರ ಅಧಿಪತ್ಯದ ಪ್ರದೇಶದಲ್ಲಿ) ಇಷ್ಟು ದೊಡ್ಡ ಹುದ್ದೆ ಸಿಕ್ಕಿತು–ಎಂದು ಅವರು ಜಂಭ ಕೊಚ್ಚಿಕೊಂಡರು. ನವಾಬ ಸಾಹೇಬರು ಕೊಟ್ಟಿದ್ದ ಪತ್ರಗಳಾದ ನನ್ನ ಜೋಬಿನಲ್ಲಿಯೇ ಇದ್ದರೂ ನಾನು ಅವರ ಮಾತನ್ನು ಅಲ್ಲಗಳೆವ ಗೋಜಿಗೆ ಹೋಗಲಿಲ್ಲ. ಇಂಟರ್‌ವ್ಯೂಗೆ ಮುನ್ನ ನನ್ನ ದೈಹಿಕ ಪರೀಕ್ಷೆ ಮಾಡಿದ್ದ ಡಾ॥ ನಾಯ್ಡು (ಭಾರತಕೋಕಿಲ ಸರೋಜಿನಿ ನಾಯ್ಡು ಅವರ ಪತಿ) ಹಾಗೂ ನನ್ನ ದಂತಗಳನ್ನು ತೊಳೆದಿದ್ದ ಡಾ॥ ಬಿ.ಆರ್. ನಾಯಕರಿಗೆ ವಂದನೆಗಳನ್ನರ್ಪಿಸಿ ಅನ್ನಪೂರ್ಣಸ್ವಾಮಿಗಳವರ ಆಶೀರ್ವಾದ ಪಡೆದುಕೊಂಡೆ.

ಅಂದೇ ರಾತ್ರಿ ಗಾಡಿಗೆ ಹೊರಟು ಮಾರನೆಯ ದಿನ ನಸುಕಿನಲ್ಲಿ ಬನ್ನಿಕೊಪ್ಪ ನಿಲ್ದಾಣವನ್ನು ತಲುಪಿದೆ. ನನ್ನ ಹಿತೈಷಿಗಳಾಗಿದ್ದ ಇಟಗಿಯ ಶ್ರೀ ಬಿ.ಎ. ಪಾಟೀಲರು ತಮ್ಮ ಎತ್ತುಗಾಡಿ ಕಳಿಸಿದ್ದರು. ಮೊದಲು ಅವರ ಮನೆಗೆ ಹೋಗಿ, ಉಪಕಾರ ಮುಗಿಸಿ ದ್ಯಾಂಪುರಕ್ಕೆ ಹೋಗಿ ಮನೆಯ ಪಕ್ಕದ ಮಸೀದೆಯ ಮುಂದೆ ಗಾಡಿ ನಿಲ್ಲಿಸಿ ಕೆಳಗಿಳಿದೆ. ಯಾರೋ ಹುದ್ದೆದಾರರು ಬಂದರೆಂದು, ಏನೋ ಪೀಡೆ ತಂದರೆಂದು ಊರ ಜನರು ಗಾಬರಿಯಾದರು. ಬಂದವನು ಸಿದ್ಧಯ್ಯನೆಂದು ತಿಳಿದ ಮೇಲೆ ಬೆಕ್ಕಸಬೆರಗಾದರು. ಅವ್ವನಿಗೆ ಆನಂದ ಆಕ್ರೋಶ ಒಮ್ಮೆಗೇ ಉಕ್ಕಿಬಂದುವು–ನಾನು ಆರಿಸಿ ಬಂದುದುಕ್ಕಾಗಿ ಆನಂದ, ತಂಗಿ ವೀರಾವತಿ ಹೊರಟು ಹೋದುದುಕ್ಕಾಗಿ ಕ್ರಂದನ. ಅರ್ಧ ಘಂಟೆ ಮಾತ್ರ ಅಲ್ಲಿದ್ದು ತಂಗಿಯ ಸಮಾಧಿ ನೋಡಲು ಹೋದೆ. ನನ್ನೊಡನೆ ನೂರಾರು ಜನರು ಅಲ್ಲಿಗೆ ಬಂದರು. ಸಂಗಡ ತಂದಿದ್ದ ಮಲ್ಲಿಗೆ ದಂಡೆಯನ್ನು ತಂಗಿಯ ಸಮಾಧಿಯ ಮೇಲಿರಿಸಿ ಕಂಬನಿ ಸುರಿಸಿದೆ. ಭಾರವಾದ ಹೃದಯದೊಡನೆ ಹಿಂದಿರುಗಿದೆ. ಕೇರಿಯ ಬದಿಯಿಂದ ಬರುತ್ತಿದ್ದಾಗ ಹರಿಜನ ಮಹಿಳೆಯರೆಂದರು; "ಎಪ್ಪಾ, ಅಣ್ಣನ ಸೆಡಗರ ಒಂದು

ದಿನಾನರ ನೋಡಿ ಹೋಗಬೇಕಾಗಿತ್ತು ನೋಡು ಸಣ್ಣವ್ವ!" "ಹೌದಮ್ಮ, ಆಕೆಗೂ ಅಣ್ಣನ ಸಡಗರ ನೋಡುವ ಭಾಗ್ಯವಿರಲಿಲ್ಲ, ನನಗೂ ಕೊನೆಯ ದಿಗಗಳಲ್ಲಿ ತಂಗಿಯ ಬಳಿ ಇರುವ ಭಾಗ್ಯವಿರಲಿಲ್ಲ" ಎಂದೆ. ಅವರೂ ಅತ್ತರು, ನಾನು ಅತ್ತೆ!

ಸಂಜೆಯವರಿಗೆ ತಂದೆತಾಯಿಗಳಿಗೆ ಸಮಾಧಾನ ಹೇಳಿ, ಊರವರೆಲ್ಲರನ್ನು ಕಂಡು ಮಾತನಾಡಿಸಿ ಅಂದೇ ರಾತ್ರಿ ಗಾಡಿಗೆ ಹೈದರಾಬಾದಿಗೆ ಹೊರಟೆ. ಹಾದಿಯುದ್ದಕ್ಕೂ ತಂಗಿಯ ನೆನಪು ತೇವಗೊಳಿಸುತ್ತಲೇ ಇದ್ದಿತು ಅಕ್ಷಿಗಳನ್ನು. ನನ್ನನು  ನೋಡಿದೊಡನೆ ಅರಳುತ್ತಿದ್ದ ಆ ಮಂಗಲಮುಖವನ್ನು ನಾನಿನ್ನು ನೋಡಲಾರನೆಂಬ ಉಮ್ಮಳವನ್ನು ಅದುಮಿಡಲಾಗಲಿಲ್ಲ. ಪಕ್ಕದ ಪ್ರಯಾಣಿಕರ ಪರಿವೆಯಿಲ್ಲದೆಯೆ ಕಣ್ಣೀರು ಹರಿಸುತ್ತಿದ್ದೆ. ಯಾರು ಏಕೆ ಅಳುತ್ತಿರುವಿಯೆಂದು ಕೇಳಲಿಲ್ಲ. ನಿಜ, 'ನೀನು ನಕ್ಕರೆ ಎಲ್ಲರೂ ನಿನ್ನೊಡನೆ ನಗಲು ಸಿದ್ಧರು; ನೀನು ಅತ್ತರೆ ನೀನೊಬ್ಬನೇ ಅಳಬೇಕು!' ಹೈದರಾಬಾದು ತಲುಪುತ್ತಲೆ ಬಸಮ್ಮನವರು, ಮೈನಾ ತಾಯಿಯವರು ಕಕ್ಕುಲತೆಯೊಡನೆ ಎಲ್ಲ ವಿಷಯ ಕೇಳಿದರು. ಅವರರಿಯಂದಂತೆಯೇ ಅವರ ಕಣ್ಣುಗಳಿಂದ ಹನಿಗಳೆರಡು ಉದುರಿದ್ದುವು. ನನ್ನ ಸಹದುಃಖಿಗಳೂ ಇರುವರೆಂಬುದನ್ನು ನೆನೆದು ದುಃಖದ ಕಾರ್ಮೋಡದ ಸುತ್ತಲೂ ಸಮಾಧಾನದ ಬೆಳ್ಳಿಗೆರೆ ಮೂಡಿತು!

## ಹೊರಡುವ ಸಿದ್ಧತೆ

ತರಬೇತಿಗೆ ಹೊರಡುವ ದಿನ ಬಂದಿತು, ಒಂದು ತಿಂಗಳು ಬೀದರ ಜಿಲ್ಲೆಯ ದೇವನಿಯಲ್ಲಿರಬೇಕಿತ್ತು. ಸಂನ್ಯಾಸಿಯು ಮದುವೆಗೆ ಸಾವರಿಸಿಕೊಳ್ಳುವಂತೆ ಪ್ರಯಾಣದ ಸಿದ್ಧತೆಗಳನ್ನು ಮಾಡಿಕೊಂಡೆ. ಹಳೆಯ ಹೋಲ್ಡಾಲ್ ರಿಪೇರಿ ಮಾಡಿಸಿಕೊಂಡೆ. ನಾಲ್ಕು ಹೊಸ ಅಂಗಿಗಳನ್ನು ಹೊಲೆಸಿಕೊಂಡೆ; ಸರಿಕರಲ್ಲಿ ಸುಮಾರಾಗಬಾರದೆಂದು ಕೈಲಾದಷ್ಟು ಏನೇನೋ ಕೊಂಡುಕೊಂಡೆ. ನಾಮಪಲ್ಲಿ ನಿಲ್ದಾಣದಲ್ಲಿ ಹದಿನಾರು ಜನ ಭಾವೀ ತಹಸೀಲ್ದಾರರು ತಮ್ಮ ಸಾಮಾನು ಸರಂಜಾಮುಗಳೊಡನೆ ಹಾಗೂ ಬೀಳ್ಕೊಡಲು ಬಂದವರೊಡನೆ ಹಾಜರಾದಾಗ ಗದ್ದಲವೋ ಗದ್ದಲ. ಎಲ್ಲರಲ್ಲಿ ನಾನೇ ಬಡಪಾಯಿ. ಉಳಿದವರ ಸಾಮಾನುಗಳಿಗೆ ಹೋಲಿಸಿದಾಗ ನನ್ನ ಸಣ್ಣ ಸೂಟ್‌ಕೇಸು, ತೇಪೆ ಹಚ್ಚಿದ ಹೋಲ್ಡಾಲುಗಳು ಬರಗಾಲ ಮುಗಿಸಿ ಬಂದಿದ್ದ ಬಡಕಲು ಬಾಲಕರಂತೆ ತೋರಿದುವು. ಒಬ್ಬನು ಕೇಳಿಯೇ ಬಿಟ್ಟ; 'ಇಷ್ಟರ ಮೇಲೆ ಒಂದು ತಿಂಗಳು ಹೇಗೆ ಕಳೆಯುವೆ?" ಎಂದು. 'ಮತ್ತಷ್ಟು ಆಮೇಲೆ ಬರಲಿದೆ' ಎಂದು ಬುರುಡೆ ಬಿಟ್ಟೆ. ಇದಕ್ಕೂ ದೊಡ್ಡ ಅಳುಕು ಬೇರೊಂದು ಇದ್ದಿತು; ಒಳಗೊಳಗೇ



ಚಿಟುಕುಮುಳ್ಳಾಡಿಸುತ್ತಿತ್ತು ಅದು. ಆಗ ನನ್ನ ಹತ್ತಿರ ಉಳಿದಿದ್ದುದು ಹತ್ತು ರೂಪಾಯಿಗಳ ಒಂದೇ ಒಂದು ನೋಟು! ಅದರಲ್ಲಿ ಒಂದು ತಿಂಗಳ ಕಾಲವನ್ನು ಹೇಗೆ ನೂಕಿ ಬರಬೇಕೆಂಬುದೇ ತಿಳಿಯದಾಗಿ ಹೊರಗೆ ಎಲ್ಲರೊಡನೆ ನಗುತ್ತಿದ್ದರೂ ಒಳಗೆ ಗಾಬರಿಗೊಂಡಿದ್ದೆ ನಾನು. ವಿಕಾರಬಾದ ನಿಲ್ದಾಣ ಬಂದಿತು. ಎಲ್ಲರೂ ಬಿಸ್ಕಟು ಟೀ ತರಿಸಿಕೊಂಡರು. ನಿರುಪಾಯನಾಗಿ ನಾನೂ ತರಿಸಿಕೊಂಡೆ. ಎಲ್ಲರೂ ನೂರು ನೂರು ರೂಪಾಯಿಗಳ ನೋಟು ಕೊಟ್ಟರು; ನಾನು ಇದ್ದ ಹತ್ತು ರೂಪಾಯಿಯ ನೋಟನ್ನೇ ಕೊಟ್ಟುಬಿಟ್ಟೆ. ಹೋಟೆಲಿನ ಹುಡುಗ ಎಲ್ಲರಿಗೂ ಹೆಚ್ಚಿನ ಹಣ ಹಿಂದಿರುಗಿಸುತ್ತ ಬಂದ. ನನಗೂ ಹಿಂದಿರುಗಿಸಿದ. ಅಷ್ಟರಲ್ಲಿ ಗಾಡಿ ಹೊರಟುಬಿಟ್ಟಿತು. ಆಗ ಲೆಕ್ಕ ಮಾಡಿ ನೋಡುತ್ತೇನೆ–ನನಗೆ ತೊಂಬತ್ತೊಂಬತ್ತು ರೂಪಾಯಿ ಹಿಂದಿರುಗಿಸಿದ್ದನಾತ! ದುಡ್ಡಿನ ದೊಡ್ಡ ಸಮಸ್ಯೆ ಬಗೆಹರಿಯಿತೆಂದು ಒಂದೆಡೆಗೆ ನೆಮ್ಮದಿಯೆನಿಸಿದರೂ ಇನ್ನೊಂದೆಡೆಗೆ ಹೋಟೆಲಿನವರೆಲ್ಲಿ ಆ ಹುಡುಗನಿಂದ ತೊಂಬತ್ತು ರೂಪಾಯಿ ವಸೂಲು ಮಾಡಿದರೋ ಎಂದು ಜೀವ ಹುರುಹುರು ಎಂದಿತು. ಹೈದರಾಬಾದಿಗೆ ಹಿಂದಿರುಗಿದ ಮೇಲೆ ವಿಕಾರಾಬಾದಿಗೆ ಹೋಗಿ ಬಂದೆ–ಆ ಹುಡುಗ ಸಿಕ್ಕರೆ ಹಣ ಹಿಂದಿರುಗಿಸಬೇಕೆಂದು. ಆ ಹುಡುಗ ಅಲ್ಲಿ ಸಿಕ್ಕಲಿಲ್ಲ. ಒಂದೆ ಸಲ ಅವಸರದಲ್ಲಿ ನೋಡಿದ್ದ ಮುಖ. ನಾನೇ ಗುರುತು ಹಿಡಿಯಲಿಲ್ಲವೋ ಅವನೇ ಅಲ್ಲಿರಲಿಲ್ಲವೋ ತಿಳಿಯದು. ಅಂತೂ ಆ ಹುಡುಗನ ಋಣ ತೀರಿಸಲಾಗಲಿಲ್ಲವೆಂಬ ಕೊರಗು ಕೊರೆಯುತ್ತಲೇ ಇದೆ ಇಂದಿಗೂ. ಅವನಿಗಾಗಿ ಅನೇಕ ಸಲ ಮಿಡುಕಿದ್ದೇನೆ. ಪ್ರಾರ್ಥನೆ ಸಲ್ಲಿಸಿದ್ದೇನೆ. ಆದರೆ ಅವನ ಋಣವನ್ನು ತೀರಿಸದೆ ಒಂದು ದಿನ ಈ ಲೋಕ ಬಿಡಬೇಕಲ್ಲ–ಎಂಬ ವ್ಯಥೆ ಹಾಗೆಯೇ ಉಳಿದಿದೆ!

ತರಬೇತಿಯೆಂದು ಹೋದರೂ ಪಡೆದ ತರಬೇತಿ ಸೊನ್ನೆ. ಜೊತೆಗಿದ್ದವರೆಲ್ಲರೂ ಶ್ರೀಮಂತರು. ದಿನಕ್ಕೊಂದು ತರದ ಅಡುಗೆ ಮಾಡಿಸುವುದು: ಹೊಟ್ಟೆ ಬಿರಿವವರೆಗೆ ಹೊಡೆಯುವುದು, ಎಲೆಗಳನ್ನಾಡುವುದು, ದೊಡ್ಡವರ ಮನೆಯ ಹುಳುಕುಗಳ ಬಗ್ಗೆ ಹರಟುವುದು, ಗೊಗ್ಗರು ದನಿಯಲ್ಲಿ ಸಿನಿಮಾ ಹಾಡುಗಳನ್ನು ಹಾಡುವುದು, ಹುಡುಗೆಯರು ಅತ್ತ ಸುಳಿದರೆ 'ಹಾ' ಎಂದು ಬಾಯ್ಬಿಡುವುದು, ದಿನಕ್ಕೆ ಮೂವತ್ತು ನಾಲ್ವತ್ತು ಸಿಗರೇಟು ಸುಡುವುದು, ಅಪರಾಹ್ನದಲ್ಲಿ, ಮಧ್ಯಾಹ್ನದಲ್ಲಿ, ರಾತ್ರಿಯಲ್ಲಿ–ಹೀಗೆ ಮೂರು ಮೂರು ಸಲ ಮಲಗುವುದು, ಮೈ ಮುರಿದೆದ್ದು ಮತ್ತೆ ತುತ್ತಿನ ಚೀಲ ತುಂಬುವುದು, ಇನ್ನೂ ಏನೇನೊ! ನಾನೊಬ್ಬ ಪುರಾತನ ವಸ್ತು ಸಂಗ್ರಹಾಲಯದ ವಿಚಿತ್ರ ವಸ್ತುವಾಗಿ ಬಿಟ್ಟಿದ್ದೆ ಅವರ ಪಾಲಿಗೆ! ಇವನನ್ನು ಹೀಗೆಯೇ

ಬಿಡಬಾರದೆಂದು ಮಾತನಾಡಿಕೊಂಡರವರು. ಮಾಂಸಾಹಾರಿಯನ್ನಾಗಿ ಮಾಡುವುದಂತೂ ಸಾಧ್ಯವಿಲ್ಲವೆಂಬುದನ್ನು ಮನವರಿಕೆ ಮಾಡಿಕೊಂಡಿದ್ದರವರು. ಪುಣ್ಯಕ್ಕೆ ಬಾಟಲಿಗಳನ್ನು ತಂದಿರಲಿಲ್ಲ ಅವರು. 'ಸಿಗರೇಟು ಸೇದುವ ಚಟವನ್ನಾದರೂ ಇವನಿಗೆ ಕಲಿಸಬಾರದೇಕೆ?' ಎಂದು ಯೋಚಿಸಿದರವರು. ಸರಿ, ಇಬ್ಬರು ನನ್ನ ಎರಡೂ ಕೈಗಳನ್ನು ಬಿಗಿಯಾಗಿ ಹಿಡಿದರು. ಇನ್ನೊಬ್ಬರು ಬಾಯಿಯೊಳಗೆ ಸಿಗರೇಟು ಇಟ್ಟರು, ಮತ್ತೊಬ್ಬರು ಕಡ್ಡಿ ಕೊರೆದು ಹಚ್ಚಿದರು. ನಾನು ಹೊಗೆ ಎಳೆಯಲೇ ಇಲ್ಲ. ನನ್ನ ಮೇಲೆ ರೇಗಿದರವರು. 'ಮದನಸಿಂಘ'ರಿಗೆ ಮೊದಲು ಸೇದಿಸಿರಿ, ಆಮೇಲೆ ಸೇದುವೆ ನಾನು' ಎಂದು ನನ್ನ ಗುಪ್ತಾಸ್ತ್ರವನ್ನು ಬಿಟ್ಟೆ. ತುಸು ಹೊತ್ತು ಮಂಕಾದರವರು. ಇದ್ದುದು ಒಬ್ಬನೇ ಸೀಖನಾದರೂ ಮದನಸಿಂಘ ಭರ್ಜರಿ ಅಸಾಮಿ. ಅವರ ಕುಡಿಮೀಸೆ, ಗಡ್ಡದ ಗಂಟು, ಬಣ್ಣದ ಪೇಟಾ ನೋಡಿದ ಯಾರಾದರೂ ಗರುಡನನ್ನು ಕಂಡ ಹಾವಾಗಿ ಬಿಡುತ್ತಿದ್ದರು. ಇಂಥವರಿಗೆ ಅವರ ಧರ್ಮದ ಪ್ರಕಾರ ನಿಷಿದ್ಧವೆನಿಸಿದ್ದ ತಂಬಾಕು ಸೇದಿಸುವ ಎಂಟೆದೆ ಯಾರಿಗಿದ್ದಿತು? ಬೇರೆ ತರ್ಕವನ್ನು ಆಶ್ರಯಿಸಿದರು ಭೂಪರವರು. 'ಸರದಾರಜಿ ಮಾಂಸ ತಿನ್ನುತ್ತಾರೆ; ಆದುದರಿಂದ ಅವರಿಗೆ ಸೀಗರೇಟಿನ ಮಾಫಿ ಕೊಟ್ಟಿದ್ದೇವೆ; ನೀನು ಮಾಂಸವನ್ನಾದರೂ ತಿನ್ನು, ಇಲ್ಲವೆ ಸಿಗರೇಟನ್ನಾದರೂ ಸೇದು' ಎಂದು ಹಟ ಹಿಡಿದರು. ಎಷ್ಟು ಹೆಣಗಿದರೂ ಪ್ರಯೋಜನವಾಗಲಿಲ್ಲ. ಕೊನೆಗೂ ಸಿಗರೇಟು ಸೇದಿಸಿಯೇ ಕೈ ಬಿಟ್ಟರು.

ದೇವನಿಯಲ್ಲಿ ದೇವನಿಯ ತಳಿಯೆಂದೇ ಪ್ರಸಿದ್ಧವಾದ ದೊಡ್ಡ ದೊಡ್ಡ ಹೋರಿಗಳನ್ನು ನಿತ್ಯವೂ ನೋಡಿದೆವು. ಲಿನ್‌ಲಿಥಗೋ ಪುರಸ್ಕಾರ ಪಡೆದಿದ್ದ ಹೋರಿಯನ್ನು ನೋಡಿದೆವು. ಮದ್ದಾನೆಯಂತಿದ್ದಿತು ಅದು. ನಮಗೆ ಏನಾದರೂ ಕಲಿಸಲು ಪಟವಾರಿ ನಿತ್ಯ ತನ್ನ ಗಂಟು ಹೊತ್ತುಕೊಂಡು ಬರುತ್ತಿದ್ದ. ಅದನ್ನು ಬರುತ್ತಿದ್ದಂತೆಯೇ, 'ಮಹಾರಾಜ, ಕಲ್ ಆವ್' ಎಂದು ಕಳಿಸಿ ಬಿಡುತ್ತಿದ್ದರು. ನಾನೊಬ್ಬನೇ ಅವರಿಗೆ ತಿಳಿಯದಂತೆ ಅವನಿಂದ ಕಲಿಯಬೇಕಾಗಿದ್ದುದನ್ನು ಕಲಿತುಕೊಂಡೆ. ಅಂತೂ ಇಂತೂ ಮೂವತ್ತು ದಿನ ಋತು ಸಂಹಾರ ಮಾಡಿ ಹೈದರಾಬಾದಿಗೆ ಹಿಂದಿರುಗಿದೆವು. ಯುದ್ಧದ ಕಾರಣದಿಂದಾಗಿ ಆರು ತಿಂಗಳಿನ ನಮ್ಮ ತರಬೇತಿಯ ಅವಧಿ ಮೂರು ತಿಂಗಳಿಗೆ ಇಳಿದಿದ್ದಿತು.

ಇನ್ನುಳಿದ ಎರಡು ತಿಂಗಳುಗಳ ತರಬೇತಿ ಹೈದರಾಬಾದಿನಲ್ಲಿಯೇ ನಡೆಯುವುದೆಂಬುದು ತಿಳಿಯುತ್ತಲೆ ನಾನು ಫೀಲಖಾನಾ ಓಣಿಯಲ್ಲಿ ಒಂದು ಸಣ್ಣ ಮನೆ ಬಾಡಿಗೆಗೆ ತೆಗೆದುಕೊಂಡು ತಂದೆತಾಯಿಯವರನ್ನು ಕರೆಸಿಕೊಂಡೆ.



ಕೊಪ್ಪಳದಲ್ಲಿ ಓದುತ್ತಿದ್ದ ಸೋದರ ಅನ್ನದಾನಿಯನ್ನುಳಿದ ಶರಣಮ್ಮ ಬಸವರಾಜರೂ ಬಂದರು. ಅವ್ವನ ಸ್ಥಿತಿ ಚಿಂತಾಜನಕವಾಗಿದ್ದಿತು. ಮಡಿದ ಮಗಳಿಗಾಗಿ ಅತ್ತು ಅತ್ತು ಮೆತ್ತಗಾಗಿ ಹೋಗಿದ್ದಳು. ಇನ್ನಾದರೂ ಅಳುವುದನ್ನು ನಿಲ್ಲಿಸಮ್ಮಾ–ಎಂದಾಗ 'ಬೇಗ ಮದುವೆಯಾಗಿ ಬಿಡಪ್ಪಾ, ಸೊಸೆಯನ್ನು ನೋಡಿ ಮಗಳ ದುಃಖವನ್ನು ಮರೆಯುತ್ತೇನೆ' ಎಂದು ಉತ್ತರಿಸಿದಳು. ತಂದೆಯವರ ಮೇಲೂ ಅತ್ತಣಿಂದ ಇತ್ತಣಿಂದ ಕನ್ಯಾಪಿತೃಗಳಿಂದ, ಅವರ ಪರವಾಗಿ ಸ್ವಾಮಿಗಳಿಂದ ಒತ್ತಡಗಳು ಬರತೊಡಿದ್ದವು. ಧಾರವಾಡದಲ್ಲಿ ಒಬ್ಬರ ಮಗಳನ್ನು ನೋಡುವುದಾಗಿ ಮಾತುಕೊಟ್ಟು ಬಿಟ್ಟಿದ್ದರವರು. ನನ್ನ ಮನಸ್ಸಿನಲ್ಲಿ ಒಂದು ವರ್ಷ ಅವಿವಾಹಿತನಾಗಿಯೇ ಉಳಿದು, ಮನೆತನಕ್ಕೆ ಬೇಕಾಗುವ ಸಾಮಾನುಗಳನ್ನೆಲ್ಲ ಸಜ್ಜು ಮಾಡಿಕೊಂಡು ಆಮೇಲೆ ಮದುವೆಯಾಗಬೇಕೆಂದಿದ್ದರೂ ಅವ್ವನ ಆಸೆಯನ್ನು ಈಡೇರಿಸಿ ಆಕೆಯ ದುಃಖವನ್ನು ತಗ್ಗಿಸಲೆಂದು ಮದುವೆಯಾಗಲು ಸಿದ್ಧನಾದೆ. ಮೂರು ದಿನಗಳ ರಜೆ ಪಡೆದುಕೊಂಡು ಧಾರವಾಡಕ್ಕೆ ಹೋದೆ. ಜೊತೆಗೆ ಗೆಳೆಯ ಕೆ.ಆರ್. ಹಿರೇಮಠರಿದ್ದರು; ಸೋದರಮಾವ ಕಳಕಯ್ಯನವರೂ ದ್ಯಾಂಪುರದಿಂದ ಬಂದು ಕೂಡಿಕೊಂಡರು. ಅಲ್ಲಿ ರಪಾಟಿಯವರ ಮನೆಯಲ್ಲಿ ತಂಗಿದೆವು. ಸ್ನಾನಾದಿಗಳನ್ನು ಮುಗಿಸಿ ಸಂಜೆ ತಂದೆಯವರು ಮಾತು ಕೊಟ್ಟಿದ್ದ ಮನೆಗೆ ಕನ್ಯೆ ನೋಡಲು ಹೋದೆವು 'ಈಗ ಸೂರ್ಯಸ್ತವಾಗಿದೆ, ನಾಳೆ ಬನ್ನಿರಿ' ಎಂದರು. ನನಗೆ ಸಿಟ್ಟು ಬಂದಿತು. 'ಈಗ ತಂದಿರುವ ಈ ಹಣ್ಣು ಹೂ ಹಿಂದಿರುಗಿ ಹೋದುವೆಂದರೆ ಮರಳಿ ನಿಮ್ಮ ಮನೆಗೆ ಬರಲಾರವು!' ಎಂದು ಹೇಳಿಬಿಟ್ಟು ಅವರ ಮಾರುತ್ತರಕ್ಕಾಗಿಯೂ ಕಾಯದೆ ಹೊರಟು ಬಿಟ್ಟೆ. ಆಮೇಲೆ ಅವರು ದೊಡ್ಡವರೊಬ್ಬರೊಡನೆ ಹೇಳಿಕಳಿಸಿದರು–ಈಗಲೇ ಬಂದು ನೋಡಲೆಂದು. ಹೋಗಲಿಲ್ಲ ನಾನು. ಮಾವನವರೂ, ಗೆಳೆಯ ಹಿರೇಮಠರೂ ನನ್ನ ನಿರ್ಧಾರವನ್ನು ಬೆಂಬಲಿಸಿದರು.

ಮರುದಿನ ಹಾವೇರಿ ಪೇಟೆಯ ಮುರುಘಾ ಮಠಕ್ಕೆ ಹೋಗಿ ತ್ರಿವಿಧ ದಾಸೋಹ ಮೂರ್ತಿಗಳೆಂದು ಕೀರ್ತಿತರಾಗಿದ್ದ ಪರಮಪೂಜ್ಯ ಮೃತ್ಯುಂಜಯ ಮಹಾಶಿವ ಯೋಗಿಗಳ ದರ್ಶನ ಪಡೆದುಕೊಂಡೆವು. ನಮ್ಮ ತಂದೆಯವರಿಗೂ ನಮಗೂ ಅಂತರಂಗದ ಆರಾಧ್ಯರಾಗಿದ್ದರವರು. ಅವರ ಬಗ್ಗೆ ಬರೆಯುತ್ತ ಹೋದರೆ ಹೆಬ್ಬೊತ್ತಗೆಯೇ ಆಗುವುದು. ಧಾರವಾಡಕ್ಕೆ ಹೋದಾಗಲೆಲ್ಲ ಅಲ್ಲಿಯ ಅಥಣಿಯ ಶಿವ ಯೋಗೀಶ್ವರರ ಹಾಲುಗಲ್ಲಿನ ವಿಗ್ರಹದ ಹಾಗೂ ಅವರ ಪಟ್ಟಶಿಷ್ಯರಾದ ಮೃತ್ಯುಂಜಯಪ್ಪಗಳವರ ದರ್ಶನ ಪಡೆದಾಗಲೇ ತೃಪ್ತಿ ನನಗೆ. ನನ್ನ ಬಾಳಿನ ಬಹು ದೊಡ್ಡ ರೂವಾರಿ ಅವರು. ಬಂದ ಕಾರ್ಯ ಹೇಗಾದುದನ್ನು ಹೇಳಿದಾಗ ಅವರು, 'ನಮಗೆ ಬೇಕಾದವರೊಬ್ಬರ ಮನೆಯಲ್ಲಿ ಒಂದು ಒಳ್ಳೆಯ ಕನ್ಯೆ ಇದೆ–ಬೇಕಾದರೆ

ನೋಡಬಹುದು' ಎಂದು ಅಪ್ಪಣೆ ಕೊಡಿಸಿದರು. ಕೂಡಲೇ ಸಮ್ಮತಿಸಿದೆವು. ಅವರು ಚರಂತಿ ಮಠಕ್ಕೆ ಹೇಳಿ ಕಳಿಸಿದರು. ಕನ್ಯೆಯ ಅಣ್ಣ ಕರೆಯಲು ಬಂದ. ನೋಡಲು ಹೋದೆವು. ಮುಂದೆ ನನ್ನ ಬಾಳ ಸಂಗಾತಿಯಾಗಿ ನನ್ನ ಜೀವನದ ಹುಟ್ಟಿನಲ್ಲಿ ಜೇನಾಗಲಿದ್ದ ಗಿರಿಜೆಯನ್ನು ನೋಡಿದೆ, ನೋಡುತ್ತಲೇ ಮನದಲ್ಲಿ ಒಪ್ಪಿಬಿಟ್ಟೆ. ತಂದೆತಾಯಿಗಳ ಅನುಮತಿ ಪಡೆಯದೆ ಬಹಿರಂಗಗೊಳಿಸಬಾರದೆಂದು, ಭಾವಚಿತ್ರ ಕೊಡಿರಿ, ನನ್ನ ತಂದೆತಾಯಿಗಳಿಗೆ ತೋರಿಸಿ ಅವರ ಅಭಿಪ್ರಾಯ ತಿಳಿಸುವೆ'ನೆಂದು ಹೇಳಿದೆ. ಭಾವಚಿತ್ರ ನಿಜವಾಗಿ ಬೇಕಾಗಿದ್ದುದು ನನಗೆ! ನಾಲ್ಕು ಚಿತ್ರಗಳ ಲಕೋಟೆಯೊಂದನ್ನಿತ್ತ ಅವರಣ್ಣ, ಹೃದಯವನ್ನು ಅಲ್ಲಿಯೇ ಬಿಟ್ಟು ಹೊರಟೆ.

'ನವಕಲ್ಯಾಣ ಮಠ'ಕ್ಕೆ ಹೋಗಿ ಶ್ರೀ ಕುಮಾರಸ್ವಾಮಿಗಳ ದರ್ಶನ ಪಡೆದವು. ಹರ್ತಿ ಸಾಹೇಬರು ತಮ್ಮ ಜವಾನನ್ನು ಜೊತೆಗೆ ಕಳಿಸಿದರು. 'ಇಂದು ಹೋಳಿ ಹುಣ್ಣಿಮೆ. ಇವರಿಗೆ ತೊಂದರೆಯಾಗದಂತೆ ಮನೆಗೆ ಮುಟ್ಟಿಸಿ ಬಾ' ಎಂದು ಆದೇಶವಿತ್ತರು. 'ಈ ರಕ್ಷಣೆ ಬೇಕಿಲ್ಲ ಸಾಹೇಬರೇ, ನಾವೂ ಧರಿಸಿರುವ ಈ ಷೇರವಾನಿಗಳೇ ನಮಗೆ ರಕ್ಷೆ' ಎಂದು ವಿನೋದವಾಗಿ ನುಡಿದೆ ನಾನು. 'ನಿಮಗೆ ಗೊತ್ತಿಲ್ಲ ಹೊಸ ಸಾಹೇಬರೇ, ಧಾರವಾಡದಲ್ಲಿ ಹಿಂದುಗಳಷ್ಟೇ ಹುರುಪಿನೊಡನೆ ಮುಸಲ್ಮಾನರೂ ಓಕಳಿ ಆಡುತ್ತಾರೆ. ಸಂಗಡ ಇವನಿರಲಿ' ಎಂದು ಜುಲುಮೆ ಮಾಡಿ ಕಳಿಸಿಕೊಟ್ಟರು.

ಅವರ ನಿರೀಕ್ಷೆ ನಿಜವಾಯಿತು. ಒಂದು ಗುಂಪು ಬಂದು ನಮ್ಮ ಮೇಲೂ ಬಣ್ಣ ಎರಚಿ ಬಿಟ್ಟಿತು. ಹರ್ತಿಸಾಹೇಬರ ಜವಾನ ಕಿಡಿಕಿಡಿಯಾದ. 'ಏ ಬೇಕೂಫ್ ಮಕ್ಕಳೇ, ಇವರು ಯಾರು ಗೊತ್ತೇ? ಹರ್ತಿಸಾಹೇಬರ ಗೆಸ್ಟು!' ಎಂದು ಗದ್ದರಿಸಿ ಹೊಡೆಯಲು ಹೋದ. ಗುಂಪಿನ ಮುಖಂಡ ಗದಗದ ನಡಗುತ್ತ ನಿಮ್ಮ ಬಳಿಗೆ ಬಂದು ಕ್ಷಮಿಸಿರೆಂದು ಕೈಮುಗಿದು ಕೇಳಿಕೊಂಡ. ನಮಗೆ ಸಿಟ್ಟೇನೂ ಬಂದಿರಲಿಲ್ಲ; ನಾವೂ ಅವರ ಬಣ್ಣವನ್ನೇ ಕಸಿದು ಅವರ ಮೇಲೆ ಸುರಿದು ಸಂತೋಷಪಟ್ಟೆವು. 'ಲೊಬೋ ಲೊಬೋ' ಎಂದು ಬೊಬ್ಬೆ ಕುಟ್ಟಿ ಮೆಚ್ಚಿಗೆ ಸೂಚಿಸಿತು ಸಮೂಹವದು. ಬ್ರಹ್ಮ ಚರ್ಯಾಶ್ರಮ ಮುಗಿದು ಗೃಹಸ್ಥಾಶ್ರಮ ಆರಂಭವಾಗಲಿದ್ದ ಸೂಚನೆ ಈ ಕಾಮನ ಹಬ್ಬದ ಮೂಲಕ ದೊರೆಯಿತೆಂದು ನಾನು ತರ್ಕಿಸಿದೆ. ಮಾವನವರ ಅಗ್ರಹಕ್ಕಾಗಿ ಹುಬ್ಬಳ್ಳಿಯಲ್ಲಿ ಎರಡು ಕನ್ಯೆಗಳನ್ನು ನೋಡಿ ಮೂವರ ಚಿತ್ರಗಳೊಡನೆ ಹೈದರಾಬಾದಿಗೆ ಹಿಂದಿರುಗಿದೆವು. ಮಾವನವರಿಗೆ ಹುಬ್ಬಳ್ಳಿಯ ಡಾಕ್ಟರರೊಬ್ಬರ ಮಗಳು ಬಹಳ ಮೆಚ್ಚಿಗೆ ಆಗಿದ್ದಳು. ಬಹಳ ಚೆನ್ನಾಗಿ ಹಾಡಿದ್ದಳವಳು; ಮಾವನವರಿಗೆ ಸಂಗೀತ ಕಲೆಯೆಂದರೆ ಪ್ರಾಣ. ಅಂತೆಯೇ ಆ ಹುಡುಗೆ ನಮ್ಮ ಮನೆಗೆ ಬಂದರೆ



ಲೇಸೆಂಬುದು ಅವರ ಅಭಿಪ್ರಾಯವಾಗಿದ್ದಿತು. ಅವರ ಅಭಿಪ್ರಾಯ ಗೆದ್ದರೆ ಹೇಗೆ– ಎಂದು ಒಳಗೊಳಗೇ ಕಳವಳಿಸಿದ್ದೆ ನಾನು.

**ಮದುವೆ :**

ಯಾರ ಸಂತೋಷಕ್ಕಾಗಿ ಈ ಅವಸರದ ಮದುವೆಗೆ ಒಪ್ಪಿದ್ದೆನೋ ಆ ತಾಯಿ ಯಾರನ್ನೇ ಈ ಮೂರು ಚಿತ್ರ ನೋಡಿ ಒಪ್ಪಲಿ, ಅವಳನ್ನೇ ವರಿಸುವೆನೆಂದು ಹೇಳಿದೆ. ಅವ್ವನ ಮುಖ ಅರಳಿತು. ಮೂರು ಚಿತ್ರಗಳನ್ನು ಮತ್ತೆ ಮತ್ತೆ ನೋಡ ತೊಡಗಿದಳು. ನಾನು ಮನದಲ್ಲಿಯೇ ಚಿನುಮಯನನ್ನು ಪ್ರಾರ್ಥಿಸುತ್ತಿದ್ದೆ–ಅವ್ವನ ಆಯ್ಕೆ ನನ್ನ ಬಯಕೆ ಒಂದಾಗುವಂತೆ ಮಾಡೆಂದು ಕೊನೆಗೂ ಅವ್ವ ಗಿರಿಜೆಗೇ ತನ್ನ ಮತವಿತ್ತಳು. ನಾನು ಹಿಗ್ಗಿ ಹೀರೇಕಾಯಿಯಾದೆ. ಒಪ್ಪಿಗೆಯ ಉತ್ತರ ಹೋಗುತ್ತಲೇ ಪದ್ಧತಿಯಂತೆ ಮನೆತನ ನೋಡಲು ಬಂದರು ಮುಂದೆ ಷಡ್ಡಕರಾಗಲಿದ್ದ ಟಿ.ಡಿ. ಶಿವಲಿಂಗಯ್ಯನವರು, ಅವರ ಜೀವನ ಗೆಳೆಯ ಬ್ಯಾಂಕ್ ಮ್ಯಾನೇಜರ್ ಭಾವಿಕಟ್ಟಿಯವರು. ಆ ಕಡೆಗೂ ಎಲ್ಲರೂ ಅದಾಗಲೇ ಒಪ್ಪಿದ್ದರಾಗಿ ಮನೆತನ ನೋಡುವ ಶಾಸ್ತ್ರ ಮೂರು ನಿಮಿಷಗಳಲ್ಲಿ ಮುಗಿದು ಭಾವಿಕಟ್ಟಿಯವರ ಹಾಸ್ಯ ಚಟಾಕೆಗಳು ಪ್ರಾರಂಭವಾದುವು. ಹೊತ್ತು ಸರಿದುದೇ ಗೊತ್ತಾಗಲಿಲ್ಲ. ನಾವೂ ಬೀಗರು ಬೇಸ್ತು ಬೀಳುವಂಥ ಯುಕ್ತಿಯೊಂದನ್ನು ಮಾಡಿದ್ದೆವು. ಹೈದರಾಬಾದಿನ ಹೆಸರಾದ ಹಸಿರು ಬಾಳೆಹಣ್ಣಿನ ಸಿಪ್ಪೆ ಕತ್ತರಿಸಿ. ಚಾರ್‌ಮೀನಾರ್ ಬಳಿಯ ಮಿರ್ಚಿ ಮಸಾಲೆ ಬೆರೆಸಿ ಪಲ್ಯ ಮಾಡಿಸಿದ್ದೆವು. ಬೀಗರು, 'ಬಹಳ ರುಚಿಯಾಗಿದೆ, ಬಹಳ ರುಚಿಯಾಗಿದೆ' ಎಂದು ಬಿಗಿದದ್ದೇ ಬಿಗಿದದ್ದು. ಕೊನೆಗೆ, 'ಇದು ಯಾತರ ಪಲ್ಯೆ?' ಎಂದು ಕೇಳಿಯೇ ಬಿಟ್ಟರು. ಇದ್ದುದನ್ನು ಇದ್ದಂತೆ ಹೇಳಿದಾಗ ಇಂಗು ತಿಂದ ಮಂಗಗಳಂತಾಗಿದ್ದರವರು.

ಮದುವೆಯೂ ಬಹುಬೇಗನೆ ನಡೆದುಹೋಯಿತು. ವೆಚ್ಚಕ್ಕಾಗಿ ತಾಂಡೂರಿನ ಚೆನ್ನಮಿಳ್ಳಿ ಚೆನ್ನಬಸವಯ್ಯನವರಿಂದ ಒಂದು ಸಾವಿರ ರೂಪಾಯಿ ಕಡ ಪಡೆದೆ. ಮುಂದೆ ಆಗಿಷ್ಟು ಈಗಿಷ್ಟು ಕೊಟ್ಟು ಮುಟ್ಟಿಸಿದೆ. ನನ್ನ ದ್ಯಾಂಪುರದ ಬಡಬಳಗದವರು ಧಾರವಾಡದಲ್ಲಿ ತಲೆ ತಗ್ಗಿಸಿ ಅಡ್ಡಾಡುವಂತಾಗದಿರಲೆಂದು ಎಲ್ಲರಿಗೂ ಹೊಸ ಅಂಗಿ, ಪಂಚೆ, ಕೋಟು, ರೂಮಾಲು, ಸೀರೆ ಕುಪ್ಪಸ ಕಳಿಸಿಕೊಟ್ಟೆ. ಹೈದರಾಬಾದಿನಿಂದ ಸೌ. ಮೈನಾತಾಯಿ ಖೇಣಿ, ಶ್ರೀ ಎಲ್.ಜಿ. ಹೊಂಬಳ್, ಶ್ರೀ ಅನ್ನಪೂರ್ಣ ಸ್ವಾಮಿಗಳು, ದಿವಾನ್ ಸಂಗಯ್ಯನವರು, ಇಪ್ಪತ್ತು ಜನ ಗೆಳೆಯರು ಹೊರಟರು. ಡಾ॥ ಕೆ. ಮುದ್ದಣ್ಣ, ಡಾ॥ ಬಿ.ವ್ಹಿ. ಪಾಟೀಲರು ಆಗ ಯಮಳರೆಂದು ಹೆಸರಾಗಿದ್ದರು. ಮದುವೆಯಲ್ಲಿ ನಮ್ಮ ಪರವಾಗಿ ಅವರೇ ಓಡಾಡಿದರು. ಯುದ್ಧಕಾಲ, ಗೋಧಿ

ಸಿಕ್ಕಿದ ದಿನಗಳು. ಆದರೂ ಚರಂತಿ ಮಠವಾಗ ಶ್ರೀಮಂತ ಮಠವೆನಿಸಿದ್ದ ಕಾರಣ ಊರಿಗೆಲ್ಲ ಹೋಳಿಗೆ ಊಟ ಹಾಕಿದರು. ಮದುವೆಯಾದ ಮೇಲೆ ಪರಮಪೂಜ್ಯ ಮೃತ್ಯುಂಜಯ ಶಿವಯೋಗಿಗಳವರ ದರ್ಶನ ಪಡೆದೆವು. ಅವರು ಆಗ ಆಶೀರ್ವದಿಸಿ ಇತ್ತ ಹತ್ತು ರೂಪಾಯಿಗಳನ್ನು ಇಂದಿಗೂ ಬಳಸದೆ ಉಳಿಸಿಕೊಂಡು ಬಂದಿದ್ದೇವೆ. ಲಿಂಗೈಕ್ಯ ಸಾಹಿತ್ಯಶರಣ ಪ್ರೊ. ಬಸವನಾಳರ, ಆಲೂರ ವೆಂಕಟರಾಯರ ಮನೆಗಳಿಗೆ ಹೋಗಿ ಅವರ ಆಶೀರ್ವಾದಗಳನ್ನು ಪಡೆದುಕೊಂಡೆವು. ಹೈದರಾಬಾದಿಗೆ ಹಿಂದಿರುಗಿದುದು ಸಿದ್ಧಯ್ಯ ಪುರಾಣಿಕ ಶರೀರ ಮಾತ್ರ.

## ವಿರಹ–ಪ್ರೇಮ ಕವನ :

ಅದುವರೆಗೆ ಹೇಗೆ ಹೆಣ್ಣಿನ ಕಡೆಗೆ ಹರಿಯುತ್ತಿದ್ದ ಚಿತ್ತವನ್ನು ತಡೆದು ಹಿಡಿದಿದ್ದೆನೋ ಏನೋ–ಮದುವೆಯಾದ ಮೇಲೆ ಮಡದಿಯಿಲ್ಲದೆ ಅಡುಗೆ ರುಚಿಸದಾಯಿತು. ಕನಿಷ್ಠ ತರಬೇತಿ ಮುಗಿದು ಯಾವುದಾದರೊಂದು ಸ್ಥಳಕ್ಕೆ ಪೋಸ್ಟಿಂಗ್ ಸಿಕ್ಕಿದ ಮೇಲೆ ಕೈ ಹಿಡಿದಾಕೆಯನ್ನು ಕರೆಸಿಕೋ–ಎಂದು ವಿವೇಕವೇನೋ ಹೇಳುತ್ತಲೇ ಇತ್ತು; ಆದರೆ ಮನ ವಿಲವಿಲನೆ ಒದ್ದಾಡುತ್ತಲೇ ಇದ್ದಿತು, ತನು ಚತುರ್ಭುಜನಾಗಲು ತವಕಿಸುತ್ತಲೇ ಇದ್ದಿತು. ನಾನು ಬರೆದ ಪ್ರೇಮ ಕವನಗಳೆಲ್ಲ ನನ್ನ ಜೀವನದ ಜೊತೆಗಾರ್ತಿಯನ್ನು ನೋಡಿ ಬಂದಾದ ಮೇಲೆ, ಅವಳು ನನ್ನ ಮನೆಗೆ ಬರುವವರೆಗಿನ ಅವಧಿಯಲ್ಲಿ ಬರೆದುವು: ಆಮೇಲೆ ಅವಳು ತವರಿಗೆ ಹೋದಾಗ ಬರೆದುವು.

ಮಡದಿಯೇನೋ ಮನೆಗೆ ಬಂದಳು; ಸಂತಸದ ಸುಗ್ಗಿಯನ್ನೇ ತಂದಳು. ಆದರೆ ಆ ಸಂತಸ ಅಲ್ಪಾಯುವನ್ನು ಪಡೆದುಕೊಂಡು ಬಂದಿದ್ದಿತು. ತರಬೇತಿಗಾಗಿ ಉದ್ಗೀರಕ್ಕೆ ಹೋಗಬೇಕಾಯಿತು. ನಾನು ಹಿಗ್ಗಿದೆ. ಹಿಂದೆ ಶಿವೈಕ್ಯ ಸಂಗ್ರಾಮಪ್ಪನವರಿದ್ದಾಗ ಹೋಗಿದ್ದ ಸ್ಥಳವದು; ಆಮೇಲೆ ಉಪನ್ಯಾಸಕ್ಕಾಗಿ ಹೋಗಿ ಬೆಕ್ಕಸ ಬೆರಗಾಗುವಂಥ ಸ್ವಾಗತ ಸತ್ಕಾರ ಸನ್ಮಾನಗಳನ್ನು ಪಡೆದಿದ್ದ ಸ್ಥಳವದು; ಊರ ತುಂಬ ಅಭಿಮಾನಿಗಳೂ ಹಿತಬಂಧುಗಳೂ ಇದ್ದ ಸ್ಥಳವದು. ಆದುದರಿಂದ ತಂದೆ ತಾಯಿ ತಮ್ಮ–ತಂಗಿಯನ್ನು ಹೈದರಾಬಾದಿನ ಮನೆಯಲ್ಲಿ ಬಿಟ್ಟು, ಅವರಿಗಾಗಿ ಎಲ್ಲ ವ್ಯವಸ್ಥೆ ಮಾಡಿ, ಹೆಂಡತಿ, ಅವಳ ತಾಯಿ ಪಾಪಮ್ಮ, ಒಬ್ಬ ಅಡುಗೆಯವನೊಡನೆ ಉದಗೀರಕ್ಕೆ ಹೋದೆ. ಅಲ್ಲಿ ನಿರೀಕ್ಷಿತ ಸ್ವಾಗತವೇ ದೊರೆಯಿತು. ಅಭಿನಂದನ ಸಮಾರಂಭಗಳಾದುವು. ಆದರೆ ಅತ್ತೆಯವರಿಗೆ ಮುಂದೆ ಎಂದೂ ನೆಟ್ಟಗಾಗದ ಅಸ್ವಸ್ಥತೆಯೊಂದು ತಲೆದೋರಿಬಿಟ್ಟಿತು. ಹುಟ್ಟುವ ಮುನ್ನವೇ ತಂದೆಯನ್ನು ಕಳೆದುಕೊಂಡಿದ್ದ ಗಿರಿಜೆಗೆ ತಲೆಯ ಮೇಲೆ ಆಕಾಶವೇ ಕಳಚಿಬಿದ್ದಂತೆನಿಸಿತು.



ಅವಳ ಕಣ್ಣೀರನ ಕೋಡಿ ಹರಿಯಿತು. ತಂದೆಯವರು ಧಾರವಾಡಕ್ಕೆ ಹೋಗಿ ಅವರನ್ನು ಚರಂತಿ ಮಠಕ್ಕೆ ತಲುಪಿಸಿ ಬಂದರು. ಅವರಿವರು ತರತರದ ಕತೆಗಳನ್ನು ಕಟ್ಟಿದರು. ಜನರ ಬಾಯಿ ಮುಚ್ಚಬಲ್ಲವರಾರು? ನಮ್ಮ ಪಾಲಿಗೆ ಮಾತ್ರ ವೈವಾಹಿಕ ಜೀವನದ ಆರಂಭವೇ ಶೋಕಮಯವಾಗಿ ಆಯಿತು.

ವ್ಯಥೆಯ ಕಥೆ ಇಲ್ಲಿಗೇ ಮುಗಿಯಲಿಲ್ಲ. ನಾಂದೇಡಕ್ಕೆ ನನ್ನನ್ನು ಅವ್ವಲ್ ತಾಲೂಕದಾರರ ಭೂಮಿ ದಾಖಲೆಗಳ ಸಹಾಯಕನನ್ನಾಗಿ ಕಳಿಸಿದರು. ತಹಸೀಲ್ದಾರನಾಗಿ ಹೋಗಬೇಕಿದ್ದ ನನಗೆ ಇದಾವುದೋ ಅರಿಯದ ಕೆಲಸಕ್ಕೆ ನಿಯಮಿಸಿ ಅರಿಯದ ಸ್ಥಳಕ್ಕೆ ಕಳಿಸಿದುದು ನನ್ನ ದುಮ್ಮಾನವನ್ನು ದ್ವಿಗುಣಿತಗೊಳಿಸಿತು. ಶ್ರೀ ಜಹೀರ್ ಅಹಮ್ಮದ್ ಸಾಹೇಬರನ್ನು ಭೇಟಿಯಾಗಿ ನನ್ನ ಕಳವಳವನ್ನು ತೋಡಿಕೊಂಡೆ. ಅವರು, "ದೇವರು ನಿನಗೆ ಒಳ್ಳೆಯದನ್ನೇ ಮಾಡಿರುವನೆಂದು ತಿಳಿದುಕೋ. ಇದು ಯುದ್ಧಕಾಲ, ತಹಸೀಲ್ದಾರನ ಕೇಲಸವೀಗ ಹೂವಿನ ಹಾಸಿಗೆಯೇನೂ ಅಲ್ಲ. ಹೆಜ್ಜೆ ಹೆಜ್ಜೆಗೂ ಅಪಾಯ. ಆದುದರಿಂದ ಪಾಲಿಗೆ ಬಂದುದೇ ಪಂಚಾಮೃತವೆಂದು ಇದನ್ನು ಒಪ್ಪಿಕೋ. ಮುಂದೆ ಒಳ್ಳೆಯ ಕಾಲ ಬಂದಾಗ ನಾನೇ ನಿನ್ನನ್ನು ತಹಸೀಲ್ದಾರನನ್ನಾಗಿ ತೆಗೆದುಕೊಳ್ಳುವೆ" ಎಂದು ಸಾಂತ್ವನ ನೀಡಿದರು. ಅವರ ಅಭಿಪ್ರಾಯಕ್ಕೆ ತಲೆಬಾಗದೆ ಇನ್ನೇನನ್ನು ಮಾಡಲಾಗುತ್ತಿದ್ದಿತು? ಪರಾವಲಂಬನದ ಪ್ರಥಮ ಪಾಠವದೆಂದು ಭಾವಿಸಿ ನಾಂದೇಡಕ್ಕೆ ಹೊರಡಲು ಸಿದ್ಧನಾದೆ, ಎಲ್ಲರೂ ಅಲ್ಲಿಗೆ ಹೋದೆವು. ಇರಲು ಮನೆಯೇನೋ ಚೆನ್ನಾಗಿದ್ದಿತು. ಆದರೆ ಅಲ್ಲಿಯ ಹವಾಮಾನ ಯಾರಿಗೂ ಒಗ್ಗಲಿಲ್ಲ. ಗಿರಿಜೆಗೆ ಮೈಯೆಲ್ಲ ಬೊಕ್ಕೆಗಳಾದುವು ಗಾಬರಿಯಾದೆ. ಅವಳು ಗುಣ ಹೊಂದುವಷ್ಟರಲ್ಲಿ ಅವ್ವನ ಪ್ರಕೃತಿ ಕೆಟ್ಟಿತು; ತಮ್ಮ ಬಸವರಾಜನಿಗೆ ವಿಪರೀತ ಕಜ್ಜಿ; ತಂಗಿ ಶರಣವ್ವನಿಗೆ ಇನ್ನೇನೋ. ಎಲ್ಲರನ್ನೂ ಹೈದರಾಬಾದಿಗೆ ಹಿಂದಿರುಗಿಸಿ ಉಸಿರ್ಗರೆವಷ್ಟರಲ್ಲಿ ಟಿ.ಡಿ. ಶಿವಲಿಂಗಯ್ಯನವರ ಹಿರಿಯ ಮಗಳು ಅನಸೂಯಾ ತೀರಿ ಹೋದ ಸುದ್ದಿ ಬಂದಿತು. ಗಿರಿಜೆಗೆ ಗರ ಹೊಡೆದಂತಾಯಿತು. ತಾಯಿಗೆ ಒದಗಿದ ವಿಚಿತ್ರ ಕಾಯಿಲೆಯಿಂದ ಮೊದಲೇ ವಿಷಣ್ಣಳಾಗಿದ್ದ ಅವಳಿಗೆ ಅಕ್ಕನ ಮಗಳ ಮರಣ ವಾರ್ತೆ ಬರಸಿಡಿಲಿನಂತೆರಗಿತು. ಇಬ್ಬರೂ ಕೂಡಿ ಬೆಳೆದವರು, ಕೂಡಿ ಆಡಿದವರು, ಕೂಡಿ ಕಲಿತವರು. ಮಂಚದ ಮೇಲೊರಗಿ ಬಿಕ್ಕುತ್ತ, "ನನ್ನನ್ನು ಹೇಗಾದರೂ ಕಳಿಸಿಕೊಡಿರಿ, ಕಳಿಸಿಕೊಡಿರಿ!' ಎಂದು ವಿಲಪಿಸಿದಳು. ನಾಂದೇಡ ಎಲ್ಲಿ, ಧಾರವಾಡ ಎಲ್ಲಿ? ಒಬ್ಬಳನ್ನೇ ಕಳಿಸುವುದೆಂತು? ನಾನೇ ಕರೆದುಕೊಂಡು ಹೋದೆ. ಗಿರಿಜೆಯ ಅಕ್ಕ ಸಿದ್ದಕ್ಕ, ಮಾವ ಶಿವಲಿಂಗಯ್ಯನವರು ಗಾಣ ಹಿಂಡಿ ಬಿಸುಡಿದ ಕಬ್ಬಿನ ಸಿಪ್ಪೆಯಾಗಿ ಬಿಟ್ಟಿದ್ದರು.

ನಾವೂ ಮತ್ತೆ ಮತ್ತೆ ಸಾಂತ್ವನ ಹೇಳಿ ಸಮಾಧಾನಪಡಿಸಿದೆವು. ರಜೆ ಮುಗಿವ ಮೊದಲು ನಾಂದೇಡ ಸೇರಿದೆವು.

ಅಲ್ಲಿಗೂ ನಿಲ್ಲಲಿಲ್ಲ ಕ್ರೂರಲೀಲೆ. ನಾಂದೇಡಕ್ಕೆ ತೀವ್ರ ಸ್ವರೂಪದ ಪ್ಲೇಗು ಬಂದಿತು. ಮತ್ತೆ ಸತಿಯನ್ನು ತವರು ಮನೆಗೆ ಕಳಿಸಿ ಊರ ಹೊರಗಿನ ಕುಟೀರಗಳಲ್ಲಿ ಒಂದರಲ್ಲಿ ಒಂಟಿ ಬದುಕಿಗೆ ಅಂಟಿಕೊಂಡೆ. ಎರಡು ತಿಂಗಳು ಅಕ್ಷರಶಃ ವನವಾಸ ಮುಗಿಸಿ ಮತ್ತೆ ಕರೆದುತಂದೆ. ಆಗ ಅವಳಿಗೆ ಐದನೆಯ ತಿಂಗಳು ನಡೆಯುತ್ತಿರಬೇಕೆ? ಮತ್ತೆ ಎರಡು ತಿಂಗಳುಗಳು ಕಳೆಯುತ್ತಲೇ ಹೆರಿಗೆಗೆ ಕಳಿಸಿ ಮತ್ತೆ ಹಂಗಾಮೀ ಸಂನ್ಯಾಸಾಶ್ರಮ ಸ್ವೀಕರಿಸಿದೆ. ಇದೇ ಸಮಯಕ್ಕೆ ನನ್ನ ಸಹಪಾಠಿ ಹಾಗೂ ಸ್ನೇಹಿತ ರಾಮರಾವ್ ನಾಂದೇಡ ತಾಲೂಕಿನ ತಹಸೀಲ್ದಾರರಾಗಿ ಬಂದರು. ಮದುವೆಯಾಗಿ ಮೂರೇ ತಿಂಗಳುಗಳು ಕಳೆದಿದ್ದುವು. 'ನಿನ್ನ ಭಾಬಿ ನೊಡು ಬಾ' ಎಂದು ಮನೆಗೆ ಕರೆದೊಯ್ದರು. ಬಹಳ ರೂಪವತಿಯಾದ, ಗುಣವತಿಯಾದ ಸತಿ ಸಿಕ್ಕಿದ್ದಳವರಿಗೆ. "ನನ್ನ ಭಾಬಿ ಬರುವುದರೊಳಗೆ ನಿನ್ನ ಭಾಬಿ ಹೆರಿಗೆಗೆ ಹೋದಳಲ್ಲ' ಎಂದೆ. 'ಪರವಾ ಇಲ್ಲ, ನನ್ನ ಭಾಬಿ ಬರುವವರೆಗೆ ನಿನ್ನ ಭಾಬಿಯ ಮನೆಯಲ್ಲಿ ಊಟ ಮಾಡುತ್ತಿರು' ಎಂದರವರು. 'ಇಲ್ಲ ಮಿತ್ರ ದತ್ತಾತ್ರೇಯರಾವ್ ಅವರ ಮನೆಯಲ್ಲಿ ಇದಾಗಲೇ ವ್ಯವಸ್ಥೆಯಾಗಿದೆ. ಆಗಾಗ ರುಚಿ ಬದಲಾವಣೆಗಾಗಿ ಮಾತ್ರ ಇಲ್ಲಿ ಪ್ರತ್ಯಕ್ಷನಾಗುವೆ' ಎಂದು ಉತ್ತರಿಸಿ ಹಿಂದಿರುಗಿದೆ.

## ಕ್ರೂರ ಕರಾಳ ಘಟನೆ :

ಈ ಮಾತಿಗೆ ಬಹಳ ದಿನಗಳಾಗಿರಲಿಲ್ಲ. ನೆನೆದರೆ ಇಂದಿಗೂ ಮೈ ಕಂಪಿಸುವ ಕ್ರೂರ ಕರಾಳ ಘಟನೆಯೊಂದು ನಡೆದುಹೋಯಿತು. ಅದು ಲೇವಿ ವಸೂಲಿಯೇ ದಕ್ಷತೆಯ ಮಾನದಂಡವೆನಿಸಿದ್ದ ಕಾಲ. ಅವ್ವಲ್ ತಾಲೂಕದಾರ ಷಹಬುದ್ದೀನ್ ಖಾನ ಸಾಹೇಬರು ಲೇವಿ ವಸೂಲಿಯಲ್ಲಿ ತಮ್ಮ ಜಿಲ್ಲೆ ಪ್ರಥಮ ಸ್ಥಾನ ಪಡೆಯಬೇಕೆಂಬ ಛಲ ಹೊಂದಿದ್ದವರು. ತಹಸೀಲ್ದಾರರಿಗೆಲ್ಲ ಸುತ್ತೋಲೆ, ನೆನಪೋಲೆ, ತಂತಿಗಳು ದಿನದಿನವೂ. ಅವರೆಲ್ಲ ಎಲ್ಲ ಕೆಲಸ ಬದಿಗಿರಿಸಿ ಇದೇ ಕೆಲಸದಲ್ಲಿ ಮಗ್ನರಾಗಿದ್ದರು. ಹಳ್ಳಿಗರು ತತ್ತರಿಸಿ ಹೋಗಿದ್ದರು. ಮನೆಮನೆಗಳಲ್ಲಿ ನುಗ್ಗಿ ಇದ್ದ ಬಿದ್ದ ಜೋಳ ಗೋಧಿಯನ್ನೆಲ್ಲ ಬಲಾತ್ಕಾರದಿಂದ ಕೊಂಡೊಯ್ದು ಲೇವಿ ಸಂಗ್ರಹಕ್ಕೆ ಭರ್ತಿ ಮಾಡಿಕೊಳ್ಳುವ ಪಾಶವೀ ಕೃತ್ಯಗಳಿಂದ ರೋಸಿ ಹೋಗಿದ್ದರವರು. ಆದರೂ ಬಡವನ ಸಿಟ್ಟು ದವಡೆಗೆ ಮೂಲವೆಂಬಂತೆ ಅವರ ಸಿಟ್ಟು ಅವರ ರಕ್ತವನ್ನು ಮಾತ್ರ ಸುಡುತ್ತಲಿದ್ದಿತು. ರಾಮರಾಯರೂ ಹೊಸ ಹೆಂಡತಿಯ ಮುಖಾವಲೋಕನಕ್ಕೂ ಎರವಾಗಿ ಹಗಲಿರುಳು ಹಳ್ಳಿಹಳ್ಳಿ ಸುತ್ತುತ್ತಲಿದ್ದರು. ಒಮ್ಮೆ ನಾಂದೇಡಿಗೆ



ಹಿಂದಿರುಗಿದರು–ಒಂದು ವಾರದ ತರುವಾಯ. ಅವರ ಹೆಂಡತಿಗೆ ಹಿಗ್ಗೋಹಿಗ್ಗು. ನನಗೂ ರಾತ್ರಿಯ ಊಟಕ್ಕೆ ಕರೆ ಬಂದಿತು. ಹೋದೆ ಊಟವಾಯಿತು. ಅಂದೇ ರಾತ್ರಿ ಗಾಡಿಗೆ ಮತ್ತೆ ಪ್ರಯಾಣಕ್ಕೆ ಸಿದ್ಧನಾದ ನನ್ನ ಗೆಳೆಯ. ಭಾಬಿ ಬೇಡವೆಂದಳು, ನಾನೂ ಬೇಡವೆಂದೆ, ಡಾ॥ ಕನಕಯ್ಯ ಕೂಡ ಬೇಡವೆಂದರು. ನನ್ನ ಗೆಳೆಯ ಹೋಗಿಯೇ ತೀರುವೆನೆಂದು ಹಟ ಹಿಡಿದ. 'ಏನು ಹೀಗೆ ಹುಡುಗರಂತೆ ಹಟ ಮಾಡಿದರೆ! ನಾಳೆ ಬೆಳಿಗ್ಗೆ ಹೋದರೆ ಆಕಾಶ ಹರಿದು ಬೀಳುವುದಿಲ್ಲ; ಇಂದು ಅಮಾವಾಸ್ಯೆ, ಹೋಗಬೇಡ' ಎಂದು ಸಿಟ್ಟಿಗೆದ್ದು ಕೂಗಿದೆ. ಅವರೂ ಅಷ್ಟೇ ಸಿಟ್ಟಿನಿಂದ, 'ನಿನ್ನ ಕುರುಡು ನಂಬಿಕೆಯನ್ನು ಸುಳ್ಳುಗೊಳಿಸಲಿಕ್ಕಾದರೂ ಈ ಅಮಾವಾಸ್ಯೆ ರಾತ್ರಿಯಲ್ಲಿಯೇ ಹೋಗಿ ಬರುವೆ!' ಎಂದು ಕೂಗಿದರು. ನನಗೆ ಅಮಾವಾಸ್ಯೆಯ ಪ್ರಯಾಣ ಅಪಾಯಕಾರಿಯೆಂಬ ಕುರುಡು ನಂಬಿಕೆಯೇನೂ ಇರಲಿಲ್ಲ; ಆದರೆ ಇದರಿಂದಲಾದರೂ ನನ್ನ ಗೆಳೆಯ ತನ್ನ ನಿರ್ಧಾರವನ್ನು ಬದಲಿಸಲೆಂದು ಕೊನೆಯ ಅಸ್ತ್ರವನ್ನಾಗಿ ಅದನ್ನು ಉಪಯೋಗಿಸಿದ್ದೆ. ಆ ಅಸ್ತ್ರವೂ ಹುಸಿಯಾಗಲು ತೆಪ್ಪಗಾದೆ. ಟಾಂಗಾ ಬಂದಿತು. ನನ್ನ ಗೆಳೆಯನದನ್ನೇರಲು ಹೋಗಿ ಬಿಟ್ಟುಬಿಟ್ಟ. 'ಯಾಕೋ ಅಪಶುಕುನವಾಯಿತು ರಾಮೂ, ಈಗಲಾದರೂ ಪ್ರಯಾಣ ನಿಲ್ಲಿಸು' ಎಂದೆ. 'ನಿನ್ನ ಶಕುನಶಾಸ್ತ್ರವನ್ನು ಸುಳ್ಳುಗೊಳಿಸಲೆಂದೇ ಹೊರಟಿದ್ದೇನೆ ನಾನು' ಎಂದು ಎಟ್ಟೆ ಉತ್ತರವನ್ನೇ ಕೊಟ್ಟು ಟಾಂಗಾ ಏರಿ 'ಚಲೋ' ಎಂದ ನನ್ನ ಗೆಳೆಯ. ಟಾಂಗಾ ಹೊರಟಿತು, ಭಾಬಿಗೆ ಸಮಾಧಾನ ಹೇಳಿ ಮನೆಗೆ ಮರಳಿದೆ.

ಮರುದಿನ ಆಫೀಸಿನ ಕೆಲಸ ಮುಗಿಸಿ ಸಂಜೆ ಕ್ಲಬ್ಬಿಗೆ ಹೋದೆ. ಕ್ಲಬ್ಬಿಗೆ ಹೋಗದಿದ್ದವರನ್ನು ಸಂಶಯದ ದೃಷ್ಟಿಯಿಂದ ನೋಡುತ್ತಿದ್ದರು ಮೇಲಧಿಕಾರಿಗಳು. ಆಫೀಸಿನಲ್ಲಿ ಸಲಾಮು ಹೊಡೆಸಿಕೊಳ್ಳುವುದು ಸಾಲದೆ ಕ್ಲಬ್ಬಿನಲ್ಲೊಮ್ಮೆ ಹೊಡೆಸಿಕೊಂಡಾಗಲೇ ಅವರಿಗೆ ಚೆನ್ನಾಗಿ ನಿದ್ದೆ ಬರುತ್ತಿತ್ತೇನೋ! ಅಲ್ಲಿ ಎಲೆಗಳನ್ನು ಆಡುವ ನೆಪದಲ್ಲಿ ಜೂಜಾಡುವವರು ಕೆಲವರಾದರೆ ತಮ್ಮ ಆತ್ಮಚರಿತ್ರೆಯ ಪುಟಗಳನ್ನು ಓದಿ ಹೇಳಿ ಕೆಳಗಿನವರಿಂದ ಸೈ ಎನ್ನಿಸಿಕೊಳ್ಳುವ ಮೇಲಧಿಕಾರಿಗಳು ಕೆಲವರು; ತಾವು ಪಡೆದ ನಿಜಾಮರ, ನವಾಬರ, ಗ್ರಿಗ್ಸನ್, ಲಿಲ್ಲಿ ಸಾಹೇಬರ, ಇತ್ತಿಹಾದಉಲ್–ಮುಸ್ಲಿಮೀನ್ ಪಕ್ಷದ ಅಧ್ಯಕ್ಷ ಬಹಾದ್ದುರ್‌ಯಾರ್ ಜಂಗರ, ಇತರ ಪರಮಗಣ್ಯರ ಸಂದರ್ಶಗಳನ್ನು ಸೊಗಸನ್ನು ಸವಿನುಡಿಗಳಲ್ಲಿ ಬಣ್ಣಿಸಿ ಹೇಳುವವರು ಕೆಲವರಾದರೆ, ತಾವು ಪಾಲುಗೊಂಡ ಮಹಾ ಮಹಾ ಮೇಜವಾನಿಗಳ ಭಕ್ಷ್ಯ ಭೋಜ್ಯಗಳನ್ನು ಆಢ್ಯತೆಯೊಡನೆ ವಿವರವಾಗಿ ಬಿತ್ತರಿಸಿ ಕೇಳುವವರ ಬಾಯಿಗಳಲ್ಲಿ ನೀರೂರಿಸುವವರು ಇನ್ನು ಕೆಲವರು; 'ಚಾರಮೀನಾರದ ಬಳಿ ಷಾಜೀರಾ ಬಹಳ ಚೆನ್ನಾಗಿರುವುದು

ಸಿಕ್ಕುತ್ತದೆ, ಮುದಲಿಯಾರನ ಅಂಗಡಿಯಲ್ಲಿ ಸಿಗಾರ್ ಬಹಳ ಒಳ್ಳೆಯದು ದೊರೆಯುತ್ತದೆ, ಷೇರವಾನಿ ಹೊಲಿಯುವುದರಲ್ಲಿ ಇಂತಿಂಥವನು ಎತ್ತಿದ ಕೈ, ಕುರ್ತಾ ಹೊಲಿಸಿದರೆ ಇಂತಿಂಥವನಲ್ಲಿಯೇ ಹೊಲಿಸಬೇಕು, 'ಅತ್ತರ್' ಎಂದರೆ ಇಂಥವರ ಹತ್ತಿರ ದೊರೆವ ಅತ್ತರೇ–ಎಂದು ಎಂದೂ ಮುಗಿಯದ ಮಾತುಗಳಲ್ಲಿ ಮಗ್ನರಾಗಿರುವವರು ಇನ್ನು ಹಲವರು. ಅಲ್ಲಿ ಒಂದು ಮೂಲೆ 'ಕವಿಗಳ ಕೋನ' ಎಂದು ಹೆಸರಾಗಿದ್ದಿತು. ನಾನು ಹೆಚ್ಚಾಗಿ ಹೊತ್ತುಗಳೆಯುತ್ತಿದ್ದುದು ಅಲ್ಲಿಯೇ. ಅಲ್ಲಿ ನನ್ನಂಥ ಇನ್ನು ನಾಲ್ವರು ತಾವು ರಚಿಸಿದ ಕವಿತೆಗಳನ್ನು ಭಾವಪರವಶರಾಗಿ ಹೇಳುತ್ತಿದ್ದರು; ತಾವು ರಚಿಸಿದ ಕವಿತೆಗಳು ತೀರಿದಾಗ ಮೀರ್, ಮೋಮಿನ್, ಗಾಲಿಬ್, ಇಕಬಾಲ್, ಜಿಗರ್, ಜೋಷ್ ಮೊದಲಾದವರ ಗಜಲುಗಳಿಂದ, ಕವಿತೆಗಳಿಂದ ತಮಗೆ ಪ್ರಿಯವಾದ ಸಾಲುಗಳನ್ನು ಉದ್ಧರಿಸಿ ಸಂತೋಷಿಸುತ್ತಿದ್ದರು; ನನಗೂ ನನ್ನ ಕವಿತೆಗಳನ್ನು, ಕನ್ನಡ ಕವಿಗಳ ಶ್ರೇಷ್ಠ ರಚನೆಗಳನ್ನು ಹೇಳಿ ಅವುಗಳ ಉರ್ದೂ ಅನುವಾದಗಳನ್ನು ಕೇಳಿಸುವ ಅವಕಾಶ ಕೊಡುತ್ತಿದ್ದರು. ಎಲ್ಲರೂ ಎದ್ದು ಹೋದ ಮೇಲೂ ಕೆಲವು ಸಲ 'ಕವಿಗಳ ಕೋನ' ತುಂಬಿರುತ್ತಿದ್ದಿತು.

ಅಂದು ಕ್ಲಬ್ಬಿನಲ್ಲಿ ನಾನು ನಿರ್ಲಿಪ್ತನಾಗಿ ಕುಳಿತುಬಿಟ್ಟಿದ್ದೆ. ಮನವನ್ನೆಲ್ಲ ಮುನ್ನಿನರಾತ್ರಿ ನಡೆದ ಘಟನೆಯೇ ತುಂಬಿ ಬಿಟ್ಟಿದ್ದಿತು. ರಾಮರಾಯರ ಹೋಗಿಯೇ ತೀರುವೆನೆಂಬ ಹಟ, ಅವರ ಹೆಂಡತಿಯ ಕಂಬನಿದುಂಬಿದ ಕಣ್ಣುಗಳು, ವಿಹ್ವಲಿತ ಮುಖ, ನನ್ನ ನಿಷ್ಫಲ ಪ್ರಯತ್ನಗಳು ಮತ್ತೆ ಮತ್ತೆ ಚಿತ್ತವನ್ನು ಕಲಕಿ ಮರೆಯಾಗುತ್ತಿದ್ದುವು. 'ರಾಮರಾವ್ ಬಹಳ ಸ್ನೇಹಶೀಲ, ಸಹನಶೀಲ–ನಿನ್ನೆ ಅದೇಕೆ ಎಲ್ಲರ ಮಾತುಗಳನ್ನು ಕಿವಿಯಲ್ಲಿ ಹಾಕಿಕೊಳ್ಳದೆ ಹೋಗಿಬಿಟ್ಟ? ಯಾವ ಶಕ್ತಿ ಅವನನ್ನು ಇರಗೊಡದಂತೆ ಎಳೆದೊಯ್ಯಿತು? ಸೇವಾಜೀವನದ ಅತಂತ್ರತೆಯೆನಿತು, ಅಸಹಾಯ ಕತೆಯೆಷ್ಟು! ಬೇರೆ ತಹಸಿಲ್ದಾರರಿಲ್ಲವೆ? ಅವರು ಒಂದು ರಾತ್ರಿ ಸಹ ಹೊಸ ಹೆಂಡತಿಯೊಡನೆ ಕಳೆಯದೆ ಅಮಾವಾಸ್ಯೆಯ ರಾತ್ರಿಯಲ್ಲಿಯೇ ಲೇವಿ ವಸೂಲಿಗೆ ಹೋಗುವರೆ? ನನ್ನ ಗೆಳೆಯ ಸೇವಾಜೀವನಕ್ಕಿನ್ನೂ ಹೊಸಬ. ಬಹುಶಃ ಈ ಹೊಸ ತಹಸಿಲ್ದಾರ ಹಳೆಯರಿಗಿಂತ ಹೆಚ್ಚು ಸಮರ್ಥನೆಂಬ ಹೆಸರು ಗಳಿಸಲು ಹೀಗೆ ಬಾಯಿ ಸುಟ್ಟ ಬೆಕ್ಕಿನಂತೆ ತಿರುಗುತ್ತಿದ್ದಾನೆ. ಅವನಿಗೆ ಅಪಾಯವಾವುದೂ ತಟ್ಟದಿರಲಿ. ಅವನು ಹೋದ ಕಾರ್ಯದಲ್ಲಿ ಸಫಲನಾಗಿ ಬೇಗ ಬರಲಿ, ಭಾಬಿಗೆ ಹಿಗ್ಗನ್ನು ತರಲಿ!

**ತಹಸಿಲ್ದಾರನ ಕೊಲೆ :**

ಹೀಗೆ ಏನೇನೋ ಗೇನಿಸುತ್ತ ಮಲಗಿದೆ. ಸರಿಯಾಗಿ ನಿದ್ದೆ ಹತ್ತಲೇ ಇಲ್ಲ. ಏನೇನೋ ಕನಸು, ಕನವರಿಕೆಗಳು. ಬೆಳಗಿನ ಜಾವದಲ್ಲಿ ಯಾರೋ ಜೋರಾಗಿ



ಕದ ತಟ್ಟಿದರು. ಕಣ್ಣುಜ್ಜಿಕೊಳ್ಳುತ್ತ ಎದ್ದು ಬಾಗಿಲ ತೆರೆದೆ. ರಾಮರಾಯರ ಚಪರಾಸಿ! ಎದೆ ಧಸ್ಸೆಂದಿತು. 'ಏನು ಸಮಾಚಾರ?' ಎಂದು ಕೇಳಿದೆ. 'ಬಹಳ ಕೆಟ್ಟ ಸುದ್ದಿ ಸಾಹೇಬರೆ, ಹೇಳಲು, ಹೇಳಲು...' ಎಂದು ಬಿಕ್ಕಿ ಬಿಕ್ಕಿ ಅಳತೊಡಗಿದನವ. ಮತ್ತೆ ಮತ್ತೆ ಕೇಳಿದ ಮೇಲೆ ಕಷ್ಟದಿಂದ ಉಸಿರಿದ–' ನಮ್ಮ ಸಾಹೇಬರ ಕೊಲೆಯಾಗಿದೆ!'. ಲಗುಬಗೆಯಿಂದ ಬಟ್ಟೆ ತೊಟ್ಟು ರಾಮರಾಯರ ಮನೆಗೆ ಧಾವಿಸಿದೆ. ಭಾಬಿ ನೆಲದ ಮೇಲೆ ಹೊರಳಾಡುತ್ತ ಭೋರಾಡಿ ರೋರಾಡಿ ರೋದಿಸುತ್ತಿದ್ದಳು. ಪತಿಯ ಶವ ನಾಂದೇಡಕ್ಕೆ ಹೊರಟಿದೆಯೆಂಬ ಹೃದಯಭೇದಕ ವಾರ್ತೆಯಾಕೆಗೆ ತಲುಪಿದ್ದಿತು! ಭಾಬಿಯೊಡನೆ ನಿಲ್ದಾಣಕ್ಕೆ ಹೋಗಿ ಮರಣೋನ್ಮುಖನಾಗಿದ್ದ ಅವನನ್ನು ಮೊದಲು ಆಸ್ಪತ್ರೆಗೆ, ಅಲ್ಲಿ ಅಸು ಉಳಿಸುವುದು ಸಾಧ್ಯವಾಗದಿರಲು ಅವನ ಶವವನ್ನು ಅವನ ಮನೆಗೆ ಸಾಗಿಸಿದೆ. ಎರಡು ದಿನಗಳ ಹಿಂದೆ ಹಿಗ್ಗಿನ ಬುಗ್ಗೆ ಪುಟಿಯುತ್ತಿದ್ದ ಆ ಮನೆಯಲ್ಲಿ ಗಂಡನ ಸುಖವನ್ನು ಮೂರೇ ತಿಂಗಳು ಪಡೆದು ವಿಧವೆಯಾಗಿದ್ದ ಸಾಧ್ವಿಯೊಬ್ಬಳ ಕ್ರಂದನದ ಕಾರಂಜಿ ಪುಟಿಯುತ್ತಿತ್ತು! ಎಲ್ಲರೂ ಮನೆಗೆ ಬಂದು ಹೋದರು, ರಾಮರಾವ್ ಮರಳಿ ಬರುವಂತಿಲ್ಲ! ಇನ್ನು ಈ ಸಾಧ್ವಿಗೆ ಆಜೀವ ಶಿಕ್ಷೆ ಅವಳ ಉಳಿದ ಜೀವನ! ಜಹೀರ್ ಅಹಮ್ಮದ್ ಸಾಹೇಬರು ಹೇಳಿದುದು ನಿಜ: ದೇವರೇ ಈ ತಹಸಿಲ್ದಾರಿಯಿಂದ ಪಾರು ಮಾಡಿದನು ನನ್ನನ್ನು! ಎಂದುಕೊಂಡೆ ನಾನು.

ಬಹಳ ನಿರ್ದಯತೆಯೊಡನೆ ಲೇವಿ ವಸೂಲಿ ನಡೆಸಿದುದೇ ನನ್ನ ಗೆಳೆಯನ ಕೊಲೆಗೆ ಕಾರಣವಾಗಿದ್ದಿತು. ನಾಂದೇಡದಿಂದ ಹೋದ ಮರುದಿನ ನಾಲ್ಕಾರು ಹಳ್ಳಿಗಳಲ್ಲಿ ಕಠೋರವಾಗಿ ವಸೂಲಿ ಪ್ರಾರಂಭಿಸಿ ಅಲ್ಲಿಂದಲೂ ರಾತ್ರಿಯಲ್ಲಿಯೇ ಬೇರೂರಿಗೆ ಹೊರಟನಾತ. ಗಾಳಿಯಲ್ಲಿ ರೈತರ ರೊಚ್ಚಿನ ವಾಸನೆಯನ್ನು ಮೂಸಿಸಿದ್ದ ಗ್ರಾಮಾಧಿಕಾರಿಗಳು ಅಲ್ಲಿಯೂ ತಡೆದರು. ಅವರ ಮಾತಿಗೂ ಕಿವಿಗೊಡದೆ ಮುಂದೆ ಸಾಗಿದ. ಮಧ್ಯರಾತ್ರಿಯಲ್ಲಿ ಎತ್ತಿನಬಂಡಿ ಹಳ್ಳವೊಂದನ್ನು ದಾಟುತ್ತಲಿದ್ದಾಗ ಸೈರಣೆ ಕಳೆದುಕೊಂಡಿದ್ದ ರೈತರ ಕೊಡಲಿಗೆ ಆಹುತಿಯಾದ. ಷಹಾಬುದ್ದೀನ ಖಾನರು ಕೊಡ ಕೊಡ ಮೊಸಳೆ ಕಣ್ಣೀರು ಸುರಿಸಿದರು. 'ನನ್ನ ಮಗ ಸತ್ತ' ಎಂದು ಹಲುಬಿದರು ಉಳಿದ ಅಧಿಕಾರಿಗಳೂ ಮರ ಮರ ಮರುಗಿದರು. ಆದರೆ ಭಾಬಿಗೆ ಆಕೆಯ ಪತಿಯನ್ನು ತಂದುಕೊಡುವವರಾರು? ಪತಿಯ ಅಣ್ಣ ಶೇಷಗಿರಿರಾಯರು ಬಂದರು, ತಮ್ಮನ ಶವದ ಮೇಲೆ ಕಣ್ಣೀರು ಸುರಿಸಿ ತಮ್ಮನ ಕುಂಕುಮ ಭಾಗ್ಯ ಕಳೆದುಕೊಂಡ, ಮಂಗಳಸೂತ್ರ ಹರಿದುಕೊಂಡ ಹೆಂಡತಿಯನ್ನು ಕರೆದೊಯ್ದರು! ನಾನು ನಿಂತಲ್ಲೇ ಕಂಬನಿಯ ಕಾಣಿಕೆ ಸಲ್ಲಿಸಿ ಮನೆಗೆ ಬಂದೆ. ಕೆಲವು ದಿನ ನನಗೆ

ಎಲ್ಲಿ ಹೋದರಲ್ಲಿ ಸಾವೇ ತನ್ನ ಶೀತಲಸ್ಪರ್ಶವನ್ನಿತ್ತು ನನ್ನ ಮೈಯಲ್ಲಿ ರಕ್ತ ಹೆಪ್ಪುಗಟ್ಟುವಂತೆ ಮಾಡುತ್ತಿತ್ತು. ಹಸುಗೂಸುಗಳ ಹಸನ್ಮೂಖಗಳ ಹಸನ್ಮುಖಗಳಲ್ಲಿ, ಪ್ರೇಮಿ ಪ್ರೇಯಸಿಯರ ಮಾದಕಲೋಚನಗಳಲ್ಲಿ, ವಯಸ್ಕರ ಇನ್ನೂ ಬಾಡದ ಗಲ್ಲಗಳಲ್ಲಿ–ಎಲ್ಲೆಡೆಯಲ್ಲಿ ಹೊರಗಿನ ಹೊಳಪಿನ ಹಿಂದೆ ಸಾವಿನ ಕರಿನೆರಳು ಕಾಣಿಸತೊಡಗಿತು ನನಗೆ! 'ಸಾವು' ಎಂಬುದು ಎಂದೋ ಆಗಂತುಕವಾಗಿ ಆಗಮಿಸುವ ಅನಿಷ್ಟ ಅತಿಥಿಯೇನಲ್ಲ–ನಮ್ಮ ಹುಟ್ಟಿನೊಡನೆಯೇ ನಮ್ಮೊಡನೆಯೇ ಹುಟ್ಟಿ, ನಮ್ಮೊಡನೆಯೇ ಬೆಳೆಯುತ್ತ, ನಿಮಿಷ ನಿಮಿಷಕ್ಕೂ ಒಂದೊಂದು ಹೆಜ್ಜೆಯಂತೆ ನಮ್ಮನ್ನು ಮಸಣಕ್ಕೆ ಹತ್ತಿರವಾಗಿಸುತ್ತ ಹೋಗುವ ಸಹಚರನೆಂಬ ಭಾವನೆ ಬೆಳೆಯಿತು ನನ್ನಲ್ಲಿ. ಹುಟ್ಟಿದವರು ಸತ್ತ ಮೇಲೆ ಸ್ವರ್ಗಕ್ಕೆ ಹೋಗುವರೋ, ನರಕಕ್ಕೆ ಹೋಗುವರೋ ಗೊತ್ತಿಲ್ಲ. ಆದರೆ ಎಲ್ಲರೂ ಮಸಣಕ್ಕೆ ಹೋಗುವರೆಂಬುದಂತೂ ನಿಶ್ಚಿತವಾದುದು. ಆದುದರಿಂದ ಸಾವಿನೊಡನೆ ಸೆಣಸುವುದಕ್ಕಿಂತಲೂ ಸರಸವಾಡುವುದೇ ಲೇಸೆನ್ನಿಸಿತು.

ಗೆಳೆಯನ ಮರಣ ಇನ್ನೊಂದು ಅನಿರೀಕ್ಷಿತ ಇರುಕಿಗೆ ಸಿಕ್ಕಿಸಿತು ನನ್ನನ್ನು. ಅವರ ಕೊಲೆಯ ಬಗ್ಗೆ ವಿಶೇಷ ವರದಿಯನ್ನು ಕೇಳಿದರು ಕಂದಾಯ ಮಂತ್ರಿಗಳು. ಗ್ರಿಗ್ಸನ್ ವ್ಯಾಸಂಗಪ್ರಿಯರು, ಗಿರಿಜನರ ವಿಷಯಗಳಲ್ಲಿ ಅತೀವ ಆಸಕ್ತರು, ಬಿಗಿಯಾದ ಆಡಳಿತಕ್ಕೆ ಹೆಸರಾದವರು. ಅವರಿಗೆ ಮೆಚ್ಚಿಗೆಯಾಗುವಂತೆ ವರದಿ ಬರೆಯ–ಬಲ್ಲವರಾರು, ನಾಂದೇಡದಲ್ಲಿ? ಉರ್ದೂ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಮಾಧ್ಯಮವಾಗಿದ್ದುದರಿಂದ ಇಂಗ್ಲೀಷ್ ಪರಿಣತಿಗೆ ಅಲ್ಲಿ ಆಸ್ಪದವಿರಲಿಲ್ಲ. ಯಾರೂ ಹೇಳಿದರೋ ಏನೋ–ನಾನು ಇಂಗ್ಲೀಷ್ ಚೆನ್ನಾಗಿ ಬರೆಯಬಲ್ಲೆನೆಂಬುದು ಷಹಾಬುದ್ದೀನ್ ಖಾನ್ ಸಾಹೇಬರಿಗೆ ಗೊತ್ತಾಯಿತು ಕರೆಸಿದರು ಹೋದೆ. ವರದಿ ಬರೆದುಕೊಟ್ಟೆ. ಅದನ್ನು ಪ್ರಶಂಸಿಸಿ ಪತ್ರ ಬಂದಿತು ಹೈದರಾಬಾದಿನಿಂದ. ಸರಿ ಅಂದಿನಿಂದ ಅವರ 'ಭೂತ ಬರಹಗಾರ' (ghost writer) ಆಗಿಬಿಟ್ಟೆ. ಇಂಗ್ಲೀಷಿನಲ್ಲಿ ಹೈದರಾಬಾದಿಗೆ ಹೋಗುವುದೇನೇ ಇರಲಿ, ನಾನೇ ಬರೆಯಬೇಕದನ್ನು, ನಾನೆಲ್ಲಿಗಾದರೂ ಸರಕಾರೀ ಕೆಲಸದ ಮೇಲೆ ಹೋದರೆ, ನಾನು ಬರುವವರೆಗೆ ಇಂಗ್ಲೀಷ್ ಕರಡುಗಳು ಕಾದಿರುತ್ತಿದ್ದುವು. ಯಾವ ಘಳಿಗೆಯಲ್ಲಿ ಭೂತ ಬರಹಗಾರನಾದೆನೋ. ಮುಂದೆ ಅನೇಕರಿಗೆ ಗೋಸ್ಟ್ ರೈಟರ್‌ನಾಗ–ಬೇಕಾಯಿತು ನಾನು! ನಾನು ಅನ್ಯರಿಗಾಗಿ ಬರೆದುದೇ ಬೆಟ್ಟದಷ್ಟಾಗುವುದೇನೋ! ಸೇವಾ ಜೀವನದ ಒತ್ತಡಗಳಿಗೆ ಸಿಲುಕಿ ಬರೆದೆ; ಕನ್ನಡದ ಚಳವಳಿಗೆ ಧುಮುಕಿದ ಕಾರಣ ಬರೆದೆ; ಹಳ್ಳಿಗರ ಹಿತ ಸಾಧಿಸಿದರೆ ಸಾಕೆಂದು ಬರೆದೆ; ದಾಕ್ಷಿಣ್ಯಕ್ಕೆ ಬಲಿಯಾಗಿ ಬರೆದೆ; ದುರ್ಜನರ ವಿರೋಧ ಬೇಡವೆಂದು ಬರೆದೆ; ಅಂತೂ ಬರೆದೇ ಬರೆದೆ. ನನ್ನ ಸ್ವಂತದ ಬರವಣಿಗೆ ಬರಡಾಗುವಷ್ಟು, ಬರೆಯುವುದೇ ಬೇಜಾರೆನ್ನಿಸುವಷ್ಟು ಬರೆದೆ!



ಹೀಗೆ ಬರೆದುದರಲ್ಲಿ ಭಾಷಣಗಳಿವೆ, ಶುಭ ಸಂದೇಶಗಳಿವೆ, ಮುನ್ನುಡಿಗಳಿವೆ, ಮಾನವ ಪತ್ರಗಳಿವೆ, ಸರಕಾರೀ ಖಾಸಗೀ ಪತ್ರಗಳಿವೆ, ಅರ್ಜಿಗಳಿವೆ, ಹೇಳಿಕೆಗಳಿವೆ, ಹೇಳಿಕೆಗಳಿಗೆ ಉತ್ತರಗಳಿವೆ–ಏನೇನು ಇವೆ, ಏನೇನು ಇಲ್ಲ? ಬರೆಯಲು ಕಲಿತ ತಪ್ಪಿಗಾಗಿ, ಪರಾಧೀನನಾಗಲು ಒಪ್ಪಿದ ತಪ್ಪಿಗಾಗಿ ಸಹಿಸಬೇಕಾಯಿತು ಇದನೆಲ್ಲ! ಆಗ ಇದನ್ನು ಮಾಡಿದೆನೆಂದು ಹೇಳಿಕೊಳ್ಳುವಂತೆಯೂ ಇರಲಿಲ್ಲ!

## ಲೇವಿ ವಸೂಲಿಯ ಕಷ್ಟ :

ಹೀಗೆ ಕೆಲವೇ ದಿನಗಳು ಕಳೆದಿದ್ದುವು. ನಾಂದೇಡ ತಾಲೂಕಿನ ರೈತರು ಜುಲುಮೆಯಿಂದ ಲೇವಿ ವಸೂಲ್ಮಾಡಲು ಹೋದ ತಹಸೀಲ್ದಾರರ ತಲೆಯನ್ನೇ ಬಲಿಕೊಂಡರೆಂಬ ಕೋಲಾಹಲಕಾರಕ ವಾರ್ತೆಯು ಜಿಲ್ಲೆಯ ಹಳ್ಳಿಗಳಲ್ಲೆಲ್ಲ ಹರಡಿ ಜಿಲ್ಲೆಯ ಎಲ್ಲೆಡೆಗಳಲ್ಲಿಯೂ ಲೇವಿ ವಸೂಲಿಗೆ ಲಕ್ವಾ ಹೊಡೆದಿದ್ದಿತು. ಹದ್‌ಗಾಂವ್ ತಾಲೂಕಿನ ಮೂವತ್ತು ಹಳ್ಳಿಗಳು ಯಾರು ಬಂದರೂ ಲೇವಿ ಕೊಡುವುದಿಲ್ಲವೆಂದು ಘಂಟಾಘೋಷವಾಗಿ, ಖಂಡತುಂಡಾಗಿ ಸಾರಿಬಿಟ್ಟಿದ್ದುವು. ಆಗ ಆ ತಾಲೂಕಿನ ತಹಸಿಲ್ದಾರರಾಗಿದ್ದ ಸಾಹೇಬರು ಲೇವಿ ವಸೂಲಿಯಲ್ಲಿಯೇ ಹೆಸರು ಗಳಿಸಿ ಆ ಸ್ಥಾನಕ್ಕೇರಿದವರಾಗಿದ್ದರು. ಅವರ 'ಕುರ್ಬಾನಿ' ದೂರವಿಲ್ಲವೆಂದು ಜನರು ಮಾತನಾಡಿಕೊಳ್ಳ ತೊಡಗಿದ್ದರಂತೆ. ಸಿಟ್ಟಿಗೆದ್ದ ಷಹಾಬುದ್ದೀನ್ ಖಾನ್ ಸಾಹೇಬರು ಅಧಿಕಾರಿಗಳ ತುರ್ತು ಸಭೆಯಲ್ಲಿ ಗರ್ಜಿಸಿದರು: 'ನನ್ನ ಜಿಲ್ಲೆಯಲ್ಲಿ ಈ ಹಳ್ಳಿಗಳಿಗೆ ಹೋಗಿ ಲೇವಿ ವಸೂಲ್ಮಾಡುವ ಖಂಬೀರರು ಯಾರಾದರೂ ಇರುವರೆ? ಇದ್ದರೆ ಎದ್ದೇಳಲಿ!"

ಯಾರೂ ಏಳಲಿಲ್ಲ, ತಗ್ಗಿಸಿದ ತಲೆಯನ್ನು ಮೇಲೆತ್ತಲಿಲ್ಲ. ಯಾರಿಗೆ ಧೈರ್ಯ ಬರಬೇಕು–ಇನ್ನೂ ಎಲ್ಲರ ನೆನಪಿನಲ್ಲಿ ನಿಂತು ವಿತಂಡ ತಾಂಡವನ್ನಾಡುತ್ತಲಿದ್ದ ರಾಮರಾಯರ ಘೋರಹತ್ಯೆಯ ಹಿನ್ನೆಲೆಯಲ್ಲಿ? ಅವ್ವಲ್ ತಾಲೂಕದಾರರು ಅಬ್ಬರಿಸಿದರು: "ಯಾರಿಗೂ ಧೈರ್ಯವಿಲ್ಲ. ಎಲ್ಲರೂ ಹೇಡಿಗಳು! ಸಮಗ್ರ ಸರಕಾರಕ್ಕೇ ಸವಾಲೊಡ್ಡಿ ನಿಂತಿದ್ದಾರೆ ಕೆಲವು ಹಳ್ಳಿಯ ಹುಂಬರು! ಅವರನ್ನು ಬಗ್ಗು ಬಡಿಯಲು ಇಲ್ಲಿ ಒಬ್ಬ ಧೀರನೂ ಇಲ್ಲ! ಷರಮ್ ಕೀ ಬಾತ್ ಹೈ!"

ನಾನು ಎದ್ದು ಹೇಳಿದೆ: "ನನಗೆ ನಾನು ಕೇಳುವ ಅಧಿಕಾರವನ್ನಿತ್ತರೆ ನಾನೀ ಕಾರ್ಯ ಮಾಡಿ ಬರಬಲ್ಲೆ!" ಎಲ್ಲರೂ ಚಕಿತರಾದರು. "ಇವನಿಗೆ ವಿಧಿ ಕಾಡುತ್ತಿದೆ" ಎಂದರು. ಕೆಲವರು ತಮ್ಮತಮ್ಮೊಳಗೆ, "ಪಾಪ, ಇವನೂ ರಾಮರಾಯರ ದಾರಿಯನ್ನೇ ಹಿಡಿಯುವನು" ಎಂದುಕೊಂಡರು ಇನ್ನು ಕೆಲವರು! ಅವ್ವಲ್ ತಾಲೂಕದಾರರು

ಉಬ್ಬಿ ಕೇಳಿದರು, "ಹೇಳು, ಯಾವ ಅಧಿಕಾರ ಬೇಕು? ಗೋಲಿಬಾರಿನ ಅಧಿಕಾರವೊ, ದಸ್ತಗಿರಿಯ ಅಧಿಕಾರವೊ, ಮನೆ ಮಾರುಗಳ ಹರಾಜಿನ ಅಧಿಕಾರವೊ? ಯಾವ ಅಧಿಕಾರ ಬೇಡಿದರು ಕೊಡುತ್ತೇನೆ. ಬೇಗ ಹೇಳು!"

ನಾನಂದೆ: "ನನಗೆ ಇವಾವ ಅಧಿಕಾರಗಳು ಬೇಕಿಲ್ಲ; ಪೋಲೀಸ್ ಸಹಾಯವೂ ಬೇಕಿಲ್ಲ; ನನ್ನೊಡನೆ ಒಬ್ಬ ಗಿರ್ದಾವರ್, ಒಬ್ಬ ಚಪರಾಸಿ ಇದ್ದರೆ ಸಾಕು. ಆದರೆ ಒಂದು ಅಧಿಕಾರ ಮಾತ್ರ ಬೇಕು; ನನ್ನ ಜೊತೆಗೆ ರ್‍ಯಾಷನ್ ಕಾರ್ಡು (ಪಡಿತರ ಚೀಟಿ)ಗಳನ್ನು ಒಯ್ಯಗೊಡಿರಿ; ಯಾವುದೇ ಹಳ್ಳಿಯಲ್ಲಿ, ನನ್ನ ಸ್ವಂತ ತನಿಖೆಯ ತರುವಾಯ, ಪಡಿತರ ಪಡೆಯಲು ಪಾತ್ರರಾದ ನಿರ್ಗತಿಕರು ಹೊರಟರೆ ಅವರಿಗೆ ಪಡಿತರ ಚೀಟಿಗಳನ್ನು ಸ್ಥಳದಲ್ಲಿಯೇ ಹಂಚುವ ಅಧಿಕಾರ ಕೊಡಿರಿ: ನಾನು ಕೊಟ್ಟ ಪಡಿತರ ಚೀಟಿಗಳನ್ನು ಮಾನ್ಯ ಮಾಡುವಂತೆ ಆ ಭಾಗದ ಎಲ್ಲ ಪಡಿತರ ಅಂಗಡಿಗಳಿಗೆ ಆದೇಶ ಕಳಿಸಿರಿ. ಇಷ್ಟೇ ಸಾಕು."

ಅವ್ವಲ್ ತಾಲೂಕದಾರರೆಂದರು, "ಬಹುತ್ ಅಚ್ಛಾ, ಒಂದು ಕಲ್ಲಿನಿಂದ ಎರಡು ಪಕ್ಷಿಗಳನ್ನು ಹೊಡೆದಂತಿದು. ನಿಜವಾಗಿ ಅಗತ್ಯವಿದ್ದವರಿಗೆ ಪಡಿತರ ಚೀಟಿಗಳೂ ದೊರೆಯುತ್ತವೆ; ಲೇವಿ ವಸೂಲಾಗಿ ಸರಕಾರದ ಪ್ರತಿಷ್ಠೆಯೂ ಉಳಿಯುತ್ತದೆ "ಮೇರೀ ಮಂಜೂರಿ ಹೈ; ಕಲ್ ಹೀ ಜಾವ್; ಜಲ್ದೀ ಯಹ ಕಾಮ್ ಕರಕೆ ತಾಟೋ ಖುದಾ ಹಾಫಿಜ್!" ನಾನೂ ಒಪ್ಪಿಗೆ ಸೂಚಿಸಿ ಎದ್ದೆ. ಮನೆಯಲ್ಲಿ ಗಿರಿಜೆಯಿದ್ದರೆ ಎಷ್ಟು ಗಾಬರಿಯಾಗುತ್ತಿದ್ದಳೋ ಏನೋ. ಅವಳು ಆಗ ಅಲ್ಲಿ ಇರಲಿಲ್ಲವಾಗಿ ಅವಳಿಗೆ ಧೈರ್ಯ ಹೇಳಿ ಒಪ್ಪಿಸುವ ಕೆಲಸ ಕಡಿಮೆಯಾಯಿತು ನನ್ನ ಪಾಲಿಗೆ. ಸರಿಕರೂ, ಊರಿನ ಕೆಲವು ಹಿತಚಿಂತಕರೂ "ಇವನನ್ನೂ ವಿಧಿಯೇ ಎಳೆದೊಯ್ಯುತ್ತಿದೆ; ಇವನೂ ಬದುಕಿ ಬರಲಾರ; ರಾಮರಾಯನಿಗಾದ ಅವಸ್ಥೆಯೇ ಇವನಿಗೂ ಆಗುವುದು' ಎಂದು ಮಾತನಾಡಿಕೊಂಡರಂತೆ. ನಾನಂತೂ ಹೊರಟೇಬಿಟ್ಟೆ. ನನ್ನೊಡನೆ ಬರಲು ಗಿರ್ದಾವರಾರೂ ಸಿದ್ಧರಿರಲಿಲ್ಲ. ಚಪರಾಸಿಗಳಾರೂ ಸಮ್ಮತಿಸಲಿಲ್ಲ. ಹೇಗೋ ಇಬ್ಬರನ್ನೂ ಒಪ್ಪಿಸಿ ಸಂಗಡ ಕರೆದೊಯ್ದೆ.

ಮೊದಲ ಹಳ್ಳಿಯನ್ನು ಮುಟ್ಟಿದಾಗ ಸಂಜೆ ನಾಲ್ಕು ಘಂಟೆಯ ಸಮಯ. ಯಾರೂ ಎದುರುಗೊಳ್ಳಲಿಲ್ಲ; ಇಷ್ಟೇ ಅಲ್ಲ, ಕರೆಸಿದರೂ ಬರಲಿಲ್ಲ. ಒಂದಿಲ್ಲೊಂದು ನೆಪ ಹೇಳಿ ಗಂಡಸರೆಲ್ಲ ಊರು ಬಿಟ್ಟು ಹೋಗಿದ್ದರು. ಹೆಂಗಸರೊಡನೆ ಅವಿನಯದೊಡನೆ ವರ್ತಿಸಿದರೆ ಇಕ್ಕರಿಸಿ ಬಿಡಬೇಕೆಂಬುದವರ ಮಸಲತ್ತು. ನಾವೇ ಚಾವಡಿ ಹುಡುಕಿಕೊಂಡು ಸಾಮಾನು ಇರಿಸಿ ಕಾರ್ಡುಗಳೊಡನೆ ಕೇರಿಯುತ್ತ



ಹೊರಟೆವು. ನಾನು ಮರ್ಯಾದೆಯಿಂದಲೇ ಅಲ್ಲಿಯ ಮಹಿಳೆಯೊಡನೆ ಮಾತನಾಡಿದೆ. 'ನಿಮಗೆ ನಾಳಿಗಾಗಿ ಕಾಳು ಇವೆಯೆ?'. ಅವರಿಗೆ ಆಶ್ಚರ್ಯ. ಕಾಳು ಕಿತ್ತುಕೊಂಡು ಹೋಗುವವರನ್ನೇ ಕಂಡಿದ್ದರವರು; 'ಕಾಳು ಇದೆಯೆ?' ಎಂದು ಕೇಳುವವರನ್ನು ಕಂಡು ಸ್ವಲ್ಪ ಸಂಶಯ, ಸ್ವಲ್ಪ ವಿಸ್ಮಯ, ಸ್ವಲ್ಪ ಭಯ ಬೆರೆತ ದೃಷ್ಟಿಯಿಂದ ದುರದುರನೆ ನೋಡಿದರು ನಮ್ಮನ್ನು. "ಇಲ್ಲದಿದ್ದರೆ ಹೇಳಿರಮ್ಮ, ಕಾರ್ಡು ಕೊಡುತ್ತೇನೆ, ಆ ಕಾರ್ಡು ತೋರಿಸಿ ರ್‍ಯಾಷನ್ ಅಂಗಡಿಯಲ್ಲಿ ನೀವು ಅಗ್ಗದ ಬೆಲೆಗೆ ಕಾಳು ಕೊಂಡು ತರಬಹುದು" ಎಂದು ನಂಬಿಸುವ ದನಿಯಲ್ಲಿ ಹೇಳಿದೆ. ಎಲ್ಲರೂ ನಮಗೆ ಇಂದೇ ಕಾಳಿಲ್ಲವೆಂದು ಹೇಳಿದರಾಗ. ಅಲ್ಲಿಯೇ ಅವರ ಮನೆಗಳಲ್ಲಿ ವಯಸ್ಕರೆಷ್ಟು ಮಕ್ಕಳೆಷ್ಟು ಎಂದು ಪರಿಶೋಧಿಸಿ, ಕಾರ್ಡು ಬರೆದು ಅವರ ಕೈಗಿತ್ತೆ. ಅವರು ಕಾಳು ತರಲು ರ್‍ಯಾಷನ್ ಅಂಗಡಿಗೆ ಹೊರಟರು; ನಾವು ಚಾವಡಿಗೆ ಹಿಂದಿರುಗಿದೆವು.

ಚಾವಡಿಗೆ ಬಂದಾಗ ನಮಗಾಗಿ ಒಂದು ಆಶ್ಚರ್ಯ ಕಾದಿತ್ತು: ಊರ ಗಂಡಸರೆಲ್ಲ ನೆರದಿದ್ದರಲ್ಲಿ. ನಮ್ಮನ್ನು ಕಾಣುತ್ತಲೇ ಎದ್ದು ನಿಂತು ಸ್ವಾಗತಿಸಿದರು. ಅವರಲ್ಲಿ ಹಿರಿಯ ಮುಂದೆ ಬಂದು ನುಡಿದ: "ಸಾಹೇಬರೆ, ಇದುವರೆಗೆ ನಮ್ಮಲ್ಲಿದ್ದುದನ್ನು ಕಸಿದುಕೊಂಡು ಹೋಗುವವರೇ ಬಂದಿದ್ದರು ನಮ್ಮೂರಿಗೆ, ನಮಗಿಲ್ಲದಾಗ ಕೊಡುವವರಾರೂ ಬಂದಿರಲಿಲ್ಲ. ನೀವು ಕೊಟ್ಟ ಕಾರ್ಡು ತೋರಿಸುತ್ತಲೇ ಆ ಬಡ ಹರಿಜನ ಮಹಿಳೆಯರಿಗೆ ಕಾಳು ಸಿಕ್ಕವು. ಅವರು ಬದುಕಲು ದಾರಿ ದೊರೆಯಿತು. ಇನ್ನಷ್ಟು ಜನ ಅಂಥವರೇ ನಮ್ಮೂರಲ್ಲಿ ಇದ್ದಾರೆ. ಅವರಿಗಷ್ಟು ಕಾರ್ಡು ಕೊಟ್ಟು ಬಿಡಿರಿ. ನೀವು ನಮ್ಮ ಮನೆಗೆ ಬರುವುದೇ ಬೇಡ; ನಾವೇ ನಮ್ಮ ಪಾಲಿನ ಲೇವಿ ಧಾನ್ಯವನ್ನು ತಂದು ನಿಮಗೊಪ್ಪಿಸುವೆವು".

ನಾನು ಸಂತೋಷದಿಂದ ಒಪ್ಪಿದೆ. "ಅಗತ್ಯವಿಲ್ಲದವರಿಗೆ ಕಾರ್ಡು ಕೊಡಸಬೇಡಿರಿ; ನಿಜವಾದ ಅವಶ್ಯಕತೆವಿರುವವರಿಗೆ ಮಾತ್ರ ಕೊಡಿಸಿರಿ. ಲೇವಿ ವಸೂಲಿ ಇರುವುದೇ ಅವರಿಗಾಗಿ" ಎಂದು ಹೇಳಿದೆ. ಅವರು "ದೇವರಾಣೆಯಾಗಿ ಅಗತ್ಯವಿರುವವರಿಗೆ ಮಾತ್ರ ಕೊಡಿಸುವೆವು" ಎಂದು ವಚನವಿತ್ತು ಕರೆದೊಯ್ದರು. ಇನ್ನಷ್ಟು ಮನೆಯವರಿಗೆ ಕಾರ್ಡು ಕೊಟ್ಟು ಚಾವಡಿಗೆ ಹಿಂದಿರುಗಿದೆ. ಲೇವಿ ಧಾನ್ಯ ಬರತೊಡಗಿತ್ತು. ಅಂದು ರಾತ್ರಿಯೇ ಆ ಊರಿನ ಲೇವಿ ವಸೂಲಿ ಮುಗಿದುಹೋಯಿತು. ಪಟೇಲ ಪಟವಾರಿಗಳು ಅದನ್ನು ಮರುದಿನ ಮುಂಜಾನೆ ಎತ್ತಿನ ಬಂಡಿಗಳಲ್ಲಿ ಸಮೀಪದ ಸರಕಾರಿ ಗೋದಾಮಿಗೆ ಸಾಗಿಸಿ ರಸೀದಿ ಪಡೆದುಕೊಂಡರು. ಮುಂದಿನ ಊರಿಗೆ ಹೊರಟೆ. ಈ ಸುದ್ದಿ ಆ ಮುಂದಿನ ಊರಿಗೂ ಮುಟ್ಟಿ ಆ ಊರವರೇ ನಮ್ಮನ್ನು ಕರೆದೊಯ್ಯಲು ಬಂದಿದ್ದರು. ಈ

ಊರವರು ಹಾರ್ದಿಕವಾಗಿ ಬೀಳ್ಕೊಟ್ಟರು. ಆ ಊರವರು ಸಂತಸದೊಡನೆ ಕರೆದೊಯ್ದರು. ಅಲ್ಲಿಯೂ ಇಲ್ಲದವರಿಗೆ ಕಾರ್ಡು ಕೊಟ್ಟು ಉಳ್ಳವರಿಂದ ಲೇವಿ ಪಡೆದೆವು. ಈ ಸುದ್ದಿ ಉಳಿದ ಇಪ್ಪತ್ತೆಂಟು ಹಳ್ಳಿಗಳಿಗೂ ಹರಡಿ ಅಲ್ಲೆಲ್ಲ ಇದೇ ಪದ್ಧತಿ ಮುಂದುವರಿದು ಎಂಟು ದಿನಗಳೊಳಗಾಗಿ ಮೂವತ್ತು ಹಳ್ಳಿಗಳೂ 'ಬೇಬಾಕ್' ಆದುವು. ನಾಂದೇಡಕ್ಕೆ ಹಿಂದಿರುಗಿ ಅವ್ವಲ್ ತಾಲೂಕದಾರರಿಗೆ ವರದಿ ಒಪ್ಪಿಸಿದೆ. ಮೊದಲೇ ಡೊಳ್ಳು ಹೊಟ್ಟೆಯ ಮೇಲೆ ಪಿಟಿಪಿಟಿಯಾಗಿ ಅಂಟಿಕೊಂಡಿದ್ದ ಅವರ ಷೇರವಾನಿ ಎಲ್ಲಿ ಪಿಸಿದು ಹೋಗುವುದೋ ಎಂದು ಸಂಶಯ ಬರುವಷ್ಟು ಹಿಗ್ಗಿ ಹೋದರವರು. ಮತ್ತೆ "ವಿಶೇಷ ವರದಿ" ಬರೆಸಿದರು ನನ್ನಿಂದ. ಹೈದರಾಬಾದಿಗೆ ಕಳಿಸಿದರು. ನಿರೀಕ್ಷಿಸಿದಂತೆ ಶಭಾಸಗಿರಿ ಬಂದಿತವರಿಗೆ. ಬಂದವರ ಮುಂದೆಲ್ಲ ನನ್ನನ್ನು ಹೊಗಳಲು ಆರಂಭಿಸಿದರು.

ನನ್ನ ಅಳುಕು ಹೆಚ್ಚುತ್ತ ಹೋಯಿತು. ಈ ಹುಳುಗಾಡಿನ ಹೊಗಳಿಕೆ ಎಷ್ಟು ದಿನ ನಡೆವುದೋ–ಒಮ್ಮೆಲ್ಲೊಮ್ಮೆ ಇದು ತಿರುಗುಮುರುಗಾದರೆ ನನ್ನ ಗತಿಯೇನು? ಮೇಲಾಗಿ, ಎಷ್ಟು ದಿನ ನಿದ್ದೆ ನೀರಡಿಕೆಯೆನ್ನದೆ ಈ ಬಿಟ್ಟಿ ಕೆಲಸ ಮಾಡಬೇಕು? ಇತ್ಯಾದಿ ಏನೇನೋ ಯೋಚನೆಗಳು ನನ್ನ ಮನ ಶ್ಯಾಂತಿಯನ್ನು ಕದಡ ತೊಡಗಿದ್ದುವು. ಮಹಾಯುದ್ಧ, ಮಿತ್ರ ರಾಷ್ಟ್ರಗಳ ವಿಜಯದೊಡನೆ ಮುಕ್ತಾಯವಾಗಿದ್ದಿತು. ಆಗ ಧಾರವಾಡದಲ್ಲಿ ಹುಟ್ಟಿದ ಮೊದಲು ಮಗಳಿಗೆ 'ವಿಜಯಾ' ಎಂದು ಹೆಸಿರಿಡಲು ಕಾಗದ ಬರೆದಿದ್ದೆ. ವಿಜಯಾಳಿಗೆ ಮೂರು ತಿಂಗಳು ತುಂಬುತ್ತಲೇ ನಾಂದೋಡಿಗೆ ಕರೆತರುವುದೆಂದು ಎಣಿಕೆ ಹಾಕುತ್ತಿದ್ದೆ. ಆದರೆ ಅವರು ಬಂದಾಗಲೂ ಈ ಕರಡಿ ಹೀಗೆಯೇ ನನ್ನನ್ನು ಹಿಡಿದಿಟ್ಟುಕೊಂಡು ಬಿಟ್ಟರೆ ಹೇಗೆ?

ಈ ಹಳವಂಡದಲ್ಲಿರುವಾಗಲೇ ಆಗ ನನ್ನ ಇಲಾಖೆಯ 'ನಾಜುಮ್' (ಕಮೀಷನರ್) ಆಗಿದ್ದ ಫಖರುದ್ದೀನ ಅಲಿ ಮಸೂದ್ ಸಾಹೇಬರು ನಾಂದೇಡಕ್ಕೆ ಬಂದರು. ಅವರು ಬಂದಾಗಿನಿಂದ ಮರಳಿ ಹೋಗುವವರೆಗೆ ನಮ್ಮ ಅವ್ವಲ್ ತಾಲೂಕದಾರರು ನನ್ನನ್ನು ಪ್ರಶಂಸಿಸಿದ್ದೇ ಪ್ರಶಂಸಿಸಿದ್ದು. 'ನಾನಿವನನ್ನು ಹದ್‌ಗಾಂವಿಗೇ ತಹಸೀಲ್ದಾರನನ್ನಾಗಿ ಕಳಿಸಿಕೊಡುವೆ, ಇವನನ್ನು ನನಗೆ ಬಿಟ್ಟುಕೊಡಿರಿ' ಎಂದು ಕೇಳಿಯೂ ಬಿಟ್ಟರವರು. ಅವರು ಬಿಟ್ಟುಕೊಡಲು ಒಪ್ಪಲಿಲ್ಲ. ಏನು ತಿಳಿಯತೋ, ನನ್ನನ್ನು ಪ್ರತ್ಯೇಕವಾಗಿ ಕರೆಸಿ, "ನಿನ್ನ ಒಳ್ಳೆಯ ಕೆಲಸದಿಂದ ಸಂತುಷ್ಟನಾಗಿದ್ದೇನೆ. ನಿನಗೇನದರೂ ಕೇಳಿಕೊಳ್ಳುವುದಿದ್ದರೆ ಕೇಳಿಕೋ", ಎಂದರು. ನಾನು ಕಲಬುರಗಿಗೆ ವರ್ಗ ಮಾಡಿರೆಂದು ಕೇಳಿಕೊಂಡೆ. 'ಯಾಕೆ?' ಎಂದು ಕೇಳಿದರವರು. "ನನ್ನ ಹೆಂಡತಿಯ ಊರು ಧಾರವಾಡ, ನನ್ನ ಹುಟ್ಟೂರು ರಾಯ್ಚೂರು. ಜಿಲ್ಲೆಯಲ್ಲಿ



ಎರಡು ವರ್ಷ ಮುಗಿಸಿದ್ದೇನೆ. ವರ್ಗ ಮಾಡಿದರೆ ಉಪಕೃತನಾಗುವೆ" ಎಂದು ಉತ್ತರಿಸಿದೆ. ಅವರಿಗದು ಸಮಂಜಸ ವರ್ಗ ಮಾಡುವೆನೆಂದು ವಚನವಿತ್ತರು. ಆದರೆ ಆ ಪುಣ್ಯಾತ್ಮ ಇನ್ನೊಂದು ಇರುಕಿಗೆ ಸಿಕ್ಕಿಸಿ ಹೋದ ತನ್ನನ್ನು. ನಾಂದೇಡ ಬಿಡುವ ಮುನ್ನ ಅವ್ವಲ್ ತಾಲೂಕದಾರರ ಆತಿಥ್ಯ ಸ್ವೀಕರಿಸಿ "ನೀವು ಹೇಳಿದಂತೆ ಸಿದ್ಧಯ್ಯ ಪುರಾಣಿಕ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ನಾನೂ ಸಂಪ್ರೀತನಾಗಿದ್ದೇನೆ ಅವರ ಕೆಲಸದಿಂದ. ಅವರು ಕಲಬುರಗಿಗೆ ವರ್ಗ ಬೇಡಿದ್ದಾರೆ. ವರ್ಗ ಮಾಡುವುದಾಗಿ ವಚನವಿತ್ತಿದ್ದೇನೆ" ಎಂದು ಹೇಳಿ ಬಿಡಬೇಕೆ?

ನಾಜುಮ್ ಸಾಹೇಬರನ್ನು ಕಳಿಸಿ ಬಂದು ನೋಡುತ್ತೇನೆ ಅವ್ವಲ್ ತಾಲೂಕದಾರರು ಧಗ ಧಗ ಉರಿವ ಉರಿಮೋರೆಯೊಡನೆ ಕುಳಿತಿದ್ದಾರೆ! ನನಗೆ ಅರ್ಥವಾಯಿತು ಅವರ ಸಿಟ್ಟಿನ ಗುಟ್ಟು. ನನ್ನ ವರ್ಗದ ಪ್ರಯತ್ನ ರಹಸ್ಯವಾಗಿ ಉಳಿದಿಲ್ಲ, ಅದು ಇವರಿಗೆ ತಿಳಿದೇ ಇಷ್ಟು ಸಿಟ್ಟಿನಲ್ಲಿ ಕುಳಿತಿದ್ದಾರೆ ಎಂದು ಗ್ರಹಿಸಿ ಅವರನ್ನು ವಾದದಲ್ಲಿ ಎದುರಿಸಲು ಸಿದ್ಧನಾದೆ. "ಸಾಹೇಬರೆ, ನನ್ನಿಂದ ಏನಾದರೂ ತಪ್ಪಾಗಿದೆಯೇ?' ಎಂದು ಮೆಲ್ಲನೆ ಕೇಳಿದೆ. 'ನಾನು ನಿಮಗೇನು ಕೆಟ್ಟದ್ದನ್ನು ಮಾಡಿದ್ದೆ?' ಎಂದು ರೋಷದಿಂದಲೇ ಕೇಳಿದರವರು. ಶಾಂತನಾಗಿಯೇ ಉತ್ತರವಿತ್ತೆ: "ತಾವು ನನಗೆ ಒಳ್ಳೆಯದನ್ನೇ ಮಾಡಿದ್ದೀರಿ, ಮಾಡುತ್ತಿರುವಿರಿ. ಕೆಟ್ಟದನ್ನು ಮಾಡಿರುವಿರೆಂಬ ಕಲ್ಪನೆಯನ್ನು ಕನಸಿನಲಿಯೂ ತರಲಾರೆ." "ಹಾಗಾದರೆ ನನ್ನನ್ನು ಬಿಟ್ಟು ಕಲಬುರಗಿಗೆ ಏಕೆ ಹೊರಟಿರುವಿರಿ". ಸಿಟ್ಟಿನ ಕಾರಣ ನಾನು ಊಹಿಸಿದುದೇ ಎಂಬುದು ಖಚಿತವಾಯಿತು. ದೇವರು ದೊಡ್ಡವನು; ನಿಮಿಷಾರ್ಧದಲ್ಲಿ ಇದಕ್ಕೆ ಉತ್ತರ ತೋರಿಸಿದ ಅವ್ವಲ್ ತಾಲೂಕದಾರರು ಸೂಬೇದಾರರಾಗಿ ಬಢತಿ ಪಡೆದು ಔರಂಗಾಬಾದಿಗೆ ಹೋಗುವವರೆಂಬ ಸುದ್ದಿ ಸುಳಿದು ಹೋಗುತ್ತಿತ್ತು ಆಗಾಗ, ಅದನ್ನೇ ಆಧರಿಸಿ ಉತ್ತರವಿತ್ತೆ: "ಇನ್ನು ನಾಂದೇಡದಲ್ಲಿ ನಾನೇಕೆ ಇರಬೇಕು ಸಾಹೇಬರೆ?" "ಯಾಕೆ, ಏನಾಯಿತು?" "ತಾವೇ ಔರಂಗಾಬಾದಿಗೆ ಸೂಬೇದಾರರಾಗಿ ಹೊರಟಿರುವಾಗ ನಾಂದೇಡದಲ್ಲಿ ನನಗಾವ ಆಕರ್ಷಣೆ?". ಉಬ್ಬಿ ಹೋದರೂ ಸಾಹೇಬರು; ಶೀಘ್ರಲಿಪಿಕಾರನನ್ನು ನನ್ನೆದುರಿಗೇ ಕರೆಸಿ, "ಪ್ರಿಯ ಮಸೂದ್, ಸಿದ್ಧಯ್ಯ ಪುರಾಣಿಕರ ಕಾರ್ಯಕ್ಷಮತೆ ನಿಮಗೂ ಸಂತೋಷವನ್ನುಂಟು ಮಾಡಿದೆಯಷ್ಟೆ? ಅವರನ್ನು ಬಿಟ್ಟು ಕೊಡಲು ನನಗೆ ಮನಸ್ಸಿಲ್ಲವಾದರೂ, ಅವರ ಅನಾನುಕೂಲಗಳನ್ನು ಅನುಲಕ್ಷಿಸಿ ಅವರಿಗೆ ಕಲಬುರ್ಗಿಗೆ ವರ್ಗ ಮಾಡಲು ಕೋರುತ್ತೇನೆ" ಎಂಬ ಕಾಗದ ಬರೆಸಿ ಹೈದರಾಬಾದಿಗೆ ಕಳಿಸಿಯೂ ಬಿಟ್ಟರು. ನಾನು ಬೆಟ್ಟ ಕೆಳಗಿಳಿಸಿದವನಂತೆ ನಿಟ್ಟುಸಿರು ಬಿಟ್ಟೆ.

ಆಲಸ್ಯದಿಂದ ಅಮೃತವೂ ವಿಷವಾಗುವುದೆಂದು ಬಗೆದು ಮಡದಿ ಮತ್ತು ಮಗಳನ್ನು ಕರೆತರುವೆನೆಂದು ಹೇಳಿ ಧಾರವಾಡಕ್ಕೆ ಹೋದೆ ಹೋಗುವಾಗ ಪ್ರೊ. ವೀರಭದ್ರಡು ಅವರನ್ನು ಕಂಡೆ. ಅವರು ನಾನು ಧಾರವಾಡಕ್ಕೆ ಹೊರಟಿರುವುದನ್ನು ಕಂಡು, "ಪ್ರೊ. ಬಿ.ಎಮ್. ಶ್ರೀಕಂಠಯ್ಯನವರು ಈಗ ಧಾರವಾಡದಲ್ಲಿದ್ದಾರೆ. ನೀನವರನ್ನು ನೋಡಲು ಹೋದರೆ ನನ್ನ ನಮಸ್ಕಾರ ತಿಳಿಸು" ಎಂದು ಹೇಳಿದರು. "ಅಗತ್ಯವಾಗಿ ನೋಡುತ್ತೇನೆ, ತಮ್ಮ ನಮಸ್ಕಾರ ತಿಳಿಸುವೆನು. ಇನ್ನೇನಾದರೂ ಹೇಳುವುದಿದೆಯೆ?" ಎಂದು ಕೇಳಿದೆ. "ಇದೆ, ನನ್ನ ಬಿನ್ನಹವೊಂದನ್ನು ಅವರಿಗೆ ತಿಳಿಸು; ಇದುವರೆಗೆ ಅವರು ಕನ್ನಡಕ್ಕಾಗಿ ಕನ್ನಡ ನಾಡನ್ನೆಲ್ಲ ಸುತ್ತಿದ್ದಾರೆ. ಈಗ ಷೇಕ್ಸ್‌ಪಿಯರನ ಅತಿಮುಖ್ಯ ನಾಟಕಗಳನ್ನಾದರೂ ಕನ್ನಡಕ್ಕೆ ತಿರುಗಿಸಲಿ. ಇದನ್ನು ಮಾಡಿದರೆ ಅವರೇ ಮಾಡಬೇಕು" ಎಂದರು. ನಾನು ಧಾರವಾಡದಲ್ಲಿ 'ಶ್ರೀ' ಅವರನ್ನು ಕಂಡು ನನ್ನ ವಿದ್ಯಾಗುರುಗಳ ಕೋರಿಕೆಯನ್ನು ವಿವರಿಸಿದಾಗ ಕೆಲವು ನಿಮಿಷ ಕಣ್ಣು ಮುಚ್ಚಿ ಕುಳಿತುಬಿಟ್ಟರು ಅವರು. ಆಮೇಲೆ ಕಣ್ದೆರೆದು ಹೇಳಿದರು: "ಅವರು ಎರಡು ವರ್ಷ ಮೊದಲೇ ಈ ಸಲಹೆ ನೀಡಬಾರದಿತ್ತೆ! ಈಗ The flesh is weak, although the spirit is still strong. ಮಾಡಬೇಕಾದ ಈ ಕಾರ್ಯ ಮಾಡುವೆನೆಂದು ಯಾವ ಧೈರ್ಯದಿಂದ ಹೇಳಲಿ?" ಆ ಮಾತು ಕೇಳಿ ನನಗೂ ಕಳವಳ. ಆದಾದ ಒಂದು ತಿಂಗಳೊಳಗಾಗಿ ಅವರು ಇಲ್ಲವಾದರು. ಅಲ್ಲಿ ಶಿವಲಿಂಗಣ್ಣನ ಮತ್ತು ನನ್ನ ಆತ್ಮೀಯರಾಗಿದ್ದ ಅ.ನ. ಕೃಷ್ಣರಾಯರೂ ಇದ್ದರು. ಎರಡು ದಿನ ಅವರ ಧಾರವಾಡದ ಗೆಳೆಯರ ಸಂಗದಲ್ಲಿ ಸಂತಸದೊಡನೆ ಕಳೆದು ಗಿರಿಜಾ, ವಿಜಯಾರೊಡನೆ ನಾಂದೋಡಿಗೆ ಮರಳಿದೆ. ಅ.ನ. ಕೃಷ್ಣರಾಯರಾಗ ಪ್ರಗತಿಶೀಲ ಸಾಹಿತ್ಯ ಚಳುವಳಿಯ ನೇತಾರರು. ಅವರ ಪ್ರಕಾಶಕರು ಶಿವಲಿಂಗಯ್ಯನವರು. ಅವರ ಪ್ರಭಾವಕ್ಕೆ ಸಿಕ್ಕಿ ನಾನೂ ಪ್ರಗತಿಶೀಲನಾದೆ. ನನ್ನ ಎರಡು ಕವಿತೆಗಳು ಅವರ 'ರಸಋಷಿ" ಸಂಕಲನವನ್ನು ಸೇರಿದುವು. ಉದ್ದಕ್ಕೂ ವಿಜಯಾ ಅತ್ತಾಗಲೆಲ್ಲ ನಾನು ಸಣ್ಣ ಬೆಳ್ಳಿಯ ಘಂಟೆ ಬಾರಿಸುತ್ತ ಬಂದುದನ್ನು ಮರೆಯುವಂತಿಲ್ಲ. ಧಾರವಾಡಕ್ಕೆ ಹೋಗುವಾಗ ನಾಜುಮ್ ಸಾಹೇಬರನ್ನು ಕಂಡು ವರ್ಗದ ಬಗ್ಗೆ ನೆನಪಿಸಿ ಹೋಗಿದ್ದೆ; ಬರುವಾಗ ಸಂಬಂಧಿಸಿದವರಿಗೆಲ್ಲ ನೆನಪಿಸಿ ಬಂದಿದ್ದೆ. ಆದುವರೆಗೆ ಏಕಾಕಿಯಾಗಿ ಬದುಕಿದ್ದ ಬಂಗ್ಲೆಯಲ್ಲಿ ಈಗ ನಾನು ಮೆಚ್ಚಿದ ಮಡದಿ, ಮೋಹದ ಮಗಳೊಡನೆ ಒಂದೆರಡು ವಾರ ಕಳೆದೆ. ಯುದ್ಧ ಮುಗಿದಿದ್ದುದರಿಂದ ಲೇವಿ ಮೊದಲಾದ ಕಾರ್ಯಗಳೂ ಸಡಿಲುಗೊಂಡಿದ್ದುವು. ವಿಜಯದ ಆನಂದೋತ್ಸವಗಳು ನಡೆದುವು. ಯಾರ ವಿಜಯ? ಭಾರತೀಯರ



ವಿಜಯವೆ? ಸಂಸ್ಥಾನಿಕರಿಗೆ ಮಾತ್ರ ಅದು ತಮ್ಮ ವಿಜಯವೆಂದೇ ಎನ್ನಿಸಿದ್ದಿತು. ರಾಷ್ಟ್ರನಾಯಕರು ಕಾರಾಗೃಹಗಳಲ್ಲಿ ಕೊಳೆಯುತ್ತಿದ್ದಾಗ ದೇಶೀಯ ಸಂಸ್ಥಾನಗಳಲ್ಲಿ ವಿಜಯೋತ್ಸವಗಳು ನಡೆದುವು. ಒಂದು ಉರ್ದೂ 'ಮುಷಾಯಿರಾ' ನಡೆಯಿತು. 'ಮಿಥ್ಯೆಯ ಮೇಲೆ ಸತ್ಯ ವಿಜಯ ಪಡೆದಿದೆ' ಎಂಬುದವರ ಸೂತ್ರವಾಕ್ಯವಾಗಿದ್ದಿತು. ಎಂಥ ಮಿಥ್ಯೆ ಎಂಥ ಸತ್ಯ! ಅಷ್ಟರಲ್ಲಿ ನನ್ನ ವರ್ಗದ ಆಜ್ಞೆ ಬಂದಿತು; ಕಲಬುರಗಿಗೆ ಹೊರಡುವ ಸಿದ್ಧತೆಯನ್ನು ಆರಂಭಿಸಿದೆ.

**ನಾಂದೇಡದ ನೆನಪು :**

ನಾಂದೇಡದ ಅಧ್ಯಾಯವನ್ನು ಮುಗಿಸುವ ಮುನ್ನ ಅಲ್ಲಿಯ ಇನ್ನು ಕೆಲವು ನೆನಪುಗಳನ್ನು ನಮೂದಿಸಲೇ ಬೇಕು. ನಾಂದೇಡಕ್ಕೆ ಹೊಂದಿಯೇ ಗೋದಾವರಿ ಹರಿಯುತ್ತಿದೆ. ಮೊದಲ ಸಲ ಅದರ ತೀರದಲ್ಲಿ ನಿಂತಾಗ "ನೃಪತುಂಗನು ಹೇಳಿದ ಕರ್ನಾಟಕದ ಉತ್ತರದ ಗಡಿ ಇಲ್ಲಿಯವರೆಗೆ ಇದ್ದಿತೆ?" ಎಂಬ ಸಂದೇಹಕ್ಕೆ ಒಳಗಾಗಿದ್ದೆ. ಬಹುಬೇಗ ನನ್ನ ಸಂದೇಹ ನಿವಾರಣೆಯಾಯಿತು. ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಕನ್ನಡ ಶಾಸನಗಳನ್ನು ಕಂಡೆ. ಅವುಗಳ ಯಾದಿ ಮಾಡಿ ಹೈದರಾಬಾದಿನ ಪುರಾತತ್ವ ವಿಭಾಗದ ನಿರ್ದೇಶಕರಿಗೆ ಕಳಿಸಿ ಅವುಗಳ ಅಚ್ಚು ತೆಗೆದುಕೊಳ್ಳುವಂತೆ ಕೋರಿದೆ. ನಾನಿರುವಾಗಲೇ ಅವುಗಳ ಅಚ್ಚು ತೆಗೆದುಕೊಳ್ಳುವ ಕಾರ್ಯ ಪ್ರಾರಂಭವಾಯಿತು. ಆದರೆ ಅವುಗಳನ್ನು ಪ್ರಕಟಿಸುವ ಸಾಧ್ಯತೆ ಆಗ ಅಗಲಿಲ್ಲ. ಮುಂದೆ ಪೋಲೀಸ್ ಕಾರ್ಯಾಚರಣೆಯ ತರುವಾಯ ತೆಲುಗಿನ ಹಿರಿಯ ಕವಿ, "ಶಿವತಾಂಡವ" ಕರ್ತೃ ಪುಟ್ಟಪರ್ತಿ ನಾರಾಯಣಾಚಾರ್ಯರ ಸಹೋದರರೂ, ನನ್ನ ಸ್ನೇಹಿತರೂ ಆದ ಡಾ॥ ಪಿ. ಶ್ರೀನಿವಾಸಾಚಾರ್ಯರ ಕಾಲದಲ್ಲಿ ಅವುಗಳ ಸಂಪಾದನೆಯ ಕಾರ್ಯ ನಡೆದು, ರಾಜ್ಯ ಪುನರ್‌ರಚನೆಯ ಪರಿಣಾಮವಾಗಿ ಆ ಅಚ್ಚಿನ ಪ್ರತಿ ಮಹಾರಾಷ್ಟ್ರ ಸರಕಾರದ ಸ್ವಾಧೀನಕ್ಕೆ ಹೋಯಿತು. ಅಲ್ಲಿ ಅನೇಕ ವರ್ಷ ಅಜ್ಞಾತವಾಸ ಅನುಭವಿಸಿ ನನ್ನ ಮಿತ್ರರಾಗಿದ್ದ ಪಗಡಿ ಸೇತೂಮಾಧವರಾಯರು ಅಲ್ಲಿ ಪುರಾತತ್ವ ಇಲಾಖೆಯ ನಿರ್ದೇಶಕರಾದಾಗ ಪುಸ್ತಕ ರೂಪದಲ್ಲಿ ಪ್ರಕಟವಾಯಿತು! ಒಂದು ಒಳ್ಳೆಯ ಕಾರ್ಯ ಎಷ್ಟು ನಿಧಾನವಾಗಿ ಆಗುತ್ತದೆ, ಕೆಟ್ಟ ಕೆಲಸ ಎಷ್ಟು ಶೀಘ್ರವಾಗಿ, ಸುಲಭವಾಗಿ ಆಗಿ ಬಿಡುತ್ತದೆ ಈ ಸಭ್ಯ ಸಮಾಜದಲ್ಲಿ!

ದೇಗಲೂರು ತಾಲೂಕಿನಲ್ಲಂತೂ ಕೆಲವು ಶುದ್ಧ ಕನ್ನಡ ಹಳ್ಳಿಗಳೇ ಕಣ್ಣಿಗೆ ಬಿದ್ದುವು ನನಗೆ. ತಾಲೂಕಿನ ಹೆಸರೇ ದೇಗಲೂರು! ಔರಂಗಾಬಾದ ಜಿಲ್ಲೆಯ ಒಂದು ತಾಲೂಕಿಗೇ 'ಕನ್ನಡ' ಎಂಬ ಹೆಸರು. ನಿಶ್ಚಯವಾಗಿ ಆಗಿನ ಕರ್ನಾಟಕದ

ಉತ್ತರ ಗಡಿ ಗೋದಾವರಿ. ದೇಗಲೂರು ತಾಲೂಕಿನ ಖಂಡೆ ಬಿಲ್ಲೂರು ಎಂಬ ಹಳ್ಳಿಗೆ ಒಂದು ಕೆರೆಯ ಪರಿಶೀಲನೆಗಾಗಿ ಹೋಗಿದ್ದೆ. ಕೆರೆ ಕಟ್ಟಲು ತಕ್ಕ ಸ್ಥಳ ಸಿಕ್ಕಿತೆಂದು ಕೆರೆಯನ್ನು ಕಟ್ಟಿಬಿಟ್ಟಿದ್ದರಲ್ಲಿ; ಆದರೆ ಅಚ್ಚುಕಟ್ಟಿನ ಭೂಮಿ ನೀರಾವರಿಗೆ ತಕ್ಕುದಾಗಿರಲಿಲ್ಲ! ಸ್ವಲ್ಪ ಮಳೆ ಹೆಚ್ಚಾದರೂ ಹುದುಲು ಬೀಳುವ ಆಳವಾದ ಎರೆಮಣ್ಣಿನ ಭೂಮಿಯದು. ಅಲ್ಲಿ ನೀರಾವರಿ ಮಾಡಲು ಯತ್ನಿಸಿದಾಗ ಹೊಲಕ್ಕೆ ಹೋದ ಎತ್ತುಗಳೇ ಹುದುಲಿನ ಪಾಲಾಗಿದ್ದುವು. ರೈತರು ಇಲ್ಲಿ ನೀರಾವರಿ ಸಾಧ್ಯವಿಲ್ಲ, ನಮ್ಮ ಮೇಲೆ ನೀರಿನ ಕರ ಹೇರಬೇಡಿರಿ–ಎಂದು ಎಷ್ಟು ಸಲ ಬೊಂಬಡಿ ಹೊಡೆದಿದ್ದರೂ ಏನೂ ಪ್ರಯೋಜನವಾಗಿರಲಿಲ್ಲ. "ಕೆರೆಯಲ್ಲಿ ಭರ್ತಿ ನೀರಿದ್ದರೂ ಬುದ್ಧಿ ಪೂರ್ವಕವಾಗಿಯೇ ರೈತರದನ್ನು ಉಪಯೋಗಿಸಿಕೊಳ್ಳುತ್ತಿಲ್ಲ; ಆದುದರಿಂದ ದಂಡರೂಪದಲ್ಲಾದರೂ ಇವರಿಂದ ನೀರಿನ ಕರ ವಸೂಲ್ಮಾಡಲೇ ಬೇಕು; ಇವರು ನೀರಾವರಿಗೆ ಒಪ್ಪುವಂತೆ ಮಾಡಲು ಇದೊಂದೇ ದಾರಿ" ಎಂಬುದು ಕರೆ ಕಟ್ಟಿದ್ದ ಇಂಜಿನಿಯರರ ವಾದವಾಗಿದ್ದಿತು; ಕಂದಾಯ ಇಲಾಖೆಗೂ ಹೆಚ್ಚು ಕಂದಾಯ ಬರುವುದು ಬೇಕಾಗಿ ಆ ಇಲಾಖೆಯೂ ಅದನ್ನು ಅನುಮೋದಿಸಿದ್ದಿತು. ಎಂಥ ಅನ್ಯಾಯವಿದು–ಎಂದು ಮನದಲ್ಲಿಯೇ ಮರುಗಿದೆ ನಾನು. ಇದನ್ನು ಸರಿಪಡಿಸುವುದೆಂದು ನನ್ನೊಳಗೆ ತೀರ್ಮಾನಿಸಿ ರಾತ್ರಿ ಚಾವಡಿಗೆ ಮರಳಿದೆ.

ಆಗ ನಡೆದ ಘಟನೆಯಿದು: ನಾನು ಲಿಂಗಾಯತನೆಂದು ಹೇಗೋ ತಿಳಿದುಕೊಂಡು ಲಿಂಗಾಯತನಾದ ಗೌಡನ ಮನೆಯಲ್ಲಿ ಅಡುಗೆ ಮಾಡಿಸಿ ತರಿಸಿದ್ದರು. ನಾನು ಅಂಗಿ ಧರಿಸಿಯೇ ಊಟಕ್ಕೆ ಕುಳಿತೆ. ಆ ಊರಿನ ಪಟುವಾರಿ ಜಲಾಲುದ್ದೀನ್ ಎಂಬ ಮಹಮ್ಮದೀಯರು. ಗೋಡೆಯಾಚೆ ಗೌಡನಿಗೆಂದರು; "ಏನಪ್ಪಾ ಗೌಡಾ, ನಿಮ್ಮವರಂತಾ ಹೇಳ್ದಿ; ಅಂಗಿ ಹಾಕಿಕೊಂಡೇ ಊಟ ಮಾಡುತಿದ್ದಾರೆ! ನಿನ್ನ ಆಚಾರ ಎಲ್ಲಿ ಉಳೀತು?"

## ಕನ್ನಡದ ನೆಲ

ಮೊದಲೇ ಮಹಮ್ಮದೀಯರಲ್ಲಿ ಪಟವಾರಿಗಳಿರುವುದು ಅಪರೂಪ; ಅವರಲ್ಲಿ ಪ್ರಾದೇಶಿಕ ಭಾಷೆಗಳನ್ನು ಬಲ್ಲವರು ಇನ್ನೂ ಅಪರೂಪ. ಈ ಪಟವಾರಿ ಮರಾಠ ವಾಡಾದ ಮಧ್ಯದಲ್ಲಿರುವ ಈ ಹಳ್ಳಿಯಲ್ಲಿ ಶುದ್ಧ ಕನ್ನಡದಲ್ಲಿ ಮಾತನಾಡುತ್ತಿರುವನಲ್ಲಾ–ಎಂದು ಮೈ ಜುಮ್ಮೆಂದಿತು. ಅದೂ 'ಆಚಾರ' ಎಂದರೇನೆಂಬುದನ್ನೂ ತಿಳಿದುಕೊಂಡು, ನನ್ನ ಅಚಾರವನ್ನು ಪರೀಕ್ಷಿಸಿ ಅದರ ಬಗ್ಗೆ ತೀರ್ಪು ಹೇಳುತ್ತಿರುವನಲ್ಲಾ–ಎಂದು ಅತೀವ ಆಶ್ಚರ್ಯವಾಯಿತು. ಕರೆದು ಮೆಚ್ಚಿಗೆ ಸೂಚಿಸಿದೆ. ಅದೆಲ್ಲ ಕನ್ನಡದ



ನೆಲವೆಂಬುದನ್ನು ಖಾತ್ರಿ ಮಾಡಿಕೊಂಡೆ. "ಈ ತಾಲೂಕಿನಲ್ಲಿ ಕನ್ನಡ ಸಮ್ಮೇಳನವೊಂದನ್ನು ಏಕೆ ಜರುಗಿಸಬಾರದು?" ಎಂದು ನನ್ನಷ್ಟಕ್ಕೆ ನಾನೇ ಎಂದುಕೊಂಡೆ. ಆ ಆಸೆ ಆಗಿನ ಪರಿಸ್ಥಿತಿಯಲ್ಲಿ ಈಡೇರಲಾಗದ ಆಸೆಯಾಗಿದ್ದುದರಿಂದ ನನ್ನ ಸುಪ್ತಚೇತನ ಸೇರಿ ಅಲ್ಲಿ ಹೈಬರ್ನೇಟ್ ಆಗುತ್ತ ನಿಶ್ಚೇಷ್ಟಿತ ಸ್ಥಿತಿಯಲ್ಲಿದ್ದಿತು. ಮುಂದೆ ಭಾರತಕ್ಕೆ ಸ್ವಾತಂತ್ರ್ಯ ಬಂದು, ನಾನು ಹೈದರಾಬಾದು ಪ್ರದೇಶ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾದಾಗ ದೇಗಲೂರು ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನವನ್ನು ಅಪೂರ್ವ ಉತ್ಸಾಹ ವೈಭವಗಳೊಡನೆ ಜರುಗಿಸಿ ಆ ಆಸೆಯನ್ನು ಈಡೇರಿಸಿಕೊಂಡೆ.

ನಾನಿದ್ದ ಮನೆ ಗುರುದ್ವಾರ ಮಾರ್ಗದಲ್ಲಿದ್ದಿತು. ಆದುದರಿಂದ ಸಹಜವಾಗಿಯೆ ಆಗಾಗ ಗುರುಗೋವಿಂದಸಿಂಗಜಿಯವರ ಗುರುದ್ವಾರಕ್ಕೆ ಹೋಗುತ್ತಿದ್ದೆ. ಇದರಿಂದ ನನಗೆ ಸೀಖ ಧರ್ಮದ ಪರಿಚಯವಾಯಿತು. ಅದರ ಗುರುಗಳ ಬಗ್ಗೆ ಮಾಹಿತಿ ಹೆಚ್ಚಿತು. ನನ್ನೊಡನೆ ತಹಸೀಲ್ದಾರರಾಗಿ ಆರಿಸಿ ಬಂದಿದ್ದ ಮದನಸಿಂಗರ ತಂದೆ ಸರದಾರ್ ಬಲದೇವಸಿಂಗರು ಆ ಹಿಂದೆ ಆ ಗುರುದ್ವಾರದ ಸುಪರಿಂಟೆಂಡೆಂಟರಾಗಿ ಒಳ್ಳೆಯ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಮದಸಿಂಗರೂ ಅದೇ ಜಿಲ್ಲೆಯಲ್ಲಿ ತಹಸೀಲ್ದಾರರಾಗಿದ್ದುರಿಂದ ಆಗ ಅಲ್ಲಿಗೆ ಬರುತ್ತಿದ್ದರು. ಹೀಗಾಗಿ ಅವರ ನನ್ನ ಸ್ನೇಹ ಗಾಢವಾಯಿತು. ಅದು ಮುಂದೆ ಕಲಬುರಗಿಯಲ್ಲಿಯೂ ಮುಂದುವರಿಯಿತು. ಆಗ ಪರಿಚಿತರಾದ ಶ್ರೀ ಎಸ್.ಬಿ. ಚವಾಣರು ಇಂದು ಕೇಂದ್ರ ವಿದ್ಯಾಮಂತ್ರಿಗಳು; ಆಗ ದೊರೆತ ಗೆಳೆಯ ರಂಗನಾಥರಾವ್ ಕದಮ್ ಈಗ ಎಲ್ಲಿರುವರೋ ಗೊತ್ತಿಲ್ಲ.

ನಾಂದೇಡದ ಬೇಸಗೆ ಅತ್ಯುಗ್ರವಾದುದು. ಆದರೆ ಅದನ್ನು ಸಹ್ಯಗೊಳಿಸಲು ನಿಸರ್ಗ ಹಲವು ದೇಣಿಗೆಗಳನ್ನಿತ್ತಿದೆ ಆ ಭಾಗಕ್ಕೆ. ಒಂದು ಹಸಿರು ಹಾವಿನಂತಹ ಉದ್ದನೆಯ ಸೌತೆಕಾಯಿ; ಇನ್ನೊಂದು ಗೋದಾವರಿಯ ಮರಳಿನಲ್ಲಿ ಸಿಕ್ಕಾಪಟ್ಟೆ ಬೆಳೆಯುವ ಕಲ್ಲಂಗಡಿ ಹಣ್ಣು; ಇನ್ನೊಂದು ಎಲ್ಲಿಗೆ ಹೋದರೂ ದೊರೆಯುತ್ತಿದ್ದ ಸಿಹಿಲಿಂಬೆಯ ರಸ. ಗೋದಾವರಿಯಲ್ಲಿ ನಡುವಿನ ಭಾಗದಲ್ಲಿ ಮಾತ್ರ ನೀರು ಹರಿಯುತ್ತಿರುತ್ತದೆ ಆಗ. ಅದರ ಎರಡೂ ಬದಿಗೆ ಕಲ್ಲಂಗಡಿ ಬಳ್ಳಿಗಳನ್ನು ಬೆಳೆಸುತ್ತಾರೆ. ಅವು ಹಣ್ಣು ಬಿಟ್ಟಾಗ ಬಳ್ಳಿಯಲ್ಲಿರುವಾಗಲೇ ಗೋದಾವರಿಯ ಹರಿವ ನೀರಿನ ತಳದ ಮರಳಿನಲ್ಲಿ ಹುಗಿಯುತ್ತಾರೆ. ರಾತ್ರೆಯೆಲ್ಲ ಅವುಗಳ ಮೇಲೆ ನೀರು ಹರಿದು ಅವು ತುಂಬ ತಂಪಾಗುತ್ತವೆ. ಇದು ನಿಸರ್ಗದತ್ತ ಶೈತ್ಯೀಕರಣ ಶಾಲೆ! ಅವುಗಳನ್ನು ತಂದು ತಿಂದಾಗ ಹೊಟ್ಟೆಯುರಿಯೆಲ್ಲ ಹಿಂಗಿ ಆ ಭಯಂಕರ ಬೇಸಿಗೆಯನ್ನು ತಾಳಿಕೊಳ್ಳುವ ಶಕ್ತಿ ದೊರೆಯುತ್ತದೆ. ಚಿಕ್ಕೆಚಿಕ್ಕೆಯ ಬಾಳೆಹಣ್ಣುಗಳಂತೂ ಬಹಳ

ಪ್ರಸಿದ್ಧವಾದವುಗಳು. 'ಟಾಲ್ಕಿ' ಬಳಿ ಜೋಳ, 'ಬನ್ಸಿ' ಗೋಧಿ, ನಿಜಾಮಾಬಾದಿನ ಅಕ್ಕಿ, ಹಣ್ಣು ತರಕಾರಿಗಳ ರಾಶಿಗಳು–ಎಲ್ಲ ಸೊಗಸು. ಅಲ್ಲಿ ನಾವಿದ್ದುದು ೧೯೪೪–೪೫ರಲ್ಲಿ. ಆಗ ಒಂದು ರೂಪಾಯಿಗೆ ಹದಿನಾರು ಸೇರು ಬಿಳಿಜೋಳ, ಹನ್ನೆರಡು ಸೇರು ಬನ್ಸಿಗೋಧಿ, ಹತ್ತು ಸೇರು ಸಣ್ಣಕ್ಕಿ, ಐದು ಸೇರು ಮನೆಯ ಮುಂದೆಯೇ ಕರೆದ ಹಾಲು ದೊರೆಯುತ್ತಿದ್ದವು! ಒಮ್ಮೆ ನೂರು ರೂಪಾಯಿಗಳೊಡನೆ ಅಲ್ಲಿಯ ಉಸ್ಮಾನ ಷಾಹಿ ಮಿಲ್ಸ್‌ಗೆ ಹೋಗಿ ಬಟ್ಟೆ ಕೊಂಡೆ. ಒಂದು ಟಾಂಗಾದಲ್ಲಿ ತರುವುದು ಕಷ್ಟವಾಯಿತು! ಅಷ್ಟು ಬಟ್ಟೆಗಳು ಬಂದಿದ್ದವು ಒಂದು ನೂರು ರೂಪಾಯಿಗೆ. ಅವುಗಳಲ್ಲಿಯೇ ನಾವು ಬೇಕಾದಷ್ಟು ಇಟ್ಟುಕೊಂಡು, ತಂದೆ ತಾಯಿ ತಂಗಿಯರಿಗೆಲ್ಲ ಕಳಿಸಿದ್ದೆವು! ಇದು ಮಹಾಯುದ್ಧ ಕಾಲದಲ್ಲಿದ್ದ ಸಮೃದ್ಧಿ! ಈಗ ಜನಸಂಖ್ಯೆಯೊಂದೇ ಬೆಳೆದು ಎಲ್ಲದಕ್ಕೂ ಕೊರತೆ ಕಾಣಿಸಿಕೊಂಡಿದೆ; ಹಣದುಬ್ಬರ ಹೆಣ ಹಾಕುತ್ತಿದೆ ನೂರಕ್ಕೆ ತೊಂಬತ್ತು ಜನರನ್ನು; ಬೆಲೆಯೇರಿಕೆ ಬೆನ್ನೆಲುವು ಮುರಿಯುತ್ತಿದೆ ಅಷ್ಟೇ ಅಧಿಕ ಸಂಖ್ಯೆಯ ಜನರ! ಕಲಬೆರಕೆಯ ಕತೆ ದೊಡ್ಡದು!

ನಾಂದೇಡದಲ್ಲಿ ಕೆಲವೇ ಲಿಂಗವಂತ ಕುಟುಂಬಗಳಿದ್ದುವು. ಮನೆಯಲ್ಲಿ ಹರಕು ಮುರುಕು ಕನ್ನಡ ಮಾತನಾಡುತ್ತಿದ್ದರು. ನನ್ನನ್ನೂ ನನ್ನ ಹೆಂಡತಿಯನ್ನು ಆಗಾಗ ಹಬ್ಬ, ಉತ್ಸವಗಳಿಗೆ ಕರೆದೊಯ್ಯುತ್ತಿದ್ದರು. ನಮ್ಮ ಸಂಪರ್ಕದಿಂದ ಅವರಲ್ಲಿ ಕನ್ನಡದಲ್ಲಿ ಆಸಕ್ತಿ ವರ್ಧಿಸಿತ್ತು. ನನ್ನ ಹೆಂಡತಿ ಆಗಾಗ ಹೋಗಿ ಕನ್ನಡದಲ್ಲಿ ಮಾತನಾಡಿ ಬರುತಿದ್ದಳು. ಈಗ ಅವರಲ್ಲಿ, ದೇಗಲೂರಿನ ಕನ್ನಡ ಹಳ್ಳಿಗಳಲ್ಲಿ ಕನ್ನಡ ಉಳಿದಿದೆಯೋ ಅಳಿದಿದೆಯೋ ಗೊತ್ತಿಲ್ಲ. ಇಡಿಯ ಭರತಖಂಡದಲ್ಲಿ ಎಲ್ಲ ಭಾಷೆಗಳೂ ಹಬ್ಬಿ ಹರಡುತ್ತಿದ್ದರೆ ಕನ್ನಡ ಮಾತ್ರ ಕ್ಷಯಿಸುತ್ತಿದೆ! ಇದು ಕನ್ನಡದ ದುರ್ದೈವವಲ್ಲ, ಕನ್ನಡಿಗರ ದೌರ್ಭಾಗ್ಯ. ಕನ್ನಡಿಗರು ಕಡೆಗಣಿಸಿದರೆ ಕನ್ನಡಕ್ಕೇನಾಗುವುದು? ಆದರೆ ಕನ್ನಡವನ್ನು ಕಡೆಗಣಿಸಿದರೆ ಕನ್ನಡಿಗರಲ್ಲಿ ಏನುಳಿಯುವುದು?

ಅಲ್ಲಿಗೆ ಆಗಾಗ ಮರಾಠೀ ಸಾಹಿತಿಗಳು ಬರುತಿದ್ದರು. ಅವರಿಂದ ಮರಾಠೀ ಸಾಹಿತ್ಯದ ಬಗ್ಗೆ ಅನೇಕ ವಿಷಯಗಳು ತಿಳಿಯುತ್ತಿದ್ದುವು. ತಕ್ಕಮಟ್ಟಿಗೆ ಮರಾಠಿಯನ್ನೂ ಕಲಿತಿದ್ದೆ. ಕಂದಾಯಾಧಿಕಾರಿಗಳ ಪರೀಕ್ಷೆಯಲ್ಲಿ ಕನ್ನಡ, ತೆಲುಗು, ಮರಾಠಿ, ಫಾರಸಿ ಭಾಷೆಗಳಲ್ಲಿ ಪಾಸಾಗಿ ಏಕೈಕ ಅಧಿಕಾರಿಯೆಂದು ನಾಲ್ಕುನೂರು ರೂಪಾಯಿಗಳ ಬಹುಮಾನವನ್ನೂ ಪಡೆದಿದ್ದೆ. ಆಗಿನ ನಾಲ್ಕುನೂರು ರೂಪಾಯಿಗಳು ಇಂದಿನ ನಾಲ್ವತ್ತು ಸಾವಿರ ರೂಪಾಯಿಗಳಿಗಿಂತಲೂ ಘನವಾದುವೆನಿಸಿದ್ದುವು ನನಗೆ. ಆದರೆ ಇಂದು ಇವೆಲ್ಲ ಭಾಷೆಗಳೂ ನನಗೆ ಬರುತ್ತವೆಂದು ನಾನು ಹೇಳಲಾರೆ. ಬರಬರುತ್ತ ಕನ್ನಡವೇ ನನ್ನ ಉಸಿರಾಗಿ, ಅಸುವಾಗಿ ಬಿಟ್ಟ ಕಾರಣ ಉಳಿದ ಭಾಷೆಗಳ ನನ್ನ ಜ್ಞಾನ ಕ್ಷೀಣಿಸುತ್ತಲೇ ಹೋಯಿತೆಂಬುದು ಕಟುವಾದ ಸತ್ಯ.



## ಮತ್ತೆ ಕಲಬುರಗಿಯಲ್ಲಿ :

ಕಲಬುರಗಿಗೆ ತುಂಬ ಹಿಗ್ಗಿನೊಡನೆ ಬಂದೆವು ನಾವು. ಅಲ್ಲಿ ಒಂದೆರಡು ಮನೆ ಬದಲಿಸಿ ಕೊನೆಗೆ ಕಡಗಂಚಿ ಪಾಟೀಲರ ಮನೆ ಬಾಡಿಗೆಗೆ ಪಡೆದು ಅಲ್ಲಿ ಕೆಲವು ತಿಂಗಳು ಸುಖವಾಗಿದ್ದೆವು. ನಾವು ಕಲಬುರಗಿ ತಲುಪುತ್ತಲೆ ಶ್ರೀ ಶರಣಬಸವೇಶ್ವರರಿಗೆ ಭಕ್ತಿ ಸಲ್ಲಿಸಿ, ಪೂಜ್ಯ ದೊಡ್ಡಪ್ಪಾ ಅಪ್ಪಾ ಅವರ ಆಶೀರ್ವಾದ ಪಡೆದುಕೊಂಡು ಬಂದೆವು. ಮಹಾಗಾಂವಿನ ಸಂಗಸೆಟ್ಟಿ ಪಾಟೀಲರು ಧಾವಿಸಿ ಬಂದಿದ್ದರು. ಮೈನಾತಾಯಿ ಖೇಣಿಯವರ, ಚಂದ್ರಶೇಖರ ಪಾಟೀಲರ ತಂದೆಯವರಾಗಿದ್ದ ಅವರು ಬಹಳ ವಾತ್ಸಲ್ಯ ಪರರು. ಅವರ ಎರಡನೆಯ ಮಗಳು ಪಾರ್ವತಕ್ಕನವರ ಮದುವೆ ಕೆ. ಬಸವಣ್ಣನವರೊಡನೆ ಮಹಾಗಾಂವಿನಲ್ಲಿ ಜರುಗಿದಾಗ ನಾನು ಹೋಗಿದ್ದೆ. ಅವರ ಇನ್ನಿಬ್ಬರು ಹೆಣ್ಣು ಮಕ್ಕಳನ್ನು ಡಾ॥ ಬಿ.ಫ್ಹಿ. ಪಾಟೀಲ ಹಾಗೂ ರಾಯ್ಚೂರಿನ ಚಂದ್ರಶೇಖರಿಗೆ ಕೊಟ್ಟರವರು. ಇವರೆಲ್ಲರೂ ನನ್ನ ಗೆಳೆಯರೇ. ಅವರ ಇನ್ನೊಬ್ಬ ಮಗ ರುದ್ರ ಸೆಟ್ಟಿಯವರ ಸ್ನೇಹ ಹೈದರಾಬಾದಿನಲ್ಲಿಯೇ ದೊರೆತಿದ್ದಿತು; ಅವರ ಕೊನೆಯ ಮಗ ನೀಲಕಂಠ ಪಾಟೀಲರಂತೂ ನನ್ನ 'ಆತ್ಮಾರ್ಪಣ' ನಾಟಕದಲ್ಲಿ ಚೆನ್ನಬಸವಣ್ಣನ ಪಾತ್ರವಹಿಸಿ ನನಗೆ ಅಳಿಯರಾದವರು. ಇಂದಿಗೂ ನನ್ನನ್ನು ಮಾಮಾ ಎಂದೇ ಕರೆಯುವರು. ಹೀಗಾಗಿ ಈ ಮನೆತನದೊಡನೆ ನನ್ನ ಸಂಬಂಧ ಘನಿಷ್ಠವಾದುದಾಗಿತ್ತು ಇದೇ ರೀತಿ ಕಮಲಾಪುರದ ಶಂಕರಸೆಟ್ಟಿಯವರೊಡನೆಯೂ ಆತ್ಮೀಯತೆ ಬೆಳೆದಿದ್ದಿತು. ಹಳೆಯ ಗೆಳೆಯರಾದ ಮಹಾಗಾಂವ್ ಶರಣಯ್ಯನವರು, ಪಲ್ಲಾಪುರಮಠ ಷಡಕ್ಷರಯ್ಯನವರು, ಪ್ರಕಾಶಚಂದ್ರ ಕೊಠಾರಿ ಅವರು, ದತ್ತಾತ್ರೇಯ ಅವರಾದಿ ಅವರು, ಶರಣಗೌಡ ಇನಾಮದಾರರು, ಇನ್ನೂ ಅನೇಕರು ನಮಗೆ ಸ್ನೇಹದ ವಾತಾವರಣವನ್ನು ಒದಗಿಸಿದ್ದರು. ಆಫೀಸಿನಲ್ಲಿ ಕಾರ್ಯದ ಒತ್ತಡವೂ ಹೆಚ್ಚಾಗಿರಲಿಲ್ಲ. ಕೈಕೆಳಗಿನ ಜನರೂ ಒಳ್ಳೆಯವರಿದ್ದರು. ಹೀಗಾಗಿ ನೆಮ್ಮದಿಯೊಡನೆ ಕೆಲವು ತಿಂಗಳುಗಳು ಉರುಳಿದುವು.

ಒಂದು ದಿನ ಹೊಸಪೇಟೆ–ಹರಪನಹಳ್ಳಿಯಿಂದ ಶ್ರೀ ವೆಂಕೋಬಸೆಟ್ಟರು ಬಂದರು. ಹರಪನಹಳ್ಳಿಯಲ್ಲಿ ಜರುಗಲಿದ್ದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಾನು ಸಾಹಿತ್ಯಗೋಷ್ಠಿಯ ಅಧ್ಯಕ್ಷನಾಗಬೇಕೆಂದು ಸ್ವಾಗತ ಸಮಿತಿಯ ಕೋರಿಕೆಯ ಕಾಗದದೊಡನೆ ಬಂದಿದ್ದರವರು, ನಾನು ಮಂಕಾದೆ. 'ನಾನದಕ್ಕೆ ಅರ್ಹನೆ?' ಎಂಬ ಅನುಮಾನವೊಂದು ಕಡೆಗೆ: 'ಇದಕ್ಕೆ ಮೇಲಧಿಕಾರಿಗಳಿಂದ ಅನುಮತಿ ಸಿಕ್ಕೀತೆ?' ಎಂಬ ಸಂದೇಹವಿನ್ನೊಂದು ಕಡೆಗೆ. ಏನೇ ಆಗಲಿ ಎಂದುಕೊಂಡು ಅಂದಿನ ಅವ್ವಲ್ ತಾಲೂಕದಾರರಾಗಿದ್ದ ಅಬ್ದುಲ್ಲಾಖಾನ ಸಾಹೇಬರ ಬಳಿಗೆ ಹೋಗಿ

ಅನುಮತಿ ಕೋರುವ ಮನವಿಯೊಂದನ್ನಿತ್ತೆ. ಅದರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವು ಶುದ್ಧ ಸಾಹಿತ್ಯಿಕ ಸಮ್ಮೇಳನವೆಂದೂ, 'ಸಾಹಿತ್ಯಗೋಷ್ಠಿ'ಯಂತೂ ಅದರ ಹೆಸರೇ ಸೂಚಿಸುವಂತೆ ಸಾಹಿತ್ಯ ಮಾತ್ರವನ್ನು ಚರ್ಚಿಸಿದ ಗೋಷ್ಠಿಯೆಂದೂ ಬರೆದಿದ್ದೆ. ಅವರು ನಿಸ್ಸಂಕೋಚವಾಗಿ ಅನುಮತಿಯಿತ್ತು ಬಿಟ್ಟರು. ಇಷ್ಟೇ ಅಲ್ಲ, 'ಹೈದರಾಬಾದು ಸಂಸ್ಥಾನದವರೊಬ್ಬರಿಗೆ ಈ ಗೌರವ ಬಂದುದು ಅಭಿನಂದನೀಯ' ಎಂದು ಕೈ ಕುಲುಕಿದರು. ನಾನು "ಇದಕ್ಕೆ ಮಾಲಗುಜಾರಿಯ ಒಪ್ಪಿಗೆಯೂ ಬೇಕಾಗಬಹುದೇನೋ" ಎಂದು ನನ್ನ ಮನಸ್ಸಿನಲ್ಲಿದ್ದುದನ್ನು ಹೊರಗೆಡಹಿದೆ. ಯಾಕೆಂದರೆ ಸಮ್ಮೇಳನ ನಡೆಯುತ್ತಿದ್ದುದು ಹೈದರಾಬಾದು ಸಂಸ್ಥಾನದ ಹೊರಗೆ. 'ಅದು ಬೇಕೆನಿಸಿದರೆ ಆಮೇಲೆ ಬರೆದು ತರಿಸಿಕೊಂಡರಾಯಿತು. ನೀವು ಹೋಗಿ ಬನ್ನಿರಿ" ಎಂದು ಹೇಳಿ ಲಿಖಿತ ಅನುಮತಿಯನ್ನು ಕೊಟ್ಟೇಬಿಟ್ಟರು! ಗುಡ್ಡದಷ್ಟು ಭಾರವಾದುದೆಂದು ಭಾವಿಸಿದುದು ಕಡ್ಡಿಯಷ್ಟು ಹಗುರವಾಗಿ ಬಿಟ್ಟಿದ್ದಿತು!

ಹರಪನಹಳ್ಳಿಯ ಸಾಹಿತ್ಯ ಸಮ್ಮೇಳನ ಬಹಳ ಯಶಸ್ವಿಯಾಗಿ ಜರುಗಿತು. ದಿ.ಸಿ.ಕೆ. ವೆಂಕಟರಾಮಯ್ಯನವರ ಸುದೀರ್ಘವಾದ ಅಧ್ಯಕ್ಷ ಭಾಷಣವನ್ನು ಅವರು ಪೂರ್ಣ ಓದದೆ, ಅಲ್ಲಿಷ್ಟು ಇಲ್ಲಿಷ್ಟು ಓದಿ ತಮ್ಮ ಅಸ್ಖಲಿತ ವಾಣಿಯಲ್ಲಿ ಉತ್ಸೂರ್ತ ಉಪನ್ಯಾಸ ನೀಡಿದುದು ಬಹಳ ಪರಿಣಾಮಕಾರಿಯಾಗಿದ್ದಿತು. ಉದ್ಘಾಟಕರಾದ ಮದ್ರಾಸ್ ಮಂತ್ರಿ ಅತ್ತಾವರ್ ಬಾಲಕೃಷ್ಣ ಶೆಟ್ಟಿಯವರ ಉದ್ಘಾಟನಾ ಭಾಷಣವೂ ಔಚಿತ್ಯಪೂರ್ಣವಾದುದಾಗಿದ್ದಿತು. ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಮಾನ್ಯ ಮಾಸ್ತಿಯವರ ಮಾರ್ಗದರ್ಶನ ಮನೋಜ್ಞವಾದುದಾಗಿದ್ದಿತು. ಸ್ವಾಗತಾಧ್ಯಕ್ಷ ಶ್ರೀ ಇಜೇರಿ ಸಿರಸಪ್ಪನವರು ಎಲ್ಲ ವ್ಯವಸ್ಥೆಗಳನ್ನೂ ಅತ್ಯಂತ ಸಮರ್ಪಕವಾಗಿ ಮಾಡಿದ್ದರು. ನಾನು ಚತುರ್ಭಾಷಾ ಪಂಡಿತರೂ, ನ್ಯಾಯಾಧೀಶರೂ ಆಗಿದ್ದ ಶ್ರೀ ಟಿ.ಎಚ್.ಎಮ್. ಸದಾಶಿವಯ್ಯನವರ ಮನೆಯಲ್ಲಿ ತಂಗಿದ್ದೆ. ಅವರ ಧರ್ಮಪತ್ನಿ ಸಾಧ್ವಿ ಸರ್ವಮಂಗಳಮ್ಮನವರ ವಾತ್ಸಲ್ಯ ರಕ್ಷಣೆಯಲ್ಲಿ ಬಹಳ ಸುಖವಾಗಿದ್ದೆ, ನನಗೆ ಬೀಚಿಯವರ, ಮಿರ್ಜಿ ಅಣ್ಣಾರಾಯರ, ಕೋ.ಚೆ. ಅವರ, ಪ್ರೊ॥ ಜಿ.ಎಸ್. ಹಾಲಪ್ಪನವರ, ಬೆಟಗೇರಿ ಕೃಷ್ಣಶರ್ಮರ, ಜೋಳದ ರಾಶಿ ದೊಡ್ಡನಗೌಡರ ಇನ್ನೂ ಅನೇಕರ ನಿಕಟ ಸಂಪರ್ಕ ಪ್ರಾಪ್ತವಾದುದು ಅಲ್ಲಿಯೇ. ನನ್ನ ಅಧ್ಯಕ್ಷ ಭಾಷಣಕ್ಕೆ 'ಸಾಹಿತಿಯ ಸಮಾಜ ದರ್ಶನ' ವೆಂಬ ಹೆಸರಕೊಟ್ಟಿದ್ದೆ. ಭಾಷಣ ಚೆನ್ನಾಗಿತ್ತೆಂದು ಕೇಳಿದವರಲ್ಲಿ ಕೆಲವರು ಬಂದು ಹೇಳಿದರು ನನಗೆ. ಆಗ ಇನ್ನೂ ೨೬ ಇಲ್ಲವೆ ೨೭ ವರ್ಷದವನಾಗಿದ್ದ ನನ್ನ ಮೇಲೆ ಬಿದ್ದಿದ್ದ ಆ ಗುರುತರವಾದ ಹೊಣೆಯನ್ನು ಹೇಗೆ ನಿರ್ವಹಿಸುವುದೆಂದು ಅಂಜಿದ್ದೆ. ನನ್ನ ಭಾಷಣವನ್ನೂ, ಕವಿಮೇಳದಲ್ಲಿ ಓದಿದ ಕವಿತೆ 'ಮುಸುಕು ತೆರೆ'ಯನ್ನೂ ಅನೇಕರು ಮೆಚ್ಚಿದುದನ್ನು ನೋಡಿ ನನಗೆ



ನಿಜವಾಗಿ ಧೈರ್ಯ ಬಂದಿತು. ಮಾಸ್ತಿಯವರಿಗಂತೂ ಅತ್ಯಾನಂದವಾಗಿದ್ದಿತು. ಅವರು ಏಕೀಕರಣ ಧುರೀಣ ಶ್ರೀ ಜಿನರಾಜ ಹೆಗ್ಗಡೆಯವರಿಗೆ ನನ್ನ ಪರಿಚಯ ಮಾಡಿಕೊಡುತ್ತ, "ಈ ಹುಡುಗನಲ್ಲಿ ಪ್ರತಿಭೆಯಿದೆಯೆಂದು ಇವನಿನ್ನೂ ವಿದ್ಯಾರ್ಥಿಯಾಗಿದ್ದಾಗಲೇ ಗುರುತಿಸಿದ್ದೆ. ನನ್ನೆಣಿಕೆ ಹುಸಿಯಾಗಲಿಲ್ಲ. ಹುಡುಗನಿವ ನನ್ನ ನಿರೀಕ್ಷೆಯಂತೆಯೇ ಬೆಳೆಯುವಂತಿದ್ದಾನೆ. He is not a mere writer; he is a thinker, too' ಎಂದು ಹಿಗ್ಗಿ ಹೇಳಿದರು. ಆಗ ನಾನು, "ಸರ್, ನಾನು ತಹಸೀಲ್ದಾರನಾಗಿ ಆರಿಸಿ ಬಂದ ಸುದ್ದಿ ಬಂದಾಗ ತಾವು ಕೊಪ್ಪಳದಲ್ಲಿದ್ದಿರಂತೆ. ಈ ಸುದ್ದಿ ಕೇಳಿ "ಇದು ಕನ್ನಡಕ್ಕೊಂದು ನಷ್ಟ"ವೆಂದು ಉದ್ಗರಿಸಿದ್ದಿರಂತೆ. ನಾನು ಕನ್ನಡದ ಕೈಬಿಡುವುದಿಲ್ಲ. ತಮ್ಮ ಆಶೀರ್ವಾದವಿದ್ದರೆ ಸರಕಾರೀ ಸೇವೆಯಲ್ಲಿದ್ದೇ ತಾವು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದಂತೆ ನಾನೂ ಕೈಲಾದಷ್ಟು ಕನ್ನಡ ಸಾಹಿತ್ಯ ಸೇವೆ ಮಾಡಬೇಕೆಂದಿದ್ದೇನೆ. ತಮ್ಮಷ್ಟಲ್ಲದಿದ್ದರೂ ನನ್ನ ಯೋಗ್ಯತೆಯಿರುವಷ್ಟು ಮಾಡುವೆನೆಂದು ವಚನವೀಯುತ್ತೇನೆ" ಎಂದೆ. ಅವರು, "ನನ್ನ ಸಂಪೂರ್ಣ ಆಶೀರ್ವಾದ ನಿನಗಿದೆಯಪ್ಪಾ. ನಿಶ್ಚಯವಾಗಿ ನೀನು ನಿನ್ನ ವಚನ ಪೂರೈಸುವಿ" ಎಂದು ಹರಿಸಿದರು. ಪಕ್ಕದಲ್ಲಿದ್ದ ಸಿ.ಕೆ. ವೆಂಕಟರಾಮಯ್ಯನವರೂ ಹರಸಿದರು.

ಆದರೆ ಇವರೀರ್ವರ ಮನಸ್ಸಿಗೆ ನೋವು ಉಂಟಾಗುವಂಥದೊಂದು ವಿಷಯ ಕೋ.ಚೆ. ಅವರು ಓದಿದ ಕವಿತೆಯಲ್ಲಿದ್ದಿತು. ಅದನ್ನವರು ಆಕ್ಷೇಪಿಸಿದರಾದರೂ ನನ್ನ ಉಪಸಂಹಾರ ಭಾಷಣ ಕೇಳಿದ ಮೇಲೆ ಮರೆತು ಮುನ್ನಿನಂತಾದರು. ಕರ್ನಾಟಕದಲ್ಲಿ ವಿಶ್ವವಿದ್ಯಾಲಯಗಳು ಎಂಬ ಚರ್ಚೆ ನನ್ನ ಅಧ್ಯಕ್ಷತೆಯಲ್ಲಿಯೇ ನಡೆಯಲೆಂದು ಹೇಳಿ ತಮ್ಮ ಹಿರಿತನ ಮೆರೆದರು. ಚರ್ಚೆಯಲ್ಲಿ ತಾವೂ ಪಾಲುಗೊಂಡರು.

ಶ್ರೀ ಬೆಟಗೇರಿ ಕೃಷ್ಣಶರ್ಮರ ಜಾನಪದ ಸಾಹಿತ್ಯ ಗೋಷ್ಠಿಯ ಅಧ್ಯಕ್ಷ ಭಾಷಣ ನನಗೆ ಬಹಳ ಹಿಡಿಸಿದ್ದಿತು. ಜಿನೈಕ್ಯರಾದ ಮಿರ್ಜಿ ಅಣ್ಣಾರಾಯರಿಗೆ ಅವರ 'ನಿಸರ್ಗ' ಕಾದಂಬರಿಗಾಗಿ ಒಂದು ನೂರು ರೂಪಾಯಿಗಳ ಬಹುಮಾನವನ್ನು ಮಾನ್ಯ ಮಾಸ್ತಿಯವರು ಪರಿಷತ್ತಿನ ಪರವಾಗಿ ನೀಡಿದಾಗ ನನಗೆ ಹಿಗ್ಗೋ ಹಿಗ್ಗು. 'ನಾನೂ ಒಮ್ಮಿಲ್ಲೊಮ್ಮೆ ಬಹುಮಾನ ಪಡೆದೇನೆ?' ಎಂಬ ಪ್ರಶ್ನೆಯೂ ಉದ್ಭವಿಸಿ ಮರೆಯಾಯಿತು ಮನದಲ್ಲಿ. ಆಶು ಕವಿತಾ ಸ್ಪರ್ಧೆ, ಗಮನ ಸ್ಪರ್ಧೆ ಇತ್ಯಾದಿಗಳೂ ಉನ್ನತ ಮಟ್ಟದಲ್ಲಿ ನಡೆದುವು. ಆಗ ಸಾಹಿತ್ಯ ಸಮ್ಮೇಳನಗಳಲ್ಲಿ ಕಾಣುತ್ತಿದ್ದ ಎಲ್ಲ ಶ್ರೇಷ್ಠ ಸಾಹಿತಿಗಳ ಉಪಸ್ಥಿತಿ. ಉದಯೋನ್ಮುಖ ಸಾಹಿತಿಗಳ ಕಲಿವ ಹಂಬಲ, ಸಾಹಿತ್ಯದಲ್ಲಿಯೂ ರಾಜಕೀಯ ಧುರೀಣನೇಕರ ಅಕೃತಕ ಆಸಕ್ತಿ. ವಿದ್ಯಾರ್ಥಿಗಳಲ್ಲಿ

ಸಾಹಿತಿಗಳ ಹಾಗೂ ಸಾಹಿತ್ಯದ ಬಗ್ಗೆ ಇದ್ದ ಗೌರವಭಾವ, ಶ್ರೀಸಾಮಾನ್ಯರಿಗೂ ಸಮ್ಮೇಳನಗಳಲ್ಲಿದ್ದ, ಸಾಹಿತ್ಯದಲ್ಲಿದ್ದ ಅಭಿರುಚಿ, ಪರಸ್ಪರ ಪ್ರೀತಿ-ವಿಶ್ವಾಸಗಳು, ಕನ್ನಡದ ಬಗ್ಗೆ ನಿಜವಾದ ಕಳಕಳಿ, ಕನ್ನಡಿಗರ ಬಗ್ಗೆ ಸಹಜ ವಾತ್ಸಲ್ಯ ಇತ್ಯಾದಿಗಳು ಈಗಿನ ಸಮ್ಮೇಳನಗಳಲ್ಲಿ ಇಲ್ಲವೆಂದು ಕೊರಗಿ ಪ್ರಯೋಜನವಿಲ್ಲ. ರಾಜಕೀಯ ಧುರೀಣರಿಗಷ್ಟೇ ಅಲ್ಲ, ಎಲ್ಲರಿಗೂ ಸಾಹಿತ್ಯದಲ್ಲಿ ಆಳವಾದ ಆಸಕ್ತಿ, ಸದಭಿರುಚಿ ಕಡಿಮೆಯಾಗುತ್ತಿವೆ. ಸ್ವಾತಂತ್ರ್ಯಪೂರ್ವ ಯುಗದಲ್ಲಿ ಸ್ವಾತಂತ್ರ್ಯ ಸಂಪಾದನೆಯ ಸಾಹಸಕ್ಕೆ, ಅದರ ಪ್ರಬಲ ಉತ್ಕಟ ಅದಮ್ಯ ಆಕಾಂಕ್ಷೆಗೆ, ಅದಕ್ಕಾಗಿ ನೀಡಬೇಕಾಗಿದ್ದ ತ್ಯಾಗ ಬಲಿದಾನಗಳಿಗೆ ಪ್ರಖರ ಪ್ರೇರಣೆಯನ್ನು ನೀಡಿದ್ದ ಹೊಸಗನ್ನಡ ಸಾಹಿತ್ಯವು ಸ್ವಾತಂತ್ರ್ಯೋತ್ತರ ಯುಗದಲ್ಲಿ ಸ್ವಾತಂತ್ರ್ಯದ ಸತ್ಫಲಗಳು ಸರ್ವರಿಗೆ ತಲುಪುವ ದಿಶೆಯಲ್ಲಿ, ಸಬಲ ಭಾರತ ನಿರ್ಮಾಣದ ಮಹಾಮಣಿಹ ಸುಗಮವಾಗುವಂತೆ ಅದಕ್ಕೆ ವಿಘ್ನವಾಗಿ ನಿಂತಿದ್ದ ಸಾಮಂತಶಾಹೀ ಅವಶೇಷಗಳು, ಜಮೀನ್‌ದಾರೀ ಬಂಡವಾಳ ಶಾಹೀ ಅಭಿಶಾಪಗಳು, ಪುರೋಹಿತಶಾಹಿಯ ವಿಷಫಲಗಳಾದ ಜಾತಿ ವ್ಯವಸ್ಥೆ, ಅಂಧ ಶ್ರದ್ಧೆ, ತರ್ಕಶೂನ್ಯತೆ, ಅವೈಜ್ಞಾನಿಕತೆ, ಪರಿವರ್ತನ ಪರಾನ್ಮುಖತೆ, ಪಾರಲೌಕಿಕತೆ, ಪಲಾಯನವಾದ, ಕರ್ಮಾವಲಂಬನ, ಅಸ್ಪೃಶ್ಯತೆ, ಅಸಮತೆ, ಅನ್ಯಾಯ ಮೊದಲಾದುವನ್ನು ನಿರ್ಮೂಲಗೊಳಿಸುವ ದಿಕ್ಕಿನಲ್ಲಿ ಪರಿಣಾಮಕಾರಿಯಾದ, ಕ್ರಿಯಾಶೀಲವಾದ ಪಾತ್ರವನ್ನು ವಹಿಸದಿದ್ದುದೂ ಸಾಹಿತ್ಯದ ಜನಪ್ರಿಯತೆಯು ಕಡಿಮೆಯಗಲು ಕಾರಣವಾಗಿದ್ದರೂ ಆಗಿರಬಹುದು. ಇದು ಕನ್ನಡ ಸಾಹಿತ್ಯಕ್ಕೆ ಮಾತ್ರ ಅನ್ವಯಿಸುವ ಬೆಳವಣಿಗೆಯೇನಲ್ಲ, ಪ್ರಪಂಚದ ಎಲ್ಲ ಸಾಹಿತ್ಯಗಳಿಗೂ ಹೆಚ್ಚು ಕಡಿಮೆ ಪ್ರಮಾಣದಲ್ಲಿ ಅನ್ವಯಿಸಬಹುದಾದ ಘಟನೆಯೇನೋ. ರಾಜಕೀಯ ಉದ್ದೇಶಕ್ಕಾಗಿ ಭಾಷೆಯನ್ನು ಬಳಸಿಕೊಂಡ ಉದಾಹರಣೆಗಳಿವೆ; ರಾಜಕೀಯ ಉದ್ದೇಶಕ್ಕಾಗಿ ಸಾಹಿತ್ಯವನ್ನೂ ಉಪಯೋಗಿಸಿಕೊಂಡ ಉದಾಹರಣೆಗಳಿವೆ. ಆದರೆ ರಾಜಕೀಯದ ದಿಕ್ಕನ್ನೇ ಬದಲಿಸುವ, ಸಮಾಜದ ಸ್ವರೂಪವನ್ನೇ ಸರ್ವಹಿತ ಸಾಧನೆಗೆ ಸಾಧ್ಯತೆ ನೀಡುವ ರೀತಿಯಲ್ಲಿ ಪರಿವರ್ತಿಸುವ, ಮನುಜನ ಮಾನಸ ಸ್ತರಗಳಲ್ಲಿಯೇ ಮೂಲಭೂತ ಕ್ರಾಂತಿಯನ್ನು ತರುವ ಮಹತ್ತರವಾದ ಮಣಿಹಕ್ಕೆ ಸಾಹಿತ್ಯವೇ, ಸಾಹಿತಿಗಳೇ ನೇತಾರರಾದ ಉದಾಹರಣೆಗಳನ್ನಿನ್ನೂ ಕಾಣಬೇಕಿದೆ. ಈ ದೃಷ್ಟಿಯಿಂದ ಹಿಂದಕ್ಕೆ ಹೊರಳಿ ನೋಡಿದಾಗ ಅಂದಿನ ಸಾಹಿತ್ಯ ಸಮ್ಮೇಳನಗಳು, ಸಾಹಿತಿಗಳು ಆ ಕಾಲದ ಕರೆಗೆ ತಕ್ಕ ರೀತಿಯಲ್ಲಿ ಪ್ರತಿಸ್ಪಂದಿಸಿದರೆಂದೆ ಹೇಳಬೇಕು.

ಮುಂದೆ ಒಂದು ವರ್ಷ ಕಲಬುರಗಿಯ ಜೀವನ ನಿಂತು ನಿಂತು ಮುಂದೆ ಸಾಗುವ ಮಾಲಗಾಡಿಯಂತೆ, ಜಂಬೂಸವಾರಿಯಂತೆ ಮುಂದುವರಿಯಿತು. ಹೈದರಾಬಾದು ಸಂಸ್ಥಾನದ ಹೊರಗೆ ಕಾಂಗ್ರೆಸ್ ಲೀಗುಗಳ ನಡುವಣ ಕಂದಕ



ಅಗಲವಾಗುತ್ತ ಹೋದಂತೆ ಹೈದರಾಬಾದಿನ ಒಳಗೂ ಹಿಂದೂ-ಮುಸ್ಲಿಂ ಸಂಬಂಧಗಳು ಕಹಿಗೊಳ್ಳುತ್ತ ನಡೆದಿದ್ದುವು. ಇಂಥ ಪರಿಸ್ಥಿತಿಯಲ್ಲಿ ನಿಜವಾಗಿಯೂ ತೂಕದ ವ್ಯಕ್ತಿಗಳಾಗಿದ್ದ ನವಾಬ್ ಬಹಾದೂರ್ ಯಾರಜಂಗರು ಇಲ್ಲವಾದದ್ದು ದೊಡ್ಡ ತೆರಪನ್ನು ತಂದೊಡ್ಡಿದ್ದಿತು. ಕಾಸಿಮ್ ರಜವಿಯಂಥವರು ಮುಸ್ಲಿಂ ಸಮಾಜದ ಮುಂದಾಳುಗಳಾಗಲು ಇದು ಕಾರಣವಾಯಿತು. ತತ್ಪರಿಣಾಮವಾಗಿ ರಾಜಕಾರಣ ಸಂಧಾನ ಸೌಧಗಳಿಂದ ಹೊರಬಿದ್ದು ಬೀದಿಗಿಳಿಯಿತು; ವಿಚಾರ ವಿನಿಮಯ, ಚರ್ಚೆ, ರಾಜೀಸೂತ್ರಗಳ ಸ್ಥಳವನ್ನು ಭಾವಾವೇಶ, ದ್ವೇಷ, ತ್ವೇಷಗಳು ಆಕ್ರಮಿಸಿದುವು. ಹಿಂದೂ-ಮುಸ್ಲಿಮರಲ್ಲಿ ಬಾಲ್ಯಸ್ನೇಹಿತರಾಗಿ ಬೆಳೆದು ಬಂದಿದ್ದವರೂ ಸಹ ಒಬ್ಬರೊಬ್ಬರಿಗೆ ಶತ್ರುಗಳಂತೆ ತೋರತೊಡಗಿದರು. ವಾಯುಮಂಡಲ ವಿಷಯವಾಗತೊಡಗಿತು

## ಭಾರತದ ಸ್ವಾತಂತ್ರ್ಯ :

ನನ್ನ ಸತ್ವ ಪರೀಕ್ಷೆಗಾಗಿಯೋ ಸ್ನೇಹ ಪರೀಕ್ಷೆಗೆಂದೋ, ಇದೇ ಸಮಯಕ್ಕೆ ನನ್ನ ಮಿತ್ರ ಮದನಸಿಂಗರೂ ಕಲಬುರಗಿಗೆ ತಾಲೂಕದಾರರ ಇನ್ನೊಬ್ಬ ಸಹಾಯಕರಾಗಿ ಬಂದರು. ಭಾರತಕ್ಕೆ ಸ್ವಾತಂತ್ರ್ಯವೂ ಬಂದಿತು. ರಾಷ್ಟ್ರವಿಭಜನೆ ಹೆತ್ತ ಶನಿ ಸಂತಾನವಾಗಿ ಪಂಜಾಬಿನಲ್ಲಿ, ಬಂಗ್ಲಾದಲ್ಲಿ ಕಲ್ಲೆದೆಯೂ ಕಂಪಿಸುವಂತೆ ಮಾಡಿದ ಕಗ್ಗೊಲೆಗಳು ನಡೆದುವು. ಇತ್ತ ದೆಹಲಿಯಲ್ಲಿ ಸ್ವಾತಂತ್ರ್ಯೋದಯದ ಸಂಭ್ರಮದ ಸಮಾರಂಭ ನಡೆದಿದ್ದರೆ ಅತ್ತ ಪಂಜಾಬ, ಬಂಗ್ಲಾಗಳಲ್ಲಿ, ಇನ್ನೂ ಹಲವಡೆಗಳಲ್ಲಿ ಹಿಂದೂ ಮುಸಲ್ಮಾನರ ರಕ್ತದ ಕಾಲುವೆಗಳು ಹರಿಯುತ್ತಲಿದ್ದುವು! ಬಾಪೂಜಿಯ ನವಾಖಾಲಿ ಯಾತ್ರೆ ಮುಸುಕುತ್ತಲಿದ್ದ ಕರಾಳ ಕಾರ್ಮೋಡದ ಬೆಳ್ಳಿಗೆರೆಯಾಗಿ ಮೂಡಿದ್ದಿತು. ಪಂಜಾಬಿನಲ್ಲಿ ಪುಟಿದೆದ್ದ ಮುಸ್ಲಿಂ-ಸಿಖ್ ದ್ವೇಷ ಹೈದರಾಬಾದಿನುದ್ದಕ್ಕೂ ತನ್ನ ರಕ್ಕಸನಾಲಗೆ ಚಾಚಿದ್ದಿತು. ಮದನಸಿಂಗ ನಿಜವಾಗಿ ಹೆದರಿ ಹೌಹಾರಿದ್ದರು. ಹೆಂಡತಿ ಮಕ್ಕಳನ್ನು ತವರೂರಿಗೆ ಕಳಿಸಿ ಒಬ್ಬರೇ ಬಂದಿದ್ದರು. "ನನಗೆ ನಿನ್ನನ್ನುಳಿದು ಉಳಿಸುವವರಾರೂ ಇಲ್ಲ, ನಿನ್ನ ಬೆನ್ನು ಬಿದ್ದಿದ್ದೇನೆ"-ಎಂದು ಹೇಳಿಬಿಟ್ಟರು. ನನಗೂ ಅವರ ಬಗ್ಗೆ ಕನಿಕರವೆನಿಸಿತು. ಆದಷ್ಟು ಇಬ್ಬರೂ ಕೂಡಿಯೇ ಇರುತ್ತಿದ್ದೆವು. ಸುದೈವದಿಂದ ಮಾನ್ವಿ ನರಸಿಂಗರಾಯರೂ ಅಲ್ಲಿಗೆ ವರ್ಗವಾಗಿ ಬಂದಿದ್ದರು. ನಾವು ಮೂವರು ಹೇಗೋ ಧೈರ್ಯ ತಂದುಕೊಂಡು ಒಬ್ಬರೊಬ್ಬರಿಗೆ ಆಸರೆಯಾಗಿ ಕಾಲ ನೂಕುತ್ತಿದ್ದೆವು. ಆದರೂ ಮಾದನಸಿಂಗ್ ಹೊರಗೆ ಹೊರಟನೆಂದರೆ ಅವರನ್ನು ನೋಡಿದ ರಝಾಕಾರರೆಲ್ಲರ ಕಣ್ಣುಗಳು ಕೆಂಪಾಗಿ ಬಿಡುತ್ತಿದ್ದುವು. ರಝಾಕಾರರೆಂದರೆ ಕಾಸಿಮ್ ರಜವಿಯವರ ಅಕ್ರಮ ಸೈನ್ಯವಾಗಿದ್ದಿತು.

## ಬಾಪೂಜಿ ಹತ್ಯೆ :

ಉಕ್ಕಿನ ಮನುಷ್ಯ ಸರದಾರ ಪಟೇಲರ ಅದ್ವಿತೀಯ ನೇತೃತ್ವದಲ್ಲಿ ದೇಶೀಯ ಸಂಸ್ಥಾನಗಳು ಭಾರತದ ಯೂನಿಯನ್ನಿನಲ್ಲಿ ಸೇರ್ಪಡೆಗೊಳ್ಳುವ ಪ್ರಕ್ರಿಯೆ ತ್ರಿವಿಧ ಮುಖವಾಗಿ, ಲೋಕವೇ ಬೆರಗಾಗುವ ರೀತಿಯಲ್ಲಿ ನಡೆಯಿತು. ಅದರ ವಿವರಗಳು ಇಲ್ಲಿ ಅಪ್ರಸ್ತುತ. ಸೇರದೆ ಸಿಡಿದು ನಿಂತ ಸಂಸ್ಥಾನಗಳಲ್ಲಿ ಹೈದರಾಬಾದು ಸಂಸ್ಥಾನವೂ ಒಂದಾಗಿದ್ದಿತು. ನಿಜಾಮರ ಮಹತ್ವಾಕಾಂಕ್ಷೆ, ಮುಸ್ಲಿಂ ಲೀಗಿನ ದ್ವಿಮುಖ ನೀತಿ–ಎಂದರೆ ಕಾಶ್ಮೀರದಲ್ಲಿ ಜನಮತದಂತೆ ಸೇರ್ಪಡೆಯ ತೀರ್ಮಾನವಾಗಬೇಕು, ಹೈದರಾಬಾದಿನಲ್ಲಿ ಸಂಸ್ಥಾನಿಕನ ಮನಸ್ಸಿನಂತೆ ಅದರ ನಿರ್ಣಯವಾಗಬೇಕು ಎಂಬ ದ್ವಿಮುಖ ನೀತಿ, ಎಲ್ಲ ರಂಗಗಳಲ್ಲಿಯೂ ಆಗ ಪ್ರಬಲರಾಗಿದ್ದ ಅಲ್ಲಿಯ ಮುಸಲ್ಮಾನರಿಗೆ ತಮ್ಮ ಪ್ರಾಧಾನ್ಯದ ಸ್ಥಾನಕ್ಕೆ ಚ್ಯುತಿ ಬಂದೀತೆಂಬ ಭೀತಿ–ಮುಂತಾದ ಕಾರಣಗಳು ಸೇರಿ ಹೈದರಾಬಾದಿನ ಸೇರ್ಪಡೆಯ ಸಮಸ್ಯೆ ಜಟಿಲವಿದ್ದುದು ಜಟಿಲತರ, ಜಟಿಲತಮವಾಗುತ್ತ ನಡೆದಿದ್ದಿತು. ಲಾರ್ಡ್ ಮೌಂಟ್‌ಬ್ಯಾಟನ್ನರ ವಿಶೇಷ ಪ್ರತಿನಿಧಿ ಸರ್ ವಾಲ್ಟರ್ ಮಾಂಕಟನ್ ಹೈದರಾಬಾದಿಗೆ ಬರುವುದೂ, ನಿಜಾಮರೊಡನೆ–ಅವರ ಮಂತ್ರಿಮಂಡಲದವರೊಡನೆ ಮಾತನಾಡಿ ಹೋಗುವುದೂ ಪ್ರಾರಂಭವಾಯಿತು. ಬಾಪೂಜಿಯವರ ಅಮಾನುಷ ಹತ್ಯೆ ಭಾರತವನ್ನಷ್ಟೇ ಅಲ್ಲ, ಮಾನವಲೋಕವನ್ನೇ ಶೋಕಸಾಗರದಲ್ಲಿ ಮುಳುಗಿತು. ಆ ರಾತ್ರಿ ನನ್ನ ಪತ್ನಿ, ಮಕ್ಕಳು ಬಿಕ್ಕಿ ಬಿಕ್ಕಿ ಅತ್ತರು. ನಾನೂ ಶೋಕಿಸಿದೆ. ನಾವೆಲ್ಲರೂ ಉಪವಾಸ ಮಲಗಿದೆವು. ಆದರೆ ಆಗ ನಮ್ಮಲ್ಲಿ ಅತಿಥಿಯಾಗಿದ್ದ ನಮ್ಮ ಸ್ನೇಹಿತರು ಒಂದು ಸೇರು ಹಾಲು ತರಿಸಿಕೊಂಡು, ಏನೂ ನಡೆದಿಲ್ಲವೇನೋ ಎಂಬಂತೆ ಗಟಗಟ ಕುಡಿದು. ಗಡದ್ದಾಗಿ ಮಲಗಿದರು. ಇಂಥವರೂ ಮನುಜ ಕುಲದಲ್ಲಿಯೇ ಇರುತ್ತಾರೆಂಬುದು ಅಗ ನನ್ನ ಗಮನಕ್ಕೆ ಬಂದಿತು. ಅದುವರೆಗೆ ಬದುಕಿನಲ್ಲಿರುವ ಕೆಡುಕಿನತ್ತ ನನ್ನ ಲಕ್ಷ್ಯ ಹೋಗಿರಲಿಲ್ಲವಂತಲ್ಲ. ಮನುಷ್ಯ ಕುಲದಲ್ಲಿ ದೇವ–ದಾನವರಿಬ್ಬರನ್ನೂ ಕಂಡಿದ್ದೆ; ರಸಿಕತನ ಪಶುತನಗಳೆರಡನ್ನೂ ಕಂಡಿದ್ದೆ; ತ್ಯಾಗ ಪ್ರೀತಿ ಸೇವೆ ಸ್ನೇಹ ಸಹಾನುಭೂತಿಗಳಂತೆಯೇ ಸ್ವಾರ್ಥ, ದ್ವೇಷ, ಶೋಷಣೆ, ವೈರ, ಮತ್ಸರಗಳನ್ನೂ ಕಂಡಿದ್ದೆ. ಆದರೆ ಈ ಯುಗದ ಪರಮೋನ್ನತ ಪುರುಷನ ಕ್ರೂರ ಕೊಲೆಯಾದಾಗಲೂ ಕರಗದಿದ್ದ ಕಲ್ಲೆದೆಯವರೂ ಇರಬಹುದೆಂದು ಊಹಿಸುವುದೂ ಸಾಧ್ಯವಿರಲಿಲ್ಲ ನನಗೆ! ನನ್ನ ಮನೆಯಲ್ಲಿಯೇ ಅಂಥವರೊಬ್ಬರು ಎದುರಿಗೇ ಇದ್ದುದನ್ನು ಕಂಡು ಸ್ತಂಭೀಭೂತನಾದೆ ನಾನು! ಪದವೀಧರರಾಗಿ, ಅಧಿಕಾರಿಯಾಗಿ ಆರಿಸಿಬಂದು, ಸಮಾಜದ ಮೇಲಿನ ಶ್ರೇಣಿಯಲ್ಲಿ ಸೇರ್ಪಡೆಯಾಗಿದ್ದ ಇಂಥವರೂ ಆ ಪ್ರಸಂಗದಲ್ಲಿ ಹೀಗೆ ಕಟುಕರಿಗಿಂತಲೂ ಕಡೆಯಾಗಿ ವರ್ತಿಸಿದುದನ್ನು



ಕಂಡು ನನಗೆ ಜಿಗುಪ್ಸೆಯಾಯಿತು. ಮುಂದೆ ಇಂಥದೇ ಇನ್ನೊಂದು ನಂಬಲಾಗದ ಹೀನತನದ ಪ್ರದರ್ಶನವನ್ನು ಎದುರಿಸುವ ಪ್ರಸಂಗ ನನಗೊದಗಿತು. ಪ್ರಧಾನಮಂತ್ರಿ ಪಂಡಿತ ಜವಾಹಲಲಾಲರು ನಿಧನರಾದ ಸುದ್ದಿ ಬರುತ್ತಲೇ ಅಂದು ಮುಖ್ಯಮಂತ್ರಿಗಳಾಗಿದ್ದ ಜನನಾಯಕ ನಿಜಲಿಂಗಪ್ಪನವರು ವಿಧಾನಸೌಧದಲ್ಲಿ ಶೋಕಸಭೆ ಕರೆದರು. ಆಗ ವಿಧಾನಸೌದಲ್ಲಿದ್ದ ನಾನೂ ಕಂಬನಿದುಂಬಿದ ಕಣ್ಣುಗಳೊಡನೆ ಹೋದೆ. ಎಲ್ಲರೂ ಅಲ್ಲಿ ಅಶ್ರುಪೂರಿತ ಅಕ್ಷಿಗಳವರೇ. ನಿಜಲಿಂಗಪ್ಪನವರ ಕುತ್ತಿಗೆ ಬಿಗಿದುಬಂದಿತ್ತಾಗಿ ಹೆಚ್ಚು ಮಾತನಾಡಲು ಅವರಿಂದ ಆಗಲಿಲ್ಲ. ಗದ್ಗದಿತ ಸ್ವರದಲ್ಲಿ ನಾಲ್ಕು ಹೃದಯಸ್ಪರ್ಶಿಯಾದ ಮಾತುಗಳನ್ನು ಹೇಳಿ ರಜೆ ಘೋಷಿದರು. ಭಾರವಾದ ಹೃದಯದೊಡನೆ ಮನೆಗೆ ಹೊರಟೆ. ನನ್ನನ್ನು ನೋಡುತ್ತಲೇ ವಿಧಾನಸೌಧದ ಮಾಲಿಯೊಬ್ಬ ನಗುತ್ತ ಕೇಳಿದ: "ಎಷ್ಟು ದಿನ ರಜೆ ಕೊಟ್ಟರು, ಸಾರ್?" ನನಗೆ ಈಟಿಯಿಂದ ಇರಿದಷ್ಟು ನೋವಾಯಿತು. ಬಾಪೂಜಿ ಈ ದೇಶದ ಸ್ವಾತಂತ್ರ್ಯ ಪ್ರಾಪ್ತಿಗಾಗಿ, ದೀನದಲಿತರ ಪತಿತ ಪದಹತರ ಉದ್ಧಾರಕ್ಕಾಗಿ ತಮ್ಮ ಜೀವನದ ಒಂದು ನಿಮಿಷವೂ ವ್ಯರ್ಥವಾಗದ ಹಾಗೆ ಹಗಲಿರುಳು ದುಡಿದರು; ಪಂಡಿತಜೀ ಹದಿನೇಳು ವರ್ಷ ಪ್ರಧಾನಿ ಪದದಲ್ಲಿದ್ದೂ 'ಬಡವ ಬಡವ'ನೆಂದು ಬಡಬಡಿಸುತ್ತಲೇ ಮಡಿದರು. ಇಂಥವರು ನಮ್ಮನ್ನಗಲಿದಾಗ ಹಾಲು ಕುಡಿದವರನ್ನೂ ನೋಡಿದೆ, ಹಲ್ಲು ಕಿರಿದವರನ್ನೂ ನೋಡಿದೆ! ಎಂಥ ಕೃತಘ್ನರ ದೇಶವಿದು! ಅಥವಾ ಎಂಥ ಅಜ್ಞರ ದೇಶವಿದು–ಎಂದು ನೆನೆದು ಈ ದೇಶದ ಭವಿತವ್ಯದ ಬಗ್ಗೆ ಭಯಭರಿತನಾದೆ. ಕಾಲಕಳೆದಂತೆ ಈ ದೇಶದ ಅನೇಕರಲ್ಲಿ ಪ್ರಚ್ಛನ್ನವಾಗಿದ್ದ ಪಶುತನ ನಿಶ್ಯಂಕೆಯೊಡನೆ ಪ್ರಕಟವಾಗತೊಡಗಿದುದನ್ನು ಕಂಡು ಕಳವಳಿಸಿದ್ದೇನೆ, ತಳಮಳಿಸಿದ್ದೇನೆ, ಹಳಹಳಿಸಿದ್ದೇನೆ! ಇನ್ನೇನ ಮಾಡಬಲ್ಲೆ?

## ನಿಜಾಮಶಾಹಿ :

ಒಂದು ವರ್ಷದ ಯಥಾಸ್ಥಿತಿ ಒಪ್ಪಂದ (Stand Still Agreement) ವಾದ ಮೇಲೂ ಭಾರತ ಸರಕಾರದೊಡನೆ ನಿಜಾಮ ಸರಕಾರದ ಸಂಬಂಧಗಳು ಸುಧಾರಿಸಲಿಲ್ಲ. ಕೆಡುತ್ತಲೇ ನಡೆದುವು. ಹೈದರಾಬಾದು ಸಂಸ್ಥಾನವನ್ನು ಪಾಕಿಸ್ಥಾನದ ಮುರನೆಯ ಭಾಗವನ್ನಾಗಿ ಮಾಡಬೇಕೆಂಬ ಭ್ರಮೆ ಹಲವರಲ್ಲಿ; ನಿಜಾಮರನ್ನು 'ಹಿಜ್ ಮೆಜೆಸ್ಟಿ' ಮಾಡಬೇಕೆಂಬ ಭ್ರಾಂತಿ ಇನ್ನು ಹಲವರಲ್ಲಿ. ಆಗ ಒಲ್ಲದ ಮನಸ್ಸಿನಿಂದ ನಿಜಾಮರ ಪ್ರಧಾನಮಂತ್ರಿಯಾಗಿ, ಒಂದಿಲ್ಲೊಂದು ಗೌರವಾನ್ವಿತವಾದ ಒಪ್ಪಂದ ಮಾಡಿಸಲು ವಿಫಲ ಪ್ರಯತ್ನ ಮಾಡಿ, ಭಗ್ನ ಹೃದಯದೊಡನೆ ಅಧಿಕಾರಕ್ಕೆ ತಿಲಾಂಜಲಿಯನ್ನಿತ್ತ ಸರ್ ಮಿರ್ಜಾ ಇಸ್ಮಾಯಿಲರ ನಿರ್ಗಮನದ ತರುವಾಯವಂತೂ ಅಬದ್ಧಕ್ಕೆ ಅಪ್ಪಣೆ ದೊರೆತಂತಾಯಿತು. ಏನಕೇನ ಪ್ರಕಾರೇಣ ಹೈದರಾಬಾದು

ಸಂಸ್ಥಾನವನ್ನು ಸ್ವತಂತ್ರ ರಾಷ್ಟ್ರವನ್ನೇ ಮಾಡಿಬಿಡಬೇಕೆಂಬ ಮಹತ್ವಾಕಾಂಕ್ಷೆ ನಿಜಾಮರ ಹಾಗೂ ಅವರ ಬೆಂಬಲಿಗರ ತಲೆಗೇರಿಬಿಟ್ಟಿತು. ಹೊರಗಿನಿಂದ ಮುಸಲ್ಮಾನರನ್ನು ಕರೆತಂದು ಹೈದರಾಬಾದು ಸಂಸ್ಥಾನದಲ್ಲಿ ಮುಸಲ್ಮಾನರ ಸಂಖ್ಯೆ ಬೆಳೆಸುವ ಭ್ರಾಮಕ ಪ್ರಯತ್ನಗಳು ನಡೆದುವು; ಸಿಡ್ನಿಕಾಟನ್ ರಾತ್ರೋರಾತ್ರಿ ಶಾಸ್ತ್ರಾಸ್ತ್ರಗಳ ಸರಬರಾಜು ಮಾಡತೊಡಗಿದ; ಹೈದರಾಬಾದಿನಲ್ಲಿ ಸೈನ್ಯ ವಿಸ್ತರಣೆ ಭರದಿಂದ ನಡೆಯತೊಡಗಿತು; ಎಲ್ಲೆಡೆಗಳಲ್ಲಿಯೂ ರಝಾಕಾರರ ಜಾಲ ಹರಡತೊಡಗಿತು; ಅರಬರನ್ನೂ, ಪಠಾಣರನ್ನೂ, ರೋಹಿಲಾ ಜನರನ್ನೂ ತಂದು ತಂದು ತುಂಬಲಾಯಿತು ಜಿಲ್ಲಾ–ತಾಲ್ಲೂಕು ಕೇಂದ್ರಗಳಲ್ಲಿ; ಅಧಿಕಾರಿಗಳಿಗೂ, ಸರಕಾರೀ ಕರ್ಮಚಾರಿಗಳಿಗೂ ಸೈನಿಕ ಶಿಕ್ಷಣ ಕಡ್ಡಾಯವಾಗಿಬಿಟ್ಟಿತು!

ದಿನದಿನಕ್ಕೆ ಪರಿಸ್ಥಿತಿ ಭಯಾನಕವಾಗುತ್ತ ನಡೆಯಿತು. ಬೀದರ ಜಿಲ್ಲೆಯಲ್ಲಿ ಪ್ರಾರಂಭವಾಗಿದ್ದ ಹಳ್ಳಿಗಳ ಲೂಟಿ, ಹಿಂದುಗಳಿಗೆ ಹಿಂಸೆ ಕಲಬುರಗಿ ಜಿಲ್ಲೆಗೂ ವ್ಯಾಪಿಸಿದುವು. ಹೆದರಿ ಹೌಹಾರಿದ ಹಿಂದುಗಳು ಮನೆಮಾರುಗಳನ್ನು ತೊರೆದು ಸೊನ್ನಲಾಪುರಕ್ಕೋ, ವಿಜಾಪುರಕ್ಕೋ, ತಮ್ಮ ತಮ್ಮ ಬೀಗರು ಬಂಧುಗಳ ಸ್ಥಳಗಳಿಗೋ ಓಡಿ ಹೋಗುವುದು ಪ್ರಾರಂಭವಾಯಿತು. ನನ್ನ ತಂದೆತಾಯಿಗಳೂ ಭಯಭೀತರಾಗಿ ಹುಬ್ಬಳ್ಳಿಯ ಸಮೀಪದ ಮಣಕವಾಡ ಎಂಬ ಹಳ್ಳಿಗೆ ವಲಸೆ ಹೋಗಿದ್ದರು. ಚಿ. ಅನ್ನದಾನಿ ಮುಂಡರಗಿ ಶಿಬಿರದ ಪ್ರಚಾರಾಧಿಕಾರಿಯಾಗಿ ಹೈದರಾಬಾದು ಸಂಸ್ಥಾನದ ಗಡಿಹಳ್ಳಿಗಳಲ್ಲಿ ಬಿಡುಗಡೆಯ ಹೋರಾಟ ಹೂಡಿದ್ದ ಶ್ರೀ ಶಿವಮೂರ್ತಿಸ್ವಾಮಿ ಅಳವಂಡಿ ಅವರೊಡನೆ. ಅವರು ಶಿಬಿರದ ಮುಖ್ಯಸ್ಥರು, ಇದರಂತೆ ಶರಣಗೌಡರು ಇತರರೂ ಸುತ್ತಲೂ ಶಿಬಿರಗಳನ್ನು ಸ್ಥಾಪಿಸಿ ಹೋರಾಟ ಆರಂಭಿಸಲು ರಝಾಕಾರರು ಇನ್ನಷ್ಟು ಕೆರಳಿದರು; ಇನ್ನಷ್ಟು ಅತ್ಯಾಚಾರಗಳು ಹೆಚ್ಚಿದುವು. ನಿರಪರಾಧಿಗಳೂ ಅವರ ಸುಲಿಗೆಗೆ, ಹಿಂಸೆಗೆ, ಅತ್ಯಾಚಾರಗಳಿಗೆ ಬಲಿಯಾಗತೊಡಗಿದರು. ಕಲಬುರಗಿಯಲ್ಲಿ ನಾನೇ ಕಣ್ಣಾರೆ ಕಂಡ ಘಟನೆಯೊಂದನ್ನು ವಿವರಿಸಿದರೆ ಸಾಕು–ಆ ಕಾಲದ ಭೀಕರತೆಯ ಕಲ್ಪನೆ ಬರುವುದು. ಒಬ್ಬ ಹಿಂದೂ ಅಂಗಡಿಕಾರ ತನ್ನತ್ತ ಇವರ ವಕ್ರದೃಷ್ಟಿ ಬೀಳದಿರಲೆಂದು ನಿಜಾಮರ ಫೋಟೋ ಇಟ್ಟು, ಅದಕ್ಕೆ ಪೂಜೆ ಮಾಡಿ ಕುಂಕುಮದ ಬೊಟ್ಟು ಇಟ್ಟಿದ್ದ. ನಾಲ್ಕು ಜನ ಪಠಾಣರಲ್ಲಿಗೆ ಧಾವಿಸಿದರು. 'ಅರೆ ನಮ್ಮ ನಿಜಾಮ ಪ್ರಭುಗಳ ಫೋಟೋ ಹೊಲಸುಗೊಳಿಸಿರುವೆಯಲ್ಲ! ನಿನ್ನ ಮೈ ಸೊಕ್ಕು ಎಷ್ಟು?' ಎಂದು ಗದ್ದರಿಸಿದರು. ಆ ಬಡಪಾಯಿನ ಗಡಗಡ ನಡುಗುತ್ತ, 'ಸಾಬ್, ಇದಕ್ಕೆ ನಾನು ಭಕ್ತಿಯಿಂದ ಪೂಜೆ ಮಾಡಿ ನಮ್ಮ ದೇವರಿಗೆ ಹಚ್ಚುವ ಕುಂಕುಮ ಹಚ್ಚಿದ್ದೇನೆ!' ಎಂದು ಅಂಗಲಾಚಿ ಹೇಳಿಕೊಂಡ. ಇದಕ್ಕೆ ಆ ಮುಠಾಳರು, "ನಮ್ಮ ನಿಜಾಮ ಪ್ರಭುಗಳನ್ನೂ ಮೂರ್ತಿ



ಪೂಜೆಗೆ ಗುರಿ ಮಾಡಿದೆಯಾ ಉಲ್ಲೂ" ಎಂದು ಕೂಗಿ ಅವನನ್ನು ಹೊಡೆದು, ಅವನ ಅಂಗಡಿಯನ್ನೆಲ್ಲ ಲೂಟಿ ಮಾಡಿಕೊಂಡು ಹೋಗಿಬಿಟ್ಟರು! ನಾನಾಗ ಅವ್ವಲ್ ತಾಲೂಕದಾರರ ಸಹಾಯಕರಲ್ಲೊಬ್ಬ; ಗೆಜೆಟೆಡ್ ಅಧಿಕಾರಿ. ನನ್ನ ಕಣ್ಣೆದುರಿಗೇ ಇದೆಲ್ಲ ನಡೆದುಹೋಯಿತು! ಪಿಟ್ಟೆನ್ನಲೂ ಬರದಂಥ ಉಸಿರು ಕಟ್ಟಿಸುವ ಪರಿಸ್ಥಿತಿ! ನೋಡಿಯೂ ನೋಡದಂತೆ ಮನೆಗೆ ಹಿಂದಿರುಗಿದೆ!

ಇನ್ನು ತಡಮಾಡಕೂಡದೆಂದು ನಾನೂ ನನ್ನ ಮಡದಿ ಮಕ್ಕಳನ್ನು ಮಣಕವಾಡಕ್ಕೆ ಕಳಿಸಲು ನಿರ್ಧರಿಸಿದೆ. ಅಂದೇ ಸಂಜೆ ಗಾಡಿಗೆ ಕಳಿಸಿಬಿಟ್ಟೆ, ಹೆಣ್ಣು ಮಕ್ಕಳ ಡಬ್ಬಿಯಲ್ಲಿ ಕೂಡ್ರಿಸಿ ರಾತ್ರಿ ನಿದ್ರೆ ಮಾಡಬೇಡಿರೆಂದು ಹೇಳಿದೆ. ನನ್ನ ಹೆಂಡತಿಯ ಉತ್ತರ ಅಶ್ರುಧಾರೆಯಾಗಿ ಹೊರಬಿದ್ದಿತು. ಅದನ್ನು ಕಂಡು ಇನ್ನೂ ಚಿಕ್ಕಮಕ್ಕಳಾಗಿದ್ದ ವಿಜಯಲಕ್ಷ್ಮೀ, ಶಿವಗೀತರೂ ಅಳತೊಡಗಿದರು. ಮತ್ತೆ ಒಬ್ಬರನ್ನೊಬ್ಬರು ನೋಡುವೆವೋ ಇಲ್ಲವೋ ಎಂಬ ಸಂದೇಹ ಎಲ್ಲರ ಎದೆಗಳನ್ನು ಕೊರೆಯತ್ತಲಿದ್ದಿತು, 'ಪರಿಸ್ಥಿತಿ ಇನ್ನಷ್ಟು ಕೆಟ್ಟರೆ ನೌಕರಿಗೆ ರಾಜೀನಾಮೆ ಕೊಟ್ಟು ಬಂದುಬಿಡಿರಿ–ಏನಾದರೂ ಮಾಡಿ ಬದುಕೋಣ' ಎಂದಳು ಕೈಹಿಡಿದಾಕೆ. 'ಹಾಗೆಯೇ ಮಾಡುವೆನೆಂದು' ಧೈರ್ಯ ಹೇಳಿ ಕಳಿಸಿ ಕಣ್ಣೊರೆಸಿಕೊಳ್ಳುತ್ತ, ಶರಣಬಸವೇಶ್ವರರನ್ನು ಸ್ಮರಿಸುತ್ತ ಮನೆಗೆ ಮರಳಿದೆ. ಅಂದು ರಾತ್ರಿಯೆಲ್ಲ ತಲೆದಿಂಬು ತೊಯ್ಯುವ ಕೆಲಸ ಮಾಡಿದೆ! ಮರುದಿನ ಸಂಜೆಯವರೆಗೆ ಕಾತರತೆಯ ಕಾರಂಜಿ ಪುಟಿಯುತ್ತಿದ್ದಿತು ಅಂತರಂಗದಲ್ಲಿ. ಸಂಜೆ ತಂದೆಯವರ ತಂತಿ ಬಂದಿತು–ಸೊಸೆ, ಮೊಮ್ಮಕ್ಕಳು ಸುರಕ್ಷಿತವಾಗಿ ಮುಟ್ಟಿದರೆಂದು, ತಲೆಯ ಮೇಲಿನ ಬೆಟ್ಟ ಕೆಳಗಿಳಿದೆಂತೆನಿಸಿ ನಿಟ್ಟುಸಿರುಬಿಟ್ಟೆ. ಅಲ್ಲಿಯರೆಗೆ ಅನುಭವಿಸಿದ್ದ ಮಾನಸಿಕ ಯಾತನೆ, ವೇದನೆಗಳ ಫಲವಾಗಿಯೋ ಏನೋ–ಅಂದು ರಾತ್ರಿ ಚೆನ್ನಾಗಿ ನಿದ್ದೆ ಬಂದಿತು.

ಮರುದಿನ ಬೆಳಗ್ಗೆ ದಿನ ಪತ್ರಿಕೆಯನ್ನು ಓದಿ ಥರಥರ ನಡುಗಿಬಿಟ್ಟೆ! ಮುನ್ನಿನ ಸಂಜೆ ಹೊರಟಿದ್ದ ಗಾಡಿಯ ಮೇಲೆ ಗಾಣಗಾಪುರದಲ್ಲಿ ದಾಳಿ ಮಾಡಿ ರಝಾಕಾರರು ಹಿಂದೂ ಪ್ರಯಾಣಿಕರನ್ನೆಲ್ಲ ಹೊಡೆದಿದ್ದರು, ಲೂಟಿ ಮಾಡಿದ್ದರು, ಹೆಂಗಸರ ಮಾನಭಂಗ ಮಾಡಿದ್ದರು. ಎಷ್ಟೋ ಜನರು ದಾರಿ ಸಿಕ್ಕ ಕಡೆಗೆ ಓಡಿ ಹೋಗಿದ್ದರು. ಇವುಗಳ ಹೃದಯವಿದ್ರಾವಕ ವರದಿ ಪತ್ರಿಕೆಯಲ್ಲಿ ಪ್ರಕಟವಾಗಿದ್ದಿತು. ಅದಕ್ಕೂ ಮುನ್ನಿನ ಸಂಜೆ ನನ್ನ ಮಡದಿ ಮಕ್ಕಳನ್ನು ಕಳಿಸಿದ್ದ ಗಾಡಿಯೇ ಅದು! ಒಂದೇ ಒಂದು ದಿನ ನಾನು ತಡಮಾಡಿ ಕಳಿಸಿದ್ದರೆ ನನ್ನ ಮಡದಿ ಮಕ್ಕಳ ಗತಿಯೇನಾಗಬಹುದಿತ್ತೆಂಬ ಯೋಚನೆ ಮನದಲ್ಲಿ ಸುಂಟರಗಾಳಿಯಾಗಿ ಸುಳಿಯಿತು. ಮೈಯೊಳಗಿನ ರಕ್ತವೆಲ್ಲ ಹೆಪ್ಪುಗಟ್ಟಿದಂಥ ಅನುಭವವಾಯಿತು! 'ವಿಶ್ವತೋ ಬಾಹು'

ಎನಿಸಿರುವ ವಿಶ್ವಾತ್ಮನ ಕಾಣದ ಕೈಯೊಂದು ಕಾಪಾಡಿತವರನ್ನೆಂಬ ನಂಬಿಕೆ ತಲೆದೋರಿತು. ಕಬೀರದಾಸರ ಉಕ್ತಿ ನೆನಪಾಯಿತು: "ಜಾಕೋ ರಾಖೇ ಸಾಯಿಯಾ, ಮಾರಸಕೇ ನ ಕೋಯಿ । ಬಾಲ ನ ಬಿಂಗಾ ಕರ ಸಕೆ, ಜೋ ಜಗ ಬೈರಿ ಹೋಯಿ!" ಎಷ್ಟೋ ವರ್ಷಗಳಾದ ಮೇಲೆ ಇದೇ ಅನುಭವ ವಚನವಾಗಿ ಒಡಮೂಡಿತು:

> "ನೀನು ಕಾಯಲೆಳಸಿದರೆ ಕೊಲ್ಲುವವರಾರಯ್ಯ?
> ನೀನು ಕೊಲ್ಲ ಬಯಸಿದರೆ ಕಾಯುವವರಾರಯ್ಯ?
> ನೀನು ಎತ್ತಿ ಹಿಡಿದರೆ ಇಳಿಸುವವರಾರಯ್ಯ?
> ನೀನು ಕೆಳಗೊತ್ತಿದರೆ ಮೇಲೆತ್ತುವರಾರಯ್ಯ?
> ನೀನು ಕ್ಷಮಿಸಿದರೆ ಶಿಕ್ಷಿಸುವರಾರಯ್ಯ?
> ನೀನು ಶಿಕ್ಷಿಸಲೆಳಸಿದರೆ ರಕ್ಷಿಸುವವರಾರಯ್ಯ?
> ಸ್ವತಂತ್ರಧೀರ ಸಿದ್ಧೇಶ್ವರಾ, ರಕ್ಷಿಸು ಇಲ್ಲವೆ ಶಿಕ್ಷಿಸು–
> ಕೃಪಾಕಟಾಕ್ಷದಿಂದ ವೀಕ್ಷಿಸಯ್ಯ!"

ಈ ದುರ್ಘಟನೆ–ನಾಗರಿಕ ಜನಾಂಗ ನಾಚಿ ತಲೆ ತಗ್ಗಿಸುವಂಥ ದುರ್ಘಟನೆ–ನಡೆದ ಮೇಲಂತೂ ಭಾರತದ ಒಕ್ಕೂಟದ ನೆರೆ ಜಿಲ್ಲೆಗಳಿಗೆ ಹಿಂದುಗಳ ಎಕ್ಸೊಡಸ್ ಇನ್ನೂ ತೀವ್ರವಾಯಿತು, ವ್ಯಾಪಕವಾಯಿತು, ಅವ್ಯಾಹತವಾಯಿತು. ಈ ರೀತಿ ಹಿಂದುಗಳ ಸಂಖ್ಯೆ ಕಡಮೆಯಾಗುವುದೂ, ಹೊರಗಿನಿಂದ ಮುಸಲ್ಮಾನರನ್ನು ತಂದು ತಂದು ಹೈದರಾಬಾದು ಸಂಸ್ಥಾನದಲ್ಲಿ ಮುಸ್ಲಿಮರ ಸಂಖ್ಯೆಯನ್ನು ಹೆಚ್ಚಿಸುವುದೂ ಲಾಯಕ್ ಅಲಿ ಮಂತ್ರಿಮಂಡಳದ, ಕಾಸಿಮ್ ರಜವಿಯವರ, ಪಾಕಿಸ್ತಾನೀ ನಾಯಕರ ನೀತಿಯೇ ಆಗಿದ್ದಿರಬಹುದು ಆಗ. ಇದರಿಂದ ನನ್ನ ಪಾಲಿಗೆ ಬಂದ ಪೀಕಲಾಟಗಳು ಹಲವು: ಮೊದಲನೆಯದಾಗಿ, ತಿಂಗಳು ತಿಂಗಳು ಹಾಲಿ ರೂಪಾಯಿಗಳನ್ನು ಭಾರತ ರೂಪಾಯಿಗಳಿಗೆ ಪರಿವರ್ತಿಸಿ ತಂದೆತಾಯಿಗಳಿಗೆ ಮನಿ ಆರ್ಡರ್ ಕಳಿಸುವುದು; ಎರಡನೆಯದಾಗಿ, ನನ್ನನ್ನೇ ಇಡಿಯಾಗಿ ನಂಬಿದ್ದ ಮಿತ್ರ ಮದನಸಿಂಗರನ್ನು ರಕ್ಷಿಸುವುದು; ಮೂರನೆಯದಾಗಿ, ಓಡಿ ಹೋಗುವ ಮುನ್ನ ನನ್ನ ಮನೆಗೆ ಬಂದು. "ಸ್ವಾಮಿಗಳೇ, ನಾವಂತೂ ಹೊರಟೆವು; ಹಿಂದಿರುಗಿ ಬರುವೆವೋ ಇಲ್ಲವೋ ಭಗವಂತನೇ ಬಲ್ಲ. ನಮ್ಮಲ್ಲಿರುವ ಈ ಚಿನ್ನದ ಒಡವೆಗಳು ನಿಮ್ಮಲ್ಲಿರಲಿ; ಹಿಂದಿರುಗಿ ಬಂದರೆ ನಮಗೆ ಕೊಡಿರಿ; ಬರದಿದ್ದರೆ ಜಂಗಮರಿಗೆ ಸಲ್ಲಿತೆಂದು ಸಂತೃಪ್ತರಾಗುವೆವು" ಎಂದು ಹೇಳಿ ಹೇರಳವಾದ ಚಿನ್ನವನ್ನು ನನ್ನ ಹತ್ತಿರ ಬಿಟ್ಟು ಹೋಗುತ್ತಿದ್ದ ಹಿಂದುಗಳು,–ವಿಶೇಷವಾಗಿ ವಿಧವೆಯರ–ಸುವರ್ಣನಿಧಿಯನ್ನು ಸಂರಕ್ಷಿಸುವುದು; ನಾಲ್ಕನೆಯದಾಗಿ, ಆಗ ನಿತ್ಯ ನಡೆಯುತ್ತಲಿದ್ದ



ಅಮಾನುಷ ಕೃತ್ಯಗಳಲ್ಲಿ ಪ್ರತ್ಯಕ್ಷ ಭಾಗಿಯಾಗದೆ ಉಳಿದೂ ಮೇಲಿನವರು ಸಂಶಯಗ್ರಸ್ತರಾಗದಂತೆ ನೋಡಿಕೊಳ್ಳುವುದು; ಐದನೆಯದಾಗಿ, ನಿಷ್ಕಾರಣ ಬಂಧಿತರಾಗಿದ್ದ ಯುವಕರ ತಂದೆತಾಯಿಗಳು ಬಂದು ಗೋಗರೆದಾಗ ಮೇಲಿನವರ ಮನವೊಪ್ಪಿಸಿ ಅವರನ್ನು ಬಿಡಿಸುವುದು–ಇನ್ನೂ ಏನೇನೋ!

ಮದನಸಿಂಗ್ ಹಾಗೂ ನಾನು ವಕೀಲ ಬಸವಂತರಾಯರ ಮನೆಯಲ್ಲಿ ಕೂಡಿ ಇರಲು ಪ್ರಾರಂಭಿಸಿದೆವು. ಅಡಿಗೆಯವ ತಂದು ಮಾಡಿ ಹಾಕಿದ್ದನ್ನು ತಿನ್ನುತ್ತ, ಆಡುಗೆಯ ರೂಪದಲ್ಲಿ ನೋವನ್ನು ತಿನ್ನುತ್ತ ಕಾಲ ನೂಕ ತೊಡಗಿದೆವು. ನಾವು ನೋವನ್ನು ತಿನ್ನುತ್ತಿದ್ದೆವು, ನೋವು ನಮ್ಮನ್ನು ತಿನ್ನುತ್ತಲಿದ್ದಿತು! ರಾಜಕೀಯ ಪರಿಸ್ಥಿತಿ ಮತ್ತಷ್ಟು ಪ್ರಕ್ಷುಬ್ಧವಾಯಿತು; ಹಿಂಸಾಕೃತ್ಯಗಳಿಗೆ ಮಹಾಪೂರ ಬಂದಿತು! ಹಳ್ಳಿಗಳನ್ನು ಕೊಳ್ಳೆ ಹೊಡೆಯುವುದು, ಪಟ್ಟಣಗಳಲ್ಲಿಯೂ ಉಳ್ಳವರ ಮನೆಗಳನ್ನು ಲೂಟಿ ಮಾಡುವುದು ಇನ್ನೂ ಹೆಚ್ಚಾಯಿತು! ನನ್ನ ಅಂತರಂಗ ರಣರಂಗವಾಗಿ ಮಾರ್ಪಟ್ಟಿತು. ಇಂಥ ಸೈತಾನೀ ಸರಕಾರದ ಗುಲಾಮನಾಗಿರುವುದಕ್ಕಿಂತ ಇದನ್ನೊದೆದು ಹೋಗಿ ತಮ್ಮನ ಶಿಬಿರವನ್ನೇ ಸೇರಿ ಈ ರಾಕ್ಷಸೀ ರಾಜ್ಯಭಾರದ ಕೊನೆಗಾಣಿಕೆಗೆ ನನ್ನ ಕಾಣಿಕೆಯನ್ನೂ ಸಲ್ಲಿಸಬೇಕೆಂಬ ಬಯಕೆ ಬಹಳ ಪ್ರಬಲವಾಯಿತು. ಒಂದು ವಾರ ಈ ಒಳಗಿನ ತುಮುಲಕ್ಕೆ ಸಿಕ್ಕಿ ಕಕ್ಕಾವಿಕ್ಕಿಯಾದೆ. ಕೊನೆಗೊಮ್ಮೆ ನೌಕರಿಗೆ ತ್ಯಾಗಪತ್ರ ನೀಡಿ ಭೂಗತನಾಗಬೇಕೆಂದು ನಿರ್ಧರಿಸಿ, ಆಗ ಬಹಳ ಹತ್ತಿರದವರಾಗಿದ್ದ ವಾಜೇಂದ್ರರಾವ್ ಮಾಸ್ತರರ ಒಳಗೆ ಹೋಗಿ ನನ್ನ ನಿರ್ಧಾರವನ್ನು ತಿಳಿಸಿದೆ. ಅವರು ಸಂತೋಷದೊಡನೆ ಸಮರ್ಥಿಸಿದರು ಅದನ್ನು. ಅಂದು ರಾತ್ರಿ ಒಬ್ಬರು ಬಂದು ನನ್ನನ್ನು ಗಡಿಯಾಚೆಗೆ ಕರೆದೊಯ್ಯಬೇಕಿತ್ತು ಬರಲಿಲ್ಲ. ಒಬ್ಬನೇ ಹೋಗಲು ಧೈರ್ಯ್ ಇರಲಿಲ್ಲ. ಹೋಗುವುದು ತಪ್ಪಿತು. ನಿರ್ಧಾರದ ನವೀಕರಣಕ್ಕೆ ಅಡ್ಡಿಯಾಗಿ ನಿಂತುದು ಎರಡು ಮಕ್ಕಳನ್ನು ಎರಡೂ ಬದಿಗೆ ನಿಲ್ಲಿಸಿಕೊಂಡು, ಒಂದು ಮಗುವನ್ನು ಹೊಟ್ಟೆಯಲ್ಲಿರಿಸಿಕೊಂಡು ಕನಸಿನಲ್ಲಿ ಕಾಣಿಸಿಕೊಂಡ ಕೈಹಿಡಿದಾಕೆಯ ಕರುಣಾಜನಕ ಚಿತ್ರ; 'ನನ್ನ ಕೈಬಿಡಬೇಡ' ಎನ್ನುತ್ತಿದ್ದ ಮದನಸಿಂಗನ ಚಿತ್ರ; ಅನಾಥರಾಗಿ ಪರಸ್ಥಳ ಸೇರಿದ್ದ ತಂದೆ–ತಾಯಿಗಳ, ತಮ್ಮ–ತಂಗಿಯರ ಕರುಳು ಕಿವುಚುವ ಚಿತ್ರ! ನನ್ನೊಬ್ಬನ ಮೇಲೆ ಎಷ್ಟು ಜನರು ಅವಲಂಬಿಸಿದ್ದಾರೆ! ಅವರೆಲ್ಲರನ್ನೂ ಅನಿಶ್ಚಿತ ಭವಿತವ್ಯದ ಅಂಧಕೂಪಕ್ಕೆ ನೂಕಿ, ಊಹಾತೀತವಾದ ವಿಪತ್ಪರಂಪರೆಗಳಿಗೆ ಗುರಿ ಮಾಡಿ ನಾನೊಬ್ಬ ಹೋಗಿ ಯಾವ ಮಹಾಕಾರ್ಯವನ್ನು ಮಾಡುವುದಿದೆ? ನನ್ನಲ್ಲೇನು ಅಣುಬಾಂಬು ಇದೆಯೆ? ಹೋಗುತ್ತಲೆ ಹೊಟ್ಟೆ ತುಂಬಿಕೊಳ್ಳಲು ಹೆರವರನ್ನು ಅವಲಂಬಿಸಬೇಕು! ನನ್ನ ನಸೀಬದಲ್ಲಿರುವುದು ನೌಕರಿಯ ಜೀವನ ಮಾತ್ರ! ಇದನ್ನೇ ಉರಿಬರಲಿ, ಸಿರಿ ಬರಲಿ–ಮುಂದುವರಿಸಿಕೊಂಡು ಹೋಗುವುದು! ಚಿಕ್ಕಂದಿನಲ್ಲಿ

ಮಾಡಿದ್ದ ಪ್ರತಿಜ್ಞೆಯಂತೆ ಹುಟ್ಟಿದ ಮನೆಯನ್ನು, ಒಡಹುಟ್ಟಿದವರನ್ನು ಸುಡುವ ಬಡತನದಿಂದ ಪಾರು ಮಾಡುವುದು–ಹೀಗೆ ಹರಿಯಿತು ಹೃದಯದ ಹಳವಂಡ! ಹೈದರಾಬಾದನ್ನು ಹಣಿಯುವ ಶಕ್ತಿ ಇದ್ದುದು ಸರದಾರ ಪಟೇಲರೊಬ್ಬರಿಗೆ ಮಾತ್ರ. ಅವರು ಹೆಚ್ಚು ಮಾತನಾಡುವವರಲ್ಲ. ಒಮ್ಮೆ ಮಾತ್ರ ಬಾಯಿ ಬಿಟ್ಟಿದ್ದರು: "ಹೈದರಾಬಾದು ಭಾರತದ ಹೊಟ್ಟೆಯೊಳಗೆ ಹುಣ್ಣಾಗಿ ಬೆಳೆಯುತ್ತಿದೆ; ಅದನ್ನು ಕಾಲ ಪಕ್ವವಾದಾಗ ಕೊಯ್ದೊಗೆಯುವೆವು! ಆದರೆ ಹೇಗೆ ಕೊಯ್ಯುವೆವೆಂದರೆ ಆದಷ್ಟು ಕಡಿಮೆ ರಕ್ತ ಹರಿಯಬೇಕು, ಆದಷ್ಟು ಬೇಗ ಕೊಯ್ದ ಗಾಯ ಮಾಯಬೇಕು!" ಅವರ ಈ ಆಶ್ವಾಸನದಲ್ಲಿ ವಿಶ್ವಾಸವಿತ್ತು ಎಲ್ಲರಿಗೂ. ಆದರೆ 'ಕಾಲ ಪಕ್ವ'ವಾಗುವುದು ಯಾವಾಗ? ಇನ್ನೂ ಎಷ್ಟು ದಿನ ಈ ಯಮ ಯಾತನೆಯನ್ನು ಸೈರಿಸಿಕೊಂಡಿರುವುದು? ಈ ಪ್ರಶ್ನೆಗೆ ಉತ್ತರ ಯಾರಿಗೂ ಸರಿಯಾಗಿ ಗೊತ್ತಿರಲಿಲ್ಲ. ತಂದೆ–ತಾಯಿಯರೂ ಮಣಕವಾಡದಿಂದ ಹುಬ್ಬಳ್ಳಿಗೆ ಬಂದುಬಿಟ್ಟಿದ್ದರು. ಚಿ. ಅನ್ನದಾನಿ ಅಲ್ಲಿ ಜ. ಗಂಗಾಧರ ವಾಣಿಜ್ಯ ವಿದ್ಯಾಲಯ ಸೇರಿದ್ದ. ವೆಚ್ಚವೇನೋ ಹೆಚ್ಚಾಯಿತು. ಆದರೆ ಆದಾಯದ ಮೂಲಗಳು ಬತ್ತಿದ್ದುವು. ನಾನು ಕಳಿಸುತ್ತಲಿದ್ದ ಮನಿ ಆರ್ಡರಿನ ಮೇಲೆಯೇ ಸಕಲವೂ ಸಾಗಿದ್ದಿತು. ನಾನೂ ಏನೇನೋ ಉಪಾಯ ಹೂಡಿ ಕಳಿಸುತ್ತಲೇ ಹೋದೆ.

ಆದರೆ ಇದಕ್ಕೂ ವಿಘ್ನ ಒದಗಿ ಬಂದಿತು. ಭಾರತ ಒಕ್ಕೂಟಕ್ಕೆ ಮನಿ ಅರ್ಡರ್ ಕಳಿಸುವುದನ್ನು ನಿಷೇಧಿಸಿ ಬಿಟ್ಟಿತು ನಿಜಾಮ ಸರ್ಕಾರ. ನನ್ನ ನಂಬಿಕೆಯ ಇನ್ಸ್‌ಪೆಕ್ಟರರೊಬ್ಬರನ್ನು ಅಕ್ಕಲಕೋಟೆಗೆ ಕಳಿಸಿ ಅಲ್ಲಿಂದ ಮನಿ ಆರ್ಡರ್ ಮಾಡಿಸಿದೆ. ಅದಕ್ಕೂ ಸಂಚಕಾರ ಬಿದ್ದಿತು. ಭಾರತ ಸರ್ಕಾರದ ರೂಪಾಯಿಗಳೇ ಸಿಕ್ಕದಂತೆ ಮಾಡಿಬಿಟ್ಟರು! ಕೊನೆಯ ಕಂತೆಂದು ಇದ್ದಷ್ಟು ರೂಪಾಯಿಗಳನ್ನು ಆ ಇನ್ಸ್‌ಪೆಕ್ಟರರೊಡನೆ ಹುಬ್ಬಳ್ಳಿಗೆ ಕಳಿಸಿಬಿಟ್ಟೆ. ಅವರು ತಂದ ಸುದ್ದಿ ನನ್ನ ಮೈ ನಡುಗಿತು. ಆಗ ನನ್ನ ಪತ್ನಿಗೆ ಎಂಟು ತಿಂಗಳ ತುಂಬಿದ್ದುವು. ಹುಬ್ಬಳ್ಳಿಯಲ್ಲಿ ಹೆರಿಗೆಯಾದರೆ ಅದರ ವೆಚ್ಚ ಭರಿಸುವ ಶಕ್ತಿ ಅವರಲ್ಲಿ ಉಳಿದಿರಲಿಲ್ಲ. ತಾಯಿಗೆ ಕಾಯಿಲೆ ಬರುತ್ತಲೆ ಅವರು ಮನೆಗೆ ಎರವಾಗಿದ್ದ ಆಕೆ ತವರು ಮನೆಗೂ ಹೋಗುವಂತಿರಲಿಲ್ಲ. ಮೊದಲನೆಯ ಹೆರಿಗೆಯ ಕಾಲಕ್ಕೆ ನೆರವಾಗಿದ್ದ ಆಕೆಯ–ಮಾವಂದಿರೂ ನನ್ನ ಭವಿತವ್ಯದ ಬಗ್ಗೆ ಭೀತರಾಗಿ ಆಕೆಗೆ ಆಶ್ರಯ ನೀಡಲು ಮುಂದಾಗಲಿಲ್ಲ. ಹುಬ್ಬಳ್ಳಿಗೆ ಹೋಗಿಬಿಟ್ಟೆ. ಮಡದಿ ಮಕ್ಕಳ ಗತಿ ನೋಡಿ ಕರುಳಿಗೆ ಚೇಳು ಕಚ್ಚಿದಂತಾಯಿತು. ಇದ್ದಷ್ಟು ತಂದೆತಾಯಿಯರ ಕೈಗಿತ್ತು ಮಡದಿ ಮಕ್ಕಳೊಡನೆ ಪುಣೆಗೆ ಹೊರಟೆ. ಅಲ್ಲಿ ಆಕೆಯ ಕಕ್ಕಿ ಇದ್ದರು. ಅವರೇನಾದರೂ ಆಶ್ರಯವಿತ್ತರೆ ಸರಿ, ಇಲ್ಲದಿದ್ದರೆ ಕಲಬುರಗಿಗೇ ಕರೆದೊಯ್ಯುವುದೆಂದು ನಿರ್ಧರಿಸಿದೆ.



ಉಗಿಗಂಡಿ ನಡೆದಿತ್ತು. ನಾವು ಮೌನವಾಗಿ ಕುಳತಿದ್ದೆವು–ಒಣಗಿದ ಮೋರೆಗಳೊಡನೆ, ಬತ್ತದ ಕಂಬನಿಗಳೊಡನೆ, 'ಮುಂದೇನು? ಮುಂದೇನು? ಮುಂದೇನು?' ಎಂಬ ಪ್ರಶ್ನೆ ತಿಪ್ಪರಲಾಗ ಹಾಕುತ್ತಲಿದ್ದಿತು ಚಿತ್ರದಲ್ಲಿ. ಇನ್ನೂ ತಾಯಿ ಬದುಕಿರುವಾಗಲೇ ತವರಿಗೆ ಎರವಾಗಿದ್ದ, ಅಕ್ಕ ಮಾವಂದಿರ ಪ್ರೀತಿ ಪ್ರೇತವಾದುದನ್ನು ಕಂಡಿದ್ದ, ಅತ್ತೆ ಮಾವಂದಿರ ಅಸಹಾಯಕತೆಯನ್ನು ಅನುಭವಿಸಿದ್ದ, ಒಮ್ಮೆ ಎರಡೂ ಮಕ್ಕಳೊಡನೆ ಭಾವಿ ಪಾಲಾಗಲು ಹೋಗಿದ್ದ ಈ ಅಭಾಗಿನಿಯನ್ನು ಇದ್ದ ಎರಡು ಮಕ್ಕಳು, ಬರಲಿದ್ದ ಇನ್ನೊಂದು ಮಗುವಿನೊಡನೆ ಚಿಕ್ಕಮ್ಮ ಇರಿಸಿಕೊಂಡಾರೆ? ಇದನ್ನು ನಿರೀಕ್ಷಿಸುವುದೂ ಹಾಸ್ಯಾಸ್ಪದವಾದುದು. ಏನೋ ಒಂದು ಮಾತು ಕೇಳಿ ನೋಡಬೇಕು; ಅವರು ಮೌನ ಮುರಿಯದಿದ್ದರೆ ಅಂದೇ ಮತ್ತೆ ಗಾಡಿ ಹತ್ತಿ ಕಲಬುರಗಿಗೆ ಹೋಗಬೇಕು. ಏನು ಬಂದರೂ ನಮ್ಮೆಲ್ಲರಿಗೂ ಒಟ್ಟಿಗೇ ಬರಲಿ. ಬಹಳವಾದರೆ ಪ್ರಾಣಾಪಾಯ ಬಂದೀತು! ಇದಕ್ಕಿಂತ ಹೆಚ್ಚಿನ ಅಪಾಯವಿನ್ನಾವುದು? ಇದೂ ಬಂದರೆ ಬರಲಿ; ಆದರೆ ಎಲ್ಲರಿಗೂ ಒಮ್ಮೆಗೆ ಬರಲಿ!

ಹೀಗೆ ಬಗೆಯ ಶೂನ್ಯದಲ್ಲಿ ಬೆಂಕಿ ಕೊಂಡ ಉರಿಯುತ್ತಲಿದ್ದಾಗಲೇ ಪುಣೆ ಬಂದಿತು. ಗಾಡಿ ಇಳಿದು ಅಂಜುತ್ತ, ಹಿಂಜರಿಯುತ್ತ, ಅಳುಕುತ್ತ, ಅನುಮಾನಿಸುತ್ತ ಡಾ॥ ಎಮ್.ಎಮ್. ಮುರಗೋಡ ಹಾಗೂ ಇಂಚಲಮಠ ಗೌರಕ್ಕರ ಮನೆಗೆ ಹೋದೆವು. ಅವರಿಗೆ ಆಶ್ಚರ್ಯ, ಆನಂದ ಏಕಕಾಲಕ್ಕೆ! ಯಾರ ಮುಖದ ಮೇಲೂ ಯಾಕೆ ಬಂದವರಿವರೆಂಬ ಬೇಸರದ ಕರಿನೆರಳು ಮೂಡಿರಲಿಲ್ಲ. ಸಂಭ್ರಮದೊಡನೆ ಸ್ವಾಗತಿಸಿದರು. ಅವರ ಮಕ್ಕಳು ಬಾಬಾಸಾಹೇಬ, ಅಪ್ಪಾಸಾಹೇಬ ಬಾಳಾಸಾಹೇಬರೂ ಅಷ್ಟೇ, ಹಿಗ್ಗಿನೊಡನೆ ನಮ್ಮನ್ನು ಬರಮಾಡಿಕೊಂಡರು. ಈ ಸಂತಸದ ಮಳೆ ಸುರಿಯಲೆಂದೇ ಮನದ ದುಗುಡದ ಮೋಡ ಇಷ್ಟು ಕಪ್ಪೇರಿದ್ದಿತೋ ಏನೋ–ಎಂದೆನಿಸಿತು ನನಗೆ. ಎಷ್ಟೋ ದಿನಗಳಾದ ಮೇಲೆ ಮಡದಿ ಮಕ್ಕಳಿಗೆ ಆತ್ಮೀಯತೆಯ ಆಭ್ಯಂಜನ–ಅಕ್ಕಯ್ಯನವರಿಂದ. ಸುಗ್ರಾಸ ಭೋಜನ; ವಿನೋದ; ಸುಖ ನಿದ್ರೆ. ಸಾಯಂಕಾಲ ಆ ಮಾತು ಈ ಮಾತು ಮುಗಿದ ಮೇಲೆ ಬಂದ ಉದ್ದೇಶ ವಿವರಿಸಿದೆ. ಬಾವಾಜಿ (ಡಾ॥ ಮುರಗೋಡ) ಅಕ್ಕಾಜಿ (ಗೌರಕ್ಕ) ಯರಿಬ್ಬರೂ ಏಕಕಂಠವಾಗಿ ಹೇಳಿಬಿಟ್ಟರು: "ಹೆರಿಗೆಯಾಗುವವರೆಗೇಕೆ, ನಿಮ್ಮ ಹೈದರಾಬಾದಿನ ಸಮಸ್ಯೆ ಇತ್ಯರ್ಥಗೊಂಡು ಶಾಂತಿ ನೆಲೆಸುವವರೆಗೂ ಗಿರಿಜಾ, ಆಕೆಯ ಮಕ್ಕಳು ಇಲ್ಲಿರಲಿ. ಡಾ॥ ಮಧುಮತಿಯ ಹೆರಿಗೆ ಮನೆಯಲ್ಲಿ ಹೆರಿಗೆ ಮಾಡಿಸುವೆವು; ಮಕ್ಕಳಿಗೆ ಮನೆಯಲ್ಲಿಯೇ ಓದಿಸುವೆವು. ಪರಿಸ್ಥಿತಿ ತೀರ ವಿಕೋಪಕ್ಕೆ ಹೋದರೆ

ರಜೆ ಹಾಕಿ ನೀವು ಬಂದು ಬಿಡಿರಿ. ದೇವರ ದಯೆಯಿದ್ದರೆ ನಿಮಗೆ ಒದಗಿರುವ ವಿಪತ್ತು ದೂರಾಗಿ ನಿಮಗೂ ಭಾಗ್ಯೋದಯ ಕಾಲ ಬರುತ್ತದೆ!" ನನ್ನ ಬಾಯಿಂದ ಮಾತುಗಳೇ ಹೊರಡಲಿಲ್ಲ! ಕಂಠ ಬಿಗಿದು ಬಂದಿತ್ತು. "ನಿಮ್ಮ...ನಿಮ್ಮ...ಉಪಕಾರ..." ಎಂದು ಬಹು ಪ್ರಯಾಸದಿಂದ ಹೇಳಲು ಹೆಣಗಿದೆ. ಬಾವಾಜಿಯವರು ತಡೆದರು. "ಇದೆಲ್ಲ ಮನೆಯವರಲ್ಲಿ ಯಾಕೆ?" ಎಂದು ಸಂತೈಸಿದರು.

**ಹತ್ಯಾಕಾಂಡ :**

ಅಂದೇ ಕಲಬುರಗಿಗೆ ಹೊರಟೆ. ರಜೆ ಮುಗಿದಿತ್ತು, ವಿಸ್ತರಿಸಲು ಅಂಜಿಕೆ ಅಡ್ಡ ನಿಂತಿತ್ತು, ಎಲ್ಲರೂ ಕಳಿಸಲು ನಿಲ್ದಾಣಕ್ಕೆ ಬಂದಿದ್ದರು. ಮಡದಿ ಮಕ್ಕಳ ಮುಖ ಅರಳಿದುದನ್ನು ಕಂಡೆ. ಎಷ್ಟೋ ಧೈರ್ಯ ಬಂದಿತು. ಮುಂದುಗಾಣದವನಾಗಿ ಕಲಬುರಗಿಯಿಂದ ಹೊರಟಿದ್ದೆ; ಯಾವುದೋ ಆಸರೆ ದೊರೆತ ಸಮಾಧಾನದಿಂದ ಅದೇ ಕಲಬುರಗಿಗೆ ಹಿಂದಿರುಗಿದ್ದೆ. ಆದರೆ ಕಲಬುರಗಿಯಲ್ಲಿ ಅಸಮಾಧಾನದ, ಭಯದ, ಹಿಂಸೆಯ, ಕ್ಷೋಭೆಯ ಹೊಗೆ ಮೊದಲಿಗಿಂತಲೂ ಹೆಚ್ಚಿದ್ದಿತು. ಚಕ್ರ ಕಟ್ಟೆಯ ಬಳಿ ಮನೆ ಬಾಡಿಗೆಗೆ ಹಿಡಿದೆ. ಎದುರಿನ ಮನೆಯಲ್ಲಿಯೇ ಶ್ರೀ ರಘುನಾಥ ರಾವ್ ಎಂಬ ಸದ್ಗೃಹಸ್ಥರಿದ್ದರು. ಅವರೂ, ಅವರ ಅಣ್ಣ ಕೃಷ್ಣರಾಯರೂ ಬಂದು ನಮ್ಮ ಮನೆಯಲ್ಲಿಯೇ ಊಟ ಮಾಡಿರೆಂದು ಒತ್ತಾಯ ಮಾಡಿದರು. ಅವರಿಬ್ಬರ ಧರ್ಮಪತ್ನಿಯರೂ ವಾತ್ಸಲ್ಯ ತೋರಿದರು. ಪ್ರಾತಃಕಾಲದಲ್ಲಿ 'ಹಫ್ತಗುಂಬದ್' ಬಳಿ ಅಧಿಕಾರಿಗಳ ಸೈನಿಕ ತರಬೇತಿಗೆ ಹೋಗುವುದು; ಅಲ್ಲಿಂದ ಬಂದು ರಘುನಾಥರಾಯರ ಮನೆಯಲ್ಲಿ ಊಟ ಮಾಡುವುದು; ಮದನಸಿಂಗರೊಂದಿಗೆ ಆಫೀಸಿಗೆ ಹೋಗುವುದು.

ಸೈನಿಕ ತರಬೇತಿಯೊಂದು ನಗೆಪಾಟಲು. ಮದ್ದುಗುಂಡಿಲ್ಲದ ಕೋವಿಗಳನ್ನು ಎತ್ತಿ ಇಲ್ಲದ ವೈರಿಯತ್ತ ಹುಸಿಗುಂಡು ಹಾರಿಸುವುದು. ಮೇಜರ್ ಮ್ಯಾಥ್ಯೂ ಎಂಬ ಭಾರತ ಸೈನ್ಯದ ನಿವೃತ್ತ ಅಧಿಕಾರಿಯೊಬ್ಬ ನಮಗೆ ತರಬೇತಿ ನೀಡಲು ನಿಯುಕ್ತನಾಗಿದ್ದ. ಅವನು ಸ್ವತಂತ್ರ ಹೈದರಾಬಾದಿನ ಸಮರ್ಥರಿಗೆ ಸ್ಥೈರ್ಯ ನೀಡುವ ಮಾತುಗಳನ್ನಲ್ಲ–ಧೈರ್ಯ ಹೋಗುವ ಮಾತುಗಳನ್ನೇ ಆಡಿ ನಗುತ್ತಿದ್ದ. "ನೋಡಿರಿ, ನಿಮ್ಮ ಕೈಗಳಲ್ಲಿರುವುವು ಕಂತ್ರಿಕೋವಿಗಳು; ಮತ್ತೆ ಮತ್ತೆ ಮದ್ದು ತುಂಬಬೇಕು ಇವುಗಳಿಗೆ. ಆದುದರಿಂದ ಒಬ್ಬೊಬ್ಬರು ಒಂದೊಂದು ಸೀಟಿ ಇಟ್ಟುಕೊಳ್ಳಿರಿ. ಭಾರದ ಸೈನಿಕರು ಸ್ವಯಂಚಾಲಿತ ರೈಫಲ್ಲುಗಳೊಡನೆ ನಿಮ್ಮ ಮೇಲೇರಿ ಬರುತ್ತಾರೆ. ಆಗ ಸೀಟಿ ಊದಿ 'ಸ್ಟಾಪ್' ಎನ್ನಿರಿ; ನಿಮ್ಮ ಕೋವಿಗಳಲ್ಲಿ ಮದ್ದು ತುಂಬಿಕೊಳ್ಳಲು ಸಮಯ ಯಾಚಿಸಿರಿ; ಮದ್ದು ತುಂಬಿಕೊಂಡ ಮೇಲೆ ಮತ್ತೊಮ್ಮೆ



ಸೀಟಿ ಊದಿರಿ; 'ಹಾಂ, ಈಗ ನೀವು ಗುಂಡು ಹಾರಿಸಬಹುದು ಎಂದು ಹೇಳಿರಿ..." ಹೀಗೆ ಅವನು ಗೇಲಿ ಮಾಡಿದ್ದೇ ಮಾಡಿದ್ದು, ಅವನನ್ನು 'ದಬಾಯಿಸು'ವ ಧೈರ್ಯ ಯಾರಿಗೂ ಇರಲಿಲ್ಲ. ಸೂಬೆದಾರ್, ಆವ್ವಲ್ ತಾಲೂಕದಾರ, ಎಸ್.ಪಿ. ಡಿಸ್ಟ್ರಿಕ್ಟ್‌ಜಜ್– ಎಲ್ಲರೂ ಈ ಮುಖಭಂಗಗಳನ್ನು ಮುಕ್ಕಿ ಮುಕ್ಕಳಿಸಿಯೇ ತೇಜೋಹೀನ ಮುಖಗಳೊಂದಿಗೆ ಆಫೀಸಿಗೆ ಬರುತ್ತಿದ್ದರು. ಆಫೀಸಿನಲ್ಲಿಯೂ ಬೇರೆ ವಿಷಯವೇ ಇಲ್ಲ–ಯುದ್ಧ ಸಿದ್ಧತೆಗಳ ವಿಷಯವೇ ವಿಷಯ. ಒಂದು ಕಡೆಗೆ ರಝಾಕಾರರ ಅತ್ಯಾಚಾರಗಳ ಬಗ್ಗೆ ಬರುತ್ತಿದ್ದ ದೂರುಗಳ ರಾಶಿ; ಇನ್ನೊಂದು ಕಡೆಗೆ 'ಶಿಬಿರ'ಗಳ ಸತ್ಯಾಗ್ರಹಿಗಳು ಒಳನುಗ್ಗಿ ಬಂದು ಸರಕಾರದ ಸೊತ್ತುಗಳನ್ನು ದೋಚಿಕೊಂಡು ಹೋದರೆಂಬ ವರದಿಗಳ ರಾಶಿ. ಒಂದು ಸಲ ಸತ್ಯಾಗ್ರಹಿಯೊಬ್ಬ ಧೈರ್ಯದಿಂದ ಒಳನುಗ್ಗಿ ಹಳ್ಳಿಯೊಂದರ ಎತ್ತರದ ಮರವೊಂದಕ್ಕೆ ರಾಷ್ಟ್ರ ಧ್ವಜವನ್ನೇರಿಸಿ ಹೋಗಿದ್ದ. ಹತ್ತಾರು ಪೋಲೀಸರೂ, ನೂರಾರು ರಝಾಕಾರರೂ ಪೋಲೀಸ ಅಧಿಕಾರಿಯೊಬ್ಬರ ಮುಂದಾಳುತನದಲ್ಲಿ ಹೋಗಿ ಆ ಧ್ವಜವನ್ನಿಳಿಸಿ ತರುವ 'ಮಹಾ ಸಾಹಸ' ಮಾಡಿದ್ದರು. ತಾವು ತಂದುದು ಭಾರತ ಸರಕಾರದ ಧ್ವಜವೆಂಬ ಅರಿವಿಲ್ಲದೆ ಮೆರೆಸಿ ಬಿಟ್ಟರದನ್ನು ಊರಲ್ಲೆಲ್ಲ! ಅಂತೂ ತಮಗರಿವಾಗುವ ಮೊದಲೇ ಭಾರತದ ರಾಷ್ಟ್ರಧ್ವಜವನ್ನು ಮೆರೆಸಿ ಅದಕ್ಕೆ ಗೌರವ ಸಲ್ಲಿಸಿದ್ದರವರು!

ಇದರ ಮುಂದಿನ ಮಜಲೆಂದರೆ ತಾವೇ ದೂರದ ಹಳ್ಳಿಗಳಲ್ಲಿ ಸರಕಾರದ ಸೊತ್ತುಗಳ ಲೂಟಿ ಮಾಡಿ 'ಶಿಬಿರ'ಗಳ ಸತ್ಯಾಗ್ರಹಿಗಳು ಬಂದು ದೋಚಿಕೊಂಡು ಹೋದರೆಂದು ವರದಿ ಕೊಡಲಾರಂಭಿಸಿದುದು. ಇದಕ್ಕೂ ಮುಂದಿನ ಹೆಜ್ಜೆಯೆಂದರೆ ತಮಗಾಗದವರ ಕೊಲೆ ಮಾಡಿ ಶಿಬಿರದವರೇ ಕೊಲೆ ಮಾಡಿ ಹೋದರೆಂದು ಸಾಕ್ಷಿ ಪುರಾವೆಗಳನ್ನು ಹುಟ್ಟು ಹಾಕುವುದು! ಎತ್ತ ಹೋದರೂ ದೈತ್ಯರಂತೆ ತಿರುಗುತ್ತಿದ್ದ ಪಠಾಣರು, ರಝಾಕಾರರು, ಪೋಲೀಸರು! ನಾನೂ ಮದನಸಿಂಗರೂ ನಿತ್ಯ ಎರಡೂ ಬದಿಗೆ ಸಾಲಾಗಿ ನಿಂತಿರುತ್ತಿದ್ದ ಪಠಾಣರ ಚಾಚಿದ ಕೋವಿಗಳ ನೆರಳಿನಲ್ಲಿಯೇ ಆಫೀಸಿಗೆ ಹೋಗಿ ಬರುತ್ತಿದ್ದೆವು. ಮದನಸಿಂಗರನ್ನು ನೋಡುತ್ತಲೆ, 'ಯಹ ಶಿಖಡಾ ಕಿಧರ್ ಸೇ ಆಯಾ?' ಎಂದು ಕೂಗುತ್ತಿದ್ದರವರು. ಏತನ್ಮಧ್ಯೆ ಯಳಸಂಗಿಯೆಂಬ ಗಡಿಹಳ್ಳಿಯ ಮೇಲೆ ಭಾರತ ಸೈನ್ಯದ ತುಕಡಿಯೊಂದು ದಾಳಿ ಮಾಡಿ ಹೋಯಿತೆಂಬ ಸುದ್ದಿ ಬಂದಿದ್ದಿತು. ಆ ತುಕಡಿಯಲ್ಲಿ ಸೀಖ ಸೈನಿಕರೇ ಹೆಚ್ಚಾಗಿದ್ದರೆಂಬ ವಾರ್ತೆಯೂ ಬಂದಿದ್ದಿತು. ಆಮೇಲೆಯಂತೂ ಮದನಸಿಂಗರನ್ನು ಕಂಡಾಗಲೆಲ್ಲ ಅವರ ಕಣ್ಣುಗಳು ಕಿಡಿ ಕಾರುತ್ತಿದ್ದುವು. ಒಂದು ದಿನವಂತೂ ಒಬ್ಬ ಪಠಾಣ ತನ್ನ ಸಿಟ್ಟು ತಡೆಯಲಾಗದೆ ತನ್ನ ಕೋವಿಯ ದಂಡಕದಿಂದ ಮದನಸಿಂಗರ ಬೆನ್ನನ್ನು ಬಾರಿಸಿಯೇ ಬಿಟ್ಟ! ಪಾಪ, ಅವರು ತಗ್ಗಿಸಿದ ತಲೆ ಮೇಲೆತ್ತಲಿಲ್ಲ! ಬೇರೆ

ಉಪಾಯವಿರಲಿಲ್ಲ! ಇನ್ನು ಮುಂದೆ ರಾತ್ರಿ ಒಂದೇ ಮನೆಯಲ್ಲಿ ಮಲಗುವುದು ಅಪಾಯಕಾರಿಯೆಂದು ತೀರ್ಮಾನಿಸಿದೆವು ನಾವಿಬ್ಬರೂ. ಬೇರೆ ಬೇರೆ ಓಣಿಗಳಲ್ಲಿದ್ದ ಏಳು ಮನೆಗಳಲ್ಲಿ ದಿನಕ್ಕೊಂದು ಮನೆಯಂತೆ ಮಲಗ ತೊಡಗಿದೆವು. ಈ ಮನೆಗಳ ವಿವರಗಳನ್ನು ಎಷ್ಟು ಗೌಪ್ಯವಾಗಿರಿಸಿದ್ದೆವೆಂದರೆ ನಮ್ಮಿಬ್ಬರ ವಿನಾ ಮೂರನೆಯವರಾರಿಗೂ ಅವುಗಳ ಸುಳಿವೇ ತಿಳಿದಿರಲಿಲ್ಲ! 'ನಿದ್ದೆಗೊಮ್ಮೆ ನಿತ್ಯ ಮರಣ, ಎದ್ದ ಸಲ ನವೀನ ಜನನ' ಎಂಬುದು ನಮ್ಮ ಪಾಲಿಗಂತೂ ಅಕ್ಷರಶಃ ನಿಜವಾಗಿ ಬಿಟ್ಟಿದ್ದಿತು.

## ರಝಾಕಾರರ ಹಾವಳಿ :

ಕಲಬುರಗಿಗೆ ಮುಜಾಹಿದ್–ಎ–ಆಜಮ್, ಫೀಲ್ಡ್ ಮಾರ್ಷಲ್ ಕಾಸಿಮ್ ರಜವಿಯವರು ಬರುವರೆಂಬ ಸುದ್ದಿ ಬಂದಿತು. ಕಲಬುರಗಿಯ ಹಿಂದುಗಳೆಲ್ಲ ಕೈಯಲ್ಲಿ ಜೀವ ಹಿಡಿದುಕೊಂಡು ಕುಳಿತರು. ಏನೇನು ಅನಾಹುತಗಳಾಗ–ಬಹುದೆಂಬುದನ್ನು ಊಹಿಸುತ್ತಲೇ, ಕಲ್ಪಿಸುತ್ತಲೇ ಕಾಲ ತಳ್ಳ ತೊಡಗಿದರವರು. ಆಗಂತೂ ಉನ್ಮಾದದ ಅವಸ್ಥೆ ಸ್ವತಂತ್ರ ಹೈದರಾಬಾದವಾದಿಗಳಿಗೆ. ಮಹಮ್ಮದೀಯರಲ್ಲಿಯೂ ವಿವೇಕಿಗಳೂ, ರಾಷ್ಟ್ರಾಭಿಮಾನಿಗಳೂ, ಹಿಂದೂ–ಮುಸ್ಲಿಂ–ಸಖ್ಯ ಪ್ರತಿಪಾದಕರೂ ಇರಲಿಲ್ಲವೆನ್ನುವಂತಿಲ್ಲ. ಅಂಥವರೂ ಸಾಕಷ್ಟು ಸಂಖ್ಯೆಯಲ್ಲಿದ್ದರು. ನವಾಬ್ ಮೆಹದಿ ನವಾಜ್ ಜಂಗ್, ಬ್ಯಾರಿಸ್ಟರ್ ಅಕಬರ ಅಲಿಖಾನ್, ಸಂಪಾದಕ ಷೊಯಿಬುಲ್ಲಾಖಾನ್ ನವಾಬ್ ಅಲಿಯಾವರಜಂಗ್ ಇತ್ಯಾದಿ ಅನೇಕರು ಸ್ವತಂತ್ರ ಹೈದರಾಬಾದಿನ ಬೇಡಿಕೆಯು ಭ್ರಮಾಜನ್ಯವಾದುದೆಂದೂ, ಅಂತ್ಯದಲ್ಲಿ ಮುಸಲ್ಮಾನರಿಗೇ ಹಾನಿಕಾರಕವಾದುದೆಂದೂ ಸಾಕಷ್ಟು ಬಲವಾಗಿಯೇ ಪ್ರತಿಪಾದಿಸಿದರು. ಆದರೆ ಅವರ ಪ್ರತಿಪಾದನೆಯೆಲ್ಲ ಅರಣ್ಯರೋದನವಾಯಿತು. ಬಹುಶಃ ನಿಜಾಮರ ಆಳಿಕೆಗೆ ಅಳಿಗಾಲ ತುಂಬಿ ಬಂದಿತ್ತು. ಮೊದಲನೆಯ ನಿಜಾಮರಿಗೆ ಪೀರರೊಬ್ಬರು ತಿನ್ನಲು ಚಪಾತಿ ಕೊಟ್ಟು, 'ತಿನ್ನು' ಎಂದರಂತೆ. ಅವರು ತಿನ್ನ ತೊಡಗಲು ಇನ್ನೂ ತಿನ್ನು, ಇನ್ನೂ ತಿನ್ನು ಎಂದು ಒತ್ತಾಯಿಸಿದ್ದರಂತೆ ದರ್ಶನಕ್ಕೆ ಹೋದಾಗ. ಸರ್ವ ಸಾಹಸ ಮಾಡಿ ಏಳು ಚಪಾತಿಗಳನಷ್ಟು ತಿಂದರಂತೆ ಮೊದಲನೆಯ ನಿಜಾಮರು. ನಿನ್ನಿಂದ ಆರಂಭವಾಗುವ ನಿಜಾಮಷಾಹಿ ಏಳು ತಲೆವಾರುಗಳವರೆಗೆ ಮುಂದುವರಿದು ಏಳನೆಯ ತಲೆವಾರಿಗೆ ಮುಕ್ತಾಯವಾಗುವುದೆಂದು ಆ ಪೀರರು ಭವಿಷ್ಯ ನುಡಿದಿದ್ದರಂತೆ. ಆ ಭವಿಷ್ಯವನ್ನು ನಿಜವಾಗಿಸಲೆಂದೇ ಈ ಏಳನೆಯ ನಿಜಾಮ ದಾರಿ ತಪ್ಪಿ ನಡೆಯುತ್ತಲಿದ್ದಾನೆ– ಎಂದು ಕೆಲವು ಸಾತ್ವಿಕ ಮುಸಲ್ಮಾನರೇ ನನ್ನೆದುರು ಉದ್ಗರಿಸಿದ್ದುಂಟು.



ಅಂತೂ ರಝಾಕಾರರ ರಾಜ ಬಂದ ಕಲಬುರಗಿಗೆ; ಅಂದು ಕಲಬುರಗಿಯಲ್ಲಿ ಕೂಡಿದ್ದ ರಝಾಕಾರರ ಸಂಖ್ಯೆ ಎಷ್ಟು? ಲಕ್ಷಗಟ್ಟಳೆ. ಎಲ್ಲಿ ನೋಡಿದರೂ ಅವರೇ! ತಮ್ಮ ಮಹಾನಾಯಕನ ಮೆರವಣಿಗೆಯನ್ನು 'ನ ಭೂತೋ, ನ ಭವಿಷ್ಯತಿ' ಎಂಬ ರೀತಿಯಲ್ಲಿ ಮಾಡಿದರವರು. ಪ್ರತಿವರ್ಷ ಕಲಬುರಗಿಯ ಸೂಫಿ ಶ್ರೇಷ್ಠ ಖಾಜಾ ಬಂದೇ ನವಾಜರ ಉರುಸಿಗೆ ನಿಜಾಮರು ಬರುತ್ತಿದ್ದರು. ಅವರಿಗೂ ಎಂದೂ ಇಂಥ ಸ್ವಾಗತ, ಇಂಥ ಅದ್ದೂರಿಯ ಮೆರವಣಿಗೆ ದೊರೆತಿರಲಿಲ್ಲ. "ಷಾಹ್–ಎ–ದಕ್ಕನ್ ಜಿಂದಾಬಾದ್, ಮುಜಾಹಿದ್–ಎ–ಆಜಮ್ ಜಿಂದಾಬಾದ್' ಘೋಷಗಳು ಗಗನಭೇದಿಯಾಗಿ ಚಿಮ್ಮಿದುವು. "ಲಾಲ್‌ಕಿಲೇ ಪೇ ಆಸಫಿ ಪರಚಮ್–(ಕೆಂಪು ಕೋಟೆಯ ಮೇಲೆ ನಿಜಾಮರ ಬಾವುಟ) ಎಂಬುದು ಕಾಸಿಮ್ ರಜವಿ ಕೊಟ್ಟ ಕರೆಯಾಗಿದ್ದಿತು. ಕೇಳಿದ ಹಿಂದುಗಳೆಲ್ಲ ತಲ್ಲಣಿಸಿದರು, ತತ್ತರಿಸಿದರು. ಅಷ್ಟರಲ್ಲಿ ಭಾರತಿಯ ಸೈನಿಕರ ದಾಳಿಯಲ್ಲಿ ಪೆಟ್ಟು ತಿಂದಿದ್ದ ಯಳಸಂಗಾದ ಬಡ ಮುಸಲ್ಮಾನರು ಬಂದರು. ಕಾಸಿಮ್ ರಜವಿಯವರಿಗೆ ಮನವಿ ಪತ್ರ ಸಲ್ಲಿಸಿದರು. ಅದರಲ್ಲಿ ಅವರಿಗೆ ಒದಗಿದ್ದ ವಿಪನ್ನಾವಸ್ಥೆಯ ವರ್ಣನೆಯಿದ್ದಿತು; ಇನ್ನು ಸ್ವಗ್ರಾಮದಲ್ಲಿರುವುದು ಸಾಧ್ಯವಿಲ್ಲ, ಕಲಬುರಗಿಯಲ್ಲಿ ನೆಲೆಸಲು ಸಹಾಯ ಸೌಕರ್ಯಗಳನ್ನು ಒದಗಿಸಬೇಕೆಂಬ ಬಿನ್ನಹವಿದ್ದಿತು. ಅದನ್ನೋದಿ ಕೆರಳಿ ಕಿಡಿಕಿಡಿಯಾದರು ಕಾಸಿಮ್ ರಜವಿಯವರು. ಸಿಟ್ಟಿನಿಂದ ಕುದಿಯುತ್ತ ಕೇಳಿದರು: "ನೀವು ನಿಜವಾಗಿ ಮುಸಲ್ಮಾನರೊ?" ಹೌದೆಂದು ಒಕ್ಕೊರಲಿನಿಂದ ಉತ್ತರವಿತ್ತರು ಆ ಬಡಪಾಯಿಗಳು. ತಲೆಯಲ್ಲಾಡಿಸುತ್ತ ನಿಷ್ಠುರವಾಗಿ ನುಡಿದರು ರಜವಿ ಸಾಹೇಬರು: "ಅಲ್ಲ, ನೀವು ನಿಜವಾದ ಮುಸಲ್ಮಾನರಲ್ಲ! ನಾಳೆ ಇಲ್ಲಿಗೂ ಭಾರತದ ಸೈನಿಕರು ಬಂದರೆ ಹೈದರಾಬಾದಿಗೆ ಓಡಿ ಬಂದೀರಿ; ಹೈದರಾಬಾದಿಗೂ ಅವರು ಬಂದರೆ ಎಲ್ಲಿಗೆ ಓಡಿ ಹೋಗುವಿರಿ?" ಮುಂಬರುವ ಘಟನೆಗಳು ಇಂದಿನ ಮೇಲೆ ತಮ್ಮ ಛಾಯೆಯನ್ನು ಚೆಲ್ಲುತ್ತವೆಯೆಂದು ಹೇಳುತ್ತಾರೆ. ನಿಜವಾಗಿಯೂ ನಿಯತಿ ರಜವಿಯವರ ಬಾಯಿಂದ ಈ ಮಾತುಗಳನ್ನು ಆಡಿಸಿತೆಂದೇ ಹೇಳಬೇಕು. ಕಲಬುರಗಿಯ ವಿಭಾಗದ ರಝಾಕಾರರು ಏನನ್ನು ನಿರೀಕ್ಷಿಸಿ ತಮ್ಮ ಮಹಾನಾಯಕನನ್ನು ಬರಮಾಡಿಕೊಂಡಿದ್ದರು! ಕೊನೆಗೆ ಏನನ್ನು ಪಡೆದರು? ಇದ್ದ ಬಿದ್ದ ಧೈರ್ಯವನ್ನು ನುಚ್ಚುನುರಿಗೊಳಿಸಿದ ನುಡಿಗಳನ್ನು! ಬಹುಶಃ ಇದೇ ಕಾಸಿಮ್ ರಜವಿಯವರ ಕೊನೆಯ ಮೆರವಣಿಗೆ; ಕೊನೆಯ ಸಾರ್ವಜನಿಕ ಭಾಷಣ– ಕನಿಷ್ಠ ಇಷ್ಟು ದೊಡ್ಡ ಜನಸಮೂಹದ ಮುಂದೆ ಮಾಡಿದ ಕೊನೆಯ ಭಾಷಣ!

ಮೂರು ದಿನಗಳ ತರುವಾಯ ಇನ್ನೊಂದು ವಿಚಿತ್ರ ನಡೆಯಿತು: ಸುರಪುರ ತಾಲೂಕಿನ ಕೊಡೇಕಲ್ ಗ್ರಾಮದ ಬಸವಣ್ಣನ ಗುಡಿಯಲ್ಲೊಂದು ಗ್ರಂಥಕ್ಕೆ ಪೂಜೆ

ಸಲ್ಲುತ್ತದೆ. ಅದನ್ನು ಪೂಜಾರಿಯೂ ಸ್ನಾನ ಮಾಡಿ ಮುಟ್ಟಬೇಕು. ಅವನೂ ಅದನ್ನು ತೆರೆದು ನೋಡುವಂತಿಲ್ಲ, ಒಳಗೆ ಏನಿದೆಯೆಂಬುದು ಯಾರಿಗೂ ಗೊತ್ತಿರಲಿಲ್ಲ. ಯಾರೋ ಹೇಳಿದರಂತೆ–ಅಂದಿನ ಅಲ್ಲಿಯ ವರಿಷ್ಟ (ಅರಿಷ್ಠ?) ಅಧಿಕಾರಿಗಳಿಗೆ–ಆ ಗ್ರಂಥದಲ್ಲಿ ನಿಜಾಮರ ಭವಿಷ್ಯ ಬರೆದಿದೆಯೆಂದು. ಸರಿ, ಪೋಲೀಸರನ್ನು ಕಳಿಸಿದರು ಆ ಗ್ರಂಥವನ್ನು ಕಿತ್ತು ತರಲು! ಅವರು ಕಾಲ್ಮರೆಗಳನ್ನು ಕೂಡ ತೆಗೆಯದೆ ಒಳಹೊಕ್ಕು ಆ ಗ್ರಂಥವನ್ನು ಪೂಜಾರಿ ಕೈಮುಗಿದು ಬೇಡಿಕೊಂಡರೂ ಕೇಳದೆ ಕಸಿದು ತಂದರಂತೆ. ಆಗ ಆ ಪೂಜಾರಿ ಆ ಕ್ಷಣದಿಂದಲೇ ನಿರಶನ ವ್ರತವನ್ನು ಆರಂಭಿಸಿ ಬಿಟ್ಟನಂತೆ! ಈ ಆಸುರೀ ಆಡಳಿತ ಕೊನೆಗೊಳ್ಳುವವರೆಗೆ ಅನ್ನ ಕಚ್ಚುವುದಿಲ್ಲವೆಂದು ಘೋಷಿಸಿ ಬಿಟ್ಟನಂತೆ!

ಆ ಗ್ರಂಥ ಅವಲೋಕನೆಗಾಗಿ ಮಾನ್ವಿ ನರಸಿಂಗರಾಯರ ಮತ್ತು ನನ್ನ ಬಳಿಗೆ ಬಂದಿತು. ಇಬ್ಬರೂ ಸ್ನಾನ ಮಾಡಿ ಬಿಚ್ಚಿದೆವು ಅದನ್ನು ಸುತ್ತಿದ್ದ ರೇಶ್ಮೆ ಬಟ್ಟೆಯನ್ನು. ಒಂದಾದ ಮೇಲೊಂದರಂತೆ ಏಳು ಬಟ್ಟೆಗಳನ್ನು ಸುತ್ತಿದ್ದರದಕ್ಕೆ. ಏಳುಸುತ್ತಿನ ಕೋಟೆಯೊಳಗೆ ಇದ್ದ ಆ ಗ್ರಂಥ ಏನಿರಬಹುದೋ ಎಂಬ ಕುತೂಹಲ ಒಂದೊಂದು ಬಟ್ಟೆಯನ್ನು ಬಿಚ್ಚುತ್ತಲೂ ಹೆಚ್ಚುತ್ತ ನಡೆದಿದ್ದಿತು. ಕೊನೆಗೊಮ್ಮೆ ಗ್ರಂಥ ಕಣ್ಣಿಗೆ ಬಿದ್ದಾಗ ಕುತೂಹಲದ ಗರುಡ ಗರಿಗೆದರಿ ಹಾರಿದಂಥ ಅನುಭವ. ಸಾವಧಾನವಾಗಿ ಓದಿದಾಗ ಅದು ಬಸವಣ್ಣನವರ ಬಗ್ಗೆ ಬರೆದಿದ್ದ ವಚನಗಳ, ಸ್ವರ ವಚನಗಳ, ಹಾಡುಗಬ್ಬಗಳ ಸಂಕಲನವೆಂಬುದು ಗೊತ್ತಾಯಿತು. ನಮ್ಮ ವರದಿಯೊಡನೆ ಆ ಗ್ರಂಥವನ್ನು ಮೇಲಧಿಕಾರಿಗಳಿಗೆ ಕಳಿಸಿಕೊಟ್ಟೆವು; ಎಂಥ ಗ್ರಂಥಕ್ಕೆ ಎಂತ ಗತಿಯೊದಗಿತೆಂದು ನಿಟ್ಟುಸಿರಿಟ್ಟೆವು. ಆ ಗ್ರಂಥವೇನೋ ಕೊಡೇಕಲ್ಲಿಗೆ ಹಿಂದಿರುಗಿತು; ಆದರೆ ಅರ್ಚಕನ ಅನ್ನ ಸತ್ಯಾಗ್ರಹ ನಿಲ್ಲಲಿಲ್ಲ! ಏಳನೆಯ ತಲೆಗೆ ನಿಜಾಮಶಾಹಿ ಮುಗಿವುದೆಂಬ ಪೀರರ ಹೇಳಿಕೆ, ನಿಜಾಮರ ಆಳಿಕೆ ಕೊನೆಗಂಡ ಮೇಲೆಯೇ ಕಲಬುರಗಿಯ ಶ್ರೀ ಶರಣ ಬಸವೇಶ್ವರರ ದೇಗುಲದ ಗೋಪುರದ ಮೇಲೆ ಕಳಸವೇರುವುದೆಂಬ ನಂಬಿಕೆಗಳಿಗೆ ಈ ಅರ್ಚಕರ ಆಮರಣ ಉಪವಾಸ ಸೇರಿ ಇನ್ನು ಈ ಸೈತಾನೀ ಸರಕಾರ ಬಹಳ ದಿನ ಬದುಕದೆಂದು ಜನರು ಪಿಸು ಮಾತುಗಳಲ್ಲಿ ಆಡಿಕೊಳ್ಳತೊಡಗಿದ್ದರು. ಅದೇ ಸಮಯಕ್ಕೆ ಜಿನ್ನಾ ಸಾಹೇಬರ ನಿಧನ ವಾರ್ತೆ ಬಂದಿತು. ಸ್ವತಂತ್ರ ಹೈದರಾಬಾದು ವಾದಿಗಳಿಗೆ ಸಿಡಿಲೆರಗಿದಂತಾಯಿತು!

ನಾಲ್ಕೈದು ದಿನಗಳಲ್ಲಿ ಬೆಳಗಿನ ಜಾವದಲ್ಲಿಯೇ ಅಧಿಕಾರಿಗಳಿಗೆಲ್ಲ ಅವಸರದ ಕರೆ ಬಂದಿತು. ಎಲ್ಲರೂ ಸುರಕ್ಷಿತ ಸ್ಥಳವೊಂದರಲ್ಲಿ ಸೇರಿದೆವು. ಸೂಬೇದಾರರು



ಸೊನ್ನಲಾಪುರದಿಂದ ಹೊರಟ ಭಾರತ ಸೇನೆ ಮಿಂಚಿನ ವೇಗದಲ್ಲಿ ಸುಭದ್ರವೆಂದು ತಿಳಿಯಲಾಗಿದ್ದ ನಳದುರ್ಗವನ್ನು ವಶಪಡಿಸಿಕೊಂಡು, ಭರಭರಾಟೆಯೊಡನೆ ಸಿಕಂದರಾಬಾದು–ಹೈದರಾಬಾದುಗಳತ್ತ ಮುನ್ನುಗ್ಗುತ್ತಲಿದ್ದ ಸುದ್ದಿ ಬಂದಿದೆಯೆಂದು ಹೇಳಿ, "ನೀವೆಲ್ಲ ನಿಮಗೆ ತಿಳಿದಂತೆ ನಿಮ್ಮ ನಿಮ್ಮ ರಕ್ಷಣೆಯ ವ್ಯವಸ್ಥೆ ಮಾಡಿಕೊಳ್ಳಿರಿ; ಬೇಕಾದ ಸ್ಥಳಗಳಿಗೆ ಹೋಗಿ ಬದುಕಿಕೊಳ್ಳಿರಿ; ಬದುಕಿ ಉಳಿದರೆ ತಾನೆ ಏನೆಲ್ಲವೂ?" ಎಂದು 'ದಿವ್ಯೋಪದೇಶ' ನೀಡಿ, ಹೊರಗೆ ಸಿದ್ಧವಾಗಿ ನಿಂತಿದ್ದ ಕಾರು ಏರಿ ಹೈದರಾಬಾದಿಗೆ ಪಲಾಯನ ಮಾಡಿದರು. ಉಳಿದ ಮುಸಲ್ಮಾನ ಅಧಿಕಾರಿಗಳಲ್ಲಿ ಕೆಲವರು ಕಾಲಿಗೆ ಬುದ್ಧಿ ಹೇಳಿದರು; ಕೆಲವರು ಬಂದದ್ದು ಬರಲೆಂದು ಅಲ್ಲಿಯೇ ಉಳಿದರು. ಅವ್ವಲ್ ತಾಲೂಕದಾರ ಹುಸೇನಿಯವರು ಮಾತ್ರ ಕರ್ತವ್ಯ ನಿಷ್ಠರಾಗಿ ತಮ್ಮ ಸ್ಥಾನದಲ್ಲಿ ಉಳಿದರು. ರಝಾಕಾರರು ರಸ್ತೆಗಳಿಗೆ ವಿದಾಯ ಹೇಳಿ ಮನೆಗಳಲ್ಲಿ ಅಡಗಿ ಕುಳಿತರು; ಪಠಾಣರೂ ರೋಹಿಲಾ ಜನರೂ ಅವರಂಥವರೂ ಎತ್ತ ಹೋದರೆಂಬುದೇ ಯಾರಿಗೂ ತಿಳಿಯಲಿಲ್ಲ! ಸಿಡ್ನಿ ಕಾಟನ್ ಸರಬರಾಜು ಮಾಡಿದ್ದ 303 ಗನ್ನುಗಳನ್ನೂ, ಸ್ಟೆನ್ ಗನ್ನುಗಳನ್ನೂ ಹೆಗಲ ಮೇಲೆ ಹೊತ್ತುಕೊಂಡೇ ಓಡಿ ಹೋದ ಅವರ ಬಗ್ಗೆ 'ಜೋಕು'ಗಳು ಹುಟ್ಟಿಕೊಂಡವು. ಒಬ್ಬನು ಒಂದು ಕೈಯಲ್ಲಿ 303, ಇನ್ನೊಂದರಲ್ಲಿ ಸ್ಟೆನ್‌ಗನ್ ಹಿಡಿದುಕೊಂಡೇ ಓಡುತ್ತಿದ್ದನಂತೆ; ಯಾರೋ ನಿಲ್ಲಿಸಿ, 'ಓಡಿ ಹೋಗುವೆಯೇಕೆ, ಯುದ್ಧ ಮಾಡುವುದಿಲ್ಲವೆ?' ಎಂದು ಕೇಳಿದಾಗ "ಅರೆ ಭಾಯಿ ಇಸ್ ಹಾಥ್ ಮೇಂ 303, ಉಸ್ ಹಾಥ್ ಮೇಂ ಸ್ಟೆನ್ ಗನ್ ಹೈ; ಕಿಸ್ ಹಾಥ್ ಸೇ ಲಡೂಂ–ಈ ಕೈಯಲ್ಲಿ 303, ಆ ಕೈಯಲ್ಲಿ ಸ್ಟೆನ್‌ಗನ್ ಇದೆ– ಯಾವ ಕೈಯಿಂದ ಯುದ್ಧ ಮಾಡಲಿ?' ಎಂದು ಉತ್ತರಿಸಿದನಂತೆ! ಹುಸಿ ಪ್ರಚಾರ, ಉರ್ದೂ ಪತ್ರಿಕೆಗಳು, ಹೈದರಾಬಾದಿನ ಆಕಾಶವಾಣಿ, ಬಾಯಿ ಬಡಾಯಿಗಳು ಸೃಷ್ಟಿಸಿದ್ದ 'ವೀರಾಧಿವೀರ'ರ ಪಡೆ ಒಂದೇ ಉಸುರಿಗೆ ಕೆಡೆದು ಬಿದ್ದಿದ್ದಿತು.

'ಪೋಲಿಸ್ ಕ್ರಿಯೆ' ಎಂದು ಪ್ರಸಿದ್ಧವಾದ ಈ ಕ್ಷಿಪ್ತ ಕಾಳಗದ ವಿವರವಾದ ವರ್ಣನೆ ಇಲ್ಲಿ ಅಪ್ರಸ್ತುತ. ಒಂದು ವಿಷಯ ಸ್ಪಷ್ಟ: ಹಿಡಿದು ತಂದ ನಾಯಿಗಳು ಮೊಲವನ್ನು ಹಿಡಿಯಲಾರವು; ಹಣದಾಸೆಗೆ ಬಂದ ಯಾರೂ ಜೀವ ಪಣಕ್ಕಿಟ್ಟು ಹೋರಾಡಲಾರರು. ಇಷ್ಟೇ ಅಲ್ಲ, ಮೂಲ ಉದ್ದೇಶ ಸಾಧುವಲ್ಲದಿರುವಾಗ ಅದಕ್ಕಾಗಿ ನಡೆವ ಹೋರಾಟದಲ್ಲಿ ನೈತಿಕ ಧೈರ್ಯವಿರುವುದಿಲ್ಲ, ಕಲಿತನದ ಕೆಚ್ಚಿರುವುವುದಿಲ್ಲ, ಅದರ ಸಾಧನೆಯಲ್ಲಿ ಸಾವನ್ನಾದರೂ ಅಪ್ಪುವೆನೆಂಬ ಛಲವಿರುವುದಿಲ್ಲ. ಅದಕ್ಕೆ ಅಂತ್ಯದಲ್ಲಿ ಜಯ ದೊರೆಯುವುದಿಲ್ಲ. ಮುಂದೆ ಇನ್ನೊಮ್ಮೆ ಇಂಥದೇ ಅನಿಸಿಕೆ ಉದಿಸಿತು ನನ್ನಲ್ಲಿ. ಆ ಪ್ರಸಂಗ ಬಂದಾಗ ಅದರ ಉಲ್ಲೇಖನವೂ ಬರುವುದು.

ಐದು ದಿನಗಳಲ್ಲಿ ನಿಜಾಮ ಶರಣಾಗತನಾಗುವಂತೆ ಮಾಡಿ ಸರದಾರ ಪಟೇಲರು ಹೊಸ 'ಪಂಚರಾತ್ರ' ನಾಟಕವೊಂದರ ಸೃಷ್ಟಾರರಾದರು. ಭಾರತ ಸೇವೆ ತೋರಿದ ಕಾರ್ಯ ಸಾಹಸಗಳೂ ಹೆಮ್ಮೆ ಹುಟ್ಟಿಸುವಂಥವು. ಯಾರಾದರೂ ಆಧುನಿಕ ಭಾರತದ ಅದ್ಭುತಗಳಲ್ಲೊಂದಾದ ಈ 'ಪೋಲೀಸ್ ಕ್ರಿಯೆ'ಯ ಸಾದ್ಯಂತ ಸಂಕಥನವನ್ನು ನಮಗೆ ಕೊಡಬೇಕು. ಆಗ ಒಂದು ಜಿಲ್ಲಾ ಕೇಂದ್ರದಲ್ಲಿದ್ದ ನನಗೆ ಉಳಿದ ಜಿಲ್ಲೆಗಳಲ್ಲಿ, ರಾಜಧಾನಿಯಲ್ಲಿ ನಡೆದ ವಿದ್ಯಮಾನಗಳು ತಿಳಿಯವು. ಒಟ್ಟಿನಲ್ಲಿ ಹೇಳುವುದಾದರೆ ಹೈದರಾಬಾದಿನಿಂದ ಭಾರತ ಸೇನೆ ಇನ್ನೂ 25–26 ಮೈಲಿ ಆಚೆ ಇರುವಾಗಲೇ ನಿಜಾಮರ ಪರವಾಗಿ ಅವರ ಯುವರಾಜ ಜನರಲ್ ಜೆ.ಎನ್. ಚೌಧರಿಗೆ ಶರಣಾಗತರಾದುದು–ಅದೂ ಐದೇ ದಿನಗಳ ಅಲ್ಪಾವಧಿಯಲ್ಲಿ ಮೊಂಡೆಯೂರಿದುದು ಜಗತ್ತನ್ನೇ ಬೆಕ್ಕಸಬೆರಗುಗೊಳಿಸಿದ ಮಹಾಘಟನೆ! ವಲ್ಲಭಭಾಯಿ–ಬೆನಕೆಗೆ ಲಡ್ಡುಗೆಗಳಾಗಿದ್ದುವು ದೇಶೀಯ ಸಂಸ್ಥಾನಗಳು! ಅವುಗಳಲ್ಲಿ ಎಲ್ಲಕ್ಕಿಂತ ದೊಡ್ಡ ಲಡ್ಡುಗೆಯಾಗಿದ್ದ ಹೈದರಾಬಾದು ಸಂಸ್ಥಾನವನ್ನು ಮಾತ್ರ ಇಡಿಯಾಗಿ ನುಂಗಲಾಗಲಿಲ್ಲ ಅವರಿಗೂ; ತುಣುಕು ಮಾಡಿ ತಿನ್ನಬೇಕಾಯಿತು!

ಉಳಿದೆಲ್ಲ ಕಡೆಗಳ ಹಿಂದುಗಳಿಗೆ ಶರಣಾಗತಿಯ ದಿನವೇ ವಿಪನ್ನಾವಸ್ಥೆಯಿಂದ ವಿಮೋಚನೆ ದೊರೆತಿದ್ದರೂ ಕಲಬುರಗಿಯಲ್ಲಿದ್ದ ನಮಗೆ ಮಾತ್ರ ಮತ್ತಷ್ಟು ಕೆಟ್ಟ ದಿನಗಳು ಕಾಣಿಸಿಕೊಂಡುವು! ಕಲಬುರಗಿಯ ಕಡೆಗೆ ಹೊರಟಿದ್ದ ಭಾರತ ಸೇನೆಯ ತುಕಡಿಗೆ ಆಳಂದೆಯಲ್ಲಿ ಅನಿರೀಕ್ಷಿತ ಪ್ರತಿಭಟನೆ ಎದುರಾಯಿತು. ಅಲ್ಲಿದ್ದ ನಿಜಾಮ ಸೇನೆ–ರಝಾಕಾರರ ಮೇಳ ಆ ತುಕಡಿಯ ಮುಂಬರಿವನ್ನು ತಡೆದು ನಿಲ್ಲಿಸಿದ್ದುವು. ಕೆಲವು ಗಂಟೆಗಳವರೆಗೆ. ಆಮೇಲೆ ಮರಮಳೆ ಬಿದ್ದು ಆ ಎರೆಮಣ್ಣಿನ ಪ್ರದೇಶವೆಲ್ಲ ಹುದುಲಾಗಿ ಅವರ ಸಶಸ್ತ್ರ ವಾಹನಗಳು ಸಿಕ್ಕಿಕೊಂಡವು ಆ ಹುದುಲಿನಲ್ಲಿ! ಆಕಾಶ ವಾಣಿಯಲ್ಲಿ ಉಳಿದ ಭಾಗಗಳ ವಿಜಯೋತ್ಸವ ವಾರ್ತೆಗಳನ್ನು ಆಲಿಸುತ್ತಿದ್ದ ನಮಗೆ ಹೊರಗೆ ಕರ್ಣ ಕಠೋರ ಘೋಷಣೆಗಳು ಕೇಳಿಬಂದುವು. "ಹಾಗೂ ಸಾಯುತ್ತೇವೆ, ಹೀಗೂ ಸಾಯುತ್ತೇವೆ, ಕೈಗೆ ಸಿಕ್ಕ ಹಿಂದುಗಳನ್ನೆಲ್ಲ ಕೊಂದೇ ಸಾಯುತ್ತೇವೆ!" ಎಂದು ಕೂಗುತ್ತ ಹೊರಟಿದ್ದರು ರಝಾಕಾರರ. ರೇಡಿಯೋ ನಿಲ್ಲಿಸಿ ನಾನು ಮದನಸಿಂಗ್ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡೆವು. 'ಕೈಗೆ ಬಂದ ತುತ್ತು ಬಾಯಿಗೆ ಬಾರದೆ ಹೋಗಿ ಬಿಡಬಹುದೆ?" ಎಂಬ ಸಂಶಯ ಇಬ್ಬರಲ್ಲಿಯೂ ಸುಳಿದು ಇಬ್ಬರ ಮುಖಗಳೂ ಕಪ್ಪಿಟ್ಟಿದ್ದುವು! ಇಬ್ಬರೂ ಅಂದು ರಾತ್ರಿ ಮಲಗಬೇಕೆಂದಿದ್ದ ಮನೆಯನ್ನು ಬದಲಿಸಿ ಬೇರೊಂದು ಭದ್ರವಾದ ಮನೆಯಲ್ಲಿ ಮಲಗುವುದೆಂದು ನಿರ್ಧರಿಸಿದೆವು.



ಅಂದು ರಾತ್ರಿ ರಝಾಕಾರರು ಹಿಂದುಗಳ ಮನೆಗಳಿಗೆ ಬೆಂಕಿ ಹಚ್ಚುವರೆಂದೂ, ಅದಕ್ಕಾಗಿ ಸೀಮೆಎಣ್ಣೆ ಮೊದಲಾದುವನ್ನು ಸಂಗ್ರಹಿಸುತ್ತಲಿರುವರೆಂದೂ ಸುದ್ದಿ ಹರಡಿತು, ಹಿಂದೂ ನರನಾರಿಯರೆಲ್ಲ ಬಾಯಲ್ಲಿ ಅಕ್ಕಿಯ ಕಾಳು ಹಾಕಿಕೊಂಡು ರಾತ್ರಿಯ ದಾರಿ ಕಾಯತೊಡಗಿದರು. ನಿಮಿಷಕ್ಕೊಮ್ಮೆ ಸಾಯುತ್ತ, ನಿಮಿಷಕ್ಕೊಮ್ಮೆ ಹುಟ್ಟುತ್ತ! ಸಂಧ್ಯಾ ಸಮಯ ಸಮೀಪಿಸಿದಂತೆ ಅವರ ಭಯ ಬೃಹದಾಕಾರವಾಗಿ ಬೆಳೆದು ಭೂತಾಕಾರ ಧರಿಸಿ ನಿಂತಿತು. ಎಂದಿನಂತಿದ್ದ ಸಂಜೆಯ ಕೆಂಪು ಕೂಡ ಅಂದು ರಕ್ತದ ಪ್ರತೀಕವಾಗಿ ತೋರಿ ಭಯದ ಬೆಂಕಿಗೆ ಸೌದೆಯನ್ನು ಒದಗಿಸಿತು. ಊರಲ್ಲೆಲ್ಲ ಸ್ಮಶಾನ ಮೌನ. ಸಂಜೆಯಾಗುತ್ತಲೇ ಎಲ್ಲಿಂದ ಬಂದಿತೋ ಮುಸಲ ಧಾರೆಯ ಮರಮಳೆ ಬಂದುಬಿಟ್ಟಿತು. ಧೋ ಧೋ ಎಂದು ರಾತ್ರಿಯಲ್ಲಿ ಅಪ್ಪಳಿಸಿತು. ಮನೆ ಸುಡುವ ಸಿದ್ಧತೆಯನ್ನು ಮಾಡಿಕೊಂಡವರೇ ಮನೆ ಸೇರಿ ಕುಳಿತರು! ನಿರಪರಾಧಿಗಳ ರಕ್ಷಣೆಗಾಗಿ ನಿಸರ್ಗ ವಿಧಿಸಿದ್ದ 'ಕರ್ಫ್ಯೂ' ಇದೆಂದು ನಾವಾಡಿಕೊಂಡೆವು. ವಿಷವೆಂದು ಕೊಂಡುದು ರಸವಾಗಿ ಪರಿವರ್ತಿತವಾಗಿದ್ದಿತು ಪ್ರಕೃತಿಲೀಲೆಯಿಂದ!

ಆ ಮಳೆ ಮರುದಿನವೂ ಮುಂದುವರಿದು, ಮಾರನೆಯ ರಾತ್ರಿಯೆಲ್ಲ ಕುಟ್ಟಿ, ನಂತರದ ದಿನದ ಅಪರಾಹ್ನದವರೆಗೆ ತೆರಪಿಲ್ಲದೆ ಸುರಿಯಿತು. ಅಂಥ ಮಳೆಯನ್ನು ನಾನು ಆ ಮೊದಲು ನೋಡಿರಲಿಲ್ಲ, ಆ ತರುವಾಯವೂ ನೋಡಿಲ್ಲ. ಕಲಬುರಗಿಯ ಶರಣಬಸವೇಶ್ವರ ಕೆರೆ ತುಂಬಿ, ಕೋಡಿ ಸೂಸಿ ಹರಿಯತೊಡಗಿದ್ದಿತು. ಊರಲ್ಲೆಲ್ಲ ನೀರೇ ನೀರು. ಅಪರಾಹ್ನ ಮಳೆ ನಿಂತಾಗ ಭಯ ಮತ್ತೆ ಭುಗಿಲೆಂದು ಎದ್ದುಬಿಟ್ಟಿತು. ಎಲ್ಲರೂ ಮಾಳಿಗೆಯೇರಿ ಹುಮನಾಬಾದಿನ ಹಾದಿಯ ಮೇಲೆ ದೃಷ್ಟಿ ಹರಿಸಿದರು. ಯಾರೋ ಕೂಗಿದರು–'ಭಾರತ ಸೈನ್ಯ ಬಂತು!' ಗೋಲಗುಮ್ಮಟದಂತೆ ಅದನ್ನು ಮತ್ತೆ ಮತ್ತೆ ಪುನರುಕ್ತಗೊಳಿಸಿ ನಲಿಯಿತು ಕಲಬುರಗಿ! 'ಭಾರತ ಸೈನ್ಯ ಬಂತು, ಭಾರತ ಸೈನ್ಯ ಬಂತು' ಎಂದು ಜನರೆಲ್ಲ ಬೀದಿಗಿಳಿದರು ಹರ್ಷೋತ್ಸಾಹಗಳೊಡನೆ. ಮೇರೆ ಮೀರಿದ್ದ ಸಂಭ್ರಮದೊಡನೆ ಕೂಗುತ್ತಿದ್ದಾಗಲೇ ಬಂದೇಬಿಟ್ಟಿತು ಭಾರತ ಸೇನೆ. ಸೈನಿಕರ ಸಶಸ್ತ್ರ ವಾಹನಗಳು ಕಾಣುತ್ತಲೇ 'ಭಾರತ ಮಾತಾ ಕೀ ಜೈ, ಮಹಾತ್ಮಗಾಂಧೀ ಕಿ ಜೈ, ಸರದಾರ ಪಟೇಲ ಕೀ ಜೈ' ಎಂದು ಸ್ವಾಗತಿಸಿದರು ಪೌರರು. ಒಳಗಿದ್ದ ಸೈನಿಕರೂ ಹೆಮ್ಮೆ ಹಿಗ್ಗುಗಳ ಹೊಗರು ಹೊಮ್ಮುತ್ತಿದ್ದ ಮುಖಗಳಿಂದ ಜೈಹಿಂದ್ ಎಂದು ಪ್ರತಿಕ್ರಿಯಿಸಿದರು. 'ಜೈಹಿಂದ್, ಜೈಹಿಂದ್, ಜೈಹಿಂದ್' ಧ್ಯಾನ ಆಕಾಶೋನ್ಮುಖವಾಗಿ ಚಿಮ್ಮು ತೊಡಗಿತು. ಕಿಡಿಗೇಡಿಗಳು ಕೆಲವರು ರೂಮಿಟೊಪ್ಪಿಗೆಗಳನ್ನು ಕಸಿದು ತಂದು ಕೆರೆಯ ಕಾಲುವೆಗೆ ಎಸೆದರು. ಅವು ತೇಲಿ ಹೋಗ ತೊಡಗಲು ಕೈತಟ್ಟಿ ಕುಣಿದು ಕೇಕೆ ಹಾಕಿದರು.

ಇನ್ನು ಏನೇನು ಮಾಡುತ್ತಿದ್ದರೋ, ಅವ್ವಲ್ ತಾಲೂಕುದಾರರ ಅಪೇಕ್ಷಿಯಂತೆ ತುಕಡಿಯ ಕಮಾಂಡರ್ ಕರ್ನಲ್ ಶಿವಚರಣಸಿಂಗರನ್ನು ಬಿಳಿಯ ಬಾವುಟದೊಡನೆ ಬರಮಾಡಿಕೊಳ್ಳಲು ಹೋಗಿದ್ದ ಮದನಸಿಂಗ್ ಮತ್ತು ನಾನು ನಡುವೆ ಪ್ರವೇಶಿಸಿ ತಡೆದೆವು. ಗುಂಪಿನಲ್ಲಿದ್ದ ಉಗ್ರವಾದಿಯೊಬ್ಬ ಸಿಟ್ಟಿನಿಂದ ಕೇಳಿದ: "ಇಷ್ಟು ದಿನ ನಾವು ನಿತ್ಯವೂ ಕಣ್ಣೀರು ಕೂಳು ಏಕ ಮಾಡಿ ತಿನ್ನುತ್ತಿದ್ದಾಗ ನೀವೆಲ್ಲಿದ್ದಿರಿ? ಏನು ಮಾಡುತ್ತಿದ್ದೀರಿ?" ನಾವು ಸಿಟ್ಟಾಗದೆ ಸಮಾಧಾನ ಹೇಳಿದೆವು: 'ನೀವೆಂದುದು ನಿಜ: ನಾವಿಲ್ಲಿ ಅಧಿಕಾರಿಗಳಾಗಿದ್ದೂ ನಿಮ್ಮ ಪಾಲಿಗೆ ಇಲ್ಲದಂತಾಗಿದ್ದೆವು. ನಾವೂ ನಿಮ್ಮ ಸ್ಥಿತಿಯಲ್ಲಿಯೇ ಇದ್ದೆವು. ಈಗ ನಾವು ಗೆದ್ದಿದ್ದೇವೆ, ಗೆದ್ದವರು ಸೋತವರನ್ನು ಔದಾರ್ಯದೊಡನೆ ನಡೆಸಿಕೊಳ್ಳಬೇಕು, ದಯವಿಟ್ಟು ಈ ಮುಸಲ್ಮಾನ ಬಾಂಧವರನ್ನು ಬಿಟ್ಟುಬಿಡಿ. ಅವರ ಮೈ ಕೂದಲನ್ನು ಕೊಂಕಾಗದಂತೆ ನೋಡಿಕೊಳ್ಳಿರಿ. ಅತ್ಯಾಚಾರ ಮಾಡಿದವರು ಇವರಲ್ಲ, ಅಮಾನುಷ ಅತ್ಯಾಚಾರಗಳನ್ನು ಮಾಡಿದವರೆಲ್ಲ ಹೈದರಾಬಾದಿಗೆ ಓಡಿ ಹೋಗಿದ್ದಾರೆ, ಬಹುಶಃ ಅಲ್ಲಿಂದ ಪಾಕಿಸ್ತಾನಕ್ಕೆ ಓಡಿ ಹೋಗಿರಬಹುದು! ಅವರು ಮಾಡಿದ ಪಾಪಕ್ಕೆ ಇರಲಿ ಬಲಿ ಕೊಳ್ಳಬೇಡಿರಿ."

## ಗಾಂಧಿಯ ತಾರಕ ನಾಮ

ಈ ವಾದ ಬಹು ಸಂಖ್ಯಾತರಿಗೆ ಒಪ್ಪಿಗೆಯಾಯಿತಾದರೂ ಒಬ್ಬಿಬ್ಬ ಅಗ್ನಿಭಕ್ಷಕರಿಗೆ ಅಪ್ಯಾಯಮಾನವೆನಿಸಲಿಲ್ಲ. ಅವರು 'ಸೇಡು, ಸೇಡು, ಸೇಡು ತೀರಿಸಿಕೊಳ್ಳಲೇ ಬೇಕು ನಾವು' ಎಂದು ಕೂಗಿದರು. ನಾನೂ ಅಷ್ಟೇ ಎತ್ತರದ ದನಿಯಲ್ಲಿ ಕೂಗಿದೆ: "ಸೇಡಿನ ಸುದ್ದಿ ತೆಗೆದರೆ ನಿಮಗೆ ಮಹಾತ್ಮಗಾಂಧಿಯವರ ಆಣೆ!" ದ್ವೇಷದ ವಿಷವೇರಿದ್ದ ಅವರ ಮೇಲೆ ಗಾರುಡವಾಗಿ ಪರಿಣಮಿಸಿತು ಗಾಂಧೀಜಿಯವರ ಆಣೆ. ಅವರೆಲ್ಲ ಗಾಂಧೀಜಿಯವರ ಹೆಸರಿಗೆ ಕೆಸರು ತೊಡೆವ ಕೆಲಸವಾವುದನ್ನೂ ಮಾಡುವುದಿಲ್ಲವೆಂದು ಮಾತು ಕೊಟ್ಟು, ಮುಸಲ್ಮಾನರ ಕೈಕುಲುಕಿ ಹೊರಟುಹೋದರು. ಆಗ ಆ ಹೆಸರಿನಲ್ಲಿದ್ದ ಪ್ರಭಾವವನ್ನೂ, ಈಗ ಆ ಹೆಸರಿಗೊದಗಿರುವ ನಿರ್ಲಕ್ಷ್ಯವನ್ನು ನೆನೆದು ಆಗಾಗ ತಳಮಳಿಸುತ್ತೇನೆ ನಾನು! ಸೈನಿಕರಿಂದ, ಶಸ್ತ್ರಾಸ್ತ್ರಗಳಿಂದ, ಸರಕಾರದಿಂದ, ಶಾಸನಗಳಿಂದ ಆಗದ ಕಾರ್ಯಗಳನ್ನು ಆಗ ಮಾಡಿಸುತ್ತಿತ್ತು ಆ ಹೆಸರಿನ ಮಂತ್ರಶಕ್ತಿ! ಈಗ ಆ ಹೆಸರು ಎತ್ತುವವರೇ ವ್ಯವಹಾರಜ್ಞಾನ ಶೂನ್ಯರು, ಇಲ್ಲವೆ ಅಲೌಕಿಕರು!

ಕಲಬುರಗಿ ತೊರೆದು ಹೋದವರೆಲ್ಲ ಹಿಂದಿರುಗಿ ಬಂದರು. ನನ್ನಲ್ಲಿ ವಿಶ್ವಾಸದಿಂದ ಇರಿಸಿದ್ದ ಚಿನ್ನವನ್ನು ಪಡೆದುಕೊಂಡರು. ಚಿನ್ನ ಕಾಯುವ ಹೊಣೆ ಮುಗಿಯುವಷ್ಟರಲ್ಲಿ ಕನ್ಯೆಯರನ್ನು ಕಾಯುವ ಹೊಣೆ ಹೆಗಲೇರಿತು! ನಾನಿದ್ದ



ಓಣಿಯ ಮುಸಲ್ಮಾನ ಬಾಂಧವರಲ್ಲಿ ಕೆಲವರು ತಮ್ಮ ಪ್ರಾಪ್ತ ವಯಸ್ಕ ಪುತ್ರಿಯರನ್ನು ತಂದು ಅವರನ್ನು ಕಾಮುಕರಿಂದ ರಕ್ಷಿಸಬೇಕೆಂದು ಕೇಳಿಕೊಂಡರು. ನಾನಿದ್ದ ಮನೆಯಲ್ಲಿ ಬಂಕರದಲ್ಲೊಂದು ಕೊಠಡಿ ಇದ್ದಿತು. ಅಲ್ಲಿಗೆ ನಾನು ಸ್ಥಳಾಂತರಿಸಿಕೊಂಡು ಹಿಂದಿನ ಮನೆಯನ್ನೆಲ್ಲ ಅವರಿಗೆ ಬಿಟ್ಟುಕೊಟ್ಟೆ. ಪುಣೆಯಲ್ಲಿ ದುರ್ಗಾಷ್ಟಮಿಯ ದಿನವೇ ಮಗ ಹುಟ್ಟಿದ್ದ. ಬಹಳ ಚೆನ್ನಿಗನಾಗಿರುವನೆಂದು ಅರ್ಧಾಂಗಿಯ, ಅಕ್ಕಯ್ಯನ ಕಾಗದಗಳು ಬಂದಿದ್ದುವು. ಯಾವಾಗ ಅವನು ಹಾಗೂ ಮಡದಿ ಮಕ್ಕಳ ಮುಖವನ್ನು ನೋಡುವೆನೋ ಎಂದು ಕಾತರಗೊಂಡಿತ್ತು ಮನಸ್ಸು, ಆದರೂ ಈ ಕನ್ಯೆಯರ ಮಾನರಕ್ಷಣೆಯೂ ಪವಿತ್ರ ಕರ್ತವ್ಯವೆಂದು ಬಗೆದು ಎರಡು ವಾರ ಪುಣೆಯ ಪ್ರಯಾಣವನ್ನು ಮುಂದೂಡಿದೆ. ಆ ಅವಧಿಯಲ್ಲಿ ಅವರು ನಿರ್ಭಯರಾಗಿದ್ದುದಲ್ಲದೆ ಜಿಲ್ಲೆಯ ಅನೇಕ ಭಾಗಗಳಿಂದ ಬಂದ ರೈತರ ಗೋಳನ್ನು ಹೊಸದಾಗಿ ಸಿವ್ಹಿಲ್ ಎಡ್ಮಿನಿಸ್ಟ್ರೇಟರ್ ಆಗಿ ಬಂದಿದ್ದ ಶ್ರೀ ಎಸ್.ಎ. ಘಾಟಗೆಯವರ ಕಿವಿಗೆ ಮುಟ್ಟಿಸಿ ಅವರಿಗೆ ಪರಿಹಾರ ಕೊಡಿಸುವ ಕಾರ್ಯವೂ ಕೈಗೂಡಿತು. ನಾನೇ ಅವರ ಮನವಿಗಳನ್ನು ಬರೆಯಬೇಕು, ನಾನೇ ಅವರನ್ನು ಕರೆದೊಯ್ದು ಸಿ.ಎ. ಅವರಿಗೆ ರಝಾಕಾರರಿಂದ ಆ ನಿರಪರಾಧಿಗಳಿಗೆ ಆಗಿದ್ದ ಹಾನಿಯ ವಿವರ ನೀಡಬೇಕು. ಅವರು ಪರಿಹಾರದ ಬಗ್ಗೆ ಬರೆಯುತ್ತಲೆ ನಾನೇ ಅದು ಆಜ್ಞೆಯಾಗಿ ಹೊರಬೀಳುವಂತೆ ನೋಡಿಕೊಳ್ಳಬೇಕು. ಇದರಿಂದ ನನ್ನ ಮನೆಯ ಮುಂದೆ ದಿನದಿನವೂ ಜನಗಳ ಜಾತ್ರೆಯೇ ನೆರೆಯ ತೊಡಗಿತು. ನಾನೂ ಸ್ವಾತಂತ್ರ್ಯೋದಯದ ಸಂಭ್ರಮದಲ್ಲಿ ಹಗಲಿರುಲೆನ್ನದೆ ದುಡಿದೆ ಅವರಿಗಾಗಿ.

ಪುಣೆಯಲ್ಲಿ ನಾನು ಪ್ರಕಟವಾದಾಗ ಎಲ್ಲರಿಗೂ ಸಂಭ್ರಮವೇ ಸಂಭ್ರಮ. ನನಗೆ ಪುನರ್ಜನ್ಮ ಪ್ರಾಪ್ತವಾದಷ್ಟು ಹರ್ಷೋತ್ಕರ್ಷ ನನ್ನ ಸತಿಗೆ, ಸುತೆಯರಿಗೆ; ನಾನು ಮೃತ್ಯುಮುಖದಿಂದ ಪಾರಾಗಿ ಬಂದಷ್ಟು ಅಪಾರ ಆನಂದ ಬಾವಾಜಿ, ಅಕ್ಕಾಜಿಯರಿಗೆ, ಅವರ ಮೂವರು ಮಕ್ಕಳಿಗೆ, ಮಗನ ಮೊಗವನ್ನು ನೋಡಿ ನಲಿದೆ; ವಿಜಯಾ, ಗೀತಾರನ್ನು ಮತ್ತೆ ಮತ್ತೆ ಎತ್ತಿ ಎದೆಗೆ ಅವಚಿಕೊಂಡೆ; ಗಿರಿಜೆಯತ್ತ ಹೊರಳಿ ಹೊರಳಿ ನೋಡಿದೆ. ಭಾರತಕ್ಕೆ ಸ್ವಾತಂತ್ರ್ಯ ಬಂದಾಗಿನಷ್ಟೇ ಸಂತೋಷ ಈ ಪೋಲೀಸ್ ಕ್ರಿಯೆಯ ಯಶಸ್ಸಿನಿಂದ ದೇಶದ ಉದ್ದಗಲಕ್ಕೂ ಸೂಸಿ ಹರಿದಿದ್ದಿತು. ಅಂದು ಸಂಜೆ ಎಲ್ಲರೂ ಸಿನಿಮಾ ನೋಡಿ ಬಂದೆವು. ರಾತ್ರಿ ಬಹಳ ಹೊತ್ತಿನವರೆಗೆ ಮಾತನಾಡಿದೆವು. ಉಳಿದವರೆಲ್ಲ ಮಲಗಿದ ಮೇಲೆ ನಮ್ಮಿಬ್ಬರ ಮಾತುಗಳು ಮೊದಲಾದವು. ಮಾತಿನಲ್ಲಿ ರಾತ್ರಿಯೇ ಸರಿದು ಹೋಯಿತು. ಕಲಬುರಗಿಯಲ್ಲಿ ಕಳೆದ ಕರಾಳ ದಿನಗಳ ವಿವರಗಳನ್ನು ಹೇಳಿದಂತೆಲ್ಲ ತನ್ನ ಮಂಗಲಸೂತ್ರವನ್ನು ಕಣ್ಣಿಗೊತ್ತಿಕೊಳ್ಳುತ್ತಿದ್ದಳು ಗಿರಿಜಾ–ನನ್ನ ಗಿರಿಜಾ!

ಆ ಮುಂಬೈ ರಾಜ್ಯದ ಅಸೆಂಬ್ಲಿ ಅಧಿವೇಶನ ಪುಣೆಯಲ್ಲಿ ನಡೆದಿದ್ದಿತು. ‘ಬನ್ನಿ, ಎಂ.ಪಿ. ಪಾಟೀಲರ ಭೇಟಿ ಮಾಡಿಸುವೆ’ ಎಂದು ಕರೆದರು ಬಾವಾಜಿ. ಸ್ವಲ್ಪ ಮಳೆ ಬೀಳುತ್ತಲಿದ್ದಿತು. ಒಂದು ಟಾಂಗಾ ಕರೆದರು. ಟಾಂಗಾದವ ಹತ್ತು ರೂಪಾಯಿ ಬೇಡಿದ. ಅವಾಕ್ಕಾದರು ಬಾವಾಜಿ. ನ್ಯಾಯವಾಗಿ ಒಂದು ರೂಪಾಯಿಗೆ ಬರಬೇಕಾದ ದೂರವದು. ಸ್ವಲ್ಪ ಹನಿ ಉದುರುತ್ತಿದೆಯೆಂದು ಹತ್ತು ರೂಪಾಯಿ ಕೇಳುತ್ತಿರುವನಲ್ಲ–ಎಂದು ಸ್ವಲ್ಪ ಕೋಪಗೊಂಡರು ಕೂಡ. ಅವರು ಅಲ್ಲಿಯ ಪಶು ವೈದ್ಯಶಾಲೆಯ ಮುಖ್ಯಸ್ಥರಾಗಿದ್ದರು. ‘ನಾನಾರು ಗೊತ್ತಿದೆಯೇನಯ್ಯಾ?’ ಎಂದು ಜೋರಾಗಿಯೇ ಕೇಳಿದರು. ‘ಗೊತ್ತಿದೆ ಸ್ವಾಮಿ, ನೀವು ನಮ್ಮ ಕುದುರೆ ಪಾಸು ಮಾಡುವವರು. ನಿಮಗೆ ಐದು ರೂಪಾಯಿ ದಂಡ ಹಾಕುವ ಅಧಿಕಾರವಿದೆ. ಐದು ರೂಪಾಯಿ ದಂಡ ಕೊಟ್ಟೆನೆಂದು ಭಾವಿಸುತ್ತೇನೆ; ಐದು ರೂಪಾಯಿ ಕೊಟ್ಟು ಟಾಂಗಾ ಹತ್ತಿರಿ!” ಆ ಭಾಗಕ್ಕೆ ಸ್ವಾತಂತ್ರ್ಯ ಸ್ವಲ್ಪ ಮೊದಲೇ ಬಂದಿದ್ದತಲ್ಲವೆ? ಅದರ ‘ಸತ್ಫಲ’ಗಳು ಒಂದೊಂದಾಗಿ ಆಗಲೇ ಬರಲಾರಂಭಿಸಿದ್ದುವೆಂಬುದಕ್ಕೆ ‘ಉಜ್ವಲ’ ಉದಾಹರಣೆಯಾಗಿದ್ದಿತು ಆ ಘಟನೆ. ಬಹಳ ಹಿಂದೆ ಅಲ್ಲ, ನಾನು ವಿದ್ಯಾರ್ಥಿಯಾಗಿದ್ದಾಗಲೇ ಸುಸಂಸ್ಕೃತ ಶ್ರೀಮಂತರೊಬ್ಬರು ಆಹಾರಧಾನ್ಯ ಸಾಗಾಣಿಕೆಯ ನಿಯಮವೊಂದನ್ನು ಅರಿಯದೆ ಮುರಿದ ತಪ್ಪಿಗಾಗಿ ಒಂದು ‘ಬಿಲ್ಲೆ’ ದಂಡಕ್ಕೆ ಒಳಗಾಗಿದ್ದರು. ಅವರು ಪರಮ ಪ್ರಾಮಾಣಿಕರೆಂಬುದನ್ನರಿತಿದ್ದ ಕಲೆಕ್ಟರರು ನಿಯಮ ಪೂರ್ತಿಗಾಗಿಯೆಂದು ಒಂದು ‘ಬಿಲ್ಲೆ’ ಮಾತ್ರ ದಂಡವನ್ನು ವಿಧಿಸಿದ್ದರು. ಆದರೂ ದಂಡ ತೆತ್ತವನೆಂಬ ಕಲಂಕದೊಡನೆ ಸಾಯಬೇಕಾಯಿತಲ್ಲ–ಎಂಬ ವ್ಯಥೆ ತಡೆಯದಾಗಲು ಅವರು ಹತ್ತು ಸಾವಿರ ರೂಪಾಯಿ ಯುದ್ಧ ನಿಧಿಗೆ ಕೊಟ್ಟು ಆ ಬಿಲ್ಲೆಯ ದಂಡವನ್ನು ವಜಾ ಮಾಡಿಸಿಕೊಂಡಿದ್ದರು. ಈಗ ಈ ಟಾಂಗಾವಾಲಾ ನಿರ್ಭಯವಾಗಿ ದಂಡ ಹಾಕಿರೆಂದು ಹೇಳುತ್ತಿದ್ದಾನೆ; ದಂಡ ಹೋಗಲಾಗಿ ಒಂದು ರೂಪಾಯಿಗೆ ಬದಲಾಗಿ ಐದು ರೂಪಾಯಿ ಬಾಡಿಗೆಯನ್ನು ನಿಸ್ಸಂಕೋಚವಾಗಿ ಕೇಳುತ್ತಲಿದ್ದಾನೆ. ಇದಾಗಲೇ ವ್ಯಾಪಾರಸ್ಥರು ಜಾಹೀರಾತಿಗಾಗಿ ಹಣ ತೆಗೆದಿಡುವಂತೆ ದಂಡಕ್ಕೆಂದು, ಲಂಚಕ್ಕೆಂದು ಹಣ ತೆಗೆದಿಡತೊಡಗಿದ್ದಾರೆ! ಇನ್ನೂ ಕಾಲ ಕಳೆಂದಂತೆಲ್ಲ ಎಂಥೆಂಥ ‘ಸತ್ಫಲ’ಗಳನ್ನು ನೀಡುವುದೋ ನಮ್ಮ ಸ್ವಾತಂತ್ರ್ಯ!

ನನ್ನ ತಲೆಯಲ್ಲಿ ಈ ಬಗೆಯ ಯೋಚನೆಗಳು ಉಯ್ಯಾಲೆಯಾಡುತ್ತಿದಂತೆಯೇ ಮಂತ್ರಿ ಮಲ್ಲನಗೌಡಾ ಪಾಟೀಲರ ಮನೆ ಬಂದಿತು. ಬಾವಾಜಿಯವರಿಗೂ ಅವರಿಗೂ ಬಹಳ ವರ್ಷಗಳ ಬಹಳ ಘನಿಷ್ಠ ಸ್ನೇಹವಿದ್ದಿತು. ಎದ್ದು ಬಂದು ಆತ್ಮೀಯತೆಯೊಡನೆ ಕರೆದೊಯ್ದು ಪಕ್ಕದಲ್ಲಿ ಕುಳ್ಳಿರಿಸಿಕೊಂಡರು. ನನ್ನನ್ನು ನೋಡಿ, ‘ಇವರಾರು?’ಎಂದು



ಕೇಳಿದರು. ‘ಇವರು ನಮ್ಮ ಅಳಿಯ; ಹೈದರಾಬಾದು ಸಂಸ್ಥಾನದಲ್ಲಿ ತಹಸೀಲ್ದಾರರಾಗಿದ್ದಾರೆ’ ಎಂದು ಪರಿಚಯಿಸಿದರು ಬಾವಾಜಿ. ಆಗ ಎಲ್ಲೆಲ್ಲಿಯೂ ಪೋಲೀಸ್ ಕಾರ್ಯಾಚರಣೆಯ ಸುದ್ದಿಯೇ ಸುದ್ದಿಯಾಗಿದ್ದುದರಿಂದ ಅವರು ‘ಈಗ ಹೇಗಿದೆ ರೀ, ನಮ್ಮ ಹೈದರಾಬಾದು?’ ಎಂದು ಕೇಳಿದರು. ‘ಎಲ್ಲ ಸರಿ ಹೋಗಿದೆ, ಸಾರ್’ ಎಂದೆ. ಅಲ್ಲಿಯೇ ಇದ್ದ ಮೇಜರ್ ಜನರಲ್ ಒಬ್ಬ ಕೊಬ್ಬಿನ ಮಾತನಾಡಿದ; “ಹೈದರಾಬಾದಿನ ಹಿಂದುಗಳು ಹೇಡಿಗಳು; ನಾವು–ಭಾರತದ ಸೈನಿಕರು ಒಳಹೊಕ್ಕು ಉಳಿಸಬೇಕಾಯಿತವರನ್ನು!”

ನನ್ನ ಸ್ವಾಭಿಮಾನ ಸಿಡಿದೆದ್ದಿತು. “ಸೇನಾನಿಗಳೇ, ಸ್ವಲ್ಪ ಸಾರಾಸಾರ ವಿಚಾರ ಮಾಡಿ ಮಾತನಾಡಿರಿ. ಹೈದರಾಬಾದಿನಲ್ಲಿ ನುಗ್ಗಿದಂತೆ ಕಾಶ್ಮೀರದಲ್ಲಿಯೂ ನುಗ್ಗಿದಿರಿ. ಆದರೆ ಕಾಶ್ಮೀರ ಸಮಸ್ಯೆಗೆ ಸೈನಿಕ ಪರಿಹಾರ ದೊರೆಯಿತೆ? ಸಮಸ್ಯೆ ನಮ್ಮ ಕೈಮೀರಿ ರಾಷ್ಟ್ರ ಸಂಘಕ್ಕೆ ಹೋಗಿ ಬಿಟ್ಟಿದೆ. ಅಲ್ಲಿ ಹಿಂದೂರಾಜನಿದ್ದೂ ಮುಸಲ್ಮಾನರಾದ ನೀವು–ಉತ್ತರ ಭಾರತದ ಹಿಂದುಗಳು–ಹೇಡಿಗಳು! ಕಾಶ್ಮೀರದಲ್ಲಿ ಹಿಂದುಗಳು ಬಹುಸಂಖ್ಯಾತರಾಗಿ ಉಳಿದಿದ್ದರೆ ಅದು ಸಮಗ್ರ ಭಾರತಕ್ಕೆ ಸಮಸ್ಯೆಯಾಗುತ್ತಿದ್ದಿತೆ? ಮತಾಂತರ ಹೊಂದಿ–ಮತಾಂತರ ನಿಮ್ಮ ಪಾಲಿಗೆ ನೀರು ಕುಡಿಯುವಷ್ಟು ಸುಲಭ!– ಅತ್ಯಂತ ಜಟಿಲ ಸಮಸ್ಯೆಯೊಂದು ಉದ್ಭವಿಸುವಂತೆ ಮಾಡಿದಿರಿ! ಅದೇ ನಾವು–ಹೈದರಾಬಾದು ಸಂಸ್ಥಾನದ ಹಿಂದುಗಳು–ದೊರೆ ಮತಾಂಧನಾದ ಮುಸ್ಲಿಮನಾಗಿದ್ದೂ ಇಸ್ಲಾಂ ಮತ ಪ್ರಸಾರಕ್ಕೆ ಎಲ್ಲ ವಿಧದ ಪ್ರೋತ್ಸಾಹ ತನ್ನ ಸರಕಾರದ ಪರವಾಗಿ ಕೊಡುತ್ತಿದ್ದೂ ನೂರಾರು ವರ್ಷಗಳವರೆಗೆ ಆ ದಬ್ಬಾಳಿಕೆಗೆ ಮಣಿಯದೆ, ಆ ಪ್ರಲೋಭನೆಗಳಿಗೆ ಒಳಗಾಗದೆ ಹಿಂದುಗಳಾಗಿಯೇ ಉಳಿದಿದ್ದೇವೆ; ನಮ್ಮ ಎದೆಗಾರಿಕೆಯನ್ನು ಮೆರೆದಿದ್ದೇವೆ. ನಾವು ಆ ಸಂಸ್ಥಾನದಲ್ಲಿ ಬಹುಸಂಖ್ಯಾತರಾಗಿಯೇ ಉಳಿದೆವೆಂದೇ ಒಳಗೆ ಕಾಲಿಡಲು ನಿಮಗೆ ಆಸ್ಪದ ಸಿಕ್ಕಿತು. ನಾವೂ ನಿಮ್ಮಂತೆ ಮುಸಲ್ಮಾನರಾಗಿದ್ದರೆ ಹೈದರಾಬಾದು ಸಂಸ್ಥಾನವು ದಕ್ಷಿಣದ ಪಾಕಿಸ್ತಾನವಾಗಿ ಹೋಗುತ್ತಿತ್ತು! ನೀವೆಲ್ಲಿ ಒಳಗೆ ಬರುತ್ತಿದ್ದಿರಿ?”

ಸುಸ್ತಾಗಿ ಬಿಟ್ಟ ಆ ಸೇನಾನಿ. ಪಾಟೇಲರೂ ಬಾವಾಜಿಯವರೂ ನನ್ನ ದಿಟ್ಟತನ್ನವನು ಮೆಚ್ಚಿ ತಟ್ಟಿದರು ಬೆನ್ನ. ಅದೇ ಸಮಯಕ್ಕೆ ಮಂತ್ರಿಗಳ ಅಳಿಯ ಶ್ರೀ ಐ.ಎಮ್. ಮಗ್ದುಮ್ ತಮ್ಮ ಧರ್ಮಪತ್ನಿಯೊಡನೆ ಬಂದರು. ಮುಂಬೈ ವಿಶ್ವವಿದ್ಯಾಲಯಕ್ಕೇ ಪ್ರಥಮರಾಗಿ ಅವರು ಬಿ.ಇ. ಪರೀಕ್ಷೆ ಪಾಸಾಗಿದ್ದರಾಗಿ ಆಗಿನ ನಿಯಮದಂತೆ ಒಮ್ಮೆಗೆ ಆಸಿಸ್ಟೆಂಟ್ ಇಂಜಿನಿಯರಾಗಿ ನೇಮಕಗೊಂಡಿದ್ದರು. ಆಗ ಮೊದಲ ಸಲ ಅವರನ್ನು ನೋಡಿದ ನಾನು ಮುಂದೆ ಏಕೀಕೃತ ಕರ್ನಾಟಕದಲ್ಲಿ

ಅವರೂ ನಾನೂ ಒಂದೇ ರಾಜ್ಯದ ಸೇವೆಗೈಯುವೆನೆಂದು ಕನಸಿನಲ್ಲಿಯೂ ಕಲ್ಪಿಸಿರಲಿಲ್ಲ. ಇಬ್ಬರೂ ಒಂದೇ ರಾಜ್ಯಕ್ಕೆ ಬಂದ ಮೇಲೆ ನಾನು ಶಿಕ್ಷಣ ಇಲಾಖೆಯ ಉಪಕಾರ್ಯದರ್ಶಿಯಾಗಿ, ಅವರು ತಾಂತ್ರಿಕ ಇಲಾಖೆಯ ನಿರ್ದೇಶಕರಾಗಿ ಸಮೀಪದ ಸ್ನೇಹಿತರಾದೆವು. ಪುಣೆಯಲ್ಲಿ ಒಂದೆರಡು ದಿನ ಕಳೆದು ಗಿರಿಜಾ, ವಿಜಯಾ, ಶಿವಗೀತಾ, ಪ್ರಸನ್ನಕುಮಾರ [ಮಗನ ಮೊಗವನ್ನು ನೋಡುತ್ತಲೆ ಗಂಡು ಮಗ ಬೇಕೆಂದಿದ್ದ ನಮಗೆ ಶರಣಬಸವ ಪ್ರಸನ್ನನಾದ–ಎಂದು ಉದ್ಗರಿಸಿದ್ದೆ ನಾನು. 'ಪ್ರಸನ್ನ' ಎಂದೇ ಇವನ ಹೆಸರು, ಎಂದು ತೀರ್ಮಾನಿಸಿದರು ಅಕ್ಕಯ್ಯ]–ರೊಡನೆ ಕಲಬುರಗಿಗೆ ಹೊರಟೆ. ಅದೊಂದು ಅವಿಸ್ಮರಣೀಯ ಪಯಣ. ನೂರು ದುಃಖಗಳನ್ನು ನುಂಗಿದ ಮೇಲೆ ಸುಖದ ಸುಗ್ಗಿಯಲ್ಲಿದ್ದೆವು ಆಗ ನಾವು. ಜೊತೆಯ ಪ್ರಯಾಣಿಕರ ಮುಖದ ಮೇಲೂ ಬಿಡುಗಡೆಯ ಹೊಗರು; ನಿಲ್ದಾಣಗಳ ಜನಸಂದಣಿಯಲ್ಲಿಯೂ ಸ್ವಾತಂತ್ರ್ಯದ ಸಂತಸ: ರೇಲ್ವೆ ಚಾಕರರಲ್ಲಿಯೂ ಸ್ವದೇಶಾಭಿಮಾನ ಪ್ರೇರಿತ–ಸ್ವಜನ ಪ್ರೇಮಪೂರಿತ ಸೇವಾರತಿ–ಎಲ್ಲ ಬೆಲ್ಲದಚ್ಚು! ಹೀಗೆಯೇ ಈ ದೇಶ ಬೆಳೆದರೆ ಬಹುಬೇಗ ಸಿರಿ, ಸಂಸ್ಕೃತಿ, ಸಮೃದ್ಧಿ, ಸಂತಸಗಳ ತವರಾಗುವುದೆಂಬ ಆಸೆ ಸುಳಿದು ಹೋಯಿತು ಒಳಗೆ.

## ಕನ್ನಡ ಸಾಹಿತ್ಯ ಸಮ್ಮೇಳನ

ಆದರೆ ಬಯಸಿ ಪಡೆದುದೊಂದು, ಹೊರಗೆ ಹಡೆದುದು ಇನ್ನೊಂದು– ಎನ್ನುವಂತಾಯಿತು ಮುಂದಿನ ಬೆಳವಣಿಗೆ. ನಾನೂ ಜೊತೆಗೆ ಬರುವೆನೆಂದರು ಬೇಡವೆಂದೆ ತಡೆದು, ಸದ್ದಿಲ್ಲದೆ ಹೈದರಾಬಾದಿಗೆ ಹೋಗಿ, ತನ್ನೊಬ್ಬನ ಪದೋನ್ನತಿ ಪಡೆದುಕೊಂಡು ಹಿಂದುರುಗಿದ ಮಿತ್ರ ಮದನಸಿಂಗ್. ಯಾರಿಗಾಗಿ ನಾನು ನನ್ನ ಜೀವನವನ್ನೇ ಗಂಡಾಂತರಕ್ಕೆ ಒಡ್ಡಿದ್ದೆನೋ, ಯಾರನ್ನು ನಾನು ನನ್ನ ಪರಮಮಿತ್ರನೆಂದು ಭಾವಿಸಿದ್ದೇನೋ ಆ ಮಿತ್ರನಿಂದ ಇಂಥ ಪ್ರತಿಫಲ ದೊರೆಯಿತು! ನಾನು ಹೈದರಾಬಾದಿಗೆ ಹೋಗಬೇಕೆಂದರೆ ಒಂದು ಅನಿರೀಕ್ಷಿತ ಘಟನೆ ಅಡ್ಡ ಬಂದಿತು. ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿದ್ದ ಪ್ರೊ. ಎಲ್.ಎಸ್. ಶೇಷಗಿರಿ ರಾಯರು ನನಗೊಂದು ಕಾಗದ ಬರೆದು ಆ ಸಲದ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಕಲಬುರಗಿಯಲ್ಲಿ ಜರುಗಿಸಬೇಕೆಂದೂ, ಇದಕ್ಕೆ ಬೇಕಾಗುವ ಸ್ವಾಗತ ಸಮಿತಿಯನ್ನು ರಚಿಸುವಲ್ಲಿ ನಾನು ಪ್ರಮುಖ ಪಾತ್ರ ವಹಿಸಬೇಕೆಂದೂ ಅದರಲ್ಲಿ ಕೇಳಿಕೊಂಡಿದ್ದರೂ. ಕಲಬುರಗಿಯ ಕನ್ನಡ ಭಕ್ತರನ್ನು ಕೂಡಿಸಿ ಅವರಿಗೆ ಆ ಕಾಗದ ತೋರಿಸಿದೆ. ಎಲ್ಲರೂ ಹೊಸ ಹುಟ್ಟು ಪಡೆದ ಹುಮ್ಮಸ್ಸು ಹುರುಪುಗಳಲ್ಲಿ ಇದ್ದುದರಿಂದ ಎಲ್ಲರೂ ಒಮ್ಮತದಿಂದ ಆ ಆಹ್ವಾನವನ್ನು ಸ್ವೀಕರಿಸಿದರು. ಶಿಬಿರದ ಸಾಹಸಿಯೆನಿಸಿ



ಹಿಂದಿರುಗಿದ್ದ ಶ್ರೀ ಶರಣಗೌಡರೂ, ಶ್ರೀ ಮಹಾದೇವಪ್ಪ ರಾಮಪುರೆ ಅವರೂ, ಶ್ರೀ ಅವರಾದಿ ದತ್ತಾತ್ರೇಯರಾಯರೂ, ಅವರ ಸಂಗಡಿಗರೂ ಕನ್ನಡ ಸಾಹಿತ್ಯ ಸಮ್ಮೇಳನದೊಡನೆ ಕರ್ನಾಟಕ ಏಕೀಕರಣ ಸಮ್ಮೇಳನವನ್ನೂ ಕರೆಯಬೇಕೆಂದು ಸೂಚಿಸಿದರು. ಆ ಸೂಚನೆಯೂ ಸ್ವೀಕೃತವಾಯಿತು.

ಎಲ್ಲರೂ ಒತ್ತಾಯ ಪಡಿಸಿ ನನ್ನನ್ನೇ ಸಾಹಿತ್ಯ ಸಮ್ಮೇಳನದ ಸ್ವಾಗತಾಧ್ಯಕ್ಷನನ್ನಾಗಿ ಮಾಡಿದರು. ಶ್ರೀ ಕಪಟರಾಳ ಕೃಷ್ಣರಾಯರೂ, ಪ್ರೊ॥ ತವಗ ಭೀಮಸೇನರಾಯರೂ, ನ್ಯಾಯವಾದಿ ಶ್ರೀ ಅಶ್ವತ್ಥರಾಯರೂ ಶ್ರೀ ಘಾಟಗೆಯವರ ಭೇಟಿ ಮಾಡಿ ಇದಕ್ಕೆ ಅವರ ಅನುಮತಿಯನ್ನೂ ದೊರೆಕಿಸಿಕೊಂಡು ಬಂದರು. ಕುಕ್ಕನೂರಿನ ಗುರುಕುಲದಲ್ಲಿ ನನ್ನ ಸಹಪಾಠಿಗಳಾಗಿದ್ದ ಶ್ರೀ ಸುಬ್ಬಾಚಾರ್ಯ ಕಟ್ಟೆ ಅವರನ್ನು ನಾನು ಕಾರ್ಯದರ್ಶಿಯನ್ನಾಗಿ ಆರಿಸಿಕೊಂಡೆ; ಸಾಹಿತ್ಯಗೋಷ್ಠಿಗೆ ಪ್ರೊ॥ ತವಗ ಭೀಮಸೇನ ರಾಯರು ಸ್ವಾಗತಾಧ್ಯಕ್ಷರಾದರು; ಏಕೀಕರಣ ಸಮ್ಮೇಳನದ ಸ್ವಾಗತಾಧ್ಯಕ್ಷರಾಗಿ ಶ್ರೀ ಶರಣಗೌಡರೂ, ಕಾರ್ಯದರ್ಶಿಗಳಾಗಿ ಶ್ರೀ ಮಹಾದೇವಪ್ಪ ರಾಮಪುರೆ ಅವರೂ ಆಯ್ಕೆಗೊಂಡರು. ಶ್ರೀ ಶರಣ ಬಸವೇಶ್ವರ ದೇವಸ್ಥಾನದ ವಿಶಾಲವಾದ ಬಯಲಿನಲ್ಲಿ ಭವ್ಯವಾದ ಸಭಾಮಂಟಪದ ನಿರ್ಮಾಣ ಕಾರ್ಯ ಪ್ರಾರಂಭವಾಯಿತು. ನಾನು ಹಣ ಕೂಡಿಸಲು ರಾಯ್ಚೂರಿಗೆ ಹೋಗಿ ಬಂದೆ. ಉತ್ಸಾಹಪೂರ್ಣ ಸಹಕಾರ ದೊರೆಯಿತು. ಮಹಮ್ಮದೀಯ ಬಂಧುಗಳೂ ದೇಣಿಗೆಗಳನ್ನಿತ್ತು ಕನ್ನಡಕ್ಕೆ ತಮ್ಮ ಗೌರವ ಸಲ್ಲಿಸಿದರು. ನನ್ನನ್ನು ಬಹಳ ಪ್ರೀತಿಸುತ್ತಿದ್ದ ಶ್ರೀ ಎಲ್.ಎನ್. ಗುಪ್ತಾ ಅವರು ಆಗ ಹಣಕಾಸಿನ ಇಲಾಖೆಯ ಕಾರ್ಯದರ್ಶಿಗಳಾಗಿದ್ದರು. ಅವರಿಗೆ ಅಂಚೆ ಮೂಲಕ ಅರ್ಜಿ ಕಳಿಸುತ್ತಲೇ ಅಧಿಲಾಭ ಕರನಿಧಿಯಿಂದ ಮೂರು ಸಾವಿರ ರೂಪಾಯಿಗಳನ್ನು ಕಳಿಸಿಕೊಟ್ಟರು, ಕಲಬುರಗಿಯ ನಾಗರಿಕರೂ ಮುಕ್ತಹಸ್ತದಿಂದ ನೆರವು ನೀಡಿದರು. ಸರ್ವ ಶ್ರೀ ಅಣ್ಣಪ್ಪ ನಮೋಶಿ, ಶರಣಕವಿಗಳು, ಮಹಾಗಾಂವ್, ಷಡಕ್ಷರಯ್ಯನವರು ಪಲ್ಲಾಪುರ ಮಠ, ವೀರಭದ್ರಪ್ಪ ಭಾವಿಕಟ್ಟಿ, ಗುರಪ್ಪ ನಂದ್ಯಾಳ ಇನ್ನೂ ವಿದ್ಯಾರ್ಥಿಗಳಾಗಿದ್ದ ದೇವೇಂದ್ರ ಕುಮಾರ ಹಕಾರಿ, ವಾಮದೇವ ದೀಕ್ಷಿತ, ಸತ್ಯನಾರಾಯಣ, ಇತ್ಯಾದಿ ಮಿತ್ರರು ಹಗಲಿರುಳು ಹೆಣಗಿ ಈ ಹಿರಿಯ ಹೊರೆಯನ್ನು ಹೊರುವಲ್ಲಿ ನನಗೆ ಬಹಳ ಸಹಾಯ ಮಾಡಿದರು. ಏಕೀಕರಣ ಸಮ್ಮೇಳನಕ್ಕೆ ಪ್ರತ್ಯೇಕ ವ್ಯವಸ್ಥೆಗಳು ಬೇಕಿರಲಿಲ್ಲ; ಸಾಹಿತ್ಯ ಸಮ್ಮೇಳನದ ಸರ್ವವ್ಯವಸ್ಥೆಗಳೂ ಅವರಿಗೆ ಸಿದ್ಧರೂಪದಲ್ಲಿಯೇ ಸಿಕ್ಕು ಬಿಡಲಿದ್ದುವು. ಆದುದರಿಂದ ಅವರ ಹೊರೆ ಹಗುರವಾಗಿದ್ದಿತು. ಎಲ್ಲ ಭಾರ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಮೇಲೆಯೇ ಬಿದ್ದಿದ್ದಿತು. ಅದಕ್ಕೆ ತಕ್ಕಂತೆ ದುಡಿದರು ಕೂಡ ಗೆಳೆಯರು.

ಏಕೀಕರಣ ಸಮ್ಮೇಳನಕ್ಕೆ ನಿಜಲಿಂಗಪ್ಪನವರು, ಟಿ. ಸುಬ್ರಹ್ಮಣ್ಯಂ ಅವರು, ಜಿನರಾಜ ಹೆಗ್ಗಡೆ ಅವರು ಆಮಂತ್ರಿತರಾದರು. ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ದಿ. ಚೆನ್ನಪ್ಪ ಉತ್ತಂಗಿಯವರ ಹೆಸರು ಸೂಚಿತವಾಯಿತು. ಅನುಭವ ಮಂಟಪದ ಐತಿಹಾಸಿಕತೆಯ ವಿಷಯದಲ್ಲಿ ಕಪಟರಾಳ ಕೃಷ್ಣರಾಯರಿಗೂ ಉತ್ತಂಗಿಯವರಿಗೂ ಹಣಾಹಣಿಯಾಗಿದ್ದಿತಾಗಿ ಕಪಟರಾಳರು ಅಧ್ಯಕ್ಷ ಸ್ಥಾನಕ್ಕೆ ಡಾ॥ ಎಸ್.ಸಿ. ನಂದೀಮಠರ ಹೆಸರನ್ನು ಸೂಚಿಸಿದರು. ಅಧ್ಯಕ್ಷರಾರೆಂಬುದರ ನಿರ್ಣಯಕ್ಕಾಗಿ ಕಲಬುರಗಿಗೆ ಆಗಮಿಸಿದ್ದ ಅಂದಿನ ಪರಿಷದಧ್ಯಕ್ಷ ಶ್ರೀ ತಿ.ತಾ. ಶರ್ಮಾರೂ ನಾನೂ ಬಾಗಲಕೋಟೆಗೆ ಹೋಗಿ ಅಧ್ಯಕ್ಷ ಪದಕ್ಕೆ ಡಾ॥ ಎಸ್.ಸಿ. ನಂದೀ ಮಠರನ್ನು ಒಪ್ಪಿಸಬೇಕೆಂದು ತೀರ್ಮಾನವಾಯಿತು. ಬಾಗಲಕೋಟೆಗೆ ಹೋಗಿ ಬಂದಾಯಿತು. ಡಾ॥ ನಂದೀ ಮಠರು ಒಪ್ಪಲಿಲ್ಲ. ಹಿಂದೆ ಪ್ರೊ. ಬಸವನಾಳರ ಪರವಾಗಿ ತಮ್ಮ ಹೆಸರು ಹಿಂದಕ್ಕೆ ತೆಗೆದುಕೊಂಡಂತೆ ಅಂದು ಉತ್ತಂಗಿಯವರ ಪರವಾಗಿ ತಮ್ಮ ಹೆಸರನ್ನು ಹಿಂದೆಗೆದುಕೊಂಡುಬಿಟ್ಟರು. ಅವರ ನಿಸ್ಪೃಹತೆ ನಮ್ಮಿಬ್ಬರನ್ನೂ ಚಕಿತರನ್ನಾಗಿ ಮಾಡಿತು. ಬಾಗಲಕೋಟೆಗೆ ಹೋದ ಉದ್ದೇಶ ಈಡೇರಲಿಲ್ಲವಾದರೂ ಶ್ರೀ ಶರ್ಮರೊಡನೆ ಕಳೆದ ಕಾಲ ಶಾಸನ ಸಾಹಿತ್ಯದೊಡನೆ ಕಳೆದ ಕಾಲವಾಗಿದ್ದಿತು ನನಗೆ. ಅನೇಕ ಉತ್ಕೃಷ್ಟ ಶಾಸನಗಳು ಮುಖೋದ್ಗತವಾಗಿದ್ದುವು ಅವರಿಗೆ! ನಗೆಗಾರರು ಕೂಡ ಆಗಿದ್ದ ಅವರೊಡನಿದ್ದಾಗ ಹೊತ್ತು ಹೋದುದೇ ತಿಳಿಯಲಿಲ್ಲ ನನಗೆ.

ಕೊನೆಗೂ ಅನುಭಾವಿಗಳಾದ ಉತ್ತಂಗಿಯವರು ಸಮ್ಮೇನಾಧ್ಯಕ್ಷರಾಗಿ ಆಯ್ಕೆಗೊಂಡುದು ಎಲ್ಲರಿಗೂ ಆನಂದವನ್ನುಂಟು ಮಾಡಿತು. ಉದ್ಘಾಟನೆಗೆ ಆಗ ಅಲ್ಲಿಯ ಕಂದಾಯ ಮಂತ್ರಿಗಳಾಗಿದ್ದ ಎಂ. ಶೇಷಾದ್ರಿಯವರನ್ನು ಆಹ್ವಾನಿಸಿದೆವು. ಸಾಹಿತ್ಯ ಗೋಷ್ಠಿಯ ಅಧ್ಯಕ್ಷರನ್ನಾಗಿ ಶ್ರದ್ಧೇಯ ಮಾಸ್ತಿ ನರಸಿಂಗರಾಯರನ್ನೂ, ಮಹಿಳಾ ಗೋಷ್ಠಿಯ ಅಧ್ಯಕ್ಷಿಣಿಯರನ್ನಾಗಿ ಶ್ರೀಮತಿ ಗೌರಾದೇವಿ ಇಂಚಲ ಮಠರನ್ನೂ ಆಮಂತ್ರಿಸಿದೆವು. ಸಮ್ಮೇಳನದ ದಿನಾಂಕಗಳು ಸಮೀಪಿಸುತ್ತಿದ್ದಂತೆ ನನಗೆ ನಿದ್ರೆಗಾಗಿ ನಾಲ್ಕು ಘಂಟೆಗಳ ಸಮಯವೂ ಸಿಕ್ಕದಂಥ ಇಕ್ಕಟ್ಟಿಗೆ ಸಿಲುಕಿಕೊಂಡೆ. ಬೆಳಗಿನ ಹತ್ತು ಘಂಟೆಯವರೆಗೆ ಹಳ್ಳಿಗಳಿಂದ ಬರುತ್ತಿದ್ದ ರೈತರ ಸೇವೆ, ಆಮೇಲೆ ಆಫೀಸಿನ ಬಿಡುವಿಲ್ಲದ ಕೆಲಸ, ತರುವಾಯ ಸಮ್ಮೇಳನಗಳ ಸಿದ್ಧತೆಗಳ ಕೆಲಸ. ಎಲ್ಲ ಸಿದ್ಧತೆಗಳು ಮುಗಿದರೂ ಭವ್ಯ ಮಂಟಪದ ನಿರ್ಮಾಣ ಕಾರ್ಯ ಮುಗಿದಿರಲಿಲ್ಲ. ನಾನು ರಜೆ ಪಡೆದುಕೊಂಡು ಅಲ್ಲಿ ನಿಂತೇಬಿಟ್ಟೆ. ಮೂರು ಹಗಲು, ಮೂರು ರಾತ್ರಿ ಅಲ್ಲಿಯೇ ನಿಂತಿದ್ದೆ. ಅಲ್ಲಿಯೇ ಊಟ–ಅಡ್ಡಾಡುತ್ತಲೇ, ರಾತ್ರಿಯೆಲ್ಲ ಕೆಲಸವೆಂದ



ಮೇಲೆ ನಿದ್ದೆಯ ಸುದ್ದಿಯೇ ಇಲ್ಲ! ಒಂದು ದಿನ ಮೊದಲು ಬಂದ ಬೇಂದ್ರೆಯವರು ಸಮ್ಮೇಳನದ ಮುನ್ನಾ ರಾತ್ರಿ ರಟ್ಟೆ ಹಿಡಿದೆಳೆದೊಯ್ದು ಮಲಗಿಸಿದರು. ಅಷ್ಟರಲ್ಲಿ ಮಂಟಪ ನಿರ್ಮಾಣ ಕಾರ್ಯ ಮುಗಿದಿದ್ದುದರಿಂದ ನಿದ್ದೆ ಮಾಡಿ ಎದ್ದು ಸಮ್ಮೇಳನದ ಅಧ್ಯಕ್ಷ–ಉದ್ಘಾಟಕರನ್ನು ಸ್ವಾಗತಿಸಲು ನಿಲ್ದಾಣಕ್ಕೆ ಹೋದೆ. ಅಲ್ಲಿಯವರೆಗೆ ನಿಜಾಮರು ಮಾತ್ರ ತಂಗುತ್ತಿದ್ದ ಐವಾನ್–ಎ–ಷಾಹಿಯಲ್ಲಿಯೇ ಎಲ್ಲರನ್ನೂ–ನಿಜಲಿಂಗಪ್ಪನವರು, ಟಿ. ಸುಬ್ರಹ್ಮಣ್ಯನವರು, ಜಿನರಾಜ ಹೆಗ್ಗಡೆಯವರು, ಹಳ್ಳಿಕೇರಿ ಗುದ್ಲೆಪ್ಪನವರು ಇತ್ಯಾದಿ–ಇಳಿಸಿದೆ. ಉತ್ತಂಗಿಯವರೂ, ಗೌರಕ್ಕನವರೂ, ಇನ್ನೂ ಅನೇಕರೂ ನನ್ನ ಮನೆಯಲ್ಲಿ ತಂಗಿದ್ದರು. ಅವರೆಲ್ಲರನ್ನು ಉಪಚರಿಸುವಲ್ಲಿ ನನ್ನ ಹೆಂಡತಿ ವಹಿಸಿದ ಶ್ರಮ, ಶ್ರದ್ಧೆಗಳು ಅಸಾಧಾರಣ.

**ಜಾತಿಭೂತ :**

ಇಷ್ಟರಲ್ಲಿ ಒಂದೇ ಭೂತ ಎದ್ದು ಕುಳಿತಿದ್ದಿತು. ಊಟಕ್ಕೆ ಶ್ರೀ ಶರಣ ಬಸವೇಶ್ವರ ದಾಸೋಹ ಮಂಟಪದಲ್ಲಿ ವ್ಯವಸ್ಥೆ ಮಾಡಿದ್ದೆವು. ಬ್ರಾಹ್ಮಣರಿಗೆ ಮಾತ್ರ ನೂತನ ವಿದ್ಯಾಲಯದಲ್ಲಿ ಪ್ರತ್ಯೇಕ ವ್ಯವಸ್ಥೆ ಮಾಡಿದ್ದೆವು. ಇದನ್ನು ಕೆಲವರು ಪ್ರತಿಭಟಿಸಿ ಎಲ್ಲರೂ ಒಂದೇ ಕಡೆಗೆ ಊಟ ಮಾಡುವಂತಾಗಬೇಕೆಂದು ಹಟ ಹಿಡಿದರು. 'ಇದಾಗಲೇ ಎಲ್ಲ ಏರ್ಪಾಟುಗಳು ಮುಗಿದು ಹೋಗಿವೆ; ಇನ್ನು ಮುಂದೆ ಈ ರೀತಿ ಮಾಡೋಣ. ಈ ಸಲ ಈ ವ್ಯವಸ್ಥೆ ಉಳಿಯಲಿ' ಎಂದು ಬಿನ್ನವಿಸಿಕೊಂಡೆ. ಕೆಲವರು ನನಗೆ 'ಬ್ರಾಹ್ಮಣರ ಬಗಲ್ ಬಚ್ಚಾ' ಎಂದು ಕರೆದರಂತೆ. ಉದಾರಮತ ವಾದಿಯಾಗಲು ಹೋಗಿ ವೀರಶೈವರಿಂದ 'ಬ್ರಾಹ್ಮಣಪರ' ಎಂದೂ, ಬ್ರಾಹ್ಮಣರಿಂದ 'ವೀರಶೈವರ ಪರ' ಎಂದೂ ಅನೇಕ ಸಲ ಕರೆಸಿಕೊಂಡಿದ್ದೇನೆ. ಜಾತೀಯತೆ ಓತಪ್ರೋತವಾಗಿ ಎಲ್ಲ ರಂಗಗಳಲ್ಲಿಯೂ ತುಂಬಿ ತುಳುಕುತ್ತಿರುವ ಈ ದೇಶದಲ್ಲಿ ಜಾತೀಯತೆಯನ್ನು ಬಿತ್ತಿ ಬೆಳೆಸಿದವರೇ ತಮ್ಮನ್ನುಳಿದು ಅನ್ಯರೆಲ್ಲ ಜಾತ್ಯಂಧರೆಂದು ವಾದಿಸುತ್ತ ಹೊರಟಿರುವುದು ವಿಷಾದಕರ. ಜಾತಿ ವ್ಯವಸ್ಥೆ ಚಿತೆಗೇರದೆ ನಿಜವಾದ ರಾಷ್ಟ್ರೀಯತೆ 'ಗಗನ ಕುಸುಮ ಪರಿಮಳದಿಂದಿತ್ತತ್ತ ಗುಹೇಶ್ವರ!'

ಇನ್ನೊಂದು ಅವಿವೇಕ ನಡೆದು ಹೋಗಿದ್ದಿತು. ಏನೇನೋ ಯತ್ನ ಮಾಡಿ 'ಐವಾನ್–ಎ–ಷಾಹಿ'ಯನ್ನು ಶಿಖರನಾಯಕರಿಗಾಗಿ ಮಾತ್ರ ಲಭ್ಯವಾಗುವಂತೆ ಮಾಡಿದ್ದೆ. ನಾನಿತ್ತ ಬರುತ್ತಲೇ ಗಾಂಧೀ ಟೊಪ್ಪಿಗೆಗಳ ಗುಂಪಿಗೆ ಗುಂಪೇ ಒಳನುಗ್ಗಿ ಬಿಟ್ಟಿದ್ದಿತು. ಎಲ್ಲ ಕೋಣೆಗಳನ್ನೂ ಆಕ್ರಮಿಸಿಕೊಂಡುದಲ್ಲದೆ ದಾರಿಗಳಲ್ಲಿಯೂ ಹಾಸಿಗೆ ಹಾಸಿ ಬಿಟ್ಟಿದ್ದರು ಆ ಭೂಪರು. ಇಷ್ಟೇ ಅಲ್ಲ, ಬೀಡಿ ಸಿಗರೇಟು ಸೇದಿ ಅವುಗಳನ್ನು ಆರಿಸುವಷ್ಟು ಎಚ್ಚರಿಕೆಯನ್ನು ಸಹ ವಹಿಸದೆ ಎಲ್ಲಿ ಬೇಕೆಂದರಲ್ಲಿ

ಎಸೆದು ಬಿಟ್ಟಿದ್ದರು. ಅವುಗಳಲ್ಲಿ ಒಂದು ಭಾರಿ ಬೆಲೆಯ ಕಾರ್ಪೆಟ್ಟನ್ನು ಸುಡಲು ದಾರೋಗಾ ನನ್ನನ್ನು ಹುಡುಕಿಕೊಂಡು ಓಡಿಬಂದ. ಅವನ ಮುಖದ ಮೇಲೆ ಹುಡಿ ಹಾರುತ್ತಲಿದ್ದಿತು. ಅವನೊಡನೆ ಹೋಗಿ ಆ ಮಹಾಶಯರೆನ್ನೆಲ್ಲ ಬೇರೆಡೆಗೆ ಸಾಗಿಸಿ, ಅಲ್ಲಿರಬೇಕಾದವರ ಯಾದಿಕೊಟ್ಟು, ಉಳಿದ ಯಾರನ್ನೂ ಒಳಗೆ ಬಿಡದಂತೆ ಕಾವಲುಗಾರರನ್ನು ನಿಯಮಿಸಿ ಬಂದೆ.

ಸಮ್ಮೇಳನಗಳೆರಡೂ ಯಶಸ್ವಿಯಾಗಿ ಕೊನೆಗೊಂಡುವು. ನಾನು ಕನ್ನಡ ಸಾಹಿತ್ಯ ಸಮ್ಮೇಳನಕ್ಕಾಗಿ ರಚಿಸಿದ್ದ ಸ್ವಾಗತ ಗೀತೆಯನ್ನು ಕಲ್ಲೋಳಿಮಠ ರಾಜಮ್ಮನವರೂ, ಏಕೀಕರಣ ಸಮ್ಮೇಳನಕ್ಕಾಗಿ ರಚಿಸಿದ್ದ ಸ್ವಾಗತ ಗೀತೆಯನ್ನು ದೇವೇಂದ್ರ ಕುಮಾರ ಹಕಾರಿಯವರೂ ಹೃದಯಸ್ಪರ್ಶಿಯಾಗಿ ಹಾಡಿ ಸೈ ಎನಿಸಿಕೊಂಡರು. ಉತ್ತಂಗಿಯವರ, ಮಾಸ್ತಿಯವರ, ಗೌರಾದೇವಿ ಇಂಚಲಮಠರ ಅಧ್ಯಕ್ಷ ಭಾಷಣಗಳೂ, ಅನೇಕ ಹಿರಿಯ ಸಾಹಿತಿಗಳ ಉಪನ್ಯಾಸಗಳೂ ಮನನೀಯವಾಗಿದ್ದುವು. ಸಮ್ಮೇಳನವನ್ನು ನೋಡಿದವರು 'ಇದು ಸಾಹಿತ್ಯ ಸಮ್ಮೇಳನವೋ ರಾಷ್ಟ್ರಸಭೆಯ ಅಧಿವೇಶನವೋ' ಎಂದು ಬೆರಗಾದರಂತೆ. ಏಕೀಕರಣ ಸಮ್ಮೇಳನವಂತೂ ಇತಿಹಾಸನ್ನೇ ನಿರ್ಮಿಸಿ ಬಿಟ್ಟಿತು. ಶರಣಗೌಡರ ಸ್ವಾಗತಭಾಷಣ ಸ್ಫೂರ್ತಿದಾಯಕವಾದುದಾಗಿದ್ದಿತು. ಕೋ. ಚೆನ್ನಬಸಪ್ಪ, ಪಾಟೀಲ ಪುಟ್ಟಪ್ಪ ಇವರು ಮೈಸೂರು ಸಂಸ್ಥಾನದ ವಿಲಯನದ ಗೊತ್ತುವಳಿ ತರ ಬಯಸಲು ಟಿ. ಸುಬ್ರಹ್ಮಣ್ಯಂ ಬಲವಾಗಿ ಪ್ರತಿಭಟಿಸಿದರು. ನಿಜಲಿಂಗಪ್ಪನವರು, ಜಿನರಾಜ ಹೆಗ್ಗಡೆ ಅವರು, ಹಳ್ಳಿಕೇರಿ ಗುದ್ಲೆಪ್ಪನವರು ಶಮನಗೊಳಿಸಿದರು ಅವರ ಕೋಪವನ್ನು. ಇದೊಂದು ಅಪ್ರಿಯ ಪ್ರಸಂಗವನ್ನು ಬಿಟ್ಟರೆ ಉಳಿದುದೆಲ್ಲ ಉತ್ಸಾಹಪೂರ್ಣ, ಸಫಲ. ಮುಂದೆ ಮೈಸೂರು ಸಂಸ್ಥಾನದ ವಿಲಯನವಾಗಿಯೇ ಏಕೀಕೃತ ಕರ್ನಾಟಕವಾಯಿತಷ್ಟೇ ಅಲ್ಲ, ಹೈದರಾಬಾದು ಸಂಸ್ಥಾನದ ವಿಭಜನೆಯೂ ಆಗಿ ಸಮಗ್ರ ಕರ್ನಾಟಕ ಮೈದೋರಿತೆಂಬುದನ್ನು ನೆನೆದಾಗ ಕಲಬುರಗಿಯಲ್ಲಿ ಜರುಗಿದ ಈ ಎರಡು ಸಮ್ಮೇಳನಗಳು ಅದೆಷ್ಟು ಸಕಾಲಿಕವಾಗಿದ್ದುವೆಂಬುದು, ಅದೆಷ್ಟು ಮಹತ್ವಪೂರ್ಣವಾಗಿದ್ದುವೆಂಬುದು ಮನದಟ್ಟಾಗುವುದು.

## ಕಲ್ಯಾಣ ಸ್ಮಾರಕೋತ್ಸವ :

ಇನ್ನೂ ಸಮ್ಮೇಳನಗಳಿಗೆ ಎರಡು ವಾರಗಳ ಅವಧಿ ಉಳಿದಿರುವಾಗಲೇ ಆತ್ಮೀಯರಾದ ಶ್ರೀ ಚಂದ್ರಶೇಖರ ಪಾಟೀಲರು ಬಂದು, 'ನನಗೂ ಏನಾದರೂ ಕೆಲಸ ಹಚ್ಚಿರಿ' ಎಂದು ತಮ್ಮ ಸ್ವಾಭಾವಿಕವಾದ ಸರಳತೆಯೊಡನೆ ಕೇಳಿದರು. ನಾನು 'ವಿಜಯನಗರ ಸ್ಮಾರಕೋತ್ಸವ'ವನ್ನು ಈ ಹಿಂದೆ ವಿಜೃಂಭಣೆಯೊಡನೆ



ನಡೆಸಿದಂತೆ ಈಗ 'ಕಲ್ಯಾಣದ ಸ್ಮಾರಕೋತ್ಸವ'ವನ್ನೇಕೆ ಜರುಗಿಸಬಾರದು?' ಎಂದೆ. ಅದು ಅವರಿಗೆ ಬಹಳ ಹಿಡಿಸಿತು. ಅಂದೇ ಕಲ್ಯಾಣಕ್ಕೆ ಹೋಗಿ ಸರ್ವರ ಸಹಕಾರ ಪಡೆದು ಸ್ವಾಗತ ಸಮಿತಿಯೊಂದನ್ನು ರಚಿಸಿ ಬಂದರು. ಅವರೇ ಅದಕ್ಕೆ ಅಧ್ಯಕ್ಷರಾಗಿ ಆಯ್ಕೆಗೊಂಡಿದ್ದರು. ಅವರ ಯಾವ ಕಾರ್ಯವನ್ನು ಕೈಗೊಂಡರೂ ಅದನ್ನು ಮನಃಪೂರ್ವಕವಾಗಿ, ಸಮರ್ಥವಾಗಿ ಮಾಡುವುದಕ್ಕೆ ಹೆಸರಾಗಿದ್ದರು. ಬಹಳ ಸ್ವಲ್ಪ ದಿನಗಳಲ್ಲಿ ಬಹಳ ದೊಡ್ಡ ಸಿದ್ಧತೆಗಳನ್ನು ಮಾಡಿದರು. ಉತ್ಸವಕ್ಕೆ ಸೊನ್ನಲಾಪುರದ ಬಾಬಾಸಾಹೇಬ ವಾರದ ಅವರನ್ನು ಆಹ್ವಾನಿಸಿದೆವು. ಅವರು ಸಂತೋಷದಿಂದ ಒಪ್ಪಿ ಆಗಮಿಸಿದುದಲ್ಲದೆ ಮುಂದೆ ಕಲ್ಯಾಣದ ಅಭಿವೃದ್ಧಿಗಾಗಿ ಬಹಳ ಶ್ರಮಿಸಿದರು. ನಿಜಲಿಂಗಪ್ಪನವರು, ಟಿ. ಸುಬ್ರಮಣ್ಯಂ, ಜಿನರಾಜಿ ಹೆಗ್ಗಡೆ, ಹಳ್ಳಿಕೇರಿ ಗುದ್ಲೆಪ್ಪನವರು ಬೇಗ ಹಿಂದಿರುಗಿ ಹೋಗಬೇಕಾಗಿದ್ದುದರಿಂದ ಅವರನ್ನುಳಿದು, ಕಲಬುರಗಿಯ ಸಮ್ಮೇಳನಗಳಿಗೆ ಬಂದಿದ್ದ ಇತರ ಎಲ್ಲ ಪ್ರಮುಖರನ್ನೂ ಎರಡ ಬಸ್ಸುಗಳಲ್ಲಿ ಕಲ್ಯಾಣಕ್ಕೆ ಕರೆದೊಯ್ದೆ. ದಾರಿಯುದ್ದಕ್ಕೂ ಹಳ್ಳಿಹಳ್ಳಿಗೆ ಹುರುಪಿನ, ಹಿಗ್ಗಿನ ಸ್ವಾಗತ–ಬಾಜಾ ಬಜಂತ್ರಿಗಳೊಡನೆ, ತಳಿರು ತೋರಣಗಳಿಂದ ಅಲಂಕೃತವಾದ ಆ ಹಳ್ಳಿಗಳಲ್ಲಿ ಮುತ್ತೈದೆಯರು ಅರತಿ ಬೆಳಗಿ ಕುಂಕುಮದ ಬೊಟ್ಟಿಟ್ಟರು ಉತ್ತಂಗಿಯವರಿಗೆ, ಉತ್ಸವದ ಉದ್ಘಾಟಕ ಟಿ.ಆರ್. ನೇಸ್ವಿ ಅವರಿಗೆ, ಗೌರವಕ್ಕನವರಿಗೆ, ಪ್ರೊ. ದೀಕ್ಷಿತರಿಗೆ, ನಮಗೆಲ್ಲರಿಗೆ! ಶಾಲಾ ಬಾಲಕ–ಬಾಲಕಿಯರು ನಾಡ ಹಾಡು ಹಾಡಿ ಕುಣಿದರು.

ಕಲ್ಯಾಣದ ಸಾಹಸ್ರಕ ಸ್ಮಾರಕೋತ್ಸವ ಅಭೂತ ಪೂರ್ವಜನಸಮೂಹ, ಅವಿಸ್ಮರಣೀಯ ಅಭಿಮಾನ–ಉತ್ಸಾಹಗಳೊಡನೆ ಜರುಗಿತು. ಅದರಲಿ ಹಿಂದುಗಳಲ್ಲದೆ ಮುಸಲ್ಮಾನ ಬಾಂಧವರೂ ಭಾಗವಹಿಸಿದ್ದುದು ನನಗೆ ಬಹಳ ಹಿಗ್ಗನ್ನೂ ಹೆಮ್ಮೆಯನ್ನೂ ಉಂಟು ಮಾಡಿತ್ತಿದ್ದಿತು. ಆಗ ಅಲ್ಲಿಯ ಎಲ್ಲ ಮತಗಳವರೊಡನೆ ನಾನು ಪಡೆದ ಸಂಪರ್ಕ–ಸ್ನೇಹಗಳು ಮುಂದೆ ನನಗೆ ಬಹು ಉಪಯುಕ್ತವೆನಿಸಿದುವು. ಆ ಸಂದರ್ಭ ಬಂದಾಗ ಅದನ್ನು ವಿವರಿಸುವೆನು. ಕಲಬುರಗಿಯಿಂದ ಕಲ್ಯಾಣದವರೆಗೆ ಕನ್ನಡದ ಭೇರಿ ಮೊಳಗಿತು. ಹಿಂದಿನ ಕಹಿ ನೆನೆಪುಗಳನ್ನು ಮರೆತು ಶ್ರೀಸಾಮಾನ್ಯರೇನೋ ಸಹಜ ಜೀವನಕ್ಕೆ ಹೊಂದಿಕೊಳ್ಳತೊಡಗಿದ್ದರು; ಆದರೆ ಅಲ್ಲಲ್ಲಿ 'ಜೈಹಿಂದ್ ಕಂಪನಿ'ಗಳು ಹುಟ್ಟಿಕೊಂಡು ಸುಲಿಗೆ ನಡೆಸಿದ್ದುವು–ದೇಶಭಕ್ತಿಯ ಹೆಸರಿನಲ್ಲಿ. ಎಷ್ಟು ಬೇಗ ಬಣ್ಣ ಬದಲಾಯಿಸುವವರು ಕೆಡುಕರೆಂಬುದಕ್ಕೆ ಒಂದು ನಿದರ್ಶನ: ಕಲಬುರಗಿಗೆ ಭಾರತಸೇನೆ ಬಂದ ಆನಂದದಲ್ಲಿ ನಾನಿದ್ದ ಮನೆಯ ಮೇಲೆ ಮರುದಿನ ಮುಂಜಾನೆ ಭಾರತದ ರಾಷ್ಟ್ರ ಧ್ವಜವನ್ನು ಹಾರಿಸಬೇಕೆಂದು ಹಾರೈಸಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡು ಮಲಗಿದೆ. ಮರುದಿನ ಮುಂಜಾನೆ ಮಾಳಿಗೆಯೇರಿ ನೋಡುತ್ತೇನೆ–

ನನ್ನ ಎಡ ಬಲಗಳ ಮನೆಗಳ ಮೇಲೆ ಆದಾಗಲೇ ಭಾರತದ ಬಾವುಟಗಳು ಪಟ ಪಟ ಹಾರುತ್ತಲಿದ್ದುವು! ಅವೆಲ್ಲ ಮನೆಗಳಲ್ಲಿದ್ದವರೂ ಕುಖ್ಯಾತ ರಝಾಕಾರ ಪ್ರಮುಖರು! ಇವರ ಸಾಲಿಗೆ ಸೇರಲಾರದೆ ಒಯ್ದು ಬಾವುಟವನ್ನು ವಾಪಸ್ಸು ತಂದುಬಿಟ್ಟೆ; ಅತ್ತ ಶಿಬಿರಗಳ 'ಹೀರೋ'ಗಳು ತಾವೇ ಹೈದರಾಬಾದಿನ ಹಿಂದುಗಳ ವಿವೇಚಕರೆಂಬ ಹಮ್ಮಿನೊಡನೆ ತಮಗೆ ಬೇಡಾದವರ ದಸ್ತಗಿರಿ ಮಾಡಿಸುತ್ತ, ಹಣ ಸೆಳೆದುಕೊಂಡು ಮತ್ತೆ ಅವರನ್ನು ಬಿಡಿಸುತ್ತ, ಆ ಈ ಹೆಸರಿನಲ್ಲಿ ನಿಧಿ ಸಂಗ್ರಹಿಸುತ್ತ, ಉಳ್ಳವರ ಮನೆಗಳ ಕೊಳ್ಳೆ ಹೊಡೆಯುತ್ತ ತಿರುಗುತ್ತಿದ್ದರೆ ಇತ್ತ ಹಳೆಯ ರಝಾಕಾರ ಹೀರೋಗಳ ರೂಮಿ ಟೊಪ್ಪಿಗೆಗೆ ಬದಲಾಗಿ ಖಾದಿ ಟೋಪಿ ಧರಿಸಿ, 'ನಾವು ಮೊದಲೇ ಹೇಳಿರಲಿಲ್ಲವೆ, ಭಾರತ ಒಕ್ಕೂಟ ಸೇರುವುದೇ ಒಳ್ಳೆಯ ದಾರಿಯೆಂದು?' ಎಂದು ಯಾರೇ ನಂಬಲಿ ಬಿಡಲಿ ಉಸಿರುತ್ತ, ತಾವೂ ಈ 'ಜೈಹಿಂದ್ ಕಂಪೆನಿ'ಗಳಲ್ಲಿ ಸೇರಿ ಸುಲಿಗೆಯಲ್ಲಿ ಪಾಲು ಪಡೆಯುತ್ತ ನಡೆದಿದ್ದರು. ಒಮ್ಮೊಮ್ಮೆ ಸ್ವಮತದವರನ್ನು ಸುಲಿದದ್ದುಂಟು. ಆ ಮತ ಈ ಮತ ಎಂಬುದೆಲ್ಲ ಸುಳ್ಳು ನೆಪ; ಎಲ್ಲೆಲ್ಲಿಯೂ ಹಾವಳಿ ನಡೆಸುವುದು ಒಂದೆ ಒಂದು–ಅದು ಮನುಷ್ಯನ ಸ್ವಾರ್ಥ, ದುರಾಶೆ!

ಹಿಂದೆ ಹಿಂದುಗಳಲ್ಲಿ ಕೆಲವರಿಗೆ ರಕ್ಷಣೆ ನೀಡಬೇಕಾದಂತೆ ಆಗ ಮುಸಲ್ಮಾನರಲ್ಲಿ ಕೆಲವರಿಗೆ ರಕ್ಷಣೆ ನೀಡಬೇಕಾಯಿತು. ಪ್ರಿಯಸ್ನೇಹಿತ ಶರಣಯ್ಯನವರು ಮಹಾಗಾಂವ್ ಉಟ್ಟ ಬಟ್ಟೆಯ ಮೇಲೆ ಓಡಿ ಬಂದಿದ್ದ ಇಬ್ಬರು ಮುಸಲ್ಮಾನ ಅಗ್ರಜಾನುಜರನ್ನು ನನ್ನ ಬಳಿಗೆ ಕರೆದುಕೊಂಡು ಬಂದರು. ಅವರೂ ಆಗ ನಿರಪರಾಧಿ ಮುಸಲ್ಮಾನರನ್ನು ಕಾಪಾಡುವ ಕೆಲಸದಲ್ಲಿ ನಿರತರಾಗಿದ್ದರು. ಆ ಎರಡೂ ಹುಡುಗರಿಗೆ ನಾನು ಆಶ್ರಯ ನೀಡಬೇಕೆಂದು ಹೇಳಿದರು. ಅವರನ್ನು ಮುಸಲ್ಮಾನರನ್ನಾಗಿಯೇ ಮನೆಯಲ್ಲಿರಿಸಿಕೊಂಡರೆ ಅವರಿಗೆ ಉಪಟಳ ತಪ್ಪಲಿಕ್ಕಿಲ್ಲವೆಂದು ಅವರಿಗೆ ತಾತ್ಪೂರ್ತಿಕವಾಗಿ ಲಿಂಗಧಾರಣೆ ಮಾಡಿ ರೇವಣಸಿದ್ಧ, ಬಸವ–ಎಂದು ಹೆಸರಿಟ್ಟು ಇರಿಸಿಕೊಂಡೆ. ಮುಂದೆ ಕೆಲ ದಿನಗಳಲ್ಲಿ ಅವರೂರು ಶಾಂತವಾಗಲು ಅವರನ್ನು ಮತ್ತೆ ಮುಸಲ್ಮಾನರನ್ನಾಗಿ ಮಾಡಿ ಅವರೂರಿಗೆ ಕಳಿಸಿಕೊಟ್ಟೆ. ಅಂತೂ ಈ ಅನಿರೀಕ್ಷಿತ, ಅನಪೇಕ್ಷಿತ ಕರಾಳ ಕೃತ್ಯಗಳನ್ನು ಕಂಡು "ಇದು ಮುಗಿವುದೆಲ್ಲಿ? ಸಂಪೂರ್ಣ ಅಧಃಪತನದಲ್ಲಿಯೆ?" ಎಂದು ನನ್ನನ್ನು ನಾನೇ ಕೇಳಿಕೊಳ್ಳುವಂತಾಯಿತು.

## ಸಿವಿಲ್ ಅಡ್‌ಮಿನಿಸ್ಟ್ರೇಟರ್ :

ಕಲಬುರಗಿಯಲ್ಲಿದ್ದಾಗ ನಡೆದ ಇನ್ನೊಂದು ಘಟನೆಯನ್ನು ಇಲ್ಲಿ ಉಲ್ಲೇಖಿಸಬೇಕು. ದ್ವಿತೀಯ ಮಹಾಯುದ್ಧದಲ್ಲಿ ಮಿತ್ರ ರಾಷ್ಟ್ರಗಳ



ಮಹಾಸೇನಾನಿಯಾಗಿದ್ದ ಐಸನ್ ಹೋವರ್ ಅವರು ಆಗ ಕೋಲಂಬಿಯಾ ವಿಶ್ವವಿದ್ಯಾಲಯದ ಅಧ್ಯಕ್ಷರಾಗಿದ್ದರು. ಅವರಿಂದ ಒಂದು ಕಾಗದ ಬಂದಿತು. ಮೇಲಿದ್ದ ವಿಳಾಸವನ್ನೋದಿಯೇ ಆಶ್ಚರ್ಯವಾಯಿತು ನನಗೆ. ಶ್ರೀ ಎಸ್.ಎ. ಘಾಟಗೆ, ಸಿವ್ಹಿಲ್ ಎಡ್ಮಿನಿಸ್ಟ್ರೇಟರ್, ಗುಲ್ಬರ್ಗಾ, ಹೈದರಾಬಾದು ರಾಜ್ಯ, ಇಂಡಿಯಾ–ಎಂದು ಬರೆದಿದ್ದಿತು. ಘಾಟಗೆಯವರು ಬಂದು ಬಹಳ ದಿನಗಳಾಗಿರಲಿಲ್ಲ. ಆದರೂ ಅವರ ಹೆಸರನ್ನು ಒಂದು ಅಕ್ಷರ ತಪ್ಪಿಲ್ಲದೆ ಬರೆಯಲಾಗಿದ್ದಿತು. 'ಸಿವಿಲ್ ಎಡ್ಮಿನಿಸ್ಟ್ರೇಟರ್' ಎಂಬುದು ಹೊಚ್ಚ ಹೊಸ ಹೆಸರು. ಆ ಹಿಂದೆ ಆ ಹೆಸರಿನಿಂದ ಯಾವ ಅಧಿಕಾರಿಯನ್ನೂ ಕರೆದಿರಲಿಲ್ಲ. ಅದು ಪೋಲೀಸ್ ಕ್ರಮದ ಪರಿಣಾಮವಾಗಿ, ಸಾಂದರ್ಭಿಕ ಅಗತ್ಯದ ಪೂರೈಕೆಗಾಗಿ ಹುಟ್ಟಿಬಂದಿದ್ದ ಪದ. ಅದನ್ನೂ ಅಷ್ಟು ಬೇಗ ತಿಳಿದುಕೊಂಡು ಸರಿಯಾಗಿಯೇ ಬರೆಯಲಾಗಿದ್ದಿತು. ಮುಂದುವರಿಯುವ ಮುನ್ನ ಮುಂದೆ ಸಂಭವಿಸಿದ ಒಂದು ಲಾಂಛನಾಸ್ಪದವಾದ ಘಟನೆಯನ್ನು ಇಲ್ಲಿಯೇ ಹೇಳಿಬಿಡಬೇಕು. ಏಕೀಕೃತ ಕರ್ನಾಟಕದಲ್ಲಿ ನಾನು ವಾರ್ತಾ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕನಾಗಿದ್ದಾಗ ಶ್ರೀ ತಿಪ್ಪಯ್ಯನವರಿಗೆ ಚಾರ್ಜು ಕೊಟ್ಟು ಹಣಕಾಸಿನ ಇಲಾಖೆಯ ಉಪಕಾರ್ಯದರ್ಶಿ ಹಾಗೂ ಸುವರ್ಣ ನಿಯಂತ್ರಣಾಧಿಕಾರಿಯಾಗಿ ವಿಧಾನಸೌಧದಲ್ಲಿಯೇ ಬೇರೊಂದು ಭಾಗಕ್ಕೆ ಹೋದೆ. ಹೋಗುವ ಮುನ್ನ ಭಾರತ ಸರಕಾರದ ವಾರ್ತಾ ಮತ್ತು ಪ್ರಸರಣ ಇಲಾಖೆಯ ಕಾರ್ಯದರ್ಶಿಗಳಿಗೆ, ಆಕಾಶವಾಣಿಯ ಮುಖ್ಯಾಧಿಕಾರಿಗಳಿಗೆ, ಮುಖ್ಯ ವಾರ್ತಾಧಿಕಾರಿಗಳಿಗೆ, ಕ್ಷೇತ್ರೀಯ ಪ್ರಚಾರ ಇಲಾಖಾಧಿಕಾರಿಗಳಿಗೆ–ಎಲ್ಲ ಸಂಬಂಧಪಟ್ಟ ಅಧಿಕಾರಿಗಳಿಗೆ ನಾನು ಶ್ರೀ ತಿಪ್ಪಯ್ಯನವರಿಗೆ ಚಾರ್ಜವಹಿಸಿ ಕೊಟ್ಟ ವಿಷಯ ತಿಳಿಸಿ, ಮುಂದೆ ಪತ್ರ ವ್ಯವಹಾರ ಅವರ ಹೆಸರಿಗೆ ಮಾಡಬೇಕೆಂದು ಕೋರಿದ್ದೆ. ಆದರೂ ನಾನು ವಿಧಾನಸೌಧದಲ್ಲಿರುವವರೆಗೆ ನನ್ನ ಹೆಸರಿಗೇ ಕಾಗದಗಳು ಬರುವುದೂ, ಅವು ನನಗೆ ವರ್ಗಾಯಿಸಲ್ಪಟ್ಟು ನಾನು ಅವುಗಳನ್ನು ಆ ಇಲಾಖೆಗೆ ಹಿಂದಿರುಗಿಸುವುದೂ ತಪ್ಪಲಿಲ್ಲ. ಮುಂದೆ ಕೊಡಗಿಗೆ ಜಿಲ್ಲಾಧಿಕಾರಿಯಾಗಿ ಹೋದೆ. ಆಗಲೂ ಅಲ್ಲಿಗೇ ಬರತೊಡಗಿದುವು ದೆಹಲಿಯಿಂದ ಇಲಾಖೆಗೆ ಬರುತ್ತಿದ್ದ ಕಾಗದಗಳು. ತಿಪ್ಪಯ್ಯನವರು ಹೋಗಿ ಶಾಂತೇಶ ಪಾಟೀಲರು ಬಂದರು. ಅವರಿಬ್ಬರೂ ಸಿದ್ಧಯ್ಯ ಪುರಾಣಿಕರೀಗ ಈ ಇಲಾಖೆಯ ನಿರ್ದೇಶಕರಲ್ಲ, ಹೊಸ ನಿರ್ದೇಶಕರ ವಿಳಾಸ ಗಮನಿಸಿರಿ–ಎಂದು ಎಷ್ಟು ಬೊಬ್ಬೆ ಹೊಡೆದರೂ ಪ್ರಯೋಜನವಾಗಲಿಲ್ಲ. ನಾನು ಕೊಡಗಿನಲ್ಲಿರುವವರೆಗೂ ಬರುತ್ತಲೇ ಇದ್ದುವು. ಬರುವುದು ಮುಂದೆ ಯಾವಾಗ ನಿಂತಿತೋ ಗೊತ್ತಿಲ್ಲ!

ಇದು ಕೇಂದ್ರ ಸರಕಾರಕ್ಕೆ ಕಣ್ಣು ಕಿವಿಗಳಾಗಿ ಕೆಲಸ ಮಾಡಬೇಕಾಗಿರುವ ಅಲ್ಲಿಯ ಒಂದು ಇಲಾಖೆಯ ದಕ್ಷತೆಯ ಮಾದರಿ! ಇದಕ್ಕೆ ಕೋಲಂಬಿಯಾ ವಿಶ್ವವಿದ್ಯಾಲಯವು ಯಾರೂ ತಿಳಿಸದೆ, ಅಷ್ಟು ಬೇಗ ಒಬ್ಬ ಜಿಲ್ಲಾಧಿಕಾರಿಯ ಬದಲಾದ ಡೆಸಿಗ್ನೇಷನ್ ಅನ್ನು ತಿಳಿದುಕೊಂಡು ಸರಿಯಾದ ವಿಳಾಸ ಬರೆದುದನ್ನು ಹೋಲಿಸಿದಾಗ ಏನೆನ್ನಿಸುತ್ತದೆ? ಇನ್ನೊಂದು ಉದಾಹಣೆ. Span ಪತ್ರಿಕೆ ನನ್ನ ಬೆಂಗಳೂರಿನ ಮನೆಯ ವಿಳಾಸಕ್ಕೆ ಬರುತ್ತಿತ್ತು. ನಾನು ಕೊಡಗಿಗೆ ವರ್ಗವಾಗಿ ಹೋದ ವಿಷಯವನ್ನು ತಿಳಿಸಿಯೇ ಇರಲಿಲ್ಲ, ಆ ಪತ್ರಿಕೆಗೆ. ಆದರೂ ಮುಂದಿನ ಸಂಚಿಕೆಯೇ ಕೊಡಗಿನ ವಿಳಾಸಕ್ಕೆ ವಿಲಂಬವಿಲ್ಲದೆ ಬಂದಿದ್ದಿತು! ಇದರೊಡನೆ ಹೋಲಿಸಲು ನಾನು 'ಪ್ರಬುದ್ಧ ಕರ್ನಾಟಕ'ದ ಅಜೀವ ಚಂದಾದಾರನಾಗಿ ಅನುಭವಿಸಿದುದನ್ನು ಹೇಳಬಹುದು, ಬೇಡ. ಅದೊಂದು ವಿನೂತನ ಆಡಿಸಿ, ಸ್ಥಳಾವಕಾಶ ಸಾಲದು. ಇಂಥ ಅನುಭವಗಳನ್ನೇ ಹೆಣೆದರೆ ಹಿಮಾಲಯದ ಕೊರಳಿಗೆ ಹಾಕಬಹುದಾದಷ್ಟು ದೊಡ್ಡ ಹಾರವಾದೀತು! ನನ್ನಿಂದ ಆಜೀವ ಚಂದಾ ಹಣ ಪಡೆದುಕೊಂಡು ಒಂದೇ ಸಂಚಿಕೆ ಕಳಿಸಿ ನಿಲ್ಲಿಸಿದವರಾರೋ, ಪಡೆದ ತಿಂಗಳೇ ಪತ್ರಿಕೆ ನಿಲ್ಲಿಸಿದವರಾರೋ, ಅಭಿನಂದನ ಗ್ರಂಥಗಳಿಗೆ ಮುಂಗಡ ಪಡೆದುಕೊಂಡು ಪ್ರತಿ ಕಳಿಸದವರಾರೋ, ಉತ್ಸವಗಳಿಗೆ ಕರೆಸಿಕೊಂಡು ಹಿಂದಿರುಗಲು ಮಾತ್ರ ಟಿಕೆಟ್ಟು ಕೈಯೊಳಗಿಟ್ಟು ಅಲ್ಲಿಗೆ ಹೋದ ವೆಚ್ಚದ ಬಗ್ಗೆ ಚಕಾರ ಶಬ್ದವೆತ್ತದವರಾರೋ, ಎರಡೂ ಬದಿಯ ವೆಚ್ಚಕ್ಕೂ 'ಚಕ್ಕರ್' ಕೊಟ್ಟವರಾರೋ, ನನ್ನ ಹೆಸರಿಗೆ ವೆಚ್ಚ ತೋರಿಸಿ ತಮ್ಮ ಕೈ ಬೆಚ್ಚಗೆ ಮಾಡಿಕೊಂಡವರಾರೋ, ಮಾರಿ ಕಳಿಸುವೆವೆಂದು ಪುಸ್ತಕಗಳನ್ನು ಪಡೆದುಕೊಂಡು ಮೋರೆ ತೋರಿಸದವರಾರೋ–ಹೋಗಲಿ ಬಿಡಿ! ಹಿಂದಿನದನ್ನು ನೆನೆಸಿಕೊಂಡು ಹಿತ್ತಲದಲ್ಲಿ ಅತ್ತರೆ ಬರುವುದೇನು? ಕರ್ತವ್ಯ ಪ್ರಜ್ಞೆ, ನಿಷ್ಕೃಷ್ಟತೆ, ನಿಯಮಿತತೆ, ಸಮಯನಿಷ್ಠೆ, ಸಹಾಯ ಮಾಡಿ ಸಂತೋಷ ಪಡುವ ಗುಣ, ಕೊಟ್ಟ ಕೆಲಸ ಯಾಕೆ ಆಗದೆಂಬುದಕ್ಕೆ ಕಾರಣ ಹುಡುಕುವುದರಲ್ಲಿ ಕಾಲ ಕಳೆಯದೆ ಹೇಗೆ ಆಗಬಹುದೆಂಬುದರ ಜಿಜ್ಞಾಸೆಗೆ ಅದ್ಯತೆ ನೀಡುವುದು, ಸರಾಸರಿ ಪ್ರಾಮಾಣಿಕತೆ, ದೇಶ ಹಿತದೃಷ್ಟಿ ಇತ್ಯದಿಗಳು ನಮ್ಮ ರಕ್ತದಲ್ಲಿಯೇ ಇಲ್ಲವೇನೋ ಎನ್ನುವಷ್ಟು ಕೆಡುತ್ತ ನಡೆದಿವೆ ಸಾರ್ವಜನಿಕ ನಡೆವಳಿಕೆಗಳು, ಆಡಳಿತ, ಸಂಘ ಸಂಸ್ಥೆಗಳು!

## ಐಸನ್ ಹೋವರ್ ಕಾಗದ

ಕೋಲಂಬಿಯಾ ವಿಶ್ವವಿದ್ಯಾಲಯದ ಲಕೋಟೆಯ ಮೇಲಿನ ವಿಳಾಸ ಇಷ್ಟೆಲ್ಲವನ್ನೂ ಪ್ರಚೋದಿಸಿತು. ಇನ್ನು ಅದರ ಒಳಗಿನ ಕಾಗದ ಏನೇನು



ಪ್ರೇರೇಪಿಸುವುದೋ ನೋಡೋಣ. ಒಳಗಿನ ಕಾಗದಕ್ಕೆ ಸ್ವತಃ ಐಸನ್ ಹೋವರರೇ ರುಜು ಮಾಡಿದ್ದರು. ಅದಾವ ಘನ ವಿಷಯವಿರಬಹುದು ಆ ಕಾಗದಲ್ಲಿ–ಎಂದು ಕುತೂಹಲ ಕೆರಳುವುದು ಸ್ವಾಭಾವಿಕವೇ ಸರಿ. ವಿಷಯ ಬಹಳ ಸಣ್ಣದು–ನಮ್ಮ ಮಾನದಂಡದಿಂದ. ಆದರೆ ಅವರ ಮಾನದಂಡದಿಂದ ಘನವಾದುದೇ ಇರಬೇಕು. ಇಲ್ಲದಿದ್ದರೆ ಈಗ ಕಾಗದವೇಕೆ ಬರುತ್ತಿತ್ತು ಇಷ್ಟು ದೂರ? ವಿಷಯವಿಷ್ಟೆ: ಪ್ರಿಯ ಘಾಟಗೆಯವರೇ, ಕೋಲಂಬಿಯಾ ವಿಶ್ವವಿದ್ಯಾಲಯ ತನ್ನ ವಿಶ್ವಕೋಶದ ಪರಿಷ್ಕರಣ ಕಾರ್ಯವನ್ನು ಕೈಗೆತ್ತಿಕೊಂಡಿದೆ. ಈಗ ನಮಗೆ ಒಂದು ಸಂಶಯ ಎದುರಾಗಿದೆ. ಭಾರತ ಸರಕಾರದ ಸರ್ವೆಷೀಟುಗಳಲ್ಲಿ ನಿಮ್ಮ ಜಿಲ್ಲೆಯ 'ವಾಡಿ'ಯನ್ನು ಕೊಪ್ಪಲು (Hamlet) ಎಂದು ತೋರಿಸಲಾಗಿದೆ; ಅದನ್ನೇ ಹೈದರಾಬಾದು ಸರಕಾರದ ನಕ್ಷೆಯಲ್ಲಿ 'ಗ್ರಾಮ' ಎಂದು ತೋರಿಸಲಾಗಿದೆ. ಇವುಗಳಲ್ಲಿ ಯಾವುದು ಸರಿಯೆಂಬುದ್ನು ದಯವಿಟ್ಟು ತಿಳಿಸಿ ಉಪಕರಿಸುವಿರಾ? ಇತಿ ನಿಮ್ಮ ವಿಶ್ವಾಸದ, ಐಸನ್ ಹೋವರ್."

ಕಾಗದವನ್ನೋದಿ ಸುಸ್ತಾದೆ ನಾನು. ಇಂಥ ತಪ್ಪುಗಳನ್ನು ತೆಕ್ಕೆ ತೆಕ್ಕೆ ತೋರಿಸಬಹುದು ನಮ್ಮ ಪ್ರತಿಯೊಂದು ಕಾರ್ಯಾಲಯದಲ್ಲಿಯೂ. ಮೂಲ ಭೂಮಿ ರಿಕಾರ್ಡುಗಳೇ ಈಗ ಅನುಪಯುಕ್ತವೆನ್ನಿಸುವಷ್ಟು ಹಳೆಯವಾಗಿವೆ; ಕಡತಗಳ ವಿಷಯವನ್ನಂತೂ ಕೇಳುವುದೇ ಬೇಡ; ಕಡತಕ್ಕೆ ಕಡತಗಳೇ ಕಣ್ಮರೆಯಾಗುತ್ತಿವೆ ಈಗ! ಇನ್ನು ಬಿಡಿ ಮನವಿಗಳ ಪಾಡೇನು? ಇನ್ನು ಅಂಕಿ ಸಂಖ್ಯೆಗಳ ಬಗ್ಗೆ ಬರೆಯುವುದೇ ಬೇಡ. ಅವು ಹೇಳುವಷ್ಟು ಸುಳ್ಳುಗಳನ್ನು ನಾವು ನೀವೂ ಹೇಳಲಾರೆವು. ಕರ್ನಾಟಕದ ರಾಜ್ಯೋದಯವಾದಾಗ ಕುಡಿಯುವ ನೀರಿನ ಭಾವಿಗಳಿಲ್ಲದಿದ್ದ ಹಳ್ಳಿಗಳ ಸಂಖ್ಯೆ ಎಷ್ಟೆಂದು ತೋರಿಸಿದ್ದರೋ ಈಗ–ಕಾಲು ಶತಮಾನ ಕಳೆದ ಮೇಲೂ–ಹೆಚ್ಚು ಕಡಿಮೆ ಅಷ್ಟೇ ತೋರಿಸುತ್ತಿದ್ದಾರೆ, ವರ್ಷ ವರ್ಷವೂ ಇಂತಿಷ್ಟು ಹಳ್ಳಿಗಳಲ್ಲಿ ಕುಡಿಯುವ ನೀರಿನ ಭಾವಿಗಳನ್ನು ತೋಡಿಸಿದೆವೆಂದು ವರದಿಗಳನ್ನೂ ಪ್ರಕಟಿಸುತ್ತಾರೆ. ವರ್ಷ ವರ್ಷವೂ ನಿರ್ಮಾಣವಾದ ಗ್ರಾಮೀಣ ರಸ್ತೆಗಳ ವಿವರಗಳನ್ನು ನಂಬುವುದಾದರೆ ಈಗ ಎಲ್ಲ ಹಳ್ಳಿಗಳಿಗೂ ಗಟ್ಟಿ ರಸ್ತೆಗಳಿರಲೇಬೇಕು! ವರದಿಯಾದ ಕಂಪೋಸ್ಟ್ ಕುಣಿಗಳ ಸಂಖ್ಯೆಯನ್ನು ಸರಿಯೆಂದು ಗ್ರಹಿಸಿದರೆ ಈಗ ಬಿತ್ತಲು ಭೂಮಿಯೇ ಉಳಿದಿರಬಾರದು ಎಲ್ಲಿಯೂ! ಹೀಗಿರುವಾಗ 'ವಾಡಿ' ಹಳ್ಳಿಯೋ ಕೊಪ್ಪಲೋ ಎಂದು ಪರಿಶೀಲಿಸುವ 'ನಿರರ್ಥಕ ಪ್ರಯತ್ನ'ವನ್ನು ಯಾರು ಮಾಡಬೇಕು, ಯಾಕೆ ಮಾಡಬೇಕು ಇಲ್ಲಿ? ಅಮೇರಿಕೆಯು ಇದನ್ನು ಮಾಡುತ್ತ ಬಂದಿದೆಯೆಂದೇ ತಾಂತ್ರಿಕ ಕ್ರಾಂತಿಯನ್ನು ಸಾಧಿಸಿ ಶುಕ್ರಗ್ರಹಕ್ಕೆ ಲಗ್ಗೆಯಿಟ್ಟಿದೆ!

ನನ್ನ ಭಡತಿಯ ಆಜ್ಞೆ ಬರಲೇ ಇಲ್ಲ. ಹೈದರಾಬಾದಿಗೆ ಕತ್ತೆಗಳೂ ಹೋಗಿ ಕುದುರೆಗಳಾಗಿ ಬಂದುವು. ನಾನು ಮೇಲಿನವರ 'ನ್ಯಾಯಬುದ್ಧಿ'ಯನ್ನು ನಂಬಿ

ಕುಳಿತವನು ಕುಳಿತೇಬಿಟ್ಟೆ. ನಾನೂ ಹೈದರಾದಿಗೆ ಹೋದೆ–ಕೋಟೆ ಸೂರೆ ಹೋದ ಮೇಲೆ ಬಾಗಿಲ ಮುಚ್ಚುವವರಂತೆ! ಅಲ್ಲಿ ಕಂದಾಯ ಇಲಾಖೆಯಲ್ಲಿ ಖಾಲಿ ಆಗಿದ್ದ ಸ್ಥಳಗಳೆಲ್ಲ ಭರ್ತಿಯಾಗಿ ಬಿಟ್ಟಿದ್ದುವು. ಅಲ್ಲಿ ಆಯಕಟ್ಟಿನ ಸ್ಥಳಗಳಲ್ಲಿದ್ದವರೆಲ್ಲ ತಮ್ಮ ಹತ್ತಿರದವರಿಗೂ, ಹೊಂದಿದವರಿಗೂ ಪತ್ರ ಬರೆದು ಕರೆಸಿಕೊಂಡು ಬಢತಿ ಆಜ್ಞೆಗಳನ್ನು ಕೈಗಿತ್ತು ಕಳಿಸಿಬಿಟ್ಟಿದ್ದರು. ಇನ್ನುಳಿದುವನ್ನು ಹರಾಜು ಮಾಡಲಾಗಿದ್ದಿತು. "ಮುರಗಿ ಖಾನೇ ವಾಲೇ ಗಯೆ, ಖಿಲಗಾ ಖಾನೇ ವಾಲೇ ಆಯೆ" "ರಝಾಕಾರ್ ಗಯೆ, ಮಜಾಕಾರ್ ಆಯೆ" ಎಂದು ಆಡಿಕೊಳ್ಳುತ್ತಿದ್ದರು ಶ್ರೀಸಾಮಾನ್ಯರು. ನನಗೆ ಮತ್ತೇ ಕಂದಾಯ ಇಲಾಖೆಯಲ್ಲಿ ಲೀನ್ (Lien) ಇಟ್ಟು ಸರ್ವೇ ಸೆಟ್ಲಮೆಂಟ್ ಇಲಾಖೆಯಲ್ಲಿ ಆಗ ಖಾಲಿಯಿದ್ದ ಸ್ಥಳಕ್ಕೆ ಬಢತಿ ಕೊಟ್ಟರು. ಕತ್ತು ಕೊಯ್ಯುವ ಊರಲ್ಲಿ ಕೆನ್ನೆಗೆ ಹೊಡೆಸಿಕೊಂಡುದೇ ಕ್ಷೇಮವೆಂದು ಅಂದುಕೊಂಡು ಅದನ್ನೇ ಸ್ವೀಕರಿಸಿದೆ. ಆಗ ಘಟಿಸಿದ ಈ ಆಕ್ರಮ ಮುಂದೆ ನನ್ನ ಮೂಗು ಹಿಡಿದು ಐ.ಎ.ಎಸ್. ಶ್ರೇಣಿಯಲ್ಲಿ ನಾನು ಮೂರು ವರ್ಷಗಳ ಸೀನಿಯಾರಿಟಿ ಕಳೆದುಕೊಳ್ಳುವಂತೆ ಮಾಡಿತು! ಆ ವಿಷಯ ಬಂದಾಗ ಅದರ ಪ್ರಸ್ತಾಪ ಮತ್ತೆ ಮಾಡೋಣ.

### ಬೀಳ್ಕೊಡಿಗೆ :

ಕಲಬುರಗಿಗೆ ಹಿಂದಿರುಗಿ ಚಾರ್ಜು ಕೊಟ್ಟು ಹೈದರಾಬಾದಿಗೆ ಹೊರಡಲು ಸಿದ್ಧತೆಗಳನ್ನು ನಡೆಸಿದೆ. ಶ್ರೀ ಶರಣಬಸವೇಶ್ವರ ಸಂಸ್ಥಾನದ ಪೂಜ್ಯ ದೊಡ್ಡ ದೊಡ್ಡಪ್ಪಾ ಶರನಬಸಪ್ಪಾ ಅಪ್ಪಾ ಅವರ ಅಧ್ಯಕ್ಷತೆಯಲ್ಲಿ ಬಹಳ ದೊಡ್ಡ ಬೀಳ್ಕೊಡುವ ಸಮಾರಂಭ ನಡೆಯಿತು. ಅನೇಕರು ಅಭಿನಂದಿಸಿದರು, ಅಪ್ಪಾ ಅವರು ಅಭಿನಂದಿಸಿದರು. "ಎಲ್ಲ ತಮ್ಮ ಆಶೀರ್ವಾದ ಬಲ, ಶರಣ ಬಸವರ ಅನುಗ್ರಹದ ಫಲ' ಎಂದೆ. 'ಇನ್ನೂ ಒಳ್ಳೆಯದಾಗಲಿ.' ಎಂದು ಆಶೀರ್ವದಿಸಿ ಕಳಿಸಿಕೊಟ್ಟರು. ಕಲಬುರಗಿ ಬಿಡುವಾಗ ಕಾಲೇ ಕೀಳಲಿಲ್ಲ. ನಾನು ವಿದ್ಯಾರ್ಥಿಯಾಗಿ ಐದಾರು ವರ್ಷ, ಅಧಿಕಾರಿಯಾಗಿ ಮೂರು ಮೂರುವರೆ ವರ್ಷ ಕಳೆದಿದ್ದ ಕಲಬುರಗಿಯೇ ನನ್ನ ಪಾಲಿಗೆ ಎರಡನೆಯ ಹುಟ್ಟೂರು ಆಗಿ ಬಿಟ್ಟಿದ್ದಿತು. ಇಂದಿಗೂ ಅಲ್ಲಿಗೆ ಹೋಗುವುದೆಂದರೆ ಉತ್ಸವಗಳಲ್ಲಿ ಆಗುವಷ್ಟು ಉತ್ಸಾಹ ನನಗೆ.

ಹೈದರಾಬಾದಿನಲ್ಲಿಯೂ ನಾಲ್ಕು ವರ್ಷ ವಿದ್ಯಾರ್ಥಿಯಾಗಿ ವಾಸಿಸಿದ್ದೆನಾಗಿ ಅಲ್ಲಿಗೆ ಹೊಂದಿಕೊಳ್ಳಲು ಕಷ್ಟವಾಗಲಿಲ್ಲ ನನಗೆ. ಮೊದಲು ಹುಸೇನ ಅಲಿ ಖಾನ್ ಸಾಹೇಬರ ಮನೆಗೆ ಹೋದೆ. ಎಂದಿನಂತೆ ವಾತ್ಸಲ್ಯದೊಡನೆ ಬರಮಾಡಿಕೊಂಡರು. ನನ್ನನ್ನು ನೋಡಿ ಮುಖ ಸಣ್ಣಗೆ ಮಾಡಿದರು. ಪೋಲೀಸ್ ಕ್ರಮದ



ಕಾಲದಲ್ಲೇನಾದರೂ ಅವರಿಗೆ ತೊಂದರೆಯಾಯಿತೇನೋ ಎಂಬ ಅನುಮಾನ ಬಂದಿತು ನನಗೆ. ಆದರೆ ಅವರ ಕಳವಳಕ್ಕೆ ಕಾರಣ ಅದಾಗಿರಲಿಲ್ಲ. ಅವರೇ ಬಾಯಿ ಬಿಟ್ಟರು. "ಸಿದ್ಧಯ್ಯ, ನೀನೀಗ ಬಢತಿ ಪಡೆದಿರುವುದು ಸಂತೋಷವೇ ನನಗೆ. ಆದರೆ ಇದಕ್ಕೂ ಒಳ್ಳೆಯ ಸ್ಥಿತಿಗೆ ನಿನ್ನನ್ನು ನಾನು ಮುಟ್ಟಿಸಬಹುದಾಗಿದ್ದಿತು. ನೀನು ತಹಸೀಲ್ದಾರನಾಗಿ ಆಯ್ಕೆಗೊಂಡಾಗ ನಾನು "ಫಾರೆನ್ ಸ್ಕಾಲರ್‌ಷಿಪ್ ಕಮೀಟಿಯ ಅಧ್ಯಕ್ಷನಾಗಿದ್ದೆ, ನೀನು ಎಂ.ಎ. ಇಂಗ್ಲೀಷ್ ಮುಗಿಸಿಕೋ; ನಿನಗೆ ಫಾರೆನ್ ಸ್ಕಾಲರ್‌ಷಿಪ್ ಕೊಟ್ಟು ಆಕ್ಸ್‌ಫರ್ಡ್‌ಗೆ ಕಳಿಸುವೆನು; ಹಿಂದಿರುಗಿದೊಡನೆ ನೀನು ರೀಡರ್ ಆಗುವಿ–ಎಂದು ನಾನು ಹೇಳಬಹುದಾಗಿತ್ತು. ಯಾಕೆ ಹೇಳಲಿಲ್ಲವೋ ಎಂದು ವ್ಯಾಕುಲವಾಗುತ್ತಿದೆ ಈಗ. ಆಗ ನೀನು ರೀಡರ್ ಆಗಿದ್ದರೆ ನಿನ್ನ ಮಾತ್ರ ವಿಶ್ವವಿದ್ಯಾಲಯಕ್ಕೇ ಉಪಕುಲ ಪತಿಯಾಗುತ್ತಿದ್ದೆ!"

ಅವರ ಹೃದಯ ವೈಶಾಲ್ಯಕ್ಕೆ, ವಾತ್ಸಲ್ಯಕ್ಕೆ ಎಂದೋ ಮಾರುಹೋಗಿದ್ದೆ. ಅಂದು ಅವರಾಡಿದ ಮಾತುಗಳನ್ನು ಕೇಳಿ ಅವರೊಬ್ಬ ದೇವತಾತ್ಮರೆಂದೆನಿಸಿತು ನನಗೆ. "ಹೋಗಲಿ ಬಿಡಿ ಸರ್, ತಮ್ಮ ಆಶ್ರಯ, ಆಶೀರ್ವಾದಗಳಿಂದ ಇಲ್ಲಿಗಾದರೂ ತಲುಪಿದೆ. ನನ್ನ ತಂದೆಯವರು ನನ್ನನ್ನು ಓದಿಸಿ ದೊಡ್ಡವನನ್ನಾಗಿ ಮಾಡಿದರು. ಈಗ ನಾನು ಇಬ್ಬರು ತಮ್ಮಂದಿರನ್ನು ಓದಿಸುತ್ತಿದ್ದೇನೆ; ತಂಗಿಯ ಮದುವೆ ಮಾಡಲಿದ್ದೇನೆ; ನನಗೂ ಮೂವರು ಮಕ್ಕಳೀಗ; ಅವರೂ ಗೌರವಾನ್ವಿತ ಜೀವನ ಪಡೆಯುವಂತೆ ಅವರನ್ನು ಓದಿಸಿ ಬೆಳೆಸುವೆನು. ನನಗೆ ಉಪಕುಲಪತಿಯಾಗುವ ಭಾಗ್ಯವಿಲ್ಲ!" ಆಗ ಆಡಿದ ಈ ಕೊನೆಯ ವಾಕ್ಯ ಕೊನೆಗೂ ನಿಜವಾಯಿತು! ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿ ಸ್ಥಾನಕ್ಕೊಮ್ಮೆ, ಕಲಬುರಗಿ ವಿಶ್ವವಿದ್ಯಾಲಯದ ಉಪಕುಲಪತಿ ಸ್ಥಾನಕ್ಕೊಮ್ಮೆ ನನ್ನ ಹೆಸರು ಸೂಚಿತವಾಯಿತು, ಎರಡೂ ಸಲವೂ ಮಧ್ಯದಲ್ಲಿ ಬಿದ್ದು ಹೋಯಿತು! ನನಗಾವ ನಿರಾಶೆಯೂ ಆಗಲಿಲ್ಲ. ಆಶಿಸುವ ಮುನ್ನವೆ ಈಶ ಏನೆಲ್ಲವನ್ನೂ ಕೊಟ್ಟಿರುವಾಗ ಯಾವುದೇ ಕಾರಣಕ್ಕಾಗಿ ನಿರಾಶನಾಗುವುದೆಂದರೆ ಆ ದೈವಕ್ಕೆ ದ್ರೋಹ ಬಗೆದಂತೆ ಎಂಬುದು ನನ್ನ ನಂಬಿಕೆ!

### ಹೈದರಾಬಾದಿನಲ್ಲಿ ಕನ್ನಡದ ಕೆಲಸ

ನಾನು ಹೈದರಾಬಾದಿಗೆ ಹೋದುದೇ ತಡ–ಕನ್ನಡದ ಕೆಲಸ 'ಕಡಕೊಂಡು ಬಿತ್ತು' ನನ್ನ ಮೇಲೆ ಪ್ರೊ॥ ಡಿ.ಕೆ. ಭೀಮಸೇನರಾಯರು ಅಧ್ಯಕ್ಷರಾಗಿದ್ದ ಕರ್ನಾಟಕ ಸಾಹಿತ್ಯ ಮಂದಿರಕ್ಕೆ ಉಪಾಧ್ಯಕ್ಷನನ್ನಾಗಿ ಮಾಡಿದರು ನನ್ನನ್ನು. ನಾನು ಬಹಳ

ನಿಷ್ಠೆಯಿಂದ ಕೆಲಸ ಮಾಡಿ ತೋರಿಸಲು 'ಮಾನ್ವಿ' ಅವರು ನಾನು ಕಾರ್ಯದರ್ಶಿಯಾದರೆ ಇನ್ನೂ ಹೆಚ್ಚು ಕೆಲಸವಾಗುವುದೆಂದು ಎಣಿಸಿ ಮುಂದಿನ ವರ್ಷ ನನ್ನನ್ನು–ಮಾನ್ವಿಯವರ ಮಾತಿನಲ್ಲಿ ಡಿಮೋಟ್ ಮಾಡಿ ಕಾರ್ಯದರ್ಶಿಯನ್ನಾಗಿ ಮಾಡಿದರು. ಎಲ್ಲ ಮೂಲಗಳಿಂದ ನಿಧಿ ಸಂಗ್ರಹಿಸಿ ಮಂದಿರಕ್ಕೆ ನೂತನ ಭವನ ನಿರ್ಮಾಣದ ಕಾರ್ಯ ಹಮ್ಮಿಕೊಂಡೆ. ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಬಿ. ರಾಮಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಆಗ ಕೇಂದ್ರ ವಾರ್ತಾ ಸಚಿವರಾಗಿದ್ದ ಆರ್.ಆರ್. ದಿವಾಕರರಿಂದ ಹೊಸ ಕಟ್ಟಡದ ಅಡಿಗಲ್ಲನ್ನಿಡಿಸಿದೆ–ಎಂದರೆ ಎಲ್ಲರೊಡನೆ ಈ ಕಾರ್ಯ ಮಾಡಿದೆ; ಇಟಗಿ ರಾಘವೇಂದ್ರರೊಡನೆ 'ಪ್ರಬಂಧ ಮಾಲೆ' 'ಶ್ರೀಕಾರ'ಗಳನ್ನು ಸಂಪಾದಿಸಿ ಮಂದಿರದಿಂದ ಅವು ಪ್ರಕಟವಾಗುವಂತೆ ಮಾಡಿದೆ; ಹೈದರಾಬಾದಿಗೆ ಯಾವ ಕನ್ನಡ ಸಾಹಿತಿ–ಕಲಾವಿದ ಬಂದರೂ ಮಂದಿರದಲ್ಲೊಂದು ಕಾರ್ಯಕ್ರಮ ಅವರಿಗಾಗಿ ಕಾದಿರುತ್ತಿತ್ತು. ಡಾ॥ ಜಿ.ಎಸ್. ಮೇಲ್ಕೋಟೆಯವರು ಅಧ್ಯಕ್ಷರಾಗಿದ್ದ ನಾಡಹಬ್ಬ ಸಮಿತಿಗೆ ಕಾರ್ಯದರ್ಶಿಯಾಗಿ ಗೆಳೆಯರಾದ ಕುಸುಮಾಕರ ದೇಸಾಯಿ, ವ್ಹಿ.ಎಚ್. ದೇಸಾಯಿ, ಆರ್.ಎಸ್. ದೇಸಾಯಿ ಮೊದಲಾದವರೊಡನೆ ಸತತ ಮೂರು ವರ್ಷ ಒಂಬತ್ತು ದಿನಗಳ ನಾಡಹಬ್ಬ ಕಾರ್ಯಕ್ರಮಗಳು 'ನಭೂತೋ ನ ಭವಿಷ್ಯತಿ' ಎಂಬ ರೀತಿಯಲ್ಲಿ ನಡೆಯುವಂತೆ ದುಡಿದೆ. ನಿಜಲಿಂಗಪ್ಪನವರು, ಕೆ. ಹುನುಂತಯ್ಯನವರು, ಸಿ.ಎಮ್. ಪೂಣಚ್ಚ ಅವರುಗಳಂಥ ಹಿರಿಯ ನಾಯಕರೆಲ್ಲ ಆ ನಾಡಹಬ್ಬ ಕಾರ್ಯಕ್ರಮಗಳಿಗೆ ಬಂದವರೇ. ಸಾಹಿತಿಗಳಲ್ಲಂತೂ ಅಲ್ಲಿಗೆ ಬಾರದಿದ್ದವರೇ ಇಲ್ಲವೆಂದರೂ ಸಲ್ಲುತ್ತದೆ.

## ಅ.ನ.ಕೃ

ಒಂದು ಸಲ ಅ.ನ. ಕೃಷ್ಣರಾಯರು ಬಂದರು. ಅವರಿಗೆ ಹೈದರಾಬಾದು ಅರಿದೇನೂ ಅಲ್ಲ. ಹೈದರಾಬಾದಿನ ಅಳಿಯರವರು. ಆ ಸಲ ಹಳೆಯ ಸಲಿಗೆಯಿಂದ "ನಿಮಗೆ ನಾಡಹಬ್ಬದ ಕೊಡುಗೆಯಾಗಿ ಏನುಬೇಕು?" ಎಂದು ಕೇಳಿದೆ. 'ನನಗೆ ನಿಮ್ಮ ಸರ್ಕಾರ ಪ್ರಕಟಿಸಿರುವ ಅಜಂತಾ ಸಂಪುಟಗಳ ಒಂದು ಸೆಟ್ಟು ಬೇಕು. ಅಜಂತೆಯ ಚಿತ್ರಕಲೆಯ ಬಗ್ಗೆ ನಾನೊಂದು ಹೊತ್ತಿಗೆ ಬರೆಯಬೇಕೆಂಬ ಹೇರಾಸೆ ನನಗೆ,' ಎಂದು ಉತ್ತರವಿತ್ತರವರು. ನಾನು ಮಂಕಾಗಿ ಬಿಟ್ಟೆ. ಒಳ್ಳೆಯ ಕಾಲದಲ್ಲಿಯೇ ಸಾವಿರ ರೂಪಾಯಿಗಳ ಸೆಟ್ಟು ಅದು. ಯಾವುದೋ ಅಗ್ಗದ ಕಾಲದಲ್ಲಿ ಪ್ರಕಟವಾಗಿದ್ದ ಆ ಸಂಪುಟಗಳ ಪ್ರತಿಗಳೆಲ್ಲ ಮಾರಾಟವಾಗಿ ಹತ್ತು ಹನ್ನೆರಡು ಸೆಟ್ಟುಗಳು ಮಾತ್ರ ಉಳಿದಿದ್ದುವು. ಅವುಗಳನ್ನು ಯಾರು ಎಷ್ಟೇ ಬೆಲೆ ಕೊಟ್ಟರೂ ಮಾರಕೂಡದೆಂದು



ಸರಕಾರದ ಆಜ್ಞೆ ಬೇರೆ ಹೊರಟಿದ್ದಿತು. ಪರಿಸ್ಥಿತಿ ಹೀಗಿರುವಾಗ ಕಾಣಿಕೆಯ ಸೆಟ್ಟನ್ನು ಪಡೆವೆನೆಂಬುವರ ಬುದ್ಧಿ ನೆಟ್ಟಗಿಲ್ಲವೆಂದೇ ಹೇಳಬೇಕಾಗಿದ್ದ ಸಂದರ್ಭವದು. ಆದರೂ ಪ್ರಯತ್ನಿಸಿ ನೋಡೋಣವೆಂದು ಹೊರಟೆ. ಆಗ ಎಲ್.ಎನ್. ಗುಪ್ತಾ ಸಾಹೇಬರು ವಿದ್ಯಾ ಇಲಾಖೆಯ ಕಾರ್ಯದರ್ಶಿಗಳಾಗಿದ್ದರು. ಅವರಿಗೆ ಮನವಿ ಪತ್ರ ಸಲ್ಲಿಸಿದೆ. 'ಸಂಜೆ ನಾಲ್ಕು ಘಂಟೆ ಬಂದು ನೋಡು' ಎಂದು ಮಾತ್ರ ಹೇಳಿದರು, ಹೇಳಿದ ಸಮಯಕ್ಕೆ ಹೋದೆ–ಆ ಅಮೂಲ್ಯ ದುರ್ಲಭ ಸಂಪುಟಗಳ ಒಂದು ಸೆಟ್ಟು' 'ಸರಕಾದ ಪರವಾಗಿ ಕನ್ನಡದ ಶ್ರೇಷ್ಠ ಕಾದಂಬರಿಕಾರ ಅ.ನ. ಕೃಷ್ಣರಾಯರಿಗೆ ಕಾಣಿಕೆ' ಎಂಬ ಚೀಟಿಯೊಡನೆ ಸಿದ್ಧವಾಗಿ ಅವರ ಮುಂದಿದ್ದಿತು. ನಾನು ಹೋಗುತ್ತಲೆ ನನಗದನ್ನು ನೀಡಿ, ಕೃಷ್ಣರಾಯರಿಗೆ ನನ್ನ ನಮನಗಳನ್ನು ತಿಳಿಸಿರಿ ಎಂದರವರು. ನನ್ನ ಕಣ್ಣುಗಳನ್ನು ನಾನೇ ನಂಬದಾದೆ. 'ನೀವೇ ನಿಮ್ಮ ಕೈಯಿಂದಲೇ ಇದನ್ನವರಿಗೆ ಏಕೆ ಕೊಡಬಾರದು?' ಎಂದೆ. "ಬಹಳ ಸಂತೋಷದಿಂದ ಬರುತ್ತಿದ್ದೆ; ಆದರೆ ನಾನೀಗ ಮಂತ್ರಿಗಳ ಮನೆಗೆ ಹೋಗಬೇಕು; ಅದುದರಿಂದ ನೀವೇ ನನ್ನ ಪರವಾಗಿ ಅವರಿಗೆ ಅರ್ಪಿಸಿರಿ," ಎಂದರವರು. ಅವರನ್ನು ಹೇಗೆ ಅಭಿನಂದಿಸಬೇಕೆಂಬುದೇ ತೋಚಲಿಲ್ಲ ನನಗೆ. ಏನೇನೋ ತೊದಲಿದೆ. ಅವರೂ ಅರ್ಥ ಮಾಡಿಕೊಂಡರು ನನ್ನ "ಬಿನ್ನಹಕೆ ಬಾಯಿಲ್ಲವಯ್ಯ" ಎಂಬ ಸ್ಥಿತಿಯನ್ನು, ಮುಗುಳ್ನಗೆಯೊಡನೆ ಕೈಕುಲುಕಿ ಬೀಳ್ಕೊಟ್ಟರು.

ಅಂದು ನಾಡಹಬ್ಬದ ಮಹೋತ್ಸವದಲ್ಲಿ ಅ ಸಂಪುಟಗಳ ಅಲಭ್ಯ ಸೆಟ್ಟನ್ನು ಅ.ನ.ಕೃ. ಅವರಿಗೆ ಅರ್ಪಿಸಿದಾಗ ಆ.ನ. ಅವರಿಗೆ ಎಷ್ಟು ಆಶ್ಚರ್ಯ ಆನಂದಗಳೋ ನೆರೆದ ಸಾವಿರಾರು ಸಭಿಕರಿಗೂ ಅಷ್ಟೇ ಆಶ್ಚರ್ಯ ಆನಂದಗಳು. ಎಲ್ಲರೂ ನನ್ನನ್ನು ಪ್ರಶಂಸಿಸಿದ್ದೇ ಪ್ರಶಂಸಿಸಿದ್ದು. ನಾನು ಧ್ವನಿವರ್ಧಕ ಯಂತ್ರದ ಮುಂದೆ ಹೋಗಿ, "ಇದರ ಸರ್ವಶ್ರೇಯಸ್ಸೆಲ್ಲ ಶ್ರೀ ಎಲ್.ಎನ್. ಗುಪ್ತಾ ಅವರಿಗೆ ಸಲ್ಲಬೇಕು," ಎಂದು ಮುಕ್ತ ಕಂಠದಿಂದ ಸಾರಿದೆ. ಪ್ರಚಂಡ ಕರತಾಡನದೊಡನೆ ಸಭಿಕರು ತಮ್ಮ ಮೆಚ್ಚಿಗೆಯನ್ನೂ, ಕೃತಜ್ಞತೆಯನ್ನು ಸೂಚಿಸಿದರು. ಈ ದಕ್ಷತೆ, ಈ ಕರ್ತವ್ಯ ಪರಾಯಣತೆ, ಈ ಜನ ಸೇವಾರತಿ, ಈ ನಿಷ್ಕಪಟ ದೇಶಪ್ರೇಮ–ಎಲ್ಲಿ ಅಡಗಿ ಹೋಗಿರಬಹುದೆಂದು ಈಗಲೂ ಆಗಾಗ ಯೋಚಿಸುತ್ತಿರುತ್ತೇನೆ ನಾನು. ಶ್ರೀ ಗುಪ್ತಾ ಅವರ ಮಾತೃ ಭಾಷೆ ಹಿಂದಿಯಾಗಿದ್ದರೂ ಎಲ್ಲ ಭಾಷೆಗಳ ಬೆಳವಣಿಗೆಯಲ್ಲಿ ಅಷ್ಟೇ ಅಸಕ್ತರಾಗಿದ್ದರವರು. ಇಂಥವರ ಸಂಖ್ಯೆ ಬೆಳೆಯಲೆಂದು ಬಯಸುತ್ತಲೇ ಬಂದಿದ್ದೇನೆ.

ಒಮ್ಮೆ ಕರ್ನಾಟಕಾಂಧ್ರ ಸಾಹಿತ್ಯ ಸಮ್ಮೇಳನವನ್ನು ನಡೆಸಿದೆವು. ಮುಖ್ಯಮಂತ್ರಿ ಬಿ. ರಾಮಕೃಷ್ಣರಾಯರು ಉದ್ಬೋಧಕವಾದ ಉದ್ಘಾಟನ ಭಾಷಣವನ್ನು ನೀಡಿದ್ದರು.

ಅವರ ಏಕ ಮಾತ್ರ ಪುತ್ರ ರಂಗನಾಥರಾವ್ ನನ್ನ ಆತ್ಮೀಯ ಮಿತ್ರರಾಗಿದ್ದರು. ಅವರೂ ನಾನೂ ಈ ಸಮ್ಮೇಳನದ ಸೂತ್ರಧಾರರಾಗಿದ್ದೆವು. ಇದರ ಪರಿಣಾಮವಾಗಿ ಪ್ರಸಿದ್ಧ ತೆಲುಗು ಕವಿಗಳಾಗಿದ್ದ ದಾಶರಥಿ, ಸಿ. ನಾರಾಯಣರೆಡ್ಡಿ, ರಾಮರಾಜು ಮೊದಲಾದವರು ನಿಕಟವರ್ತಿಗಳಾದರು. ಅವರು ಶ್ರೇಷ್ಠ ತೆಲುಗು ಕಾವ್ಯಗಳನ್ನು ನಮಗೆ ಓದಿ ಅರ್ಥವಿಸುವುದೂ, ನಾವು ಕನ್ನಡ ಕೃತಿ ರತ್ನಗಳನ್ನು ಅವರಿಗೆ ಓದಿ ಅರ್ಥ ತಿಳಿಸಿ ಹೇಳುವುದು ನಡೆದುವು. ಒಮ್ಮೆ ಕರ್ನಾಟಕಾಂಧ್ರ ಕವಿ ಸಮ್ಮೇಳನವನ್ನೂ ನಡೆಸಿದೆವು, ತುಂಬ ಜನಪ್ರಿಯವಾಯಿತು.

**ಅಧಿಕಾರಿಯಾಗಿ :**

ಈ ಅವಧಿಯಲ್ಲಿ ಒಬ್ಬ ಅಧಿಕಾರಿಯಾಗಿ ನನ್ನ ಪಾಲಿಗೆ ಬಂದ ಎರಡು ಮೂರು ವಿಷಯಗಳನ್ನು ವಿವರಿಸಲೇಬೇಕು. ಮೊದಲನೆಯದಾಗಿ, ಹೈದರಾಬಾದು ಸಂಸ್ಥಾನದಲ್ಲಿದ್ದ ನೂರಾರು ಜಾಗೀರುಗಳನ್ನು ರದ್ದುಗೊಳಿಸಿ ಜಾಗೀರದಾರರಿಗೆ ಪರಿಹಾರ ಧನವನ್ನು ನೀಡಲಾಗಿದ್ದಿತು. ಇದರಿಂದ ನನ್ನ ಪಾಲಿಗೆ ಎರಡು ಕಾರ್ಯಗಳು ಬಂದಿದ್ದುವು: ಮೊದಲನೆಯದಾಗಿ, ಜಾಗೀರದಾರರು ಮನಬಂದತೆ ವಿಧಿಸಿದ್ದ ಜಾಗೀರುಗಳ ಕಂದಾಯವನ್ನು ಖಾಲ್ಸಾ (ಜಾಗೀರೇತರ ನಿಜಾಮರಾಜ್ಯ)ದಲ್ಲಿರುವ ಪ್ರಮಾಣಕ್ಕೆ ಇಳಿಸುವ ಕೆಲಸ. ಎರಡನೆಯದಾಗಿ ಜಾಗೀರದಾರರಿಗೆ ತಿಂಗಳು ತಿಂಗಳೂ ಪರಿಹಾರ ಧನವನ್ನು ವಿತರಣೆ ಮಾಡುವ ಕೆಲಸ. ಮೊದಲನೆಯವರ ಬಗ್ಗೆ ಪ್ರಸ್ತಾವಗಳನ್ನು ಒಂದು ವಾರದಲ್ಲಿಯೇ ಕಳಿಸಬೇಕೆಂದು ಮೇಲಿನಿಂದ ಆಜ್ಞೆ ಬಂದಿತು. ಮೂವರು ಕ್ಷಿಪ್ರಲಿಪಿಕಾರರನ್ನು ನನಗೆ ಕೊಟ್ಟು ನಾನೀ ಕಾರ್ಯವನ್ನು ಒಂದು ವಾರದಲ್ಲಿ ಮಾಡಿಯೇ ತೀರಬೇಕೆಂದು ಹೇಳಲಾಯಿತು. ನಿತ್ಯ ಹದಿನೆಂಟು ಘಂಟೆಗಳಂತೆ ಕೆಲಸ ಮಾಡಿದೆ. ನಾನು ಹೇಳಿದುದನ್ನು ಬರೆದುಕೊಂಡು ಬರೆದುಕೊಂಡು, ಬೆರಳಚ್ಚಿಸಿ ಬೆರಳಚ್ಚಿಸಿ ಮೂವರೂ ಶೀಘ್ರಲಿಪಿಕಾರರು ಸುಸ್ತಾಗಿ ಹೋದರು. ನಿಗದಿ ಪಡಿಸಿದಂತೆ ಒಂದೇ ವಾರದಲ್ಲಿ ಒಂದುನೂರು ಮೂವತ್ತು ಕಂದಾಯ ಪುನರ್‌ನಿರ್ಣಯ ಪ್ರಸ್ತಾವಗಳನ್ನು ಕಳಿಸಿದೆನು. ಅವುಗಳನ್ನು ಕಳಿಸಲು ಒಂದು ವಾಹನವನ್ನೇ ಗೊತ್ತು ಮಾಡಬೇಕಾಯಿತು. ಅದರ ತುಂಬ ಪ್ರಸ್ತಾವಗಳು ಒಮ್ಮೆಗೆ ಹೋದಾಗ ಕಂದಾಯ ಇಲಾಖೆಯ ಕಾರ್ಯದರ್ಶಿಗಳು ಮಿಕಿ ಮಿಕಿ ನೋಡಿದರಂತೆ. ಅವುಗಳಿಗೆ ಮಂಜೂರಿ ಬರಲು ಮೂರು ವರ್ಷಗಳು ಬೇಕಾದುವು. ನನ್ನ ಒಂದೂ ಪ್ರಸ್ತಾವ ಅಸ್ವೀಕೃತವಾಗಲಿಲ್ಲ. ಹೀಗಿದ್ದೂ ನಾನು ಒಂದು ವಾರದಲ್ಲಿ ಕಳಿಸಿದ ಪ್ರಸ್ತಾವಗಳಿಗೆ ತಮ್ಮ 'ಧೋಬಿ ಮಾರ್ಕ್ ಹಾಕಲು ಮೂರು ವರ್ಷ ತೆಗೆದುಕೊಂಡರವರು!



ಜಾಗೀರದಾರರಿಗೆ ಪರಿಹಾರ ಧನ ವಿತರಣೆ ಮಾಡುವ ಕೆಲಸ ಮನೋವೇಧಕವಾದುದಾಗಿದ್ದಿತು. ಮೊದಲು ವೈಭವದಿಂದ ಮೆರೆದು ಆಗ ಪುಡಿ ಪರಿಹಾರ ಧನಕ್ಕಾಗಿ ಸೈಕಲ್ ರಿಕ್ಷಾಗಳಲ್ಲಿ ನನ್ನ ಕಾರ್ಯಾಲಯಕ್ಕೆ ಬಂದು 'ಕ್ಯೂ' ನಿಲ್ಲುತ್ತಿದ್ದ ಅವರನ್ನು ನೋಡಿದಾಗ ನನ್ನ ಜೀವ ಹುರು ಎನ್ನುತ್ತಿದ್ದಿತು. ನಾನೂ ಕಾರ್ಯಲಯದ ವೇಳೆ ಮುಗಿದ ಮೇಲೂ ರಾತ್ರಿ ಎಂಟು ಒಂಬತ್ತು ಘಂಟೆಗಳವರೆಗೂ ಕುಳಿತು ಅವರ ಕೆಲಸ ಮಾಡುತ್ತಿದ್ದೆ. ಆದರೂ ಅವರು ಘಂಟೆಗಟ್ಟಳೆ ನಿಲ್ಲುವುದು ತಪ್ಪುತ್ತಿರಲಿಲ್ಲ. ಒಮ್ಮೆ ರಾತ್ರಿ ಒಂಬತ್ತು ಘಂಟೆಯಾದ ಮೇಲೆ ಕಾರ್ಯಾಲಯ ಮುಚ್ಚಿ ಹೊರಗೆ ಬಂದೆ; ಒಬ್ಬ ಪರಿಚಿತ ಜಾಗೀರದಾರರು ಎದುರಾದರು. ಅತ್ಯಂತ ದೀನ ಸ್ವರದಲ್ಲಿ ಹೇಳಿದರು: "ರಾಜಾ, ನೀವೀಗ ನನ್ನ ಚೆಕ್ಕು ಕೊಡದಿದ್ದರೆ ನಾಳೆ ನಾನು ಒಂದು ವಾರದ 'ರ್‍ಯಾಷನ್' ಕಳೆದುಕೊಳ್ಳಬೇಕಾಗುವುದು!" ಬಹಳ ಕೆಡುಕೆನಿಸಿತು ನನಗೆ. ಮತ್ತೆ ಕಾರ್ಯಾಲಯ ತೆರೆದು ಅವರ ಚೆಕ್ಕು ಕೊಟ್ಟೇ ಮನೆಗೆ ಹೋದೆ.

ಈ ಜಾಗೀರುಗಳನ್ನು ರದ್ದು ಗೊಳಿಸಿದುದರ ಫಲ ಸ್ವರೂಪವಾಗಿ ಉದ್ಭವಿಸಿದ್ದ ಇನ್ನೊಂದು ಸಮಸ್ಯೆಯ ಪರಿಹಾರವೂ ನನ್ನ ಮೂಲಕ ಆದುದು ನನಗೆ ತುಂಬ ತೃಪ್ತಿಯನ್ನು ತಂದುಕೊಟ್ಟಿತು. ನಾನು ಕಂದಾಯ ಇಲಾಖೆಯ ಅಧೀನ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದ ಕಾಲವದು. ಬಿ. ರಾಮಕೃಷ್ಣರಾಯರು ಆಗ ಕಂದಾಯ ಮಂತ್ರಿಗಳು. ಜಾಗೀರುಗಳು ರದ್ದಾದುದನ್ನು ಅನುಲಕ್ಷಿಸಿ ಜಿಲ್ಲೆಗಳನ್ನೂ ತಾಲ್ಲೂಕುಗಳನ್ನೂ ಪುನರ್ರಚಿಸುವ ಬಗ್ಗೆ ಸಲಹೆಗಳನ್ನು ನೀಡುವುದಕ್ಕಾಗಿ ಸರಕಾರ ಒಂದು ಅಧಿಕಾರಿ ಹಾಗೂ ಅಧಿಕಾರೇತರ ಸದಸ್ಯರನ್ನೊಳಗೊಂಡ ಸಮಿತಿಯನ್ನು ನಿಯಮಿಸಿದ್ದಿತು, ಅದರ ವರದಿ ಸರಕಾರಕ್ಕೆ ಬಂದಿದ್ದಿತು. ಅದನ್ನು ಪ್ರೋಸೆಸ್ ಮಾಡಿ ಸಚಿವ ಸಂಪುಟಕ್ಕೆ ನೋಟು ಸಿದ್ಧಪಡಿಸುವ ಕಾರ್ಯ ನನ್ನ ಪಾಲಿಗೆ ಬಂದಿತು. ವರದಿ ಓದಿ ಅವಾಕ್ಕಾದೆ. ಕಲ್ಯಾಣವನ್ನು ಅದರ ಸುತ್ತಮುತ್ತಲಿನ ಹಳ್ಳಿಗಳೊಡನೆ ಉಸ್ಮಾನಾಬಾದು ಜಿಲ್ಲೆಗೆ ಸೇರಿಸಬೇಕೆಂದು ಸಿಫಾರಸು ಮಾಡಲಾಗಿದ್ದಿತು! ಹೈದರಾಬಾದು ಕರ್ನಾಟಕದ ಪರವಾಗಿ ಅಧಿಕಾರೇತರ ಸದಸ್ಯರಾರು–ಎಂಬುದನ್ನು ಹುಡುಕಿ ನೋಡಿದೆ. ಶ್ರೀ ಕಪಟರಾಳ ಕೃಷ್ಣರಾಯರೇ ಆ ಭಾಗವನ್ನು ಪ್ರತಿನಿಧಿಸುವ ಅಧಿಕಾರೇತರ ಸದಸ್ಯರಾಗಿದ್ದರು! ಅವರಿದಕ್ಕೆ ಹೇಗೆ ಸಮ್ಮತಿಸಿದರೆಂಬುದೇ ಹೊಳೆಯದಾಯಿತು ನನಗೆ. ಇದಾಗಲೇ ಹೈದರಾಬಾದಿನ ಭಾಷಾನುಗುಣ ವಿಭಜನೆಯ ಕೂಗು ಕೇಳಿಬರುತ್ತಿದೆ; ಇದಕ್ಕಾಗಿ ಪಂ.ಜಿ. ರಾಮಾಚಾರ್ಯರು ಕರೆದಿದ್ದ ಖಾಸಗಿ ಸಭೆಯಲ್ಲಿ ಮಹಮೂದಯಾರಜಂಗ್, ಕಾಶಿನಾಥರಾವ್ ವೈದ್ಯ, ಡಾ॥ ಎಂ ಚೆನ್ನಾರೆಡ್ಡಿ ಹಾಗೂ ನನ್ನನ್ನೊಳಗೊಂಡ

ಒಂದು ಉಪಸಮಿತಿಯನ್ನು ರಚಿಸಲಾಗಿದ್ದಿತು–ಈ ಬಗ್ಗೆ ಮಾಹಿತಿ ಸಂಗ್ರಹಿಸಿ ಸಬಲ ಪ್ರಸ್ತಾವವೊಂದನ್ನು ರೂಪಿಸಲು. ಹೈದರಾಬಾದು ಸಂಸ್ಥಾನದ ವಿಭಜನೆಯಾದರೆ ಆಂಧ್ರಕ್ಕೆ ಹೋಗಬೇಕಾದ ಭಾಗಗಳಾವುವು, ಮಹಾರಾಷ್ಟ್ರಕ್ಕೆ ಹೋಗಬೇಕಾದ ಭಾಗಗಳಾವುವು, ಕರ್ನಾಟಕಕ್ಕೆ ಹೋಗಬೇಕಾದ ಭಾಗಗಗಳಾವುವು–ಎಂಬುದನ್ನು ನಿರ್ಧರಿಸುವುದೂ ಆ ಉಪಸಮಿತಿಯ ಉದ್ದೇಶವಾಗಿದ್ದಿತು. ಹೀಗಿರುವಾಗ ಈಗ ಕಲ್ಯಾಣವನ್ನೂ, ಅದರ ಸುತ್ತಮುತ್ತಲಿನ ಹಳ್ಳಿಗಳನ್ನೂ ಮರಾಠವಾಡಾದ ಉಸ್ಮಾನಾಬಾದು ಜಿಲ್ಲೆಗೆ ಸೇರಿಸಿ ಬಿಟ್ಟರೆ ಮುಂದೆ ಅವೆಲ್ಲ ಮಹಾರಾಷ್ಟ್ರಕ್ಕೆ ಹೋಗಿಬಿಡುವುದಿಲ್ಲವೆ?

ಇದೊಂದು ಗಂಭೀರ ಸಮಸ್ಯೆಯಾಗಿ ತೋರಿತು ನನಗೆ. ಕೂಡಲೆ ಕಲ್ಯಾಣದ ನನ್ನ ಗೆಳೆಯರಿಗೆ ವಿಷಯ ವಿವರಿಸಿ ಖಾಸಗಿ ಕಾಗದ ಬರೆದೆ. ಕೂಡಲೇ ಹೊರಟು ಹೈದರಾಬಾದಿಗೆ ಬರಲು ಬಿನ್ನವಿಸಿಕೊಂಡೆ. ಮೂವರು ಮುಂದಾಳುಗಳು ಬಂದರು–ಒಬ್ಬರು ವೀರಶೈವರು, ಒಬ್ಬರು ಆರ್ಯ ಸಮಾಜಿಗಳು, ಒಬ್ಬರು ಮಹಮ್ಮದೀಯರು. ನಾನೇ ಕಂದಾಯ ಮಂತ್ರಿಗಳಿಗೋಂದು ಮನವಿ ಬರೆದುಕೊಟ್ಟು ಅವರಿಂದ ರುಜು ಮಾಡಿಸಿದೆ. ಅವರೊಡನೆ ಬಿ. ರಾಮಕೃಷ್ಣ ರಾಯರ ಬಳಿಗೆ ಹೋಗಿ ಅವರಿಗೆ ಆ ಮನವಿ ಸಲ್ಲಿಸಿದೆ. ಅವರು ಓದಿ, ‘ಇದು ಹೇಗೆ ಸಾಧ್ಯ? ಕಲ್ಯಾಣವಿಲ್ಲದ ಕರ್ನಾಟಕವನ್ನು ನಾನು ಕಲ್ಪಿಸಲೂ ಆರೆ’ ಎಂದು ಉದ್ಗರಿಸಿ ಕಲ್ಯಾಣವೂ, ಅದರ ಸುತ್ತಮುತ್ತಲಿನ ಹಳ್ಳಿಗಳೂ ಬೀದರ್ ಜಿಲ್ಲೆಯಲ್ಲಿಯೇ ಉಳಿಯತಕ್ಕದ್ದೆಂದು ಆಜ್ಞೆ ಮಾಡಿದರು. ಅದನ್ನು ಕಡತಕ್ಕೆ ಸೇರಿಸಿಕೊಂಡು. ನಾನು ಆ ಪ್ರಕಾರವೇ ಸಚಿವ ಸಂಪುಟಕ್ಕೆ ನೋಟು ಸಿದ್ಧಪಡಿಸಿದೆ. ಯಾವ ಬದಲಾವಣೆಯೂ ಇಲ್ಲದೆ ಅದು ಅಂಗೀಕೃತವಾಯಿತು. ‘ಶ್ರೀ’ ಅವರಿಂದ ‘ಕನ್ನಡಿಗರ ಕಾಶಿ’ ಎಂದು ಕರೆಸಿಕೊಂಡಿದ್ದ ಕಲ್ಯಾಣ ಕರ್ನಾಟಕದಲ್ಲಿಯೇ ಉಳಿಯಿತು.

ಉಪಯುಕ್ತ ಉಪಸಮಿತಿಯ ಸಭೆಗಳಿಗೆ ಕಾಶೀನಾಥರಾವ್ ವೈದ್ಯರು ತಮ್ಮ ಕಾರಿನಲ್ಲಿಯೇ ನನ್ನನ್ನು ಕರೆದೊಯ್ಯುತ್ತಿದ್ದರು. ನನ್ನ ಹೆಸರಿನಲ್ಲಿ ‘ಪುರಾಣಿಕ’ ಪದ ಸೇರಿದ್ದರಿಂದಲೋ ಏನೋ ನನ್ನೊಡನೆ ಮನಬಿಚ್ಚಿ ಮಾತನಾಡುತ್ತಿದ್ದರು. ಒಮ್ಮೆ ದಾರಿಯಲ್ಲಿ ಕೇಳಿದೆ; “ವಿಧಾನಸಭೆಗೆ ಚುನಾವಣೆ ನಡೆಸುವ ಬದಲು ಈಗ ಕಾರ್ಪೊರೇಷನ್ ಹಾಗೂ ನಗರಸಭೆಗಳಿಗೇಕೆ ಚುನಾವಣೆಗಳನ್ನು ಹಮ್ಮಿಕೊಂಡಿದ್ದೀರಿ?” ತಟ್ಟನೆ ಬಂದಿತು ಅವರಿಂದ: “ಈ ಚುನಾವಣೆಗಳಲ್ಲಿ ಕಲ್ಲಯ್ಯ ಮಲ್ಲಯ್ಯರನ್ನು ಆರಿಸಿಬಿಟ್ಟೆವೆಂದರೆ ಮುಂದೆ ವಿಧಾನಸಭೆಯ ಚುನಾವಣೆಗಳಲ್ಲಿ ನಮಗೆ ಟಿಕೆಟ್ಟು ಸಿಕ್ಕಲು ಅನುಕೂಲವಾಗುವುದು!” ದಂಗಾದೆ ಈ ಉತ್ತರ ಕೇಳಿ.



ರಾಜಕಾರಣದಲ್ಲಿ ಮತಿಯಿಲ್ಲದ ನನಗೆ ಅದರ ಒಳಗಿನತ್ತ ಮೊದಲ ಇಣಿಕುನೋಟ ದೊರೆಯಿತು. ಹೊರಗಿನ ರಾಷ್ಟ್ರೀಯತೆಯ ಮರೆಯಲ್ಲಿ ಎಂಥ ಕರಾಳ ಕಾರಸ್ಥಾನಗಳು ನಡೆದಿರುತ್ತವೆಯೆಂಬುದರ ಅಲ್ಪ ಪರಿಚಯವಾಯಿತು. ಮುಂದೆ ಇದೇ ಮಹಾಶಯರು ಸಲ್ಪ ಅಪರಾಧಕ್ಕಾಗಿ ಓರ್ವಧೀಮಂತ ಕನ್ನಡಿಗರೆನಿಸಿದ್ದ ಎಚ್.ಜಿ. ಮುದ್ಗಲರು ಲೋಕಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡುವಂತೆ ಮಾಡಿದಾಗ ನನಗಾವ ಅಚ್ಚರಿಯೂ ಆಗಲಿಲ್ಲ.

ವಿಧಾನ ಸಭೆಗಳಿಗೆ ಬೇಗ ಚುನಾವಣೆಗಳು ನಡೆಯದಿರಲು ಬೇರೆ ಕಾರಣಗಳೂ ಇದ್ದುವು. ಸ್ಟೇಟ್ ಕಾಂಗ್ರೆಸ್ಸು ಗೋಸಾವಿ ಕಾಂಗ್ರೆಸ್–ದೇಸಾಯಿ ಕಾಂಗ್ರೆಸ್ ಎಂದು ಇಭ್ಭಾಗವಾಗಿದ್ದಿತು. ಸ್ವಾಮಿ ರಮಾನಂದತೀರ್ಥರ ಅಧ್ಯಕ್ಷತೆಯಲ್ಲಿದ್ದ ಕಾಂಗ್ರೆಸ್ ತಾನೇ ನಿಜವಾದ ಸ್ಟೇಟ್ ಕಾಂಗ್ರೆಸ್ ಎಂದೂ, ದೇಸಾಯಿ ಜನಾರ್ಧನರಾಯರ ಅಧ್ಯಕ್ಷತೆಯಲ್ಲಿ ಜನ್ಮ ತಾಳಿದ್ದ ಇನ್ನೊಂದು ಕಾಂಗ್ರೆಸ್ ತಾನೇ ನಿಜವಾದ ಸ್ಟೇಟ್ ಕಾಂಗ್ರೆಸ್ ಎಂದೂ ಸಾಧಿಸತೊಡಗಿದ್ದುವಾಗ. ಒಂದು ಕಡೆಗೆ ಸ್ವಾಮಿ ರಮಾನಂದ ತೀರ್ಥರು, ಡಾ॥ ಜಿ.ಎಸ್. ಮೇಲ್ಕೋಟೆ ಮೊದಲಾದವರು, ಇನ್ನೊಂದು ಕಡೆಗೆ ದೇಸಾಯಿ ಜನಾರ್ದನರಾಯರು, ಬಿ. ರಾಮಕೃಷ್ಣರಾಯರು, ಜಿ. ರಾಮಾಚಾರ್ಯರು, ವಿದ್ಯಾಲಂಕಾರ ವಿನಾಯಕರಾಯರು. ಕೆ.ವಿ. ರಂಗಾರೆಡ್ಡಿ ಅವರು, ಡಾ॥ ಚೆನ್ನಾರೆಡ್ಡಿ ಅವರು, ಹರಿಶ್ಚಂದ್ರ ಹೆಡಾ, ಗ್ಯಾನಕುಮಾರಿ ಹೆಡಾ ಮೊದಲಾದವರು. 1969ರಲ್ಲಿ ಅಖಿಲ ಭಾರತ ಕಾಂಗ್ರೆಸ್ಸಿಗೆ ಒದಗಿದ ಸ್ಥಿತಿಯೇ ಆಗ ಹೈದರಾಬಾದ ಸ್ಟೇಟ್ ಕಾಂಗ್ರೆಸ್ಸಿಗೆ ಒದಗಿದ್ದಿತು. ಆದರೆ 1969ರ ಪರಿಣಾಮಕ್ಕೆ ತೀರ ಭಿನ್ನವಾದ ಪರಿಣಾಮ ಹೊರಬಿದ್ದಿತು. ಆಗಿನ ಸಿಂಡಿಕೇಟ್ ಎಂದು ಹೆಸರಾಗಿದ್ದ ದೇಸಾಯಿ ಕಾಂಗ್ರೆಸ್ಸೇ ಅಧಿಕಾರಕ್ಕೆ ಬಂದಿತು. ಬಿ. ರಾಮಕೃಷ್ಣರಾಯರೇ ಮುಖ್ಯಮಂತ್ರಿಗಳಾದರು. ಸ್ಟೇಟ್ ಕಾಂಗ್ರೆಸ್ಸಿನ ಅನಭಿಷಕ್ತ ಸಾಮ್ರಾಟರೆಂದೆನಿಸಿದ್ದ ಸ್ವಾಮಿ ರಮಾನಂದ ತೀರ್ಥರ ಪ್ರಭಾವ ಇಳಿಮುಖವಾಯಿತು. ಇದು ನನಗೆ ಬಿಡಿಸಲಾಗದ ಒಗಟೆನ್ನಿಸಿದ್ದಿತು. ನಾನಿನ್ನೂ ಕಲಬುರಗಿಯಲ್ಲಿರುವಾಗಲೇ ಅಲ್ಲಿಗೆ ಪೋಲೀಸ್ ಕ್ರಮದ ನಂತರ ಮೊದಲಸಲ ಬಂದಿದ್ದ ಸ್ವಾಮಿ ರಮಾನಂದ ತೀರ್ಥರಿಗೆ ದೊರೆತಿದ್ದ ಅದ್ಭುತವಾದ ಸ್ವಾಗತವನ್ನು ನೋಡಿದ್ದ ನನಗೆ, ಸಂಸ್ಥಾನದ ಯಾವ ಭಾಗಕ್ಕೆ ಹೋದರೂ ‘ಸ್ವಾಮಿ ರಮಾನಂದ ತೀರ್ಥ ಕೀ ಜೈ’ ಎಂಬ ಜಯ ಘೋಷಗಳನ್ನೇ ಕೇಳಿದ್ದ ನನಗೆ ಈ ರಾಜಕೀಯ ಪ್ರಭಾವದ ಹಸ್ತಾಂತರ ಅಚ್ಚರಿಯನ್ನುಂಟು ಮಾಡಿದ್ದಿತು. ಯಾರಾದರೂ ರಾಜಕೀಯ ತಜ್ಞರು ಇದನ್ನು ವಿಶ್ಲೇಷಿಸಿದರೆ ಅದೊಂದು ರೋಚಕ ವಿಷಯವೇ ಆದೀತು. ಇದನ್ನು ತಿಳಿದುಕೊಳ್ಳಬೇಕೆಂಬ ನನ್ನ ಉತ್ಸುಕತೆಯನ್ನು

ಅದುಮಿಟ್ಟುಕೊಳ್ಳಲು ಆಗದೆ ಕೆ.ವಿ. ವೆಂಟರಂಗಾರೆಡ್ಡಿಯವರನ್ನೇ ಕೇಳಿಬಿಟ್ಟೆ–ಇದರ ರಹಸ್ಯವನ್ನು ಬಿಡಿಸಿ ಹೇಳಲು. ಅವರು ಹೇಳಿದುದು ಸರಿಯೋ ಅಲ್ಲವೊ ಎಂಬುದನ್ನು ನಿರ್ಣಯಿಸಿ ಹೇಳಲಾರೆ. ಆದರೆ ಹುಲ್ಲು–ಬೇರು–ಹಂತದಿಂದ (Grass-root level) ಹಿರಿಯ ನಾಯಕ ಪದವಿಗೇರಿದ್ದ ರಂಗಾರೆಡ್ಡಿಯವರ ಅಭಿಪ್ರಾಯವಿದನ್ನು ಎಲ್ಲಿಯಾದರೂ ಒಂದು ಕಡೆಗೆ ಉಲ್ಲೇಖಿಸುವುದು ಅಗತ್ಯವೆಂದು ಭಾವಿಸಿ ಇಲ್ಲಿ ಉಲ್ಲೇಖಿಸಿದ್ದೇನೆ. ಅವರೆಂದುದು: "ಅಜಿ ದೇಖೊ–ನಾವೆಲ್ಲ ರಾಜಕೀಯಕ್ಕೆ ಪ್ರವೇಶಿಸಿದುದು ಉಪಜೀವನಕ್ಕಾಗಿ, ಉದರ ನಿರ್ವಹಣೆಗಾಗಿ ಅಲ್ಲ. ದೇಶಭಕ್ತಿ, ಜನಸೇವೆ–ಹೀಗೆ ಏನೋ ಒಂದು ದೊಡ್ಡ ಧ್ಯೇಯಕ್ಕೆ ಬಾಗಿ ಸೇರಿದವರು. ನಮ್ಮಲ್ಲೂ ಸ್ವಾರ್ಥವಿಲ್ಲವೆಂದಲ್ಲ: ನಮಗೂ ಸಣ್ಣಪುಟ್ಟ ಸ್ವಾರ್ಥಗಳಿವೆ–ದೊಡ್ಡಸ್ತಿಕೆ ದೊರೆಯಲಿ, ನಮ್ಮ ಹಿಂಬಾಲಕರಿಗೆ ಏನಾದರೂ ಒಳ್ಳೆಯದನ್ನು ಮಾಡುವುದು ಸಾಧ್ಯವಾಗಲಿ–ಇತ್ಯಾದಿ. ಆದರೆ ಹೊಟ್ಟೆ ಹೊರೆದುಕೊಳ್ಳಲೂ ರಾಜಕೀಯವನ್ನೇ ನಾವು ಬಳಸಿಕೊಳ್ಳಬೇಕಿಲ್ಲ. ನಮ್ಮ ಸಂಗಡ ಬಡವರೂ ಇದ್ದಾರೆ; ಅವರಿಗೆ ಅಗತ್ಯ ಬಿದ್ದಾಗ ಕೊಟ್ಟು ನಡಸುವ ಯೋಗ್ಯತೆ ದೇವರ ದಯೆಯಿಂದ ನಮಗೆ ಇವೆ. ಆದರೆ ಆ ಸಂನ್ಯಾಸಿಯದು ಹೀಗಿಲ್ಲ. ಏನಾದರೂ ಹಣಕಾಸಿನ ಪ್ರತಿಫಲ ಪಡೆದೇ ತಮ್ಮ ಜಯಘೋಷ ಮಾಡುವ ಪೋಲಿ ಪೋಕರಿಗಳನ್ನು ಕಟ್ಟಿಕೊಂಡಿದ್ದಾರೆ, ಹಣ ದೊರೆಯುತ್ತಿರುವವರೆಗೆ ಅವರಿಗೆ 'ಜೀದಾಬಾದ್' ಎಂದರು; ಈಗ ಅವರೇ 'ಮುರ್ದಾಬಾದ್' ಎಂದು ಕೂಗುತ್ತಿದ್ದಾರೆ. ಹಣದ ಬಲದಿಂದ ರಾಜಕೀಯ ಮಾಡಲು ಪ್ರಾರಂಭಿಸಿದರೆ ಅದು ಎಲ್ಲಿಗೆ ಹೋಗಿ ಮುಟ್ಟುವುದೋ ಹೇಳಲಾಗುವುದಿಲ್ಲ. ಹಿಂಬಾಲಕರು ಹೆಚ್ಚು ಹೆಚ್ಚು ಹಣ ಕೇಳುತ್ತ ಹೋಗಬಹುದು; ಅದನ್ನು ಪೂರೈಸಲು ಹೆಚ್ಚು ಹೆಚ್ಚು ಹಣ ಸಂಗ್ರಹಿಸಬೇಕಾಗಬಹುದು: ಅದಕ್ಕಾಗಿ ಹೆಚ್ಚು ಹೆಚ್ಚು ಭ್ರಷ್ಟಾಚಾರಕ್ಕಿಳಿಯಬೇಕಾಗಬಹುದು! ಬೇಡಪ್ಪಾ, ಹಣದ ರಾಜಕೀಯ–ಅದು ಮಾಡಿದವರ ಹೆಣ ಹಾಕುವ ರಾಜಕೀಯ!"

ಮುಖ್ಯಮಂತ್ರಿತ್ವ ಬಿ. ರಾಮಕೃಷ್ಣರಾಯರಿಗೆ ಸುಖದ ಸುಪ್ಪತಿಗೆ, ಹೂವಿನ ಹಾಸಿಗೆಯಾಗಿರಲಿಲ್ಲ, ವಿಧಾನ ಸಭೆಯಲ್ಲಿ ಪ್ರಗತಿಪರ ಪ್ರಜಾಸತ್ತಾತ್ಮಕ ರಂಗ (Progressive Demacretic Front)ದ ನಾಲ್ವತ್ತು ನಾಲ್ವತ್ತೊಂದು ಸದಸ್ಯರು! ಆಳುವ ಪಕ್ಷಕ್ಕೆ ಅಲ್ಲಾಡುವ ಬಹುಮತ. ವರಂಗಲ್ ನಲಗೊಂಡಾ ಜಿಲ್ಲೆಗಳು ಕಮ್ಯುನಿಷ್ಟರ ಸ್ವಾಧೀನದಲ್ಲಿ. ಸ್ವತಂತ್ರ ಹೈದರಾಬಾದಿನ ಹುಚ್ಚಿನಲ್ಲಿ ಹುಚ್ಚರಂತೆ ಯುದ್ಧ ಸಿದ್ಧತೆಗೆ ಹಣ ಪೋಲು ಮಾಡಿ ಖಾಲಿ ಖಜಾನೆಯನ್ನು ಬಿಟ್ಟು ಹೋಗಿದ್ದರು ಲಾಯಖ್ ಅಲಿ ಮಂತ್ರಿಮಂಡಲದವರು. ಆದರೂ ಆ ಕುಳ್ಳ ಮುಖ್ಯಮಂತ್ರಿ ತೋರಿದ ಎದೆಗಾರಿಕೆ ಅಸಾಮಾನ್ಯವಾದುದು. ನಾನೇ ಒಂದು ಮತದಾನ ಕೇಂದ್ರಕ್ಕೆ



Presiding Officer ಆಗಿ ಹೋಗಿ ಪಿ.ಡಿ.ಎಫ್. ಜನರ ದಮನದ ದಾರಿಯನ್ನು ಕಣ್ಣಾರೆ ಕಂಡಿದ್ದೆ. ಹೈದರಾಬಾದಿಗೆ ಹತ್ತೇ ಮೈಲು ದೂರದಲ್ಲಿದ್ದ ಆ ಹಳ್ಳಿಗೆ ಮುನ್ನಾ ರಾತ್ರಿ ಮುಟ್ಟಿ ಮತದಾನದ ಕೇಂದ್ರವನ್ನು ಎಲ್ಲ ವಿಧದಿಂದ ಸಜ್ಜುಗೊಳಿಸಿ ಮಲಗಿದೆವು. ಮರುದಿನ ಬೆಳಗಿನ ಎಂಟು ಘಂಟೆಗೆ ಸರಿಯಾಗಿ ಮತದಾನ ಪ್ರಾರಂಭವಾಗಬೇಕಿದ್ದುದರಿಂದ ಬೆಳಗಿನ ನಾಲ್ಕು ಘಂಟೆಗೆ ಎಲ್ಲರನ್ನೂ ಎಬ್ಬಿಸಿದೆ. ಸಾರ್ವತ್ರಿಕ ಚುನಾವಣೆಗಳಿಗೆ ಸಂಬಂಧಿಸಿದಂತೆ ಅದು ನಮ್ಮ ಮೊದಲ ಅನುಭವವಾಗಿದ್ದುದರಿಂದ ಯಾವ ವಿಷಯವನ್ನೂ ಸಣ್ಣದೆಂದು ಉಪೇಕ್ಷಿಸಲಿಲ್ಲ ನಾನು ಬಹಿರ್ದೆಶೆಗೆಂದು ಪಕ್ಕದ ಹೊಲದ ಬೆಳೆಗಳೊಳಗೆ ಹೋಗಿದ್ದ ನನ್ನ ಸಹಾಯಾಧಿಕಾರಿಗಳು ಹೌಹಾರಿ ಹಿಂದುರುಗಿದರು. ಅವರ ಮುಖ ಭಯದಿಂದ ಕಪ್ಪಿಟ್ಟಿದ್ದುವು. ಕಾರಣ ಕೇಳಿದೆ. ಆ ಬೆಳೆಯ ಮಧ್ಯದಲ್ಲಿ ಆ ವೇಳೆಯಲ್ಲಿ ಫ್ರಂಟಿನವರ ಕೊನೆಯ ಚುನಾವಣಾ ಪ್ರಚಾರ ಸಭೆ ಸೇರಿದ್ದಿತಂದೆ–ಮತದಾನಕ್ಕೆ ಒಂದು ದಿನ ಮುಂಚೆ ಚುನಾವಣಾ ಸಭೆಗಳು ನಿಲ್ಲಬೇಕೆಂಬ ಕಟ್ಟಳೆಯನ್ನು ಮೀರಿ ಆಗ ಫ್ರಂಟಿನ ಮುಖಂಡ ಬಿಗಿದ ಮುಷ್ಟಿಯ ತನ್ನ ದಷ್ಟಪುಷ್ಟ ಹಸ್ತವನ್ನು ಮುಂದೆ ಮಾಡಿ ಗರ್ಜಿಸಿದನಂತೆ:" ಇಕೊ ನೋಡಿರಿ: ಇದು ಹಸ್ತ–ನಮ್ಮ ಚುನಾವಣಾ ಚಿಹ್ನೆ. ಇದಕ್ಕೆ ನೀವು ಮತಕೊಟ್ಟಿರೋ ನಿಮ್ಮ ಕೈಕುಲಕುವೆವು; ಇದಕ್ಕೆ ವಿರುದ್ಧವಾಗಿ ಮತಕೊಟ್ಟಿರೋ, ಈ ಹಸ್ತ ನಿಮ್ಮ ಮಸ್ತಕದ ಮೇಲೆ ಅಪ್ಪಳಿಸುವುದು!"

ಇದನ್ನು ವಿವರಿಸಿದ ನನ್ನ ಸಹಾಯಕರು, "ಸಾಹೇಬರೇ, ಪ್ರಾಣಕ್ಕಿಂತ ಈ ನೌಕರಿ ಹೆಚ್ಚಿನದಲ್ಲ. ಬಂದದ್ದು ಬರಲಿ, ಹಿಂದಿರುಗಿ ಹೋಗಿಬಿಡೋಣ! ಪ್ರಾಣ ಉಳಿದರೆ ಮತ್ತೇನನ್ನಾದರೂ ಕಾಣಬಹುದು! ಪ್ರಾಣವೇ ಹೋದರೆ?" ಪೋಲೀಸ್ ಕಾರ್ಯಾಚರಣೆ ಮುಗಿದ ಮೇಲೆಯೂ ಪ್ರಾಣಕ್ಕೆ ಅಪಾಯವೆಂಬುದು ತಪ್ಪಲಿಲ್ಲವಲ್ಲ–ಎಂದು ನಾನೂ ತಲ್ಲಣಿಸಿದೆ. ಆದರೂ ಇದ್ದಬಿದ್ದ ಧೈರ್ಯವನ್ನೆಲ್ಲ ಒಟ್ಟುಗೂಡಿಸಿ, ಅವರನ್ನೂ ಏನೇನೋ ಧೈರ್ಯ ಹೇಳಿ ಒಲಿಸಿ ಒಪ್ಪಿಸಿ ಮತದಾನವನ್ನು ಪ್ರಾರಂಭಿಸಿದೆ. ಪುಣ್ಯಕ್ಕೆ ಯಾವ ಅಪ್ರಿಯ ಘಟನೆಗಳೂ ಜರುಗಲಿಲ್ಲ. 'ಒಬ್ಬ ಹಳ್ಳಿಯ ಮುಸ್ಲಿಂ ಮಹಿಳೆ ಬಂದು ನಮ್ಮೂರಿನವರೆಲ್ಲ ಯಾರಿಗೆ ಮತ ಹಾಕಿದರು?' ಎಂದು ನನ್ನನ್ನು ಕೇಳಿದಳು. ನಾನು ಇದು ಗುಟ್ಟಿನ ವಿಷಯ; ಹೇಳಕೂಡದು ಎಂದೆ, ಆಕೆ ಗಾಬರಿಯಾಗಿ 'ಅರೆ ಅಲ್ಲಾ, ಅಬ್ ಕ್ಯಾ ಕರನಾ?' ಎಂದು ಓಡಿ ಹೋಗಿಬಿಟ್ಟಳು. ಆಗಿನ್ನೂ ಮುಖ್ಯಮಂತ್ರಿಗಳಾಗಿದ್ದ ಎಂ.ಕೆ. ವೆಲ್ಲೋಡಿಯವರೂ, ಅವರ ಪತ್ನಿ ಕುಟ್ಟಿ ವೆಲ್ಲೋಡಿಯವರೂ ಸಂಜೆ ನಾಲ್ಕು ಘಂಟೆಯ ಸಮಯಕ್ಕೆ ಅಲ್ಲಿಗೆ ಬಂದುಹೋದರು. ಕುಟ್ಟಿ ವೆಲ್ಲೋಡಿಯವರು, 'ಹೆಂಗಳೆಯರು ಯಾರಿಗೆ ಮತ

ಕೊಡುತ್ತಿದ್ದಾರೆ?' ಎಂದು ನನ್ನನ್ನು ಕೇಳಿದರು. ಎಂ.ಕೆ. ವಲ್ಲೋಡಿಯವರು ರೇಗಿ ಹೆಂಡತಿಯನ್ನು ಕಾರಿನೊಳಕ್ಕೆ ದಬ್ಬಿ, ತಾವೂ ಕುಳಿತು ಹೋಗಿಬಿಟ್ಟರು. ರಾತ್ರಿ ಮತಪೆಟ್ಟಿಗೆಗಳನ್ನೂ, ಇತರ ಲವಾಜಿಮೆಗಳನ್ನೂ ರಿಟರ್ನಿಂಗ್ ಆಫೀಸರರಿಗೆ ಒಪ್ಪಿಸಿ ಮನೆ ಮುಟ್ಟಿದಾಗ ಮತ್ತೆ ಮರು ಹುಟ್ಟು ಪಡೆದಂತೆನಿಸಿದ್ದಿತು ನನಗೆ. ನಿರೀಕ್ಷಿಸಿದ್ದಂತೆ ಅಲ್ಲಿಂದ ಕೈಯೇ ಗೆದ್ದಿದ್ದಿತು.

ಇಂಥ ವಿರೋಧಿ ಪಕ್ಷವನ್ನು ಎದುರಿಸಿ ತಮ್ಮ ಹೊಯ್ದಾಡುವ ಹಡಗವನ್ನು ಅನುಭವಿಕ ನಾವಿಕನಂತೆ ನಡೆಸಿಕೊಂಡು ಹೊರಟಿದ್ದರು ಬಿ ರಾಮಕೃಷ್ಣರಾಯರು. ಅವರ ಮಂತ್ರಿಮಂಡಲದಲ್ಲಿ ಕಲಬುರಿಗಿಯ ಗಣ್ಯ ವಕೀಲರೂ, ಕರ್ನಾಟಕ ಪರಿಷತ್ತಿನ ಮಾಜಿ ಅಧ್ಯಕ್ಷರೂ, ಲೋಕಸಭೆಯ ಮಾಜಿ ಸದಸ್ಯರೂ ಆಗಿದ್ದ ಅಣ್ಣಾರಾವ್ ಗಣಮುಖಿಯವರು ಸ್ಥಾನಿಕ ಸ್ವರಾಜ್ಯ, ವಸತಿ ಹಾಗೂ ನೀರು ಪೂರೈಕೆಯ ಮಂತ್ರಿಗಳಾಗಿದ್ದರು. ಅವರು ನನ್ನ ಮೇಲಿನ ವಿಶ್ವಾಸದಿಂದ ನನ್ನನ್ನು ತಮ್ಮ ಆಪ್ತ ಕಾರ್ಯದರ್ಶಿಯಾಗಿ ಆರಿಸಿಕೊಂಡಿದ್ದರು. ನಾನೂ ಅವರಿಗೆ ಒಳ್ಳೆಯ ಹೆಸರು ತರಬೇಕೆಂಬ ಹಂಬಲದಿಂದ ಹಗಲಿರುಳೆನ್ನದೆ ದುಡಿಯತೊಡಗಿದೆ. ಅವರಂತೂ ನನ್ನನ್ನು ಪೂರ್ಣ ನಂಬಿಬಿಟ್ಟಿದ್ದರು. ಅಂಥವರ ಮನಸ್ಸಿನಲ್ಲಿಯೂ ನನ್ನ ಬಗ್ಗೆ ಬೇಸರ ಹುಟ್ಟಿಸುವ ಪ್ರಯತ್ನಗಳೂ ನಡೆಯದಿರಲಿಲ್ಲ. ಆ ಪ್ರಯತ್ನಗಳನ್ನು ಮಾಡಿದವರಾರೆಂಬುದು ಗೊತ್ತಾದಾಗ ನನಗೆ ಆಘಾತ! ನನ್ನ ಮನೆಗೆ ಬಂದು ನನ್ನಿಂದ ತಮ್ಮ ಕೆಲಸಗಳನ್ನು ಮಾಡಿಸಿಕೊಂಡು, ಅಣ್ಣಾರಾಯರ ಮನೆಗೆ ಹೋಗಿ ನನ್ನ ಮೇಲೆ ಚಾಡಿ ಹೇಳುತ್ತಿದ್ದರವರು. ನರರ ನೀಚತನದ ನವ ನವ ನಮೂನೆಗಳನ್ನು ನೋಡತೊಡಗಿದೆ. ರಾಜಕಾರಣಿಗಳು ಎಂಥ ಸತ್ಯವಂತರೆಂಬುದನ್ನು ಎತ್ತಿ ತೋರಿಸುವ ಘಟನೆಯೊಂದು ನಡೆದುಹೋಯಿತು. ವಿಧಾನಸಭೆಯ ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ನಡೆಯಿತು. ಒಬ್ಬ ಪಕ್ಷೇತರ ಹುರಿಯಾಳು ಆಯ್ಕೆಯ ಕಣಕ್ಕಿಳಿದರು. ಅವರು ಇಳಿಯುವಂತೆ ಹುರಿದುಂಬಿಸಿದವರು ಆಳುವ ಪಕ್ಷದಲ್ಲಿದ್ದ ಅವರ ಸ್ನೇಹಿತರು. ಆಯ್ಕೆಯ ಪರಿಣಾಮ ಹೊರಬಿದ್ದಿತು. ಅವರಿಗೇ ಒಂದೇ ಒಂದು ಮತ ದೊರೆತಿದ್ದಿತು. ಅದು ಅವರದೇ ಮತ. ತನಗೆ ಮಾತು ಕೊಟ್ಟಿದ್ದ ಸ್ನೇಹಿತರೆಲ್ಲರ ಬಳಿಗೆ ಹೋದರು; 'ಮಾತು ಕೊಟ್ಟು ಮೋಸಗೊಳಿಸುವುದು ನ್ಯಾಯವೆ?' ಎಂದು ಕೆರಳಿ ಕೇಳಿದರು. ಎಲ್ಲರೂ ಒಂದೇ ಉತ್ತರವಿತ್ತರು: "ಆ ಒಂದು ಮತ ನಿನಗೆ ಸಿಕ್ಕಿದೆಯಲ್ಲ–ಅದು ಯಾರದೆಂದು ತಿಳಿದಿರುವಿ? ಅದು ನಾನು ಕೊಟ್ಟ ಮತವೇ."

ಬರಬರುತ್ತ ಭೀಭತ್ಸವೆನಿಸಿತೊಡಗಿತು ನನಗೆ ರಾಜಕಾರಣದ ಒಳಗಿನ ಕರಾಳ ಸ್ವರೂಪ. ಆದರೂ ಮಂತ್ರಿಗಳಾಗಿದ್ದವರು ಸ್ವಾತಂತ್ರ್ಯ ಸಂಗ್ರಾಮದ ಅಗ್ನಿ ಪರೀಕ್ಷೆಯಲ್ಲಿ



ಉತ್ತೀರ್ಣರಾಗಿ ಬಂದವರಾಗಿದ್ದುದರಿಂದ ಆಡಳಿತದಲ್ಲಿ ಆಕ್ರಮಗಳಿಗೆ ಅಷ್ಟೊಂದು ಆಸ್ಪದ ಸಿಕ್ಕಲಿಲ್ಲ. ಆದರೂ ಅವರಲ್ಲಿಯೂ ಸ್ವಹಿತದ ದೃಷ್ಟಿಯಿಂದಲೇ ಸಾರ್ವಜನಿಕ ಸಮಸ್ಯೆಗಳನ್ನು ನೋಡುವವರು ಇಲ್ಲದಿರಲಿಲ್ಲ. ಒಬ್ಬ ಮಂತ್ರಿಗಳಿದ್ದರು. ಅವರು ಭೂ ಪರಿಮಿತಿ ಕುಟುಂಬವೊಂದಕ್ಕೆ ಕನಿಷ್ಠ 130 ಎಕರೆಗಳಷ್ಟಾದರೂ ಇರಬೇಕೆಂದು ಪ್ರತಿಯೊಂದು ಭೂ ಸುಧಾರಣ ಸಮಿತಿಯ ಸಭೆಯಲ್ಲಿಯೂ ಮೇಜು ಗುದ್ದಿಗುದ್ದಿ ಜೋರಾಗಿ ಹೇಳುತ್ತಿದ್ದರು. ತಮ್ಮ ವಾದಕ್ಕೆ ಆಧಾರಗಳನ್ನೂ ಧಾರಾಳವಾಗಿ ಕೊಡುತ್ತಿದ್ದರು. ನನಗೆ ಈ 130ರ ಅಂಕಿಯೇ ಏಕೆ? 120 ಏಕಲ್ಲ, 140 ಏಕಲ್ಲ– ಎಂಬ ಸಂಶಯವಿದ್ದೇ ಇದ್ದಿತು. ಖಾಸಗಿಯಾಗಿ ಮಾಹಿತಿ ತರಿಸಿಕೊಂಡಾಗ ಅವರ ಕುಟುಂಬಕ್ಕೆ 130 ಎಕರೆ ಭೂಮಿ ಇದ್ದುದು ಗೊತ್ತಾಯಿತು!

## ಅಣ್ಣಾರಾವ್

ಎಲ್ಲರೂ ಅಪ್ರಮುಖವೆಂದು ಉಪೇಕ್ಷಿಸಿದ್ದ ಇಲಾಖೆಗಳೇ ಅಣ್ಣಾರಾಯರ ಪಾಲಿಗೆ ಬಂದಿದ್ದುವೆಂದು ಎಲ್ಲರೂ ಭಾವಿಸಿದ್ದರು. ಆದರೆ ಅವೇ ಇಲಾಖೆಗಳನ್ನು ಪುನಶ್ಚೇತಗೊಳಿಸಿ ನಗರ ನಗರಗಳಲ್ಲಿ, ಪಂಚಾಯಿತು ಹಳ್ಳಿಗಳಲ್ಲಿ ಅತ್ಯಂತ ವ್ಯಾಪಕವಾದ ಪ್ರಮಾಣದಲ್ಲಿ ಜನ ಕಲ್ಯಾಣ ಕಾರ್ಯಗಳನ್ನು ಪ್ರಾರಂಭಿಸಿದಾಗ ಅವೇ ಇಲಾಖೆಗಳಿಗೆ ಎಂದಿಲ್ಲದ ಮಹತ್ವ ಬರತೊಡಗಿತು. ಜಿಲ್ಲೆ ಜಿಲ್ಲೆಗೆ ಹೋಗಿ, ಆ ಜಿಲ್ಲೆಯಲ್ಲಿ ಆಗಬೇಕಾಗಿದ್ದ ಜನಹಿತ ಕಾರ್ಯಗಳನ್ನು ಗುರುತಿಸಿ, ಅಲ್ಲಿಯೇ ಅವುಗಳ ಅಂದಾಜು ಪಟ್ಟಿಗಳನ್ನು ತಯಾರಿಸಿ, ಸ್ಥಳದಲ್ಲಿಯೇ ಮಂಜೂರಿ ನೀಡಿ ಬರತೊಡಗಿದೆವು. ಅನೇಕ ನಗರ ಸಭೆಗಳಲ್ಲಿ ಕುಡಿಯುವ ನೀರಿನ ಯೋಜನೆಯೋ, ಚರಂಡಿ ಯೋಜನೆಯೋ, ರಸ್ತೆ ನಿರ್ಮಾಣ ಯೋಜನೆಗಳೋ ಪ್ರಾರಂಭವಾದುವು. ಬೀಡ ಜಿಲ್ಲೆಯಲ್ಲಿ ಕಪಿಲಧಾರಾ ಎಂಬುದೊಂದು ಕ್ಷೇತ್ರ. ಬಹಳ ನಿಸರ್ಗರಮಣೀಯವಾದ ಕ್ಷೇತ್ರ. ಅಲ್ಲಿ ಮಹಾರಾಷ್ಟ್ರದ ಮಹಾತ್ಮರಲ್ಲೊಬ್ಬರಾದ ಮನ್ಮಥಸ್ವಾಮಿಗಳವರ ಸಮಾಧಿಯಿದ್ದು ಬಹುದೊಡ್ಡ ಜಾತ್ರೆ ನಡೆಯುತ್ತದೆ. ಅಲ್ಲಿಗೆ ಹೋಗಲು ಕಾಲು ದಾರಿ ಮಾತ್ರವಿದ್ದಿತು. ಜನರು ಬಿದ್ದು ಸಾಯುವುದು ನಡೆದಿತ್ತು. ಅದಕ್ಕೆ ಯೋಗ್ಯ ಮಾರ್ಗ ನಿರ್ಮಾಣ ಮಾಡಿಸಿದೆವು. ಸಹಸ್ರಾವಧಿ ಭಕ್ತರು ಸಂತುಷ್ಟರಾದರು. ಗ್ರಾಮ ಪಂಚಾಯತಿಗಳಲ್ಲಿಯೂ ಹಳ್ಳಿಗರ ಹಿತಕ್ಕಾಗಿ ಅನೇಕ ಚಿಕ್ಕ ದೊಡ್ಡ ಕಾರ್ಯಗಳು ಪ್ರಾರಂಭವಾದವು. ನಾನು ಅವುಗಳ ಬಗ್ಗೆ ಪತ್ರಿಕೆಗಳಿಗೆ ಪ್ರಕಟನೆಗಳನ್ನು ಕಳಿಸತೊಡಗಿದೆ. ಪತ್ರಿಕೆಗಳ ಅಗತ್ಯಗಳನ್ನು, ಭಾಷೆ ಶೈಲಿ ಮೊದಲಾದವುಗಳನ್ನು ಬಲ್ಲ ನಾನು ಅವರಿಗೆ ಒಗ್ಗುವ ರೀತಿಯಲ್ಲಿಯೇ ಬರೆದು ಕಳಿಸುತ್ತಿದ್ದೆ. ನಿರಾಯಾಸವಾಗಿ ಅವುಗಳನ್ನವರು ಪ್ರಕಟಿಸಿ ಬಿಡುತ್ತಿದ್ದರು. ಅಣ್ಣಾ

ರಾಯರಿಗೆ ಅದ್ಭುತ ಪ್ರಚಾರ ಸಿಕ್ಕತೊಡಗಿತು. ಒಮ್ಮೊಮ್ಮೆ ಮುಖ್ಯಮಂತ್ರಿಗೂ ದೊರೆಯದಿದ್ದಷ್ಟು ಸ್ಥಳ ಪತ್ರಿಕೆಗಳಲ್ಲಿ ಅವರಿಗೆ ದೊರೆಯತೊಡಗಿತು. ಕೆಲವರಿಗೆ ಅಸೂಯೆಯೂ ಉಂಟಾಗದಿರಲಿಲ್ಲ.

ಇದರಿಂದ ಉತ್ಸಾಹಿತರಾದ ನಾವು ದೆಹಲಿಯ ಯಾತ್ರೆ ಕೈಕೊಂಡೆವು. ಅಲ್ಲಿ ಹೈದರಾಬಾದು ಹೌಸಿನಲ್ಲಿಳಿದೆವು. ದೆಹಲಿ ಆಗ್ರಾಗಳಲ್ಲಿ ನೋಡಬೇಕಾದುದನ್ನೆಲ್ಲ ನೋಡಿದೆವು. ನನ್ನ ಮನದ ಮೇಲೆ ಅಚ್ಚಳಿಯದೆ ಉಳಿದುದು 'ರಾಜಘಾಟ' ಮಾತ್ರ. ಮುಂದೆ ರಾಜಘಾಟಿನ ಬಗ್ಗೆ ಕವಿತೆಯೊಂದು ಮೂಡಿ ಬಂದಿತು. ಹರಿದ್ವಾರ ಹೃಷಿಕೇಶಗಳಿಗೂ ಹೋಗಿ ಬಂದೆ. ಅಲ್ಲಿ ಶ್ರೀ ಶಿವಾನಂದ ಸ್ವಾಮಿಗಳವರ ದರ್ಶನ ಪಡೆದೆ. 'ಗಂಗಾಮಾಯಿ'ಯ ಸುಧಾ ಸ್ಪರ್ಶವನ್ನೂ ಪಡೆದು ಪುಲಕಿತನಾದೆ. ಹಿಮಗಿರಿಯ ಮುಂದೆ ನಿಂತು ಮೈಮರೆತೆ. ಕೊನೆಗೆ ಮನದಲ್ಲಿ ಉಳಿದುವು ನಾಲ್ಕೇ–ದೆಹಲಿಯ ರಾಜಘಾಟ, ಆಗ್ರಾದ ತಾಜಮಹಲು, ಹರದ್ವಾರದ ಗಂಗಾನದಿ, ಹಿಮಾಲಯ ಪರ್ವತಶ್ರೇಣಿ. ಇವುಗಳನ್ನು ಆ ಮೇಲೆಯೂ ಎಷ್ಟೋ ಸಲ ನೋಡಿ ನವಿರಾಂತಿದ್ದೇನೆ. ಇವುಗಳನ್ನು ಎಷ್ಟು ಸಲ ನೋಡಿದರೂ ತೃಪ್ತಿಯಿಲ್ಲ ನನಗೆ.

ದೆಹಲಿಯ ಯಾತ್ರೆ ನಮಗೆ ಕ್ಷಿಪ್ರ ಫಲ ಕೊಡದಿದ್ದರೂ ನಾವು ಒಯ್ದಿದ್ದ ಪ್ರಸ್ತಾವಗಳು ಸಮಗ್ರ ಭಾರತದ ದೃಷ್ಟಿಯಿಂದ ಪರಿಶೀಲಿಸಲ್ಪಡತೊಡಗಿದುವು. ಮೊದಲನೆಯ ಪ್ರಸ್ತಾವ ಗ್ರಾಮಾಂತರ ಪ್ರದೇಶಗಳ ಕುಡಿಯುವ ನೀರಿಗೆ ಸಂಬಂಧಿಸಿದುದು. ಆ ಬಗ್ಗೆ ಅಲ್ಲಿ ಆಲೋಚನೆಯನ್ನೇ ಮಾಡಿರಲಿಲ್ಲ ಯಾರೂ. ಆದರೆ ಕುಡಿಯುವ ನೀರಿನ ಕೊರತೆಯುಳ್ಳ ಹಳ್ಳಿಗಳಿಗೂ ನೀರಿನ ಪೂರೈಕೆ ಮಾಡುವ ಯೋಜನೆಯೊಂದನ್ನು ರೂಪಿಸಬೇಕೆಂಬುದರ ಅಗತ್ಯವನ್ನು ಒಪ್ಪಿಕೊಂಡರವರು. ಯೋಜನಾ ಆಯೋಗದಲ್ಲಿ ಸಂಬಂಧಪಟ್ಟವರೊಡನೆ ಮಾತುಕತೆ ನಡೆಸಲು ಸಲಹೆ ನೀಡಲಾಯಿತು ನಮಗೆ. ಮಂತ್ರಿಗಳನ್ನು ಮನೆಯಲ್ಲಿಯೇ ಬಿಟ್ಟು ನಾನೊಬ್ಬನೇ ಯೋಜನಾ ಭವನಕ್ಕೆ ಹೋದೆ. ಅಲ್ಲಿ ಯಾರನ್ನು ವಿಚಾರಿಸಿದರೂ ಹಳ್ಳಿಗಳ ಕುಡಿಯುವ ನೀರಿನ ವಿಷಯ ಯಾರಿಗೆ ಸಂಬಂಧಪಟ್ಟುದೆಂಬುದು ತಿಳಿಯಲಿಲ್ಲ. ಕೊಠಡಿಯಿಂದ ಕೊಠಡಿಗೆ ಓಡಾಡಿದೆ. ಕೊನೆಗೂ ಒಬ್ಬ ಆಸಕ್ತ ಉಪಕಾರ್ಯದರ್ಶಿಗಳು ಸಿಕ್ಕರು. ಕೇರಳೀಯರು, ಸಹಜವಾಗಿಯೇ ಅವರಿಗೆ ಹಳ್ಳಿಗಳ ಕಡೆಗೆ ಸ್ವಲ್ಪ ಒಲವು ಇದ್ದಿತು. ನನ್ನ ಟಿಪ್ಪಣಿ ನೋಡಿ 'ಇಂತಹ ಮಹತ್ವದ ವಿಷಯವನ್ನು ಇದುವರೆಗೂ ಉಪೇಕ್ಷಿಸಿ ಬಿಟ್ಟಿರುವೆವಲ್ಲ' ಎಂದು ಉದ್ಗರಿಸಿದರು. ನನ್ನೆದುರಿಗೇ ಶೀಘ್ರಲಿಪಿಕಾರರನ್ನು ಕರೆಸಿ ಭಾರತದ ಎಲ್ಲ ರಾಜ್ಯಗಳ ಸ್ಥಾನಿಕ ಸ್ವರಾಜ್ಯ ಇಲಾಖೆಗಳ ಕಾರ್ಯದರ್ಶಿಗಳಿಗೆ ನನ್ನ ನೋಟಿನ ಪ್ರತಿ ಲಗತ್ತಿಸಿ



ಕಾಗದವೊಂದನ್ನು ಬರೆದರು–"ಹೈದರಾಬಾದು ರಾಜ್ಯದಲ್ಲಿ 'ವೆಲ್‌ಸಿಂಕಿಂಗ್ ಡಿಪಾರ್ಟ್‌ಮೆಂಟ್' ಎಂಬ ಒಂದು ಪ್ರತ್ಯೇಕ ಇಲಾಖೆಯೇ ಇದೆ–ಹಳ್ಳಿಗಳಿಗೆ ಶುದ್ಧವಾದ ಕುಡಿಯುವ ನೀರನ್ನು ಒದಗಿಸಲು, ನಿಮ್ಮಲ್ಲಿಯೂ ಆ ವ್ಯವಸ್ಥೆ ಇದೆಯೆ? ಇಲ್ಲದಿದ್ದರೆ ಈಗಲಾದರೂ ಆ ವ್ಯವಸ್ಥೆ ಮಾಡಿಕೊಳ್ಳುವುದು ವಿಹಿತವಲ್ಲವೆ?" ಇತ್ಯಾದಿ ವಿಷಯ ಅದರಲ್ಲಿದ್ದಿತು. ನನಗೂ ಅದರದೊಂದು ಪ್ರತಿ 'ಮಾರ್ಕ್' ಮಾಡಿದರು. ಅಷ್ಟೆಲ್ಲ ಕಷ್ಟಪಟ್ಟುದಕ್ಕಾಗಿ ದೊರೆತ ಫಲವೆಂದರೆ ಆ ಪ್ರತಿ! ಅದನ್ನು ಕೈಯಲ್ಲಿ ಹಿಡಿದುಕೊಂಡು ಹೈದರಾಬಾದು ಹೌಸಿಗೆ ಮರಳಿದೆ. ಅಣ್ಣಾರಾಯರು ಎಲ್ಲ ಕೇಳಿ ಹೊಟ್ಟೆ ತುಂಬ ನಕ್ಕರು.

ಮರುದಿನ ವಸತಿ ಸಮಸ್ಯೆಯ ಬಗ್ಗೆ ಚರ್ಚೆ, ಸಂಬಂಧಪಟ್ಟ ಸಚಿವರು ಸರದಾರ ಸ್ವರ್ಣಸಿಂಗರು; ಸಂಬಂಧಪಟ್ಟ ಕಾರ್ಯದರ್ಶಿಗಳು ಎಂ.ಕೆ. ವೆಲ್ಲೊಡಿಯವರು. ಸಚಿವರು ಸಭ್ಯರು; ಕಾರ್ಯದರ್ಶಿಗಳು ಹೈದರಾಬಾದಿನಲ್ಲಿ ಮುಖ್ಯಮಂತ್ರಿಗಳಾಗಿ ಮೆರೆದು ಬಂದಿದ್ದವರು. ಆದರೂ ಪ್ರಯೋಜನ ನಿರೀಕ್ಷಿಸಿದಷ್ಟು ದೊರೆಯಲಿಲ್ಲ. ನಾವು ನಮ್ಮೊಡನೆ ಕೇವಲ ಏಳುನೂರು ರೂಪಾಯಿಗಳಲ್ಲಿ ಕಟ್ಟಬಹುದಾದ ಹಳ್ಳಿಯ ಮನೆಯ ನಕ್ಷೆ, ಅಂದಾಜು ಪತ್ರ ಮೊದಲಾದುವನ್ನು ಒಯ್ದಿದ್ದೆವು. ಆಗ ಅದಕ್ಕೆ ಯೋಜನಾಂತರ್ಗತ ಸ್ಥಾನ ಸಿಕ್ಕಿದ್ದರೆ ಹೈದರಾಬಾದು ರಾಜ್ಯದಲ್ಲಿಯೇ ಒಂದು ಲಕ್ಷ ಬಡ ಕುಟುಂಬಗಳಿಗೆ ಅಂಥ ಮನೆಗಳನ್ನು ಕಟ್ಟಿಸಿಕೊಡಬೇಕೆಂದಿದ್ದೆವು. ಆದರೆ ದುರ್ದೈವದ ಸಂಗತಿಯೆಂದರೆ ಅದಕ್ಕೆ ಕೈಯಿಕ್ಕಲು ಕಾಲ ಪಕ್ವವಾಗಿಲ್ಲವೆಂದೇ ಅವರು ತೀರ್ಮಾನಿಸಿಬಿಟ್ಟರು. ಹೈದರಾಬಾದು ಸೇರಿದಂತೆ ನಾಲ್ಕಾರು ನಗರಗಳಲ್ಲಿ ವಸತಿ ಸೌಕರ್ಯವನ್ನು ಕಲ್ಪಿಸಲು 21 ಲಕ್ಷ ರೂಪಾಯಿಗಳನ್ನು ಒದಗಿಸಿದರು. ಬಂದು ಬರಿಗೈಯಿಂದ ಹಿಂದಿರುಗುವಂತಾಗಲಿಲ್ಲವಲ್ಲಾ–ಎಂಬ ಸುಳ್ಳು ಸಮಾಧಾನದೊಡನೆ ಹಿಂದಿರುಗಿದೆವು. ಆದರೆ ಗ್ರಾಮಾಂತರ ಪ್ರದೇಶಗಳ ವಸತಿ ಸಮಸ್ಯೆಯತ್ತ ದೆಹಲಿಯ ದೇವತೆಗಳ ಗಮನ ಸೆಳೆಯಲು ಸಮರ್ಥರಾದೆವೆಂಬ ಸಂತೋಷವೂ ಇಲ್ಲದಿರಲಿಲ್ಲ.

## ಯಾದಗಿರಿ ಕಾಲೇಜು

ಇದೇ ಸಮಯಕ್ಕೆ ಲಿಂಗಂಪಲ್ಲಿಯ ವಿದ್ಯಾರ್ಥಿನಿಲಯಕ್ಕಾಗಿ ಭವ್ಯ ಭವನವೊಂದರ ನಿರ್ಮಾಣ ಕಾರ್ಯವನ್ನು ಕೈಕೊಂಡರು ಅಣ್ಣಾರಾಯರು–ಅನ್ನಪೂರ್ಣಸ್ವಾಮಿಗಳು, ಯಾದಗಿರಿಯ ವಿಶ್ವನಾಥರೆಡ್ಡಿಯವರು, ಹಾಗೂ ಕೋನಪ್ಪನವರ ನೆರವಿನೊಂದಿಗೆ, ಕಾರ್ಯ ಪ್ರಾರಂಭಿಸಿದಾಗ ಕೈಯಲ್ಲಿ ಒಡಕು

ಕವಡೆಯೂ ಇರಲಿಲ್ಲ. ಆದರೂ ಭವ್ಯ ಭವನದ ನಿರ್ಮಾಣವಾಯಿತು–ದಾನಿಗಳ ಔದಾರ್ಯದಿಂದ. ಆಗ ಲೋಕೋಪಯೋಗಿ ಮಂತ್ರಿಗಳಾಗಿದ್ದ ನವಾಬ್ ಮೆಹದಿನವಾಜ್ ಜಂಗರು ಬಹಳ ಕಡಿಮೆ ಬಾಡಿಗೆಗೆ ಎರಡು ಮಿಕ್ಸರ್ ಯಂತ್ರಗಳನ್ನು ಕೊಟ್ಟರು. ಒಂದು ಹಳೆಯ ಮಹಲನ್ನು ಹರಾಜಿನಲ್ಲಿ ಕೊಳ್ಳಲು ಸಾಕಷ್ಟು ಸಾಗವಾನಿ ಸಿಕ್ಕಿತು. ಅನ್ನಪೂರ್ಣಸ್ವಾಮಿಗಳೂ, ಕೋನಪ್ಪ ವಿಶ್ವನಾಥರೆಡ್ಡಿಯವರೂ ನಿಧಿ ಸಂಗ್ರಹಿಸಿದರು. ನನ್ನನ್ನು ಕೊಪ್ಪಳಕ್ಕೆ ಕಳಿಸಿದರು. ಯಜಮಾನ್ ಮುದಗಲ್ ಸಂಗಪ್ಪನವರ ಮನೆಯಲ್ಲಿದ್ದು ಹತ್ತು ಸಾವಿರ ರೂಪಾಯಿ ಕೂಡಿಸಿ ತಂದುಕೊಟ್ಟೆ. ಬೇರೆಯವರೂ ನಡಕಟ್ಟಿ ನಿಂತರು. ಒಂದು ದೊಡ್ಡ ಕಾರ್ಯ ಮುಗಿಯಿತು. ಮೈಸೂರಿನ ಶ್ರೀಮನ್ಮಹಾರಾಜರಿಂದ ಅದರ ಉದ್ಘಾಟನೆಯಾಯಿತು.

ಯಾದಗಿರಿಯಲ್ಲಿ ಕಾಲೇಜೊಂದನ್ನು ಸ್ಥಾಪಿಸಿದರು ಅಲ್ಲಿಯ ಮುಖಂಡರಾಗಿದ್ದ ಕೋನಪ್ಪನವರು. ಆಗ ಕೋನಪ್ಪನವರೂ ವಿಶ್ವನಾಥರೆಡ್ಡಿ ಮುದ್ನಾಳ ಅವರೂ ಯಮಳರೆಂದು ಹೆಸರಾಗಿದ್ದರು. ಇಬ್ಬರೂ ಆಗರ್ಭ ಶ್ರೀಮಂತರು; ಇಬ್ಬರೂ ಪದವೀಧರರು. ಇವರಿಬ್ಬರಿಂದ ಬಹಳಷ್ಟನ್ನು ನಿರೀಕ್ಷಿಸಿದ್ದರು ಆ ಭಾಗದ ಜನರು. ಅವರ ನಿರೀಕ್ಷೆಯನ್ನು ಬಹುಮಟ್ಟಿಗೆ ಪೂರೈಸುವ ರೀತಿಯಲ್ಲಿ ಮುಂದುವರಿದಿದ್ದರು ಈ ಇಬ್ಬರೂ. ಕಾಲೇಜಿನ ಉದ್ಘಾಟನೆಗೆ ಮುಖ್ಯಮಂತ್ರ ಬಿ. ರಾಮಕೃಷ್ಣರಾಯರನ್ನೇ ಆಹ್ವಾನಿಸಿದರು. ಅವರು ಒಪ್ಪಿಕೊಳ್ಳಲು "ಇದೇ ಸಂದರ್ಭದಲ್ಲಿ ಹೈದರಾಬಾದು ಕರ್ನಾಟಕ ಸಾಹಿತ್ಯ ಸಮ್ಮೇಳನವನ್ನೇಕೆ ನಡೆಸಿ ಬಿಡಬಾರದು?" ಎಂದು ಆಲೋಚಿಸಿದರು ಅಲ್ಲಿಯ ಪುರ ಪ್ರಮುಖರು. ಹಿಂದೊಮ್ಮೆ ಅಂಥ ಸಮ್ಮೇಳನ ರಾಯ್ಚೂರಿನಲ್ಲಿ ಪ್ರೊ॥ ಡಿ.ಕೆ. ಭೀಮಸೇನರಾಯರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಆ ಮೇಲೆ ಅದರ ಎರಡನೆಯ ಸಮ್ಮೇಳನವೇ ಸೇರಿರಲಿಲ್ಲ. ಇದಕ್ಕಾಗಿ ಒಂದು ಸ್ವಾಗತ ಸಮಿತಿಯನ್ನೂ ರಚಿಸಿದರು. ಅದಕ್ಕೆ ಆಗ ಸುರಪುರದ ತಹಸೀಲ್ದಾರರಾಗಿದ್ದ ಕಡಗಂಚಿ ಸಿದ್ಧಯ್ಯನವರನ್ನು ಅಧ್ಯಕ್ಷರನ್ನಾಗಿ ಆರಿಸಿದ್ದರು. ಸಮ್ಮೇಳನಕ್ಕೆ ನಾನು ಅಧ್ಯಕ್ಷನಾಗಬೇಕೆಂದು ಕಾಗದ ಬರೆದರು. ನಾನು 'ಮಾನ್ವಿ'ಯವರೊಡನೆ ಸಮಾಲೋಚಿಸಿ, ಕಪಟರಾಳ ಕೃಷ್ಣರಾಯರು ಹಿರಿಯ ವಿದ್ವಾಂಸರು, ಸಂಶೋಧಕರು; ಅವರನ್ನೇ ಅಧ್ಯಕ್ಷರನ್ನಾಗಿ ಆರಿಸುವುದು ಉಚಿತವೆಂದು ಉತ್ತರವಿತ್ತೆ. ಅದಕ್ಕವರು ಸಮಯ ಬಹಳ ಸ್ವಲ್ಪ ಉಳಿದಿದೆ; ಬದಲಾವಣೆ ಸಾಧ್ಯವಾಗದ ಸಂಗತಿ; ನೀವೇ ಬರಬೇಕು; ನೀವು ಒಪ್ಪಿರುವಿರೆಂದೇ ಭಾವಿಸಿ ಮುಂದುವರಿಯುವೆವು' ಎಂದು ಬರೆದುಬಿಟ್ಟರು. ಯಾದಗಿರಿಯ ಆ ಅನಿಮಿತ್ತ ಬಂಧುಗಳ, ಆತ್ಮೀಯರ ಅಪೇಕ್ಷೆಗೆ ತಲೆಬಾಗಲೇಬೇಕಾಯಿತು ಒಪ್ಪಿದೆ.



ಸಮ್ಮೇಳನ ಎಲ್ಲೆಯರಿಯದ ಉತ್ಸಾಹ, ವಿಜೃಂಭಣೆಗಳೊಡನೆ ನಡೆಯಿತು. ಇಬ್ಬರೂ ಸಿದ್ಧಯ್ಯರನ್ನು ಊರಲ್ಲೆಲ್ಲ ಮೆರೆಸಿದರು. ಆ ಮೆರವಣಿಗೆಯೂ ಅದ್ಭುತವಾದುದು. ಎಲ್ಲಿ ನೋಡಿದರೂ ಜನಸಾಗರ. ಹೈದರಾಬಾದು ಕರ್ನಾಟಕದ ಮೂರೂ ಜಿಲ್ಲೆಗಳಿಂದ ನೂರಾರು ಪ್ರತಿನಿಧಿಗಳು ಬಂದಿದ್ದರು. ಸ್ಥಳೀಯರಂತೂ ಸರಿಯೆ. ಸುತ್ತುಮುತ್ತಲಿನ ಗ್ರಾಮೀಣ ಬಾಂಧವರೂ ಬಹು ಸಂಖ್ಯೆಯಲ್ಲಿ ಬಂದು ಸಮ್ಮೇಳನಕ್ಕೆ ಶೋಭೆ ಹೆಚ್ಚಿಸಿದರು. ಒಟ್ಟಿನಲ್ಲಿ ಅದೊಂದು ಅವಿಸ್ಮರಣೀಯವಾದ ಸಮ್ಮೇಳನ. ಯಾದಗಿರಿಯ ಉದಾರ ಹೃದಯಗಳ ಕನ್ನಡ ಪ್ರೇಮ ಈ ಸಮ್ಮೇಳನವನ್ನು ನೆರವೇರಿಸಿ ಹೈದರಾಬಾದು ರಾಜ್ಯದಲ್ಲಿ ಕನ್ನಡದ ಪುನರುಜ್ಜೀವನ ಕಾರ್ಯ ಸುಸಂಘಟಿತ ಹಾಗೂ ವ್ಯಾಪಕ ರೂಪದಲ್ಲಿ ನಡೆಯಲು ಕಾರಣವಾಯಿತು.

## ಕನ್ನಡದ ಕೆಲಸ :

ಅಧ್ಯಕ್ಷನಾಗಿ ಮೊದಲು ನಾನು ಹೈದರಾಬಾದು ಕನ್ನಡ ಸಾಹತ್ಯ ಪರಿಷತ್ತಿಗೊಂದು ಕಾರ್ಯಾಲಯ ತೆರೆಯಬೇಕಾಗಿದ್ದಿತು. ಬಿಡಿಕಸೂ ಇಲ್ಲದೆ ಪ್ರಾರಂಭವಾಗಿದ್ದ ಪರಷತ್ತಿಗೆ ಬಾಡಿಗೆ ಕೊಟ್ಟು ಕೊಟಡಿಯೊಂದನ್ನು ಪಡೆದುಕೊಳ್ಳುವುದು ಸಾಧ್ಯವಿರಲಿಲ್ಲ. ಆದುದರಿಂದ ನನ್ನ ಮನೆಯಲ್ಲಿಯೇ ಕಾರ್ಯಾಲಯವನ್ನು ಪ್ರಾರಂಭಿಸಿದೆ. ಸಿಬ್ಬಂದಿ ಸೊನ್ನೆ. ಕಾರ್ಯದರ್ಶಿ ವಿದ್ವಾನ್ ವೀರೇಶ್ವರ ಶಾಸ್ತ್ರಿಗಳು ಯಾದಗಿರಿಯಲ್ಲಿ. ಆದುದರಿಂದ ನಾನೇ ಪತ್ರ ಬರೆಯುವವ, ನಾನೇ ವಿಳಾಸ ಬರೆಯುವವ, ನಾನೇ ಅಂಚೆ ಚೀಟಿ ಅಂಟಿಸುವವ, ನಾನೇ ಒಯ್ದು ಅಂಚೆ ಪೆಟ್ಟಿಗೆಗೆ ಹಾಕಿ ಬರುವವ. ಸರಕಾರದಿಂದ ವರ್ಷಕ್ಕೆ ಐದು ಸಾವಿರ ರೂಪಾಯಿಗಳ ಸಹಾಯ ಧನ ಪಡೆದ ಮೇಲೆ ಅದರ ಸದ್ವಿನಿಯೋಗ ಮಾಡಿ ಸರಕಾರಕ್ಕೆ ವರದಿ, ಲೆಕ್ಕ ಒಪ್ಪಿಸುವ ಭಾರ ಮೈಮೇಲೆ ಬಿದ್ದಿತು. ಆ ಸವಾಲನ್ನೂ ಸ್ವೀಕರಿಸಿದೆ. ರಾಜ್ಯದ ಎಲ್ಲ ಕನ್ನಡ ಸಂಘ ಸಂಸ್ಥೆಗಳೊಡನೆ ಸಂಪರ್ಕ ಬೆಳೆಸಿದೆ. ಅಣ್ಣಾರಾಯರ ಸಹಕಾರ ಪಡೆದು ಕೆಲವು ಕನ್ನಡ ಸಂಘಗಳಿಗೆ ನಗರ ಸಭೆಗಳಿಂದ ಒಳ್ಳೆಯ ನಿವೇಶನಗಳನ್ನು ಕೊಡಿಸಿದೆ; ಜಿಲ್ಲಾ ಸಮಿತಿಗಳಿಂದ ಸಹಾಯ ಧನ ಕೊಡಿಸಿದೆ; ಕನ್ನಡ ಶಾಲೆಗಳದ್ದಲ್ಲಿ ಅವುಗಳಲ್ಲಿ ಮೇಲಿನ ತರಗತಿಗಳನ್ನು ತೆರೆಯುವಂತೆ, ಇಲ್ಲದಲ್ಲಿ ಅವುಗಳನ್ನು ಸ್ಥಾಪಿಸುವಂತೆ ವಿದ್ಯಾ ಇಲಾಖೆಯೊಡನೆ ಗುದ್ದಾಡಿದೆ. ಪರಿಣಾಮ ನಿರೀಕ್ಷೆಗೂ ಮೀರಿದುದಾಗಿದ್ದಿತು. ನಾನು ಒಬ್ಬ ಮಂತ್ರಿಯ ಆಪ್ತ ಕಾರ್ಯದರ್ಶಿಯಾಗಿದ್ದುದರಿಂದ ನನ್ನಿಂದ ಒಂದು ದೂರವಾಣಿಯ ಕೋರಿಕೆ ಹೋದರೂ ಕೆಲಸವಾಗಿ ಬಿಡುತ್ತಿದ್ದಿತು. ವಿಶೇಷವಾಗಿ ಬೀದರ ಜಿಲ್ಲೆಯಲ್ಲಿಯೂ, ಗಡಿ ಪ್ರದೇಶಗಳಲ್ಲಿಯೂ ಕನ್ನಡ ಶಾಲೆಗಳ ಸ್ಥಾಪನೆಯ ಕೆಲಸ ತೀವ್ರಗತಿಯಿಂದ ನಡೆಯಿತು.

ಬೀದರ ಜಿಲ್ಲೆ ಆಗ ಮರಾಠಿ ಮುಖಂಡರ ಮುಷ್ಟಿಯಲ್ಲಿದ್ದಿತು. ಬಾಪೂರಾವ್ ದೇಶಪಾಂಡೆಯವರು ಆ ಜಿಲ್ಲೆಯ ಕಿರೀಟರಹಿತ ಸಾಮ್ರಾಟರಾಗಿದ್ದರು. ಅವರಿಗೆ ತಮ್ಮ ಜಿಲ್ಲೆಯಲ್ಲಿ ಕನ್ನಡ ತಲೆ ಎತ್ತತೊಡಗಿದುದು ಇಷ್ಟವೆನಿಸಲಿಲ್ಲ. ತಮ್ಮ ಪ್ರಭಾವವನ್ನೆಲ್ಲ ಉಪಯೋಗಿಸಿ ಕನ್ನಡದ ಮುನ್ನಡೆಗೆ ಕಲ್ಲೊಡಕುಗಳನ್ನು ಹೆಚ್ಚಿಸತೊಡಗಿದರು. ಒಮ್ಮೆ ಮಾನ್ವಿ ನರಸಿಂಗರಾಯರು ಬೀದರ ಕನ್ನಡಿಗರ ಕೋರಿಕೆಯಂತೆ ಅಲ್ಲಿಗೆ ಕನ್ನಡದಲ್ಲಿ ಭಾಷಣ ಮಾಡಲು ಹೋದರು. ಮರಾಠಿಯ ಉಗ್ರಾಭಿಮಾನಿಗಳು ಅವರು ಕನ್ನಡದಲ್ಲಿ ಮಾತನಾಡದಂತೆ ಮಾಡಿದರು. ನನ್ನ ಪಿತ್ಥ ಕೆರಳಿತು. ಅದೇ ಬೀದರಿನಲ್ಲಿ ಮರಾಠೀ ಭಾಷಣವೊಂದನ್ನು ಬಂದು ಮಾಡಿಯೇ ತೋರಿಸುವೆನೆಂದು ಆ ಅಗ್ನಿ ಭಕ್ಷಕರಿಗೆ ಹೇಳಿ ಕಳಿಸಿದೆ. ನಾಡಹಬ್ಬಕ್ಕೆ ಇನ್ನೂ ಎರಡು ತಿಂಗಳುಗಳ ಅವಧಿ ಉಳಿದಿದ್ದಿತು. ಶ್ರೀ ಪ್ರಭುರಾವ್ ವಕೀಲ, ಗುತ್ತೇದಾರ ಲಿಂಗಪ್ಪ, ಕನ್ನಡ ಶಿಕ್ಷಕರಾದ ರಾಜ, ದಿದ್ದಗಿ, ಫರ್ನಾಂಡಿಸ್ ಮೊದಲಾದವರನ್ನು ಕರಿಸಿಕೊಂಡೆ. ಬೀದರನಲ್ಲಿ ಏಳು ದಿನಗಳ ನಾಡಹಬ್ಬವನ್ನು ಬೃಹತ್ ಪ್ರಮಾಣದಲ್ಲಿ ಜರುಗಿಸಲು ಅವರನ್ನು ಒಪ್ಪಿಸಿದೆ. ಪ್ರತಿನಿತ್ಯ ಓರ್ವ ಕನ್ನಡ ಮಂತ್ರಿಯನ್ನೂ, ಖ್ಯಾತ ಕನ್ನಡ ಸಾಹಿತಿಯನ್ನೂ ಒದಗಿಸುವ ಅಶ್ವಾಸನವಿತ್ತೆ. ಬರಿಗೈಯಿಂದ ಕಳಿಸದೆ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟು ಕಳಿಸಿದೆ.

**ನಾಡಹಬ್ಬ :**

ಅವರು ಹೋಗಿ ಸ್ವಾಗತ ಸಮಿತಿ ರಚಿಸಿಕೊಂಡರು. ಅವರೂ ದಿನಾಲು ಕಾಗದ ಬರೆಯುತ್ತಿದ್ದರು; ನಾನೂ ದಿನಾಲು ಉತ್ತರವೀಯುತ್ತಿದ್ದೆ. ಹತ್ತು ಸಾವಿರ ಜನರು ಭಾಗ ವಹಿಸುವಷ್ಟು ದೊಡ್ಡದಾದ ಸಭಾ ಮಂಟಪವನ್ನು ರಚಿಸಿದರವರು. ಹೊರಗಿನಿಂದ ಬರುವವರಿಗೆ ಸಾಮೂಹಿಕ ಭೋಜನ ವ್ಯವಸ್ಥೆ ಮಾಡಿದರು. ನಾನು ಉದ್ಘಾಟನೆಗೆ ಮೈಸೂರಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ.ಕೆ. ಹನುಮಂತಯ್ಯನವರನ್ನೂ, ಸಮಾರೋಪ ಭಾಷಣಕ್ಕೆ ಕೇಂದ್ರ ಮಂತ್ರಿಗಳಾಗಿದ್ದ ಶ್ರೀ ಬಿ.ಎನ್. ದಾತಾರರನ್ನೂ ಒಪ್ಪಿಸಿದೆ. ಉಳಿದ ದಿನಗಳಲ್ಲಿ ಮಂತ್ರಿಗಳಾಗಿದ್ದ ಡಾ॥ ಜಿ.ಎಸ್. ಮೇಲ್ಕೋಟೆಯವರು, ಅಣ್ಣಾರಾವ್ ಗಣಮುಖಿ ಅವರು, ಜಗನ್ನಾಥರಾವ್ ಚಂಡರಕಿ ಅವರು, ಶಂಕರದೇವ ಅವರು, ಮತ್ತಿತರರನ್ನು ಒಪ್ಪಿಸಿದೆ. ಇವರೆಲ್ಲ ಬರುವರೆಂದು ಸುತ್ತಲಿನ ಹಳ್ಳಿಗಳಲ್ಲೆಲ್ಲ ಡಂಗುರ ಹೊಯ್ಸಿದೆವು. ಹಳ್ಳಿಗಳ ಕನ್ನಡಿಗರಲ್ಲಿ ಹೊಸ ಹುರುಪು ಹುಟ್ಟಿತು. ಸಾವಿರ ಸಾವಿರ ಸಂಖ್ಯೆಯಲ್ಲಿ ಬೀದರ ನಾಡಹಬ್ಬ ನೋಡಲು ಬಂದು ಬಿಟ್ಟರು.



ಶ್ರೀ ಕೆ. ಹನುಮಂತಯ್ಯನವರನ್ನು ನೋಡುತ್ತಲೆ ನನಗೆ ಅವರ ಬಗ್ಗೆ ಅಭಿಮಾನದಿಂದ ಹುಟ್ಟಿತು. ತುಂಬ ತೇಜಸ್ವಿಯಾದ ವ್ಯಕ್ತಿತ್ವ ಅವರದಾಗಿದ್ದಿತು. ಅವರೂ ನಮ್ಮನ್ನು ನಿರಾಶೆಗೊಳಿಸಲಿಲ್ಲ. ಅವರೊಡನೆ ಬೀದರಕ್ಕೆ ಹೋದೆ, ಹಾದಿಯುದ್ದಕ್ಕೂ ತಾವು ಕನ್ನಡಕ್ಕಾಗಿ ಮಾಡಿದ್ದ, ಮಾಡಬೇಕೆಂದಿದ್ದ ಕಾರ್ಯಗಳ ಬಗ್ಗೆ ಪ್ರಸ್ತಾಪಿಸಿದರು. ಪ್ರವಾಸಿ ಮಂದಿರದಲ್ಲಿ ಅದ್ಭುತ ಸ್ವಾಗತ ಕಾದಿತ್ತು ಅವರಿಗೆ. ಆಗ ಅಲ್ಲಿನ ಪ್ರಥಮ ಪ್ರಜೆ ಮರಾಠಿಗರು. ನನ್ನ ಪಕ್ಕಕ್ಕೆ ಬಂದು ಕಿವಿಯಲ್ಲಿ ಕೇಳಿದರು: 'ಹನುಮಂತಯ್ಯನವರು ಕನ್ನಡದಲ್ಲಿ ಮಾತನಾಡುವರೋ ಇಂಗ್ಲೀಷಿನಲ್ಲಿಯೂ?" ಅವರ ಪ್ರಶ್ನೆಯ ಅಂತರಾರ್ಥವನ್ನರಿತು ನಾನು ಕೇಳಿದೆ; "ಯಾಕೆ?" ತಟ್ಟನೆ ಉತ್ತರಿಸಿದರವರು; "ಕನ್ನಡದಲಿ ಮಾತನಾಡಿದರೆ ಇಲ್ಲಿ ಯಾರಿಗೆ ತಿಳಿಯುತ್ತದೆ?" ನಾನು ಮರುಪ್ರಶ್ನೆ ಕೇಳಿದೆ: "ಬೀದರ್ ಲಂಡನ್ನಿನ ಪ್ರಿಯ ಪುತ್ರಿಯೇ? ಇಲ್ಲಿ ಇಂಗ್ಲೀಷ್ ಎಲ್ಲರಿಗೆ ತಿಳಿಯುತ್ತದೆ!" ಬೆಪ್ಪಾಗಿ ಬಾಯಿ ಮುಚ್ಚಿಕೊಂಡರವರು.

ನಾಡಹಬ್ಬದ ಉದ್ಘಾಟನಾ ಸಮಾರಂಭ ಹನುಮಂತಯ್ಯನವರಿಗೇ ಆಶ್ಚರ್ಯವಾಗುವಷ್ಟು ಅದ್ಭುತವಾದುದಾಗಿದ್ದಿತು. ಆ ಸಭಾ ಮಂಟಪವನ್ನು ನೋಡಲೆಂದೇ ನೂರು ಮೈಲಿಗಳ ಪ್ರವಾಸ ಮಾಡಿದರೂ ತಪ್ಪಲ್ಲವೆನಿಸಿತು. ಹತ್ತು ಸಾವಿರಕ್ಕೂ ಕಡಿಮೆಯಿಲ್ಲದ ಜನಸ್ತೋಮ: ಉಕ್ಕಿ ಹರಿಯುತ್ತಲಿದ್ದ ಕನ್ನಡಪ್ರೇಮ; 'ಕರ್ನಾಟಕ ಮಾತಾ ಕಿ ಜೈ' ಎಂಬ ಕಿವಿ ಗಡಚಿಕ್ಕುವ ಜಯಘೋಷಗಳು. ಹನುಮಂತಯ್ಯನವರಿಗೂ ಭಾವಾವೇಶ ಬಂದಿತು. ಉಜ್ವಲವಾದ ಉದ್ಘಾಟನ ಭಾಷಣವನ್ನಿತ್ತರು. ಅಲ್ಲಿಯ ಕನ್ನಡಿಗರಿಗೆ ಕನ್ನಡದ ಮುಖ್ಯಮಂತ್ರಿಗಳೊಬ್ಬರನ್ನು ನೋಡಿದ ಹಿಗ್ಗೇ ಹಿಡಿಸಲಾರದಷ್ಟಾಗಿತ್ತು; ಈ ನೆತ್ತರು ಬಿಸಿಗೊಳಿಸುವ ಭಾಷಣ ಕೇಳಿದ ಮೇಲಂತೂ ಕೇಕೆ ಹಾಕಿ ಕುಣಿದರವರು! ಪ್ರವಾಸಿ ಮಂದಿರದಲ್ಲಿ ತಮಗಾಗಿ ಏರ್ಪಟ್ಟಿದ್ದ ಸರಕಾರೀ ಭೋಜನ ವ್ಯವಸ್ಥೆಯನ್ನು ನಿರಾಕರಿಸಿ ಸಭಿಕರಿಗಾಗಿ ಏರ್ಪಟ್ಟಿದ್ದ ಸಮೂಹ ಭೋಜನದಲ್ಲಿಯೇ ಶ್ರೀಸಾಮಾನ್ಯರೊಡನೆ ಸಾಮಾನ್ಯರಾಗಿ ಕುಳಿತು ಹನುಮಂತಯ್ಯನವರು ಊಟ ಮಾಡಿದಾಗಂತೂ ಅವರ ಅಭಿಮಾನ ಕಾರಂಜಿಯಾಗಿ ಪುಟಿಯಿತು, ಬುಗ್ಗೆಯಾಗಿ ಚಿಮ್ಮಿತು. ಭೋಜನಾ ನಂತರ ಎಂಜಲು ಪತ್ರಾವಳಿಗಳೊಡನೆ ಮರಾಠಿ ಮುಖಂಡರ ಭಯವನ್ನೂ ಎಸೆದುಬಿಟ್ಟರವರು'. ಆಮೇಲೆ ಪ್ರತಿದಿನ ಒಬ್ಬೊಬ್ಬ ಮಂತ್ರಿಗಳೊಡನೆ, ಖ್ಯಾತ ಸಾಹಿತಿಗಳೊಡನೆ ಬೀದರಿಗೆ ಹೋಗಿ ಬಂದೆ ನಾನು. ಅದು ಮುಖ್ಯವಾಗಿ ಕನ್ನಡಿಗರಲ್ಲಿ ಕಳೆದುಹೋಗಿದ್ದ ಧೈರ್ಯಸ್ಥೈರ್ಯಗಳನ್ನು ಮರುಕಳಿಸಲು ಹೂಡಿದ್ದ ನಾಡಹಬ್ಬವಾಗಿದ್ದುದರಿಂದ ಅಷ್ಟು ಜನ ಮಂತ್ರಿಗಳನ್ನು ಕರೆದೊಯ್ಯುವುದು ಅನಿವಾರ್ಯವಾಗಿದ್ದಿತು. ಎಲ್ಲರೂ

ಕನ್ನಡದ ಕೆಚ್ಚಿನ ಬೀಜಾರೋಪಣ ಮಾಡಿದರು. ಒಂದು ದಿನ ಮಾನ್ವಿಯವರ ವಿಶೇಷ ಉಪನ್ಯಾಸ–ಹಿಂದೆ ಅವರ ಭಾಷಣವನ್ನು ತಡೆದಿದ್ದುವರ ಅಹಿಂಸಾತ್ಮಕ ಪ್ರತೀಕಾರಾರ್ಥವಾಗಿ, ಒಂದು ದಿನ ನನ್ನದೇ ಭಾಷಣ. ಇದುವರೆಗೆ ಸಾವಿರಾರು ಸ್ಥಳಗಳಲ್ಲಿ ಸಾವಿರಾರು ಭಾಷಣಗಳನ್ನು ಮಾಡಿದ್ದೇನೆ. ಆದರೆ ಆ ದಿನದ ಭಾಷಣ ನನ್ನನ್ನೇ ಬೆರಗುಗೊಳಿಸಿದಂಥ ಭಾಷಣ. ಮಾತು ಪ್ರಾರಂಭಿಸಿದ್ದ ಸ್ವಲ್ಪ ಹೊತ್ತಿನಲ್ಲಿ ಮಳೆ ಬೀಳತೊಡಗಿತು. ಜೋರಾಗಿ ಕೂಗಿ ಹೇಳಿದೆ; 'ಈ ಮಳೆ ನಿಮ ಕನ್ನಡ ಭಕ್ತಿಯ ಪರೀಕ್ಷೆಗಾಗಿ ಬಂದಿದೆ. ಅದಕ್ಕೆ ಎದೆಯೊಡ್ಡಿ ನಿಲ್ಲಿರಿ. ಅದೇ ಸೋತು ಮುಖ ಮರೆಸಿಕೊಳ್ಳುವುದು!" ಚೆದುರುತ್ತಲಿದ್ದ ಜನ ಮಳೆಗೆ ಸವಾಲಾಗಿ ಕುಳಿತುಬಿಟ್ಟರು. ಮರುಕ್ಷಣದಲ್ಲಿಯೇ ಮಳೆ ನಿಂತು ಹೋಯಿತು. ಅದೊಂದು ಆಕಸ್ಮಿಕ ಘಟನೆ; ಕಾಕತಾಳೀಯ. ಆದರೆ ಅದರಿಂದ ಅದ್ಭುತ ಪರಿಣಾಮವಾಯಿತು. ಅಲ್ಲಿ ನೆರೆದಿದ್ದ ಕನ್ನಡಿಗರ ಮೇಲೆ, ಕನ್ನಡದಲ್ಲಿ ಮಂತ್ರಶಕ್ತಿ ಹುದುಗಿದೆಯಂಬ ಭಾವನೆ ಅವರಿಗೆ ಬಂದು ಕನ್ನಡದ ಜಯ ಜಯಕಾರ ಮಾಡಿದರು. ಕೊನೆಯ ದಿನ ಬಂದ ದಾತಾರರಂತೂ, 'ಇದು ನಾಡಹಬ್ಬವಲ್ಲ, ಎ.ಐ.ಸಿ.ಸಿ. ಅಧಿವೇಶನ' ಎಂದು ಉದ್ಗರಿಸಿದರು. ನಾಡಹಬ್ಬ ವೈಭವ ವಿಜೃಂಭಣೆ ಉತ್ಸಾಹ ಅಭಿಮಾನಗಳ ಮಹಾಪೂರ ಬರಿಸಿ, ಹಿರಿ ಹೊನಲು ಹರಿಸಿ ಮುಕ್ತಾಯವಾಯಿತು. ಅದರ ಪರಿಣಾಮವಾಗಿ ಬೀದರ ಜಿಲ್ಲೆಯ ಕನ್ನಡಿಗರಲ್ಲಿ ನವಜಾಗೃತಿ, ನವ ಚೈತನ್ಯಗಳು ಮೂಡಿದುವು.

ಈ ಹೊಸ ಹುರುಪು ಹಾರಿ ಹೋಗುವ ಮೊದಲೇ ಅದನ್ನು ವಿಧಾಯಕ ಕಾರ್ಯಗಳಿಗಾಗಿ ಬಳಸಿಕೊಳ್ಳುವುದೆಂದು ನಿರ್ಧರಿಸಿ ಬೀದರ ಮತ್ತು ಇತರ ಪ್ರಮುಖ ಪಟ್ಟಣಗಳಲ್ಲಿ ಮನೆಮನೆಗೆ ಹೋಗಿ ಕನ್ನಡ ಅಕ್ಷರ ಕಲಿಸುವ ಕಾರ್ಯವನ್ನು ಆರಂಭಿಸಿದೆವು. ಇದಕ್ಕೆ ರಾಜ–ದಿದ್ದಿಗಿಯವರ ನೇತೃತ್ವದಲ್ಲಿ ಕನ್ನಡ ಶಿಕ್ಷಕರು ನೀಡಿದ ವೇತನ ರಹಿತ ಸೇವೆ ಅವಿಸ್ಮರಣೀಯವಾದುದು. ಮೇಲೆ ದೇವನಾಗರಿ ಲಿಪಿಯಲ್ಲಿ, ಅದರ ಕೆಳಗೇ ಕನ್ನಡ ಲಿಪಿಯಲ್ಲಿ ಮುದ್ರಿತವಾದ ಹತ್ತು ಸಾವಿರ 'ಕನ್ನಡ ಕಲಿಯಿರಿ' ಎಂಬ ದ್ವಿವರ್ಣದ ವರ್ಣಮಾಲಾ ಭಿತ್ತಿ ಪತ್ರಗಳನ್ನು ಹಳ್ಳಿಹಳ್ಳಿಯ ಪಂಚಾಯತಿ ಆಫೀಸುಗಳಲ್ಲಿ, ಶಾಲಾ ಭವನಗಳಲ್ಲಿ, ಚಾವಡಿಗಳಲ್ಲಿ ಅಂಟಿಸಿದೆವು. ಶ್ರೀ ಎಸ್.ಕೆ. ಕರೀಮಖಾನರ ಜಾನಪದ ಸಾಹಿತ್ಯ ಪ್ರವಚನಗಳನ್ನು, ಶ್ರೀ ಶಿವಲಿಂಗಸ್ವಾಮಿ ಹಿರೇಮಠರ ಕನ್ನಡ ಕೀರ್ತನೆಗಳನ್ನು ಆ ಜಿಲ್ಲೆಯ ಅನೇಕ ಕಡೆಗಳಲ್ಲಿ ಏರ್ಪಡಿಸಲಾಯಿತು. ಆ ಜಿಲ್ಲೆಯಲ್ಲೆಲ್ಲ ಎಲ್ಲಿ ಹೋದರಲ್ಲಿ ಕನ್ನಡದ ಕಹಳೆಯ ಮೊಳಗು ಕೇಳುವಂತಾಯಿತು.



ಆದರೆ ಅಪ್ರಿಯ ಘಟನೆಯೊಂದು ಇದೇ ಕಾಲಕ್ಕೆ ನಡೆದುಹೋಯಿತು. ಗೋಪಾಲರಾವ್ ಏಕಬೋಟೆ ಎಂಬ ಮಹಾರಾಷ್ಟ್ರೀಯ ಬಿ. ರಾಮಕೃಷ್ಣರಾಯರಿಗೆ ಹತ್ತಿರದವರಾಗಿದ್ದರು, ಅವರು ಸಚಿವ ಸಂಪುಟ ಸೇರಲು ಕಾತುರರಾಗಿದ್ದರು. ಆದರೆ ಅದಾಗಲೇ ಹದಿಮೂರು ಜನರಿದ್ದ ಆ ಸಂಪುಟ ಆ ಕಾಲದಲ್ಲಿ ಅತಿ ದೊಡ್ಡ ಸಂಪುಟವೆಂದೆನ್ನಿಸಿದ್ದಿತು. ಈ ಕಾಲದಲ್ಲಿ ಅದರಷ್ಟು ಸಣ್ಣ ಸಂಪುಟವೇ ಇಲ್ಲ. ಅ ಮಾತು ಬೇರೆ. ಆದರೆ ಆಗ ಅದೇ ದೊಡ್ಡದು. ಪ್ರಧಾನಮಂತ್ರಿ ಪಂಡಿತ ಜವಾಹರಲಾಲರೂ, ಮೌಲಾನಾ ಅಬುಲ್ ಕಲಾಮ್ ಅಜಾದರೂ ಕೂಡಿಯೇ ಹೈದರಾಬಾದಿಗೆ ಸ್ವಲ್ಪ ಸಮಯದ ಹಿಂದೆ ಬಂದಾಗ ವಿಮಾನ ನಿಲ್ದಾಣದಲ್ಲಿ ನಡೆದ ಘಟನೆಯೊಂದು ನಿದರ್ಶನವಿದಕ್ಕೆ. ಬಿ. ರಾಮಕೃಷ್ಣರಾಯರು ತಮ್ಮ ಸಚಿವ ಸಂಪುಟದ ಸದಸ್ಯರೆಲ್ಲರ ಹೆಸರುಗೊಂಡು ಪರಿಚಯ ಮಾಡಿ ಕೊಡುತ್ತಲಿದ್ದರು ಪ್ರಧಾನಮಂತ್ರಿಗಳಿಗೆ. ಆಗ ಮೌಲನಾ ವಿನೋದಪೂರ್ಣವಾಗಿ ಕೇಳಿದರು, ಬಿ. ರಾಮಕೃಷ್ಣರಾಯರನ್ನ; "ನಿಮಗೆ ನಿಮ್ಮ ಸಂಪುಟದ ಎಲ್ಲ ಮಂತ್ರಿಗಳ ಹೆಸರುಗಳು ನೆನಪಿದಯೆ?" ಬಿ. ರಾಮಕೃಷ್ಣರಾಯರೆಂದರು ನನ್ನ ಸಂಪುಟದ ಮಂತ್ರಿಗಳ ಹೆಸರುಗಳು ನನಗೆ ಹೇಗೆನೆನಪಿರುವುದಿಲ್ಲ?" ಇದಕ್ಕೆ ಆ ಮುದುಕ ಹುಸಿ ನಗುತ್ತ ಹೇಳಿದ; "ಹಾಗಲ್ಲ, ಸಂಖ್ಯೆ ಬಹಳ ದೊಡ್ಡದಿದೆ; ಅದಕ್ಕಾಗಿ ಕೇಳಿದೆ!" ಚೇಷ್ಟೆಗಾಗಿಯೇ ಆಗಲಿ, ಈ ಅಭಿಪ್ರಾಯ ಪ್ರಧಾನಮಂತ್ರಿಗಳ ಬಲಗೈಯಂತಿದ್ದ ಮೌಲಾನಾ ಅವರಿಂದ ಪ್ರಕಟವಾದ ಮೇಲೆ ಸಂಪುಟದ ಸಂಖ್ಯೆಯನ್ನು ಹೆಚ್ಚಿಸಲು ಸುತರಾಂ ಸಿದ್ಧರಿರಲಿಲ್ಲ ಬಿ. ರಾಮಕೃಷ್ಣರಾಯರು. ಆಗ 'ಏಕಬೋಟೆ ಸೂತ್ರ' ಹೊರಬಿದ್ದಿತು–ಹಿಂದೆ ವೈದ್ಯ ಸೂತ್ರ ನನ್ನ ಕಿವಿಗೆ ಬಿದ್ದಂತೆ–"ಈ ಕಲ್ಲಯ್ಯ ಯಲ್ಲಯ್ಯಗಳಿಗೆ ಕ್ಯಾಬಿನೆಟ್ ದರ್ಜೆಯ ಮಂತ್ರಿಪದವಿಗಳೇಕೆ–ಉಪಮಂತ್ರಿ ಸ್ಥಾನ ಒಗೆದುಬಿಟ್ಟರೆ ಸಾಕು!"

ಈ ಸೂತ್ರಕ್ಕೆ ಬೆಂಬಲವನ್ನು ದೊರಕಿಸಲಾಯಿತು. ಇದು ಬೇಡವೆಂದು ಬೂರ್ಗುಲ (ಬಿ. ರಾಮಕೃಷ್ಣರಾಯ)ರಿಗೆ ಹೇಳಿದ ಮಾತುಗಳೆಲ್ಲ ಬೋರ್ಗಲ್ಲ ಮೇಲೆ ಮಳೆಗರೆದಂತಾಯಿತು. ಈ ಸೂತ್ರ ಕಾರ್ಯಗತವಾಗಿಯೇ ಬಿಟ್ಟಿತು. ಅಣ್ಣಾರಾವ್ ಗಣಮುಖಿ, ದೇವೀಸಿಂಗ್ ಚೌಹಾಣ, ಶಂಕರರಾವ್ ದೇವರು ಮಂತ್ರಿಮಂಡಲದಿಂದ 'ವಜಾ' ಆದರು. ಇವರಲ್ಲಿ ಶಂಕರರಾವ್ ಉಪಮಂತ್ರಿಯಾಗಿ ಮುಂದುವರಿಯಲು ಒಪ್ಪಿದುದರಿಂದ ಅವರು ಉಪಮಂತ್ರಿಗಳಾಗಿ ಮುಂದುವರಿದರು. ಆ 'ಮಹಾತ್ಯಾಗ'ಕ್ಕಾಗಿ ಅವರನ್ನು ಸಮಾರಂಭವೊಂದರಲ್ಲಿ ಅಭಿನಂದಿಸಿದುದೂ ಆಯಿತು. ಅಣ್ಣಾರಾಯರು ಉಪಮಂತ್ರಿಗಳಾಗಲು ಒಪ್ಪದ ಕಾರಣ ಯಾದಗಿರಿಯ ವೈ. ವಿರೂಪಾಕ್ಷಪ್ಪನವರು ಉಪಮಂತ್ರಿಗಳಾದರು. ಇವೆಲ್ಲ ಬದಲಾವಣೆಗಳ ಬಗ್ಗೆ ನಾವೇನೂ

ಹೇಳುವಂತಿರಲಿಲ್ಲ; ಆದರೆ ಏಕಬೋಟೆಯವರು ವಿದ್ಯಾಮಂತ್ರಿಗಳಾಗಲು ಬೀದರ್ ಜಿಲ್ಲೆಯಲ್ಲಿ ಸ್ವಲ್ಪ ಮೆತ್ತಗಾಗಿದ್ದ ಮರಾಠಿಗರ ಮೈಯುಬ್ಬಿತು. ನಿರೀಕ್ಷಿಸಿದ್ದಂತೆ ಏಕಬೋಟೆಯವರು ಆ ಜಿಲ್ಲೆಯ ಮರಾಠಿಗರ ಬೆನ್ನು ತಟ್ಟಿದರು. ಕನ್ನಡಕ್ಕಾಗಿ ಯಾವ ಫಲಾಪೇಕ್ಷೆಯೂ ಇಲ್ಲದೆ ಬಿಡುವಿನ ಸಮಯದಲ್ಲಿ ದುಡಿಯುತ್ತಿದ್ದ ಹತ್ತೆಂಟು ಕನ್ನಡ ಶಿಕ್ಷಕರನ್ನು ಒಮ್ಮೆಗೇ ಬೀದರ ಜಿಲ್ಲೆಯ ಹೊರಗಿನ ಸ್ಥಳಗಳಿಗೆ ವರ್ಗ ಮಾಡಿದರು. ಇದರಿಂದ ಅಲ್ಲಿಯ ಕನ್ನಡಿಗರ ಹುಮ್ಮಸ್ಸು ಕುಗ್ಗುವುದೆಂದು ಬಗೆದರು. ಆದರೆ ನಾವು ಮೊಂಡಿಯೂರಲಿಲ್ಲ. ಬೀದರಿನ ಇತಿಹಾಸದಲ್ಲಿಯೇ ಅತ್ಯದ್ಭುತವೆನಿಸಿದ ಪ್ರತಿಭಟನಾ ಮೆರವಣಿಗೆಯನ್ನು ಸಂಘಟಿಸಿದೆವು. ಹತ್ತು ಸಾವಿರ ಜನರು ಬೀದರಿನ ಬೀದಿಗಳಲ್ಲೆಲ್ಲ 'ಕನ್ನಡ ಜಿಂದಾಬಾದ್, ಏಕಬೋಟೆ ಮುರ್ದಾಬಾದ್' ಘೋಷಣೆಗಳನ್ನು ಕೂಗಿದರು. ಚಾಣಾಕ್ಷರಾದ ಬಿ. ರಾಮಕೃಷ್ಣರಾಯರು ಮಧ್ಯದಲ್ಲಿ ಪ್ರವೇಶಿಸಿ ರದ್ದುಗೊಳಿಸಿಬಿಟ್ಟರು ಆ ವರ್ಗಾವಣೆಗಳನ್ನು. ಬೀದರ ಜಿಲ್ಲೆಯ ಕನ್ನಡಿಗರ ಹಿಗ್ಗು ಕೋಡಿವರಿಯಿತು; ಅಲ್ಲಿಯ ಮರಾಠೀ ಮುಖಂಡರಿಗೆ ಮಂಗಳಾರತಿಯಾಗಿ ಅವರ ಉಪದ್ವ್ಯಾಪ, ಉಪಟಳಗಳು ಕಡಿಮೆಯಾದುವು.

ಏಕಬೋಟೆಯವರು ತಮಗಾದ ತೇಜೋವಧೆಯಿಂದ ಕುಪಿತರಾದರು. ನನ್ನನ್ನೂ 'ಮಾನ್ವಿ'ಯವರನ್ನೂ ಕರೆಸಿ, "ನೀವು ಸರಕರದ ಸೇವೆಯಲ್ಲಿದ್ದು ಚಳುವಳಿಗಳಲ್ಲಿ ಸೇರುವುದು ಸೇವಾನಿಯಮಗಳಿಗೆ ವಿರುದ್ಧವಾದುದು. ಇನ್ನಾದರೂ ಇದರ ಎಚ್ಚರಿಕೆಯೊಡನೆ ನಡೆಯಿರಿ; ಇಲ್ಲವಾದರೆ ನಿಮ್ಮ ಪಾಲಿಗೆ ಕೆಟ್ಟ ಪರಿಣಾಮ ಕಟ್ಟಿಟ್ಟ ಗಂಟು," ಎಂದು ಗದ್ದರಿಸಿದರು. ನಾನು ಸೌಮ್ಯಸ್ವರದಲ್ಲಿಯೇ ಉತ್ತರಿಸಿದೆ: "ಅಗತ್ಯವಾಗಿ ನಮ್ಮ ವಿರುದ್ಧ ಸಿ.ಆರ್. ಗಳಲ್ಲಿ ಬರೆಯಿರಿ. ಹಿಂದೆ ರಝಾಕಾರ ಸರಕಾರ ನಮ್ಮ ವಿರುದ್ಧ ಬರೆದುದು ನಮಗೀಗ ಅನುಕೂಲವಾಗಿ ಪರಿಣಮಿಸಿದೆ; ಈಗ ನೀವು ಬರೆಯುವುದು ನಾಳೆ ನಮ್ಮ ಕರ್ನಾಟಕ ಸರಕಾರ ಬಂದಾಗ ನಮಗೆ ಪ್ರಯೋಜನಕರವಾಗುವುದು." ಮಂತ್ರಿಗಳು ಮೆತ್ತಗಾದರು. ಏನೇನೋ ಗುಂಡು ಗುಂಡಗೆ ಮಾತನಾಡಿ ಕಳಿಸಿಕೊಟ್ಟರು. ಆಮೇಲೆ ಅನೇಕ ಸಂದರ್ಭಗಳಲ್ಲಿ ಅವರ ಭೇಟಿ ಆಗಿದ್ದಿತು. ಅವರೂ ಆ ವಿಷಯ ತೆಗೆಯಲಿಲ್ಲ. ನಾನೂ ತೆಗೆಯಲಿಲ್ಲ. ಅವರೇ ಒಂದೆರಡು ಸಭೆಗಳಲ್ಲಿ ನನ್ನನ್ನು ಶ್ಲಾಘಿಸಿದುದೂ ಉಂಟು.

## ಚೆನ್ನಾರೆಡ್ಡಿ

ಅಣ್ಣಾರಾಯರ ನಿರ್ಗಮನ ನನಗೊಂದು ಸಮಸ್ಯೆಯನ್ನು ತಂದೊಡ್ಡಿತು. ಎಲ್ಲಿಂದ ಬಂದಿದ್ದೆನೋ ಅಲ್ಲಿಗೆ–ಎಂದರೆ ಕಂದಾಯ ಇಲಾಖೆಯ ಅಧೀನ



ಕಾರ್ಯದರ್ಶಿಯ ಸ್ಥಾನಕ್ಕೆ ಹೋಗಲೆಳಸಿದೆ. ಆಗ ಅಲ್ಲಿ ಕುಳಿತಿದ್ದವರು ಪ್ರಬಲರು. ಕೆ.ವಿ. ರಂಗಾರೆಡ್ಡಿಯವರೇ ಕಂದಾಯ ಮಂತ್ರಿಗಳಾಗಿದ್ದೂ ನನ್ನನ್ನಲ್ಲಿಗೆ ತೆಗೆದುಕೊಳ್ಳಲು ಅವರಿಂದ ಆಗಲಿಲ್ಲ. ಅವರ ಕಾರ್ಯದರ್ಶಿ ದಾರಿತಪ್ಪಿಸಿ ಬಿಟ್ಟಿದ್ದ ಅವರಿಗೆ. ಏನಾದರೂ ಆಗಲಿ, ಸರ್ವೆ ಇಲಾಖೆಗೆ ಮಾತ್ರ ಮತ್ತೆ ಹೋಗಕೂಡದೆಂದು ನಿರ್ಧರಿಸಿದೆ. ನನ್ನನ್ನು ಅಲ್ಲಿಗೇ ದಬ್ಬಬೇಕೆಂದಿದ್ದ ಕೆಲವರ ಕುತಂತ್ರ ನನಗೆ ಅರ್ಥವಾಗಿದ್ದಿತು. ಇದನ್ನರಿತ ಡಾ॥ ಎಮ್. ಚೆನ್ನಾರೆಡ್ಡಿಯವರು ತಾವೇ ಕರೆಸಿ ನನ್ನನ್ನು ತಮ್ಮ ಆಪ್ತ ಕಾರ್ಯದರ್ಶಿಯನ್ನಾಗಿ ನಿಯಮಿಸಿಕೊಂಡರು. ಆಪ್ತ ಕಾರ್ಯದರ್ಶಿತ್ವದ ಕೆಲಸ ನನ್ನ ಜಾಯಮಾನಕ್ಕೆ ಒಗ್ಗಿರಲಿಲ್ಲ. ಆ ಕೆಲಸಕ್ಕೆ ಒಪ್ಪಿಯೇ ನನಗೆ ಉದರ ವಾಯುವ್ಯಾಧಿ ಪ್ರಾರಂಭವಾಗಿ ಬಿಟ್ಟಿದ್ದಿತು. ಒಂದು ತಿಂಗಳ ಆಸ್ಪತ್ರೆ ಸೇರಿಯೂ ಆಗಿದ್ದಿತು. ಡಾ॥ ಬೆಂಕಟಚಂದ್ರರು, 'Avoid hurry, worry and curry' ಎಂದು ಹೇಳಿ ಕಳಿಸಿದ್ದರು. ಈ ಕೆಲಸ ಮಾಡುತ್ತ ಅವರ ಹಿತೋಪದೇಶವನ್ನು ಪಾಲಿಸಲು ಸಾಧ್ಯವಿರಲಿಲ್ಲ. ಆದರೂ ಬೇರೆ ದಾರಿ ತೋರದೆ ಒಪ್ಪಿಕೊಂಡೆ. ಮತ್ತೆ ಸುತ್ತಾಟ, ಜನಗಳ ಕಾಟ ಪ್ರಾರಂಭವಾದುವು. ಅವರ ಬಳಿ ಬರುತ್ತಿದ್ದ ಜನರ ಸಂಖ್ಯೆಯೂ ದೊಡ್ಡದು. ಎಲ್ಲರಿಗೆ ಭೇಟಿ ಕೊಡಿಸುವುದು ಸಾಧ್ಯವಾಗುತ್ತಿರಲಿಲ್ಲ. ಕೆಲವರು ನನ್ನ ಮೇಲೆ ರೇಗಿ ಹೋಗುತ್ತಿದ್ದರು. ಒಮ್ಮೆ ಯಾರೋ ಎಲ್ಲಿಂದಲೋ ಫೋನ್ ಮಾಡಿ, 'ಮಂತ್ರಿಗಳಿದ್ದಾರೆಯೆ?' ಎಂದು ಕೇಳಿದರು. ನಾನು, 'ಇದ್ದಾರೆ, ವಿಶ್ರಾಂತಿ ಪಡೆಯುತ್ತಿದ್ದಾರೆ, ಎಂದು ಉತ್ತರಿಸಿದೆ. ತುಂಬ ಸಿಟ್ಟು ಬಂದಿತವರಿಗೆ. ಕಿರಿಚಿದರು ದೂರವಾಣಿಯಲ್ಲಿಯೇ, "ಯಾವ ಮಂತ್ರಿಗಳನ್ನು ಕೇಳಿದರೂ ಸ್ನಾನ ಮಾಡುತ್ತಿದ್ದಾರೆ, ಊಟ ಮಾಡುತ್ತಿದ್ದಾರೆ. ವಿಶ್ರಾಂತಿ ಪಡೆಯುತ್ತಿದ್ದಾರೆ ಎಂಬ ಉತ್ತರಗಳೇ ದೊರೆಯುತ್ತವೆ. ಇವರನ್ನು ಮಂತ್ರಿಗಳನ್ನಾಗಿ ಮಾಡಿ ತಪ್ಪು ಮಾಡಿದೆ ನಾನು!" ನನಗೆ ನಗೆ ತಡೆಯದಾಯಿತು." ಈ ತಪ್ಪು ಇನ್ನೊಮ್ಮೆ ಮಾಡಬೇಡಿರಿ. ಅನ್ಯರನ್ನು ಮಂತ್ರಿ ಮಾಡುವ ಬದಲು ನೀವೇ ಮಂತ್ರಿಗಳಾಗಿ ಬಿಡಿರಿ," ಎಂದು ಹೇಳಿ ಬಿಟ್ಟೆ. ಟೆಲಿಫೋನ್ ಕೆಳಗಿಟ್ಟರವರು–ಇಟ್ಟ ಶಬ್ದ ನನಗೆ ಕೇಳುವ ಹಾಗೆ.

ಆಡಳಿತದಲ್ಲಿ ಬಹಳ ಗಟ್ಟಿಗರು ಚೆನ್ನಾರೆಡ್ಡಿಯವರು. ಸಿಕ್ಕಾಪಟ್ಟೆ ಮಾತು ಕೊಡುತ್ತಿರಲಿಲ್ಲ–ಆದರೆ ಮಾತು ಕೊಟ್ಟರೆಂದರೆ ಕೆಲಸವಾದಂತೆಯೇ, ವಿಲಂಬಗಳ ವೈರಿ. ಆಡಳಿತದಲ್ಲಿ ಯಾರೇ ವಿಲಂಬ ಮಾಡಲಿ, ಅವರ ಫಜೀತಿ ಮಾಡಿ ಬಿಡುತ್ತಿದ್ದರು. ಆದುದರಿಂದ ಅಧಿಕಾರಿಗಳಿಗೆ ಅವರೆಂದರೆ ಸಿಂಹಸ್ವಪ್ನ. ಕೃಷಿ, ಯೋಜನೆ, ನಾಗರಿಕ ಸರಬರಾಜು, ಹಾಗೂ ಅಭಿವೃದ್ಧಿ ಇಲಾಖೆಗಳನ್ನು ಹೊಂದಿದ್ದ ಅವರು ಅಷ್ಟೇ ಶ್ರಮವಹಿಸಿ ದುಡಿಯುತ್ತಲೂ ಇದ್ದರು. ರಫಿ ಅಹಮ್ಮದ್ ಕಿದ್ವಾಯಿ ಸಾಹೇಬರಿಗೆ

ಬಹಳ ಬೇಕಾದವರಾಗಿದ್ದರು. ಕಿದ್ವಾಯಿ ಸಾಹೇಬರು ತೀರಿಕೊಂಡಾಗ ಮಗುವಿನಂತೆ ಅತ್ತರು. ಆಮೇಲೆ ಎಸ್.ಕೆ. ಡೇಗೆ ಬಹಳ ಮೆಚ್ಚಿನವರಾದರು. ಎನ್.ಈ.ಎಸ್. ಹಾಗೂ ಸಿ.ಡಿ. ಕ್ಷೇತ್ರಗಳಲ್ಲಿ ಎದ್ದು ಕಾಣುವ ಕೆಲಸ ಮಾಡಿತೋರಿಸಿದುದೇ ಇದಕ್ಕೆ ಕಾರಣ. ನನಗೆ ಕೃಷಿ, ಅಭಿವೃದ್ಧಿ, ಯೋಜನೆ ಇತ್ಯಾದಿ ವಿಷಯಗಳಲ್ಲಿ ತಕ್ಕಮಟ್ಟಿಗೆ ಆಳವಾದ ಅನುಭವ ಹಾಗೂ ಪರಿಜ್ಞಾನಗಳು ದೊರೆತುದು ಅವರೊಡನಿದ್ದಾಗಲೇ. ಆಗ ವಿಚಾರ ಸಂಕಿರಣಗಳು ಹೇರಳ. ದಕ್ಷಿಣ ರಾಜ್ಯಗಳನ್ನೆಲ್ಲ ಒಳಗೊಂಡ ಒಂದು ವಿಚಾರ ಸಂಕಿರಣ ಔರಂಗಾಬಾದಿನಲ್ಲಿ ನಡೆಯಿತು. ನಾನು ಆಪ್ತಕಾರ್ಯದರ್ಶಿ–ಯಾಗಿದ್ದೂ ಅದರಲ್ಲಿ ಪ್ರಮುಖ ಪಾತ್ರವಹಿಸಿದೆ. "ರಾಷ್ಟ್ರೀಯ ಅಭಿವೃದ್ಧಿ ಸಮಾಜ ವಿಕಾಸ ಯೋಜನೆ ಯಶಸ್ವಿಯಾಗಬೇಕಾದರೆ ಆಗಿದ್ದ ಸೌಕರ್ಯ (Amenity) ಪ್ರಧಾನ ಕಾರ್ಯಕ್ರಮದಲ್ಲಿ ಸ್ವಲ್ಪ ಮಾರ್ಪಾಟಾಗಿ ಹಳ್ಳಿಗರ ಆರ್ಥಿಕ ಪರಿಸ್ಥಿತಿ ಸುಧಾರಿಸುವಂಥ ಕೆಲಸ ಕಾರ್ಯಗಳನ್ನೂ ಅದರಲ್ಲಿ ಸಮಾವೇಶಗೊಳಿಸಬೇಕು. ಇಲ್ಲದಿದ್ದರೆ ಅದರಲ್ಲಿ ಅವರಿಗೆ ಉತ್ಸಾಹ ಕ್ರಮೇಣ ಕಡಿಮೆಯಾಗುತ್ತ ಹೋಗುವುದು. ಕುಡಿಯುವ ನೀರಿನ ಭಾವಿ, ಶಾಲಾಭವನ ಮೊದಲಾದ ಅತ್ಯಾವಶ್ಯಕ ಸೌಕರ್ಯಗಳಿಗೆ ಮಾತ್ರ ಸ್ಥಳವಿತ್ತು, ಹೆಚ್ಚಿನ ಹಣವನ್ನು ಭೂಸಾರ ರಕ್ಷಣೆ, ಸಣ್ಣ ನೀರಾವರಿ, ಹೈನುಗಾರಿಕೆ, ಕುರಿ, ಕೋಳಿ ಸಾಕಣೆ, ಕುಟೀರ ಕೈಗಾರಿಕೆಗಳು ಇತ್ಯಾದಿಗಳಿಗಾಗಿ ವಿನಿಯೋಗಿಸ–ಬೇಕೆಂದು ಎತ್ತಿ ಒತ್ತಿ ಹೇಳಿದೆ. ಮೊದಲು ಹಳ್ಳಿ ಹಳ್ಳಿಗಳಲ್ಲಿ ಸಾಧ್ಯವಿರುವ ಸಣ್ಣ ನೀರಾವರಿ ಕಾರ್ಯಗಳೆಲ್ಲ ಮುಗಿಯಲಿ; ಏತನೀರಾವರಿ, ನೀರಾವರಿ ಭಾವಿಗಳು, ಕರೆ–ಕಟ್ಟೆ ಬಾಂದುಗಳು ಹಳ್ಳಿಹಳ್ಳಿಗೆ ನಿರ್ಮಾಣಗೊಂಡಾಗ ಅಭಿವೃದ್ಧಿ ಅಲ್ಪ ಪ್ರಮಾಣದಲ್ಲಿಯೇ ಆಗಲೊಲ್ಲದೇಕೆ, ಎಲ್ಲರಿಗೂ ಮೊದಲು ಮುಟ್ಟಿದಂತಾಗುತ್ತದೆ. ಆಮೇಲೆ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಬಹುದು–ಎಂದು ಬೇಕಾದಷ್ಟು ವಾದಿಸಿದೆ. ಆದರೆ ಯಾವ ಮೇಲೂ ಯಾವ ಪರಿಣಾಮವೂ ಆಗಲಿಲ್ಲ. ಚೆನ್ನಾರೆಡ್ಡಿಯವರು ಮಾತ್ರ ನನ್ನ ವಾದ ಸರಣಿಯನ್ನು ಒಪ್ಪಿದರು. ಬೇರೆ ರಾಜ್ಯಗಳಲ್ಲಿ ಮಾಡಲಿ, ಬಿಡಲಿ–ನಮ್ಮ ರಾಜ್ಯದಲ್ಲಿದನ್ನು ಮಾಡಿಬಿಡೋಣವೆಂದರು. ಆ ರೀತಿ ಮಾಡಿಯೂ ತೋರಿಸಿದರು.

## ಶ್ರೀನಗರಕ್ಕೆ

ಶ್ರೀನಗರದಲ್ಲಿ ಕೃಷಿ ಮಂತ್ರಿಗಳ ಸಭೆ ಸೇರುವುದೆಂದು ಗೊತ್ತಾಯಿತು. ಚೆನ್ನಾರೆಡ್ಡಿಯವರ ಜೊತೆಗೆ ಅವರ ಧರ್ಮ ಪತ್ನಿ ಸಾವಿತ್ರಿದೇವಿಯವರೂ ಹೊರಟರು. ನೀವೂ ಹೆಂಡತಿಯನ್ನು ಕರೆ ತನ್ನಿ, ಎಂದು ಹೇಳಿದರು ಹೊರಟೆವು. ಹದಿನೈದು ಪ್ರಗತಿಪರ ಬೇಸಾಯಗಾರರನ್ನೂ ಕರೆದೊಯ್ಯಬೇಕಿದ್ದಿತು ಕರೆದೊಯ್ದೆವು. ಅವರಲ್ಲಿ ದೇವದುರ್ಗದ ಅಂಚೆಸುಗೂರು ಶರಣಪ್ಪನವರೂ ಒಬ್ಬರು. ರೇಲ್ವೆ ಪ್ರಯಾಣ



ಮೋಜಿನೊಡನೆ ಮುಗಿಯಿತು. ದೆಹಲಿಯಲ್ಲಿ ಪ್ರಗತಿಪರ ಬೇಸಾಯಗಾರರಿಗೆ ಪ್ರೇಕ್ಷಣೀಯ ಸ್ಥಳಗಳನ್ನೆಲ್ಲ ತೋರಿಸಿಕೊಂಡು ಬರುವ ಕೆಲಸ ನನ್ನ ಪಾಲಿಗೆ ಬಂದಿತು. ಐದು ಟ್ಯಾಕ್ಸಿಗಳಲ್ಲಿ ಹೊರಟೆವು. ಮೊದಲ ರಾಜಘಾಟಿಗೆ ಹೋಗಿ ರಾಷ್ಟ್ರಪಿತನಿಗೆ ಪುಷ್ಪಾಂಜಲಿ ಸಲ್ಲಿಸಿದೆವು. ಆಮೇಲೆ ರಾಷ್ಟ್ರಪತಿ ಭವನ. ಪಾರ್ಲಿಮೆಂಟ್ ಭವನ ಇತ್ಯಾದಿಗಳನ್ನು ನೋಡಿ ಕುತುಬ್ ಮೀನಾರದ ಕಡೆಗೆ ಹೊರಟಿದ್ದೆವು. ಹಾದಿಯಲ್ಲೀ ಒಂದೆಡೆಗೆ ಹೊಸ ಮನೆಗಳ ನಿರ್ಮಾಣ ನಡೆದಿದ್ದಿತು. ಅವನ್ನು ನೋಡುತ್ತಲೆ ಭುಗಿಲೆಂದು ಮೇಲೆದ್ದಿತು ನಮ್ಮ ಟ್ಯಾಕ್ಸಿ ಚಾಲಕ ಸರದಾರಜಿಯ ಸಿಟ್ಟು. ಯಾವ ಚಿತಾವಣೆಯೂ ಇಲ್ಲದೆ ಹಲುಬಿದನಾತ; "ದೇಖೋ ಸಾಬ್, ಕಳ್ಳರು ಮನೆ ಕಟ್ಟಿಕೊಳ್ಳುತ್ತಲಿದ್ದಾರೆ!" ಸಹಜವಾಗಿಯೇ ನನ್ನ ಕುತೂಹಲ ಕೆರಳಿತು. "ಯಾವ ಕಳ್ಳರಣ್ಣಾ?" ಎಂದು ಕೇಳಿದೆ. 'ವೋಚ್ ಸಾಬ್, ಆ ಚೌಧರಿ ಮತ್ತು ಅವನ ಸಂಬಂಧಿಕರು! ಎಂದು ಉತ್ತರಿಸಿದ. "ಯಾವ ಚೌಧರಿ"–ಎಂದು ಕೇಳಲು ಅವರ ಹೆಸರು ಹೇಳಿದ. ಅವರಾಗ ದಿಲ್ಲಿ ಪ್ರದೇಶದ ಮುಖ್ಯಮಂತ್ರಿ!" ಇಲ್ಲಿ ಎಲ್ಲರೂ ಹೀಗೆಯೇ ಏನು? ಯಾರೂ ಒಳ್ಳೆಯವರಲ್ಲವೆ? ಎಂದು ಕೇಳಿದೆ. "ಯಾಕಿಲ್ಲ ಸಾಹೇಬ್, ಹಾಗಿದ್ದರೆ ಬೆಳಗೂ ಬೈಗೂ ಆಗುತ್ತಿರಲಿಲ್ಲ. ಪಂಡಿತಜೀ ಇದ್ದಾರೆ. ದೇವತೆ ಅವರು. ಸರದಾರಜೀ ಸರಿಯೇ. ಅವರಿಂದಲೇ ಬದುಕಿ ಉಳಿದಿದ್ದೇವೆ ನಾವು. ಇನ್ನೊಬ್ಬರು ಕಿದ್ವಾಯಿ ಸಾಹೇಬ್," ಎಂದು ಹೇಳಿದನಾತ. ನನಗೆ ಆಶ್ಚರ್ಯವಾಯಿತು–ಒಬ್ಬ ಸರದಾರಜೀ ಮುಸಲ್ಮಾನರೊಬ್ಬರನ್ನು ಮೆಚ್ಚಿ ಮಾತನಾಡಿದುದನ್ನು ಕೇಳಿ. "ಏನಿದು ಸರದಾರಜೀ, ನೀವು ಮುಸಲ್ಮಾನರನ್ನು ಹೊಗಳುವುದೆ?" ಎಂದು ಕೆಣಕಿ ಕೇಳಿದೆ. "ಇಂಥ ಮುಸಲ್ಮಾನರಿದ್ದರೆ ಅವರ ಪೂಜೆ ಮಾಡುವೆವು ಸಾಹೇಬ್," ಎಂದು ಉತ್ತರವಿತ್ತನಾತ! ಆ ಮುನ್ನ ಹೈದರಾಬಾದಿನಲ್ಲಿ ಒಂದು ಸೈಕಲ್ ರಿಕ್ಷಾದಲ್ಲಿ ಹೋಗುತ್ತಿದ್ದಾಗ ಅದರ ಚಾಲಕನಾಗಿದ್ದ 'ಗೋಪಾಲ'ನನ್ನು ಕೇಳಿದ್ದೆ. 'ನಿನ್ನ ಮೆಚ್ಚಿನ ಮಂತ್ರಿ ಯಾರು?' ಎಂದು. ತಟ್ಟನೆ ಉತ್ತರಕೊಟ್ಟಿದ್ದನಾತ–'ಮೆಹದಿ ನವಾಜ್ ಜಂಗ್' ಎಂದು. ಆಗ ಎನ್ನಿಸಿತು. ನನಗೆ–ನಾವು ಕಲಿತವರು, ಮೇಲಿನ ಶ್ರೇಣಿಯವರು ಎಲ್ಲವನ್ನೂ ಅವರವರ ಜಾತಿಯ ಮಾನದಂಡದಿಂದಲೇ ಅಳೆದರೂ ಈ ಶ್ರೀಸಾಮಾನ್ಯರು ಜಾತಿಗೆ ಬೆಲೆಕೊಡದೆ ಗುಣಕ್ಕೆ ಬೆಲೆ ಕೊಡುತ್ತಿದ್ದಾರೆ–ಇದೊಂದು ಸಮಾಧಾನದ ಸಂಗತಿ, ಎಂದು.

ಕಾಶ್ಮೀರದಲ್ಲಿ ಎರಡು ವಾರ ಇದ್ದೆವು. ಅಲ್ಲಿ ನೋಡಿದುದನ್ನೆಲ್ಲ, ಅನುಭವಿಸಿದುದನೆಲ್ಲ ಬರೆಯಲು ಇದು ಪ್ರವಾಸ ಸಾಹಿತ್ಯ ಪುಸ್ತಕವೇನಲ್ಲ. ನನ್ನ 'ಕಾಶ್ಮೀರದಲ್ಲಿ ಕಾರ್ಗಾಲ' ವೆಂಬ ಕವಿತೆಯಲ್ಲಿ ಅದೆಲ್ಲ ಘನೀಭವಿಸಿದೆ. ಇಲ್ಲಿ

ಉಲ್ಲೇಖಿಸಬೇಕಾದ ಸಂಗತಿಗಳ ಎರಡು ಮೂರು ಮಾತ್ರ. ಪಂಜಾಬಿನಿಂದ ಬಂದಿದ್ದ ಬೇಸಾಯಗಾರರು ನಮ್ಮ ಕೃಷಿ ಇಲಾಖೆಯ ನಿರ್ದೇಶಕರಿಗಿಂತ ಹೆಚ್ಚು ಕೃಷಿ ಜ್ಞಾನವನ್ನು ಪಡೆದವರಾಗಿದ್ದರು. ಅವರಿಗೆ ಉತ್ತರ ಕೊಡಬೇಕಾದರೆ ತತ್ತರಿಸುತ್ತಿದ್ದರು ತಜ್ಞರು. ಕೇಂದ್ರ ಕೃಷಿ ಮಂತ್ರಿ ಪಂಜಾಬರಾವ್ ದೇಶಮುಖರು ನಿಜವಾಗಿಯೂ ಕೃಷಿ ಪ್ರೇಮಿಗಳಾಗಿದ್ದರು. ಬಂಧನದಲ್ಲಿದ್ದರೂ ಷೇಖ್ ಅಬ್ದುಲ್ಲಾರೇ ಅಲ್ಲಿಯ ಜನಪ್ರಿಯ ನಾಯಕರಾಗಿದ್ದರು. ನಾವು ಸಾಮಾನ್ಯರಿಂದ ಸಾಮಾನ್ಯರವರೆಗೆ ಅನೇಕರನ್ನು ಕಾಶ್ಮೀರ ಭಾರತದಲ್ಲಿ ಉಳಿವ ಬಗ್ಗೆ ನಿಮ್ಮ ನಿಜವಾದ ಅಭಿಪ್ರಾಯ ತಿಳಿಸಿರೆಂದು ಕೇಳಿಕೊಂಡೆವು. ಅವರಿಂದ ಒಂದೇ ವಿಧವಾದ ಉತ್ತರ ಸಿಕ್ಕಿತು: ಭಾರತದಲ್ಲಿ ಉಳಿದರೇ ನಮಗೆ ಸುಖವೆಂಬುದು ನಮಗೆ ಗೊತ್ತಿದೆ; ಆದರೆ ನಮ್ಮ ಮುಂದೆ ಪವಿತ್ರ ಕುರಾಣವನ್ನು ಒಂದು ಕಡೆಗೆ, ಭಾರತದ ನಕ್ಷೆಯನ್ನು ಇನ್ನೊಂದು ಕಡೆಗೆ ಇರಿಸಿ ಇವುಗಳಲ್ಲಿ ನಿಮಗೆ ಯಾವುದು ಬೇಕು–ಎಂದು ಕೇಳಿದರೆ ನಾವೇನು ಮಾಡಬೇಕು ನೀವೆ ಹೇಳಿರಿ. ಧರ್ಮವನ್ನು ತ್ಯಜಿಸಲಾಗುವುದೆ?" ಇದು ೧೯೫೩ರ ಕೊನೆಯಲ್ಲಿದ್ದ ಅವರ ಅಭಿಪ್ರಾಯ. ಅಂದಿನಿಂದೀಚೆಗೆ ಜೆಹಲಮ್ ಸೇತುವೆಗಳ ಕೆಳಗೆ ಬಹಳಷ್ಟು ನೀರು ಹರಿದಿದೆ.

ಶಂಕರಾಚಾರ್ಯರ ಹೆಸರಿನಲ್ಲಿಯೇ ಇರುವ ಶಿಖರ ಹತ್ತಿ ಶಿವಲಿಂಗ ದರ್ಶನ ಮಾಡಿಕೊಂಡೆವು. ಅದೇ ಸಮಯಕ್ಕೆ ಅಲ್ಲಿಗೆ ಭಾರತ ಸೇನೆಯ ಕೆಲವು ಜವಾನರು ಬಂದಿದ್ದರು. ಎಲ್ಲರೂ ಆರ್ಚಕನಿಗೆ ಒಂದು ಶಿವಸ್ತೋತ್ರ ಹಾಡಲು ಕೇಳಿಕೊಂಡರು. ಹಾಡಿದ ಆರ್ಚಕ. ಅವನ ಹಾಡು ಆ ಶೃಂಗಮಂದಿರದ ಅಂತರಾಳವನ್ನು ತುಂಬಿ, ಕೆಳಗೆ ಕುಹರ ಕಂದರಗಳಲ್ಲಿ ಪ್ರತಿಧ್ವನಿಸಿತು. ಪರವಶತೆಯೋ ಪರಶಿವವಶತೆಯೋ ಆವರಿಸಿತ್ತು ನಮ್ಮನ್ನು. ದೆಹಲಿಯಿಂದ ಒಬ್ಬ ಸ್ಥೂಲಕಾಯದ ಕೋಟ್ಯಾಧೀಶನೂ ಬಂದಿದ್ದನಲ್ಲಿಗೆ. ಅವನ ಶರೀರ ಬಾಧೆಯನ್ನು ಕಳೆಯಲು ಯಾರಿಂದಲೂ ಸಾಧ್ಯವಾಗಿರಲಿಲ್ಲ. ಎಲ್ಲ ಆಶೆ ಬಿಟ್ಟ ಮೇಲೆ ಯಾರೋ ಹೇಳಿದರಂತೆ 'ಅಲ್ಲಿಗೊಮ್ಮೆ ಹೋಗಿ ಬಾ' ಎಂದು ಬಂದಿದ್ದ. ಹತ್ತು ಮೆಟ್ಟಲುಗಳಿಗೊಮ್ಮೆ ಕುಳಿತು ದಣುವಾರಿಸಿಕೊಳ್ಳುತ್ತ ಹೇಗೋ ಅಲ್ಲಿಯವರೆಗೆ ಹತ್ತಿ ಬಂದಿದ್ದ. ಇದ್ದಕ್ಕಿದ್ದಂತೆ ಯಾವ ಆದೇಶ ಆವರಿಸಿತೋ ಅವನಿಗೆ–ಎದ್ದು ಓಡಲು ಪ್ರಾರಂಭಿಸಿದ. ಓಡುತ್ತ ಓಡುತ್ತಲೇ ದಾಲ್ ಸರಿಸಿಯಲ್ಲಿದ್ದ ತನ್ನ ನೌಕಾಗೃಹ ತಲುಪಿದ. ಬಿಡುವಿಲ್ಲದೆ ಬೆಮರತೊಡಗಿದನಂತೆ. ಸಂಜೆಯ ಹೊತ್ತಿಗೆ ಬೆಮರುವುದು ನಿಂತಾಗ ಮೈನೋವೆಲ್ಲ ಹೊರಟು ಹೋಯಿತಂತೆ. ಇದಕ್ಕಾಗಿಯೇ ಶಿಖರಗಳ ಮೆಲೆ ಮಂದಿರಗಳನ್ನು ಕಟ್ಟುತ್ತಿದ್ದರೇನೋ ಹಿಂದಿನವರು!



ಆ ಘಟನೆಯನ್ನೇನೋ ಪ್ರಜ್ಞಾ ಪಾತಳಿಯಲ್ಲಿ ಸಮರ್ಥಿಸಿಕೊಂಡೆವು ನಾವು. ಇನ್ನೊಂದು ಘಟನೆ ಅದೇ ರಾತ್ರಿ ನಡೆಯಿತು. ಅದಕ್ಕೆ ತಾರ್ಕಿಕ ಉತ್ತರ ಇದುವರೆಗೂ ಸಿಕ್ಕಿಲ್ಲ ನನಗೆ. ಅಂದು ರಾತ್ರಿ ನನ್ನ ಕನಸಿನಲ್ಲಿ ಆದಿ ಶಂಕರಾಚಾರ್ಯರು ಕಾಣಿಸಿಕೊಂಡರು. ಆ ಶಿಖರ ಮಂದಿರದಲ್ಲಿ ಅವರ ಮನೋಹರ ಚಿತ್ರ ನೋಡಿದ್ದೆನಾಗಿ ಕನಸಿನಲ್ಲಿ ಅವರು ಕಂಡುದು ಆಶ್ಚರ್ಯವೆನಿಸಲಿಲ್ಲ ನನಗೆ. ಆದರೆ ಅವರು ಸುಮ್ಮನಿರದೆ, "ನಿನ್ನ ಸ್ನೇಹಿತರೊಬ್ಬರಿಗೆ ಮಕ್ಕಳೇ ಆಗಲಿಲ್ಲವೆಂದು ನಿನಗೆ ದುಗುಡವಿದೆಯಷ್ಟೆ? ಚಿಂತಿಸಬೇಡ, ಇನ್ನೊಂದು ವರ್ಷದೊಳಗಾಗಿ ಅವರಿಗೆ ಗಂಡು ಮಗು ಜನಿಸುವುದು!" ಎಂದು ಹೇಳಿ ಕಾಣದಾದರು. ನಾನು ಎದ್ದು ಸುಖ ನಿದ್ರೆಯಲ್ಲಿದ್ದ ಸತಿಯನ್ನು ಎಬ್ಬಿಸಿದೆ. ಆ ಕನಸಿನ ವಿಷಯ ಹೇಳಿದೆ. ಯಾವ ಸ್ನೇಹಿತರ ಬಗ್ಗೆ ಈ ಕಳವಳ ನಮ್ಮಗಿದ್ದಿತೆಂಬುದು ಇಬ್ಬರಿಗೂ ಬೇಗ ಹೊಳೆಯಲಿಲ್ಲ. ಏನೇ ಆಗಲಿ, ಪರೀಕ್ಷಿಸೋಣವೆಂದು ಕನಸು ಬಿದ್ದ ದಿನಾಂಕವನ್ನೂ ಬರೆದಿಟ್ಟುಕೊಂಡೆವು. ಮರುದಿನ ಷಿಕಾರಾದಲ್ಲಿ ಸುತ್ತುತ್ತಿರುವಾಗ ಹೊಂಬಳ ಗುರುಸಿದ್ದಪ್ಪ–ವಿರೂಪಾಕ್ಷಮ್ಮರೇ ಅವರಾಗಿರಬಾರದೇಕೆ? ಅವರಿಗೂ ಮದುವೆಯಾಗಿ ಒಂದು ಪಟ್ಟ ಮೇಲಾಗಿದ್ದರೂ ಮಕ್ಕಳಾಗಿರಲಿಲ್ಲ. ಇದ್ದರೆ ಅವರೇ ಇರಬೇಕೆಂದು ತರ್ಕಿಸಿದೆವು. ಕಾಶ್ಮೀರದಿಂದ ಹೊರಟು ನಾವು ವಾರ್ಧಾ ಸೇವಾಗ್ರಾಮಗಳಿಗೆ ಹೋಗಿ, ಬಾಪೂಜಿಯ ಪಾದುಕೆಗಳಿಗೆ ವಂದಿಸಿ, ನಾಗಪುರದ ಪಾರವೇಕರ್ ದೇಶಮುಖರ ಮನೆಯಲ್ಲಿ ಎಡು ದಿನ ಕಳೆದು ಎರಡು ವಾರಗಳ ತರುವಾಯ ಹೈದರಾಬಾದಿಗೆ ಹಿಂದಿರುಗಿದೆವು. ಮರುದಿನವೇ ವಿರೂಪಾಕ್ಷಮ್ಮನನ್ನು ಗುಟ್ಟಾಗಿ ಕೇಳಿದೆವು. ಈ ಸಲ ಯಾಕೋ ಮಾಸಿಕ ಪಾಳಿ ಹದಿನೈದು ದಿನ ತಡವಾಗಿದೆಯೆಂದು ಹೇಳಿದರು. 'ಇದೇಕೆ ಎಂದಿಲ್ಲದೆ ಇಂದು ಈ ವಿಷಯ ಕೇಳುತ್ತಿದ್ದೀರಿ?' ಎಂದವರು ಕೇಳಿದಾಗ ಕಂಡ ಕನಸನ್ನು ವಿವರಿಸಿದೆವು. 'ನಿಮ್ಮ ಕನಸು ನನಸಾಗಲಿ' ಎಂದು ಹಿಗ್ಗಿ ಹೇಳಿದರವರು. ಗರ್ಭನಿಂತುದು ದೃಢಪಟ್ಟಿತು. ನವಮಾಸ ತುಂಬಿ ಪುತ್ರರತ್ನವನ್ನು ಹೆತ್ತರು. 'ಶಿವಕುಮಾರ' ಎಂದು ಹೆಸರಿಟ್ಟರು. ಇದನ್ನು ವೈಜ್ಞಾನಿಕವಾಗಿ ಸಮರ್ಥಿಸುವುದು ಸಾಧ್ಯವಿಲ್ಲವೆಂಬುದು ಗೊತ್ತಿದ್ದೂ ನಡೆದುದನ್ನು ನಡೆದಂತೆ ಬರೆದಿಟ್ಟಿದ್ದೇನೆ. ಯಾರಾದರೂ ಇದಕ್ಕೆ ವೈಚಾರಿಕ ಸಮರ್ಥನೆ ನೀಡಿದರೆ ನೀಡಲಿ.

ಆ ವರ್ಷದ ನಾಡಹಬ್ಬವನ್ನು ಅನೇಕ ಸ್ಥಳಗಳಲ್ಲಿ ಅತ್ಯುತ್ಸಾಹದೊಡನೆ ಆಚರಿಸುವಂತೆ ಪೂರ್ವಭಾವಿ ಸಿದ್ಧತೆಗಳನ್ನು ಮಾಡಲಾಯಿತು. ಸುಸ್ಥಿತಿಯಲ್ಲಿದ್ದ ಕರ್ನಾಟಕ ಸಂಘಗಳು ಎಂದಿನಂತೆ ತಮ್ಮ ವೆಚ್ಚದಿಂದಲೇ ನಾಡಹಬ್ಬವನ್ನು ಆಚರಿಸಿದರು; ಆದರೆ ಅಷ್ಟು ಸುಸ್ಥಿತಿಯಲ್ಲಿಲ್ಲದ ಕನ್ನಡ ಸಂಘಗಳಿಗಾಗಿ ಒಂದು

ವಿನೂತನ ಯೋಜನೆಯನ್ನು ರೂಪಿಸಿದೆವು. ಹಿರಿಯ ಸಾಹಿತಿಗಳು ಹಲವರೊಡನೆ ಮೊದಲೇ ಪತ್ರ ವ್ಯವಹಾರ ನಡೆಸಿ ಒಬ್ಬೊಬ್ಬರೂ ನಾಲ್ಕೈದು ನಾಡಹಬ್ಬಗಳಲ್ಲಿ ಭಾಗವಹಿಸುವ ಹಾಗೆ ಅವರ ಕಾರ್ಯಕ್ರಮಗಳನ್ನು ನಾವೇ ಸಿದ್ಧಗೊಳಿಸಿ ಅವರಿಗೆ ಕಳಿಸಿದೆವು. ಆ ಕಾರ್ಯಕ್ರಮಗಳನ್ನು ಸಿದ್ಧಪಡಿಸುವಾಗ ಆಯಾ ಸಂಘ ಸಂಸ್ಥೆಗಳ ಸಮ್ಮತಿಯನ್ನೂ ಮೊದಲೇ ಪಡೆದುಕೊಂಡ ಕಾರಣ ಎಲ್ಲರಿಗೂ ಇದರಿಂದ ಹಿರಿಯ ಸಾಹಿತಿಗಳು ದೊರೆತುದಲ್ಲದೆ ಬಹಳ ಕಡಿಮೆ ವೆಚ್ಚವನ್ನು ಅವರು ವಹಿಸುವಂತಾಯಿತು. ಮೊದಲ ದಿನ ಯಾವ ನಾಡಹಬ್ಬ ಕಾರ್ಯಕ್ರಮದಲ್ಲಿ ಆ ಹಿರಿಯ ಸಾಹಿತಿಗಳು ಭಾಗವಹಿಸುವರೋ ಆ ನಾಡಹಬ್ಬ ಸಮಿತಿಯವರು ಆ ಸಾಹಿತಿಗಳ ಊರಿನಿಂದ ತಮ್ಮ ಊರಿನವರೆಗಿನ ಪ್ರಯಾಣ ವೆಚ್ಚವನ್ನು ಮಾತ್ರ ವಹಿಸಬೇಕಿದ್ದಿತು; ಎರಡನೆಯ ದಿನ ಅವರು ಯಾವ ನಾಡಹಬ್ಬ ಕಾರ್ಯಕ್ರಮದಲ್ಲಿ ಭಾಗವಹಿಸುವರೋ ಅಲ್ಲಿಯವರು ಮುನ್ನಿನ ಊರಿನಿಂದ ತಮ್ಮ ಊರಿನವರೆಗಿನ ವೆಚ್ಚವನ್ನು ಮಾತ್ರ ವಹಿಸಬೇಕಿತ್ತು. ಹೀಗೆ ಸಾಗುತ್ತ ಕೊನೆಯ ಊರಿನವರು ಅವರು ಹಿಂದಿರುಗಿ ಹೋಗುವ ವೆಚ್ಚವನ್ನು ಮಾತ್ರ ವಹಿಸಬೇಕಾಗುತ್ತಿತ್ತು. ಮೊದಲನೆಯ ಹಾಗೂ ಕೊನೆಯ ದಿನಗಳ ಕಾರ್ಯಕ್ರಮಗಳಿಗಾಗಿ ಇದ್ದುದರಲ್ಲಿಯೇ ಸುಸ್ಥಿತಿಯಲ್ಲಿದ್ದ ನಾಡಹಬ್ಬ ಸಮಿತಿಗಳನ್ನು ಆರಿಸಲಾಗುತ್ತಿತ್ತು. ಯಾಕೆಂದರೆ ಅವರೇ ಹೆಚ್ಚು ವೆಚ್ಚ ಭರಿಸಬೇಕಾಗುತ್ತಿತ್ತು. ಯಾವ ಸಂಸ್ಥೆಗಾದರೂ ಭಾರವೆನಿಸಿದಾಗ ಹೈದರಾಬಾದು ಪ್ರದೇಶ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಕೊರತೆಯನ್ನು ಭರಿಸಲಾಗುತ್ತಿದ್ದಿತು.

### ಉದಾರದೃಷ್ಟಿ; ಸಣ್ಣತನ :

ಈ ವ್ಯವಸ್ಥೆಯಿಂದ ಹೆಚ್ಚು ವೆಚ್ಚವಿಲ್ಲದೆ ಆ ವರ್ಷ ನೂರಾರು ಕಡೆಗೆ ನಾಡಹಬ್ಬಗಳು ಬಹಳ ಉತ್ಸಾಹ ವೈಭವಗಳೊಡನೆ ಜರುಗಿದುವು. ನಾನೇ ಒಂಬತ್ತು ದಿನಗಳೂ ಒಂದೊಂದು ಕಡೆಗೆ ಹೋಗಬೇಕಾಗಿ ಬಂದಿತು. ಹದಿನೈದು ದಿನಗಳ ರಜೆ ಬೇಕೆಂದು ಮನವಿ ಸಲ್ಲಿಸಿದೆ. ಡಾ॥ ಚೆನ್ನಾರೆಡ್ಡಿಯವರು ಕೇಳಿದರು: "ಯಾತಕ್ಕಾಗಿ ಈ ರಜೆ?" ನಾನು ಕಾರಣ ವಿವರಿಸಿದೆ. ಅವರು ನಕ್ಕು ಹೇಳಿದರು: "ಇದಕ್ಕೆ ರಜೆ ಬೇಕೆ? ಕನ್ನಡದ ಕೆಲಸ ಈ ಸರಕಾರದ ಕೆಲಸವಲ್ಲವೆ? ಸರಕಾರ ಮಾಡಬೇಕಾದ ಕೆಲಸವನ್ನು ನೀವೇ ಮಾಡುತ್ತಿರುವಾಗ ಅದಕ್ಕೆ ರಜೆ ಬೇರೆ ತೆಗೆದುಕೊಳ್ಳಬೇಕೆ? ಹೋಗಿರಿ, ನಿಮ್ಮ ನಾಡಹಬ್ಬದ ಕೆಲಸವನ್ನು 'ಆನ್ ಡ್ಯೂಟಿ' ಎಂದು ಪರಿಗಣಿಸಿ ನಿಮಗೆ ಪ್ರಯಾಣ ಭತ್ಯ ದಿನ ಭತ್ಯಗಳನ್ನೂ ಮಂಜೂರು ಮಾಡಲಾಗುವುದು!" ನಾನು ವಿಸ್ಮಿತನಾದೆ–ಅಲ್ಲ ಸ್ತಂಭಿತನಾದೆ. ನಮ್ಮದೇ ಆದ ಕರ್ನಾಟಕಕ್ಕೆ ಸೇರಿ, ಅಲ್ಲಿ



1–11–1956ರಿಂದ ಜೂನ್ 1976ರವರೆಗೆ ಇಪ್ಪತ್ತು ವರ್ಷ ನಿದ್ದೆ ನೀರಡಿಕೆಗಳೆನ್ನದೆ ಕನ್ನಡ ನಾಡಿಗಾಗಿ, ಕನ್ನಡ ಜನಕ್ಕಾಗಿ, ಕನ್ನಡಕ್ಕಾಗಿ ಕಾಯ ತೆಯ್ದ ನನಗೆ, ಇಲ್ಲಿ ಒದಗಿದ ಕಟು ಅನುಭವಗಳನ್ನು ನೆನೆದಾಗ 'ಚೆನ್ನಾರೆಡ್ಡಿಯವರ ಈ ವಿಶಾಲ ದೃಷ್ಟಿಯ ವರ್ತನೆ ನಿಜವಾಗಿ ನಡೆದ ಘಟನೆಯೆ?' ಎಂಬ ಸಂಶಯ ಸುಳಿದು ಹೋಗುತ್ತದೆ. ನನ್ನ ಒಂದೆರಡು ಕಟು ಅನುಭವಗಳನ್ನಾದರೂ ಇಲ್ಲಿ ಉಲ್ಲೇಖಿಸಲೇಬೇಕು–ಚೆನ್ನಾರೆಡ್ಡಿಯವರ ಈ ಉದಾರ ದೃಷ್ಟಿಯನ್ನು ಅರ್ಥಮಾಡಿಕೊಳ್ಳಲು. ನನಗೆ ಕೊಡಗಿನಿಂದ ಬೆಂಗಳೂರಿಗೆ ವರ್ಗವಾಗಿತ್ತು. ಕೊಡಗಿನಲ್ಲಿ ನಾನು ಮಾಡಿದ ಕೆಲಸವನ್ನು ಮೆಚ್ಚಿ ಮಡಿಕೇರಿಯ ನಗರ ಸಭೆಯವರು ನನಗೆ ನಗರ ಸಭೆಯ ಪರವಾಗಿ ಮಾನಪತ್ರ ಕೊಡಲು ನಿರ್ಧರಿಸಿದರು. ಅನುಮತಿಗಾಗಿ ಸರಕಾರಕ್ಕೆ ಬರೆದುಕೊಂಡರು. ಅದು ಮೈಸೂರಿನ ವಿಭಾಗಾಧಿಕಾರಿಗಳ ಮುಖಾಂತರ ಪ್ರಧಾನ ಕಾರ್ಯದರ್ಶಿಗಳಿಗೆ ಹೋಬಬೇಕಾಗಿದ್ದಿತು. ಆಗ ವಿಭಾಗಾಧಿಕಾರಿ–ಗಳಾಗಿದ್ದವರು ಅಲ್ಪತನಕ್ಕೆ, ಅಹಂಕಾರಕ್ಕೆ, ಅಸೂಯೆಗೆ ಹೆಸರಾದವರು. ನಾನು ಮಡಿಕೇರಿ ಬಿಡುವವರೆಗೆ ಅವರು ಆ ಕೋರಿಕೆಯನ್ನು ವಿಧಾನಸೌಧಕ್ಕೆ ಕಳಿಸಲೇ ಇಲ್ಲ. ನಾನು ಮಾನಪತ್ರ ಬೇಡಿರೆಂದು ಹೇಳಿ ಹೊರಟು ಬಂದೆ. ಅವರಿಗೆ ಉತ್ಸಾಹ ಭಂಗವೇನೋ ಆಯಿತು. ಆದರೆ ಉಪಾಯವಿರಲಿಲ್ಲ. ಸೇವಾಜೀವನದಲ್ಲಿದ್ದ ಮೇಲೆ ಬಂದುದೆಲ್ಲವನ್ನು ನುಂಗಿ ನೀರು ಕುಡಿಯುತ್ತಲೇ ಹೋಗಬೇಕಲ್ಲವೆ? ಇನ್ನೊಮ್ಮೆ ರಾಯ್ಚೂರು ನಗರ ಸಭೆಗೆ ಇಂಥದೇ ಒಂದು ಉತ್ಸಾಹಭಂಗ ಉಂಟಾಯಿತು. ನಾನಾಗ ಬೆಳಗಾವಿ ಜಿಲ್ಲೆಯ ಜಿಲ್ಲಾಧಿಕಾರಿ, ರಾಯ್ಚೂರು ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ಆರಿಸಿದರು. ನನ್ನ ಪರಮ ಬಂಧುಗಳೂ, ಕನ್ನಡದ ಹುಟ್ಟು ಹೋರಾಟಗಾರರೂ, ಆಗ ಮೈಸೂರಿನ ವಿಶ್ವವಿದ್ಯಾಲಯದ ಕುಲಪತಿಗಳೂ ಆಗಿದ್ದದೇ, ಜವರೇಗೌಡರು ಉದ್ಘಾಟಕರು. ಈ ವಿಷಯವನ್ನರಿತ ರಾಯ್ಚೂರು ನಗರ ಸಭೆಯವರು ನನಗೂ, ದೇ. ಜವರೇಗೌಡರಿಗೂ ಮಾನಪತ್ರ ಕೊಡಲು ನಿರ್ಧರಿಸಿ ತಾವೇ ಸರಕಾರಕ್ಕೆ ಅನುಮತಿಗಾಗಿ ಬರೆದುಕೊಂಡರು. ಯಥಾಪ್ರಕಾರ ವಿಧಾನಸೌಧದಿಂದ ಯಾವ ಉತ್ತರವೂ ಬರಲಿಲ್ಲ. ಮೌನವೇ ಸಮ್ಮತಿಯೆಂದು ಭಾವಿಸಿ ನಗರಸಭೆಯವರು ನಮ್ಮಿಬ್ಬರ ಮಾನಪತ್ರಗಳನ್ನೂ, ಆಮಂತ್ರಣ ಪತ್ರಿಕೆಗಳನ್ನೂ ಅಚ್ಚು ಹಾಕಿಸಿದರು. ಅವುಗಳನ್ನು ನಮಗೆ ಅರ್ಪಿಸಲು ಗೊತ್ತಾದ ದಿನ ಅವರಿಗೊಂದು ವಿಧಾನಸೌಧದಿಂದ ತಂತಿ ಬಂದಿತು–'ಸಿದ್ದಯ್ಯ ಪುರಾಣಿಕರು ಮಾನಪತ್ರ ಸ್ವೀಕರಿಸಲು ಪರವಾನಗಿ ಕೊಡಲಾಗುವುದಿಲ್ಲ.' ಎಂದು. ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಜಿ. ನಾರಾಯಣ ಅವರಿಗೆ ಸಖೇದಾಶ್ಚರ್ಯ! ದೇ. ಜವರೇಗೌಡರೊಬ್ಬರಿಗೇ ಅರ್ಪಿಸಿ ಮಾನ ಉಳಿಸಿಕೊಂಡರು. ನಗರಸಭೆಯವರು

ನಾನು ಕಾರ್ಮಿಕ ಕಮೀಷನರ್ ಆಗಿ ಬೆಂಗಳೂರಿಗೆ ಬಂದ ಮೇಲೆ ಬೆಳಗಾವಿಯಲ್ಲಿ ನನ್ನ ೫೫ನೆಯ ಹುಟ್ಟು ಹಬ್ಬವನ್ನಿಟ್ಟುಕೊಂಡರು ಅಲ್ಲಿಯ ಸಾಹಿತಿ ಮಿತ್ರರು. ಆ ಸಂದರ್ಭದಲ್ಲಿ 'ಕಾವ್ಯಾನಂದ' ಎಂಬ ಅಭಿನಂದನ ಗ್ರಂಥವನ್ನು ಅರ್ಪಿಸುವ ಸಿದ್ಧತೆ ಮಾಡಿಕೊಂಡರು. ಅದಕ್ಕಾಗಿ ಓಡಿಸಾದ ರಾಜ್ಯಪಾಲರಾಗಿದ್ದ ಮಾನ್ಯ ಬಿ.ಡಿ. ಜತ್ತಿಯವರು ಭುವನೇಶ್ವರದಿಂದ ಬಂದರು. ಯಥಾಪ್ರಕಾರ ಅನುಮತಿಗಾಗಿ ಬರೆದಿದ್ದೆ. ಹೊರಡುವ ಮುನ್ನಾದಿನ ಉತ್ತರ ಬಂದಿತ್ತು: "ರಜೆ ಪಡೆದುಕೊಂಡು ನಿಮ್ಮ ವೆಚ್ಚದಲ್ಲಿ ಹೋಗಿ ಬನ್ನಿರಿ!" ಎಂದು. ನಾನಾಗಲೇ ರಜೆ ಪಡೆದುಕೊಂಡಿದ್ದೆ; ನನ್ನ ವೆಚ್ಚದಲ್ಲಿಯೇ ಹೋಗಿಬರಲು ನಿರ್ಧರಿಸಿಯೂ ಇದ್ದೆ. ಆದರೆ ಪರವಾನಗಿ ಪತ್ರದಲ್ಲಿ ಈ ಕರಾರು ಹಾಕಿ ತಮ್ಮ ಕ್ಷುದ್ರತೆಯ ಪ್ರದರ್ಶನವೊಂದನ್ನುಳಿದು ಇನ್ನೇನನ್ನು ಸಾಧಿಸಿದರೋ ವಿಧಾನಸೌಧದ ಸಣ್ಣಮನದ ದೊಡ್ಡವರು! ಹದಿನೈದು ದಿನಗಳವರೆಗೆ ನಾಡಹಬ್ಬಗಳಲ್ಲಿ ಭಾಗವಹಿಸಿ ಸರಕಾರದಿಂದ ಪ್ರಯಾಣ ಭತ್ಯೆ, ದಿನ ಭತ್ಯೆ ಪಡೆದುಕೋ ಎಂದು ಆಜ್ಞೆ ಮಾಡಿದರು ಡಾ॥ ಚೆನ್ನಾರೆಡ್ಡಿಯವರು–ಒಂದು ತ್ರಿಭಾಷಾ ರಾಜ್ಯದಲ್ಲಿ ಮಂತ್ರಿಗಳಾಗಿದ್ದವರು, ತೆಲುಗು ಮಾತೃಭಾಷೆಯಾಗಿದ್ದವರು. ಇದಕ್ಕೆ ವ್ಯತಿರಿಕ್ತವಾಗಿ ಕರ್ನಾಟಕ ರಾಜ್ಯದಲ್ಲಿಯೇ, ಕರ್ನಾಟಕದ ರಾಜಧಾನಿಯಲ್ಲಿಯೇ, ಕನ್ನಡ ಮೇಲಧಿಕಾರಿಗಳೇ, ಕನ್ನಡ ಮಂತ್ರಿಗಳ ಮೂಗಿನ ಕೆಳಗೇ ಇಂಥ ಕ್ಷುದ್ರತನವನ್ನು ತೋರಿದರು. ಕನ್ನಡಕ್ಕೆ ಎಲ್ಲಕ್ಕಿಂತ ಹೆಚ್ಚಿನ ವೈರಿಗಳಿರುವುದು ವಿಧಾನಸೌಧದಲ್ಲಿ, ಅಧಿಕಾರಿ ವರ್ಗದಲ್ಲಿ–ಎಂಬುದು ಇದರಿಂದ ಸಿದ್ಧಾವಾಗುವುದಿಲ್ಲವೆ? ಇವರ ಕ್ಷುದ್ರತನವನ್ನು, ಕನ್ನಡ ವಿರೋಧವನ್ನು ಮೆಟ್ಟಿ ಕನ್ನಡ ಭಕ್ತರಿಗೆ ಕಿರುಕುಳ ತಪ್ಪಿಸುವಂಥ ಖಂಬೀರರೂ ಬಂದಾರೆ? ಜಾತೀಯತೆಯ ಮಾತನ್ನಿಲ್ಲಿ ನಾನೆತ್ತಿಲ್ಲ. ಅದರ ಬಗ್ಗೆ ಬರೆದರೆ ಅದೇ ಒಂದು ಪುಸ್ತಕವಾದೀತು!

ಒಂಬತ್ತು ದಿನಗಳವರೆಗೆ ನಾನು ಹೋದಲ್ಲೆಲ್ಲ ನಾಡಹಬ್ಬಗಳ ವೈಭವೋತ್ಸಾಹಗಳನ್ನು ನೋಡಿ ಪುಲಕಿತನಾದೆ. ನಾವು ಸಿದ್ಧಪಡಿಸಿದ್ದ ಕಾರ್ಯಕ್ರಮಗಳಂತೆ ಹಿರಿಯ ಸಾಹಿತಿಗಳು ಎಲ್ಲ ಕಡೆಗೂ ಸಕಾಲಕ್ಕೆ ಬಂದು ತಮ್ಮ ಉದ್ಬೋಧಕ ಉಪನ್ಯಾಸಗಳಿಂದ ಶ್ರೋತೃಗಳನ್ನು ಸಂತೋಷ ಸರಸಿಯಲ್ಲಿ ಮೀಯಿಸಿದ್ದರು. ಈ ಎಲ್ಲ ಕಾರ್ಯಕ್ರಮಗಳ ವಿವರಗಳನ್ನು ತಿಳಿದು ಪ್ರೀತರಾದ ಮಾನ್ಯ ಮಾಸ್ತಿಯವರು ತಮ್ಮ 'ಜೀವನ' ಪತ್ರಿಕೆಯಲ್ಲಿ ಹೀಗೆ ಬರೆದರು: "ನಮ್ಮ ಹೈದರಾಬಾದು ಕರ್ನಾಟಕದ ಮಿತ್ರರು ಈ ಸಲದ ನಾಡಹಬ್ಬವನ್ನು ಅನೇಕ ಕಡೆಗಳಲ್ಲಿ ಅತ್ಯುತ್ಸಾಹದೊಡನೆ ಆಚರಿಸಿದುದು ಪ್ರಶಂಸನೀಯವಾದುದಾಗಿದೆ. ಕರ್ಣಧಾರರಾಗಿದ್ದುಕೊಂಡು ಈ ಎಲ್ಲ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿದ ಶ್ರೀ ಸಿದ್ಧಯ್ಯ ಪುರಾಣಿಕರಿಗೆ ಕನ್ನಡಿಗರು ಕೃತಜ್ಞರಾಗಿರಬೇಕು."



## ಗ್ರಂಥ ಸಂಪಾದನೆ :

ನಾಡಹಬ್ಬಕ್ಕಾಗಿ ಸಂಚರಿಸುವಾಗ ಅನೇಕ ಹೊಸಹೊಸ ಕನ್ನಡ ಕಾರ್ಯಕರ್ತರ ಪರಿಚಯವಾಯಿತು. ಎಲ್ಲರೂ ನಮ್ಮವೇ ಆದ ಕನ್ನಡ ಪರೀಕ್ಷೆಗಳನ್ನು ಹೈದರಾಬಾದು ಪ್ರದೇಶ ಕನ್ನಡ ಸಾಹಿತ್ಯ ಪರಿಷತ್ತು ನಡೆಸಬೇಕೆಂದು ಸೂಚಿಸಿದರು. ಅದನ್ನು ಅಂಗೀಕರಿಸಿ ಪರಿಷತ್ತು ಆ ಯೋಜನೆಯನ್ನು ಕೈಗೊಂಡಿತು. ಪ್ರಾರಂಭದಲ್ಲಿ "ಕನ್ನಡ ಪ್ರಥಮ" ಎಂಬ ಒಂದೇ ಪರೀಕ್ಷೆಯನ್ನು ನಡೆಸಲಾಯಿತು. ಅದಕ್ಕಾಗಿ 'ಮಾನ್ವಿ'ಯವರೂ ನಾನು ಸೇರಿ 'ಕವಿತಾವಲಿ' ಹಾಗೂ 'ಕಥಾವಲಿ' ಎಂಬ ಎರಡು ಪುಸ್ತಕಗಳನ್ನು ಸಂಪಾದಿಸಿ ಪ್ರಕಟಿಸಿದೆವು. ಮೊದಲನೆಯ ವರ್ಷವೇ ಮೂರು ಸಾವಿರ ಅಭ್ಯರ್ಥಿಗಳನ್ನು ಆ ಪರೀಕ್ಷೆ ಕೊಟ್ಟರು. ಅರ್ಧಕ್ಕೂ ಹೆಚ್ಚು ಜನರು ಪಾಸಾದರು. 'ಕನ್ನಡ ಪದ್ಯ ರತ್ನಾಕರ'ವೆಂಬ ಗ್ರಂಥವನ್ನು ಮಾನ್ವಿಯವರೂ ನಾನೂ ಬಹು ಪ್ರಯಾಸಪಟ್ಟು ಸಂಪಾದಿಸಿದೆವು. ಅದು ಪ್ರಾಯೇಣ ಎಲ್ಲ ಒಳ್ಳೆಯ ಕನ್ನಡ ಕಾವ್ಯಗಳ ಉತ್ತಮ್ಮೋತ್ತಮ ಭಾಗಗಳನ್ನು ಒಳಗೊಂಡಿದೆ. ಅದನ್ನು ಸಂಪಾದಿಸುವಾಗ ವೈಯಕ್ತಿಕವಾಗಿ ನನಗಾದ ಲಾಭವೆಂದರೆ ಅದುವರೆಗೂ ಓದದಿದ್ದ ಕೆಲವು ಕನ್ನಡ ಕಾವ್ಯಗಳನ್ನು 'ಮಾನ್ವಿ'ಯವರೊಡನೆ ಓದಿದುದು. ಅವರ ಅಗಾಧವಾದ ಪಾಂಡಿತ್ಯ, ರಸಪ್ರಜ್ಞೆ, ಸೂಕ್ಷ್ಮ ವಿಮರ್ಶನ ಶಕ್ತಿಗಳ ಪರಿಚಯ ನನಗೆ ಸಮಗ್ರವಾಗಿ ಆದುದು ಆಗಲೇ. ವಿಶ್ವವಿದ್ಯಾಲಯದಲ್ಲಿರಬೇಕಾಗಿದ್ದ ಅವರು ಯಾವ ಯಾವುದೋ ಇಲಾಖೆಯಲ್ಲಿ ಕಾಲಹರಣ ಮಾಡುವಂತಾದುದು ಕನ್ನಡಕ್ಕಾದ ದೊಡ್ಡ ನಷ್ಟವೆಂದು ನಾನು ಎಂದಿನಿಂದಲೂ ನಂಬಿದ್ದೇನೆ. ಅವರಿಗೆ ವಿಶ್ವವಿದ್ಯಾಲಯದ ಸ್ಥಾನ ತಪ್ಪಿಸಿದವರು ಕನ್ನಡಕ್ಕಾದ ಈ ಅಪಾರವಾದ ನಷ್ಟಕ್ಕೆ ಹೊಣೆಗಾರರಾಗಲೇಬೇಕಾಗುತ್ತದೆ. ಅವರ 'ನಡುಗನ್ನಡ ನಿರ್ಣಯ'ವನ್ನು ಹಠಹಿಡಿದು ಕರ್ನಾಟಕ ಸಾಹಿತ್ಯ ಮಂದಿರದ 'ಪ್ರಕಟಣೆಗಾಗಿ ಹೊರೆತಂದ ತೃಪ್ತಿ ನನಗೆ. ಇತ್ತ ಹೈದರಾಬಾದು ಪ್ರದೇಶ ಕನ್ನಡ ಸಾಹಿತ್ಯ ಪರಿಷತ್ತಿಗೆ ಹೆಗಲು ಕೊಟ್ಟಿದ್ದ ನಾವಿಬ್ಬರೂ ಕರ್ನಾಟಕ ಸಾಹಿತ್ಯ ಮಂದಿರ, ನಾಡಹಬ್ಬ ಉತ್ಸವ ಸಮಿತಿ ಇತ್ಯಾದಿಗಳಲ್ಲಿಯೂ ಹೆಚ್ಚಿನ ಹೊಣೆ ಹೊರಬೇಕಾಗುತ್ತಿದ್ದಿತು. ಸಂತೋಷದಿಂದಲೇ ಹೊರುತ್ತಿದ್ದೆವು. ಹಗಲೂಟ ತಪ್ಪಿದ ಹಗಲುಗಳೆಷ್ಟೋ, ನಿದ್ರೆಗೆ ಎರವಾದ ರಾತ್ರಿಗಳೆಷ್ಟೋ–ಯಾರು ಲೆಕ್ಕ ಹೇಳಬೇಕು?

ಚಿ. ಅನ್ನದಾನಿಯ ಮದುವೆ ಇದೇ ಸಮಯಕ್ಕೆ ಹುಟ್ಟೂರಾದ ದ್ಯಾಂಪುರದಲ್ಲಿ ನಡೆಯಿತು. ತಂಗಿ ವೀರಾಂಬೆಯ ಸುಪುತ್ರಿ ನೀಲಾಂಬಿಕೆಯೇ ಅವನ ಕೈಹಿಡಿದಳು. ಮೊದಲು ತಂದೆ–ತಾಯಿಗಳಿಲ್ಲದ ನೀಳಾಂಬೆಯನ್ನು ವರಿಸಲು ಹಿಂದೆಗೆದ ಅನ್ನದಾನಿ. ಅವನ ಅತ್ತಿಗೆ ಗಿರಿಜಾದೇವಿ ಒಪ್ಪಿಸಿದಳು ಮೈದುನನ್ನು–'ಅಕ್ಕನ ಆತ್ಮಕ್ಕೆ ಶಾಂತಿ

ಸಿಕ್ಕಲು ನೀವಿದನ್ನು ಒಪ್ಪಲೇಬೇಕೆಂದು,' ವಾದಿಸಿ.ಚಿ. ಶರಣಮ್ಮನ ಮದುವೆಯನ್ನು ಮಾಡಿದಂತೆ ಹೈದರಾಬಾದಿನಲ್ಲಿಯೇ ಈ ಮದುವೆಯನ್ನು ಮಾಡಬೇಕೆಂದೆ. ಇದೊಂದು ಮದುವೆ ಹುಟ್ಟೂರಿನಲ್ಲಿಯೇ ಆಗಲೆಂದರು. ಉಪಾಯವಿಲ್ಲದೆ ಅಲ್ಲಿಗೇ ಹೋದೆವು. ಕೊಪ್ಪಳದಿಂದ ಒಂದು ಬಸ್ಸಿನ ತುಂಬ ಗಣ್ಯರು ಹೊರಟರು. ಕೊಪ್ಪಳ ಬದಿಯ ಹಿರೇಹಳ್ಳದಲ್ಲಿ ಬಸ್ಸು ಸಿಕ್ಕಿಬಿದ್ದಿತು. ಟ್ರ್ಯಾಕ್ಟರ್‌ದಿಂದ ಎಳಿಸಿ ಆಚೆಗೆ ಒಯ್ಯಬೇಕಾಯಿತು. ಆ ಕಟು ಅನುಭವ ನಾನು ನವಾಬ್ ಮೆಹದಿನವಾಜ ಜಂಗರನ್ನು ಕಂಡು ಹಿರೇಹಳ್ಳಕ್ಕೆ ಸೇತುವೆ ಮಂಜೂರು ಮಾಡಿಸುದುದಲ್ಲದೆ, ಕೊಪ್ಪಳ-ಗಜೇಂದ್ರಗಡ ಮಾರ್ಗವನ್ನೇ ಮಂಜೂರು ಮಾಡಿಸುವಂತೆ ಮಾಡಿತು. ಅವರು ದೊಡ್ಡ ಮನದವರು.

ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಪ್ರೊ॥ ಎ.ಎನ್. ಮೂರ್ತಿರಾಯರು ಕಾಗದ ಬರೆದು ಅಖಿಲ ಕರ್ನಾಟಕ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯ ಸಮಿತಿಯ ಸಭೆಯನ್ನು ಬೀದರಿನಲ್ಲಿ ನಡೆಸಲು ವ್ಯವಸ್ಥೆ ಮಾಡಿಕೊಡಲು ಕೋರಿದರು. ಎಲ್ಲ ವ್ಯವಸ್ಥೆ ಮಾಡಲು ಒಪ್ಪಿದುದಲ್ಲದೆ ಕಾರ್ಯ ಸಮಿತಿಗೆ ಬರುವ ಹಿರಿಯ ಸಾಹಿತಿಗಳೆಲ್ಲ ಎರಡು ದಿನ ಬೀದರ ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ಕನ್ನಡದ ಪ್ರಚಾರೋಪನ್ಯಾಸಗಳನ್ನು ನೀಡಲೂ ಏರ್ಪಾಟು ಮಾಡಿಕೊಡುವೆನೆಂದು ಬರೆದೆ. ಅದಕ್ಕೆ ಅವರೂ, ಕಾರ್ಯ ಸಮಿತಿಯ ಸಭೆಗೆ ಬರಲೊಪ್ಪಿದ್ದ ಹಿರಿಯ ಸಾಹಿತಿಗಳೂ ಒಪ್ಪಿದರು. ಬೀದರದ ಕನ್ನಡ ಭಕ್ತರು ಎಂದಿನಂತೆ ಸಕ್ರಿಯ ಸಹಕಾರ ನೀಡಿದರು. ಬಹಳ ಅಚ್ಚುಕಟ್ಟಾದ ವ್ಯವಸ್ಥೆಗಳನ್ನು ಮಾಡಿದರು.

21-7-1954ರಂದು ಹೈದರಾಬಾದಿನ ವಿದ್ಯಾವರ್ಧಕ ಹಾಸ್ಟೆಲಿನಲ್ಲಿ ಡಾ॥ ಜಿ.ಎಸ್. ಮೇಲ್ಕೋಟೆಯವರ ಅಧ್ಯಕ್ಷತೆಯಲ್ಲಿ ಪ್ರೊ॥ ಎ.ಎನ್. ಮೂರ್ತಿರಾಯರೂ, ಪ್ರೊ॥ ವಿ. ಸೀತಾರಾಮಯ್ಯನವರೂ, ಪ್ರೊ॥ ಜಿ. ವೆಂಕಟಸುಬ್ಬಯ್ಯನವರೂ ಅಮೋಘವಾದ ಉಪನ್ಯಾಸಗಳನ್ನಿತ್ತರು. 22ಕ್ಕೆ ಅವರೂ, ಶ್ರೀ ನಿಟ್ಟೂರು ಶ್ರೀನಿವಾಸ ರಾಯರೂ, ಶ್ರೀ ಡಿ.ಸಿ. ಸುಬ್ಬರಾಯಪ್ಪನವರೂ ಬೀದರಿನಲ್ಲಿ ಬೃಹತ್ ಬಹಿರಂಗ ಸಭೆಯೊಂದನ್ನು ಉದ್ದೇಶಿಸಿ ಮಾತನಾಡಿದರು. ಬೀದರ ಜಿಲ್ಲಾ ಕನ್ನಡ ಶಿಕ್ಷಣ ಸಮಿತಿಯ ಸಹಕಾರದೊಡನೆ ಮರುದಿನ ಬೇರೆ ಬೇರೆ ಸ್ಥಳಗಳಲ್ಲಿ ಸಭೆಗಳನ್ನು ಏರ್ಪಡಿಸಿ ಒಂದೇ ದಿನದಲ್ಲಿ ಐವತ್ತು ಸಹಸ್ರಕ್ಕೂ ಹೆಚ್ಚು ಕನ್ನಡಿಗರು ಕನ್ನಡ ಸಾಹಿತಿಗಳ ಉದ್ಬೋಧಕ ಉಪನ್ಯಾಸಗಳನ್ನು ಕೇಳುವ ಹಾಗೆ ಮಾಡಲಾಯಿತು. ಅದೇ ಅಖಿಲ ಕರ್ನಾಟಕ ವಿದ್ಯಾ ಪರಿಷತ್ತನ್ನು ಕಟ್ಟಿ, ಕೇಂದ್ರಮಂತ್ರಿ ಕೆ.ಸಿ. ರೆಡ್ಡಿಯವರಿಂದ ಉದ್ಘಾಟನೆ ಮಾಡಿಸಿ, ಅದರ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಅನ್ನದಾನಯ್ಯ ಪುರಾಣಿಕರೂ ಈ ಕಾರ್ಯದಲ್ಲಿ ಮಹತ್ವದ ಪಾತ್ರ ವಹಿಸಿದರು. ಭಾಲ್ಕಿಯ ಬೃಹತ್ ಸಭೆಯಲ್ಲಿ ಪ್ರೊ॥



ವಿ. ಸೀತಾರಾಮಯ್ಯನವರೂ ಮತ್ತು ಪ್ರೊ॥ ಭೀಮಸೇನಾರಾವ್ ತವಗ ಅವರೂ ಮಾತನಾಡಿದರು; ಪ್ರೊ॥ ಜಿ. ವೆಂಕಟಸುಬ್ಬಯ್ಯನವರೂ ಶ್ರೀ ಅನ್ನದಾನಯ್ಯ ಪುರಾಣಿಕರೂ ಬಂದು, ಗ್ರಾಮದಲ್ಲಿ ಸೇರಿದ್ದ ಸಹಸ್ರಾವಧಿ ಕನ್ನಡ ಹಳ್ಳಿಗಳ ಬಾಂಧವರನ್ನು ಸಂಬೋಧಿಸಿ ಮಾತನಾಡಿದರು; ಪ್ರೊ॥ ಎ.ಎನ್. ಮೂರ್ತಿರಾಯರು ಬೀದರಿನ ವಿದ್ಯಾರ್ಥಿಗಳನ್ನು ಸಂಬೋಧಿಸಿ ಮಾತನಾಡಿದರು; ಮರುದಿನ ಇವರೆಲ್ಲರೂ, ನಿಟ್ಟೂರು ಶ್ರೀನಿವಾಸರಾಯರೂ, ವರದರಾಜ ಆದ್ಯರೂ ಬೀದರಿನಲ್ಲಿ ಇನ್ನೊಂದು ಬೃಹತ್ ಸಭೆಯಲ್ಲಿ ಮಾತನಾಡಿದರು. ಬೀದರ ಜಿಲ್ಲೆಯಲ್ಲೆಲ್ಲ ಕನ್ನಡ ದುಂಧುಬಿ ಮೊಳಗಿತು!

## ಕನ್ನಡದ ಕೆಲಸ :

ಕೀರ್ತನಾಚಾರ್ಯ ಶಿವಲಿಂಗ ಸ್ವಾಮಿಗಳ ಕನ್ನಡ ಕೀರ್ತನೆಗಳು ಎಡೆಬಿಡದೆ ನಡೆದಿದ್ದುವು. ಅವರ ಮೊದಲನೆಯ ಕೀರ್ತನೆ ಆಗ ಹೈದರಾಬಾದು ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ಶ್ರೀ ಮಲ್ಲಪ್ಪ ಕೊಲ್ಲೂರರ ಅಧ್ಯಕ್ಷತೆಯಲ್ಲಿ ಹೈದರಾಬಾದಿನ ವಿದ್ಯಾವರ್ಧಕ ಹಾಸ್ಟೆಲಿನಲ್ಲಿ ನಡೆಯಿತು. ಆಮೇಲೆ ಅವರು ಉದಗಿರಿ, ಹುಮನಾಬಾದು, ಬಸವ ಕಲ್ಯಾಣ, ಬೀದರ, ಚಟಗುಪ್ಪಾ ಇತ್ಯದಿ ಸ್ಥಳಗಳಲ್ಲಿ ತಮ್ಮ ರಸವತ್ತಾದ ಕನ್ನಡ ಕೀರ್ತನೆಗಳನ್ನು ನಡೆಸಿ ಕನ್ನಡದ ಬಗ್ಗೆ ಅಭಿಮಾನ ಮೂಡಿಸಿದರು, ಶ್ರೀ ಎಸ್.ಕೆ. ಕರೀಮಖಾನರೂ ಅನೇಕ ಕಡೆಗಳಲ್ಲಿ ತಮ್ಮ ಜಾನಪದ ಪ್ರವಚನಗಳಿಂದ ಕನ್ನಡದ ಕೆಚ್ಚನ್ನು ಕೊನರಿಸಿದರು. ಬೀದರ ಜಿಲ್ಲೆಯ ಕನ್ನಡಿಗರ ಒಟ್ಟು ಸಮಸ್ಯೆಗಳನ್ನು ಒಳಗೊಂಡ ಒಂದು ಸುದೀರ್ಘ ಮನವಿ ಪತ್ರವನ್ನು ಮುಖ್ಯಮಂತ್ರಿ ಬಿ. ರಾಮಕೃಷ್ಣರಾಯರಿಗೆ ಅರ್ಪಿಸಲಾಯಿತು. ಅದರಿಂದ ತುಂಬ ಪ್ರಯೋಜನವಾಯಿತು. ಮರಾಠಿ ಶಿಕ್ಷಕರೇ ತುಂಬಿದ್ದ ಆ ಜಿಲ್ಲೆಯಲ್ಲಿ ಸಾಕಷ್ಟು ಕನ್ನಡ ಶಿಕ್ಷಕರು, ಕಾಣತೊಡಗಿದರು. ಕನ್ನಡ ಶಾಖೆಗಳ ಸಂಖ್ಯೆಯೂ ಬೆಳೆಯಿತು.

ರಾಜ್ಯ ಪುನ್ರರಚನಾ ಆಯೋಗಕ್ಕೆ ಪರಿಷತ್ತು ತಪ್ಪದೇ ತನ್ನದೇ ಆದ ಜ್ಞಾಪಕ ಪತ್ರವನ್ನು ಸಲ್ಲಿಸಿದುದು ಮಹತ್ವದ ಸಾಧನೆ. ಬಹಳ ವಿಷಯ ಸಂಗ್ರಹ ಮಾಡಿ, ಬಹಳ ಆಧಾರಪೂರ್ವಕವಾಗಿ ಬರೆಯಲಾಗಿದ್ದ ಅದಕ್ಕೆ ಒಂದು ನಕ್ಷೆಯನ್ನೂ ಅಂಟಿಸಿ ಅದರಲ್ಲಿ ಕರ್ನಾಟಕಕ್ಕೆ ಸೇರಬೇಕಾದ ಭಾಗವನ್ನು ಬೇರೆ ಬಣ್ಣದಿಂದ ತೋರಿಸಲಾಗಿದ್ದಿತು. ಸಮಗ್ರ ಬೀದರ ಜಿಲ್ಲೆ, ತಾಂಡೂರು, ಮಹಬೂಬನಗರ ಜಿಲ್ಲೆಯ ಕೆಲವು ಭಾಗಗಳನ್ನು ಕರ್ನಾಟಕಕ್ಕೆ ಸೇರಲೇಬೇಕೆಂದು ಬಲವಾಗಿ ಪ್ರತಿಪಾದಿಸಲಾಗಿದ್ದಿತು ಅದರಲ್ಲಿ. ಏತನ್ಮಧ್ಯೆ ಮರಾಠವಾಡಾ ಮಹಾರಾಷ್ಟ್ರಕ್ಕೆ ಹೋದರೆ

ಹೋಗಲಿ, ತೆಲಂಗಾಣಾ ಹಾಗೂ ಹೈದರಾಬಾದು ಕರ್ನಾಟಕಗಳು ಸೇರಿ 'ವಿಜಯನಗರ ರಾಜ್ಯ'ವೆಂಬ ಪ್ರತ್ಯೇಕ ರಾಜ್ಯವೊಂದನ್ನು ರಚಿಸಬೇಕೆಂಬ ಚಳುವಳಿಯೊಂದು ಆಸಕ್ತ ವ್ಯಕ್ತಿಗಳಿಂದ ಪ್ರಾರಂಭವಾಯಿತು. ಇದಕ್ಕೆ ಹೈದರಾಬಾದು ಕರ್ನಾಟಕದ ಕೆಲವು 'ಮುಂದಾಳು'ಗಳ ಬೆಂಬಲವೂ ದೊರೆಯಿತು. ಆದರೆ ಹೈದರಾಬಾದು ಪ್ರದೇಶ ಕನ್ನಡ ಸಾಹಿತ್ಯ ಪರಿಷತ್ತು ಮಾತ್ರ ಅದನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿತು. ಮತ್ತೆ ಅಪೂರ್ಣ ಕರ್ನಾಟಕಕ್ಕೆ ಕಾರಣವಾಗುವ ಯಾವುದೇ ಪ್ರಯತ್ನವನ್ನೂ ಈ ಪರಿಷತ್ತು ಅಷ್ಟೇ ಬಲವಗಿ ಖಂಡಿಸುವುದೆಂದು ಘಂಟಾಘೋಷವಾಗಿ ಸಾರಿತು.

ಏಕಾಂತರಾಮಯ್ಯನ ಅಳಂದೆಯಲ್ಲಿಯೇ ಕನ್ನಡವನ್ನು ಕೇಳುವರಿರಲಿಲ್ಲ. ಕನ್ನಡದ ಸುದೈವದಿಂದ ಅಲ್ಲಿಗೆ ಚಾತುರ್ಮಾಸಕ್ಕಾಗಿ ಜೈನಗುರುಗಳೂ, ಕನ್ನಡ ಪೋಷಕರೂ, ಪ್ರವಚನ ಪಟುಗಳೂ ಆಗಿದ್ದ ಪೂಜ್ಯ ಪಾಯಸಾಗರ ಮುನಿಗಳು ಆಗಮಿಸಿದರು. ಇದೊಂದು ಸದವಕಾಶವೆಂದು ಬಗೆದು ಅಳಂದೆಗೆ ಧಾವಿಸಿದೆ. ಅಳಂದೆಯಲ್ಲಿ, ಅಳಂದ ತಾಲೂಕಿನಲ್ಲಿ ಜೈನರೆಲ್ಲ ಕನ್ನಡವನ್ನು ಸ್ವೀಕರಿಸುವಂತೆ ಮಾಡಬೇಕೆಂದು ಪ್ರಾರ್ಥಿಸಿಕೊಂಡೆ. ಅವರು ಸಂತೋಷದಿಂದ ಒಪ್ಪಿದರು, ಅವರ ಪ್ರವಚನಗಳೇನೋ ಕನ್ನಡದಲ್ಲಿಯೇ ನಡೆದಿದ್ದುವು. ನಾನು ಪ್ರಾರ್ಥಿಸಿಕೊಂಡ ಮೇಲೆ, 'ಜೈನರಿಗೆ ಕನ್ನಡವೇ ತಾಯಿ ಹಾಲು ಉಳಿದ ಭಾಷೆಗಳೆಲ್ಲ ದಾಯಿ ಹಾಲು; ತಾಯ ಹಾಲು ತೊರೆದು ದಾಯಿ ಹಾಲಿಗೆ ಬಾಯಿ ಬಿಡಬೇಡಿರಿ,' ಎಂದು ಕಟ್ಟುನಿಟ್ಟಾಗಿ ಹೇಳಿಬಿಟ್ಟರು. ಚಾತುರ್ಮಾಸ ಮುಗಿವವರೆಗೂ ಕನ್ನಡದ ಪ್ರಚಾರವನ್ನು ತಮ್ಮ ಪ್ರವಚನಗಳ ಒಂದು ಅಂಗವನ್ನಾಗಿಯೇ ಮಾಡಿಕೊಂಡುಬಿಟ್ಟರು ಆ ಪುಣ್ಯ ಮುನಿವರ್ಯರು. ತತ್ಪರಿಣಾಮವಾಗಿ ಅಳಂದ ತಾಲೂಕಿನ ಜೈನ ಬಾಂಧವರೆಲ್ಲ ಕನ್ನಡದ ಕಡೆಗೆ ತಿರುಗಿದರು. ಈ ಮಹತ್ಕಾರ್ಯವನ್ನು ಮಾಡಿದ ಅವರಿಗೆ ಅಳಂದೆಯಲ್ಲಿಯೇ ಹೈದರಾಬಾದು ಪ್ರದೇಶ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಸನ್ಮಾನ ಸಮಾರಂಭವೊಂದನ್ನು ವಿಜೃಂಭಣೆಯೊಡನೆ ಜರುಗಿಸಿ ಪರಿಷತ್ತಿನ ಪರವಾಗಿ ಮಾನಪತ್ರ ಅರ್ಪಿಸಿ, 'ಪ್ರವಚನಪರಮೇಷ್ಠಿ' ಎಂಬ ಬಿರುದನ್ನು ಅವರಿಗೆ ನೀಡಿ ಗೌರವಿಸಿದೆವು ಅವರನ್ನು.

ರಾಯ್ಚೂರಿನಲ್ಲಿ ಜರುಗಿದ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಗೆ ಸರಕಾರದಿಂದ ಮೂರುಸಾವಿರ ರೂಪಾಯಿ ಸಹಾಯ ಧನವನ್ನು ಮಂಜೂರು ಮಾಡಿಸಿದುದು ಇದೇ ಪರಿಷತ್ತೇ; ಆಗ ಹೈದರಾಬಾದಿಗೆ ಹಿಂದೀ ಪ್ರಚಾರಕರಾಗಿ ಬಂದಿದ್ದ ಅಂಜನೇಯ ಶರ್ಮರ ಸಹಕಾರದೊಡನೆ ಬಹುಭಾಷಾ



ಏಕಾಂಕ ನಾಟಕಗಳ ಸಮಾರೋಹವನ್ನೂ, ಗ್ರಾಮ ಗೀತೋತ್ಸವನ್ನೂ ನಡೆಸಿ ಅವುಗಳಲ್ಲಿ ಕನ್ನಡದ ದಿನಗಳ ಸಂಪೂರ್ಣ ವ್ಯವಸ್ಥೆ ಮಾಡಿತು ಈ ಪರಿಷತ್ತು; ಹಿಂದೀ ಸಮ್ಮೇಳನದಲ್ಲಿ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಒಳ್ಳೆಯ ಪ್ರದರ್ಶನವೊಂದನ್ನು ಏರ್ಪಡಿಸಿತು. ಈ ಪರಿಷತ್ತು; ಪಂಚಭಾಷಾಕವಿ ಸಮ್ಮೇಳನಗಳನ್ನು ಪ್ರೋತ್ಸಾಹಿಸಿ ಕನ್ನಡ, ತೆಲಗು, ಮರಾಠಿ, ಹಿಂದಿ ಹಾಗೂ ಉರ್ದೂ ಭಾಷೆಯ ಕವಿಗಳು ಒಂದೇ ವೇದಿಕೆಯಿಂದ ತಮ್ಮ ಕವನಗಳನ್ನೂ ವಾಚಿಸುವಂತೆ ಅವಕಾಶ ಮಾಡಿಕೊಟ್ಟಿತು ಈ ಪರಿಷತ್ತು. ಈ ಪಂಚಭಾಷಾ ಕವಿ ಸಮ್ಮೇಳನಗಳು ಅದೆಷ್ಟು ಜನಪ್ರಿಯವಾದುವೆಂದರೆ ಹೈದರಾಬಾದಿನಲ್ಲಲ್ಲದೆ ಅನೇಕ ಜಿಲ್ಲೆ–ತಾಲ್ಲೂಕುಗಳಲ್ಲಿಯೂ ಅವು ಯಶಸ್ವಿಯಾಗಿ ನಡೆದುವು. ಜಗೀರಾಬಾದು ಚಮ್ಮರ್‌ಗಳಲ್ಲಿ ಜರುಗಿದ ಪಂಚಭಾಷಾ ಕವಿ ಸಮ್ಮೇಳನಗಳಿಗೆ ನಾನೇ ಅಧ್ಯಕ್ಷನಾಗಿದ್ದೆ; ಉದಗೀರ ಹಾಗೂ ಮೆಹಬೂಬ್ ನಗರಗಳಲ್ಲಿ ಜರುಗಿದ ಇವೇ ಸಮ್ಮೇಳನಗಳಲ್ಲಿ ಭಾಗವಹಿಸಿದೆ. ಕನ್ನಡದ ಪರವಾಗಿ ನಾನು, ಶ್ರೀ ಮಾನ್ವಿ ತೆಲುಗಿನ ಪರವಾಗಿ ದಾಶರಥಿ ಮತ್ತು ನಾರಾಯಣರೆಡ್ಡಿ, ಹಿಂದಿಯ ಪರವಾಗಿ ಭವಾನೀ ಪ್ರಸಾದ ಮಿಶ್ರ ಹಾಗೂ ಡಾ॥ ಆರ್ಯೇಂದ್ರ ಶರ್ಮಾ, ಮರಾಠಿಯ ಪರವಾಗಿ ಶ್ರೀ ಆರ್.ಎಮ್. ಜೋಶಿ, ಉರ್ದೂವಿನ ಪರವಾಗಿ ಷಾಹಿದ್ ಹಾಗೂ ಸರವರ್ ಡಂಡಾ ಈ ಪಂಚ ಭಾಷಾ ಕವಿ ಸಮ್ಮೇಳನಗಳಿಗೆ ತಪ್ಪದೆ ಹೋಗುತ್ತಿದ್ದೆವು. ಇದರಿಂದ ನಮ್ಮೆಲ್ಲರಿಗೆ ಐದು ಭಾಷೆಗಳ ಕವಿ–ಕಾವ್ಯಗಳ ಪರಿಚಯವಾಗಿ ನಮ್ಮ ಅನುಭವದ ಕ್ಷಿತಿಜ ವಿಸ್ತಾರಗೊಂಡಿತು.

ಇದಲ್ಲದೆ ಈ ಪರಿಷತ್ತು ತೆಲಂಗಾಣಾ ಲೇಖಕರ ಸಂಘ, ಹೈದರಾಬಾದು ಹಿಂದೀ ಪ್ರಚಾರ ಸಂಘ, ಸಾಧನ ಸಮಿತಿ ಹಾಗೂ ಕೃಷ್ಣದೇವರಾಯ ಆಂಧ್ರಭಾಷಾ ನಿಲಯಗಳ ಸಹಕಾರದೊಡನೆ ಬಹುದೊಡ್ಡ ಪ್ರಮಾಣದಲ್ಲಿ ರವೀಂದ್ರ ದಿನವನ್ನು ಆಚರಿಸಿತು. ಪುರಾತತ್ವ ಇಲಾಖೆಯ ನಿರ್ದೇಶಕರಾಗಿದ್ದ ಡಾ॥ ಪಿ. ಶ್ರೀನಿವಾಸಾಚಾರಿಯವರು ಅಧ್ಯಕ್ಷತೆ ವಹಿಸಿದ್ದರು; ಮುಖ್ಯಮಂತ್ರಿ ಬಿ. ರಾಮಕೃಷ್ಣರಾಯರು ಉದ್ಘಾಟಿಸಿದರು. ತೆಲುಗು ಲೇಖಕರ ಸಂಘದ ಸಹಕಾರದೊಂದಿಗೆ ಈ ಪರಿಷತ್ತು 'ಸಾಹಿತ್ಯಗೋಷ್ಠಿ' ಎಂಬ ತೆಲುಗು–ಕನ್ನಡ ಪತ್ರಿಕೆಯನ್ನೂ ಪ್ರಾರಂಭಿಸಿತು. ಇದರಿಂದ ಉಭಯ ಭಾಷಾ ಬಾಂಧವ್ಯ ಬೆಳೆಯಲು ಸಹಾಯವಾಯಿತು. ನಾನು ನಗರ ಹಿಂದೀ ಪ್ರೇಮೀ ಮಂಡಳಿಯ ಉಪಾಧ್ಯಕ್ಷನೂ ಆಗಿದ್ದುದರಿಂದ ಕನ್ನಡ ಸಾಹಿತ್ಯದ ಪರಿಚಯವನ್ನು ಹಿಂದೀ ಮಾತನಾಡುವವರಿಗೂ, ಹಿಂದೀ ಪ್ರೇಮಿಗಳಾದ ಬೇರೆ ಭಾಷೆಗಳವರಿಗೂ ಮಾಡಿಕೊಡಲು

ಅನುಕೂಲವಾಯಿತು. ಶ್ರೀ ಎಲ್.ಎನ್. ಗುಪ್ತಾರೇ ಅಧ್ಯಕ್ಷರಾಗಿದ್ದ ಪ್ರೇಮಚಂದ ಸೊಸೈಟಿಯ ಕಾರ್ಯಸಮಿತಿಯಲ್ಲಿಯೂ ನಾನಿದ್ದುದರಿಂದ ಆ ವೇದಿಕೆಯನ್ನೂ ಕನ್ನಡ ಸಾಹಿತ್ಯ ಪ್ರಸಾರಕ್ಕೆ ಬಳಸಿಕೊಂಡುದುಂಟು.

ಅದುವರೆಗೆ 'ಕನ್ನಡ ಪ್ರಥಮಾ' ಪರೀಕ್ಷೆಯೊಂದನ್ನು ಮಾತ್ರ ನಡೆಸುತ್ತಿದ್ದ ಪರಿಷತ್ತು 'ಕನ್ನಡ ಮಧ್ಯಮ' ಎಂಬ ಇನ್ನೊಂದು ಪರೀಕ್ಷೆಯನ್ನೂ ಪ್ರಾರಂಭಿಸಿ ಅದಕ್ಕಾಗಿ ಪಠ್ಯಪುಸ್ತಕಗಳನ್ನೂ, ಪರೀಕ್ಷಾ ಕೇಂದ್ರಗಳನ್ನೂ ಆರಿಸಿತು. ಆ ವರ್ಷ ಎರಡೂ ಪರೀಕ್ಷೆಗಳಿಗೆ ಸೇರಿ ಐದು ಸಾವಿರ ಅಭ್ಯರ್ಥಿಗಳು ಪರೀಕ್ಷೆ ಕೊಟ್ಟುದು ನಮ್ಮೆಲ್ಲರ ಉತ್ಸಾಹ ಉಕ್ಕಿ ಹರಿಯುವಂತೆ ಮಾಡಿದ್ದಿತು. ಅದುವರೆಗೆ ಯಾವ ಸಿಬ್ಬಂದಿಯೂ ಇಲ್ಲದೆ ಏಕವ್ಯಕ್ತಿ ಕಾರ್ಯಾಲಯವಾಗಿ ನಡೆದಿದ್ದ ಪರಿಷತ್ತಿಗೆ ತಿಂಗಳಿಗೆ ಮೂವತ್ತು ರೂಪಾಯಿ ವೇತನದ ಮೇಲೆ ಒಬ್ಬ ಗುಮಾಸ್ತನನ್ನು ನಿಯಮಿಸಿಕೊಳ್ಳಲಾಗಿದ್ದಿತು. ಪರಿಷತ್ತಿನ ಕಾರ್ಯಗಳಿಗಾಗಿ ನಾನೂ, ಶ್ರೀ ಮಾನ್ವಿಯವರೂ ಎಣಿಕೆಯಿಲ್ಲದಷ್ಟು ಸಲ ಹೈದರಾಬಾದಿನ ಒಳಗೂ ಹೊರಗೂ ತಿರುಗಿದುದುಂಟು. ಆದರೆ ಒಮ್ಮೆಯೂ ಒಂದು ಪೈಸೆಯನ್ನೂ ಪರಿಷತ್ತಿನಿಂದ ಪ್ರಯಾಣ ಭತ್ಯವೆಂದು ನಾವು ಸ್ವೀಕರಿಸಲಿಲ್ಲ. ಅದು ಕನ್ನಡದ ಕೆಲಸವೆಂದಲ್ಲ, ಕನ್ನಡದ ಆರಾಧನೆ ಎಂಬ ಪವಿತ್ರ ಭಾವನೆಯೊಡನೆ ಕೆಲಸ ಮಾಡಿದೆವು.

ಬೆಂಗಳೂರಿಗೆ ಅಖಿಲ ಕರ್ನಾಟಕ ಕನ್ನಡ ಸಾಹಿತ್ಯ ಪರಿಷತ್ತಿನೊಡನೆ ಸಂಪರ್ಕ ಏರಿಸಿಕೊಂಡು ಅದಕ್ಕೆ ನೆರವಾಗಿ ನಿಂತುದಲ್ಲದೆ, ಹಿಂದೀ ಉರ್ದೂ ಸಂಸ್ಥೆಗಳ ಸಂಪರ್ಕ ಪಡೆದು ಆ ಭಾಷೆಗಳಲ್ಲಿಯೂ ಕನ್ನಡ ಸಾಹಿತ್ಯದ ಬಗ್ಗೆ ಪ್ರಚಾರ ಮಾಡಿದೆವು, ಮಾನ್ವಿಯವರ 'ಕನ್ನಡ ಸಾಹಿತ್ಯ ಪರಿಚಯ' ಎಂಬ ಹಿಂದೀ ಕಿರುಹೊತ್ತಿಗೆ ಪ್ರಕಟವಾಯಿತು; ನಾನು ಹಿಂದೀ ಮಾಸಪತ್ರಿಕೆಗಳಲ್ಲಿ ಮಾಸ್ತಿ, ಮಧ್ವಾಚಾರ್ಯ, ಬಸವೇಶ್ವರರ ಬಗ್ಗೆ ಬರೆದೆನು. ರಾಜ್ಯ ಹಿಂದೀ ಪ್ರಚಾರ ಸಭೆಯು ಪ್ರಕಟಿಸಿದ 'ಸ್ರವಂತೀ' ಎಂಬ ಮಾಸ ಪತ್ರಿಕೆಯಲ್ಲಿಯೂ ಕನ್ನಡ ಸಾಹಿತ್ಯ ಪರಿಚಯ ಪ್ರಕಟಿಸಿದೆವು. ಪರಿಷತ್ತಿನ ಅಂಗ ಸಂಸ್ಥೆಗಳಾಗಲು ಒಪ್ಪಿದ್ದ ಕರ್ನಾಟಕ ಸಾಹಿತ್ಯ ಮಂದಿರ ಹೈದರಾಬಾದು, ಕರ್ನಾಟಕ ಸಂಘ ಶಹಾಪುರ, ಕರ್ನಾಟಕ ಸಂಘ ಸುರಪುರ, ಕರ್ನಾಟಕ ಸಂಘ ಶಹಬಾದ, ಕರ್ನಾಟಕ ಸಂಘ ಹನುಮಸಾಗರ, ಜಿಲ್ಲಾ ಕನ್ನಡ ಶಿಕ್ಷಣ ಸಮಿತಿ, ಬೀದರ, ಕನ್ನಡ ಸಾಹಿತ್ಯ ಸಂಘ ಗುರುಮಠಕಲ್, ಕರ್ನಾಟಕ ಸಂಘ ರಾಯ್ಚೂರು, ಇತ್ಯಾದಿ ಅಂಗ ಸಂಸ್ಥೆಗಳಿಗೆ ಶಕ್ತ್ಯಾನುಸಾರ ನೆರವು ನೀಡಿತು ಈ ಪರಿಷತ್ತು. ಮುಖ್ಯವಾಗಿ ನಾಡ ಹಬ್ಬಗಳ ಆಚರಣೆ ಸರ್ವತ್ರ ಸುಲಭವೂ, ಸ್ವಲ್ಪ ವೆಚ್ಚದ್ದೂ ಆಗುವಂತೆ ಪರಿಷತ್ತು ಕೈಕೊಂಡ ಯೋಜನೆ ಬಹಳ ಜನಪ್ರಿಯವಾಯಿತು.



ಈ ಬಗ್ಗೆ ನಾನು ಕೊಟ್ಟಿದ್ದ ಪತ್ರಿಕಾ ಪ್ರಕಟನೆಯನ್ನು ಇಲ್ಲಿ ಉದ್ಧರಿಸುವುದು ಅಪ್ರಸ್ತುತವೆನಿಸದೆಂದು ಭಾವಿಸಿದ್ದೇನೆ.

## ನಾಡಹಬ್ಬವನ್ನು ಆಚರಿಸುವವರಿಗೆ ನಮ್ರ ನಿವೇದನ :

"ಈ ವರುಷದ ನಾಡಹಬ್ಬವು ಸಮೀಪಿಸುತ್ತಲಿದೆ. ಹೋದ ವರ್ಷ ಹೈದರಾಬಾದು ಕರ್ನಾಟಕದ ಅನೇಕ ಸ್ಥಳಗಳಲ್ಲಿ ನಾಡಹಬ್ಬವು ವೈಭವೋತ್ಸಾಹಗಳೊಡನೆ ಆಚರಿಸಲ್ಪಟ್ಟಿತೆಂಬುದು ನಿಜ. ಆದರೆ ಯಾದಗಿರಿ ಮೊದಲಾದ ಕೆಲವು ಪ್ರಮುಖ ಸ್ಥಳಗಳಲ್ಲಿ ಅದೇಕೋ ಆಚರಿಸಲ್ಪಡಲಿಲ್ಲ. ಈ ವರ್ಷ ಹಾಗಾಗದೆ ಹೈದರಾಬಾದು ಕರ್ನಾಟಕದ ಎಲ್ಲ ಮುಖ್ಯ ಸ್ಥಳಗಳಲ್ಲಿಯೂ, ಸಾಧ್ಯವಿರುವೆಡೆ ಹಳ್ಳಿ ಹಳ್ಳಿಗಳಲ್ಲಿಯೂ ನಾಡಹಬ್ಬವು ಹುರುಪಿನೊಡನೆ ಆಚರಿಸಲ್ಪಡಲೆಂದು ಹಾರೈಸುತ್ತೇನೆ. ನಮ್ಮ ನಾಡಹಬ್ಬವು ನಮ್ಮ ನಾಡುನುಡಿಗಳ ಗೆಲುವು ಚೆಲುವುಗಳನ್ನು ನಮಗೆ ನೆನಪು ಮಾಡಿಕೊಟ್ಟು, ನಾಡನ್ನು ಕಟ್ಟಲು ನಮ್ಮಲ್ಲಿ ನೂತನೋತ್ಸಾಹ ನವ ನಿರ್ಧಾರಗಳನ್ನು ಹುಟ್ಟಿಸುವ ಹಬ್ಬವಾಗಿದೆ. ಈ ಹಬ್ಬದ ಮಟ್ಟಿಗಾದರೂ ಕನ್ನಡಿಗರೆಲ್ಲ ರಾಜನೈತಿಕ, ಸಾಮಾಜಿಕ, ಲೌಕಿಕ, ಧಾರ್ಮಿಕ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು, ಸರ್ವ ಸಾಮರಸ್ಯದೊಡನೆ, ವೈಭವ–ವಿಜೃಂಭಣೆ–ವಿಧಾಯಕತೆಗಳೊಡನೆ, ಶಕ್ತ್ಯಾನುಸಾರ ಒಂದು ದಿನದಿಂದ ಒಂಬತ್ತು ದಿನಗಳವರೆಗೆ ನಾಡಹಬ್ಬವನ್ನಾಚರಿಸಬೇಕಾದುದು ಅತ್ಯಗತ್ಯವಾದುದಾಗಿದೆ. ನಾಡಹಬ್ಬದ ಕಾರ್ಯಕ್ರಮಗಳು ಕನ್ನಡ ಕಲೆ, ಸಾಹಿತ್ಯ, ಸಂಸ್ಕೃತಿಗಳ ಸಂರಕ್ಷಣೆ ಸಂವರ್ಧನೆಗಳಿಗೆ ಸಹಾಯಕವಾದುವುಗಳಿರಬೇಕು; ನಮ್ಮ ನಾನಾತ್ವದಲ್ಲಿರುವ ಏಕತ್ವದ ಎಳೆಗಳನ್ನು ಕಂಡು ಹಿಡಿದು ರಾಷ್ಟ್ರಜೀವನದ ರವ್ಯಾಂ ಬರವನ್ನು ನೆಯ್ಯಲು ಸಮರ್ಥವಾದುವುಗಳಿರಬೇಕು. ವ್ಯರ್ಥ ಕೋಲಾಹಲಕ್ಕೆ ಕಾರಣವಾಗಬಾರದು.

ಸಾಮಾನ್ಯವಾಗಿ ಆಯಾ ಸ್ಥಳಗಳಲ್ಲಿ ನಡೆಯುವ ನಾಡಹಬ್ಬಗಳಿಗೆ ಅಲ್ಲಿಯ ನಾಡಹಬ್ಬ ಸಮಿತಿಗಳೇ ನೇರವಾಗಿ ಸಾಹಿತಿಗಳನ್ನೂ, ವ್ಯಾಖ್ಯಾತರನ್ನೂ, ಕವಿ–ಗಮಕಿ ಗಾಯಕ–ನರ್ತಕರನ್ನೂ ಕರೆಸಿಕೊಳ್ಳುತ್ತವೆ. ಇದರಿಂದ ಆಮಂತ್ರಿಕರ ಬರಹೋಗುವ ವೆಚ್ಚವೆಲ್ಲ ಒಂದೇ ನಾಡಹಬ್ಬ ಸಮಿತಿಯ ಮೇಲೆ ಬಿದ್ದು ಕೆಲವು ಸಲ ಮುಂಬರುವ ನಾಡಹಬ್ಬದ ಹೆಸರೆತ್ತದಂತಾಗುತ್ತದೆ. ಇದನ್ನು ಗಮನಿಸಿ ಹೈದರಾಬಾದು ಪ್ರದೇಶ ಕನ್ನಡ ಸಾಹಿತ್ಯ ಪರಿಷತ್ತಿನ ಯಾದಗಿರಿ ಅಧಿವೇಶನದಲ್ಲಿ ಹೈದರಾಬಾದು ಕರ್ನಾಟಕದ ಎಲ್ಲ ನಾಡಹಬ್ಬ ಸಮಿತಿಗಳೂ ಈ ಪರಿಷತ್ತಿನ ಮುಖಾಂತರವಾಗಿಯೇ ತಮಗೆ ಬೇಕೆನಿಸುವ ವ್ಯಾಖ್ಯಾತರನ್ನೂ ಕಲಾವಿದರನ್ನೂ ಕರೆಸಿಕೊಳ್ಳುವಂತೆ ಪ್ರಾರ್ಥಿಸಿಕೊಳ್ಳಬೇಕೆಂಬ ಗೊತ್ತುವಳಿಯೊಂದು ಸ್ವೀಕೃತವಾಯಿತು.

ಎಲ್ಲ ಸಮಿತಿಗಳೂ ತಮಗೆ ಯಾರಾರು ಬೇಕೆಂಬುದನ್ನು ಈ ಪರಿಷತ್ತಿಗೆ ಈಗಲೇ ತಿಳಿಸಿದರೆ ಅವರೊಡನೆ ಪರಿಷತ್ತು ಪತ್ರ ವ್ಯವಹಾರ ಮಾಡಿ, ಅವರಲ್ಲಿ ಪ್ರತಿಯೊಬ್ಬರೂ ಅನೇಕ ಸ್ಥಳಗಳ ನಾಡಹಬ್ಬಗಳಲ್ಲಿ ಭಾಗವಹಿಸಲು ಅನುಕೂಲವಾಗುವಂತೆಯೂ, ಅವರ ಬರ ಹೋಗುವ ವೆಚ್ಚವು ಆ ಎಲ್ಲ ಸ್ಥಳಗಳ ನಾಡಹಬ್ಬ ಸಮಿತಿಗಳ ಮೇಲೆ ಉಚಿತ ಪ್ರಮಾಣದಲ್ಲಿ ಬೀಳುವಂತೆಯೂ ಅವರ ಕಾರ್ಯಕ್ರಮ ವಿವರಗಳನ್ನು ನಿರ್ಧರಿಸುವುದು. ಹೋದ ವರ್ಷದ ನಾಡಹಬ್ಬದ ಕಾಲಕ್ಕೆ ಈ ಪ್ರಯೋಗವನ್ನು ಮಾಡಿ ನೋಡಲಾಯಿತು. ಇದು ಬಹುಮಿತವ್ಯಯದ ಮಾರ್ಗವೆಂದು ಇದರ ಪ್ರಯೋಜನವನ್ನು ಪಡೆದುಕೊಂಡ ನಾಡಹಬ್ಬ ಸಮಿತಿಗಳಿಗೆಲ್ಲ ಮನವರಿಕೆಯಾಗಿರಲು ಸಾಕು. ಈ ವರ್ಷವೂ ಈ ದಿಶೆಯಲ್ಲಿ ಈ ಪರಿಷತ್ತಿನ ಸೇವೆ ಪಡೆದುಕೊಳ್ಳಬೇಕೆನ್ನುವ ನಾಡಹಬ್ಬ ಸಮಿತಿಗಳು ಕೂಡಲೇ ತಮಗೆ ಈ ಸಲದ ನಾಡಹಬ್ಬದ ಕಾರ್ಯಕ್ರಮಗಳಿಗೆ ಬೇಕಾದ ವ್ಯಾಖ್ಯಾತರ, ಕಲಾವಿದರ ಹೆಸರುಗಳನ್ನು ಪರಿಷತ್ತಿಗೆ ತಿಳಿಸಿ, ಯಾರು ಯಾರು ಯಾವಯಾವ ತಾರೀಖಿಗೆ ತಮ್ಮಲ್ಲಿರಬೇಕೆಂಬುದನ್ನು ಸ್ಪಷ್ಟೀಕರಿಸಬೇಕೆಂದು ಬಿನ್ನಹ." (ಅಕರ: 'ಸಾಧನಾ' ವಾರಪತ್ರಿಕೆ, ಹೈದರಾಬಾದು. ದಿನಾಂಕ 26–8–1954)

ಇದೇ ಸಂದರ್ಭದಲ್ಲಿ ಹೈದರಾಬಾದಿನ ಕರ್ನಾಟಕ ಸಾಹಿತ್ಯ ಮಂದಿರದ ಆರ್ಥಿಕ ಸುಭದ್ರತೆಗಾಗಿ ಕೈಕೊಂಡ ಒಂದು ವಿನೂತನ ಪ್ರಯೋಗದ ಉಲ್ಲೇಖವನ್ನಿಲ್ಲಿ ಮಾಡಬೇಕು. ಅದರ ೧೬ನೆಯ ವರ್ಷದ ವರದಿಯಲ್ಲಿ ಇದರ ವಿಷಯ ಬಂದಿದೆ (ಪುಟ–೧೩) ಅದು ಇಂತಿದೆ. "ಪಠ್ಯಪುಸ್ತಕಗಳಿಂದ ಬಂದ ಹಣ:–ಸತ್ಯಾಶ್ರಯ ಪ್ರಕಾಶನ ಮಂದಿರದ ಒಡೆಯರಾದ ಶ್ರೀ ಜಿ.ಕೆ. ಪ್ರಾಣೇಶಾಚಾರ್ಯರು ತಾವು ಪ್ರಕಟಿಸಿದ ಪಠ್ಯಪುಸ್ತಕಗಳ ಸಂಪಾದಕತ್ವವನ್ನು ಸಾಹಿತ್ಯ ಮಂದಿರವು ವಹಿಸಬೇಕೆಂದೂ, ಮತ್ತು ಪಠ್ಯಪುಸ್ತಕಗಳನ್ನು ರಚಿಸಿದ ಲೇಖಕರು ನೂರಕ್ಕೆ ಹದಿನೈದು ರೂಪಾಯಿಗಳಂತೆ ತಮಗೆ ಸಲ್ಲುವ ಪ್ರತಿಫಲವನ್ನು ಸ್ವಸಂತೋಷದಿಂದ ಸಾಹಿತ್ಯ ಮಂದಿರಕ್ಕೆ ಸಮರ್ಪಿಸಲು ನಿಶ್ಚಯಿಸಿದಂತೆ, ಅವರ ಪ್ರತಿಫಲ ಧನವನ್ನು ಸಾಹಿತ್ಯ ಮಂದಿರವು ಸ್ವೀಕರಿಸಬೇಕೆಂದೂ ಬರೆದುದನ್ನು ಮಂದಿರವು ಕೃತಜ್ಞತಾಪೂರ್ವಕವಾಗಿ ಒಪ್ಪಿಕೊಂಡಿದ್ದು, ಈಗಾಗಲೇ ಒಂದು ವರ್ಷದ ಪ್ರತಿಫಲಧನ (ರೂ. ೬೨೨೩–೩–೦) ಮಂದಿರಕ್ಕೆ ಸಂದಾಯವಾಗಿದೆ. ಈ ಹಣವನ್ನು ಮಂದಿರದ ಹೆಸರಿನಲ್ಲಿ ಡುಮಿನಿಯನ್ ಬ್ಯಾಂಕಿನಲ್ಲಿ ಠೇವಾಗಿ ಇಟ್ಟಿದೆ. ತಮ್ಮ ತ್ಯಾಗದಿಂದ ಮಂದಿರದ ಆರ್ಥಿಕ ಸ್ಥಿತಿಯನ್ನು ಸುಭದ್ರಗೊಳಿಸಿದ ಈ ಲೇಖಕರಿಗೆ ಮಂದಿರವು ಋಣಿಯಾಗಿದೆ." ಇದು ಲೇಖಕರು ತ್ಯಾಗ ಮಾಡಿ ಕನ್ನಡ ಸಂಸ್ಥೆಯೊಂದನ್ನು ಬೆಳೆಸಿದ ಅಪೂರ್ವ ಉದಾಹರಣೆ.



**ಕಥಾಮಂಜರಿ, ಮಕ್ಕಳ ಸಾಹಿತ್ಯ :**

ಈ ಪಠ್ಯಪುಸ್ತಕ ಮಾಲೆಗಾಗಿ ವಿಶ್ವಕಥಾ ಸಾಹಿತ್ಯದ ಆಯ್ದ ಅಣಿ ಮುತ್ತುಗಳನ್ನೊಳಗೊಂಡ 'ಕಥಾಮಂಜರಿ' ಎಂಬ ಕಥಾಸಂಗ್ರಹವೊಂದನ್ನು ರಚಿಸಿಕೊಟ್ಟೆ. ಕ್ರಮಿಕ ಪುಸ್ತಕಗಳ ರಚನೆಯಲ್ಲಿ ಪ್ರೊ. ಡಿ.ಕೆ. ಭೀಮಸೇನರಾಯರು ಮಗ್ನರಾಗಿದ್ದಾಗ ಒಮ್ಮೆ ಅವರಲ್ಲಿಗೆ ಹೋಗಲು, ಕಾಗದ ಪೆನ್ಸಿಲ್ ಮುಂದಿಟ್ಟು ಕನ್ನಡ ಎರಡನೆಯ ಹಾಗೂ ಮೂರನೆಯ ತರಗತಿಯ ಪಠ್ಯಪುಸ್ತಕಗಳಿಗೆ ಎರಡು ಮಕ್ಕಳ ಪದ್ಯಗಳು ಬೇಕು, ಈಗಲೇ ಬರೆದು ಕೊಡು–ಎಂದು ಹೇಳಿಬಿಟ್ಟರು. ಅದುವರೆಗೆ ಮಕ್ಕಳ ಪದ್ಯಗಳನ್ನು ಬರೆದಿರಲಿಲ್ಲ ನಾನು. ಪ್ರಯತ್ನಿಸಿ ನೋಡುವೆನೆಂದು ಹೇಳಿ ಅಲ್ಲಿಯೇ ಮೂಲೆಯೊಂದರ ಆಶ್ರಮ ಪಡೆದೆ. ಅದೆಂಥ ಗಳಿಗೆಯೋ–'ಕುದುರೆ' ಹಾಗೂ 'ಕರಡಿಯ ಕುಣಿತ' ಎಂಬ ಎರಡು ಮಕ್ಕಳ ಪದ್ಯಗಳು ಸ್ಫುರಿಸಿದುವು. ಅವುಗಳನ್ನು ನೋಡಿ ಅವರು ಉಬ್ಬಿಹೋದರು. "ಮಕ್ಕಳ ಪದ್ಯಗಳನ್ನೂ ನೀವು ಬಹಳ ಚೆನ್ನಾಗಿ ಬರೆಯುತ್ತೀರಿ. ಬರೆಯುತ್ತ ಹೋಗಿರಿ–ಬಿಡಬೇಡಿರಿ," ಎಂದು ಪ್ರೋತ್ಸಾಹಿಸಿದರು. ಇವುಗಳೆರಡೂ ಏಕೀಕೃತ ಕರ್ನಾಟಕದ ಪಠ್ಯಪುಸ್ತಕಗಳಲ್ಲೂ ಸೇರಿ ಲಕ್ಷಾವಧಿ ಮಕ್ಕಳ ಮನ ತಣಿಸಿರುವುದು ನನಗೆ ತುಂಬ ತೃಪ್ತಿಯನ್ನು ತಂದಿದೆ. ಈಗಲೂ ನಾನು ಪ್ರಾಥಮಿಕ–ಮಾಧ್ಯಮಿಕ ಶಾಲೆಗಳ ಸಮಾರಂಭಗಳಿಗೆ ಹೋದರೆ ನನ್ನ ಬಗ್ಗೆ ಹೆಚ್ಚಿಗೆ ಹೇಳುವ ಗೊಡವೆಗೆ ಹೋಗದೆ, 'ಇವರು ಅಜ್ಜನ ಕೋಲಿದು ನನ್ನಯ ಕುದುರೆ' ಬರೆದವರು ಎಂದು ಹೇಳಿಬಿಡುತ್ತಾರೆ. ಇಷ್ಟೇ ಪರಿಚಯ ಸಾಕಾಗುತ್ತದೆ ಮಕ್ಕಳಿಗೆ. ಅವರು ಬೆರಗುಗಣ್ಣುಗಳಿಂದ ನನ್ನನ್ನು ನೋಡಿದಾಗ ನನ್ನ ಎದೆ ಕುಣಿಯುತ್ತದೆ. ಅವರ ಮೆಚ್ಚಿಗೆಯೇ ಮೂರು ಮಕ್ಕಳ ಪದ್ಯಗಳ ಸಂಗ್ರಹಗಳನ್ನು–'ತುಪ್ಪಾರೊಟ್ಟಿ ಗೇಗೇಗೇ' 'ಗಿಲ್‌ಗಿಲ್‌ಗಿಲ್ ಗಿಲಗಚ್ಚಿ' ಹಾಗೂ 'ತಿರುಗೆಲೆ ತಿರುಗೆಲೆ ತಿರುಗುಯ್ಯಾಲೆ'ಗಳನ್ನು–ಅವರಿಗೆ ಅರ್ಪಿಸಲು ನನಗೆ ಶಕ್ತಿ ನೀಡಿದೆ. ಇವುಗಳಲ್ಲಿ ಮೊದಲನೆಯ ಸಂಗ್ರಹಕ್ಕೆ ಭಾರತ ಸರಕಾರದ ಬಹುಮಾನ ಬಂದುದು ನನ್ನ ತೃಪ್ತಿಯ ತೆನೆಗೆ ಹಾಲುಗಾಳು ಮೂಡುವಂತೆ ಮಾಡಿದೆ.

**ಜಲಪಾತ :**

'ಪ್ರಜಾ' ವಾರಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಆರ್.ಜೆ. ಜಾಗೀರದಾರರು ನನ್ನ ಪ್ರಥಮ ಕವನ ಸಂಕಲನವಾದ 'ಜಲಪಾತ'ವನ್ನು ಪ್ರಕಟಿಸಲು ಮುಂದೆ ಬಂದರು, ನಾನು ಯಾವ ಕರಾರೂ ಇಲ್ಲದೆ ಒಪ್ಪಿದೆ. ಮಹಾಕವಿ ದ.ರಾ. ಬೇಂದ್ರೆ ಅವರಿಂದ ಮುನ್ನುಡಿ ಕೋರಿದೆ. ಅವರು ಬಹಳ ಬೆಲೆಯುಳ್ಳ ಮುನ್ನುಡಿಯನ್ನಿತ್ತು ನನ್ನಲ್ಲಿ ನನಗೆ ನಂಬಿಕೆ ಹೆಚ್ಚುವಂತೆ ಮಾಡಿದರು. ಆ ಮೂಲಕ ಅವರು ನೀಡಿದ

ಉತ್ತೇಜನ, ಉದ್ದೀಪನಗಳೇ ನನ್ನ ಕಾವ್ಯಕೃಷಿ ಮುಂದುವರಿಯಲು ಕಾರಣವಾದುವೆಂದರೂ ತಪ್ಪಿಲ್ಲ. ಆದರೆ ಪ್ರಕಾಶಕರಿಂದ ನನಗೆ ದೊರೆತ ಭ್ರಮನಿರಸನವೂ ಅಷ್ಟೇ ಪ್ರಗಾಢವಾದುದಾಗಿದ್ದಿತು. ಮುನ್ನುಡಿ ಬರೆದ 'ಅಂಬಿಕಾತನಯದತ್ತ' ರಿಗೇ ಒಂದು ಪ್ರತಿ ನಾನು ಕೊಂಡು ಕಳಿಸಬೇಕಾಯಿತು! ನನಗೂ ಒಂದು ಪ್ರತಿ ಕೊಂಡು ಕೊಂಡೆ! ಅದರ ಬಗ್ಗೆ ಪ್ರತಿಷ್ಠಿತ ಪತ್ರಿಕೆಗಳಲ್ಲಿ ಒಳ್ಳೆಯ ವಿಮರ್ಶೆಗಳೇನೋ ಪ್ರಕಟವಾದುವು. ಆದರೆ ನನ್ನ ನಿಕಟ ಹಿತಬಂಧುಗಳಿಗೆ ಸಹ ಕಾಣಿಕೆಯಾಗಿ ಕೊಡಲು ನನ್ನಲ್ಲಿ ಪ್ರತಿಗಳಿಲ್ಲವಲ್ಲ–ಎಂಬ ಕೊರಗು ನನ್ನಲ್ಲಿ ಉಳಿಯಿತು. ರಾಯ್ಚೂರಿನ 'ಸಂಗಡಿಗರ ಸಮಿತಿ'ಯ ಸಂಗಡಿಗರೂ, ಆತ್ಮೀಯ ಮಿತ್ರರೂ ಆದ ಗದ್ವಾಲ್ ಶಂಕರಪ್ಪನವರು ಅದರ ದ್ವಿತೀಯ ಆವೃತ್ತಿಯನ್ನು ಪ್ರಕಟಿಸಿ ಆ ಕೊರಗನ್ನು ಕಳೆದರು. ಒಂದು ನೂರು ಪ್ರತಿಗಳನ್ನು ನನಗೆ ಕಳಿಸಿದರು. ಉದಿತೋದಿಕ ಕವಿಗಳೆನಿಸಿದ್ದ ಶಾಂತರಸರು, ಕಲಾನಂದರು, ಅಮರಾನಂದರು, ಶಂಕರಣ್ಣ ಮೊದಲಾದವರು ಸೇರಿ 'ಸಂಗಡಿಗರ ಸಮಿತಿ'ಯನ್ನು ಸ್ಥಾಪಿಸಿಕೊಂಡು 'ಮುಸುಕು ತೆರೆ' ಎಂಬ ಗದ್ಯಪದ್ಯ ಸಂಕಲನವನ್ನು ಅದಾಗಲೇ ಪ್ರಕಟಿಸಿದ್ದರು.

'ಜಲಪಾತ'ದ ಪ್ರಕಟನೆಯಲ್ಲಿ ಪ್ರಕಾಶಕರಿಂದ ದೊರೆತ ಕಟು ಅನುಭವ ಹೈದರಾಬಾದಿನಲ್ಲೊಂದು ಒಳ್ಳೆಯ ಪ್ರಕಾಶನ ಸಂಸ್ಥೆಯನ್ನೇಕೆ ಸ್ಥಾಪಿಸಬಾರದೆಂಬ ಯೋಚನೆಗೆ ಹಚ್ಚಿತು ನನ್ನನ್ನು. ತಮ್ಮ ಅನ್ನದಾನಿ ಅದಾಗಲೇ ಸ್ವತಂತ್ರ ಜೀವನವನ್ನೇ ಸಾಗಿಸುವುದೆಂದು ನಿರ್ಧರಿಸಿಬಿಟ್ಟಿದ್ದ. ಮನೆತನಕ ಬಂದಿದ್ದ ಎರಡು ಒಳ್ಳೆಯ ಹುದ್ದೆಗಳನ್ನು ನಿರಾಕರಿಸಿಬಿಟ್ಟಿದ್ದ. ಮುಂಡರಗಿ ಶಿಬಿರದಲ್ಲಿ, ಬಂಡಾಯಗಾರನಾಗಿ ಹುಬ್ಬಳ್ಳಿಯಲ್ಲಿ ವಿದ್ಯಾರ್ಥಿ ನೇತಾರನಾಗಿ ಕರ್ನಾಟಕ ಏಕೀಕರಣ ಚಳವಳಿಯ ಮುಂಚೂಣಿಯಲ್ಲಿದ್ದು ಜೇಲಿಗೆ ಸಹ ಹೋಗಿ, ಏಕಾಂಗವೀರನಾಗಿ ಅಖಿಲ ಕರ್ನಾಟಕ ವಿದ್ಯಾರ್ಥಿ ಪರಿಷತ್ತನ್ನು ಕಟ್ಟಿ, ಅದರ ಸಂಸ್ಥಾಪಕ ಅಧ್ಯಕ್ಷನಾಗಿ ಕರ್ತೃತ್ವ ಶಕ್ತಿಯನ್ನೂ, ಸಂಘಟನಾಚಾತುರ್ಯವನ್ನೂ ತೋರಿದ್ದ ಅವನೇ ಈ ಕಾರ್ಯ ಕೈಕೊಂಡರೆ ಯಶಸ್ವಿಯಾಗಿ ನಡೆಯಬಹುದೆಂದು ನನಗೆನಿಸಿತು. ರಾಯ್ಚೂರಿನಲ್ಲಿ ಗೆಳೆಯ ಕೆ.ಆರ್. ಹಿರೇಮಠದ ಮುದ್ರಣ ಯಂತ್ರವೊಂದಿದ್ದಿತು. ಅದನ್ನು ಹೈದರಾಬಾದಿಗೆ ತಂದು 'ಶ್ರೀ ಭಾರತೀ ಪ್ರಿಂಟರಿ' ಎಂಬ ಮುದ್ರಣಾಲಯವನ್ನು, 'ಸಹಜೀವನ ಸಾಹಿತ್ಯಮಾಲೆ' ಎಂಬ ಪ್ರಕಾಶನ ಸಂಸ್ಥೆಯನ್ನೂ ಕಾಚೀಗುಡಾ ರಸ್ತೆಯಲ್ಲಿ ತೆರೆದಾಯಿತು. ಅದರಲ್ಲಿ ನನ್ನ 'ಕರುಣಾ ಶ್ರಾವಣ' ಕವನ ಸಂಗ್ರಹವೂ, 'ತುಷಾರ ಹಾರ' ಎಂಬ ಕಿರುಗತೆಗಳ ಸಂಗ್ರಹವೂ, 'ಮಾನ್ವಿ' ಅವರ 'ಸಂಸಾರನೀತಿ' ಎಂಬ ಕಿರು ಹೊತ್ತಗೆಯೂ ಪ್ರಕಟವಾದುವು. ಚಿ. ಅನ್ನದಾನಿಯೇ ಬಹಳ ಕಷ್ಟಪಟ್ಟು ಸಂಪಾದಿಸಿದ 'ಚೆನ್ನಬಸವನ ಸಾಹಿತ್ಯ' ಎಂಬ ಮಹತ್ವದ ಕೃತಿಯೂ ಇದೇ



ಮಾಲೆಯಲ್ಲಿ ಪ್ರಕಟವಾಯಿತು. ರಾಜ್ಯ ಪುನರ್ರಚನೆಯೊಡನೆ ಅನಿವಾರ್ಯವಾಗಿ ಇವೆರಡೂ ನಿಲ್ಲಬೇಕಾಯಿತು.

ಶ್ರೀ ರಾಘವೇಂದ್ರ ಇಟಗಿ ಅವರು ಆಗ ಅಲ್ಲಿಯ ಆಕಾಶವಾಣಿಯಲ್ಲಿದ್ದುದರಿಂದ ಆಕಾಶವಾಣಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೆ. ಕವನ, ಭಾಷಣಗಳಂತೂ ಸರಿಯೆ, ನಾಟಕಗಳಲ್ಲಿಯೂ ಪಾತ್ರವಹಿಸುತ್ತಿದ್ದೆ. 'ಸೈರಂಧ್ರಿ' ನಾಟಕದಲ್ಲಿ ಶ್ರೀಮತಿ ಜ್ಯೋತ್ಸ್ನಾ ಮೇಲ್ಕೋಟೆಯವರು ಸೈರಂಧ್ರಿಯಾದರೆ ನಾನು ಕೀಚಕನಾಗಿದ್ದೆ. ಚೆನ್ನಾಗಿ ಅಭಿನಯಿಸಿದೆನೆಂದು ಕೇಳಿದವರು ಹೇಳಿದರು. ನನ್ನ ಪತ್ನಿಯೂ ಎರಡು ಸಲ ಆಕಾಶವಾಣಿ ಭಾಷಣಗಳನ್ನು ಬಿತ್ತರಿಸಿದಳು. ಇಟಗಿ, ದೇವೇಂದ್ರ ಕುಮಾರ ಹಕಾರಿ, ಕೃಷ್ಣಮೂರ್ತಿ, ಎಚ್.ಜೆ. ಉಪಧ್ಯಾಯ, ಶರಣ ಬಸವ ಜಾವಳಿ ಮೊದಲಾದವರು ಅಂದಿನ ಉದಯೋನ್ಮುಖ ಕವಿಗಳಾಗಿದ್ದರು. ನಾವೆಲ್ಲರೂ ಆಗಾಗ ಸೇರಿ ಒಬ್ಬರೊಬ್ಬರ ಕವಿತೆ ಕೇಳುತ್ತಿದ್ದೆವು, ಚರ್ಚಿಸುತ್ತಿದ್ದೆವು, ಬೇರೆ ಕವಿಗಳ ಕೃತಿಗಳನ್ನು ಕುರಿತು ಅಧ್ಯಯನ ನಡೆಸುತ್ತಿದ್ದೆವು; ಕಾಲೇಜುಗಳ ವಾರ್ಷಿಕೋತ್ಸವಗಳಲ್ಲಿ ಭಾಗವಹಿಸುತ್ತಿದ್ದೆವು; ನಾಡಹಬ್ಬಗಳಲ್ಲಿ ದುಡಿಯುತ್ತಿದ್ದೆವು; ಕನ್ನಡದ ಕೆಲಸವೆಲ್ಲಿದ್ದರೂ ಹೋಗಿ ಕೈಗೂಡಿಸುತ್ತಿದ್ದೆವು–'ಮಾನ್ವಿ'ಯವರ ಹಿರಿತನದಲ್ಲಿ. ಅಲ್ಲಿಗೆ ಪ್ರೊ॥ ಎಚ್.ಬಿ. ಕುಲಕರ್ಣಿಯವರು ಬಂದುದು ನಮ್ಮ ಬಲ ಹೆಚ್ಚಿಸಿದ್ದಿತು. ಡಾ॥ ಜಿ.ಎಸ್. ಮೇಲ್ಕೋಟೆ. ವಿದ್ವಾನ್ ಎಫ್.ಜಿ. ಮಠದ, ಪ್ರೊ॥ ಪದ್ಮನಾಭ ಪುರಾಣಿಕ, ಜಿ.ವ್ಹಿ. ಸೂಳಿಭಾವಿ, ಗಣೇಶ ಜೋಶಿ, ಪ್ರೊ॥ ರಾಮ ಚಂದ್ರರಾವ್ ಪಟವಾರಿ, ಪಾಂಟುರಂಗಾಚಾರ್ಯ ವೈದ್ಯ, ಪ್ರೊ॥ ಅಚ್ಯುತರಾವ್, ಎನ್.ಎಸ್. ರಾಘವನ್, ಸಿ. ರಂಗಾಚಾರ, ಕೃಷ್ಣಾಚಾರ್ಯ ಜೋಶಿ, ಜಿ. ರಾಮಾಚಾರ್, ಜನಾರ್ಧನರಾವ್ ದೇಸಾಯಿ, ಎಲ್.ಜಿ. ಹೊಂಬಳ್, ಸೌ. ಮೈನಾತಾಯಿ ಖೇಣಿ, ಅನ್ನಪೂರ್ಣ ಸ್ವಾಮಿಗಳು, ದಿವಾನ್ ಸಂಗಯ್ಯನವರು, ಮಧ್ವರಾವ್ ಅನ್ವರಿ, ಜಯಾಚಾರ್ಯ ಪುರಾಣಿಕ–ಮೊದಲಾದ ವೀರ ಕನ್ನಡಿಗರು ಅಲ್ಲಿಯ ಕನ್ನಡ ಆಂದೋಲನದ ಆಧಾರಸ್ತಂಭಗಳಾಗಿದ್ದರು. ಪೋಲೀಸ್ ಕಾರ್ಯಾಚರಣೆಯ ತರುವಾಯ ತಹಸೀಲ್ದಾರರಾಗಿ ಆಯ್ಕೆಗೊಂಡವರಲ್ಲಿ ಅನೇಕ ಕನ್ನಡ ಯುವಕರಿದ್ದರು. ಅವರಲ್ಲಿ ಲೇಖಕರೂ ಇದ್ದರು. ಅವರಲ್ಲಿ ಅಗ್ರಗಣ್ಯರು ಜಯತೀರ್ಥ ರಾಜ ಪುರೋಹಿತರು. ಅವರೀಗ ಖ್ಯಾತ ಸಾಹಿತಿಗಳು. ಒಳ್ಳೆಯ ಕವಿಗಳಾಗಬಹುದಾಗಿದ್ದ ಜಿ. ರಾಮರಾವ್ ತೀರಿ ಹೋದರು. ಒಳ್ಳೆಯ ಕತೆಗಾರರಾಗಿದ್ದ ಕಠಾವಿಯವರು ಬರೆಯುವುದನ್ನು ನಿಲ್ಲಿಸಿದರು; ನರಸಿಂಗ್‌ರಾವ್ ಮದರಕಲ್ ಅವರೂ ಮುಂದುವರಿಸಲಿಲ್ಲ ಬರಹಗಾರಿಕೆಯನ್ನು, ಇನ್ನಾದರೂ ಅವರಿತ್ತ ಗಮನ ಹರಿಸುವರೆಂದು ಹಾರೈಸುತ್ತೇನೆ.

## ಸತ್ವಪರೀಕ್ಷೆ :

ಡಾ॥ ಚೆನ್ನಾರೆಡ್ಡಿಯವರ ಆಪ್ತಕಾರ್ಯದರ್ಶಿಯಾಗಿದ್ದುಕೊಂಡು ಇವೆಲ್ಲವನ್ನು ಮಾಡುವುದು ಸುಲಭವೇನಾಗಿರಲಿಲ್ಲ. ರಾತ್ರಿಯೆಲ್ಲ ಕಾರಿನಲ್ಲಿ ಪ್ರಯಾಣ ಮಾಡಿ ಬೆಳಗಿನ ಐದು ಘಂಟೆಗೆ ಹೈದರಾಬಾದು ತಲುಪಿ, ಆರು ಘಂಟೆಗೇ ಮತ್ತೆ ಅವರು ಕೆಲಸಕ್ಕೆ ಸಿದ್ಧರಾದ ಉದಾಹರಣೆಗಳುಂಟು. ನನಗೂ ಅವರೊಡನೆ ಅಂಥ ಸತ್ವಪರೀಕ್ಷೆಯ ಸಂದರ್ಭಗಳು ಒದಗುತ್ತಿದ್ದುದುಂಟು. ಅವುಗಳಲ್ಲಿ ಒಂದನ್ನು ಮಾತ್ರ ಇಲ್ಲಿ ಉಲ್ಲೇಖಿಸಿದರೆ ಸಾಕೆನ್ನಿಸುತ್ತಿದೆ. ರಾಜ್ಯ ಪುನರ‍್ರಚನಾ ಆಯೋಗಕ್ಕೆ ತಾವೂ ಒಂದು ಮನವಿ ಸಲ್ಲಿಸಬೇಕು. ಅದು ಪ್ರತ್ಯೇಕವಾದ ತೆಲಂಗಾಣಾ ರಾಜ್ಯದ ರಚನೆಯನ್ನು ಪ್ರಬಲವಾಗಿ ಸಮರ್ಥಿಸುವ ಮನವಿಯಾಗಿರಬೇಕು–ಎಂದು ಡಾ॥ ಚೆನ್ನಾರೆಡ್ಡಿಯವರೂ ಅವರ ಬೆಂಬಲಿಗರೂ ನಿರ್ಧರಿಸಿದರು. ಬಹಳ ತಡವಾಗಿ ಈ ನಿರ್ಣಯ ಕೈಕೊಂಡಿದ್ದರು ಅವರು. ಮನವಿಯನ್ನು ಸಲ್ಲಿಸಲು ಒಂದು ವಾರ ಮಾತ್ರ ಅವಧಿ ಉಳಿದಿದ್ದಿತು. ಅಂಥದೊಂದು ಮನವಿಯನ್ನು ಕೇವಲ ಎರಡು ದಿನಗಳಲ್ಲಿ ಸಿದ್ಧಪಡಿಸಿಕೊಡಲು ನನಗೆ ಹೇಳಿಬಿಟ್ಟರವರು. 'ಅದು ಹೇಗೆ ಸಾಧ್ಯ?' ಎಂದು ನಾನು ಕೇಳುವಂತಿರಲಿಲ್ಲ, ಅವರು ವಿಚಾರಿಸುವಂತಿರಲಿಲ್ಲ. ಅದು ಅವರ ರಾಜಕೀಯ ದ್ಯೂತವಾಗಿದ್ದಿತು; ನನಗೆ ಸತ್ವಪರೀಕ್ಷೆಯ ಸಮಯವಾಗಿದ್ದಿತು. ಅವರ ಮನೆಯಲ್ಲಿಯೇ ಇದ್ದ ನನ್ನ ಕೊಠಡಿಯಲ್ಲಿ ಮೊದಲ ದಿನ ಮುಂಜಾನೆ ಕುಳಿತೆ; ಎರಡು ಹಗಲು, ಎರಡು ರಾತ್ರಿ ಅಲ್ಲಿಂದ ಎದ್ದೇಳಲಿಲ್ಲ. ಅಲ್ಲಿಯೇ ಊಟ; ನಿದ್ರೆಗೆ ಸೂಟಿ: ನಾಲ್ಕು ಜನ ಶೀಘ್ರಲಿಪಿಕಾರರು ನಾನು ಹೇಳಿದುದನ್ನು ಬರೆದುಕೊಳ್ಳುತ್ತ, ಘಂಟೆಗೊಮ್ಮೆ ಬದಲಾಗಿ ಬರೆಸಿದುದನ್ನು ಬೆರಳಚ್ಚಿಸಿ ತರುತ್ತಾ ಹೋದರು. ಅವರು ಬೆರಳಚ್ಚಿಸಿ ತಂದುದನ್ನು ತಿದ್ದಿ ಮತ್ತೆ ಅವರಿಗೆ ಕೊನೆಯದಾಗಿ ಬೆರಳಚ್ಚಿಸಲು ಕೊಟ್ಟು ಇನ್ನೊಬ್ಬ ಶೀಘ್ರಲಿಪಿಕಾರರಿಗೆ ಬರೆಸುವುದನ್ನು ಮುಂದುವರಿಸುವುದು. ಪ್ರತಿಯೊಂದು ಇಲಾಖೆಗೂ ಒಬ್ಬೊಬ್ಬರನ್ನು ಕಳಿಸಿದ್ದೆ–ತೆಲಂಗಾಣಾ ಪ್ರದೇಶಕ್ಕೆ ಸಂಬಂಧಿಸಿದಂತೆ ಅಂಕಿ–ಅಂಶಗಳನ್ನು ಸಂಗ್ರಹಿಸಲು. ತೆಲಂಗಾಣಾ ಪ್ರತ್ಯೇಕ ರಾಜ್ಯವಾಗಿಯೂ ಸ್ವಯಂಪೂರ್ಣವಾಗಬಲ್ಲುದೆಂಬುದನ್ನು ಸಿದ್ಧಗೊಳಿಸಬೇಕಾಗಿದ್ದಿತು. ಎಲ್ಲ ಇಲಾಖೆಗಳಿಂದ ಅವರು ತಂದ ಅಂಕಿ ಅಂಶಗಳನ್ನು ಪರಿಶೀಲಿಸಿ, ಬಿಟ್ಟುಹೋದ ವಿವರಗಳನ್ನು ದೂರವಾಣಿಯ ಮೂಲಕ ತರಿಸಿಕೊಳ್ಳುತ್ತಿದ್ದೆ; ಆಮೇಲೆ ಬರೆಸುವುದನ್ನು ಮುಂದುವರಿಸುತ್ತಿದ್ದೆ. ನಾಲ್ಕೂ ಶೀಘ್ರಲಿಪಿಕಾರರು ಸುಸ್ತಾಗಿ ಬಿಟ್ಟರು. ನನ್ನ ಪಾಡೇನಾಗಿರಬೇಕು? ಆದರೂ ಕುಳಿತವನು ಮೇಲೇಳಲಿಲ್ಲ. ಬರೆಸಿದುದೆಲ್ಲ ಬೆರಳಚ್ಚುಗೊಂಡು ಬಂದಾಗ ನೂರು ಪುಟಗಳಿಗೂ ಮಿಕ್ಕಿದ ಹೊತ್ತಗೆಯೇ ಆಗಿ



ಹೊರಬಂದಿತು. ಮೂರನೆಯ ದಿನ ಬೆಳಗಾಗುತ್ತಲೇ ನಾಲ್ಕು ಪ್ರತಿಗಳನ್ನು ಮಂತ್ರಿಗಳ ಕೈಗಿತ್ತೆ. ನೋಡಿ ದಂಗಾದರವರು. 'ಹೋಗಿ ಮಲಗಿಬಿಡಿರಿ; ಇಂದು ಆಫೀಸಿಗೆ ಬರುವ ಅಗತ್ಯವಿಲ್ಲ' ಎಂದು ಹೇಳಿದರು. ಹೋಗಿ ಕೊರಡು ಮಲಗಿದಂತೆ ಮಲಗಿಬಿಟ್ಟೆ. ಎದ್ದುದು ರಾತ್ರಿ ಹತ್ತಕ್ಕೆ!

ಮನವಿಯನ್ನು ರಾಜ್ಯ ಪುನರ‍್ರಚನಾ ಆಯೋಗಕ್ಕೆ ಒಪ್ಪಿಸಿದುದಾಯಿತು–ಅವಧಿ ಮುಗಿವ ಮುನ್ನವೇ. ಆಯೋಗದವರಿಗೆ ಹಿಡಿಸಿತು ಅದು. ಅವರ ವರದಿ ಪ್ರತ್ಯೇಕ ತೆಲಂಗಾಣಾ ರಾಜ್ಯ ರಚನೆಯನ್ನು ಬೆಂಬಲಿಸಿದ್ದಿತು ಬಿ. ರಾಮಕೃಷ್ಣರಾಯರು ಕೊನೆಯ ಗಳಿಗೆಯಲ್ಲಿ ವಿಶಾಲಾಂಧ್ರ ರಚನೆಗೆ ತಮ್ಮ ಬೆಂಬಲವನ್ನು ನೀಡಿರದಿದ್ದರೆ ಪ್ರತ್ಯೇಕ ತೆಲಂಗಾಣಾ ರಾಜ್ಯವಾಗಿ ಬಿಡುತ್ತಿದ್ದಿತೋ ಏನೋ! ಮಹಾಂಧ್ರೋದಯವಾಗಿ ಇಷ್ಟು ವರ್ಷಗಳಾದರೂ ಆಂಧ್ರ–ತೆಲಂಗಾಣಾ ತಿಕ್ಕಾಟ ತಪ್ಪಿಲ್ಲ. ಒಮ್ಮೆ ತೆಲಂಗಾಣಾ ಆಂದೋಲನ, ಒಮ್ಮೆ ಆಂಧ್ರ ವಿಭಾಗದ ಆಂದೋಲನಗಳು ನಮ್ಮ ಕಣ್ಮುಂದೆಯೇ ಕರಾಳ ರೂಪದಲ್ಲಿ ನಡೆದಿವೆ. ಆಗ ಆಗ್ರಾ ರಾಜ್ಯವೊಂದರ ನಿರ್ಮಾಣವಾಗಬೇಕೆಂಬ ಸಿಫಾರಸನ್ನೂ ಮಾಡಿದ್ದಿತು ಆಯೋಗ. ಅದು ಆಗಲಿಲ್ಲ. ಆದರೆ ಅದರ ಬೇಡಿಕೆಯಿನ್ನೂ ಬಿದ್ದು ಹೋಗಿಲ್ಲ! ಹೀಗೆಯೇ 'ವಿದರ್ಭ' ಮೊದಲಾದ ಬೇಡಿಕೆಗಳು ಹೈಬರ್ನೇಟ್ ಆಗುತ್ತ ಬಿದ್ದಿವೆ. ಯಾವ ಕಾಲಕ್ಕೆ ಮೈಕೊಡಹಿ ಮೇಲೇಳುವುವೋ! ಈ ಬಗ್ಗೆ ಎಲ್ಲ ಪಕ್ಷಗಳೂ ಒಮ್ಮತಕ್ಕೆ ಬಂದು, ಈಗಿರುವ ರಾಜ್ಯಗಳು ಸಾಕು, ಈಗಿರುವ ಗಡಿಗಳೇ ಇದ್ದಂತೆ ಇರಬೇಕು–ಎಂದು ಸರ್ವಪಕ್ಷೀಯ ನಿರ್ಣಯ ಮಾಡಿ ಇದಕ್ಕೆ 'ಇತಿಶ್ರೀ' ಹಾಡದಿದ್ದರೆ ಒಮ್ಮಿಲ್ಲ ಒಮ್ಮೆ ಅಪಾಯ ತಪ್ಪಿದ್ದಲ್ಲ ರಾಷ್ಟ್ರದ ಏಕತೆಗೆ!

## ಪ್ರಾದೇಶಿಕ ಸಾಹತ್ಯ ಸಮ್ಮೇಳನ

ಮೂರನೆಯ ಹೈದರಾಬಾದು ಪ್ರದೇಶ ಕನ್ನಡ ಸಾಹತ್ಯ ಸಮ್ಮೇಳನವನ್ನು ಶಹಾಪುರ ತಾಲೂಕಿನ ಯಾಳಗಿ ಎಂಬ ಗ್ರಾಮದಲ್ಲಿ ಜರುಗಿಸಿದೆವು. ಕೊನೆಗೊಮ್ಮೆ ಅಧ್ಯಕ್ಷ ಸ್ಥಾನಕ್ಕೆ ಮಾನ್ವಿಯವರನ್ನು ಒಪ್ಪಿಸಿದೆವು. ಅಂಥ ಹಳ್ಳಿಯಲ್ಲಿಯೂ ಜಾತೀಯತೆಯ ಹಾವು ಹೆಡೆಯೆತ್ತದಿರಲಿಲ್ಲ. ಅದನ್ನು ಕೊಲ್ಲದೆ ಹಲ್ಲು ಮುರಿದು ಸಮ್ಮೇಳನವನ್ನು ಸಂಭ್ರಮದೊಡನೆಯೇ ಜರುಗಿಸಿದೆವು. ಪರಿಷತ್ತಿಗೆ ಹಲವು ಹನ್ನೆರಡು ಬಗೆಯಲ್ಲಿ ನೆರವು ನೀಡಿದ್ದ, ನೀಡಿಸಿದ್ದ ಶ್ರೀ ಎಲ್.ಎನ್. ಗುಪ್ತಾಜಿಯವರನ್ನೇ ಉದ್ಘಾಟನೆಗೆ ಕರೆದಿದ್ದೆವು. ಅವರು ಒಪ್ಪಿ ಆ ಹುಡಿ ಹಾರುವ ಹಳ್ಳಿಯ ರಸ್ತೆಗಳನ್ನೂ ಲೆಕ್ಕಿಸದೆ ಬಂದರು. ಆಗರ್ಭ ಶ್ರೀಮಂತರಾಗಿದ್ದ, ಸರಕಾರದ ಕಾರ್ಯದರ್ಶಿ ಸ್ಥಾನದಲ್ಲಿದ್ದ

ಅವರು ಆ ಶ್ರಮವಹಿಸಿದುದು ನಮ್ಮೆಲ್ಲರಿಗೆ ಹೆಮ್ಮೆಯನ್ನು ಉಂಟು ಮಾಡಿದ್ದಿತು. ಅವರು ಬಂದಾಗ ಅವರ ಮೋರೆಯ ಮೇಲೆ, ಬಟ್ಟೆಗಳ ಮೇಲೆ ದಟ್ಟವಾಗಿ ಹುಡಿ ಕುಳಿತಿದ್ದಿತು. ಅವಸರವಸರವಾಗಿ ಸ್ನಾನ ಮಾಡಿ, ಬಟ್ಟೆ ಬದಲಿಸಿಕೊಂಡು ಬಂದು ಹಿಂದಿಯಲ್ಲಿ ಸೊಗಸಾದ ಉದ್ಘಾಟನ ಭಾಷಣವನ್ನು ನೀಡಿದರು ಅವರು. ಯಾಳಗಿಯ ರೈತ ಬಾಂಧವರ ಕೋರಿಕೆಯಂತೆ ಅವರ ಪ್ರಾಥಮಿಕ ಶಾಲೆಯನ್ನು ಮಾಧ್ಯಮಿಕ ಶಾಲೆಯನ್ನಾಗಿ ಪರಿವರ್ತಿಸಲು ಸ್ಥಳದಲ್ಲಿಯೇ ಮಂಜೂರಿ ನೀಡಿದರು. ಯಾಳಗಿಯ ಜನರ ಹರುಷದ ಹೊಳೆ ತುಂಬಿ ಹರಿಯಿತು. ಸಮ್ಮೇಳನ ಕರೆದುದಕ್ಕೆ ಆ ಕಾಲದ ದೃಷ್ಟಿಯಿಂದ ಬಹುದೊಡ್ಡ ಪ್ರತಿಫಲ ದೊರೆಯಿತವರಿಗೆ. ಮಾನ್ವಿಯವರ ಅಧ್ಯಕ್ಷ ಭಾಷಣ–'ಸರಸ್ವತೀ ತತ್ತ್ವ'–ಅಲ್ಲಿಯವರ ಸಣ್ಣ ಬಾಯಿಗಳಿಗೆ ದೊಡ್ಡ ತುತ್ತೆನಿಸಿದರೂ ಬಹಳ ವಿಚಾರ ಪೂರ್ಣವಾದ ಭಾಷಣವಾಗಿದ್ದಿತು. ಕವಿಸಮ್ಮೇಳನಾದಿಗಳೂ ಯಶಸ್ವಿಯಾಗಿ ಜರುಗಿದುವು. ಮನೋರಂಜನ ಕಾರ್ಯಕ್ರಮಗಳೂ ಚೆನ್ನಾಗಿದ್ದವು. ಸರ್ವಶ್ರೀ ಶೇಷಗಿರಿರಾವ್ ಹೋಳಿ ಹಾಗೂ ಅವರ ಬಂಧುಗಳು, ಸಗರ ಕೃಷ್ಣಾಚಾರ್ಯರು, ರಂಗಂಪೇಟೆಯ ಬುದ್ಧಿವಂತಶೆಟ್ಟರು, ಯಾದಗಿರಿಯ ವೀರೇಶ್ವರ ಶಾಸ್ತ್ರಿಗಳು, ಗುರುಸಿದ್ಧ ಶಾಸ್ತ್ರಿಗಳು, ಶಹಾಪುರದ ವಿರುಪಾಕ್ಷ ಶಾಸ್ತ್ರಿಗಳು, ಪಂಚಾಕ್ಷರಿ ಗವಾಯಿಗಳು–ಇನ್ನೂ ಅನೇಕ ಕನ್ನಡ ಭಕ್ತರು ತೋರಿದ್ದ ಆಸ್ಥೆ, ವಹಿಸಿದ್ದ ಶ್ರಮ, ನೀಡಿದ್ದ ಸಹಕಾರಗಳು ಸಫಲವಾಗಿದ್ದುವು. ಅಧ್ಯಕ್ಷ ಮಾನ್ವಿ ಅವರು ತಮ್ಮ ವಾತ್ಸಲ್ಯದ ಅಧಿಕಾರವನ್ನು ಉಪಯೋಗಿಸಿ ಮತ್ತೊಮ್ಮೆ ನನ್ನನ್ನು 'ಡಿಮೋಟ್" ಮಾಡಿ ತಮ್ಮ ಕಾರ್ಯದರ್ಶಿಯನ್ನಾಗಿ ಮಾಡಿಕೊಂಡರು. ನಾನೂ ಸಂತೋಷದಿಂದ ಒಪ್ಪಿಕೊಂಡೆ. ಹೊಸ ಕಾರ್ಯಸಮಿತಿಯ ರಚನೆಯೂ ಸರ್ವಸಮ್ಮತಿಯೊಡನೆ ನಡೆಯಿತು. ಎಲ್ಲರೂ ಸಂತುಷ್ಟರಾಗಿ, ಯಾಳಗಿಯ ಜನರ ಔದಾರ್ಯವನ್ನೂ, ಕನ್ನಡ ಪ್ರೇಮವನ್ನೂ ಕೊಂಡಾಡಿ ತೆರಳಿದರು.

## ತಾಲ್ಲೂಕು ಸಮ್ಮೇಳನ

ನಾಂದೇಡ ಜಿಲ್ಲೆಯ ದೇಗುಲೂರು ತಾಲೂಕಿನಲ್ಲಿ ತಾಲೂಕಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಜರುಗಿಸಿದುದು ಮತ್ತೊಂದು ಮಹತ್ವದ ಘಟನೆ. ಮೇ ೭, ೧೯೫೫ಕ್ಕೆ ಜರುಗಿದ ಈ ಸಮ್ಮೇಳನಕ್ಕೆ ದೇಗಲೂರು ತಾಲೂಕಿನ ಕನ್ನಡ ಹಳ್ಳಿಗಳಿಂದಲೂ, ಬೋಧನ, ಬಿಲೋಲಿ, ಸಂತಪುರ ಔರಾದ, ಉದಗಿರಿ, ಬೀದರ ತಾಲೂಕುಗಳಿಂದಲೂ ಸಾವಿರಾರು ಕನ್ನಡಿಗರು ಉಕ್ಕುವ ಅಭಿಮಾನ ಉತ್ಸಾಹಗಳೊಡನೆ ಬಂದಿದ್ದರು' ಸಮ್ಮೇಳನಕ್ಕಾಗಿಯೇ ಭವ್ಯ ಸಭಾಮಂಟಪವೊಂದು ರಚಿತವಾಗಿದ್ದಿತು. ವಿದ್ವಾನ್ ನರಸಿಂಗರಾವ್ ಮಾನ್ವಿ ಅವರ ಅಧ್ಯಕ್ಷೆಯಲ್ಲಿ ಸಾಹಿತ್ಯ



ಸಮ್ಮೇಳನವೂ, ಶ್ರೀ ಆರ್.ಎಂ. ಜೋಶಿ ಅವರ ಅಧ್ಯಕ್ಷತೆಯಲ್ಲಿ ಪಂಚಭಾಷಾ ಕವಿ ಸಮ್ಮೇಳನವೂ ವೈಭವ ಸಂಭ್ರಮಗಳೊಡನೆ ನಡೆದುವು. ಎರಡನ್ನೂ ಆಗ ಲೋಕೋಪಯೋಗಿ ಹಾಗೂ ಕಾರ್ಮಿಕ ಇಲಾಖೆಗಳ ಮಂತ್ರಿಗಳಾಗಿದ್ದ ಡಾ॥ ಜಿ.ಎಸ್. ಮೇಲ್ಕೋಟೆಯವರು ಉದ್ಘಾಟಿಸಿದರು. ಅಲ್ಲಿಯ ಕನ್ನಡಿಗರಿಗೆ ಕನ್ನಡ ಕಲಿಯಿರೆಂದು ಹೇಳಿದರು, ಕನ್ನಡ ಶಾಲೆಗಳಿಗಾಗಿ ಬರುವ ಎಲ್ಲ ಬೇಡಿಕೆಗಳನ್ನೂ ಸರಕಾರ ಸ್ವೀಕರಿಸುವದೆಂದು ಸಾರಿದರು. ನೆರೆದವರೆಲ್ಲ ಸಹರ್ಷ ಕೈ ತಟ್ಟಿದರು. ಅಂಜನೇಯಶರ್ಮರು ತೆಲುಗು ಸಾಹಿತ್ಯವನ್ನು ಕುರಿತೂ, ಭವಾನೀಪ್ರಸಾದ ಮಿಶ್ರರು ಹಿಂದೀ ಸಾಹಿತ್ಯವನ್ನು ಕುರಿತೂ, ಪ್ರೊ॥ ಹಮೀದುದ್ದೀನ್ ಷಾಹಿದರು ಉರ್ದೂ ಸಾಹಿತ್ಯದ ವಿಷಯವಾಗಿಯೂ ಮಾತನಾಡಿದರು. ನಾನು ಕನ್ನಡ ಸಾಹಿತ್ಯವನ್ನು ಕುರಿತು ಮಾತನಾಡಿದೆ. ಆರ್.ಎಂ. ಜೋಶಿಯವರು ಮರಾಠಿ ಸಾಹತ್ಯದ ಬಗ್ಗೆ ಮಾತನಾಡಿ ಸರ್ವಭಾಷಾ ಸಮಭಾವದ ಅಗತ್ಯವನ್ನು ಒತ್ತಿ ಹೇಳಿದರು. ಪಂಚಭಾಷಾ ಕವಿಸಮ್ಮೇಳನ ಎಲ್ಲರ ಮೆಚ್ಚಿಗೆ ಗಳಿಸಿತು.

ಮರುದಿನ ಮಂತ್ರಿಗಳೊಡನೆ ನಾವೆಲ್ಲರೂ ಬಿಚಕುಂದಾದ ಬಂದಯ್ಯಸ್ವಾಮಿಗಳ ಮಠಕ್ಕೆ ಹೋದೆವು. ಸ್ವಾಮಿಗಳವರು ದೇಗಲೂರು ಕನ್ನಡ ಶಾಲೆಯ ಹಾಗೂ ವಿದ್ಯಾರ್ಥಿನಿಲಯದ ಕಟ್ಟಡ ಕಟ್ಟಿಸಿ ಕೊಡುವುದಾಗಿ ವಚನವಿತ್ತರು. ಮಂತ್ರಿಗಳೂ ಸ್ವಯಂ ಸ್ಫೂರ್ತಿಯಿಂದ 250 ರೂಪಾಯಿಗಳ ಕಾಣಿಕೆ ನೀಡಿದರು. ಇದರಿಂದ ಪ್ರೇರಿತರಾಗಿ ಉಳಿದವರೂ ದೇಣಿಗೆಗಳನ್ನು ನೀಡಿದರು. ಅಲ್ಲಿ ಸೇರಿದ್ದ ಹೈದರಾಬಾದು ಪ್ರದೇಶ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಸಮಿತಿಯ ಕೆಲವು ಮಹತ್ವದ ಗೊತ್ತುವಳಿಗಳನ್ನು ಸ್ವೀಕಿರಿಸಿದುದಲ್ಲದೆ ದೇಗಲೂರು, ಬೋಧನ್, ಬಿಲೋಲಿ ತಾಲೂಕುಗಳ 85 ಕನ್ನಡ ಹಳ್ಳಿಗಳನ್ನು ಪ್ರತಿನಿಧಿಸಲು ದೇಗಲೂರಿನ ವಿಶ್ವನಾಥರಾವ್ ಬಿ.ಎ., ಎಲ್.ಎಲ್.ಬಿ. ಅವರನ್ನು ಕಾರ್ಯಸಮಿತಿಗೆ ನಾಮಕರಿಸಿಕೊಂಡಿತು. ದೇಗಲೂರು ತಾಲೂಕು ಒಂದರಲ್ಲಿಯೇ 60 ಕನ್ನಡ ಹಳ್ಳಿಗಳಿದ್ದುದು ಹೈದರಾಬಾದಿನ ಜನಗಣತಿ ಕಮೀಷನರರು ಪ್ರಕಟಿಸಿದ್ದ ಮಾತೃ ಭಾಷೆಗಳಿಗೆ ಸಂಬಂಧಿಸಿದ ಅಂಕಿ ಸಂಖ್ಯೆಗಳಿಂದ ಸಿದ್ಧವಾಗಿದ್ದಿತು. ಈ ಹಳ್ಳಿಗಳಲ್ಲೆಲ್ಲ ಈ ಸಮ್ಮೇಳನಗಳ ಫಲವಾಗಿ ಕನ್ನಡ ಪ್ರೇಮ ಕೊನರಿದ್ದಿತು. ಆದರೆ ಈಗ ಅಲ್ಲಿ ಕನ್ನಡ ಉಳಿದಿದೆಯೋ, ಕನ್ನಡವನ್ನು ಮರಾಠಿ ತಿಂದು ತೇಗಿದೆಯೋ ಗೊತ್ತಿಲ್ಲ! ಕರ್ನಾಟಕವು ಕನ್ನಡಿಗರ ನಿರ್ಲಕ್ಷ್ಯದಿಂದ, ಕನ್ನಡ ನಾಯಕರ ನಪುಂಸಕತೆಯಿಂದ, ನೆರೆಹೊರೆಯ ಭಾಷೆಗಳ ಬಕಾಸುರತೆಯಿಂದ ಕಳೆದುಕೊಂಡ ಭಾಗಗಳಿಗೆ ಲೆಕ್ಕವಿದೆಯೆ? ಈ 85 ಹಳ್ಳಿಗಳೂ ಆ ಆಜ್ಞಾತಯಾದಿಗೆ ಸೇರಿದ್ದರೆ ಆಶ್ಚರ್ಯವಿಲ್ಲ!

ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಭಾತಮ್ರಾ ಗ್ರಾಮದಲ್ಲಿ ಹೈದರಾಬಾದು ಪ್ರದೇಶ ಕನ್ನಡ ಸಾಹಿತ್ಯ ಪರಿಷತ್ತಿನ ಕೊನೆಯ ಸಮ್ಮೇಳನ ನಡೆಯಿತು–ಜೋರಾಗಿಯೇ ನಡೆಯಿತು. ಡಾ॥ ಪದ್ಮಾನಾಭ ಪುರಾಣಿಕರು ಅಧ್ಯಕ್ಷರು; ಜನನಾಯಕ ನಿಜಲಿಂಗಪ್ಪನವರು ಉದ್ಘಾಟಕರು. ಆ ಹಳ್ಳಿಯಲ್ಲಿ ಅಷ್ಟು ದೊಡ್ಡ ಸಮ್ಮೇಳನವನ್ನು ಹಮ್ಮಿಕೊಂಡು, ಅದನ್ನು ನಿರೀಕ್ಷೆಗೂ ಮೀರಿ ಯಶಸ್ವಿಗೊಳಿಸಿದವರು ಆ ಗ್ರಾಮದ ಪಂಚರು, ಪ್ರಮುಖರು ಹಾಗೂ ಬಾಲ್ಕಿಯ ಮುಂದಾಳುಗಳು. ಸರ್ವಶ್ರೀ ಪ್ರಭುರಾವ್ ವಕೀಲ, ಭೀಮಣ್ಣ ಖಂಡ್ರೆ, ಬಿ.ಕೆ. ಕೇಸ್ಕರ್, ಆರ್.ವ್ಹಿ. ಬಿಡಪ್, ಸಿದ್ಧಲಿಂಗಪ್ಪ ಕಾಕ, ಬಂಡೆಪ್ಪ ವಕೀಲ, ಚಂದ್ರಶೇಖರ ಶಾಸ್ತ್ರಿ ಹುಮನಾಬಾದ, ವೀರಶೆಟ್ಟೆಪ್ಪ ವಂಕಿ, ಕಾಶೀನಾಥರಾವ್ ದೇಶಮುಖ, ಧರ್ಮಪಾಲ, ಮಾಣಿಕಪ್ಪ ವಕೀಲಿ, ಬಿ.ಎಂ. ಬಿಜಾಪುರ, ಕಾಂತಾಚಾರ್ಯ, ಮಹೇಶ ಶಂಕರ ಮಾಸ್ತರ, ಅಡಿವೆಪ್ಪ ನಂದಗಾವ, ಎಸ್.ಆರ್. ಕಲಮಂಗಿ, ಸುಗನಲಾಲಜಿ ಸೂರಾಣ, ತಿಮ್ಮಣ್ಣಾಚಾರ್ಯ, ಅನ್ನದಾನಯ್ಯ ಪುರಾಣಿಕ, ಶ್ರೀಮತಿ ನೀಲಾಂಬಿಕಾದೇವಿ ಅಷ್ಟೂರೆ ಫಡನೀಸ ದಂಪತಿಗಳು, ಕೆ.ಎಸ್. ರಾಜ್ ಹಾಗೂ ಅವರ ಸಂಗಡಿಗರು, ಅಬ್ದುಲ್, ರಜಾಕ್ ವಕೀಲ, ಇಸಾಕ್ ಸಾಹೇಬ, ಕನ್ಹಯ್ಯಲಾಲ ತ್ರಿವೇದಿ, ಕಲ್ಲಪ್ಪ ಮುದ್ದಾ, ಕಚರುಲಾಲ ಮುಂತಾದ ಗಣ್ಯರು ಉಪಸ್ಥಿತರಿದ್ದ ಆ ಚಿರಸ್ಮರಣೀಯ ಸಮ್ಮೇಳನವು ಶ್ರೀ ಲಿಂಗಪ್ಪ ಗುತ್ತೇದಾರರು ನಿರ್ಮಿಸಿದ್ದ ಭವ್ಯವಾದ ಸಂಗ್ರಾಮಪ್ಪಾ ಸಭಾಭವನದಲ್ಲಿ ಬಸವರಾಜಗಾಯನ ಕೋಕಿಲ ಅವರಿಂದ 'ಉದಯವಾಗಲಿ' ನಾಡಹಾಡಿನೊಂದಿಗೆ ಪ್ರಾರಂಭವಾಯಿತು. ಏಕೀಕೃತ ಕರ್ನಾಟಕದ ಕನಸು ನನಸಾಗಲಿದ್ದ ಆ ಐತಿಹಾಸಿಕ ಸನ್ನಿವೇಶದಲ್ಲಿ ಏಕೀಕರಣದ ಶಿಲ್ಪಿಯೆಂದು ಖ್ಯಾತರಾಗಿದ್ದ ಶ್ರೀ ನಿಜಲಿಂಗಪ್ಪನವರೇ ಆ ಸಮ್ಮೇಳನವನ್ನು ಉದ್ಘಾಟಿಸಿದುದು ನೆರೆದ ಸಹಸ್ರಾವಧಿ ಸಭಿಕರರಿಗೆ ರೋಮಾಂಚನಕಾರಕ ಸಂಗತಿಯಾಗಿದ್ದಿತು. ಅವರೂ ಆ ಭಾಗದ ಜನರಿಗೆ ಭರವಸೆ ಹುಟ್ಟುವ ರೀತಿಯಲ್ಲಿ ಮಾತನಾಡಿದರು. ಡಾ॥ ಪದ್ಮನಾಭ ಪುರಾಣಿಕರ ಅಧ್ಯಕ್ಷ ಭಾಷಣವೂ ಮನನೀಯವಾದುದಾಗಿದ್ದಿತು. ಎಲ್ಲ ಇಲಾಖೆಗಳವರೂ ಸಹಕರಿಸಿ ಏರ್ಪಡಿಸಿದ್ದ ಕೃಷಿ ಪ್ರದರ್ಶನ. ಆರೋಗ್ಯ ಪ್ರದರ್ಶನ, ಪಶು ಪ್ರದರ್ಶನಗಳು ಬಹಳ ಆಕರ್ಷಕವಾದುವಾಗಿದ್ದುವು. ಮಹಿಳಾ ಗೋಷ್ಠಿಯೂ ಬಹಳ ಹುರುಪಿನೊಡನೆ ನಡೆಯಿತು.

### ಪಿ.ಬಿ. ದೇಸಾಯಿ

ಸಮ್ಮೇಳನಕ್ಕೆ ಅನೇಕರು–ಮಂತ್ರಿಗಳು, ಉಪಕುಲಪತಿಗಳು, ಹಿರಿಯ ಸಾಹಿತಿಗಳು ಶುಭ ಸಂದೇಶಗಳನ್ನು ಕಳಿಸಿದ್ದರು. ಆದರೆ ನನ್ನ ವಿದ್ಯಾಗುರುಗಳಾದ



ಡಾ॥ ಪಿ.ಬಿ. ದೇಸಾಯಿಯವರು ಕಳಿಸಿದ ಸುದೀರ್ಘ ಸಂದೇಶ ತುಂಬ ಮನನೀಯವಾದುದಾಗಿದ್ದಿತು. ಅದನ್ನು ಇಲ್ಲಿ ಸಂಪೂರ್ಣವಾಗಿ ಉದ್ಧರಿಸಲು ಮನ ಹಾತೊರೆಯುತ್ತಿದ್ದರೂ ಸ್ಥಳಾಭಾವ ಅಡ್ಡ ಬರುತ್ತಿದೆ. ಅದರಲ್ಲಿ ಅವರು ಹೇಳಿದ ಕೆಲವು ಮುಖ್ಯವಾದ ಮಾತುಗಳನ್ನಾದರೂ ಇಲ್ಲಿ ಉದಾಹರಿಸಬೇಕು. "ಇನ್ನು ಮುಂದೆ ಹೈದರಾಬಾದ ಕನ್ನಡಿಗರು ಕರ್ನಾಟಕವೆಂಬ ವಿಶಾಲ ಕುಟುಂಬದಲ್ಲಿ ಸೇರಿಕೊಳ್ಳುತ್ತಾರೆ. ಅವರ ಹೆಸರಿನ ಹಿಂದಿನ 'ಹೈದರಾಬಾದ' ಎಂಬ ಉಪಾಧಿ ತೊಲಗಿ ಹೋಗುವುದು. ಉತ್ತರ ದಕ್ಷಿಣಾದಿ ಪ್ರಾದೇಶಿಕ ಭಾವನೆ ಮಾಯವಾಗಿ ಎಲ್ಲ ಕನ್ನಡಿಗರು ಒಬ್ಬ ಮಾತೃದೇವಿಯ ಮುದ್ದುಮಕ್ಕಳಾಗುತ್ತಾರೆ. (ಇನ್ನು ಆಗಿಲ್ಲ! ಲೇ.)

"ಹೈದರಾಬಾದು ಕನ್ನಡಿಗರು ಹೈದರಾಬಾದಿಗಳಾಗಿ ಉಳಿಯದಿದ್ದರೂ ತಲ ತಲಾಂತರಗಳಿಂದ ನಡೆದು ಬಂದು ರಕ್ತಗತವಾಗಿರುವ ಸಂಪ್ರದಾಯ ಪರಂಪರೆಯಲ್ಲಿ ರೂಪುಗೊಂಡ ಅವರ ವಿಶಿಷ್ಟತೆ ಮಾತ್ರ ಸಹಜವಾಗಿ ಅಳಿದು ಹೋಗಲಾರದು. ಈ ಸಂಪ್ರದಾಯ ಪರಂಪರೆ ಭದ್ರವಾದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನಿಂತಿರುವುದರ ಮೂಲಕ ಅದಕ್ಕೊಂದು ವಿಶೇಷತೆ ಪ್ರಾಪ್ತವಾಗಿದೆ...ಹೀಗೆಲ್ಲ ಹೇಳಿದ ಮಾತ್ರಕ್ಕೆ ಇಂದಿನ ಹೈದರಾಬಾದು ಕನ್ನಡಿಗರು ನಾಳಿನ ವಿಶಾಲ ಕರ್ನಾಟಕದ ದೊಡ್ಡ ಜೀವನದಲ್ಲಿ ಸಮರಸ ಭಾವನೆಯನ್ನು ತಳೆಯದೆ, ತಮ್ಮದೇ ಆದ ಒಂದು ಗುಂಪನ್ನು ಕಟ್ಟಿಕೊಂಡು ಬಾಳಬೇಕು–ಎಂದು ಸೂಚಿಸುತ್ತಿದ್ದೇನೆಂದು ಎಣಿಸಬೇಡಿ. ಅಂತಹ ಪ್ರತ್ಯೇಕತಾವಾದಿ ನಾನಲ್ಲ. ಜನ ಜನಗಳ ವಿಶೇಷತೆಯಲ್ಲಿ ಜನಾಂಗದ ಸಾಮಾನ್ಯತೆ ಉಂಟು. ಇಂಥ ವಿಶೇಷತೆಯಲ್ಲಿಯೇ ಜನಾಂಗಕ್ಕೆ ವೈಶಿಷ್ಟ್ಯ ಬರುತ್ತದೆ. ಇಂತಹ ವೈಶಿಷ್ಟ್ಯಗಳು ನಾಡಿನ ವೈವಿಧ್ಯವನ್ನು ಹೆಚ್ಚಿಸಿ ಸಂಸ್ಕೃತಿಯ ವಿಕಾಸಕ್ಕೆ ಸಹಾಯಕವಾಗುತ್ತವೆ. ಇದನ್ನು ನಾವು ಅರಿತು ಬಾಳಬೇಕು." ಆ ಭಾಗದ ಕನ್ನಡಿಗರೇನೋ ಇದರಂತೆ ನಡೆಯುತ್ತ ಬಂದಿದ್ದಾರೆ; ಆದರೆ ಉಳಿದ ಕನ್ನಡಿಗರು ಅವರತ್ತ ತಮ್ಮ ಪ್ರೇಮ ದೃಷ್ಟಿಯನ್ನಿನ್ನೂ ಹರಿಸಬೇಕಾಗಿದೆ.

ಕನ್ನಡ ಮಾತನಾಡುವವರ ನೆಲದ ಕ್ಷಿತಿಜದ ಮೇಲೆ ಕರ್ನಾಟಕ ಏಕೀಕರಣದ ಜ್ಯೋತಿರ್ಗೋಲ ಮೂಡುವ ಮುನ್ನ ಮೈಸೂರಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು–ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ. ಅದರ ಅಂಗವಾಗಿ ಸಮಾವೇಶಗೊಂಡ ಕನ್ನಡ ಲೇಖಕರ ಗೋಷ್ಠಿಯ ಅಧ್ಯಕ್ಷತೆ ನನ್ನ ಪಾಲಿಗೆ ಬಂದಿತು. ಅದು ನಾನು ಹುಟ್ಟಿದ್ದ ಹೈದರಾಬಾದು ಕರ್ನಾಟಕಕ್ಕೆ ಸಂದ ಗೌರವವೆಂದು ಸ್ವೀಕರಿಸಿ ಮೈಸೂರಿಗೆ ಹೋದೆ. ಕವಿಕುಲೋತ್ತುಂಗ ಕುವೆಂಪು ಅವರು ಕುಲಪತಿಗಳಾಗಿದ್ದ

ಕಾಲವದು. ಅವರೇ ಸ್ವಾಗತಾಧ್ಯಕ್ಷರೆಂದ ಮೇಲೆ ಕೇಳುವುದೇನಿದೆ? ಎಲ್ಲ ವ್ಯವಸ್ಥೆಗಳೂ ಸರ್ವಸಮರ್ಪಕ ರೀತಿಯಲ್ಲಿ ಆಗಿದ್ದುವು. ನನ್ನನ್ನೂ ಮಹಾಕವಿ ಬೇಂದ್ರೆಯವರನ್ನೂ ಒಂದೇ ಕಡೆಗೆ ಇರಿಸಿದ್ದು ನನಗೆ ಹೆಮ್ಮೆಯ, ಹಿಗ್ಗಿನ ಸಂಗತಿಯಾಗಿದ್ದಿತು. ಅವರೊಡನೆ ಕಳೆದ ದಿನಗಳೆಂದರೆ ಅರಿವಿನ ತೊರೆಯಲ್ಲಿ ಅವಗಾಹನ ಮಾಡಿದ ದಿನಗಳೇ! ಅಧ್ಯಕ್ಷ ಕಾರಂತರೂ ಅನತಿ ದೂರದಲ್ಲಿಯೇ ಇದ್ದರು. ನಾವೂ ಮೂವರೂ ಕೂಡಿಯೇ ಕಾರ್ಯಕ್ರಮಗಳಿಗೆ ಹೋಗುತ್ತಿದ್ದೆವು. ನಾನು ತಪ್ಪು ತಪ್ಪಾಗಿ ಫೋಟೋ ತೆಗೆದುಕೊಳ್ಳುತ್ತಿದ್ದುದನ್ನು ಕಾರಂತರು ನೋಡಿ ನನಗೆ ಸರಿಯಾಗಿ ಕ್ಯಾಮರಾ ಉಪಯೋಗಿಸುವುದನ್ನು ಕಲಿಸಿದರು. ಎಷ್ಟು ವಿಷಯಗಳಲ್ಲಿ ಅವರು ಬಲ್ಲವರೆಂಬುದನ್ನರಿತು ವಿಸ್ಮಿತನಾದೆ ನಾನು.

10-6-1955ಕ್ಕೆ ಜರುಗಿದ ಮೂವತ್ತೇಳನೆಯ ಕನ್ನಡ ಸಾಹಿತ್ಯ ಸಮ್ಮೇಳನ ಏಕೀಕೃತ ಕರ್ನಾಟಕವನ್ನು ಸ್ವಾಗತಿಸಲು ಸೇರಿದ್ದ ಸಮ್ಮೇಳನವೆಂಬಂತೆ ತೋರುತ್ತಿದ್ದಿತು. ಕಾರ್ಯದರ್ಶಿ ಕೆ.ವಿ. ರಾಘವಾಚಾರ್ಯರೂ, ಪರಮಮಿತ್ರ ದೇ. ಜವರೇಗೌಡರೂ, ಅದೇ ಅಮೇರಿಕೆಯಿಂದ ಮರಳಿದ್ದ ಡಾ॥ ಹಾ.ಮಾ. ನಾಯಕರೂ, ಇನ್ನೂ ಅನೇಕ ವಿದ್ವಜ್ಜನರೂ ನನಗೆ ಸ್ನೇಹ ಸುಧೆಯನ್ನು ಉಣಿಸಿದರು. ಬೇಂದ್ರೆಯವರೊಡನೆ 'ಉದಯರವಿ'ಗೆ ಹೋದೆ. ಅವರಿಬ್ಬರ ಸಮಾಗಮ ನನ್ನ ಮಟ್ಟಿಗೆ ಒಂದು ಅವಿಸ್ಮರಣೀಯ ಅನುಭವ. ಇಬ್ಬರೂ ನಗೆಯಾಡಿದರು, ಒಬ್ಬರೊಬ್ಬರ ಉಭಯಕುಶಲೋಪರಿಯಾದ ಮೇಲೆ ಗಹನ ವಿಷಯಗಳ ಮಂಥನ ಮಾಡಿದರು. ನಾನು ಬೆರಗಾಗಿ ಅವರ ಬಾನೆತ್ತರದ ವಿಚಾರಗಳನ್ನು ಆಸ್ವಾದಿಸುತ್ತಿದ್ದೆ. ಬೇಂದ್ರೆಯವರ ಪರಿಚಯ ಮಾಡಿಕೊಡುವಾಗ ಕುವೆಂಪು ಅವರು, 'ನಾನು ಬೇಂದ್ರೆಯವರಿಗೆ ಯಾವ ವಿಶೇಷಣವನ್ನೂ ಅಂಟಿಸುವ ಗೊಡವೆಗೆ ಹೋಗುವುದಿಲ್ಲ; ಯಾಕೆಂದರೆ 'ಬೇಂದ್ರೆ' ಎಂಬುದೇ ಎಲ್ಲಕ್ಕಿಂತ ದೊಡ್ಡ ವಿಶ್ಲೇಷಣೆ' ಎಂದು ಹೇಳಿದ್ದರು. ನಿಜ, 'ಬೇಂದ್ರೆ' 'ಕುವೆಂಪು' ಎಂಬುವೇ ಎಲ್ಲಕ್ಕಿಂತ ದೊಡ್ಡ ವಿಶೇಷಣಗಳು.

ಲೇಖಕರ ಗೋಷ್ಠಿಯ ಉಪಸಂಹಾರ ಭಾಷಣವನ್ನು ಕಾರಂತರೇ ಮಾಡಿಬಿಟ್ಟರು. ನನಗೂ ಹೊರೆ ಇಳಿದ ಅನುಭವವಾಗಿ ಸಂತೋಷವಾಯಿತು. ಆದರೆ ಆಮೇಲೆ ಅದು ನಾನು ಮಾಡಬೇಕಾಗಿದ್ದ ಭಾಷಣವೆಂಬುದು ಅವರಿಗೆ ಗೊತ್ತಾಗಿ, 'ಪುರಾಣಿಕರೆ, ನಿದೆಗೆಟ್ಟ ನಾನು ಈ ಆಚಾತುರ್ಯ ಮಾಡಿಬಿಟ್ಟೆ; ಕ್ಷಮಿಸಿರಿ,' ಎಂದುಬಿಟ್ಟರು. ನನಗೆ ಅವರ ದೊಡ್ಡತನವನ್ನು ನೋಡಿ ಅವರ ಬಗೆಗಿದ್ದ ನನ್ನ ಗೌರವ ಇನ್ನೂ ಹೆಚ್ಚಾಯಿತು. ಮುಂದೆ ನಾನು ಕೊಡಗಿನಲ್ಲಿದ್ದಾಗ ದಾನವೀರ ಜಿ.ಎಂ. ಮಂಜುನಾಥಯ್ಯನವರು ಕಾರಣರಾಗಿ ನಮ್ಮೀರ್ವರ ಸಂಬಂಧ ಇನ್ನೂ ಮಧುರವಾಯಿತು. ಅವರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ ಅವರ ಒಂದೆರಡು



ಸನ್ಮಾನ ಸಮಾರಂಭಗಳ ಅಧ್ಯಕ್ಷತೆ ವಹಿಸುವ ಗೌರವವೂ ನನಗೆ ದೊರೆಯಿತು. ಆದರೆ ಒಂದು ಕ್ಷುಲ್ಲಕ ಕಾರಣದಿಂದಾಗಿ ನನ್ನ ಅವರ ನಡುವೆ ಗೋಡೆಯೆದ್ದುದು ದುರ್ದೈವದ ಸಂಗತಿಯೇ ಸರಿ!

ಅಂದು ರಾತ್ರಿ ಮಿತ್ರರೊಬ್ಬರ ನೆರವಿನಿಂದ ಚಾಮುಂಡೇಶ್ವರಿಯ ದರ್ಶನ ಪಡೆದೆವು. ಜೊತೆಗೆ ಜೋಳದರಾಶಿ ದೊಡ್ಡನಗೌಡರಿದ್ದರು. ಅವರಿಗೆ ಭಾವಾವೇಶ ಬಂದಿತು. ನಿಜಗುಣ ಶಿವಯೋಗಿಗಳ 'ಪಾಲಿಸೆನ್ನನು ಪದುಳವೆರಸಿ ಪರಶಿವನರಸಿ' ಎಂಬ ಹಾಡುಗಬ್ಬವನ್ನು ಭಕ್ತಿ ಪರವಶತೆಯೊಡನೆ ಹಾಡಿದರು. ಅವರ ಕಂಚಿನ ಕಂಠದ ಇಂಚರ ದೇವಾಲಯವನ್ನೆಲ್ಲ ವ್ಯಾಪಿಸಿ ಬೆಟ್ಟದಿಂದ ಕೆಳಗಿಳಿಯುತ್ತಿರುವಂತೆ ಅನುಭವವಾಯಿತು ನಮಗೆ. ಮುಖ್ಯ ಅರ್ಚಕರು ಮುಂದೆ ಬಂದು, "ಸ್ವಾಮೀ, ಇಲ್ಲಿಯೇ ಆಯುಷ್ಯ ಕಳೆದವ ನಾನು; ಇಂಥದನ್ನು ಇದುವರೆಗೂ ಕೇಳಿರಲಿಲ್ಲ, ಇನ್ನೊಮ್ಮೆ ಹಾಡಿರಿ, ಎಂದು ಕೇಳಿಕೊಂಡರು. ಗೌಡರು ಮತ್ತೊಮ್ಮೆ ಹಾಡಿದರು. ನಮಗೂ ಪರವಶತೆ ಆವರಿಸಿತ್ತು.

ಸಮ್ಮೇಳನವನ್ನು ಮುಗಿಸಿಕೊಂಡು ಶ್ರವಣ ಬೆಳುಗೊಳ, ಬೇಲೂರು, ಹಳೇಬೀಡುಗಳನ್ನು ನೋಡಿಕೊಂಡು, ನನ್ನ ಜೊತೆಗಿದ್ದ ಟಿ.ಡಿ. ಶಿವಲಿಂಗಣ್ಣನವರ ಮಗಳು ಚಿ॥ ವಿಮಲಾನನ್ನು ಧಾರವಾಡದಲ್ಲಿ ಬಿಟ್ಟು ಸ್ವಸ್ಥಾನಕ್ಕೆ ಹಿಂದುರುಗಿದೆ. ಇನ್ನೊಮ್ಮೆ ಬೆಂಗಳೂರಿನಲ್ಲಿ ಅ.ನ.ಕೃ. ಮತ್ತು ಪಂಡಿತ ಬಿ. ಶಿವಮೂರ್ತಿಶಾಸ್ತ್ರಿಗಳನ್ನು ಕಂಡು, ಗುಬ್ಬಿ ವೀರಣ್ಣನವರ ಹೊಸ ನಾಟಕ 'ದಶಾವತಾರ'ದ ಕೆಲವು ದೃಶ್ಯಗಳನ್ನು ನೋಡಿಯೇ ರಾತ್ರಿ ಗಾಡಿ ಏರಿದ್ದೆವು. ಶ್ರೀಮನ್ಮಹಾರಾಜರೇ ಉದ್ಘಾಟಿಸಿದ ಆ ನಾಟಕ ಅದ್ಭುತ ರಮ್ಯತೆಗೆ ಇನ್ನೊಂದು ಹೆಸರೆನ್ನಿಸುವಂತಿದ್ದಿತು.

## ಡೆಪ್ಯುಟಿ ಕಲೆಕ್ಟರ್ :

ಭಾಷಾನುಗುಣ ರಾಜ್ಯ ಪುನರ್‌ರಚನೆಗೆ ರಾಷ್ಟ್ರ ಧುರೀಣರ, ಲೋಕಸಭೆಯ 'ಅಸ್ತು' ದೊರೆಯಲಿದ್ದ ಸಂದರ್ಭದಲ್ಲಿ ನನ್ನ ಸೇವಾ ವೃತ್ತಿಯ ಭವಿಷತ್ತಿನ ಪ್ರಶ್ನೆ ಎದ್ದುನಿಂತಿತು. ಶ್ರೀ ಜಹೀರ್ ಅಹಮ್ಮದರು ಅಭಿವೃದ್ಧಿ ಕಮೀಷನರರಾಗಿ ನನ್ನನ್ನು ಕಂದಾಯ ಇಲಾಖೆಗೆ ಮತ್ತೆ ಎಳೆದುಕೊಳ್ಳಲು ಹಿಂದೊಂದು ಪ್ರಯತ್ನ ಮಾಡಿ ವಿಫಲರಾಗಿದ್ದರು. ತುಂಗಭದ್ರಾ ಜಲಾಶಯದ ಅಚ್ಚುಕಟ್ಟಿನ ಪ್ರದೇಶದ ರೈತರ ಭಾಗ್ಯ ಶಿಲ್ಪಿಯಾಗ ಬಲ್ಲ ಒಬ್ಬ ಅಧಿಕಾರಿ ಮಂತ್ರಿಯೋರ್ವರ ಆಪ್ತಕಾರ್ಯದರ್ಶಿ-ಯಾಗಿ ಆಯುಷ್ಯ ಹರಣ ಮಾಡುತ್ತಿರುವುದು ವಿಹಿತವಲ್ಲ, ಸಿದ್ಧಯ್ಯ ಪುರಾಣಿಕರನ್ನು ತುಂಗಭದ್ರಾ ಪ್ರಾಜೆಕ್ಟಿನ ಅಭಿವೃದ್ಧಿ ಅಧಿಕಾರಿಯನ್ನಾಗಿ ಕಳಿಸಬೇಕೆಂದಿದ್ದೇನೆ; ಅವರನ್ನು ಬಿಟ್ಟು ಕೊಡಿ-ಎಂದು ಕೇಳಿದ್ದರವರು. ಡಾ॥ ಚೆನ್ನಾರೆಡ್ಡಿಯವರು ಬಿಟ್ಟುಕೊಡ-ಬೇಕೆಂದಿದ್ದರು. ಆದರೆ ಸಾವಿತ್ರೀ ತಾಯಿಯವರು ಅಡ್ಡ ಬಂದರು. ಅಷ್ಟು ಹೊತ್ತಿಗೆ

ನಾವು ಅವರ ಪರಿವಾರದವರೇ ಆಗಿ ಬಿಟ್ಟಿದ್ದೆವು. ಆದರೆ 'ಬೆರಕಿ' ಜಹೀರ್ ಅಹಮ್ಮದರು ಬಿಡಲಿಲ್ಲ ಅಷ್ಟಕ್ಕೇ. ತಾಂಡೂರು ಸಬ್‌ಡಿವ್ಹಿಜನ್ ಡಾ. ಚೆನ್ನಾರೆಡ್ಡಿಯವರ ಚುನಾವಣಾ ಕ್ಷೇತ್ರವೆಂಬುದನ್ನು ಗಮನಿಸಿದ ಅವರು ತಾಂಡೂರಿಗೆ ನನ್ನನ್ನು ಡೆಪ್ಯುಟಿ ಕಲೆಕ್ಟರ್ ಎಂದು ಕಳಿಸುವ ಸೂಚನೆಯನ್ನು ಮುಂದಿಟ್ಟರು. ಅದಕ್ಕೆ ಚೆನ್ನಾರೆಡ್ಡಿಯವರ ಒಪ್ಪಿಗೆ ದೊರೆಯಿತು. ನಾನು ತಾಂಡೂರಿಗೆ ಹೋದೆ.

ಅಲ್ಲಿಗೆ ಹೋದುದೇ ತಡ, ಯಾದಗಿರಿ ಸಬ್‌ಡಿವ್ಹಿಜನ್ನಿನ ಅಡಿಷನ್ ಚಾರ್ಜು ಕೊರಳಿಗೆ ಬಿದ್ದಿತು. ಜಹೀರ್ ಅಹಮ್ಮದ್ ಸಾಹೇಬರ ಒಳಗಿನ ಉದ್ದೇಶವೇ ಅದಾಗಿದ್ದಿತು. ಯಾದಗಿರಿ ತಾಲೂಕಿನಲ್ಲಿ ಬಹಳ ಪ್ರಚಾರದೊಡನೆ ಪ್ರಾರಂಭವಾಗಿದ್ದ ರಾಷ್ಟ್ರೀಯ ವಿಸ್ತರಣ ಯೋಜನೆ ಒಂದು ಹೆಜ್ಜೆಯಷ್ಟೂ ಮುಂದೆ ಸಾಗಿರಲಿಲ್ಲ. ಅದನ್ನು ಬೇರೆ ಕಡೆಗೆ ವರ್ಗಾಯಿಸಿ ಬಿಡಬೇಕೆನ್ನುವಷ್ಟು ದೂರ ವರಿಷ್ಠರು ಹೋಗಿ ಬಿಟ್ಟಿದ್ದರು. ಆ ತಾಲೂಕಿನವರು ಸಾಮಾನ್ಯರಲ್ಲ. ಅದನ್ನು ಅಲ್ಲಿಂದ ವರ್ಗಾಯಿಸುವುದೆಂದರೆ ಕೊಲ್ಲೂರು ಮಲ್ಲಪ್ಪ, ಜಗನ್ನಾಥರಾವ್ ಚಂಡರಕಿ, ವೈ. ವಿರೂಪಾಕ್ಷಪ್ಪರಂಥ ಮುಂದಾಳುಗಳನ್ನು ಕೊಟ್ಟಿದ್ದ ಯಾದಗಿರಿಗೆ ಅವಹೇಳನ ಮಾಡಿದಂತಾಗುತ್ತಿದ್ದಿತು. ಅದನ್ನು ಹೇಗಾದರೂ ಮಾಡಿ ಯಶಸ್ವಿಗೊಳಿಸಿಯೇ ಈ ಧರ್ಮ ಸಂಕಟದಿಂದ ಪಾರಾಗಲೆಳಸಿದ್ದರು ಅವರು. ಅಂತೆಯೇ ಅದನ್ನು ನನ್ನ ಕೊರಳಿಗೆ ಕಟ್ಟಿಬಿಟ್ಟರು!

**ಎರಡು ಕೆಲಸ :**

ಒಂದು ವಾರ ತಾಂಡೂರಿನಲ್ಲಿ, ಒಂದು ವಾರ ಯಾದಗಿರಿಯಲ್ಲಿ! ಆಗ ನನ್ನ ಹತ್ತಿರ ಸ್ವಂತ ವೇಗವಾಹನ–ಸೌಂದರ್ಯಶೂನ್ಯ, ವಿರಾಮವಿಹೀನ, ವೇಗವಾಹನ–ಜೀಪು ಇದ್ದುದರಿಂದ ತಾಂಡೂರು ಯಾದಗಿರಿಗಳ ನಡುವಣ ದೊಡ್ಡ ದೂರವನ್ನು ದಾಟಿಯೇ ಎರಡೂ ಉಪವಿಭಾಗಗಳ ಕಾರ್ಯಭಾರವನ್ನು ನಿರ್ವಹಿಸುತ್ತಿದ್ದೆ. ತಾಂಡೂರಿನಲ್ಲಿಯೂ ಅಭಿವೃದ್ಧಿ ಕಾರ್ಯಗಳನ್ನು ಆರಂಭಿಸಿದೆ, ಯಾದಗಿರಿ ಬ್ಲಾಕಿನಲ್ಲಿಯೂ ಆರಂಭಿಸಿದೆ, ರಾ.ವಿ. ಕ್ಷೇತ್ರದ ಕಾರ್ಯ ಸ್ಥಗಿತಗೊಳ್ಳಲು ಮುಖ್ಯ ರಸ್ತೆಗೇ ಹೊಂದಿ ಇದ್ದ ರಾಮಸಮುದ್ರದ ಶಾಲಾ ಕಟ್ಟಡ ಅರ್ಧಕ್ಕೆ ನಿಂತುದು–ಎಂಬುದು ತಿಳಿಯಲು ಅದರ ಮೇಲೆ ಎಲ್ಲ ಲಕ್ಷ್ಯ ಕೇಂದ್ರೀಕರಿಸಿ ಒಂದೇ ತಿಂಗಳಲ್ಲಿ ಅದು ಪೂರ್ಣವಾಗುವಂತೆ ಮಾಡಿದೆ; ಅದ್ದೂರಿಯ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಿದೆ. ಆ ಕ್ಷೇತ್ರದ ಸ್ಥಾವರತ್ವ ಕರಗಿ ಜಂಗಮತ್ತ ದೊರೆಯಿತದಕ್ಕೆ. ಅಲ್ಲಲ್ಲಿ ಅಭಿವೃದ್ಧಿ ಕಾರ್ಯಗಳು ಪ್ರಾರಂಭವಾಗಿ ನಿರಾಶೆ ಆಶೆಯಾಗಿ ಪರಿವರ್ತಿತವಾಗ ತೊಡಗಿತು.



ತಾಂಡೂರು ಉಪವಿಭಾಗದಲ್ಲಿ ಎನ್.ಈ.ಎಸ್. ಬ್ಲಾಕುಗಳಾವುವೂ ಇರಲಿಲ್ಲ. ಆದರೆ ಆಗ (Cash grant) ಪದ್ಧತಿಯೊಂದು ಇದ್ದಿತು. ಪ್ರತಿಯೊಬ್ಬ ಮಂತ್ರಿಯ ಬಳಿ ಒಂದು ಕೂಪನ್ ಬುಕ್ ಕೊಟ್ಟು, ವರ್ಷಕ್ಕೆ ಒಂದು ಲಕ್ಷ ರೂಪಾಯಿಗಳಿಗೆ ಮಿಕ್ಕದಂತೆ ಸ್ಥಳೀಯ ಅಭಿವೃದ್ಧಿ ಕಾರ್ಯಗಳಿಗೆ ಅವರು ಕೂಪನ್ ಕೊಡಬಹುದಾಗಿದ್ದಿತು. ನಾನು ಅನೇಕ ಮಂತ್ರಿಗಳಿಂದ ಕೂಪನ್ ಪಡೆದುಕೊಂಡು ಬಂದು ಆ ಉಪವಿಭಾಗದ ನಾಲ್ಕು ತಾಲೂಕುಗಳಲ್ಲಿಯೂ ಶಾಲಾ ಭವನ ನಿರ್ಮಾಣ, ಕುಡಿಯುವ ನೀರಿನ ಬಾವಿ ಇತ್ಯಾದಿ ಜನೋಪಯೋಗಿ ಕಾರ್ಯಗಳನ್ನು ಪ್ರಾರಂಭಿಸಿದೆನು. ಅಲ್ಲಿಯ ಜನಗಳಲ್ಲಿಯೂ ಆಸೆ ಅಂಕುರಿಸಿತು. ಸೇಡಮ್ ತಾಲೂಕಿನ ಕೇಂದ್ರ. ಅಲ್ಲಿ ಹಾಯ್ ಸ್ಕೂಲ್ ಹಳೆಯ ಮುರುಕು ಮನೆಯೊಂದರಲ್ಲಿ ನಡೆದಿದ್ದಿತು. ಹೊಸ ಕಟ್ಟಡದ ವೆಚ್ಚದ ಅರ್ಧ ಭಾಗ ಸ್ಥಳೀಯರಿಂದ ಕೊಡುಗೆಯಾಗಿ ದೊರೆಯದೆ ಕಟ್ಟಡ ಮಂಜೂರಾಗುವಂತಿರಲಿಲ್ಲ. ಆದರೆ ಆಗ ಬಡತನದಲ್ಲಿದ್ದ ಆ ಪಟ್ಟಣದಲ್ಲಿ ಕನಿಷ್ಠ ಐವತ್ತು ಸಾವಿರ ರೂಪಾಯಿಗಳನ್ನು ಆ ಕಾಲದಲ್ಲಿ ಕೂಡಿಸುವುದು ಅಸಾಧ್ಯವಾದುದೇ ಆಗಿದ್ದಿತು. ಹೀಗಾಗಿ ಅವರು ಹೊಸ ಕಟ್ಟಡದ ಆಶೆಯನ್ನೇ ಬಿಟ್ಟುಬಿಟ್ಟಿದ್ದರು. ಏನೋ ಒಗೆಯುವ ಕಲ್ಲು ಒಗೆದು ನೋಡೋಣವೆಂದು ನನಗೂ ಹೊಸ ಕಟ್ಟಡದ ಬಗ್ಗೆ ಹೇಳಿಕೊಂಡರು. ನಾನಾವ ಆಶ್ವಾಸನವನ್ನೂ ನೀಡಲಿಲ್ಲ. ತಾಂಡೂರಿಗೆ ಹಿಂದಿರುಗುತ್ತ ಸಂಗಡ ಇದ್ದ ತಹಸೀಲ್ದಾರರನ್ನು ಕೇಳಿದೆ–"ಈ ರಸ್ತೆಗಾಗಿ ಭೂಮಿ ಬಿಟ್ಟುಕೊಟ್ಟಿದ್ದ ರೈತರಿಗೆ ಪರಿಹಾರ ಕೊಡಲಾಗಿದೆಯೆ?" ಎಂದು. 'ಇಲ್ಲ' ಎಂದರವರು ಹಿಗ್ಗಿದೆ. ಈ ತಾಲೂಕಿನ ಗಡಿಗಳಲ್ಲಿ ಬರುವ ರಸ್ತೆಯಲ್ಲಿ ಯಾರು ಯಾರ ಭೂಮಿ ಎಷ್ಟು ಎಷ್ಟು ಹೋಗಿದೆಯೆಂಬುದರ ಸರ್ವೇ ಮಾಡಿಸಿರಿ–ಒಂದು ವಾರದಲ್ಲಿ–ಎಂದು ಹೇಳಿದೆ. ಅವರು ಒಪ್ಪಿದರು. ಒಂದು ವಾರದಲ್ಲಿ ಆ ವಿವರ ಬರಲು ಅವರಿಗೆ ಆಗಿನ ನಿಯಮಗಳ ಪ್ರಕಾರ ಪರಿಹಾರ ಧನ ನಿಗದಿ ಮಾಡಿದೆ. ಒಂದೂಕಾಲು ಲಕ್ಷ ರೂಪಾಯಿಗಳಷ್ಟಾಯಿತು. ನಾನೇ ಹೈದರಬಾದಿಗೆ ಹೋಗಿ ರಂಗಾರೆಡ್ಡಿಯವರನ್ನು ಕಂಡು ಒಂದೇ ದಿನದಲ್ಲಿ ಅದಕ್ಕೆ ಮಂಜೂರಿ ದೊರಕಿಸಿಕೊಂಡು ಬಂದೆ. ಪೋಲೀಸ್ ರಕ್ಷಣೆಯಲ್ಲಿ ಒಂದೂ ಕಾಲು ಲಕ್ಷ ಹಣ ತೆಗೆದುಕೊಂಡು ಹೋದೆ. "ನಿಮಗೀಗ ದೊರೆಯಲಿರುವ ಪರಿಹಾರ ಧನದಲ್ಲಿ ಅರ್ಧಭಾಗ ಹಾಯ್‌ಸ್ಕೂಲ್ ಕಟ್ಟಡಕ್ಕೆ ದಾನವಾಗಿ ಕೊಡಿರಿ," ಎಂದು ರೈತರನ್ನು ಕೇಳಿಕೊಂಡೆ. ಪರಿಹಾರದ ಆಶೆಯನ್ನೇ ತೊರೆದಿದ್ದ ಅವರು ಸಂತೋಷದಿಂದ ಒಪ್ಪಿಕೊಂಡರು. ತೀರ ಬಡವರಿಗೆ ಪೂರ್ಣಪರಿಹಾರ ಕೊಟ್ಟೂ ಸ್ಥಳೀಯ ಕೊಡುಗೆಗೆ ಸಾಲುವಷ್ಟು ಧನ ಸಂಗ್ರಹವಾಗಿ ಬಿಟ್ಟಿತು. ಮುಂದೆ ಹದಿನೈದೇ ದಿನಗಳಲ್ಲಿ ಕಂದಾಯ ಮಂತ್ರಿ ರಂಗಾರೆಡ್ಡಿಯವರಿಂದ ಅದರ ಅಡಿಗಲ್ಲನ್ನಿಡಿಸಿ ಸರಕಾರದ ಪಾಲಿನ

ಹಣವನ್ನೂ ಸಭೆಯಲ್ಲಿಯೇ ಅವರು ನೀಡುವಂತೆ ಮಾಡಿದೆ. ಸೇಡಮ್ಮಿನಲ್ಲಿ ಸಂತೋಷ ಸೂಸಿ ಹರಿಯಿತು. ಮುಂದೆ ಜೇವರಗಿ ಹಾಯ್‌ಸ್ಕೂಲಿನ ಕಟ್ಟಡಕ್ಕೂ ಇದೇ ತಂತ್ರ ಬಳಸಿದೆ. ಜೇವರಗಿ–ಜೇರಟಗಿ ರಸ್ತೆಯ ಪರಿಹಾರ ಧನದಿಂದ ಸ್ಥಳೀಯ ವಂತಿಗೆ ಸಂಗ್ರಹಿಸಿದೆ.

**ಜನಹಿತ ಕಾರ್ಯ :**

ತಾಂಡೂರಿನಲ್ಲಿ ನನಗೆ ಎಂ. ರಾಘವೇಂದ್ರರಾವ್ ತಹಸೀಲ್ದಾರರಾಗಿಯೂ, ಶ್ರೀ ಶಾಂತಗಿರಿ ಸಬ್‌ಇನ್ಸ್‌ಪೆಕ್ಟರರಾಗಿಯೂ ದೊರೆತುದು ನನ್ನ ಉತ್ಸಾಹವನ್ನು ವರ್ಧಿಸಿತ್ತು. ವಕೀಲ ವಿರೂಪಾಕ್ಷಗೌಡರು, ಪರ್ವತಪ್ಪ ಕೋರವಾರ, ಅನಂತರೆಡ್ಡಿ, ನಾರಾಯಣಶೆಟ್ಟಿ, ಪಸಾರೆ ಮೊದಲಾದ ಸಾರ್ವಜನಿಕ ಕಾರ್ಯಕರ್ತರ ಸಹಕಾರವೂ ದೊರೆತು ಬಹಳ ಚುರುಕಾಗಿ ಜನಹಿತ ಕಾರ್ಯಗಳು ನಡೆದುವು. ತಾಂಡೂರಿನ ಹಾಯ್‌ಸ್ಕೂಲಿನಲ್ಲಿ ಕನ್ನಡ ಮಾಧ್ಯಮವನ್ನೂ ಪ್ರಾರಂಭಿಸಿಬಿಟ್ಟೆವು. ಸಾರ್ವಜನಿಕರ ದಾನಗಳಿಂದಲೇ ಕೆಲವು ಹಳ್ಳಿಗಳಲ್ಲಿ ಶಾಲಾಭವನಗಳ ನಿರ್ಮಾಣ ಕಾರ್ಯ ನಡೆಸಿದೆವು. ಆದರೆ ನಾನಲ್ಲಿರುವುದು ಅಲ್ಪಾವಧಿಗಾಗಿಯೆಂಬುದು ಅವರ ಮನಗಳನ್ನು ಕೊರೆಯುತ್ತಿದ್ದಿತು. ನನ್ನನ್ನು ಆಂಧ್ರಪ್ರದೇಶದಲ್ಲಿಯೇ ಉಳಿಸಿಕೊಳ್ಳಬೇಕೆಂದು ಅವರೂ, ಚೆನ್ನಾರೆಡ್ಡಿಯವರೂ, ರಂಗಾರೆಡ್ಡಿಯವರೂ, ಡಾ॥ ಮೇಲ್ಕೋಟೆಯವರೂ ಪ್ರಯತ್ನಿಸಿದರು. ಆದರೆ ನಾನು ಕರ್ನಾಟಕಕ್ಕೇ ಹೋಗುವೆನೆಂದು ಹಟ ಹಿಡಿದೆ. ಆಂಧ್ರಪ್ರದೇಶದಲ್ಲಿದ್ದಿದ್ದರೆ ನನ್ನ ಸೀನಿಯಾರಿಟಿ ನಷ್ಟವಾಗುತ್ತಿರಲಿಲ್ಲ; ನಾನು ಕನಿಷ್ಠ ವಿಭಾಗಾಧಿಕಾರಿಯಾಗಿ ನಿವೃತ್ತನಾಗುತ್ತಿದ್ದೆ. ಆದರೆ ಕನ್ನಡ ತಾಯಿಯ ಕರೆ ಕರ್ನಾಟಕಕ್ಕೆ ಕರೆತಂದಿತು ನನ್ನನ್ನು. ಇಲ್ಲಿಗೆ ಬಂದುದಕ್ಕಾಗಿ ನಾನೆಂದೂ ವಿಷಾದಿಸಿಲ್ಲ. ರೂಪಾಯಿ, ಆಣೆ, ಪೈಗಳ ಮಾನದಂಡದಿಂದ ನಾನು ಯಶಸ್ಸನ್ನು ಅಳೆದವನೇ ಅಲ್ಲ.

ಒಂದು ಮೈ ನಡುಗಿಸುವ ಘಟನೆ ನಡೆಯಿತು–ನಾನು ತಾಂಡೂರಿಗೆ ತುಳಿಲೆನ್ನುವ ಮುನ್ನ. ಆಗ ಕೊಡಂಗಲ್ಲಿನಲ್ಲಿ ನನಗೆ ಅಣ್ಣಾನಂತಿದ್ದ ಶ್ರೀ ಜಿ.ಎಸ್. ಹಿರೇಮಠರು ಮುನ್ಸಿಫರಾಗಿದ್ದರು. ಅದೇನು ತಿಳಿಯಿತೋ, ನನ್ನ ನಾಲ್ಕೂ ಚಿಕ್ಕ ಮಕ್ಕಳನ್ನು–ವಿಜಯಾ, ಗೀತಾ, ಪ್ರಸನ್ನ, ಭಾರತಿಯರನ್ನು–ತಾಂಡೂರಿನಲ್ಲಿಯೇ ಬಿಟ್ಟು, ಹಿರೇಮಠರನ್ನೂ, ಅವರ ಧರ್ಮಪತ್ನಿ ಗಿರಿಜಕ್ಕನವರನ್ನೂ ನೋಡಿಕೊಂಡು ಬರಲು ಸಪತ್ನೀಕನಾಗಿ ಹೊರಟೆ. ಅಲ್ಲಿ ಹೋದಾಗ ಕೋಸಗಿಗೆ ಹೋಗಿ ಅಲ್ಲಿಯ ಪ್ರಸಿದ್ಧ ಸೀರೆಗಳನ್ನು ನೋಡಿ ಬರುವುದೆಂದು ನಿರ್ಣಯವಾಯಿತು. ಹಿರೇಮಠ ಗಿರಿಜಕ್ಕನವರೂ ಮಕ್ಕಳನ್ನು ಮನೆಯಲ್ಲಿ ಬಿಟ್ಟು ಒಬ್ಬರೇ ನಮ್ಮ ಸಂಗಡ ಹೊರಟರು.



ನನ್ನ ಜೀಪನ್ನು ನಾನೇ ನಡೆಸುತ್ತಲಿದ್ದೆ. ಕೋಸಗಿ ಸ್ವಲ್ಪ ದೂರ ಉಳಿದಾಗ ಒಂದು ಹಳ್ಳ ಎದುರಾಯಿತು. ಅದರ ಮೇಲೆ ತಗಡು ಹಾಕಿ ಅದರ ಮೇಲೆ ಮರಳು ಹರವಿದ್ದರು. ಅದೇಕೆ ಹಾಗೇ ಮಾಡಿದ್ದರೋ ದೇವರಿಗೇ ಗೊತ್ತು. ಅಪಾಯ ಸೂಚಕ ಕೆಂಪು ಬಾವುಟವಾಗಲಿ, ಬೇರಾವ ನಿರಾಶನೆಯಾಗಲಿ ಅಲ್ಲಿರಲಿಲ್ಲ. ಅದು ಭದ್ರವಾದುದೆಂದೇ ಭಾವಿಸಿ ಜೀಪು ಬಿಟ್ಟೆ. ತಗಡು ಜಾರಿ ಕೆಳಗೆ ಬಿದ್ದಿತು. ದೇವರು ಯಾವ ಬುದ್ಧಿ ಕೊಟ್ಟನೋ, ಆಗ ನಾನೇನ ಮಾಡಿದೆನೋ, ನನಗೆ ನೆನಪಿಲ್ಲ. ಕಣ್ಣು ತೆರೆದಾಗ ಜೀಪಿನ ಎರುಡು ಗಾಲಿಗಳು ಹಳ್ಳದಲ್ಲಿ, ಎರಡು ದಂಡೆಯ ಮೇಲೆ! ಜೀಪಿನ ಚಲನೆ ನಿಂತಿದ್ದಿತು; ಅನಾಹುತ ತಪ್ಪಿದ್ದಿತು. ಒಳಗಿದ್ದ ಒಬ್ಬರಿಗೂ ಯಾವ ಅಪಾಯವೂ, ಏನೊಂದು ತೊಂದರೆಯೂ ಆಗಿರಲಿಲ್ಲ! ಆಗ ನಾವೆಲ್ಲರೂ ಅಲ್ಲಿ ಸಾವನ್ನಪ್ಪಿದ್ದರೆ ತಾಂಡೂರಿನಲ್ಲಿದ್ದ ನನ್ನ ನಾಲ್ಕೂ ಚಿಕ್ಕ ಮಕ್ಕಳ ಗತಿಯೇನಾಗುತ್ತಿತ್ತೆಂಬುದನ್ನು ನೆನೆದು ನನ್ನ ಮೈಯೆಲ್ಲ ನಡುಗಿತು. ತಮ್ಮಂದಿರಾರೂ ತಮ್ಮ ಕಾಲ ಮೇಲೆ ತಾವು ಇನ್ನೂ ನಿಂತಿರಲಿಲ್ಲ; ಈ ನಾಲ್ಕು ಮಕ್ಕಳೂ ತಬ್ಬಲಿಗಳಾಗಿದ್ದರೆ ಏನಾಗುತ್ತಿತ್ತೆಂಬುದನ್ನು ಊಹಿಸಲೂ ಭಯವಾಯಿತು ನನಗೆ! ದೇವರು ಎಷ್ಟು ಸಲ ನನ್ನನ್ನು ಮೃತ್ಯು ಮುಖದಿಂದ ಪಾರು ಮಾಡಿದ್ದಾನೆ–ಎಂಬುದನ್ನು ನೆನೆದು ಅವನಲ್ಲಿ ಭಕ್ತಿಯೂ ಉಕ್ಕೇರಿತು. ಅಂದೇ ವಾಹನ ಚಾಲಕತ್ವಕ್ಕೆ ಕೈಮುಗಿದೆ. ನನ್ನ ಮೇಲಿದ್ದ ಹೊಣೆಗಳೆಲ್ಲ ಪೂರೈಸುವವರೆಗೆ, ಹೊರೆಗಳೆಲ್ಲ ಇಳಿಯುವವರೆಗೆ ಮತ್ತೆ ವಾಹನ ನಡೆಸುವುದಿಲ್ಲವೆಂಬ ನಿರ್ಣಯ ಕೈಕೊಂಡೆ. ಆದರೆ ಈಗಲೂ ನಡೆಸುವ ಧೈರ್ಯವಿಲ್ಲ. ಬಹುಶಃ ನಡೆಸುವ ವಿಧಾನವೂ ಮರೆತುಹೋಗಿದೆ!

ನಾನಿನ್ನೂ ತಾಂಡೂರಿನಲ್ಲಿರುವಾಗಲೇ ನಡೆದ ಅತ್ಯಂತ ಮಹತ್ವದ ಘಟನೆಯೆಂದರೆ ಆಚಾರ್ಯ ವಿನೋಬಾ ಭಾವೆಯವರ ಭೂದಾನಯಾತ್ರೆ ನನ್ನ ಉಪವಿಭಾಗದಲ್ಲಿಯೂ ನಡೆದುದು. ಅವರ ಎರಡು ಬಿಡಾರಗಳು ನನ್ನ ಕ್ಷೇತ್ರದಲ್ಲಿ ಆಯೋಜಿತವಾದುವು. ಅವರು ದಿನಕ್ಕೆ ಹತ್ತು ಹನ್ನೆರಡು ಮೈಲು ಕಾಲ್ನಡಿಗೆಯಿಂದ ಕ್ರಮಿಸುತ್ತಿದ್ದರು. ಅಷ್ಟಕ್ಕೆ ಒಂದು ಬಿಡಾರದ ವ್ಯವಸ್ಥೆ ಅವರಿಗಾಗಿ ಏರ್ಪಡುತ್ತಿತ್ತು. ಪ್ರತಿಯೊಂದು ಕ್ಯಾಂಪಿಗೂ ಕನಿಷ್ಠ ಒಂದು ಸಾವಿರ ಎಕರೆಗಳ ದಾನಪತ್ರಗಳನ್ನು ಅವರಿಗೆ ಅರ್ಪಿಸ ಬೇಕಾಗುತ್ತಿದ್ದಿತು. ಬಿಡಾರಗಳ ವ್ಯವಸ್ಥೆ, ದಾನಪತ್ರಗಳ ಸಂಗ್ರಹ–ಎರಡೂ ಡೆಪ್ಯುಟಿ ಕಲೆಕ್ಟರನ ಜವಾಬ್ದಾರಿಯಾಗಿರುತ್ತಿತ್ತು. ನಾನು ಎರಡೂ ಬಿಡಾರಗಳ ವ್ಯವಸ್ಥೆಯನ್ನು ನನ್ನ ವೈಯಕ್ತಿಕ ಮೇಲ್ವಿಚಾರಣೆಯಲ್ಲಿ ಮಾಡಿದೆ. ಆದರೆ ದಾನ ಪತ್ರಗಳ ಶೇಖರಣೆ ಸುಲಭ ಸಾಧ್ಯವಾದುದಾಗಿರಲಿಲ್ಲ. ನಮಗಿದ್ದ ಅವಧಿ ಒಂದೇ

ವಾರದ್ದು. ರಾತ್ರಿ ಸಹ ದೀವಟಿಗೆಗಳ ಬೆಳಕಿನಲ್ಲಿ ದೊಡ್ಡ ಹಿಡುವಳಿದಾರರನ್ನು ಹುಡುಕಿಕೊಂಡು ಹೋಗಿ ದಾನಪತ್ರಗಳನ್ನು ಪಡೆವ ಕಾರ್ಯ ಅವ್ಯಾಹತವಾಗಿ ನಡೆಯಿತು. ಸುದೈವದಿಂದ ಒಂದೊಂದು ಕ್ಯಾಂಪಿಗೂ ಮೂರು ಮೂರು ಸಾವಿರ ಎಕರೆಗಳ ದಾನಪತ್ರಗಳು ದೊರೆತುವು. ಧೈರ್ಯದೊಡನೆ ಆಚಾರ್ಯರನ್ನು ನನ್ನ ಗಡಿಯಲ್ಲಿ ಸ್ವಾಗತಿಸಿದೆ. ಅದೇ ಅಲ್ಲೊಂದು ಇಲ್ಲೊಂದು ನರೆಗೂದಲು ಮೂಡಿದ್ದ ಆ ಜ್ಞಾನಯೋಗಿಯನ್ನು ನೋಡಿ ನವಿರಾಂತೆ. ಆದರೆ ಅವರ ಹಿಂದೆ 'ಉಘೋ ಉಘೋ' ಎನ್ನುತ್ತ ಬಂದ ಎರಡುನೂರು ನಿರರ್ಥಕ ಜನರನ್ನು ನೋಡಿ ಎದೆ ಝುಲ್ಲೆಂದಿತು. ಅವರಲ್ಲಿ ಕೆಲವರು ನನಗೆ ಗುರುತಿನವರಾಗಿದ್ದರು. ಅವರು ಎಲ್ಲ ಕಡೆಗಳಲ್ಲಿಯೂ ಭ್ರಷ್ಟರೆನಿಸಿ ಬೇರೆಲ್ಲಿಯೂ ಇವರನ್ನು ಒಳಗೊಳ್ಳುವ ಸ್ಥಳ ಉಳಿಯದೆ, ಸೂಳೆ ಮುಪ್ಪಾಗಿ ಜೋಗಿತಿಯಾದಳೆಂಬ ಗಾದೆಗನುಗುಣವಾಗಿ ಈ ಭೂದಾನ ಯಜ್ಞದ ಆಂದೋಲನವನ್ನು ಸೇರಿದವರಾಗಿದ್ದರು. ಇವರೆಲ್ಲರಿಗೆ ಅಶನವಸತಿಗಳ ವ್ಯವಸ್ಥೆ ಮಾಡುವುದು ಹೇಗೆ? ಎಂದು ಕಸಿವಿಸಿಯಾಯಿತು.

ಆಚಾರ್ಯರು ಹಸುವಿನ ಹಾಲನ್ನು ಕಡೆದು ತೆಗೆವ ಖವಾ ಮಾತ್ರ ಸೇವಿಸುತ್ತಿದ್ದರು. ಅದನ್ನು ಕಡೆವ ಕೈಯಂತ್ರವೊಂದು ಅವರ ಜೊತೆಗೇ ಇರುತ್ತಿದ್ದಿತು. ನಾನು ಎರಡೂ ಬಿಡಾರಗಳಲ್ಲಿಯೂ ಹನ್ನೆರಡು ಕರೆವ ಹಸುಗಳನ್ನು ಕೊಟ್ಟಿಗೆಯೊಂದರಲ್ಲಿ ಕಟ್ಟಿಸಿದ್ದೆ. ಆ ಹನ್ನೆರಡೂ ಹಸುಗಳ ಹಾಲಿನಲ್ಲಿ ಆ ಕೈಯಂತ್ರವಿಟ್ಟು ಕಡೆದು ಕ್ರೀಮನ್ನು ಆಚಾರ್ಯರಿಗಾಗಿ ಒಳಗೆ ಕಳಿಸುವುದೇ ತಡ, ಹದ್ದುಗಳಂತೆ ಎರಗುತ್ತಿದ್ದರು ಹಾಲಿನ ಹರವಿಗೆ ಆ ಹಿಂಬಾಲಕರು! ಇನ್ನೂ ಹಾಲು ಬೇಕೆಂದು ಹುಯ್ಯಿಲೆಬ್ಬಿಸುತ್ತಿದ್ದರು! ಮೊದಲನೆಯ ಬಿಡಾರ ಮುಗಿವವರೆಗೆ ನಾನು ತಾಳ್ಮೆಯನ್ನೇನೂ ಕಳೆದುಕೊಳ್ಳಲಿಲ್ಲ; ಆದರೆ ಮಾರನೆಯ ದಿನ ಅವರ ಉಪಟಳ ಇನ್ನು ಮಿತಿ ಮೀರಲು, ಹಾಲು ಮುಗಿಯಿತು; ನಮ್ಮ ಮೈಗಳಲ್ಲಿ ಕೊಂಚ ಶಕ್ತಿ ಉಳಿದಿದೆ; ಕುಡಿಯುವಿರಾ?' ಎಂದು ಕೇಳಿಬಿಟ್ಟೆ! ಮೋರೆ ಗಂಟು ಹಾಕಿ, ಸಿಂಡರಿಸಿದ ಮುಸುಡುಗಳೊಡನೆ ಹೋದರವರು. ಆಚಾರ್ಯರಿಗೆ ದೂರು ಹೇಳಲು ಅವರಲ್ಲಿ ನೈತಿಕ ಧೈರ್ಯವಿರಲಿಲ್ಲವೆಂಬುದು ನನಗೆ ಗೊತ್ತಿತ್ತು. ಆದುದರಿಂದ ಅದು ಆಚಾರ್ಯರ ಗಮನಕ್ಕೆ ಹೋಗಲೇ ಇಲ್ಲ. "ಚೆನ್ನಾಗಿ ಪಾಠ ಕಲಿಸಿದಿರಿ ಸಾರ್, ಈ ಚಾಂಡಾಲರಿಗೆ." ಎಂದು ಹಿಗ್ಗಿ ಹರಸಿದರು ನನ್ನನ್ನು ಹಳ್ಳಿಗರು.

ಎರಡೂ ದಿನ ಸಂಜೆ ಬಹಿರಂಗ ಸಭೆ. ಮೊದಲು ದಾನಪತ್ರಗಳ ಸಮರ್ಪಣೆ; ಆಮೇಲೆ ಆಚಾರ್ಯರ ಪ್ರವಚನಗಳು ನಡೆದುವು. ಜನಸಮೂಹ ಸಾಕಷ್ಟು



ದೊಡ್ಡದಾಗಿಯೇ ಇರುತ್ತಿತ್ತು. ಆಚಾರ್ಯರ ಪ್ರವಚನ ಮಾತ್ರ ಅವರಿಗೆ ಅರ್ಥವಾಗುತ್ತಿರಲಿಲ್ಲ. ಆಚಾರ್ಯರು ಎಷ್ಟು ಪ್ರಯತ್ನಿಸಿದರೂ ಅವರ ಮಟ್ಟಕ್ಕೆ ಇಳಿವುದು ಅವರಿಗೆ ಸಾಧ್ಯವಾಗುತ್ತಿರಲಿಲ್ಲ. ಆಗಾಗ ಅನುವಾದಕರು ಅಷ್ಟೊಂದು ಉಚಿತವಲ್ಲದ ಪದ ಉಪಯೋಗಿಸಿದಾಗ ಉರಿದೇಳುತ್ತಿದ್ದರು. ಬೇಗ ನಕ್ಕು ಬಿಡುತ್ತಿದ್ದರು. ಎರಡನೆಯ ದಿನದ ಕಾರ್ಯಕ್ರಮ ಮುಗಿದ ಮೇಲೆ ಬಹಳ ಉಲ್ಲಾಸದಿಂದ ಆಚಾರ್ಯರು ನನ್ನ ಬೆನ್ನು ಚಪ್ಪರಿಸಿ, ಆರು ಸಾವಿರ ಎಕರೆಗಳ ದಾನಪತ್ರಗಳನ್ನು ಸಂಗ್ರಹಿಸಿದುದಕ್ಕಾಗಿ ತಮ್ಮ ಮೆಚ್ಚುಗೆ ಸೂಚಿಸಿದರು. "ಏನಾದರೂ ಪ್ರಶ್ನೆ ಕೇಳುವುದಿದೆಯೆ? ಎಂದು ತಾವಾಗಿಯೇ ಕೇಳಿದರು. "ಒಂದೇ ಒಂದು ಪ್ರಶ್ನೆ ಕೇಳಬೇಕೆಂದಿದ್ದೇನೆ ಬಾಬಾಜಿ: ತಾವು ತಪ್ಪಾಗಿ ತಿಳಿದುಕೊಳ್ಳದಿದ್ದರೆ ಮಾತ್ರ," ಎಂದು ಬಿನ್ನವಿಸಿಕೊಂಡೆ, "ನಿರ್ಭಯವಾಗಿ ಕೇಳು," ಎಂದು ಪ್ರೋತ್ಸಾಹಿಸಿದರವರು. "ಬಾಬಾಜಿ, ಭೂಮಿ ಸಂಗ್ರಹಿಸುವುದು ಕಠಿಣ, ಹಂಚುವುದು ಕಠಿಣವಲ್ಲ, ಹೀಗಿದ್ದೂ ಭೂದಾನವಾಗಿ ಬಂದಿರುವ 33 ಲಕ್ಷ ಎಕರೆಗಳಲ್ಲಿ ಕೇವಲ 3 ಲಕ್ಷ ಎಕರೆಗಳು ಮಾತ್ರ ಏಕೆ ಹಂಚಿಕೆಗೊಂಡು ಉಳಿದುವು ಯಾಕೆ ಆಗಿಲ್ಲ?" ಎಂದು ಕೇಳಿದೆ. "ಅದಾವ ಘನ ವಿಷಯ? ಒಂದೇ ದಿನದಲ್ಲಿ ಹಂಚಿ ಬಿಡುವೆ." ಎಂದು ಉತ್ತರವಿತ್ತರವರು. ಒಬ್ಬ ಆಡಳಿತಗಾರನಾಗಿ, 'ಅದು ಹೇಗೆ ಸಾಧ್ಯ ಬಾಬಾಜಿ?' ಎಂದು ಸಹಜವಾಗಿಯೇ ಸಂಶಯದ ಸ್ವರದಲ್ಲಿ ಕೇಳಿದೆ. "ದೇಶದಾದ್ಯಂತ ಭೂಮಿ ಹಂಚಲೆಂದೇ ಒಂದು ದಿನ ಗೊತ್ತು ಮಾಡಿ ಬಿಡುವೆನು. ಆ ದಿನ ಎಲ್ಲ ಭೂಮಿಯನ್ನು ಹಂಚಿಬಿಡುವೆವು" ಎಂದು ಸಾಂತ್ವನ ನೀಡಿದರವರು. "ಒಂದೇ ದಿನದಲ್ಲಿ ಎಲ್ಲ ಕಡೆ ಎಲ್ಲ ತಕ್ಕವರಿಗೆ ಹೇಗೆ ಹಂಚುವುದು?" ಎಂದು ಮತ್ತೆ ಕೇಳಿದೆ. "ಒಂದು ದಿನ ದಸರೆ ದೀಪಾವಳಿಗಳನ್ನು ಆಚರಿಸುವುದಿಲ್ಲವೆ?" ಎಂದು ಶಂಕಾಸಮಾಧಾನ ಮಾಡಲು ಯತ್ನಿಸಿದರವರು. ನನಗೆ ಸಮಾಧಾನವೇನೂ ಆಗಲಿಲ್ಲ. ಆದರೂ ದೊಡ್ಡವರೊಡನೆ ಬಹಳ ವಾದಿಸುವುದು ವಿಹಿತವಲ್ಲವೆಂದು ಸುಮ್ಮನಾದೆ.

ಮರುದಿನ ಆಚಾರ್ಯರಿಗೆ ಆತ್ಮೀಯತೆಯ ಬೀಳ್ಕೊಡಿಗೆಯನ್ನಿತ್ತೆವು. ಅವರೂ ಹಸನ್ಮುಖದೊಡನೆ ಎಲ್ಲರನ್ನೂ ಆಶೀರ್ವದಿಸಿ ತಮ್ಮ ಪಾದಯಾತ್ರೆಯನ್ನು ಮುಂದುವರಿಸಿದರು. ಅವರು ಹೋದ ದಾರಿಯನ್ನೇ ನಿಟ್ಟಿಸುತ್ತ ನಿಟ್ಟುಸಿರುಬಿಟ್ಟೆ ನಾನು! ಬಹಳ ಕ್ರಾಂತಿಕಾರಕ ಕ್ರಮವೊಂದು ಅವಾಂಛನೀಯ ಜನಗಳ ಪ್ರವೇಶ, ಅನಾವಶ್ಯಕ ಅವರಸರ, ಖೊಟ್ಟಿ ಭೂದಾನ ಪತ್ರಗಳು, ಆಡಳಿತದ ಯಂತ್ರದ ಅನುಚಿತ ಉಪಯೋಗಗಳಿಂದ ಸಫಲವಾಗದೆ ಹೋಗಬಹುದಾದ ಸಂಭವವನ್ನು ನೆನೆದು ಹೊರಟಿದ್ದಿತು ಆ ನಿಟ್ಟುಸಿರು!

ನಾನು ಕೊನೆಯ ಸಲ ತಾಂಡೂರಿಗೆ ಹೋದುದು ಅದರ ವಿಭಜನೆಯ ಅಧ್ಯಕ್ಷತೆವಹಿಸಲು! ನನಗೆ ಯಾದಗಿರಿಗೆ ವರ್ಗವಾಗಿದ್ದಿತು; ತಾಂಡೂರಿಗೆ ಬೇರೊಬ್ಬರನ್ನು ಕಳಿಸಲಾಗಿದ್ದಿತು; ತಾಂಡೂರಿನ ಚಿಂಚೋಳಿ ಸೇಡಮ್ ತಾಲೂಕುಗಳು ಕರ್ನಾಟಕದಲ್ಲಿ ಉಳಿದಿದ್ದುವು; ತಾಂಡೂರು ಕೊಡಂಗಲ್ ತಾಲೂಕುಗಳು ಆಂಧ್ರಪ್ರದೇಶಕ್ಕೆ ಹೋಗಿದ್ದುವು. ಆ ಎರಡು ತೆಲುಗು ತಾಲೂಕುಗಳ ಚಾರ್ಜು ಹೊಸಬರಿಗೆ ಕೊಟ್ಟು, ಚಿಂಚೋಳಿ ಸೆಡಮ್‌ಗಳ ಆಡಳಿತ ಸೂತ್ರಗಳನ್ನು ನನ್ನ ಕೈಯಲ್ಲಿ ಉಳಿಸಿಕೊಂಡು ಬರಲು ತಾಂಡೂರಿಗೆ ಹೋದೆ. ತಾಂಡೂರಿನ ಜನಗಳನ್ನು ವಿಷಣ್ಣತೆ ಅವರಿಸಿದಿದ್ದಿತು. ಜಾಗೀರುಗಳ ವಿಲಯನಕ್ಕೆ ಮುನ್ನ ಅದೊಂದು ಜಿಲ್ಲಾ ಕೇಂದ್ರವಾಗಿದ್ದಿತು; ವಿಲಯನದ ತರುವಾಯ ಉಪವಿಭಾಗವಾಗಿ ಮುಂದುವರಿದಿದ್ದಿತು; ಈಗ ಕೇವಲ ತಾಲೂಕು ಕೇಂದ್ರವಾಗಿ ಮುಂದುವರಿಯಬೇಕು! ಉರಿಯುವ ಗಾಯಕ್ಕೆ ಉಪ್ಪೆರಚಿದಂತೆ ಒಬ್ಬ ಶುಂಭನನ್ನು ಅಲ್ಲಿಗೆ ತನ್ನ ಸ್ಥಳದಲ್ಲಿ ಕಳಿಸಿದ್ದರು! ಇಷ್ಟೆಲ್ಲ ವ್ಯಸನಾಕ್ರಾಂತರಾಗಿದ್ದರೂ ನನ್ನನ್ನು ಅತ್ಯಂತ ಆತ್ಮೀಯತೆಯೊಡನೆ ಬೀಳ್ಕೊಟ್ಟರು. ಅನೇಕರ ಕಣ್ಣುಗಳು ತೇವವಾಗಿದ್ದುವು! ಎಷ್ಟು ಸಣ್ಣ ಸೇವೆಗೆ ಎಂಥ ದೊಡ್ಡ ಪುರಸ್ಕಾರ! ಇಂದಿಗೂ ಅಲ್ಲಿಯ ಕೆಲವರು ತಮ್ಮ ಮನೆಗಳಲ್ಲಿ ಶುಭ ಕಾರ್ಯಗಳು ನಡೆದಾಗಲೆಲ್ಲ ನನಗೆ ಕರೆಯೋಲೆ ಕಳಿಸುತ್ತಾರೆ. ಮುಂದೆ ನಾನು ತರಬೇತಿಗಾಗಿ ಹೈದರಾಬಾದಿಗೆ ಹೋದಾಗ ಒಂದು ಬಸ್ಸಿನ ತುಂಬ ತಾಂಡೂರಿನ ಹಿತೈಷಿಗಳು ಬಂದು ನನ್ನನ್ನು ಮಾತನಾಡಿಸಿ. ಯೋಗಕ್ಷೇಮ ವಿಚಾರಿಸಿ ಹೋದರು! ಇದೇ ದೇಶದಲ್ಲಿ ಇಂಥ ಕೃತಜ್ಞರೂ ಇದ್ದಾರೆ, ಘೋರ ಕ್ರೂರ ಕೃತಘ್ನರೂ ಇದ್ದಾರೆ!

ಮುಂದೆ ಸೇಡಮ್ ಕಲಬುರಗಿಯ ಉಪವಿಭಾಗಕ್ಕೆ ಸೇರಿದರೂ ಚಿಂಚೋಳಿ ಯಾದಗಿರಿಯ ಕೆಳಗೇ ಉಳಿಯಿತು. ಜೇವರಗಿಯಿಂದ ಚಿಂಚೋಳಿಯ ವರೆಗಿನ ಅಂತರ ಬೆಂಗಳೂರು ಮೈಸೂರುಗಳ ನಡುವಣ ಅಂತರದ ಒಂದೂ ಕಾಲಿನಷ್ಟು! ಸಾಲದುದಕ್ಕೆ ವಿಶಾಲ ಮೈಸೂರಿನ ಮೊದಲ ಮಂತ್ರಿಮಂಡಲದಲ್ಲಿಯೇ ಗೃಹ ಶಾಖೆಯ ಉಪಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರ ಪ್ರಯತ್ನದಿಂದ ಚಿಂಚೋಳಿ ತಾಲೂಕಿಗೆ ಒಂದು ರಾಷ್ಟ್ರೀಯ ವಿಸ್ತರಣ ಯೋಜನೆ ದೊರೆಯಿತು. ಬೇರೆ ಕಡೆಗೆ ಹೋಗಲಿದ್ದ ಯಾದಗಿರಿಯ ಬ್ಲಾಕು ಉತ್ತಮ ಕಾರ್ಯ ಮಾಡಿತೆಂದು ಸಿ.ಡಿ. ಬ್ಲಾಕ್ ಆಗಿ ಬಢತಿ ಪಡೆದಿದ್ದಿತು; ಶಹಾಪೂರ ತಾಲೂಕಿಗೂ ಒಂದು ಎನ್.ಈ.ಎಸ್. ಯೋಜನೆ ಮಂಜೂರಾಗಿದ್ದಿತು. ಇವೆಲ್ಲವುಗಳಿಗೂ ನಾನು ಪಿ.ಈ.ಓ (ಪಾಜೆಕ್ಟ್ ಎಕ್ಸೆಕ್ಯೂಟಿವ್ಹ ಆಫೀಸರ್)! ನನಗೆ ಮಂಕುಕವಿಯಿತು!



ಯಾದಗಿರಿಯ ರಾಷ್ಟ್ರೀಯ ವಿಸ್ತರಣ ಕ್ಷೇತ್ರವನ್ನು ಯಶಸ್ವಿ ಮಾಡುವುದರಲ್ಲಿಯೇ ನನ್ನ ತಪಸ್ಸೆಲ್ಲ ಖರ್ಚಾಗಿದ್ದಿತು. ಏನೇನೋ ಉಪಾಯಗಳನ್ನು ಮಾಡಿ, ಹಂಚಿಕೆಗಳನ್ನು ಹೂಡಿ ಒಂದು ಕ್ಷೇತ್ರದಲ್ಲಿ ಪ್ರಾಣ ಸಂಚಾರ ಮಾಡಿಸಿದ್ದೆ. ಅವುಗಳಲ್ಲಿ ಕೆಲವನ್ನಾದರೂ ಆಡಳಿತವೆಂಬುದು ಬರಿಯ ಕಾನೂನು ಕಟ್ಟಳೆಗಳ ಅನುಷ್ಠಾನವಲ್ಲ, ಮಾನವ ಪ್ರೇಮಪ್ರೇರಿತವಾದ ಮುಂದಾಲೋಚನೆಯು, ಮುಂತೊಡಗುವಿಕೆಯು, ಮುಂದಾಗುವಿಕೆಯ ಶಕ್ತಿಯೆಂಬುದನ್ನು ತೋರಿಸಲು ವಿವರಿಸುವುದು ವಿಹಿತ.

ಒಂದು ಹಳ್ಳಿ. ಅಲ್ಲಿಯ ಗೌಡ 'ಗೂಂಡಾ' ಎಂದು ಹೆಸರಾದವ. ಅಲ್ಲಿ ಯಾವ ಅಭಿವೃದ್ಧಿ ಕಾರ್ಯವೂ ಪ್ರಾರಂಭವಾಗಿರಲಿಲ್ಲ, ಆಗುವಂತಿರಲಿಲ್ಲ. ಒಂದು ಉಪಾಯ ಹೊಳೆಯಿತು. ಸಮಾಜ ವಿಕಾಸ ಯೋಜನೆಗಳ ನಿರ್ದೇಶಕರನ್ನು ಆ ಊರಿನಾಚೆ ಇನ್ನೊಂದು ಊರಿನಲ್ಲಿ ಕಟ್ಟಲಾಗಿದ್ದ ಶಾಲಾಭವನದ ಉದ್ಘಾಟನೆಗಾಗಿ ಕರೆಸಿದೆ. ಈ ಗೌಡನ ಊರಿನೊಳಗಿನಿಂದ ಹಾಯ್ದೇ ಆ ಊರಿಗೆ ಹೋಗಬೇಕು ಗ್ರಾಮಸೇವಕ ಮೂಲಕ ಗೌಡನಿಗೆ ಕಿವಿಮಾತು ಹೇಳಿಸಿದೆ: "ಗೌಡರೆ, ಇಷ್ಟು ದೊಡ್ಡ ಅಧಿಕಾರಿಗಳು ಅನಾಯಾಸವಾಗಿ ನಿಮ್ಮೂರೊಳಗಿಂದ ಹೋಗುವಾಗ ನೀವೊಂದು ಹಾರವನ್ನು ಹಾಕಿ ಅವರ ಪರಿಚಯ ಮಾಡಿಕೊಳ್ಳಬಾರದೇಕೆ?" ಆ ಕಿವಿ ಮಾತು ನಾಟಿತು. ಗೌಡ ಹಾರ ಹಾಕಲು ಹುರುಪಿನೊಡನೆ ಒಪ್ಪಿದ. ಇತ್ತ ನಿರ್ದೇಶಕರಿಗೆ ನಾನು ಕಿವಿಮಾತು ಹೇಳಿದ್ದೆ: "ಆ ಗೌಡ ಹಾರ ಹಾಕಲು ಬಂದರೆ ಹಾಕಿಸಿಕೊಳ್ಳಬೇಡಿರಿ; 'ನಿಮ್ಮೂರಲ್ಲಿ ಏನೊಂದೂ ವಿಕಾಸನ ಕಾರ್ಯವಾಗಿಲ್ಲವಾಗಿ ನನಗೆ ನಿಮ್ಮ ಹಾರ ಬೇಡ,' ಎಂದು ನಿರಾಕರಿಸಿಬಿಡಿರಿ," ಎಂದು. ದಾರಿಯಲ್ಲಿ ತಳಿರು ತೋರಣ ಕಟ್ಟಿಸಿ ಹಾರ ಹಿಡಿದು ನಿಂತಿದ್ದ ಗೌಡ. ಅವನ ಹಾರ ಸ್ವೀಕೃತವಾಗದಿರಲು ನೆರೆದ ನೂರಾರು ಊರಿನವರೆದುರಿಗೆ ಗೌಡ ತಲೆತಗ್ಗಿಸುವಂತಾಯಿತು. ಓಡಿ ಬಂದ ಗೌಡ ನನ್ನ ಬಳಿಗೆ. ತಮ್ಮೂರಿಗೂ ಏನಾದರೊಂದು ಅಭಿವೃದ್ಧಿ ಕಾರ್ಯ ಕೊಡಲು ಕೇಳಿಕೊಂಡ. ಅವರ ಊರಿಗೆ ಹೋದೆ. ಸ್ಥಳೀಯ ವಂತಿಗೆಯನ್ನು ನಾನೇ ಕೊಡಿಸಿದೆ. ಗೌಡನೇ ಸಿಂಹಪಾಲು ಕೊಟ್ಟ. ಸ್ಥಳೀಯ ವಂತಿಗೆ ಕೂಡುತ್ತಲೇ ಸ್ಥಳದಲ್ಲಿಯೇ ಶಾಲಾಭವನ ನಿರ್ಮಾಣಕ್ಕೆ ಮಂಜೂರಿಯನ್ನಿತ್ತೆ. ಗೌಡನೇ ದಿನರಾತ್ರಿಯೆನ್ನದೆ ನಿಂತು ಬಹಳ ಚೆನ್ನಾಗಿ ಆ ಕಟ್ಟಡ ಕಟ್ಟಿಸಿದ. ಆಮೇಲೆ ಇನ್ನೊಂದು ಅಭಿವೃದ್ಧಿ ಕಾರ್ಯವನ್ನು ಕೊಟ್ಟೆ ಆ ಊರಿಗೆ. ಅದನ್ನೂ ಬೇಗ ಮಾಡಿಮುಗಿಸಿದ. ಆಮೇಲೆ ಇನ್ನೊಂದು ಕೆಲಸ– ಇನ್ನೊಂದು, ಇನ್ನೊಂದು. ಆರು ತಿಂಗಳುಗಳಲ್ಲಿಯೇ ಮಾದರಿ ಗ್ರಾಮವಾಗಿಬಿಟ್ಟಿದ್ದಿತು ಆ ಊರು, ಆದರ್ಶ ವ್ಯಕ್ತಿಯಾಗಿಬಿಟ್ಟಿದ್ದ ಆ ಗೌಡ!

ಇನ್ನೊಂದು ಹಳ್ಳಿ. ಅಲ್ಲಿಯ ಗೌಡನೂ ಅಂಥವನೇ. ಆ ಊರಿಗೆ ಅಭಿವೃದ್ಧಿ ಕಾರ್ಯಗಳು ಬರದಂತೆ ಅವನೇ ಅಡ್ಡಿಯಾಗಿ ಅಡ್ಡ ನಿಂತಿದ್ದ. ಅಲ್ಲಿ ಹೊಸ ಹಂಚಿಕೆಯನ್ನು ಹೂಡಿದೆ. ಆ ಊರಿನ ನೆರೆಹಳ್ಳಿಯಲ್ಲಿ ಒಮ್ಮೆಗೆ ಎರಡು ಮೂರು ಅಭಿವೃದ್ಧಿ ಕಾರ್ಯ ಪ್ರಾರಂಭಿಸಿಬಿಟ್ಟೆ. ಆ ಗೌಡ ಈ ಊರಿಗೆ ಬಂದಾಗ, ಈ ಊರಿನವರು ಆ ಗೌಡನ ಊರಿಗೆ ಹೋದಾಗ, "ನಮ್ಮೂರಲ್ಲಿ ಇಂಥಿಂಥ ಕಾರ್ಯಗಳು ನಡೆದಿವೆ; ನಿಮ್ಮೂರಲ್ಲಿ ಏನೂ ನಡೆದಿಲ್ಲ; ನಿಮ್ಮೂರು ಕುಗ್ರಾಮ; ನಿಮ್ಮ ಗೌಡಿಕೆಗೆ ಬೆಂಕಿ ಹಚ್ಚಬೇಕು," ಇತ್ಯಾದಿಯಾಗಿ ಹಂಗಿಸಿ ಮಾತನಾಡುವ ಏರ್ಪಾಟು ಮಾಡಿದೆ. ಈ ಉಪಾಯವೂ ನಾಟಿತು. ಓಡಿ ಬಂದ ಗೌಡ, ತಮ್ಮೂರಿಗೂ ವಿಕಾಸ ಕಾರ್ಯ ಮಂಜೂರು ಮಾಡಿಸಿಕೊಂಡು ಹೋದ. ತಾನೇ ನಿಂತು ಮಾಡಿಸಿ ಮುಖ ಮೇಲೆತ್ತಿ ತಿರುಗತೊಡಗಿದ.

ಇನ್ನೊಂದು ಊರು. ಊರವರು ತಮ್ಮ ಶಾಲೆಯ ಕಟ್ಟಡದ ಮಂಜೂರಿಗಾಗಿ ಮೂರು ಸಾವಿರ ರೂಪಾಯಿಗಳ ಸ್ಥಳೀಯ ವಂತಿಗೆಯನ್ನು ಸಂಗ್ರಹಿಸಬೇಕಾಗಿದ್ದಿತು. ಆ ಊರ ಗೌಡನ ಪಾಲಿಗೆ ಒಂದು ಸಾವಿರ ರೂಪಾಯಿಗಳ ಸಿಂಹಪಾಲು ಬಂದಿತು, ಅವನ ಯೋಗ್ಯತೆಯಂತೆ. ಆದರೆ ಗೌಡ ಕೊಡಲಿಲ್ಲ. ಗೌಡನು ಕೊಡುವವರೆಗೆ ತಾವೂ ಕೊಡುವುದಿಲ್ಲವೆಂದು ಊರವರು ಪಟ್ಟು ಹಿಡಿದರು. ಇದು ಗೊತ್ತಾಗುತ್ತಲೆ ಮತ್ತೊಂದು ಹೊಸ ಉಪಾಯ ಹಮ್ಮಿದೆ. ಆ ಊರಿಗೆ ಹೋದೆ. ಗೌಡ ನನ್ನನ್ನು ಊಟಕ್ಕೆ ಕರೆಯುವಂತೆ ಮಸಲತ್ತು ಮಾಡಿದೆ. ಗೌಡ ಉಬ್ಬಿ ಊಟಕ್ಕೆ ಕರೆದ, ಹೋದೆ. ಊಟಕ್ಕೆ ಬಡಿಸಿ ಆಯಿತು. ಊಟ ಪ್ರಾರಂಭಿಸದೆ ಸುಮ್ಮನೆ ಕುಳಿತೆ. ಊಟ ಪ್ರಾರಂಭಿಸುವಂತೆ ಗೌಡ ಬೇಡಿಕೊಂಡ. ದಕ್ಷಿಣೆಯಿಲ್ಲದೆ ಜಂಗಮರು ಊಟ ಮಾಡುವವರಲ್ಲ–ಎಂದೆ; ಊರ ಶಾಲೆಗಾಗಿ ಒಂದು ಸಾವಿರ ರೂಪಾಯಿ ಕೊಡುವವರೆಗೆ ಊಟ ಮಾಡುವುದಿಲ್ಲ. ಹೀಗೆಯೇ ಕುಳಿತು ಬಿಡುವೆನೆಂದು ಹೇಳಿದೆ. ಬೇರೆ ದಾರಿ ತೋಚದೆ ಸಾವಿರ ರೂಪಾಯಿ ತಂದಿಟ್ಟು ಅಡ್ಡಬಿದ್ದ ಗೌಡ. ಊಟ ಮಾಡಿದೆ. ಉಳಿದ ಎರಡು ಸಾವಿರ ಹಣ ಅದೇ ರಾತ್ರಿ ಊರವರಿಂದ ಬಂದುಬಿಟ್ಟಿತು. ಶಾಲೆಯ ಕಟ್ಟಡದ ಕೆಲಸ ಮರುದಿನದಿಂದಲೇ ಆರಂಭವಾಯಿತು.

ಇನ್ನೊಂದು ಉಕ್ಕಿದ ಕಡಲೆ ಕಡಿದ ವಿವರ ಹೇಳಿ ಆ ವಿಷಯ ಇಲ್ಲಿಗೆ ಮುಗಿಸಬಹುದು. ಮತ್ತೊಂದು ಊರಿನಲ್ಲಿ ಒಬ್ಬ ಅಸಾಮಾನ್ಯ ಗೌಡನಿದ್ದ. ಅವನು ತಾನು ಬದುಕಿರುವವರೆಗೆ ತಮ್ಮೂರಿಗೆ ಶಾಲೆ ಬರಗೊಡುವುದಿಲ್ಲವೆಂದು ಪ್ರತಿಜ್ಞೆಯನ್ನೇ ಮಾಡಿಬಿಟ್ಟಿದ್ದ. ಇದಕ್ಕೆ ಕಾರಣ? "ಶಾಲೆ ಬಂದರೆ ಎಲ್ಲರ ಮಕ್ಕಳೂ ಕಲಿತು



ಜಾಣರಾಗುತ್ತಾರೆ. ಆಮೇಲೆ ನನಗೆ ವಿಧೇಯರಾಗಿ ಉಳಿಯುವುದಿಲ್ಲ," ಇದು ಆತ ಕೊಡುತ್ತಿದ್ದ ಕಾರಣ! ಯಾದಗಿರಿಯಲ್ಲಿ ಕೆಲವರು, "ಸಾಹೇಬರೇ, ನೀವು ಕೆಲವು ಕಟ್ಟು ಆಸಾಮಿಗಳಿಂದ ವಂತಿಗೆ ವಸೂಲು ಮಾಡಿರುವುದು ನಿಜ; ಆದರೆ ಆ ಖೊಟ್ಟೆ ಗೌಡನಿಂದ ವಸೂಲ್ಮಾಡಿದಾಗಲೇ ನಿಮ್ಮ ವ್ಯವಹಾರ ಚಾತುರ್ಯವನ್ನು ಒಪ್ಪುವೆವು," ಎಂದು ಸವಾಲು ಹಾಕಿದರು: ಇನ್ನು ಕೆಲವು ಹಿತೈಷಿಗಳು, "ಆ ಕರಿಯಕ್ಕಿಯನ್ನು ಮಾತ್ರ ಕೇಳಬೇಡಿರಿ ಸಾಹೇಬರೆ; ನೀವು ಇದುವರೆಗೆ ಕೇಳಿದುದು ಎಲ್ಲಿಯೂ ಹುಸಿ ಬಿದ್ದಿಲ್ಲ. ಇವನ ಹತ್ತಿರ ಹೋಗಿ ಹುಸಿ ಬೀಳುವುದು ಬೇಡ," ಎಂದು ತಡೆಯಲು ಹವಣಿಸಿದರು. ನಾನು ಆಗ ಏನನ್ನೂ ಹೇಳಿಲಿಲ್ಲ.

ಒಂದು ದಿನ ಇದ್ದಕ್ಕಿದಂತೆ ಆ ಗೌಡನ ಊರಿಗೆ ಹೋದೆ. ನೇರವಾಗಿ ಗೌಡನ ಮನೆಗೇ ಹೋಗಿಬಿಟ್ಟೆ. ಗೌಡನಿಗೆ ಆಶ್ಚರ್ಯ. ಕಟ್ಟೆಯ ಮೇಲೆ ಬಿಳಿ ಕಂಬಳಿ ಹಾಸಿ ಕೂಡ್ರಿಸಿದ. ಒಳಗೆ ಹೋಗಿ ಚಹಾ ಮಾಡಿಸಿ ತಂದುಕೊಟ್ಟ. ಕುಡಿಯುತ್ತ, "ಏನು ಗೌಡರೆ, ಒಂದು ಕಪ್ಪು ಚಹಾ ಕುಡಿಸಿ ಕಳಿಸಿ ಬಿಡುವಿರೋ ಊಟವನ್ನೂ ಮಾಡಿಸುವಿರೊ?" ಎಂದು ಕೇಳಿದೆ. "ಛೆ, ಊಟ ಮಾಡಿಸದೆ ಕಳಿಸುವುದುಂಟೆ ದೊಡ್ಡವರನ್ನು? ಊಟ ಸಿದ್ಧವಿದೆ. ಊಟ ಮಾಡಿಕೊಂಡೇ ಹೋಗಿರಿ," ಎಂದು ಮಾರ್ನುಡಿದ ಗೌಡ. ಊಟಕ್ಕೆ ಕುಳಿತಾಗ ಆ ಮಾತು ಈ ಮಾತು ಮುಗಿದ ಮೇಲೆ ಕಳಕಳಿಯ ಸ್ವರದಲ್ಲಿ ಹೇಳಿದೆ: "ಗೌಡರೆ, ನಿಮ್ಮೂರಿಗೇನೋ ಶಾಲೆ ಬರದಂತೆ ನೋಡಿಕೊಂಡಿರಿ. ಇದರಿಂದ ಏನಾಗಿದೆಯೆಂಬುದು ನಿಮಗೆ ತಿಳಿದಿದೆಯೆ? ತಂದೆ ತಾಯಿಗಳ ಕಲಿಸುವ ಇಚ್ಛೆಯನ್ನು ಹತ್ತಿಕ್ಕಲಾಗುವುದೆ? ಅವರೀಗ ತಮ್ಮ ಮಕ್ಕಳನ್ನು ನೆರೆಯೂರಿನ ಶಾಲೆಗೆ ಕಳಿಸತೊಡಗಿದ್ದಾರೆ. ಆ ಮಕ್ಕಳು ನಿಮ್ಮನ್ನು ಶಪಿಸುತ್ತ ನಿತ್ಯ ಮೂರು ನಾಲ್ಕು ಮೈಲು ನಡೆದು ಶಾಲೆಗೆ ಹೋಗಿ ಬರುತ್ತಲಿದ್ದಾರೆ. ಮುಳ್ಳು ತುಳಿದಾಗ, ಮಳೆಗೆ ಸಿಕ್ಕಾಗ, ಬಿಸಿಲಿಗೆ ಬಸವಳಿದಾಗ "ನಮ್ಮೂರಿಗೆ ಶಾಲೆ ಬರದಂತೆ ಮಾಡಿದ ಗೌಡನ ಮನೆ ಹಾಳಾಗ" ಎಂದು ನೆಟಿಕೆ ಮುರಿಯುತ್ತಾರೆ. ನಿಮ್ಮ ನಿಮ್ಮ ಮಕ್ಕಳ ಮೊಮ್ಮಕ್ಕಳ ಹುಟ್ಟುಹಗೆಗಳಾಗಿಯೇ ಬೆಳೆಯುತ್ತಾರೆ. ಗೌಡರೆ, ನೀವೇನೋ ದೆಶೆವಾನರು; ನೀವು ಬದುಕಿರುವವರೆಗೆ ನಿಮ್ಮ ಮಕ್ಕಳು ಮೊಮ್ಮಕ್ಕಳಿಗೆ ಭಯವಿಲ್ಲ. ಆದರೆ ಆಮೇಲೆ? ನಿಮ್ಮ ಮಕ್ಕಳು ಮೊಮ್ಮಕ್ಕಳಿಗೆ ಗಂಡಾಂತರ ತಪ್ಪಿದ್ದಲ್ಲ. ತುಸು ಶಾಂತ ಮನಸ್ಕರಾಗಿ ವಿಚಾರಿಸಿ ನೋಡಿರಿ!"

ನನ್ನ ಆತ್ಮೀಯತೆಯ ಕಿವಿಮಾತುಗಳು ನಾಟಿದುವು ಗೌಡನೆದೆಯಲ್ಲಿ. ಗೌಡನ ಕಣ್ಣು ತೆರೆದುವು. ಒಳಗೆ ಹೋಗಿ ಐದು ಸಾವಿರ ರೂಪಾಯಿಗಳ ಹಮ್ಮಿಣಿ ತಂದು ನನ್ನ ಮುಂದಿಟ್ಟು ಅಡ್ಡಬಿದ್ದ. "ಸಾಹೇಬರೆ, ಈ ಹಣದಿಂದ ನಮ್ಮೂರಿಗೆ ಶಾಲೆ

ಕಟ್ಟಿಸಿಕೊಡಿರಿ; ಊರವರಿಂದ ಒಂದು ಪೈ ಸಹ ಕೇಳಬೇಡಿರಿ; ನಮ್ಮೂರಿಗೆ ಶಾಲೆ ಬರುವಂತೆ ಮಾಡಿರಿ; ಶಾಲೆಗೆ ಕಟ್ಟಡ ಕಟ್ಟಲು ನನ್ನ ಜಾಗವನ್ನೇ ದಾನವಾಗಿ ಕೊಡುವೆ," ಎಂದು ಹೃತ್ಪೂರ್ವಕವಾಗಿ ಹೇಳಿದ. ನನಗೆ ಒಂದು ನಿರ್ಣಾಯಕ ಯುದ್ಧ ಗೆದ್ದಷ್ಟು ಆನಂದವಾಯಿತು. ಊರವರನ್ನೆಲ್ಲ ಕರೆಸಿ ನಡೆದ ಸಂಗತಿ ಬಹಿರಂಗ ಪಡಿಸಿದೆ. ಗೌಡನನ್ನು ಶಪಿಸುತ್ತಿದ್ದವರೇ ಗೌಡನ ಜಯಘೋಷ ಮಾಡಿದರು. ಯಾದಗಿರಿಗೆ ಮರಳಿ ಈ ಸುದ್ದಿಯನ್ನು ತಿಳಿದಾಗ ಕೆಲವರದನ್ನು ನಂಬಲು ನಿರಾಕರಿಸಿದರು. ಅವರು ನಂಬಲಿ, ಬಿಡಲಿ–ಗೌಡನೇ ನಿಂತು ತಾನೇ ಇತ್ತ ನಿವೇಶನದಲ್ಲಿ ಶಾಲೆ ಕಟ್ಟಿ ನಿಲ್ಲಿಸಿದುದಂತೂ ನಿಜ; ಅವನನ್ನು ಆ ಊರವರು ಮೆಚ್ಚಿಕೊಂಡಾಡಿದುದೂ ನಿಜ.

**ದಸರಾ ಕವಿ ಸಮ್ಮೇಳನ :**

ಒಂದು ಕ್ಷೇತ್ರದ ಅಭಿವೃದ್ಧಿಯೇ ಇಷ್ಟು ಚೆಳ್ಳೆಹಣ್ಣು ತಿನ್ನಿಸಿದ್ದಿತು ನನಗೆ! ಇನ್ನೆರಡು ಕ್ಷೇತ್ರಗಳನ್ನು ಅಭಿವೃದ್ಧಿಗೊಳಿಸುವುದು ಹೇಗೆಂಬ ಪ್ರಶ್ನೆ ಬೃಹದಾಕಾರವಾಗಿ ಮುಂದೆ ಬಂದು ಧುತ್ತೆಂದು ನಿಂತಿರುವಾಗಲೇ ಏಕೀಕೃತ ಕರ್ನಾಟಕದ ಪ್ರಥಮ ದಸರಾ ಮಹೋತ್ಸವ ಬಂದಿತು. ಅವರ ಅಂಗವಾಗಿ ಆಯೋಜಿತವಾಗಿದ್ದ ಕವಿ ಸಮ್ಮೇಳನದಲ್ಲಿ ಭಾಗವಹಿಸಲು ದಸರಾ ಮಹೋತ್ಸವ ಸಮಿತಿಯಿಂದ ನನಗೆ ಕರೆ ಬಂದಿತು. ಬೇಂದ್ರೆಯವರು ಅಧ್ಯಕ್ಷರು. ಇನ್ನೊಮ್ಮೆ ಬೇಂದ್ರೆ–ಕುವೆಂಪು ಸಂದರ್ಶನ ದೊರೆಯುತ್ತದೆ; ಹೊಸ ಹೊಣೆಗಾರಿಕೆಗಳನ್ನು ನಿರ್ವಹಿಸುವ ರೀತಿನೀತಿಗಳ ಬಗ್ಗೆ ವಿಚಾರಿಸಲು ರೈಲಿನಲ್ಲಿ ಅವಕಾಶ ದೊರೆಯುತ್ತದೆ–ಎಂದು ಆಶಿಸಿ ಕರೆಯನ್ನು ಸ್ವೀಕರಿಸಿದೆ. ಮೈಸೂರಿಗೆ ಹೋಗುವಾಗ ರೈಲಿನಲ್ಲಿಯೇ "ರಾಷ್ಟ್ರ ರಾಜೇಶ್ವರಿಗೆ" ಎಂಬ ಕವನ ಬರೆದೆ–ಕವಿ ಸಮ್ಮೇಳನಕ್ಕಾಗಿ. ಮೈಸೂರು ನಿಲ್ದಾಣ ಬಂದಿತು. ಉತ್ಸವ ಸಮಿತಿಯಿಂದ ಯಾರಾದರೂ ಸ್ವಾಗತಿಸಲು ಬಂದಿರುವರೇನೋ ಎಂದು ಅತ್ತಿತ್ತ ಸುತ್ತಾಡಿದೆ. ಯಾರೂ ಬಂದಿರಲಿಲ್ಲ! ಸಮಿತಿಯ ಸಾಂಕೇತಿಕ ಕೇಂದ್ರ ಕೂಡ ಅಲ್ಲಿರಲಿಲ್ಲ. ಉಳಿದುಕೊಳ್ಳಲು ಎಲ್ಲಿ ವ್ಯವಸ್ಥೆ ಮಾಡಿರುವುದೆಂಬುದನ್ನೂ ತಿಳಿಸಿರಲಿಲ್ಲ! ಎಲ್ಲಿಗೆ ಹೋಗುವುದೆಂದು ಯೋಚನೆಗೆ ಈಡಾಗಿದ್ದಾಗ ಹೈದರಾಬಾದಿನ ಹಳೆಯ ಗೆಳೆಯ ಮಧ್ವರಾಯರು ಕಣ್ಣಿಗೆ ಬಿದ್ದರು. ಅವರೂ ಯಾರನ್ನೋ ಹುಡುಕುತ್ತ ಇತ್ತಿಂದ ಅತ್ತ, ಅತ್ತಿಂದ ಇತ್ತ ಸುತ್ತುತ್ತಲಿದ್ದರು. "ಯಾರನ್ನು ಹುಡುಕುತ್ತಲಿದ್ದೀರಿ?" ಎಂದು ನಾನೇ ಭುಜ ಅಲುಗಿಸಿ ಕೇಳಿದೆ. ಕತ್ತೆತ್ತಿ ನೋಡಿ ತಬ್ಬಿಕೊಂಡರು. "ನನ್ನ ಒಬ್ಬ ಸ್ನೇಹಿತರು ಬರುವುದಾಗಿ ತಿಳಿಸಿದ್ದರು. ಅವರಿಗಾಗಿ ಹುಡುಕಿಯೇ ಹುಡುಕಿದೆ. ಆದರೆ ಅವರು ಬಂದಿಲ್ಲ," ಎಂದು ಉತ್ತರವಿತ್ತರವರು. "ನಾನು ಬಂದಿರುವೆನಲ್ಲ,"



ಎಂದು ಹೇಳಿದೆ. "ಬಂದುದು ಬಹಳ ಸಂತೋಷ; ನಡೆಯಿರಿ ಮನೆಗೆ," ಎಂದು ಮನೆಗೆ ಕರೆದೊಯ್ದರು.

ಸ್ನಾನ ತಿಂಡಿ ತೀರ್ಥ ಮುಗಿದ ಮೇಲೆ ಎಲ್ಲ ವಿಷಯ ತಿಳಿದುಕೊಂಡು ವಿಷಾದಿಸಿದರು. "ಇಲ್ಲಿಯ ಅಧಿಕಾರಿಗಳಿಗೆ ಕನ್ನಡ, ಕನ್ನಡ ಸಾಹಿತಿಗಳೆಂದರೆ ಆದರ ಭಾವವೇ ಇಲ್ಲ" ಎಂದು ಉದ್ಗರಿಸಿದರು. ನನಗೆ ಆಘಾತವೆನಿಸಿತು. ಮೈಸೂರು ಕನ್ನಡ ನಾಡಿನ ಅತಿ ಪುರಾತನ ವಿಶ್ವವಿದ್ಯಾಲಯದ ಕೇಂದ್ರ; ಕನ್ನಡ ಅರಸರ ರಾಜಧಾನಿ; ಬಿ.ಎಂ.ಶ್ರೀ, ಟಿ.ಎಸ್.ವೆಂ, ಎ.ಆರ್.ಕೃ. ಕುವೆಂಪು, ತೀ.ನಂ.ಶ್ರೀ, ದೇ.ಲ.ನ. ಮೊದಲಾದ ಕನ್ನಡ ದಿಗ್ದಂತಿಗಳ ಅಭಯಾರಣ್ಯ–ಹೀಗಿದ್ದೂ ಇಲ್ಲಿಯ ಅಧಿಕಾರಿಗಳಲ್ಲಿ ಕನ್ನಡದ ಬಗ್ಗೆ, ಕನ್ನಡ ಸಾಹಿತಿಗಳ ಬಗ್ಗೆ ಅನಾದರವಿರುವುದೆಂಬುದು ಆಶ್ಚರ್ಯಗಳಲ್ಲಿ ಆಶ್ಚರ್ಯವಾಗಿ ತೋರಿತು ನನಗೆ. "ಸತ್ಯ ಕಲ್ಪನೆಗಿಂತ ಸೋಜಿಗದ್ದಾಗಿರುತ್ತದೆಯಲ್ಲವೆ, ಸಿದ್ಧಯ್ಯನವರೆ? ನನ್ನ ಅನುಭವವಂತೂ ಹೀಗಿದೆ. ನನ್ನಂತೆ ಹೊರಗಿನಿಂದ ಬಂದ ಅನೇಕರಿಗೂ ಇದೇ ಅನುಭವವಾಗಿದೆ. ಇವರಿಗೆ ಸಾಹಿತ್ಯಗೋಷ್ಠಿ, ಕವಿ ಸಮ್ಮೇಳನಗಳಿಗಿಂತ ಉಪಹಾರ ಗೃಹ, ಚಲಚ್ಚಿತ್ರಗಳಲ್ಲಿ ಹೆಚ್ಚು ಆಸಕ್ತಿ; ಕನ್ನಡದಲ್ಲಿ ಮಾತನಾಡುವುದಕ್ಕಿಂತ ಇಂಗ್ಲೀಷಿನಲ್ಲಿ ಸೊರಹುವುದರಲ್ಲಿ ಹೆಚ್ಚು ಉತ್ಸಾಹ," ಎಂದು ನಿಶ್ಚಯದ ಸ್ವರದಲ್ಲಿ ನುಡಿದರು. ನನ್ನ ಮನಸು ಒಂದೊಂದೇ ಆಘಾತವನ್ನು ಹೀರಿ ಜೀರ್ಣಿಸಿಕೊಳ್ಳುತ್ತ ಕೊನೆಗೆ ಸುಸ್ತಾಗಿ ಕುಸಿದುಬಿಟ್ಟಿತು. ಹಾಸಿಗೆಗೆ ಮೈಚಾಚಿದೆ. ಪ್ರವಾಸದ ಆಯಾಸ, ಮಧ್ವರಾಯರ ಮಾತುಗಳಿಂದ ಉಂಟಾಗಿದ್ದ ನಿರಾಶೆಗಳಿಂದ ಕೂಡಲೇ ನಿದ್ದೆ ಹತ್ತಿತು. ಎದ್ದಾಗ ಊಟ ಸಿದ್ಧವಾಗಿದ್ದಿತು. ಹರಟೆ ಕೊಚ್ಚುತ್ತ, ಹೈದರಾಬಾದಿನ ಹಳೆಯ ಇನಿನೆನಪುಗಳನ್ನು ಮುಕ್ಕಳಿಸುತ್ತ ಊಟ ಮಾಡಿದೆವು.

"ಹೇಗೂ ನಿದ್ದೆ ಮಾಡಿ ಎದ್ದಿದ್ದೇನೆ, ಬೇಂದ್ರೆಯವರನ್ನು ಕಂಡು, ಅವರೊಡನೆ ಸ್ವಲ್ಪ ಹೊತ್ತು ಸಾಹಿತ್ಯಸಲ್ಲಾಪ ಮಾಡಿ, ಅವರನ್ನು ಕೂಡಿಕೊಂಡೇ ಕವಿ ಸಮ್ಮೇಳನಕ್ಕೆ ಹೋಗೋಣ ಮಧ್ವರಾಯರೆ," ಎಂದೆ. ಅವರೂ ಆನಂದದಿಂದ ಒಪ್ಪಿದರು. ಇಬ್ಬರೂ ದಸರಾ ಮಹೋತ್ಸವ ಸಮಿತಿಯ ಕಾರ್ಯಾಲಯಕ್ಕೆ ಹೋದೆವು. ಅಲ್ಲಿ ಕಾರ್ಯದರ್ಶಿಗಳು ಕುಳಿತಿದ್ದರು. ಹೇಗೆ ಕುಳಿತಿದ್ದರೆಂಬುದನ್ನು ಹೇಳುವ ಗೋಜಿಗೆ ಹೋಗೆ ನಾನು. ನಮ್ಮನ್ನು ನೋಡಿಯೂ ನೋಡದಂತೆ ಕಣ್ಣು ಪಿಳುಕಿಸತೊಡಗಿದರು. ಮಧ್ವರಾಯರು ತಾವೇ ಮುಂದಾಗಿ ಕೇಳಿದರು: "ಬೇಂದ್ರೆಯವರೆಲ್ಲಿ?" ತಕ್ಷಣ ಹೊರಟಿತವರ ಮರುಪ್ರಶ್ನೆ: "Who is Bandre?" ಮೊಗಲಾಯಿಗಿಂತ ಮೊಗಲಾಯಿಯಲ್ಲಿ ಇಂಥ ತಿಳಿಗೇಡಿಗಳನ್ನು ಕಂಡಿರಲಿಲ್ಲ ನಾನು! ಒಬ್ಬ ಕನ್ನಡ

ಅಧಿಕಾರಿ–ಅಸಿಸ್ಟೆಂಟ್ ಕಮೀಷನರ್ ದರ್ಜೆಯ ಅಧಿಕಾರಿ–ತನ್ನ ಸಾಮಾನ್ಯ ಜ್ಞಾನಕ್ಕೆ ಸಾಕ್ಷಿಯಾಗಿಯಾದರೂ ಬೇಂದ್ರೆಯವರಾರೆಂಬುದನ್ನು ತಿಳಿದಿರಬೇಕಿತ್ತು. ಹೋಗಲಿ, ತನ್ನ ರುಜುವಾತಿನೊಡನೆಯೇ ಕವಿ ಸಮ್ಮೇಳನದ ಅಧ್ಯಕ್ಷತೆಗೆ ಬೇಂದ್ರೆಯವರಿಗೆ ಕರೆಯೋಲೆ ಕಳಿಸಿದ ಮೇಲಾದರೂ ಅವರ ಹೆಸರು ನೆನಪಿಡಬೇಕಿತ್ತು. "ಬಾಂದ್ರೆ ಯಾರು?" ಎಂದು ಕೇಳಿಬಿಡುವುದೆ? ಅಷ್ಟರಲ್ಲಿ ಯಾರೋ ಬಂದರು. ಅವರು ಹೊತ್ತಿಸಲೆಂದು ಕೈಯಲ್ಲೊಂದು ಸಿಗರೇಟು ಹಿಡಿದಿದ್ದರು. ಅದನ್ನು ಅವರ ಕೈಯಿಂದ ಕಿತ್ತುಕೊಂಡು ತಮ್ಮ ಬಾಯಲ್ಲಿರಿಸಿಕೊಂಡು, ಅವರ ಜೇಬಿಗೆ ಕೈಹಾಕಿ ಕಡ್ಡಿಪೆಟ್ಟಿಗೆ ತೆಗೆದುಕೊಂಡು, ಕಡ್ಡಿಗೀರಿ ಸಿಗರೇಟು ಹೊತ್ತಿಸಿಕೊಂಡು ಹೊಗೆ ಬಿಡುತ್ತ ಹೇಳಿದರು ಕಾರ್ಯದರ್ಶಿ ಮಹಾಶಯರು: "ಒಳಗೆ ಹೋಗಿ ಗುಮಾಸ್ತೆಯನ್ನು ಕೇಳಿ: ಅವರಿಗೆ ಗೊತ್ತಿರಬಹುದು!" ನನ್ನ ತಲೆ ಕಾಯ್ದು, ಸೀಯ್ದು ಹೋಯಿತು. "ಏ ರಾಸಭ" ಎಂದೆ. ಅದರ ಅರ್ಥ ಗೊತ್ತಾಗದೆ ಮಿಕಿ ಮಿಕಿ ನೋಡಿದರವರು. "ನಾನೂ ನಿಮ್ಮ ಸಮಾನ ದರ್ಜೆಯ ಅಧಿಕಾರಿ; ಸಾಲದುದಕ್ಕೆ ಆಮಂತ್ರಿತನಾಗಿ ಬಂದಿದ್ದೇನೆ. ಕರೆಯೋಲೆಗೆ ನೀವೇ ಸಹಿ ಮಾಡಿದ್ದೀರಿ–ನೋಡಿ! ಕಣ್ಣು ಮುಚ್ಚಿಕೊಂಡು ಸಹಿ ಮಾಡಿರುವಿರಾ? ನಾನೀಗ ತಮ್ಮ ಗುಮಾಸ್ತನ ಬಳಿಗಲ್ಲ, ನಿಮ್ಮ ಚೇರ್‌ಮನ್ನರ ಬಳಿಗೆ ಹೋಗುತ್ತೇನೆ," ಎಂದು ಗದ್ದರಿಸಿ ಹೊರಟೆ. ಕಾರ್ಯದರ್ಶಿಗಳು ಅಧಿಕಾರದ ಅಮಲಿನಿಂದ ಎಚ್ಚೆತ್ತರು. ಎದ್ದುಬಂದು ನನ್ನನ್ನು ತಡೆದರು. ಕಾಫಿ ತರಿಸಿ ಕುಡಿಸಿದರು. ಬೆಲ್ ಬಾರಿಸಿ ಗುಮಾಸ್ತನನ್ನು ಕರೆದು ಬೇಂದ್ರೆಯವರ ಬಿಡಾರದ ಮಾಹಿತಿ ದೊರಕಿಸಿ ತಿಳಿಸಿದರು. ಇಂಗ್ಲೀಷಿನಲ್ಲಿ ಮೂರು ಪದಗಳವೆಯಲ್ಲ–ನಮ್ಮ ತ್ರಿಮೂರ್ತಿಗಳಂತೆ– 'Sorry' 'Please' 'Thank you' ಎಂದು! ಅವುಗಳಲ್ಲಿ 'Sorry' ಪದ ಉಪಯೋಗಿಸಿರು ಕಾರ್ಯದರ್ಶಿಗಳು! 'Sorry' ಎಂದಾ ಕ್ಷಣ ಆದದ್ದೆಲ್ಲವನ್ನೂ ಮರೆಯಬೇಕು; 'Please' ಎಂದಾಕ್ಷಣ ಹೇಳಿದ್ದೆಲ್ಲವನ್ನೂ ಮಾಡಬೇಕು; 'Thank you' ಎಂದರೆ ಮಾಡಿದುದಕ್ಕೆ ಪ್ರತಿಫಲ ಕೇಳದೆ ಹೊರಟುಹೋಗಬೇಕು!

ಬೇಂದ್ರೆಯವರ ಬಿಡಾರ ತಲುಪಿದೆವು. ಯುವರಾಜಾ ಕಾಲೇಜಿನಲ್ಲಿ ಯಾವುದೋ ಒಂದು ಕೋಣೆಯಲ್ಲಿ ಇರಿಸಿದ್ದರು ಅವರನ್ನು. ಬೆಳಗಿನಿಂದ ಸ್ನಾನವಿಲ್ಲ, ಉಪಹಾರವಿಲ್ಲ, ಊಟವಿಲ್ಲ, ಕೇಳುವವರಿಲ್ಲ, ಮುಂದೇನೆಂದು ಹೇಳುವವರಿಲ್ಲ! ನಾವು ಹೋಗುತ್ತಲೆ ಕತ್ತಲೆಯ ಬಸಿರಿನಲ್ಲಿ ಬೆಳಕಿನ ಕಿರಣಜಾಲವೊಂದು ಕಾಣಿಸಿದಂತಾಯಿತು ಅವರಿಗೆ. ಯಾವನೋ ಒಬ್ಬ ಬಿಕನಾಸಿ ನಿಲ್ದಾಣದಿಂದ ಅವರನ್ನಲ್ಲಿಗೆ ತಂದು ಬಿಟ್ಟುಹೋಗಿದ್ದ. ಆಮೇಲೆ ಮೋರೆ ತೋರಿಸಿರಲಿಲ್ಲವವನು. ನಾನು ಆಳುಗಳನ್ನು ಗದ್ದರಿಸಿ ನೀರು ಕಾಯಿಸುವ ವ್ಯವಸ್ಥೆ ಮಾಡಿದೆ; ಮಧ್ವರಾಯರು



ಓಡಿಹೋಗಿ ಊಟ ತಂದರು. ಕವಿವರ್ಯರು ಸ್ನಾನ ಮುಗಿಸುವ ಹೊತ್ತಿಗೆ ಬಿಸಿ ಬಿಸಿ ಅನ್ನಸಾರು ಬಂದಿತ್ತು. ಊಟ ಮಾಡಿದರು. ಕವಿ ಸಮ್ಮೇಳನಕ್ಕೆ ಹೊರಡಲು ಸಿದ್ಧರಾದರು. 'ಸುಜನಾ' ಬಂದರು. ಅವರೂ ನಡೆದುದನ್ನು ಕೇಳಿ ತಳಮಳಿಸಿದರು. ಕವಿ ಸಮ್ಮೇಳನಕ್ಕೆ ಅಧ್ಯಕ್ಷರನ್ನು ಕರೆಯಲು ಯಾರಾದರೂ ಬಂದಾರೆಂಬ ಭರವಸೆ ಉಳಿದಿರಲಿಲ್ಲ. ಕಾಲ್ನಡಿಗೆಯಲ್ಲಿಯೇ ಎಲ್ಲರೂ ಕವಿ ಸಮ್ಮೇಳನಕ್ಕೆ ಹೋದೆವು. ಕವಿ ಸಮ್ಮೇಳನವೇನೋ ಚೆನ್ನಾಗಿಯೇ ನಡೆಯಿತು. ಅಂದೇ ರಾತ್ರಿ ಕವಿವರ ಕುವೆಂಪು ಅವರನ್ನು ಕಂಡು ಗೌರವಾರ್ಪಣೆ ಮಾಡಿ ಬಂದೆ. ಮರುದಿನ ಬೆಂಗಳೂರಿಗೆ ಹೊರಟೆ. ಕೆ.ಎಸ್. ನರಸಿಂಹಸ್ವಾಮಿಗಳವರೂ ಹೊರಟಿದ್ದರು. ಬೆಂಗಳೂರು ತಲುಪುವರೆಗೆ ಅವರ ಮಧುರ ಸಹವಾಸ ಸಿಕ್ಕಿ ಮನಸ್ಸು ಪ್ರಫುಲ್ಲವಾಯಿತು. ಅವರ ಸಿಫಾರಿಸಿನ ಮೇರೆಗೆ ಮದ್ದೂರಿನಲ್ಲಿ ಮದ್ದೂರು ವಡೆಯ ರುಚಿ ನೋಡಿದೆ. ಕೆಲವು ವಡೆ ಕಟ್ಟಿಸಿಕೊಂಡೆ.

### ಹೀನಮನದ ಅಧಿಕಾರಿಗಳು :

ಬೆಂಗಳೂರಿನಲ್ಲಿ ಚಿ॥ ಅನ್ನದಾನಿಯೊಡನೆ ಒಂದು ದಿನ ಕಳೆದೆ. ಎಲ್ಲಿಯ ಹೈದರಾಬಾದು, ಎಲ್ಲಿಯ ಬೆಂಗಳೂರು? ಆದರೂ ಅಸಾಧಾರಣ ಧೈರ್ಯ ತೋರಿ ಹೈದರಾಬಾದಿನಿಂದ ಬೆಂಗಳೂರಿಗೆ ಬಂದು ಬೋರ್ಡು ಹಾಕಿದ್ದನಾ ಹುಟ್ಟು ಹೋರಾಟಗಾರ. ಅದೂ ಹೈಕೋರ್ಟಿನಲ್ಲಿಯೇ ವಕೀಲಿ ಪ್ರಾರಂಭಿಸಿಬಿಟ್ಟಿದ್ದ. ನನಗೆ ಹೆಮ್ಮೆಯೆನಿಸಿತು. ಚಿ. ನೀಲವ್ವನೂ ತುಂಬ ದಿಟ್ಟತನ, ಗಟ್ಟಿತನ ತೋರಿದ್ದಳು. ಶ್ರೀ ವೈ.ಸಿ. ಬಸಪ್ಪನವರ ಮನೆಯ ಒಂದು ಭಾಗದಲ್ಲಿ ಅವರಿದ್ದರು. ಬಸಪ್ಪನವರೂ, ಅವರ ಮನೆಯವರೂ ಇವರನ್ನು ತುಂಬ ವಾತ್ಸಲ್ಯದೊಡನೆ ನೋಡಿಕೊಂಡಿದ್ದರು. ಅವರಿಗೆ ನನ್ನ ನೆನಿಕೆ ಸಲ್ಲಿಸಿ ಯಾದಗಿರಿಗೆ ಹೊರಟೆ. ರೈಲಿನಲ್ಲಿ ಮತ್ತೆ ಮೂರು ಬ್ಲಾಕುಗಳ ಕಾರ್ಯಭಾರವನ್ನು ನಿರ್ವಹಿಸುವ ವಿಷಯ ನೆನಪಾಗಿ ಹೇಗೆ ನಿರ್ವಹಿಸುವುದೆಂದು ಯೋಚಿಸಿಯೇ ಯೋಚಿಸಿದೆ. ನಮ್ಮ ರಾಜ್ಯದಲ್ಲಿ ನಾವಿದ್ದೇವೆಂದು ಕನಿಷ್ಠ ಆ ಭಾಗದ ಕನ್ನಡಿಗರು ಹಿಗ್ಗುವ ಸ್ಥಿತಿಯಲ್ಲಿರಲಿಲ್ಲ. ನಮಗೆ ಮೇಲಾಧಿಕಾರಿಗಳಾಗಿ ಬಂದಿದ್ದವರು ಬಹಳ ಹೀನಮನದವರಾಗಿದ್ದರು. ಅವರಿಗೆ ಜನಕಲ್ಯಾಣ ಕಾರ್ಯಗಳು ತ್ವರಿತಗತಿಯಿಂದ ಸಾಗುವುದು ಬೇಕಿರಲಿಲ್ಲ, ತಮ್ಮ ಹಮ್ಮಿನ ಸಂತೃಪ್ತಿ ಮುಖ್ಯವೆಂದೆನಿಸಿದ್ದಿತು. ಕೆಳಗಿನವರೆಗೆ ಕಿರುಕುಳ ಕೊಟ್ಟು ಹಿಗ್ಗುವ ಹೀನ ಮನ, ತಮಗಿಂತ ಮೇಲಿನವರು ಬಂದಾಗ ಸೋಪು ಟವಲು ಹಿಡಿದುಕೊಂಡು ಸ್ನಾನ ಗೃಹಗಳಲ್ಲಿ ನಿಂತಿರುವ ಗುಲಾಮ ಬುದ್ಧಿ, ಸ್ವಂತದ ಕೆಲಸ ಮೊದಲು ಮಾಡಿ ಸಮಯ ಉಳಿದರೆ ಮಾತ್ರ ಸರಕಾರದ ಕೆಲಸವನ್ನು ಮಾಡುವ

ಕುಟಿಲಚಿತ್ತ, ತಲೆಯಲ್ಲಿ ಗೊಬ್ಬರ ತುಂಬಿದ್ದರೂ ತಾವೇ ಸರ್ವಜ್ಞರೆಂಬ ಅಜ್ಞ ಸಹಜ ಅಹಂಕಾರ–ಇವುಗಳಿಂದ ಬಹುಬೇಗ ಅಗ್ಗವಾಗಿ ಬಿಟ್ಟಿದ್ದರವರು. ಮೊದಲಿನ, "ಮಂಜೂರಿ ಮಂಜೂರಿ ಎಂದೇಕೆ ಬಡಬಡಿಸುವಿ? ಜನರಿಗೆ ಹಿತವಾಗುವ ಕಾರ್ಯಗಳನ್ನು ಮಾಡುತ್ತ ಮುಂದುವರಿ; ಮುಂದಿನ ತಿಂಗಳು ಅಲ್ಲಿಗೇ ಬಂದು ಜಾಲಿಯ ಮರದ ಕೆಳಗೆ ಕುಳಿತು ಎಲ್ಲವನ್ನೂ ಒಂದೇಟಿಗೆ ಮಂಜೂರು ಮಾಡಿಬಿಡುತ್ತೇನೆ," ಎಂದು ಹೇಳುತ್ತಿದ್ದ ಜಹೀರ ಅಹಮ್ಮದ್ ಸಾಹೇಬರಂಥ ಅಧಿಕಾರಿಗಳು ಹೋಗಿ, ಕೂದಲುಸೀಳಿಕೆಯೇ ಚರಮಗಮ್ಯವೆನಿಸಿದ್ದ, ಏನಾದರೂ ತಪ್ಪು ಹುಡುಕುವುದೇ ಅಧಿಕಾರಿಯಾದವನ ಪರಮಲಕ್ಷ್ಯವೆನಿಸಿದ್ದ ಅಧಿಕಾರಿಗಳು ಬಂದಿದ್ದರು! ಬೇಸಿಗೆಯಲ್ಲಿ ಜಪಾನೀ ಪದ್ಧತಿಯ ಭತ್ತದ ಬಿತ್ತನೆ ಏಕಾಗಿಲ್ಲವೆಂದು ಕೇಳುವುದೂ, ಮಳೆಗಾಲದ ಮಧ್ಯದಲ್ಲಿ ಮನೆಗಳ ನಿರ್ಮಾಣ ಕಾರ್ಯವೇಕೆ ನಿಂತಿದೆಯೆಂದು ಕೇಳುವುದೂ ಈ ದೇವಾನಾಂಪ್ರಿಯರ ಹೆಚ್ಚುಗೆಯೆನಿಸಿಬಿಟ್ಟಿದ್ದಿತು. ಒಬ್ಬ ವಿಭಾಗಾಧಿಕಾರಿಗಳ ಹುಚ್ಚಾಟಗಳಂತೂ ಮಹಮ್ಮದ ತೊಘಲಖನ ಇತಿಹಾಸದ ಪುನರ್‌ಸೃಷ್ಟಿ ನಡೆಸಿದ್ದುವು. ನನ್ನ ರಾಷ್ಟ್ರೀಯ ವಿಸ್ತರಣ ಕ್ಷೇತ್ರಗಳಲ್ಲಿ ಭೂಸಾರ ರಕ್ಷಣೆಯ ಕಾರ್ಯಗಳನ್ನು ಬಹುವ್ಯಾಪಕ ಪ್ರಮಾಣದಲ್ಲಿ ಕೈಕೊಂಡಿದ್ದೆ. ಜನರೂ ಬಹಳ ಸಂತೃಪ್ತರಾಗಿದ್ದರು. ದುಡಿದವರಿಗೆ ಸಲ್ಲುವ ಹಣದ ಸೋರಿಕೆ ತಡೆಗಟ್ಟಲೆಂದು ನಾನೇ ಹೋಗಿ ಅವರ ವೇತನ ವಿತರಣೆ ಮಾಡಿಬರುತ್ತಿದ್ದೆ. ಗಂಡ ಹೆಂಡತಿಯರು ಕೆಲವರು ಕೂಲಿಯ ಹಣ ಉಳಿಸಿ ಹೊಲ ಕೊಂಡುಕೊಂಡ ಉದಾಹರಣೆಗಳನ್ನೂ ನನ್ನ ಗಮನಕ್ಕೆ ಬಂದು ಹಿಡಿದ ಕಾರ್ಯ ಸಾರ್ಥಕವಾಯಿತೆಂದು ಹಿಗ್ಗಿದ್ದೆ. ಒಂದು ಲಕ್ಷ ಎಕರೆಗಳ ಗುರಿಯನ್ನು ಮುಟ್ಟುವತ್ತ ಭರದಿಂದ ಹೊರಟಿದ್ದೆ. ವಿಭಾಗೀಯ ಭೂಸಾರ ಸಂರಕ್ಷಣಾಧಿಕಾರಿಗಳಾಗಿದ್ದ ಶೆಟ್ಟರ್ ಅವರು ತಮ್ಮ ವಿಷಯದಲ್ಲಿ ಬಲ್ಲಿದರಾಗಿದ್ದುದಲ್ಲದೆ ಆ ಕಾರ್ಯದಿಂದ ಬೇಸಾಯಗಾರರ ಭಾಗ್ಯೋದಯ ಸಾಧ್ಯವೆಂದು ಪ್ರಮಾಣಿಕವಾಗಿ ನಂಬಿದ್ದರು. ಈ ವಿಭಾಗಾಧಿಕಾರಿ ಅದನ್ನು ನಿಲ್ಲಿಸಿಬಿಟ್ಟರು. ತೊಗಲಲ್ಲಿ ಏನು ಬಲ್ಲ ತಿಮ್ಮಣ್ಣ–ಎಂಬ ಗಾದೆಯಿದೆ. ಭೂಸಾರ ಸಂರಕ್ಷಣೆಯ ವಿಷಯವನ್ನೇನು ಬಲ್ಲ ಈ ಹುಚ್ಚೋಜಿ–ಎಂದು ಎಲ್ಲರೂ ನಕ್ಕರು. ಆದರೆ ತನ್ನ ಬಾಯಿಂದ ಬಂದುದೇ ಬೈಬಲ್ ಎಂದು ನಂಬಿದ್ದ ಆ ವಿಭಾಗಾಧಿಕಾರಿ ಅದು ನಿಷ್ಫಲ ಯೋಜನೆಯೆಂದು ಸಾರಿ ನಿಲ್ಲಿಸಿಬಿಟ್ಟ. ದೇವರೇ ಕಾಪಾಡಬೇಕು ದೇಶವನ್ನು ಇಂಥವರಿಂದ!

ಕಲಬುರಗಿಯಲ್ಲಿ ಕಾಲಿರಿಸುತ್ತಲೇ ಇತಿಹಾಸ ನಿರ್ಮಿಸಿದ್ದ ಈ 'ಮಹಾನುಭಾವ' ಅವರನ್ನೂ ಅವರ ಕುಟುಂಬವನ್ನೂ ಕರೆತರಲು ಸರಕಾರೀ ವಾಹನ ಹೋಗಿದ್ದಿತು



ನಿಲ್ದಾಣಕ್ಕೆ. ಸರಕಾರೀ ವಾಹನವನ್ನೂ ಸ್ವಂತದ ಕೆಲಸಕ್ಕಾಗಿ ಉಪಯೋಗಿಸಕೂಡದೆಂಬ ನಿಯಮ ನೆನಪಿಸಿ ನಡೆದುಕೊಂಡೇ ಹೊರಟರವರು. ಹೇಗೂ ವಾಹನ ಬಂದುಬಿಟ್ಟಿತ್ತು ನಿಲ್ದಾಣಕ್ಕೆ. ಅದರಲ್ಲಿ ನಾಲ್ಕನೆಯ ದರ್ಜೆಯ ಅಧಿಕಾರಿಗಳು ಕುಳಿತು ಹೊಟ್ಟೆ ಬಿರಿವಂತೆ ನಗುತ್ತ ಬಂದರು! ಇವರು ಟೂಅರ್ ಹೊರಟರೆಂದರೆ ಕೆಳಗಿನ ಅಧಿಕಾರಿಗಳಿಗೆ ತಲೆನೋವು. ಊಟ ಬಹಳ ಸಾದಾ ಮಾಡಿಸಿದರೆ "ಇದು ವಿಭಾಗಾಧಿಕಾರಿಯ ಊಟವೆ?" ಎಂದು ರೇಗುತ್ತಿದ್ದರು; ಸ್ವಲ್ಪ ಚೆನ್ನಾಗಿ ಮಾಡಿಸಿದರೆ "ಇಷ್ಟೇಕೆ ಅದ್ದೂರಿಯ ಊಟ ಮಾಡಿಸಿದಿರಿ?" ಎಂದು ರೇಗುತ್ತಿದ್ದರು! ಕಲಬುರಗಿಗೆ ವಿಭಾಗೀಯ ಅಧಿಕಾರಿಗಳ ಸಭೆಗೆ ಹೋದಾಗ ಕೆಲವು ತಹಸೀಲ್ದಾರರು ತಮ್ಮ ಬವಣೆಯನ್ನು ತೋಡಿಕೊಂಡರು ನನ್ನ ಮುಂದೆ. ನಾನಿದಕ್ಕೆ ತಕ್ಕುದನೆ ಮಾಡುವೆನೆಂದು ಅವರಿಗೆ ಸಮಾಧಾನ ಹೇಳಿ ಕಳಿಸಿದೆ.

## ಸ್ವಾರ್ಥ

ಒಂದು ಸ್ಥಳದಲ್ಲಿ ಪಶುವೈದ್ಯ ಶಾಲೆಗೆ ಕಟ್ಟಡ ಕಟ್ಟಿಸಿದ್ದೆ. ಅದರ ಉದ್ಘಾಟನೆಗೆ ಆ ಮಹಾನುಭಾವರನ್ನು ಕರೆದೆ ಒಪ್ಪಿದರು. ಆ ಊರವರಿಗೆ ಮೊದಲೇ ಹೇಳಿದ್ದೆ–ಊಟ ಬಹಳ ಅದ್ದೂರಿಯಾಗಿರಬೇಕೆಂದು. ಅವರು ಹಳ್ಳಿಗಳ ಭಕ್ಷ್ಯ ಭೋಜ್ಯಗಳನ್ನೆಲ್ಲ ಮಾಡಿಸಿ ಬಿಟ್ಟಿದ್ದರು. ಉದ್ಘಾಟನಾ ಸಮಾರಂಭ ಮುಗಿದು ಊಟಕ್ಕೆ ಕುಳಿತಾಗ ಒಂದೊಂದೇ ಮೃಷ್ಟಾನ್ನ ಬಡಿಸುತ್ತ ಹೋದಂತೆ ಅವರ ಮುಖಕ್ಕೆ ಕೆಂಪಡರಿತು. ಸಿಟ್ಟಿನಿಂದ ಉರಿಯ ತೊಡಗಿದರು. Who asked you to arrange such a sumptuous lunch?" ಎಂದು ಕೇಳಿದರು. "Who says it is sumptuous, sir? It is our ordinary lunch," ಎಂದೆ. ಕೆಲವರು ಕಿಸಕ್ಕನೆ ನಕ್ಕರು; ಕೆಲವರು ಬಾಯಿ ಬಿಗಿ ಹಿಡಿದು ನಗೆ ತಡೆದರು. ವಿಭಾಗಾಧಿಕಾರಿಗಳು ತಲೆ ತಗ್ಗಿಸಿ ಬಡಿಸಿದ್ದುದೆಲ್ಲವನ್ನೂ ಬಕ್ಕರಿಸಿದರು. ಮತ್ತೆ ಊಟದ ಬಗ್ಗೆ ಉಪದ್ವ್ಯಾಪ ಮಾಡಲೇ ಇಲ್ಲ.

ಇವರ ಪರಮ ಪ್ರಾಮಾಣಿಕತೆಗೆ ಇನ್ನೊಂದು ನಿದರ್ಶನ. ಒಬ್ಬ ಮಂತ್ರಿಗಳು ಬಂದರು. ಸುರಪುರ ಶಹಾಪುರಗಳ ಭೇಟಿಯಲ್ಲಿ ಅಲ್ಲಿಯವರು ಇರಿಸಿದ್ದ ಫಲಾಹಾರವನ್ನು ತುಂಬ ತಿಂದು ಬಿಟ್ಟರು. ಯಾದಗಿರಿಗೆ ಬಂದಾಗ ಸುಸ್ತಾಗಿ ನನಗೆ ಊಟ ಬೇಡವೆಂದು ಮಲಗಿ ಬಿಟ್ಟರು, ವಿಭಾಗಾಧಿಕಾರಿಗಳು. "ಸಾಹೇಬರು ಊಟ ಮಾಡದಿದ್ದ ಮೇಲೆ ನಾನು ಹೇಗೆ ಮಾಡಲಿ?" ಎಂದು ತಮ್ಮ ಸ್ವಾಮಿ ಭಕ್ತಿಯನ್ನು ಪ್ರದರ್ಶಿಸಿದರು. ಉಳಿದವರಿಗೆ ಪೀಕಲಾಟ. ಅವರು ಅಲ್ಲಿಯೇ ಇದ್ದ

ಚಂದ್ರಶೇಖರ ಪಾಟೀಲರ ಮೊರೆ ಹೊಕ್ಕರು. ಅವರು ಬಂದು, "ನಮ್ಮ ಅತಿಥಿಯಾಗಿ ಬಂದ ನೀವು ಉಪವಾಸ ಮಲಗಿದರೆ ನಮಗೆ ಪಾಪ ತಟ್ಟೀತು–ನಡೆಯಿರಿ, ಹೋದಷ್ಟು ಉಂಡು ಮಲಗಿರಿ," ಎಂದು ಗದ್ದರಿಸಿದರು. ಕೆಳಗಿನ ಅಧಿಕಾರಿಗಳ ಮುಂದೆ ಟೈಟಾನ್ ಆಗುತ್ತಿದ್ದ ಆ ಸಾಹೇಬರು ರಾಜಕಾರಣಿಗಳ ಮುಂದೆ ಕುಬ್ಜ ಲಿಲಿಪುಟ್ಟರಾಗಿ ಬಿಡುತ್ತಿದ್ದರು. ಊಟ ಮಾಡಲು ಒಪ್ಪಿದರು. ಆದರೂ ಮಂತ್ರಿ ಮಹೋದಯರಿಗೆ ನಿದ್ದೆ ಹತ್ತಿದೆಯೆಂಬುದನ್ನು ಖಾತ್ರಿ ಮಾಡಿಕೊಳ್ಳಲು ಕಳ್ಳ ಹೆಜ್ಜೆಯಿಡುತ್ತ ಅವರ ಕೋಣೆಯ ಬಳಿ ಹೋಗಿ ಕಿಟಿಕಿಯಲ್ಲಿ ಇಣಿಕಿ ನೋಡಿದರು. ಅವರಿಗೆ ನಿದ್ರೆ ಹತ್ತಿದುದು ಖಚಿತವಾದ ಮೇಲೆ ಅಷ್ಟೇ ಮೆತ್ತಗೆ ಹೆಜ್ಜೆಯಿಡುತ್ತ ಹಿಂದುರುಗಿ ಬಂದು ಊಟಕ್ಕೆ ಕುಳಿತರು. ಬಾಸುಂದಿಯನ್ನೇ ಮೊದಲು ಕಬಳಿಸಿದರು. ಬಹಳ ಸೇರಿತೆಂದು ತೋರುತ್ತದೆ. ಎಲ್ಲರ ತಟ್ಟೆಗಳ ಬಳಿಯ ಬಾಸುಂದಿಯ ಬಟ್ಟಲುಗಳನ್ನೂ ಬಾಗಿ ಸೆಳೆದುಕೊಂಡು ಎಲ್ಲ ಬಟ್ಟಲುಗಳನ್ನು ಬರಿದು ಮಾಡಿಬಿಟ್ಟರು! ಗಡದ್ದಾಗಿ ನಿದ್ರಿಸಿದರು. ಬೆಳಗ್ಗೆ ಹೋಟೆಲಿನವ ಹಣ ಕೇಳಲು ಬಂದಾಗ, "ನಾನು ಬಾಸುಂದಿ ಮಾತ್ರ ಭಕ್ಷಿಸಿದ್ದೇನೆ; ಆದುದರಿಂದ ನಾಲ್ಕಾಣೆ ಮಾತ್ರ ಕೊಡುವೆ," ಎಂದು ಅವನೊಡನೆ ವಾದಿಸಿದರು!

ಇವರ ಕಿರುಕುಳವನ್ನೂ ಸಹಿಸಿಕೊಂಡು ನಾನೇನೋ ಧೈರ್ಯವಾಗಿಯೇ ಜನ ಕಲ್ಯಾಣ ಕಾರ್ಯಗಳನ್ನು ಮುಂದುವರಿಸಿದೆ. ಆದರೆ ಕೆಳಗಿನವರ ಎದೆಯೊಡೆದಿದ್ದಿತು. ಮೊದಲಿನಷ್ಟು ಎದೆಗಾರಿಕೆಯೊಡನೆ ಮುಂದೆ ಬಿದ್ದು ಕೆಲಸ ಮಾಡಲಿಲ್ಲ. ಒಬ್ಬ ಬಿ.ಡಿ.ಓ. ಸಂಪೂರ್ಣವಾಗಿ ಕೆಲಸ ನಿಲ್ಲಿಸಿ ಬಿಟ್ಟರು. ಮಹಮ್ಮದಿಯರು; ಬಹಳ ಒಳ್ಳೆಯ ಮನುಷ್ಯ. ಹೇಳಿ ಹೇಳಿ ಸಾಕಾಯಿತು. ಒಮ್ಮೆ ಕೇಳಿಯೇ ಬಿಟ್ಟೆ; "ಏಕೆ ಕೆಟ್ಟ ಹೆಸರು ಕಟ್ಟಿಕೊಂಡು ಹೋಗುವಿರಿ? ನಿಮ್ಮ ಬಗ್ಗೆ ಅದಕ್ಷನೆಂದು ರಿಮಾರ್ಕ್ ಬರುವುದಿಲ್ಲವೆ?" ನಿಮಿಷ ಮಾತ್ರವೂ ಯೋಚಿಸದೆ ಉತ್ತರವಿತ್ತರವರು: "ಕೆಲಸ ಮಾಡದಿದ್ದರೆ ಕೆಲಸಮಾಡಲಿಲ್ಲವೆಂಬ ಒಂದೇ ರಿಮಾರ್ಕ್ ಬರುತ್ತೇ ಸರ್, ಕೆಲಸ ಮಾಡಿದರೆ ಒಂದೊಂದು ಕೆಲಸಕ್ಕೂ ಒಂದೊಂದು ರಿಮಾರ್ಕ್ ಕಟ್ಟಿಟ್ಟ ಗಂಟು! ಮಾಡಿದರೆ ಏಕೆ ಮಾಡಿದೆಯೆಂಬ, ಮಾಡದಿದ್ದರೆ ಏಕೆ ಮಾಡಲಿಲ್ಲವೆಂಬ ಈ ಅವಿಶ್ವಸನೀಯ ವರಿಷ್ಠ ಅಧಿಕಾರಿಗಳ ಆಡಳಿತದಲ್ಲಿ ಕೆಲಸ ಮಾಡಲಿಲ್ಲವೆಂಬ ಒಂದೇ ರಿಮಾರ್ಕ್ ಪಡೆದುಕೊಂಡು ಹೋಗುವುದು ಮೇಲಲ್ಲವೆ? ಜನರ ಕೆಲಸ ಮಾಡಿಸಲೆಂದು ಬಂದವರೆ ಇವರು? ನಮ್ಮ ಕತ್ತು ಕೊಯ್ಯಲು ಬಂದವರು!" ಇನ್ನೂ ಏನೇನು ಪುಷ್ಪಗಳನ್ನು ಉದುರಿಸುತ್ತಿದ್ದರೊ ಅವರು! ತಡೆದೆ. "ಕೆಲಸ ಪೂರ್ಣ ನಿಲ್ಲಿಸುವುದು ತರವಲ್ಲ; ಮೈತುಂಬ ಕಣ್ಣಾಗಿ ಕೆಲಸ ಮುಂದುವರಿಸಿರಿ.



ನಿಮ್ಮ ಮೇಲೆ ಯಾವ ಆಕ್ಷೇಪ ಬಂದರೂ ನನ್ನ ಮೇಲೆ ತೆಗೆದುಕೊಳ್ಳುತ್ತೇನೆ!" ಎಂದು ಹೇಳಿ ಕೆಲಸ ಮಾಡಲು ಒಪ್ಪಿಸಿ ಬಂದೆ. ನನ್ನ ಮನಸ್ಸನ್ನು ವಿಷಣ್ಣತೆ, ಖಿನ್ನತೆ ಆವರಿಸಿದ್ದಿತು. ಎಷ್ಟು ಭರಾಟೆಯೊಡನೆ ನಡೆದಿದ್ದುವು ಪ್ರಜಾಹಿತ ಕಾರ್ಯಗಳು! ಅವು ಇನ್ನು ಕ್ರಮೇಣ ನಿಂತು ಬಿಡುವುದೆ? ಯಾರು ರಾಜರಾದರೂ ರೈತನಿಗೆ ರಾಗಿ ಬೀಸುವುದು ತಪ್ಪುವುದಿಲ್ಲ. ಎಂಬ ಗಾದೆ ನಿಜವಾಗುವುದೆ?" ಎಂದುಕೊಂಡು ಕುದಿದೆ.

## ಅಭಿವೃದ್ಧಿ ಕಾರ್ಯ :

ಅಲ್ಲಿಗೆ ಮೊದಲನೆಯ ವಿಭಾಗಾಧಿಕಾರಿಗಳಾಗಿ ಬಂದಿದ್ದ ಎನ್.ಎಸ್. ಹಿರಣ್ಣಯ್ಯನವರು ಹೀಗಿರಲಿಲ್ಲ. ಅಭಿವೃದ್ಧಿ ಕಾರ್ಯಗಳಲ್ಲಿ ತುಂಬ ಆಸಕ್ತರಾಗಿದ್ದರು. ಜನಾಭಿಮುಖಿ ದೃಷ್ಟಿಯೂ ಅವರಿಗಿದ್ದಿತು. ಕಲಬುರಗಿಯಲ್ಲಿ ಶಿಕ್ಷಣ ಸಂಸ್ಥೆಗಳು ತಲೆದೋರಲು ಅವರ ಪ್ರಯತ್ನಗಳೂ ಕಾರಣವಾಗಿದ್ದುವು. ಅಲ್ಲಿ ಹೊಸದಾಗಿ ಪ್ರಾರಂಭವಾದ ಇಂಜಿನಿಯರಿಂಗ್ ಕಾಲೇಜಿಗೆ ಎಲ್ಲ ಡೆಪ್ಯುಟಿ ಕಲೆಕ್ಟರರೂ ಜನಧನ ಸಂಗ್ರಹಿಸಿ ಕಳಿಸಬೇಕೆಂದು ಆದೇಶವಿತ್ತರು. ನನ್ನ ಪಾಲಿಗೆ ಅರ್ಧ ಲಕ್ಷ ರೂಪಾಯಿಗಳ ಸಂಗ್ರಹ ಕಾರ್ಯ ಬಂದಿತು. ಕೂಡಿಸಿ ಕಳಿಸಿಕೊಟ್ಟೆ. ಟೂರಿಗೆ ಬಂದರೆ ಕಾರ್ಯಾಲಯಗಳ ವೇಳೆಯಲ್ಲಿ ಕಠೋರವಾಗಿ ಕಾರ್ಯ ಸಮೀಕ್ಷೆ ನಡೆಸುತ್ತಿದ್ದರು; ಕಾರ್ಯಾಲಯ ವೇಳೆ ಮುಗಿಯುತ್ತಲೆ ನಮ್ಮೊಡನೆ ಸಮರಸರಾಗಿ ಸರಸ ಸಲ್ಲಾಪ ನಡೆಸುತ್ತಿದ್ದರು. ಆದರೆ ಅವರಲ್ಲಿಯೂ ಆಗಾಗ ವಿಕ್ಷಿಪ್ತತೆ ತಲೆದೋರುತ್ತಿದ್ದಿತು, ಸಿನಿಕತನವಲ್ಲ. ಆಗ ಜಾಗರೂಕರಾಗಿದ್ದರೆ ತೀರಿತು. ಒಮ್ಮೆ ಮುಖ್ಯ ಮಾರ್ಗಕ್ಕೆ ಹೊಂದಿ ಇದ್ದ ಒಂದು ಗ್ರಾಮ ಪಂಚಾಯತಿಯ ತನಿಖೆ ನಡೆಸಿದರು. ಆಗ ಯಾವ ಲಹರಿ ಎದ್ದಿತ್ತೋ ಅವರ ಮನದಲ್ಲಿ–'ಪುರಾಣಿಕರೆ, ನಾನೀ ಗ್ರಾಮವನ್ನು ಮಾದರಿ ಗ್ರಾಮವನ್ನಾಗಿ ಮಾಡಲು ನಿರ್ಧರಿಸಿದ್ದೇನೆ. ಇದಕ್ಕೆ ಒಂದು ರಿಂಗ್ ರೋಡು ಮಾಡಿಸಿರಿ; ಎಲ್ಲ ತಿಪ್ಪೆಗಳನ್ನು ಅದರಾಚೆಗೆ ಸಾಗಿಸಿರಿ; ಊರೊಳಗಿನ ತಗ್ಗುಗಳನ್ನು ಮುಚ್ಚಿಸಿರಿ; ರಿಂಗ್ ರೋಡಿನ ಎರಡೂ ಬದಿಗಳಲ್ಲೂ ಹಣ್ಣು ಕೊಡುವ ಮರಗಳನ್ನು ಬೆಳೆಸಿರಿ..." ಇತ್ಯಾದಿ ಇತ್ಯಾದಿ ಒಂದು ಘಂಟೆ ಕಾಲ ಹೇಳುತ್ತಲೇ ಹೋದರು. ಅದು ರಾಷ್ಟ್ರೀಯ ವಿಸ್ತರಣ ಯೋಜನೆಗೆ ಒಳಪಟ್ಟ ಹಳ್ಳಿಯೂ ಅಲ್ಲ. ಇದಕ್ಕೆ ಹಣ ಎಲ್ಲಿಂದ ಒದಗಿಸುವುದೆಂದು ನಾನು ಮನದಲ್ಲಿಯೇ ಮಂಡಿಗೆ ತಿನ್ನುತ್ತಲಿದ್ದೆ. ಅಷ್ಟರಲ್ಲಿ ಭರತವಾಕ್ಯ ಹೇಳಿಬಿಟ್ಟರು: "ನಾನು ಇನ್ನೊಂದು ತಿಂಗಳೊಳಗಾಗಿ ಮತ್ತೆ ಈ ಗ್ರಾಮಕ್ಕೆ ಭೇಟಿ ಕೊಡುವೆನು. ಅಷ್ಟರಲ್ಲಿ ಈ ಎಲ್ಲ ಕಾರ್ಯಗಳೂ ಮುಗಿದಿರಬೇಕು!"

ನಾನು ಅವಾಕ್ಕಾದೆ. ಕೆಲವು ತಿಂಗಳುಗಳ ಹಿಂದೆಯೇ ನಡೆದಿದ್ದ ಇಂಥದೇ ಒಂದು ಘಟನೆ ನೆನಪಾಗಿತ್ತು. ಗುರುಮಠಕಲ್ ಗ್ರಾಮಕ್ಕೆ ಮುನ್ನಿನ ಹೈದರಾಬಾದು ಸರಕಾರದ ಹರಿಜನ ಮಂತ್ರಿಗಳೊಬ್ಬರು ಬಂದಿದ್ದರು. ಅಲ್ಲಿಯ ಹರಿಜನರು ಮನೆ ಕಟ್ಟಿಕೊಳ್ಳಲು ನಿವೇಶನಗಳನ್ನು ಬೇಡಿದರು. ಕೊಡುವಂತೆ ನನಗೆ ಹೇಳಿದರು ಮಂತ್ರಿವರ್ಯರು. "ಇಲ್ಲಿ ಸರಕಾರೀ ಭೂಮಿಯಿಲ್ಲ; ಖಾಸಗಿ ಜಮೀನನ್ನು ಭೂಸ್ವಾಧೀನ ಕಾನೂನಿನ ಪ್ರಕಾರ ಸ್ವಾಧೀನ ಪಡಿಸಿಕೊಂಡು ಕೊಡಬೇಕಾಗುವುದು," ಎಂದೆ. "ಸ್ವಾಧೀನ ಪಡಿಸಿಕೊಂಡು ಬಿಡಿರಿ," ಎಂದು ಆಜ್ಞೆಯಿತ್ತರು. 'ಆಗಲಿ' ಎಂದೆ. ಸ್ವಲ್ಪ ಹೊತ್ತು ಸುಮ್ಮನಿದ್ದು, "ಸ್ವಾಧೀನ ಪಡಿಸಿಕೊಂಡಿರಾ?" ಎಂದು ಕೇಳಿದರು. ಅವರ ಜನರ ಮುಂದೆಯೇ ಅವರ ಮರ್ಯಾದೆ ಹೋಗದಿರಲೆಂದು, "ಸ್ವಾಧೀನ ಪಡೆಸಿಕೊಂಡೆ," ಎಂದು ಹೇಳಿದೆ. ಮಂತ್ರಿಗಳು ನೆರೆದ ಜನರಿಗೆ ಸಾರಿಬಿಟ್ಟರು: "ನೋಡಿರಿ, ಡೆಪ್ಯುಟಿ ಕಲೆಕ್ಟರರು ನನ್ನ ಆಜ್ಞೆಯ ಮೇರೆಗೆ ಖಾಸಗಿ ಜಮೀನು ಸ್ವಾಧೀನ ಪಡಿಸಿಕೊಂಡುಬಿಟ್ಟಿದ್ದಾರೆ; ನಿಮ್ಮೆಲ್ಲರಿಗೂ ನಿವೇಶನಗಳನ್ನು ನೀಡುವರು!" ಇಷ್ಟು ಹೇಳಿ ಕಾರು ಹತ್ತಿ ಭುರ್ರೆಂದು ಹೋಗಿಬಿಟ್ಟರವರು; ನನ್ನನ್ನು ಸುತ್ತಿಬಿಟ್ಟರು ಜನರು. ಆಗಿನ್ನೂ 'ಘೇರಾವ್' ಶಬ್ದ ಹುಟ್ಟಿರಲಿಲ್ಲ. ಆದರೂ ಅದು 'ಘೇರಾವ್' ಎಂದೇ ಹೇಳಬೇಕು. ಆಮೇಲೆ ಆರು ತಿಂಗಳು ಬೆನ್ನು ಹತ್ತಿ, ಭೂಸ್ವಾಧೀನ ಕಾನೂನಿನ ಎಲ್ಲ ಮಜಲುಗಳನ್ನು ಮುಗಿಸಿ ಅವರಿಗೆ ನಿವೇಶನ ನೀಡಿದ್ದೆ.

## ಪ್ರಸಿದ್ಧಿಗಾಗಿ, ಕಾರ್ಯಸಿದ್ಧಿಗಲ್ಲ :

ಈಗ ಒಂದು ತಿಂಗಳಿನಲ್ಲಿ ಅಲ್ಲಾವುದ್ದೀನನ ಮಾಯಾದೀಪದ ಸಹಾಯದಿಂದ ಒಂದು ಕುಗ್ರಾಮವನ್ನು ಮಾದರಿ ಗ್ರಾಮವನ್ನಾಗಿ ಪರಿವರ್ತಿಸಬೇಕಾಗಿದ್ದಿತು. ವಿಚಲಿತನಾಗದೆ ಮಾರನೆಯ ದಿನವೇ ಅವರು ಹೇಳಿದ್ದ ಒಂದೊಂದು ಕೆಲಸಕ್ಕೂ ಪ್ರತ್ಯೇಕವಾದ ವೆಚ್ಚದ ಅಂದಾಜು ಪತ್ರಿಕೆ ಸಿದ್ಧಪಡಿಸಿ ಅಂದಾಜು ಪತ್ರಗಳು ಒಂದು ಗಂಟನ್ನೇ ಒಬ್ಬ ಕಾರಕೂನನ ಮೂಲಕ ಅವರಿಗೆ ಮುಟ್ಟಿಸಿ ರಸಿದಿ ಪಡೆದುಕೊಂಡೆ. ಅವೆಲ್ಲವುಗಳ ಒಟ್ಟು ಮೊತ್ತ ಹತ್ತೇ ಲಕ್ಷ ರೂಪಾಯಿಗಳು! ಒಂದು ತಿಂಗಳಾದ ಮೇಲೆ ಆ ಗ್ರಾಮಕ್ಕೆ ನೆನಪಿಟ್ಟು ಮರು ಭೇಟಿ ನೀಡಿದರವರು. ಹಳ್ಳಿ ಮೊದಲು ಹೇಗಿದ್ದಿತೋ ಹಾಗೆಯೇ ಇದ್ದುದನ್ನು ಕಂಡು ರೇಗಿದರು. ನಾನು ವೆಚ್ಚದ ಅಂದಾಜು ಪತ್ರಿಕೆಗಳ ಕಾರ್ಯಾಲಯ ಪ್ರತಿಗಳನ್ನೂ, ಅವುಗಳನ್ನು ಅವರಿಗೆ ಮುಟ್ಟಿಸಿದ ಬಗ್ಗೆ ರಸೀದಿಯನ್ನು ಸಂಗಡ ಒಯ್ದಿದ್ದೆ. ತೋರಿಸಿದೆನು ತೆಪ್ಪಗಾದರು. ಆಮೇಲೆ ಅವರೂ ಆ ಬಗ್ಗೆ ಪ್ರಸ್ತಾಪ ಮಾಡಲಿಲ್ಲ, ನಾನೂ ಮಾಡಲಿಲ್ಲ! ಆಮೇಲೆ ಇಂಥದೇ ಒಂದು ಘಟನೆ ಮತ್ತೆ ನಡೆಯಿತು. ನಾನಾಗ ವಾರ್ತಾ ಹಾಗೂ ಪ್ರವಾಸೋದ್ಯಮ ಇಲಾಖೆಯ



ಮುಖ್ಯಾಧಿಕಾರಿ. ಬೆಂಗಳೂರಿನ ಪುರಾತತ್ವ ವಸ್ತು ಸಂಗ್ರಹಾಲಯದ ಆವರಣದಲ್ಲಿ ಒಂದು ಚಲನಚ್ಚಿತ್ರ ಪ್ರದರ್ಶನ ನಡೆಯಿತು. ಅದನ್ನು ಪ್ರಾರಂಭಿಸಲು ಮಂತ್ರಿಗಳೊಬ್ಬರು ಬಂದಿದ್ದರು. ಬರದೆ ಏನು? ಇಂಥವನ್ನು ಬಿಟ್ಟು ಅವರು ಮಾಡಬೇಕಿನ್ನೇನು? ಪ್ರಾರಂಭೋತ್ಸವಕ್ಕೆ ಮುನ್ನ ನನ್ನೊಂದಿಗೆ ಮಾತನಾಡುತ್ತ ಹೇಳಿದರು: "ಪುರಾಣಿಕರೆ, ಇದರ ಬಳಿಯಲ್ಲಿಯೇ ಮಕ್ಕಳಿಗಾಗಿಯೇ ಒಂದು ಪ್ರತ್ಯೇಕ ವಸ್ತು ಸಂಗ್ರಹಾಲಯವನ್ನು ಕಟ್ಟಿಸಬೇಕೆಂದಿದ್ದೇನೆ. ಇದಕ್ಕಾಗಿ ಎರಡೂವರೆ ಲಕ್ಷ ರೂಪಾಯಿಗಳನ್ನು ತೆಗೆದಿರಿಸಿದ್ದೇನೆ; ಇಷ್ಟೇ ಹಣ ಭಾರತ ಸರಕಾರದಿಂದ ಮ್ಯಾಚಿಂಗ್ ಕೊಡುಗೆಯಾಗಿ ಬರಬಹುದು. ಇನ್ನು ಐದು ಲಕ್ಷ ರೂಪಾಯಿ ದೊರೆತು ಬಿಟ್ಟರೆ ಕಟ್ಟಿಸಿಬಿಡುತ್ತೇನೆ," ಎಂದು ಉತ್ಸಾಹಿತರಾಗಿ ನುಡಿದರು. ದಾರಿಯಲ್ಲಿ ಒಂದು ಕುದುರೆಯ ನಾಲು ಕಂಡವನೊಬ್ಬನು ಇನ್ನು ಮೂರು ನಾಲು, ಒಂದು ಕುದುರೆ ಸಿಕ್ಕುಬಿಟ್ಟರೆ ಈ ನಾಲಿನ ಉಪಯೋಗ ಮಾಡಬಹುದಲ್ಲ–ಎಂದು ಹಳಹಳಸಿದ್ದನಂತೆ, ಅವನ ಕತೆ ನೆನಪಾಯಿತು ನನಗೆ. ಆದರೂ ಮಂತ್ರಿಗಳ ಮನ ನೋಯಿಸಬಾರದೆಂದು, "ಆದೇನು ಮಹಾ, ಸರ್? ಜನರಿಗೆ ಅಪೀಲು ಮಾಡಿಬಿಡಿರಿ. ನಾನು ಶಿಕ್ಷಣ ಇಲಾಖೆಯಲ್ಲಿದ್ದಾಗ ರವೀಂದ್ರ ಕಲಾಕ್ಷೇತ್ರದ ನಿರ್ಮಾಣಕ್ಕಾಗಿಯೂ ಸರಕಾರ ಅಪೀಲು ಮಾಡಿತ್ತು. ಐದು ಲಕ್ಷ ಹಣ ಕೂಡಿತ್ತು. ಅದರಲ್ಲಿ ನಾನು ಕೂಡಿಸಿದುದೇ ಅರ್ಧ ಲಕ್ಷವಿತ್ತು," ಎಂದು ಅವರ ಯೋಜನೆ, ಅಲ್ಲ–ಯೋಚನೆ ಬೆಂಬಲಿಸಿದೆ. ಮಂತ್ರಿಗಳೂ ತಮ್ಮ 'ಪ್ರಾರಂಭೋತ್ಸವ' ಭಾಷಣದಲ್ಲಿ ಘೋಷಿಸಿಬಿಟ್ಟರು: "ನನ್ನಲ್ಲಿ ಎರಡೂವರೆ ಲಕ್ಷ ಹಣವಿದೆ; ಇಷ್ಟೇ ಭಾರತ ಸರಕಾರದಿಂದ ದೊರೆವ ಸಾಧ್ಯತೆಯಿದೆ; ಸಿದ್ಧಯ್ಯ ಪುರಾಣಿಕರು ದಾನಿಗಳಿಂದ ಐದು ಲಕ್ಷ ಕೂಡಿಸಿ ಕೊಡುವುದಾಗಿ ಒಪ್ಪಿದ್ದಾರೆ. ಆದುದರಿಂದ ಇಲ್ಲಿ ಒಂದು ಮಕ್ಕಳ ವಸ್ತು ಸಂಗ್ರಹಾಲಯ ಸ್ಥಾಪಿಸಿಯೇ ಬಿಡುವೆನು!" ಆಗ ಕರತಾಡನ; ಮರುದಿನ ಪತ್ರಿಕೆಗಳಲ್ಲಿ ದಪ್ಪಕ್ಷರಗಳ ತಲೆಕಟ್ಟಿನೊಡನೆ ಈ ಸುದ್ದಿಯ ಪ್ರಕಟನೆ. ಅದನ್ನೋದಿ ನನ್ನ ಹೆಂಡತಿ ಹೌಹಾರಿದಳು. "ನಿಮಗೇನು ಹುಚ್ಚು ನಾಯಿ ಕಡಿದಿದೆಯೆ? ಎಲ್ಲಿಂದ ಐದು ಲಕ್ಷ ರೂಪಾಯಿ ಕೂಡಿಸುವಿರಿ?" ಎಂದು ಕೇಳಿದಳು. "ಸುಮ್ಮನಿರೆ, ಅವರು ಸುದ್ದಿಗಾಗಿಯೇ ಹೇಳಿದುದು. ಸುದ್ದಿ ಬಂದು ಬಿಟ್ಟಿತು; ಇನ್ನದರ ಸುದ್ದಿ ಎತ್ತಲಿಕ್ಕಿಲ್ಲ ಅವರು!" ಎಂದು ಸಮಾಧಾನ ಹೇಳಿದೆ. ಅದು ಅಂತೆಯೇ ಆಯಿತು. ಆಮೇಲೆ ಅನೇಕ ಸಲ ಕಂಡೆ ಆ ಮಂತ್ರಿ ಮಹೋದಯರನ್ನು. ಅವರೂ ಆ ಸುದ್ದಿ ತೆಗೆಯಲಿಲ್ಲ, ನಾನೂ ಅದರ ತಂಟೆಗೆ ಹೋಗಲಿಲ್ಲ. ಈ ದೇಶದಲ್ಲಿ ಅತಿ ಮುಖ್ಯವಾದುದು ಸುದ್ದಿ, ಪ್ರಸಿದ್ಧಿ–ಕಾರ್ಯ ಸಿದ್ಧಿಯಲ್ಲ!

ರಾಷ್ಟ್ರೀಯ ವಿಸ್ತರಣ ಯೋಜನೆಯ ಚೌಕಟ್ಟಿನಲ್ಲಿ ಕೆಲಸ ಮಾಡುವುದು ಕಠಿಣವಾಗುತ್ತ ಹೋದಂತೆ ಕೆಲಸ ಮಾಡಿಯೇ ತೀರಬೇಕೆಂಬ ನನ್ನ ಛಲವೂ ಹೆಚ್ಚುತ್ತ ಹೋಯಿತು. ಮೇಲಿನಿಂದ ಬಂದ ಯೋಜನಾಬದ್ಧ ಆಯವ್ಯಯ ಪತ್ರಿಕೆ (Schematic budget)ಯನ್ನು ಅಕ್ಷರಶಃ ಪಾಲಿಸದೆ ಯಾವ ಕ್ಷೇತ್ರದಲ್ಲಿ ಜನರ ಬೇಡಿಕೆ ಯಾವುದಕ್ಕೆ ಹೆಚ್ಚಿದ್ದಿತೋ ಅದಕ್ಕೇ ಆದ್ಯತೆ ಕೊಡತೊಡಗಿದೆ. ಇದಕ್ಕೆ ಕ್ಷೇತ್ರ ಸಲಹಾ ಸಮಿತಿಯ ಸಮ್ಮತಿಯೂ ಇದ್ದಿತು. ಚಿಂಚೋಲ ಕ್ಷೇತ್ರದಲ್ಲಿ ಕುಡಿಯುವ ನೀರಿನ ಭಾವಿಗಳಿಗೆ ಹೆಚ್ಚು ಬೇಡಿಕೆಯಿದ್ದುದರಿಂದ ಅಲ್ಲಿ ಅವುಗಳನ್ನೇ ಹೆಚ್ಚಾಗಿ ಪ್ರಾರಂಭಿಸಿದೆ; ಯಾದಗಿರಿ ಕ್ಷೇತ್ರದಲ್ಲಿ ಒಡೆದು ಹೋದ ಕೆರೆಗಳ ದುರಸ್ತಿಗೆ, ಹೊಸ ಸಣ್ಣ ನೀರಾವರಿ ಕಾಮಗಾರಿಗಳಿಗೆ ಹೆಚ್ಚಿನ ಬೇಡಿಕೆಯಿದ್ದುದರಿಂದ ಆಗಿನ ಈ. ಈ. ಕೆ. ಬಸಣ್ಣನವರ ಸಹಕಾರದೊಡನೆ ಆರುವತ್ತು–ಎಪ್ಪತ್ತು ವರ್ಷಗಳ ಹಿಂದೆ ಒಡೆದಿದ್ದ ನೂರಾರು ಕೆರೆಗಳ ದುರಸ್ತಿ ಕಾರ್ಯ ಕೈಕೊಂಡೆ; ಶಹಾಪುರ ಕ್ಷೇತ್ರಗಳ ಶಾಲಾ ಭವನಗಳಿಗೆ ಒತ್ತಾಯ ಹೆಚ್ಚಿದ್ದುದರಿಂದ ಅಲ್ಲಿ ಆ ಕಾರ್ಯಗಳನ್ನೇ ಹೆಚ್ಚಾಗಿ ಕೈಗೆತ್ತಿಕೊಂಡೆ. ಇದು ದೊಡ್ಡ ಅನಾಹುತವಾಗಿ ತೋರಿತು ಮೇಲಿನವರಿಗೆ, "ಒಂದು ಕೆಲಸಕ್ಕೆಂದು ನಿಗದಿಯಾಗಿದ್ದ ಹಣವನ್ನು ಇನ್ನೊಂದು ಕೆಲಸಕ್ಕೆ ಯಾರ ಅನುಮತಿ ಪಡೆದು ಉಪಯೋಗಿಸಿದೆ?" ಎಂದು ನನ್ನನ್ನು ಕೇಳಿದರು. "ನನ್ನ ಕ್ಷೇತ್ರೀಯ ಸಲಹಾ ಸಮಿತಿಯೇ ನನ್ನ ಶಾಸನ ಸಭೆ, ಅದರ ಅನುಮತಿ ಪಡೆದು ಮಾಡಿದ್ದೇನೆ," ಎಂದು ಉತ್ತರವಿತ್ತೆ, ಯಾದಗಿರಿಯಲ್ಲಿ ಹಸಗಳಿಗಾಗಿ ಕೃತ್ರಿಮ ಗರ್ಭದಾನ ಕೇಂದ್ರವೊಂದನ್ನು ತೆರೆದೆ. ಅಕೌಟಂಟ್ ಜನರಲ್‌ರ ಆಫೀಸಿನಿಂದ ಒಂದು ಆಕ್ಷೇಪ ಬಂದಿತು. "ಅಲ್ಲಿ ಇದರ ಅಗತ್ಯವಿತ್ತೆ?" ಎಂದವರು ಕೇಳಿದ್ದರು. "ಇದಕ್ಕೆ ನೀನೇನು ಹೇಳುವಿ?" ಎಂದು ಮೇಲಿನವರು ಕೇಳಿದರು. "ಅಗತ್ಯ ಅನಗತ್ಯಗಳನ್ನು ನಿರ್ಣಯಿಸುವುದು ಸರಕಾರದ ಹೊಣೆಗಾರಿಕೆ; ಎ.ಜಿ. ತನ್ನ ಕೆಲಸ ಮಾತ್ರ ಗಮನಿಸಲಿ!" ಎಂದು ಹೇಳಿರಿ ಅವರಿಗೆ–ಎಂದು ಉತ್ತರವಿತ್ತೆ.

ಯಾವುದಕ್ಕೂ ಇಂಥ ಎಟ್ಟಿ ಉತ್ತರಗಳನ್ನೇ ಕೊಡುವ ಇವನನ್ನು ಹೇಗಾದರೂ 'ಬಲೆಗೆ ಹಾಕಬೇಕು,' ಎಂದು ಸಂಚು ನಡೆಯಿತು. ಲೆಕ್ಕಪತ್ರಗಳ ಆಡಿಟ್ ನಡೆಯಿತು. ಯಾವ ತಪ್ಪೂ ಸಿಕ್ಕಲಿಲ್ಲ. ಎಲ್ಲ ಕಡೆಗಳಲ್ಲಿಯೂ ಹಾಕಿದ ಹಣಕ್ಕಿಂತ ಹೆಚ್ಚಿನ ಕೆಲಸವೇ ಆಗಿದ್ದಿತು; ಚೊಕ್ಕಟವಾಗಿ ಆಗಿದ್ದಿತು. ಆದರೆ ಒಂದು ಸಣ್ಣ ತಪ್ಪು ಸಿಕ್ಕಿತು. ಅದು ನನ್ನ ತಪ್ಪೂ ಅಲ್ಲ, ಹೊಸ ಮೈಸೂರು ಸರಕಾರದ ನಿಯಾಮಾವಳಿಗನು–ಸಾರವಾಗಿ ಅದು ತಪ್ಪೆಂಬುದನ್ನು ನನಗೆ ಸಕಾಲಕ್ಕೆ ತಿಳಿಸಿದ ಮೇಲಿನವರ ತಪ್ಪು. ಮೊದಲಿನ ಹೈದರಾಬಾದು ಸರಕಾರವು ಕೈಕೊಂಡು ಕಾರ್ಯಗಳು ಸುಗುಮವಾಗಿ ಸಾಗಲೆಂದು ಪ್ರತಿಯೊಂದು ಕಾರ್ಯದ ವೆಚ್ಚದ ಸ್ವಲ್ಪ ಭಾಗವನ್ನು ಮುಂಗಡವಾಗಿ



ತರಿಸಿ ಜೋಡು ಬೀಗದ ವ್ಯವಸ್ಥೆಯಲ್ಲಿ ಸರಕಾರೀ ಟ್ರೆಜರಿಯಲ್ಲಿ ಇಟ್ಟುಕೊಳ್ಳಲು ಅನುಮತಿ ನೀಡಿದ್ದಿತು. ಹಣಕಾಸಿನ ವರ್ಷ ಮುಗಿದ ಮೇಲೂ ಹಾಗೆ ಇರಿಸಿಕೊಂಡ ಹಣವನ್ನು ಮುಂದುವರಿಸಿಕೊಂಡು ಹೋಗಬಹುದಾಗಿದ್ದಿತು. ಆ ಪ್ರಕಾರ ಮುಂಗಡವಾಗಿ ಪಡೆದು ಇರಿಸಿಕೊಂಡಿದ್ದ 35 ಸಾವಿರ ರೂಪಾಯಿಗಳು 1–11–1956ಕ್ಕೆ ಟ್ರೆಜರಿಯಲಿದ್ದುವು. ಹೊಸ ಸರಕಾರದ ಯಾವ ಕಾನೂನು ಕಟ್ಟಳೆಗಳ ಪುಸ್ತಕದ ಸರಬರಾಜೂ ಆಗಿರಲಿಲ್ಲ, ಗೆಜೆಟ್ ಪ್ರತಿ ಬರಲಿಕ್ಕೆ ಮೂರು ತಿಂಗಳು ಕಾಯಬೇಕಾಯಿತು. ಅರಿಯದೆ ಉಳಿಸಿಕೊಂಡ ಆ ಹಣದ ಬಗ್ಗೆ ಬೊಬ್ಬಾಟವನ್ನೇ ಎಬ್ಬಿಸಿಬಿಟ್ಟರು ಬೃಹಸ್ಪತಿಗಳು. ಅದನ್ನು ಪಬ್ಲಿಕ್ ಅಕೌಂಟ್ಸ್ ಕಮೀಟಿಯ ಮುಂದೆಯೂ ತಂದು ನನಗೆ 'ವಾರ್ನಿಂಗ್' ಕೊಡಿಸಿದರು. ಇದೂ, ನನ್ನ ಸೀನಿಮಾರಿಟಿಯ ಬಗ್ಗೆ ನಡೆದ ವಾದವಿವಾದಗಳೂ ನನಗೆ ಬೇಗ ಐ.ಎ.ಎಸ್. ದೊರೆಯದಂತೆ ಮಾಡುವ ಕುಟಿಲ ಕಾರಸ್ಥಾನದ ಅಂಗಗಳಾಗಿದ್ದುವೆಂದು ನನಗೆ ಆಮೇಲೆ ಗೊತ್ತಾಯಿತು! ಎಂಥ ಘಾತುಕರ ಕೈಕೆಳಗೆ ಕೆಲಸ ಮಾಡಬೇಕಾಯಿತಲ್ಲ ಎಂದು ನಾನೂ ಮೊದಲ ಸಲ ಬೆದರಿದೆ!

## ಜನೋಪಕಾರಿ ಕೆಲಸಗಳು :

ನಾನಿನ್ನೂ ಹೈದರಾಬಾದು ಸರಕಾರದ ಸೇವೆಯಲ್ಲಿದ್ದಾಗಲೇ ಕೃಷ್ಣಾ ಮೇಲ್ದಂಡೆ ಯೋಜನೆ ಬೇಗ ಬರಲೆಂದು ಕೈಲಾದ ಪ್ರಯತ್ನ ಮಾಡಿದ್ದೆ; ಪ್ರಜಾಮತ ಪತ್ರಿಕೆಯಲ್ಲಿ ಲೇಖನ ಪ್ರಕಟಿಸಿದ್ದೆ; ಸುರಪುರದಲ್ಲಿ ಅದಕ್ಕಾಗಿ ಒಂದು ಸಮ್ಮೇಳನವನ್ನೇ ಕರೆದಿದ್ದೆ. ಅದಕ್ಕೆ ಕಲಬುರಗಿ, ರಾಯ್ಚೂರು, ವಿಜಾಪುರ ಜಿಲ್ಲೆಗಳ ಪ್ರಮುಖರು ಬಂದಿದ್ದರು. ನಿಜಲಿಂಗಪ್ಪನವರಿಂದಲೇ ಅದರ ಉದ್ಘಾಟನೆ ಮಾಡಿಸಿದ್ದೆ. ಅದು ಮುಗಿದುದನ್ನು ನೋಡುವಾಸೆ ಇಂದಿಗೂ ನನ್ನನ್ನು ಬಿಟ್ಟಿಲ್ಲ. ಒಮ್ಮೆ ನಮ್ಮ ಹೊಸ ಅಸಿಸ್ಟಂಟ್ ಇಂಜಿನಿಯರರಿಗೆ ಅದನ್ನು ತೋರಿಸಲು ಹೋದೆ. ಅವರ ಮತ್ತು ನನ್ನ ಪತ್ನಿ ಪುತ್ರ ಪುತ್ರಿಯರು ಸಂಗಡ ಇದ್ದರು. ಛಾಯಾ ಭಗವತಿಗೆ ನಮಸ್ಕರಿಸಿ ಹಿಂದಿರುಗಿ ಹೊರಟಾಗ ಸಂಜೆಯಾಗಿದ್ದಿತು. ಹುಣಸ್ಗಿಯ ಬದಿಯ ಹಳ್ಳದಲ್ಲಿ ಸಣ್ಣಗೆ ನೀರು ಹರಿಯುತ್ತಿತ್ತು. ಸಣ್ಣಹಳ್ಳ, ದಾಟಬಿಡಬಹುದೆಂದು ಇಬ್ಬರೂ ಜೀಪು ಬಿಟ್ಟೆವು. ನಮ್ಮ ಜೀಪು ಅದೆಂತೋ ಆಶ್ಚರ್ಯಕರ ರೀತಿಯಲ್ಲಿ ಹಳ್ಳ ದಾಟಿತು; ಏ.ಇ. ಅವರ ಜೀಪು ನೀರು ಹೊಕ್ಕು ನಿಂತು ಬಿಡಲು ಅವರೆಲ್ಲ ಅದನ್ನು ಅಲ್ಲಿಯೇ ಬಿಟ್ಟು ಓಡಿ ಬಂದರು. ಅದು ನೀರಿನೊಡನೆ ಹರಿದು ಹೋಗಿ ಹತ್ತು ಮೈಲಿಗಳಾಚೆ ಅರ್ಧ ಮರಳಲ್ಲಿ ಹೂತ ಸ್ಥಿತಿಯಲ್ಲಿ ಸಿಕ್ಕಿತು–ಮಾರನೆಯ ದಿನ! ಅಂತೂ ಅದೃಶ್ಯ ಶಕ್ತಿಯ ಅನುಗ್ರಹದಿಂದ ಮತ್ತೊಮ್ಮೆ ಮೃತ್ಯುವಿನಿಂದ ಪಾರಾಗಿದ್ದೆವು ಎಲ್ಲರೂ!

ಶ್ರೀ ಕೊಂಡಾ ನಾರಾಯಣಪ್ಪನವರು ಎಂ.ಎಲ್.ಸಿ. ಒಂದು ಹೆದ್ದಾರಿಗೆ ಹೊಂದಿದ ಹಳ್ಳಿಯಲ್ಲಿ ತಮ್ಮ ತೋಟವನ್ನೇ ಯಾದಗಿರಿ ವಿಕಾಸ ಕ್ಷೇತ್ರಕ್ಕೆ ದಾನವಾಗಿ ಕೊಟ್ಟರು. ಅದರಲ್ಲಿ ಒಂದು ಮನೆ. ಒಂದು ಭಾವಿ, ಸಾಕಷ್ಟು ಭೂಮಿ ಇದ್ದುವು. ಆ ಮನೆಯನ್ನೂ ಸುಧಾರಿಸಿದ ಬೀಜಗಳ, ರಾಸಾಯನಿಕ ಗೊಬ್ಬರಗಳ, ಕ್ರಿಮಿನಾಶಕ ಔಷಧಗಳ, ವ್ಯವಸಾಯೋಪಕರಣಗಳ ಉಗ್ರಾಣವನ್ನಾಗಿ ಪರಿವರ್ತಿಸಿದೆ; ಆ ಭಾವಿಯ ನೀರಿನಿಂದ ಸುತ್ತಲಿನ ಭೂಮಿಯಲ್ಲಿ ದೊಡ್ಡದೊಂದು ನರ್ಸರಿ ಪ್ರಾರಂಭಿಸಿದೆ. ಅಲ್ಲಿಂದ ಉಚಿತವಾಗಿ ಹಣ್ಣಿನ ಮರಗಳ, ಸಂಕರ ಹುಲ್ಲುಗಳ, ಬಗೆಬಗೆಯ ತರಕಾರಿಗಳ, ಹೂವಿನ ಬಳ್ಳಿಗಳ ಸಸಿಗಳನ್ನೂ, ಕಂಟಿಂಗುಗಳನ್ನೂ ರೈತರಿಗೆ ಪುಕ್ಕಟೆಯಾಗಿ ಒದಗಿಸುವ ವ್ಯವಸ್ಥೆ ಮಾಡಿದೆ. ಮುಂದೆ ಒಂದು ಸುಂದರ ವರ್ತುಳ, ಮಧ್ಯದಲ್ಲಿ ಆಶೋಕಸ್ತಂಭ, ಬಸ್‌ಸ್ಟ್ಯಾಂಡ್–ಏನೇನೋ ಕಟ್ಟಿ ನಿಲ್ಲಿಸಿದೆ. ಆ ಗ್ರಾಮವನ್ನು ಹೊರಗಿನಿಂದ ನೋಡುವವರು, 'ಎಂಥ ಮಾದರಿ ಗ್ರಾಮ!' ಎಂದು ಉದ್ಗಾರ ತೆಗೆಯುತ್ತಿದ್ದರು. ಆದರೆ ಊರೊಳಗೆ ಹೋಗಿ ನೋಡಿದಾಗ ಅಸಹ್ಯವೆನಿಸುತ್ತಿತ್ತು, ಅಷ್ಟು ಹೊಲಸಾಗಿತ್ತು ಆ ಊರು. ಏನು ಮಾಡಿದರೂ ಅವರು ಸ್ವಚ್ಛತೆಯ ಪಾಠ ಕಲಿಯಲಿಲ್ಲ. "ಸ್ವಚ್ಛ ಭಾರತ ಸಪ್ತಾಹ" ಬಂದಿತು. ಅಲ್ಲಿಯ ಗ್ರಾಮಸೇವಕನನ್ನು ಕರೆದು "ಮೊದಲ ದಿನ ನೀನೇ ಪೊರಕೆ ಹಿಡಿದು–ಮುಂದಾಗು–ಯಾರೇ ಬರಲಿ, ಬಿಡಲಿ–ಒಮ್ಮೆ ಆ ಊರನ್ನು ಸ್ವಚ್ಛಗೊಳಿಸಿಬಿಡು–ಆಗಲಾದರೂ ಅವರ ಹೃದಯ ಪರಿವರ್ತನೆಯಾದೀತು," ಎಂದು ಹೇಳಿ ಕಳಿಸಿದೆ. ಪಾಪ, ಒಬ್ಬನೇ ಆ ದಿನ ಊರನ್ನೆಲ್ಲ ಗುಡಿಸಿದ ಆ ಬಡಪಾಯಿ. ಒಂದು ವಾರ ಕಳೆದ ಮೇಲೆ ಆ ಊರಿನಿಂದ ಒಂದು ಕಾರ್ಡು ಬಂದಿತು ನನಗೆ: "ಸಾಹೇಬರೆ, ಈ ವಾರ ನಿಮ್ಮ ಗ್ರಾಮಸೇವಕ ನಮ್ಮೂರಿನ ಕಸವನ್ನೇ ಗುಡಿಸಿಲ್ಲ; ಅವನಿಗೆ ಹೇಳಿ ಹೊಡೆಸಿಕೊಡಿರಿ!" ಕಾರ್ಡು ಓದಿ ತಲೆ ಹಿಡಿದುಕೊಂಡೆ! "ಈ ಊಡದ ಆವಿಗೆ ಒಲ್ಲದ ಕರುವನ್ನು ಬಿಡುವ ಕೆಲಸ ಎಷ್ಟು ದಿನ ಸಾಗೀತು? ಸುಮ್ಮನೆ ಅವರ ಹೊಲಗಳು ಹೆಚ್ಚು ಬೆಳೆಯುವಂತೆ ಮಾಡಿ, ಬಿಡುವಿನ ಸಮಯದಲ್ಲಿ ಅವರ ಕೈಗಳು ಏನನ್ನಾದರೂ ಉತ್ಪಾದಿಸುವಂತೆ ಮಾಡಿ ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಬಿಡಬಾರದೆ? ಆಗ ಅವರೇ ತಮ್ಮ ಸೌಕರ್ಯಗಳನ್ನು ಸೃಷ್ಟಿಸಿಕೊಳ್ಳುವರು. ಕುದುರೆಯ ಮುಂದೆ ಜಟಕಾ ನಿಲ್ಲಿಸುವ ಈ ಹುಚ್ಚು ಯಾವಾಗ ಹೋಗುವುದೋ" ಎಂದುಕೊಂಡೆ. ಯಾದಗಿರಿ ಬ್ಲಾಕಿನಲ್ಲಿ ಬಹಳ ಕೆಲಸವಾಗಿದೆಯೆಂಬ ಕೀರ್ತಿ ಹೈದರಾಬಾದಿನವರೆಗೂ ಹರಡಿದುದರ ಪರಿಣಾಮವಾಗಿ ಒಂದು ಐ.ಎ.ಎಸ್. ಪ್ರೊಬೇಷನರರ ಗುಂಪು, ಹಾಗೂ ಒಂದು ಸಮಾಜ ಶಿಕ್ಷಣಾಧಿಕಾರಿಗಳ ದೊಡ್ಡಗುಂಪು ತರಬೇತಿಗಾಗಿ ಅಲ್ಲಿಗೆ ಬಂದುವು.



ಅವರ ಆರಭಾರ ನಿಜವಾಗಿ ಅವರ ಆರವಾರಗಳ ಸರಮಾಲೆಯಾಗಿ ಪರಿಣಮಿಸಿತು. ಶೀಲಸಭ್ಯತೆಗೇಸೋ ಸೊನ್ನೆ! ಅವರನ್ನು ನೋಡಿ, ಅವರೊಡನೆ ಒಡನಾಡಿದ ಮೇಲಂತೂ ಸಂಪೂರ್ಣ ಭ್ರಮನಿರಸನವಾಯಿತು ನನಗೆ.

ಒಂದು ನೇಕಾರರ ಸಹಕಾರ ಸಂಘ. ಮೂರು ನೂರಕ್ಕೂ ಹೆಚ್ಚು ನೇಕಾರರ ಕುಟುಂಬಗಳಿಗೆ ಕಾಮಧೇನು ಕಲ್ಪವೃಕ್ಷವಾಗಿದ್ದಿತೆಂದು ಅವರ ಬಗ್ಗೆ ಜನಜನಿತವಾದ ಅಭಿಪ್ರಾಯ. ಮೇಲಿನವರ ಅಭಿಪ್ರಾಯ ಇನ್ನೂ ಉನ್ನತವಾದುದಾಗಿದ್ದಿತು. ಸಹಕಾರ ರಂಗದ ಸಾಧನೆಗಳಲ್ಲಿ ಅದೊಂದು–ಎಂದು ಆಗಾಗ ಅದನ್ನು ಸಹಕಾರ ಇಲಾಖೆಯ ವರದಿಗಳಲ್ಲಿ ಉಲ್ಲೇಖಿಸಲಾಗುತ್ತಿದ್ದಿತು. ನಾನು ಮೊದಲು ಅದೇ ಅಭಿಪ್ರಾಯದವ–ನಾಗಿದ್ದೆ. ಆದರೆ ಅದರ ಕಾರ್ಯದರ್ಶಿ ಕಾರಿನಲ್ಲಿ ತಿರುಗುತ್ತಿದ್ದುದನ್ನೂ, ನೀರಿನಂತೆ ಪೆಟ್ರೋಲ್ ಬಳಸುತ್ತಿದ್ದುದನ್ನೂ ನೋಡಿ, ಅವನಿಗೆ ಬೇರಾವ ಆದಾಯ ಮೂಲಗಳು ಇಲ್ಲದಿದ್ದುದನ್ನೂ ಮನವರಿಕೆ ಮಾಡಿಕೊಂಡು 'ಕುಛ್ ದಾಲ್ ಮೇಂ ಕಾಲಾ ಹೋನಾ ಚಾಹಿಯೆ!' ಎಂದು ಉದ್ಗರಿಸಿದ್ದೆ. ಸಹಕಾರಮಂತ್ರಿಗಳೋ, ರಿಜಿಸ್ಟ್ರಾರರೋ ಬಂದರೆ ಆ ಸಂಘದಿಂದ ಅದ್ದೂರಿಯ ಸ್ವಾಗತ, ರಾಜಾನ್ನದ ಮೇಜವಾನಿ! ಬಹುಬೇಗ ಗುಟ್ಟು ರಟ್ಟಾಯಿತು. ನನಗೆ ಬಂದ ಒಂದು ಲಿಖಿತ ಆರೋಪದ ಆಧಾರದ ಮೇಲೆ ಅದರ ಕಾರ್ಯಾಲಯಕ್ಕೆ ಅನಿರೀಕ್ಷಿತ ಭೇಟಿ ನೀಡಿದೆ! ಅಲ್ಲಿ ನಾಲ್ಕಾರು ನೂಲಿನ ಲಡಿಗಳನ್ನುಳಿದು ಇನ್ನೇನೂ ಇರಲಿಲ್ಲ! ಆದರೆ ಕಾಗದದ ಮೇಲೆ ಯಾರೂ ನೆಯ್ಯದ ಸಾವಿರಾರೂ ಕಾಲ್ಪನಿಕ ಪಂಚೆಗಳ, ಸೀರೆಗಳ, ರವಿಕೆಗಳ ಇತರ ಬಟ್ಟೆಗಳ ಲೆಕ್ಕ ಅ.ಬ.ಕ.ಡ. ನೇಕಾರರ ಹೆಸರಿನಲ್ಲಿ; ಅವುಗಳ ಮಾರಾಟದ ವಿವರ ಕೂಡ ಕಖಗಘಜರ ಹೆಸರಿನಲ್ಲಿ! ಒಟ್ಟು ವ್ಯವಹಾರ ಲಕ್ಷಗಟ್ಟಳೆ; ಅದರ ಮೇಲೆ ಸಬ್ಸಿಡಿಯೇ ತಿಂಗಳಿಗೆ ಏಳೆಂಟು ಸಾವಿರ ರೂಪಾಯಿಗಳು! ಈ ಕಂತ್ರಿ ಲೆಕ್ಕ ತಯಾರಿಸಿದ್ದೇ ತಯಾರಿಸಿದ್ದು; ರೂಪಾಯಿಗೆ ಮೂರಾಣೆಯಂತೆ ಸಹಾಯ ಧನ ಪಡೆದದ್ದೇ ಪಡೆದದ್ದು; ಸದಸ್ಯರಿಗೆ ಬಿಡಿ ಕಾಸುಗಳನ್ನು ಬಿಸಾಡಿ ಬಾಯಿ ಮುಚ್ಚಿಸಿ, ಉಳಿದುದನ್ನು 'ಗಳಂ' ಎಂದು ನುಂಗಿದ್ದೇ ನುಂಗಿದ್ದು! ನಾನು ಕಾರ್ಯಾಲಯಕ್ಕೆ ಬೀಗ ಹಾಕಿ, ಮುದ್ರೆ ಜಡಿದು ತನಿಖೆಗೆ ಹಾಕಿದೆ. ತನಿಖೆಯಲ್ಲಿ ಇನ್ನೂ ಸ್ವಾರಸ್ಯಕರ ವಿಷಯಗಳು ಬೆಳಕಿಗೆ ಬಂದುವು!

## ವಿನೂತನ ರಾಮಾಯಣ :

ಇನ್ನೊಂದು ಹಳ್ಳಿ. ಅಲ್ಲಿ ಶ್ರೀಮಂತ ದೇವಾಲಯವೊಂದು. ಅದಕ್ಕೊಂದು ದೇವಾಲಯದ ಸಮಿತಿ. ಅದರ ಅಧ್ಯಕ್ಷ ದೇವಾಲಯದ ಆಭರಣಗಳನ್ನೆಲ್ಲ

ಅಪಹರಿಸಿರುವನೆಂಬ ದೂರು ಬಂದಿತು. ಹೇಳದೆ ಕೇಳದೆ ಅವನ ಮನೆಯ ಮೇಲೆ ದಾಳಿ ಮಾಡಿದೆ. ಆಭರಣಗಳೆಲ್ಲ ಹೊರಬಿದ್ದುವು. ಅಂದಿನಿಂದ ಆ ಆಭರಣಗಳು ತಹಸೀಲ್ದಾರರ ತಾಬಾದಲ್ಲಿರುವಂತೆ ಮಾಡಿದೆ; ಆ ಸಮಿತಿಯನ್ನು ಪುನರ್ಘಟಿಸಿ ಪ್ರಾಮಾಣಿಕರನ್ನು ಅದರಲ್ಲಿ ಸೇರಿಸಿದೆ. ಇನ್ನೊಬ್ಬ ಸರಪಂಚ ಪಂಚಾಯಿತಿ ಹಣದಿಂದ ಕೊಂಡ ರೇಡಿಯೋ ಅನ್ನು ತನ್ನ ಮನೆಯಲ್ಲಿರಿಸಿಕೊಂಡು 'ಮಜಾ' ಮಾಡುತ್ತಿದ್ದ. ಅದನ್ನು ಕಸಿದು ಪಂಚಾಯತಿಯ ಕಾರ್ಯಾಲಯದಲ್ಲಿರಿಸಿ ಎಲ್ಲರೂ ಸಂಜೆ ಕೇಳುವಂತೆ ಮಾಡಿದೆ. ಪಂಚಾಯತಿಗಳ ಬಗ್ಗೆ ಬರೆಯುತ್ತಾ ಹೋದರೆ ಅದೊಂದು ವಿನೂತನ ರಾಮಾಯಣವೇ ಆದೀತು. ಪಂಚಾಯತಿಯ ಚಾಕರರನ್ನು ತಮ್ಮ ಹೊಲಗಳಲ್ಲಿ ದುಡಿಸಿಕೊಳ್ಳುತ್ತಲಿದ್ದ ಸರ ಪಂಚರಾರೋ, ಪಂಚಾಯತಿಯ ಕಾರ್ಯಲಯಕ್ಕೆ ತಮ್ಮ ಕೊಠಡಿಯನ್ನೇ ಕೊಟ್ಟು 'ಫ್ಯಾನ್ಸಿ' ಬಾಡಿಗೆ ಪಡೆಯುತ್ತಿದ್ದವರಾರೋ, ತಮ್ಮ ಮನೆಯ ಮುಂದೆ ಮಾತ್ರ ಪಂಚಾಯತಿಯ ವೆಚ್ಚದಲ್ಲಿ ದೀವಟಿಗೆ ಉರಿಸುತ್ತಿದ್ದವರಾರೋ, ಯಾವುದನ್ನು ಬರೆಯುವುದು, ಯಾವುದನ್ನು ಬಿಡುವುದು? ಇವುಗಳ ತನಿಖೆಗಾಗಿದ್ದ ಅಧಿಕಾರಿಗಳು ವರ್ಷಕ್ಕೊಮ್ಮೆ ಬಂದಾಗ ಅವರಿಗೆ ಭರ್ಜರಿ ಊಟ ಕೊಟ್ಟು ಒಂದು ಹಸಿರು ನೋಟು ಕೈಗಿಟ್ಟರಾಯಿತು!

ಬರಗಾಲ ಕಾಮಗಾರಿಗಳೆಂದು ಮುನ್ನೂರು ಮೈಲಿಗಳಿಗೂ ಹೆಚ್ಚು ದೂರದ ಹಳ್ಳಿಯ ರಸ್ತೆಗಳ ಕಾರ್ಯಕ್ರಮ ರೂಪಿಸಿ ಕಾರ್ಯಾರಂಭ ಮಾಡಿದೆ. ಇವುಗಳಲ್ಲಿ ಬಲಿಚಕ್ರ ಮಾರ್ಗವಾಗಿ ಸೈದಾಪುರ ತಲುಪುವ ರಸ್ತೆಗೇ ಒಂದೂವರೆ ಲಕ್ಷ ರೂಪಾಯಿಗಳು ವೆಚ್ಚವಾದುವು. ಅದರ ಮಂಜೂರಿ ದೊರಕಿಸಿದುದೊಂದು ಅದ್ಭುತ ಸಾಧನೆ. ಅದರ ವಿವರಗಳಿಗೆ ಎಡೆ ಇಲ್ಲ ಇಲ್ಲಿ. ಎಲ್ಲ ಕಡೆಗಳಲ್ಲಿಯೂ ರಸ್ತೆಗಳ ಕಾರ್ಯ ನಿರ್ವಿಘ್ನವಾಗಿ ನಡೆದುವು. ಎಲ್ಲಿಯೂ ಭೂಸ್ವಾಧೀನ ಕಾನೂನಿನ ಉಪಯೋಗವನ್ನೇ ಮಾಡಲಿಲ್ಲ. ಹೊಲಗಳ ಒಡೆಯರು ಸ್ವಸಂತೋಷದಿಂದಲೇ 'ರಾಜೀನಾಮೆ ಪತ್ರ' (ಭೂಮಿ ಬಿಟ್ಟು ಕೊಡುವ ಪತ್ರ) ಬರೆದು ಕೊಡುತ್ತಿದ್ದರು. ಒಬ್ಬ ಡೆಪ್ಯುಟಿ ಕಲೆಕ್ಟರು (ದುವ್ವಮ್ ಸಾಬ್) ಬಂದು ಬೇಡುವುದು ಹೆಚ್ಚೋ, ನಾವು ಕೊಡುವುದು ಹೆಚ್ಚೋ–ಎಂದಾ ಕೇಳಿದಾಕ್ಷಣ ಕೊಟ್ಟು ಬಿಡುತ್ತಿದ್ದರು ಭೂಮಿಯನ್ನು. ಆದರೆ ಒಂದೇ ಒಂದು ಕಡೆಗೆ ಒಂದು 'ಗರ್ದಿಗಮ್ಮತ್ತು' ನಡೆಯಿತು. ಸುರಪುರದಿಂದ ಕೆಂಭಾವಿಯವರೆಗಿನ ರಸ್ತೆ ನಾವು ಕೈಗೊಂಡಿದ್ದ ರಸ್ತೆಗಳಲ್ಲಿಯೇ ದೊಡ್ಡದು, ಯಾವ ರಸ್ತೆಗೂ ಗುತ್ತೇದಾರನನ್ನು ನಿಯಮಿಸಿರಲಿಲ್ಲ. ದಾರಿಯಲ್ಲಿ ಬರುವ ಪ್ರತಿಯೊಂದು ಹಳ್ಳಿಯಲ್ಲಿಯೂ ಒಂದೊಂದು 'ವಿಕಾಸ ಮಂಡಲಿ' ರಚಿಸಿದ್ದೆ.



ಆ ವಿಕಾಸ ಮಂಡಲಿಗಳು ತಂತಮ್ಮ ಹಳ್ಳಿಗಳ ಹದ್ದುಗಳೊಳಗೆ ಬರುವ ರಸ್ತೆಯ ಭಾಗವನ್ನು ನಿರ್ಮಿಸುತ್ತಿದ್ದುವು, ಕಾರ್ಯಗಳು ಎಂದಿಲ್ಲದ ವೇಗ–ಉತ್ಸಾಹಗಳೊಡನೆ ಸಾಗಿದ್ದುವು. ಸುರಪುರ–ಕೆಂಭಾವಿ ರಸ್ತೆಯಲ್ಲಿ ಮಾತ್ರ ಆ ಒಂದು ಗಮ್ಮತು ನಡೆಯಿತು, ಒಬ್ಬ ಹೊಲದೊಡೆಯ ರಸ್ತೆ ತನ್ನ ಹೊಲದಲ್ಲಿ ಹಾಯ್ದು ಹೋಗಲಿರುವುದು ತಿಳಿಯುತ್ತಲೆ ಒಂದು ಚಮತ್ಕಾರ ಮಾಡಿದ. ತನ್ನ ಹೊಲದಲ್ಲಿ ರಸ್ತೆ ಬರಲಿದ್ದ ಭಾಗದಲ್ಲಿ ರಾತ್ರೋ ರಾತ್ರಿ ಒಂದು ಸಣ್ಣ ಗುಡಿ ಕಟ್ಟಿ, ಅದರಲ್ಲಿ ಒಂದು ಗುಂಡುಕಲ್ಲನ್ನಿರಿಸಿ, ಅದಕ್ಕೆ ವಿಭೂತಿ ಕುಂಕುಮ ಹಚ್ಚಿ, ಹೂವೇರಿಸಿ ಬಿಟ್ಟಿದ್ದ. ಅಲ್ಲಿಯ ವಿಕಾಸ ಮಂಡಲದ ಅಧ್ಯಕ್ಷ ಓಡಿ ಬಂದ. ಪ್ರತ್ಯುಪಾಯ ಹೇಳಿ ಕಳಿಸಿಕೊಟ್ಟೆ. ಅಂದೇ ರಾತ್ರಿ ಇವರೂ ರಾತ್ರೋ ರಾತ್ರಿ ಆ ಗುಡಿಯನ್ನು ಇಲ್ಲಗೊಳಿಸಿ ಅವನ ಹೊಲದಲ್ಲಿ ರಸ್ತೆ ಮಾಡಿ ಬಿಟ್ಟರು. ಅವನು ಸುರಪುರಕ್ಕೆ ಓಡಿ ಹೋಗಿ ವಕೀಲರನ್ನು ವಿಚಾರಿಸಿದನಂತೆ. "ಅಲ್ಲಿ ಗುಡಿ ಇದ್ದುದಕ್ಕೆ ಆಧಾರವೇನಿದೆ? ಊರೆಲ್ಲ ಒಂದಾಗಿರುವಾಗ ಇತ್ತೆಂದು ನಿನ್ನ ಪರವಾಗಿ ಸಾಕ್ಷಿ ಹೇಳುವವರಾರು? ಮೇಲಾಗಿ, ರಸ್ತೆ ನಿರ್ಮಾಣ ಆಗಿ ಹೋಗಿದೆ, ತಡೆಯಾಜ್ಞೆಗೂ ಆಸ್ಪದವಿಲ್ಲ. ಸುಮ್ಮನೆ ಊರವರೆಲ್ಲರ ವೈರಿಯೆನಿಸಬೇಡ, ನೀನೂ ಆ ಕಾರ್ಯದಲ್ಲಿ ಸೇರಿಕೋ," ಎಂದವರು ಹೇಳಿ ಕಳಿಸಿದರಂತೆ. ಊರವರ ವಿಶ್ವಾಸ ಗಳಿಸಿಕೊಂಡರೆ ಯಾವ ಕಾರ್ಯವನ್ನಾದರೂ ಸುಲಭವಾಗಿ ಮಾಡಬಹುದು, ಯಾವ ವಿಘ್ನವನ್ನೂ ಲೀಲಾಜಾಲವಾಗಿ ನಿವಾರಿಸಬಹುದು. ಎಂಬುದಕ್ಕೆ ಜ್ವಲಂತ ಉದಾಹರಣೆ ಇದು.

**ಮಹಿಳಾ ಮಂಡಲ :**

ಯಾದಗಿರಿಯಲ್ಲಿ 'ಮಹಿಳಾ ಮಂಡಲ'ವೊಂದನ್ನು ಸ್ಥಾಪಿಸಲಾಯಿತು. ನನ್ನ ಹೆಂಡತಿಯೇ ಅದಕ್ಕೆ ಅಧ್ಯಕ್ಷಳು. ಅದು ಒಂದು ಶಿಶುವಿಹಾರವನ್ನೂ, ಹೊಲಿಗೆ ತರಗತಿಗಳನ್ನೂ ನಡೆಸುತ್ತಿದ್ದಿತು; ವಾರಕ್ಕೊಮ್ಮೆ ಮಹಿಳೆಯರ ಸಭೆ ಸೇರಿ ಮಹಿಳೆಯರಿಗೆ ಉಪಯುಕ್ತ ವಿಷಯಗಳ ಬಗ್ಗೆ ಉಪನ್ಯಾಸಗಳು ನಡೆಯುತ್ತಿದ್ದುವು. ರಾಜ್ಯ ಪುನರ್‍ರಚನೆ ಸ್ವಲ್ಪ ಮೊದಲು ಡಾ॥ ಚೆನ್ನಾರೆಡ್ಡಿಯವರು ಅಲ್ಲಿಗೆ ಬಂದಾಗ ಅವರಿಂದ ಹತ್ತು ಸಾವಿರ ರೂಪಾಯಿಗಳ ಅನುದಾನ ಪಡೆಯಲಾಗಿದ್ದಿತು. ಮುಂದೆ ಮಹಿಳೆಯರೇ ನಿಧಿ ಸಂಗ್ರಹಿಸಿ ಅದಕ್ಕೊಂದು ಸ್ವಂತ ಕಟ್ಟಡ ಕಟ್ಟಿಸಿಬಿಟ್ಟರು. ನನ್ನ ಹೆಂಡತಿಗೆ ತಾನು ಅಧ್ಯಕ್ಷಳಾದುದು ಸಾರ್ಥಕವಾಯಿತೆಂಬ ಸಂತೋಷ; ನನಗೆ ನನ್ನ ಕಾರ್ಯದಲ್ಲಿ ತನ್ನ ಹೆಂಡತಿಯೂ ಕೈಗೂಡದಿಳೆಂಬ ಸಂತೋಷ. ಅಲ್ಲಿ ನೇತ್ರದಾನಿ ಡಾ॥ ಎಂ.ಸಿ. ಮೋದಿಯವರ ಉಚಿತ ನೇತ್ರ ಪರೀಕ್ಷಾ–ಚಿಕಿತ್ಸಾ ಶಿಬಿರ ಏರ್ಪಡಲು ಆಗ ಈ ಮಹಿಳಾ ಸಂಘದ ಸದಸ್ಯೆಯರು ತುಂಬಾ ನೆರವಾದರು.

ಊರವರಂತೂ ಬಂದವರೆಲ್ಲರಿಗೆ ಉಚಿತ ಭೋಜನ ವ್ಯವಸ್ಥೆ ಮಾಡಿದರು. ಬಹಳ ಯಶಸ್ವಿಯಾಗಿ ನಡೆಯಿತು ಶಿಬಿರ, ಡಾ॥ ಮೋದಿಯವರು ಪವಾಡ ಪುರುಷರಾಗಿ ತೋರಿದರು ಅಲ್ಲಿಯವರಿಗೆ. ಮುಂದೆ ಬೇರೆ ಕಡೆಗಳಲ್ಲಿಯೂ ಅವರ ಶಿಬಿರಗಳೊಡನೆ ನನಗೆ ಸಂಬಂಧವುಂಟಾಯಿತು. ಆದರೆ ಯಾದಗಿರಿ ಶಿಬಿರ ಸ್ಮರಣಾರ್ಹ. ಇದು ಡಾ॥ ಮೋದಿಯವರ ಅಭಿಪ್ರಾಯ ಕೂಡ.

**ಹರಿಜನರಿಗಾಗಿ :**

ಹರಿಜನರಿಗಾಗಿ ಏನನ್ನಾದರೂ ಪ್ರತ್ಯೇಕವಾಗಿ ಮಾಡಬೇಕೆಂಬ ನನ್ನ ಹಂಬಲ ಒಂದು ಹೊಸ ಪ್ರಯೋಗದಲ್ಲಿ ಸಫಲತೆಯನ್ನು ಪಡೆದುಕೊಂಡಿತು. ಕೈಯಲ್ಲಿ ಬಿಡಿ ಕಾಸೂ ಇಲ್ಲದೆ ಅವರಿಗೆ ಸಾಧ್ಯವಿರುವೆಡೆಗಳಲ್ಲಿ ಮನೆಗಳನ್ನು ಕಟ್ಟಿಸಿ ಕೊಡುವ ಕಾರ್ಯ ಕೈಕೊಂಡೆ. ಅವರಿಗೆ ಪಂಚಾಯತಿಗೆ ಸೇರಿದ ಭೂಮಿಯಲ್ಲಿ ಉಚಿತ ನಿವೇಶನಗಳನ್ನು ಕೊಡುವುದು ಮೊದಲನೆಯ ಹೆಜ್ಜೆ; ಅಲ್ಲಿ ಮನೆಗಳ 'ಮಾರ್ಕ್‌ಔಟ್' ಕೊಡಿಸಿ ಶ್ರಮದಾನದ ಮೂಲಕ ಅವುಗಳ ಬುನಾದಿ ತೋಡಿ ತುಂಬಿ ನೆಲಗಟ್ಟಿನವರಿಗೆ ಕೆಲಸ ಮುಗಿಸುವುದು ಎರಡನೆಯ ಹೆಜ್ಜೆ; ಒಡ್ಡರು ಉಚಿತವಾಗಿ ಒಡೆದು ಕೊಟ್ಟ ಕಲ್ಲುಗಳನ್ನು ರೈತರು ಉಚಿತವಾಗಿ ಕೊಟ್ಟ ಬಂಡಿಗಳಲ್ಲಿ ತಂದು ಉಪ್ಪಾರದಿಂದ ಉಚಿತವಾಗಿ ಗೋಡೆಗಳನ್ನು ಕಟ್ಟಿಸುವುದು ಮೂರನೆಯ ಮಜಲು; ಉಳ್ಳವರು ಉಚಿತವಾಗಿ ಇತ್ತ ಮರಗಳನ್ನು ಕಡಿದು ಬಡಿಗರು ಉಚಿತವಾಗಿ ಕೆತ್ತಿಕೊಟ್ಟ ಕಿಟಕಿ ಬಾಗಿಲ, ತೊಲೆ ಜಂತಿಗಳನ್ನು ಜೋಡಿಸುವುದು ನಾಲ್ಕನೆಯ ಹಂತ; ಹರಿಜನರೇ 'ಮೇಲು ಮುದ್ದಿ' ಹಾಕಿ ಮಾಳಿಗೆ ಮುಗಿಸಿಕೊಳ್ಳುವುದು ಕೊನೆಯ ಹಂತ. ಹತ್ತಿಗುಡೂರಿನಲ್ಲಿ ಶ್ರೀ ಸಾಹು ಶಿವಣ್ಣನವರ ಸಕ್ರಿಯ ಸಹಕಾರದೊಡನೆ ಅತ್ಯಂತ ಯಶಸ್ವಿಯಾಗಿ ಪೂರ್ಣಗೊಂಡ ಈ ಪ್ರಯೋಗ ಬೇರೆ ಹಳ್ಳಿಗಳಲ್ಲಿಯೂ ಅನುಸರಿಸಲ್ಪಟ್ಟು ಹರಿಜನರಿಗಾಗಿ ನೂರಾರು ಕಲ್ಲಿನ ಮನೆಗಳು ಸಿದ್ಧವಾದುವು! ಮುಂದೆ ನಾನೆಲ್ಲಿ ಕೆಲಸ ಮಾಡಿದರೂ ಹರಿಜನರಿಗೆ ಭೂಮಿ ಕೊಡುವುದು, ಮನೆ ಕಟ್ಟಿಸಿಕೊಡುವುದು, ನೂರಕ್ಕೆ ಹದಿನೆಂಟರಂತೆ ನೌಕರಿ ನೀಡುವುದು–ಈ ಮೂರು ಕಾರ್ಯಗಳನ್ನು ಶ್ರದ್ಧೆಯಿಂದ, ಸಂಪೂರ್ಣ ಆಸಕ್ತಿಯಿಂದ ಮಾಡಿದ್ದೇನೆ. ಆದರೆ ಒಮ್ಮೊಮ್ಮೆ ಹರಿಜನರ ಹಳೆಯ ಕಂದಾಚಾರಿಗಳೇ, ಅವರ ಅದೂರದರ್ಶಿ ನಾಯಕರೇ ಅವರ ಪ್ರಗತಿಗೆ ಪ್ರತಿಬಂಧಕವಾಗುತ್ತಿದ್ದುದನ್ನು ಕಂಡು ವಿಷಾದಿಸಿದುದೂ ಉಂಟು. ಉದಾಹರಣೆಗಾಗಿ, ಒಂದು ಊರಿನಲ್ಲಿ ಹರಿಜನರಿಗಾಗಿಯೇ ಒಂದು ಕುಡಿಯುವ ನೀರಿನ ಭಾವಿ ಕಟ್ಟಿಸಿದೆ. ಅದರ ಪ್ರಾರಂಭೋತ್ಸವಕ್ಕಾಗಿ ಒಂದು ದಿನ ನಿರ್ಧರಿತವಾಯಿತು. ಅದರ ಮುನ್ನಾ ದಿನ ಗ್ರಾಮಸೇವಕ ಓಡಿ ಬಂದ ನನ್ನ



ಬಳಿಗೆ, ಗಾಬರಿಗೊಂಡಂತಿದ್ದ. ಕಾರಣ ಕೇಳಿದೆ. 'ಸರ್, ಘಾತವಾಯಿತು. ಪ್ರಾರಂಭೋತ್ಸವಕ್ಕೆ ಮುನ್ನವೇ ಇಂದು ಎಡಗೈ ಹರಿಜನರು ಆ ಭಾವಿಯಿಂದ ನೀರು ಸೇದಿಕೊಂಡು ಬಿಟ್ಟರು! ಈಗ ಬಲಗೈಯವರು ಆ ಭಾವಿಯ ನೀರು ನಾವು ಮುಟ್ಟೆವು, ನಮಗೆ ಪ್ರತ್ಯೇಕ ಭಾವಿಯೇ ಬೇಕು–ಎಂದು ಹಟ ಹಿಡಿದಿದ್ದಾರೆ!" ಎಂದು ಹೇಳಿದ. ನಾನು ಚಿಂತಾಕ್ರಾಂತನಾಗಿ ಆ ಊರಿಗೆ ಹೋದೆ. ಇಬ್ಬರ ಪ್ರತಿನಿಧಿಗಳನ್ನೂ ಕರೆಸಿ ಕಂಠ ನೋಯುವವರೆಗೆ ತಿಳಿಸಿ ಹೇಳಿದೆ. ಪ್ರಯೋಜನವಾಗಲಿಲ್ಲ, ಕೊನೆಯ ಅಸ್ತ್ರವೆಂದು ನಾನೇ ಆ ಭಾವಿಯ ನೀರು ಸೇದಿಕೊಂಡು, "ಇದೊ ನೋಡಿರಿ, ನಾನು ಕುಡಿಯುತ್ತೇನೆ ಈ ನೀರನ್ನು!" ಎಂದು ಹೇಳಿ ಅವರೆದುರಿಗೇ ನೀರು ಕುಡಿದು, "ಇನ್ನಾದರೂ ನೀವಿಬ್ಬರೂ ಯಾವ ಸಂಕೋಚವೂ ಇಲ್ಲದೆ ಈ ಭಾವಿಯ ನೀರು ಕುಡಿಯಿರಿ," ಎಂದು ಕೇಳಿಕೊಂಡೆ. "ನೀವು ಕುಡಿಯಬಹುದು ಸಾಹೇಬರೆ, ನಾವು ಕುಡಿಯಲಾಗುವುದಿಲ್ಲ!" ಎಂದು ನಿಷ್ಠುರವಾಗಿ ನುಡಿದು ಬಿಟ್ಟರು ಬಲಗೈಯವರು! ಮುಂದೆ ನಾನು ಬೆಳಗಾವಿಯಲ್ಲಿದ್ದಾಗ ಮಲಪ್ರಭಾ ಜಲಾಶಯದಲ್ಲಿ ಮುಳುಗಡೆಯಾಗಲಿದ್ದ ಹರಿಜನ ಕುಟುಂಬಗಳಿಗಾಗಿಯೇ ಒಂದು ಸಾವಿರ ಮನೆಗಳನ್ನು ಇದೇ ತಂತ್ರದ ಪ್ರಕಾರವೇ ಕಟ್ಟಿಸಿದೆ. ಸಮಾಜ ಕಲ್ಯಾಣ ಇಲಾಖೆಯಿತ್ತ ಐದು ನೂರು ರೂಪಾಯಿ–ಅರಣ್ಯ ಇಲಾಖೆಯಿತ್ತ ಎರಡು ನೂರು ರೂಪಾಯಿ ಬೆಲೆಯ ಕಟ್ಟಿಗೆ, ತಾಲೂಕು ಅಭಿವೃದ್ಧಿ ಮಂಡಳಿಯಿತ್ತ ಒಂದು ನೂರು ರೂಪಾಯಿ–ಹೀಗೆ ಒಂದೊಂದು ಮನೆಗೆ ಎಂಟು ನೂರು ರೂಪಾಯಿಗಳ ಸಂಚಯ ಮಾಡಿ ಈ ಮಣಿಹಕ್ಕೆ ಕೈಯಿಟ್ಟೆ. ಲಾರಿಗಳ ಒಡೆಯರು ಅರಣ್ಯದಿಂದ ಕಟ್ಟಿಗೆಯನ್ನು ಉಚಿತವಾಗಿ ಸಾಗಿಸಿಕೊಟ್ಟರು; ಬಡಿಗರು ಉಚಿತವಾಗಿ ಬಾಗಿಲ ಕಿಟಕಿ ಮಾಡಿಕೊಟ್ಟರು; ಕಮ್ಮಾರರು ಉಚಿತವಾಗಿ ಮೊಳೆ ಚಿಲಕಗಳನ್ನು ಮಾಡಿಬಿಟ್ಟರು; ಉಪ್ಪಾರರು ಉಚಿತವಾಗಿ ಗೋಡೆ ಕಟ್ಟಿಕೊಟ್ಟರು. ಆದರೆ ಅರಣ್ಯದಿಂದ ಲಾರಿಗಳಲ್ಲಿ ಕಟ್ಟಿಗೆ ಬಂದಾಗ ಅದನ್ನು ಇಳಿಸಿಕೊಳ್ಳಲು ಯಾರಿಗಾಗಿ ಮನೆಗಳ ನಿರ್ಮಾಣ ಕೈಕೊಂಡು ಇಷ್ಟೆಲ್ಲ ಜನರ ಉಚಿತ ಸೇವೆ ಪಡೆದಿದ್ದೆನೋ ಆ ಹರಿಜನ ಬಾಂಧವರ ನೆರವು ಕೋರಿದೆ. ಅವರು ನೆರವು ನೀಡುವುದರಲ್ಲಿದ್ದರು, ಆದರೆ ಅವರ ಸ್ಥಳೀಯ ನಾಯಕರು ಬಂದು ತಡೆದರು: "ನೀವೇಕೆ ಇಳಿಸುವಿರಿ? ಇಷ್ಟು ದಿನ ಬಿಟ್ಟಿ ದುಡಿದು ಸಾಕಾಗಿಲ್ಲವೆ? ಯಾರ ಉಪಕಾರಕ್ಕಾಗಿ ಇವರು ಮನೆ ಕಟ್ಟುತ್ತಿದ್ದಾರೆ. ನಿಮ್ಮ ಹಕ್ಕು ನಿಮಗೆ ಮುಟ್ಟಿಸುತ್ತಿದ್ದಾರೆ. ಇಳಿಸಬೇಡಿರಿ!" ಕೊನೆಗೆ ನಾವೇ ಇಳಿಸಿಕೊಳ್ಳಬೇಕಾಯಿತು! ನನ್ನದು ಶಿಥಿಲವಾದ ಶ್ರದ್ಧೆಯಾಗಿದ್ದಿದ್ದರೆ ಎಂದೋ ಈ ಕಾರ್ಯಕ್ಕೆ ಶರಣು ಹೊಡೆದು ಬಿಡುತ್ತಿದ್ದೆ. ಆದರೆ ಅಚಲ ಶ್ರದ್ಧೆಯಿದ್ದುದರಿಂದ ಎಲ್ಲವನ್ನೂ ಮರೆತು ಎಂದಿನಂತೆ ಹರಿಜನ

ಕಲ್ಯಾಣ ಕಾರ್ಯಗಳನ್ನು ಮಾಡುತ್ತಲೇ ಹೋದೆ. ಬೆಳಗಾವಿ ಜಿಲ್ಲೆಯಲ್ಲಿ ನೂರಾರು ಗ್ರಾಮ ಲೆಕ್ಕಿಗರನ್ನು ನಿಯಮಿಸಿಕೊಳ್ಳುವ ಪ್ರಸಂಗ ಬಂದಾಗ ನೂರಕ್ಕೆ ಹದಿನೆಂಟಕ್ಕಿಂತ ಸ್ವಲ್ಪ ಹೆಚ್ಚಿಗಿಯೇ ಅವರನ್ನು ಆರಿಸಿಕೊಂಡೆ. ನಾನು ಬಸವನ ಭಕ್ತನಾಗಿದ್ದುದರಿಂದಲೇ ಇದು ನನ್ನಿಂದ ಸಾಧ್ಯವಾಯಿತು–ಎಂದು ಹೇಳಿದರೆ ತಪ್ಪೇನಲ್ಲ.

**ಅಧೀನ ಕಾರ್ಯದರ್ಶಿ :**

ಜೇವರಗಿಯಿಂದ ಚಿಂಚೋಳಿಯವರೆಗೆ ಇನ್ನೂ ಅನೇಕ ಜನಹಿತ ಕಾರ್ಯಗಳನ್ನು ಮಾಡಿದೆ; ಇನ್ನೂ ಮಾಡುವ ಮನಸ್ಸಿದ್ದಿತು. ಆದರೆ ಮಕ್ಕಳ ವಿದ್ಯಾಭ್ಯಾಸದ ಪ್ರಶ್ನೆ, ಮೇಲಿನವರ ಕ್ಷುದ್ರತೆ, ಕಿರುಕುಳ, ಸಾರ್ವತ್ರಿಕ ಚುನಾವಣೆಗಳಲ್ಲಿ ರಿಟರ್ನಿಂಗ್ ಆಫೀಸರನಾಗಿ ಎಷ್ಟು ನಿಷ್ಪಕ್ಷ ಪಾತದಿಂದ ವರ್ತಿಸಿದರೂ ಜಗನ್ನಾಥರಾವ್ ಚಂಡರಕಿಯವರ ಸೋಲಿನಿಂದ ಉಂಟಾಗಿದ್ದ ತಪ್ಪು ತಿಳಿವಳಿಕೆ–ಇವೆಲ್ಲವುಗಳಿಂದಾಗಿ ಯಾದಗಿರಿಯಿಂದ ಬೆಂಗಳೂರಿಗೆ ಹೋದರೆ ಲೇಸೆಂಬ ಭಾವನೆ ಬರತೊಡಗಿತು. ಅದೇ ಕಾಲಕ್ಕೆ ಅನಿರೀಕ್ಷಿತ ರೀತಿಯಲ್ಲಿ ನಿಜಲಿಂಗಪ್ಪನವರ ಮಂತ್ರಿ ಮಂಡಲ ಹೋಗಿ ಜತ್ತಿಯವರ ಮಂತ್ರಿಮಂಡಲ ಅಧಿಕಾರಾ ರೂಢವಾಯಿತು. ಅಣ್ಣಾರಾವ್ ಗಣಮುಖಿಯವರು ವಿದ್ಯಾಮಂತ್ರಿಗಳಾದರು. ನನ್ನನ್ನು ಇನ್ನೊಮ್ಮೆ ಆಪ್ತಕಾರ್ಯದರ್ಶಿಯಾಗಲು ಆಹ್ವಾನಿಸಿದರು. ಆದರೆ ಆ ಕಾರ್ಯಕ್ಕೆ ನನ್ನ ಆಗಿನ ಆರೋಗ್ಯ ತಡೆಯದೆಂದು ಹೇಳಿಕೊಂಡು, ಬೇರಾವ ರೀತಿಯಲ್ಲಾದರೂ ಕರೆಸಿಕೊಂಡರೆ ಬರುವುದಾಗಿ ಮಾತುಕೊಟ್ಟೆ. ಅವರು ಅಧೀನಕಾರ್ಯದರ್ಶಿಯಾಗಿ ಕರೆಸಿಕೊಂಡರು ನನ್ನನ್ನು ಹೊರಟೆ.

ಯಾದಗಿರಿಯ ಪುರಜನರೂ, ಸುತ್ತಲಿನ ಗ್ರಾಮಗಳ ಬಾಂಧವರೂ ಯಾದಗಿರಿಯಿಂದ ನನ್ನನ್ನು ಬೀಳ್ಕೊಟ್ಟ ರೀತಿ ಅನ್ಯಾಸದೃಶವಾದುದು. ವಿಶ್ವನಾಥರೆಡ್ಡಿಯವರು ಹೈದರಾಬಾದಿಗೆ ಹೋಗಿ ಒಂದು ಲಾರಿ ತುಂಬ ಹಾರಗಳನ್ನು ತಂದರು. ವೈ. ವಿರೂಪಾಕ್ಷಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಬೀಳ್ಕೊಡುವ ಸಭೆಯಲ್ಲಿ ಹಾರಗಳಿಂದ ಮುಚ್ಚಿಬಿಟ್ಟರು ನನ್ನನ್ನು! ಅಂದು ಮಾತನಾಡಿದವರಲ್ಲಿ ಎಲ್ಲ ಮತಗಳ, ಎಲ್ಲ ಪಕ್ಷಗಳ, ಎಲ್ಲ ಉದ್ಯೋಗಗಳ ಜನರಿದ್ದರು. ಎಲ್ಲರೂ ಹೃದಯಸ್ಪರ್ಶಿಯಾಗಿ ಮಾತನಾಡಿದರು. ನನ್ನನ್ನು ಕಳಿಸಲು ನಿಲ್ದಾಣಕ್ಕೆ ಬಂದವರೆಷ್ಟು ಜನರೆಂಬುದರ ಲೆಕ್ಕ ಹೇಳಲಾರೆ. ಆ ನಿಲ್ದಾಣದ ಇತಿಹಾಸದಲ್ಲಿಯೇ ಅಷ್ಟು ಜನ ಸಮೂಹ ಅಲ್ಲಿ ಆ ಹಿಂದೆ ನೆರೆದಿರಲಿಲ್ಲವಂತೆ. ಎಲ್ಲರೂ ಪ್ರೀತಿವಿಶ್ವಾಸಗಳ ಅಭಿಷೇಕ ಮಾಡಿ ಕಳಿಸಿಕೊಟ್ಟರು ನನ್ನನ್ನು. ಕೆಲವರು ಕಂಬನಿಯ ಕಾಣಿಕೆಯನ್ನು ಕೊಟ್ಟರು. ಅದು ಅಮೂಲ್ಯವಾದ ಕೊಡುಗೆ ಒಬ್ಬ ಅಧಿಕಾರಿಗೆ. ಎಲ್ಲಕ್ಕಿಂತ ಅಮೂಲ್ಯವಾದುವು–



ಗಳಾಗಿದ್ದುವು ಹಳ್ಳಿಗಳಲ್ಲಿ ವಿಕಾಸವೀರರಾಗಿ ಮಾರ್ಪಟ್ಟಿದ್ದ ಗೌಡರ, ರೈತರ, ಶ್ರೀಸಾಮಾನ್ಯರ, ಕಂಬನಿಗಳು! ಎಲ್ಲರಿಗೆ ಕೈಮುಗಿದು, ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿ ಉಗಿಬಂಡಿಯೇರಿದೆ. ಅದರಲ್ಲಿದ್ದ ಪ್ರಯಾಣಿಕರೆಲ್ಲ ಬೆರಗುಗಣ್ಣುಗಳಿಂದ ನನ್ನತ್ತಲೇ ನೋಡುತ್ತಿದ್ದರು!

**ಜಾತಿ ಪಿಡುಗು :**

ಶಿಕ್ಷಣ ಇಲಾಖೆಯಲ್ಲಿ ನಾನು ಕೆಲಸ ಆರಂಭಿಸಿ ಒಂದು ವಾರವೂ ಕಳೆದಿರಲಿಲ್ಲ. ಆಗಿನ ಇಬ್ಬರು ಶಾಸನಕಾರರು ನನ್ನ ಭೇಟಿಗೆ ಬಂದರು. ನನ್ನ ಹೆಸರನ್ನು ಮತ್ತೆ ಮತ್ತೆ ಕೇಳಿದರು. ಏಕೆ ಕೇಳುತ್ತಿರುವರೆಂಬುದು ಅರ್ಥವಾಗಲಿಲ್ಲ ನನಗೆ. ನನ್ನ ಹೆಸರಿನ ಮೇಲಿಂದ ನನ್ನ ಕುಲ ಕಂಡು ಹಿಡಿಯುವುದು ಕಠಿಣವಾಗಿದ್ದಿತವರಿಗೆ. ಕಡೆಗೆ ಅವರಲ್ಲೊಬ್ಬರು ಕೇಳಿಯೇ ಬಿಟ್ಟರು: "ನಿಮ್ಮ 'ಕ್ಯಾಸ್ಟ್' ಯಾವುದು?" ಎಂದು. ಇಂಥ ಪ್ರಶ್ನೆಗಳಿಗೆ ಪರಿಚಿತನಲ್ಲದ ನನಗೆ ಬಹಳ ಬೇಜಾರೆನಿಸಿತು. "ನನಗಿದಾಗಲೇ ಮದುವೆಯಾಗಿದೆ," ಎಂದು ಉತ್ತರವಿತ್ತೆ. ಈ ಉತ್ತರ ಕೇಳಿ ಕಕ್ಕಾವಿಕ್ಕಿಯಾದರವರು. "ಇದೇನು ಸ್ವಾಮಿ, ಹೀಗೆ ಉತ್ತರ ಹೇಳುತ್ತಿರುವಿರಿ?" ಎಂದು ಪ್ರಶ್ನಿಸಿದರವರು. "ನಮ್ಮ ಕಡೆ ಕನ್ಯಾಪಿತೃಗಳು ಮಾತ್ರ ಇಂಥ ಪ್ರಶ್ನೆ ಕೇಳುತ್ತಾರೆ. ನೀವೂ ಕನ್ಯಾಪಿತೃಗಳೇನೋ, ಈ ಬಕರಾಕ್ಕೆ ಇನ್ನೂ ಮದುವೆಯಾಗಿರ–ದಿದ್ದರೆ ನಿಮ್ಮ ಮಗಳನ್ನು ಕಟ್ಟಿಬಿಡಬಹುದೆಂದು ಬಂದವರೇನೋ ಎಂದು ಊಹಿಸಿ ಆ ಉತ್ತರ ಕೊಟ್ಟೆ. ನಿಮಗೆ ಇದರಿಂದ ಬೇಜಾರೆನಿಸಿದ್ದರೆ ಕ್ಷಮಿಸಿರಿ," ಎಂದೆ. ಇಷ್ಟಕ್ಕಾದರೂ ಬಾಯಿ ಮುಚ್ಚಿಕೊಂಡು ಮಾನ ಉಳಿಸಿಕೊಳ್ಳಬಹುದವರು–ಎಂದು ಆಶಿಸಿದ್ದೆ. ಆ ಆಶೆಯೂ ನಿರಾಶೆಯಾಯಿತು. ಅವರಲ್ಲಿ ಇನ್ನೊಬ್ಬರೆಂದರು: "ಇವರು ಹೇಳದಿದ್ದರೇನಾಯಿತು, ಇವರು ಲಿಂಗಾಯತರೆಂಬುದು ಖಾತ್ರಿಯಾಯಿತು. ಅಣ್ಣಾರಾವ್ ಗಣಮುಖಿಯವರೂ ಲಿಂಗಾಯತರೇ ಅಲ್ಲವೆ?"

ನನ್ನ ರೊಚ್ಚು ಕೆರಳಿತು. "ಅಣ್ಣಾರಾಯರಿಗೂ ಈ ಕುರ್ಚಿಗೂ ಸಂಬಂಧವಿಲ್ಲ ಸ್ವಾಮಿ. ಇದು ಲಿಂಗಾಯತರ ಕುರ್ಚಿ. ನಾನು ಬರುವ ಮುನ್ನ ಲಿಂಗಾಯತರೊಬ್ಬರು ಇದರ ಮೇಲೆ ಕುಳಿತಿದ್ದರು; ಈಗ ನಾನು ಕುಳಿತಿದ್ದೇನೆ; ನಾನು ಹೋಗುವಾಗ ಇನ್ನೊಬ್ಬ ಲಿಂಗಾಯತನನ್ನೇ ಇಲ್ಲಿ ಕುಳ್ಳಿರಿಸಿ ಹೋಗುವೆನು. ಈ ಕುರ್ಚಿಗೇ ಲಿಂಗಧಾರಣೆಯಾಗಿ ಬಿಟ್ಟಿದೆ," ಎಂದು ಗದರಿದೆ. ಸುಸ್ತಾಗಿ ಹೋದರವರು. ಅವರು ಹೋದ ಮೇಲೆ ಎಷ್ಟೋ ಹೊತ್ತು ಕೈಕಟ್ಟಿಕೊಂಡು ಕುಳಿತುಬಿಟ್ಟೆ ನಾನು. ನಿಜಾಮನ ರಾಜ್ಯದಲ್ಲಿದ್ದಾಗಲೂ ಯಾರೊಬ್ಬರ ಬಳಿಗೆ ಹೋಗಿ ಅವರ ಕುಲದ ಬಗ್ಗೆ ಅವರನ್ನೇ

ಕೇಳುವ ಅನಾಗರಿಕತೆಯನ್ನು ಕಂಡಿರಲಿಲ್ಲ. ಹೆಸರಿನಿಂದ ಇವ ಹಿಂದೂ, ಇವ ಮುಸಲ್ಮಾನ, ಇವ ಕ್ರೈಸ್ತ–ಎಂದು ಸ್ಥೂಲವಾಗಿ ತಿಳಿದು ತೃಪ್ತರಾಗುತ್ತಿದ್ದೆವು. ಅಲ್ಲಿ ಹಿಂದುಗಳೆಲ್ಲ ಕಷ್ಟದಲ್ಲಿದ್ದರಾಗಿ ಹಿಂದು ಹಿಂದುಗಳಲ್ಲಿಯೇ ಜಾತಿ ಭೇದ ಹುಡುಕುವ ಪ್ರಶ್ನೆಯೇ ಏಳುತ್ತಿರಲಿಲ್ಲ. ಇಲ್ಲಿ ಇನ್ನೂ ಏನೇನು ನೋಡಬೇಕಾಗುವುದೋ–ಎಂದು ಅಳುಕಿದೆ. ನನ್ನ ಅಳುಕು ನಿಜವಾಯಿತು. ಲಿಂಗಾಯತರಲ್ಲಿಯೇ ನನಗೆ ಅದುವರೆಗೆ ತಿಳಿಯದಿದ್ದ ಒಳಪಂಗಡಗಳು ಇರುವುದೂ, ಒಂದು ಒಳಪಂಗಡ–ದವರಿಗೂ, ಇನ್ನೊಂದು ಒಳಪಂಗಡದವರಿಗೂ ಸಾಮರಸ್ಯವಿಲ್ಲದಿರುವುದು ಗೊತ್ತಾಯಿತು. ಹೀಗೆಯೇ ಎಲ್ಲ ಜಾತಿಗಳಲ್ಲಿ ಉಪಜಾತಿಗಳೂ, ಉಪ–ಉಪ–ಜಾತಿಗಳೂ ಹೇರಳವಾಗಿದ್ದುದೂ, ಅವುಗಳ ಒಳ ಜಾತಿಗಳನ್ನು ಅರ್ಥಮಾಡಿಕೊಳ್ಳದೆ ಇಲ್ಲಿ ಆಡಳಿತ ನಡೆಸುವುದು ಅಪಾಯಕರವೆಂಬುದೂ ಗೊತ್ತಾಯಿತು. "ಶಿವಶಿವಾ, ಯಾದಗಿರಿಯನ್ನು ಬಿಟ್ಟು ಈ ಜಾತಿ ಉಪಜಾತಿಗಳ ಗೊಂಡಾರಣ್ಯಕ್ಕೇಕೆ ಬಂದೆ!" ಎಂದು ಉದ್ಗರಿಸುವಂತಾಯಿತು ನಾನು! ಬೆಂಗಳೂರಿಗೆ ನಾನು ಬಂದುದು ಆಗಸ್ಟ್, 1958ರಲ್ಲಿ, ಅಂದಿನಿಂದ ಜೂನ್, 1976ವರೆಗೆ ಇಲ್ಲಿ ನಾನು ನಡೆಸಿದ ಆಡಳಿತ ಡೊಂಬರ ಮಿಣಿಯ ಮೇಲಿನ ನಡೆತ!

ನನ್ನ ಶಾಖೆಗಳಲ್ಲಿ ಕಾರ್ಯಭಾರ ವಿಪರೀತವಾಗಿದ್ದಿತು. ನನ್ನ ಮೇಜಿನ ಮೇಲೆ ಯಾವಾಗಲೂ ಎಷ್ಟು ಕಡತಗಳಿರುತ್ತಿದ್ದುವೆಂದರೆ ನನ್ನ ಭೇಟಿಗಾಗಿ ಬಂದವರಿಗೆ ನಾನು ಕಾಣುತ್ತಲೇ ಇರಲಿಲ್ಲ. ಏನೇ ಆಗಲಿ, ಆದಷ್ಟು ಹೆಚ್ಚು ಕಡತಗಳ ವಿಲೇವಾರಿ ಮಾಡಿ ಅವುಗಳ ಸಂಖ್ಯೆಯನ್ನು ಹತೋಟಿಗೆ ತರಬೇಕೆಂಬ ಛಲದಿಂದ ಬೆಳಗಿನ ಒಂಬತ್ತು ಘಂಟೆಯಿಂದ ರಾತ್ರಿ ಒಂಬತ್ತು ಘಂಟೆಗಳವರಗೆ ಎಡಬಿಡದೆ ಕೆಲಸ ಮಾಡತೊಡಗಿದೆ. ಶಿಕ್ಷಣ ಇಲಾಖೆಯ ದ್ವಿತೀಯ ಪಾಂಚ ವಾರ್ಷಿಕ ಯೋಜನೆಯೇ ಕಲಸುಮೇಲೋಗರವಾಗಿ ಹೋಗಿದ್ದಿತು. ಅದಕ್ಕಿದ್ದ ಧನರಾಶಿ ಹನ್ನೊಂದೂವರೆ ಕೋಟಿ ರೂಪಾಯಿಗಳು; ಆದರೆ ಅದು ರೂಪಿಸಿದ್ದ ಬೇರೆ ಬೇರೆ ಯೋಜನೆಗಳ ಒಟ್ಟು ಮೊತ್ತ ಅದರ ಎರಡರಷ್ಟಾಗುತ್ತಿದ್ದಿತು. ಎಲ್ಲ ಇಲಾಖೆಗಳಲ್ಲಿಯೂ ಇದೇ ಅಸ್ತವ್ಯಸ್ತತೆಯಿದ್ದಿತು. ದಕ್ಷ ಆಡಳಿತಗಾರರೆಂದು ಹೆಸರಾಗಿದ್ದ ಪ್ರಧಾನ ಕಾರ್ಯದರ್ಶಿ ಪಿ.ವ್ಹಿ.ಆರ್. ರಾವ್ ಅವರು ಎಲ್ಲ ಇಲಾಖೆಗಳಿಗೆ 'ಅಲ್ಟಿಮೇಟಮ್' ಕೊಟ್ಟಿದ್ದರು–ಒಂದು ವಾರದಲ್ಲಿ ಎಲ್ಲ ಸರಿಪಡಿಸಿ ಅವರಿಗೆ ಒಪ್ಪಿಸಿ ಅವರ ಅಂಗೀಕೃತ ಪಡೆದುಕೊಳ್ಳಬೇಕೆಂದು. ಅದರಂತೆ ಒಂದು ವಾರ ಹಗಲಾವುದೋ, ರಾತ್ರಿ ಯಾವುದೋ ಎಂಬಂತೆ ದುಡಿದು, ಒಂದೊಂದು ಯೋಜನೆಯನ್ನೂ ಸಂಬಂಧಪಟ್ಟ ಅಧಿಕಾರಿಗಳೊಡನೆ ಚರ್ಚಿಸಿ ಶಿಕ್ಷಣ ಇಲಾಖೆಯ ಯೋಜನೆಗಳನ್ನು 'ಬಾಯಿಗೂಡಿಸಿ' ಕೊಟ್ಟೆ. ಪ್ರಧಾನ ಕಾರ್ಯದರ್ಶಿಗಳು ಪ್ರೀತರಾದರು. ಒಂದೇ ಸಲಕ್ಕೆ ಅವರ ಅಂಗೀಕೃತ ಪಡೆದುದು ಆದೊಂದೇ!

ಯೋಜನಾ ವೆಚ್ಚದಲ್ಲಿ ಶಿಕ್ಷಣ ಇಲಾಖೆ ಬಹಳ ಹಿಂದೆ ಬಿದ್ದಿದ್ದಿತು. ಅದರ ಆ ಮುನ್ನಿನ ಸಾಧನೆ ನೂರಕ್ಕೆ ಆರುವತ್ತು ಮಾತ್ರ ಆಗಿದ್ದಿತು. ನಾನು ಇದಕ್ಕಾಗಿ ಮಂತ್ರಿಗಳವರನ್ನು ಒಪ್ಪಿಸಿ ಒಂದು ವ್ಯವಸ್ಥೆ ರೂಪಿಸಿದೆ. ಯೋಜನೆಗೆ ಸಂಬಂಧಿಸಿದ ಕಡತಗಳಿಗೆಲ್ಲ ಕೇಶರ ವರ್ಣದ ಚೀಟಿಗಳನ್ನು ಅಂಟಿಸುವುದು, ಆ ಚೀಟಿ ಕಾಣುತ್ತಲೆ ಎಲ್ಲರೂ ಬೇರೆ ಕೆಲಸ ಬದಿಗಿಟ್ಟು ಅದನ್ನು ಮೊದಲು ನೋಡಿ ಕಳಿಸುವುದು, ಮಂತ್ರಿಗಳು ಮನೆಯಲ್ಲಿರಲಿ, ಅಸೆಂಬ್ಲಿಯಲ್ಲಿರಲಿ, ಪ್ರವಾಸದಲ್ಲಿರಲಿ, ಆ ಕಡತಗಳನ್ನು ಮಾತ್ರ ಅಂತಿಮ ಆಜ್ಞೆಗಳೊಡನೆ ಹಿಂದಿರುಗಿಸುವುದು–ಇದೇ ಆ ವ್ಯವಸ್ಥೆ. ಬಹಳ ಸಮರ್ಪಕವಾಗಿ ನಡೆಯಿತು ಈ ವ್ಯವಸ್ಥೆ. ಯೋಜನೆಗೆ ಸಂಬಂಧಿಸಿದ ಪ್ರಸ್ತಾವಗಳಿಗೆಲ್ಲ ಬೇಗ ಬೇಗ ಮಂಜೂರಿ ದೊರೆತು ರಾಜ್ಯದಲ್ಲೆಲ್ಲ ಎಲ್ಲಿ ನೋಡಿದರೂ ಶಿಕ್ಷಣ ಇಲಾಖೆಯ ಕಾರ್ಯಗಳು ಪ್ರಾರಂಭವಾದುವು. ಹೊಸ ಹೊಸ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳು, ಕಾಲೇಜುಗಳು, ಪಾಲಿಟೆಕ್ನಿಕ್‌ಗಳು ಪ್ರಾರಂಭವಾದುವು. ಮಂತ್ರಿಗಳು ಹಿಗ್ಗಿದರು.

## ಬಾಯಿಂದ ರಕ್ತ :

ಆದರೆ ಆರು ತಿಂಗಳೊಳಗಾಗಿ ಒಂದು ಸಂಜೆ ಇದ್ದಕ್ಕಿದ್ದಂತೆ ನನ್ನ ಬಾಯಿಂದ ರಕ್ತ ಬರತೊಡಗಿತು. ಏನು ಮಾಡಿದರೂ ನಿಲ್ಲಲಿಲ್ಲ. ಸಮೀಪದಲ್ಲಿದ್ದ ಮಾನ್ಯ ಮಿತ್ರ ಮುದಿರೆಡ್ಡಿಯವರು ಬೌರಿಂಗ್ ಆಸ್ಪತ್ರೆಗೆ ಸೇರಿಸಿದರು ನನ್ನನ್ನು ಡಾ. ವ್ಹಿ. ಆರ್. ನಾಯ್ಡು ಅವರನ್ನು ನಾನೆಂದಿಗೂ ಮರೆಯಲಾರೆ ತಕ್ಷಣ ನನ್ನನ್ನು ಸುದೀರ್ಘವಾಗಿ ಪರೀಕ್ಷಿಸಿದರು. ಅಣ್ಣಾರಾವ್ ಗಣಮುಖಿಯವರೂ ಆಸ್ಪತ್ರೆಗೆ ಧಾವಿಸಿ ನನ್ನನ್ನು ಸರಿಯಾಗಿ ನೋಡಿಕೊಳ್ಳು ಹೇಳಿಹೋದರು. ಅವರು ಹೇಳುವ ಮುನ್ನವೇ ಡಾ. ನಾಯ್ಡು ಸರಿಯಾಗಿ ನೋಡಿಕೊಳ್ಳುತ್ತಲೇ ಇದ್ದರು ನನ್ನನ್ನು. ವ್ಯಾಧಿ ನಿರೀಕ್ಷಿಸಿದುದಕ್ಕಿಂತಲೂ ಅಪಾಯಕಾರಿಯಾದುದಾಗಿದ್ದಿತು. ಹಾಸಿಗೆಯಲ್ಲಿ ಹೊರಳಾಡಲು ಬರದಂತೆ ಮಲಗಿಸಿದರು. ಎಲ್ಲ ಅಲ್ಲಿಯೇ ನಡೆಯಿತು. ಹಗಲಿರುಳು ಮೂರು ಘಂಟೆಗಳಿಗೊಮ್ಮೆ ಪರೀಕ್ಷೆ. ಮೂರು ನಾಲ್ಕು ದಿನಗಳು ಕಳೆಯುವವರೆಗೆ ಸ್ವಯಂ ಡಾ. ನಾಯ್ಡು ಅವರೇ ಮೌನವಾಗಿದ್ದರು. ಆ ದಿನಗಳಲ್ಲಿ ನನ್ನ ಮಡದಿ ಮಕ್ಕಳ ಆವಸ್ಥೆ ಏನಾಗಿದ್ದಿತೆಂಬುದನ್ನು ವರ್ಣಿಸದಿರುವುದೇ ಮೇಲು. ಚಿ. ಅನ್ನದಾನಿಯೂ ಹೌಹಾರಿದ್ದ. ನನ್ನನ್ನು ನೋಡಲು ಬರುತ್ತಿದ್ದ ನಾಲ್ವರು ಚಿಕ್ಕ

ಮಕ್ಕಳ ಮುಖ ನೋಡುತ್ತಲೇ ದುಃಖ ಉಕ್ಕಿ ಬರುತ್ತಿದ್ದಿತು ನನಗೆ. ನನ್ನ ಕಾರ್ಯೋತ್ಸಾಹದ ಭರದಲ್ಲಿ ಅವರನ್ನು ಅಲಕ್ಷಿಸಿ ಬಿಟ್ಟೆ, ಅವರಿಗೆ ಅನ್ಯಾಯ ಮಾಡಿದೆ–ಎಂಬ ಭಾವನೆ ಬಂದು ಬಹಳ ಪಶ್ಚಾತ್ತಾಪ ಪಟ್ಟೆ. 'ನನಗೇನಾದರೂ ಆಗಬಾರದುದು ಆಗಿಬಿಟ್ಟರೆ ಅವರ ಗತಿಯೇನು?' ಎಂಬ ಪ್ರಶ್ನೆ ಮತ್ತೆ ನನ್ನ ತಲೆ ಕೆಡಿಸಿಬಿಟ್ಟಿದ್ದಿತು. ಆದರೂ ಅವರ ಅದೃಷ್ಟ ಚೆನ್ನಾಗಿದ್ದಿತು. ಮತ್ತೊಮ್ಮೆ ಸಾವಿನ ಬಾಯಿಂದ ಪಾರಾಗಿ ಬಂದೆ. ಕ್ರಮೇಣ ಪೂರ್ವಾರೋಗ್ಯ ಪಡೆದೆ. ಆದರೆ ಆ ಕಾಯಿಲೆಯ ನೆನಪಾದಾಗೊಮ್ಮೆ ನಡುಗುವುದು ಬಹಳ ವರ್ಷಗಳವರೆಗೆ ನಿಲ್ಲಲಿಲ್ಲ!

ಅಣ್ಣಾರಾಯರು ಬಹಳ ಗಟ್ಟಿಗರೆಂಬ ಹೆಸರು ಗಳಿಸಿದರು. ಬಹಳ ದಿಟ್ಟತನದೊಡನೆ ನಾಡು ನುಡಿಗಳಿಗಾಗಿ, ನಾಡಿಗರಿಗಾಗಿ ದುಡಿದರು. ಒಂದೆರಡು ಉದಾಹರಣೆಗಳು ಸಾಕು–ಅವರ ಎದೆಗಾರಿಕೆಯ ಪ್ರತೀಕಾತ್ಮಕವಾಗಿ, ಹಾಸನದಲ್ಲಿ ಒಂದು ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸಲೆಂದು ಮಲ್ನಾಡ ಎಜ್ಯುಕೇಷನ್ ಸೊಸಾಯಿಟಿ ಸ್ಥಾಪಿತವಾಯಿತು. ಅದರ ಪ್ರಭಾವಶಾಲೀ ಸದಸ್ಯರು ಬಹುಬೇಗ ನಿಧಿ ಸಂಗ್ರಹಿಸಿದರು, ಆದರೆ ಅದಕ್ಕೆ ಕೇಂದ್ರದ ಅನುಮತಿ ಸಿಕ್ಕಲಿಲ್ಲ. ಆಗ ಅಲ್ಲಿಯ ಜಿಲ್ಲಾಧಿಕಾರಿಗಳಾಗಿದ್ದ ಚಂದಪ್ಪ ಪಟೇಲರು ಕೊನೆಯ ಪ್ರಯತ್ನಕ್ಕಾಗಿ ಬಂದರು. ಏನೂ ಪ್ರಯೋಜನವಾಗಲಿಲ್ಲ. 'ಕೊಟ್ಟವರ ಹಣ ಅವರಿಗೆ ಹಿಂದಿರುಗಿಸಿಬಿಡಿರಿ' ಎಂದವರನ್ನು ಹಿಂದಕ್ಕೆ ಕಳಿಸಲಾಯಿತು. ನನಗೆ ಬಹಳ ವ್ಯಾಕುಲವಾಯಿತು. ಅಣ್ಣಾರಾಯರ ಹತ್ತಿರ ಹೋಗಿ, 'ಹೀಗೆ ಸೋಲು ಒಪ್ಪುತ್ತ ಹೋದರೆ ಹೇಗೆ?' ಎಂದು ಕೇಳಿದೆ. 'ಏನು ಮಾಡೆನ್ನುವಿರಿ?' ಎಂದು ಕೇಳಿದರು. "ಕೇಂದ್ರ ವಿದ್ಯಾಮಂತ್ರಿ ಪ್ರೊ. ಹುಮಾಯೂನ ಕಬೀರರಿಗೆ ಇದೀಗ ದೂರವಾಣಿಯಲ್ಲಿ ಸಂಪರ್ಕಿಸಿ ಉರ್ದೂ ಭಾಷೆಯಲ್ಲಿ ಜೋರಾಗಿ ಮಾತನಾಡಿ ಬಿಡಿರಿ; ಇದು ರಾಜ್ಯ ಸರಕಾರದ ಪ್ರತಿಷ್ಠೆಯ ಪ್ರಶ್ನೆಯೆಂದು ಹೇಳಿರಿ," ಎಂದು ಸಲಹೆ ಮಾಡಿದೆ ಒಪ್ಪಿದರು. ಮಾತನಾಡಿದರು ಗೆದ್ದರು. ಹಾಸನಕ್ಕೆ ಹೋಗಿದ್ದ ಚಂದಪ್ಪನವರನ್ನು ಮತ್ತೆ ಕರೆಸಿಕೊಂಡು ಅನುಮತಿಯಿತ್ತು ಕಳಿಸಲಾಯಿತು. ಅಲ್ಲಿಯವರು ಇದನ್ನು ನೆನಪಿನಲ್ಲಿ ಉಳಿಸಿಕೊಂಡಿರುವರೋ ಇಲ್ಲವೋ ನಾನರಿಯೆ; ಆದರೆ ಅವರಿಗೆ ಕಾಲೇಜು ಸಿಕ್ಕಿದುದು ಅಣ್ಣಾರಾಯರ ಧೈರ್ಯದ ಮಧ್ಯಪ್ರವೇಶದಿಂದ ಎಂಬುದು ಸತ್ಯಸ್ಯ ಸತ್ಯ.

ಇನ್ನೊಂದು ನಿದರ್ಶನ. ೨೫ ಲಕ್ಷ ರೂಪಾಯಿಗಳ ಕನ್ನಡ ವಿಶ್ವಕೋಶ ಯೋಜನೆ, ೧೫ ಲಕ್ಷ ರೂಪಾಯಿಗಳ ಕನ್ನಡ ನಿಘಂಟು ಯೋಜನೆಗಳನ್ನು ಅವರ ಅಂಗೀಕೃತಿ ಪಡೆದು ಹಣಕಾಸಿನ ಇಲಾಖೆಗೆ ಸಮ್ಮತಿಗಾಗಿ ಕಳಿಸಿದೆ. ಆಗ



ಅರ್ಥಮಂತ್ರಿಗಳಾಗಿದ್ದ ಟಿ. ಮರಿಯಪ್ಪನವರು ಸಮ್ಮತಿಸಲು ನಿರಾಕರಿಸಿಬಿಟ್ಟರು. ಇವುಗಳಲ್ಲಿ ಅತೀವವಾದ ಆಸಕ್ತಿಯುಳ್ಳವನಾಗಿದ್ದ ನಾನು ಅಣ್ಣಾರಾಯರ ಬಳಿಗೆ ಹೋಗಿ ಏನಾದರೂ ಮಾಡಿ ಇವೆರಡನ್ನೂ ಸಚಿವ ಸಂಪುಟದಿಂದ ಮಂಜೂರು ಮಾಡಿಸಲೇಬೇಕು; ಇವೆರಡೂ ಚಿರಕಾಲ ಉಳಿಯುವ ಕೃತಿಗಳಾಗುವುವು–ಎಂದು ನಿವೇದಿಸಿಕೊಂಡೆ. 'ಕಡತಗಳು ಬಳಿಯಲ್ಲಿವೆಯೆ? ಎಂದು ಕೇಳಿದರು. 'ಇವೆ' ಎಂದೆ. 'ನಡೆಯಿರಿ ಟಿ. ಮರಯಪ್ಪನವರ ಚೇಂಬರಿಗೆ' ಎಂದೇ ಹೇಳಿದವರೇ ತಾವೂ ಹೊರಟುಬಿಟ್ಟರು! ಮರಿಯಪ್ಪನವರು, "ಅಣ್ಣಾರಾಯರೇ, ಎರಡು ಪುಸ್ತಕಗಳಿಗಾಗಿ ನಾಲ್ವತ್ತು ಲಕ್ಷ ರೂಪಾಯಿಗಳನ್ನು ಕೊಟ್ಟ ಉದಾಹರಣೆ ಎಲ್ಲಿಯಾದರೂ ಉಂಟೆ? ಇಷ್ಟು ಹಣದಲ್ಲಿ ಒಂದು ಮಧ್ಯಮ ಗಾತ್ರದ ಜಲಾಶಯವನ್ನೇ ಕಟ್ಟಿಸಬಹುದಲ್ಲ," ಎಂದರು. ಅಣ್ಣಾರಾಯರು ಮರಿಯಪ್ಪನವರ ಜಲಾಶಯದ ಸಾಮತಿಯನ್ನೇ ಉಪಯೋಗಿಸಿಕೊಂಡು ಉತ್ತರವಿತ್ತು ನಿರುತ್ತರರನ್ನಾಗಿ ಮಾಡಿದರು ಮರಿಯಪ್ಪನವರನ್ನು: "ಮರಿಯಪ್ಪನವರೇ, ಇವೂ ಎರಡು ಜಲಾಶಯಗಳೇ, ಜ್ಞಾನದ ಜಲಾಶಯಗಳು! ಎಂದಿಗೂ ಒಡೆಯದ, ಎಂದಿಗೂ ಬತ್ತದ ಜಲಾಶಯಗಳು! ಇವುಗಳಿಗೆ ಅಡ್ಡ ಬರಬೇಡಿರಿ. ಒಪ್ಪಿ ಬಿಡಿರಿ!" ಎಂದು ಹೇಳಿದರು. ಮರಿಯಪ್ಪನವರು ಒಪ್ಪಲೇಬೇಕಾಯಿತು

## ವಿದ್ಯಾ ಇಲಾಖೆಯಲ್ಲಿ ಪ್ರಗತಿಯ ಹೆಜ್ಜೆಗಳು :

ಎ.ಸಿ. ದೇವೇಗೌಡರನ್ನು ಡಿ.ಪಿ.ಐ. ಆಗಿ, ಬೊಂದಾಡೆಯವರನ್ನು ಡಿ.ಸಿ.ಈ. ಆಗಿ ತೆಗೆದುಕೊಂಡುದೆ, ಕರ್ನಾಟಕ ಕಾಲೇಜನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ವಹಿಸಿಕೊಟ್ಟುದೆ, ಬೇರೆ ರೀಜಿನಲ್ ಇಂಜಿನಿಯರೀಗ್ ಕಾಲೇಜುಗಳು ಸ್ಥಾಪಿತವಾಗುವ ಮೊದಲೇ ಸ್ವರ್ಗೀಯ ಶ್ರೀನಿವಾಸಮಲ್ಯರ ಸಹಕಾರ ಪಡೆದು ಸುರತಕಲ್ ಕಾಲೇಜನ್ನು ಕಟ್ಟಿ ನಿಲ್ಲಿಸಿದುದೆ, ಕಡ್ಡಾಯ ಪ್ರಾಥಮಿಕ ಶಿಕ್ಷಣ ಯೋಜನೆಯ ಅನುಷ್ಠಾನದಲ್ಲಿ ಎಲ್ಲರಿಗಿಂತ ಹೆಚ್ಚು ಸಫಲತೆಯನ್ನು ಪಡೆದುದೆ, ಅಂತರ ರಾಜ್ಯ ಸೀನಿಯಾರಿಟಿ ವಿವಾದಗಳನ್ನೂ, ಸೇವಾಶ್ರೇಣಿಗಳ ಸಮೀಕರಣವನ್ನೂ ಇತ್ಯರ್ಥಗೊಳಿಸಿದುದೆ, ಹಳ್ಳಿ ಹಳ್ಳಿಗೆ ಪ್ರಾಥಮಿಕ ಮಾಧ್ಯಮಿಕ ಶಾಲೆಗಳನ್ನು ಪಸರಿಸಿದುದೆ–ಶಿಕ್ಷಣದ ಎಲ್ಲ ರಂಗಗಳಲ್ಲಿ ಎದ್ದು ಕಾಣುವ ಪ್ರಗತಿಯನ್ನು ಸಾಧಿಸಿ ತೋರಿಸಿದರವರು. ಕನ್ನಡದ ಮುನ್ನಡೆಗಾಗಿ ನಾನೂ, ಅವರ ಆಪ್ತ ಕಾರ್ಯದರ್ಶಿ ಎಸ್.ಎಮ್. ಪಾಟೀಲರೂ ಕೂಡಿ ತಯಾರಿಸುತ್ತಿದ್ದ ಯಾವ ಯೋಜನೆಯನ್ನೂ ನಿರಾಕರಿಸಲಿಲ್ಲ ಅವರು. ಧೂಳು ತಿನ್ನುತ್ತ ಬಿದ್ದಿದ್ದ ಕನ್ನಡ ಬೆರಳಚ್ಚು ಯಂತ್ರದ ಅಡಿಯೆತ್ತರದ ಕಡತವನ್ನು ಹೊರಗೆಳೆದು ಯಂತ್ರಗಳ ಉತ್ಪಾದನೆಗೆ ಆರ್ಡರ್ ಕೊಟ್ಟೆವು; ಹತ್ತು ಪ್ರಕಾರಗಳ

ಕನ್ನಡದ ಅತ್ಯುತ್ತಮ ಪುಸ್ತಕಗಳಿಗೆ ಪಾರಿತೋಷಕ ಕೊಡುವ ಯೋಜನೆಯನ್ನು ರೂಪಿಸಿ ಕಾರ್ಯಾನ್ವಿತಗೊಳಿಸಿದೆವು. ಅಚ್ಚಾಗದ ಉನ್ನತ ಮಟ್ಟದ ಕನ್ನಡ ಕೃತಿಗಳಿಗೆ ಪ್ರಕಟನೆಗಾಗಿ ಸಹಾಯಧನ ನೀಡುವ ಉಪಕ್ರಮವೊಂದನ್ನು ಪ್ರಾರಂಭಿಸಿದೆವು; ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆಗೆ ಕೆ.ಎಸ್. ಧರಣೇಂದ್ರಯ್ಯನವರನ್ನು ನಿರ್ದೇಶಕರನ್ನಾಗಿ ಮಾಡಿ ಅ.ನ. ಕೃಷ್ಣರಾಯರು ಸಂಪಾದಿಸಿದ ಭಾರತೀಯ ಸಂಸ್ಕೃತಿ ದರ್ಶನವನ್ನಲ್ಲದೆ, ಲೀಲಾವತೀ ಪ್ರಬಂಧ, ಹರಿಶ್ಚಂದ್ರ ಕಾವ್ಯ, ಜೈಮಿನಿ ಭಾರತ, ಇತ್ಯಾದಿಗಳ ಅಗ್ಗದ ಆವೃತ್ತಿಗಳನ್ನು ಪ್ರಕಟಿಸಿದೆವು. ರೆ. ಚನ್ನಪ್ಪ ಉತ್ತಂಗಿಯವರಿಗೆ ಐದು ಸಾವಿರ ರೂಪಾಯಿಗಳ ಪರಿಹಾರ ಧನವಿತ್ತು ಸರ್ವಜ್ಞನ ವಚನಗಳ ಅಗ್ಗದ ಆವೃತ್ತಿಯನ್ನೂ ಪ್ರಕಟಿಸಿದೆವು. ಇವೆಲ್ಲ ಒಂದೊಂದು ರೂಪಾಯಿಗೆ ಕನ್ನಡಿಗರಿಗೆ ದೊರೆಯುವಂತಾಯಿತು. 'ವಚನ ಸಾಹಿತ್ಯ ಸಂಗ್ರಹ'ವನ್ನೂ ಪ್ರಕಟಿಸಲಾಯಿತು. 'ದಾಸಸಾಹಿತ್ಯ ಸಂಗ್ರಹ'ವನ್ನು ಪ್ರಕಟಿಸುವ ಆಶೆಯಿದ್ದಿತು. ಆದರೆ ಸಂಪಾದನೆಯ ಕಾರ್ಯವನ್ನು ಒಬ್ಬರಾದ ಮೇಲೊಬ್ಬರಂತೆ ಮೂವರಿಗೆ ಒಪ್ಪಿಸಿದರೂ ಒಬ್ಬರೂ ಕಾರ್ಯ ಮುಗಿಸಿ ಕೊಡಲಿಲ್ಲ. ಪ್ರೊ. ಜಿ.ಎಸ್. ಹಾಲಪ್ಪನವರಿಂದ History of Freedom Movement in Karnataka ಎಂಬ ಗ್ರಂಥವನ್ನು ಬರೆಸಿ ಪ್ರಕಟಿಸಲಾಯಿತು. ಶ್ರೀ ಆರ್.ಆರ್. ದಿವಾಕರರ ಹಿರಿತನದಲ್ಲಿ Karnataka through the Ages ಎಂಬ ಗ್ರಂಥವನ್ನು ಬರೆಯಿಸಲಾಯಿತು; ರವೀಂದ್ರ ಶತಮಾನೋತ್ಸವವನ್ನು ಬಹಳ ವ್ಯಾಪಕ ಪ್ರಮಾಣದಲ್ಲಿ ಆಚರಿಸಿ, ಕೆಲವು ಪ್ರಕಟನೆಗಳನು ಹೊರ ತಂದುದಲ್ಲದೆ ರವೀಂದ್ರ ಕಲಾ ಮಂದಿರವನ್ನು ಕಟ್ಟಿಸಲಾಯಿತು; ಜಿಲ್ಲೆಗೊಂದು ಪಾಲಿಟೆಕ್ನಿಕ್ ಎಂಬ ಗುರಿಯನ್ನು ಮುಟ್ಟಲಾಯಿತು; ಹಿಂದುಳಿದ ಪ್ರದೇಶಗಳಲ್ಲಿ ನೂರಾರು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ಭವನಗಳನ್ನು ಕಟ್ಟಿಸಲಾಯಿತು; ಸರಕಾರೀ ಮುದ್ರಣಾಲಯದ ಧಾರವಾಡ ಹಾಗೂ ಕಲಬುರಗಿ ಶಾಖೆಗಳನ್ನು ತೆರೆಯಲಾಯಿತು; ಹೈದರಾಬಾದು ಕರ್ನಾಟಕದಲ್ಲಿದ್ದ ನೂರಾರು ಅಲ್ಪವೇತನದ ಹಂಗಾಮೀ ಶಿಕ್ಷಕರನ್ನು ಪೂರ್ಣಾವಧಿಯ ಶಿಕ್ಷಕರನ್ನಾಗಿ ಪರಿವರ್ತಿಸಲಾಯಿತು; ತಾಲೂಕಾ ಶಾಲಾಭಿವೃದ್ಧಿ ಸಮಿತಿಗಳ ಸಮ್ಮೇಳನವೊಂದನ್ನು ಬಾಗಲಕೋಟೆಯಲ್ಲಿ ಯಶಸ್ವಿಯಾಗಿ ಜರುಗಿಸಿ ಅದನ್ನೊಂದು ಪ್ರಬಲ ಜನಾಂದೋಲನವನ್ನಾಗಿ ರಾಜ್ಯದೆಲ್ಲೆಲ್ಲ ವಿಸ್ತರಿಸಲಾಯಿತು; ಶಾಲಾ ಮಕ್ಕಳಿಗೆ ಮಧ್ಯಾಹ್ನದ ಉಪಾಹಾರದ ಯೋಜನೆಯನ್ನು ಪ್ರಾರಂಭಿಸಲಾಯಿತು; ಒಟ್ಟಿನಲ್ಲಿ ಶಿಕ್ಷಣ ಇಲಾಖೆಯ ಯೋಜನಾ ವೆಚ್ಚ ಶೇಕಡಾ 60 ರಿಂದ 120ಕ್ಕೆ ಏರುವಂತೆ ಮಾಡಲಾಯಿತು!



## ಬೀದರಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ :

ಬೀದರಿನಿಂದ ಬಹುದೂರ ಬಂದಿದ್ದರೂ ಬೀದರ ಜಿಲ್ಲೆಯಲ್ಲಿ ಕನ್ನಡದ ಪುನರುಜ್ಜೀವನ ಪ್ರಯತ್ನಗಳು ನಿಲ್ಲಕೂಡದೆಂಬುದು ನನ್ನ ಉತ್ಕಟ ಅಭಿಲಾಷೆಯಾಗಿದ್ದಿತು. ಆದುದರಿಂದ ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ, ಕನ್ನಡ ನಾಡಿನ ಹಿರಿಯರಲ್ಲೊಬ್ಬರೂ ಆಗಿದ್ದ ಪಂಡಿತ ರತ್ನಂ ಬಿ. ಶಿವಮೂರ್ತಿಶಾಸ್ತ್ರಿಗಳವರನ್ನು ಒಪ್ಪಿಸಿ ಬೀದರ ನಗರದಲ್ಲಿ ನಲವತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನವು ನಡೆಯುವ ಹಾಗೆ ಮಾಡಿದೆನು. ಬೀದರದ ಹಿರಿಯ ಕನ್ನಡಿಗರೂ ಇದಕ್ಕೆ ಉತ್ಸಾಹದೊಡನೆ ಒಪ್ಪಿದರು. ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಗಳಲೊಬ್ಬರಾಗಿದ್ದ ಜಿ. ಅನ್ನದಾನಯ್ಯ ಪುರಾಣಿಕರೂ ಇದರಲ್ಲಿ ಪ್ರಮುಖ ಪಾತ್ರವಹಿಸಿದರು. ಗೌರವ ಕೋಶಾಧಿಕಾರಿ ಜಿ. ಶ್ರೀನಿವಾಸನ್, ಇನ್ನೊಬ್ಬ ಕಾರ್ಯದರ್ಶಿ ಕೆ. ಗೋಪಾಲ ಕೃಷ್ಣರಾಯರೂ ತುಂಬ ಸಹಕರಿಸಿದರು. ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಪ್ರಭುರಾವ್ ವಕೀಲರೂ, ಮುಖ್ಯ ಕಾರ್ಯದರ್ಶಿಯಾಗಿ ಬಿ.ಕೆ. ಕೇಸ್ಕರರೂ ಕಾರ್ಯದರ್ಶಿಗಳಾಗಿ ಸರ್ವಶ್ರೀ ಪಿ.ಎಂ. ಗಲಗಲಿ ಹಾಗೂ ಎಸ್.ಆರ್. ಫಡನಿಸರೂ, ಕೋಶಾಧಿಕಾರಿಯಾಗಿ ಗೋಪಿಕಿಷನ್ ಅವರೂ ಬಹಳ ದುಡಿದು ಬೀದರಿನ ನೆಹರು ಪಾರ್ಕಿನಲ್ಲಿ ಭವ್ಯವಾದ ಬಸವೇಶ್ವರ ಸಭಾ ಮಂಟಪವನ್ನು ನಿರ್ಮಿಸಿದರು; ಎಲ್ಲ ಏರ್ಪಾಟುಗಳನ್ನೂ ಚೊಕ್ಕಟವಾಗಿ ಮಾಡಿದರು. ಸಮ್ಮೇಳನ 1960ರ ಫೆಬ್ರುವರಿ 11, 12, 13–ಈ ಮೂರು ದಿನ ಬಹಳ ವೈಭವ ಹಾಗೂ ಉತ್ಸಾಹಗಳೊಡನೆ ನಡೆಯಿತು.

ಪಂಡಿತ ಪ್ರಕಾಂಡರಾಗಿದ್ದ ಪ್ರೊ. ಡಿ.ಎಸ್. ನರಸಿಂಹಾಚಾರ್ ಅವರೇ ಸಮ್ಮೇಳನಾಧ್ಯಕ್ಷರು; ಅಂದಿನ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಬಿ.ಡಿ. ಜತ್ತಿಯವರೇ ಉದ್ಘಾಟಕರು. ಪ್ರೊ. ಡಿ.ಕೆ. ಭೀಮಸೇನರಾಯರ ಅಧ್ಯಕ್ಷತೆಯಲ್ಲಿ ಗ್ರಂಥ ಪ್ರದರ್ಶನವೂ, ನನ್ನ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿಯೂ, ಮಾನ್ವಿಯವರ ಅಧ್ಯಕ್ಷತೆಯಲ್ಲಿ ಸಂಶೋಧನಾ ಮತ್ತು ವಿಮರ್ಶಾಗೋಷ್ಠಿಯೂ, ಆರ್.ಬಿ. ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ಪತಿಕ್ರಾಗೋಷ್ಠಿಯೂ, ಜಯದೇವಿ ತಾಯಿ ಲಿಗಾಡೆಯವರ ಅಧ್ಯಕ್ಷತೆಯಲ್ಲಿ ಮಹಿಳಾ ಗೋಷ್ಠಿಯೂ ಬಹಳ ಯಶಸ್ವಿಯಾಗಿ ನಡೆದುವು. ಅಣ್ಣಾರಾವ್ ಗಣಮುಖಿಯವರು ಪತ್ರಿಕಾಗೋಷ್ಠಿಯ ಉದ್ಘಾಟಕರಾಗಿದ್ದುದರಿಂದ ನಾನು ಅವರೊಡನೆಯೇ ಹೊರಟೆ. ಹೈದರಾಬಾದಿನ "ಲೇಕ್ ವ್ಹಿವ್" ಅತಿಥಿ ಭವನದಲ್ಲಿ ಸಂಶೋಧನಾ ಮತ್ತು ವಿಮರ್ಶಾಗೋಷ್ಠಿಯ ಉದ್ಘಾಟಕರಾಗಿದ್ದ ಮಾನ್ಯ ಕೆ. ಹನುಮಂತಯ್ಯನವರ ಭೇಟಿಯಾಯಿತು. ಅವರ ಅಣ್ಣಾರಾಯರಿಗೆ ಹೇಳಿ ನನ್ನನ್ನು ತಮ್ಮ ಕಾರಿನಲ್ಲಿ

ಕುಳ್ಳಿರಿಸಿಕೊಂಡರು. ಹೈದರಾಬಾದಿನಿಂದ ಬೀದರದವರೆಗೆ ನನ್ನಿಂದ ಕನ್ನಡ ಸಾಹಿತ್ಯದ ಅನೇಕ ವಿಷಯಗಳನ್ನು ತಿಳಿದುಕೊಂಡರು. ಬೀದರಿನ ಜನ ಅವರಿಗೂ ಅಣ್ಣಾರಾಯರಿಗೂ ಆತ್ಮೀಯ ಸ್ವಾಗತ ನೀಡಿದರು. ಸ್ವಲ್ಪ ಸಮಯದಲ್ಲಿಯೇ ನಗೆ ಹೋಗಿ ಹೊಗೆಯಾಯಿತು. ಕೆ. ಹನುಮಂತಯ್ಯನವರ ಹಾಸಿಗೆ ಗಂಟು ಹಾದಿಯಲ್ಲಿ ಬಿದ್ದು ಹೋಗಿದ್ದಿತು. 'ಅದರಲ್ಲಿ ನನ್ನ ಪ್ರೀತಿಯ ಕಾಶ್ಮೀರೀ ಶಾಲು ಇದ್ದಿತು,' ಎಂದು ಹೇಳಿ ವ್ಯಥಿತರಾದರು ಹನುಮಂತಯ್ಯನವರು. ನಾನು ಕೂಡಲೇ ಹುಡುಕಲೆಂದು ಹೊರಟುಬಿಟ್ಟೆ. ಬಂದ ಹಾದಿಯ ಎರಡೂ ಬದಿಗಳ ಮೇಲೂ ನೋಟ ಹರಿಸುತ್ತ 25-30 ಮೈಲಿಗಳವರೆಗೆ ಹೋದರೂ ಪ್ರಯೋಜನವಾಗಲಿಲ್ಲ. ಸುಮ್ಮನೆ ಪೆಟ್ರೋಲ್ ಸುಡುವುದಕ್ಕಿಂತ ಹಿಂದಿರುಗಿ ಹೋಗಿಬಿಡುವುದೇ ವಿಹಿತವೆಂದೆನ್ನಿಸಿತು. ಆದರೂ ಮುಂದುವರಿದೆ. ಒಂದೆರಡು ಮೈಲಿ ಹೋಗುವಷ್ಟರಲ್ಲಿ ಬಲಗಡೆಯ ಹೊಲದಲ್ಲಿ ಅಣ್ಣತಂಗಿಯರಿಬ್ಬರು ನಿಂತಿದ್ದರು. ಅವರಿಬ್ಬರೂ ಎಳೆವಯದವರು. ನಾನು ಕಾರಿನಲ್ಲಿ ಅತ್ತೊಮ್ಮೆ ಇತ್ತೊಮ್ಮೆ ನೋಡುತ್ತಲಿದ್ದುದನ್ನು ಕಂಡು ಕೈಮಾಡಿ ಕಾರು ನಿಲ್ಲಿಸಿದರವರು. ಬಳಿಗೆ ಬಂದು ಕೇಳಿದರು; "ನೀವು ಹಾಸಿಗೆ ಹುಡುಕುತ್ತ ಹೊರಟಿರುವಿರಾ?" ನಾನು ಹೌದೆಂದು ಹೇಳಲು ಓಡಿ ಹೋಗಿ ಬೆಳೆಸಾಲುಗಳ ಮರೆಗೆ ಇರಿಸಿದ್ದ ಹಾಸಿಗೆ ಗಂಟು ತಂದುಕೊಟ್ಟರು. ನಾನು ಐದು ರೂಪಾಯಿ ಇನಾಮು ಕೊಡಲು ಹೋದೆ. ತೆಗೆದುಕೊಳ್ಳಲಿಲ್ಲ ಅವರು; 'ನಿಮ್ಮ ಸಾಮಾನು ನಿಮಗೆ ಮುಟ್ಟಿಸಿದ್ದೇವೆ. ಇದಕ್ಕೇಕೆ ಇನಾಮು?' ಎಂದು ಓಡಿ ಹೋದರು. ಹಾಸಿಗೆಯೊಡನೆ ಹಿಂದಿರುಗಿದಾಗ ಹನುಮಂತಯ್ಯನವರಿಗೆ ಆಶ್ಚರ್ಯ, ಆನಂದ, ಅವರು ಅಷ್ಟಕ್ಕೇ ತೃಪ್ತರಾಗಲಿಲ್ಲ-ತಮ್ಮ ಉದ್ಘಾಟನ ಭಾಷಣದಲ್ಲಿ ಆ ವಿಷಯ ಪ್ರಸ್ತಾಪಿಸಿ, "ಬೀದರ ಜಿಲ್ಲೆ ಬಸವಭೂಮಿ. ಆದುದರಿಂದಲೇ ಇಲ್ಲಿಯ ಜನರಲ್ಲಿ ಬಸವಾದಿ ಪ್ರಮಥರು ಬಿತ್ತಿ ಹೋದ ಸದಾಚಾರ ಸಂಪತ್ತು ಇನ್ನೂ ಉಳಿದಿದೆ," ಎಂದು ಉದ್ಗರಿಸಿದರು. ಆ ವಿರಾಟ್ ಸಭೆಯಲ್ಲಿ ವಿದ್ಯುತ್ ಸಂಚಾರವಾದಂತಾಯಿತು.

## ಡಿ.ಎಲ್. ನರಸಿಂಹಾಚಾರ್ :

ಸಮ್ಮೇಳನಾಧ್ಯಕ್ಷ ಡಿ.ಎಲ್. ನರಸಿಂಹಾಚಾರ್ಯರಿಗೂ ಒಳಗುದಿಯೊಂದಿದ್ದಿತು. ಸಿದ್ಧರಾಮನ ಬಗ್ಗೆ ಅವರು ಬರೆದಿದ್ದುದು ಕೆಲವಡೆಗಳಲ್ಲಿ ಕೋಪೋದ್ರೇಕಕ್ಕೆ ಕಾರಣವಾಗಿದ್ದಿತು. ಅದು ಈ ಸಮ್ಮೇಳನದಲ್ಲಿಯೂ ಕೆಲವರಿಂದಲಾದರೂ ಕಹಿಗೆ ಕಾರಣವಾದರೆ ಹೇಗೆ?- ಎಂಬುದೇ ಆ ಒಳಗುದಿಯಾಗಿದ್ದಿತು. ನನ್ನೊಡನೆ ಎದೆದೆರೆದು ಮಾತನಾಡುತ್ತಿದ್ದ ಅವರು ಮಧ್ಯಾಹ್ನದ ಊಟ ಮುಗಿದಾಗ, ಸಮ್ಮೇಳನ



ಪ್ರಾರಂಭವಾಗುವ ಮುನ್ನ, ನನ್ನನ್ನು ಬದಿಗೆ ಕರೆದು ತಮ್ಮೆದೆಯ ಅಳುಕನ್ನು ತಿಳಿಸಿದರು ನನಗೆ. ನಾನವರ ಸಂಶಯ ಕರಗುವಂತೆ ಹೇಳಿದೆ, "ಇದು ನನ್ನ ಹೆಮ್ಮೆಯ ಬೀದರ ಜಿಲ್ಲೆ. ಇಲ್ಲಿ ಅಂಥ ಯಾವ ಅಹಿತಕರ ಘಟನೆಯೂ ಜರುಗದೆಂದು ತಮಗೆ ಭರವಸೆ ನೀಡುತ್ತೇನೆ." ಅವರು ಪ್ರಮುದಿತರಾದರು. ಸಮ್ಮೇಳನ ಯಾವುದೊಂದು ಕಹಿ ನೆನಪಿನ ಸ್ಮರಣೆಯಿಲ್ಲದೆಯೇ ಸಾಂಗವಾಯಿತು, ಸ್ವಾಗತಾಧ್ಯಕ್ಷರ ಭಾಷಣ ನಾಗರಿಲಿಪಿಯಲ್ಲಿದ್ದುದು ಆ ಜಿಲ್ಲೆಯಲ್ಲಿ ಕನ್ನಡಕ್ಕೊದಗಿದ್ದ ದುರವಸ್ಥೆಯ ದರ್ಪಣದಂತಿದ್ದಿತು. ಗೋಷ್ಠಿಗಳೂ ಬಹಳ ಯಶಸ್ವಿಯಾಗಿ ನಡೆದುವು. ಅವುಗಳ ಅಧ್ಯಕ್ಷರುಗಳ ಭಾಷಣಗಳಷ್ಟೇ ಅಲ್ಲ, ಉದ್ಘಾಟಕರಾಗಿದ್ದ ಜತ್ತಿ, ಕೆಂಗಲ್, ಗಣಮುಖಿ, ಡಾ॥ ಟಿ.ಎಂ.ಪೈ, ವಿದ್ಯಾಭೂಷಣ ಎಂ.ಪಿ.ಎಲ್. ಶಾಸ್ತ್ರಿ, ಶ್ರೀಮತಿ ಲೀಲಾವತಿ ಮಾಗಡಿಯವರ ಭಾಷಣಗಳೂ ನೆರೆದ ಸಹಸ್ರಾವಧಿ-ಸಭಿಕರಿಗೆ ಹಿಡಿಸಿದುವು.

ರಾಜಾಜಿನಗರದ ಗೆಳೆಯರು-ಪ್ರೊ॥ ಎಂ.ಎಸ್. ನಾಗರಾಜ, ಬಿ. ರಾಮರಾವ್, ರಾಜಾರಾಮ ಗಿರಿಯನ್, ಎಂ.ಜಿ. ನರಸಿಂಹಸ್ವಾಮಿ, ಎಸ್. ಪ್ರಮೀಳಾ ಮೊದಲದವರು-ಲಲಿತಕಲಾ ನಿಕೇತನವೆಂಬ ಸಂಸ್ಥೆಯನ್ನು ಕಟ್ಟಿ ಅದಕ್ಕೆ ಅಧ್ಯಕ್ಷನಾಗುವ ಗೌರವವನ್ನು ನನಗೆ ನೀಡಿದ್ದರು. ಶ್ರೀರಂಗರ ನಾಟಕಗಳನ್ನು ಆಡುವುದರಲ್ಲಿ ತುಂಬ ಪರಿಣತಿಯನ್ನು ಪಡೆದಿದ್ದರು. ಅವರು ಈ ಸಮ್ಮೇಳನದ ಮೂರು ದಿನ ನಾಟಕಗಳನ್ನು-"ಪತಿತೋದ್ಧಾರಕ ಶ್ರೀ ಬಸವೇಶ್ವರ" "ಹಣಹದ್ದು" ಹಾಗೂ "ರಾಹು ಕಾಲ"ಗಳನ್ನು-ಬಹಳ ಚೆನ್ನಾಗಿ ಆಡಿ ಬಹಳ ಮೆಚ್ಚಿಗೆ ಗಳಿಸಿದರು. ನಾಟ್ಯಕಲಾ ವಿಶಾರದ ಎಂ.ಸಿ. ಮಹಾದೇವಸ್ವಾಮಿ ಎಂ.ಎಲ್.ಸಿ. ಅವರು ಮನರಂಜನೆಯ ಕಾರ್ಯಕ್ರಮಗಳನ್ನು ಉದ್ಘಾಟಿಸಿದರು.

ಇದೇ ಸಂದರ್ಭದಲ್ಲಿ ಹೈದರಾಬಾದು ಪ್ರದೇಶ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಸಮಿತಿಯ ಸಭೆಯನ್ನು ಕರೆದಿದ್ದೆ-ಅದರ ಭವಿತವ್ಯದ ನಿರ್ಣಯಕ್ಕಾಗಿ. ರಾಜ್ಯ ಪುನರ್ಘಟನೆಯ ಫಲವಾಗಿ ಈಗ ಇಡಿಯ ಕನ್ನಡ ನಾಡು ಒಂದಾಗಿರುವುದರಿಂದ ಇಂಥ ಪ್ರಾದೇಶಿಕ ಕನ್ನಡ ಸಾಹಿತ್ಯ ಪರಿಷತ್ತುಗಳ ಆಗತ್ಯ ಉಳಿದಿಲ್ಲವೆಂದೂ, ಇದನ್ನು ವಿಸರ್ಜಿಸಿ ಇದರ ಉಳಿತಾಯ ಮೂರು ಸಾವಿರ ರೂಪಾಯಿಗಳನ್ನು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ದತ್ತಿಯಾಗಿಡಬೇಕೆಂದೂ, ಈ ದತ್ತಿಯನ್ನು ಸ್ಥಾಪಿಸುವುದಕ್ಕಾಗಿ ಕೈಗೊಳ್ಳಬೇಕಾದ ಎಲ್ಲ ಕ್ರಮಗಳನ್ನು ಕಾರ್ಯದರ್ಶಿಗಳಾದ ಶ್ರೀ ಸಿದ್ಧಯ್ಯಪುರಾಣಿಕರು ಕೈಗೊಳ್ಳಬೇಕೆಂದೂ ಸಮಿತಿ ಸರ್ವಾನುಮತದಿಂದ ನಿರ್ಣಯಿಸಿತು. ಆ ಪ್ರಕಾರ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಮೂರು ಸಾವಿರ ರೂಪಾಯಿಗಳ ದತ್ತಿಯನ್ನಿರಿಸಲಾಯಿತು, 'ಮಾನ್ವಿ'ಯವರು

ದೈವಾಧೀನರಾಗಲು ಆ ದತ್ತಿಗೆ ಮಾನ್ವಿ ನರಸಿಂಗ ರಾವ್ ದತ್ತಿಯೆಂದು ಹೆಸರಿಸಿ ವರ್ಷಕ್ಕೊಂದು ಉಪನ್ಯಾಸವನ್ನು ಹೈದರಾಬಾದಿನಿಂದ ಬಂದ ಆ ಮೂರು ಜಿಲ್ಲೆಗಳಲ್ಲಿ ಮಾನ್ವಿಯವರ ಹೆಸರಿನಲ್ಲಿ ನಡೆಸಬೇಕೆಂದು ಅಂತಿಮವಾಗಿ ನಿರ್ಣಯವಾಗಿದೆ.

## ಕನ್ನಡದ ಕೆಲಸ :

ಈ ಪರಿಷತ್ತಿನ ಮಂಗಳ ಹಾಡುವ ಮುನ್ನ ಅದು ಆ ಮೂರು ಜಿಲ್ಲೆಗಳಲ್ಲಿ ಮಾಡಿದ ಕನ್ನಡ ಜಾಗೃತಿಯ, ಕನ್ನಡ ಪ್ರಸಾರದ ಕಾರ್ಯ ಐತಿಹಾಸಿಕ ಮಹತ್ವವುಳ್ಳುದೆಂದೂ, ಅದರ ಸಂಪೂರ್ಣ ವಿವರಣೆಗೆ ಇಲ್ಲಿ ಸ್ಥಳ ಸಾಲದೆಂದೂ ಹೇಳದಿರಲಾರೆ. ಅದರ ಕಾರ್ಯಸಮಿತಿಯಲ್ಲಿದ್ದುಕೊಂಡೂ, ಬೇರೆ ರೀತಿಯಿಂದಲೂ ಇದನ್ನು ಸಾಧ್ಯವಾಗಿಸಿದ ಪ್ರೊ. ಡಿ.ಕೆ. ಭೀಮಸೇನರಾಯರು, ಪ್ರೊ. ತವಗ ಭೀಮಸೇನರಾಯರು, ರಾ.ಗು. ಜೋಶಿ ಅವರು, ಅವರಾದಿ ದತ್ತಾತ್ರೇಯ ಅವರು, ಪ್ರಭುರಾವ್ ವಕೀಲರು, ಕೆ.ಎಸ್. ರಾಜ ಅವರು, ಕೆ. ಕೋನಪ್ಪನವರು, ಮುದ್ನಾಳ ವಿಶ್ವನಾಥರೆಡ್ಡಿಯವರು, ಸಗರ ಕೃಷ್ಣಾಚಾರ್ಯರು, ಹೋಳಿ ಶೇಷಗಿರಿ ರಾಯರು, ಗ.ಕ. ಸೋಮಯಾಜಿ ಅವರು, ಪಂಚಾಕ್ಷರಿ ಗುರುಪಾದಮಠ ಅವರು, ಯಾದಗಿರಿ ಗುರುಸಿದ್ಧ ಶಾಸ್ತ್ರಿಗಳು, ವೀರೇಶ್ವರ ಶಾಸ್ತ್ರಿಗಳು, ದೇವೇಂದ್ರಕುಮಾರ ಹಕಾರಿ ಅವರು, ಶ್ರೀ ಮತ್ತು ಶ್ರೀಮತಿ ಫಡನಿಸ್ ಅವರು, ಗಣೇಶ ಜೋಶಿ ಅವರು, ಮಾಧವರಾವ್ ಪಾಟೀಲ ಅವರು, ಶಾಂತರಸರು–ಇನ್ನೂ ಅನೇಕರ ಸೇವೆ ಸ್ಮರಣಾರ್ಹವಾದುದು.

ಮೂರು ಜಿಲ್ಲೆಗಳಲ್ಲಿ ಇಂದು ಸಂಚರಿಸುವವರಿಗೆ ಅಂದು ಈ ಕನ್ನಡ ಹೋರಾಟಗಾರರು ಕನ್ನಡಕ್ಕಾಗಿ ಗೈದ ಸೇವೆ, ಸಹಿಸಿದ ಶ್ರಮ, ತೋರಿದ ತ್ಯಾಗಗಳ ಕಲ್ಪನೆ ಬರದೆ ಹೋಗಬಹುದು. ಇಂದು ಆ ಜಿಲ್ಲೆಗಳಲ್ಲಿಯೂ ಸಾಕಷ್ಟು ಶಾಲೆ ಕಾಲೇಜುಗಳು ಕಂಗೊಳಿಸುತ್ತಿವೆ. ಪೂಜ್ಯ ದೊಡ್ಡಪ್ಪಾ ಶರಣಬಸಪ್ಪಾ ಅಪ್ಪಾ ಅವರು ಆಗ ಪ್ರಾರಂಭಸಿದ್ದ ಮಹಾದೇವಿ ಕನ್ಯಾಶಾಲೆಯ ಸುತ್ತಲೂ ಅನೇಕ ಕಾಲೇಜುಗಳು ತಲೆಯೆತ್ತಿ ನಿಂತಿವೆ. ಅವರ ಸುಪುತ್ರ ಶ್ರೀ ಶರಣಬಸಪ್ಪಾ ಅಪ್ಪಾ ಅವರು ಮಹಾಕಾರ್ಯದರ್ಶಿಗಳಾಗಿರುವ ಶ್ರೀ ಶರಣ ಬಸವೇಶ್ವರ ವಿದ್ಯಾ ಸಂಸ್ಥೆಯಿಂದು ಶಾಖೋಪಶಾಖೆಗಳನ್ನೊಳಗೊಂಡ ಮಹಾವೃಕ್ಷವಾಗಿ ಬೆಳೆಯುತ್ತಿದೆ. ಎಚ್.ಕೆ.ಈ. ಸೊಸೈಟಿಯ ಕಾಲೇಜುಗಳೂ ಹಲವೆಡೆಗಳಲ್ಲಿ ಹರಡಿವೆ. ಆದರೆ ನಾನು ಕಲಬುರಗಿಯಲ್ಲಿ ವಿದ್ಯಾರ್ಥಿಯಾಗಿದ್ದಾಗ ಒಂದು ಕನ್ನಡ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಬೇಕಾದರೆ ಅದೆಷ್ಟು ಕಷ್ಟ ಅನುಭವಿಸಬೇಕಾಗಿತ್ತು! ಗುಬ್ಬಿ ವೀರಣ್ಣನವರ ನಾಟಕ ಕಂಪನಿ ಕಲಬುರಗಿಗೆ ಬರಲು ಒಂದು ನಾಟಕದ ಆದಾಯವನ್ನು ಆ ಉದ್ದೇಶಿತ ಕನ್ನಡ ಶಾಲೆಗಾಗಿ ನೀಡುವಂತೆ ಅವರನ್ನು ಕೇಳಿಕೊಂಡಿದ್ದೆವು. ಜನ್ಮತಃ



ಉದಾರರಾಗಿದ್ದ ಅವರು ಒಪ್ಪಿ 'ಸದಾರಮೆ' ಎಂಬ ತಮ್ಮ ಪ್ರಸಿದ್ಧ ನಾಟಕದ ಒಂದು ಪ್ರಯೋಗವನ್ನು ನಮಗಾಗಿ ಧರ್ಮಾರ್ಥ ನೀಡಿದ್ದರು. ನಾವೆಲ್ಲರೂ ಗೆಳೆಯರೂ ಮನೆ ಮನೆ ತಿರುಗಿ ಟಿಕೆಟ್ಟುಗಳನ್ನು ಮಾರಿದುದರ ಪರಿಣಾಮವಾಗಿ ಮೂರು ಸಾವಿರ ರೂಪಾಯಿಗಳು ನಮಗೆ ದೊರೆತಿದ್ದುವು. ಆ ದಿನಗಳಲ್ಲಿ ಆದೊಂದು ದೊಡ್ಡ ರಕಮು. ಅದರ ಆಧಾರದಿಂದಲೇ ಶ್ರೀ ಶರಣ ಬಸವೇಶ್ವರ ಕನ್ನಡ ಶಾಲೆಯನ್ನು ಆರಂಭಿಸಿದ್ದೆವು. ಗೆಳೆಯ ಸಿದ್ಧವೀರಯ್ಯನವರೇ ಮುಖ್ಯೋಪಾಧ್ಯಾಯರು! ಆ ಕಾರ್ಯ ಸಾಧ್ಯವಾದಾಗ ನಮಗೆಲ್ಲ ಒಂದು ಅಭೂತಪೂರ್ವ ಸಾಧನೆಯನ್ನು ಮಾಡಿದ ಉಲ್ಲಾಸ, ಉತ್ಸಾಹ ಉಕ್ಕಂದ! ಇಂದಿನ ಕಣ್ಣುಗಳಿಂದ ಅದನ್ನು ನೋಡಿದಾಗ ಆ ಉಕ್ಕಂದ ಆಗದಿರುವುದು ಆಶ್ಚರ್ಯವಲ್ಲ. ಈಗ ಕಲಬುರಗಿ ವಿಶ್ವವಿದ್ಯಾನಿಲಯ ಕೇಂದ್ರವಾಗಿಬಿಟ್ಟಿದೆ.

ಆದರೆ, ಶಾಲೆ ಕಾಲೇಜುಗಳು ಹೆಚ್ಚಿವೆಯೆಂದಾಕ್ಷಣ ಕನ್ನಡದ ಅಭಿಮಾನವೂ ಅದೇ ಪ್ರಮಾಣದಲ್ಲಿ ಹೆಚ್ಚಿದೆಯೆಂದು ಹೇಳಲಾಗುವುದಿಲ್ಲ. ಈ ಮಾತು ಆ ಮೂರು ಜಿಲ್ಲೆಗಳಿಗೆ ಮಾತ್ರವಲ್ಲ, ಕನ್ನಡ ನಾಡಿನ ಎಲ್ಲ ಜಿಲ್ಲೆಗಳಿಗೂ ಅನ್ವಯಿಸುತ್ತದೆ. ಕರ್ನಾಟಕದ ಏಕೀಕರಣಕ್ಕೆ ಮೊದಲು ಇದ್ದ ಕನ್ನಡದ ಉತ್ಕಟಾಭಿಮಾನ ಏಕೀಕರಣವಾದ ಮೇಲೆ ಎಲ್ಲೆಡೆಗಳಲ್ಲಿಯೂ ಹಿಂಜರಿತಕ್ಕೆ ಒಳಗಾಗಿದೆ. ಇದಕ್ಕೆ ಅಪವಾದವೆಂದು ಅಲ್ಲಲ್ಲಿ ವ್ಯಕ್ತಿಗಳೂ, ಸಂಘ ಸಂಸ್ಥೆಗಳೂ ಇರಬಹುದು. ಆದರೆ ಒಟ್ಟು ನೋಟಕ್ಕೆ ಕಾಣುವ ಚಿತ್ರ ಇದು: ನಮ್ಮ ನಾಡು 'ಬದುಕು ಬಲುಹಿನ ನಿಧಿ'ಯಾಗಿ, 'ಸದಭಿಮಾನದ ಗೂಡಾಗಿ' ಬೆಳೆಯುತ್ತಿಲ್ಲ. ಇಲ್ಲಿಯೇ ಹುಟ್ಟಿ ಬೆಳೆದ ಕನ್ನಡಿಗರಿಗೇ ಬದುಕೂ ಇಲ್ಲ, ಬಲುಹೂ ಇಲ್ಲ–ಯಾಕೆಂದರೆ ಅವರಿಗೆ ಸದಭಿಮಾನವೇ ಇಲ್ಲ! ಸದಭಿಮಾನವಿಲ್ಲದ ಕನ್ನಡಿಗ ಕನ್ನಡಿಗನೇ ಅಲ್ಲ!

ಈ ನಿರಭಿಮಾನಕ್ಕೆದುರಾಗಿ ಒಂದು ದುರಭಿಮಾನವನ್ನೂ ನಿಲ್ಲಿಸೋಣ. ಇದೊಂದು ಅತಿರೇಕವಾದರೆ ಅದೊಂದು ಅತಿರೇಕ! ಈ ದೇಶದಲ್ಲಿ ಬದುಕುವ ಹಕ್ಕು ಅತಿರೇಕಗಳಿಗೆ ಮಾತ್ರ ಲಭ್ಯವೇನೊ! ಶಿಕ್ಷಣ ಮಂತ್ರಿಗಳ ಸಭೆಗಾಗಿ ದೆಹಲಿಗೆ ಹೋಗಿದ್ದೆವು. ಆಗ ಇದ್ದ ಸದ್ಗೃಹಸ್ಥ ಸಂಧಿ (Gentleman's agreement) ಯಂತೆ ಎಲ್ಲ ರಾಜ್ಯಗಳ ಮಂತ್ರಿಗಳೂ ಇಂಗ್ಲೀಷಿನಲ್ಲಿ ಮಾತನಾಡಿದರು–ಹಿಂದೀ ಎಲ್ಲರಿಗೂ ಇನ್ನೂ ಸರಿಯಾಗಿ ಬರುತ್ತಿರಲಿಲ್ಲವೆಂಬ ಕಾರಣದಿಂದ. ಹಿಂದೀ ರಾಜ್ಯಗಳಾದ ಬಿಹಾರ, ಮಧ್ಯಪ್ರದೇಶಗಳ ಶಿಕ್ಷಣ ಸಚಿವರೂ ಇಂಗ್ಲೀಷನಲ್ಲಿ ಮಾತನಾಡಿದರು. ಆದರೆ ಆಗ ಉತ್ತರಪ್ರದೇಶದ ಶಿಕ್ಷಣ ಸಚಿವರಾಗಿದ್ದ ಪಂಡಿತ ಕಮಲಾಪತಿ ತ್ರಿಪಾಠಿಯವರು ಮಾತ್ರ ಚೆನ್ನಾಗಿ ಇಂಗ್ಲೀಷ್ ಬರುತ್ತಿದ್ದೂ ಹಿಂದಿಯಲ್ಲಿ

ಮಾತನಾಡಲು ಆರಂಭಿಸಿದರು. ಹಿಂದೀ ಬಾರದ ಶಿಕ್ಷಣ ಸಚಿವರು 'ದಯವಿಟ್ಟು ಇಂಗ್ಲೀಷ್‌ನಲ್ಲಿ ಮಾತನಾಡಿ; ನಮಗೆ ಹಿಂದೀ ಬರುವುದಿಲ್ಲ," ಎಂದು ಕೇಳಿಕೊಂಡರು. ಕೇಂದ್ರ ವಿದ್ಯಾಮಂತ್ರಿಗಳೂ, ಯು.ಜಿ.ಸಿ. ಅಧ್ಯಕ್ಷ ಸಿ.ಡಿ. ದೇಶಮುಖರೂ ಬೆಂಬಲಿಸಿದರು ಈ ಬೇಡಿಕೆಯನ್ನು. ಆದರೂ ಅವರು, "ನಾನು ಹಿಂದಿಯಲ್ಲಿಯೇ ಮಾತನಾಡುವೆ," ಎಂದು ಹಠದಿಂದ ಹಿಂದಿಯಲ್ಲಿ ಮಾತನಾಡಿದರು. ಅವರ ಮಾತು ಮುಗಿಯತ್ತಲೇ ಆಗ ಆಂಧ್ರಪ್ರದೇಶದ ವಿದ್ಯಾಮಂತ್ರಿಗಳಾಗಿದ್ದ ಪಟ್ಟಾಭಿರಾಮರಾವ್ ಎದ್ದು, ಆ ಮಹಾಶಯಲುಗಾರ," ಎಂದು ತೆಲುಗಿನಲ್ಲಿ ತಮ್ಮ ಮಾತನ್ನು ಪ್ರಾರಂಭಿಸಿದರು. ಸಭೆಯಲ್ಲಿ ಗುಜು ಗುಜು. ಮುಂದೆ ಇಂಗ್ಲೀಷಿನಲ್ಲಿ ಮಾತನ್ನು ಮುಂದುವರಿಸಿದ ಅವರೆಂದರು: "ನಾನು ನನ್ನ ರಾಜ್ಯದಲ್ಲಿ ಹಿಂದೀ ಪ್ರಸಾರಕ್ಕಾಗಿ ಅದೆಷ್ಟು ಹೆಣಗುತ್ತಲಿದ್ದೇನೆಂಬುದು ಪ್ರಾಯಶಃ ಪಂಡಿತ ತ್ರಿಪಾಠಿಯವರಿಗೆ ಗೊತ್ತಿಲ್ಲ. ನಾನೂ ಹಿಂದೀ ಕಲಿಯುತ್ತಲಿದ್ದೇನೆ; ಆದರೆ ಇಂಥ ಉನ್ನತ ಮಟ್ಟದ ಸಭೆಗಳಲ್ಲಿ ಮಾತನಾಡುವಷ್ಟು ಹಿಂದಿಯನ್ನಿನ್ನೂ ಕಲಿತಿಲ್ಲ. ಕಲಿತಾಗ ನಾನೇ ಹಿಂದಿಯಲ್ಲಿ ಮಾತನಾಡುವೆನು. ಅಲ್ಲಿಯವರೆಗೆ ನಮ್ಮ ಹಿಂದಿಯ ಮಿತ್ರರು ನಮಗಾಗಿ ಇಂಗ್ಲೀಷಿನಲ್ಲಿ ಮಾತನಾಡಬೇಕು. ಅವರು ಇದನ್ನು ಮಾಡದಿದ್ದರೆ ಅವರೇ ಹಿಂದೀ ಪ್ರಚಾರಕ್ಕೆ ಅಡ್ಡಿ ತರುವರು, ಅಡ್ಡ ಬರುವರು!"

ನನಗೆ ಈ ವಾದ ಬಹಳ ಹಿಡಿಸಿತು. ಅಣ್ಣಾರಾಯರಿಗೆ ಸನ್ನೆ ಮಾಡಿದೆ. ಅವರೂ ಎದ್ದು ಕನ್ನಡದಲ್ಲಿ ಕೆಲವು ವಾಕ್ಯಗಳನ್ನು ಹೇಳಿ, ಇಂಗ್ಲೀಷಿನಲ್ಲಿ ತಮ್ಮ ಆಂಧ್ರ ಬಂಧುವಿನ ವಿಚಾರ ಸರಣಿಯನ್ನು ಸಮರ್ಥಿಸಿದರು; ಕೊನೆಗೆ ಶುದ್ಧ ಹಿಂದಿಯಲ್ಲಿ ಕೆಲ ಹೊತ್ತು ಮಾತನಾಡಿ ವಿರಮಿಸಿದರು. ಎಲ್ಲರೂ ಕೈತಟ್ಟಿ ತಮ್ಮ ಮೆಚ್ಚಿಗೆ ಸೂಚಿಸಿದರು. ಹಿಂದಿಯವರ, ಮರಾಠಿಯವರ, ತಮಿಳರ, ತೆಲುಗರ, ಮಲಯಾಳಿಗಳ ದುರಭಿಮಾನದ ಚಕ್ರವ್ಯೂಹದಲ್ಲಿ ಕನ್ನಡಿಗರ ನಿರಭಿಮಾನ ಸಿಕ್ಕಿ ಅಕ್ಕಸಬಡುತ್ತಿದೆ. ಸಾಲದುದಕ್ಕೆ ಇಂಗ್ಲೀಷ್ ಮೋಹ ಅನೇಕರಿಗೆ, ಸಂಸ್ಕೃತ ಮೋಹ ಸಾಕಷ್ಟು ಜನರಿಗೆ, ಕನ್ನಡ ಬೇಡವೇ ಬೇಡ ಅಲ್ಪಸಂಖ್ಯಾತ ಭಾಷೆಗಳ ಜನರಿಗೆ, ಕನ್ನಡ ನೀಡುವ ಹಣ ಮಾತ್ರ ಬೇಕು, ಕನ್ನಡ ಬೇಡ ಕೆಲವು ನಾಮಾಂಕಿತ (ಕನ್ನಡ) ಸಾಹಿತಿಗಳಿಗೆ! ಇದೆಲ್ಲ ಧೃತರಾಷ್ಟ್ರಾ ಲಿಂಗನಗಳನ್ನೂ ತಾಳಿಕೊಂಡು ಕನ್ನಡ ಹೇಗೆ ಬದುಕಿ ಬೆಳೆವುದೋ ಎಂಬುದು ಇಂದಿನ ಮಿಲಿಯ ಡಾಲರಿನ ಪ್ರಶ್ನೆಯಾಗಿದೆ!

ಉಜ್ಜಯನಿಗೆ ಹೋಗಿದ್ದೆವು–ಕಾಳಿದಾಸ ಸಮಾರೋಹಕ್ಕಾಗಿ. ಕಾಳಿದಾಸನ ಬಗ್ಗೆ ರಚಿಸಬೇಕೆಂದಿದ್ದ ರಾಷ್ಟ್ರೀಯ ಸ್ಮಾರಕದ ರೂಪರೇಖೆಗಳನ್ನು ನಿರ್ಣಯಿಸಲು ಎಲ್ಲ ರಾಜ್ಯಗಳ ಶಿಕ್ಷಣ ಸಚಿವರನ್ನೂ ಅಲ್ಲಿಗೆ ಆಹ್ವಾನಿಸಲಾಗಿದ್ದಿತು. ಸಮಾಲೋಚನಾ



ಸಭೆ ಪ್ರಾರಂಭವಾಯಿತು. ಪ್ರಧಾನಮಂತ್ರಿ ಪಂಡಿತ ಜವಾಹಾರಲಾಲರೇ ಚರ್ಚೆಯನ್ನು ಪ್ರಾರಂಭಿಸಿದರು. ತಾವು ಹೇಳಬೇಕೆಂದಿದ್ದುದನ್ನೆಲ್ಲ ಹೇಳಿ ಎದ್ದುಬಿಟ್ಟರು. ಅಲ್ಲಿಯ ಶಿಕ್ಷಣಮಂತ್ರಿ ಎಸ್.ಡಿ. ಶರ್ಮಾ ಏನನ್ನೋ ಹೇಳಲು, "ಪಂಡಿತ ಜಿ," ಎಂದರು. ಮುಖ್ಯಮಂತ್ರಿ ಕೈಲಾಸನಾಥ ಕಟ್ಜೂ ಅವರು ಕೈ ಮಾಡಿ ಅವರನ್ನು ತಡೆದರು. ಪಂಡಿತಜಿಯವರು ಹೋಗತ್ತಲೇ ಸಮಾಲೋಚನೆಯೂ ಮುಕ್ತಾಯವಾಗಿ ಬಿಟ್ಟಿತು! ಅದರ ನಡೆವಳಿಕೆಗಳೂ ಆಮೇಲೆ ಬರಲಿಲ್ಲ; ಎಂಥ ರಾಷ್ಟ್ರೀಯ ಸ್ಮಾರಕ ರಚಿಸಬೇಕೆಂದು ಅಂತಿಮವಾಗಿ ತೀರ್ಮಾನಿಸಿದರೋ ಗೊತ್ತಾಗಲಿಲ್ಲ. ಅಂದೇ ಸಂಜೆ ಅಲ್ಲಿಯ ವಿಶ್ವವಿದ್ಯಾಲಯ ಪ್ರಧಾನಮಂತ್ರಿಯವರಿಗೆ ಗೌರವ ಡಾಕ್ಟರೇಟ್ ನೀಡಿತು. ಸಮಾರಂಭ ಚೆನ್ನಾಗಿ ನಡೆಯಿತು. ನಿತ್ಯರಾತ್ರಿ ಕಾಳಿದಾಸನ ಸಂಸ್ಕೃತ ನಾಟಕಗಳನ್ನು ನೋಡಿದೆವು. ಚೆನ್ನಾಗಿ ಅಭಿನಯಿಸಲಾಯಿತು. ಉಜ್ಜಯನಿಯಲ್ಲಿ ನೋಡಬೇಕಾದ ಸ್ಥಳಗಳನ್ನೆಲ್ಲ ನೋಡಿಕೊಂಡು ಇಂದೋರ್, ಗ್ವಾಲಿಯರ್ ನೋಡಿ ಓಂಕಾರೇಶ್ವರ ದೇವಾಲಯವನ್ನೂ ದರ್ಶಿಸಿ ಮರಳಿದೆವು. ಅವೆಲ್ಲವುಗಳ ಬಗ್ಗೆ ಬರೆಯಬೇಕಾದದು ಬೇಕಾದಷ್ಟಿದೆ. ಆದರೆ ಇಲ್ಲಿ ಬರೆಯಲಾರೆ. ನನ್ನ ಪ್ರವಾಸಾನುಭವಗಳಿಗೆ ಪ್ರತ್ಯೇಕ ಪುಸ್ತಕದ ರೂಪ ಕೊಡುವ ಆಸೆಯೊಂದಿದೆ ನನಗೆ. ಈಡೆರುವುದೋ ಇಲ್ಲವೋ ಈಗ ಗೊತ್ತಿಲ್ಲ! ಈ ನೆನಪುಗಳನ್ನು ಬರೆಯುವೆನೆಂದು ಯಾರು ನಂಬಿದ್ದರು? ನನಗೇ ಸೋಜಿಗವೆನಿಸಿದೆ–ಇವುಗಳನ್ನು ಬರೆಯುವ ಯೋಗ ದೊರೆತುದಕ್ಕಾಗಿ!

ಡಾ. ಟಿ.ಎಂ.ಎ. ಪೈ ಅವರು ಆಗ ಬಹಳ ದೊಡ್ಡ ಸುದ್ದಿಯಾಗಿದ್ದರು–ಕ್ಯಾಪಿಟೇಷನ್ ಫೀ ಆಧರಿಸಿ ಕಸ್ತೂರಬಾ ಮೆಡಿಕಲ್ ಕಾಲೇಜನ್ನು ತೆರೆದು, ಸಹಜವಾಗಿಯೇ ಅದು ಮಿಶ್ರ ಪ್ರತಿಕ್ರಿಯೆಗಳನ್ನು ಹುಟ್ಟಿಸಿದ್ದಿತು. ಅವಡಿಯಲ್ಲಿ ಅಂಗೀಕರಿಸಿದ್ದ ಸಮಾಜವಾದದ ಸ್ವರೂಪದ ಸಮಾಜ ವ್ಯವಸ್ಥೆಯೆತ್ತ, ಉಳ್ಳವರಿಗೆ ಮಾತ್ರ ಉಚ್ಚಶಿಕ್ಷಣದ ದ್ವಾರ ತೆರೆವ ಈ ತಲೆಗಂದಾಯದ ಶಿಕ್ಷಣ ಪದ್ಧತಿಯೆತ್ತ? ಬಡತನದಲ್ಲಿಯೇ ಹುಟ್ಟಿ ಬೆಳೆದಿದ್ದ ನಾನು ಇದರ ಅನಿಷ್ಟ ಪರಿಣಾಮಗಳನ್ನು ಸುಲಭವಾಗಿಯೇ ಊಹಿಸಿದೆ: ಅವುಗಳನ್ನು ಅಣ್ಣಾರಾಯರ, ಜತ್ತಿಯವರ ಗಮನಕ್ಕೆ ತಂದಾಗ ನನ್ನಂತೆಯೇ ಬಡ ಕುಟುಂಬಗಳಲ್ಲಿ ಜನ್ಮವೆತ್ತಿದ್ದ ಅವರೂ ಬೇಗ ಒಪ್ಪಿದರು ಈ ಪದ್ಧತಿಯ ಅನಿಷ್ಟಕಾರಿತ್ವವನ್ನು. ಅದನ್ನು ರಾಜ್ಯದ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಕೊಂಡು ಅದಕ್ಕೆ ಸಹಾಯ ಧನವನ್ನು ನೀಡಲು ನಿರಾಕರಿಸಿಬಿಟ್ಟರು. ಇದಕ್ಕಾಗಿ ಅತ್ಯುನ್ನತ ಮಟ್ಟದಲ್ಲಿ ಚರ್ಚೆಯೊಂದು ನಡೆಯಿತು. ದೆಹಲಿಯಿಂದ ಶಿಕ್ಷಣ ಇಲಾಖೆಯ ಜಂಟಿ ಕಾರ್ಯದರ್ಶಿಗಳೊಬ್ಬರು ಬಂದರು;

ಆಗ ಮದ್ರಾಸಿನಲ್ಲಿ ಎಸ್.ಆರ್.ಸಿ.ಯ ಅಧ್ಯಕ್ಷರಾಗಿದ್ದ ಡಾ. ಲಕ್ಷ್ಮಣಸ್ವಾಮಿ ಮುದಲಿಯಾರ್ ಅವರೂ ಬಂದರು. ನಾನವರನ್ನು ನೋಡಿದದು ಅದೇ ಮೊದಲು. ಎಲ್ಲ ದೃಷ್ಟಿಯಿಂದಲೂ ಬಹಳ ಆಳದ, ತೂಕದ ವ್ಯಕ್ತಿಯಾಗಿ ತೋರಿದರು. ಜತ್ತಿಯವರ ಸಮ್ಮುಖದಲ್ಲಿಯೇ ಚರ್ಚೆ ನಡೆಯಿತು ರಾಜ್ಯ ಸರಕಾರ ತನ್ನ ನಿಲುವನ್ನು ಬದಲಿಸಲಿಲ್ಲ. "ಕ್ಯಾಪಿಟೇಷನ್ ಫೀ ನಿಲ್ಲಿಸಿದರೆ ಮಾತ್ರ ನಮ್ಮ ಪಾಂಚವಾರ್ಷಿಕ ಯೋಜನೆಯಲ್ಲಿ ಸ್ಥಾನವದಕ್ಕೆ; ಇಲ್ಲದಿದ್ದರೆ ಇಲ್ಲ," ಎಂದು ಜತ್ತಿಯವರೂ ಅಣ್ಣಾರಾಯರೂ ಖಂಡಿತವಾಗಿ ಹೇಳಿ ಬಿಟ್ಟರು. ಡಾ. ಲಕ್ಷ್ಮಣಸ್ವಾಮಿ ಮುದಲಿಯಾರರೂ ಈ ನಿಲುವನ್ನು ಸಮರ್ಥಿಸಿದರು. ಆದರೆ, 'ನಮಗೆ ನೀವು ನೀಡುವ ಯೋಜನಾಂತರ್ಗತ ಧನ ಸಹಾಯಬೇಕಿಲ್ಲ; ಕ್ಯಾಪಿಟೇಷನ್ ಫೀ ಇದ್ದರೆ ಸಾಕು." ಎಂದು ಆ ಕಾಲೇಜಿನವರು ಸಾರಿ ಬಿಟ್ಟರು. ಇದನ್ನು ಬರೆಯುತ್ತಿರುವ ಹೊತ್ತಿಗೆ ಅದೇ ಕಾಲೇಜು ಈ ಲಾಂಛನಾಸ್ಪದವಾದ ಕ್ಯಾಪಿಟೇಷನ್ ಫೀ ರದ್ದುಗೊಳಿಸಿದೆಯೆಂಬ ಸುದ್ದಿ ಬಂದಿದೆ. ಇದು ಬಹಳ ಶ್ಲಾಘ್ಯವಾದ ದಿಟ್ಟ ಹೆಜ್ಜೆ. ಇದಕ್ಕಾಗಿ ಆ ಕಾಲೇಜಿನ ಆಡಳಿತ ವರ್ಗ ಅಭಿನಂದನಾರ್ಹ. ಇದನ್ನು ಅನುಸರಿಸಿ ಇನ್ನುಳಿದ ಖಾಸಗಿ ಶಿಕ್ಷಣ ಸಂಸ್ಥೆಗಳೂ ಈ ಶನಿ ಶುಲ್ಕವನ್ನು ನಿಲ್ಲಿಸಿಬಿಡುವುದು ಸೂಕ್ತವಾದುದು. ಇದಕ್ಕಾಗಿ ಜನರ ಬೇಡಿಕೆ ಬಲಗೊಳ್ಳಬೇಕು. ಇಂದು ಈ ವ್ಯಾಧಿ ಸಾರ್ವತ್ರಿಕ–ಶಿಕ್ಷಣ ಪ್ರಪಂಚದಲ್ಲಿ. ಪ್ರಾಥಮಿಕ ಶಾಲೆಗಳಲ್ಲಿ, ಮಾಧ್ಯಮಿಕ ಶಾಲೆಗಳಲ್ಲಿ–ವಿಶೇಷವಾಗಿ ಕಾನ್ವೆಂಟು ಸ್ಕೂಲುಗಳಲ್ಲಿ–ಇದು ಭವನ ನಿಧಿಯ, ಪಾಲಕ ದಿನಾಚರಣೆಯ, ದುಬಾರಿ ಶೈಕ್ಷಣಿಕ ಪ್ರವಾಸಗಳ ರೂಪ ಧರಿಸುತ್ತದೆ; ಇದಕ್ಕೂ ಉನ್ನತ ಮಟ್ಟದಲ್ಲಿ ಪ್ರವೇಶ ಶುಲ್ಕದ ವೇಷ ತೊಡುತ್ತದೆ. ಬಡವರಾಗಿ ಹುಟ್ಟುವುದೇ ಪಾಪವೆ ಈ ದೇಶದಲ್ಲಿ? ಅವರ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕನಸಿನ ಗಂಟೆ? ಒಳ್ಳೆಯ ವಿದ್ಯಾಭ್ಯಾಸ ಅದನ್ನು ಕೊಳ್ಳಬಲ್ಲ ಉಳ್ಳವರಿಗಾಗಿ ಮಾತ್ರವೆ?

ಆಗ ಮಾಡಿದ ಹೊಸ ಹೊಸ ಪ್ರಯೋಗಗಳು ಹೇರಳ. ಅವುಗಳಲ್ಲಿ 'ಸಾಹಿತ್ಯರಚನಾಲಯ'ದ ಪ್ರಯೋಗವೂ ಒಂದು. ಎಲ್ಲ ಜಿಲ್ಲೆಗಳಿಂದ ಹೆಸರಾಂತ ಮಕ್ಕಳ ಸಾಹಿತ್ಯದ ಬರಹಗಾರರನ್ನು ಕರೆಸಿ ಅವರಿಗೆ ಆ ವಿಷಯದಲ್ಲಿ ಸಮಗ್ರವಾದ ರೀತಿಯಲ್ಲಿ ತರಬೇತಿ ಕೊಡುವುದೇ ಅದರ ಉದ್ದೇಶವಾಗಿದ್ದಿತು. ನಾನೂ ಅದರಲ್ಲಿ ತುಂಬ ಆಸಕ್ತಿವಹಿಸಿದ್ದೆ. ಬಹಳ ಯಶಸ್ವಿಯಾಯಿತು ಆ ಪ್ರಯೋಗ. ತರಬೇತಿಗೆ ಬಂದವರೆಲ್ಲ ಆ ಕ್ಷೇತ್ರದಲ್ಲಿ ಸಾಕಷ್ಟು ಸಾಧನೆ ಮಾಡಿದವರೇ ಆಗಿದ್ದರು. ಅವರೆಲ್ಲರೂ ಒಂದೆಡೆಗೆ ವಾರಗಟ್ಟಳೆ ಕೂಡಿ ಇದ್ದುದೇ ಅವರಿಗೊಂದು ದೊಡ್ಡ ಲಾಭವೆನಿಸಿದ್ದಿತು. ಪರಸ್ಪರ ಪರಿಚಯ, ಪರಸ್ಪರ ವಿಚಾರ ವಿನಿಮಯಗಳಿಂದ ಅವರ ಆ ವಿಷಯಕ



ಜ್ಞಾನದ ಕ್ಷಿತಜಗಳು ವಿಸ್ತಾರಗೊಂಡುವು. ತರಬೇತಿಯ ಮುಕ್ತಾಯ ನಂದಿ ಬೆಟ್ಟದಲ್ಲಿ ಮೂರು ದಿನಗಳ ವಾಸ್ತವ್ಯದೊಂದಿಗೆ ಆಯಿತು. ಅಲ್ಲಿ ಅವರು ತಾವು ಪಡೆದ ತರಬೇತಿಯನ್ನು ಆಧರಿಸಿ ಏನಾದರೂ ಬರೆಯಬೇಕಾಗಿದ್ದಿತು. ಎಲ್ಲರೂ ಬರೆದರು–ಕೆಲವರು ಕಥೆಗಳನ್ನು, ಕೆಲವರು ಕವಿತೆಗಳನ್ನು, ಉಳಿದವರು ಇನ್ನೇನನ್ನೋ ಬರೆದರು. ನಾನೂ ಬರೆದೆ. ಅವೆಲ್ಲವುಗಳ ಸಂಗ್ರಹ "ಮಕ್ಕಳ ಮುತ್ತು" ಎಂಬ ಹೆಸರಿನೊಡನೆ ಪುಸ್ತಕ ರೂಪದಲ್ಲಿ ಪ್ರಕಟವಾಗಿ ಬಹು ಜನರ ಮೆಚ್ಚಿಗೆ ಗಳಿಸಿತು.

## ಎರಡು ಅಭಿಪ್ರಾಯಗಳ ಉಪೇಕ್ಷೆ

ಸಬ್ಜೆಕ್ಟ್ ಇನ್ಸ್ಪೆಕ್ಟರರ ನೇಮಕ, ಮುದ್ರಣ ಸುಧಾರಣಾ ಸಮಿತಿಯ ನೇಮಕ, ಇತ್ಯಾದಿ ಇನ್ನೂ ಅನೇಕ ಹೊಸ ಉಪಕ್ರಮಗಳ ಬಗ್ಗೆ ಬರೆಯಬೇಕು. ಆದರೆ ಅದಕ್ಕೆ ಅವಕಾಶವಿಲ್ಲ. ಜತ್ತಿ ಸಂಪುಟದ ಅವಧಿ ಮುಗಿದಿತ್ತು. ಅಣ್ಣಾರಾಯರು ತಮ್ಮಲ್ಲಿ ಒಂದೂ ಕಡತ ಉಳಿಯದಂತೆ ಎಲ್ಲ ಕಡತಗಳ ವಿಲೇವಾರಿ ಮಾಡಿಹೋದರು. ಒಳ್ಳೆಯ ಹೆಸರು ಪಡೆದುಕೊಂಡು ಹೋದರು. ಮತ್ತೆ ಬೆಂಗಳೂರಿಗೆ ಬರಲಿಲ್ಲ. ಹೊಸ ಸಚಿವ ಸಂಪುಟ ಬಂದಿತು. ಕಂಠಿಯವರು ಭರತರಾಗಿ ಕೆಲವು ದಿನ ಮುಖ್ಯಮಂತ್ರಿತ್ವದ ಹೊಣೆ ನಿರ್ವಹಿಸಿದರು. ತುಂಬ ಸಜ್ಜನರು. ಆದರೆ ಎರಡು ವಿಷಯಗಳಲ್ಲಿ ನನ್ನ ನಮ್ರ ಅಭಿಪ್ರಾಯವನ್ನು ಉಪೇಕ್ಷಿಸಿದರು ಅವರು. ಮೊದಲನೆಯದು ಬೆಂಗಳೂರಿನಲ್ಲಿ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸುವ ಸಂಬಂಧದಲ್ಲಿ ಉಂಟಾದ ಭಿನ್ನಾಭಿಪ್ರಾಯ. ನಾನು, "ಬೆಂಗಳೂರಿನಲ್ಲಿ ಸದ್ಯಕ್ಕೆ ವಿಶ್ವವಿದ್ಯಾಲಯವಿಲ್ಲದಿದ್ದರೂ ನಡೆಯುತ್ತದೆ–ಮೊದಲು ಕಲಬುರ್ಗಿಯಲ್ಲಿ ತೆರೆಯೋಣ; ಯಾಕೆಂದರೆ ಆ ವಿಭಾಗ ಹೈದರಾಬಾದು ರಾಜ್ಯದಲ್ಲಿಯೇ ಮುಂದುವರಿದಿದ್ದರೆ ಅಲ್ಲಿಯ ಪ್ರಾದೇಶಿಕ ವಿಶ್ವವಿದ್ಯಾಲಯ ಯೋಜನೆಯ ಪ್ರಕಾರ ವರಂಗಲ್, ಔರಂಗಾಬಾದುಗಳಿಗೆ ದೊರೆತಂತೆ ತಾನಾಗಿಯೇ ವಿಶ್ವವಿದ್ಯಾಲಯ–ವೊಂದು ದೊರೆತೇ ದೊರೆಯುತ್ತಿತ್ತು. ಇದು ಬೇಡವಾದರೆ ಶಿವಮೊಗ್ಗೆಯಲ್ಲಿ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸೋಣ; ಅದಕ್ಕೆ ಮಲೆನಾಡು ವಿಶ್ವವಿದ್ಯಾಲಯ–ವೆಂದು ಹೆಸರಿಡೋಣ," ಎಂದು ವಾದಿಸಿದೆ. ಆದರೆ ನನ್ನ ವಾದ ನಡೆಯಲಿಲ್ಲ. ಇನ್ನೊಂದು ಭಿನ್ನಾಭಿಪ್ರಾಯ ಕ್ಯಾಪಿಟೇಷನ್ ಫೀ ಆಧಾರದ ಮೇಲೆ ಇನ್ನೂ ಕೆಲವು ಇಂಜಿನಿಯರಿಂಗ್ ಕಾಲೇಜುಗಳಿಗೆ ಅನುಮತಿ ನೀಡುವ ವಿಷಯಕ್ಕೆ ಸಂಬಂಧಿಸಿದುದು ಆಗಿದ್ದಿತು. ಇದನ್ನಂತೂ ಬಲವಾಗಿ ವಿರೋಧಿಸಿದೆವು–ಉಪಕಾರ್ಯದರ್ಶಿಯಾಗಿದ್ದ ನಾನೂ, ಕಾರ್ಯದರ್ಶಿಗಳಾಗಿ ಮಹಮ್ಮದ್ ರಹಮತುಲ್ಲಾ ಸಾಹೇಬರೂ, ಆದರೂ ಈ ಅನಿಷ್ಟ ಪದ್ಧತಿಯ ಹೊಸ ಕಾಲೇಜುಗಳು ಹುಟ್ಟಿ ಬಿಟ್ಟವು! ನನಗೆ ಆವುದೋ ಅಪರಾಧವೊಂದನ್ನು ಮಾಡಿದಂತಹ ಅನುಭವ!

ಇದೇ ಸಮಯಕ್ಕೆ ಗೃಹಮಂತ್ರಿಗಳಾಗಿದ್ದ ಆರ್.ಎಂ. ಪಾಟೀಲರು ವಾರ್ತಾ ಹಾಗೂ ಪ್ರವಾಸೋದ್ಯಮ ಇಲಾಖೆಗೆ ನನ್ನನ್ನು ನಿರ್ದೇಶಕ ನನ್ನಾಗಿ ಕಳಿಸಬೇಕೆಂದು ಮುಖ್ಯಮಂತ್ರಿಗಳನ್ನು ಕೇಳಿಕೊಂಡರು. ಮುಖ್ಯಕಾರ್ಯದರ್ಶಿಯಾಗಿದ್ದ ರೆಬೆಲೋ ಅವರು ನನ್ನ ಸೇವೆ ಶಿಕ್ಷಣ ಇಲಾಖೆಗೆ ಇನ್ನೂ ಕೆಲವು ಕಾಲ ಅಗತ್ಯವಾದುದೆಂದು ವಾದಿಸಿದರು. ಆದರೆ ಹಿಡಿದ ಕೆಲಸವನ್ನು ಹಟದಿಂದ ಸಾಧಿಸುವುದರಲ್ಲಿ ಹೆಸರಾಗಿದ್ದ ಆರ್.ಎಂ. ಪಾಟೀಲರು ಕೊನೆಗೂ ನನ್ನನ್ನು ಆ ಇಲಾಖೆಗೆ ತೆಗೆದುಕೊಂಡರು. ನನಗೂ ಅವರ ಕೆಳಗೆ ಕೆಲಸ ಮಾಡಲು ಸಂತೋಷವೆನಿಸಿತು. ನಾನು ಯಾದಗಿರಿಯಲ್ಲಿದ್ದಾಗ ಆರೋಗ್ಯ ಮಂತ್ರಿಗಳಾಗಿ ಅಲ್ಲಿಗೆ ಬಂದಿದ್ದರು; ಸುರಪುರ, ಚಿಂಚೋಳಿಗಳ ಸಾರ್ವಜನಿಕ ಆಸ್ಪತ್ರೆಗಳು ಬೀಳಲಿದ್ದ ಹಾಳು ಮನೆಗಳಲ್ಲಿದ್ದುದನ್ನು ನೋಡಿ ಮಮ್ಮಲ ಮರುಗಿದ್ದರು. 'ನಾಮಕೇ ವಾಸ್ತೇ' ಎರಡೂ ಸ್ಥಳಗಳಲ್ಲಿ ಐದೈದು ಸಾವಿರ ರೂಪಾಯಿಗಳನ್ನು ಸಾರ್ವಜನಿಕರಿಂದ ಸಂಗ್ರಹಿಸುತ್ತಲೇ ಹೊಸ ಕಟ್ಟಡಗಳಿಗೆ ಮಂಜೂರಿ ನೀಡುವೆನೆಂದು ನನ್ನ ಮುಂದೆ ಅಂದಿದ್ದರು; ನಾನು ಒಂದೇ ತಿಂಗಳಲ್ಲಿ ಸ್ಥಳೀಯ ವಂತಿಗೆ ಸಂಗ್ರಹಿಸಿ ವರದಿ ಮಾಡುತ್ತಲೇ ಕಟ್ಟಡಗಳಿಗೆ ಮಂಜೂರಿ ನೀಡಿದ್ದರು; ಕೊಂಕಲದಂಥ ಹಳ್ಳಿಗೂ ಆಸ್ಪತ್ರೆ ನೀಡಿದ್ದರು; ಹುಬ್ಬಳ್ಳಿಯ ಕರ್ನಾಟಕ ಮೆಡಿಕಲ್ ಕಾಲೇಜನ್ನು ಕಟ್ಟಿ ನಿಲ್ಲಿಸಿದರು. ಇಂಥವರ ಕೆಳಗೆ ಕೆಲಸ ಮಾಡುವುದೂ ಒಂದು ಸುಯೋಗವೆಂದು ಒಪ್ಪಿದೆ.

ಆದರೆ ಆ ಇಲಾಖೆಯಲ್ಲಿ ಕಾಲಿರಿಸುತ್ತಲೇ ನಾನು ಹೈಕೋರ್ಟಿನಲ್ಲಿ ರಿಟ್ ಒಂದನ್ನು ಎದುರಿಸಬೇಕಾಯಿತು. ಅದನ್ನು ಹಾಕಿದವರು ನನಗೊಂದು ರೀತಿಯಲ್ಲಿ ಒಳ್ಳೆಯದನ್ನೇ ಮಾಡಿದರು. ಜಸ್ಟೀಸ್ ಸೋಮನಾಥ ಅಯ್ಯರ್ ಅವರು ಅದನ್ನು ವಜಾ ಮಾಡಿ ಮುಂದೆ ತನ್ನ ತಂಟೆಗೆ ಯಾರೂ ಬರದಂತೆ ಮಾಡಿಬಿಟ್ಟರು. ಅದು ನಡೆದಾಗ ನಾನು ಹೈಕೋರ್ಟಿನ ಕಟ್ಟೆಯನ್ನೇ ಹತ್ತಿರಲಿಲ್ಲ. ಆದರೂ ಆ ಸುಪ್ರಸಿದ್ಧ ನ್ಯಾಯಮೂರ್ತಿಗಳು ನನ್ನ ಪರವಾಗಿ ತೀರ್ಪನ್ನಿತ್ತು ನನ್ನ ವಿರುದ್ಧ ನಡೆದಿದ್ದ ವ್ಯವಸ್ಥಿತ ಸಂಚುಗಳಿಗೆ ಮಂಗಳಾರತಿ ಮಾಡಿದ್ದರು. ನಾನು ಐ.ಎ.ಎಸ್. ಎಂಬ ಮೂರಕ್ಷರ ಪಡೆದಿದ್ದೆ. ಆದರೆ ಮೂರು ವರ್ಷಗಳ ಸೀನಿಯಾರಿಟಿ ಕಳೆದುಕೊಂಡಿದ್ದೆ. ಆ ಬಗ್ಗೆ ಹಳಹಳಿಸಲಿಲ್ಲ, ತಳಮಳಿಸಲಿಲ್ಲ ನಾನು. ತಂದೆಯವರಿಂದ, ಶರಣ ಬಸವೇಶ್ವರರಿಂದ, ಮೃತ್ಯುಂಜಯ ಶಿವಯೋಗಿಗಳಿಂದ ಪಡೆದಿದ್ದ ಚಿತ್ತ ಸ್ವಾಸ್ಥ್ಯ ನನ್ನನ್ನು ಎಂಥ ದುರ್ಧರ ಪ್ರಸಂಗಳಲ್ಲಿಯೂ ಅಧೀರನನ್ನಾಗಿಸಲಿಲ್ಲ.

ಹೊಸ ಇಲಾಖೆಯ ಹೊಣೆ ವಹಿಸಿಕೊಳ್ಳುತ್ತಲೇ ಗೋವೆಯಲ್ಲಿ ಕನ್ನಡ ಪ್ರಚಾರಕ್ಕಾಗಿ ಸಾಧ್ಯವಿದ್ದುದನ್ನು ಮಾಡುವ ಕಾರ್ಯ ನನಗಾಗಿ ಕಾದಿತ್ತು. ಧಾರವಾಡಕ್ಕೆ



ಹೋದೆ. ಅಲ್ಲಿ ಸರ್ವಶ್ರೀ ದಿವಾಕರ, ಹುಕ್ಕೇರಿಕರ್, ಕಬ್ಬೂರ ಮೊದಲಾದವರ ನೆರವಿನಿಂದ ಕನ್ನಡ ಲಿಪಿಯ ಕೊಂಕಣಿ ಮಾಸಪತ್ರಿಕೆಯೊಂದರ ಪ್ರಕಟಣೆಯ ವ್ಯವಸ್ಥೆ ಮಾಡಿ ಬಂದೆ. ಪಣಜಿಗೆ ಹೋಗಿ ಕಾಕೋಡಕರ್ ಮೊದಲಾದವರನ್ನು ಕಂಡು ಗೋಮಾಂತಕದಲ್ಲಿ ಕೊಂಕಣಿ–ಕನ್ನಡ ಚಳವಳಿಗೆ ಬೆಂಬಲ ಪಡೆದು ಬಂದೆ.

ಆಗ ಜಾಹೀರಾತಿಗಾಗಿ ಇದ್ದ ಧನರಾಶಿ ಬಹಳ ಸಣ್ಣದು; ಜಾಹೀರಾತು ಬೇಡುವ ಪತ್ರಿಕೆಗಳ ಸಂಖ್ಯೆ ದೊಡ್ಡದು. ಇದ್ದಷ್ಟರಲ್ಲಿಯೇ ಸಿಂಹಪಾಲು ಬೆಂಗಳೂರಿನ ಕೆಲವು ಬಲಿಷ್ಠ ಪತ್ರಿಕೆಗಳಿಗೆ ಹೋಗುತ್ತಿದ್ದಿತು. ಕನ್ನಡ ನಾಡಿನ ಎಲ್ಲ ಭಾಗಗಳ ಪತ್ರಿಕೆಗಳಿಗೂ, ವಿಶೇಷವಾಗಿ ಜಿಲ್ಲಾ ಕೇಂದ್ರಗಳ ಸಣ್ಣ ಪತ್ರಿಕೆಗಳಿಗೂ ಇದರಲ್ಲಿ ಪಾಲು ದೊರೆಯಲೆಂದು ನಾನು ಆ ಪ್ರಬಲ ಪತ್ರಿಕೆಗಳಿಗೆ ಸ್ವಲ್ಪ ಕಡಿಮೆ ಮಾಡಿ ಆ ಮಿಕ್ಕಿದ ಹಣವನ್ನು ಜಿಲ್ಲಾ ಪತ್ರಿಕೆಗಳಿಗೆ ಹಂಚಿದೆ. ಆ ಪತ್ರಿಕೆಗಳು ಇದಕ್ಕಾಗಿ ಇಂದಿಗೂ ನನ್ನನ್ನು ಕ್ಷಮಿಸಿಲ್ಲ. ಆಗಲೂ ಎರಡು ಸಲ ಅಸೆಂಬ್ಲಿಯಲ್ಲಿ ಪ್ರಶ್ನೆಗಳು ಬಂದುವು–ಪಾಟೀಲ ಪುಟ್ಟಪ್ಪನವರ ಪತ್ರಿಕೆಗಳಿಗೆ ನಾನು ಜಾಹೀರಾತುಗಳನ್ನು ಬಹಳ ಹೆಚ್ಚಿಸಿದ್ದೇನೆಂದು ಆಪಾದಿಸಿ. ಇನ್ನೂ ಅನೇಕ ಪತ್ರಿಕೆಗಳಿಗೆ ನಾನು ಜಾಹೀರಾತು ಹೆಚ್ಚಿಸಿದ್ದೆ. ಅವೆಲ್ಲವನ್ನೂ ಬಿಟ್ಟು ಪಾಟೀಲ ಪುಟ್ಟಪ್ಪನವರ ಪತ್ರಿಕೆಗಳನ್ನು ಮಾತ್ರ ಪ್ರಶ್ನೆಗಳಲ್ಲಿ ಹೆಸರಿಸಿದ್ದುದರ ಉದ್ದೇಶ ಸ್ಪಷ್ಟ. ಆರ್.ಎಂ. ಪಾಟೀಲರೂ ಎರಡೂ ಪ್ರಶ್ನೆಗಳಿಗೂ ಸರಿಯಾದ ಉತ್ತರವಿತ್ತರು.

ಬೆಂಗಳೂರಿನಲ್ಲಿ ಬೆದರಿಕೆ ಹಾಕಿ ಜಾಹೀರಾತು ಪಡೆದುಕೊಳ್ಳುತ್ತಿದ್ದ ಪತ್ರಿಕೆಗಳು ಕೆಲವಿದ್ದುವು. ನಾನು ನಿರ್ದೇಶಕನಾಗುತ್ತಲೇ ನನ್ನನ್ನು ಹೊಗಳಿದುವು ಆ ಪತ್ರಿಕೆಗಳು. ತಿಂಗಳಿಗೆರಡು ಮೂರು ಸಲ ಜಾಹೀರಾತು ಕೊಡಲು ಸಾಧ್ಯವಿಲ್ಲವೆನ್ನಲು, "ಹಾಗಾದರೆ ನಿಮ್ಮ ವಿರುದ್ಧ ನಾವು ಬರೆಯಬೇಕಾಗುವುದು," ಎಂದು ಬೆದರಿಸಿದರು. ನಾನು ನಗುತ್ತಲೇ ಉತ್ತರಿಸಿದೆ: "ಅವಶ್ಯವಾಗಿ ಬರೆಯಿರಿ: ನೀವು ನನ್ನ ವಿರೋಧವಾಗಿ ಬರೆದರೆ ಅದು ನನಗೆ ಸಿಫಾರಸಿನ ಪತ್ರಿಕೆಯಾಗುವುದು; ನೀವು ಹೊಗಳಿ ಬರೆದರೇ ಮೇಲಿನವರಿಗೆ, ಜನರಿಗೆ ಸಂಶಯ ಹುಟ್ಟುವುದು ನನ್ನ ಬಗ್ಗೆ!" ಅದೇ ಮೊದಲ ಮುಖಾಮುಖಿ, ಅದೇ ಕೊನೆಯದು ಅವರೊಡನೆ. ಮುಂದೆ ನಾನು ಬೆಳಗಾವಿಯಲ್ಲಿ ಅನುಭವಿಸಿದುದನ್ನೂ ಇಲ್ಲಿಯೇ ಉಲ್ಲೇಖಿಸಿ ಬಿಡಬೇಕು. ಅಲ್ಲೊಂದು ಪೀತಪತ್ರಿಕೆ. ಕಂದಾಯ ಇಲಾಖೆಯ ಅಧಿಕಾರಿಗಳನ್ನೂ, ಕರ್ಮಚಾರಿಗಳನ್ನೂ ಅಂಜಿಸಿಕೊಂಡೇ ಬದುಕಿದ್ದಿತು ಆ ಪತ್ರಿಕೆ. ಅದರ ಹೊಸ ಸಂಚಿಕೆ ಬರುತ್ತಲೇ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಅದರಲ್ಲಿ ಕೆಂಪು ಗೆರೆಗಳನ್ನೆಳೆದು ಜಿಲ್ಲಾಧಿಕಾರಿಗಳ ಗಮನಕ್ಕೆ ತರುವುದು ಅಲ್ಲಿಯ ಪದ್ಧತಿಯಾಗಿದ್ದಿತು. ಅದರಲ್ಲಿ ಯಾರು ಯಾರ ಬಗ್ಗೆ ಟೀಕೆ

ಬಂದಿರುತ್ತಿದ್ದುವೋ ಅವರೆಲ್ಲರಿಗೆ ಕಟಿಂಗ್ ಕಳಿಸಿ ಅವರಿಂದ ಸಮಜಾಯಿಷಿ ಪಡೆಯುವ ರೂಢಿ ಇದ್ದಿತು. ನಾನದನ್ನು ನಿಲ್ಲಿಸಿಬಿಟ್ಟೆ. ಕೆಳಗಿನವರು ಹೇಳಿದರು: ಸಾಹೇಬರೇ, ನಿಮ್ಮ ಬಗ್ಗೆಯೂ ಇನ್ನು ಟೀಕೆಗಳು ಪ್ರಾರಂಭವಾಗುವುವು!" "ಆಗಲಿ," ಎಂದೆ; "ಈ ಪತ್ರಿಕೆಯಿಂದ ಪ್ರಶಂಸಾ ಪತ್ರ ಪಡೆಯಲು ನಾನಿಲ್ಲಿಗೆ ಬಂದಿಲ್ಲ; ಜನರ ಮೆಚ್ಚಿಗೆ ಪಡೆಯಲು ಬಂದಿದ್ದೇನೆ!" ಎಂದು ಖಚಿತವಾಗಿ ಹೇಳಿಬಿಟ್ಟೆ, ಇಲಾಖೆಯವರೆಲ್ಲ ನಿರ್ಭಯವಾಗಿ ಕೆಲಸ ಮಾಡತೊಡಗಿದರು. ನಾನು ಭ್ರಷ್ಟರ, ಮೈಗಳ್ಳರ ಮಾಹಿತಿ ಪಡೆದುಕೊಳ್ಳಲು ನನ್ನದೇ ವ್ಯವಸ್ಥೆ ಮಾಡಿಕೊಂಡೆನಾಗಿ ಅವೂ ಕಡಿಮೆಯಾದುವು. ಪೀತ–ಪತ್ರಿಕೆಗಳ ಪಿಡುಗು ಎಂದು ತಪ್ಪುವುದೋ ಈ ದೇಶಕ್ಕೆ!

ಜಾಹೀರಾತಿನ ವಿಷಯ ಮುಗಿಸುವ ಮುನ್ನ ಇನ್ನೊಂದು ಸಂಗತಿಯನ್ನು ಉಲ್ಲೇಖಿಸಬೇಕು. ಹಳ್ಳೀಕೇರಿ ಗುದ್ಲೆಪ್ಪನವರು ನನ್ನನ್ನು ಕರೆದು, "ಪುರಾಣಿಕರೆ, ಪಾಟೀಲ ಪುಟ್ಟಪ್ಪನವರಿಗೆ ಈಗ ಬಹಳ ಕಡಿಮೆ ಜಾಹೀರಾತುಗಳನ್ನು ಕೊಡುತ್ತಿದ್ದೀರಿ. ಸ್ವಲ್ಪ ಹೆಚ್ಚಿಸಿರಿ," ಎಂದು ಹೇಳಿದರು. ಅವರ ವಿರುದ್ಧ ಬೇಕಾದಷ್ಟು ಬರೆದಿದ್ದರು ಪಾಟೀಲ ಪುಟ್ಟಪ್ಪನವರು. ನಾನು ಇನ್ನಷ್ಟು ಹಿಸುಕಿ ನೋಡಲೆಂದು, "ಏನ್ ಸರ್, ನಿಮ್ಮ ವಿರುದ್ಧ ಬರೆಯುವವರಿಗೇ ನೀವು ಸಹಾಯ ಮಾಡೆಂದು ಹೇಳುತ್ತಿರುವಿರಿ?" ಎಂದು ಕೇಳಿದೆ. "ಬರಕೊಳ್ಳಿ, ಬರಕೊಳ್ಳಿ! ಆದರೂ ಬಹಳ ಚೆನ್ನಾಗಿ ಬರಿಯೋ ಹುಡುಗ ಪುಟ್ಟಪ್ಪ. ಇಂಥವರ್‍ಗೆ ಸಹಾಯ ಮಾಡೋದು ತಪ್ಪಲ್ಲ," ಎಂದರು. ನಾನು ಅವರ ದೊಡ್ಡ ಗುಣ ನೋಡಿ ಅವಕ್ಕಾದೆ. ಬೇರೆ ಅನೇಕ ಪ್ರಸಂಗಗಳಲ್ಲಿಯೂ ಅವರ ಔದಾರ್ಯವನ್ನು ಕಂಡಿದ್ದೆ.

**ಇಲಾಖೆಗೆ ಹೊಸ ಜೀವ :**

ಇಲಾಖೆಯಲ್ಲಿ ಹೊಸ ಜೀವ ತುಂಬಲು ಏನೇನೋ ಮಾಡಿದೆ. ಮೈಸೂರಿನ ದಸರಾ ಪ್ರದರ್ಶನದಲ್ಲಿ ಮೊದಲ ಬಾರಿಗೆ ಇಲಾಖೆಯ ಮಳಿಗೆಗೆ ಸುವರ್ಣ ಪದಕ ಪ್ರಾಪ್ತವಾಯಿತು; "ದಸರಾ ದರ್ಶಿನಿ" ಎಂಬ ದಸರಾ ಸಂಚಿಕೆ ವಿಶೇಷ ಮೆಚ್ಚಿಗೆಯನ್ನು ಪಡೆಯಿತು; ದಕ್ಷಿಣಭಾರತದ ಪ್ರಚಾರಾಧಿಕಾರಿಗಳಿಗಾಗಿ ಒಂದು ಶಿಕ್ಷಣ ಶಬಿರವನ್ನು ಸಂಘಟಿಸಿದೆ. ಅದು ಆ ಮಾದರಿಯ ಪ್ರಪ್ರಥಮ ಪ್ರಯೋಗ. ಮುಖ್ಯಮಂತ್ರಿ ನಿಜಲಿಂಗಪ್ಪನವರೂ, ಕೇಂದ್ರಮಂತ್ರಿ ಬಿ. ಗೋಪಾಲರೆಡ್ಡಿಯವರೂ, ಕೇಂದ್ರಾಧಿಕಾರಿ ಆರ್.ಕೆ. ಚಟರ್ಜಿಯವರೂ ಬಹಳ ಪ್ರಶಂಸಿಸಿದರು ಅದನ್ನು. ಇದೇ ರೀತಿ ಪ್ರವಾಸೀ ಕೇಂದ್ರಗಳಲ್ಲಿ ಮಾರ್ಗದರ್ಶಿಗಳಾಗಿ ಕೆಲಸ ಮಾಡಲು ನಾಲ್ವತ್ತು ಪದವೀಧರರಿಗೆ ಧಾರವಾಡದಲ್ಲಿ ಶಿಕ್ಷಣ ಶಿಬಿರವೊಂದನ್ನು ನಡೆಸಿದೆ.



ಅಧ್ಯಕ್ಷತೆ ವಹಿಸಿದ್ದ ಕುಲಪತಿ ಡಿ.ಸಿ. ಪಾವಟೆಯವರೂ, ಉದ್ಘಾಟಿಸಿದ ಆರ್.ಎಂ. ಪಾಟೀಲರೂ ಬಹಳ ಮೆಚ್ಚಿದರು ಅದನ್ನು.

ಪ್ರವಾಸೋದ್ಯಮಾಭಿವೃದ್ಧಿಗಾಗಿ ಬಹಳ ಶ್ರಮಿಸಿದೆ. ಹಾಸನ, ಜೋಗ, ಗೋಕಾಕ, ಕಲಬುರಗಿ, ಕಲ್ಯಾಣ, ಬೀದರ, ಬಿಜಾಪುರ, ಬಾದಾಮಿ, ಐಹೊಳೆ, ಕೆ.ಆರ್. ಸಾಗರ, ಮಂಗಳೂರು, ಹಂಪಿ, ವಾಣೀವಿಲಾಸ ಸಾಗರ, ಮಾಗೋಡು, ತಲಕಾವೇರಿಗಳಲ್ಲಿ ಟೂರಿಸ್ಟ್ ಭವನಗಳ ನಿರ್ಮಾಣಕಾರ್ಯ ಪ್ರಾರಂಭಿಸಿದೆ. ಎಲ್ಲ ಕಡೆಗೂ ಆಯಾ ಜಿಲ್ಲೆಗಳ ಮಂತ್ರಿಗಳು ಅಡಿಗಲ್ಲನ್ನಿರಿಸಿದರು. ಎಂ.ವ್ಹಿ. ರಾಮರಾಯರು ಮಾತ್ರ ಜಿ.ಓ. ನೋಡದೆ ದೇವರಾಯನ ದುರ್ಗದ ಟೂರಿಸ್ಟ್ ಭವನಕ್ಕೆ ಅಡಿಗಲ್ಲನ್ನಿರಿಸಲು ನಿರಾಕರಿಸಿದರು. ಅದೊಂದು ಉಳಿದುಬಿಟ್ಟಿತು. ಪ್ರವಾಸೋದ್ಯಮ ಇಲಾಖೆಯನ್ನು ನೇರವಾಗಿ ತಾವೇ ನೋಡಿಕೊಳ್ಳುತ್ತಿದ್ದ ಮುಖ್ಯ ಕಾರ್ಯದರ್ಶಿ ಬಾಲಚಂದ್ರನ್ ಅವರು ಗಾಬರಿಯಾದರು. ಕರೆಸಿ, "ನಿಮಗೆ ಕೊಟ್ಟ ಹಣಕ್ಕಿಂತ ಹತ್ತು ಪಾಲು ಹೆಚ್ಚು ಕಾರ್ಯಗಳನ್ನು ಪ್ರಾರಂಭಿಸಿಬಿಟ್ಟಿರುವಿರಿ. ಇವು ಮುಗಿವವರೆಗೆ ಹೊಸ ಕಾರ್ಯ ಪ್ರಾರಂಭಿಸುವುದು ಬೇಡ," ಎಂದು ಕಟ್ಟುನಿಟ್ಟಾಗಿ ಹೇಳಿಬಿಟ್ಟರು. "ಸರ್, ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯೆಂಬ ತೆರದಲ್ಲಿ ಇಷ್ಟು ಕಡಿಮೆ ಹಣ ಕೊಟ್ಟು ನನ್ನನ್ನಿಟ್ಟಿರೇಕೆ ಇಲ್ಲಿ?" ಎಂದು ಕೇಳಿದೆ. ನಕ್ಕುಬಿಟ್ಟರವರು. ಅದಕ್ಕೇನರ್ಥ ಮಾಡಿಕೊಳ್ಳಬೇಕೆಂಬುದು ಆಗ ತಿಳಿಯಲಿಲ್ಲ ನನಗೆ.

ಪ್ರವಾಸೋದ್ಯಮಾಭಿವೃದ್ಧಿ ನಿಂತುಬಿಟ್ಟಿತಲ್ಲ–ಎಂಬ ಚಿಂತೆಯಲ್ಲಿದ್ದಾಗಲೇ ಒಂದು ಮಹತ್ವದ ಘಟನೆ ನಡೆಯಿತು. ಪಂಡಿತ ಜವಾಹರಲಾಲಜಿಯವರೂ, ವಿಜಯಲಕ್ಷ್ಮೀ ಪಂಡಿತ ಅವರೂ, ಇಂದಿರಾಜಿಯವರೂ ನಂದಿ ಬೆಟ್ಟದಲ್ಲಿ ಒಂದೆರಡು ದಿನ ವಿಶ್ರಾಂತಿ ಪಡೆದರು. ಮುಖ್ಯ ವಾರ್ತಾಧಿಕಾರಿಯಾಗಿ ನಾನೂ, ಆಗಿನ ಎಸ್.ಇ. ಆಗಿದ್ದ ಕೆ. ಬಸವಣ್ಣನವರೂ ಅವರನ್ನು ಓಲೈಸುತ್ತ ಬೆಟ್ಟದಲ್ಲಿಯೇ ಇದ್ದುಬಿಟ್ಟೆವು. ಆದೆಷ್ಟು ಗೌರವಾನ್ವಿತದೂರ (Respectable distance)ದಲ್ಲಿಯೇ ಇರುತ್ತಿದ್ದೆವು. ಆದರೆ ಯಾವಾಗ ನೋಡಿಬಿಟ್ಟಿದ್ದರೋ ನಮ್ಮಿಬ್ಬರನ್ನು, ರಾತ್ರಿ ಊಟಕ್ಕೆ ಕುಳಿತಾಗ ಆ ಮಹಾಮಾನವ ಪಂಡಿತ ಜವಾಹರಲಾಲರು 'ಆ ಇಬ್ಬರು ಅಧಿಕಾರಿಗಳೆಲ್ಲಿ?' ಎಂದು ಕೇಳಿದರಂತೆ. ಇಲ್ಲಿಯೇ ಇದ್ದಾರೆನ್ನಲು 'ಅವರನ್ನೂ ಊಟಕ್ಕೆ ಕರೆಯಿರಿ,' ಎಂದು ಆಜ್ಞಾಪಿಸಿದರಂತೆ. ಅವರ ಸಂಗಡ ಭೋಜನ ಸ್ವೀಕರಿಸುವ ಪರಮಭಾಗ್ಯ ಪ್ರಾಪ್ತವಾಯಿತು ನಮಗೆ ಆ ರಾತ್ರಿ. ಅದು ನಮ್ಮಿಬ್ಬರ ಜೀವನದಲ್ಲಿಯೇ ಮಹಾ ರಾತ್ರಿ!

ಮರುದಿನ ಸಂಜೆ ವಿಧಾನಸೌಧದಲ್ಲಿ ಅವರಿಗೆ ನಗರ ಕಾರ್ಪೊರೇಶನ್ನಿನ ಪರವಾಗಿ ಮಾನಪತ್ರ ಸಮರ್ಪಣೆಯಾಯಿತು. ಅದಕ್ಕೆ ಉತ್ತರಿಸುತ್ತ ಅವರು

ಅನುಷಂಗಿಕವಾಗಿ, “ನಂದಿ ಸುಂದರ ಬೆಟ್ಟ. ಆದರೆ ಈಗ ಅಲ್ಲಿ ಉಳ್ಳವರು ಮಾತ್ರ ಇದ್ದು ಬರಬಹುದು. ಅಲ್ಲಿ ಬಡವರೂ ಒಂದೆರಡು ದಿನವಿದ್ದು ಆನಂದಿಸಿ ಬರುವ ವ್ಯವಸ್ಥೆಯಾಗಬೇಕು,” ಎಂದು ಹೇಳಿದರು. ಮರುದಿನ ಅದು ಪತ್ರಿಕೆಗಳಲ್ಲಿ ಪ್ರಕಟವಾಯಿತು. ಅದನ್ನೋದಿ ನನಗೆ ಉಪಾಯವೊಂದು ಹೊಳೆಯಿತು. ಅದರ ‘ಕಟಿಂಗ್’ ಅಂಟಿಸಿ ಸರಕಾರಕ್ಕೆ ಅಂದೇ ಪ್ರಸ್ತಾಪವೊಂದನ್ನು ಕಳಿಸಿಬಿಟ್ಟೆ: “ಪ್ರಧಾನ ಮಂತ್ರಿಗಳವರ ಅಪೇಕ್ಷೆಯನ್ನು ಪೂರ್ಣಗೊಳಿಸುವುದು ನಮ್ಮ ಪವಿತ್ರ ಕರ್ತವ್ಯ. ಆದುದರಿಂದ ಇದರೊಡನೆ ಅಲ್ಲಿ ನೀರು ಸರಬರಾಜಿಗಾಗಿ, ಕುಟುಂಬ ಕುಟೀರಗಳಿಗಾಗಿ, ಉಪಹಾರಗೃಹ ನಿರ್ಮಾಣಕ್ಕಾಗಿ ಹತ್ತು ಲಕ್ಷ ರೂಪಾಯಿಗಳ ಯೋಜನೆ ಕಳಿಸಿದ್ದೇನೆ. ಬೇಗ ಅಂಗೀಕೃತಿ ನೀಡಬೇಕು” ಎಂದು ಅವರಲ್ಲಿ ಕೇಳಿಕೊಂಡಿದ್ದೆ. ಒಂದು ವಾರದಲ್ಲಿಯೇ ಮಂಜೂರಿ ಬಂದುಬಿಟ್ಟಿತು. ಪಂಡಿತಜಿಯವರ ಪ್ರಭಾವವೇ ಅಂಥದು. ನಾನು ಎರಡು ವಾರಗಳಲ್ಲಿ ಮೂರೂ ಕಾರ್ಯಗಳಿಗೆ ಶಂಕು ಸ್ಥಾಪನೆ ಮಾಡಿಸಿಬಿಟ್ಟೆ. ಬಿ. ಗೋಪಾಲರೆಡ್ಡಿಯವರು ಕ್ಯಾಂಟೀನಿನ ಶಂಕು ಸ್ಥಾಪನೆ ಮಾಡಿದಾಗ ಅಲ್ಲಿ ಸುದೈವದಿಂದ ಪಂಡಿತ ಓಂಕಾರನಾಥ ಠಾಕೂರರು ಇದ್ದರು. ನಮ್ಮ ಪ್ರಾರ್ಥನೆಯ ಮೇರೆಗೆ, “ಮಧುವಾತಾ ಋತಾಯತೇ” ಎಂಬ ಮಂತ್ರವನ್ನು ಪ್ರಾರ್ಥನಾ ರೂಪವಾಗಿ ಹಾಡಿದರು. ನನ್ನ ಜೀವನದಲ್ಲಿಯೇ ಅಂಥ ಹಾಡುಗಾರಿಕೆಯನ್ನು ನಾನು ಬಹಳ ಸಲ ಕೇಳಿಲ್ಲ. ಅಲ್ಲಿ ಕ್ಯಾಂಟೀನ್ ಬರಗೊಡಬಾರದೆಂದು ಅಲ್ಲಿಯ ಪುರೋಹಿತರು ಹುಟ್ಟಿಸಿದ್ದ ಹುಯಿಲು– ಮಾಂಸಾಹಾರದ ವಾಸನೆ ದೇವಾಲಯಕ್ಕೆ ಬಡಿವುದೆಂಬ ಹುಯಿಲು–ಆ ಹಾಡುಗಾರಿಕೆಯಲ್ಲಿ ಕರಗಿ ಹೋಯಿತು!

**ಧೂಮಕೇತು :**

ಆದರೆ ಈ ನಿರುಮ್ಮಳ ಸ್ಥಿತಿ ಬಹಳ ದಿನ ಮುಂದುವರಿಯಲಿಲ್ಲ. ಧೂಮಕೇತುವಿನಂತೆ ಮೂಡಿ ಬಂದಿತು ಚೀಣೀಯರ ದ್ರೋಹಪೂರ್ಣ ದಾಳಿ. ದೆಹಲಿಯಲ್ಲಿ ಗೃಹ ಮಂತ್ರಿಗಳ, ವಾರ್ತಾ ಇಲಾಖೆಗಳ ನಿರ್ದೇಶಕರ ಸಭೆ ನೆರೆಯಿತು. ಪ್ರಧಾನಮಂತ್ರಿ ಪಂಡಿತ ಜವಾಹರಲಾಲರೇ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಎಷ್ಟು ಸಲ ನೋಡಿದರೂ ಸಾಕೆನ್ನಿಸದಂತಿದ್ದ ಅವರ ಗೌರವರ್ಣದ ಮುಖ ಅಂದು ಮ್ಲಾನವಾಗಿದ್ದಿತು, ನೀಲವರ್ಣಕ್ಕೆ ತಿರುಗಿದ್ದಿತು. ಭಯದಿಂದಲ್ಲ, ಚೀಣೀಯರ ಮರ್ಮಘಾತದಿಂದ. ದೇಶಕ್ಕೆ ದೇಶವೇ ಒಂದು ವ್ಯಕ್ತಿಯಂತೆ ಎದ್ದುನಿಂತು, ಸಡ್ಡು ಹೊಡೆದು, ಸರ್ವಸಾಮರ್ಥ್ಯದೊಡನೆ ಈ ದಾಳಿಯನ್ನು ಎದುರಿಸಬೇಕೆಂಬುದೇ ಅಂದಿನ ಅವರ ವೀರವಾಣಿಯಾಗಿದ್ದಿತು. ಹಿಂದಿರುಗಿದೆವು, ಭಿತ್ತಿ ಪತ್ರಗಳ ವಿತರಣೆ,



ಸಭೆ ಮೆರವಣಿಗೆಗಳ ಸಂಘಟನೆ. ರಕ್ಷಣಾನಿಧಿ ಸಂಗ್ರಹ, ವೀರಗೀತೆಗಳ ಪ್ರಸಾರ– ಇತ್ಯಾದಿ ಕಾರ್ಯಕ್ರಮಗಳು ಹಗಲಿರುಳೆನ್ನದೆ ಅವ್ಯಾಹತವಾಗಿ ನಡೆದುವು. ವಾರ್ತಾ ಇಲಾಖೆ ಯುದ್ಧ ಸನ್ನದ್ಧತೆಯ ಇಲಾಖೆಯಾಗಿ ಮಾರ್ಪಟ್ಟಿದ್ದಿತು. ‘ಜಯಭೇರಿ’ ಎಂಬ ವಾರ ಪತ್ರಿಕೆಯನ್ನು ಹೊರಡಿಸಿದೆ. ಅದರ ಸಂಪಾದಕೀಯಗಳು ಓದಿದವರಲ್ಲಿ ವೀರರಸ ಉಕ್ಕುವಂತೆ ಮಾಡಿದುವು. ನಾನು ಆಕಶವಾಣಿಗಾಗಿ ಬರೆದ ‘ಯುಧ್ಯಸ್ವ’ ಎಂಬ ರಣಗೀತೆ, ಸೆಕ್ರೆಟೇರಿಯೆಟ್ ಕ್ಲಬ್ಬಿನ ಮಿತ್ರರಿಗಾಗಿ ಬರೆದ ‘ಭಾರತ ವೀರ’ ನಾಟಕಗಳು ಆಗಿನ ಸಂದರ್ಭದಲ್ಲಿ ತುಂಬ ಉಪಯುಕ್ತವೆನಿಸಿದುವು. ‘ಭಾರತವೀರ’ ಅನೇಕ ಕಡೆಗಳಲ್ಲಿ ಅಭಿನಯಿಸಲ್ಪಟ್ಟಿತು. ‘ರಕ್ಷಣಾ ಯಾಗ’ವೆಂಬ ಸಾಕ್ಷ್ಯ ಚಿತ್ರ ಸಿದ್ಧವಾಗಿ ಎಲ್ಲೆಡೆಗಳಲ್ಲಿಯೂ ಪ್ರದರ್ಶಿತವಾಗತೊಡಗಿತು. ಇದೆಲ್ಲ ಕಾರ್ಯಗಳಲ್ಲಿ ಗೆಳೆಯ ಎನ್.ಎಸ್. ವೆಂಕೋಬರಾಯರಿಂದ ದೊರೆತ ಸಹಕಾರ ದೊಡ್ಡದು.

ಕರ್ನಾಟಕದಲ್ಲಿ ಸುವರ್ಣದಾನಯಜ್ಞ ಅದ್ಭುತ ರೀತಿಯಲ್ಲಿ ನಡೆಯಿತು. ಬಿಜಾಪುರ ಜಿಲ್ಲೆ ಇದರಲ್ಲಿ ವಿಕ್ರಮವನ್ನು ಸ್ಥಾಪಿಸಿತು. ಶ್ರದ್ಧೇಯ ಪಿ.ಎಮ್. ನಾಡಗೌಡರೂ ಅವರ ಸಂಗಡಿಗರೂ ಬಿಜಾಪುರದಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ಹಾಗೂ ಜನನಾಯಕ ನಿಜಲಿಂಗಪ್ಪನವರ ಸುವರ್ಣ ತುಲಾಭಾರವನ್ನೇ ಏರ್ಪಡಿಸಿ ಬಿಟ್ಟರು! ಆ ಅಭೂತಪೂರ್ವ ಸಮಾರಂಭಕ್ಕೆ ವಿಶೇಷ ಬಸ್ಸಿನ ತುಂಬ ಪ್ರಮುಖ ಪತ್ರಿಕಾ ಪ್ರತಿನಿಧಿಗಳನ್ನು ಕರೆದೊಯ್ದೆ. ಅಲ್ಲಿಂದ ಬಾಗಲಕೋಟೆಗೆ ಹೋಗಿ ಅಲ್ಲಿ ಶ್ರೀಮತಿ ಇಂದಿರಾಗಾಂಧಿಯವರಿಂದ ಶ್ರೀ ಬಸವೇಶ್ವರ ಇಂಜಿನಿಯರಿಂಗ್ ಕಾಲೇಜಿನ ಪ್ರಾರಂಭೋತ್ಸವದಲ್ಲಿ ಭಾಗವಹಿಸಿ, ನವಿಲು ತೀರ್ಥಕ್ಕೆ ಹೋಗಿ, ಮಲಪ್ರಭಾ ಜಲಾಶಯದ ಶಂಕುಸ್ಥಾಪನೆಯು ಶ್ರೀಮತಿ ಇಂದಿರಾಗಾಂಧಿಯವರಿಂದ ನೇರವೇರಿದ ಸಮಾರಂಭದಲ್ಲಿ ಭಾಗವಹಿಸಿ ಬೆಂಗಳೂರಿಗೆ ಮರಳಿದೆವು.

ಬೆಂಗಳೂರಿನಲ್ಲಿ “ಸನ್ನದ್ಧ ಭಾರತ”ವೆಂಬ ರಕ್ಷಣಾ ಪ್ರಧಾನ ಪ್ರದರ್ಶನವೊಂದನ್ನು ಏರ್ಪಡಿಸಿದುದು ಆಗಣ ಸಾಧನೆಗಳಲ್ಲೊಂದು ಎಂದು ಹೇಳಬಹುದು. ಬೆಂಗಳೂರಿನ ನಾಗರೀಕರು ಹಿಂದೆಂದೂ ನೋಡದಿದ್ದ ಶಸ್ತ್ರಾಸ್ತ್ರಗಳು, ಹೋವ್ವರ್ ಕ್ರಾಫ್ಟ್ ಮೊದಲಾದ ಅತ್ಯಾಧುನಿಕ ವಾಹನಗಳು, ಸೈನಿಕರ ಉಡುಪು ಹಾಗೂ ಉಣಿಸುಗಳು,–ಏನೆಲ್ಲವೂ ಅಲ್ಲಿ ಪ್ರದರ್ಶಿತವಾಗಿದ್ದುವು. ಮೈಸೂರಿನ ಮಹಾರಾಜರಿಂದ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಅನಾವರಣಗೊಂಡ ಈ ಪ್ರದರ್ಶನದ ಬಗ್ಗೆ ವಾರಗಟ್ಟಳೆ ವರದಿಗಳು ಬಂದುವು ಪತ್ರಿಕೆಗಳಲ್ಲಿ; ಲಕ್ಷಗಟ್ಟಳೆ ಜನರದನ್ನು ನೋಡಿ ಭಾರತವೂ ಬಲಿಶಾಲಿಯಾಗಿದೆಯೆಂಬುದನ್ನು ಮನವರಿಕೆ ಮಾಡಿಕೊಂಡು ಧೈರ್ಯ ತಾಳಿದರು.

ಇದೇ ಗಡಿಬಿಡಿಯಲ್ಲಿಯೇ ಹೈದರಾಬಾದಿಗೆ ತರಬೇತಿಗಾಗಿ ಹೋಗಿ ಬಂದೆ. ಅಲ್ಲಿ ಪಡೆದ ತರಬೇತಿ ಮುಂದೆ ನಾನು ಕಾರ್ಮಿಕ ಕಮೀಷನರ್ ಆದಾಗ ಉಪಯೋಗಕ್ಕೆ ಬಂದಿತು. ಚೀಣೀಯರ ದುರಾಕ್ರಮಣಪೂರಿತ ಯುದ್ಧ ಮುಗಿದರೂ ಅದರ ಪರಿಣಾಮವಾಗಿ ಅನುಷ್ಠಾನಕ್ಕೆ ಬಂದಿದ್ದ ಸುವರ್ಣ ನಿಯಂತ್ರಣಾಜ್ಞೆಯಿಂದ ಲಕ್ಷಾಂತರ ಅಕ್ಕಸಾಲಿಗರು ನಿರುದ್ಯೋಗಿಗಳಾದರು. ಕರ್ನಾಟಕದಲ್ಲಿಯೂ ಸಾವಿರಾರು ಅಕ್ಕಸಾಲಿಗರು ಪರಂಪರಾಗತ ವೃತ್ತಿಯನ್ನು ಕಳೆದುಕೊಂಡು ನಿರುದ್ಯೋಗಿಗಳಾಗಿ ಬೆಂಗಳೂರಿಗೆ ಬರತೊಡಗಿದರು. ವಿಧಾನಸೌಧದ ತುಂಬ ಅವರೇ ಕಾಣತೊಡಗಿದರು. ಅವರ ಪುನರ್ವಸತಿಯ ಕಾರ್ಯಕ್ಕಾಗಿಯೇ ರಾಜ್ಯಕ್ಕೊಬ್ಬರಂತೆ ಗೋಲ್ಡ್ ಕಂಟ್ರೋಲ್ ಆಫೀಸರರು ನಿಯುಕ್ತರಾದರು. ನಮ್ಮ ರಾಜ್ಯದಲ್ಲಿಯೂ ಅಂಥದೊಂದು ಹುದ್ದೆ ಮಂಜೂರಾಯಿತು.

**ಅಪ್ಪಾಜಿ, ನಿಮಗೆ ವರ್ಗವಾಗಿದೆ :**

ಯುದ್ಧ ಮುಗಿಯುತ್ತಲೆ ನಾನು ನನ್ನ ನೆಚ್ಚಿನ ಕಾರ್ಯವಾದ ಪ್ರವಾಸೋದ್ಯಮಾಭಿವೃದ್ಧಿಗೆ ಮತ್ತೆ ಗಮನ ನೀಡಿದ್ದೆ. ಕೆಮ್ಮಣ್ಣ ಗುಂಡಿಗೆ ಸಮಗ್ರ ಯೋಜನೆಯೊಂದನ್ನು ರೂಪಿಸಲು ಅಲ್ಲಿಗೆ ಹೋಗಿ ಸಂಬಂಧಪಟ್ಟ ಅಧಿಕಾರಿಗಳೊಡನೆ ಸುತ್ತಾಡಿ ಸಮಾಲೋಚಿಸಿ ಬೆಂಗಳೂರಿಗೆ ಹಿಂದಿರುಗಿ, ದಿನವೆಲ್ಲ ದುಡಿದು ಸಮಗ್ರ ಯೋಜನೆ ಸಿದ್ಧಗೊಳಿಸಿ, ಸರಕಾರಕ್ಕೆ ಕಳಿಸಿ, ದಣಿದು ಮನೆಗೆ ಬಂದು ಮಲಗಿದ್ದೆ. ಮರುದಿನ ಬೆಳಗಿನ ಪತ್ರಿಕೆ ಬರುತ್ತಲೇ ಮೊದಲ ಮಗಳು ವಿಜಯಾ ಓಡಿ ಬಂದು ಕೂಗಿದಳು; "ಅಪ್ಪಾಜಿ ನಿಮಗೆ ವರ್ಗವಾಗಿದೆ!" ಕಣ್ಣುಜ್ಜಿಕೊಳ್ಳುತ್ತ ಎದ್ದು ನೋಡಿದೆ. ಹಣಕಾಸೀನ ಇಲಾಖೆಯ ಉಪಕಾರ್ಯದರ್ಶಿ ಹಾಗೂ ಸುವರ್ಣ ನಿಯಂತ್ರಣಾಧಿಕಾರಿಯೆಂದು ನನಗೆ ವರ್ಗವಾಗಿದ್ದಿತು. ಪುಣ್ಯಕ್ಕೆ ವಿಧಾನಸೌಧದಲ್ಲಿಯೇ ಒಂದು ಮಹಡಿಯಿಂದ ಇನ್ನೊಂದು ಮಹಡಿಗೆ, ನನ್ನ ಕೆಮ್ಮಣ್ಣ ಗುಂಡಿಯ ಸಮಗ್ರ ಯೋಜನೆ ಸತ್ತಿತೆಂದು ಆಗಲೇ ತೀರ್ಪು ಕೊಟ್ಟುಬಿಟ್ಟೆ, ಕೊಡದೇನು? ಎಂಥೆಂಥ ಕನಿಷ್ಠ ವೆಚ್ಚದ ಗರಿಷ್ಠ ಪ್ರಯೋಜನದ ಪ್ರಸ್ತಾವಗಳೇ ನಾನೇ ಬೆನ್ನು ಹತ್ತಿ ಬಾರಿಸಿದ್ದರೂ ಮಂಜೂರಾಗಿರಲಿಲ್ಲ. ಈ ಅಧಿಕ ವೆಚ್ಚದ ಯೋಜನೆ ಆಸಕ್ತಿವಹಿಸಿ ಬೆನ್ನು ಹತ್ತುವರಿಲ್ಲದೆ ಮಂಜೂರಾದೀತೆ? ನಾನೇ ಕಳಿಸಿದ್ದ ಲಾವಣಿಕಾರರ ಯೋಜನೆಯನ್ನು ಉದಾಹರಣೆಗಾಗಿ ಉಲ್ಲೇಖಿಸಬಹುದು. "ಸರಕಾರ ಅನೇಕ ವಿಷಯಗಳನ್ನು ಜನರಿಗೆ ಮುಟ್ಟಿಸಬೇಕಾಗಿದೆ ಈಗ: ಮಿತ ಸಂತಾನ, ಸಣ್ಣ ಉಳಿತಾಯ, ಪಾನಪ್ರತಿಬಂಧ, ಸಮಾಜವಿಕಾಸ, ಕೃಷಿ ಕ್ರಾಂತಿ, ರಾಷ್ಟ್ರರಕ್ಷಣೆ, ಅಸ್ಪೃಶ್ಯತಾ ನಿವಾರಣೆ ಇತ್ಯಾದಿ. ಇವುಗಳನ್ನು ಪತ್ರಿಕೆಗಳ ಮೂಲಕ, ಆಕಾಶವಾಣಿಯ ಮೂಲಕ,



ಫಿಲ್ಮ್ ಪ್ರದರ್ಶನಗಳ ಮೂಲಕ ಜನರಿಗೆ ಮುಟ್ಟಿಸುವ ಪ್ರಯತ್ನ ಮಾಡುತ್ತಲೇ ಇದ್ದೇವೆ. ಆದರೂ ಪ್ರಯೋಜನವಾಗಿಲ್ಲ. ಜಿಲ್ಲೆಗೊಬ್ಬ ಲಾವಣಿಕಾರನನ್ನು ತಯಾರು ಮಾಡಿ, ಅವನಿಗೆ ಈ ಎಲ್ಲ ವಿಷಯಗಳ ಬಗ್ಗೆ ಒಳ್ಳೆಯ ಲಾವಣಿಗಳನ್ನು ಕಳಿಸಿ ಜಾತ್ರೆ, ಸಂತೆ, ಸಮಾರಂಭಗಳು ನಡೆಯುವಲ್ಲೆಲ್ಲ ಅವನನ್ನು ಕರೆಸಿ, ಹೋಗ ಬರುವ ವೆಚ್ಚ, ಮೇಲೆ ಐವತ್ತು ರೂಪಾಯಿ ಸಂಭಾವನೆ ಕೊಟ್ಟು ಬಿಟ್ಟರೆ ಲಕ್ಷಾವಧಿ ಜನರಿಗೆ ಈ ವಿಷಯಗಳು ಬಹಳ ಕಡಿಮೆ ವೆಚ್ಚದಲ್ಲಿ ತಲುಪುವುವು; ಇದಕ್ಕಾಗಿ ಒಬ್ಬೊಬ್ಬ ಜಿಲ್ಲಾಧಿಕಾರಿಯ ಹತ್ತಿರ ವರ್ಷಕ್ಕೆ ಐದೇ ಸಾವಿರ ಹಣವಿರಿಸಿದರೂ ಒಟ್ಟು ರಾಜ್ಯಕ್ಕೆ ಒಂದು ವರ್ಷಕ್ಕೆ ಅರ್ಧ ಲಕ್ಷ ವೆಚ್ಚ ಮಾತ್ರ ಬರುವುದು; ಇಪ್ಪತ್ತು ಜನ ಲಾವಣಿಕಾರರ ಕುಟುಂಬಗಳಿಗೂ ರಕ್ಷಣೆ ದೊರೆಯುವುದು," ಎಂದು ಪ್ರಸ್ತಾವ ಕಳಿಸಿದ್ದೆ. ಆಗ ವಾರ್ತಾ ಇಲಾಖೆಯ ಪ್ರಸ್ತಾವಗಳೆಲ್ಲ ಕನ್ನಡ ಬಾರದ ಒಬ್ಬ ಮುಸ್ಲಿಂ ಗುಮಾಸ್ತರ ಕೈಗೆ ಹೋಗುತ್ತಿದ್ದುವು. ಈ ಲಾವಣಿಕಾರರ ಪ್ರಸ್ತಾವ ಹೋಗುತ್ತಲೆ ಅವರು ಓಡಿ ಬಂದು, "ಯಹ ಲಾವಣಿ ಬೋಲೇತೋ ಕ್ಯಾ ಸಾಬ್?" ಎಂದು ನನ್ನನ್ನು ಕೇಳಿದ್ದರು. ಕೊನೆಗೂ ಮಂಜೂರಾಗಲಿಲ್ಲ ಅದು! ಇನ್ನು ಇದು? ಭವಿಷ್ಯ ಹೇಳುವುದೇ ಬೇಡ.

ಹಣಕಾಸಿನ ಇಲಾಖೆಗೆ ಹೋಗುತ್ತಲೆ ಮುತ್ತಿಗೆ ಹಾಕಿಬಿಟ್ಟರು ಅಕ್ಕಸಾಲಿಗರು. ಅವರಿಗಾಗಿ ಸೂರಾಚಾರ್ ಎಂಬ ವಕೀಲರು ಬಹಳ ದುಡಿದರು, ವೈಯಕ್ತಿಕ ಪಾತಳಿಯಲ್ಲಿ ಈ ಸಮಸ್ಯೆಗೆ ಪರಿಹಾರ ಸುಲಭವಲ್ಲವೆಂದು ಬಗೆದು ನಾನು ಆಗ ಅರ್ಥಮಂತ್ರಿಗಳಾಗಿದ್ದ ಬಿ.ಡಿ. ಜತ್ತಿಯವರ ಚೇಂಬರಿನಲ್ಲಿ ಬೆಂಗಳೂರಿನ ಎಲ್ಲ ದೊಡ್ಡ ಕಾರಖಾನೆಗಳ ಮುಖ್ಯಸ್ಥರ ಸಭೆ ಕರೆದೆ. ಅವರವರ ಅಗತ್ಯ–ಸಾಮರ್ಥ್ಯಗಳಿಗನುಣವಾಗಿ ಅಕ್ಕಸಾಲಿಗರನ್ನು ಹಂಚಿಕೊಟ್ಟೆವು ಅವರಿಗೆ. ಉಳಿದವರಲ್ಲಿ ಕೆಲವರನ್ನು ಸರಕಾರೀ ಮುದ್ರಣಾಲಯಗಳಿಗೆ ಕಳಿಸಿದೆವು. ಅಲ್ಲಿ ಅವರು ಮುದ್ರಣ ಕಲೆ ಕಲಿಯುತ್ತಲೇ ಅವರಿಗೆ ನಿರಾಯಾಸವಾಗಿ ಉದ್ಯೋಗಾವಕಾಶಗಳು ದೊರೆತುವು. ಇದೇ ರೀತಿ ಸಹಕಾರೀ ಸಂಸ್ಥೆಗಳಲ್ಲಿ ಕೆಲವರನ್ನು ಸೇರಿಸಿದೆವು; ಕೆಲವರಿಗೆ ಭೂಮಿ ಕೊಡಿಸಿ, ಕೆಲವರಿಗೆ ಸಾಲ ಕೊಡಿಸಿ, ಇನ್ನು ಏನೇನನೋ ಮಾಡಿ ಮೂರು ತಿಂಗಳುಗಳಲ್ಲಿ ಅವರ ಬೃಹದಾಕಾರವಾಗಿ ತೋರಿದ್ದ ಸಮಸ್ಯೆಯನ್ನು ಬಹುಪಾಲು ಪರಿಹರಿಸಿ ಬಿಟ್ಟೆವು. ಉಪಮಂತ್ರಿಗಳಾಗಿದ್ದ ವೈ. ರಾಮಚಂದ್ರ ಅವರು ಸಂಪ್ರೀತರಾದರು. ಅವರೂ ಇದರಲ್ಲಿ ತುಂಬ ಶ್ರಮಿಸಿದರು.

ಇದಾದ ಮೇಲೆ ನೂರಕ್ಕೆ ಹತ್ತರಿಂದ ಹದಿನೈದರವರೆಗಿದ್ದ ನನ್ನ ಶಾಖೆಗಳ ವಿಲೇವಾರಿಯನು ತಿಂಗಳೊಪ್ಪತ್ತಿನಲ್ಲಿ ಶೇ. 77ಕ್ಕೆ ಏರಿಸಿದುದಾಯಿತು, ಯಾವ

ಇಲಾಖೆಯ ಯಾವ ಯೋಜನೆಯೇ ಆಗಲಿ, ನನ್ನ ಶಾಖೆಯ ಸಮ್ಮತಿ ದೊರಕಿಸದೆ ಮುಂದುವರಿಯುವಂತಿರಲಿಲ್ಲ. ಹೀಗಾಗಿ ಯೋಜನಾ ಕಾರ್ಯಗಳೆಲ್ಲ ಮಂದಗತಿಯಿಂದ ಸಾಗಿದ್ದುವು. ಮುಖ್ಯಮಂತ್ರಿಗಳಾಗಿದ್ದ ನಿಜಲಿಂಗಪ್ಪನವರಿಗೂ ಈ ವಿಲಂಬಗಳ ವಿಷಯ ಗೊತ್ತಾಗಿದ್ದಿತು. ಅವರೂ ಕರೆಸಿ ಈ ವಿಲಂಬಗಳನ್ನು ತೊಡೆದು ಹಾಕಲು ನನಗೆ ಹೇಳಿದರು. ನಾನೂ ಛಲಕ್ಕೆ ಬಿದ್ದೆ. ಒಂದು ಕಡತ ಕೈ ಗೆತ್ತಿಕೊಂಡೆ. ಅದರಲ್ಲಿ ಇನ್ನಷ್ಟು ಮಾಹಿತಿಗಾಗಿ ಅದನ್ನು ಹಿಂದಿರುಗಿಸಬೇಕೆಂದು ಅಧೀನ ಕಾರ್ಯದರ್ಶಿಗಳು ಅಭಿಪ್ರಾಯ ಕೊಟ್ಟಿದ್ದರು. ನಾನು ಸಂಬಂಧಪಟ್ಟ ಇಲಾಖೆಯ ಉಪಕಾರ್ಯದರ್ಶಿಗಳನ್ನು ದೂರವಾಣಿಯಲ್ಲಿ ಸಂಪರ್ಕಿಸಿ, ಆ ಮಾಹಿತಿಯನ್ನು ಪಡೆದು, ನಾನೇ ಕಡತದಲ್ಲಿ ಬರೆದು, ಇದನ್ನೀಗ ಒಪ್ಪಬಹುದೆಂದು ಕಳಿಸಿಬಿಟ್ಟೆ. ಅಧೀನ ಕಾರ್ಯದರ್ಶಿಗಳು ಹೌಹಾರಿ ಓಡಿ ಬಂದರು: "ಇದನ್ನೇನು ಮಾಡಿಬಿಟ್ಟಿರಿ, ಸಾರ್?" ಎಂದು ಕೇಳಿದರು. 'ಏನು ಮಾಡಬಾರದುದನ್ನು ಮಾಡಿದ್ದೇನೆ?' ಎಂದು ಕೇಳಿದೆ. "ನಿಮ್ಮ ಮೇಲೇಕೆ ಹೊಣೆ ಹೊತ್ತುಕೊಳ್ಳುವಿರಿ, ಸಾರ್? ನಾಳೆ ಅವರು ತಿರುಗಿ ಬಿದ್ದರೆ?" ಎಂದು ಮರುಪ್ರಶ್ನೆ ಮಾಡಿದರು. 'ಅವರಿಗೆ ಪರವಾದುದಕ್ಕೇಕೆ ಅವರು ತಿರುಗಿ ಬೀಳುವರು? ನಮಗೆ ಸರಕಾರ ದೂರವಾಣಿಯನ್ನು ಕೊಟ್ಟಿರುವುದೇಕೆ? ಹೋಗಿರಿ, ಇನ್ನು ಮೇಲೆ ದೂರವಾಣಿಯಲ್ಲಿ ಪಡೆಯಬಹುದಾದ ಮಾಹಿತಿಗಾಗಿ ಕಡತಗಳನ್ನು ಹಿಂದಿರುಗಿಸ ಬೇಡಿರಿ,' ಎಂದು ಹೇಳಿ ಕಳಿಸಿಬಿಟ್ಟೆ. ಇನ್ನೂ ಸಣ್ಣಪುಟ್ಟ ಸುಧಾರಣೆಗಳನ್ನು ಮಾಡಿದೆ. ಅವುಗಳ ವಿವರಣೆಗೆ ಅವಕಾಶವಿಲ್ಲ. ಅಂತೂ ಮೂರು ತಿಂಗಳುಗಳಲ್ಲಿ ವಿಲೇವಾರಿ ಶೇಕಡಾ 77ಕ್ಕೇರಿತು.

ಇದನ್ನು ಸಾಧ್ಯಗೊಳಿಸುತ್ತಲೇ ಸಣ್ಣ ಉಳಿತಾಯ ಯೋಜನೆಯನ್ನು ನನ್ನ ಕೊರಳಿಗೆ ಕಟ್ಟಿಬಿಟ್ಟರು! ಅದಕ್ಕಾಗಿ ಹೊಸ ಹೋರಾಟ ಪ್ರಾರಂಭಿಸಿದೆ. ಕಲಬುರಗಿ ವಿಜಾಪುರಗಳಲ್ಲಿ ಪಾದಯಾತ್ರೆಗಳನ್ನು ಸಂಘಟಿಸಿದೆ–ಆಯಾ ಜಿಲ್ಲೆಗಳ ಅಧಿಕಾರಿಗಳ ಹಾಗೂ ಜನತಾ ಪ್ರತಿನಿಧಿಗಳ ಸಹಕಾರ ಪಡೆದು. ಅರ್ಥಮಂತ್ರಿ ಜತ್ತಿಯವರೇ ಪಾದಯಾತ್ರೆಗಳಲ್ಲಿ ಭಾಗವಹಿಸಿದರು. ಅರ್ಧ ಕೋಟಿ ಹಣ ಸಂಗ್ರಹವಾಯಿತು. ಅವುಗಳ ಖ್ಯಾತಿ ಬೇರೆ ಜಿಲ್ಲೆಗಳಿಗೂ ಹರಡಿ ಅಲ್ಲಿಯೂ ಪಾದಯಾತ್ರೆಗಳಾದುವು. ಸಣ್ಣ ಉಳಿತಾಯದಲ್ಲಿ ಹಣತೊಡಗಿಸುವುದರ ಮೂಲಕ ಕೊನೆಯವರೆಗೆ ಕಂದಾಯ ಸಂದಾಯದ ತೊಂದರೆಯಿಂದ ಮುಕ್ತವಾಗಬಲ್ಲ ಯೋಜನೆಯೊಂದನ್ನು ರೂಪಿಸಿದೆ. ಒಬ್ಬರು ತಾವು ಕೊಡಬೇಕಾದ ಕಂದಾಯದಷ್ಟು ಬಡ್ಡಿಯನ್ನು ನೀಡಬಲ್ಲ ಮೊತ್ತವನ್ನು ಒಮ್ಮೆ ತಾಲೂಕು ಆಫೀಸಿನಲ್ಲಿ ಸಣ್ಣ ಉಳಿತಾಯ ಯೋಜನಾಂತರ್ಗತವಾಗಿ



ಇರಿಸಿಬಿಟ್ಟರೆ ವರ್ಷ ವರ್ಷವೂ ಅದರ ಬಡ್ಡಿಯನ್ನು ಅವರ ಕಂದಾಯ ಸಂದಾಯವೆಂದು ಭಾವಿಸಿ ಅವರಿಗೆ ಮನೆಗೇ ಪಾವತಿ ಕಳಿಸುವ ವ್ಯವಸ್ಥೆ ಅದರಲ್ಲಿದ್ದಿತು. ಆ ಯೋಜನೆ ಸ್ವೀಕೃತವಾಗಿ ಇನ್ನೇನು ಅದನ್ನು ಅನುಷ್ಠಾನಕ್ಕೆ ತರಬೇಕೆನ್ನುವಷ್ಟರಲ್ಲಿ ನನಗೆ ಕೊಡಗಿಗೆ ವರ್ಗವಾಗಿ ಬಿಟ್ಟಿತು.

ಎಲ್ಲಿಗೆ ಕಳಿಸಿದರೂ ಹೋಗಲು ಸಿದ್ಧನಿದ್ದ ನನಗೆ ಆಗ ಹೋಗಲು ತುಂಬ ಅನನುಕೂಲಗಳಿದ್ದುವು. ಮೊದಲನೆಯ ಮಗಳ ಮದುವೆ ಕುರಗೋಡಿನ ಶ್ರೇಷ್ಠ ಶರಣೆ ನೀಲಮ್ಮನವರ ಮಠದ ನಂದೀಶ್ವರರೊಡನೆ ಆಗಿ ಹೋಗಿದ್ದಿತು. ಆದರೆ ಎರಡನೆಯ ಮಗಳು ಶಿವಗೀತಾ ಮೆಡಿಕಲ್ ಕಾಲೇಜಿಗೂ, ಮಗ ಪ್ರಸನ್ನಕುಮಾರ ಇಂಜಿನಿಯರಿಂಗ್ ಕಾಲೇಜಿಗೂ ಅರ್ಜಿ ಹಾಕಿದ್ದರು. ಆ ಸಮಯದಲ್ಲಿ ನನ್ನಿಂದ ಅವರಿಗೆ ಯಾವ ಸಹಾಯವೂ ಸಿಕ್ಕದಂತಾಯಿತಲ್ಲ–ಎಂಬ ಮರುಗು; ಅನಾರೋಗ್ಯ ಸ್ಥಿತಿಯಲ್ಲಿ ಕೊಡಗಿಗೆ ಮಳೆಗಾಲದಲ್ಲಿಯೇ ಹೋಗಬೇಕಾಯಿತಲ್ಲ–ಎಂಬ ಕೊರಗು; ಬೆಂಗಳೂರಿನಲ್ಲಿ ಗೆಳೆಯರನ್ನೆಲ್ಲ ಬಿಟ್ಟು ದೂರ ಹೋಗಬೇಕಾಯಿತಲ್ಲ–ಎಂಬ ಕಳವಳ! ಬೆಂಗಳೂರಿನಲ್ಲಿ ಎನ್ಕೆ, ಇರಾ, ಸಾಕ್ಷಿ, ಮತ್ತು ಇತರರೊಡನೆ ಪಂಡಿತ ಎಂ.ವ್ಹಿ. ಚಕ್ರವರ್ತಿಗಳಿಂದ ಪ್ರತಿ ರವಿವಾರ ಪಂಪಭಾರತ ಹೇಳಿಸಿಕೊಂಡ ನೆನಪು, ಬೆಳಗಿನ ವಿಹಾರಗಳ ನೆನಪು, ನನ್ನ ಮನೆಯಲ್ಲಿ ಬೇಂದ್ರೆಯವರು ಎರಡು ಸಲ, ಪು.ತಿ.ನ. ಅವರು ಒಂದು ಸಲ ತಮ್ಮ ಕವನವಾಚನ ಮಾಡಿದ ನೆನಪು, ಕೆ. ನರಸಿಂಹಮೂರ್ತಿಗಳು ನವ್ಯ ಕಾವ್ಯವನ್ನೂ, ಜೋಳದ ರಾಶಿ ದೊಡ್ಡನಗೌಡರ ಶೂನ್ಯ ಸಂಪಾದನೆಯನ್ನೂ ಕುರಿತು ಮಾತನಾಡಿದ ನೆನಪು, ಸುಮತೀಂದ್ರ ನಾಡಿಗ, ನಿಸ್ಸಾರ ಅಹಮ್ಮದ್ ಮೊದಲಾದವರು ತಮ್ಮ ಕವಿತೆಗಳನ್ನು ಓದಿದ ನೆನಪು, ರಾವ್ ಬಹಾದ್ದುರರೂ, ಜಡಭರತರೂ ತಮ್ಮ ನಾಟಕಗಳನ್ನು ಓದಿದ ನೆನಪು, ಇನ್ನೂ ಬೇರೆ ಬೇರೆ ನೆನಪುಗಳು ನನ್ನನ್ನು "ಬೆಂಗಳೂರು ಬಿಡುವಿಯಾ? ಬೆಂಗಳೂರು ಬಿಟ್ಟು ಹೋಗುವಿಯಾ?" ಎಂದು ಕೈಹಿಡಿದು ಕೇಳಿದಂತೆನಿಸತೊಡಗಿತು. ಆದರೂ ವಿಧಿಯಿಲ್ಲದೆ ಹೊರಟೆ.

ಹೊರಡುವ ಮುನ್ನ ಮುಖ್ಯಮಂತ್ರಿ ನಿಜಲಿಂಗಪ್ಪನವರನ್ನು ಕಂಡೆ. ಅವರು, "ನಿರ್ವಾಹವಿಲ್ಲದೆ ನಿಮ್ಮನ್ನಲ್ಲಿಗೆ ಕಳಿಸಿದ್ದೇನೆ ಪುರಾಣಿಕರೆ: ಕೊಡಗಿನ ಜನರು ಅವರದೇ ಆದ ಪ್ರತ್ಯೇಕ ಸಿ. ರಾಜ್ಯವಿದ್ದಾಗ ಬಹಳ ಸುಖವಾಗಿದ್ದರು. ನನ್ನ, ಪೂಣಚ್ಚರ ಮುಲಾಜಿ ಮೀರಲಾರದೆ ಕರ್ನಾಟಕ ಸೇರಿದರು. ಆದರೆ ದುರ್ದೈವದಿಂದ ಕರ್ನಾಟಕ ರಾಜ್ಯೋದಯಾ ನಂತರ ಅವರ ಕೆಲಸವೂ ಅಗಿಲ್ಲವೆಂಬ ಸಿಟ್ಟು ಅವರಿಗೆ. ಅದು ಸಹಜ. ನನಗೆ ಯಾವ ಜಿಲ್ಲೆಯಿಂದಲೂ ಬರದಷ್ಟು ದೂರುಗಳು

ಆ ಸಣ್ಣ ಜಿಲ್ಲೆಯಿಂದ ಬರುತ್ತಿವೆ. ಆದುದರಿಂದಲೇ ನಿಮ್ಮನ್ನಲ್ಲಿಗೆ ಕಳಿಸುತ್ತಲಿದ್ದೇನೆ. ನೀವು ಅವರ ಸಿಟ್ಟನ್ನು ಶಮನಗೊಳಿಸುವ ರೀತಿಯಲ್ಲಿ ಅಲ್ಲಿ ಕಾರ್ಯಮಾಡುವಿರೆಂಬ ನಂಬಿಕೆ ನನಗಿದೆ," ಎಂದು ಮನಬಿಚ್ಚಿ ಮಾತನಾಡಿದರು. "ತಾವು ನನ್ನಲ್ಲಿ ಇಷ್ಟು ವಿಶ್ವಾಸ ವಿರಿಸಿರುವುದು ನನ್ನ ಸುದೈವ. ತಮ್ಮ ಮಾತಿನಂತೆ ಶಕ್ತಿ ಮೀರಿ ಕಾರ್ಯ ಮಾಡಿ ತೋರಿಸುವೆನು," ಎಂದು ಹೇಳಿ, ವಂದಿಸಿ ಹೊರಟು ಬಂದೆ.

**ಕೊಡಗಿನಲ್ಲಿ :**

ಮೊದಲು ಒಬ್ಬನೇ ಕೊಡಗಿಗೆ ಹೋದೆ. ಮೈಯಲ್ಲಿ ರಕ್ತ ಹೆಪ್ಪುಗಟ್ಟುವಂಥ ಚಳಿ, ಹಗಲಿರುಳೂ ಬಿಡುವಿಲ್ಲದೆ ಹೊಯ್ಯುತ್ತಿದ್ದ ಮಳೆ, ಒಳಗೆ ಅಗ್ಗಿಸ್ಟಿಗೆಯಿಟ್ಟು, ಮೇಲೆ ಕುಕ್ಕೆಯನ್ನಿರಿಸಿ, ಅದರ ಮೇಲೆ ಬಟ್ಟೆ ಒಣಗಿಸಿಕೊಳ್ಳಬೇಕಾದ ಪರಿಸ್ಥಿತಿ. ಮನೆಯಲ್ಲಿಯೂ, ಆಫೀಸಿನಲ್ಲಿಯೂ ಹೀಟರ್ ಇರಿಸಿಕೊಂಡೇ ಕುಳಿತಿರಬೇಕಾದ ಸಂದರ್ಭ, ಸರಕಾರಿ ರೆಕಾರ್ಡುಗಳನ್ನು ಸತತವಾಗಿ ಬೆಂಕಿ ಉರಿಸಿ ಉಳಿಸಿಕೊಳ್ಳಬೇಕಾದ ಸನ್ನಿವೇಶ, ಎಲ್ಲಿಗೆ ಹೋದರೂ ಘಟ್ಟದ ಮಾರ್ಗಗಳು–ವಾಹನದಲ್ಲಿ ಕುಳಿತಲ್ಲಿಯೇ ಪುಟಿದು ಬೀಳುವಂಥ ಪ್ರವಾಸಗಳು–ನನಗೆ ಮಂಕು ಕವಿದು ಬಿಟ್ಟಿತು. ಇಷ್ಟೇ ಅಲ್ಲ, ಉಂಡುದೆಲ್ಲ ವಾಂತಿಯಾಗತೊಡಗಿತು. ಅಲ್ಲಿಯ ಸರಕಾರಿ ಆಸ್ಪತ್ರೆಯಲ್ಲಿ ಆಗ ಡಾಕ್ಟರರೇ ಇರಲಿಲ್ಲ; ಇನ್ನೇನು, ರಜೆ ಪಡೆದುಕೊಂಡು ಬೆಂಗಳೂರಿಗೆ ಹಿಂದಿರುಗಿಬಿಡಬೇಕು ನಾನು. ಕೊನೆಯ ಪ್ರಯತ್ನವೆಂದು ಅಲ್ಲಿಯ ತಹಸೀಲ್ದಾರ್ ಜಯದೇವಪ್ಪ ಹಾಗೂ ಬಿ.ಡಿ.ಓ. ಓಡಿ ಹೋಗಿ ಡಾ॥ ಬೋಪಯ್ಯನವರನ್ನು ಕರೆದು ತಂದರು. ಅವರು ನನ್ನ ಪಾಲಿಗೆ ಧನ್ವಂತರಿಯಾದರು. ಎರಡು ಮೂರು ದಿನಗಳಲ್ಲಿಯೇ ನನ್ನನ್ನು ನೆಟ್ಟಗೆ ಮಾಡಿದರು. ಹುರುಪು ಮರುಕಳಿಸಿತು.

ಅಲ್ಲೊಂದು ಕೊಡುಗು ಮತದಾರರ ಸಂಘವೆಂಬ ಸಂಸ್ಥೆಯಿದ್ದಿತು. ಕೆ.ಪಿ. ಚಿಣ್ಣಪ್ಪನವರು ಅದರ ಜೀವನಾಡಿ. ಅವರು ಬಂದು ನನ್ನನ್ನು ಕಂಡರು. ಉರಿಮುಖದೊಡನೆಯೇ ಬಂದಿದ್ದರು. ಬಂದವರೇ, "ಸ್ವಾಮಿ, ಇದೊಂದು ಉದ್ದವಾದ ಮನವಿ. ನಮ್ಮ ದೌರ್ಭಾಗ್ಯವಶಾತ್ ನಾವು 1–11–1956ರಂದು ಕರ್ನಾಟಕದಲ್ಲಿ ವಿಲಯನ ಹೊಂದಿದ ಮೇಲೆ ಇದನ್ನು ಇಲ್ಲಿಗೆ ಈ ಮೊದಲು ಬಂದ ಎಲ್ಲ ಡಿ.ಸಿ. ಗಳಿಗೆ, ಎಲ್ಲ ವಿಭಾಗಾಧಿಕಾರಿಗಳಿಗೆ, ಎಲ್ಲ ಮಂತ್ರಿಗಳಿಗೆ ಕೊಟ್ಟಿದ್ದೇನೆ. ಕವಡೆಯ ಪ್ರಯೋಜನವೂ ಆಗಿಲ್ಲ. ನಿಮಗೆ ಕೊಟ್ಟರೂ ಪ್ರಯೋಜನವಿಲ್ಲವೆಂಬುದು ನನಗೆ ಗೊತ್ತು. ಗೊತ್ತಿದ್ದೂ ನನ್ನ ಕರ್ತವ್ಯವೆಂದು ನಿಮಗೊಂದು ಪ್ರತಿ ಕೊಡುತ್ತಲಿದ್ದೇನೆ; ಸ್ವೀಕರಿಸಬೇಕು!" ಹರಳು ಹುರಿದಂತೆ ಫಳಫಳಫಳ ಮಾತಾಡಿದ ಆ ಅಜಾನುಬಾಹು



ವ್ಯಕ್ತಿಯ ಬಗ್ಗೆ ನನಗೆ ಆದರ ಭಾವನೆಯೇ ಉಂಟಾಯಿತು. ಮನವಿಯನ್ನು ಸಾವಧಾನವಾಗಿ ಓದಿದೆ. ಅದರಲ್ಲಿ ಇಪ್ಪತ್ತೇಳು ಆಗದ, ಅರ್ಧಕ್ಕೆ ನಿಂತ ಕಾರ್ಯಗಳ ಉಲ್ಲೇಖವಿದ್ದಿತು. ಓದಿ, "ಈ ಕಾರ್ಯಗಳನ್ನು ಪ್ರಾರಂಭಿಸಲು ನನಗೆಷ್ಟು ಅವಧಿ ಕೊಡಲು ಸಿದ್ಧರಿದ್ದೀರಿ?" ಎಂದು ಕೇಳಿದೆ. "ತಮಗೆ ಎಷ್ಟು ಅವಧಿ ಬೇಕೆನಿಸಿದರೂ ತೆಗೆದುಕೊಳ್ಳಿರಿ; ದಯವಿಟ್ಟು ಒಂದೆರಡನ್ನಾದರೂ ಪ್ರಾರಂಭಿಸಿ ತೋರಿಸಿರಿ," ಎಂದವರು ಹೇಳಿದರು, "ಸರಿ, ಇಂದಿಗೆ ಸರಿಯಾಗಿ ಆರು ತಿಂಗಳುಗಳು ಕಳೆದ ಮೇಲೆ ಮತ್ತೆ ನೋಡೋಣ," ಎಂದೆ. ಹೋದರವರು.

ಇದಾದ ಮೂರನೆಯ ದಿನಕ್ಕೇ ಸಮೀಕರಣ ಸಮಿತಿ (Co-ordination Committee)ಯ ಸಭೆಯಿದ್ದಿತು. ನಾನು ಮೊದಲು ಆ ಮನವಿಯನ್ನೇ ಚರ್ಚೆಗೆ ಎತ್ತಿಕೊಂಡೆ. ಇಪ್ಪತ್ತೇಳು ಕಾರ್ಯಗಳೂ ಯಾವ ಕಾರಣದಿಂದ ಆರಂಭವಾಗದೆ ನಿಂತಿವೆ, ಇಲ್ಲವೆ ಅರ್ಧಕ್ಕೆ ನಿಂತಿವೆಯೆಂಬುದರ ವಿವರಗಳನ್ನು ಪಡೆದುಕೊಂಡೆ. ಅಂದಿನಿಂದಲೇ ಅವುಗಳ ಬೆಂಬತ್ತಿಬಿಟ್ಟೆ. ವೈಯುಕ್ತಿಕವಾಗಿ ನಾನೇ ಆ ಕಾರ್ಯಗಳ ಮೇಲ್ವಿಚಾರಣೆ ನಡೆಸಿದೆ. ಕಾರ್ಯಗಳು ಒಂದೊಂದಾಗಿ ಪ್ರಾರಂಭವಾಗತೊಡಗಿದುವು. ಅವುಗಳಲ್ಲಿ ಪ್ರೌಢವಿದ್ಯಾಲಯದ ಕಟ್ಟಡಗಳಿದ್ದುವು, ಎರಡು ದೊಡ್ಡ ಸೇತುವೆಗಳಿದ್ದುವು, ಇನ್ನೂ ಏನೇನೋ ಇದ್ದುವು. ಮೂರು ತಿಂಗಳುಗಳಲ್ಲಿ ಎಲ್ಲ ಕಾರ್ಯಗಳೂ ಪ್ರಾರಂಭವಾಗಿ ಬಿಟ್ಟುವು. ಚಿಣ್ಣಪ್ಪನವರನ್ನು ನಾನೇ ಕರೆಸಿಕೊಂಡು ಹೇಳಿದೆ, "ನಿಮ್ಮ ಮನವಿಯಲ್ಲಿ ಉಲ್ಲೇಖಿತವಾದ ಎಲ್ಲ ಕಾರ್ಯಗಳೂ ಪ್ರಾರಂಭವಾಗಿವೆ. ಹೋಗಿ ನೋಡಿಕೊಂಡು ಬನ್ನಿ." ಅವರು ತಮ್ಮ ಕಿವಿಗಳನ್ನು ತಾವೇ ನಂಬದಾದರು. ಹೋಗಿ ನೋಡಿಕೊಂಡು ಬಂದರು. "ನೀವೊಬ್ಬ ಪವಾಡ ಪುರುಷರು," ಎಂದು ಶ್ಲಾಘಿಸಿ ಸಂತೃಪ್ತರಾಗಿ ಹೋದರು. ಇದರ ಖ್ಯಾತಿ ಕೊಡಗಿನಲ್ಲೆಲ್ಲ ಹಬ್ಬಿತು, ಕೊಡಗಿನವರಲ್ಲಿ ಹೊಸ ಆಸೆ ಉದಿಸಿತು.

ಮಳೆಗಾಲದಲ್ಲಿ ನೂರಾರು ಇಂಚು ಮಳೆ ಬಿದ್ದೂ ಬೇಸಿಗೆಯಲ್ಲಿ ಕುಡಿಯುವ ನೀರಿನ ಕೊರತೆಯಿಂದ ನರಳುತ್ತಿದ್ದ ಮಡಿಕೇರಿ ನನಗೆ ಆಶ್ಚರ್ಯವನ್ನುಂಟು ಮಾಡಿತು. ಅದಕ್ಕೆ ಅವರೆಗೂ ಆರೋಗ್ಯಕರ ನೀರಿನ ಪೂರೈಕೆಯ ಯೋಜನೆ ಏಕೆ ಬಂದಿರಲಿಲ್ಲವೆಂಬುದೇ ಆ ಆಶ್ಚರ್ಯಕ್ಕೆ ಕಾರಣವಾಗಿದ್ದಿತು. ನಾನು ಮಡಿಕೇರಿಯ ನಗರ ಸಭೆಯ ಪದಾಧಿಕಾರಿಗಳಿಗೆ ಹೇಗೆ ಆ ಯೋಜನೆ ಸಿದ್ಧಗೊಳಿಸುವುದೆಂಬುದನ್ನು ಹೇಳಿಕೊಟ್ಟೆ. ಅವರು ಆ ರೀತಿ ಯೋಜನೆ ಸಿದ್ಧಪಡಿಸಿ, ನಗರ ಸಭೆಯ ಗೊತ್ತುವಳಿಯೊಂದಿಗೆ ನನಗೆ ಕಳಿಸಿಕೊಟ್ಟರು. ನಾನೂ ಅದನ್ನು ಬಲವಾಗಿ ಬೆಂಬಲಿಸಿ, ಆ ಯೋಜನೆಯ ಎಲ್ಲ ಕಾಗದಗಳೊಡನೆ ಮೈಸೂರಿಗೆ ಹೋದೆ. ಆಗ

ವಿಭಾಗಾಧಿಕಾರಿಗಳಾಗಿದ್ದ ಸಿ. ನರಸಿಂಹಮೂರ್ತಿಗಳವರು ಕೊಡಗನ್ನು ಬಲ್ಲವರಾಗಿದ್ದುದರಿಂದ ಕೂಡಲೇ ತಮ್ಮ ಬೆಂಬಲ ನೀಡಿದರು ಅದಕ್ಕೆ. ಅಲ್ಲಿಂದ ಬೆಂಗಳೂರಿಗೆ ಹೋದೆ. ಅಲ್ಲಿ ಸಂಬಂಧಪಟ್ಟ ಇಲಾಖೆಗಳ ಸಮ್ಮತಿ ದೊರಕಿಸಿ. ಹಣಕಾಸಿನ ಇಲಾಖೆಗೆ ಹೋದೆ. ಅಲ್ಲಿ ನಾನಿದ್ದು ಹೋದವನಾಗಿದ್ದುದರಿಂದ ಆ ಇಲಾಖೆ ಏನೇನು ಆಕ್ಷೇಪಗಳನ್ನು ಎತ್ತಬಹುದೆಂಬುದನ್ನು ಮೊದಲೇ ಊಹಿಸಿ ಅವುಗಳಿಗೆಲ್ಲ ತೃಪ್ತಿಕರ ವಿವರಣೆಗಳೊಂದಿಗೇ ಹೋಗಿದ್ದೆ. ಶ್ರೀ ಎನ್.ಎಸ್. ಭರತರ ಬೆಂಬಲದಿಂದ ಆ ಇಲಾಖೆಯ ಸಮ್ಮತಿಯೂ ಸುಲಭವಾಗಿ ದೊರೆಯಿತು. ಹೀಗಾಗಿ ಮಡಿಕೇರಿಯಿಂದ ಹೊರಟ ಮೂರನೆಯ ದಿನ ಸಂಜೆ ಮೂವತ್ತು ಲಕ್ಷ ರೂಪಾಯಿಗಳ ಯೋಜನೆಯ ಮಂಜೂರಿಯ ಆಜ್ಞೆಯನ್ನು ಕಿಸೆಯಲ್ಲಿರಿಸಿಕೊಂಡೇ ಮಡಿಕೇರಿ ತಲುಪಿದೆ. ಬೆಕ್ಕಸ ಬೆರಗಾದರು ಮಡಿಕೇರಿಯವರು! ಅವರ ಆಸೆಯ ಅಂಕುರ ಪಲ್ಲವಿಸತೊಡಗಿತು.

ಇದರಿಂದ ಉತ್ತೇಜಿತವಾಗಿ ಜಿಲ್ಲೆಯಲ್ಲೆಲ್ಲ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಆರಂಭಿಸಿದೆ. ಅಲ್ಲಿಯ ಜನರ ಸಕ್ರಿಯ ಸಹಕಾರ ಅನನ್ಯವಾದುದಾಗಿದ್ದಿತು. ನಾಗರಹೊಳೆ ಕಾಡಿನ ಕಾಡು ಕುರುಬರ, ಜೇನು ಕುರುಬರ ಕಲ್ಯಾಣ ಯೋಜನೆಗಳಿಗೆ ಆದ್ಯತೆಯಿತ್ತೆ. ಅವರಿಗಾಗಿ ಮನೆಗಳನ್ನು ಕಟ್ಟಿಸುವ, ಹೊಲಗಳನ್ನು ನೀಡುವ, ಶಾಲೆಗಳನ್ನು ನಡೆಸುವ, ಸಂಚಾರಿ ಆಸ್ಪತ್ರೆಯನ್ನು ಸಾಗಿಸುವ, ಸಹಕಾರೀ ಸಂಘವನ್ನು ಬೆಳೆಸುವ ಕಾರ್ಯಗಳಿಗೆ ಪುಟಿಗೆ ಸಿಕ್ಕಿತು. ಅವರ ಮಕ್ಕಳಿಗಾಗಿಯೇ ರಾಜ್ಯದ ಪ್ರಥಮ ಪ್ರೌಢ ಶಾಲೆಯೊಂದನ್ನು ತಿತ್ತಿಮತ್ತಿಯಲ್ಲಿ ತೆರೆದುದೂ, ಅವರಿಗಾಗಿಯೇ ಒಂದು ನೀರಾವರಿ ಕೆರೆಯನ್ನು ಕಟ್ಟಿಸಿದುದೂ ಈ ಎಲ್ಲ ಕಾರ್ಯಗಳಲ್ಲಿ ಎದ್ದು ಕಾಣುವ ಕಾರ್ಯಗಳು.

ಕೊಡಗು ಸಾರ್ವಜನಿಕ ಶಿಕ್ಷಣ, ಸಹಕಾರ, ಹಾಗೂ ಆರೋಗ್ಯ ಕ್ಷೇತ್ರಗಳಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದ ಜಿಲ್ಲೆಯಾಗಿದ್ದಿತು. ಆದರೆ ಗ್ರಾಮಾಂತರ ಪ್ರದೇಶದಲ್ಲಿ ರಸ್ತೆಗಳ, ಸೇತುವೆಗಳ, ವಿದ್ಯುದ್ದೀಪಗಳ, ಸಣ್ಣ ನೀರಾವರಿ ಕಾರ್ಯಗಳ ಅಭಾವದಿಂದ ಅದರ ಪ್ರಗತಿ ಕುಂಠಿತವಾಗಿದ್ದಿತು. ಇದನ್ನರಿತು ಈ ಕಾರ್ಯಗಳಿಗೂ ಪ್ರಾಥಮಿಕತೆ ನೀಡಿದೆ. ಆಗ ಸಿ. ಎಮ್. ಪೂಣಚ್ಚ ಅವರು ಕೇಂದ್ರದಲ್ಲಿ ಸಾರಿಗೆ ಮಂತ್ರಿಗಳಾಗಿದ್ದರು. ಅವರನ್ನೂ, ರಾಜ್ಯದ ಲೋಕೋಪಯೋಗಿ ಇಲಾಖೆಯ ಮಂತ್ರಿ ವೀರೇಂದ್ರ ಪಾಟೀಲರನ್ನೂ, ಹಣಕಾಸಿನಮಂತ್ರಿ ರಾಮಕೃಷ್ಣ ಹೆಗ್ಗಡೆ ಅವರನ್ನೂ ಒಮ್ಮೆಗೆ ಕೊಡಗಿಗೆ ಆಹ್ವಾನಿಸಿ, ಸುದರ್ಶನ ಅತಿಥಿ ಭವನದಲ್ಲಿ ಅವರಿಗೆ ಜಿಲ್ಲೆಯಲ್ಲಿ ಇಪ್ಪತ್ತೊಂದು ಸ್ಥಳಗಳಲ್ಲಿ ಸಣ್ಣ ದೊಡ್ಡ ಸೇತುವೆಗಳನ್ನು ಕಟ್ಟಿಸುವ, ಆರೇಳು ಒಳ ರಸ್ತೆಗಳನ್ನು



ನಿರ್ಮಿಸುವ ಒಂದೇ ವ್ಯಾಪಕ ಪ್ರಸ್ತಾವವನ್ನು ಒಪ್ಪಿಸಿದೆ. ಅದಕ್ಕೆ ಅಲ್ಲಿಯೇ ಅವರ ಅಂಗೀಕೃತಿಯ ಮುದ್ರೆ ಬಿದ್ದುಬಿಟ್ಟಿತು. ಜಿಲ್ಲೆಗಳಲ್ಲೆಲ್ಲ ಆ ಕಾರ್ಯಗಳು ಪ್ರಾರಂಭವಾಗಿ ಪಲ್ಲವಿಸಿದ್ದ ಅವರ ಆಸೆ ಕುಡಿಯೊಡೆಯಿತು, ಹರಿಯುವ ಪ್ರವಾಹದ ಆಚೆ ಈಚೆಯ ಮರಗಳೆರಡಕ್ಕೆ ಹಗ್ಗದ ಇಲ್ಲವೆ ಬಿದರಿನ ತೂಗಾಡುವ ಕಾಲು ಸೇತುವೆ ಕಟ್ಟಿ ಅದರ ಮೂಲಕ ಪ್ರವಾಹವನ್ನು ದಾಟುತ್ತಿದ್ದರು–ಅಲ್ಲಿ ಅನೇಕ ಕಡೆಗೆ. ಹಾಗೆ ದಾಟುವಾಗ ಕೆಲವರು ಬಿದ್ದು ಪ್ರವಾಹದ ಪಾಲಾದ ಉದಾಹರಣೆಗಳೂ ಇದ್ದುವು. ಆ ಎಲ್ಲ ಕಡೆಗಳಲ್ಲಿಯೂ ಸೇತುವೆಗಳು, ಗಟ್ಟಿ ರಸ್ತೆಗಳ ನಿರ್ಮಾಣ ಕಾರ್ಯ ಪ್ರಾರಂಭವಾಯಿತು. ಕೊಟ್ಟಮುಡಿ, ಕೋಣಂದೂರು ಸೇತುವೆಗಳು ಅದಾಗಲೇ ಮುಗಿಯುತ್ತ ಬಂದಿದ್ದವು. ಅವುಗಳನ್ನು ಪುನರಾರಂಭಿಸುವ ಕಾರ್ಯದಲ್ಲಿ ನಾನು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಅವು ಮುಗಿಯುತ್ತ ಬಂದುದೂ, ಹೊಸ ಸೇತುವೆ ರಸ್ತೆಗಳ ಕಾರ್ಯಗಳು ಆರಂಭವಾದುದೂ ಅಲ್ಲಿಯವರಿಗೆ ಬಹಳ ಸಂತಸವನ್ನು ಉಂಟುಮಾಡಿದ್ದಿತು.

ವಿದ್ಯುದೀಕರಣ ಕಾರ್ಯವನ್ನು ಅಷ್ಟೇ ಆದ್ಯತೆಯೊಡನೆ ಕೈಗೊಂಡೆ. ಮೊದಲು ಎಲ್ಲರಿಗೂ ಬೆಳಕು ಕೊಟ್ಟು ತಾನೇ ಕತ್ತಲೆಯಲ್ಲಿ ಕುಳಿತಿದ್ದ ಕಾವೇರಿ ಮಾತೆಗೇ ವಿದ್ಯುದ್ದೀಪಗಳನ್ನು ಒದಗಿಸಬೇಕೆಂದು ತೀರ್ಮಾನಿಸಿದೆ. ಆದರೆ ಅದು ತುಂಬ ವೆಚ್ಚದ ಕಾರ್ಯವಾಗಿದ್ದಿತು. ನಾನು ದೇವಸ್ಥಾನಗಳ ಸಮಿತಿಯ ಅಧ್ಯಕ್ಷನಾಗಿದ್ದರೂ ಸಮಿತಿ ಸುದಾಮನ ಮನೆಯಾಗಿದ್ದಿತು. ಒಂದು ಉಪಾಯ ಹೂಡಿದೆ. ಭಾಗ ಮಂಡಲದ ವಿದ್ಯುದೀಕರಣವನ್ನು ಶೀಘ್ರಾತಿಶೀಘ್ರವಾಗಿ ಮುಗಿಸಿ ಆಗ ರಾಜ್ಯದ ವಿದ್ಯುಚ್ಛಕ್ತಿ ಮಂಡಳಿಯ ಅಧ್ಯಕ್ಷರಾಗಿದ್ದ ಜಿ. ಸಾಂಬಸದಾಶಿವಯ್ಯನವರನ್ನು ಅದರ ಉದ್ಘಾಟನೆಗೆ ಕರೆದೆ; ಅವರ ಧರ್ಮಪತ್ನಿ ಸರೋಜಮ್ಮನವರಿಂದ ಅಲ್ಲಿಯ ದೇವಾಲಯಗಳ ವಿದ್ಯುದೀಕರಣದ ಶುಭಾರಂಭ ಮಾಡಿಸಿದೆ. ಇಬ್ಬರಿಗೂ ತಲಕಾವೇರಿಯಲ್ಲಿ ಸ್ನಾನ ಮಾಡಿಸಿ, ಅಲ್ಲಿಯವರೆಗೆ ಉಚಿತವಾಗಿ ವಿದ್ಯುದ್ದೀಪಗಳನ್ನು ವಿದ್ಯುಚ್ಛಕ್ತಿ ಮಂಡಳಿ ಒದಗಿಸಬೇಕೆಂದು ಕೋರಿದೆ. ಅವರು ಇದಕ್ಕೆ ಬೇಕಾಗುವ ಸಾಗವಾನಿಯ ಕಂಬಗಳನ್ನು ಅರಣ್ಯ ಇಲಾಖೆ ಉಚಿತವಾಗಿ ಕೊಟ್ಟರೆ ಉಳಿದುದನ್ನು ಮಂಡಳಿ ಉಚಿತವಾಗಿ ಮಾಡಿ ಮುಗಿಸಿ ನಿಮ್ಮ ಕೋರಿಕೆಯನ್ನು ಪೂರೈಸುವುದೆಂದು ಮಾತು ಕೊಟ್ಟರು ಹಿಗ್ಗಿದೆ.

ಆಗ ಬಿ. ರಾಚಯ್ಯನವರು ಅರಣ್ಯಮಂತ್ರಿಗಳಾಗಿದ್ದರು. ಹಿಂದೊಮ್ಮೆ ನಾನು ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕನಾಗಿದ್ದಾಗ ರಂಗನತಿಟ್ಟು ಪಕ್ಷಿಧಾಮವನ್ನು ಅರಣ್ಯ ಇಲಾಖೆ ಅಭಿವೃದ್ಧಿಗೊಳಿಸಬೇಕೆಂದು ಕೇಳಿಕೊಂಡಾಗ ಕೂಡಲೇ ಅದನ್ನು ಮಾಡಿಸಿಬಿಟ್ಟಿದ್ದರವರು. ಇದಕ್ಕೂ ಅವರು ಇಲ್ಲೆನ್ನಲಾರರೆಂಬ

ಭರವಸೆಯೊಡನೆ ಅವರನ್ನು ಆಹ್ವಾನಿಸಿದೆ. ಮತ್ತೆ ತಲಕಾವೇರಿಯಲ್ಲಿಯೇ ತೇಗಿನ ಕಂಬಗಳನ್ನು ಉಚಿತವಾಗಿ ಅರಣ್ಯ ಇಲಾಖೆ ಒದಗಿಸುವುದೆಂಬ ಆಶ್ವಾಸನೆ ದೊರೆಯಿತು ಅವರಿಂದ. ಆಶ್ವಾಸನೆಯಲ್ಲಿ ಬಂತು, ಆಜ್ಞೆಯೇ ಹೊರಟುಬಿಟ್ಟಿತು– ಅಲ್ಲಿಯೇ! ನನ್ನ ಧೈರ್ಯ ಹೆಚ್ಚಿ, "ಸರ್, ಇಲ್ಲಿಗೆ ಬರುವ ಯಾತ್ರಿಕರಿಗೆ ರಾತ್ರಿ ತಂಗಲು ಯಾವ ವ್ಯವಸ್ಥೆಯೂ ಇಲ್ಲ; ಇಲ್ಲೊಂದು ಕಾಡ ಕುಟೀರ (Forest Lodge)ವೊಂದನ್ನು ಕಟ್ಟಿಸಿ ಕೊಡಿ," ಎಂದೆ, ಅದೂ ಮಂಜೂರಾಗಿ ನಿರ್ಮಾಣಗೊಂಡಿತು. ದೇವಾಲಯಗಳ ಸಮಿತಿಗೆ ಒಂದು ಪೈ ವೆಚ್ಚವಿಲ್ಲದೆ ಕಾವೇರಿ ತಾಯಿಯ ಉಗಮಸ್ಥಾನದವರೆಗೂ ವಿದ್ಯುದ್ದೀಪಗಳೆದ್ದು ಝಗ ಝಗಿಸಿದುವು. ಆ ವರ್ಷದ ತೀರ್ಥೋದ್ಭವವೂ ಅದೇ ಸಮಯಕ್ಕೆ ಬಂದಿತು. ಆ ಜಾತ್ರೆಗೆ ನೆರೆದ ಸಹಸ್ರಾವಧಿ ಜನರು ಹಿರಿ ಹಿರಿ ಹಿಗ್ಗಿದರು. ಕ್ಷೇತ್ರಾಭಿವೃದ್ಧಿಗಾಗಿ ದಾನಿಗಳು ಮುಂದೆ ಬರತೊಡಗಿದರು. ದಕ್ಷಿಣ ಕನ್ನಡ ಜಿಲ್ಲೆಯ ದಾನಿಗಳೊಬ್ಬರು ಧರ್ಮಶಾಲೆಯೊಂದನ್ನು ಕಟ್ಟಿಸಿದರಲ್ಲಿ; ಸಿ.ಪಿ. ಕುಶಾಲಪ್ಪನವರೂ ಒಂದು ಯಾತ್ರಿಕ ಭವನ ಕಟ್ಟಿಸಿದರು; ಕೈಲಾಸಾಶ್ರಮದ ಪೂಜ್ಯ ತಿರುಚಿ ಸ್ವಾಮಿಗಳವರು ಲಕ್ಷ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಾವೇರೀ ಆಶ್ರಮವನ್ನೇ ಕಟ್ಟಿಸಿ ಅಲ್ಲಿ ಯಾತ್ರಿಕರಿಗೆ ಅನ್ನ ಸಂತರ್ಪಣೆಯ ವ್ಯವಸ್ಥೆ ಮಾಡಿದರು. ಅವರಿಗೆ ನಾನು ನೀಡಿದ ನೆರವೆಂದರೆ ಐದು ಎಕರೆ ಸರಕಾರೀ ಭೂಮಿಯನ್ನು ಔಪಚಾರಿಕವಾದ ಬೆಲೆಗೆ ಅದಕ್ಕಾಗಿ ಕೊಟ್ಟುದು. ನಾನು ಪ್ರವಾಸೋದ್ಯಮ ಇಲಾಖೆಯಲ್ಲಿದ್ದಾಗಲೇ ಆರಂಭಿಸಿದ್ದ ಪ್ರವಾಸೀ ಭವನವೂ ಎದ್ದು ನಿಂತಿತು; ಯಾತ್ರೆಗೆ ಬರುತ್ತಿದ್ದ ಅಸಂಖ್ಯಕಾರುಗಳನ್ನು ನಿಲ್ಲಿಸಲು ಬೆಟ್ಟ ಕೊರೆದು ಬಯಲು ನಿರ್ಮಿಸಲಾಯಿತು; ಚೆಟ್ಟಿಯಾರರೊಬ್ಬರು ಮಹಾದ್ವಾರ ನಿರ್ಮಿಸಲು ಮುಂದಾದರು; ಬ್ರಹ್ಮಗಿರಿಯ ಮೇಲೆ ಅರುವತ್ತು ಅಡಿ ಎತ್ತರದ ಲೋಹಸ್ತಂಭ ನಿಲ್ಲಿಸಿ ಅದರ ಮೇಲೆ ಸಪ್ತರ್ಷಿಗಳ ಸಂಕೇತವಾಗಿ ಸಪ್ತ ವರ್ಣದ ದೀಪಗಳನ್ನು ಜೋಡಿಸುವ ಯೋಜನೆ ಸಿದ್ಧವಾಯಿತು. ಒಟ್ಟಿನಲ್ಲಿ, ತಲಕಾವೇರಿ ಕ್ಷೇತ್ರದ ಅಭಿವೃದ್ಧಿ ಅಭೂತಪೂರ್ವವಾಗಿ ನಡೆಯತೊಡಗಿತು.

ತಲಕಾವೇರಿಯಿಂದ ಪ್ರಾರಂಭವಾದ ವಿದ್ಯುದೀಕರಣದ ಆಂದೋಲನ ಹಳ್ಳಿಗಳಿಗೂ, ಕಾಫೀ ತೋಟಗಳಿಗೂ ಹರಡಿತು. ಮತ್ತೆ ಜಿ. ಸಾಂಬಶಿವಯ್ಯನವರನ್ನು ಕರೆದು ಒಂದು ಜಿಲ್ಲಾಮಟ್ಟದ ಸಮ್ಮೇಳನವನ್ನೇ ನಡೆಸಿದೆ ಇದಕ್ಕಾಗಿ. ದೊಡ್ಡ ದೊಡ್ಡ ಕಾಫೀ ಪ್ಲಾಂಟರರೂ, ಗ್ರಾಮ ಪಂಚಾಯತಿಗಳ ಅಧ್ಯಕ್ಷರೂ ತಮ್ಮಲ್ಲಿಗೆ ವಿದ್ಯುತ್ತನ್ನು ಒಯ್ಯಲು ಮುಂದಾದರು. ಈ ಯೋಜನೆಗೆ ಇನ್ನೊಂದು ಘಟನೆಯೂ ಪ್ರಬಲ ಪ್ರಚೋದನೆಯನ್ನು ನೀಡಿತು. ಎಂದೂ 'ಬರ' ಎಂಬ ಶಬ್ದವನ್ನೇ ಕೇಳದಿದ್ದ



ಕೊಡಗಿಗೂ ದುಷ್ಕಾಲ ದಾಳಿಯಿಟ್ಟಿತು. ಪಕ್ಕದಲ್ಲಿ ಪ್ರವಾಹ ಹರಿಯುತ್ತಿದ್ದರೂ ಗದ್ದೆಗಳಲ್ಲಿ ಕೈಗೆ ಬರಲಿದ್ದ ಭತ್ತದ ಪಯಿರುಗಳು ಬಾಡತೊಡಗಿದುವು, ಪಂಪ್ ಸೆಟ್ಟುಗಳನ್ನು ಕೂಡಲೇ ಕೂಡ್ರಿಸಬೇಕೆಂದರೆ ಅಲ್ಲಿಗಿನ್ನೂ ವಿದ್ಯುತ್ತು ಹೋಗಿರಲಿಲ್ಲ. ದೆಸ್ಪರೇಟ್ ಆಗಿ ಒಂದು ಉಪಾಯ ಕೈಗೊಂಡೆ. ದೂರವಾಣಿಯಲ್ಲಿಯೇ ಸರಕಾರದ ಅನುಮತಿ ಪಡೆದು 25 ಪಂಪ್‌ಸೆಟ್ಟುಗಳನ್ನು ತರಿಸಿಕೊಂಡೆ: ಅವುಗಳನ್ನು 25 ವಾಹನಗಳಲ್ಲಿ ಕೂಡ್ರಿಸಿ ಒಂದೊಂದು ಕಡೆಗೆ ಕಳಿಸಿದೆ. ಪ್ರವಾಹಗಳ ಇಲ್ಲವೆ ಬುಗ್ಗೆಗಳ ಪಕ್ಕದಲ್ಲಿದ್ದ ಗದ್ದೆಗಳಿಗೆಲ್ಲ ಅವು ನೀರುಣಿಸತೊಡಗಿದುವು. ಕ್ಷಾಮ ಪರಿಹಾರ ನಿಧಿಯಿಂದ ಅವುಗಳ ವೆಚ್ಚ ಭರಿಸಿದೆ. ಸಾವಿರಾರು ಎಕರೆಗಳಲ್ಲಿ ಭತ್ತದ ಪಯಿರು ನಷ್ಟವಾಗದೆ ಉಳಿಯಿತು. ಲೋಕೋಪಯೋಗಿ ಇಲಾಖೆಯ ಗೋದಾಮು ತೆರೆದ ನೋಡಿದಾಗ ಅಲ್ಲೊಂದು ಹಿಂದೆ ಯಾವಾಗಲೋ ತರಿಸಿದ್ದ ನೂರು ಅಶ್ವ ಶಕ್ತಿಯ ಎಣ್ಣೆ ಇಂಜಿನ್ ದೊರೆಯಿತು; ಅಲ್ಲಲ್ಲಿ ಉಪಯೋಗಿಸದೆ ಉಳಿದಿದ್ದ ಕೊಳಾಯಿಗಳು ಸಿಕ್ಕುವು. ಅವುಗಳ ಸಹಾಯದಿಂದ ಹಾರಂಗಿ ನದಿಯ ಮೇಲೆ ಒಂದೇ ವಾರದಲ್ಲಿ ಒಂದು ಯಾತ ನೀರಾವರಿ ಯೋಜನೆಯ್ನು ಕಟ್ಟಿ ನಿಲ್ಲಿ ಮುಖ್ಯಮಂತ್ರಿ ನಿಜಲಿಂಗಪ್ಪನವರನ್ನೇ ನೀರು ಬಿಡಲು ಕರೆದೆವು. ಅವರು ನೀರು ಬಿಟ್ಟು ಕುಣಿದಾಡಿದರು.

ಮುಂದೆ ಆ 25 ಪಂಪ್ ಸೆಟ್ಟುಗಳನ್ನು ಕೊಳ್ಳಬಯಸಿದವರಿಗೆ ಅವುಗಳನ್ನು ಮಾರುವ ಪ್ರಶ್ನೆ ಎದುರಾಯಿತು. ಆಗ ಪಂಪ್‌ಸೆಟ್ ಮಂಜೂರಿಯ ಪ್ರೊಸೀಜರ್– ಕಾರ್ಯವಿಧಾನ–ತುಂಬ ವಿಲಂಬದ್ದಾಗಿದ್ದಿತು. ಅದನ್ನು ಅನುಸರಿಸಿದ್ದರೆ ವರ್ಷಾವಧಿ ಅದೇ ಕೆಲಸ ಮಾಡಬೇಕಾಗುತ್ತಿದ್ದಿತು. ಮತ್ತೊಂದು ಉಪಾಯ ಹೊಳೆಯಿತು. ಕುಶಾಲ ನಗರವೊಂದರಿಂದಲೇ ಹದಿನೈದು ಅರ್ಜಿಗಳು ಬಂದಿದ್ದುವು. ಸಂಬಂಧಪಟ್ಟ ಎಲ್ಲ ಅಧಿಕಾರಿಗಳನ್ನು ಸಂಗಡ ಕರೆದುಕೊಂಡು ಕುಶಾಲನಗರಕ್ಕೆ ಹೋದೆ. ಎಲ್ಲ ಅಧಿಕಾರಿಗಳೂ ಎಲ್ಲ ಅರ್ಜಿಗಳನ್ನು ಒಂದೊಂದಾಗಿ ಪರಿಶೀಲಿಸಿದರು. ಯಾವುದಾದರೂ ನಕಲಿನ ಇಲ್ಲವೆ ಪ್ರಮಾಣ ಪತ್ರದ ಕೊರತೆಯಿದ್ದರೆ ಹಾಜರಿದ್ದ ಅರ್ಜಿದಾರರು ಅಲ್ಲಿಯೇ ಒದಗಿಸುತ್ತಿದ್ದರು. ಮೂರು ಘಂಟೆಗಳಲ್ಲಿ ಹದಿನೈದು ಅರ್ಜಿಗಳು ಮಂಜೂರಾದುವು. ಆಗ ಅಲ್ಲಿಗೆ ಆಗಮಿಸಿದ್ದ ಪ್ರಿಯಬಂಧುಗಳಾದ ದೇ. ಜವರೇಗೌಡರು, ಡಾ.ಹಾ.ಮಾ. ನಾಯಕರ ಸಮ್ಮುಖದಲ್ಲಿಯೇ ಇದು ನಡೆಯಿತು. ಅವರು ಇದನ್ನು ತುಂಬ ಮೆಚ್ಚಿದುದಲ್ಲದೆ ರಾಷ್ಟ್ರಕವಿ ಕುವೆಂಪು ಅವರಿಗೂ ಇದನ್ನು ವಿವರಿಸಿದರು. ಮುಂದೆ ಆ ರಸಋಷಿಗಳ ಭೇಟಿಗೆ ಹೋದಾಗ ಅವರು ಇದನ್ನೇ ಪ್ರಸ್ತಾಪಿಸಿ, ಆಮೇಲೆ ಆ ದಿಶೆಯಲ್ಲಿ ನಡೆದ ಪ್ರಗತಿಯ ವಿವರಗಳನ್ನು ತಿಳಿದುಕೊಂಡು

ಹಿಗ್ಗಿಹೋದರು. ಎಲ್ಲ ಜಿಲ್ಲೆಗಳಲ್ಲಿಯೂ ಇದು ನಡೆದರೆ ಭೂಮಿ ಹುಟ್ಟಿದಾಗಿನಿಂದಲೂ ಬಡತನದಲ್ಲಿಯೇ ನವೆಯುತ್ತಿರುವ ಬೇಸಾಯಗಾರರ ಭಾಗ್ಯೋದಯವಾಗುವುದೆಂದು ಹಾರೈಸಿದರು. "ಇದು ಆಗುವ ಆಸೆ ಹುಟ್ಟಿದೆ; ಪ್ರಧಾನ ಕಾರ್ಯದರ್ಶಿಗಳಾದ ಕೆ. ಬಾಲಚಂದ್ರನ್ ಅವರು ನನ್ನಿಂದ ಪೂರ್ಣ ವಿವರಗಳನ್ನು ತರಿಸಿಕೊಂಡು ಈ ಬಗ್ಗೆ ಒಂದು ಸುತ್ತೋಲೆಯನ್ನೇ ಎಲ್ಲ ಜಿಲ್ಲಾಧಿಕಾರಿಗಳಿಗೂ ಕಳಿಸಿ ಬಿಟ್ಟಿದ್ದಾರೆ," ಎಂದು ಹೇಳಿದೆ. ಅವರ ಹಿಗ್ಗು ಮೇರೆ ಮೀರಿತು. ಅಷ್ಟರಲ್ಲಿ ಆಗ ಕುಶಾಲನಗರದ ನಗರಸಭಾಧ್ಯಕ್ಷರು, ವರದಿಗಾರರೂ ಆಗಿದ್ದ ಆರ್. ಗುಂಡೂ ರಾಯರು ಕಳಿಸಿದ್ದ ವಿಶೇಷ ವರದಿ "ಪ್ರೊಫೈಲ್ ಇನ್ ಎಫಿಷಿಯೆನ್ಸಿ" ಎಂಬ ಶೀರ್ಷಿಕೆಯ ಕೆಳಗೆ "ಇಂಡಿಯನ್ ಎಕ್ಸ್‌ಪ್ರೆಸ್ಸಿ"ನ ಮುಖಪುಟದಲ್ಲಿ ಪ್ರಾಮುಖ್ಯತೆಯೊಡನೆ ಪ್ರಕಟವಾಗಿದ್ದಿತು. ಆದಾಗ ಮೇಲೆ ಎಲ್ಲ ಪತ್ರಿಕೆಗಳಲ್ಲಿಯೂ ಈ ಕಾರ್ಯ ವಿಧಾನದ ಬಗ್ಗೆ ಮೆಚ್ಚಿಗೆಯ ಮಾತುಗಳು ಪ್ರಕಟವಾದುವು. ದಕ್ಷಿಣ ಕನ್ನಡ ಜಿಲ್ಲೆಯ ಸಭೆಯೊಂದರಲ್ಲಿ ಟಿ.ಎ. ಪೈ ಅವರು ಬಹಿರಂಗವಾಗಿಯೇ ಇದನ್ನು ಪ್ರಶಂಸಿಸಿದರು. ನನಗೆ ಬಂದ ಅಭಿನಂದನೆ ಪತ್ರಗಳಿಗೆ ಲೆಕ್ಕಿವಿಲ್ಲ.

ಇದರಿಂದ ಉತ್ತೇಜಿತನಾದ ನಾನು 'ಯಾವುದೇ ಗ್ರಾಮದಿಂದ ಹತ್ತು ಅರ್ಜಿಗಳು ಬಂದರೂ ಅಲ್ಲಿಗೆ ನಾನೇ ಎಲ್ಲ ಅಧಿಕಾರಿಗಳೊಡನೆ ಬಂದು ಅಲ್ಲಿಯೇ ಅವುಗಳ ವಿಲೇವಾರಿ ಮಾಡುವೆ'ನೆಂದು ಪ್ರಕಟಿಸಿಬಿಟ್ಟೆ. ಅನೇಕ ಗ್ರಾಮಗಳವರು ಅದರ ಪ್ರಯೋಜನ ಪಡೆದರು. ಪೋಲಿಬೆಟ್ಟ, ಮಾದಲಾಪುರ, ಹುದಿಕೇರಿ ಮೊಲದಾದ ಅನೇಕ ಗ್ರಾಮಗಳ ವಿದ್ಯುದೀಕರಣವೂ, ಅದರೊಡನೆ ಜೊತೆ ಜೊತೆಯಾಗಿ ಪಂಪ್‌ಸೆಟ್ಟುಗಳ ವಿತರಣೆ, ಹಾಗೂ ಕುಡಿಯುವ ನೀರಿನ ಮತ್ತು ಸಣ್ಣ ನೀರಾವರಿಯ ಕಾರ್ಯಗಳೂ ಭರದಿಂದ ಸಾಗಿದುವು. ದಾನವೀರ ಜಿ.ಎಂ. ಮಂಜುನಾಥಯ್ಯನವರು ಒಂದು ಯಾತ ನೀರಾವರಿ ಯೋಜನೆಯನ್ನೂ, ಮಾದಲಾಪೂರ ಹಾಗೂ ಸುತ್ತಲಿನ ಬೇಸಾಯಗಾರರು ಒಂದು ಯಾತ ನೀರಾವರಿ ಯೋಜನೆಯನ್ನೂ ಬೇಡಿದರು. ಎರಡನ್ನೂ ಮಂಜೂರು ಮಾಡಿಸಿದೆ. ಈ ಕಾರ್ಯದಲ್ಲಿ ಆಗ ಸಹಕಾರ ಸಂಘಗಳ ರಿಜಿಸ್ಟ್ರಾರರಾಗಿದ್ದ ಸಿ.ಜೆ. ಜಮಖಂಡಿ ಮಠರೂ, ಸಣ್ಣ ನೀರಾವರಿಯ ಮುಖ್ಯ ಇಂಜಿನಿಯರರಾಗಿದ್ದ ಎಸ್.ಜಿ. ಬಾಳೇಕುಂದ್ರಿಯವರೂ ಬಹಳ ನೆರವಾದರು. ಆಗ ಮಂತ್ರಿಗಳಾಗಿದದ್ದ ಕೊಡಗಿನ ಕೆ. ಮಲ್ಲಪ್ಪನವರು ತುಂಬ ಬೆಂಬಲ ನೀಡಿದರು. ಮಾದಲಾಪುರದ ಯಾತ ನೀರಾವರಿ ಯೋಜನೆ ಆಗ ರಾಜ್ಯದಲ್ಲಿಯೇ ದೊಡ್ಡ ಯೋಜನೆಯೆನಿಸಿತು. ಇವುಗಳ ಜೊತೆ ಜೊತೆಗೆ ಹಳೆಯ ಕೆರೆಗಳ ಹೂಳು ತೆಗೆಸುವುದೂ, ದುರಸ್ತಿ ಮಾಡುವುದೂ, ಹೊಸ ಕೆರೆಗಳನ್ನು ಕಟ್ಟಿಸುವುದೂ ಅಷ್ಟೇ



ಭರದಿಂದ ಸಾಗಿತು. ಸಮಗ್ರ ಜಿಲ್ಲೆಯ ಸಮೀಕ್ಷೆ ಮಾಡಿಸಿ ಅದರ ಸಣ್ಣ ನೀರಾವರಿಯ ಸಾಧ್ಯತೆಗಳ ಸಮಗ್ರ ವರದಿಯನ್ನೇ ಸಿದ್ಧಪಡಿಸಿ ಸರಕಾರಕ್ಕೆ ಕಳಿಸಿದೆ. ಅಂತೆಯೇ ಸಣ್ಣ ಕೈಗಾರಿಕೆಗಳ ಸಾಧ್ಯತೆಗಳ ಬಗೆಗೂ ತಜ್ಞರಿಂದ ವರದಿ ತಯಾರಿಸಿ ಕಳಿಸಿಕೊಟ್ಟೆ.

ಆಗ ಕೊಡಗಿನಲ್ಲಿ ಭತ್ತದ ಒಂದೇ ಬೆಳೆ ಬೆಳೆಯುವ ಪರಿಪಾಠವಿದ್ದಿತು. ಅಲ್ಲಲ್ಲಿ ಬುಗ್ಗೆಗಳೂ, ಹರಿವ ಹೊನಲುಗಳೂ, ಬತ್ತದ ಕೆರೆಗಳೂ ಇರುವಾಗ ಇನ್ನೊಂದು ಬೆಳೆಯನ್ನು ಏಕೆ ಬೆಳೆಯಬಾರದು–ಎಂದು ಕೆಲವೂ ಗಣ್ಯರೊಡನೆ ಚರ್ಚಿಸಿದೆ. "ಕಾವೇರಿ ಮಾತೆ ನಮಗೆ ಒಂದೇ ಬೆಳೆಯಲ್ಲಿ ಸಮೃದ್ಧಿಯನ್ನು ನೀಡಿರುವಾಗ ಇನ್ನೊಂದು ಬೆಲೆ ಯಾಕೆ? ಇನ್ನೊಂದು ಬೆಳೆಯನ್ನು ಬೆಳೆಯುವುದೆಂದರೆ ಆ ತಾಯಿಯಲ್ಲಿಯೇ ಅವಿಶ್ವಾಸ ತೋರಿಸಿದಂತೆ," ಎಂದರು ಅವರಲ್ಲಿ ಒಬ್ಬಿದ್ದರು. ಆದರೂ ದೇಶದ ಆಹಾರದ ಅಗತ್ಯವನ್ನು ಅನುಲಕ್ಷಿಸಿ. ಆ ಸಲ ಕೊಡಗಿನಲ್ಲಿಯೂ ಕ್ಷಾಮ ಕಾರಣವಾಗಿ ಕಡಿಮೆ ಬೆಳೆ ಬಂದುದನ್ನು ಗಮನಿಸಿ ಬೇಸಿಗೆ ಬೆಳೆಯ ಆಂದೋಲನವನ್ನು ಪ್ರಾರಂಭಿಸಲು ನಿರ್ಧರಿಸಿ ಅದನ್ನು ಪ್ರಕಟಿಸಿಬಿಟ್ಟೆ. ಅಲ್ಲಿಯ ಬಿ.ಎಸ್. ಕುಶಾಲಪ್ಪನವರು ಹಿರಿಯರಲ್ಲಿ ಹಿರಿಯರು. ಹಿಂದೆ ಶಾಸನಸಭಾಧ್ಯಕ್ಷರಾಗಿದ್ದವರು. ಆ ಆಂದೋಲನದ ಯಶಸ್ಸಿನ ಬಗ್ಗೆ ಅವರಿಗೆ ಪ್ರಾಮಾಣಿಕವಾದ ಸಂದೇಹಗಳಿದ್ದುವು. ನನ್ನೊಡನೆ ಅವುಗಳ ಬಗ್ಗೆ ಚರ್ಚಿಸಿದರು. ಅವರ ಸಂದೇಹಗಳ ನಿವಾರಣೆಯಾಗಲು ಅವರೂ ಇದರಲ್ಲಿ ಪಾಲುಗೊಳ್ಳಲು ಮುಂದಾದರು. ಬೇಸಿಗೆ ಬೆಳೆ ಬೆಳೆಯ ಬಯಸಿದ ಬೇಸಾಯಗಾರರಿಗೆ ಎಲ್ಲ ಅನುಕೂಲಗಳನ್ನೂ ಮಾಡಿಕೊಡಲಾಯಿತು. ಬೆಳೆಸಾಲ, ಬೀಜ, ಗೊಬ್ಬರ, ಕ್ರಿಮಿನಾಶಕಗಳು, ಇತ್ಯಾದಿ ಎಲ್ಲವೂ ಅವರ ಮನೆ ಬಾಗಿಲಿಗೆ ಹೋಗುವ ವ್ಯವಸ್ಥೆ ಮಾಡಲಾಯಿತು. ಅದೇ ತಾನೆ ಅಧಿಕ ಇಳುವರಿಯ ತೈಚುಂಗ್ ಭತ್ತದ ಬೀಜಗಳು ಬಂದಿದ್ದುವು. ಅವುಗಳನ್ನು ಹಂಚಿದುದಲ್ಲದೆ ಅವುಗಳನ್ನು ಬಿತ್ತಿ ಬೆಳೆವ ಬಗ್ಗೆ ಸಂಪೂರ್ಣ ಮಾಹಿತಿ ನೀಡಲಾಯಿತು.

ಆ ಆಂದೋಲನಕ್ಕೆ ನಿರೀಕ್ಷೆಗೂ ಮೀರಿ ಯಶಸ್ಸು ದೊರೆಯಿತು. ಹತ್ತು ಸಾವಿರಕ್ಕೂ ಹೆಚ್ಚು ಎಕರೆಗಳಲ್ಲಿ ಮೊದಲ ಬಾರಿಗೆ ಎರಡನೆಯ ಬೆಳೆ ಎದ್ದು ನಿಂತಿದ್ದಿತು. ಕೊಡಗಿನವರಿಗೆಲ್ಲ ಬೆರಗು. ಜಿಲ್ಲೆಯ ತುಂಬ ಅದೇ ಮಾತು, ಅದರದೇ ಚರ್ಚೆ. ಮೂರು ಬ್ಲಾಕುಗಳ ಅಧ್ಯಕ್ಷರಾಗಿದ ಮಡಿಕೇರಿಯ ಪಿ.ಡಿ. ಸುಬ್ಬಯ್ಯ, ವೀರರಾಜಪೇಟೆಯ ಸಿ.ಬಿ. ಮುತ್ತಣ್ಣ, ಸೋಮವಾರಪೇಟೆಯ ಸಿ.ಕೆ. ಕಾಳಪ್ಪ, ಬಿ.ಡಿ.ಓ. ಗಳು, ಇಂಜಿನಿಯರರು, ಕೃಷಿ ಅಧಿಕಾರಿಗಳು, ಪ್ರಗತಿಪರ ರೈತರು, ಪತ್ರಿಕಾ ಪ್ರತಿನಿಧಿಗಳು–ಎಲ್ಲರನ್ನೂ ಕರೆದುಕೊಂಡು ಬೇಸಿಗೆ ಬೆಳೆದಿದ್ದ ಕ್ಷೇತ್ರಗಳ

ಯಾತ್ರೆ ಮಾಡಿಸಿದೆ. ನೋಡಿದ ಮೇಲೆಯೇ ನಂಬಿದರು ಅವರು–ಆ ಆಂದೋಲನದ ಸಾಧ್ಯತೆಗಳನ್ನು ಸಾಲದುದಕ್ಕೆ ಎರಡನೆಯ ಬೆಳೆಯ ರಾಜ್ಯಮಟ್ಟದ ಪ್ರಥಮ ಪಾರಿತೋಷಕ ಪ್ರಥಮ ಸಲ ಎರಡನೆಯ ಬೆಳೆ ಬೆಳೆದಿದ್ದ ಕೊಡಗಿನ ಬೇಸಾಯಗಾರರೊಬ್ಬರಿಗೆ ಬಂದಿತು. ಇದನ್ನು ನಂಬದ ಆಗಿನ ಅಭಿವೃದ್ಧಿ ಹಾಗೂ ಸಹಕಾರ ಇಲಾಖೆಗಳ ಕಾರ್ಯದರ್ಶಿಗಳಾಗಿದ್ದ ಆರ್. ಭರಣಯ್ಯನವರು ಮುದ್ದಾಮ್ ಕೊಡಗಿಗೆ ಬಂದು ತಾವೇ ಕ್ರಾಪ್ ಕಟಿಂಗ್ ಪ್ರಯೋಗ ಮಾಡಿ ನೋಡಿದರು. ಆಗಲೂ ಅದು ರಾಜ್ಯಕ್ಕೇ ಹೆಚ್ಚಿನ ಇಳುವರಿಯಾಗಿದ್ದಿತು! ಹೆಬ್ಬಾಳಿನ ಕೃಷಿ ವಿಶ್ವವಿದ್ಯಾಲಯದ ತಜ್ಞರೂ, ವಿದ್ಯಾರ್ಥಿಗಳೂ ವಿಶೇಷ ಬಸ್ಸಿನಲ್ಲಿ ಬಂದು ನೋಡಿಕೊಂಡು ಹೋದರು. ಈ ಪ್ರಮಾಣದಲ್ಲಿ ತೈಚುಂಗ್ ಭತ್ತ ಬೆಳೆದ ಜಿಲ್ಲೆ ಕೊಡಗು ಒಂದೇ ಆಗಿದ್ದಿತು ಆ ವರ್ಷ ಇಡಿಯರಾಜ್ಯದಲ್ಲಿ!

ನಾನು ಕೊಡಗಿನಲ್ಲಿದ್ದಾಗ ಜರುಗಿದ ಇನ್ನೊಂದು ಮಹದ್ಘಟನೆಯನ್ನು ವಿವರಿಸಿ ಕೊಡಗಿನ ಈ ಅಧ್ಯಾಯಕ್ಕೆ ಪೂರ್ಣ ವಿರಾಮ ಹಾಕಬಹುದು, ಅದು ಪಾಕಿಸ್ತಾನದ ದಾಳಿ, ಅದರ ಸೋಲು! ಪಾಕಿಸ್ತಾನದ ದುರಾಕ್ರಮಣದ ಸುದ್ದಿ ಬರುತ್ತಲೆ ಕೊಡಗಿನ ಕೆಲವು ಗಣ್ಯ ಮುಸಲ್ಮಾನ ಬಾಂಧವರು ನನ್ನ ಬಳಿಗೆ ಬಂದರು. ಅವರು ಭಯಭೀತರಾಗಿದ್ದರು. ಅವರಿಗೆ, 'ನೀವು ಭಾರತಕ್ಕೆ ನಿಷ್ಠರಾಗಿರುವವರೆಗೆ ನಿಮಗಾವ ಭಯವಿಲ್ಲ–ನಾನಿದ್ದೇನೆ," ಎಂದು ಧೈರ್ಯ ಹೇಳಿ ಕಳಿಸಿದೆ. ಅಂದೇ ಸಂಜೆ ಅವರು ಮಡಿಕೇರಿಯ ಮಸೀದಿಗೆ ನನ್ನನ್ನು ಕರೆಸಿ ನನಗೆ ಮೂರು ಸಾವಿರ ರೂಪಾಯಿಗಳ ರಕ್ಷಣಾನಿಧಿಯಿತ್ತರು, ಬೆಂಗಳೂರಿನ, ದೆಹಲಿಯ ಆಕಾಶವಾಣಿ ಕೇಂದ್ರಗಳು ಈ ಸುದ್ದಿಯನ್ನು ಮತ್ತೆ ಮತ್ತೆ ಬಿತ್ತರಿಸಿದುವು. ಆಮೇಲೆ ಪ್ರಾರಂಭವಾಯಿತು ಕೊಡಗಿನಲ್ಲಿ ರಕ್ಷಣಾನಿಧಿಯ ಸುವರ್ಣವೃಷ್ಟಿ! ಹಳ್ಳಿ ಹಳ್ಳಿಗಳಿಂದ 'ನಾ ಮುಂದೆ ನೀ ಮುಂದೆ' ಎಂದು ಕೊಡುಗೆಗಳು ಬರತೊಡಗಿದುವು. ಅವುಗಳನ್ನು ಸ್ವೀಕರಿಸಲು ಸಮಯ ಸಾಲದಾಯಿತು ನನಗೆ. ಒಮ್ಮೊಮ್ಮೆ ಮಧ್ಯರಾತ್ರಿಯವರೆಗೂ ಸಭೆಗಳು, ವಸ್ತುರೂಪದಲ್ಲಿ ಬಂದ ಕೊಡುಗೆಗಳ ಹರಾಜುಗಳು. ಹರಾಜಿನಲ್ಲಿ ಪ್ರತಿಯೊಬ್ಬರೂ ತಾವು ಹೆಚ್ಚಿಸಿದಷ್ಟು ಹಣವನ್ನು ಮಾತ್ರ ಕೊಡಬೇಕಿದ್ದಿತು. ಹೀಗಾಗಿ ಯಾರ ಮೇಲೆಯೂ ಹೆಚ್ಚಿನ ಭಾರ ಬೀಳುತ್ತಿರಲಿಲ್ಲ. ಒಂದು ಕಡೆ ಒಬ್ಬ ಬಡ ರೈತ ಒಂದು ಸುವರ್ಣ ಗೆಡ್ಡೆಯನ್ನು ಕೊಡುಗೆಯಾಗಿ ಕೊಟ್ಟ. ಅದನ್ನು ಆ ಸ್ಥಳದಲ್ಲಿಯೇ ಹರಾಜಿಗೆ ಹಾಕಲು ಹನ್ನೆರಡು ನೂರು ರೂಪಾಯಿಗಳಿಗೆ ಹೋಯಿತು. ಕೊಂಡವರು ಮತ್ತೆ ಕೊಡುಗೆಯನ್ನಾಗಿ ಕೊಟ್ಟು ಬಿಟ್ಟರದನ್ನು. ಇನ್ನೊಂದು ಸ್ಥಳದಲ್ಲ ಅದನ್ನೇ ಹರಾಜು ಮಾಡಲು ಒಂದು ಸಾವಿರ ರೂಪಾಯಿಗಳು ದೊರೆತುವು. ಅಲ್ಲಿಯೂ ಅದನ್ನು ಕೊಂಡವರು ಕೊಡುಗೆಯಾಗಿ ಕೊಟ್ಟುಬಿಟ್ಟರು ಅದನ್ನು. ಮೂರನೆಯ



ಸ್ಥಳದಲ್ಲಿ ಅದನ್ನೇ ಹರಾಜಿಗೆ ಹಾಕಲು ಮೂರು ಸಾವಿರ ರೂಪಾಯಿಗಳು ದೊರೆತುವು. ಮತ್ತೆ ಕೊಡುಗೆಯಾಗಿ ಕೈಸೇರಿತು ಆಗ ಗೆಡ್ಡೆ. ಅಷ್ಟರಲ್ಲಿ ನಾನೇ ಸುಸ್ತು ಹೊಡೆದಿದ್ದೆನಾಗಿ ಅದನ್ನು ಹರಿಜನ ವಿದ್ಯಾರ್ಥಿನಿಲಯಕ್ಕೆ ಕೊಟ್ಟು ಮಡಿಕೇರಿಗೆ ಮರಳಿದೆ. ಇನ್ನೂ ಹತ್ತು ಹಳ್ಳಿಗಳಲ್ಲಿ ಹರಾಜು ಮಾಡಿದ್ದರೂ ಹಳ್ಳಿಗೆ ಸಾವಿರ ಸಿಕ್ಕುತ್ತಿತ್ತು. ಆದರೆ ಮೈ ತಾಳಬೇಕಲ್ಲ–ಮನಸ್ಸು ತೂಳಿ ತೂಪಿರಿದರೂ!

ಇದೇ ಸುಸಮಯವೆಂದು ಸಣ್ಣ ಉಳಿತಾಯ ಯೋಜನೆಯನ್ನು ರಕ್ಷಣಾನಿಧಿ ಯೋಜನೆಗೆ ತಳುಕು ಹಾಕಿಬಿಟ್ಟೆ. ಯಾವುದರಲ್ಲಿ ಹಣ ತೊಡಗಿಸಿದರೂ ಅದು ವೈರಿ ದಮನಕ್ಕೆ ನೆರವಾಗುವುದೆಂದು ಸಾರಿದೆ. ಸಣ್ಣ ಉಳಿತಾಯ ಯೋಜನೆಗೂ ಹಣ ಹರಿದು ಬರತೊಡಗಿತು. ಅನೇಕ ಗ್ರಾಮಗಳನ್ನು 'ಬಚತ್ ಗ್ರಾಮ'ಗಳನ್ನಾಗಿ ಪರಿವರ್ತಿಸಿದೆ. ಒಂದರ ಅನಾವರಣಕ್ಕೆ ಉಪ ಅರ್ಥಮಂತ್ರಿ ಅಬ್ದುಲ್ ಗಫಾರರೂ, ಸೋದರಿ ಲೀಲಾವತಿ ಆರ್. ಪ್ರಸಾದರೂ ಬಂದಿದ್ದರು. ಕೊನೆಗೆ ಮಡಿಕೇರಿಯನ್ನೇ 'ಬಚತ್‌ನಗರ'ವನ್ನಾಗಿ ಪರಿವರ್ತಿಸಿದೆ. ಆಗ ಅದು ಭಾರತದಲ್ಲಿಯೇ ಪ್ರಪ್ರಥಮ ಬಚತ್‌ನಗರ! ಮಡಿಕೇರಿಯ ಕುಡಿಯುವ ನೀರಿನ ಯೋಜನೆಯೂ ಪೂರ್ಣಗೊಂಡಿದ್ದಿತು. ಮುಖ್ಯಮಂತ್ರಿ ನಿಜಲಿಂಗಪ್ಪನವರನ್ನು ಆಹ್ವಾನಿಸಿದೆ. ಅವರು ಕುಡಿಯುವ ನೀರಿನ ಪೂರೈಕೆಯ ಯೋಜನೆಯ ಉದ್ಘಾಟನೆ ಹಾಗೂ ಬಚತ್‌ನಗರ ಮಡಿಕೇರಿಯ ಉದ್ಘಾಟನೆಗಳೆರಡನ್ನೂ ಏಕ ಕಾಲಕ್ಕೆ ನೆರವೇರಿಸಿದರು. ರಕ್ಷಣಾನಿಧಿಗೆ ಕೊಡುಗೆಗಳು ಬರತೊಡಗಿದುವು. ಮೊದಲು ಸುವರ್ಣದಾನ. ಗಿರಿಜಾದೇವಿ ಪುರಾಣಿಕರೇ ಪ್ರಥಮವಾಗಿ ಎರಡು ಆಭರಣಗಳನ್ನು ಅರ್ಪಿಸಿದರು. ಅದು ಮುಂದುವರಿಯಿತು. ನಗದು ಕೊಡುಗೆಗಳೂ ಬಂದುವು. ಯಾರೋ ಯೋಧರೊಬ್ಬರು ಬಂದು ತಮ್ಮ ಖಡ್ಗವನ್ನೇ ಕೊಡುಗೆಯಾಗಿ ನೀಡಿದರು. ಹರಾಜಿನಲ್ಲಿ ಅದು ಹತ್ತು ಸಾವಿರ ರೂಪಾಯಿ ಗಳಿಸಿತು. ಕೊಂಡವರು ಅದನ್ನು ಮತ್ತೆ ನಿಜಲಿಂಗಪ್ಪನವರಿಗೇ ಅರ್ಪಿಸಿಬಿಟ್ಟರು! ಅವರಿಗೆ ಹಾಕಿದ ಹಾರವೂ ಐದು ಸಾವಿರ ರೂಪಾಯಿಗಳಿಗೆ ಮಾರಿತು!

## ನಿಜಲಿಂಗಪ್ಪ ನೀಡಿದರು :

ನಿಜಲಿಂಗಪ್ಪನವರ ಸಂತೋಷಕ್ಕೆ ಪಾರವೇ ಇರಲಿಲ್ಲ. ರಕ್ಷಣಾನಿಧಿ, ಸಣ್ಣ ಉಳಿತಾಯ, ಸೈನಿಕ ಭರತಿ–ಈ ಮೂರೂ ಕ್ಷೇತ್ರಗಳಲ್ಲಿ ಕೊಡಗು ರಾಜ್ಯದಲ್ಲಿ ಪ್ರಥಮ ಸ್ಥಾನ ಪಡೆದಿದ್ದಿತು. ಅದನ್ನವರು ಮುಕ್ತಕಂಠದಿಂದ ಪ್ರಶಂಸಿಸಿದರು. ಕೊಡಗಿಗೆ ಸೈನಿಕ ಶಾಲೆ ಕೊಡುವುದಾಗಿ ಸಾರಿದರು. 'ಕೊಡಗಿಗಲ್ಲದೆ ಇನ್ನೆಲ್ಲಿಗೆ ಕೊಡುವುದು?' ಎಂದು ಪ್ರಶ್ನಿಸಿ, 'ಕೊಡುಗೇ ಅದಕ್ಕೆ ಸ್ಥಳ' ಎಂದು ತಾವೇ ಉತ್ತರ ಹೇಳಿದರು.

‘ಸಿದ್ಧಯ್ಯ ಪುರಾಣಿಕರು ಕವಿಗಳು; ಎಲ್ಲಿ ಕೊಡಗಿನ ಸೃಷ್ಟಿ ಸೌಂದರ್ಯಕ್ಕೆ ಮರುಳಾಗಿ ಕವಿತೆ ಬರೆಯುತ್ತ ಕುಳಿತು ಬಿಡುವರೋ ಎಂದು ಅನುಮಾನಿಸಿದ್ದೆ” ಎಂದು ಹಾಸ್ಯ ಚಟಾಕಿ ಹಾರಿಸಿದರು. ಮುಂದುವರಿದು, “ಆದರೆ ನನ್ನ ನಿರೀಕ್ಷೆಗೂ ಮೀರಿ ಇವರು ಕಾರ್ಯ ಮಾಡಿ ತಾವು ಕವಿ ಮಾತ್ರವಲ್ಲ, ಕ್ರಿಯಾವೀರರೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಎಲ್ಲ ಜಿಲ್ಲೆಗಳಿಗೂ ಇಂಥ ಜಿಲ್ಲಾಧಿಕಾರಿಗಳು ಸಿಕ್ಕರೆ ಕನ್ನಡ ನಾಡು ಚಿನ್ನದ ನಾಡಾಗುವುದು,” ಎಂದು ಎದೆದುಂಬಿ ಮಾತನಾಡಿದರು. ಅದನ್ನೂ, ಅದನ್ನು ಹಿಂಬಾಲಿಸಿ ಬಂದ ಕಿವಿ ಗಡಚಿಕ್ಕುವಂಥ ಕರತಾಡನವನ್ನೂ ಕೇಳಿ ಮೂಕನಾದೆ ನಾನು! ಅದು ಕವಿಗಳೂ ಕಲಿಗಳಾಗಿ ಮೆರೆದಿದ್ದ ಕನ್ನಡ ನಾಡಿನ ಉಜ್ವಲ ಪರಂಪರೆಗೆ ಸಂದ ಗೌರವವೆಂದು ತಲೆಬಾಗಿದೆ ಎಲ್ಲರಿಗೆ.

ಮಾತು ಕೊಟ್ಟಂತೆ ಕೊಡಗಿಗೆ ಸೈನಿಕ ಶಾಲೆಯನ್ನು ಕೊಟ್ಟರು ನಿಜಲಿಂಗಪ್ಪನವರು. ಸರಕಾರೀ ಆಜ್ಞೆಯೂ ಬಂದಿತು. ಜ್ವರದಲ್ಲಿಯೇ ಬಂದು, ಬಿಸಿಲಿನಲ್ಲಿಯೇ ನನ್ನೊಡನೆ ತಿರುಗಿ, ಕುಶಾಲನಗರದ ಹತ್ತಿರ ಅದಕ್ಕೆ ಎರಡು ನೂರು ಎಕರೆಯ ಸರಕಾರೀ ಭೂಮಿ ಆರಿಸಿ ಹೋದರು ವಿದ್ಯಾಮಂತ್ರಿಗಳಾಗಿದ್ದ ಎಸ್.ಆರ್. ಕಂಠಿಯವರು. ಆದರೆ ನನಗೆ ಅಲ್ಲಿಂದ ಬೇಗ ವರ್ಗವಾದ ಕಾರಣ ಅದನ್ನು ನಾನಿರುವಾಗಲೇ ಪ್ರಾರಂಭಿಸಲು ಆಗಲಿಲ್ಲ. ಅದು ಯಾಕೆ ಆರಂಭವಾಗದೇ ಉಳಿಯಿತೋ ಗೊತ್ತಿಲ್ಲ. ನನಗೆ ವರ್ಗ ಬೇಕಾಗಿರಲಿಲ್ಲ. ಆದರೆ ವರ್ಗ ಮಾಡಿಸಿಕೊಳ್ಳದೆ ವಿಧಿಯಿರಲಿಲ್ಲ. ಬೆಂಗಳೂರಿನ ಬಾಡಿಗೆ ಮನೆಯೊಂದರಲ್ಲಿ ಮೂವರು ಮಕ್ಕಳೊಡನೆ ವಾಸಿಸುತ್ತ, ಅವರ ವಿದ್ಯಾಭ್ಯಾಸ ಸರಿಯಾಗಿ ಸಾಗಲೆಂದು ಒಬ್ಬಳೇ ಎಲ್ಲ ಆರಭಾರವನ್ನು ಹೊತ್ತು ಹೊತ್ತು ನೂಕುತ್ತಲಿದ್ದ ಹೆಂಡತಿಯ ಬಗ್ಗೆ ಆಗಾಗ ಕನಿಕರದ ಬುಗ್ಗೆ ಪುಟಿಯುತ್ತಲೇ ಇರುತ್ತಿತ್ತು. ನ್ಯಾಯಮೂರ್ತಿ ಮಳೀಮಠ ಕುಟುಂಬದವರ ಧೈರ್ಯವೇ ಧೈರ್ಯ ಆಗ ಆಕೆಗೆ. ವರ್ಗಕ್ಕಾಗಿ ಕೆಲವರಿಗೆ ಹೇಳಿಕೊಂಡಿದ್ದೆ. ಏನೂ ಪ್ರಯೋಜನವಾಗಿರಲಿಲ್ಲ. ಆಗ ರಾಜ್ಯ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಮಹಮ್ಮದ್ ಅಲಿ ಸಾಹೇಬರು ಮಡಿಕೇರಿಗೆ ಬಂದಾಗ ನಾನು ಅಲ್ಲಿ ಆಳು ಕುದಿಸಿದ ಕೂಳು ತಿಂದು ಜೀವಿಸಿದ್ದನ್ನು ನೋಡಿ, ನನ್ನ ಹೆಂಡತಿ ಬೆಂಗಳೂರಿನಲ್ಲಿ ಒಬ್ಬಳೇ ದೇಕುತ್ತಿದ್ದುದನ್ನು ಕೇಳಿ ಮರುಗಿದ್ದರು. ಆಗ ನನಗಲ್ಲಿ ಬೇಜಾರಾದಾಗ ಬಂದು, ನನ್ನೊಡನೆ ಆಟವಾಡಿ ನನಗಿನಿಸು ಸವಿ ನೀಡುತ್ತಿದ್ದವರೆಂದರೆ ನನ್ನ ಡಿಡಿಎ ಆಗಿದ್ದ ಮಲ್ಲಶೆಟ್ಟಿಪ್ಪನವರ ಚಿಕ್ಕ ಮಕ್ಕಳು–ಜ್ಯೋತಿ ಮತ್ತು ಮಹೇಶ. ತಿಂಗಳಿಗೊಮ್ಮೆಯಾದರೂ ನೆರೆಜಿಲ್ಲೆಯ ಜಿಲ್ಲಾಧಿಕಾರಿಯಾಗಿದ್ದ ಎಚ್.ಎಲ್. ನಾಗೇಗೌಡರ ಭೇಟಿಯಾಗುತ್ತಿದ್ದಿತು. ಅವರು ಅಂದೂ ಅಣ್ಣನಂತಿದ್ದರು ನನಗೆ; ಇಂದೂ ಅಣ್ಣನಂತಿರುವರು. ನಾವಿಬ್ಬರೂ



ಕೂಡಿ ಕೆಲವು ಗಡಿಹಳ್ಳಿಗಳ ಸಮಸ್ಯೆಗಳನ್ನು ಬಗೆಹರಿಸಿದೆವು; ಇಬ್ಬರೂ ಕೂಡಿ ಸಾಹಿತ್ಯದಿಂದ ಸರಕಾರದವರೆಗೆ ಅನೇಕ ವಿಷಯಗಳನ್ನು ಚರ್ಚಿಸಿದೆವು. ಅವರ ಅನುಭವ ದೊಡ್ಡದು. ಅದರಿಂದ ನಾನು ಪಡೆದುದೂ ದೊಡ್ಡದು.

ಯುದ್ಧ ಭಾರತದ ಪರವಾಗಿ ಮುಗಿದಿದ್ದರೂ ಅದರ ಅನಿಷ್ಟ ಪರಿಣಾಮಗಳು ಮುಗಿದಿರಲಿಲ್ಲ. ಭಾರತ ಸೇನೆಗೆ ಕನ್ನಡ ನಾಡಿನಿಂದ ಅತ್ಯಧಿಕ ಸಂಖ್ಯೆಯಲ್ಲಿ ಸೈನಿಕರನ್ನು ನೀಡುತ್ತ ಬಂದಿರುವ, ಇಬ್ಬರು ಮಹಾದಂಡನಾಯಕರನ್ನೂ, ಅನೇಕ ಉಪದಂಡನಾಯಕರನ್ನೂ, ಅಧಿಕಾರಿಗಳನ್ನೂ ನೀಡುತ್ತ ಬಂದಿರುವ ಕೊಡಗು ಆ ಯುದ್ಧದಲ್ಲಿ ಅನೇಕ ಅಧಿಕಾರಿಗಳನ್ನೂ, ವೀರಯೋಧರನ್ನೂ ಕಳೆದುಕೊಂಡಿದ್ದಿತು. ಅವರ ಕುಟುಂಬಗಳಿಗೆ ಪರಿಹಾರ ಒದಗಿಸುವ ಕಾರ್ಯಕ್ಕೆ ಅದ್ಯತೆಯನ್ನಿತ್ತು ಕಾರ್ಯಸನ್ನದ್ಧನಾದೆ. ನನ್ನನ್ನು ತಂದೆಯೋಪಾದಿಯಲ್ಲಿ ಪ್ರೀತಿಸುತ್ತಿದ್ದ ಜನರಲ್ ಕೆ.ಎಂ. ಕಾರ್ಯಪ್ಪನವರ ಬೆಂಬಲ ದೊರೆಯಿತು. ಯುದ್ಧದಲ್ಲಿ ಮೃತರಾದವರ ಕುಟುಂಬಗಳಿಗೆಲ್ಲ ಐದೈದು ಎಕರೆ ಪೈಸಾರಿ ಭೂಮಿ, ಐದೈದು ಸಾವಿರ ನಗದು ಪರಿಹಾರ ಒದಗಿಸಿದೆ. ಮಡಿಕೇರಿಯಲ್ಲಿದ್ದ ಕುಟುಂಬಗಳಿಗೆ ಭೂಮಿಗೆ ಬದಲಾಗಿ ಹೊಸ ಮನೆ ಹಾಗೂ ಐದು ಸಾವಿರ ರೂಪಾಯಿಗಳ ಪರಿಹಾರವಿತ್ತೆ. ಈ ಕಾರ್ಯದಲ್ಲಿ ಸೋದರಿ ಶ್ರೀಮತಿ ಸುಧಾರೆಡ್ಡಿಯವರಿತ್ತ ಸಹಾಯ ಸ್ಮರಣೀಯವಾದುದು; ಕೂರ್ಗ್ ಪ್ಲಾಂಟರ್ಸ್ ಅಸೋಸಿಯೇಷನ್ ಮೊದಲಾದ ಸಂಸ್ಥೆಗಳು ನೀಡಿದ ನೆರವೂ ಪ್ರಶಂಸಾರ್ಹವಾದುದು. ಗಾಯಗೊಂಡಿದ್ದವರ ಕುಟುಂಬಗಳಿಗೂ ಸೂಕ್ತ ಪರಿಹಾರವನ್ನು ನೀಡಲಾಯಿತು. ಕೆಲವರಿಗೆ ಕೆಲಸ ಕೊಡಿಸಿದುದೂ ಆಯಿತು. ಅಂತೂ ಯುದ್ಧದಿಂದ ಕಷ್ಟನಷ್ಟಗಳಿಗೊಳಗಾಗಿದ್ದ–ವರೆಲ್ಲರಿಗೂ ಒಂದಿಲ್ಲೊಂದು ರೀತಿಯಿಂದ ಪರಿಹಾರ ಒದಗಿಸಲಾಯಿತು. ಈ ಕಾರ್ಯ ಅತ್ಯುನ್ನತ ವಲಯಗಳಲ್ಲಿಯೂ ಮೆಚ್ಚಿಗೆಯನ್ನು ಪಡೆಯಿತು. ಜನರಲ್ ಕಾರ್ಯಪ್ಪನವರಂತೂ ಬಹಳ ಹಿಗ್ಗಿದರು.

ಆಗ ಜಿಲ್ಲಾಧಿಕಾರಿಯ ಕಛೇರಿಯಲ್ಲಿ ಹದಿನೆಂಟು ಸಾವಿರ ಕಡತಗಳಿದ್ದುವು. ಅವುಗಳ ವಿಲೇವಾರಿಯ ಯಜ್ಞ ನಡೆಸಿದೆ. ಅವುಗಳಲ್ಲಿ ಬಹುಪಾಲು ಕೆಳಗಿನಿಂದ ಉತ್ತರ ಬಂದಿರದ ಕಾರಣ ವರ್ಷಗಟ್ಟಳೆ ಕೊಳೆಯುತ್ತ ಬಿದ್ದಿದ್ದುವು. ತಾಲೂಕು ಆಫೀಸುಗಳಿಗೆ ಅವರಿಂದ ಉತ್ತರ ಬರಬೇಕಾಗಿದ್ದ ಪ್ರಕರಣಗಳ ಯಾದಿ ಕಳಿಸಿದೆ; ಜಿಲ್ಲಾಧಿಕಾರಿಗಳ ಕಛೇರಿಯಿಂದ ಅವರಿಗೆ ಉತ್ತರ ಹೋಗಬೇಕಾಗಿದ್ದ ಪ್ರಕರಣಗಳಯಾದಿಗಳನ್ನು ಅವರಿಂದ ತರಿಸಿಕೊಂಡೆ. ಎರಡೂ ಕಡೆಗೆ ಒಮ್ಮೆಗೇ ವಿಲೇವಾರಿಯಜ್ಞ ಪ್ರಾರಂಭವಾಯಿತು. ನಾನು ತಾಲೂಕು ಆಫೀಸುಗಳಿಗೆ ಹೋದರೆ

ಮೂರು ನಾಲ್ಕು ನೂರು ಹಳೆಯ ಕಡತಗಳೊಡನೆ ಹೋಗುತ್ತಿದ್ದೆ; ಬೆಳಗಿನಿಂದ ಸಂಜೆಯವರೆಗೆ ಕುಳಿತು ಅವುಗಳಲ್ಲಿ ಅರ್ಧದಷ್ಟನ್ನಾದರೂ ವಿಲೇವಾರಿ ಮಾಡಿ ಬರುತ್ತಿದ್ದೆ. ನನ್ನ ಆಯುಷ್ಯದಲ್ಲಿಯೇ ನಾನು ಕಂಡ ಅತಿಪುರಾತನ ಕಡತವೊಂದು ಜಿಲ್ಲಾಧಿಕಾರಿಯ ಕಾರ್ಯಾಲಯದಲ್ಲಿ ಸಿಕ್ಕಿತು. ಅದಕ್ಕೆ 43 ವರ್ಷ ವಯಸ್ಸು ಆಗ! ಅದರ ಎತ್ತರ ಎರಡು ಅಡಿ. ಅದು ಒಬ್ಬರ ಭೂಮಿ ಸ್ವಾಧೀನ ಪಡಿಸಿಕೊಂಡುದಕ್ಕಾಗಿ ಅವರಿಗೆ ನೀಡಬೇಕಾಗಿದ್ದ ಪರಿಹಾರವನ್ನು ಕುರಿತುದಾಗಿದ್ದಿತು. ಅಷ್ಟರಲ್ಲಿ ಅರ್ಜಿದಾರ, ಅವರ ಮಗ ಕಾಲವಾಗಿ ಬಿಟ್ಟಿದ್ದರು. ಅರ್ಜಿದಾರನ ಮೊಮ್ಮಗನನ್ನು ಕರೆಸಿ ಪರಿಹಾರ ಧನ ಕೊಟ್ಟೆ. ಮಂಕಾದ ಮೊಮ್ಮಗ. ಒಟ್ಟಿನಲ್ಲಿ ವಿಲೇವಾರಿ ಯಜ್ಞ ಫಲ ಕೊಟ್ಟಿತು. ಜಿಲ್ಲಾಧಿಕಾರಿಯ ಕಾರ್ಯಾಲಯದಲ್ಲಿ ಕಡತಗಳ ಸಂಖ್ಯೆ ನಾಲ್ಕು ಸಾವಿರಕ್ಕಿಳಿಯಿತು; ಕೆಳಗಣ ಕಾರ್ಯಾಲಯಗಳಲ್ಲಿಯೂ ಏಕತೃತೀಯಾಂಶಕ್ಕಿಳಿಯಿತು. ವಿಭಾಗಾಧಿಕಾರಿಗಳು ಇದನ್ನು ಮೆಚ್ಚಿ ತಮ್ಮ ಪರಿಶೀಲನಾ ವರದಿಯಲ್ಲಿ ಪ್ರಶಂಸೆಯ ಮಾತುಗಳನ್ನು ಬರೆದರು.

ಒಂದು ದಿನ ವಿಚಿತ್ರ ಕಾಗದವೊಂದು ಬಂದಿತು ನನಗೆ. ವಿರಾಜಪೇಟೆಯ ಮಲಯಾಳಂ ಸಂಘದವರಿಂದ. ಮೇಲೆ "ಮಲಯಾಳಂ ಸಂಘ" ವಿರಾಜಪೇಟೆ (ಕೇರಳ) ಎಂಬ ವಿಳಾಸವಿದ್ದಿತು. ಅದು ಭಯಸೂಚಕ ಘಂಟೆಯೆಂದು ಭಾವಿಸಿದೆ. ವೀರರಾಜಪೇಟೆಯಲ್ಲಿ ಕನ್ನಡದ ರಕ್ಷಣೆಗೆ ಗಮನವೀಯಲು ನಿರ್ಧರಿಸಿದೆ. ಅಲ್ಲಿ ಕರ್ನಾಟಕ ಸಂಘ ಸ್ಥಾಪಿಸಲು ಗಣ್ಯರಾರೂ ಮುಂದೆ ಬರಲಿಲ್ಲ. ಡಿ.ಜೆ. ಪದ್ಮನಾಭ ಎಂಬ ಯುವಕರೂ, ಅವರ ಗೆಳೆಯರೂ ಮುಂದೆ ಬಂದರು. ಅವರಿಗೇ ಉತ್ತೇಜನವನ್ನಿತ್ತೆ. ಅಲ್ಲಿ ಕರ್ನಾಟಕ ಸಂಘದ ಸ್ಥಾಪನೆಯಾಯಿತು. ಅದಕ್ಕೆ ಬೆಲೆಯುಳ್ಳ ನಿವೇಶನವನ್ನು ನೆಪ ಮಾತ್ರದ ಬೆಲೆಗೆ ಕೊಟ್ಟೆ. ಸಹಾಯ ಧನಕ್ಕಾಗಿ ಸರಕಾರಕ್ಕೆ ಸಿಫಾರಸು ಮಾಡಿದೆ. ಕೊಡಗಿನ ದಾನಿಗಳಿಗೆ ಹೇಳಿ ದೇಣಿಗೆ ಕೊಡಿಸಿದೆ. ಇಂದು ಅದು ಲಕ್ಷಾವಧಿ ರೂಪಾಯಿಗಳ ಬೆಲೆಯ ಸ್ವಂತ ಭವನವನ್ನು ಹೊಂದಿದ್ದು ಅತ್ಯಂತ ಶ್ರದ್ಧೆಯೊಡನೆ ಕನ್ನಡದ ಕಾರ್ಯಗಳನ್ನು ನಾನಾ ಮುಖವಾಗಿ ಮಾಡುತ್ತಿದ್ದೆ. ಅಲ್ಲಿದ್ದ ಒಂದೇ ಒಂದು ಸಿನಿಮಾಗೃಹ ಮಲೆಯಾಳಿ ಮಾಲೀಕರದ್ದಾಗಿದ್ದಿತು. ಕನ್ನಡ ಚಿತ್ರಗಳನ್ನೇ ತೋರಿಸುತ್ತಿರಲಿಲ್ಲ ಆ ಮಹಾಶಯ. ತಿಂಗಳಿಗೆರಡು ವಾರ ಕನ್ನಡ ಚಿತ್ರಗಳ ಪ್ರದರ್ಶನವನ್ನು ಕಡ್ಡಾಯಗೊಳಿಸಿದೆ.

ಮಾದಾಪುರ–ಸುರ್ಲಭಿ ರಸ್ತೆಯ್ನು ದುರಸ್ತಿಗೊಳಿಸಿದುದಲ್ಲದೆ ಅಲ್ಲಿ ಎತ್ತರದಲ್ಲಿ, ಎತ್ತಿನಬಂಡಿಯೂ ಹೋಗದ ಸ್ಥಳದಲ್ಲಿ, ಕಲ್ಲು ಗಾರೆಗಳನ್ನು ತಲೆಯ ಮೇಲೆ ಹೊತ್ತೊಯ್ದು ಒಂದು ಅಲ್ಪ ವೆಚ್ಚದ ಬಹು ಪ್ರಯೋಜನದ ಅಣೆಕಟ್ಟನ್ನು



ನಿರ್ಮಿಸಿದುದೂ, ಪುಷ್ಪಗಿರಿ ರಸ್ತೆಯ ಕಾರ್ಯ ಪ್ರಾರಂಭಿಸಿದುದೂ, ಸುಬ್ರಹ್ಮಣ್ಯದಿಂದ ಮಡಿಕೇರಿಗೆ ಕೂಡು–ರೈಲನ್ನು ನಿರ್ಮಿಸಲು ಯೋಜನೆ ಸಿದ್ಧಗೊಳಿಸಿದುದು, ಮಡಿಕೇರಿಯ ರಾಜಾಸೀಟಿನ ಬಳಿಯಿದ್ದ ಸೆಮಿಟೆರಿಯನ್ನು ಬ್ರಿಟಿಷ್ ಹೈಕಮೀಷನರರ ಪರವಾನಗಿ ಪಡೆದು ಮಡಿಕೇರಿಯ ಹೊರಗೆ ಸಾಗಿಸಿದುದೂ, ಅಲ್ಲಿಯೇ 'ಪ್ರಜಾಸೀಟು' ಒಂದನ್ನು ಕಟ್ಟಿಸಿದುದೂ, ಮಡಿಕೇರಿಗೆ ಆಕಾಶವಾಣಿ ಕೇಂದ್ರ ತರಲು ಪ್ರಯತ್ನಿಸಿದುದೂ, ಕುಶಾಲನಗರ–ಗೋಣಿಕೊಪ್ಪಲಗಳಲ್ಲಿ ಹಣ್ಣಿನರಸ ಮೊದಲಾದುವನ್ನು ತಯಾರಿಸುವ ಕೈಗಾರಿಕಾ ಘಟಕಗಳನ್ನು ಪ್ರಾರಂಭಿಸಿದುದೂ, ಚೆಟ್ಟಹಳ್ಳಿ ಫಾರ್ಮಿಗೆ ಹೆಚ್ಚಿನ ಭೂಮಿ–ವಿದ್ಯುಚ್ಛಕ್ತಿಗಳನ್ನು ಕೊಟ್ಟುದೂ, ಇರ್ಪು–ಇಗ್ಗುತಪ್ಪ ದೇವಾಲಯಗಳನ್ನು ಅಭಿವೃದ್ಧಿಗೊಳಿಸಿದುದೂ, ಸ್ಟೇಡಿಯಮ್ ಯೋಜನೆಗೆ ಚಾಲನೆಯಿತ್ತುದೂ, ಮಡಿಕೇರಿ, ಸೋಮಾವರಪೇಟೆಗಳಲ್ಲಿ ಗೃಹಮಂಡಳಿಗೆ ಭೂಮಿ ಕೊಟ್ಟು ಅಲ್ಲಿ ಗೃಹ ನಿರ್ಮಾಣ ಕಾರ್ಯಕ್ರಮಗಳಿಗೆ ಪ್ರೋತ್ಸಾಹವಿತ್ತುದೂ, ಡಾ. ಮರಿಗೌಡರ ಸಹಕಾರದೊಡನೆ ಜಿಲ್ಲೆಯಲ್ಲಿ ಒಂದೂವರೆ ಲಕ್ಷ ಬಾಳೆ ಮರಿಗಳನ್ನೂ ಲೆಕ್ಕವಿಲ್ಲದಷ್ಟು ತರಕಾರಿ ಬೀಜಗಳ ಪೊಟ್ಟಣಗಳನ್ನು ಪುಕ್ಕಟೆಯಾಗಿ ಹಂಚಿದುದೂ, ಮಡಿಕೇರಿಯ ಕೊಹಿನೂರ್ ಮೈದಾನದಲ್ಲಿ ಶೈತ್ಯಾಗಾರವೊಂದನ್ನು ನಿರ್ಮಿಸಿದುದೂ, ಆಹಾರಧಾನ್ಯಗಳ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಮರ್ಪಕಗೊಳಿಸಿ ಎಲ್ಲಿಯೂ 'ಕ್ಯೂ'ಗಳು ಕಾಣದಂತೆ ಮಾಡಿದುದೂ ಆ ಕಾಲದ ಇತರ ಸಾಧನೆಗಳು.

ಕೇರಳ ಹಾಗೂ ಕೊಡಗಿನ ಗಡಿ ಕಾವೇರಿ ನದಿಯೇ ಆಗಿದೆ. ರಾತ್ರಿ ಕೇರಳದವರು ಕಾವೇರಿಯನ್ನು ದಾಟಿ ಬಂದು ಕೊಡಗಿನ ಕಾಡು ಹೊಕ್ಕು ಬೀಟೆ ಮರಗಳನ್ನೂ ತೇಗಿನ ಮರಗಳನ್ನೂ ಕಡಿದು ನದಿಯಲ್ಲಿ ಹಾಕಿ ಆಚೆ ಎಳೆದೊಯ್ದು ಮಾರಿಕೊಳ್ಳುವರೆಂಬ ಸಂಗತಿ ತಿಳಿಯಿತು. ನಾನೂ, ಆಗ ಸಿ.ಎಫ್. ಆಗಿದ್ದ ಜಯರಾಮರೆಡ್ಡಿಯವರೂ, ಎಸ್.ಸಿ. ಪೆರೇರಾ ಅವರೂ ವೇಷ ಮರೆಸಿಕೊಂಡು ಕಾಣನೂರಿಗೆ ಹೋಗಿ, ಅಲ್ಲಿಂದ ಗಡಿ ಭಾಗವನ್ನು ತಲುಪಿದೆವು. ಹಾಡು ಹಗಲೇ ಮರಗಳ ಕಳ್ಳ ಸಾಗಾಣಿಕೆ ಸುವ್ಯವಸ್ಥಿತವಾಗಿ ಸಾಗಿದ್ದಿತು. ಅದಕ್ಕೆ ಅಲ್ಲಿಯ ಪೋಲೀಸರ ಪ್ರೋತ್ಸಾಹವೂ ಇತ್ತು. ಆ ಬಗ್ಗೆ ಕೂಡಲೇ ಕ್ರಮ ಕೈಕೊಂಡು, ಮಡಿಕೇರಿಗೆ ಬಂದು ಒಂದು ತ್ರಿಸೂತ್ರೀ ಯೋಜನೆಯನ್ನು ಸರಕಾರಕ್ಕೆ ಕಳಿಸಿದೆವು. ಅದರಲ್ಲಿ ಒಂದು–ಭಾಗ ಮಂಡಲದಿಂದ ಗಡಿಯವರೆಗೆ ರಸ್ತೆ–ನಾನಿರುವಾಗಲೇ ಮುಗಿಯಿತು. ಬಿ. ರಾಚಯ್ಯನವರೇ ಅದನ್ನು ಮಾಡಿಸಿಕೊಟ್ಟರು. ಇನ್ನುಳಿದುವು ಏನಾದವೋ ಗೊತ್ತಿಲ್ಲ. ಕೊಡಗಿನಲ್ಲಿ ಕಾಡು ನಾಶವಾದರೆ ಅಲ್ಲಿಂದ ಮೆಟ್ಟೂರಿನವರೆಗೆ ಲಕ್ಷ ಲಕ್ಷ ಬೇಸಾಯಗಾರರು ಬಡವರಾಗುತ್ತಾರೆ. ಜೀವನದಿ ಕಾವೇರಿಯ ಜಲಾನಯನ ಪ್ರದೇಶವಾದ ಕೊಡಗಿನಲ್ಲಿ ಕಾಡು ಸಮೃದ್ಧವಾಗಿರುವುದು ಅತ್ಯಗತ್ಯವಾದುದು.

## ಹೊಂಬೇಗೌಡರಿಂದ ದೂರವಾಣಿ

ಒಮ್ಮೆ ಏಕಾಏಕಿ ಮುಖ್ಯನ್ಯಾಯಮೂರ್ತಿಗಳಾಗಿದ್ದ ಹೊಂಬೇಗೌಡರಿಂದ ದೂರವಾಣಿ ಕರೆ ಬಂದಿತು. ಏಕೆ ಬಂದಿರಬಹುದೆಂದು ವಿವಂಚನೆಗೆ ಒಳಗಾದೆ. ಸ್ವಲ್ಪ ದಿನಗಳ ಹಿಂದೆ ಆಕ್ರಮ ವ್ಯವಹಾರದಲ್ಲಿ ಸಿಕ್ಕಿಬಿದ್ದಿದ್ದ ಅಕ್ಕಿ ಗಿರಣಿ ಒಂದನ್ನು ಬಂದು ಮಾಡಿ ಬೀಗ ಮುದ್ರೆ ಹಾಕಿ ತನಿಖೆ ನಡೆಸಿದ್ದೆ. ಆ ಸಂಬಂಧದಲ್ಲಿರಬಹುದೆ? ಇನ್ನೊಂದು ಸ್ಥಳದಲ್ಲಿ ಹರಿಜನರಿಗೆಂದು ಕೊಟ್ಟಿದ ಅರುವತ್ತು ಎಕರೆ ಭೂಮಿಯ ಮೇಲೆ ಆಕ್ರಮ ಸಾಗುವಳಿ ನಡೆಸಿದ್ದ ಕೇರಳೀಯರನ್ನು ಹೊರಹಾಕಿ ಆ ಭೂಮಿಯನ್ನು ಹರಿಜನರ ವಶಕ್ಕೆ ಕೊಟ್ಟಿದ್ದೆ. ಆ ಸಂಬಂಧದಲ್ಲಿರಬಹುದೆ? ಈ ದಂದು ಗದಲ್ಲಿದ್ದಾಗಲೇ ಹೊಂಬೇಗೌಡರ ಸ್ವರ ಕೇಳಿಸಿತು. "ಪುರಾಣಿಕರೇ, ಮಡಿಕೇರಿಯ ನ್ಯಾಯಾಲಯಗಳಿಗೆ ಒಂದು ಕೂಡು-ಕಟ್ಟಡ ಕಟ್ಟಿಸುವ ಯೋಜನೆ ಬಹಳ ದಿನಗಳಿಂದ ಬಿದ್ದಿದೆ. ಅದರ ಕಾಗದಗಳನ್ನೆಲ್ಲ ತೆಗೆದುಕೊಂಡು ಇಂದೇ ಬೆಂಗಳೂರು ತಲುಪಿ ಬಿಡಿ. ನಾಳೆ ಆ ಬಗ್ಗೆ ಚರ್ಚಿಸಿ ಅಂತಿಮ ನಿರ್ಣಯ ತೆಗೆದುಕೊಂಡು ಬಿಡೋಣ," ಎಂದು ಹೇಳಿದರು. ನಾನು, "ಸರ್, ಯುದ್ಧ ನಡೆದಾಗ ಮುಖ್ಯ ಕಾರ್ಯದರ್ಶಿಯವರ ಅನುಮತಿಯಿಲ್ಲದೆ ಯಾವ ಜಿಲ್ಲಾಧಿಕಾರಿಯೂ ಜಿಲ್ಲೆಯ ಹೊರಗೆ ಹೋಗಬಾರದು-ಎಂದು ಬಂದಿದ್ದ ಆಜ್ಞೆ ಇನ್ನೂ ಆಚರಣೆಯಲ್ಲಿದೆ. ಆದುದರಿಂದ ಅವರ ಪರವಾನಗಿ ಇಲ್ಲದೆ ಹೇಗೆ ಬರಲಿ?" ಎಂದು ಕೇಳಿದೆ. "ಅದರ ವ್ಯವಸ್ಥೆ ನಾನು ಮಾಡುತ್ತೇನೆ; ನೀವು ಸಾಮಾನು ಕಟ್ಟಲು ಆರಂಭಿಸಿರಿ. ಹಾಂ, ಮರೆತೆ. ನಾಳೆ ಇಲ್ಲಿ 'ರಾಮಾಯಣ ದರ್ಶನಂ' ಮಹಾಕಾವ್ಯ ಪ್ರವಚನದ ಮುಕ್ತಾಯ ಸಮಾರಂಭ. ನೀವು ಸಮಾರೋಪ ಭಾಷಣ ನೀಡಬೇಕು," ಎಂದರು. 'ನನಗಿದೊಂದು ದೊಡ್ಡ ಗೌರವ, ಸರ್!' ಎಂದೆ. 'ನೀವು ಆ ಬಗ್ಗೆ ಚೆನ್ನಾಗಿ ಮಾತನಾಡಬಲ್ಲಿರೆಂದೇ ನಿಮ್ಮನ್ನು ಕರೆದಿದ್ದೇವೆ. ಇದರಲ್ಲಿ ಗೌರವದ ಪ್ರಶ್ನೆಯಲ್ಲಿ ಬಂತು. 'ಕುವೆಂಪು' ಅವರು ಬದುಕಿರುವಾಗ ನಾವು ಬದುಕಿರುವುದೇ ನಮಗೆ ದೊಡ್ಡ ಗೌರವ!" ಎಂದರು. 'ನಮಗಷ್ಟೇ ಏಕೆ ಸರ್, ಕನ್ನಡಿಗರಿಗೆಲ್ಲ ಗೌರವ,' ಎಂದೆ ನಾನು. 'ನಿಜ ನುಡಿದಿರಿ. ಸಿದ್ಧರಾಗಿರಿ ಪ್ರವಾಸಕ್ಕೆ' ಎಂದು ಮಾತು ಮುಗಿಸಿದರು.

ನಾನಿನ್ನೂ ಸಿದ್ಧನಾಗುತ್ತಿದ್ದಾಗಲೇ ಮುಖ್ಯಕಾರ್ಯದರ್ಶಿಗಳವರ ಒಪ್ಪಿಗೆಯನ್ನು ಹೊತ್ತು ತಂತಿ ಬಂದಿತು. ನನಗೆ ಆಶ್ಚರ್ಯ, ಹೊಂಬೇಗೌಡರ ಕಾರ್ಯಗಳೇ ಹೀಗೆ! ಅದ್ಭುತ ವ್ಯಕ್ತಿತ್ವ ಅವರದು. ಬೆಂಗಳೂರಿಗೆ ಹೋದೆ. ಮರುದಿನ ಅರ್ಧ ಘಂಟೆಯ ಚರ್ಚೆ ಮಾಡಿ ನ್ಯಾಯಾಲಯಗಳ ಕೂಡು-ಕಟ್ಟಡಕ್ಕೆ ಒಪ್ಪಿಗೆ ನೀಡಿ ಬಿಟ್ಟರವರು. ಸಂಜೆ ಅವರು ಬದುಕಿದ್ದಾಗಲೇ ಹೊಂಬೇಗೌಡ ನಗರವೆಂದು



ಹೆಸರಾಗಿದ್ದ ವಿಲ್ಸನ್ ಗಾರ್ಡನಿನಲ್ಲಿ ಭಾರೀ ಸಭೆ-ಅವರ ನೇತೃತ್ವದಲ್ಲಿ. 'ರಾಮಾಯಣ ದರ್ಶನ'ದ ಬಗ್ಗೆ ನನಗೆ ತಿಳಿದಷ್ಟನ್ನು ಹೇಳಿದೆ. ಬಹಳ ಪ್ರೀತರಾದರು ಅವರು. ವ್ಯವಸ್ಥಾಪಕರಿಗೆ ಕೇಳಿದರು. "ಪುರಾಣಿಕರ ಭಾಷಣವನ್ನು ಧ್ವನಿ ಮುದ್ರಿಸಿಕೊಂಡಿರಾ?" ಅವರು ಇಲ್ಲವೆಂದಾಗ ರೇಗಿದರವರು; 'ಎಂಥ ಉಜ್ವಲ ಭಾಷಣವನ್ನು ಕಳೆದುಕೊಂಡು ಬಿಟ್ಟಿರಲ್ಲ!' ಎಂದು ಛೀ ಮಾಡಿದರು. 'ಹೋಗಲಿ ಬಿಡಿ ಸರ್, ತಾವು ಎಷ್ಟು ಸಲ ಕರೆದರೂ ಬಂದು ಭಾಷಣ ಮಾಡುವೆ ಈ ಮಹಾಕಾವ್ಯದ ಮೇಲೆ. ಇನ್ನೂ ಸಿದ್ಧತೆ ಮಾಡಿಕೊಂಡು ಇನ್ನೂ ಚೆನ್ನಾಗಿ ಮಾತನಾಡಿ ತೋರಿಸುವೆ," ಎಂದು ಸಮಾಧಾನ ಹೇಳಿದೆ. 'ಖಂಡಿತ ಕರೆಸುವೆ'ನೆಂದು ಹೇಳಿದರು. ಆದರೆ ಬಹುಬೇಗ ಅವರೇ ಹೋಗಿಬಿಟ್ಟರು. ಎಂಥ ದೊಡ್ಡ ನಷ್ಟ ಕರ್ನಾಟಕಕ್ಕೆ' ಕನ್ನಡಕ್ಕೆ! ಓರ್ವ ಅಪರಿಚಿತನಾಗಿ ಬಂದಿದ್ದ ನನ್ನನ್ನೂ, ನನ್ನಷ್ಟೇ ಅಪರಿಚಿತವಾಗಿ ಬಂದಿದ್ದ ನನ್ನ ತಮ್ಮ ಅನ್ನದಾನಿಯನ್ನೂ ಮೊದಲ ಭೇಟಿಯಲ್ಲಿಯೇ ಮನೆಯ ಮಕ್ಕಳನ್ನಾಗಿ ಮಾಡಿಕೊಂಡು ಬಿಟ್ಟಿದ್ದ ಮಹನೀಯರವರು. ಅವರ ನೆನಪು ಅದಾಗಲೆಲ್ಲ ನಮ್ಮ ನಿಟ್ಟುಸಿರು ಹೊರಡುತ್ತದೆ! ಅವರೀಗ ಬದುಕಿದ್ದರೆ? ನನ್ನ ತಮ್ಮ ಎಂದೋ ನ್ಯಾಯಮೂರ್ತಿಯಾಗುತ್ತಿದ್ದ; ನಾನವರ ಆಶ್ರಯದಲ್ಲಿ ನೂರ ಕನ್ನಡ ಕಾರ್ಯಗಳನ್ನು ಮಾಡುತ್ತಿದ್ದೆ!

ಕೆಲವು ದಿನ ಕಳೆಯುತ್ತಲೇ ಏಕಾಏಕಿ ಇನ್ನೊಂದು ದೂರವಾಣಿ ಕರೆ ಬಂದಿತು. ಆಗ ತಾನೆ ಮಂತ್ರಿಗಳಾಗಿದ್ದ ಮಹಮ್ಮದ ಅಲಿ ಸಾಹೇಬರ ಕರೆ ಅದು. "ಮೇರೆ ಪಾಸ ದೋ ಪೋಸ್ಟ್ಸ್ ಹೈಂ-ಟ್ರಾನ್ಸ್‌ಪೋರ್ಟ್ ಕಮಿಷನರ್ ಔರ್ ಜನರಲ್ ಮ್ಯಾನೇಜರ್ ಕೆ.ಎಸ್.ಆರ್.ಟಿ.ಸಿ. ಆಪಕೋ ಕೋನ್ಸಾ ಪಸಂದ ಹೈ, ಬೋಲೋ," ಎಂದು ಕೇಳಿದರು. ನಾನು ಅವಾಕ್ಕಾದೆ. ನಾನೇನೂ ಬಾಯಿ ಬಿಟ್ಟು ಕೇಳಿರಲಿಲ್ಲ ಅವರಿಗೆ-ನನ್ನ ವರ್ಗ ಮಾಡಿಸಿರಿ, ಇಲ್ಲವೆ ನೀವು ಮಂತ್ರಿಯಾದಾಗ ಮಾಡಿರಿ, ಎಂದು. ನಾನು ಕಷ್ಟದಲ್ಲಿದ್ದುದನ್ನು ನೆನಪಿಟ್ಟು ಮಂತ್ರಿಗಳಾಗುತ್ತಲೇ ನನ್ನನ್ನು ತಾವೇ ದೂರವಣಿಯಲ್ಲಿ ಸಂಪರ್ಕಿಸಿ ನನ್ನ ಇಷ್ಟವನ್ನು ಕೇಳಿದ ಅವರ ಬಗ್ಗೆ ಕೃತಜ್ಞತಾ ಭಾವ ಪುಟಿಯಿತು ನನ್ನ ಮನದಲ್ಲಿ. "ತಾವು ಯಾವುದನ್ನು ಕೊಟ್ಟರೂ ಕೃತಜ್ಞತೆಯಿಂದ ಸ್ವೀಕರಿಸಿ ಬರುತ್ತೇನೆ," ಎಂದು ಉತ್ತರವಿತ್ತೆ. ಮೂರನೆಯ ದಿನವೇ ಸರಕಾರದ ಆಜ್ಞೆ ಬಂದಿತು, ಸಾರಿಗೆ ಕಮೀಷನರನನ್ನಾಗಿ ನನ್ನ ವರ್ಗ ಮಾಡಿ. ನನ್ನ ಹರ್ಷ ಉಕ್ಕೇರಿತು-ಒಂದು ವರ್ಷದಿಂದ ಆಗಲಿದ್ದ ಹೆಂಡತಿ ಮಕ್ಕಳನ್ನು ಕೂಡಿಕೊಳ್ಳುವೆ-ನೆಂಬುದನ್ನು ನೆನೆದು.

ಮಡಿಕೇರಿ, ವೀರರಾಜಪೇಟೆ, ಸೋಮವಾರಪೇಟೆಗಳಲ್ಲಿ, ಅನೇಕ ಪ್ರಮುಖ ಗ್ರಾಮಗಳಲ್ಲಿ ಬೀಳ್ಕೊಡುಗೆ ಸಮಾರಂಭಗಳು ನಡೆದುವು. ಬಹಳ ಆತ್ಮೀಯತೆಯ, ಅಭಿಮಾನದ, ಆದರದ ಅಭಿಷೇಕ ಮಾಡಿ ಕಳಿಸಿಕೊಟ್ಟರು ಕೊಡಗಿನ ಮಹಾಜನರು

ನನ್ನನ್ನು. ಎಲ್ಲ ಸಮಾರಂಭಗಳ ವಿವರಗಳು ಅನಾವಶ್ಯಕ. ವೀರರಾಜಪೇಟೆಯ ಸಮಾರಂಭದಲ್ಲಿ ಹಿರಿಯರೂ, ಹಿಂದೆ ಪ್ರತ್ಯೇಕ ಕೊಡಗು ರಾಜ್ಯದ ಪ್ರತಿಪಾದಕರೂ ಆಗಿದ್ದ ಕರುಂಬಯ್ಯನವರು ಆಡಿದ ಮಾತುಗಳು ಮಾತ್ರ ಮರೆಯಲಾಗದ ಮಾತುಗಳು. "ನಮ್ಮದೇ ರಾಜ್ಯವಿದ್ದಾಗ ನಮಗೊಬ್ಬ ಮುಖ್ಯಮಂತ್ರಿಗಳೂ ಮಂತ್ರಿಗಳೂ ಮುಖ್ಯಕಾರ್ಯದರ್ಶಿಗಳೂ ಇದ್ದರು; 25 ಜನ ಶಾಸಕರೂ ಇದ್ದರು. ಅವರೆಲ್ಲರೂ ಸೇರಿ ಮಾಡಿದ ಕೆಲಸಕ್ಕಿಂತಲೂ ಹೆಚ್ಚಿನ ಕೆಲಸವನ್ನು ನಮ್ಮ ಈ ಜಿಲ್ಲಾಧಿಕಾರಿಗಳು ಒಬ್ಬರೇ ಮಾಡಿ ತೋರಿಸಿದರು," ಎಂದು ತುಂಬಿದೆದೆಯಿಂದ ಹೇಳಿದರವರು. ನನ್ನ ಕಣ್ಣುಗಳು ಹನಿಗೂಡಿದ್ದುವು. ಒಬ್ಬ ಅಧಿಕಾರಿಯಾಗಿ ಅತ್ಯುನ್ನತ ಸಂಭಾವನೆಯನ್ನು ಅಂದು ನಾನು ಪಡೆದಿದ್ದೆ. ಅಲ್ಲಿ ನನಗೆ ನೆರವಾದವರೆಲ್ಲರ ಹೆಸರುಗಳನ್ನಿಲ್ಲಿ ಬರೆದರೆ ಅದೇ ಒಂದು ಕಿರುಹೊತ್ತಗೆಯಾದೀತು. ಆದರೆ ಜನರಲ್ ಕಾರ್ಯಪ್ಪ, ರಾ.ಬಿ.ಕೆ.ಟಿ. ಉತ್ತಪ್ಪ, ರಾ.ಬ. ಚೆಂಗಪ್ಪ, ಜಿ.ಎಂ. ಮಂಜುನಾಥಯ್ಯ, ಪಾರ್ವತಮ್ಮ ಬಸಪ್ಪ, ಬಿ.ಎಸ್. ಕುಶಾಲಪ್ಪ, ಕೆ.ಎಸ್. ಅಪ್ಪಚ್ಚು, ಎ.ಎನ್. ಸೋಮಯ್ಯ, ಸಿ.ಕೆ. ಕಾಳಪ್ಪ, ಸಿ.ಬಿ. ಮುತ್ತಣ್ಣ, ಪಿ.ಡಿ. ಸುಬ್ಬಯ್ಯ, ಮೋಹಿದೀನ್, ಎ.ಪಿ. ಅಪ್ಪಣ್ಣ, ಡಾ॥ ಆಶ್ರಣ್ಣ, ಡಾ. ಚೆಂಗಪ್ಪ, ಎಸ್.ಎಸ್. ರಾಮಮೂರ್ತಿ, ಡಿ. ಶಿವಪ್ಪ, ಬಿ.ಎಸ್. ಶಂಕರ, ಆರ್. ಗುಂಡೂರಾವ್, ಯೂಸುಫ್ ಅಲಿ ಖಾನಸಾಹೇಬ್ ಮೊದಲಾದವರ ಹೆಸರುಗಳನ್ನು ಮರೆಯುವುದು ಹೇಗೆ?

## ಮತ್ತೆ ಬೆಂಗಳೂರಿನಲ್ಲಿ

ನಾನು ಸಾರಿಗೆ ಇಲಾಖೆಯ ಹೊಣೆಯನ್ನು ಹೊತ್ತಾಗ ಅಲ್ಲಿ ಕೋಲಾಹಲಮಯ ಸ್ಥಿತಿ. ಬಸ್ ಟ್ರಕ್ ಓಡಿಸುವವರು ಒಬ್ಬರ ಮೇಲೊಬ್ಬರು ರಿಟ್ ಹಾಕಿದುದರ ಪರಿಣಾಮವಾಗಿ ಹೈ ಕೋರ್ಟಿನಲ್ಲಿ ರಿಟ್ ಅರ್ಜಿಗಳ ಸುರಿಮಳೆ; ವಿಧಾನಸೌಧದಲ್ಲಿ ಅವರ ಓಡಾಟವೇ ಓಡಾಟ! ಆ ಇಲಾಖೆಯಲ್ಲಿ ಲಂಚದ ಹಾವಳಿ ಮೇರೆ ಮೀರಿದೆಯೆಂಬ ಹುಯಿಲು. ಅಂಥಲ್ಲಿ ಹೇಗೆ ಪಾರಾಗುವುದೆಂದು ಮೊದ ಮೊದಲು ಹೌಹಾರಿದೆ. ಆದರೆ ಕೆಲವು ದಿನಗಳಲ್ಲಿಯೇ ಅಪರೇಟರರಲ್ಲಿ ನಾನೊಬ್ಬ ನ್ಯಾಯ ನಿಷ್ಠುರ ಮನುಷ್ಯನೆಂಬ ಭರವಸೆ ಹುಟ್ಟಿತು; 'ಎಸ್.ಟಿ.ಎ.'ದ ನಿರ್ಣಯಗಳ ಬಗ್ಗೆ ಗೌರವ ಬೆಳೆಯಿತು; ಇಲಾಖೆಯಲ್ಲೀಗ ಬೇಗ ಬೇಗ ಕಾಗದಗಳ ವಿಲೇವಾರಿಯಾಗುತ್ತಿದೆಯೆಂದು ಅವರಿಗೆನಿಸತೊಡಗಿತು.

ವಿಜಾಪುರಕ್ಕೆ ಹೋದೆ. ಸ್ವತಃ ನಾಡಗೌಡರೂ ಉಪಸ್ಥಿತರಿದ್ದ ಅಪರೇಟರರ ಸಭೆಯಲ್ಲಿ ಅವರ ದೂರುಗಳನ್ನು ಕೇಳಲಾಯಿತು. "ನಿಮ್ಮ ಜಿಲ್ಲೆಗೆ ಎಷ್ಟು ಪರ್ಮಿಟ್ಟುಗಳನ್ನು ಕೊಟ್ಟರೆ ನೀವು ಹೈಕೋರ್ಟಿಗೆ ಶರಣು ಹೊಡೆಯುವಿರಿ?"



ಎಂದು ಕೇಳಿದೆ. ಅವರು ತಮ್ಮಲ್ಲಿ ಲೆಕ್ಕ ಮಾಡಿಕೊಂಡು 75 ಬೇಕು–ಎಂದು ಹೇಳಿದರು. 'ಚಿಂತಿಸಬೇಡಿರಿ, ಒಂದು ನೂರರವರೆಗೂ ಕೊಡುವೆನು; ನಿಮ್ಮ ಅರ್ಜಿಗಳನ್ನೆಲ್ಲ ವಾಪಸ್ಸು ಪಡೆದುಕೊಂಡು ಬಿಡಿರಿ,' ಎಂದು ಹೇಳಿದೆ. ಹಿಗ್ಗಿ ಹೋದರವರು. ರಿಟ್ ಅರ್ಜಿಗಳನ್ನು ವಾಪಸು ಪಡೆದುಕೊಂಡರು. ಇದೇ ರೀತಿ ಧಾರವಾಡ ಬೆಳಗಾವಿ ಜಿಲ್ಲೆಗಳ ಆಪರೇಟರರನ್ನು ಕೇಳಿ, ಅವರು ಕೇಳಿದುದಕ್ಕಿಂತಲೂ ಹೆಚ್ಚು ಪರ್ಮಿಟ್ಟುಗಳ ಆಶ್ವಾಸನ ನೀಡಿ ಬೆಂಗಳೂರಿಗೆ ಹಿಂದಿರುಗಿದೆ. 19 ಜಿಲ್ಲೆಗಳವರನ್ನೂ ಕೇಳಿ ಒಟ್ಟು ಪರ್ಮಿಟ್ಟುಗಳ ಲೆಕ್ಕ ಮಾಡಿದೆ. ಮಂತ್ರಿಗಳೊಡನೆ ಮದ್ರಾಸ್, ಹೈದರಾಬಾದು, ಮುಂಬೈ, ಗೋವಾಗಳಿಗೆ ಹೋಗಿ ಸಾಕಷ್ಟು ಸಂಖ್ಯೆಯಲ್ಲಿ ಅಂತರ–ರಾಜ್ಯ ಪರ್ಮಿಟ್ಟುಗಳನ್ನು ತಂದೆ. ಕೇಳಿದವರಿಗೆಲ್ಲ ಕೊಟ್ಟು ಬಿಟ್ಟೆ. ಲಾರಿ ಪರ್ಮಿಟ್ಟುಗಳ ಜಗಳಗಳೆಲ್ಲ ಶಾಂತವಾದುವು.

ಟಿ.ಪಿ.ಜಿ ಅಪೀಲುಗಳು ರಾಶಿ ರಾಶಿಯಾಗಿ ಬಿದ್ದಿದ್ದುವು. ಅಪೀಲುದಾರರೊಡನೆ, ಅವರ ವಕೀಲರೊಡನೆ ಚರ್ಚಿಸಿ ರಾಜಿ ಸೂತ್ರವೊಂದನ್ನು ರೂಪಿಸಿದೆ. ಯಾವ ತೊಂದರೆಯಿಲ್ಲದೆಯೇ ಸಾವಿರಾರು ಅಪೀಲುಗಳ ವಿಲೇವಾರಿಯಾಯಿತು. ಸರಕಾರಕ್ಕೂ ದಶ ದಶಲಕ್ಷ ರೂಪಾಯಿಗಳ ಆದಾಯವಾಯಿತು; ಅಪರೇಟರರೂ ಚೇತರಿಸಿಕೊಂಡು ವಾಹನಗಳನ್ನು ಓಡಿಸುವಂತಾಯಿತು. ಹೀಗಾಗಿ ವಾಹನಗಳ ಮೇಲಿನ ಕರಗಳನ್ನು ಹೆಚ್ಚಿಸದೇ ಇಲಾಖೆಯ ಹೆಚ್ಚು ಹಣವನ್ನು ಸರಕಾರಕ್ಕೆ ನೀಡುವಂತಾಯಿತು. ವರ್ಷಕ್ಕೆ ಒಂದು ಕೋಟಿಯಂತೆ ಸರಕಾರಕ್ಕೆ ಆದಾಯ ಹೆಚ್ಚ ತೊಡಗಿತು. ಜೊತೆಗೆ, ಹೆಚ್ಚು ಪ್ರಯಾಣಿಕರನ್ನು ಕೂಡ್ರಿಸಿಕೊಳ್ಳುತ್ತಿದ್ದ ಬಸ್ಸುಗಳ ಮೇಲೆ, ಕಳ್ಳತನದಿಂದ ಟ್ಯಾಕ್ಸಿಗಳನ್ನಾಗಿ ಓಡಿಸುತ್ತಿದ್ದ ಖಾಸಗಿ ಕಾರುಗಳ ಒಡೆಯರ ಮೇಲೆ, ವೇ ಬ್ರಿಜ್ಜುಗಳ ಮೇಲೆ ಪದೇ ಪದೇ ದಾಳಿ ನಡೆಸಿ ಆದಾಯ ಸೋರಿಕೆಗಳನ್ನು ಸಾಕಷ್ಟು ತಡೆಯಲಾಯಿತು. ಇದರಿಂದಲೂ ಕರ ಹೆಚ್ಚಿಸದೆ ಆದಾಯ ಹೆಚ್ಚಿಸುವುದು ಸಾಧ್ಯವಾಯಿತು. ನಾನು ಅಲ್ಲಿದ್ದ ಮೂರುವರೆ ವರ್ಷಗಳೂ ಈ ಹೆಚ್ಚುಗೆ ನಡೆದು ನಾನು ಆ ಇಲಾಖೆಯನ್ನು ವಹಿಸಿಕೊಂಡಾಗ ಇದ್ದ ಏಳೂವರೆ ಕೋಟಿ ರೂಪಾಯಿಗಳ ಆದಾಯ ನಾನು ಆ ಇಲಾಖೆ ಬಿಟ್ಟಾಗ ಹನ್ನೊಂದು ಕೋಟಿಗಳಿಗೂ ಮೀರಿದ್ದಿತು. ಪಂಚರಾಜ್ಯ ಪರ್ಮಿಟ್ಟುಗಳ ಪದ್ಧತಿಯೂ ಅನುಷ್ಠಾನಕ್ಕೆ ಬಂದು ಆದಾಯ ಇನ್ನೂ ಹೆಚ್ಚಾಯಿತು.

ಪ್ರಯಾಣಿಕರ ಸೌಕರ್ಯಗಳನ್ನು ಹೆಚ್ಚಿಸಲೆಂದು ಹಲವು ಕ್ರಮಗಳನ್ನು ಕೈಗೊಳ್ಳಲಾಯಿತು. ಆಯಾ ರಾಜ್ಯಗಳ ಬಸ್ಸುಗಳನ್ನು ಆಯಾ ರಾಜ್ಯದ ಗಡಿಗಳಲ್ಲಿಯೇ ನಿಲ್ಲಿಸಬೇಕೆಂಬ ನಿಯಮವನ್ನು ತಪ್ಪಿಸಿ ಒಂದು ರಾಜ್ಯದ ಬಸ್ಸು ಇನ್ನೊಂದು

ರಾಜ್ಯದ ಮೊದಲನೆಯ ನಿಲ್ದಾಣದವರೆಗೆ ಹೋಗಬಹುದೆಂಬ ನಿಯಮವನ್ನು ನೆರೆ ರಾಜ್ಯಗಳೊಡನೆ ಸಂಧಾನ ನಡೆಸಿ ಕಾರ್ಯಾನ್ವಿಗೊಳಿಸಲಾಯಿತು. ಕ್ಷೇತ್ರದಿಂದ ಕ್ಷೇತ್ರಕ್ಕೆ, ಒಂದು ಪ್ರವಾಸೀ ಕೇಂದ್ರದಿಂದ ಇನ್ನೊಂದು ಪ್ರವಾಸೀ ಕೇಂದ್ರಕ್ಕೆ, ಮುಂಬೈಯಿಂದ ಮಂಗಳೂರಿಗೆ, ಹುಬ್ಬಳ್ಳಿಯಿಂದ ಮಂತ್ರಾಲಯ ಎಲ್ಲಮ್ಮನ ಬೆಟ್ಟಗಳಿಗೆ, ಶ್ರೀಶೈಲಕ್ಕೆ ಹೀಗೆ ಅನೇಕ ಪ್ರಯಾಣಿಕ ಸೌಕರ್ಯ ಹೆಚ್ಚಿಸುವ ಹೊಸ ಕ್ರಮಗಳನ್ನು ಕೃತಿಗಿಳಿಸಲಾಯಿತು. ವಿಲಾಸೀ ಬಸ್ಸುಗಳ ವ್ಯವಸ್ಥೆಯಂತೂ ಬಹು ಜನರ ಮೆಚ್ಚುಗೆಯನ್ನು ಗಳಿಸಿತು.

ಒಮ್ಮೆ ನಾನು ವಿಮಾನ ನಿಲ್ದಾಣಕ್ಕೆ ಹೋಗಿದ್ದೆ. ಮುಖ್ಯಮಂತ್ರಿಗಳಾಗಿದ್ದ ವೀರೇಂದ್ರ ಪಾಟೀಲರು ಬಂದರು. 'ಕನ್ನಡಕ್ಕಾಗಿ ಏನಾದರೂ ಮಾಡಿರಿ,' ಎಂದು ಕೇಳಿಕೊಂಡೆ. 'ಏನು ಮಾಡಬೇಕು; ಇಲ್ಲಿಯೇ ಬರೆದು ಕೊಡಿರಿ,' ಎಂದು ಹೇಳಿದರು. ಅಲ್ಲಿಯೇ ಬರೆದು ಕೊಟ್ಟೆ. ಅಲ್ಲಿಯೇ ಅಂಗೀಕೃತ ನೀಡಿದರು ಅವರು. ಅದರ ಪ್ರಕಾರ ಮಾಸ್ತಿಯವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದು ಅಸ್ತಿತ್ವಕ್ಕೆ ಬಂದಿತು. ನನ್ನನ್ನು ಅದರ ಕಾರ್ಯದರ್ಶಿಯನ್ನಾಗಿ ಮಾಡಿದ್ದರು. ಕನ್ನಡವನ್ನು ಎಲ್ಲ ಹಂತಗಳಲ್ಲಿಯೂ ಆಡಳಿತದ ಭಾಷೆಯನ್ನಾಗಿ ಮಾಡಲು ಪೂರ್ವ ಸಿದ್ಧತೆಯೆಂದು ಕನ್ನಡದಲ್ಲಿ ಕಾರ್ಯಾಲಯ ಕೈಪಿಡಿಯೊಂದನ್ನು ರಚಿಸುವುದು ಸಮಿತಿಗೆ ಒಪ್ಪಿಸಿದ್ದ ಕಾರ್ಯವಾಗಿದ್ದಿತು. ಅದನ್ನು ನಿಗದಿ ಪಡಿಸಿದ್ದ ಅವಧಿಗೆ ಮೊದಲೇ ಮುಗಿಸಿ ಕೊಟ್ಟಿತು ಸಮಿತಿ. ಮುಖ್ಯಮಂತ್ರಿಗಳದನ್ನು ಮೆಚ್ಚಿ ಮಾತನಾಡಿದರು. ಅದು ಅಚ್ಚಾಗಿ ಎಲ್ಲ ಕಾರ್ಯಾಲಯಗಳಿಗೆ ಹೋಯಿತು. ತಾಲೂಕು ಮಟ್ಟದಲ್ಲಿ ಕನ್ನಡ ಆಡಳಿತ ಭಾಷೆಯಾಯಿತು. ಮುಂದೆ ಆಗ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಜಿ. ನಾರಾಯಣರ ಪ್ರಯತ್ನದಿಂದ ಇನ್ನುಳಿದ ಹಂತಗಳಲ್ಲಿ ಕನ್ನಡವನ್ನು ಆಡಳಿತದ ಭಾಷೆಯನ್ನಾಗಿ ಮಾಡಲು ಕೈಕೊಳ್ಳಬೇಕಾದ ಎಲ್ಲ ಕ್ರಮಗಳ ಬಗ್ಗೆ ಸಲಹೆ ನೀಡಲು ಇನ್ನೊಂದು ಸಮಿತಿ ನಿವೃತ್ತ ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ನಾರಾಯಣ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ರಚಿತವಾಯಿತು. ಆರಂಭದಲ್ಲಿ ನಾನೇ ಅದರ ಕಾರ್ಯದರ್ಶಿಯಾಗಿದ್ದೆ. ಮುಂದೆ ನನಗೆ ಬೆಳಗಾವಿಗೆ ವರ್ಗವಾಗಲು ಅಣ್ಣ ಎಚ್.ಎಲ್. ನಾಗೇಗೌಡರು ಅದರ ಕಾರ್ಯದರ್ಶಿಯಾದರು. ನಾನು ಸದಸ್ಯನಾಗಿ ಮುಂದುವರಿದೆ. ಸಮಿತಿ ಮದ್ರಾಸಿಗೆ ಹೋಗಿ ಬಂದು, ಕೆಲವು ಜಿಲ್ಲೆಗಳಿಗೆ ಭೇಟಿ ನೀಡಿ ಸಲ್ಲಿಸಿರುವ ವರದಿ ಅತ್ಯಂತ ಉಪಯುಕ್ತವಾದುದು. ಅದರಲ್ಲಿಲ್ಲದ್ದ ವಿಷಯವೇ ಇಲ್ಲ–ಆಡಳಿತ ಭಾಷೆ ಕನ್ನಡವಾಗುವುದಕ್ಕೆ ಸಂಬಂಧಿಸಿದಂತೆ.

ಗಾಲಿಬ್ ಶತಮಾನೋತ್ಸವದ ಆಚರಣೆಯಲ್ಲಿ ಪ್ರಮುಖ ಪಾತ್ರವಹಿಸಿದೆ. ಗಾಂಧೀ ಶತಮಾನೋತ್ಸವ ಬಂದಿತು. ಅದಕ್ಕಾಗಿ ಗಡಿನಾಡಿನ ಗಾಂಧಿಯೆಂದು



ಹೆಸರಾಗಿದ್ದ ಖಾನ್ ಅಬ್ದುಲ್ ಗಫಾರಖಾನಸಾಹೇಬರು ಬಂದರು. ಅವರು ಕರ್ನಾಟಕ ರಾಜ್ಯದ ಪ್ರವಾಸವನ್ನೂ ಕೈಕೊಂಡರು. ಬೆಂಗಳೂರಿನಲ್ಲಿ ಬೃಹತ್ ಸಭೆಯನ್ನು ಉದ್ದೇಶಿಸಿ ಅವರು ಉರ್ದೂ ಭಾಷೆಯಲ್ಲಿ ಮಾತನಾಡಿದರು. ಅದರ ಕನ್ನಡೀಕರಣದ ಕಾರ್ಯವನ್ನು ಮುಖ್ಯಮಂತ್ರಿಗಳವರು ನನಗೆ ವಹಿಸಿದ್ದರು. ಅದಾಗಲೇ 'ಸರಹದ್‌ಗಾಂಧೀ' ಎಂಬ ಸ್ಮರಣ ಸಂಚಿಕೆಯನ್ನು ರಾಜ್ಯ ಸಮಿತಿಗಾಗಿ ಸಂಪಾದಿಸಿ ಪ್ರಕಟಿಸಿದ್ದೆ; ಅರ್ಧ ಲಕ್ಷಕ್ಕೂ ಮೀರಿ ನಿಧಿ ಸಂಗ್ರಹಿಸಿಕೊಟ್ಟಿದ್ದೆ; ಆಗ ಈ ಅನುವಾದ ಕಾರ್ಯ ನನ್ನ ಪಾಲಿಗೆ ಬರಲು ಹಿಗ್ಗಿದೆ.

ಬೆಂಗಳೂರಿನ ಸಭೆಯಲ್ಲಿ ನನ್ನ ಅನುವಾದ ಕಾರ್ಯ ಸರ್ವ ಶ್ಲಾಘಿತವಾಗಲು ಮೈಸೂರಿನವರೆಗೂ ಅವರೊಡನಿದ್ದು ಅವರ ಉರ್ದೂ ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸಿ ಹೇಳುವ: ಹೊಣೆ ನನ್ನ ಮೇಲೆ ಬಿದ್ದಿತು. ರಾಮನಗರ, ಮದ್ದೂರು, ಮಂಡ್ಯ, ಮೈಸೂರು–ಎಲ್ಲೆಡೆಗಳಲ್ಲಿಯೂ ಕಿಕ್ಕಿರಿದ ಜನಸ್ತೋಮಗಳು. ಎಲ್ಲೆಡೆಗಳಲ್ಲಿಯೂ ಅವರು ಒತ್ತಿ ಹೇಳಿದುದು ಇನ್ನೂ ಉಪೇಕ್ಷಿತರಾಗಿ ಉಳಿದಿದ್ದ ಬಡವರ ಉದ್ಧಾರದ ಅಗತ್ಯವನ್ನು. ಮೈಸೂರಿನಲ್ಲಿ ಮಾತ್ರ ನೆರೆದಿದ್ದ ವಿರಾಟ್ ಸಭೆಯನ್ನು ನೋಡಿ ಉತ್ಸಾಹಿತರಾಗಿ ಬಹಳ ಹೊತ್ತು ಮಾತನಾಡಿದರು. ನನ್ನ ಅನುವಾದವನ್ನು ಮೆಚ್ಚಿತು ಆ ಜನಸಾಗರ. ಒಮ್ಮೆ ಸರಹದ್ ಗಾಂಧಿಯವರು ಐದು ಮಿನಿಟುಗಳವರೆಗೆ ನಿಲ್ಲಿಸಲೇ ಇಲ್ಲ ತಮ್ಮ ಮಾತನ್ನು. ಅದನ್ನೆಲ್ಲ ಅದೇ ಕ್ರಮದಲ್ಲಿ ಒಂದು ಮಾತೂ ಉಳಿಯದಂತೆ ಕನ್ನಡೀರಿಸಿ ಹೇಳಿದೆ ನಾನು. ಸಭಿಕರ ಹರ್ಷ ಹೆಚ್ಚಿ ಕೈ ತಟ್ಟಿದರು. ನಾನೂ ಹಿಗ್ಗಿದೆ. ಆದರೆ ನನ್ನ ಹಿಗ್ಗು ಕುಗ್ಗಾಗಲು ಬಹಳ ಹೊತ್ತು ಹಿಡಿಯಲಿಲ್ಲ. ಮಾತಿನ ಭರದಲ್ಲಿ "ಪಾಕಿಸ್ತಾನದಲ್ಲಿರುವ ಹಿಂದುಗಳು ಹಿಂದುಸ್ತಾನದಲ್ಲಿರುವ ಮುಸಲ್ಮಾನರಿಗಿಂತ ಹೆಚ್ಚು ಸುಖಿಗಳಾಗಿದ್ದಾರೆ," ಎಂದು ಹೇಳಿ ಬಿಟ್ಟರವರು. ನಾನದರ ಕನ್ನಡ ಅನುವಾದವನ್ನು ಮಾಡದೆ ಆಗಬಹುದಾಗಿದ್ದ ಅನರ್ಥವನ್ನು ತಪ್ಪಿಸಿದೆನು. ಆದರೆ ಅವರ ಬಗ್ಗೆ ಇದ್ದ ನನ್ನ ಅಸೀಮ ಗೌರವ ವಿಘಾತಿಗೆ ಒಳಗಾಗಿದ್ದಿತು. ಅಂದು ರಾತ್ರಿ ಸ್ಥಳೀಯ ಮುಸ್ಲಿಂ ಪ್ರತಿನಿಧಿಗಳಿಗೆ ಅವರು ಮಾಡಿದ "ದಿವ್ಯೋಪದೇಶ"ವನ್ನು ಕೇಳಿದ ಮೇಲಂತೂ ನನ್ನ ಮೈ ನಡುಗಿತು!

ಬಸವಣ್ಣನವರ ಅಷ್ಟ ಶತಮಾನೋತ್ಸವವನ್ನು ಆಚರಿಸಲೆಂದು ಆಗ ಆಹಾರ ಹಾಗೂ ಅರ್ಥಮಂತ್ರಿಗಳಾಗಿದ್ದ ಶ್ರೀ ಬಿ.ಡಿ. ಜತ್ತಿಯವರು ನಾಡಿನ ಪಂಡಿತರ ಹಾಗೂ ಪ್ರಮುಖರೊಡನೆ ಸಮಾಲೋಚಿಸಿ 'ಬಸವ ಸಮಿತಿ'ಯನ್ನು ರಚಿಸಿದ್ದರು. ನಾನು ಅದರ ಸಂಸ್ಥಾಪಕ ಸದಸ್ಯರಲ್ಲೊಬ್ಬ. ತಮ್ಮ ಅನ್ನದಾನಿಯಂತೂ ಅಂದಿನಿಂದ ಇಂದಿನವರೆಗೆ ಪ್ರಧಾನ ಕಾರ್ಯದರ್ಶಿ, ಸರಕಾರವೂ ಅಷ್ಟ ಶತಮಾನೋತ್ಸವದ ಆಚರಣೆಗಾಗಿ ಸಮಿತಿಯೊಂದನ್ನು ನಿಯಮಿಸಿತು. ಮುಖ್ಯಮಂತ್ರಿ ನಿಜಲಿಂಗಪ್ಪನವರೇ

ಅಧ್ಯಕ್ಷರು, ಶಿವಾಧೀನರಾದ ಎಸ್.ಆರ್. ಕಂಠಿಯವರೇ ಕಾರ್ಯಾಧ್ಯಕ್ಷರು ಬಾಗೇವಾಡಿ, ಕೂಡಲಸಂಗಮಗಳಲ್ಲಿ ಸಮಾರಂಭಗಳು ನಡೆದು ಬಸವ ಕಲ್ಯಾಣದಲ್ಲಿ ಕೊನೆಯ ಸಮಾರಂಭ ಜರುಗಬೇಕಿತ್ತು. ಅದೇ ಉಪರಾಷ್ಟ್ರಪತಿಗಳಾಗಿದ್ದ ವ್ಹಿ.ವ್ಹಿ. ಗಿರಿಯವರು ಉದ್ಘಾಟಕರಾಗಿ ಬರುವವರಿದ್ದರು. ನಾನೂ, ಕೆ. ಬಸವಣ್ಣನವರೂ ಎರಡು ದಿನ ಮೊದಲೇ ಹೋಗಿ ಸರ್ವಸಿದ್ಧತೆಗಳು ಮುಗಿದಿರುವುದನ್ನು ಮನವರಿಕೆ ಮಾಡಿಕೊಳ್ಳಬೇಕೆಂದು ಆಜ್ಞೆಯಾಯಿತು. ಇಬ್ಬರೂ ಕಲ್ಯಾಣಕ್ಕೆ ಹೋದೆವು. ಅಲ್ಲಿಯ ಸ್ಥಿತಿಯನ್ನು ನೋಡಿ ಹೌಹಾರಿದೆವು. ಸಭಾ ಮಂಟಪ ಸಿದ್ಧವಾಗಿಲ್ಲ; ಬರಲಿದ್ದ ಗಣ್ಯರ ವಸತಿ ಊಟಗಳ ವ್ಯವಸ್ಥೆಯಾಗಿಲ್ಲ; ಸಾವಿರ ಸಾವಿರ ಸಂಖ್ಯೆಯಲ್ಲಿ ಬರಲಿದ್ದ ಸಭಿಕರ ಊಟದ ವಿಚಾರವನ್ನೇ ಮಾಡಿರಲಿಲ್ಲ. ನಾಲ್ಕಾರು ಖಾನಾವಳಿಗಳು ಬಂದಿದ್ದುವು. ಅವರಿಗೇ ಇಂತಿಷ್ಟು ದರಕ್ಕೆ ಬಂದವರಿಗೆ ಊಟ ಒದಗಿಸಬೇಕೆಂದು ಹೇಳಿಬಿಟ್ಟಿದ್ದರಂತೆ ಸ್ವಾಗತ ಸಮಿತಿಯವರು!

ನಾವಿಬ್ಬರೂ ತೋಳೇರಿಸಿ, ನಡಕಟ್ಟಿ ನಿಂತು ಬಿಟ್ಟೆವು. ಹಗಲೂ ರಾತ್ರಿ ಸಭಾ ಮಂಟಪದ ನಿರ್ಮಾಣ ಕಾರ್ಯ ನಡೆಯಿತು. ಕಲಬುರಗಿಯಲ್ಲಿದ್ದ ಧರ್ಮರಾವ್ ಅಫಜಲಪುರ ಅವರಿಗೆ ದೂರವಾಣಿಯಲ್ಲಿ ಒಂದುನೂರು ಮೂಟೆ ಅಕ್ಕಿ, ಅದಕ್ಕೆ ಸಾಕಾಗುವಷ್ಟು ಬೇಳೆ ಮೊಲಾದುವನ್ನು ದಾನಿಗಳಿಂದ ಸಂಗ್ರಹಿಸಿ ಕಳಿಸಲು ಕೋರಿದೆವು. ಅವರು ಮಿಂಚಿನ ವೇಗದಲ್ಲಿ ಸಂಗ್ರಹಿಸಿ ಕಳಿಸಿದರು. ಅಡಿಗೆಯವರನ್ನೂ ಕಳಿಸಿದರು. ದಾಸೋಹ ಮಂಟಪವನ್ನೂ ಕಟ್ಟಿ ನಿಲ್ಲಿಸಿದೆವು. ಎರಡು ಹಗಲು ಎರಡು ರಾತ್ರಿ ನಾವಿಬ್ಬರೂ ನಿಂತಲ್ಲಿಯೇ ಉಂಡು, ನಿದ್ರೆಯಿಲ್ಲದೆ ದುಡಿದಿದ್ದೆವು. ಮುನ್ನಿನ ಸಂಜೆ ಪ್ರತಿಷ್ಠಿತರನ್ನೆಲ್ಲ ಸ್ವಾಗತಿಸಿ, ಅವರವರ ಬಿಡಾರಗಳಲ್ಲಿ ಇಳಿಸಿ, ಬೆಳಗಿನ ಜಾವದವರೆಗೆ ಇನ್ನೊಮ್ಮೆ ಎಲ್ಲೆಡೆಗಳಲ್ಲಿ ಸುತ್ತಾಡಿ, ಮಂಟಪಾಲಂಕಾರ ಮೊದಲಾದುವನ್ನೂ, ಧ್ವಜಸ್ತಂಭ ಸ್ಥಾಪನೆ ಮೊದಲಾದುವನ್ನೂ ಪೂರ್ಣಗೊಳಿಸಿ ಒಂದು ಘಂಟೆಯಾದರೂ ನಿದ್ರಿಸೋಣವೆಂದು ಹೋಗಿ ನೋಡುತ್ತೇವೆ–ನಮ್ಮಿಬ್ಬರ ಹಾಸಿಗೆಗಳನ್ನೂ ರಾಜ್ಯ ಸಮಿತಿಯ ಕಾರ್ಯದರ್ಶಿ ಉಪ ಕಾರ್ಯದರ್ಶಿಗಳು ಆಕ್ರಮವಾಗಿ ಆಕ್ರಮಿಸಿಕೊಂಡು ಮಲಗಿ ಗೊರಕೆ ಹೊಡೆಯುತ್ತಿದ್ದರು. ಮಂತ್ರಿಗಳೊಡನೆ ಬೀಗರಂತೆ ಬಂದಿದ್ದರವರು!

ನಮ್ಮ ನಸೀಬದಲ್ಲಿ ನಿದ್ದೆಯೆಂಬುದು ಇಲ್ಲವೆಂದು ಇಬ್ಬರೂ ಪ್ರಾತರ್ವಿಧಿಗಳನ್ನು ಮುಗಿಸಿ ಸಭಾ ಮಂಟಪದ ಕಡೆಗೆ ನಡೆದೆವು. "ಕಷ್ಟಕ್ಕೆ ಕರೆಯಬೇಡಿರಿ, ಊಟಕ್ಕೆ ಮರೆಯಬೇಡಿರಿ,' ಎನ್ನುವ ನಾಮಾಂಕಿತರೆಲ್ಲ ತಾವೇ ಎಲ್ಲವನ್ನು ಮಾಡಿರುವರೋ ಎಂಬಂತಹ ಠೀವಿಯೊಡನೆ ಬರುತ್ತಲಿದ್ದರು. ಸಮಾರಂಭದ ಉದ್ಘಾಟನೆ



ಸಮೀಪಿಸಿದಂತೆ ಅವರದೇ ಅಟಾಟೋಪ ಹೆಚ್ಚಾಗಿ ನಮ್ಮಿಬ್ಬರನ್ನೂ ನೂಕಿ ಬಿಟ್ಟರು ಮೂಲೆಗೆ! ಗಿರಿಯವರ, ನಿಜಲಿಂಗಪ್ಪನವರ, ಜತ್ತಿ–ಕಂಠಿಯವರ ಪಕ್ಕದಲ್ಲಿ ನಿಂತುಕೊಂಡು ಫೋಟೋಗಳಲ್ಲಿ ತಾವೂ ಮೂಡುವಂತೆ ನೋಡಿಕೊಂಡರು ನಾಮಧಾರಿಗಳು. ನನಗೆ ಅವರು ಕೈಬಿಟ್ಟುದೇ ಕ್ಷೇಮವೆನಿಸಿ ಮೂಲೆಯೊಂದರಲ್ಲಿ ಕುಳಿತೇ ನಿದ್ದೆ ಮಾಡುತ್ತಲಿದ್ದೆ. ಗಿರಿಯವರ ಇಂಗ್ಲೀಷ್ ಭಾಷಣವನ್ನು ಕನ್ನಡಕ್ಕೆ ಅನುವಾದಿಸಲು ಬೇಕಾಯಿತು ನಾನು. ಹುಡುಕಿಕೊಂಡು ಬಂದರು. ಮೇಲಿನವರ ಮಾತು ಮೀರಲಾರದೆ ತೂಕಡಿಸುತ್ತಲೇ ಮೈಕಿನ ಮುಂದೆ ನಿಂತೆ. ಬಸವಣ್ಣನೇ ಬೆಂಗಾವಲಾಗಿ ನಿಂತಿದ್ದನೇನೋ–ನನ್ನ ಕನ್ನಡ ಅನುವಾದ ಅಮೋಘವಾಗಿದ್ದಿತು. ನೆರೆದ ಸಹಸ್ರ ಸಹಸ್ರ ಜನರು ಹರ್ಷೋದ್ಗಾರ ಮಾಡಿದರು. ಗಿರಿಯವರ ವೇದಿಕೆಯ ಮೇಲೆಯೇ ಕೈಕುಲುಕಿದರು; ನಿಜಲಿಂಗಪ್ಪನವರು ಬೆನ್ನು ಚಪ್ಪರಿಸಿದರು; ಜತ್ತಿಯವರೂ ಕಂಠಿಯವರೂ ವೀರೇಂದ್ರ ಪಾಟೀಲರೂ ಶಹಭಾಸು ಹೇಳಿದರು. ನನ್ನನ್ನೂ ತಮ್ಮೊಡನೆ ಊಟಕ್ಕೆ ಎಳೆದೊಯ್ದರು. ಕೆ. ಬಸಣ್ಣನವರನ್ನೂ ಕರೆಸಿಕೊಂಡೆ. ಅಂದೇ ಒಳ್ಳೆಯ ಅನ್ನ ಕಂಡದ್ದು ನಾವು–ಕಲ್ಯಾಣಕ್ಕೆ ಹೋದ ಮೇಲೆ!

ಗಿರಿಯವರ ಭಾಷಣ ಅನುವಾದಿಸಿದೆ; ವಿಚಾರ ಗೋಷ್ಠಿಯಲ್ಲಿ ಭಾಗವಹಿಸಿದೆ; ಇನ್ನೂ ಯಾವ ಯಾವುದೋ ಸಂದರ್ಭಗಳಲ್ಲಿ ವೇದಿಕೆಯ ಮೇಲೆ, ಮೈಕಿನ ಮುಂದೆ ಕಾಣಿಸಿಕೊಂಡೆ. ಆದರೂ ಆ ಮಹೋತ್ಸವದ ಸವಿ ನೆನಪಿಗಾಗಿ ನಾವಿದ್ದ ಒಂದು ಫೋಟೋಕ್ಕಾಗಿ ಬಾಯಿ ತೆರೆದೆವು. ಒಂದು ಫೋಟೋದಲ್ಲಿಯೂ ಮೂಡಿರಲಿಲ್ಲ ನಾವಿಬ್ಬರೂ! ಸಮಾರಂಭದ ಸಾಕ್ಷಿ ಚಿತ್ರವೂ ಸಿದ್ಧವಾಗಿ ಬಂದಿತು. ಅದರಲ್ಲಿಯೂ ನಾವಿಬ್ಬರೂ ವಜಾ ಆಗಿದ್ದೆವು! ಎಲ್ಲರಿಗಿಂತ ಹೆಚ್ಚು ದುಡಿದೂ ಎಲ್ಲಿಯೂ ಉಲ್ಲೇಖಿತವಾಗದ ಇಂಥ ಪ್ರಸಂಗಗಳು ಅನೇಕ ನಡೆದು ಹೋಗಿವೆ ನನ್ನ ಜೀವನದಲ್ಲಿ! ಆದರೂ ಹತಾಶನಾಗದೆ, ನಿರಾಶನಾಗದೆ ನನ್ನ ಪಾಲಿಗೆ ಬಂದ ನಾಡು–ನುಡಿ ನಾಡಿಗರ ಸೇವೆಯನ್ನು ನಿರ್ವಂಚನೆಯಿಂದ ಮಾಡುತ್ತ ಬಂದಿದ್ದೇನೆ. ಹಿಂದಕ್ಕೆ ಹೊರಳಿ ನೋಡಿದಾಗ ಹೀಗೆ ಮಾಡಿದುದೇ ವಿಹಿತವೆಂದೆನಿಸಿ, ಪ್ರಶಸ್ತಿ ಪ್ರಶಂಸೆಗಳಿಂದಲೂ ಲಭಿಸದೆ ಹೋಗಬಹುದಾಗಿದ್ದ ಶಾಂತ, ಸಂತೃಪ್ತ ಸ್ಥಿತಿಯೊಂದನ್ನು ಈಗ ಯಥೇಚ್ಛವಾಗಿ ಅನುಭವಿಸುತ್ತ ಆನಂದದಿಂದಿದ್ದೇನೆ. ಇಂಥ ಮನೋಧರ್ಮವನ್ನು ನನಗೆ ನೀಡಿದ ಗುರುಹಿರಿಯರನ್ನು ಸದಾ ಸ್ಮರಿಸುತ್ತೇನೆ. ಪ್ರಿಯ ಬಂಧು ಪಂಚಾಕ್ಷರಿ ಹಿರೇಮಠರು ನನ್ನ 'ಕಲ್ಲೋಲ ಮಾಲೆ' ಹಾಗೆ 'ಮೊದಲು ಮಾನವನಾಗು' ಎಂಬ ಕವನ ಸಂಗ್ರಹಗಳನ್ನು ಪ್ರಕಟಿಸಿದುದರ ಪರಿಣಾಮವಾಗಿ ಸಾಹಿತ್ಯ ಕ್ಷೇತ್ರದಲ್ಲಿಯೂ ಸಾಕಷ್ಟು ಮನ್ನಣೆ ದೊರೆತಿದ್ದಿತು. ಹುಕ್ಕೇರಿ

ಬಾಳಪ್ಪನವರು 'ಮೊದಲು ಮಾನವನಾಗು' ಎಂಬ ಕವಿತೆಯನ್ನು ಸಾವಿರ ಸ್ಥಳಗಳಲ್ಲಿ ಹಾಡಿ ಅದನ್ನು ಅತ್ಯಂತ ಜನಪ್ರಿಯಗೊಳಿಸಿದರು.

**ತಂದೆ ತೀರಿಕೊಂಡರು :**

ನಾನು ನನ್ನ ತಂದೆಯವರನ್ನು ಕಳೆದುಕೊಂಡುದೊಂದು ಅತ್ಯಂತ ದುಃಖದ ಘಟನೆ ಆ ದಿನಗಳಲ್ಲಿ. ಆದಾಗಲೇ ಧಾರವಾಡದ ಮೃತ್ಯುಂಜಯಪ್ಪಗಳವರನ್ನು ಕಳೆದುಕೊಂಡು ಅಂತರಂಗದಲ್ಲಿ ಅನಾಥನಾಗಿದ್ದೆ; ಆಗ ತಂದೆಯವರೂ ಇಲ್ಲವಾಗಲು ಬಹಿರಂಗದಲ್ಲಿಯೂ ಅನಾಥನಾದೆ. ತಂದೆ, ಗುರು, ವಾತ್ಸಲ್ಯನಿಧಿ, ಮಾರ್ಗದರ್ಶಿ ಎಲ್ಲರನ್ನೂ ಒಮ್ಮೆಗೇ ಕಳೆದುಕೊಂಡ ಅನುಭವ! ನಾಡಿನ ಉದ್ದಗಲಗಳಿಂದ ಬಂದ ಶೋಕ ಸಂದೇಶಗಳು, ಬೆಂಗಳೂರಿನ ಶೋಕ ಸಭೆಯಲ್ಲಿ ಅ.ನ. ಕೃಷ್ಣರಾಯರಂಥವರು ಆಡಿದ ಅದರಾಭಿಮಾನದ ಮಾತುಗಳು ನಮಗೆ ಉಮ್ಮಳದಲ್ಲಿಯೇ ನೆಮ್ಮದಿಯ ಸೆಲೆಯಾಗಿ ಪರಿಣಮಿಸಿದುವು ಆಗ. ಅ.ನ.ಕೃ. ಬರೆದ ಲೇಖನವನ್ನು ಪಿತೃಭಕ್ತನಾದ ನಾನು ಇಲ್ಲಿ ಸ್ಮರಿಸಲೇಬೇಕು.

ನಾನು ಸಾರಿಗೆ ಇಲಾಖೆಯನ್ನು ಬಿಡುವ ಮುನ್ನ ಎಸ್ಟಿಮೇಟ್ ಕಮಿಟಿಯವರು ಸಾರಿಗೆ ಇಲಾಖೆಯನ್ನೇ ವಿಶೇಷ ಪರಿಶೀಲನೆಗಾಗಿ ಆರಿಸಿಕೊಂಡರು. ಕಮಿಟಿಯ ಅಧ್ಯಕ್ಷರು ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರಾಗಿದ್ದರು. ಉಳಿದ ಸದಸ್ಯರೂ ಅನುಭವಿಗಳು, ತಳಸೋಸಿ ನೋಡುವವರು. ಕಮೀಷನರರ ಕಛೇರಿಯನ್ನೂ, ಕೆಲವು ಆರ್.ಟಿ.ಓ.ಗಳ ಕಛೇರಿಗಳನ್ನೂ ಕೂಲಂಕಷವಾಗಿ ಪರಿಶೀಲಿಸಿ ಇಲಾಖೆಯ ಬಗ್ಗೆ ತುಂಬ ತೃಪ್ತಿ ಸೂಚಿಸಿ ವರದಿ ಮಾಡಿದರು. ಅದು ಆ ಇಲಾಖೆಯಿತ್ತ ಇನಾಮು ಆಯಿತು ನನಗೆ. ಅಲ್ಲಿಂದ ಬೆಳಗಾವಿ ಜಿಲ್ಲೆಗೆ ವರ್ಗವಾಯಿತು ನನಗೆ. ಮುಖ್ಯಮಂತ್ರಿ ವೀರೇಂದ್ರ ಪಾಟೀಲರೇ ಅದನ್ನು ಇಚ್ಛಿಸಿ ಮಾಡಿದ್ದರಿಂದ ನಾನು ಸಂತೋಷದೊಡನೆಯೇ ಬೆಳಗಾವಿಗೆ ಹೋದೆ. ಕೊನೆಯ ಮಗಳು ಭಾರತಿ ಚಿತ್ರದುರ್ಗದ ಹೆಸರಾಂತ ವಕೀಲರಾದ ಎಸ್.ಎಂ. ರಾಜಶೇಖರಯ್ಯನವರ ಸುಪುತ್ರ ಎಸ್.ಎಮ್. ಮೃತ್ಯಂಜಯಪ್ಪನವರ ಕೈಹಿಡಿದು ಭದ್ರಾವತಿಗೆ ಹೋಗಿದ್ದಳು; ಎರಡನೆಯ ಮಗಳು ಶಿವಗೀತಾ ವಿಜಾಪುರ ಜಿಲ್ಲೆಯ ತೊಣಶ್ಯಾಳಿನ ಜಮೀನದಾರ ಶ್ರೀ ಮಲ್ಲಯ್ಯನವರು ಪೂಜಾರಿಯ ಸುಪುತ್ರ ಡಾ. ಗಂಗಾಧರ ಪೂಜಾರಿಯವರನ್ನು ವರಿಸಿ ಅಮೇರಿಕೆಗೆ ಹೋಗಿದ್ದಳು; ಮೊದಲ ಮಗಳು ಪತಿಯೊಡನೆ ಸೌಂದತ್ತಿಯ ಸಮೀಪದ ಮಲಪ್ರಭಾ ಜಲಾಶಯ ಕಾಲನಿಯಲ್ಲಿದ್ದಳು. ಇದೊಬ್ಬ ಮಗ ಪ್ರಸನ್ನಕುಮಾರ ಬಿ.ಇ. ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ಪಾಸಾಗಿದ್ದ.



ಅವನೊಬ್ಬನನ್ನು ಕರೆದುಕೊಂಡು ಬೆಳಗಾವಿಗೆ ಹೋದೆವು. ಮೊದಲ ಮಗಳು ಅದೇ ಜಿಲ್ಲೆಯಲ್ಲಿದ್ದುದೊಂದು ಹಿಗ್ಗಿನ ಸೆಲೆಯಾಗಿದ್ದಿತು ನಮಗೆ.

**ಬೆಳಗಾವಿಯಲ್ಲಿ :**

ಬೆಳಗಾವಿ ಮುಳ್ಳಿನ ಹಾಸಿಗೆಯೆಂದು ಹೆಸರಾಗಿದ್ದಿತು. ಕನ್ನಡ–ಮರಾಠಿ ವಿವಾದವಂತೂ ಸರಿಯೆ–ವಿಸ್ತೀರ್ಣ, ಜನಸಂಖ್ಯೆ, ಜಾತಿ ವೈವಿಧ್ಯ, ಗಡಿ ಜಿಲ್ಲೆಗಳಿಗಿರುವ ವಿಶೇಷ ಸಮಸ್ಯೆಗಳು, ಇತ್ಯಾದಿಗಳ ದೃಷ್ಟಿಯಿಂದಲೂ ಆಡಳಿತಗಾರರಿಗೆ ಸವಾಲಾಗಿದ್ದ ಜಿಲ್ಲೆಯದು. ನಾನಲ್ಲಿಗೆ ಹೋದುದೂ ಸ್ಫೋಟಕಸಮದಲ್ಲಿ–ಇಂಡಿಕೇಟ್–ಸಿಂಡಿಕೇಟುಗಳ ಬಲಾಬಲಗಳ ಪರೀಕ್ಷೆ ನಡೆಯುತ್ತಲಿದ್ದ ಸಮಯದಲ್ಲಿ. ಕಾಂಗ್ರೆಸ್ ಸಂಸ್ಥೆ ಆಪಾದ ಮಸ್ತಕ ಸೀಳಿ ಎರಡು ಹೋಳಾದಾಗ ದೇಶವು ಹಿಂದೆಂದೂ ಎದುರಿಸದಿದ್ದ ಸಂದಿಗ್ಧತೆಯು ಆವರಿಸಿದ್ದಿತು ಸಮಗ್ರ ದೇಶವನ್ನು. ಕರ್ನಾಟಕದ ನಿಜಲಿಂಗಪ್ಪನವರು ಸಂಸ್ಥಾ ಕಾಂಗ್ರೆಸ್ಸಿನಲ್ಲಿ ಉಳಿದುದರ ಫಲವಾಗಿ ವೀರೇಂದ್ರ ಪಾಟೀಲರೂ ಅವರ ಮಂತ್ರಿ ಮಂಡಲವೂ ಅವರೊಡನೆ ಉಳಿದುವು. ಕೇಂದ್ರದೊಡನೆ ಶೀತಲ ಸಮರ ಪ್ರಾರಂಭವಾಯಿತು. ಅದರ ಮೊದಲ ಆಸ್ಫೋಟವನ್ನು ಎದುರಿಸಬೇಕಾಯಿತು ನಾನು. ಮಹಾಜನ ವರದಿಯನ್ನು ಲೋಕಸಭೆಯ ಮುಂದೆ ಇರಿಸಿದುದರ ಪರಿಣಾಮವಾಗಿ ಹಿಂಸಾ ಕೃತಿಗಳು ಹೊರ ಹೊಮ್ಮಿದುವು ಬೆಳಗಾವಿಯಲ್ಲಿ. ಆ ಜಿಲ್ಲೆಯ ತಾಲೂಕುಗಳಲ್ಲಿ. ಬರಗಾದಲ್ಲಿ ಅಧಿಕ ಮಾಸವೆಂಬಂತೆ ಆಗ ಎಸ್.ಪಿ.ಯೂ ಇರಲಿಲ್ಲ ಬೆಳಗಾವಿಯಲ್ಲಿ ಡಿವೈ.ಎಸ್.ಪಿ.ಯನ್ನು ಕಟ್ಟಿಕೊಂಡು ಹಗಲು ರಾತ್ರಿ ತಿರುಗಿದೆ ಹಿಂಸಾಕೃತಿಗಳು ತಲೆಯೆತ್ತಿದ್ದ ಬೆಳಗಾವಿಯ ಭಾಗಗಳಲ್ಲಿ, ತಾಲೂಕುಗಳಲ್ಲಿ. ವರದಿ ಬರುವ ಮುನ್ನವೆ ನಡೆದ ಅಪ್ರಿಯ ಘಟನೆಗಳೆಷ್ಟೋ ಅಷ್ಟೇ; ಇನ್ನೊಂದು ಅಹಿತಕರ ಘಟನೆಯೂ ನಡೆಯದಂತೆ ನೋಡಿಕೊಂಡೆವು. ಪಕ್ಕದ ಧಾರವಾಡ ಜಿಲ್ಲೆಯಲ್ಲಿ ನಡೆದುದರ ಕಾಲು ಭಾಗದಷ್ಟು ವಿಧ್ವಂಸಕ ಕೃತಿಗಳೂ ಬೆಳಗಾವಿ ಜಿಲ್ಲೆಯಲ್ಲಿ ನಡೆಯಲಿಲ್ಲ. ಮುಖ್ಯಮಂತ್ರಿಗಳು ದೂರವಾಣಿಯಲ್ಲಿ ಮಾತನಾಡಿ ಮೆಚ್ಚಿಗೆ ಸೂಚಿಸಿದರು.

ವಿಧಾಯಕ ಕಾರ್ಯಗಳ ಅಭಾವದಲ್ಲಿಯೇ ವಿಧ್ವಂಸಕ ಕೃತ್ಯಗಳ ಪ್ರಾದುರ್ಭಾವವೆಂಬುದನ್ನು ಮನಗಂಡಿದ್ದ ನಾನು ಪ್ರಕ್ಷುಬ್ಧ ಪರಿಸ್ಥಿತಿ ಸ್ವಲ್ಪ ಶಾಂತವಾಗುತ್ತಲೇ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಂಡೆ. ಹತ್ತೂ ತಾಲೂಕುಗಳ ಅಭಿವೃದ್ಧಿ ಮಂಡಳಿಗಳ ಅಧ್ಯಕ್ಷರ ಸಹಕಾರ ಪಡೆದು ಹತ್ತೂ ತಾಲೂಕುಗಳಲ್ಲಿ ಹೊಸ ಹೊಸ ಅಭಿವೃದ್ಧಿ ಕಾರ್ಯಗಳನ್ನು ಪ್ರಾರಂಭಿಸಿದೆ. ಯಾವುದಾದರೊಂದು ಎದ್ದು ಕಾಣುವ ಕಾರ್ಯ ಮಾಡಿ ತೋರಿಸುವುದೇ ಉಳಿದೆಲ್ಲ ಕಾರ್ಯಗಳ

ಯಶಸ್ಸಿಗೆ ನಾಂದಿಯೆಂಬ ನನ್ನ ಹಳೆಯ ಸೂತ್ರದಂತೆ, ತಂತ್ರದಂತೆ ಅಲ್ಲಿಯೂ ಒಂದು ಕಠಿಣ ಕಾರ್ಯವನ್ನು ಕೈಗೆತ್ತಿಕೊಂಡೆ. ಬೆಳಗಾವಿಯ ಬದಿಯ ಬಳ್ಳಾರಿ ನಾಲೆ ಅಲ್ಲಿ ಅನೇಕ ಬೇಸಾಯಗಾರರಿಗೆ ದುಃಸ್ವಪ್ನವಾಗಿ ಬಿಟ್ಟಿದ್ದಿತು. ಮಳೆಗಾಲದಲ್ಲಿ ಅದರ ನೀರು ಎರಡೂ ಬದಿಗೆ ಹರಡಿ ನಾಲ್ಕೈದು ನೂರು ಎಕರೆ ಫಲವತ್ತಾದ ಭೂಮಿ ಮುಳುಗಿ ಹೋಗುತ್ತಿದ್ದಿತು. ಅದರಲ್ಲಿ ಭತ್ತ ಬೆಳೆದುದೇ ನೆನಪಿರಲಿಲ್ಲ ಅಲ್ಲಿಯವರೆಗೆ. ಅಷ್ಟು ವರ್ಷಗಳಿಂದ ಈ ವಾರ್ಷಿಕ ನಷ್ಟವನ್ನು ಅನುಭವಿಸುತ್ತ ಬಂದಿದ್ದರವರು. ಅವರಿನ್ನೂ ಅವಿಭಕ್ತ ಮುಂಬೈ ಪ್ರಾಂತ್ಯದಲ್ಲಿದ್ದಾಗಿನಿಂದಲೇ ಆ ನಷ್ಟದ ನಿವಾರಣೆಗಾಗಿ ಬೆಳಗಾವಿಗೆ ಬಂದ ಮಂತ್ರಿಗಳಿಗೆಲ್ಲ, ವರಿಷ್ಠಾಧಿಕಾರಿಗಳಿಗೆಲ್ಲ ಮನವಿ ಸಲ್ಲಿಸುತ್ತ ಬಂದಿದ್ದರು. ಆಗಿದ್ದ ಪ್ರಯೋಜನವೆಂದರೆ ಮೊದಲು ಕೆಲವು ಲಕ್ಷ ರೂಪಾಯಿಗಳಿಗೆ ಸೀಮಿತವಾಗಿದ್ದ ವೆಚ್ಚದ ಅಂದಾಜು ಏರುತ್ತ ಏರುತ್ತ ಒಂದೂವರೆ ಕೋಟಿ ರೂಪಾಯಿಗಳನ್ನು ಮುಟ್ಟಿದ್ದಿತು! ಐದು ನೂರು ಎಕರೆ ಭೂಮಿಗಾಗಿ ಒಂದೂವರೆ ಕೋಟಿ ರೂಪಾಯಿಗಳನ್ನು ಯಾರು ವ್ಯಯಿಸಬೇಕು?

ಹೀಗಾಗಿ ಅದರ ಆಶೆಯನ್ನೇ ಬಿಟ್ಟು ಬಿಟ್ಟಿದ್ದರು ಆ ಬಡ ಬೇಸಾಯಗಾರರು ನನಗೂ 'ಒಗೆಯುವ ಕಲ್ಲು ಒಗೆದರಾಯಿತು, ಊದುವ ಶಂಖ ಊದಿದರಾಯಿತು' ಎಂಬ ಲೋಕ ನೀತಿಯಂತೆ ಆ ಬಗ್ಗೆ ಬಿನ್ನವಿಸಿಕೊಂಡರು. ನಾನು ಸ್ಥಳೀಯ ಇಂಜಿನಿಯರೊಡನೆ ಆ ನಾಲೆಯ ಆಮೂಲಾಗ್ರ ಅವಲೋಕವನ್ನೇ ಕೈಗೊಂಡೆ. ಅದರ ಉಗಮ ಬೆಳಗಾವಿಯಲ್ಲಿಯೇ. ಅಲ್ಲಿಂದ ಹೊರಟು ಕಾಲ್ನಡಿಗೆಯಲ್ಲಿಯೇ ನಾಲೆ ಹೋದತ್ತ ನಿರೀಕ್ಷಣೆ ಮುಂದುವರಿಸಿದೆ. ಒಂದು ಕಡೆಗೆ ನಾಲೆ ಅರ್ಧ ಚಂದ್ರಾಕಾರದ ಡೊಂಕನ್ನು ಪಡೆದಿದ್ದಿತು. ಮಳೆಗಾಲದ ನೀರು ಅಲ್ಲಿಗೆ ಬಂದಾಗ ಪ್ರವಾಹ ಕುಂಠಿತವಾಗಿ ಹೆಚ್ಚಿನ ನೀರು ಹರಡುತ್ತಿತ್ತು ಎರಡೂ ಬದಿಗೆ. ಅದನ್ನು ನೇರಗೊಳಿಸಿಬಿಟ್ಟರೆ ಸಾಕೆನ್ನಿಸಿತು. ಹೊಲದೊಡೆಯನಿಗೆ ನೇರಗೊಳಿಸಲು ಭೂಮಿ ಬಿಟ್ಟರೆ ಮೊದಲಿನ ನಾಲೆಯ ದಾರಿಯನ್ನೆಲ್ಲ ತುಂಬಿಸಿ ಬೆಳೆವ ಹೊಲವನ್ನಾಗಿ ಮಾರ್ಪಡಿಸಿ ಕೊಡುವುದಾಗಿ ಮಾತುಕೊಟ್ಟೆ. ಹೊಲದೊಡೆಯ ತಕ್ಷಣ ಒಪ್ಪಿದ. ಹಿಡಕಲ್ ಜಲಾಶಯದಲ್ಲಿ ಕೆಲಸ ಮಾಡುತ್ತಿದ್ದ ಭಾರಿ ಬುಲ್ ಡೋಜರುಗಳಲ್ಲಿ ಒಂದನ್ನು ತರಿಸಿ ಆ ಭಾಗದ ಡೊಂಕು ಮಾಯವಾಗುವಂತೆ ನೇರಗೊಳಿಸಿದೆ ನಾಲೆಯ ದಾರಿಯನ್ನು. ಅದೇ ಮಣ್ಣಿನಿಂದ ಅದರ ಮೊದಲಿನ ಡೊಂಕು ದಾರಿಯನ್ನು ತುಂಬಿಸಿ ಕೊಟ್ಟೆ. ಆಮೇಲೆ ನಾಲೆಯ ಉದ್ದಕ್ಕೂ ಬುಲ್‌ಡೋಜರ್ ಹೊಡೆಸಿ ಅಲ್ಲಿದ್ದ ಹೂಳನ್ನು ತೆಗೆಸಿ ಬೆಳಗಾವಿಯಿಂದ ಬರುವ ನೀರೆಲ್ಲ ಅಡೆತಡೆಯಿಲ್ಲದೆ ಹರಿದು ಹೋಗುವ ಹಾಗೆ ಮಾಡಿದೆ. ಈ ಕೆಲಸ ಮುಗಿಯುವಷ್ಟರಲ್ಲಿ ಮಳೆಗಾಲ



ಬಂದಿತು. ವರ್ಷಕ್ಕಿಂತ ಜೋರಾಗಿಯೇ ಬಂದಿತು. ಬಂದ ನೀರೆಲ್ಲ ಹರಿದು ಹೋಯಿತು. ವರ್ಷ ವರ್ಷವೂ ಮುಳುಗಡೆಯಾಗುತ್ತಿದ್ದ ಭೂಮಿಯಲ್ಲಿ ನಡುದ್ದ ಭತ್ತದ ಬೆಳೆ ಎದ್ದು ನಿಂತಿತು. ಬೆಳೆದವರಿಗಷ್ಟೇ ಅಲ್ಲ, ಬೆಳಗಾವಿಯವರಿಗೆಲ್ಲ ಅದೊಂದು ಮೋಡಿಯಾಗಿ ತೋರಿತು. ಇದರ ಪ್ರಸಿದ್ಧಿ ಜಿಲ್ಲೆಯಲ್ಲೆಲ್ಲ ಹರಿಡಿತು. ಅಭಿವೃದ್ಧಿ ಕಾರ್ಯಗಳಲ್ಲಿ ಎಂದಿಲ್ಲದ ಆಸಕ್ತಿ ಅರಳಿತು ಜಿಲ್ಲೆಯಲ್ಲೆಲ್ಲ.

ಈ ಕಾರ್ಯಕ್ಕೆ ವೆಚ್ಚವಾದುದು ಒಂದು ಲಕ್ಷ ರೂಪಾಯಿ ಮಾತ್ರ. ಆದರೆ ಮೊದಲನೆಯ ವರ್ಷದಲ್ಲಿಯೇ ಐದು ಸಾವಿರ ಕ್ವಿಂಟಾಲು ಭತ್ತ ಬೆಳೆದರು ಆ ಮುಳುಗಡೆಯಾಗುತ್ತಿದ್ದ ಭೂಮಿಯ ಬೇಸಾಯಗಾರರು. ತಾವೇ ಸ್ವಸಂತೋಷದಿಂದ ನನ್ನನ್ನು ಕರೆದೊಯ್ದು ಐದು ನೂರು ಕ್ವಿಂಟಾಲು ಭತ್ತ ಲೇವಿಯಿತ್ತರು. ಆ ಸಂತೋಷ ಸಂಭ್ರಮಗಳಲ್ಲಿ ಸುತ್ತಲಿನ ಹಳ್ಳಿಗಳಲ್ಲಿ ಸ್ಥಳೀಯ ವಂತಿಗೆಗಳು ವಸೂಲಾಗಿ ಬಿಟ್ಟವು. ಗ್ರಾಮ ವಿದ್ಯುದೀಕಣ, ಪುಟ್ಟ ನೀರಾವರಿ, ಶಾಲಾಭವನ, ಇತ್ಯಾದಿ ಕಾರ್ಯಗಳಲ್ಲಿ ಆರಂಭವಾದುವು.

ಎಂ.ಕೆ. ಹುಬ್ಬಳ್ಳಿಯಲ್ಲಿ ಪ್ರಾರಂಭವಾಗಿದ್ದ ಸಕ್ಕರೆ ಕಾರ್ಖಾನೆಯೂ ನೆನೆಗುದಿಗೆ ಬಿದ್ದಿದ್ದಿತು. ಬೆಳಗಾವಿಗೆ ಬಂದಿದ್ದ ಶ್ರೀ ವೀರೇಂದ್ರ ಪಾಟೀಲರು ಬಳ್ಳಾರಿ ನಾಲೆಯ ಸಮಸ್ಯೆಯನ್ನು ಬಗೆಹರಿಸಿದುದಕ್ಕಾಗಿ ನನ್ನನ್ನು ಅಭಿನಂದಿಸಿ, ಏನಾದರೂ ಮಾಡಿ ಎಂ.ಕೆ. ಹುಬ್ಬಳ್ಳಿಯ ಸಕ್ಕರೆ ಕಾರಖಾನೆಯನ್ನೂ ಮುಗಿಸಿಬಿಡಿರಿ–ಎಂದು ಹೇಳಿದರು. ಅಷ್ಟರಲ್ಲಿ ಸರಕಾರ ನನ್ನನ್ನು ಅದರ ಮ್ಯಾನೇಜಿಂಗ್ ಡೈರೆಕ್ಟರ್ ಎಂದು ನಿಯಮಿಸಿ ಆಜ್ಞೆ ಹೊರಡಿಸಿದ್ದಿತು. ನಾನೂ ಒಳ ಹೊಕ್ಕು ಅದರ ವಿವರಗಳನ್ನು ಅಭ್ಯಸಿಸಿದ್ದೆ. ಆ ಆಧಾರದಿಂದ ಹೇಳಿದೆ: "ಈಗ ಅದರಲ್ಲಿ ಹಣವೇ ಉಳಿದಿಲ್ಲ. ಇಷ್ಟೆಲ್ಲ ಹಣ ಹಾಕಿಯೂ ಇನ್ನಷ್ಟನ್ನು ತೊಡಗಿಸಿ ಕಾರಖಾನೆ ಸಕ್ಕರೆಯ ಉತ್ಪಾದನೆಯನ್ನು ಪ್ರಾರಂಭಿಸುವಂತೆ ಮಾಡದಿದ್ದರೆ ಕಾರಖಾನೆಯನ್ನೇ ಮಾರಬೇಕಾಗುತ್ತದೆ ಬಡ್ಡಿ ತೀರಿಸಲು!" ಇದನ್ನು ಕೇಳಿ ಚಕಿತರಾದರು ಅವರು. ಅದುವರೆಗೆ ಅದರ ಬಗ್ಗೆ ಬಣ್ಣದ ಮಾತುಗಳನ್ನೇ ಕೇಳಿದ್ದ ಅವರಿಗೆ ಅದರ ವಸ್ತುಸ್ಥಿತಿಯ ಪರಿಚಯವಾದಾಗ ಮನಸ್ಸಿಗೆ ಆಘಾತವೂ ಆಯಿತು. 'ಇನ್ನೂ ಎಷ್ಟು ಹಣ ಹಾಕಬೇಕಾದಿತು?' ಎಂದು ಕೇಳಿದರು. "ಐದೇ ಐದು ಲಕ್ಷ ಕೊಟ್ಟುಬಿಡಿರಿ; ಮತ್ತೆ ಬೇಡುವುದಿಲ್ಲ; ಒಮ್ಮೆಗೆ ಕಬ್ಬು ನುರಿಸುವುದನ್ನು ಉದ್ಘಾಟಿಸಲಿಕ್ಕೇ ತಮ್ಮನ್ನು ಕರೆಯುವೆನು," ಎಂದು ಹೇಳಿದೆ. "ಇಂದು ನನ್ನೊಡನೆ ಬೆಂಗಳೂರಿಗೆ ಬಂದುಬಿಡಿರಿ," ಎಂದರವರು. ವಿಮಾನ ಹಾರುವ ಹೊತ್ತು ಸಮೀಪಿಸಿತ್ತು. ಲಗುಬಗೆಯಿಂದ ಸಿದ್ಧನಾಗಿ ಅವರೊಡನೆ ಬೆಂಗಳೂರಿಗೆ ಹೋದೆ. ನೇರವಾಗಿ ತಮ್ಮ ಬಂಗ್ಲೆಗೇ ಕರೆದೊಯ್ದರವರು. "ನಾಳೆ

ಬೆಳಗಾದರೆ ಸಚಿವ ಸಂಪುಟದ ಸಭೆಯಿದೆ; ಅದಕ್ಕಾಗಿ ನೀವು ಒಂದು ಅನೌಪಚಾರಿಕ ಟಿಪ್ಪಣಿ ತಯಾರು ಮಾಡಿರಿ'' ಎಂದು ಹೇಳಿದರು. ಅಲ್ಲಿಯೇ ಕುಳಿತು ಬರೆದೆ; ಆಗಿಂದಾಗಲೇ ಕೆ.ಜಿ. ಚೆನ್ನವೀರಪ್ಪನವರು ಬೆರಳಚ್ಚಿಸಿದರು. ಅದರ ಮೇಲೆ 'ಇದು ನಾಳಿನ ಸಚಿವ ಸಂಪುಟದ ಸಭೆಯಲ್ಲಿ ಚರ್ಚಿತವಾಗುವುದು. ಎಲ್ಲರಿಗೂ ಇದರ ಪ್ರತಿ ಇಂದೇ ಕಳಿಸಿರಿ,' ಎಂದು ಪ್ರಧಾನ ಕಾರ್ಯದರ್ಶಿಗಳಿಗೆ ಬರೆದರು. ``ಕೆಲವು ಮಂತ್ರಿಗಳು ಬೇರೆ ಸಕ್ಕರೆ ಕಾರಖಾನೆಗಳಿಗೂ ಹೆಚ್ಚಿನ ಹಣ ಕೊಡಿಸುವ ಹವಣಿಕೆಯಲ್ಲಿದ್ದಾರೆ; ಅವರ ಆಕ್ಷೇಪಗಳಿಗೆ ಉತ್ತರವೀಯಲು ನೀವು ಸಚಿವ ಸಂಪುಟ ಸಭೆ ನಡೆದಾಗ ಉಪಸ್ಥಿತರಿರಿ,'' ಎಂದು ಹೇಳಿ ಕಳಿಸಿದರು.

ಮರುದಿನ ಚಂದನದ್ವಾರದ ಸಚಿವ ಸಂಪುಟದ ಸಭಾಂಗಣದ ಬಳಿ ಕುಳಿತಿದ್ದೆ. ಆ ವಿಷಯ ಬಂದಾಗ ನನ್ನನ್ನು ಒಳಗೆ ಕರೆದರು. ``ಕೊಳ್ಳೇಗಾಲ ಕಾರಖಾನೆಗೇಕೆ ಕೊಡಬಾರದು? ಪಾಂಡವಪುರದ ಕಾರಖಾನೆಗೇಕೆ ಕೊಡಬಾರದು?'' ಇತ್ಯಾದಿ ಪ್ರಶ್ನೆಗಳನ್ನು ಎದುರಿಸಬೇಕಾಯಿತು ನಾನು. ಆ ಆಕ್ಷೇಪಗಳನ್ನು ನಿರೀಕ್ಷಿಸಿದ್ದೆನಾಗಿ ಉತ್ತರ ಸಿದ್ಧಪಡಿಸಿಕೊಂಡೇ ಹೋಗಿದ್ದೆ. ``ಸ್ವಾಮೀ, ಸಣ್ಣ ಹಿಡುವಳಿದಾರರೇ ಹೆಚ್ಚಾಗಿ ಪಾಲುದಾರರಾಗಿರುವ ಕಾರಖಾನೆಗಳಿಗೆ ಮಾತ್ರ ನಿಗದಿ ಪಡಿಸಿದ ಮಿತಿಯನ್ನೂ ಮೀರಿ ಹಣ ನೀಡುಬಹುದೆಂದು ಎನ್.ಸಿ.ಡಿ.ಸಿ. ನಿರ್ದೇಶಿಸಿದೆ. ಎಂ.ಕೆ. ಹುಬ್ಬಳ್ಳಿ ಕಾರಖಾನೆ ಮಾತ್ರ ಈ ಶರ್ತನ್ನು ಪೂರೈಸುತ್ತದೆ. ಆದುದರಿಂದ ಇದೊಂದೇ ಹೆಚ್ಚಿನ ನೆರವಿಗೆ ಅರ್ಹವಾದ ಕಾರಖಾನೆ,'' ಎಂದು ನಿವೇದಿಸಿಕೊಂಡೆ. ವಿರೋಧಿಗಳ ಬಾಯಿಕಟ್ಟಿತು. ಐದು ಲಕ್ಷ ಹಣ ಮಂಜೂರಾಯಿತು. ಅಂದೇ ಸರಕಾರಿ ಆಜ್ಞೆ ಹೊರಡಿಸಿಕೊಂಡು, ಕಿಸೆಯಲ್ಲಿ ಆ ಆಜ್ಞೆ ಇರಿಸಿಕೊಂಡು ಬೆಳಗಾವಿಗೆ ಹಿಂದಿರುಗಿದೆ. ಆ ಸುದ್ದಿ ಪರಿಮಳದಂತೆ ಹರಡಿ ನಾನು ಹಿಡಿದ ಕೆಲಸ ಬಿಡುವವನಲ್ಲವೆಂಬ ಭರವಸೆ ಇನ್ನಷ್ಟು ಬಲಗೊಂಡು ಉಳಿದ ಕಾರ್ಯಗಳನ್ನು ಮಾಡಲು ಸಹಾಯಕವಾಯಿತು.

ಸಕ್ಕರೆ ಕಾರಖಾನೆಯನ್ನು ಪ್ರಾರಂಭಿಸಿಯೇ ಬಿಡುವ ಛಲದಿಂದ ಕಟಿಬದ್ಧನಾಗಿ ಕಾರ್ಯ ಪ್ರಾರಂಭಿಸಿದೆ. ನಿತ್ಯ ಸಂಜೆಯವರೆಗೆ ಜಿಲ್ಲಾಧಿಕಾರಿಯ ಕಛೇರಿಯ ಕೆಲಸಗಳನ್ನು ಮಾಡುವುದು; ಆಮೇಲೆ ಅಲ್ಲಿಗೆ ಹದಿನೆಂಟು ಮೈಲಿ ಆಚೆಯಿದ್ದ ಸಕ್ಕರೆ ಕಾರಖಾನೆಗೆ ಹೋಗಿ ಮಧ್ಯರಾತ್ರಿಯವರೆಗೆ ಅಲ್ಲಿಯ ಕೆಲಸ ಕಾರ್ಯಗಳನ್ನು ಮಾಡುವುದು; ತರುವಾಯ ಮನೆಗೆ ಹಿಂದಿರುಗಿ ಮಲಗುವುದು. ಹೀಗೆ ತಿಂಗಳುಗಟ್ಟಲೆ ಕಾರ್ಯ ನಡೆಯಿತು. ಒಂದೊಂದಾಗಿ ಕಾರ್ಯಗಳು ಮುಗಿಯತೊಡಗಿದುವು. ಎಲ್ಲಿ ವಿಘ್ನ ತಲೆದೋರಿದರೂ ನಾನೇ ಮುಂದಾಗಿ ಪರಿಹರಿಸುತ್ತಿದ್ದೆ. ಕಾರಖಾನೆ



ಯಶಸ್ವಿಯಾಗಗೊಡಬಾರದೆಂಬ ಒಂದು ಸಣ್ಣ ಗುಂಪೂ ಇತ್ತು ಅಲ್ಲಿ. ಆ ಗುಂಪಿನ ಮೇಲೆ ತೀಕ್ಷ್ಣ ದೃಷ್ಟಿಯನ್ನಿರಿಸಿದ್ದೆ ನಾನು. ಕಾರಖಾನೆಯ ಪ್ರಾರಂಭೋತ್ಸವದ ದಿನಾಂಕ ನಿಶ್ಚಿತವಾಗಿ ಹೋಗಿದ್ದಿತು. ಶ್ರೀ ವೀರೇಂದ್ರ ಪಾಟೀಲರೂ ಬರಲು ಒಪ್ಪಿದ್ದರು. ಪ್ರಾಯೋಗಿಕವಾಗಿ ಕಾರಖಾನೆ ಚಾಲೂ ಮಾಡಿ ನೋಡಿದೆವು. ಬಿಸಿ ನೀರು ಕೊಂಡೊಯ್ಯುವ ಕೊಳಾಯಿ ಸಿಡಿದು ನೀರು ಸೋರತೊಡಗಿತು. ಆ ಗುಂಪಿನ ಫಿತೂರಿ ಹೊರಬಿದ್ದಿತು. ನಿಂತ ಕಾಲಿನ ಮೇಲೆ ಅಲ್ಲಿಯ ಮುಖ್ಯ ಇಂಜಿನಿಯರನ್ನೇ ಕೆಲಸದಿಂದ ವಜಾ ಮಾಡಿ ಮನೆಗೆ ಕಳಿಸಿದೆ, ಅವರ ಪರವಾಗಿ ಯಾರಾದರೂ ಹೇಳಲು ಬಂದರೆ ಅವರನ್ನೂ ಮನೆಗೆ ಕಳಿಸುವ ವ್ಯವಸ್ಥೆ ಮಾಡುವೆನೆಂದು ಸಾರಿಬಿಟ್ಟೆ. ಪಿಟ್ಟೆನ್ನಲಿಲ್ಲ ಒಬ್ಬರೂ. ಶ್ರೀ ವೀರೇಂದ್ರ ಪಾಟೀಲರು ಬರಲು ಎರಡೇ ಎರಡು ದಿನಗಳು ಉಳಿದಿದ್ದುವು, ಕಾರಖಾನೆಯಲ್ಲಿ ಸಿವ್ಹಿಲ್ ಇಂಜಿನಿಯರಾಗಿ ಕೆಲಸ ಮಾಡುತ್ತಲಿದ್ದ ಶ್ರೀ ಅನಗೋಳರೊಡನೆ ಬೆಳಗಾವಿಗೆ ಬಂದು ಸಾಕಷ್ಟು ಕ್ವಿಕ್ ಸೆಟ್ಟಿಂಗ್ ಸಿಮೆಂಟನ್ನು ಸಂಗ್ರಹಿಸಿಕೊಂಡು ಕಾರಖಾನೆಗೆ ಹಿಂದಿರುಗಿದೆವು. ರಾತ್ರಿಯೆಲ್ಲ ಪೈಪ್‌ಲೈನಿನ ರಿಪೇರಿ ಮಾಡಿ ಕಾರಖಾನೆಗೆ ಪೋಲೀಸ್ ಕಾವಲಿನ ವ್ಯವಸ್ಥೆ ಮಾಡಿದೆವು. ನಿಶ್ಚಿತ ದಿನವೇ ಕಾರಖಾನೆ ವೀರೇಂದ್ರ ಪಾಟೀಲರು, ಕಾರಖಾನೆಯ ಡೈರೆಕ್ಟರುಗಳು, ಪಾಲುದಾರರ ಪ್ರತಿನಿಧಿಗಳು ಹಾಕಿದ ಕಬ್ಬು ನುರಿಸುವುದರೊಂದಿಗೆ ಪ್ರಾರಂಭವಾಯಿತು. ನೆರೆದಿದ್ದ ಸಹಸ್ರಾವಧಿ ಕಬ್ಬು ಬೆಳೆಗಾರರಲ್ಲಿ ಒಳ್ಳೆಯ ದಿನಗಳನ್ನು ನೋಡುವೆವೆಂಬ ಭರವಸೆ ಮೂಡಿ ಹಿಗ್ಗು ಹೊನಲಾಗಿ ಹರಿಯಿತು. ವೀರೇಂದ್ರ ಪಾಟೀಲರಂತೂ ಹಿರಿ ಹಿರಿ ಹಿಗ್ಗಿದರು. ಐದು ಸಾವಿರ ಬಡವರಿಗೆ ಅನ್ನಸಂತರ್ಪಣೆ ನಡೆಯಿತು. ಬೆಳಗಾವಿ, ಬೈಲಹೊಂಗಲ, ಖಾನಾಪುರ ತಾಲೂಕುಗಳ ಕಬ್ಬು ಬೆಳೆಗಾರರ ಕಾಮಧೇನು ಸಕ್ಕರೆಯ ರೂಪದಲ್ಲಿ ಹಾಲು ಕರೆಯತೊಡಗಿತು.

## ಮಲಪ್ರಭಾ ಯೋಜನೆ :

ಮಲಪ್ರಭಾ ಜಲಾಶಯ ಯೋಜನೆಗೆ ಇಂದಿರಾ ಗಾಂಧೀಜಿಯವರು ಅಸ್ತಿಭಾರ ಹಾಕಿದಾಗ ನಾನು ಹಾಜರಿದ್ದುದನ್ನು ಹಿಂದೆ ಹೇಳಿದ್ದೇನೆ. ಬೆಳಗಾವಿಯ ಜಿಲ್ಲಾಧಿಕಾರಿಯಾಗಿ ಅದರ ಹಲವು ಸಮಸ್ಯೆಗಳನ್ನು ಪರಿಹರಿಸಿದ ಸಂತೃಪ್ತಿ ನನ್ನದಾಯಿತು. ಕೃಷ್ಣಾ ನದಿಯ ನೀರಿನ ಹಂಚಿಕೆಯ ಬಗ್ಗೆ ನಿರ್ಣಯ ನೀಡಲು ನಿಯಮಿತರಾಗಿದ್ದ ಬಚಾವತ್ ಅವರು ಬೆಳಗಾವಿಗೆ ಬಂದರು. ಅವರಿಗಾಗಿ ರಾಜೋಚಿತ ವ್ಯವಸ್ಥೆಗಳನ್ನು ಮಾಡಿದ್ದೆವು. ಆದರೆ ಅವರಲ್ಲಿಗೆ ಬಂದ ರಾತ್ರಿಯೇ ನಾನವರನ್ನು ಭೇಟಿ ಮಾಡಿದಾಗ ನನಗೊಂದು ಆಘಾತ ಕಾದಿತ್ತು. ಆ ಮಾತು ಈ

ಮಾತು ಮುಗಿದ ಮೇಲೆ ಜೈನಮತೀಯ ಬಚಾವತ್ ಅವರು, "ಕರ್ನಾಟಕದಲ್ಲಿ ಜೈನರಿಗೆ ಬಸವೇಶ್ವರರ ಕಾಲದಿಂದಲೂ ಚಿತ್ರಹಿಂಸೆಯಂತೆ, ನಿಜವೆ?" ಎಂದು ಕೇಳಿದರು. ನಾನು ಈ ವಿಷಯವನ್ನು, ಅಲ್ಲ, ವಿಷವನ್ನು ಇವರ ತಲೆಯಲ್ಲಿ ತುಂಬಿಯೇ ಕಳಿಸಿದ್ದಾರೆ, ಕೃಷ್ಣಾ ನದಿಯ ನೀರಿನಲ್ಲಿ ಸಿಂಹಪಾಲು ಹೊಡೆಯಬೇಕೆಂದು ಹೊಂಚು ಹಾಕಿರುವವರು. ಎಂದು ಮನಗಂಡು ಅದಷ್ಟು ಅದನ್ನು ಇಲ್ಲವಾಗಿಸಲು ಪ್ರಯತ್ನಪಟ್ಟೆ. "ನಿಮಗೆ ಈ ತಪ್ಪು ತಿಳಿವಳಿಕೆಯನ್ನು ಯಾರು ಕೊಟ್ಟರೋ ಕಾಣೆ. ಬಸವ–ಬಿಜ್ಜಳರ ಬಗ್ಗೆ ಇದ್ದ ತಪ್ಪು ತಿಳಿವಳಿಕೆಯೂ ಈಗ ದೂರಾಗಿದೆ. ಬಿಜ್ಜಳ ಜೈನನಲ್ಲವೆಂಬುದು ಸಿದ್ಧವಾಗಿದೆ. ಕರ್ನಾಟಕದಲ್ಲಿ ಜೈನರು ಇಂದಿಗೂ ಎಲ್ಲರಷ್ಟೇ ಸುಖವಾಗಿದ್ದಾರೆ. ಜೈನರು ಬಹು ಸಂಖ್ಯಾತರಾಗಿರುವ ಒಂದೇ ಒಂದು ತಾಲೂಕು–ಚಿಕ್ಕೋಡಿ–ಇದೇ ಜಿಲ್ಲೆಯಲ್ಲಿದೆ. ಜೈನರಾದ ತುಕೋಳರಂಥವರು, ಧರ್ಮಸ್ಥಳದ ರತ್ನವರ್ಮ ಹೆಗ್ಗಡೆಯಂಥವರು ಶ್ರೇಷ್ಠ ಸ್ಥಾನಗಳಲ್ಲಿರುವುದರ ಜೊತೆಗೆ ಸರ್ವಜನಾದರಣೀಯರಾಗಿದ್ದಾರೆ. ಶ್ರವಣಬೆಳುಗೊಳ, ಮೂಡಬಿದರೆ, ಕಾರ್ಕಳಗಳನ್ನು ತಾವು ನೋಡಬೇಕು–ಇಲ್ಲಿ ಜೈನರ ಸ್ಥಾನಮಾನಗಳನ್ನು ತಿಳಿಯಲು," ಇತ್ಯಾದಿಯಾಗಿ ಏನೇನೋ ವಿವರಿಸಿ ಹೇಳಿ ಮರುದಿನ ಅವರನ್ನು ಬೆಳಗಾವಿ ಕೋಟೆಯಲ್ಲಿರುವ ಸುಂದರ ಬಸದಿಗೆ ಕರೆದೊಯ್ದೆ. ಕನ್ನಡದ ಜೈನ ಮಹಾಕವಿಗಳ, ಅವರ ಕೃತಿಗಳ ಬಗ್ಗೆ ಸುದೀರ್ಘ ಟಿಪ್ಪಣಿ ಬರೆದು ಕೊಟ್ಟೆ. ಏನು ಮಾಡಿದರೂ ಅವರ ಮನಸ್ಸಿನಲ್ಲಿದ್ದ ಸಂಶಯ ಸಂಪೂರ್ಣ ಕರಗಿದಂತೆ ಕಾಣಲಿಲ್ಲ. ಅವರಿಂದ ಕರ್ನಾಟಕಕ್ಕೆ ಅನ್ಯಾಯವಾಗಲಿದೆಯೆಂದು ಅಂದೇ ನನ್ನ ಅಂತರಾತ್ಮ ನನಗೆ ಹೇಳಿತು. ಅದು ನಿಜವಾಗಿ ಕನ್ನಡಿಗರು ಕೊನೆಯವರೆಗೆ ಕೃಷ್ಣ ನದಿಯ ನೀರನ್ನು–ಕನ್ನಡ ನಾಡಿನ ಲಕ್ಷಗಟ್ಟಳೆ ಎಕರೆಗಳಿಗೆ ನೀರೊದಗಿಸಿ ಅಲ್ಲಿ ಬಂಗಾರ ಬೆಳೆಯನ್ನು ಬೆಳೆಸಬಹುದಾಗಿದ್ದ ಬಹು ದೊಡ್ಡ ಪ್ರಮಾಣದ ನೀರನ್ನು ಕಳೆದುಕೊಂಡರು! ಆಂಧ್ರರಿಗೋ, ಮಹಾರಾಷ್ಟ್ರೀಯರಿಗೋ ಈ ಅನ್ಯಾಯವಾಗಿದ್ದರೆ ಪ್ರಬಲವಾದ ಪ್ರತಿಭಟನೆ ತೋರಿ ಅದನ್ನು ಸರಿಪಡಿಸಿಕೊಳ್ಳುತ್ತಿದ್ದರು. ಆದರೆ ಕನ್ನಡ ನಾಡಿನ ಅಂದಿನ ಮುಖ್ಯಮಂತ್ರಿಗಳಾಗಿದ್ದ ಡಿ. ದೇವರಾಜ ಅರಸರಾಗಲಿ, ಅವರ ಸಂಪುಟದ ಮಂತ್ರಿಗಳಾಗಲಿ, ಆಗಿನ ಶಾಸನಕಾರರಾಗಲಿ, ವಿರೋಧ ಪಕ್ಷದವರಾಗಲಿ, ಇತರ ಕನ್ನಡ ಮುಖಂಡರಾಗಲಿ ಪಿಟ್ಟೆನ್ನಲಿಲ್ಲ! 'ಮುಖಂಡರೇ ಶಿಖಂಡಿಗಳಾದರೆ ಹಿಂಬಾಲಕರು ಇನ್ನೇನಾಗಬೇಕಯ್ಯ?' ನನ್ನ ಅಂದಾಜಿನ ಪ್ರಕಾರ ಈ ಅನ್ಯಾಯದಿಂದ ಕರ್ನಾಟಕಕ್ಕೆ ಆಚಂದ್ರಾರ್ಕ ಆಗಲಿರುವ ವಾರ್ಷಿಕ ನಷ್ಟ ಒಂದು ಸಾವಿರ ಕೋಟಿ ರೂಪಾಯಿಗಳು! ಈ ಬಗ್ಗೆ ಲೇಖನವೊಂದನ್ನೂ ಬರೆದೆ: "ಕನ್ನಡಿಗರೆ, ನಿಮಗೇಕೆ



ನೀರು? ಇದೆಯಲ್ಲ ಕಣ್ಣೀರು!" ಎಂಬ ತಲೆಕಟ್ಟನಿಟ್ಟು. ಆದರೆ ಯಾರು ಕೇಳುತ್ತಾರೆ ಬಲವಿಲ್ಲದವರ ಬುದ್ಧಿಯ ಮಾತನ್ನು?

ಬಚಾವತರೊಡನೆ ನಡೆದ ಸಂವಾದವನ್ನು ಆಗ ಮಲಪ್ರಭಾ ಯೋಜನೆಯ ಮುಖ್ಯ ಇಂಜಿನಿಯರಾಗಿ ಬಂದಿದ್ದ ಶ್ರೀ ಬಾಳೇಕುಂದ್ರಿಯವರೆದುರು ಪ್ರಸ್ತಾಪಿಸಿದೆ. ಅವರೂ ಚಿಂತಾಕ್ರಾಂತರಾದರು. ಇಬ್ಬರೂ ಚರ್ಚಿಸಿ ಮಲಪ್ರಭಾ ಜಲಾಶಯದ ನಿರ್ಮಾಣವನ್ನು ಬೇಗ ಮುಗಿಸಿ ಅಷ್ಟರ ಮಟ್ಟಿಗಾದರೂ ಕನ್ನಡ ನಾಡಿಗೆ ಆಗಲಿದ್ದ ಹಾನಿಯನ್ನು ಕಡಿಮೆಗೊಳಿಸಬೇಕೆಂದು ತೀರ್ಮಾನಿಸಿದೆವು. ಅತ್ಯಂತ ಆನಂದದೊಡನೆ ಒಪ್ಪಿದೆ.

ಅಂದಿನಿಂದ ಆ ಯೋಜನೆಗೆ ಸಂಬಂಧಿಸಿದ ಎಲ್ಲ ಕೆಲಸಗಳಿಗೆ ಪ್ರಥಮ ಪ್ರಾಶಸ್ತ್ಯವನ್ನು ನೀಡಿದೆ. ರೈತರಿಂದ ಭೂಮಿ ಬಿಡಿಸಿಕೊಟ್ಟೆ; ಮುಳುಗಡೆ ಪ್ರದೇಶದ ಕುಟುಂಬಗಳ ಪುನರ್ವಸತಿಗಾಗಿ ಆ ಸಮಿತಿಯ ಉಪ ಸಮಿತಿಯೊಂದನ್ನು ರಚಿಸುವಂತೆ ಮಾಡಿ ಅದಕ್ಕೆ ನಾನೇ ಅಧ್ಯಕ್ಷನಾದೆ. ನನ್ನೆದುರಿಗೊಂದು ಪ್ಯಾಂಡೋರಾಳ ಪೆಟ್ಟಿಗೆಯನ್ನೇ ತೆರೆದಂತಾಯಿತು. ಪರಿಹಾರ ಧನದ ನಿರ್ಣಯದಲ್ಲಿ, ವಿತರಣೆಯಲ್ಲಿ ಪ್ರಮಾದಗಳು ಘಟಿಸಿದ್ದುವು; ಹುಟ್ಟಿದ ಮನೆ, ಪ್ರಾಣಕ್ಕಿಂತ ಪ್ರಿಯವೆನಿಸಿದ್ದ ಹೊಲ ಮೊದಲಾದುವನ್ನು ತೊರೆದು ಹೊಸದಾಗಿ ರೂಪಿಸಿದ್ದ ನೆಲೆವೀಡುಗಳಿಗೆ ಹಳ್ಳಿಗರು ಹೋಗಬೇಕಾದರೆ ಕನಿಷ್ಠ ಒಂದು ಕುಟೀರವಾದರೂ ಅವರಿಗಾಗಿ ಅಲ್ಲಿ ಸಿದ್ಧವಿರಬೇಡವೆ? ಯಾರೂ ಅದುವರೆಗೆ ಇದನ್ನು ಗಮನಿಸಿರಲಿಲ್ಲ. ಒಂದೇಟಿಗೆ ಗೃಹ ಮಂಡಳಿಯಿಂದ ಎರಡು ಸಾವಿರ ಮನೆಗಳನ್ನು ಮಂಜೂರು ಮಾಡಿಸಿಕೊಂಡು ಬಂದೆ. ಹಗಲಿರುಳು ಆ ಮನೆಗಳ ನಿರ್ಮಾಣ ಕಾರ್ಯ ನಡೆಯಿತು. ಹರಿಜನರಿಗಾಗಿಯೇ ಒಂದು ಸಾವಿರ ಮನೆಗಳನ್ನು ಹಮ್ಮಿಕೊಂಡೆ. ಈ ಹೊಸ ಹಳ್ಳಿಗಳಲ್ಲಿ ಕುಡಿಯುವ ನೀರಿನಿಂದ ಶಾಲೆಯವರೆಗೆ ಎಲ್ಲ ಸೌಕರ್ಯಗಳ ಸೃಷ್ಟಿ ಯುದ್ಧ–ಸ್ತರದಲ್ಲಿ ಪ್ರಾರಂಭವಾಯಿತು. ಆ ಹಳ್ಳಿಗಳಿಗೆ ಕೂಡು ದಾರಿಗಳನ್ನು ನಿರ್ಮಿಸಲಾಯಿತು. ಇವೂ ಸಾಲದಾಗಲೂ ಎರಡು ಸಾವಿರ ತಾತ್ಪೂರ್ತಿಕ ತಂಗುದಾಣಗಳನ್ನು ಕಟ್ಟಿ ನಿಲ್ಲಿಸಲಾಯಿತು.

ಇಷ್ಟಾದರೂ ಮುಳುಗಲಿದ್ದ ಹಳ್ಳಿಗಳ ಬಾಂಧವರಲ್ಲಿ ಮಿಸುಕು ಹುಟ್ಟಲೇ ಇಲ್ಲ. ಅವರಿಗಾರೋ ಹೇಳಿದ್ದರಂತೆ–"ಈ ವರ್ಷವೂ ಜಲಾಶಯ ತುಂಬುವುದಿಲ್ಲ, ಹಳ್ಳಿಗಳು ಮುಳುಗುವುದಿಲ್ಲ, ನಿಶ್ಚಿಂತೆಯಿಂದಿರಿ," ಎಂದು. ಎಂತಲೇ ನಿಶ್ಚಿಂತರಾಗಿದ್ದು ಬಿಟ್ಟಿದ್ದರು ಅವರು. ನಮಗೆ ಅದೇ ವರ್ಷ ಜಲಾಶಯ ತುಂಬಿಸಿ ಅದಷ್ಟು ನೀರನ್ನಾದರೂ ಕೊನೆಯವರೆಗೆ ಕರ್ನಾಟಕದಲ್ಲಿ ಉಳಿಸಬೇಕೆಂಬ ಹಟ, ಅವರಿಗೆ

ಆದಷ್ಟೂ ದಿನ ಇದ್ದಲ್ಲಿಯೇ ಇರಬೇಕೆಂಬ ಛಲ. ಎಷ್ಟು ಹೇಳಿದರೂ ಅವರು ಕಿವಿಯಲ್ಲಿ ಹಾಕಿಕೊಳ್ಳದಿರಲು ನಾನೂ, ಆಗಿನ ಎಸ್.ಪಿ. ಕಾರ್ತಿಕೇಯನ್ ಅವರೂ ಕೂಡಿ ಆ ಕುಟುಂಬಗಳ ಸ್ಥಾನಾಂತರಕ್ಕಾಗಿ ಒಂದು ವಿವರವಾದ ಯೋಜನೆಯನ್ನೇ ಸಿದ್ಧಪಡಿಸಿದೆವು. ಯಾವ ಯಾವ ಹಳ್ಳಿಗೆ ಎಷ್ಟೆಷ್ಟು ಲಾರಿಗಳನ್ನು ಕಳಿಸಬೇಕು, ಅವುಗಳ ಚಾಲಕರಾರು, ಅವುಗಳಿಗೆ ಎಣ್ಣೆ ಹಾಕಿಸುವುದೆಲ್ಲಿ, ಅವುಗಳೊಡನೆ ಹೋಗಬೇಕಾದ ಕಂದಾಯ ಇಲಾಖೆಯ ಕರ್ಮಚಾರಿಗಳಾರು, ಪೋಲೀಸ್ ಇಲಾಖೆಯ ಪೇದೆಗಳಾರು, ಅವರ ಊಟದ ವ್ಯವಸ್ಥೆಯನ್ನು ಯಾರು ಹೇಗೆ ಮಾಡಬೇಕು–ಇತ್ಯಾದಿಯಾಗಿ ಒಂದೊಂದು ವಿವರವನ್ನೂ ಒಳಗೊಂಡ ಆ ಯೋಜನೆ ರಣರಂಗಕ್ಕೆ ಹೊರಟ ಸೈನಿಕರ ಯೋಜನೆಯಂತಿದ್ದಿತು.

ಆ ಮಳೆಗಾಲದ ಮೊದಲ ಮಳೆಯೇ ಮರಮಳೆ! ಕೆಲವು ಕಡೆಗಳಲ್ಲಿ ಸೇತುವೆಗಳು ಮುಳುಗಿ ವಾಹನ ಸಂಚಾರ ಸ್ಥಗಿತಗೊಳ್ಳುವಷ್ಟು ಮಹಾಪೂರ ನದಿಗಳಿಗೆ, ಮಲಪ್ರಭಾ ಜಲಾಶಯಕ್ಕೆ ಹಲವು ಹಳ್ಳಿಗಳು ತುತ್ತಾಗುವ ಹೊತ್ತು ಬಂದಿತೆಂದು ಎಲ್ಲ ಅಧಿಕಾರಿಗಳಿಗೂ ಎಚ್ಚರೋಲೆಗಳನ್ನು ಕಳಿಸಿ ಜಲಾಶಯದ ಕಾಲನಿಗೆ ಓಡಿದೆ. ಅವರ್ಣನೀಯ ರಭಸದೊಡನೆ ನೀರು ನುಗ್ಗತೊಡಗಿತ್ತು ಜಲಾಶಯದ ಭೂಮೋ ದರಕ್ಕೆ. ನೋಡ ನೋಡುತ್ತಲೇ ಒಂದು ಹಳ್ಳಿ ಏರುತ್ತಲಿದ್ದ ನೀರಿನಲ್ಲಿ ಮುಳುಗಿ ಮರೆಯಾಯಿತು! ಆ ಊರಿನವರೆಲ್ಲರನ್ನೂ ಆದಾಗಲೇ ಅವರ ಹೊಸ ಹಳ್ಳಿಗೆ ಅವರ ಸಾಮಾನು ಸರಂಜಾಮುಗಳೊಡನೆ, ಎತ್ತು ಎಮ್ಮೆ ಹಸು ಕರು ಕೋಳಿ ಗೀಳಿಗಳೊಡನೆ, ಒರಳು–ಒನಕೆ–ಬೀಸುಕಲ್ಲು ಕಾಳುಕಡಿ ಅರಿವೆ ಅಂಚಡಿಗಳೊಡನೆ ಸ್ಥಳಾಂತರಿಸಲಾಗಿದ್ದಿತು. ಎಲ್ಲರೂ ತಂತಮ್ಮ ಪಾಲಿನ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಿದ್ದರು. ಒಂದು ವೈಯರ್‌ಲೆಸ್ ಸೆಟ್ಟು ಅಲ್ಲಿಯೇ ಇರಿಸಿಕೊಂಡು ಬಿಟ್ಟಿದ್ದೆ. ಬೆಂಗಳೂರಿನ ವಿಧಾನಸೌಧದ ಎಲ್ಲ ಗಣ್ಯರಿಗೆ ವರದಿ ಕಳಿಸಿದೆ. ಮರುದಿನ ಮುಳುಗಲಿದ್ದ ಹಳ್ಳಿಗಳವರ ಸ್ಥಳಾಂತರವನ್ನೂ ರಾತ್ರೋರಾತ್ರಿ ಮಾಡಿಸಲು ಆ ಹಳ್ಳಿಗಳಿಗೆ ಹೋದೆ.

ಮುಂದಿದ್ದ ಆಪತ್ತು ಸಾಲದೆಂಬಂತೆ ಇನ್ನೊಂದು ವಿಪತ್ತನ್ನು ಕಳಿಸಿತು ಅದೃಶ್ಯ ಶಕ್ತಿ! ಜೋರಾಗಿ ಮಳೆ ಸುರಿಯಲಾರಂಭಿಸಿತು. ಮೊದಲೇ ಎರೆನೆಲ. ಮಳೆಯಿಂದ ಹುದುಲು ಹುಟ್ಟಿ ಲಾರಿಗಳ ಸಾಗಾಟವೂ ಕಷ್ಟಕರವಾಯಿತು. ಅವರ ಎತ್ತು ಕತ್ತೆಗಳನ್ನೇ ಹಿಡಿದು ಅವರ ಸಾಮಾನುಗಳನ್ನು ಅವುಗಳ ಮೇಲೆ ಹೇರಿ ಸ್ಥಳಾಂತರಿಸುವ ಕೆಲಸ ನಡೆಯಿತು. ಅಲ್ಲಲ್ಲಿ ಇದ್ದ ಟ್ರ್ಯಾಕ್ಟರುಗಳನ್ನು ಕೈವಶಪಡಿಸಿಕೊಳ್ಳಲಾಯಿತು. ಸರಕಾರದ ಜೀಪುಗಳು ಶರಣು ಹೊಡೆದು ಬಿಡಲು ನಾವೂ ಟ್ರ್ಯಾಕ್ಟರಿನಲ್ಲಿಯೇ,



ಕಾಲು ನಡಿಗೆಯಲ್ಲಿಯೋ ತಿರುಗಾಡ ಬೇಕಾಯಿತು. ಹೊತ್ತಿಗೆ ಸರಿಯಾಗಿ ಊಟವಿಲ್ಲ, ನಿದ್ರೆಯಿಲ್ಲ, ವಿಶ್ರಾಂತಿಯಿಲ್ಲ. ಆದರೂ ಜನರ, ಅವರ ಪಶು ಸಂಪತ್ತಿನ ಸ್ಥಾನಾಂತರ ಒಂದೂ ಪ್ರಾಣಹಾನಿ ವಿತ್ತಹಾನಿಯಾಗದಂತೆ ಆಗಲೇಬೇಕೆಂಬ ಛಲ ನಮ್ಮ ದಣಿದ ದೇಹಗಳಲ್ಲಿಯೂ ಹೊಸ ಚೈತನ್ಯ ಹೊಮ್ಮಿಸುತ್ತ ಮುಂದೆಳೆಯುತ್ತ ಹೊರಟಿದ್ದಿತು ನಮ್ಮನ್ನು. ಒಂದು ಹಳ್ಳಿ ಅರ್ಧ ಮುಳುಗಿದರೂ ಆ ಊರವರು ಸ್ಥಳಾಂತರಕ್ಕೆ ಸಮ್ಮತಿಸದೆ ಹುಟ್ಟಿ ಬೆಳೆದ ಸ್ಥಳದಲ್ಲಿಯೇ ಜಲಸಮಾಧಿ ಹೊಂದುವೆವೆಂದು ಹಟ ಹಿಡಿದಿರುವರೆಂಬ ವಾರ್ತೆ ಬಂದಿತು. ನಾನೂ ಕಾರ್ತಿಕೇಯನ್ನರೂ ಒಂದು ಟ್ರ್ಯಾಕ್ಟರಿನಲ್ಲಿ ಆ ಹಳ್ಳಿಯತ್ತ ಧಾವಿಸಿದೆವು. ಹಳ್ಳಿಯ ಬಳಿಯ ಹಳ್ಳ ತುಂಬಿ ಹರಿಯುತ್ತಲಿದ್ದಿತು. ಅದರಲ್ಲಿಯೇ ಟ್ರ್ಯಾಕ್ಟರ್ ಬಿಟ್ಟೆವು. ಹಳ್ಳದ ಆಚೆ ದಂಡೆ ಕೈಯಳತೆಯಲ್ಲಿದ್ದಾಗ ಪ್ರವಾಹದ ಸೆಳೆತಕ್ಕೆ ಟ್ರ್ಯಾಕ್ಟರು ಉರುಳಿ ಬಿಟ್ಟಿತು. ಇಬ್ಬರೂ ಹಾರಿ ದಂಡೆ ಸೇರಿದೆವು. ಆ ಟ್ರ್ಯಾಕ್ಟರು ದೂರದವರೆಗೆ ಹರಿದು ಹೋಗಿ ಹೂತುಬಿಟ್ಟಿತು ಮರಳಿನಲ್ಲಿ. ಅದನ್ನು ಹೊರದೆಗೆಯಲು ಬೆಂಗಳೂರಿನಿಂದ ಕ್ರೇನು ಬರಬೇಕಾಯಿತು.

ಆ ಊರವರನ್ನು ಒಪ್ಪಿಸಿ ಅವರ ಸ್ಥಳಾಂತರ ಪ್ರಾರಂಭಿಸುವಷ್ಟರಲ್ಲಿ ಗುರ್ಲ ಹೊಸೂರಿನ ಹತ್ತಿರದ ಚಿದಂಬರೇಶ್ವರ ದೇವಾಲಯದೊಳಕ್ಕೆ ನೀರು ನುಗ್ಗಿದ ವರ್ತಮಾನ ಬಂದಿತು. ಮುಳುಗಲಿದ್ದ ಆ ಪ್ರಸಿದ್ಧ ದೇವಾಲಯಕ್ಕೆ ಪ್ರತಿಯಾಗಿ ಸೌಂದತ್ತಿಯಲ್ಲಿ ಬೇರೊಂದು ದೇವಾಲಯವನ್ನು ಅದರಂತೆಯೇ ಕಟ್ಟಿಸಬೇಕೆಂದು ನಾನು ಆರು ತಿಂಗಳುಗಳ ಹಿಂದೆಯೇ ಮಾಡಿದ್ದ ಪ್ರಯತ್ನಗಳೆಲ್ಲ ವಿಫಲವಾಗಿದ್ದುವು–ಅರ್ಚಕರ, ಭಕ್ತಾದಿಗಳ ಐಕಮತ್ಯದ ಅಭಾವದಿಂದ. ಈಗ ದೇಗುಲವಂತೂ ಮುಳುಗುವುದು ನಿಶ್ಚಿತ; ಕನಿಷ್ಠ ಅಲ್ಲಿಯ ಶಿವಲಿಂಗವನ್ನಾದರೂ ಉಳಿಸಿದರೆ ಮುಂದೆ ಎಂದಾದರೂ ಮಂದಿರ ಕಟ್ಟಬಹುದೆಂಬ ನೆನೆದು, ಧೈರ್ಯ ಮಾಡಿ ದೇಗುಲದೊಳಕ್ಕೆ ನುಗ್ಗಿದೆ. ಗರ್ಭಗುಡಿಯಲ್ಲಿಯೂ ನೀರು ಏರತೊಡಗಿದ್ದಿತು. ಶಿವಲಿಂಗ ನೀರಿನಲ್ಲಿಯೇ ನಿಂತಿದ್ದಿತು. ನಾಲ್ವರ ಸಹಾಯದೊಡನೆ ಶಿವಲಿಂಗವನ್ನೆತ್ತಿ ತಂದು ದೋಣಿಯಲ್ಲಿರಿಸಿದೆವು. ನಾವೂ ಕುಳಿತು ದಂಡೆ ತಲುಪುವಷ್ಟರಲ್ಲಿ ದೇವಾಲಯದ ಒಂದು ಭಾಗ ಕಳಚಿ ಭೋರ್ಗರೆಯುತ್ತಲಿದ್ದ ನೀರಿಗೆ ನೈವೇದ್ಯವಾಯಿತು! ನಾವು ಅಲ್ಲಿಂದ ಪಾರಾಗುವುದು ಐದೇ ನಿಮಿಷ ತಡವಾಗಿದ್ದರೂ ನಮಗೂ ಅಲ್ಲಿಯೇ ಸಮಾಧಿಯಾಗುತ್ತಿದ್ದಿತೋ ಏನೋ!

ಒಟ್ಟು ಹದಿಮೂರು ಹಳ್ಳಿಗಳು–ಹಡಗಲಿ, ಸಿಂಗಾರಕೊಪ್ಪ, ಗುರ್ಲ ಹೊಸೂರು, ನಡುವಿನಹಳ್ಳಿ, ಬದಲಿ, ಕೊಟ್ರಾಲ್, ಮತ್ತೊಳ್ಳಿ, ಹಿಟ್ಟಣಗಿ, ಸುತಗಟ್ಟಿ, ಕುಸಲಾಪುರ,

ಯಾನಗಿ, ಅಸುಂಡಿ, ಮಳ್ಳೂರುಗಳು ಮುಳುಗಿ ಮಾಯವಾದುವು ಜಲಾಶಯದ ಜಠರದಲ್ಲಿ! ಒಂದೊಂದು ಹಳ್ಳಿ ಮುಳುಗಿದಾಗಲೂ ಒಂದೊಂದು ವೈಯರ್‌ಲೆಸ್ ವರದಿ ಹೋಯಿತು ವಿಧಾನಸೌಧದ ದೇವತೆಗಳಿಗೆ. ಒಂದಕ್ಕೂ ಮುಟ್ಟಿತೆಂಬ ಮೂರಕ್ಕರದ ಉತ್ತರವೂ ಬರಲಿಲ್ಲ. ಬೆಳಗಾವಿ ಜಿಲ್ಲೆಯಲ್ಲಿ ಹದಿನೆಂಟು ಎಂ.ಎಲ್.ಎ.ಗಳು, ನಾಲ್ಕಾರು ಎಂ.ಎಲ್.ಸಿ. ಗಳು–ಯಾರೊಬ್ಬರೂ ಅತ್ತ ಹಣಿಕಿ ನೋಡಲಿಲ್ಲ. ಪುಣ್ಯಕ್ಕೆ ಕಂದಾಯ, ಪೋಲೀಸ್, ಲೋಕೋಪಯೋಗಿ, ಸಹಕಾರ, ಶಿಕ್ಷಣ ಇಲಾಖೆಗಳ ಅಧಿಕಾರಿಗಳು, ಕರ್ಮಚಾರಿಗಳು ನಿಷ್ಠೆ ದಕ್ಷತೆ ಶ್ರದ್ಧೆ ಸಾಹಸಗಳೊಡನೆ ಆಹೋರಾತ್ರಿ ದುಡಿದರೆಂದು ಸುಮಾರು ನಾಲ್ವತ್ತು ಸಾವಿರ ಕುಟುಂಬಗಳನ್ನು ಅವರವರ ಚರಾಸ್ತಿಗಳೊಡನೆ ಹದಿಮೂರು ಹೊಸ ಹಳ್ಳಿಗಳಿಗೆ ಯಾವುದೇ ಪ್ರಕಾರದ ಅನಾಹುತ ನಡೆಯದಂತೆ ಸ್ಥಳಾಂತರಿಸಲಾಯಿತು. ಬೆಂಗಳೂರಿನಿಂದ ಯಾರೂ ಬರದಿದ್ದರೂ ಹುಬ್ಬಳ್ಳಿ ಧಾರವಾಡಗಳಿಂದ ಪತ್ರಿಕೆಗಳ ಮಿತ್ರರು ಬಂದು ಮಾಡಿದ ವ್ಯವಸ್ಥೆಗಳನ್ನೆಲ್ಲ ನೋಡಿ ಬೆರಗಾಗುವುದಲ್ಲದೆ ವಿಶೇಷ ವರದಿಗಳನ್ನು ತಂತಮ್ಮ ಪತ್ರಿಕೆಗಳಿಗೆ ಕಳಿಸಿ ಉಪಕರಿಸಿದರು. ಮೇಲಿನವರಿಂದ ಮೆಚ್ಚೋಲೆ ಯಾವುದೂ ಬರದಿರಲು ನಾನೂ ಕಾರ್ತಿಕೇಯನ್ನರೂ ಒಬ್ಬರಿಗೊಬ್ಬರು ಮೆಚ್ಚೋಲೆ ಕೊಟ್ಟು ಕೊಂಡೆವು! ಮುಂದೆ ಎಲ್ಲ ಮುಗಿದು ಎಲ್ಲರೂ ತಂತಮ್ಮ ಹಳ್ಳಿಗಳಿಗೆ ನೆಲೆಯೂರಿದ ಮೇಲೆ ಆಗ ಕೇಂದ್ರ ಸಚಿವ ಸಂಪುಟದಲ್ಲಿದ್ದ ಕರ್ನಾಟಕದ ಮಂತ್ರಿಣಿಯವರೊಬ್ಬರು ಮೆತ್ತಗೆ ಆ ಹೊಸ ಹಳ್ಳಿಗಳಿಗೆ ಭೇಟಿ ಕೊಟ್ಟು, "ನೋಡ್ರೆಪಾ, ನೋಡ್ರೆವಾ, ನಾವು ನಿಮಗಾಗಿ ಎಷ್ಟು ಚೆನ್ನಾಗಿ ವ್ಯವಸ್ಥೆ ಮಾಡಿದ್ದೇವೆ," ಎಂದು ಬಣ್ಣದ ಮಾತುಗಳನ್ನಾಡಿ, ಮಾಡಿದವರೆಲ್ಲರ ಶ್ರೇಯಸ್ಸನ್ನೂ ತಮ್ಮೊಬ್ಬರ ಉಡಿಯಲ್ಲಿಯೇ ಹಾಕಿಕೊಂಡು ಹೋದರಂತೆ! "ಎಲ್ಲಿ ಏನೇ ಒಳ್ಳೆಯದು ನಡೆದಿರಲಿ. ಅದು ನಾವು ಮಾಡಿದುದೇ; ಎಲ್ಲಿ ಏನೇ ಕೆಟ್ಟುದು ನಡೆದಿರಲಿ, ಅದು ನಮ್ಮ ವಿರೋಧಿಗಳ ಕೈವಾಡದಿಂದಾದುದೇ,'' ಎಂಬುದೇ ರಾಜಕಾರಣಿಗಳ ಬ್ರಹ್ಮಸೂತ್ರವಲ್ಲವೆ?

ಸ್ಥಳಾಂತರದ ಸಮಸ್ಯೆಯೇನೋ ಸುಗುಮವಾಗಿ ಮುಗಿಯಿತು; ಆದರೆ ವೃಷ್ಟಿರಾಜ ಸೃಷ್ಟಿಸಿದ್ದ ಸಮಸ್ಯೆಗಳು ಮೊದಲ ದಿನದಿಂದಲೇ ಮೋರೆ ಚಾಚಿದುವು. ಹೊಸ ಹಳ್ಳಿಗಳಿಗೆ ಹೋದವರು ಒಲೆ ಹೊತ್ತಿಸುವಂತಿರಲಿಲ್ಲ. ಒಲೆಗಳು ಒದ್ದೆಯಾಗಿದ್ದುವು. ಅಲ್ಲಿಗಿನ್ನೂ ಕಿರಾಣಿ ಅಂಗಡಿಗಳು ಹೋಗಿರಲಿಲ್ಲ. ಇದ್ದ ಕಡ್ಡಿ ಪೆಟ್ಟಿಗೆಗಳೂ ತೊಯ್ದು ಬಿಟ್ಟಿದ್ದುವು. ಎಲ್ಲರೂ ಏಕಾದಶಿ ಮಾಡುವ ಪರಿಸ್ಥಿತಿ. ಕೂಡಲೇ ಸುತ್ತಲಿನ ಹಳ್ಳಿಗಳಿಗೆ ಹದಿಮೂರು ಲಾರಿಗಳನ್ನು ಓಡಿಸಿದೆವು. ಹಳ್ಳಿಗರ



ಔದಾರ್ಯವೇ ಔದಾರ್ಯ. ಒಂದೆರಡು ಘಂಟೆಗಳಲ್ಲಿಯೇ ಎಲ್ಲ ಲಾರಿಗಳೂ ರೊಟ್ಟಿ ಚಟ್ನಿ ಪಲ್ಯ ಅನ್ನ ಸಾರುಗಳನ್ನು ತುಂಬಿಕೊಂಡು ಬಂದುವು. ಇದರಂತೆ ಒಂದು ವಾರ ಸುತ್ತಲಿನ ಹಳ್ಳಿಯರಿತ್ತ ಆಹಾರವೇ ಆಧಾರವಾಯಿತು ಅವರಿಗೆ. ಅಷ್ಟರಲ್ಲಿ ನಮ್ಮ ಮೊರೆಯನ್ನಾಲಿಸಿ ಬೆಳಗಾವಿಯ ವಿದ್ಯುಚ್ಚಾಲಿತ ಮಗ್ಗಗಳ ಒಡೆಯರೂ, ಬಟ್ಟೆ ವ್ಯಾಪಾರಿಗಳೂ ಸಾವಿರ ಸಂಖ್ಯೆಯಲ್ಲಿ ಹೊಸ ಸೀರೆ, ರವಿಕೆ, ಪಂಚೆ, ಅಂಗಿ, ಕಂಬಳಿ, ಮಕ್ಕಳ ಬಟ್ಟೆಗಳನ್ನು ಕಳಿಸಿದ್ದರು; ಕಾರಖಾನೆಗಳವರು ಸಾವಿರಾರು ಮೂಟೆ ಜೋಳವನ್ನು ಕಳಿಸಿದ್ದರು. ಇವುಗಳನ್ನು ಮನೆಮನೆಗೆ ಹೋಗಿ ಸಂಗ್ರಹಿಸುವಲ್ಲಿ ಹಗಲಿರುಳು ದುಡಿದ ಗಿರಿಜಾದೇವಿ ಪುರಾಣಿಕ, ಕಲಾದೇವಿ ಕಾರ್ತಿಕೇಯನ್ನರೇ ಹದಿಮೂರು ಹೊಸ ಹಳ್ಳಿಗಳಿಗೆ ಹೋಗಿ ಅವುಗಳನ್ನು ಹಂಚಿ ಬಂದರು. ಪ್ರತಿಯೊಂದು ಕುಟುಂಬಕ್ಕೆ ಎರಡು ವಾರಗಳವರೆಗೆ ಸಾಲುವಷ್ಟು ಜೋಳ, ಒಂದು ಹೊಸ ಕಂಬಳಿ, ಹೊಸ ಸೀರೆ, ಹೊಸ ಪಂಚೆ, ಮಕ್ಕಳ ಬಟ್ಟೆ ಮೊದಲಾದುವನ್ನು ಮುಟ್ಟಿಸಿದರು. ಅವರೆಲ್ಲರಿಗೆ ಹೊಸ ಜೀವ ಬಂದ ಹಾಗನಿಸಿತು.

ಮುಂದೆ ಒಂದು ವಾರದಲ್ಲಿಯೇ ಎಲ್ಲ ಹಳ್ಳಿಗಳಲ್ಲಿ ಶಾಲೆಗಳನ್ನು ಆರಂಭಿಸಿದೆವು, ಅಂಗಡಿಗಳನ್ನು ತೆರೆಸಿದೆವು, ಸಂಚಾರೀ ಆಸ್ಪತ್ರೆಯೊಂದರ ಮೂಲಕ ಬೇನಿಗರ ಚಿಕಿತ್ಸೆಯ ವ್ಯವಸ್ಥೆ ಮಾಡಿದೆವು, ಎಲ್ಲ ಹಳ್ಳಿಗಳಿಗೂ ಬಸ್ಸು ಹೋಗಿ ಬರುವಂತೆ ಮಾಡಿದೆವು, ಅಂಚೆಯ ವ್ಯವಸ್ಥೆ ಮಾಡಿದೆವು, ಇನ್ನೂ ಏನೇನು ಅಗತ್ಯವೆನಿಸಿತೋ ಅದೆಲ್ಲವನ್ನೂ ಮಾಡಿ ಒಂದು ತಿಂಗಳಾದ ಮೇಲೆ ನಾನು ಬೆಳಗಾವಿಗೆ ಹಿಂದಿರುಗಿದೆ. ಅಲ್ಲಿಯ ಅನೇಕ ಗಣ್ಯರಿಗೆ ಅದೊಂದು ಮಹಾಪೂರದಿಂದಾದ ಅಲ್ಪಸ್ವಲ್ಪ ಅನಾಹುತದ ವಿಷಯವಾಗಿ ತೋರಿದ್ದಿತಾಗಲಿ ಮಲಪ್ರಭಾ ಜಲಾಶಯ ತುಂಬಿ ಹದಿಮೂರು ಹಳ್ಳಿಗಳು ಮುಳುಗಿದ ವಿಷಯವಾಗಲೀ, ನಾಲ್ವತ್ತು ಸಾವಿರ ಕುಟುಂಬಗಳ ಸ್ಥಳಾಂತರ ಹಾಗೂ ಪುನರ್ವಸತಿಯ ವಿಷಯವಾಗಲೀ ತಿಳಿದಿರಲೇ ಇಲ್ಲ! ನನಗೂ ಬಾಳೇಕುಂದ್ರಿಯವರಿಗೂ ಹಿಗ್ಗೋ ಹಿಗ್ಗು–ಬಚಾವತ್ ಅವಾರ್ಡು ಬರುವುದರೊಳಗಾಗಿ ಇಷ್ಟೊಂದು ನೀರನ್ನೂ ಕಡೆಯವರೆಗೆ ಕರ್ನಾಟಕದಲ್ಲಿ ಉಳಿಸಲು ಸಮರ್ಥರಾದೆವೆಂದು. ಕೆಲವು ದಿನಗಳಲ್ಲಿಯೇ ಆ ಜಲಾಶಯವೊಂದು ಪ್ರವಾಸೀ ಕೇಂದ್ರವಾಗಿ ಬಿಟ್ಟಿತು. ನಿತ್ಯ ನೂರಾರು ಜನರು ನೋಡಲು ಬರತೊಡಗಿದರು. ಅದರ ಪ್ರವರ್ತಕರಾದ ನಿಜಲಿಂಗಪ್ಪನವರೂ ಬಂದು ಹೋದರಂತೆ. ಅವರಿಂದ ಉಪಕೃತರಾದವರು ನೂರಾರು ಜನ ಸವದತ್ತಿಯಲ್ಲಿದ್ದರೂ ಯಾರೂ ಅವರನ್ನು ಕಣ್ಣೆತ್ತಿ ಕೂಡ ನೋಡಲಿಲ್ಲವಂತೆ! ಕೃತಜ್ಞತೆಯೊಂದು ಸದ್ಗುಣವಾಗಿಯೇ ಉಳಿದಿಲ್ಲ–ಈ ದೇಶದಲ್ಲಿ!

**ಬಾಂಗ್ಲಾ ಯುದ್ಧ :**

ರಾಯ್ಚೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷನಾಗಿ ರಾಯ್ಚೂರಿಗೆ ಹೋಗಿದ್ದೆ. ಅದೇ ಅಧ್ಯಕ್ಷ ಭಾಷಣ ಮುಗಿಸಿದ್ದೆ. ಬೆಳಗಾವಿಯಿಂದ ವಿಭಾಗಾಧಿಕಾರಿಗಳ ಕರೆ ಬಂದಿತು–'ಬಾಂಗ್ಲಾಯುದ್ಧ ಪ್ರಾರಂಭವಾಗಿದೆ, ಬೇಗ ಬನ್ನಿ' ಎಂದು. ಕೂಡಲೇ ಬೆಳಗಾವಿಗೆ ಧಾವಿಸಿದೆ. ಅಂದೇ ರಾತ್ರಿ ಯುದ್ಧದ ವಿಷಯ ಘೋಷಿಸಿದೆ. ಬೆಳಗಾವಿಯ ಸೇನಾ ಕೇಂದ್ರದವರು ಬೇಡಿದ ಆಹಾರ ಧಾನ್ಯಗಳನ್ನೂ, ಟ್ರಕ್ಕುಗಳನ್ನೂ ಒದಗಿಸಿದೆ. ಯುದ್ಧ ಸನ್ನದ್ಧತಿಗೆ ಅದ್ಯತೆ ಬಂದಿತು. ಬೆಳಗಾವಿಯಲ್ಲಿ ಒಂದೇ ಪಾದಯಾತ್ರೆಯಿಂದ ರಕ್ಷಣಾ ನಿಧಿಗೆ ಇಪ್ಪತ್ತು ಲಕ್ಷ, ಸಣ್ಣ ಉಳಿತಾಯ ಯೋಜನೆಗಳಿಗೆ ಮೂವತ್ತು ಲಕ್ಷ ರೂಪಾಯಿ ಸಂಗ್ರಹಿಸಿದೆ. ಮತ್ತೆ ರಕ್ಷಣಾ ಯಾಗ ಪ್ರಾರಂಭವಾಯಿತು. ಒಟ್ಟು ಮೂವತ್ತು ಲಕ್ಷ ರೂಪಾಯಿಗಳನ್ನು ರಕ್ಷಣಾ ನಿಧಿಗೂ, ನಾಲ್ವತ್ತು ಲಕ್ಷ ರೂಪಾಯಿಗಳನ್ನು ಸಣ್ಣ ಉಳಿತಾಯ ಯೋಜನೆಗೂ ನೀಡಿ ಬೆಳಗಾವ್ ಜಿಲ್ಲೆ ರಾಜ್ಯದಲ್ಲಿ ಪ್ರಥಮ ಸ್ಥಾನ ಪಡೆಯಿತು.

ಯುದ್ಧದಲ್ಲಿ ಭಾರತಕ್ಕೆ ವಿಜಯ ದೊರೆತ ಸುದ್ದಿಯನ್ನು ಬೆಳಗಾವಿಗೆ ಹಿಂದಿರುಗುತ್ತಲಿದ್ದಾಗ ದಾರಿಯಲ್ಲಿ ಟ್ರಾನ್ಸಿಸ್ಟರ್ ಮೂಲಕ ಕೇಳಿದೆ. ಕಾರು ನಿಲ್ಲಿಸಿ ಕುಣಿದಾಡಿದೆ. ಬೆಳಗಾವಿ ತಲುಪಿದಾಗ ಸ್ವಯಂ ಸ್ಫೂರ್ತಿ ವಿಜಯೋತ್ಸವ ದೃಶ್ಯಗಳು ಕಣ್ಣಿಗೆ ಬಿದ್ದುವು. ಗಡಿಯ ಜಗಳ ನುಡಿಯ ಜಗಳಗಳೆಲ್ಲ ಆಗಿನ ಮಟ್ಟಿಗೆ ಮರೆತು ಹೋಗಿ ಕನ್ನಡಿಗರೂ ಮರಾಠಿಗರೂ ಕೂಡಿಯೇ ನಲಿದು ನರ್ತಿಸತ್ತಲಿದ್ದರು. ಆದರೆ ಈ ಉಲ್ಲಾಸ ವ್ಯಥೆಯಾಗಿ ಪರಿಣಮಿಸಲು ಬಹಳ ದಿನ ಬೇಕಾಗಲಿಲ್ಲ. ಯದ್ಧದಲ್ಲಿ ಮಡಿದ, ಗಾಯಗೊಂಡ ಬೆಳಗಾವಿ ಜಿಲ್ಲೆಯ ವೀರ ಯೋಧರ ವಿವರಗಳು ಬರತೊಡಗಿದುವು. ಕೊಡಗಿನಂತೆಯೇ ವೀರಭೂಮಿಯಾದ ಆ ಜಿಲ್ಲೆಯ ಇಪ್ಪತ್ತೆರಡು ಜನ ಕನ್ನಡವೀರರು ಯುದ್ಧರಂಗದಲ್ಲಿ ಮಡಿದಿದ್ದರು. ಐವತ್ತು ನಾಲ್ಕು ಜನ ಶೂರ ಕನ್ನಡಿಗರು ಗಾಯಗೊಂಡು ಬಂದಿದ್ದರು: ನಾಪತ್ತೆಯಾದವರು ಸೇರಿ ನೂರಕ್ಕೂ ಮೇಲ್ಪಟ್ಟು ಕುಟುಂಬಗಳು ಶೋಕಾಕುಲವಾಗಿದ್ದುವು. ಆ ಕುಟುಂಬಗಳ ಕಲ್ಯಾಣಕ್ಕಾಗಿ ಕಂಕಣ ಕಟ್ಟಿದೆ. ಜಿಲ್ಲೆಗೆ ಒಂದು ವೀರ ಚಕ್ರವನ್ನೂ, ನಾಲ್ಕು ಸೇವಾ ಪದಕಗಳನ್ನೂ, ಎರಡು ವಿಶೇಷ ಸ್ಮರಣೆಗಳನ್ನೂ ದೊರಕಿಸಿದ್ದರು ಆ ಮಡಿದ ಹಾಗೂ ಗಾಯಗೊಂಡ ಧೀರ ಯೋಧರು. ಇಂಥವರ ಕುಟುಂಬಗಳಿಗೆ ಏನು ಮಾಡಿದರೂ ಕಡಿಮೆಯೇ ಎಂದೆನಿಸಿತು ನನಗೆ.

ಮಡಿದ ಯೋಧರ ಇಪ್ಪತ್ತೆರಡು ಕುಟುಂಬಗಳಿಗೂ ತಲಾ ಐದು ಸಾವಿರ, ಗಾಯಗೊಂಡವರ ಐವತ್ತು ನಾಲ್ಕು ಕುಟುಂಬಗಳವರಿಗೂ ತಲಾ ಒಂದು ಸಾವಿರ,



ನಾಪತ್ತೆಯಾದವರಿಗೆ ತಲಾ ಒಂದು ಸಾವಿರ ನಗದು ಹಣ ನೀಡಲಾಯಿತು. ಸರಕಾರ ನೀಡಿದ ಈ ಪರಿಹಾರಕ್ಕೆ ಪೂರಕವಾಗಿ ಮಡಿದವರ ಇಪ್ಪತ್ತೆರಡು ಕುಟುಂಬಗಳಿಗೂ ಎಸ್.ಪಿ. ಬಂಗ್ಲೆಯ ಎದುರಿಗೆ ಒಂದೊಂದು ಮನೆ ಕಟ್ಟಿಸಿಕೊಡಲಾಯಿತು. ಅದೊಂದು ಸುಂದರ ಸೈನಿಕ ಕಾಲನಿಯಾಗಿ ಇಂದಿಗೂ ಅಖಿಲ ಭಾರತದಲ್ಲಿಯೇ ಎದ್ದು ಕಾಣುವ ಪರಿಹಾರ ಕಾರ್ಯವಾಗಿ ಕಂಗೊಳಿಸುತ್ತಿದೆ. ಇದಲ್ಲದೆ ಆ ಕುಟುಂಬದಲ್ಲಿ ಅರ್ಹತೆಯುಳ್ಳವರಿಗೆ ಉದ್ಯೋಗವನ್ನೋ, ಆಟೋರಿಕ್ಷಾ ಪರ್ಮಿಟ್ಟನ್ನೋ, ಸಾಲವನ್ನೋ ಕೊಟ್ಟು ಅವರು ಗಳಿಸುವವರಾಗುವಂತೆ ಮಾಡಲಾಯಿತು. ಅಂಗವಿಕಲರಾದವರಿಗೆ ಇಂಡಿಯಾ ಟೊಬೆಕೋ ಕಂಪನಿಯವರು ಒಂದು ಸಣ್ಣ ಅಂಗಡಿ ಸ್ಟ್ಯಾಂಡನ್ನೂ ಹತ್ತು ಸಾವಿರ ಸಿಗರೇಟುಗಳನ್ನೂ ಧರ್ಮಾರ್ಥ ಕೊಟ್ಟು ಅವರನ್ನು ಉದ್ಯೋಗಕ್ಕೆ ಹಚ್ಚಿದರು. ಪರಾಕ್ರಮಕ್ಕಾಗಿ ಪ್ರಶಸ್ತಿ ಪಡೆದವರಿಗೆ ಒಟ್ಟು ಹದಿನಾಲ್ಕು ಸಾವಿರ ಅತಿರಿಕ್ತ ಸಹಾಯ ಧನವನ್ನು ಹಂಚಲಾಯಿತು. ಇದಲ್ಲದೆ ಹಳ್ಳಿಗಳಲ್ಲಿ ವಾಸಿಸುವವರಿಗೆ ಭೂಮಿ, ನಿವೇಶನ ಇತ್ಯಾದಿಗಳನ್ನು ಉಚಿತವಾಗಿ ಹಂಚಿ ಅವರಿಗೆ ಸಗೌರವ ಜೀವಿಸಲು ಸಹಾಯ ಮಾಡಲಾಯಿತು.

ಅಥಣಿ ಬೆಳಗಾವಿಗಳ ಸೈನಿಕರ ಮಕ್ಕಳ ವಿದ್ಯಾರ್ಥಿ ನಿಲಯಗಳನ್ನು ಅಭಿವೃದ್ಧಿಗೊಳಿಸಲಾಯಿತು. ಬೆಳಗಾವಿ ಚಿಕ್ಕೋಡಿಗಳಲ್ಲಿ ಎರಡು ಮೇಳಗಳನ್ನು ಸಂಘಟಿಸಿ ಎರಡೂ ಮೇಳಗಳಿಗೆ ಪಾಕಿಸ್ತಾನದೊಡನೆ ನಡೆದ ಎರಡೂ ಯುದ್ಧಗಳಲ್ಲಿ ಮಡಿದಿದ್ದ, ಗಾಯಗೊಂಡಿದ್ದ ಯೋಧರ ಕುಟುಂಬದವರನ್ನು ಕರೆಸಿ ಕಾಣಿಕೆ, ಉಡುಗೊರೆಗಳನ್ನು ಕೊಟ್ಟು ಸತ್ಕರಿಸಲಾಯಿತು. ಬೆಳಗಾವಿಯಲ್ಲಿ ನಡೆದ ಮೇಳ ಅವಿಸ್ಮರಣೀಯವಾದುದು. ಸಾವಿರಾರು ಸೈನಿಕ ಕುಟುಂಬ ವರ್ಗದವರು ಸೇರಿದ್ದರು. ಮೇಳಕ್ಕೆ ಮುಖ್ಯ ಅತಿಥಿಯನ್ನಾಗಿ ಜನರಲ್ ಕುಮಾರ್‌ಮಂಗಲಮ್ ಅವರನ್ನೇ ಕರೆದಿದ್ದೆ. ಅವರು ಸೈನಿಕ ಕುಟುಂಬಗಳಿಗೆ ದಾನಿಗಳಿಂದ ಕಾಣಿಕೆಯಾಗಿ ಬಂದಿದ್ದ ಮೂವತ್ತು ಮೂರು ಹೊಲಿಗೆ ಯಂತ್ರಗಳನ್ನೂ, ಸಾವಿರಾರೂ ಸೀರೆ, ಪಂಜೆ, ಹಚ್ಚಡ, ಕಂಬಳಿ ಮೊದಲಾದುವನ್ನೂ ಹಂಚಿ, ಸೈನಿಕರ ಬಗ್ಗೆ ಬೆಳಗಾವಿಯ ನಾಗರಿಕರು ತೋರಿದ ಅಮಿತವಾದ ಔದಾರ್ಯವನ್ನು ನೋಡಿ ಬೆರಗಾದರು. ಬೆಳಗಾವಿಯ ದಾನಿಗಳನ್ನು ಮುಕ್ತ ಕಂಠದಿಂದ ಹೊಗಳಿದರು. ಬೆಳಗಾವಿಯ ಹೋಟೆಲುಗಳ ಒಡೆಯರೆಲ್ಲ ಒಂದುಗೂಡಿ ಬಂದವರಿಗೆಲ್ಲ ಸುಗ್ರಾಸ ಭೋಜನ ಮಾಡಿಸಿದರು. ಜನರಲ್ ಕುಮಾರಮಂಗಲಮ್ ಹಾಗೂ ಇತರ ಸೇನಾಧಿಕಾರಿಗಳೂ, ಸ್ಥಳೀಯ ಅಧಿಕಾರಿಗಳೂ, ಗಣ್ಯ ನಾಗರಿಕರೂ ಸೈನಿಕರೊಡನೆ ಬೆರೆತು ಭೋಜನ ಮಾಡಿದರು. ಚಿಕ್ಕೋಡಿಯ ಮೇಳದಲ್ಲಿಯೂ ಇದೆಲ್ಲ ನಡೆದು ಮಾಜಿ ಸೈನಿಕರೆಲ್ಲ

ಮುದಿತಮನರಾದರು. ಕರ್ನಾಟಕದ ರಾಜ್ಯಪಾಲರಿಂದ, ದೆಹಲಿಯ ಸೈನಿಕ ಕೇಂದ್ರ ಕಾರ್ಯಾಲಯದಿಂದ ಬೆಳಗಾವಿ ಜಿಲ್ಲೆಯಲ್ಲಿ ಮಾಡಲಾದ ಈ ಕಾರ್ಯಗಳ ಬಗ್ಗೆ ಪ್ರಶಂಸೆಯ ಪತ್ರಗಳು ಬಂದುವು. ಕೊಡಗು ಜಿಲ್ಲೆಯಲ್ಲಿ, ಬೆಳಗಾವಿ ಜಿಲ್ಲೆಯಲ್ಲಿ ಮಡಿದ, ಗಾಯಗೊಂಡ, ಅಂಗವಿಕಲರಾದ ಸೈನಿಕರ ಕುಟುಂಬಗಳಿಗಾಗಿ ನಾನು ಮಾಡಿದ ಕಾರ್ಯ ನನಗೊಂದು ವಿಧದ ಧನ್ಯತೆಯನ್ನು ನೀಡಿದ ಕಾರ್ಯವಾಗಿದೆ.

ಬೆಳಗಾವಿ ಜಿಲ್ಲೆಯಲ್ಲಿ ನಾನಿದ್ದುದೇ ಎರಡೂಕಾಲು ವರ್ಷ. ಈ ಅಲ್ಪಾವಧಿಯಲ್ಲಿ 1971ರ ಜನಗಣತಿ, ಎರಡು ಸಾರ್ವತ್ರಿಕ ಚುನಾವಣೆಗಳು, ರಾಷ್ಟ್ರಾಧ್ಯಕ್ಷರ ಹಾಗೂ ಪ್ರಧಾನಮಂತ್ರಿಗಳ ಭೇಟಿ, ಬಂಗ್ಲಾಯುದ್ಧ, ಎರಡು ಬರಗಾಲಗಳು, ಮಲಪ್ರಭಾ ಜಲಾಶಯದಲ್ಲಿ ಮುಳುಗಡೆ ಹೊಂದಿದ ಹದಿಮೂರು ಹಳ್ಳಿಗಳ ಕುಟುಂಬಗಳ ಸ್ಥಳಾಂತರ, ಅವರ ಪುನರ್ವಸತಿ, ಮಡಿದ ಹಾಗೂ ಗಾಯಗೊಂಡ ಯೋಧರ ಪರಿವಾರದವರ ಪುನರ್ವಸತಿ, ರಕ್ಷಣಾನಿಧಿಯ ಸಂಗ್ರಹ, ಮಹಾಜನ ಆಯೋಗದ ವರದಿಯನ್ನು ಲೋಕಸಭೆಯಲ್ಲಿ ಮಂಡಿಸಿದಾಗ ಉಂಟಾದ ಪ್ರಕ್ಷುಬ್ಧ–ಪರಿಸ್ಥಿತಿ–ಹೀಗೆ ಹಲವು ಹನ್ನೆರಡು ಸವಾಲುಗಳನ್ನು ಎದುರಿಸಬೇಕಾಯಿತು ನಾನು. ಎರಡನೆ ಸಲ ಬಂದ ಬರಗಾಲ ಬಹಳ ಭೀಕರವಾದುದಾಗಿದ್ದಿತು. ಬರಗಾಲ ಕಾಮಗಾರಿಗಳ ಕಡತವನ್ನು ನನ್ನ ಬಳಿಯಲ್ಲಿಯೇ ಇರಿಸಿಕೊಂಡು, ಸಂತ್ರಸ್ತ ಹಳ್ಳಿಗರು ನನ್ನವರೆಗೆ ಬರುವುದನ್ನು ಕಾಯದೆ ಸಂಬಂಧಿಸಿದ ಅಸಿಸ್ಟಂಟ್ ಇಂಜಿನಿಯರ್, ತಹಸೀಲ್ದಾರ ಹಾಗೂ ಬಿ.ಡಿ.ಓ. ಅವರನ್ನು ಜೊತೆಗೆ ಕರೆದುಕೊಂಡು ಎಲ್ಲ ಕ್ಷಾಮ ಪೀಡಿತ ಗ್ರಾಮಗಳಿಗೆ ಭೇಟಿ ಕೊಟ್ಟೆ. ಅಲ್ಲಿ ಕ್ಷಾಮ ಪರಿಸ್ಥಿತಿಯಿದ್ದುದು ಮನವರಿಕೆಯಾಗುತ್ತಲೆ ಸೂಕ್ತ ಬರಗಾಲ ಕಾಮಗಾರಿಗೆ ಸ್ಥಳದಲ್ಲಿಯೇ ಮಂಜೂರಿ ಕೊಟ್ಟೆ. ಮಂಜೂರಿ ಆಜ್ಞೆಗಳ ನಮೂನೆಗಳು ಸಂಗಡ ಇರುತ್ತಿದ್ದವು. ಅವುಗಳಲ್ಲಿ ಗ್ರಾಮ, ತಾಲೂಕು, ಕಾಮಗಾರಿಗಳ ಹೆಸರನ್ನೂ, ಹಣದ ಮೊತ್ತವನ್ನೂ ತುಂಬಿ ಒಂದು ಪ್ರತಿಯನ್ನು ಅಸಿಸ್ಟಂಟ್ ಇಂಜಿನಿಯರಿಗೂ, ಇನ್ನೊಂದನ್ನು ತಹಸೀಲ್ದಾರ ಬಿ.ಡಿ.ಓ.ಗಳಿಗೂ ಇನ್ನೊಂದನ್ನು ಗ್ರಾಮಪಂಚಾಯತಿಯ ಸರಪಂಚರಿಗೂ ಕೊಟ್ಟು ಮುಟ್ಟಿದುದಕ್ಕೆ ಅವರ ರುಜು ಮಾಡಿಸಿಕೊಂಡು ಅದನ್ನು ಕಡತಕ್ಕೆ ಸೇರಿಸಿಕೊಳ್ಳುತ್ತಿದ್ದೆ. ಆದಷ್ಟು ಕೆರೆಗಳ ದುರಸ್ತಿ, ಕಾಲುವೆಗಳ ಹೂಳು ತೆಗೆಯುವುದು, ಹೊಸ ಕೆರೆಗಳ ನಿರ್ಮಾಣ, ಭೂಸಾರ ರಕ್ಷಣೆ, ಅರಣ್ಯಾಭಿವೃದ್ಧಿ ಮೊದಲಾದ ಆರ್ಥಿಕವಾಗಿ ಪ್ರಯೋಜನಕಾರಕವಾದ ಕೆಲಸ ಕಾರ್ಯಗಳನ್ನೇ ಮಂಜೂರು ಮಾಡುತ್ತಿದ್ದೆ. ರಾಮದುರ್ಗ ತಾಲೂಕು ಒಂದರಲ್ಲಿಯೇ 60–70 ಕೆರೆಗಳ ದುರಸ್ತಿ, ಆಳಗೊಳಿಸುವಿಕೆ ಮುಗಿಯಿತು. ಮುಗಿಯುತ್ತಲೇ ಮಳೆ ಬಂದು ಆ ಕೆರೆಗಳೆಲ್ಲ ತುಂಬಿ ತುಳುಕಲು



ಅಲ್ಲಿಯ ಹಳ್ಳಿಗರೆಲ್ಲ ಹಬ್ಬ ಮಾಡಿದರು. ಆ ಕೆರೆಗಳು ಒಡೆದು ಒಂದು ತಲೆಮಾರು ಕಳೆದು ಹೋಗಿದ್ದಿತು. ಅಥಣಿ, ಗೋಕಾಕ, ಹುಕ್ಕೇರಿ, ಸವದತ್ತಿ ತಾಲೂಕುಗಳಲ್ಲಿಯೂ ಇದೇ ವಿಧಾನದೊಡನೆ ಅನೇಕ ಬರಗಾಲ ಕಾಮಗಾರಿಗಳು ಪ್ರಾರಂಭವಾದುವು. ಜಿಲ್ಲಾಧಿಕಾರಿಯ ಕಾರ್ಯಾಲಯದಲ್ಲಿ ಎಲ್ಲಿ ಯಾವ ಕಾರ್ಯಗಳು ನಡೆದಿವೆಯೆಂಬುದೇ ಗೊತ್ತಿರಲಿಲ್ಲ. ಹರಿದು ತಿನ್ನಲು ಹೊಂಚು ಹಾಕಿದ್ದವರಿಗೆ ಅವಕಾಶವೇ ಸಿಕ್ಕಲಿಲ್ಲ! ಕಡತ ನನ್ನೊಡನೆಯೇ ನಡೆದಾಡುತ್ತಿದ್ದಿತಲ್ಲವೆ? ನನಗೇನೋ ನಡೆದ ಎಲ್ಲ ಕಾರ್ಯಗಳೂ ನೆನಪಿದ್ದುವು. ನಿದ್ರೆಯಿಂದ ಎಬ್ಬಿಸಿ ಕೇಳಿದರೂ ಅವುಗಳನ್ನೆಲ್ಲ ಬಡಬಡ ಹೇಳಿಬಿಡುತ್ತಿದೆ.

ರಸ್ತೆಗಳ ಕಾಮಗಾರಿಗಳನ್ನು ಸಾಮಾನ್ಯವಾಗಿ ನಾನು ಮಂಜೂರು ಮಾಡುತ್ತಿರಲಿಲ್ಲವಾದರೂ ಎರಡು ಕಡೆಗೆ ಮಾತ್ರ ದೊಡ್ಡ ರಸ್ತೆಗಳನ್ನೇ ಮಂಜೂರು ಮಾಡಿದೆ–ಸವದತ್ತಿ ತಾಲೂಕಿನಲ್ಲಿ ಒಂದು, ಬೆಳಗಾವಿ ತಾಲೂಕಿನಲ್ಲಿ ಇನ್ನೊಂದು. ಅಲ್ಲಿ ಕ್ಷಾಮ ನಿಧಿಯಿಂದ ರಸ್ತೆಗಳು ನಿರ್ಮಾಣಗೊಂಡುವು; ಲೋಕೋಪಯೋಗಿ ಇಲಾಖೆಯವರು ಸಣ್ಣಪುಟ್ಟ ಸೇತುವೆಗಳನ್ನು ಕಟ್ಟಿಸಿದರು. RTAದಲ್ಲಿಟ್ಟು ಆ ಎರಡೂ ರಸ್ತೆಗಳ ಮೇಲೆ ಬಸ್ ಓಡಿಸಲು ಕೆ.ಎಸ್.ಆರ್.ಟಿ.ಸಿ.ಗೆ ಪರ್ಮಿಟ್ಟುಗಳನ್ನು ಕೊಟ್ಟೆ. ಮೊದಲ ಬಸ್ ಬಿಡಲು ನನ್ನನ್ನೇ ಕರೆದೊಯ್ದರು. ಹಳ್ಳಿಯ ಹೆಂಗಳೆಯರು ಬಸ್ಸುಗಳಿಗೆ ಆರತಿಯೆತ್ತಿ ಕಾಯಿ ಒಡೆದರು; ಹಳ್ಳಿಯ ಹೆಣ್ಣು ಗಂಡುಗಳೂ, ಮಕ್ಕಳು ಮರಿಗಳೂ ಹಿಗ್ಗಿ ಕುಣಿದಾಡಿದುವು. ಅವರು ತಮ್ಮ ಜೀವಮಾನದಲ್ಲಿ ಬಸ್ಸು ನೋಡಿದ್ದು ಅದೇ ಮೊದಲ ಸಲ! ನನಗೆ ಅವರ ಹಿಗ್ಗನ್ನು ನೋಡಿ ಹಿಗ್ಗೆನಿಸಿತಾದರೂ ಪರರಾಷ್ಟ್ರಗಳು ಚಂದ್ರನ ಮೇಲೆ ಇಳಿದು ಬಂದಿರುವಾಗಲು ನಮ್ಮ ದೇಶದಲ್ಲಿ ಬಸ್ಸು ನೋಡದ ಹಳ್ಳಿಗರೂ ಇನ್ನೂ ಇರುವರಲ್ಲ–ಎಂದುಕೊಂಡು ಖಿನ್ನನಾದೆ ನಾನು!

ಆಡಳಿತದಲ್ಲಿಯೂ ಇಮ್ಯಾಜಿನೇಷನ್ ಅಗತ್ಯವೆಂಬುದರ ಅರಿವು ಆದಿಯಿಂದಲೂ ನನಗಿದ್ದುದರಿಂದ ಶಾಸನ ನಿಯಮಗಳ ಚೌಕಟ್ಟಿನಲ್ಲಿಯೇ ಜನಹಿತದ ಹೊಸ ಹೊಸ ಸಾಧ್ಯತೆಗಳನ್ನು ಕಂಡು ಹಿಡಿಯುವುದು ಸಾಧ್ಯವಾಯಿತು ನನಗೆ. ಅವುಗಳಿಗೆ ಮೇಲಿನವರ ಮಂಜೂರಿಯ ಮುದ್ರೆ ಬೀಳಲು ಸಾಕಷ್ಟು ಸಮಯ ಹಿಡಿಯುವುದೆಂಬುದನ್ನೂ ಅರಿತ ನಾನು ಮೊದಲು ಅವನ್ನು ಅನುಷ್ಠಾನಕ್ಕೆ ತಂದು ನಿಧಾನವಾಗಿ ವಿಧಾನಸೌಧದ ಅಂಗೀಕೃತಿಯನ್ನು ಪಡೆದುಕೊಳ್ಳಲೂ ಪರವಾನಗಿಯನ್ನು ಪಡೆದುಕೊಂಡಿದ್ದೆ. ಒಂದೆರಡು ಉದಾಹರಣೆಗಳು: ದೂರದಿಂದ ಏನನ್ನಾದರೂ ತರುವುದಕ್ಕಾಗಿ, ಇಲ್ಲವೆ ಏನನ್ನಾದರೂ ದೂರಕ್ಕೆ ಒಯ್ಯುವುದಕ್ಕಾಗಿ

ಗುತ್ತೇದಾರರಿಗೆ ದೂರಕ್ಕೆ ತಕ್ಕಂತೆ 'ಲೀಡ್' ಎಂದು ಕೊಡುತ್ತಾರೆ. ಇದನ್ನು ಬರಗಾಲ ಕಾಮಗಾರಿಗಳಲ್ಲಿ ಕೆಲಸ ಮಾಡುವ ಕೆಲಸಗಾರರಿಗೂ ಕೊಡುವ ವ್ಯವಸ್ಥೆ ಮಾಡಿದೆ. ಬರಗಾಲ ಕಾಮಗಾರಿಗಳಲ್ಲಿ ಮುಪ್ಪಾದವರು, ದಿನ ತುಂಬಿದ ಗರ್ಭಿಣಿ ಸ್ತ್ರೀಯರು, ಕಾಯಿಲೆಯಿಂದ ಹಾಸಿಗೆ ಹಿಡಿದವರು, ಚಿಕ್ಕ ಮಕ್ಕಳು ಕೆಲಸ ಮಾಡಲಾರರಷ್ಟೆ! ಅವರ ಗತಿಯೇನು? ಇದನ್ನು ಜಿಲ್ಲೆಯ ಕಾರಖಾನೆದಾರರ ಮುಂದಿಟ್ಟಾಗ ಎಲ್ಲರೂ ಒಂದೊಂದು ನೂರು ಮೂಟೆ ಜೋಳ ಕೊಟ್ಟರು. ಅವರೇ ನಿಯಮಿಸಿದ ಗ್ರಾಮ ಸಾಹಿತಿಗಳು ಆ ಜೋಳವನ್ನು ಮುದುಕರಿಗೆ, ಬಸಿರು ಹೆಂಗಸರಿಗೆ, ರೋಗಿಗಳಿಗೆ, ಚಿಕ್ಕ ಮಕ್ಕಳಿಗೆ ವಾರಕ್ಕೆ ಮೂರು ಕೆ.ಜಿ. ಯಂತೆ ಹಂಚತೊಡಗಿದುವು. ದನಗಳಿಗೆ ಮೇವಿನ ಪೂರೈಕೆಯ ಪ್ರಶ್ನೆ ಮುಂದಾಯಿತು. ಉಳ್ಳವರಿಂದ ದಾನ ಪಡೆದು ಇಲ್ಲದವರಿಗೆ ಹಂಚುವುದರ ಜೊತೆಗೆ ಇನ್ನೊಂದು ಉಪಾಯವನ್ನು ಹೂಡಿದೆ; ಕಿತ್ತೂರಿನ ಬಳಿಯ ಕಾಡಿನಲ್ಲಿ ಎದೆಯೆತ್ತರದ ಹುಲ್ಲು ಸಮೃದ್ಧವಾಗಿದ್ದುದನ್ನು ನೋಡಿದ್ದೆ. ಆ ಖಾಸಗಿ ಕಾಡು ದಾಂಡೇಲಿಯ ಕಾಗದದ ಕಾರಖಾನೆದಾರರಿಗೆ ಸೇರಿದುದು. ಫೋನಿನಲ್ಲಿ ಅವರ ಪರವಾನಗಿ ಪಡೆದುಕೊಂಡು ಹಿಂಡಲಗಾ ಜೇಲಿನ ಕೈದಿಗಳನ್ನು ನಾಲ್ಕು ಲಾರಿಗಳಲ್ಲಿ ಕಳಿಸಿದೆ. ಅವರು ಕುಯ್ದ ಹುಲ್ಲು ಐವತ್ತು ಲಾರಿಗಳಾಯಿತು. ಅದನ್ನೂ ಹಂಚಿದೆ. ಕುಡಿಯುವ ನೀರಿನ ಸಮಸ್ಯೆಯಂತೂ ತಲೆ ಕೆಡಿಸಿಬಿಟ್ಟಿತು. ಹುಕ್ಕೇರಿ ಚಿಕ್ಕೋಡಿಗಳಂಥ ತಾಲೂಕು ಕೇಂದ್ರಗಳಿಗೂ ಲಾರಿಗಳ ಮೂಲಕ ನೀರು ಒದಗಿಸಬೇಕಾಯಿತು. ರಾಜ್ಯಪಾಲ ಧರ್ಮವೀರರಿಗೆ ಫೋನ್ ಮಾಡಿ ಒಂದು ಹೈ ಪವರ್ ರಿಗ್ ತರಿಸಿಕೊಂಡೆ. ಮೊದಲು ಚಿಕ್ಕೋಡಿ, ಹುಕ್ಕೇರಿ, ಸಂಕೇಶ್ವರ ಮೊದಲಾದ ಜನನಿಬಿಡ ಸ್ಥಳಗಳಲ್ಲಿ ಕೊಳವೆ ಭಾವಿ ಹೊಡೆಸಿದೆ. ಎಲ್ಲ ಕಡೆಗೂ ಎರಡು ಮೂರು ಭಾವಿಗಳು ಯಶಸ್ವಿಯಾಗಲು ಅಲ್ಲಿ ನೀರಿನ ಅರಬು ಎಷ್ಟೋ ಕಡಿಮೆಯಾಯಿತು. ಆಮೇಲೆ ಸುಮಾರು ನೂರು ಹಳ್ಳಿಗಳಲ್ಲಿ ಅದೇ ಯಂತ್ರದಿಂದ ಕೊಳವೆಭಾವಿ ಹೊಡೆಸಿ ಹ್ಯಾಂಡ್ ಪಂಪುಗಳನ್ನು ಹಚ್ಚಿಸಿದೆ. ಅವುಗಳನ್ನು ಬೇಗ ನೀರು ಬರಲೆಂದು ಜೋರಾಗಿ ತಿರುಗಿಸಿ ಮೂರು ದಿನಗಳಲ್ಲಿ ಮುರಿದಿಟ್ಟ ಊರುಗಳೂ ಉಂಟು.

ಹೊಸದಾಗಿ ಮುಖ್ಯಮಂತ್ರಿಗಳಾಗಿದ್ದ ಡಿ. ದೇವರಾಜ ಅರಸರು ಬರಗಾಲ ಕೆಲಸಗಳ ಪರಿವೀಕ್ಷಣೆಗಾಗಿ ಬರುವರೆಂಬ ಕಾರ್ಯಕ್ರಮ ಬಂದಿತು. ಮತ್ತೊಮ್ಮೆ ಎಲ್ಲ ಕ್ಷಾಮಪೀಡಿತ ಹಳ್ಳಿಗಳಿಗೆ ಭೇಟಿ ಕೊಟ್ಟು ಎಲ್ಲ ಕಡೆಗೆ ಯಾವ ತೊಂದರೆಯೂ ಇಲ್ಲದೆ ಕೆಲಸಗಳು ನಡೆದುದನ್ನೂ, ಜಿಲ್ಲೆಯಲ್ಲಿ ಕನಿಷ್ಠ ನಾಲ್ವತ್ತು ಸಾವಿರ ಜನರು ಆ ಕಾಮಗಾರಿಗಳಲ್ಲಿ ಕೆಲಸ ಮಾಡುತ್ತಿದ್ದುದನ್ನೂ ಖಚಿತ ಮಾಡಿಕೊಂಡೆ. ಅವರಿಗೆ



ಕೆಲಸ ನಡೆದ ಸ್ಥಳದಲ್ಲಿಯೇ ಆಹಾರ ಧಾನ್ಯಗಳು ಸಿಕ್ಕುವಂತೆ ವ್ಯವಸ್ಥೆ ಮಾಡಿದ್ದುದಂತೂ ಅವರಿಗೆ ಬಹಳ ಮೆಚ್ಚಿಗೆಯಾಗಿದ್ದಿತು. ಆದರೆ ಒಂದು ಕೊರತೆ ಅವರನ್ನು ಕೊರೆಯತ್ತಲಿದ್ದಿತು: ಅದು ಜೋಳದ ಕೊರತೆ. ಗೋಧಿ ಅವರಿಗೆ ಒಗ್ಗಿರಲಿಲ್ಲ. ಅದಕ್ಕೆ ಬೇಕಾಗುವಷ್ಟು ತುಪ್ಪವನ್ನೋ ಎಣ್ಣೆಯನ್ನೋ ಕೊಳ್ಳುವ ಶಕ್ತಿ ಅವರಿಗಿರಲಿಲ್ಲ. ಅಲ್ಲದೆ, ಜೋಳ ತಿಂದ ನಾಲಿಗೆಗೆ ಗೋಧಿ ರುಚಿಸುತ್ತಿರಲಿಲ್ಲ. ಹಬ್ಬಕ್ಕೊಮ್ಮೆ ಗೋಧಿ ತಿಂದು ಗೊತ್ತಾಗಲಿ ನಿತ್ಯ ತಿನ್ನುವುದು ನೀಗದ ವಿಷಯವಾಗಿದ್ದಿತು ಅವರಿಗೆ. ನನಗೂ ಅವರ ದೂರು ಸರಿಯಾದುದೆನಿಸಿತು.

ಬೆಳಗಾವಿಗೆ ಹಿಂದಿರುಗಿ ಜೋಳವನ್ನೆಂತು ಒದಗಿಸುವುದೆಂದು ಯೋಚಿಸಿದೆ. ಆಗ ಹರಿಹರ ದಾವಣಗೆರೆಯ ಮಾರುಕಟ್ಟೆಗಳಿಗೆ ಸಂಕರಜೋಳ ಬರುವ ಕಾಲವೆಂಬುದು ಫಕ್ಕನೆ ನೆನಪಾಯಿತು. ಚಿತ್ರದುರ್ಗದ ಜಿಲ್ಲಾಧಿಕಾರಿಯನ್ನು ದೂರವಾಣಿಯಲ್ಲಿ ಸಂಪರ್ಕಿಸಿ ಕೇಳಿದೆ. ಅವರದನ್ನು ಸ್ಥಿರೀಕರಿಸಿದರು. ನಾನು ಕೂಡಲೇ, 'ಇಪ್ಪತ್ತೈದು ಸಹಕಾರೀ ಸಂಘಗಳ ಅಧ್ಯಕ್ಷರನ್ನು ಕಾಗದ ಕೊಟ್ಟು ಕಳಿಸುವೆನು; ಅವರಲ್ಲಿ ಒಬ್ಬೊಬ್ಬರಿಗೂ ಹತ್ತು ಸಾವಿರ ರೂಪಾಯಿಗಳವರೆಗೆ ಸಂಕರ ಜೋಳ ಕೊಳ್ಳಲು ಅನುಕೂಲ ಮಾಡಿಕೊಡಿರಿ," ಎಂದು ಕೇಳಿಕೊಂಡೆ. ಅವರು ಒಪ್ಪಿದರು. 25 ಸ್ಥಿತಿವಂತ ಸಹಕಾರೀ ಸಂಘಗಳ ಅಧ್ಯಕ್ಷರನ್ನು ಫೋನಿನಲ್ಲಿ ಸಂಪರ್ಕಿಸಿ ಹಣ ಸಹಿತ ಕರೆಸಿಕೊಂಡೆ, ಅವರಿಗೆ ಕಾಗದ ಕೊಟ್ಟು ಕಳಿಸಿ ಇತ್ತ ಮುಖ್ಯಮಂತ್ರಿಗಳವರ ವ್ಯವಸ್ಥೆಯಲ್ಲಿ ಮಗ್ನನಾದೆ.

ಧಾರವಾಡದಿಂದ ಹೊರಟ ಮುಖ್ಯಮಂತ್ರಿಗಳು ಸವದತ್ತಿ ತಾಲೂಕು ಪ್ರವೇಶಿಸಿದರು. ಗಡಿಯಲ್ಲಿಯೇ ಒಂದು ಕೆರೆಯ ದುರಸ್ತಿಯ ಕೆಲಸ ನಡೆದಿತ್ತು. ಕೆಲಸಗಾರರನ್ನು ಕೇಳಿದರು–'ಏನಾದರೂ ತೊಂದರೆಯಿದೆಯೇ?' ಎಂದು. ಪಂಚಾಯತಿಯ ನೇತೃತ್ವದಲ್ಲಿಯೇ ನಡೆದಿದ್ದ ಆ ಕಾರ್ಯ ಸರಿಯಾಗಿಯೇ ನಡೆದಿದ್ದತಾಗಿ ಅವರು ಯಾವ ತೊಂದರೆಯೂ ಇಲ್ಲವೆಂದು ಹೇಳಿದರು. ಅಲ್ಲಿಯೇ 'ಲೀಡ್' ಕೊಟ್ಟ ವಿಷಯ ಮುಖ್ಯಮಂತ್ರಿಗಳಿಗೆ ತಿಳಿಯಿತು. 'ಭೇಷ್' ಎಂದರು. ಅಲ್ಲಿಂದ ಹೂಲಿ ತಲುಪುವದರೊಳಗಾಗಿ ಇನ್ನೆರಡು ಕಾಮಗಾರಿಗಳನ್ನು ನೋಡಿ ಹಿಗ್ಗಿದರವರು. ಹೂಲಿಯಲ್ಲಿ ಹಳೆಯ ಹುಲಿ ವೆಂಕರೆಡ್ಡಿಯವರೊಡನೆ ಮಾತನಾಡುತ್ತ ಅವರನ್ನು ಕ್ಷಾಮ ಕಾಮಗಾರಿಗಳ ಬಗ್ಗೆ ವಿಚಾರಿಸಿದರು. ಅವರು ಪ್ರಾಂಜಲ ಮನಸ್ಸಿನಿಂದ, ನಮ್ಮ ಜಿಲ್ಲಾಧಿಕಾರಿಗಳು ಹಿಂದೆಂದೂ ಆಗದಿದ್ದ ಆದರ್ಶ ರೀತಿಯಲ್ಲಿ ಸಾಕಷ್ಟು ಬರಗಾಲ ಕಾಮಗಾರಿಗಳನ್ನು ಸ್ವಂತ ಮೇಲ್ವಿಚಾರಣೆಯಲ್ಲಿ ನಡೆಸಿದ್ದಾರೆ. ನಾವೇನನ್ನೂ ಬೇಡಲು ಬಿಟ್ಟೇ ಇಲ್ಲ ಅವರು. ಆದರೆ ಅವರ ಕೈಯಲ್ಲಿಲ್ಲದ

ಜೋಳವನ್ನು ಅವರೆಲ್ಲಿಂದ ತಂದಾರು? ಜೋಳವೊಂದನ್ನು ನೀವು ಬೇರೆ ಕಡೆಯಿಂದ ಒದಗಿಸಿ ಬಿಟ್ಟರೆ ಇನ್ನೇನೂ ಬೇಕಿಲ್ಲ ಇಲ್ಲಿಯವರಿಗೆ," ಎಂದು ಹೇಳಿದರು.

"ಜೋಳ..." ಎನ್ನುತ್ತ ತಲೆ ತುರಿಸಿಕೊಳ್ಳತೊಡಗಿದರು ಮುಖ್ಯಮಂತ್ರಿಗಳು. ನಾನು ಬದಿಗೆ ಹೋಗಿ ಮೆಲುದನಿಯಲ್ಲಿ ಮಾಡಿದ್ದ ವ್ಯವಸ್ಥೆಯ ಬಗ್ಗೆ ಹೇಳಿದೆ. ನಿಂತಲ್ಲಿಯೇ ಜಿಗಿದು ಬಿಟ್ಟರವರು. "ವೆಂಕರೆಡ್ಡಿಯವರೇ, ನಿಮ್ಮ ಜಿಲ್ಲಾಧಿಕಾರಿಗಳು ಅವ್ಯವಸ್ಥೆಯನ್ನೂ ಮಾಡಿಬಿಟ್ಟಿದ್ದಾರೆ. ಹರಿಹರದಿಂದ ಹೈಬ್ರಿಡ್ ಜೋಳ ತರಲು ಲಾರಿಗಳನ್ನು ಕಳಿಸಿದ್ದಾರೆ," ಎಂದು ಉಬ್ಬಿ ಹೇಳಿದರು. ಅವರ ಮಾತು ಮುಗಿಯುತ್ತಿದ್ದಂತೆ ಭರ್ತಿ ತುಂಬಿದ್ದ ಲಾರಿಯೊಂದು ಊರನ್ನು ಪ್ರವೇಶಿಸಿತು. ಮುಖ್ಯಮಂತ್ರಿಗಳ ಹಸ್ತದಿಂದಲೇ ಸಂಕರಜೋಳದ ವಿತರಣೆ ಮಾಡಿಸಿದೆ. ಹಿಗ್ಗಿ ಹೋದರವರು. ದಾರಿಯಲ್ಲಿ ಬೇರೆ ಕಾಮಗಾರಿಗಳನ್ನು ನೋಡುತ್ತ ಸಂಜೆ ನೇರವಾಗಿ ಅಧಿಕಾರಿಗಳ ಸಭೆಗೆ ಆಗಮಿಸಿದರು ಅವರು. ವಿಭಾಗಾಧಿಕಾರಿಗಳ ಚೇಂಬರಿನಲ್ಲಿ ನಡೆದ ಆ ಸಭೆಗೆ ಎಲ್ಲ ಅಧಿಕಾರಿಗಳೂ, ಎಲ್ಲ ಶಾಸನಕಾರರೂ, ಇತರ ಪುಢಾರಿಗಳೂ ಬಂದಿದ್ದರು. ಎಲ್ಲರೆದುರು ನನ್ನ ಕಾರ್ಯದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದರು ಮುಖ್ಯಮಂತ್ರಿಗಳು. ಆಮೇಲೆ ಬೃಹತ್ ಬಹಿರಂಗ ಸಭೆಯಲ್ಲಿಯೂ ನನ್ನನ್ನು ಪ್ರಶಂಸಿಸಿ ಇಂಥ ಜಿಲ್ಲಾಧಿಕಾರಿಗಳೇ ಎಲ್ಲ ಜಿಲ್ಲೆಗಳಿಗೂ ಸಿಕ್ಕರೆ ನಮ್ಮ 'ಗರೀಬಿ ಹಟಾವ್' ಘೋಷಣೆ ಕಾರ್ಯಗತವಾಗುವುದರಲ್ಲಿ ಸಂದೇಹವಿಲ್ಲವೆಂದು ಸಾರಿದರಂತೆ. ಬೆಂಗಳೂರಿಗೆ ಹಿಂದಿರುಗುತ್ತಲೇ ಅವರೇ ರುಜು ಮಾಡಿದ ಪ್ರಶಂಸಾ ಪತ್ರವೊಂದು ಬಂದಿತು. ನನಗೆ ಆನಂದವಾಯಿತು.

ಒಂದು ವಿನೋದವೂ ನಡೆಯಿತು. ಅವರು ಹೋದ ಹಳ್ಳಿಗಳಲ್ಲೆಲ್ಲ ರೈತರು ಅವರಿಗೆ ಮನವಿಗಳನ್ನು ಅರ್ಪಿಸಿದರು. ಅದು ವಾಡಿಕೆಯೇ ಆಗಿಬಿಟ್ಟಿದ್ದಿತು. ಅದುವರೆಗೆ ಬಂದಿದ್ದ ಮಂತ್ರಿಗಳೂ ರಾಜ್ಯಪಾಲರೂ ಅವುಗಳನ್ನು ನನಗೆ ಕೊಟ್ಟು, ಪ್ರತಿಯೊಂದು ಮನವಿಯ ಸಾಧ್ಯಾಸಾಧ್ಯತೆಯ ಬಗ್ಗೆ ವರದಿ ಕಳಿಸಲು ಹೇಳಿ ಹೋಗುತ್ತಿದ್ದರು. ನಾನೂ ಒಂದು ವಾರದಲ್ಲಿಯೇ ಅವುಗಳ ಬಗ್ಗೆ ವರದಿ ಕಳಿಸುತ್ತಿದ್ದೆ. ಆ ಸಲವೂ ಆ ಮನವಿಗಳನ್ನು ತೆಗೆದುಕೊಳ್ಳಲು ಮುಂದಾದೆ. ಮುಖ್ಯಮಂತ್ರಿಗಳು ಕೊಡಲಿಲ್ಲ. "ಇಲ್ಲ, ಇವುಗಳನ್ನು ನಾನು ಇಲ್ಲವೆ ಲಿನ್ (ಆಪ್ತ ಕಾರ್ಯದರ್ಶಿ) ಮಾತ್ರ ಮುಟ್ಟಬೇಕು," ಎಂದುಬಿಟ್ಟರು. ನಾನು ಸುಮ್ಮನಾಗಿ ಹಿಂದಕ್ಕೆ ಸರಿದೆ. ಪ್ರತಿಯೊಂದು ಮನವಿಯನ್ನೂ ದಿಟ್ಟಿಸಿ ನೋಡಿ ಲಿನ್ ಅವರ ಕೈಗೆ ಕೊಡುತ್ತ ಹೋದರು. ಬೆಳಗಾವಿ ಮುಟ್ಟುವುದರೊಳಗಾಗಿ ಒಂದು ಹೊರೆ ಮನವಿಗಳು ಬಂದಿದ್ದುವು. ಅವೂ ವಿಮಾನ ಏರಿ ಬೆಂಗಳೂರು ಸೇರಿದುವು. ಮನವಿ ಕೊಟ್ಟವರೆಲ್ಲ



'ಈ ಸಲ ಮಂಜೂರಿ ಗ್ಯಾರಂಟೀ' ಎಂದುಕೊಂಡರು. ನಾನು ಜಿಲ್ಲೆಗೆ ಬಹಳಷ್ಟು ಅಭಿವೃದ್ಧಿ ಕಾರ್ಯಗಳು ಮಂಜೂರಾಗಿ ಬರುವುವೆಂದು ಉತ್ತೇಜಿತನಾದೆ. ಒಂದು ವಾರ ಕಳೆಯಿತು, ಎರಡು ವಾರ, ಮೂರು ವಾರ, ನಾಲ್ಕು, ಐದು–ಅವುಗಳ ಸುದ್ದಿಯೇ ಇಲ್ಲ. ಮನವಿ ಕೊಟ್ಟವರೆಲ್ಲ ಜಿಲ್ಲಾಧಿಕಾರಿಯ ಕಾರ್ಯಾಲಯಕ್ಕೆ ಎಡತಾಕಿ ಎಡತಾಕಿ ಸುಸ್ತಾದರು!

ನಾಲ್ಕೈದು ವಾರ ಕಳೆದ ಮೇಲೆ ದೊಡ್ಡದೊಂದು ಕಾಗದಗಳ ಕಟ್ಟು ಬಂದಿತು. ಬಿಚ್ಚಿ ನೋಡಿದಾಗ ಮುಖ್ಯಮಂತ್ರಿಗಳಿಗೆ ಕೊಟ್ಟಿದ್ದ ಮನವಿಗಳೆಲ್ಲ 'ಕೋರಾ ಕೋರಾ' ಬಂದಿದ್ದುವು. ಯಾವುದರ ಮೇಲೆಯೂ ಏನೆಂದೂ ಆಜ್ಞೆ ಇಲ್ಲವೆ ಆದೇಶ ಇರಲಿಲ್ಲ. ಲಿನ್ ರುಜು ಮಾಡಿ ಚಿಕ್ಕ ಕಾಗದವೊಂದನ್ನು ಲಗತ್ತಿಸಿದ್ದರು. ಅದರಲ್ಲಿ 'ಬೆಳಗಾವಿಯ ಜಿಲ್ಲಾಧಿಕಾರಿಗೆ, ವಿಲೇವಾರಿಗಾಗಿ, '(For disposal)' ಎಂದು ಮಾತ್ರ ಬರೆದಿದ್ದಿತು. ನಾವು ಅವುಗಳನ್ನೆಲ್ಲ ಬೇಸರಿಲ್ಲದೆ ಓದಿದೆ. ಮಾರ್ಕಾಂಡೇಯ ಯೋಜನೆಯಂಥ ಯೋಜನೆಗಳೂ ಅವುಗಳಲ್ಲಿ ಉಲ್ಲೆಖಿತವಾಗಿದ್ದ ಬೇಡಿಕೆಗಳಲ್ಲಿ ಸೇರಿದ್ದುವು. ಅನೌಪಚಾರಿಕವಾಗಿ ಅವುಗಳ ವೆಚ್ಚದ ಅಂದಾಜು ಮಾಡಿಸಿದಾಗ ಆ ಬೇಡಿಕೆಗಳನ್ನೆಲ್ಲ ಈಡೇರಿಸಲು ಹದಿನೆಂಟು ಕೋಟಿ ರೂಪಾಯಿಗಳು ಬೇಕಾಗಬಹುದೆಂದು ಗೊತ್ತಾಯಿತು! ನಾನೂ ಒಂದು ಉಪಾಯ ಹೂಡಿದೆ: ಆ ಮನವಿಗಳನ್ನೆಲ್ಲ ಇಲಾಖಾವಾರು ವರ್ಗೀಕರಿಸಿ ಬೇರೆ ಬೇರೆ ಬಂಡಲುಗಳನ್ನಾಗಿ ಕಟ್ಟಿಸಿ ನಾನೂ 'For disposal' ಎಂದು ಬರೆದು ಆಯಾ ಇಲಾಖೆಗಳ ಜಿಲ್ಲಾ ಮುಖ್ಯಸ್ಥರಿಗೆ ಕಳಿಸಿಕೊಟ್ಟೆ. ಅವರು ಗಾಬರಿಯಾಗಿ ಮುಂದೇನು ಮಾಡುವುದೆಂದು ನನ್ನನ್ನು ಕೇಳಿದರು. ನೀವು ತಾಲೂಕುವಾರು ವರ್ಗೀಕರಿಸಿ ತಾಲೂಕಿನ ಅಧಿಕಾರಿಗಳಿಗೆ 'For disposal' ಎಂದು ಕಳಿಸಿಬಿಡಿರಿ, ಎಂದು ಹೇಳಿದೆ. ಅವರೂ ಹಾಗೆಯೇ ಮಾಡಿದರು. ತಾಲೂಕಿನ ಅಧಿಕಾರಿಗಳು ಮುಂದೇನು ಮಾಡಿದರೋ ತಿಳಿಯದು. ನಾನು ಜಿಲ್ಲಾ ಮುಖ್ಯಸ್ಥರಿಗೆ ಬರೆದ ಕಾಗದದ ಒಂದು ಪ್ರತಿ ಲಿನ್‌ರಿಗೆ 'For information of action taken' ಎಂದು 'ಮಾರ್ಕ್' ಮಾಡಿದ್ದೆ. ಮುಂದೆ ಅವರೂ 'ಛುಪ್', ನಾನೂ 'ಛುಪ್!'

ಯಾರನ್ನಾದರೂ ಬೀಗಳೆಯಲೆಂದು ನಾನಿದನ್ನಿಲ್ಲಿ ಬರೆದಿಲ್ಲ–ಆಡಳಿತದ ಗಂಭೀರ ಸಮಸ್ಯೆಯೊಂದರತ್ತ ಗಮನ ಹರಿಸಲು ಬರೆದಿದ್ದೇನೆ. ಜನರ ಆಶೋತ್ತರಗಳನ್ನು ಆಕಾಶಕ್ಕೆ ಮುಟ್ಟಿಸಿದರು ನಮ್ಮ ನಾಯಕರು. 'ಗರೀಬಿ ಹಟಾವ್' ಪರ್ವ ಪ್ರಾರಂಭವಾದ ಮೇಲಂತೂ ಆಕಾಶವೂ ಸಾಲದಾಯಿತು ಅವರ ಆಶೋತ್ತರಗಳಿಗೆ. ಆ ಸಂದರ್ಭಗಳಲ್ಲಿ ನನಗೆ ಬಂದ ಅನೇಕ ಮನವಿಗಳು ಬಹಳ

ಸರಳವಾಗಿರುತ್ತಿದ್ದುವು: "ಸ್ವಾಮಿ, ನಾನು ಬಹಳ ಬಡವ. ದಯವಿಟ್ಟು ನನ್ನ ಬಡತನವನ್ನು ಹೋಗಲಾಡಿಸಿರಿ," ಎಂಬುದೇ ಅವುಗಳ ಮಥಿತಾರ್ಥವಾಗಿರುತ್ತಿದ್ದಿತು! ಹೇಗೆ ಹೋಗಲಾಡಿಸುವುದು? ಯಾರು ವಿಚಾರಿಸಬೇಕಿದನ್ನು? ಪಾಪ, ಮಂತ್ರಿಗಳಿಗೆ ಸಮಯವೇ ಸಿಕ್ಕುವುದಿಲ್ಲ; ಕೆಳಗಿನವರು ಹೇಳುವುದರಲ್ಲಿ ಅವರಿಗೆ ವಿಶ್ವಾಸವಿಲ್ಲ! ಯಾರೋ ಆಡಳಿತವನ್ನು ಯಂತ್ರವೆಂದು ಕರೆದರು. ನಿಜವಾಗಿಯೂ 'ಆಡಳಿತದ ಯಂತ್ರ'ವೆಂಬುದು ಸಮೀಚೀನ ಪದ ಪ್ರಯೋಗ. ಯಾರಾದರೂ ಚಾಲಕರು ದೊರೆತಾಗ ಮಾತ್ರ ಅದು ಚಲಿಸುತ್ತದೆ. ದುರ್ದೈವದ ಸಂಗತಿಯೆಂದರೆ ಅದನ್ನು ನಡೆಸಲು ಹೋದವರನ್ನೂ ಯಂತ್ರಗಳನ್ನಾಗಿ ಮಾರ್ಪಡಿಸಿ ಬಿಡುತ್ತದೆ ಆ ಯಂತ್ರ! ಯಕ್ಷನ ಪ್ರಶ್ನೆಗಳಿಗೆ ಸದುತ್ತರವಿತ್ತು ಯುಧಿಷ್ಠಿರ ಪಾರಾದಂತೆ ಎಲ್ಲಿಯೋ ಒಬ್ಬರು ಈ ಯಂತ್ರದ ಯಾಂತ್ರೀಕರಣ ಶಕ್ತಿಯನ್ನೆದುರಿಸಿ ಜಯಿಸಿ. ಜನರ ಆಶೋತ್ತರಗಳಲ್ಲಿ ಕೆಲವನ್ನಾದರೂ ನೆರವೇರಿಸಿ ಮನುಷ್ಯರಾಗಿ ಉಳಿಯುತ್ತಾರೆ; ಉಳಿದವರಿಗೆ ಭೀಮಾರ್ಜುನ ನಕುಲ ಸಹದೇವರಿಗೆ ಒದಗಿದ ಗತಿಯೇ ಒದಗುತ್ತದೆ! ಇನ್ನೊಂದು ದಿನ ಬೆಳಗಾವಿಯಲ್ಲಿ ಉಳಿದು, ಎಲ್ಲ ಮನವಿಗಳನ್ನು ಸಂಬಂಧಪಟ್ಟ ಅಧಿಕಾರಿಗಳೊಡನೆ ಚರ್ಚಿಸಿ, ಯಾವುದು ಸಾಧ್ಯವೋ ಅದಕ್ಕೆ ಅಲ್ಲಿಯೇ ಅಂಗೀಕೃತಿಯನ್ನು ನೀಡಿ, ಯಾವುದು ಸಾಧ್ಯವಲ್ಲವೋ ಅದನ್ನು ಅಂತಿಮವಾಗಿ ನಿರಾಕರಿಸಿ ಹೋಗಬಹುದಾಗಿದ್ದಿತು ಮಾನ್ಯ ಮುಖ್ಯಮಂತ್ರಿಗಳು. ಆದರೆ ಅವುಗಳಿಗೆ ಪುಕ್ಕಟೆ ಬೆಂಗಳೂರು ಪ್ರಯಾಣ ಮಾಡಿಸಿದರು. ಅವುಗಳಲ್ಲಿ ಒಂದೊಂದು ಬೇಡಿಕೆಯೂ ಹಲವು ಸಲ ಬೆಂಗಳೂರು ಯಾತ್ರೆ ಮಾಡಿ ಬಂದುದೇ! ಇನ್ನೂ ಎಷ್ಟು ಯಾತ್ರೆಗಳನ್ನು ಮಾಡುವುದಿದೆಯೋ! "ನಾವು ಮಾಡಬೇಕೆಂದಿರುವುದನ್ನೆಲ್ಲ ನಾವೇ ರೂಪಿಸಿದ ಪಾಂಚವಾರ್ಷಿಕ ಯೋಜನೆಗಳಲ್ಲಿ ಸೇರಿಸಿಬಿಟ್ಟಿದ್ದೇವೆ; ಇನ್ನೂ ಅವುಗಳೇ ಮುಗಿದಿಲ್ಲ; ಆದುದರಿಂದ ಹೊಸ ಕಾರ್ಯಗಳನ್ನೀಗ ವಿಚಾರಿಸುವಂತಿಲ್ಲ," ಎಂದು ಸ್ಪಷ್ಟವಾಗಿ ಹೇಳುವ ಕೆಚ್ಚಾದರೂ ಬರಬೇಕು, ಇಲ್ಲವೆ ಹೊಸದಾಗಿ ಬರುವ ಅಗತ್ಯದ ಕಾರ್ಯಗಳನ್ನು ಪೂರೈಸಲು ಬದ್ಧಕಂಕಣರಾಗುವ ನೆಚ್ಚಾದರೂ ಮೂಡಬೇಕು ಮೇಲಿನವರಲ್ಲಿ! ಅತ್ತ ಗಂಡೂ ಅಲ್ಲ. ಇತ್ತ ಹೆಣ್ಣೂ ಅಲ್ಲದವರು ಏನಾಗುತ್ತಾರೆ?

ಬೆಳಗಾವಿಗೊಂದು ಹಾಲಿನ ಕೇಂದ್ರ ಬಂದಿತು; ಎಲ್ಲ ಯೋಜನೆಗಳಂತೆ ಅದೂ ಅರ್ಧಕ್ಕೆ ನಿಂತಿದ್ದಿತು. ಸಣ್ಣ ಹಿಡುವಳಿದಾರರ ಉದ್ಧಾರ ಸಾಲದಿಂದಲ್ಲ, ಅವರ ಕುಟುಂಬದ ಆದಾಯವನ್ನು ಹೆಚ್ಚಿಸಬಲ್ಲ ಉಪಕಾಯಕಗಳಿಂದ–ಎಂಬ ಸತ್ಯವನ್ನು ಮನಗಂಡಿದ್ದ ನಾನು ಆ ಕೇಂದ್ರದ ಮೂಲಕ ಕನಿಷ್ಠ ಒಂದು ಸಾವಿರ



ಕುಟುಂಬಗಳಿಗಾದರೂ ಹಯನುಗಾರಿಕೆಯ ಉಪಕಾಯಕ ನೀಡಿ ಅತ್ತ ಅವರ ಕಿತ್ತು ತಿನ್ನುವ ಬಡತನವನ್ನೂ, ಇತ್ತ ಬೆಳಗಾವಿಯವರ ಹಾಲಿನ ಬರವನ್ನೂ ಏಕಕಾಲಕ್ಕೆ ನಿವಾರಿಸಲು ಮನಸ್ಸು ಮಾಡಿದೆ. ಬ್ಯಾಂಕುಗಳ ಸಮೀಕರಣ ಸಮಿತಿಯೊಂದಿದ್ದಿತು. ಅದಕ್ಕೂ ಜಿಲ್ಲಾಧಿಕಾರಿಯೇ ಅಧ್ಯಕ್ಷ. ಯಾವುದಕ್ಕೆ ಅಧ್ಯಕ್ಷನಲ್ಲ ಅವನು? ಎಲ್ಲದಕ್ಕೂ ಅಧ್ಯಕ್ಷನಾಗಿ ಅಧ್ಯಕ್ಷನಾಗಿ ಬಿಡುವ ಹಣೆಯ ಬರಹ ಅವನದು! ಆ ಬ್ಯಾಂಕುಗಳ ಸಮೀಕರಣ ಸಮಿತಿಯಲ್ಲಿ ಸಣ್ಣ ಹಿಡುವಳಿದಾರರಿಗೆ ಹಸು, ಎಮ್ಮೆಗಳನ್ನು ಕೊಳ್ಳಲು ಸಾಲ ನೀಡುವ ವಿಷಯವನ್ನು ಪ್ರಸ್ತಾಪಿಸಿದೆ. ಅವರು ಇದು 'ಕ್ರೆಡಿಟ್ ಗ್ಯಾರಂಟೀ ಸ್ಕೀಮಿ'ನಲ್ಲಿ ಬರುವುದಿಲ್ಲವೆಂದು ಬಿಟ್ಟರು. "ಕೊಂಡ ಹಸು, ಎಮ್ಮೆ ಮಧ್ಯದಲ್ಲಿಯೇ ಸತ್ತುಬಿಟ್ಟರೆ ಸಾಲದ ವಸೂಲಿ ಹೇಗೆ ಸಾಧ್ಯ?" ಎಂಬುದವರ ಶಂಕೆಯಾಗಿದ್ದಿತು. ಆ ಬಗ್ಗೆ ಮುಂಬೈ ಅಧಿಕಾರಿಗಳೊಡನೆ ಪತ್ರ ವ್ಯವಹಾರ ಮಾಡಿದೆ. "ಉಳಿದ ಸಾಲಗಳಿಗೆ ಅವರ ಸಣ್ಣ ಹಿಡುವಳಿ ಸಾಕಷ್ಟು ರಕ್ಷಣೆಯಾಗಬಲ್ಲುದಾದರೆ ಈ ಸಾಲಕ್ಕೇಕೆ ಆಗದು?" ಎಂಬುದು ನನ್ನ ವಾದವಾಗಿದ್ದಿತು. ಅವರು ಒಪ್ಪಿದರು; ಐದು ಸಾವಿರ ರೂಪಾಯಿಗಳವರೆಗೆ ಸಾಲ ಕೊಡಬಹುದೆಂದು ಅನುಮತಿ ನೀಡಿದರು. ಸುತ್ತಲಿನ ಹಳ್ಳಿಗಳ ಸಣ್ಣ ಹಿಡುವಳಿದಾರರನ್ನು ಕರೆಕರೆದು ಸಾಲ ಕೊಡಿಸಿದೆ. ಅವರಿಂದ ನಿಯಮಿತವಾಗಿ ಹಾಲು ಕೊಳ್ಳುವ ವಾಗ್ದಾನವನ್ನು ಹಾಲಿನ ಕೇಂದ್ರದ ಪರವಾಗಿ ಅವರಿಗೆ ನೀಡಿದೆ. ಅವರು ಪೂರೈಸುವ ಹಾಲಿಗಾಗಿ ಹಣ ಕೊಡುವಾಗ ಅವರು ತಮ್ಮ ಸಾಲದ ಬಗ್ಗೆ ಬ್ಯಾಂಕಿಗೆ ಕಟ್ಟಬೇಕಾಗಿದ್ದ ಕಂತಿನ ಹಣವನ್ನು ಮುರಿದುಕೊಂಡು ನೇರವಾಗಿ ಬ್ಯಾಂಕಿಗೆ ಕಟ್ಟಲು ಅವರಿಂದ ಒಪ್ಪಿಗೆ ಪತ್ರ ಪಡೆದೆ. ಹಾಲಿನ ಕೇಂದ್ರ ಪ್ರಾರಂಭವಾಯಿತು; ಸಾವಿರಾರು ಸಣ್ಣ ಹಿಡುವಳಿದಾರರಿಗೆ ಕಾಮಧೇನುವಾಯಿತು; ಬೆಳಗಾವಿಯ ಜನರಿಗೆ ಹಾಲು ದೊರೆಯತೊಡಗಿತು.

ಬೆಳಗಾವಿಗೆ ವರ್ಗವಾಗಿ ಬಂದವರಾರೂ ಅಲ್ಲಿ ಬಹಳ ದಿನ ಉಳಿಯುತ್ತಿದ್ದಿಲ್ಲ. ಇರಲು ಮನೆಗಳೇ ದೊರೆಯುತ್ತಿದ್ದಿಲ್ಲ. ಇದ್ದ ಕೆಲವು ಸರಕಾರೀ ಬಾಡಿಗೆ ಮನೆಗಳನ್ನು 'ಕ್ಯೂ'ನಲ್ಲಿ ನಿಂತ ನೂರಾರು ಜನರಲ್ಲಿ ಯಾರಿಗೆ ಕೊಡಬೇಕೆಂಬುದೇ ಬಿಡಿಸಲಾಗದ ಜಟಿಲ ಸಮಸ್ಯೆಯಾಗಿದ್ದಿತು. ಆಯ್ಕೆಯನ್ನು ಪ್ರಶ್ನಿಸಿ ಕೋರ್ಟಿಗೆ ಹೋದ ಪ್ರಕರಣಗಳೂ ಇದ್ದುವು. ಅಷ್ಟರಲ್ಲಿ ಡಿ.ಸಿ. ಬಂಗ್ಲೆಗೆ ಕಾಯಕಲ್ಪ ಮಾಡಿಸಿದ್ದೆ. ವಸತಿ ಸಮಸ್ಯೆಯತ್ತ ಗಮನ ಹರಿಸಿದೆ. ಎಲ್ಲ ಆಫೀಸುಗಳಿಂದ ಅಂಕಿ ಅಂಶಗಳನ್ನು ಸಂಗ್ರಹಿಸಿ ನಾಲ್ಕನೆಯ ದರ್ಜೆಯವರಿಂದ ಮೊದಲನೆಯ ದರ್ಜೆಯವರೆಗಿನ ಅಧಿಕಾರಿಗಳಿಗೆ ಒಟ್ಟು ಮನೆಗಳೆಷ್ಟುಬೇಕೆಂಬುದನ್ನು ನಿರ್ಧರಿಸಿದೆ. ಲೋಕೋಪಯೋಗಿ ಇಲಾಖೆಯ ಸಮ್ಮತಿ ಪಡೆದು ಅವರ ಸ್ವಾಧೀನದಲ್ಲಿದ್ದ ಭೂಮಿಯಲ್ಲಿ ನಾಲ್ಕುನೂರಕ್ಕೂ ಹೆಚ್ಚು

ಮನೆಗಳನ್ನು ಕಟ್ಟಿಸುವ ಯೋಜನೆಯೊಂದನ್ನು ಕಳಿಸಿದೆ. ಆಗ ರಾಷ್ಟ್ರಪತಿಗಳ ಆಳಿಕೆ ರಾಜ್ಯದಲ್ಲಿ. ಬೆಳಗಾವಿಯ ವಿಭಾಗಾಧಿಕಾರಿಗಳಾಗಿದ್ದು ಈ ಸಮಸ್ಯೆಯನ್ನು ಚೆನ್ನಾಗಿ ಬಲ್ಲವರಾಗಿದ್ದ ಜೆ.ವಿ.ಕೆ. ರಾಯರು ಅದಕ್ಕೆ ಬೇಗ ಮಂಜೂರಿ ನೀಡಿದರು. ಅವರಿಂದಲೇ ಆ ಕಾಲನಿಯ ಅಡಿಗಲ್ಲು ಹಾಕಿಸಿದೆ. ಆಗಿನ ವಿಭಾಗಾಧಿಕಾರಿಯಾಗಿ ಎನ್.ಎಸ್. ರಾಮಚಂದ್ರ ಅವರು ಹರ್ಷಾತಿರೇಕದಲ್ಲಿ 'ಇದಕ್ಕೆ ಪುರಾಣಿಕ ನಗರ' ಎಂದು ಹೆಸರಿಡಬೇಕೆಂದು ಅಧ್ಯಕ್ಷ ಭಾಷಣದಲ್ಲಿ ಹೇಳಿದರು.

ಎಂ.ಕೆ. ಹುಬ್ಬಳ್ಳಿಯ ಸಕ್ಕರೆ ಕಾರ್ಖಾನೆಯ ಎಂ.ಡಿ. ಆಗಿದ್ದುಕೊಂಡು ಅದನ್ನು ಅಭಿವೃದ್ಧಿಗೊಳಿಸುವುದಲ್ಲದೆ ಉಗಾರ ಸಕ್ಕರೆ ಕಾರ್ಖಾನೆಯ ಪದನಿಮಿತ್ತ ಅಧ್ಯಕ್ಷನಾಗಿ ಕಬ್ಬು ಬೆಳೆಗಾರರ ಕ್ಷೇಮ ಸಾಧಿಸಿದೆ. ಕಬ್ಬಿನ ಬೆಲೆ ಟನ್ನಿಗೆ 83 ರೂ. ಇದ್ದುದನ್ನು ಒಮ್ಮೆಗೆ 103 ರೂಪಾಯಿಗಳಿಗೇರಿಸಿದೆ. ಕಬ್ಬು ಬೆಳೆಗಾರರೆಲ್ಲ ಕುಣಿದಾಡಿದರು. ಕಾರ್ಖಾನೆಯನ್ನೂ ಬಲಪಡಿಸಿದೆ. ಅದರ ಸಾಮರ್ಥ್ಯ ವರ್ಧನೆಗೆ ಮಂಜೂರಿ ತರಿಸಿಕೊಟ್ಟೆ; ಎಂದೋ ನಿಂತು ಹೋಗಿದ್ದ ಕಿತ್ತೂರ ಯಾತನೀರಾವರಿ ಯೋಜನೆಯನ್ನು ಅದಕ್ಕೆ ವಹಿಸಿಕೊಟ್ಟೆ, ಐನಾಪುರ ಎಂಬುದು ಬಹಳ ದೊಡ್ಡ ಹಳ್ಳಿ, ದುಡ್ಡಿದ್ದವರ ಹಳ್ಳಿ. ಆದರೂ ಆ ಊರಿಗೆ ಶಾಲೆಯ ಕಟ್ಟಡವೇ ಇರಲಿಲ್ಲ. ಆದೊಂದೇ ಊರಿನಿಂದ ಉಗಾರ ಸಕ್ಕರೆ ಕಾರ್ಖಾನೆಗೆ ವರ್ಷಕ್ಕೆ ನಾಲ್ವತ್ತು ಸಾವಿರ ಟನ್ನು ಕಬ್ಬು ಬರುತ್ತಿತ್ತು. ಟನ್ನಿಗೆ ಇಪ್ಪತ್ತು ರೂಪಾಯಿ ಬೆಲೆ ಹೆಚ್ಚಿಸಿದ್ದೆನಾಗಿ ಟನ್ನಿಗೆ ಪ್ರತಿ ವರ್ಷ ಎರಡು ರೂಪಾಯಿ ಹಿಡಿದುಕೊಂಡು ಶಾಲೆಯ ಕಟ್ಟಡ ಕಟ್ಟಿಸಲು ಕಬ್ಬು ಬೆಳೆಗಾರರು ಒಪ್ಪಿದರು. ಎರಡು ಮೂರು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಅಲ್ಲಿ ೨೫ ಕೋಣೆಗಳ ದೊಡ್ಡ ಕಟ್ಟಡ ಎದ್ದು ನಿಂತಿತು. ರಾಮದುರ್ಗದಲ್ಲಿಯೂ ಇದೇ ಸ್ಥಿತಿಯಿದ್ದಿತು. ಅಲ್ಲಿಗೆ, ವೇದಾಂತಕೇಸರಿ ಮಲ್ಲಿಕಾರ್ಜುನ ಮಹಾಸ್ವಾಮಿಗಳು ಪ್ರವಚನಕ್ಕಾಗಿ ಆಗಮಿಸಲು ಶಾಲಾ ಸಮಿತಿಯ ಡಾ. ಕುಲಗೋಡ ಮೊದಲಾದವರು ಶಾಲಾಭವನ ಕಟ್ಟಿಸಲು ಮುಂದಾದರು. ನನ್ನಲ್ಲಿ ಉಳಿದಿದ್ದ ಶಾಲಾಭವನ ನಿಧಿಯ 36 ಸಹಸ್ರ ರೂಪಾಯಿಗಳನ್ನೂ ಆದೊಂದಕ್ಕೇ ಕೊಟ್ಟುಬಿಟ್ಟೆ. ಶ್ರೀಗಳವರ ಆರತಿ ರೊಕ್ಕ ಬೆಳೆಯುತ್ತ ಹೋಯಿತು. ಅಲ್ಲಿಯೂ ಒಂದು ಎಂಟು ಕೋಣೆಗಳ ದೊಡ್ಡ ಕಟ್ಟಡ ಎದ್ದು ನಿಂತಿತು. ನಾನು ನಿವೃತ್ತನಾಗಿದ್ದರೂ ನನ್ನನ್ನೇ ಉದ್ಘಾಟನೆಗೆ ಕರೆಸಿದ್ದರು ಅಲ್ಲಿಯವರು. ಮನೋಳಿಯ ಮಹಿಳಾ ಸಮಾಜಕ್ಕೆ ಕಟ್ಟಡವಿರಲಿಲ್ಲ. ಅದರ ಅಧ್ಯಕ್ಷಿಣಿಯರಾಗಿದ್ದ ವಿಮಲಾದೇವಿ ಹಿರೇಮಠರಿಗೆ ಬೇರೊಂದು ದಾರಿ ತೋರಿಸಿದೆ. ಮಹಿಳಾ ಸಮಾಜವನ್ನು ಸಣ್ಣ ಉಳಿತಾಯ ಯೋಜನೆಯಲ್ಲಿ 'ಏಜೆಂಟ್' ಎಂದು ನಿಯಮಿಸಿದೆ. ಅವರಿವರಿಗೆ ಹೇಳಿ ಒಂದು ಲಕ್ಷ ಉಳಿತಾಯ ಹಣವನ್ನು ಅದು



ಸಂಗ್ರಹಿಸುವಂತೆ ಮಾಡಿದೆ. ಅದಕ್ಕಾಗಿ ಸರಕಾರದಿಂದ ಹತ್ತು ಸಾವಿರ ರೂಪಾಯಿ ಪ್ರತಿಫಲ ಧನ ಅವರಿಗೆ ಕೊಡಿಸಿ ಅವರ ಕಟ್ಟಡವಾಗುವಂತೆ ಮಾಡಿದೆ. ಅವರು ಗಿರಿಜಾದೇವಿ ಪುರಾಣಿಕರಿಂದ ಅದರ ಉದ್ಘಾಟನೆ ಮಾಡಿಸಿದರು. ನಿಪ್ಪಾಣಿಯ ನಗರ ಸಭೆಯ ಪರಿವೀಕ್ಷಣೆಗಾಗಿ ಹೋಗಿದ್ದೆ. ವಾಡಿಕೆಯಂತೆ ಆಸ್ಪತ್ರೆ ಶಾಲೆಗಳ ಸಮೀಕ್ಷೆ ನಡೆಸಿದಾಗ ಕನ್ಯಾ ಶಾಲೆಯ ಕಟ್ಟಡ ಅಂದೇ ಬೀಳುವಷ್ಟು ಶಿಥಿಲ ಸ್ಥಿತಿಯಲ್ಲಿದ್ದುದು ಗೋಚರಿಸಿತು. ವಿಚಾರಿಸಲಾಗಿ ಹೊಸ ಕಟ್ಟಡಕ್ಕಾಗಿ ಅಲ್ಲಿಯವರು ಮಂಡಿಸಿದ್ದ ಬೇಡಿಕೆ ಬಂಗಾರದ ಹಬ್ಬ ಆಚರಿಸಿದೆಯೆಂದು ತಿಳಿದುಬಂದಿತು. ನಗರ ಸಭೆಯಲ್ಲಿ ಸಾಕಷ್ಟು ಹಣವಿದ್ದೂ ಅಷ್ಟು ಸಣ್ಣ ಹಾಗೂ ನ್ಯಾಯವಾದ ಬೇಡಿಕೆಗೆ ಅರ್ಧ ಶತಮಾನ ಕಳೆದರೂ ಗಮನ ನೀಡದಿದ್ದುದು ತಿರಸ್ಕರಣೀಯವಾಗಿ ತೋರಿತು ನನಗೆ. ಅಂದೇ ಅದರ ನಕ್ಷೆ, ಅಂದಾಜು ಪತ್ರಿಕೆ ತಯಾರಿಸಿ, ಅಮಾನಿಯಲ್ಲಿ ಮಾಡಿಸಲು ಅನುಮತಿ ಕೊಟ್ಟೆ, ಭೂಮಿ ಪೂಜೆ ಮಾಡಿಯೇ ಬೆಳಗಾವಿಗೆ ಹಿಂದಿರುಗಿದೆ. ಹಿಂದಿರುಗುವ ಮುನ್ನ ನಾನೇ ಆರು ತಿಂಗಳ ತರುವಾಯ ಇಂಥ ದಿನ ಅದರ ಉದ್ಘಾಟನೆಗಾಗಿ ಬರುವೆನೆಂದು ತಿಳಿಸಿ ಬಂದಿದ್ದೆ. ಆರು ತಿಂಗಳುಗಳಲ್ಲಿಯೇ ಸುಂದರ ಶಾಲಾ ಭವನ ಸಿದ್ಧವಾಯಿತು. ನಾನು ಹೋಗಿ ಉದ್ಘಾಟಿಸಿದಾಗ ನಿಪ್ಪಾಣಿಯವರಿಗೆ ಎಂದಿಲ್ಲದ ಆನಂದ! ಪುಣೆಯ ಮರಾಠೀ ಪತ್ರಿಕೆಗಳಲ್ಲಿಯೂ ಪ್ರಶಂಸೆ! ಚಿಕ್ಕೋಡಿ ರಾಯಬಾಗಗಳ ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗಾಗಿಯೂ ತುಂಬ ಶ್ರಮಿಸಿದೆ.

ಆ ಅವಧಿಯಲ್ಲಿ ಹೊಸದಾಗಿ ನಿರ್ಮಿತವಾದ ರಸ್ತೆಗಳು 22, ಮುಗಿಯ ಬಂದಿದ್ದುವು 21; ಕೈಗೆತ್ತಿಕೊಂಡ ಕುಡಿಯುವ ನೀರಿನ ಯೋಜನೆಗಳು 63, ಮುಗಿದುವು 16, ಕಟ್ಟಿಸಿದ ಕುಡಿಯುವ ನೀರಿನ ಭಾವಿಗಳು 67, ಶಾಲಾ ಕೋಣೆಗಳು 344, ವಿದ್ಯುದೀಕರಣಗೊಂಡ ಹಳ್ಳಿಗಳು 128, ಅರಣ್ಯಾಭಿವೃದ್ಧಿ 1850 ಹೆಕ್ಟೇರುಗಳಲ್ಲಿ, ಭೂಸಾರ ರಕ್ಷಣೆ 10,000 ಹೆಕ್ಟೇರುಗಳಲ್ಲಿ. ಹೊಸದಾಗಿ ಕಟ್ಟಿಸಿದ ಕೆರೆಗಳು 16, ರಿಪೇರಿ ಮಾಡಿದುದಕ್ಕೆ ಲೆಕ್ಕವಿಲ್ಲ, ಡಿ.ಪಿ.ಎ.ಪಿ., ಸಿ.ಎಸ್.ಆರ್.ಈ ಯೋಜನೆಗಳಲ್ಲಿ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅನೇಕ ಕಾರ್ಯಗಳಿಂದ ಸಾವಿರಾರು ಜನರಿಗೆ ಉದ್ಯೋಗ, ಶ್ರೀ ವೆಂಕಟೇಶ ಮಾಗಡಿಯವರ ಸಹಕಾರದಿಂದ ಅಂಬರ್ ಚರಖಾ ಕೇಂದ್ರ ಹಾಗೂ ನೆಯ್ಗೆ ಕೇಂದ್ರಗಳಲ್ಲಿ ಅನೇಕರಿಗೆ ಉದ್ಯೋಗ, 22 ಹೊಸ ಸೇತುವೆಗಳ ನಿರ್ಮಾಣ, 1,300 ಹರಿಜನ ಕುಟುಂಬಗಳಿಗೆ ಹೊಸ ಮನೆಗಳು, 203 ಹೊಸ ಗೋದಾಮಗಳ ನಿರ್ಮಾಣ, 139 ಎಕರೆಗಳಲ್ಲಿ ರೇಷ್ಮೆ ವ್ಯವಸಾಯ ಇತ್ಯಾದಿ ಅನೇಕ ಮುಖವಾದ ಪ್ರಗತಿ ಸಾಧಿತವಾಯಿತು. ಜಿಲ್ಲೆಯಲ್ಲಿ ಒಂದು ಲಕ್ಷ ತೆಂಗಿನ ಮರಗಳನ್ನು ಬೆಳೆಸುವ ಯೋಜನೆ ಕೈಕೊಂಡು ಹತ್ತು ಸಾವಿರ ಸಸಿಗಳನ್ನು

ನೆಟ್ಟಾಗಿದ್ದಿತು. ನನ್ನ ವರ್ಗ ಅದನ್ನು ಅಲ್ಲಿಗೇ ನಿಲ್ಲಿಸಿತು. ಹಣ್ಣಿನ ಸಸಿಗಳನ್ನೂ, ತರಕಾರಿ ಸಸಿಗಳನ್ನೂ, ಹೂ ಬಳ್ಳಿಯ ಸಸಿಗಳನ್ನೂ ಹಂಚಿದ್ದೇ ಹಂಚಿದ್ದು!

ಪ್ರತಿಯೊಂದು ಅಭಿವೃದ್ಧಿ ಮಂಡಳಿಯೂ ವರ್ಷಕ್ಕೆ ಇಪ್ಪತ್ತು ಕಾರ್ಯಗಳನ್ನು ಮುಗಿಸಲೇಬೇಕೆಂದು ಹಟ ಹಿಡಿದೆ. ಅವುಗಳ ಆಯ್ಕೆ ಅವರ ಅಭಿಮತದ ಪ್ರಕಾರ ಅವುಗಳಿಗೆ ಬೇಕಾಗುವ ಹಣ ಒದಗಿಸುವ ಹೊಣೆ ನನ್ನದಾಗಿದ್ದಿತು. ಪ್ರತಿವರ್ಷ 200ರಂತೆ ಎರಡು ವರ್ಷಗಳಲ್ಲಿ 400 ಅಭಿವೃದ್ಧಿ ಕಾರ್ಯಗಳು ಮುಗಿದುವು! ಕೆಲವು ಅಧಿಕಾರಿಗಳು ಒಂದೊಂದು ಹಳ್ಳಿಯನ್ನು ಪೂರ್ಣಾಭಿವೃದ್ಧಿಗಾಗಿ ಆರಿಸಿಕೊಂಡಿದ್ದರು. ಆ ಹಳ್ಳಿಗಳೂ ಬೆಳೆದುವು. ಮೀನುಗಾರಿಕೆ, ಕೋಳಿ, ಕುರಿ ಸಾಕಾಣಿಕೆ ಇತ್ಯಾದಿ ಗ್ರಾಮೀಣ ಕಸಬುಗಳಿಗೂ ಗಮನ ನೀಡಲಾಯಿತು. ಭೂಹೀನರಿಗೆ, ಗೃಹಹೀನರಿಗೆ ಉಚಿತ ನಿವೇಶನ ವಿತರಣೆಯ ಯೋಜನೆಯನ್ನು ಸರಕಾರ ಘೋಷಿಸಲು ಆ ಯೋಜನೆಯ ಪ್ರಕಾರ ಕಿತ್ತೂರಿನಲ್ಲಿ ಎಲ್ಲರಿಗಿಂತ ಮೊದಲು ನಿವೇಶನಗಳನ್ನು ಹಂಚಿ ರಾಜ್ಯದಲ್ಲಿ ಬೆಳಗಾವಿ ಜಿಲ್ಲೆಗೆ ಪ್ರಥಮವೊಂದನ್ನು ದೊರಕಿಸಿ ಕೊಟ್ಟೆ. ನಾನಿರುವಾಗಲೇ 8,000 ನಿವೇಶನಗಳ ವಿತರಣೆಯಾಯಿತು. ಬಲಿಷ್ಠರು ದೋಚಿಕೊಂಡಿದ್ದ 300 ಎಕರೆ ಭೂಮಿಯನ್ನು ಬಿಡಿಸಿಕೊಂಡು, ಅದನ್ನು ಹರಿಜನ ಕುಟುಂಬಗಳಿಗೆ ಹಂಚಿ, ಅವರಿಗಾಗಿಯೇ ಚಿಕ್ಕ ನೀರಾವರಿ ಯೋಜನೆಯನ್ನು ಕಟ್ಟಿ ಮುಗಿಸಿದುದು ಇನ್ನೊಂದು ಸ್ಮರಣೀಯ ಸಾಧನೆ. ತಿಗಡಿ ಮೊದಲಾದ ಕಡೆಗಳಲ್ಲಿ ಯಾತನೀರಾವರಿಯ ಏರ್ಪಾಟು ಮಾಡಿದುದೂ, ಸೊಗಲಸೋಮೇಶ್ವರ ಕ್ಷೇತ್ರ, ಸವದತ್ತಿಯ ಎಲ್ಲಮ್ಮನ ಕ್ಷೇತ್ರ, ಗೊಡಚಿ ವೀರಭದ್ರ ಕ್ಷೇತ್ರಗಳನ್ನು ಅಭಿವೃದ್ಧಿ ಪಡಿಸಿದುದೂ ನೆನಿಸಿಕೊಳ್ಳಬಹುದಾದ ಸಾಧನೆಗಳು. ಇವುಗಳ ಪಟ್ಟಿಯನ್ನು ಇನ್ನೂ ಬೆಳೆಸಬಹುದು. ಆದರೆ ಸ್ಥಳ ಸಾಲದು.

## ಮುರಗೋಡದ ಮಹಾಂತ ಶಿವಯೋಗಿಗಳು

ಬೆಳಗಾವಿಯ ಅಧ್ಯಾಯ ಮುಗಿಸುವ ಮುನ್ನ ಮುರಗೋಡದ ಮಹಾಂತ ಶಿವಯೋಗಿಗಳವರ ಬಗ್ಗೆ ಬರೆಯಲೇಬೇಕು. ಅಥಣಿಗೆ ಹೋದಾಗಲೆಲ್ಲ ಅಲ್ಲಿ ಶಿವಯೋಗಿಗಳವರ ಗದ್ದುಗೆಗೆ ಭಕ್ತಿ ಸಲ್ಲಿಸಿ ಬರುತ್ತಿದ್ದೆ, ಅವರನ್ನು ನೋಡುವ ಭಾಗ್ಯ ನನಗೆ ಇರಲಿಲ್ಲ, ಅವರ ಪಟ್ಟದ ಶಿಷ್ಯರಾದ ಧಾರವಾಡದ ಮೃತ್ಯುಂಜಯಪ್ಪಗಳವರ ಕೃಪಾ ಛತ್ರದಲ್ಲಿ ಬೆಳೆದೆ. ಅವರಷ್ಟೇ ಪ್ರಖ್ಯಾತರಾದ ಇನ್ನೊಬ್ಬ ಪಟ್ಟ ಶಿಷ್ಯರಾದ ಮುರಗೋಡದ ಮಹಾಂತಜ್ಜನವರ ದರ್ಶನ ಧಾರವಾಡದ ಅಪ್ಪಗಳವರ ಜೊತೆಗೆ ಒಂದೆರಡು ಸಲ ಆಗಿದ್ದಿತು. ಬೆಳಗಾವಿಯ ಚಾರ್ಜು ವಹಿಸಿಕೊಳ್ಳಲು ಹೊರಟಾಗ ಮೃತ್ಯುಂಜಯಪ್ಪಗಳ ಸಮಾಧಿಗೆ ಭಕ್ತಿ ಸಲ್ಲಿಸಿ,



ಮಹಾಂತಪ್ಪಗಳವರ ಆಶೀರ್ವಾದ ಪಡೆದು ಹೊರಟೆ. ಸಾಧ್ಯವಾದರೆ ಮುರಗೋಡಕ್ಕೆ ಹೋಗಿ ಮಹಾಂತ ಶಿವಯೋಗಿಗಳವರ ಆಶೀರ್ವಾದ ಪಡೆದುಕೊಂಡೇ ಬೆಳಗಾವಿ ತಲುಪಬೇಕೆಂದು ಮನದಲ್ಲಿಯೇ ಎಣಿಕೆ ಹಾಕುತ್ತ ಹೊರಟಿದ್ದೆ. ಎದುರಿಗೇ ಬಂದರು ಆ ಶಿವಯೋಗಿಗಳು. ಎಲ್ಲಿಗೋ ಹೋಗಿದ್ದವರು ಮುರಗೋಡಿಗೆ ಮರಳುವ ಮುನ್ನ ಅಲ್ಲಿದ್ದ ಅಥಣಿಯ ಶಿವಯೋಗಿಗಳವರ ಅಮೃತಶಿಲಾ ಮೂರ್ತಿಗೆ ನಮಿಸಿ ಹೋಗಲು ಬಂದಿದ್ದರು. ನನಗೆ ಮಿತಿಮೀರಿದ ಸಂತೋಷ, ದರ್ಶನಾಶೀರ್ವಾದಗಳು ಅಲ್ಲಿಯೇ ಲಭಿಸಲು ನೇರವಾಗಿ ಬೆಳಗಾವಿಗೆ ಹೋದೆ. ಆಗಾಗ ಮುರಗೋಡಿನಲ್ಲಿ ದರ್ಶನ ಭಾಗ್ಯ ದೊರೆಯುತ್ತಿತ್ತು.

ಬರಗಾಲದೊಡನೆ ನಾನು ಹಗಲಿರುಳು ಹೋರಾಟ ನಡೆಸಿದ್ದ ದಿನಗಳವು. ಅಜ್ಜನವರ ಕಡೆಯಿಂದ ಯಾರೋ ಒಂದು ಶ್ರಾವಣಮಾಸದ ಪುರಾಣ ಪ್ರವಚನದ ಮಂಗಲಕ್ಕೆ ಬರಬೇಕೆಂದು ಅಜ್ಜನವರು ಹೇಳಿಕಳಿಸಿದ್ದಾರೆ–ಎಂದು ಹೇಳಿದರು ನನಗೆ ಆ ಪುರಾಣ ಮಂಗಲಕ್ಕಿಂತ ಕ್ಷಾಮಪೀಡಿತರ ಸೇವೆ ಹೆಚ್ಚು ಮಹತ್ವದ್ದಾಗಿ ತೋರಿತು, ತಾತ್ಸಾರದೊಡನೆಯೇ 'ನೋಡೋಣ' ಎಂದು ಹೇಳಿ ಕಳಿಸಿದೆ. ಹಾಗೆಯೇ ಹೇಳಿ ಬಿಟ್ಟಿರಬೇಕು ಹೋಗಿ ಅವರು, ಎರಡೇ ದಿನಗಳಲ್ಲಿ ಹಳ್ಳಿಯೊಂದರಲ್ಲಿ ಅನೀರಿಕ್ಷಿತವಾಗಿ ಅಪ್ಪಗಳವರ ದರ್ಶನವಾಯಿತು. ಹೋಗಿ ನಮಸ್ಕರಿಸುತ್ತಲೇ 'ಪುರಾಣ ಮಂಗಲಕ್ಕೆ ಬರಬೇಕ್ರೆಪಾ' ಎಂದು ಹೇಳಿಬಿಟ್ಟರು. ನಾನು ಬಹಳ ಇರುಕಿಗೆ ಸಿಲುಕಿಬಿಟ್ಟೆ. ಒಂದಾದರೂ ಮಳೆ ಬಂದು ಕನಿಷ್ಠ ಕುಡಿಯುವ ನೀರಾದರೂ ಧಾರಾಳವಾಗಿ ಜನಗಳಿಗೆ, ದನಗಳಿಗೆ, ಸಿಕ್ಕುವವರೆಗೆ ಇಂಥ ಯಾವ ಕಾರ್ಯಕ್ರಮಕ್ಕೂ ಹೋಗ ಕೂಡದೆಂದು ನನ್ನಷ್ಟಕ್ಕೆ ನಾನೇ ಕಟ್ಟು ಹಾಕಿಕೊಂಡು ಬಿಟ್ಟಿದ್ದೆ. ಅದನ್ನು ಮುರಿಯದೆ ಶಿವಯೋಗಿಗಳ ಆಜ್ಞೆ ಪಾಲಿಸುವಂತಿರಲಿಲ್ಲ; ಪಾಲಿಸದಿರುವಂತೆಯೂ ಇರಲಿಲ್ಲ! ಆದದ್ದಾಗಲೆಂದು ಅವರ ಮೇಲೆಯೇ ಭಾರ ಹಾಕಿ, 'ಆಗಲಿ ಬುದ್ಧಿ,' ಎಂದು ಹಿಂದಿರುಗಿದೆ ಬೆಳಗಾವಿಗೆ. ಒಳಗೆ ಹೆಸರಿಸಲಾಗದ ವ್ಯಸನವೊಂದು ಸದಿಲ್ಲದ್ದಂತೆ ಕೊರೆಯುತ್ತಿದ್ದಿತು.

ಅಂದು ಪುರಾಣ ಮಂಗಲಕ್ಕೆ ಹೋಗಬೇಕಾದ ದಿನ. ಹೋಗುವ ಮುನ್ನ ಕಿತ್ತೂರಿನ ಸುತ್ತಲಿನ ಹಳ್ಳಿಗಳನ್ನು ನೋಡಿಕೊಂಡು ಹೋಗೋಣವೆಂದು ಕಿತ್ತೂರಿಗೆ ಹೋದೆ. ಮೂರು ಹಳ್ಳಿಗಳಿಗೆ ಹೋಗಿ, ಕುಡಿಯುವ ನೀರಿನ ಬಾವಿಗಳ ಒಂಡು ತೆಗೆದು ಆಳಗೊಳಿಸುವ ಕಾರ್ಯಗಳಿಗೆ ಸ್ಥಳದಲ್ಲಿಯೇ ಮಂಜೂರಿ ನೀಡಿ, ಕೆಲಸ ಕಣ್ಮುಂದೆಯೇ ಪ್ರಾರಂಭವಾದುದನ್ನು ನೋಡಿ ಟಿ.ಡಿ.ಬಿ. ಗೆಸ್ಟ್‌ಹೌಸ್‌ಗೆ ಬಂದೆ. ಊಟ ಮಾಡುತ್ತಿರುವಾಗಲೇ ಅದೆಂಥದೋ ಆಯಾಸವೆನಿಸಿತು. ಊಟ ಮಾಡಿ

ಹೊರಗೆ ಬಂದು ಆರಾಮ ಕುರ್ಚಿಯ ಮೇಲೆ ಒರಗಿದೆ. ಯೋಚಿಸಿ ಯೋಚಿಸಿ, ಅಲೆದು ಅಲೆದು, ದಣಿದ ಮನ ದೇಹಗಳನ್ನು ನಿದ್ರೆ ಆವರಿಸಿತು. ಇನ್ನೂ ಎಷ್ಟು ಹೊತ್ತು ಹಾಗೆಯೇ ಮಲಗುತ್ತಿದ್ದೇನೊ–'ಖಡ್ ಖಡ್ ಖಡಲ್' ಎಂದು ಸಿಡಿಲಿನ ಶಬ್ದ ಕರ್ಣಪಟಲಗಳ ಮೇಲೆ ಅಪ್ಪಳಿಸಿತು. ಕಣ್ಣೆರೆದು ನೋಡುತ್ತೇನೆ–ಧಾರಾಕಾರವಾಗಿ ಮಳೆ ಸುರಿಯುತ್ತಿದೆ! ನನ್ನ ಹರುಷದ ಕಡಲು ಉಕ್ಕಿ ಹರಿಯಿತು, ಮಳೆಯಲ್ಲಿಯೇ ಹೊರಟು ಬಿಟ್ಟೆ, ಮುರಗೋಡು ಮುಟ್ಟುವವರೆಗೆ ಮಳೆಯಲ್ಲಿಯೇ ಹೋದೆ! ನಿಸರ್ಗ ಒಮ್ಮೆ ಕಣ್ಣು ತೆರೆದರೆ ಎಷ್ಟು ಕಡೆಗೆ ನೀರು! ಇದರ ಮುಂದೆ ಪಂಪುಸೆಟ್ಟುಗಳ, ಲಾರಿಗಳ, ರಿಗ್ಗುಗಳ ಆಧಾರದ ಮಾನವ ಪ್ರಯತ್ನಗಳೆನಿತು ಕುಬ್ಜವಾದುವುಗಳು ಎನ್ನಿಸಿತು ನನಗೆ.

ಮುರಗೋಡಿನ ಮಠದಲ್ಲಿ ಪ್ರವೇಶಿಸುತ್ತಿದ್ದಂತೆಯೇ ಜಾನಪದ ಸಂಗೀತರತ್ನ ಬಾಳಪ್ಪ ಹುಕ್ಕೇರಿಯವರು ಅಡರಾಸಿ ಬಂದು, 'ಸಾಹೇಬರೇ, ಒಂದು ಮಹಿಮೆ ನಡೆದು ಹೋಯಿತು,' ಎಂದು ಕುಣಿಯುತ್ತ ಹೇಳಿದರು, "ಏನು?" ಎಂದು ಕೇಳಿದೆ. "ಇವೊತ್ತು ಭಕ್ತರೆಲ್ಲ ಅಪ್ಪನವರ ಹತ್ತಿರ ಹೋಗಿ ತಾವೀಗ ಮಳೆ ಕೊಡದಿದ್ದರೆ ಹಳ್ಳಿಗರು ಬೆಂದು ಹೋಗುತ್ತಾರೆ ಬುದ್ಧಿ, ಎಂದು ಗೋಗರೆದರು. ಅಪ್ಪನವರು 'ಕಾಯುವವ ಶಿವ ಇದ್ದಾನ್ರೆಪಾ' ಎಂದು ಎರಡೂ ಕೈಗಳನ್ನು ಆಕಾಶದತ್ತ ಎತ್ತಿದರು, ಏನಾಶ್ಚರ್ಯ ಸಾಹೇಬರೇ–ಬರಿಯ ಆಕಾಶ ಸುರಿಯ ತೊಡಗಿತು!" "ನಾನೂ ಕಿತ್ತೂರಿನಿಂದ ಮಳೆಯಲ್ಲಿಯೇ ಬಂದಿದ್ದೇನೆ ಬಾಳಪ್ಪಣ್ಣ; ಬಹಳ ಒಳ್ಳೆಯದಾಯಿತು. ಇಂದು ನನ್ನ ತಲೆಯ ಮೇಲಿನಿಂದ ಹೆಬ್ಬೆಟ್ಟವೊಂದು ಇಳಿದಂತಾಯಿತು," ಎಂದು ಹೇಳಿ ಅಜ್ಜನವರಿಗೆ, ಆ ಶತಾಯು ಶಿವಯೋಗಿಗೆ ಪ್ರಣಾಮ ಪುಷ್ಪಾಂಲಿಯನ್ನು ಅರ್ಪಿಸಿದೆ. ಪುರಾಣ ಮಂಗಲ ಜನಮಂಗಲದಾಯಕವಾಗಿ ನಡೆಯಿತು.

ಇದಾದ ಮೇಲೆ ಬಹಳ ದಿನಗಳು ಕಳೆದಿರಲಿಲ್ಲ. ನಾನು ಬೆಳಗಾವಿಯ ಸೇನಾ ಕೇಂದ್ರದ ಭೋಜನ ಸಮಾರಂಭವೊಂದರಲ್ಲಿ ಭಾಗವಹಿಸಲು ಹೋಗಿದ್ದೆ. ಇನ್ನೂ ಭೋಜನ ಪ್ರಾರಂಭವಾಗಿರಲಿಲ್ಲ. ರಾತ್ರಿ ಹತ್ತು ಘಂಟೆಯ ಸಮಯ. ಮನೆಯಿಂದ ಹೆಂಡತಿಯ ಫೋನ್ ಬಂದಿತು. ಯಾಕೋ ಎದೆ ಧಸ್ಸೆಂದಿತು, ಹೋಗಿ ಮಾತನಾಡಿದಾಗ ನನ್ನ ಭಯ ಕಂಪನಕ್ಕೆ ಕಾರಣ ತಿಳಿಯಿತು. ಅಜ್ಜನವರು ಲಿಂಗೈಕ್ಯರಾಗಿದ್ದರು! ಮನೆಗೆ ಧಾವಿಸಿದೆ. ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕಕ್ಕೆ ಫೋನ್ ಮಾಡಿ ಸುದ್ದಿ ತಿಳಿಸಿ ಅಂದಿನ ಪತ್ರಿಕೆಯ ಮುಖಪುಟದಲ್ಲಿಯೇ ಈ ದುಃಖದ ವಾರ್ತೆಯನ್ನು ಅಜ್ಜನವರ ಭಾವಚಿತ್ರದೊಡನೆ ಪ್ರಕಟಿಸಲು ಕೇಳಿಕೊಂಡೆ; ಅವರು ಅಂತೆಯೇ ಮಾಡಿ ಸಹಕರಿಸಿದರು, ಆಕಾಶವಾಣಿಯ ಮರುದಿನದ ಬೆಳಗಿನ ಪ್ರದೇಶ ವಾರ್ತೆಗಳಲ್ಲಿ ಈ ವಾರ್ತೆ ಓದುವಂತೆ ಮಾಡಿದೆ. ಬೈಲಹೊಂಗಲದ



ಡಿ.ವೈ.ಎಸ್.ಪಿ. ಹೆಗ್ಗಡೆಯವರಿಗೆ ಫೋನ್ ಮಾಡಿ "ನಾಳೆ ಕನಿಷ್ಠ ೨೫ ಸಾವಿರ ಭಕ್ತರು ಬರಬಹುದು; ನೀವು ತಕ್ಕಷ್ಟು ಪೋಲೀಸ್ ಸಿಬ್ಬಂದಿಯೊಡನೆ ಹೋಗಿ 'ಕ್ರೌಡ್ ಕಂಟ್ರೋಲ್' ವ್ಯವಸ್ಥೆ ಮಾಡಿರಿ" ಎಂದು ಹೇಳಿ ಮಲಗಿದೆ. ಮರುದಿನ ಬೆಂಗಳೂರಿನಿಂದ ಲೋಕಸಭಾ ಚುನಾವಣೆಯ ಮತ ಪತ್ರಗಳು ಬರುವುವಿದ್ದುವು; ರಿಟರ್ನಿಂಗ್ ಆಫೀಸರನಾಗಿ ನಾನೇ ಅವುಗಳನ್ನು ಒಳಗಿರಿಸಿ, ಬಾಗಿಲ ಬೀಗ ಮುದ್ರಿಸಿ, ಕಾವಲಿನ ವ್ಯವಸ್ಥೆ ಮಾಡಬೇಕಾಗಿದ್ದಿತು. ಆದುದರಿಂದ ನಾನೂ ನನ್ನ ಹೆಂಡತಿಯೂ ಮರುದಿನ ಬೆಳಗಿನ ನಾಲ್ಕು ಘಂಟೆಗೇ ಎದ್ದು ಸ್ನಾನ ಮಾಡಿ ಮುರಗೋಡಿಗೆ ಹೊರಟೆವು. ಇನ್ನೂ ನಸುಕಿದ್ದಾಗಲೇ ಮುರಗೋಡು ಮುಟ್ಟಿದೆವು. ಅಜ್ಜನವರ ಪಾರ್ಥಿವ ಶರೀರಕ್ಕೆ ಚಂದನ ಹಾರ ಅರ್ಪಿಸಿ ನಮಸ್ಕರಿಸಿ ಹಿಂದಿರುಗಿದೆವು. ಆಗ ಅಲ್ಲಿದ್ದವರು ನಾಲ್ಕೈದುನೂರು ಜನ ಮಾತ್ರ. ಬೆಳಗಾವಿಗೆ ಹಿಂದಿರುಗಿ ನಾನು ಚುನಾವಣಾ ಕಾರ್ಯದಲ್ಲಿ ಮುಳುಗಿ ಹೋದೆ. ಸಂಜೆ ಹೆಗ್ಗಡೆಯವರ ಫೋನು ಬಂದಿತು, "ಸಾಹೇಬರೇ, ಇವೊತ್ತು ನನ್ನ ಜೀವಮಾನದಲ್ಲಿಯೇ ಅತ್ಯದ್ಭುತದಿನ, ಎರಡು ಲಕ್ಷ ಜನರು ಮುರಗೋಡಿಗೆ ಬಂದಿದ್ದರು. ಸುತ್ತಲೂ ದೂರದೂರದವರೆಗೆ ಕಾರುಗಳು, ಲಾರಿಗಳು, ಎತ್ತಿನ ಬಂಡಿಗಳು, ಕುದುರೆಗಳು–ಇನ್ನೂ ಏನೇನೋ!" ನಾನೂ ಅವಾಕ್ಕಾದೆ. ಎಂಥ ರಾಷ್ಟ್ರಧುರೀಣ ಬಂದರೂ ಎರಡು ಲಕ್ಷ ಜನ ಸೇರಬೇಕಾದರೆ ಏನೆಲ್ಲ ಮಾಡಬೇಕಾಗುತ್ತದೆ. ಎಷ್ಟು ಶ್ರಮ ವಹಿಸಬೇಕಾಗುತ್ತದೆ. ಇಲ್ಲೊಬ್ಬ ನಿಜವಾದ ಶಿವಯೋಗಿ, ಮಹವನರಿದ ಮಹಾಂತ ಲಿಂಗೈಕ್ಯರಾದರೆ ಯಾರೂ ಕರೆಯದೆ ಎರಡು ಲಕ್ಷ ಜನ ನಿಜವಾದ ಭಕ್ತಿಭಾವದಿಂದ ಬಂದು ಶ್ರದ್ಧಾಂಜಲಿ ಸಮರ್ಪಿಸಿ ಹೋಗುತ್ತಾರೆ! ಎಂಥ ಆತ್ಮಶಕ್ತಿ ಅಜ್ಜನವರದು? ದಶಕ ದಶಕಗಳಿಂದ ಬೆಳಗಾವಿ ಜಿಲ್ಲೆಯ ಜನರಿಗೆ, ಆ ಜಿಲ್ಲೆಯಾಚೆಯ ಜನರಿಗೆ ಗುರು, ತಂದೆ, ಬಂಧು, ಬಳಗ–ಎಲ್ಲ ಆಗಿದ್ದ ಆ ಮಹಾತ್ಮನನ್ನುಳಿದು ಬೆಳಗಾವಿ ಜಿಲ್ಲೆಯನ್ನು ಊಹಿಸುವುದಾದರೂ ಹೇಗೆ? ನಾನಂತೂ ಮಂಕಾಗಿ ಬಿಟ್ಟಿದ್ದೆ. ತಂದೆಯವರು ಹೋದರು, ಮೃತ್ಯುಂಜಯಪ್ಪಗಳು ಹೋದರು, ಈಗ ಮಹಾಂತ ಶಿವಯೋಗಿಗಳು ಹೋದರು. ಸರ್ವವೂ ಶೂನ್ಯವಾಗಿ ತೋರಿತಾಗ!

## ಮಂತ್ರಿಗಳ ನಿರಂತರ ಯಾತ್ರೆ :

ಬರಗಾಲ ಕಾಮಗಾರಿಗಳು ಯಶಸ್ವಿಯಾಗಿ ಮುಗಿಯುತ್ತ ಬಂದಂತೆ ಮಂತ್ರಿಗಳ ಸವಾರಿ ಬಂದದ್ದೇ ಬಂದದ್ದು! ಎಲ್ಲರೂ ತಮ್ಮದೂ ಮುಖ ತೋರಿಸಿ, ತಾವೂ ಅವರಿಗಾಗಿ ಮಹತ್ತರವಾದುದನ್ನೇ ಮಾಡಿದೆವೆಂಬುದನ್ನು ಪರೋಕ್ಷವಾಗಿ ಹೇಳಿ ಹೋಗಬೇಕೆನ್ನುವವರೇ! ಬಂದವರ ಹಿಂದೆ ತಿರುಗುವುದು, ತೋರಿಸಿದುದನ್ನೇ

ತೋರಿಸುವುದು, ಹೇಳಿದುದನ್ನೇ ಹೇಳುವುದು ನಡೆಯಿತು. ಜನರೂ ಬೇಸತ್ತರು, ನಾನೂ ಬೇಸತ್ತೆ. ಎಲ್ಲರೂ ರೈತರ ಮನವಿಗಳನ್ನು ಬೆಂಗಳೂರಿಗೆ ಒಯ್ದು ಅಲ್ಲಿ ಅವುಗಳಿಗೆ ಅಜ್ಞಾತವಾಸದ ವ್ಯವಸ್ಥೆ ಮಾಡುವವರೇ! ಉಳಿದವರು ಸುಮ್ಮನೇ ಹೋದರೆ ಅರ್ಥಮಂತ್ರಿ ಘೋರ್ಪಡೆಯವರು ಅನರ್ಥ ಮಾಡಿಹೋದರು! ಅದುವರೆಗೆ ಎಲ್ಲಿಯೂ ಆಹಾರ ಧಾನ್ಯಗಳ ಕೊರತೆ ತಲೆದೋರದಂತೆ, ಬೆಲೆಗಳು ಮೇಲೇರದಂತೆ ನೋಡಿಕೊಂಡಿದ್ದೆ. ವರ್ತಕರ ಸಹಕಾರವೂ ಸಾಕಷ್ಟು ಪ್ರಮಾಣದಲ್ಲಿ ಸಿಕ್ಕಿದ್ದಿತು. ಯಾವುದೇ ಅಗತ್ಯ ವಸ್ತುವಿನ ಬೆಲೆಯೇರಿದರೂ ಅವರನ್ನು ಕರೆದು ಅದು ತಗ್ಗುವಂತೆ ಏರ್ಪಾಟು ಮಾಡಿ ಕಳಿಸುತ್ತಿದ್ದೆ. ಆದರೆ ಅರ್ಥಮಂತ್ರಿಗಳು ಮುಚ್ಚಿಟ್ಟ ಧಾನ್ಯ ಸಂಗ್ರಹಗಳ ಮೇಲೆ ದಾಳಿಗಳನ್ನೇಕೆ ಮಾಡಿಲ್ಲವೆಂದು ರೇಗಿದರು. "ಅವುಗಳ ಅರಿವು ನಮಗಿದೆ; ಪ್ರಸಂಗಾನುಸಾರ ಅವುಗಳನ್ನು ವಶಪಡಿಸಿಕೊಳ್ಳುತ್ತೇವೆ; ಈಗ ಕೊರತೆಯ, ಬೆಲೆಯೇರಿಕೆಯ ಸಮಸ್ಯೆಯೇ ಇಲ್ಲ; ನನ್ನ ಜಿಲ್ಲೆಯ ಜವಾಬದಾರಿ ನನ್ನದು. ದಯವಿಟ್ಟು ನನ್ನ ನಿರ್ಣಯ ನಾನೇ ತೆಗೆದುಕೊಳ್ಳಲು ಬಿಡಿ" ಎಂದು ಪರಿಪರಿಯಿಂದ ತಿಳಿಸಿ ಹೇಳಿದರೂ ಗೋರ್ಕಲ್ಲ ಮೇಲೆ ಮಳೆಗರೆದಂತಾಯಿತು. "ಇಂದು ರಾತ್ರಿ ದಾಳಿ ನಡೆಯಲೇಬೇಕು; ಬೆಳಗಾವಿಯ ಹಾಗೂ ಹಳ್ಳಿಗಳ ಯೋಗ್ಯ ದರದ ಅಂಗಡಿಗಳಿಗೆ ದಾಳಿಗಳ ಮೂಲಕ ವಶಪಡಿಸಿಕೊಂಡ ಧಾನ್ಯಗಳ ವಿತರಣೆಯಾಗಲೇಬೇಕು" ಎಂದು ಹಟ ಹಿಡಿದರು. "ಇಂದಿನ ದಾಳಿಯಲ್ಲಿ ದೊರೆತುದು ಒಂದು ದಿನಕ್ಕೆ ಸಾಕಾಗಬಹುದು; ಧಾನ್ಯ ಸಂಗ್ರಹಗಳೆಲ್ಲ ಭೂಗತವಾಗಿಟ್ಟರೆ ಮುಂದೆ ಎಲ್ಲಿಂದ ಆಹಾರ ಧಾನ್ಯಗಳನ್ನು ಪೂರೈಸುವುದು–ಈ ಅಂಗಡಿಗಳಿಗೆ?" ಎಂದು ಕೇಳಿದೆ. ನಾಳೆಗೇ ಹುಬ್ಬಳ್ಳಿಯ ಫುಡ್ ಕಾರ್ಪೋರೇಷನ್‌ಗೆ ಲಾರಿಗಳನ್ನು ಕಳಿಸಿರಿ; ಎಷ್ಟು ಬೇಕಾದರೂ ಅಲ್ಲಿ ದೊರೆಯುತ್ತದೆ," ಎಂದು ಎದೆತಟ್ಟಿ ಹೇಳಿದರು. ಅಂದು ರಾತ್ರಿ ಬೆಳಗಾವಿಯೆಲ್ಲೆಲ್ಲ ದಾಳಿ ನಡೆಸಿದೆವು. ಸಿಕ್ಕ ಆಹಾರ ಧಾನ್ಯಗಳು ಮುನ್ನೂರು ಮೂಟೆಗಳು ಮಾತ್ರ; ನಿರೀಕ್ಷಿಸಿದ್ದಂತೆ ಜಿಲ್ಲೆಯಲ್ಲೆಲ್ಲ ಧಾನ್ಯ ಸಂಗ್ರಹಗಳು 'ಕಾಣೆ'ಯಾಗಿ ಬಿಟ್ಟುವು! ಹುಬ್ಬಳ್ಳಿಗೆ ಇಪ್ಪತ್ತೊಂದು ಲಾರಿಗಳನ್ನು ಕಳಿಸಿದೆ. ಎಲ್ಲವೂ ಹೇಗೆ ಹೋಗಿದ್ದುವೋ ಹಾಗೆ ಬಂದುಬಿಟ್ಟುವು! ಅಲ್ಲಿ ಒಂದು ಒಡಕು ಕಾಳೂ ಇರಲಿಲ್ಲ! ಇಂಗ್ಲೆಂಡಿನಲ್ಲಿ ಅರ್ಥಶಾಸ್ತ್ರ ಓದಿದ್ದ ನಮ್ಮ ಅರ್ಥಮಂತ್ರಿಗಳ ಕ್ರಮ ವ್ಯರ್ಥವಾಗಿದ್ದಿತು ಅಲ್ಲ, ಅನರ್ಥವಾಗಿದ್ದಿತು. ಮುಂದೆ ಈ ಮಹಾಶಯರೇ ಸೊಂಡೂರಿನಲ್ಲಿ ಗಣಿ ಕಾರ್ಮಿಕರಿಗಾಗಿ ಹತ್ತು ಹಾಸಿಗೆಗಳ ಆಸ್ಪತ್ರೆಯೊಂದನ್ನು ಕಟ್ಟಿಸಲು ನಿವೇಶನವೊಂದನ್ನು ದಾನವಾಗಿ ಕೊಡಬೇಕೆಂದು ಕಾರ್ಮಿಕ ಮಂತ್ರಿ ಅಜೀಜ್ ಸೇಠ್ ಸಾಹೇಬರು ಸ್ವತಃ ಹೋಗಿ ಕೇಳಿದಾಗ ಸೊಂಡೂರಿನಲ್ಲಿ ನನ್ನದೆನ್ನುವ ನಿವೇಶನವೇ ಇಲ್ಲವೆಂದು ಹೇಳಿಬಿಟ್ಟರು. ಊರಲೆಲ್ಲ ಅವರ ಜಾಗಗಳೇ ಇದ್ದರೂ!



ಇವರ ಬಗ್ಗೆಯೇ ಬರೆಯುವುದು ಬೇಕಾದಷ್ಟಿದೆ. ಆದರೆ ಇಲ್ಲಿ ಅದಕ್ಕೆ ಅನುವು ಇಲ್ಲ.

ಈ ಆಘಾತದಿಂದ ಚೇತರಿಕೊಳ್ಳುವಷ್ಟರಲ್ಲಿ ಇನ್ನೊಂದು ಆಗಬಾರದುದು ಆಗಿ ಹೋಯಿತು. ನಾಲ್ಕು ದಿನಗಳಲ್ಲಿಯೇ ಮತ್ತೊಬ್ಬ ರಾಜ್ಯ ಸಚಿವರು ಬಂದರು. ವಿಭಾಗಾಧಿಕಾರಿಗಳ ಚೇಂಬರಿನಲ್ಲಿ ಇನ್ನೊಂದು ಅಧಿಕಾರಿಗಳ ಸಮ್ಮೇಳನ ಅವರಿಗಾಗಿ. ಅದುವರೆಗೆ ಅಂಥ ಎಷ್ಟು ಸಮ್ಮೇಳನಗಳಾಗಿದ್ದುವೋ! ರಾಜ್ಯ ಸಚಿವರು ಕೊರಳು ಮುಚ್ಚಿದ ಕಾಲರು ಬಿಚ್ಚುತ್ತ, ಪಕ್ಕದಲ್ಲಿ ಕುಳಿತಿದ್ದ ವಿಭಾಗಾಧಿಕಾರಿಗಳಿಗೆ 'ಸೆಕೆ' 'ಫ್ಯಾನ್' ಎಂದರು. ವಿಭಾಗಾಧಿಕಾರಿಗಲೇ ಅಡರಾಸಿ ಹೋಗಿ 'ಫ್ಯಾನ್' ಹಾಕಿದರು. ನಾನು ಭೂಮಿಯಲ್ಲಿಳಿದು ಹೋದೆ. ಇನ್ನು ಬೆಳಗಾವಿಯಲ್ಲಿರಬಾರದೆನ್ನಿಸಿತು. ಒಂದು ತಿಂಗಳ ರಜೆಗೆ ಬರೆದುಕೊಂಡೆ. ಎರಡೇ ದಿನಗಳಲ್ಲಿ ಪಂಚಾಯತಿ ಸಮ್ಮೇಳನಕ್ಕಾಗಿ ಸಚಿವ ಕೆ.ಎಚ್. ಪಾಟೀಲರು ಬಂದರು. ತುಂಬಿದ ಸಭೆಯಲ್ಲಿ ನಾನು ಮಾಡಿದ್ದ ಜನಕಲ್ಯಾಣ ಕಾರ್ಯಗಳನ್ನು ಪ್ರಶಂಸಿಸಿ "ಜಿಲ್ಲೆಯ ಪ್ರಜೆಗಳ ಪರವಾಗಿ ಕೇಳಿಕೊಳ್ಳುತ್ತೇನೆ, ಪುರಾಣಿಕರು ರಜೆ ರಹಿತಗೊಳಿಸಬೇಕು." ಎಂದು ಹೇಳಿದರು ಒಪ್ಪಿದೆ. ಅವರು ಹೇಳಿದ್ದ ಒಂದು ಹೊಸ ಕಾರ್ಯ ಆರಂಭಿಸಿದೆ; ಮಂಗಳೂರಿನ ರಾಸಾಯನಿಕ ಗೊಬ್ಬರ ಕಾರ್ಖಾನೆಗೆ ಒಂದು ಲಕ್ಷ ರೂಪಾಯಿ ಷೇರು ಭಂಡವಾಳ ಕೂಡಿಸಿದೆ. ಹದಿನೈದೇ ದಿನಗಳಲ್ಲಿ ನನ್ನನ್ನು ಬೆಂಗಳೂರಿಗೆ ಕಾರ್ಮಿಕ ಕಮೀಷನರನ್ನಾಗಿ ವರ್ಗಾಯಿಸಿದ ಆಜ್ಞೆ ಬಂದಿತು! ಆಗ ಕಾರ್ಮಿಕ ವಿವಾದಗಳು ಹೆಚ್ಚಿದ್ದುವಲ್ಲದೆ ಹಿಂಸಾತ್ಮಕವಾಗಿ ಪರಿಣಮಿಸಿದ್ದುವೆಂದೂ, ನಾನೇ ಅವುಗಳನ್ನು ಪರಿಹರಿಸಬಲ್ಲೆನೆಂದೂ ಹೊರಗೆ ಕೊಟ್ಟ ಕಾರಣ. ಆದರೆ ಒಳಗಿನ ಕಾರಣ ಬೇರೆಯಿದ್ದಿತು. ಅದನ್ನು ಬರೆದು ನನ್ನ ಬರವಣಿಗೆಯನ್ನು ಕರಿದುಗೊಳಿಸಿಕೊಳ್ಳಲಾರೆ! ಹತ್ತೂ ಅಭಿವೃದ್ಧಿ ಮಂಡಳಿಗಳ ಅಧ್ಯಕ್ಷರೂ, ಮಹಾರಾಷ್ಟ್ರೀಯರೇ ಬಹುಸಂಖ್ಯೆಯಲ್ಲಿದ್ದ ಬೆಳಗಾವಿಯ ನಗರ ಸಭೆಯ ಅಧ್ಯಕ್ಷರೂ ಏಕಕಂಠದಿಂದ ಇನ್ನೊಂದು ವರ್ಷವಾದರೂ ನನ್ನನ್ನು ಅಲ್ಲಿ ಉಳಿಸಲು ಕೇಳಿಕೊಂಡರು. ಯಾರೂ ಕಿವಿಗೊಡಲಿಲ್ಲ ಅದಕ್ಕೆ. ನನಗೆ ಆನಂದವೇ ಆಗಿದ್ದಿತು. ಕೂಡಲೇ ಹೊರಟು ಬರಬೇಕೆಂದು ಆಜ್ಞೆಯೂ ಆಗಿದ್ದಿತು. ನನ್ನ ಕೊನೆಯ ಮಗಳು ಭಾರತಿಗೆ ಅಪರೇಷನ್ ಮಾಡಿ ಹೆರಿಗೆ ಮಾಡಿಸಿದರು. ಇನ್ನೂ ಅವಳು ಒಂದು ತಿಂಗಳ ಬಾಣಂತಿ. ಗಾಯ ಹಸಿಯಾಗಿಯೇ ಇದ್ದಿತು. ಆ ತಾಯಿ–ಮಗುವನ್ನು ವಿಮಾನದಲ್ಲಿ ಕಳಿಸಲು ಹೇಳಿ, ಹೆಂಡತಿ ಮಗ ಸೊಸೆಯನ್ನು ಅಲ್ಲಿಯೇ ಬಿಟ್ಟು ಬೆಂಗಳೂರಿಗೆ ಬಂದುಬಿಟ್ಟೆ. ಮಗ ಇಂಡಾಲಿನಲ್ಲಿ ಕೆಲಸಕ್ಕೆ ಸೇರಿದ್ದ. ಅವನನ್ನೂ,

ಸೊಸೆ ಲತಾ ಪುರಾಣಿಕಗಳನ್ನೂ ಇಂಡಾಲ್ ಕಾಲನಿಯ ಕಿರಿಯ ಮನೆಯೊಂದರಲ್ಲಿ ಬಿಟ್ಟು, ಭಾರತಿ–ರಶ್ಮಿಯರನ್ನು ವಿಮಾನ ಮೂಲಕ ಕಳಿಸಿ, ಸಾಮಾನು ಕಟ್ಟಿಸಿ ಲಾರಿಯ ಮೂಲಕ ಕಳಿಸಿ, ಸ್ವಂತದ ಕಾರಿನಲ್ಲಿ ತಾನೊಬ್ಬಳೇ ಬೆಂಗಳೂರಿಗೆ ಬಂದಳು ಗಿರಿಜಾ–ನನ್ನ ಗಿರಿಜಾ! ನನ್ನನ್ನು ಬೀಳ್ಕೊಡುವ ಸಮಾರಂಭಗಳಲ್ಲಿ ಹೊಗಳಿದ ಕೆಳಗಿನ ಅಧಿಕಾರಿಗಳಾರೂ ಆಕೆಯ ಸಹಾಯಕ್ಕೆ ಹೋಗಿರಲಿಲ್ಲ! ಏನು ಬೀಳ್ಕೊಡುವ ಸಮಾರಂಭಗಳವು–ಜಿಲ್ಲೆಯ ತುಂಬ, ಎಲ್ಲ ಭಾಷೆಗಳ, ಎಲ್ಲ ಮತಗಳ, ಎಲ್ಲ ಉದ್ಯೋಗಗಳ ಜನರಿಂದ! ಆದರೆ ಇವಾವೂ ನನ್ನ ಹೆಂಡತಿ ಏಕಾಕಿಯಾಗಿ ಅಲ್ಲಿಂದ ಹೊರಡುವ ಸಿದ್ಧತೆ ನಡೆಸಿದ್ದಾಗ ಆಕೆಗೆ ಉಪಯೋಗವಾಗಲಿಲ್ಲ! ಆ ಆಪತ್ಕಾಲದಲ್ಲಿ ನೆರವಾದವರೊಬ್ಬರೇ–ಶ್ರೀ–ಎನ್.ಎಸ್. ಪೈ ಅವರು, ಅವರ ಕುಟುಂಬದವರು. ಇಂದಿಗೂ ಅವರು ನಮ್ಮ ಅತ್ಯಂತ ಆತ್ಮೀಯ ಹಿತಬಂಧುಗಳು.

ಮೊದಲು ಡಿ.ಸಿ. ಬಂಗ್ಲೆಯಲ್ಲಿ ಯಾವಾಗಲೂ ಕಾಣುತ್ತಿದ್ದರಂತೆ ಕಂದಾಯ ಇಲಾಖೆಯ ಮೂರನೆಯ ದರ್ಜೆಯ ಅಧಿಕಾರಿಗಳು. ನಾನಿರುವವರೆಗೆ ಅತ್ತ ಅವರನ್ನು ಸುಳಿಯಗೊಟ್ಟಿರಲಿಲ್ಲ ನಾನು. ಅದೇ ಸಿಟ್ಟಿನಿಂದಲೇ ಏನೋ–ಅವರಾರೂ ಹೊರಳಿ ನೋಡಲಿಲ್ಲ ಆ ಕಡೆಗೆ ಆಗ. ಆದರೆ ಅತ್ಯಂತ ಆತ್ಮೀಯವಾದ ಬೀಳ್ಕೊಡುವ ಸಮಾರಂಭಗಳನ್ನು ಏರ್ಪಡಿಸಿದ್ದ ಬೆಳಗಾವಿಯ ನಗರ ಸಭೆ, ಬಾರ್ ಅಸೋಸಿಯೇಷನ್, ಪತ್ರಿಕಾಕರ್ತರ ಸಂಘ, ಕನ್ನಡ ಬರಹಗಾರರ ಸಂಘ, ಜೈನ ಮುಸಲ್ಮಾನ ಸಮಾಜಗಳು, ವಿವಿಧ ಸಂಘ ಸಂಸ್ಥೆಗಳನ್ನು ಮರೆಯುವುದು ಹೇಗೆ? ಆ ಹಳ್ಳಿಗಳ ಜನರ ಮುಗ್ಧ ಹೃದಯಗಳನ್ನು ಮರೆಯುವುದು ಹೇಗೆ? ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಲೇಬೇಕೆಂದು ಹೋರಾಡುತ್ತಿದ್ದ ಮಹಾರಾಷ್ಟ್ರೀಯ ಮುಖಂಡರೇ ಮನೆಯವರೆಗೆ ಬಂದು ತಮ್ಮ ಮೆಚ್ಚಿಗೆ ಸೂಚಿಸಿದುದನ್ನು ಮರೆಯುವುದು ಹೇಗೆ? ನನ್ನ ಕೋರಿಕೆಯಂತೆ ಕನ್ನಡ ಸಾಹಿತ್ಯ ಪರಿಷತ್ತಿಗೆ ಬೆಳಗಾವಿಯ ನಗರ ಸಭೆ ಐದು ಸಾವಿರ ರೂಪಾಯಿಗಳನ್ನೂ, ಕೆ. ಹನುಮಂತಯ್ಯನವರಿಗೆ ಮಾನಪತ್ರವನ್ನೂ ಕೊಟ್ಟುದನ್ನು ಮರೆಯುವುದು ಹೇಗೆ? ಡಾ.ಹಾ.ಮಾ. ನಾಯಕರ ಅಧ್ಯಕ್ಷತೆಯಲ್ಲಿ ಪರಿಷದಧ್ಯಕ್ಷ ಜಿ. ನಾರಾಯಣರೇ "ಇದು ಜಿಲ್ಲಾ ಸಾಹಿತ್ಯ ಸಮ್ಮೇಳನವಲ್ಲ, ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ," ಎಂದು ಉದ್ಗರಿಸುವಂತೆ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಜರುಗಿಸಿದಾಗ ಮಹಾರಾಷ್ಟ್ರೀಯರೂ ಅದಕ್ಕೆ ನೆರವಾದುದನ್ನು ಮರೆಯುವುದು ಹೇಗೆ?



## ಮರಳಿ ಬೆಂಗಳೂರಿಗೆ :

ಕಾರ್ಮಿಕ ಮಂತ್ರಿಗಳಾದ ಅಜೀಜ್‌ಸೇಠ್ ಸಾಹೇಬರು ಬಹಳ ಕೋಪಿಷ್ಠರೆಂದು ಹಲವರು ಹೆದರಿಸಿದ್ದರು ನನ್ನನ್ನು. ಆದರೆ ನನ್ನನ್ನು ಮಾತ್ರ ಬಹಳ ಪ್ರೀತ್ಯಾದರಗಳೊಡನೆ ನೋಡಿಕೊಂಡರವರು. ನಾನೂ ಚಾರ್ಜು ವಹಿಸಿಕೊಂಡ ದಿನದಿಂದಲೇ ಅಗ್ನಿಶಾಮಕ ಯಂತ್ರದಂತೆ ಕಾರ್ಯತತ್ಪರನಾದೆ. ಬೆಂಗಾಲ್ ಲ್ಯಾಂಪ್ಸ್, ಎಚ್.ಎಮ್.ಟಿ., ಎಮ್ಕೋ ಮೊದಲಾದ ಕಾರಖಾನೆಗಳಲ್ಲಿ ಹಿಂಸಾಕಾಂಡ ನಡೆದುದಲ್ಲದೆ ಅಗ್ನಿ ದೇವನೂ ಅಲೆದಾಡಿದ್ದ. ಮೊದಲು ಎಮ್ಕೋ ವಿವಾದವನ್ನು ಕೈಗೆತ್ತಿಕೊಂಡೆ. ಕಾರ್ಮಿಕರ ಪರವಾಗಿ ಮದ್ರಾಸಿನ ಕುಚೇಲರ್ ಬಂದಿದ್ದರು. ಅವರು ಪ್ರಚಂಡ ಮುಖಂಡರು. ಎರಡು ದಿನ ಬಿಟ್ಟೂ ಬಿಡದೆ ನಡೆಸಿದ ಸಂಧಾನದ ಫಲವಾಗಿ ಒಪ್ಪಂದವೊಂದಕ್ಕೆ ಅಂಕಿತ ಹಾಕಿದರು ಮಾಲಿಕ ಕಾರ್ಮಿಕರಿಬ್ಬರೂ. ಈ ಸುದ್ದಿ ಹರಡುತ್ತಲೇ ಸಂಧಾನಗಳ ಸುಗ್ಗಿಯೇ ಷುರುವಾಯಿತು. ಒಂದೊಂದಾಗಿ ಸಂಧಾನಗಳು ಫಲಿಸತೊಡಗಿದುವು. ಬೆಂಗಳೂರು, ದಾವಣಗೆರೆ, ಹರಿಹರ, ಹುಬ್ಬಳ್ಳಿ, ದಾಂಡೇಲಿ, ಗೋಕಾಕ ಮೊದಲಾದ ಕಡೆಗಳಲ್ಲಿ, ಕಾಫೀ ತೋಟಗಳಲ್ಲಿ, ಚಹಾ ತೋಟಗಳಲ್ಲಿ–ಎಲ್ಲೆಲ್ಲಿ ಕಾರ್ಮಿಕ ಅಶಾಂತಿಯಿದ್ದಿತೋ ಅಲ್ಲಲ್ಲಿ ಒಪ್ಪಂದಗಳು ಉಂಟಾಗಿ ಶಾಂತಿ ಮರಳಿತು. ಎಚ್.ಎಮ್.ಟಿ.ಯ ವಿವಾದ ಮಾತ್ರ ವಿಶೇಷ ತಂತ್ರವೊಂದನ್ನು ಉಪಯೋಗಿಸುವಂತೆ ಮಾಡಿತು. ಯಾವುದು ಪ್ರಾತಿನಿಧಿಕ ಕಾರ್ಮಿಕ ಸಂಸ್ಥೆಯೆಂಬುದನ್ನು ನಿರ್ಧರಿಸಲು ಗುಪ್ತ ಮತದಾನ ಪದ್ಧತಿಯ ಮೇರೆಗೆ ಅಭಿಪ್ರಾಯ ಸಂಗ್ರಹಣೆಯ ಸಲಹೆ ಮುಂದಿಟ್ಟೆ. ನಾನೇ ರಿಟರ್ನಿಂಗ್ ಆಫೀಸರ್ ಆಗಿ ಆಯ್ಕೆ ನಡೆಸುವುದಾದರೆ ಒಪ್ಪುವುದಾಗಿ ಎಲ್ಲ ಕಾರ್ಮಿಕ ಸಂಘಗಳ ನೇತಾರರೂ ಹೇಳಿದರು. ನಾನೇ ರಿಟರ್ನಿಂಗ್ ಆಫೀಸರ್ ಆಗಿ ಸಾರ್ವತ್ರಿಕ ಚುನಾವಣೆಗಳನ್ನು ನಡೆಸುವಷ್ಟೇ ಅಚ್ಚುಕಟ್ಟಾಗಿ ಚುನಾವಣೆ ನಡೆಸಿದೆ. ಚುನಾವಣೆಯ ಫಲಿತಾಂಶವನ್ನು ಎಲ್ಲರೂ ಒಪ್ಪಿಕೊಂಡರು. ಅಲ್ಲಿಗೆ ಆ ವಿವಾದ ಮುಕ್ತಾಯಗೊಂಡಿತು. ಕೈಗಾರಿಕಾ ಸಂಬಂಧಗಳ ಕ್ಷೇತ್ರದಲ್ಲಿ ಇದೊಂದು ಹೊಸ ರೀತಿ (Blazing a New trail in Industrial Relations) ಎಂದು ಹಿಂದೂ ಪತ್ರಿಕೆಯಲ್ಲಿ ಎಚ್.ಎಮ್.ಟಿ.ಯ ವರದನ್ ಅವರು ವಿಸ್ತೃತ ಲೇಖನ ಬರೆದರು. ಆ ವರ್ಷದ ಅಸೆಂಬ್ಲಿಯ ಅಯವ್ಯಯ ಪತ್ರಿಕೆಯ ಅಧಿವೇಶನದಲ್ಲಿ ಕಾರ್ಮಿಕ ಇಲಾಖೆಯ ಬೇಡಿಕೆಗಳು ಬಂದಾಗ ಇಲಾಖೆಯ, ಇಲಾಖೆಯ ಮುಖ್ಯಾಧಿಕಾರಿಯ ಸಾಧನೆಗಳ ಪ್ರಶಂಸೆ ನಡೆಯಿತು.

ಕನಿಷ್ಠ ವೇತನ ಕಾನೂನು ಹುಟ್ಟಿದಾಗಿನಿಂದ ಅದರ ಪ್ರಯೋಜನ ಪಡೆದಿದ್ದವರೆಷ್ಟು ಅಸಂಘಟಿತ ಕಾರ್ಮಿಕರೋ ಅದರ ಮುಮ್ಮಡಿ, ನಾಲ್ವಡಿ ಜನರು

ಅದರಿಂದ ಲಾಭ ಹೊಂದುವಂತೆ ಮಾಡಿದೆ. ಅಸಂಘಟಿತ ರಂಗದ ಕಾರ್ಮಿಕರ ಸ್ಥಿತಿ ಶೋಚನೀಯವಾಗಿದ್ದಿತು. ಸಂಘಟಿತ ಕ್ಷೇತ್ರದ ಕಾರ್ಮಿಕರಿಗೆ ಸಾಮೂಹಿಕ ಸಂಧಾನದ, ಮುಷ್ಕರದ, ನ್ಯಾಯಲಯ ನಿರ್ಣಯದ ಹಕ್ಕುಗಳಿದ್ದು ಅವರು ಅವುಗಳನ್ನು ಸಮರ್ಥವಾಗಿ ಉಪಯೋಗಿಸಿಕೊಳ್ಳುತ್ತ, ತಮ್ಮ ಸ್ಥಿತಿಯನ್ನು ಸುಧಾರಿಸಿಕೊಳ್ಳುತ್ತ ನಡೆದಿದ್ದರೂ ಅಸಂಘಟಿತ ಕ್ಷೇತ್ರದ ಕಾರ್ಮಿಕರು ಅನಾಥರಂತಿದ್ದರು. ಅವರಿಗಾಗಿಯೇ ಇದ್ದ ಕನಿಷ್ಠ ವೇತನ ಕಾನೂನಿನ ಉಪಯೋಗವನ್ನು ಅವರ ಪರವಾಗಿ ಅಷ್ಟಾಗಿ ಮಾಡಿರಲಿಲ್ಲ. ಅದಕ್ಕೆ ಅದ್ಯತೆಯನ್ನು ನೀಡಿದೆ. ಬೀಡಿ ಕಾರ್ಮಿಕರಿಂದಲೇ ಪ್ರಾರಂಭಿಸಿದೆ. ಆಗ ಒಂದು ಸಾವಿರ ಬೀಡಿ ಕಟ್ಟಿದರೆ ಎರಡುವರೆ ರೂಪಾಯಿಗಳು ದೊರೆಯುತ್ತಿದ್ದುವು ಅವರಿಗೆ. ಅವರ ಕನಿಷ್ಠ ವೇತನವನ್ನು ಒಮ್ಮೆಗೇ ಐದು ರೂಪಾಯಿಗಳಿಗೆ ಏರಿಸಿದೆ. ಒಂದು ಅಂದಾಜಿನ ಪ್ರಕಾರ ಪ್ರತಿ ವರ್ಷ ಹದಿನೆಂಟು ಕೋಟಿ ರೂಪಾಯಿಗಳು ಮೊದಲಿಗಿಂತ ಹೆಚ್ಚು ಬೀಡಿ ಕಾರ್ಮಿಕರ ಕೈಸೇರಗೊಡಗಿದುವು. ಸಂಪಾದನೆಯ ಸಮುಚಿತ ವಿತರಣೆಗೆ ಎಂಥ ಸುಲಭ ಮಾರ್ಗವಿದು–ಎಂದೆನಿಸಿತು ನನಗೆ. ಬೇರೆ ಬೇರೆ ರಂಗಗಳ ಅರಕ್ಷಿತ ಕಾರ್ಮಿಕರ ಕನಿಷ್ಠ ವೇತನ ನಿಗದಿಯ ಕಾರ್ಯವನ್ನು ಒಂದು ಪವಿತ್ರ ಕರ್ತವ್ಯವೆಂದು ಭಾವಿಸಿ ತ್ವರಿತ ಕ್ರಮಗಳನ್ನು ಕೈಕೊಂಡೆ. ಕೃಷಿ ಕಾರ್ಮಿಕರ, ಹೋಟೇಲು ಕಾರ್ಮಿಕರ, ಸಿನಿಮಾ ಮಂದಿರಗಳ ಕಾರ್ಮಿಕರ, ಅಗರಬತ್ತಿ ಕಾರ್ಮಿಕರ, ಲೋಕೋಪಯೋಗಿ ಇಲಾಖೆಯ ಕಾರ್ಯಗಳ ಕಾರ್ಮಿಕರ, ಹೊಲಿಗೆ ಕಾರ್ಮಿಕರ, ಇನ್ನೂ ಅನೇಕ ರಂಗಗಳ ಕಾರ್ಮಿಕರ ಕನಿಷ್ಠ ವೇತನಗಳು ನಿಗದಿಯಾದುವು. ಇನ್ನೂ ಅನೇಕ ರಂಗಗಳ ಕಾರ್ಮಿಕರ ಕನಿಷ್ಠ ವೇತನ ನಿಗದಿಗೊಳಿಸುವ ಸಲುವಾಗಿ ಸಮಿತಿಗಳು ರಚಿತವಾದುವು.

## ನ್ಯೂಯಾರ್ಕಿನಲ್ಲಿ

ರಾಜ್ಯದ ಬಹುದೊಡ್ಡ ಉದ್ಯಮಗಳಲ್ಲೊಂದಾದ ಜವಳಿ ಗಿರಣಿಗಳ ಉದ್ಯಮದಲ್ಲಿಯ ವೇತನ ಶ್ರೇಣಿ ವಿಚಿತ್ರವಾದುದಾಗಿದ್ದಿತು. ತಿಂಗಳಿಗೆ ನಾಲ್ವತ್ತು ರೂಪಾಯಿಗಳಿಂದ ಮುನ್ನೂರು ರೂಪಾಯಿಗಳವರೆಗೆ ಅನೇಕ ಶ್ರೇಣಿಗಳಿದ್ದವು ಅದರಲ್ಲಿ. ಅವೆಲ್ಲವುಗಳನ್ನು ಪರಿಶೀಲಿಸಿ ಯೋಗ್ಯ ವೇತನ ಶ್ರೇಣಿಗಳನ್ನು ಸೂಚಿಸಲು ಸರಕಾರ ನನ್ನ ಅಧ್ಯಕ್ಷತೆಯಲ್ಲಿ ಒಂದು ಉಚ್ಚಾಧಿಕಾರ ಸಮಿತಿಯನ್ನು ರಚಿಸಿತು. ಆದರೆ ಅನೇಕ ಸಭೆಗಳಾದವು. ಕಾರ್ಮಿಕ ಪ್ರತಿನಿಧಿಗಳ ಬೇಡಿಕೆ ಹಾಗೂ ಮಾಲಿಕರ ಪರಮಾವಧಿ ನೀಡಿಕೆಗಳ ಮಧ್ಯದ ಕಂದಕ ದೂರಾಗಲೇ ಇಲ್ಲ. ನನ್ನ ಎಲ್ಲ ಸಾಮರ್ಥ್ಯವನ್ನೂ ಉಪಯೋಗಿಸಿ ಕೊನೆಗೂ ಸರ್ವಸಮ್ಮತವಾದ ವರದಿಯೊಂದನ್ನು



ಸಿದ್ಧಗೊಳಿಸಿದೆ. ಅದರ ಪ್ರಕಾರ ತಿಂಗಳಿಗೆ 150 ಹಾಗೂ ಅದಕ್ಕೂ ಹೆಚ್ಚು 250 ಹಾಗು ಅದಕ್ಕೂ ಹೆಚ್ಚು, 350 ಹಾಗೂ ಅದಕ್ಕೂ ಹೆಚ್ಚು–ಈ ಮೂರೇ ಶ್ರೇಣಿಗಳಿದ್ದುವು. ವಿಮಾನ ನಿಲ್ದಾಣದಲ್ಲಿ ಅದಕ್ಕೆ ಅಂಕಿತ ಹಾಕಿ ನಾನು ಸಪತ್ನೀಕನಾಗಿ ನ್ಯೂಯಾರ್ಕಿಗೆ ಹೊರಟೆ–ನಾಲ್ಕು ತಿಂಗಳುಗಳ ವಿಹಾರೀ ವೀಸಾ ಪಡೆದು. ಆಗ ನನ್ನ ಮಗಳು ಡಾ॥ ಶಿವಗೀತಾ ಪೂಜಾರಿ, ಅಳಿಯ ಡಾ. ಗಂಗಾಧರ ಪೂಜಾರಿ ನ್ಯೂಯಾರ್ಕಿನಲ್ಲಿ ಕೆಲಸ ಮಾಡುತ್ತಿದ್ದರು. ಅವರ ಒತ್ತಾಯದ ಕರೆಗೆ ಓಗೊಟ್ಟು ಅಲ್ಲಿಗೆ ಹೋದೆವು. ನ್ಯೂಯಾರ್ಕ ನಗರವನ್ನು ಸಹಜವಾಗಿಯೇ ವಿವರವಾಗಿ ನೋಡಿದೆವು. ವಾಷಿಂಗ್‌ಟನ್ನಿನಲ್ಲಿ ಮೂರು ದಿನ, ಫಿಲಡೆಲ್ಫಿಯಾದಲ್ಲಿ ಎರಡು ದಿನ, ವ್ಹರ್ಜೀನಿಯಾ ರಾಜ್ಯದಲ್ಲಿ ಹಿರೇಮಠ ದಂಪತಿಗಳೊಡನೆ ಒಂದು ದಿನವಿದ್ದು ನ್ಯೂಯಾರ್ಕಿಗೆ ಮರಳಿದೆವು. ಸರಕಾರ ಆ ವರದಿ ಸ್ವೀಕರಿಸಿ ಆರ್ಡರು ಹೊರಡಿಸಿದ್ದ ಸಂತೋಷದ ಸುದ್ದಿ ಬಂದಿತು. ತಿಂಗಳಿಗೆ ನಾಲ್ವತ್ತು ರೂಪಾಯಿತು ಪಡೆಯುತ್ತಿದ್ದ ಸಾವಿರಾರು ಕಾರ್ಮಿಕರಿಗೆ ಒಮ್ಮೆಗೆ ನೂರೈವತ್ತು ರೂಪಾಯಿಗಳು ಸಿಕ್ಕುವಂತಾದುದನ್ನು ನೆನೆದು ಪುಲಕಿತನಾದೆ. ಅದೇ ಸಂತೊಷದಲ್ಲಿ ರೇಡಿಯೋ ಸಿಟಿಗೆ ಹೋಗಿ ಸಿನಿಮಾ, ಸಾಮೂಹಿಕ ನೃತ್ಯ ಬೊಂಬೆಯಾಟ ನೋಡಿ ಬಂದೆ.

ಮಗಳು–ಅಳಿಯರ ಒಲುಮೆಯ ಫಲವಾಗಿ ಬೋಸ್ಟನಿನಿಂದ ಓರ್ಲೆಂಡೋದವರೆಗೆ ಅಮೇರಿಕೆಯ ಅನೇಕ ಪ್ರೇಕ್ಷಣೀಯ ನಗರಗಳನ್ನೂ, ಜಂಗಲ್ ಹೆಬಿಟಾಟ್, ಡಿಸ್ನಿಲ್ಯಾಂಡ್, ಸೀವರ್ಲ್ಡ್, ಪ್ಯಾರೂಟ್ ಜಂಗಲ್, ನಾಸಾ ಮೊದಲಾದ ಅದ್ಭುತ ರಮ್ಯ ಸ್ಥಳಗಳನ್ನು, ಕೆನಡಾದ ಮಾಂಟ್ರಿಯಲ್, ಓಟಾವಾ, ಟೊರೆಂಟೋ ನಗರಗಳನ್ನೂ, ನಯಗಾರಾ ಜಲಪಾತವನ್ನೂ, ಇಂಗ್ಲೆಂಡಿನ ಲಂಡನ್, ಆಕ್ಸ್‌ಫರ್ಡ್, ಹ್ಯಾರೋಗೇಟ್, ಶೇಕ್ಸ್‌ಪಿಯರನ ಮನೆ ಮೊದಲಾದುವನ್ನೂ, ಪ್ಯಾರಿಸ್, ಬ್ರಸೆಲ್ಸ್, ಅಮಸ್ಟರ್‌ಡಮ್ ಮೊದಲಾದ ನಗರಗಳನ್ನೂ ನೋಡಿ ನಲಿದೆವು, ಅವೆಲ್ಲವುಗಳ ವರ್ಣನೆಗೆ ಪ್ರತ್ಯೇಕ ಪುಸ್ತಕವೇಬೇಕು. ನಾಲ್ಕು ತಿಂಗಳುಗಳು ನಾಲ್ಕು ದಿನಗಳಂತೆ ಕಳೆದುವು. ವಾಲ್ಟ್‌ವ್ಹಿಟ್‌ಮನ್‌ನ ಮನೆ, ಶೇಕ್ಸ್‌ಪಿಯರ್ ಹುಟ್ಟಿದ ಮನೆ, ವ್ಹಿಕ್ಟರ್ ಹ್ಯೂಗೋನ ಮನೆ, ವರ್ಡ್ಸ್‌ವರ್ತ್‌ನ ಪ್ರಿಯ ಸರೋವರ ಇತ್ಯಾದಿಗಳನ್ನು ನೋಡಿದುದಂತೂ ನನ್ನ ಭಾಗ್ಯ ವಿಶೇಷವೆಂದೇ ಭಾವಿಸಿದ್ದೇನೆ.

ಡಾ. ಬಿ.ಡಿ. ಜತ್ತಿಯವರ ಅಪೇಕ್ಷೆಯ ಮೇರೆಗೆ ನ್ಯೂಯಾರ್ಕಿನಲ್ಲಿ ಬಸವ ಸಮಿತಿಯೊಂದನ್ನು ಸ್ಥಾಪಿಸಿದ್ದು, ಹ್ಯಾಲಿಕಾಪ್ಟರಿನಲ್ಲಿ ಸುತ್ತಿ ನ್ಯೂಯಾರ್ಕ ನಗರವನ್ನು ನೋಡಿದ್ದು, ಜಲಾಂತರ್ಗತ ನೌಕೆಯಲ್ಲಿ ಸಮುದ್ರ ಪರ್ಯಟನ ಮಾಡಿದ್ದು, ಅಲ್ಲಿಯ ವನ ಭೋಜನ ಕೇಂದ್ರಗಳಲ್ಲಿ ಕಳೆದ ರಾತ್ರಿಗಳು, ಮಿಯಾಮಿ ನಗರದಲ್ಲಿ ಕಳೆದ

ದಿನಗಳು, ಆ ಕಡಲತೀರ, ಆ ಈಜುಗೊಳಗಳು, ಆ ಸೂರ್ಯ ಸ್ನಾನನಿರತ ಹೆಣ್ಣು ಗಂಡುಗಳು,–ಫ್ಲೋರಿಡಾ ಸ್ಟೇಟಿನಲ್ಲಿ ಕಂಡ ಸಾವಿರಾರು ಎಕರೆ ಕ್ಷೇತ್ರವನ್ನು ವ್ಯಾಪಿಸಿದ ಮಾವಿನ, ಸಿಹಿಲಿಂಬೆಯ, ಕಿತ್ತಳೆಯ, ತೆಂಗಿನ ತೋಟಗಳು–ಬೇಡ, ಬರೆಯುತ್ತ ಹೋದರೆ ನಿಲ್ಲಿಸುವುದೇ ಕಷ್ಟವಾದೀತು. ಇಲ್ಲಿಗೆ ಇದಕ್ಕೆ ಪೂರ್ಣವಿರಾಮ ಹಾಕಲೇಬೇಕು.

## ಮರಳಿ ಭಾರತಕ್ಕೆ

ಮುಂಬೈ ನಿಲ್ದಾಣದಲ್ಲಿಳಿದಾಗ ವಿದೇಶಗಳಲ್ಲಿ ನೋಡಿದ್ದ ದಿಕ್ಕು ತಪ್ಪಿಸುವ ನಿಲ್ದಾಣಗಳ ಮುಂದೆ ಅದೊಂದು ಗೊಂಬೆಗುಡಿಯಾಗಿ ತೋರಿತು. ಆದರೂ ಸ್ವದೇಶದಲ್ಲಿ ಮತ್ತೆ ಕಾಲಿರಿಸಿದಾಗ ಎದೆ ಕುಣಿಯುತ್ತಿತ್ತು. ನ್ಯೂಯಾರ್ಕಿನಲ್ಲಿದ್ದಾಗ ಮೊಮ್ಮಗ ಹುಟ್ಟಿದ್ದ. ಬೆಂಗಳೂರು ತಲುಪಿದ ದಿನವೇ ಅವನ ನಾಮಕರಣ ಸಮಾರಂಭ. ನಾವು ನಾಸಾ (ಕೇಪ್ ಕೆನ್ನಡಿಯಲ್ಲಿ) ನೋಡಿದ್ದುದರ ಸ್ಮಾರಕವಾಗಿ 'ಗಗನೇಂದ್ರ' ಎಂಬ ಹೆಸರನ್ನು ಸೂಚಿಸಿದೆವು. 'ಗಗನ' ಎಂದು ಹೆಸರಿಟ್ಟರು. ಮತ್ತೆ ಚಿ॥ ವಿಜಯಾ, ಅವಳ ಪತಿ ನಂದೀಶ್ವರ, ಮಗಳು ಪಲ್ಲವಿ, ಚಿ॥ ಭಾರತಿ, ಪತಿ ಮೃತ್ಯುಂಜಯಪ್ಪ, ಮಕ್ಕಳು ರಶ್ಮಿ ವಿದ್ಯಾ ಇವರೊಡನೆ ಕೂಡಿ ಕಳೆದ ಕೆಲವು ರಸಮಯ ದಿನಗಳು, ತಂದಿದ್ದ ಕಾಣಿಕೆ ವಸ್ತುಗಳ ವಿತರಣೆ: ಮತ್ತೆ ನೊಗಕ್ಕೆ ಹೆಗಲು.

ನಾನು ಕಾರ್ಮಿಕ ಕಮೀಷನರನಾಗಿದ್ದುದರ ಜೊತೆಗೆ ಕೇಂದ್ರ ಸರಕಾರದ ಪರವಾಗಿ ಗಣಿ ಕಾರ್ಮಿಕರ ಕಲ್ಯಾಣಕ್ಕೋಸ್ಕರವಾಗಿ ಇದ್ದ ಸೆಸ್ ಮತ್ತು ವೆಲ್ಫೇರ್ ಕಮೀಷನರನಾಗಿಯೂ ಕೆಲಸ ಮಾಡುತ್ತಿದ್ದೆ. ಮೊದಲು ಸಿಮೆಂಟು ಕಾರಖಾನೆಗಳಿಗೆ ಹೊಂದಿ ಇದ್ದ ಗಣಿಗಳ ಕಾರ್ಮಿಕರಿಗಾಗಿ ಮನೆ ಕಟ್ಟಿಸಿ ಕೊಡುವ, ಕುಡಯುವ ನೀರು ಪೂರೈಸುವ, ಅವರ ಮಕ್ಕಳಿಗೆ ಸಮವಸ್ತ್ರಗಳನ್ನೂ ವಿದ್ಯಾರ್ಥಿ ವೇತನಗಳನ್ನೂ ನೀಡುವ, ಅವರಿಗಾಗಿ ಸಂಚಾರೀ ಆಸ್ಪತ್ರೆಗಳನ್ನು ನಡೆಸುವ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿದ್ದೆ. ಹೊಸಪೇಟೆಯ ಹತ್ತಿರ ಕಾರಗನೂರಿನಲ್ಲಿ ಗಣಿ ಕರ್ಮಿಕರಿಗಾಗಿಯೇ ೨೫ ಹಾಸಿಗೆಗಳು, ಕ್ಷಕಿರಣಯಂತ್ರ ಇತ್ಯಾದಿಗಳಿಂದ ಸುಸಜ್ಜಿತವಾಗಿದ್ದ ಆಸ್ಪತ್ರೆಯೊಂದನ್ನು ಕಟ್ಟಿಸಿದುದು ಕೈಕೊಂಡ ಕಾರ್ಯಗಳಲ್ಲಿಯೇ ದೊಡ್ಡದು. ಒಟ್ಟು ೨೫ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಡಾಕ್ಟರರ, ಸಿಬ್ಬಂದಿಯವರ ವಾಸಗೃಹಗಳು ಇತ್ಯಾದಿಗಳನ್ನೊಳಗೊಂಡು ನಿರ್ಮಿತವಾದ ಆ ಆಸ್ಪತ್ರೆ ಭಾರತದಲ್ಲಿಯೇ ಆ ಮಾದರಿಯ ಆಸ್ಪತ್ರೆಗಳಲ್ಲಿ ಎರಡನೆಯದಾಗಿದ್ದಿತು. ಆಗ ಉಪರಾಷ್ಟ್ರಪತಿಗಳಾಗಿದ್ದ ಡಾ॥ ಬಿ.ಡಿ. ಜತ್ತಿಯವರಿಂದ ಅದರ ಉದ್ಘಾಟನೆ



ಮಾಡಿಸಿದೆ. ಮುಖ್ಯಮಂತ್ರಿಗಳಾಗಿದ್ದ ಡಿ. ದೇವರಾಜ ಅರಸರು ಅಧ್ಯಕ್ಷತೆ ವಹಿಸಲು ಒಪ್ಪಿದರು. ಕೊನೆಯ ಗಳಿಗೆಯಲ್ಲಿ ಬರಲಿಲ್ಲ. ಕೇಂದ್ರದಲ್ಲಿ ಕಾರ್ಮಿಕ ಇಲಾಖೆಯ ರಾಜ್ಯ ಸಚಿವರಾಗಿದ್ದ ಶ್ರೀ ಬಾಲಗೋವಿಂದ ವರ್ಮರು ಅಧ್ಯಕ್ಷತೆ ವಹಿಸಿ ಮಾತನಾಡಿ ಕರ್ನಾಟಕದಲ್ಲಿ ಗಣಿಕಾರ್ಮಿಕರಿಗಾಗಿ ಆಗಿದ್ದಷ್ಟು ಕಲ್ಯಾಣ ಕಾರ್ಯಗಳು ಭಾರತದ ಬೇರಾವ ಭಾಗದಲ್ಲಿಯೂ ಆಗಿಲ್ಲವೆಂದು ಮುಕ್ತಕಂಠದಿಂದ ಪ್ರಶಂಸಿಸಿದರು. ಅದುವರೆಗೆ ೧,೫೦೦ ಎರಡೆರಡು ಕೋಣೆಯ ಮನೆಗಳು ಸಿದ್ಧವಾಗಿದ್ದುವು. ಒಂದೊಂದಕ್ಕೆ ಹನ್ನೆರಡು ಸಾವಿರ ರೂಪಾಯಿಗಳು ಖರ್ಚಾಗಿದ್ದವು. ಕಲ್ಲಿನಗೋಡೆ, ತೇಗಿನ ಬಾಗಿಲು ಕದ ಕಿಟಿಗಳಿಂದ ಸಿದ್ಧವಾಗಿದ್ದ ಆ ಮನೆಗಳಲ್ಲಿ ಉಳ್ಳವರೂ ಸಂಕೋಚವಿಲ್ಲದೆ ಇರಬಹುದಾಗಿದೆ. ಮುಂದೆ ಬಾಲಗೋವಿಂದ ವರ್ಮರಿಂದಲೇ ಅಮ್ಮಸಂದ್ರ ಗಣಿಕಾರ್ಮಿಕರಿಗಾಗಿ 100 ಮನೆಗಳ ಯೋಜನೆಗೆ ಅಡಿಗಲ್ಲನ್ನಿಡಿಸಿದೆ. ಒಳ್ಳೆಯ ಕೆಲಸಕ್ಕೆ ಸಿಕ್ಕುವ ಪ್ರತಿಫಲವೆಂದರೆ ಇನ್ನಷ್ಟು ಕೆಲಸವೆಂದು ಹೇಳುತ್ತಾರೆ. ನನಗೂ ತಮಿಳುನಾಡು, ಆಂಧ್ರ ರಾಜ್ಯಗಳ ಹೆಚ್ಚಿನ ಕೆಲಸವನ್ನು ವಹಿಸಿಕೊಡಲಾಯಿತು. ಆ ಎರಡು ರಾಜ್ಯಗಳಲ್ಲಿಯೂ ಗಣಿ ಕಾರ್ಮಿಕರಿರುವೆಲ್ಲಿಗೆ ಹೋಗಿ ಅಲ್ಲಿಯೂ ಗೃಹ ನಿರ್ಮಾಣ, ಸಂಚಾರಿ ಆಸ್ಪತ್ರೆ, ಕುಡಿಯುವ ನೀರಿನ ಪೂರೈಕೆ, ಸಮವಸ್ತ್ರ ಹಾಗೂ ವಿದ್ಯಾರ್ಥಿ ವೇತನಗಳ ವಿತರಣೆ ಇತ್ಯಾದಿ ಕಾರ್ಯಗಳನ್ನೂ ಪ್ರಾರಂಭಿಸಿದೆ.

ಆಂಧ್ರದಲ್ಲಿ ಇದೇ ಕಾರ್ಯ ಪೂರೈಸಿ ಹೈದರಾಬಾದಿನಿಂದ ಬೆಂಗಳೂರಿಗೆ ಹೊರಟಿದ್ದೆ. ಆ ಕಾರ್ಮಿಕ ಮಂತ್ರಿಗಳಾಗಿದ್ದ ಎಸ್.ಎಂ. ಯಹ್ಯಾ ಸಾಹೇಬರು ಮರುದಿನ ಬೆಳಗಿನ ವಿಮಾನದಿಂದ ಬರುವುದಾಗಿ ಹೇಳಿ ನನ್ನೊಡನೆ ಅವರ ಧರ್ಮ ಪತ್ನಿ, ಸೋದರಿ, ಭಾವಂದಿರನ್ನು ಕಳಿಸಿಕೊಟ್ಟರು. ಒಂದು ಕಾರಿನಲ್ಲಿ ನಾವೆಲ್ಲರೂ; ಇನ್ನೊಂದು ಜೀಪಿನಲ್ಲಿ ಅಧೀನಾಧಿಕಾರಿಗಳಿಂದ ಶ್ರೀ ಸಿದ್ದೇಶಿ, ನಾಗಯ್ಯಸೆಟ್ಟಿ ಮೊದಲಾದವರು. ಕರ್ನೂಲಿನಲ್ಲಿ ಊಟ ಮಾಡಿದಾಗ ರಾತ್ರಿ ಒಂಬತ್ತು ಗಂಟೆ. ಆ ರಾತ್ರಿ ಅಲ್ಲಿಯೇ ಇದ್ದು ಬೆಳಗಿನ ಜಾವದಲ್ಲಿ ಬೆಂಗಳೂರಿಗೆ ಪ್ರಯಾಣ ಮುಂದುವರಿಸೋಣವೆಂದು ಎಷ್ಟು ಹೇಳಿದರೂ ಭಾವಂದಿರು ಕೇಳಲಿಲ್ಲ. ರಾತ್ರಿಯಲ್ಲಿಯೇ ಹೊರಟು ಬಿಟ್ಟರು. ಕರ್ನಾಟಕದ ಗಡಿ ಕೇವಲ 15 ಕಿಲೋಮಿಟರು ಉಳಿದ್ದಿತು. ಒಮ್ಮಿಂದೊಮ್ಮೆಗೆ ಮುಸಲಧಾರೆಯ ಮಳೆ ಸುರಿಯತೊಡಗಿತು. ಅದರಲ್ಲಿಯೇ ಮುಂದುವರಿಯಲು ಹಟ ಹಿಡಿದರವರು. ಒಂದೆರಡು ಫರ್ಲಾಂಗು ಹೋಗುವಷ್ಟರಲ್ಲಿ ಹಳ್ಳವೊಂದರಲ್ಲಿ ಕಾರು ಸಿಕ್ಕು ಹಾಕಿಕೊಂಡು ಬಿಟ್ಟಿತು. ಅದನ್ನು ತಳ್ಳಲು ಹೋದ ಸಿದ್ದೇಶಿ ನಾಗಯ್ಯ ಶೆಟ್ಟರು ಪ್ರವಾಹದ ಪಾಲಾಗಿ ಬಿಡುತ್ತಿದ್ದರೇನೋ –ಗನ್‌ಮನ್ ಡ್ರೈವ್ವರರು ಎಳೆದುಕೊಂಡರು. ರಾತ್ರಿಯೆಲ್ಲ ಮಳೆ ಧೋ ಧೋ ಎಂದು ಸುರಿಯಿತು. ಕಾರಿನ ಗಾಜುಗಳನ್ನೇರಿಸಿಕೊಂಡು ದೈವದ ಮೇಲೆ ಭಾರ

ಹಾಕಿ ಕಣ್ಮುಚ್ಚಿ ಕುಳಿತುಕೊಂಡೆವೆಲ್ಲರೂ. ಆಗೊಮ್ಮೆ ಈಗೊಮ್ಮೆ ಮಿಂಚಿದಾಗ ಕಾರಿನ ಕನ್ನಡಿಗಳೊಳಗಿಂದ ಕಾರಿನ ಸುತ್ತಲೂ ನೀರುಭೋರ್ಗರೆಯುತ್ತ ಹರಿಯುತ್ತಲಿದ್ದುದು ಕಾಣುತ್ತಿತ್ತು. ಆಗ ಮೈ ನಡುಗುತ್ತಿತ್ತು. ಹಿಂದೆ ಪ್ರಾಣಾಪಾಯದಿಂದ ಪಾರಾದ ಘಟನೆಗಳೆಲ್ಲ ಸ್ಮೃತಿಪಟಲದ ಮೇಲೆ ಸುಳಿದು ಹೋಗುತ್ತಿದ್ದುವು. ಇದಾಗಲೇ ವಿವರಿಸಿದ ಅಪಘಾತಗಳಲ್ಲದೆ ಇನ್ನೂ ಕೆಲವು ಅಪಾಯಗಳಿಂದ ಪಾರಾಗಿದ್ದೆ. ಶಿಕ್ಷಣ ಇಲಾಖೆಯಲ್ಲಿದ್ದಾಗ ಸೋಮನಾಥ ದೇವಾಲಯ ನೋಡಲು ಹೋಗಿದ್ದೆ ಕುಟುಂಬ ಸಮೇತ. ಅಲ್ಲಿ ಮಾರ್ಗದರ್ಶಿ ವಿದ್ಯುದ್ದೀಪವೊಂದರ ಸಹಾಯದಿಂದ ನಮಗೆ ಒಳಗಿನ ಭಾಗಗಳನ್ನು ತೋರಿಸಿ ವಿದ್ಯುದೀಪವನ್ನು ಕೆಳಗಿರಿಸಿದ್ದ. ನನ್ನ ಎಂಟು ವರ್ಷಗಳ ಮಗ ಪ್ರಸನ್ನಕುಮಾರ ತಾನೂ ಅದನ್ನೆತಿಕೊಂಡು ತೋರಿಸಲು ಹೋದ. ಚೇರಿ ದೀಪದೊಡನೆ ಬಿದ್ದು ಬಿಟ್ಟ. ಏನಾಯಿತೆಂದು ನೋಡಲು ಹೋಗಿ ಅವನನ್ನು ಎಬ್ಬಿಸ ಹೋದೆ. ನನ್ನ ಮೈಯೊಳಕ್ಕೂ ಶಾಖ ಸಿಡಿಯಿತು. ನಾನೂ ಚೀರಿದೆ. ಹೆಂಡತಿ ಅಳುತ್ತ ಬಂದು ನನ್ನನ್ನು ಎಳೆದಳು. ಅವಳಿಗೂ ವಿದ್ಯುದಾಘಾತ. ಮಾರ್ಗದರ್ಶಿ ಓಡಿ ಹೋಗಿ 'ಸ್ವಿಚ್' ತೆಗೆಯದಿದ್ದರೆ ನಾವು ಮೂವರೂ ಮರುನಿಮಿಷದಲ್ಲಿ ಮರಣವನ್ನಪ್ಪುತ್ತಿದ್ದೆವು! "ಆಗ ಉಳಿಸಿತು ದೈವ: ಅನೇಕ ರಸ್ತೆ ಅಪಘಾತಗಳಲ್ಲಿಯೂ ಉಳಿಸಿತು! ಈಗ ಉಳಿಸುವುದೆ?" ಎಂದು ನನ್ನನ್ನು ನಾನೇ ಕೇಳಿಕೊಂಡೆ. ಉತ್ತರ ಯಾರು ಹೇಳಬೇಕು? ಸುತ್ತಲಿನ ಪ್ರವಾಹದ ರಭಸವನ್ನು ನೋಡಿದರೆ ಯಾವ ಕ್ಷಣದಲ್ಲಾದರೂ ನಾವು ಕುಳಿತಿದ್ದ ಕಾರನ್ನು ಕೊಚ್ಚಿಕೊಂಡು ಹೋಗಬಹುದಿತ್ತು ಅದು. ಆದರೆ ಇನ್ನೂ ನಮ್ಮ 'ಖಟ್ಲೆ ತುಂಬಿರಲಿಲ್ಲ!' ಕಾರಿನ ಮುಂದಿನ ಚಕ್ರಗಳು ಅಡ್ಡಗಲ್ಲುಗಳಲ್ಲಿ ಸಿಕ್ಕಿಹಾಕಿಕೊಂಡಿದ್ದುವು. ಬೆಳತನಕ ಮಳೆ ಬಡಿದರೂ, ಬೆಳತನಕ ಪ್ರವಾಹ ಜಡಿದರೂ ಕಾರು ಅಲ್ಲಿಂದ ಮಿಸುಕಿರಲಿಲ್ಲ! ಇನ್ನೊಮ್ಮೆ ಜೀವದಾನವಾಗಿತ್ತು ನನಗೆ! ರಾತ್ರಿಯೆಲ್ಲ ಉಳಿದವರ ಮನಸ್ಸಿನಲ್ಲಿ ಏನೇನು ನಡೆದಿದ್ದಿತೋ ನಾನರಿಯೆ–ನನ್ನ ವಿಚಿತ್ರ ಮನಸ್ಸಿನಲ್ಲಿ ಮಾತ್ರ ಒಂದು ಹೊಸ ವಚನ ರಚನೆಗೊಂಡಿದ್ದಿತು–ಹಿಂದೊಮ್ಮೆ ಇದೇ ರೀತಿ ಮಳೆಗೆ ಸಿಕ್ಕಿದ್ದಾಗ 'ಮಳೆ' ಎಂಬ ಕವಿತೆ ಮನದಲ್ಲಿ ಮೂಡಿದ್ದಂತೆ! "ಸಿಂಗರಿಸಿಕೊಂಡುದೇನೋ ಸರ, ಮದುವಳಿಗೆ–ಆದರೆ ಬರುವನೇ ಮದುವಳಿಗೆ ನಿನ್ನ ಬಳಿಗೆ? ದಾರಿಯುದ್ದಕ್ಕೂ ಮರಮಳೆಯಂತೆ, ಕೆರೆಕಟ್ಟೆಗಳೆಲ್ಲ ಒಡೆದು ದಾರಿಯಲ್ಲಿ ನೀರೇ ನೀರಂತೆ, ಸೇತುವೆಗಳು ಕುಸಿದು ವಾಹನ ಸಂಚಾರ ಸ್ಥಗಿತವಂತೆ, ಸಿಂಗರಿಸಿಕೊಂಡೇನೋ ನಿಂತೆ, ನಿಂತಂತೆ 'ಬರುವನೋ ಬಾರನೋ' ಎಂಬ ಚಿಂತೆ!" ಹೀಗೆ ಸಾಗಿದ್ದಿತು ಆ ವಚನ!

ಬೆಳಗಾಗುತ್ತಲೇ ದಾರಿಕಾರರನ್ನು ಒಲಿಸಿ ಕಾರನ್ನೆಳೆಸಿದೆವು ಆಚೆದಂಡಿಗೆ. ಆದರೆ ಅಲ್ಲಿಂದ ತುಸು ದೂರ ಮುಂದೆ ಹೋಗುತ್ತಲೆ ಇನ್ನೊಂದು ದೊಡ್ಡಹಳ್ಳ



ಎದುರಾಯಿತು. ದಡಸೂಸಿ ಹರಿಯುತ್ತಿಲಿದ್ದಿತು. ಅಲ್ಲೆಲ್ಲಿಯೋ ಕೆರೆ ಒಡೆದು ಅದರ ನೀರೂ ಬಂದು ಸೇರಿ ಹೊಲಗಳಲ್ಲೆಲ್ಲ ನೀರು ಹರಡಿದ್ದಿತು. ಮುಂದೆ ನೆರೆ ಬಂದ ಹಳ್ಳ, ಹಿಂದೆ ಹುಚ್ಚು ಹೊನಲಿನ ಹಳ್ಳ, ಆಚೆ ಈಚೆ ನೀರು ತುಂಬಿದ ಹೊಲಗಳು, ನಡುವೆ ನಾವಿದ್ದ ದಿನ್ನೆ! ಆ ದಿನ್ನೆಯೂ ಕಳಚಿದರೆ? ದೇವರೇ ಗತಿ! ಸುದೈವದಿಂದ ಮತ್ತೆ ಮಳೆಯಾಗಲಿಲ್ಲ. ಹಸಿವಿನುರಿ ತಡೆದೆವು. ಆಗ ಪುಣ್ಯಕ್ಕೆ ಒಂದು ಆಂಧ್ರದ ಬಸ್ಸು ಬಂದಿತು. ಅವರಲ್ಲಿ ಮಂತ್ರಿಗಳ ಪರಿವಾರ ಕಳಿಸಿಬಿಟ್ಟೆ. ಬಸ್ಸು ಹಳ್ಳದಾಟಲು ಹಿಗ್ಗಿದೆ. ಅವರು ಬೆಂಗಳೂರು ತಲುಪಿದ ಮೇಲೆಯೇ ಎಲ್ಲರಿಗೂ ಏನಾಯಿತೆಂಬುದು ತಿಳಿದದ್ದು. ಯಹ್ಯಾ ಸಾಹೇಬರ ಆದೇಶದಂತೆ ಗೌರಿಬಿದನೂರಿನಿಂದ ಸಬ್ ಇನ್ಸ್‌ಪೆಕ್ಟರ್ ಬಂದರು–ನಾಲ್ಕು ಪೇದೆಗಳು, ಒಂದು ಲಾರಿ, ತೆಂಗಿನ ಹಗ್ಗ, ಹಾರೆ ಗುದ್ದಲಿಗಳೊಡನೆ. ಮೊದಲು ನಮ್ಮನ್ನಾಚೆಗೆ ಸಾಗಿಸಿದರು. ಹಸಿದಿದ್ದ ನಮಗೆಂದು ತಂದಿದ್ದ ತಿಂಡಿಯಲ್ಲಿ ಅರ್ಧದಷ್ಟನ್ನು ಅದಾಗಲೇ ಒಕ್ಕರಿಸಿಬಿಟ್ಟಿದ್ದ ಆ ಘಾಟಿ ಮುದುಕ ಸಬ್ ಇನ್ಸ್‌ಪೆಕ್ಟರ್! ತಿಂದು ಗೊತ್ತವರಿಗೆ, ತಿನಿಸಿ ಗೊತ್ತೆ? ಅಲ್ಲಿಂದ ಗೌರಿಬಿದನೂರಿಗೆ ಬಂದು ಊಟ ಮಾಡಿ ಬೆಂಗಳೂರಿಗೆ ಹಿಂದಿರುಗಿದಾಗ ಹೊಸ ದಿನ ಪ್ರಾರಂಭವಾಗಿದ್ದಿತು!

ತುರ್ತುಪರಿಸ್ಥಿತಿಯ ತುರ್ತು ಕಾರ್ಯಗಳು ಕೆಲಸವನ್ನು ಮಾಡಬೇಕಾಗಿದ್ದಿತು. ಅವುಗಳಲ್ಲಿ ಜೀತದಾಳುಗಳು ವಿಮೋಚನೆಯ ಕಾರ್ಯವೂ ಒಂದಾಗಿದ್ದಿತು. ಮೈಸೂರಿನಲ್ಲಿ ಈ ಬಗ್ಗೆ ಒಂದು ವಿಚಾರಗೋಷ್ಠಿಯನ್ನೇ ಏರ್ಪಡಿಸಿದೆ. ಆ ಮಾದರಿ ಗೋಷ್ಠಿ ಅದೊಂದೇ ಆಗಿದ್ದಿತು ಆಗ ಭಾರತದಲ್ಲಿ. ಕೇಂದ್ರ ಸರಕಾರದ ಅಧಿಕಾರಿಗಳೂ ಭಾಗವಹಿಸಿದ್ದರು. ಕೃಷಿ ಕಾರ್ಮಿಕರ ವೇತನವರ್ಧನೆ ಇನ್ನೊಂದು ಕಾರ್ಯವಾಗಿದ್ದಿತು. ಹೆಚ್ಚಿಸಿ ಬಹಳ ದಿನಗಳಾಗಿರದಿದ್ದರೂ ಮತ್ತೆ ಶೇಕಡಾ 30ರಷ್ಟು ಹೆಚ್ಚಿಸಲು ಪ್ರಸ್ತಾವ ಕಳಿಸಿದೆ. ಆಗ ಮಂತ್ರಿಗಳಲ್ಲೊಬ್ಬರಾಗಿದ್ದ ಎಚ್.ಎಂ. ಚೆನ್ನಬಸಪ್ಪನವರು ನನ್ನ ಮೇಲೆ ರೇಗಿದರು. "ನನ್ನ ಮೇಲೆ ರೇಗಿ ಏನು ಫಲ, ಗಂಡಸುತನವಿದ್ದರೆ ಸಚಿವ ಸಂಪುಟದ ಸಭೆಯಲ್ಲಿ ವಿರೋಧಿಸಿರಿ," ಎಂದು ಉತ್ತರವಿತ್ತೆ. ಕಾರಖಾನೆಗಳ ಆಡಳಿತದಲ್ಲಿ ಕಾರ್ಮಿಕರೂ ಪಾಲುಗೊಳ್ಳುವಂತೆ ಮಾಡುವುದು ಇನ್ನೊಂದು ಕಾರ್ಯವಾಗಿದ್ದಿತು. ಅದನ್ನೂ ತಕ್ಕಮಟ್ಟಿಗೆ ಸಾಧಿಸಿದೆ. ಹೆಂಡದ ಮರ ಕೆತ್ತುವವರಿಗಾಗಿ ಕನಿಷ್ಠ ವೇತನದ ಸಲಹೆ ಕಳಿಸಿದೆ. ಅದು ಅಬ್ಕಾರಿ ಇಲಾಖೆಯಿಂದ ಮರಳಿ ಬರಲೇ ಇಲ್ಲ. ಗುಮಾಸ್ತರ, ಮಾರುಕಟ್ಟೆಗಳ ಕೆಲಸಗಾರರ–ಇನ್ನೂ ಅನೇಕರ ಕನಿಷ್ಠ ವೇತನಕ್ಕಾಗಿ ಸೂಚನೆಗಳನ್ನು ಕಳಿಸಿದೆ. ಅವುಗಳೆಲ್ಲ ಎಲ್ಲ ಕೊಳೆಯುತ್ತಿವೆಯೋ! ನನ್ನ ಕೈಲಾದುದನ್ನು ನಾನು ಮಾಡಿದೆ. ಅದು ಪೂರ್ಣವಾಗಲಿ, ಬಿಡಲಿ–ವ್ಯಥೆಯೇಕೆ?

ಮುಗಿಸಿವ ಮುನ್ನ ಬೆಳಗಾವಿಯ ಗೆಳೆಯರು ನನ್ನ ೫೫ನೆಯ ಹುಟ್ಟುಹಬ್ಬವನ್ನಾಚರಿಸಿ 'ಕಾವ್ಯನಂದ' ಎಂಬ ಅಭಿನಂದನ ಗ್ರಂಥವನ್ನು

ಅರ್ಪಿಸಿದುದನ್ನಿಲ್ಲಿ ಸ್ಮರಿಸಬೇಕು. ಆ ಮುನ್ನ ವಿಜಾಪುರದ ಗೆಳೆಯರು ‘ಕಾವ್ಯಶ್ರೀ’ ಎಂಬ ಚಿಕ್ಕದಾದರೂ ಚೊಕವಾದ ಅಭಿನಂದನ ಗ್ರಂಥ ಅರ್ಪಿಸಿದ್ದರು; ಕಲಬುರಗಿಯ ‘ಜೀವನ ವಿಕಾಸ’ದ ಗೆಳೆಯರು ‘ಜೀವನ ವಿಕಾಸ’ದ ಒಂದು ವಿಶೇಷ ಸಂಚಿಕೆ ಹೊರಡಿಸಿದ್ದರು. ಆದರೆ ಮಿರ್ಜಿ ಅಣ್ಣಾರಾಯರೂ, ಕೃಷ್ಣಕೋಲ್ಹಾರ ಕುಲಕರ್ಣಿಯವರೂ ಶ್ರದ್ಧೆಯಿಂದ ಸಂಪಾದಿಸಿದ ಈ ಅಭಿನಂದನ ಗ್ರಂಥ ಗಾತ್ರ ಗುಣಗಳೆರಡರಲ್ಲಿಯೂ ದೊಡ್ಡದಾಗಿದ್ದಿತು. ಅದರ ಬಿಡುಗಡೆ ಮಾಡಲು ಆಗ ಭುವನೇಶ್ವರದಲ್ಲಿ ರಾಜ್ಯಪಾಲರಾಗಿದ್ದ ಡಾ. ಬಿ.ಡಿ. ಜತ್ತಿಯವರು ಬೆಳಗಾವಿಯವರೆಗೆ ಬಂದುದು ಅವರ ದೊಡ್ಡತನಕ್ಕೆ ಸಾಕ್ಷಿ.

ಸೇವಾಜೀವನ ಮುಗಿಯುತ್ತ ಬಂದುದು ಹಿಗ್ಗಿನ ಬುಗ್ಗೆಯಾಗಿದ್ದಿತು ನನಗೆ. ವಚನವೊಂದನ್ನು ಬರೆದೆ: “ಸುಖದೊಡನೆ ಸರಸವಾಡುವಾಗಿನ ದುಃಖವನ್ನು ಅನುಭವಿಸಿದೆ; ದುಃಖದೊಡನೆ ಹೋರಾಡುವಾಗಿನ ಸುಖವನ್ನು ಅನುಭವಿಸಿದೆ; ಸುಖದುಃಖಗಳ ಸುದ್ದಿಯನ್ನೇ ಮರೆತಾಗಿನ ಆನಂದವನ್ನೂ ಅನುಭವಿಸಿದೆ! ಗೆಲವನ್ನು ದಕ್ಕಿಸಿಕೊಳ್ಳುವಾಗಿನ ದುಃಖವನ್ನು ಅನುಭವಿಸಿದೆ; ಸೋಲಿನೊಡನೆ ಸೆಣಸುವಾಗಿನ ಸೊಗವನ್ನು ಅನುಭವಿಸಿದೆ; ಸೋಲು–ಗೆಲುವುಗಳನ್ನು ಮೀರಿದಾಗಿನ ಮನಃಪ್ರಸಾದವನ್ನೂ ಅನುಭವಿಸಿದೆ! ಸಿರಿಯ ಸೆರೆಯಲ್ಲಿ ಸವೆದೆ, ಬಡತನದ ಸೈಪನ್ನು ಸವಿದೆ, ಸ್ತುತಿಯ ನಂಜನ್ನು ಗುಟುಕರಿಸಿದೆ, ನಿಂದೆಯ ತನಿಯನ್ನು ಮಕ್ಕಳಿಸಿದೆ, ಸ್ವತಂತ್ರಧೀರ ಸಿದ್ಧೇಶ್ವರಾ, ಸೇವಾಜೀವನದ ಶಿಕ್ಷೆಯನ್ನೂ ಮುಗಿಸಲಿಹೆನಯ್ಯ–ಅನತಿದೂರದಲ್ಲಿ!”

ಕೊನೆಗೊಮ್ಮೆ–ಜೂನ್ ೧೯೭೬ರಲ್ಲಿ–ಸೇವಾಜೀವನದ ಶಿಕ್ಷೆಯನ್ನು ಮುಗಿಸಿ ಕಾರಾಗಾರದಿಂದ ಹೊರಬಂದೆ. ಅಂತು ನಿಶ್ಚಿಂತೆಯಿಂದ ಮಲಗಿದವನು ಹದಿನಾರು ಗಂಟೆ ಸತತವಾಗಿ ನಿದ್ರಿಸಿ ಮೇಲೆದ್ದೆ. ದೇಶದ ಜನರಿಗೆಲ್ಲ ಆಗಸ್ಟ್, ೧೯೪೭ಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದರೆ ನನಗೆ ೧೯೭೬ರಲ್ಲಿ ಸಿಕ್ಕಿದ್ದಿತು ಸ್ವಾತಂತ್ರ್ಯ! ಅಂದಿನಿಂದ ಬಸವ ಸಮಿತಿಯ ‘ಬಸವ ಪಥ’ ‘ಬಸವ ಜರ್ನಲ್’ಗಳ ಪ್ರಧಾನ ಸಂಪಾದಕನಾಗಿ, ಅಲ್ಲಿಯ ಸಂಶೋಧನ–ಪ್ರಕಟನಾ ವಿಭಾಗದ ನಿರ್ದೇಶಕನಾಗಿ ಸೇವೆ ಸಲ್ಲಿಸುತ್ತಲಿದ್ದೇನೆ. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಗಳಲ್ಲಿ, ಕನ್ನಡದ ಎಲ್ಲ ಕಾರ್ಯಗಳಲ್ಲಿ ಭಾಗವಹಿಸುತ್ತಲಿದ್ದೇನೆ. ಎಲ್ಲ ಮತಗಳವರ ಪ್ರೀತಿ ವಿಶ್ವಾಸಗಳು ನನಗೆ ದೊರೆತಿರುವುದು ನನ್ನ ಭಾಗ್ಯವೆಂದು ಭಾವಿಸಿದ್ದೇನೆ. ಮುಸಲ್ಮಾನ ಬಾಂಧವರು ಕನ್ನಡ ಭಾಷೆಯಲ್ಲಿ ಪ್ರಕಟವಾದ ಪವಿತ್ರ ಕುರಾಣದ ಮೊದಲ ಪ್ರತಿಯನ್ನು ಸಾರ್ವಜನಿಕ ಸಭೆಯಲ್ಲಿ ನನಗೆ ಅರ್ಪಿಸಿದುದು, ಬೆಳಗಾವಿಯಲ್ಲಿ ಒಂದೇ ಒಂದು ಸಲ ನಾನು



ಪುರಂದರರದಾಸರ ಮೇಲೆ ಮಾತನಾಡಿದುದನ್ನು ಕೇಳಿ ಉತ್ತರಾದಿ ಮಠದ ಜಗದ್ಗುರುಗಳವರು ಇಂದಿಗೂ ನನ್ನ ಮೇಲೆ ವಾತ್ಸಲ್ಯ ಸುಧೆಯನ್ನೆರೆಯುತ್ತಿರುವುದು, ಧರ್ಮಸ್ಥಳದ ಸಾಹಿತ್ಯ ಸಮ್ಮೇಳನಕ್ಕೊಮ್ಮೆ, ಸರ್ವಧರ್ಮ ಸಮ್ಮೇಳನಕ್ಕೊಮ್ಮೆ ಅಲ್ಲಿಯ ಧರ್ಮಾಧಿಕಾರಿಗಳು ನನ್ನನ್ನು ಅಧ್ಯಕ್ಷನನ್ನಾಗಿ ಆರಿಸಿದುದು, ಹೊಂಬುಜದ ಶ್ರೀಗಳವರು ಅಲ್ಲಿಯ ಸಾಹಿತ್ಯ ಸಮ್ಮೇಳನಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ಆಹ್ವಾನಿಸಿದುದು, ಬೆಂಗಳೂರಿನ ಗೆಳೆಯರು ಡಾ. ಶಂ. ಬಾ. ಜೋಶಿ ಸನ್ಮಾನ ಸಮಿತಿಗೆ ನನ್ನನ್ನು ಅಧ್ಯಕ್ಷನನ್ನಾಗಿ ಆರಿಸಿದುದು ನನ್ನ ಭಾಗ್ಯವಲ್ಲದೆ ಇನ್ನೇನು? ಕರ್ನಾಟಕದ ವಿಶ್ವವಿದ್ಯಾಲಯವು ನನಗೆ ಗೌರವ ಡಾಕ್ಟರೇಟ್ ಹಾಗೂ ಪ್ರೊ॥ ಮಳವಾಡ ಪ್ರಶಸ್ತಿಗಳನ್ನು ನೀಡಿದುದೂ, ರಾಜ್ಯ ಸರಕಾರದ ನನ್ನ ‘ಮಾನಸ ಸರೋವರ’ಕ್ಕೆ ಪ್ರಥಮ ಪುರಸ್ಕಾರವನ್ನು ನೀಡಿದುದೂ, ಭಾರತ ಸರಕಾರ ನನ್ನ ಮಕ್ಕಳ ಪದ್ಯಗಳ ಸಂಕಲನಕ್ಕೆ ಪುರಸ್ಕಾರ ನೀಡಿದುದೂ, ರಾಜ್ಯ ಸಾಹಿತ್ಯ ಆಕಾಡೆಮಿ ನನಗೆ ಪ್ರಶಸ್ತಿ ನೀಡುವುದಲ್ಲದೆ ನನ್ನ ‘ವಚನೋದ್ಯಾನ’ಕ್ಕೆ ಅತ್ಯುತ್ತಮ ಪುಸ್ತಕ ಪುರಸ್ಕಾರ ನೀಡಿದುದೂ, ಕಲಕತ್ತೆಯ ಭಾರತೀಯ ಭಾಷಾ ಪರಿಷತ್ತು ‘ವಚನೋದ್ಯಾನ’ಕ್ಕೆ ಬಿಲ್ವಾರಾ ಪ್ರಶಸ್ತಿ ನೀಡಿದುದೂ, ಡಾ. ನಟೇಶರ ಆಗ್ರಹದ ಮೇರೆಗೆ ನಾನು ಬರೆದಿದ್ದ ಗೇಯನಾಟಕ ‘ಗಿರಿಜಾ ಕಲ್ಯಾಣ’ ರಾಷ್ಟ್ರೀಯ ಕಾರ್ಯಕ್ರಮಕ್ಕಾಗಿ ಆಯ್ಕೆಗೊಂಡುದೂ ವಿಶ್ವಕವಿ ಕುವೆಂಪು ಅವರ ೭೫ನೆಯ ಹುಟ್ಟು ಹಬ್ಬದ ರಾಜ್ಯಮಟ್ಟದ ಸಮಿತಿಗೆ ಡಾ. ದೇ.ಜ.ಗೌ., ಡಾ॥ ಆರ್.ಸಿ. ಹಿರೇಮಠರೊಡನೆ ನಾನೂ ಕಾರ್ಯದರ್ಶಿಯಾದುದೂ, ಶ್ರೀ ಜಿ. ನಾರಾಯಣರ ಒತ್ತಾಯದಿಂದಾಗಿ ದೆಹಲಿಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಗೋಷ್ಠಿಯೊಂದಕ್ಕೆ ಅಧ್ಯಕ್ಷನಾದುದೂ, ಹೈದರಾಬಾದಿನಲ್ಲಿ ನಡೆದ ಪಂಚಭಾಷಾ ಕವಿ ಸಮ್ಮೇಳನಕ್ಕೆ ಅಧ್ಯಕ್ಷನಾದುದೂ ನನ್ನ ಭಾಗ್ಯವಲ್ಲದೆ ಇನ್ನೇನು? ಇನ್ನು ಸಾಹಿತ್ಯ ಕ್ಷೇತ್ರದ ಹಿರಿಯರೆಲ್ಲ ನನ್ನ ಏಳಿಗಾಗಿ ನೀಡಿದ ಹರಕೆ ಹಸಾದಗಳ ಬಗ್ಗೆ ಏನು ಹೇಳಲಿ?

## ಭಾಗ್ಯ ನನ್ನದು :

ನಾನು ದ್ಯಾಂಪುರದಂಥ ಕಿರುಹಳ್ಳಿಯಲ್ಲಿ ಹುಟ್ಟಿ ಬೆಂಗಳೂರಿನಂಥ ಮಹಾನಗರಕ್ಕೆ ಬಂದು ನೆಲೆಸಿರುವುದು ನನಗೇ ವಿಸ್ಮಯವನ್ನುಂಟು ಮಾಡುವ ಬೆಳವಣಿಗೆ. ನಿವೃತ್ತನಾದ ಮೇಲೆ ಹುಟ್ಟೂರಿನಲ್ಲಿಯೇ ನೆಲೆಸಬೇಕೆಂಬಾಸೆ ಬಹಳ ಹಿಂದೆಯೇ ಹೊರಟು ಹೋಗಿತ್ತು. ಹುಟ್ಟೂರು ಬಡತನದ ಬೇಗೆಯಲ್ಲಿ ಉರಿದು ಸುಟ್ಟೂರಾಗಿದ್ದಿತು. ಆ ಬಡತನವನ್ನು ನಿವಾರಿಸಲು ಸಾಧ್ಯವಿಲ್ಲ, ಅದರ ನಡುವೆ ಜೀವಿಸಲೂ ಸಾಧ್ಯವಿಲ್ಲವೆನಿಸಿತು ನನಗೆ. ಅಂತೆಯೇ ಹೈದರಾಬಾದಿನಲ್ಲಿ ಮನೆಯೊಂದನ್ನು ಕೊಂಡೆ. ರಾಜ್ಯ ಪುನರ್‌ರಚನೆಯಾಗಲು ಅದನ್ನು ಮಾರಿ

ಕಲಬುರಗಿಯಲ್ಲಿ ಮನೆ ಕಟ್ಟಬೇಕೆಂದೆ. ಆದರೆ ಬೆಂಗಳೂರಿನವನಾಗಬೇಕೆಂದು ನಿಯತಿ ನಿರ್ಣಯಿಸಿತ್ತು. ಹಳ್ಳಿಗನು ಹೋಗಿ ನಾಗರಿಕನಾಗಿದ್ದೇನೆ. ಹೃದಯವಿನ್ನೂ ಹಳ್ಳಿಯಲ್ಲಿದೆ, ದೇಹ ಮಹಾನಗರವಿದರಲ್ಲಿದೆ! ಆದಷ್ಟು ಹಿರಿಯ ಸಾಹಿತಿಗಳ, ಕವಿಗಳ ಸಂಗದಲ್ಲಿ ದಿನಗಳೆವ ಬಯಕೆ. ಇದೇ ಉದ್ದೇಶದಿಂದಲೇ ಡಾ. ವಿ.ಕೃ. ಗೋಕಾಕರ ಅಧ್ಯಕ್ಷತೆಯಲ್ಲಿ ಒಂದು ವ್ಯಾಸಂಗ ಸಮಿತಿಯನ್ನು ಕಟ್ಟಿಕೊಂಡು ತಿಂಗಳಿಗೊಬ್ಬ ಮಹಾಕವಿಯ ಬಗ್ಗೆ ಪರಿಣತರಿಂದ ಪ್ರಗಲ್ಭ ಉಪನ್ಯಾಸಗಳನ್ನು ಕೇಳುವ ವ್ಯವಸ್ಥೆ ಮಾಡಿಕೊಂಡೆ–ಡಾ.ಕೆ. ಮುದ್ದಣ್ಣ, ಶ್ರೀ ಜಯತೀರ್ಥ ರಾಜಪುರೋಹಿತ ಮೊದಲಾದ ಮಿತ್ರರೊಡನೆ. ಅರವಿಂದ, ರವೀಂದ್ರ, ಹೋಮರ್, ಮಿಲ್ಟನ್, ಇಕಬಾಲ, ಡ್ಯಾಂಟೆ, ವರ್ಜಿಲ್, ವಾಲ್ಟ್‌ವ್ಹಿಟ ಮನ್, ಸೂರದಾಸ ಮೊದಲಾದವರ ಬಗ್ಗೆ ಬಹುಕಾಲ ನೆನಪಿನಲ್ಲಿ ಉಳಿದ ಉಪನ್ಯಾಸಗಳನ್ನು ಕೇಳಿದೆವು. ಎಚ್.ಎಲ್. ನಾಗೇಗೌಡರ ಪ್ರಭಾವದಿಂದ ಜಾನಪದ ಜಗತ್ತಿನಲ್ಲಿಯೂ ವಿಹರಿಸುತ್ತಲಿದ್ದೇನೆ. ಇನ್ನೊಂದು ವಚನ ಸಂಗ್ರಹ, ಇನ್ನೊಂದು ಕವನ ಸಂಗ್ರಹ, 'ಮರುಳಸಿದ್ಧನ ಕಂತೆ' ಇವಿಷ್ಟನ್ನು ಮುಗಿಸಬೇಕೆಂದಿದ್ದೇನೆ.

ನನ್ನ ಸಾಹಿತ್ಯ ಕೃಷಿಯ ಬಗ್ಗೆ, ಕೃತಿಗಳ ಬಗ್ಗೆ ಇಲ್ಲಿ ಏನನ್ನೂ ಹೇಳಹೋಗಿಲ್ಲ. ನಾಡಿನ ವಿಖ್ಯಾತ ವಿದ್ವಾಂಸರು ಆ ಕಾರ್ಯ ಮಾಡಿದ್ದಾರೆ. ಇದು ನನ್ನ ನಿನ್ನೆಗಳತ್ತ ಹೊರಳು ನೋಟ ಮಾತ್ರ. ಒಲ್ಲೆ ಒಲ್ಲೆನೆಂದು ಬರೆಯಲು ಮೊದಲು ಮಾಡಿದಾಗ "ಬರೆಯುವಂಥದೇನಿದೆ–ಈ ಸಾಮಾನ್ಯ ಜೀವನದಲ್ಲಿ?" ಎಂದೆನಿಸಿದ್ದಿತು. ಈಗ ಇನ್ನೂ ಇದರ ಹತ್ತರಷ್ಟು ಬರೆಯುವುದು ಉಳಿದುಬಿಟ್ಟಿತೆನಿಸಿದೆ. ನಿಜ, ನನ್ನ ನಿನ್ನೆಗಳು ನನ್ನೊಬ್ಬನನ್ನೇ ಕಂಡಿಲ್ಲ, ನನ್ನೊಡನೆ ಸಾವಿರ ಸಾವಿರ ಹಳ್ಳಿಗಳನ್ನು, ಲಕ್ಷ ಲಕ್ಷ ಹಳ್ಳಿಗರನ್ನು, ಈ ನಾಡಿನ ಎಲ್ಲ ಜಿಲ್ಲಾ ಕೇಂದ್ರಗಳನ್ನು, ಮುಕ್ಕಾಲುಪಾಲು ಶಾಲೆ ಕಾಲೇಜುಗಳನ್ನು, ಸಂಘ ಸಂಸ್ಥೆಗಳನ್ನು, ಪಂಡಿತ ಪಾಮರರನ್ನು ಕಂಡಿವೆ. ಆದುದರಿಂದ ಅವುಗಳು ಹೇಳಬೇಕಾದುದು ಇನ್ನೂ ಬಹಳಷ್ಟು ಇದೆ. ಆದರೆ ಎಲ್ಲವನ್ನೂ ಹೇಳಲು ಯಾರಿಗೆ ಸಾಧ್ಯವಾಗುತ್ತದೆ? ಆದುದರಿಂದ ಇದನ್ನು ನನ್ನ ನಿನ್ನೆಗಳೊಡನೆ ಕಣ್ಣು ಮುಚ್ಚಾಲೆಯೆಂದು ಕರೆದಿದ್ದೇನೆ. ನನಗೆ ಕಹಿಯೆನಿಸಿದುದರ ಕಣ್ಣು ನಾನು ಮುಚ್ಚಿರಬಹುದು. ನನ್ನ ಕಣ್ಣನ್ನು ಮರವೆ ಮುಚ್ಚಿರಬಹುದು. ಅಂತೂ ಇಲ್ಲಿ ಬಂದಿರುವುದೆಲ್ಲ ಮಹತ್ವವಾದುದೇನಲ್ಲ, ಇಲ್ಲಿ ಬರದಿದ್ದುದೆಲ್ಲ ಮಹತ್ವವಿಲ್ಲದುದೇನಲ್ಲ.

ಈ ನನ್ನ ನಿನ್ನೆಗಳು ನನ್ನಂತೆ ನಾನೂರು ಕೋಟಿ ನರರಿಗೂ ನಿನ್ನೆಗಳಾಗಿವೆ. ಅವರವರ ನಿನ್ನೆಗಳು ಅವರವರಿಗೆ ಇತ್ತುದನ್ನು ಅವರೆಲ್ಲರೂ ಬರೆದಾಗ ವಿರಾಟ್



ಜೀವನದ ಆರುಂಧತೀ ದರ್ಶನವಾದರೂ ಆದೀತು. ಅದು ಹೇಗೆ ಸಾಧ್ಯ? ಈಗ ಬರವಣಿಗೆಗೆ ಒಳಗಾದುದಷ್ಟರಿಂದಲೇ ವಿಶ್ವಜೀವನ ಅದೆಷ್ಟು ಅದ್ಭುತ, ಅದೆಷ್ಟು ಅಪಾರ, ಅದೆಷ್ಟು ವಿಸ್ಮಯಕರವೆಂದೆನ್ನಿಸದೇ ಇರಲಾರದು–ಅದರ ಏಕಸಹಸ್ರಾಂಶವನ್ನಾದರೂ ಓದಿದವರಿಗೆ. ಓದುವುದರಿಂದಾಗುವ ಉಪಕಾರವಿಷ್ಟೇ: ನಾನೊಂದು ಬಿಂದು ಈ ಮಹಾಸಿಂಧುವಿನಲ್ಲಿ ಎಂಬುದರ ಅರಿವು. ಬಿಂದು ಮಾತ್ರವಾದರೂ ಸಿಂಧುವಿನಿಂದ ಅಭಿನ್ನ, ಸಾಗರ ಸಮಸ್ತದ ವಿಸ್ತಾರವೆಲ್ಲಕ್ಕೂ ಹಕ್ಕುದಾರ, ಅದರ ಅಲೆಯೊಂದರ ಅಂಗವಾಗಿ ಅದರ ಈ ತೀರದಿಂದ ಆ ತೀರಕ್ಕೆ ಹೊರಟ ಪಯಣಿಗ! ಪಯಣವನ್ನು ಮುಗಿಸಿಯೇ ತೀರುವೆನೆಂದು ಹೇಗೆ ಹೇಳೀತು ಆ ಹನಿ? ಆದರೂ, ಪಯಣ ಮುಗಿಯಲಿ, ಮುಗಿಯದಿರಲಿ, ನಾನು ನಡೆದಷ್ಟರೊಳೆ ನನ್ನ ಸಫಲತೆಯೆಂಬ ನಂಬಿಕೆ ಅದಕ್ಕಿದ್ದರೆ ಸಾಕು!

ಒಟ್ಟಿನಲ್ಲಿ ಸಂತೃಪ್ತ ನಾನು. ನನ್ನೊಡನೆ ಬದುಕಿದವರಿಗಿದ್ದಂತೆ ಬಾಪೂಜಿಯ ಬಾನೆತ್ತರ ವ್ಯಕ್ತಿತ್ವದ ಬಾವುಟದ ಕೆಳಗೆ ಭಾರತವು ಸ್ವತಂತ್ರವಾದುದನ್ನು ನೋಡುವ ಭಾಗ್ಯ ಇನ್ನಾರಿಗಿದೆ? ನಿಜಾಮನ ಅರಸೊತ್ತಿಗೆಯೇ ನಿರ್ನಾಮವಾದುದನ್ನು ನೋಡುವ ಭಾಗ್ಯ ಇನ್ನಾರಿಗಿದೆ? ಕನ್ನಡ ನಾಡು ಒಂದಾದುನ್ನು ಕಾಣುವ ಭಾಗ್ಯ ಬೇರಾರಿಗಿದೆ? ನಮ್ಮ ಕನಸುಗಳೆಲ್ಲ ನನಸಾಗಿಲ್ಲ. ನಿಜ. ಆದರೆ ಅದಕ್ಕೆ ಕಾರಣರೂ ನಾವೇ ಅಲ್ಲವೆ? ನಮ್ಮ ನಮ್ಮ ಪಾಲಿನ ಕರ್ತವ್ಯವನ್ನು ನಾವೆಲ್ಲ ನಿರ್ವಹಿಸಿದ್ದರೆ ಇಷ್ಟರಲ್ಲಿ ಈ ರಾಷ್ಟ್ರ ಇಹಲೋಕದ ನಂದನವಾಗುತ್ತಿದ್ದಿತೇನೋ! ಆದರೆ ಕೀಳು ರಾಜಕಾರಣ ಹತ್ತು ಮುಖದ ರಾವಣನಾಗಿ, ಸ್ವಾರ್ಥ ಶೂರ್ಪನಖಿಯ ಮಾತ ಕೇಳಿ, ಸುಗುಣವೆಂಬ ಸೀತೆಯನ್ನು ಕದ್ದು ಶೋಕವನದಲ್ಲಿಟ್ಟುಬಿಟ್ಟಿರುವನೆಂದೂ, ಸಾಹಿತ್ಯದ ಅಂಜನೇಯ ಅವಳನ್ನು ಹುಡುಕಿ, ಸಂಸ್ಕೃತಿಯ ಶ್ರೀರಾಮ ಅವಳನ್ನು ಗೆದ್ದುತರಬೇಕೆಂದೂ ಈ ಅಲ್ಪನ ಆಸೆ! ಆ ಆಸೆಯನ್ನಿರಿಸಿಕೊಂಡು ಬದುಕಿದ್ದೆ; ಆ ಆಸೆಗೆ ತಕ್ಕಂತೆ ಕೈಲಾದಷ್ಟು ದುಡಿದೆ. ಈಗ ದುಡಿದಷ್ಟರಿಂದ, ಪಡೆದಷ್ಟರಿಂದ ಒಂದು ವಿಧದ ತೃಪ್ತಿ.

ನನಗೆ ಒಳ್ಳೆಯದನ್ನು ಮಾಡಿದವರನ್ನು ನೆನಪಿನಲ್ಲಿರಿಸಿಕೊಂಡಂತೆ ನನಗೆ ಕೇಡು ಮಾಡಿದವರನ್ನು ಇರಿಸಿಕೊಂಡಿಲ್ಲ. ಅವರನ್ನು ಮರೆಯುತ್ತ ಬಂದಿದ್ದೇನೆ! ಯಾಕೆ? ನಾನೂ ಎಲ್ಲ ಕಾಲದಲ್ಲಿಯೂ ಎಲ್ಲರಿಗೂ ಒಳ್ಳೆಯದನ್ನೇ ಮಾಡಲಾರೆ. ತಿಳಿದಾಗಲಿ, ತಿಳಿಯದೆ ಆಗಲಿ ಕೆಲವರಿಗಾದರೂ ಕೇಡನ್ನು ಮಾಡಿರಬೇಕು, ಇಲ್ಲವೆ ಆಗುತ್ತಿದ್ದ ಕೇಡಿಗೆ ಅಡ್ಡಬರಲು ನನ್ನಿಂದ ಸಾಧ್ಯವಿದ್ದೂ ಅಡ್ಡಬರದೆ ಹೋಗಿರಬೇಕು. ಆದುದರಿಂದ ಅವರ ಕ್ಷಮೆಯನ್ನಿಲ್ಲಿ ಕೋರಿಬಿಟ್ಟರೆ ಸಾಕು, ಇನ್ನು:

ಮುಂದೆ ಹೊಗಳುವರಾರೊ ಹಿಂದೆ ನಿಂದಿಪರಾರೊ
ಬಂಧು ಭಾವವ ನಟಿಸಿ ಸುಲಿವರಾರೋ!
ಮಂದಿಯಲಿ ಮಾನವನು ಕಳೆಯಲೆಳಸುವರಾರೊ
ವಂದಿಸೆಲ್ಲರನೊಮ್ಮೆ–ಮರುಳಸಿದ್ಧ!

ಚಾಡಿ ಹೇಳುವರಾರೊ ಕಾಡಿ ಪೀಡಿಪರಾರೊ
ನೋಡಿ ಕರುಬುವರಾರೊ ನಿಷ್ಕಾರಣಂ
ಕೇಡಗೈಯುವರಾರೊ ಸೇಡ ಬಯಸುವರಾರೊ
ಹಾಡಿಹರಸೆಲ್ಲರನು–ಮರುಳಸಿದ್ಧ!

ಕನ್ನಡದಿಂದ ಕನ್ನಡಿಗರ ಏಳಿಗೆ, ಕನ್ನಡಿಗರಿಂದ ಕರ್ನಾಟಕದ ಏಳಿಗೆ ಬೇಗ ಆಗಲಿ!

●●